ವಿಷಯಸೂಚಿ

ಸಂಕೇತ ಮತ್ತು ಸಂದರ್ಭಗ್ರಂಥ ಸೂಚಿ

ಅಂ.	ಅಂಕ
ಅ.	ಅಧ್ಯಾಯ
ಅಧಿ.	ಅಧಿಕರಣ
ಅ.	ಅಧಿಕಾರ
ಅನು.	ಅನುವಾಕ
ಖಂ.	ಖಂಡ
ಜ್ಞಾ. ಸ್ಥ.	ಜ್ಞಾನಪ್ರತಿಪಾದನಸ್ಥಲ
ಜ್ಞಾ. ಶೂ. ಸ್ಥ.	ಜ್ಞಾನಶೂನ್ಯ ಸ್ಥಲ
ನೀ. ಕ್ರಿ. ಸ್ಥ.	ನೀತಿಕ್ರಿಯಾಚರ್ಯಾಸ್ಥಲ
ಪ.	ಪದ್ಯ
ಪರಿ.	ಪರಿಚ್ಛೇದ
ಪರಾ.	ಪರಾಮರ್ಶೆ
ಪಿಂ. ಸ್ಥ.	ಪಿಂಡಸ್ಥಲ
ಪು.	ಪುಟ
ಬ್ರಾ.	ಬ್ರಾಹ್ಮಣ
ಮಂ.	ಮಂತ್ರ
ಮುಂ.	ಮುಂಡಕ
ಮ. ಶ.	ಮಹದೈಪುರೀಶ್ವರ ಶತಕ
ಮಾ. ಜ್ಞಾ. ಸ್ಥ.	ಮಾಹೇಶ್ವರಜ್ಞಾನಿಸ್ಥಲ
ಯೋ. ಪ.	ಯೋಗಪದ್ಧತಿ
ಯೋ. ಪ್ರ. ಸ್ಥ.	ಯೋಗಪ್ರತಿಪಾದನಸ್ಥಲ
ಲಿಂ. ಸ್ಥ.	ಲಿಂಗಸ್ಥಲ

ವ.	ವಚನ
ವ.	ವಲ್ಲೀ
ಶಿ. ಸ್ಥ.	ಶಿವಕಾರುಣ್ಯ ಸ್ಥಲ
ಶಿ. ಶ.	ಶಿವಾಧವ ಶತಕ
ಶ್ಲೋ.	ಶ್ಲೋಕ
ಸ್ಥ.	ಸ್ಥಲ.

ಸಂದರ್ಭ ಗ್ರಂಥಸೂಚಿ

ಕನ್ನಡ ಗ್ರಂಥಗಳು

೧. ಅಖಂ. ವ. — ಅಖಂಡೇಶ್ವರ ವಚನ—ಶ್ರೀ ಷಣ್ಮುಖ ಸ್ವಾಮಿಗಳು
ಸಂ. ಶ್ರೀ ಸಿದ್ಧವೀರದೇವರು, ಹೊಸಮಠ ಹುಬ್ಬಳ್ಳಿ, ಶ್ರೀ ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಹಾವೇರಿ ಪೇಟೆ, ಧಾರವಾಡ, ೧೯೪೪.

೨ ಅಂ.ಚೌ.ವ. — ಅಂಬಿಗರ ಚೌಡಯ್ಯನ ವಚನಗಳು
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೪.

೩ ಅರು.ಪು. — ಅರುವತ್ತುಮೂರು ಪುರಾತನರ ತ್ರಿವಿಧಿ (ವೇದಾಂತ ಗ್ರಂಥಾವಳಿ)-ನಿಜಗುಣ ಶಿವಯೋಗಿ
ಸಂ. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಜಹಾ ಕೃಷ್ಣಾನಂದ ಸ್ವಾಮಿಗಳು, ೧೯೪೧,

೪ ಅ.ವ.ಚಂ. — ಅಲ್ಲಮನ ವಚನ ಚಂದ್ರಿಕೆ
ಸಂ. ಪ್ರೊ. ಎಲ್. ಬಸವರಾಜು, ಎಂ.ಎ., ನಳಿನೀ ಶಂಕರ ಪ್ರಕಾಶನ, ಮೈಸೂರು, ೧೯೬೦

೫ — ಅಷ್ಟಾವರಣ ಸ್ತೋತ್ರಗೀತೆ—ಸಿದ್ಧರಾಮ
ಸಂ. ಶ್ರೀ ಬಸವಸ್ವಾಮಿಗಳು, ಶಿವಶರಣ ವಾಙ್ಮಯ ಪ್ರಕಾಶನ, ಮೈಸೂರು, ೧೯೫೪.

೬	ಆ.ವ.	ಆದಯ್ಯನ ವಚನಗಳು ಸಂ. ರೆ. ಉತ್ತಂಗಿ ಚನ್ನಪ್ಪನವರು. ಶ್ರೀ ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, ೧೯೫೭.
೭.	ಉರಿ.ಪೆ.ವ.	ಉರಿಲಿಂಗಪೆದ್ದಿಯ ವಚನಗಳು ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೬೬.
೮	ಏ.ಶ.ಸ್ಥ.	ಏಕೋತ್ತರಶತಸ್ಥಲ – ಸಿದ್ಧಲಿಂಗೇಶ್ವರ ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೬೬.
೯	ಏ.ಶ.ಸ್ಥ.	ಏಕೋತ್ತರಶತಸ್ಥಲ ತಾಡೋಲೆಯ ಹಸ್ತಪ್ರತಿ, ಜಕ್ಕಣಾರ್ಯ
೧೦	ಕಾ.ಸಿ.ವ.	ಕಾಡಸಿದ್ಧೇಶ್ವರ ವಚನಗಳು ಸಂ. ಚಂದ್ರಶೇಖರಶಾಸ್ತ್ರಿ ಹಿರೇಮಠ, ಸೋಮಶೇಖರ ಶಾಸ್ತ್ರಿ ಹಿರೇಮಠ, ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ, ೧೯೬೭.
೧೧	ಕೃ.ಜ್ಞಾ.ಪ್ರ.	ಕೃಷಿಜ್ಞಾನ ಪ್ರದೀಪಿಕೆ–ಶ್ರೀ ನಾಗಭೂಷಣ ಘನಮಠದಾರ್ಯ ಸಂ. ಡಾ. ಫ.ಗು. ಹಳಕಟ್ಟಿ, ವಿಜಾಪುರ, ೧೯೬೬.
೧೨	ಕೈ.ಕ.	ಕೈವಲ್ಯ ಕಲ್ಪವಲ್ಲರಿ–ಶ್ರೀ ಸರ್ಪಭೂಷಣ ಶಿವಯೋಗಿಗಳು ಸಂ. ಪ್ರೊ. ಶಿ.ಶಿ. ಬಸವನಾಳ, ಎಂ.ಎ., ಶ್ರೀ ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, ೧೯೫೨.

೧೩ ಕೈ.ದ. ಕೈವಲ್ಯ ದರ್ಪಣ—ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು

ಸಂ. ಪ್ರೊ.ಶಿ.ಶಿ. ಬಸವನಾಳ, ಎಂ.ಎ., ಶ್ರೀ ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು ಧಾರವಾಡ, ೧೯೫೨.

೧೪ ವೇ.ಗ್ರಂ.ಕೈ.ಪ. ಕೈವಲ್ಯ ಪದ್ಧತಿ (ವೇದಾಂತ ಗ್ರಂಥಾವಳಿ) —ನಿಜಗುಣ ಶಿವಯೋಗಿ
ಸಂ. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಜಹಾ ಕೃಷ್ಣಾನಂದ ಸ್ವಾಮಿಗಳು, ಗದಗ, ೧೯೪೧.

೧೫ ಗ.ವೀ.ವ. ಗಣದಾಸಿ ವೀರಣ್ಣನ ವಚನಗಳು
ಸಂ. ಡಾ. ಫ.ಗು. ಹಳಕಟ್ಟಿ, ವಿಜಾಪುರ, ೧೯[illegible]೬.

೧೬ ಗ.ಭಾ.ರ. ಗಣಭಾಷಿತ ರತ್ನಮಾಲೆ— ಗುಬ್ಬಿ ಮಲ್ಲಣ್ಣ
ಸಂ. ಶ್ರೀ ಪ್ರಭುಸ್ವಾಮಿಗಳು, ಶ್ರೀ ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ ೧೯೪೮.

೧೭ ಗು.ಚಾ. ಗುರುರಾಜ ಚಾರಿತ್ರ್ಯ—ಸಿದ್ಧನಂಜೇಶ
ಸಂ. ಪ್ರೊ. ಸಂ.ಶಿ. ಭೂಸನೂರಮಠ, ಎಂ.ಎ., ಶ್ರೀ ನಿ.ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, ೧೯೫೦.

೧೮ ಚೆ.ಪು. ಚೆನ್ನಬಸವ ಪುರಾಣ—ವಿರೂಪಾಕ್ಷ ಪಂಡಿತ
ಸಂ. ಪ್ರೊ. ಶಿ.ಶಿ. ಬಸವನಾಳ, ಎಂ ಎ., ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ, ಧಾರವಾಡ, ೧೯೩೪.

೧೯	ಚಿ.ಬ.ಸಾ.	ಚೆನ್ನಬಸವ ಸಾಹಿತ್ಯ ಸಂ. ಶ್ರೀ ಅನ್ನದಾನಯ್ಯ ಪುರಾಣಿಕ, ಸಹಜೀವನ ಪ್ರಕಾಶನ, ಲಿಂಗಂಪಲ್ಲಿ, ಹೈದರಾಬಾದ, ೧೯೫೬.
೨೦	ತಾ.ದೀ.	ತಾತ್ಪರ್ಯ ದೀಪಿಕೆ (ಸಿದ್ಧಾಂತ ಶಿಖಾಮಣಿ) ಸಂ. ವೇ. ಎನ್. ಆರ್. ಕರಿಬಸವಶಾಸ್ತ್ರಿಗಳು ಗ್ರಂಥಪ್ರಕಾಶನ ಮಂಡಲಿ, ಮೈಸೂರು, ೧೯೧೪.
೨೧	ತೋಂ.ಸಿ.ವ.	ತೋಂಟದ ಸಿದ್ಧಲಿಂಗ ವಚನ—ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಸಂ. ಶ್ರೀ ಚೆನ್ನಮಲ್ಲಿಕಾರ್ಜುನ, ಶಿವಲಿಂಗ ವಿಜಯ ಮುದ್ರಣಾಲಯ. ಹಾವೇರಿ, ೧೯೬೩.
೨೨	ದೇ.ದಾ.ವ.	ದೇವರ ದಾಸಿಮಯ್ಯನ ವಚನ ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೨೮.
೨೩	ಪ್ರ.ಮಂ.ಗೋ.	ಪ್ರಭುದೇವರ ಪರಮಯೋಗ–ಮಂತ್ರಗೋಪ್ಯ ಸಂ. ಶ್ರೀ ಚೆನ್ನಮಲ್ಲಿಕಾರ್ಜುನ, ಹಾವೇರಿ, ೧೯೩೨.
೨೪	ಪ.ಬೋ.	ಪರಮಾನುಭವಬೋಧೆ (ವೇದಾಂತ ಗ್ರಂಥಾವಳಿ) —ನಿಜಗುಣ ಶಿವಯೋಗಿ ಸಂ. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಜಹಾ ಕೃಷ್ಣಾನಂದ ಸ್ವಾಮಿಗಳು, ೧೯೪[illegible].
೨೫	ಪರಾ	ಪರಾಮರ್ಶೆ (ಶೂನ್ಯಸಂಪಾದನೆಯು) ಸಂ. ಪ್ರೊ. ಸಂ. ಶಿ. ಭೂಸನೂರಮಠ, ರಾವೂರ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು, ರಾವೂರು, ೧೯೬೯.

೨೬	ಪ್ರ.ಪು.	ಪ್ರಭುದೇವರ ಪುರಾಣ-ಎಳಂದೂರ ಹರೀಶ್ವರ ಸಂ. ಬುದ್ದಯ್ಯಸ್ವಾಮಿ, ಮ. ಪುರಾಣಿಕ, ಉಳವಿ ಬಸಪ್ಪನ ಗುಡ್ಡ, ಧಾರವಾಡ, ೧೯೪೦.
೨೭		ಪ್ರಭುದೇವರ ರಗಳೆ–ಹರಿಹರದೇವ ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೩.
೨೮	ಪ್ರ. ವ.	ಪ್ರಭುದೇವರ ವಚನಗಳು ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ ೧೯೩೧,
೨೯	ಪ್ರ. ಲಿಂ. ಲೀ.	ಪ್ರಭುಲಿಂಗಲೀಲೆ—ಚಾಮರಸ ಸಂ. ಪ್ರೊ. ಶಿ. ಶಿ. ಬಸವನಾಳ, ಎಂ.ಎ., ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ, ಧಾರವಾಡ, ೧೯೩೮.
೩೦		ಪ್ರಭುಲಿಂಗಲೀಲೆಯ ಸಂಗ್ರಹ–ಚಾಮರಸ ಸಂ. ಎಮ್. ಎಸ್. ಬಸವಲಿಂಗಯ್ಯ, ಎಮ್.ಆರ್. ಶ್ರೀನಿವಾಸ ಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೦.
೩೧	ಬ. ವ.	ಬಸವಣ್ಣನವರ ವಚನಗಳು ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೨೬,
೩೨	ಬ. ಷ. ವ.	ಬಸವಣ್ಣನವರ ಷಟ್‌ಸ್ಥಲ ವಚನಗಳು ಸಂ. ಪ್ರೊ. ಬಸವನಾಳ ಶಿವಲಿಂಗಪ್ಪನವರು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಸಾಹಿತ್ಯ ಸಮಿತಿ, ಧಾರವಾಡ, ೧೯೫೧

೩೩ ಬಸವಸ್ತೋತ್ರ ಗೀತೆ— ಸಿದ್ಧರಾಮ
ಸಂ. ಶ್ರೀ ಶಿವಬಸವಸ್ವಾಮಿಗಳು, ಶರಣ ವಾಙ್ಮಯ ಪ್ರಕಾಶನ, ಮೈಸೂರು, ೧೯೫೪.

೩೪ ಬೆ. ವ. ಬೆಡಗಿನ ವಚನಗಳು
ಸಂ. ಎಂ. ಜೀವನ, ಎಸ್. ವ್ಹಿ. ಶ್ರೇಷ್ಠಿ, ಹುಬ್ಬಳ್ಳಿ.

೩೫ ಭೈ. ಕಾ. ಕ. ಸೂ.ರ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ
ಶಾಂತಲಿಂಗ ದೇಶಿಕ
ಸಂ. ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೪.

೩೬ ಅದೇ ತಾಡೋಲೆಯ ಹಸ್ತಪ್ರತಿ.

೩೭ ಮ. ಮಾ. ವ. ಮಡಿವಾಳ ಮಾಚಯ್ಯನ ವಚನಗಳು
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೪.

೩೮ ಮ. ವ. ಮಹಾದೇವಿಯಕ್ಕನ ವಚನಗಳು
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೪

೩೯ ಮಿಶ್ರಸ್ತೋತ್ರ ಗೀತೆ—ಸಿದ್ಧರಾಮ
ಸಂ. ಶ್ರೀ ಶಿವಬಸವಸ್ವಾಮಿಗಳು, ಶಿವಶರಣ ವಾಙ್ಮಯ ಪ್ರಕಾಶನ, ಮೈಸೂರು, ೧೯೫೪

೪೦ ಮೈ. ಬ. ಕೃ. ಮೈಲಾರದ ಬಸವಲಿಂಗ ಶರಣರ ಕೃತಿಗಳು
ಸಂ. ಶಿ. ಶಿ. ಬಸವನಾಳ, ಶ್ರೀ ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾ ಮಠ ಧಾರವಾಡ, ೧೯೪೫.

೪೧ ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯಮ್ಮನವರ ವಚನಗಳು
ಸಂ. ಚೆನ್ನಪ್ಪನವರು ಉತ್ತಂಗಿ. ಸಂ. ಶಿ. ಭೂಸನೂರಮಠ, ಶ್ರೀ ವೀರಭದ್ರಪ್ಪ ಹಾಲಬಾವಿ ಧಾರವಾಡ, ೧೯೫೦.

೪೨ ಯೋ. ತ್ರಿ. ಯೋಗಾಂಗ ತ್ರಿವಿಧಿ—ಅಕ್ಕಮಹಾದೇವಿ
ಸಂ. ಶ್ರೀ ಚನ್ನಮಲ್ಲಿಕಾರ್ಜುನ, ಮೈಸೂರು, ೧೯೪೯.

೪೩ ಲಿಂ. ವ. ಲಿಂಗಮ್ಮನವರ ವಚನಗಳು
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೫.

೪೪ ಲಿಂ. ಲೀ. ವಿ. ಚಾ. ಲಿಂಗಲೀಲಾವಿಲಾಸಚಾರಿತ್ರ ಕಲ್ಲುಮಠದ ಪ್ರಭುದೇವರು
ಸಂ. ಸಂ. ಶಿ. ಭೂಸನೂರಮಠ, ಶ್ರೀ. ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ. ಧಾರವಾಡ, ೧೯೫೬.

೪೫ ವ. ಶಾ. ಸಾ. ಭಾ. ೧ ವಚನಶಾಸ್ತ್ರಸಾರ ಭಾಗ ೧
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೨೩.

೪೬ ವ. ಶಾ. ಸಾ. ಭಾ. ೨ ವಚನಶಾಸ್ತ್ರಸಾರ ಭಾಗ ೨
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೮.

೪೭ ವ. ಶಾ. ಸಾ. ಭಾ. ೩ ವಚನಶಾಸ್ತ್ರಸಾರ ಭಾಗ ೩
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೯.

೪೮ ವ. ಸಾ. ಸಂ. ವಚನ ಸಾಹಿತ್ಯ ಸಂಗ್ರಹ
ಸಂ. ಪ್ರೊ. ಸಂ. ಶಿ. ಭೂಸನೂರಮಠ, ಮೈಸೂರು ಸರಕಾರ ವಿಧ್ಯಾಭ್ಯಾಸ ಇಲಾಖೆ, (ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ), ಬೆಂಗಳೂರು. ೧೯೬೪.

೪೯ ವೇ. ಗ್ರಂ. ವೇದಾಂತ ಗ್ರಂಥಾವಳಿ—ನಿಜಗುಣ ಶಿವಯೋಗಿ
ಸಂ. ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಜಹಾ ಕೃಷ್ಣಾನಂದ ಸ್ವಾಮಿಗಳು, ೧೯೪೧.

೫೦ ಶ. ತ್ರ. ಶತಕತ್ರಯ–ಮಗ್ಗೆಯ ಮಾಯಿದೇವರು
ಸಂ. ಎನ್. ಆರ್. ಕರಿಬಸವಶಾಸ್ತ್ರಿ, ಮೈಸೂರು, ೧೯೧೨.

೫೧ ಶಿ. ಚಿಂ. ಶಿವತತ್ತ್ವ ಚಿಂತಾಮಣಿ–ಲಕ್ಕಣ್ಣ ದಂಡೇಶ
ಸಂ. ವಿದ್ವಾನ್ ಎಸ್. ಬಸಪ್ಪ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೦.

೫೨ ಶಿವಲೆಂಕ ಮಂಚಣ್ಣಗಳ ವಚನ (ಶಿವಶರಣರ ಸಂಕೀರ್ಣವಚನ ಭಾಗ ೨)
ಸಂ. ಡಾ. ಫ. ಗು. ಹಳಕಟ್ಟಿ.
ವಿಜಾಪುರ, ೧೯೪೦.

೫೩ ಶಿ. ಸಂ. ವ. ಶಿವಶರಣರ ಸಂಕೀರ್ಣ ವಚನಗಳು ಭಾಗ ೨
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೪೦.

೫೪ ಶಿ. ಸೂ. ಶಿವಾನುಭವ ಸೂತ್ರ
ಸಂ. ಆಸ್ಥಾನ ವಿದ್ವಾನ್ ಪಂ. ವೈ. ನಾಗೇಶ ಶಾಸ್ತ್ರಿಗಳು, ಶ್ರೀ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, ೧೯೫೮.

೫೫ ಶ್ರೀ. ತ್ರಿವಿ. ಶೀಲವಂತಯ್ಯಗಳ ತ್ರಿಪಧಿ
ಸಂ. ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು
ಶ್ರೀ ಹಾಲುಸ್ವಾಮಿಮಠ. ಸಾಹುಕಾರ ಜಿ. ಸಿ.
ಹಾಲಪ್ಪನವರು, ಗಿರಿಯಾಪುರ, ಪೋ. ಅಜ್ಜಂ
ಪುರ, ಜಿ. ಕಡೂರ, ೧೯೪೦.

೫೬ ಶೀ. ತ್ರಿ. ಶೀಲವಂತಯ್ಯನ ತ್ರಿಪದಿ
ಸಂ. ಶ್ರೀ ಶಿವಬಸವ ಸ್ವಾಮಿಗಳು, ಶಿವಶರಣ
ವಾಙ್ಮಯ ಪ್ರಕಾಶನ ಕಾರ್ಯಾಲಯ,
ಮೈಸೂರು, ೧೯೫೪.

೫೭ ಶೂ.ಸಂ. ಶೂನ್ಯಸಂಪಾದನೆ—ಗೂಳೂರು ಸಿದ್ಧ
ವೀರಣ್ಣೊಡೆಯರು
ಸಂ. ಸಂ. ಶಿ. ಭೂಸನೂರಮಠ, ರಾವೂರ
ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ
ಕಲ್ಲುಮಠದ ಅಧಿಪತಿಗಳು, ೧೯೬೫.

೫೮ ಶಿ.ಪ್ರ.ಮ. ಶಿವಗಣಪ್ರಸಾದಿ ಮಹಾದೇವಯ್ಯಗಳ
ಶೂ.ಸಂ. ಶೂನ್ಯ ಸಂಪಾದನೆ (ತಾಡೋಲೆಯ ಪ್ರತಿ)

೫೯ ಕೆಂಚವೀರಣ್ಣೊಡೆಯ ಕಲ್ಲೇಶ್ವರದೇವ
ಮುಂತಾದವರು ಕೂಡಿ ಬರೆದ ಶೂನ್ಯಸಂಪಾದನೆ
(ಕೈಬರೆಹದ ಪ್ರತಿ)

೬೦ ಶಿವಶರಣರ ಸಂಕೀರ್ಣ ವಚನಗಳು ಭಾಗ ೧
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ,
೧೯೩೮.

೬೧ ಸ.ವ. ಸರ್ವಜ್ಞನ ವಚನಗಳು
ಸಂ. ರೆ. ಚನ್ನಪ್ಪ ಉತ್ತಂಗಿ, ಮೈಸೂರು
ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ
ಇಲಾಖೆ, ಬೆಂಗಳೂರು, ೧೯೬೦

೬೨ — ಸಿಂಗಿರಾಜ ಪುರಾಣ — ಸಿಂಗಿರಾಜ
ಸಂ. ಎಚ್. ದೇವೀರಪ್ಪ, ಎಂ.ಎ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೦.

೬೩ ಸಿ. ಚಾ. — ಸಿದ್ಧರಾಮಚಾರಿತ್ರ—ರಾಘವಾಂಕ
ಸಂ. ಪ್ರೊ. ಟಿ. ಎಸ್. ವೆಂಕಣ್ಣಯ್ಯ ಎಂ.ಎ., ಡಿ. ಎಲ್. ನರಸಿಂಹಾ ಆಚಾರ್, ಎಂ.ಎ., ಕರ್ನಾಟಕ ಸಂಘ, ಶಿವಮೊಗ್ಗ, ೧೯೪೧.

೬೪ ಸಿ. ವ. — ಸಿದ್ಧರಾಮೇಶ್ವರ ವಚನ
ಸಂ. ಡಾ. ಫ. ಗು. ಹಳಕಟ್ಟಿ, ವಿಜಾಪುರ, ೧೯೩೨.

೬೫ ಸಿ. ವ. — ಸಿದ್ಧೇಶ್ವರ ವಚನ—ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು
ಸಂ. ಶ್ರೀ ಚನ್ನಮಲ್ಲಿಕಾರ್ಜುನ, ಮೈಸೂರು ೧೯೫೧.

೬೬ ಸ್ವ. ಸಿ. ವ. — ಸ್ವತಂತ್ರ ಸಿದ್ಧಲಿಂಗೇಶ್ವರ ವಚನ
ಸಂ. ಚಂದ್ರಶೇಖರ ಶಾಸ್ತ್ರಿ, ವ್ಯಾಕರಣ ತೀರ್ಥ ಹೊಳಲು, ಸೋಮಶೇಖರ ಶಾಸ್ತ್ರಿ. ಹಿರೇಮಠ, ಬೆಣಕಲ್ಲು, ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ, ೧೯೩೩.

೬೭ — ಹಡಪದಪ್ಪಣ್ಣನ ವಚನಗಳು
ಸಂ. ಡಾ. ಫ. ಗು. ಹಳಕಟ್ಟಿ, ೧೯೨೯.

೬೮ ಹ. ಕಾ. ಸಂ. — ಹರಿಶ್ಚಂದ್ರ ಕಾವ್ಯ ಸಂಗ್ರಹ
ಸಂ. ಬಿ. ಎಂ. ಶ್ರೀಕಂಠಯ್ಯ, ವಿಶ್ವವಿದ್ಯಾನಿಲಯ, ಮೈಸೂರು, ೧೯೩೩.

ಸಂಸ್ಕೃತ ಗ್ರಂಥಗಳು

೧ ಅ.ಸೂ. ಅನುಭವ ಸೂತ್ರ—ಮಗ್ಗೆಯ ಮಾಯಿದೇವ
ಸಂ. ಮಲ್ಲಿಕಾರ್ಜುನಶಾಸ್ತ್ರಿ, ಮಣೂರ
ಮಠಾಧ್ಯಕ್ಷ, ರಾ ಸಾ. ಮಲ್ಲಪ್ಪ ಬಸಪ್ಪ ವಾರದ,
ಸೊಲ್ಲಾಪುರ, ೧೯೦೯.

೨ ಅಭಿಜ್ಞಾನ ಶಾಕುಂತಲ— ಕಾಳಿದಾಸ

೩ ಈ.ಅ.ಶ. ಉಪ. ಈಶಾದ್ಯಷ್ಟೋತ್ತರಶತ ಉಪನಿಷತ್ತು
(ಮೂರನೆಯ ಮುದ್ರಣ)
ಸಂ. ವಾಸುದೇವ ಲಕ್ಷ್ಮಣ ಪಣಶೀಕರ,
ಪಾಂಡುರಂಗ ಜಾವಜೀ, ಮುಂಬಯಿ, ೧೯೨೫.

೪ ಈ.ಉ. ಈಶಾವಾಸ್ಯೋಪನಿಷತ್ತು

೫ ಋಗ್ವೇದ

೬ ಕಠ ಉಪನಿಷತ್ತು

೭ ಛಾಂದೋಗ್ಯ ಉಪನಿಷತ್ತು

೮ ತೇ.ಬಿಂ.ಉ. ತೇಜೋಬಿಂದೂಪನಿಷತ್ತು

೯ ತೈತ್ತಿರೀಯ ಉಪನಿಷತ್ತು

೧೦ ನಿರಾಲಂಬ ಉಪನಿಷತ್ತು

೧೧ ನಿ.ಷ. ನಿರ್ವಾಣ ಷಟ್ಕ—ಶ್ರೀ ಶಂಕರಾಚಾರ್ಯರು

೧೨ ಪರಾಪ್ರವೇಶಿಕಾ (ಷಟ್‌ತ್ರಿಂಶತ್ ತತ್ತ್ವ
ಸಂದೋಹಃ)

೧೩ ಬೃ.ಉ. ಬೃಹದಾರಣ್ಯಕ ಉಪನಿಷತ್ತು

೧೪		ಬೃಹ್ಮಬಿಂದು ಉಪನಿಷತ್ತು
೧೫		ಭಗವದ್ಗೀತೆ
೧೬		ಮಾಂಡೂಕ್ಯ ಉಪನಿಷತ್ತು
೧೭		ಮುಂಡಕ ಉಪನಿಷತ್ತು
೧೮		ಮೃಚ್ಛಕಟಿಕ—ಶೂದ್ರಕ
೧೯	ಮೈ.ಉ.	ಮೈತ್ರೇಯಿ ಉಪನಿಷತ್ತು
೨೦	ಯೋ.ಶಿ.	ಯೋಗಶಿಖಾ ಉಪನಿಷತ್ತು
೨೧	ರ.ವಂ.	ರಘುವಂಶ
೨೨		ರುದ್ರಯಾಮಳ
೨೩	ಸಿ.ಶಿ.	ಸಿದ್ಧಾಂತ ಶಿಖಾಮಣಿ—ಶಿವಯೋಗಿ ಶಿವಾಚಾರ್ಯ ಸಂ. ಎನ್. ಆರ್. ಕರಿಬಸವಶಾಸ್ತ್ರಿ, ಗ್ರಂಥ ಪ್ರಕಾಶಕ ಮಂಡಲಿ, ಮೈಸೂರು ೧೯೧೪.
೨೪	ಶ್ವೇ.ಉ.	ಶ್ವೇತಾಶ್ವತರ ಉಪನಿಷತ್ತು

LIST OF BOOKS IN ENGLISH

1	As you like it	By Shakespeare.
2	Bible	
3	Essays on the Gita	By Sri Aurobindo Ghose, Pub. by Arya Publishing House, College Street, Calcutta. First Series-1926, Second Series-1928.
4	Gardner	By Rabindranath Tagore, Macmillan and Co.,Ltd., Calcutta. 1919
5	Golden Treasury Book IV	Ed. by Francis Turner Palgrave, Pub. by Oxford University Press, 1933.
6	Hamlet, Prince of Denmark	By Shakespeare.
7	Kalki or the Future of Civilization	By S. Radhakrishnan, Pub. by Kegan Paul, Trench. Trubner & Co., Ltd., London, 1934.
8	Life Divine	By Sri Aurobindo, Pub. by R. K. Nag, Arya Publishing House, 63, College Street, Calcutta, Vol. I 1939, Vol. II. 1940.

9	Life of Shakespeare	By Hesketh Pearson, London, Caroll and Nicholson, 1949.
10	Magic of the Stars	By Maurice Materlinck, Tr. Alfred Sutro, George Allen and Unwin Ltd., London, 1931.
11	Misterious Universe	By Sir James Jeans, Pub. E.P. Duttonand Co., Inc. New York, 1958.
12	Nature of the Physical World	By Sir Arthur S. Eddington Pub. by Cambridge University Press, Cambridge, 1944.
13	Othello, The Moore of Venice	By Shakespeare.
14	Perennial Philosophy	By Aldous Huxley, Pub. by Chatto and Windus, 1950.
15	Ramanujan	By G. H. Hardy, Chelsea Publishing Co., New York, 1940.
16	Science and the Modern World	By Alfred North Whitehead, Publisher, Cambridge University Press, Cambridge, 1943.
17	Scientific Outlook	By Bertrand Russel, London GeorgeAllen and Unwin Ltd., 1934.

18	Universe Aroud us	By Sir James Jeans, Cambridge, University Press, 1931.
19	Wisdom and Destiny	By Maurice Materlinck, Tr. by Alfred Sutro, London, George Allen and Unwin Ltd., 1922.

೧

ಇಂದಿನ ನಾಳೆ

'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ'

ಋಗ್ವೇದ, ಮಂ.೧, ಸೂ.೮೯, ಋ.೧.

ಪುರಾತನ ಕಾಲ. ಯೇಸುವಾಗಲಿ ಬುದ್ಧನೇ ಆಗಲಿ ಇನ್ನೂ ಹುಟ್ಟಿರಲಿಲ್ಲ. ಅಷ್ಟೊಂದು ಪ್ರಾಚೀನವಾದ ಉಪನಿಷತ್‌ಕಾಲದಲ್ಲಿ ನಡೆದ ಒಂದು ಸಂಗತಿ. ಛಾಂದೋಗ್ಯ ಉಪನಿಷತ್ತಿನ ೬ನೆಯ ಅಧ್ಯಾಯದಲ್ಲಿ ಅದರ ಉಲ್ಲೇಖವಿದೆ: ಆರುಣಿ ಎಂಬ ಋಷಿ ಇದ್ದ. ಆತ ಬ್ರಹ್ಮಜ್ಞಾನಿ. ಆತನ ಮಗ ಹನ್ನೆರಡು ವರ್ಷದ ಶ್ವೇತಕೇತು. ತಂದೆಯ ಅಪ್ಪಣೆಯಂತೆ ಶ್ವೇತಕೇತು ಗುರುಕುಲದಲ್ಲಿ ಇದ್ದು ಎಲ್ಲ ವೇದಗಳನ್ನು ಅಧ್ಯಯನ ಮಾಡಿ, ತಂದೆಯ ಮನೆಗೆ ತಿರುಗಿ ಬಂದ. ವಿದ್ಯೆ ತುಂಬಿದ ಆತನ ತಲೆಯಲ್ಲಿ ವಿದ್ಯಾಮದವೂ ತುಂಬಿದೆ. ಮುಖದಲ್ಲಿ ಮಾತಿಲ್ಲ. ಸ್ತಂಭದಂತೆ ಮೌನ. ಆರುಣಿಗೆ ಅತ್ಯಾಶ್ಚರ್ಯ.

ಆರುಣಿ: ಸೋಮ್ಯ, ವೇದಗಳನ್ನೆಲ್ಲ ಓದಿದೆನೆಂದು 'ಮಹಾಮನ'ನಾಗಿ ಮಾತನಾಡದೆ ಸ್ತಬ್ಧನಾಗಿರುವೆ. ಯಾವ ವಿದ್ಯೆಯಿಂದ ಕೇಳಬಾರದುದು ಕೇಳಬಹುದು, ಮನಕ್ಕೆ ಗೋಚರವಲ್ಲದುದು ಗೋಚರಿಸಬಹುದು, ಅರಿವಿಗೆ ಅಗಮ್ಯವಾದುದು ಗಮ್ಯವಾಗುವುದು – ಆ ವಿದ್ಯೆಯನ್ನು ಗುರುಗಳಲ್ಲಿ ಕೇಳಿದೆಯಾ?

ಶ್ವೇತಕೇತು: ಭಗವನ್, ಆ ವಿದ್ಯೆ ಎಂಥದು?

ಆರುಣಿ: ಸೋಮ್ಯ, ಮಣ್ಣಿನ ಪಿಂಡ ಒಂದು. ಅದರಿಂದಾದ ಮಡಿಕೆ ಗಡಿಗೆ ಮುಂತಾದುವು ಹಲವು. ಮಣ್ಣು ಒಂದನ್ನು ತಿಳಿದರೆ ಮಣ್ಣಿನಿಂದಾದ ಹಲವನ್ನೆಲ್ಲ ತಿಳಿಯಬಹುದು. ವಿಕಾರವಾದ ಹಲವು, ಆಡುವ ಮಾತು ಕೊಡುವ ಹೆಸರು ಮಾತ್ರ. ಮಣ್ಣೆಂಬುದೊಂದೆ ಸತ್ಯ......ಸೋಮ್ಯ, ಇಂತಿದೆ ಆ ವಿದ್ಯೆ.

ಶ್ವೇತಕೇತು: ಭಗವನ್, ಗುರುಗಳಿಗೆ ನಿಜವಾಗಿ ಆ ವಿದ್ಯೆ ಗೊತ್ತಿರಲಿಕ್ಕಿಲ್ಲ; ಇದ್ದರೆ ಹೇಳದೆ ಹೇಗೆ ಬಿಡುತ್ತಿದ್ದರು? ಭಗವನ್, ನೀವೇ ಆ ವಿದ್ಯೆಯನ್ನು ನನಗೆ ಹೇಳಿ ಕೊಡಬೇಕು.

ಆರುಣಿ: ಸೋಮ್ಯ, ಅಂತೆಯೆ ಆಗಲಿ.

ಅಧ್ಯಾಯದ ಅಂತ್ಯದ ವರೆಗೆ ಸಾಗುವ ಈ ಕಥೆ ಶ್ವೇತಕೇತುವಿಗೆ ತಂದೆ ಆರುಣಿ ಅನುಗ್ರಹಿಸಿದ 'ಆರುಣೇ ವಿದ್ಯೆ'ಯಲ್ಲಿ ಪರ್ಯವಸಾನವಾಗುತ್ತದೆ.

ವಿದ್ಯಾಗರ್ವಿತವಾದ ಮನ, ಕಲಿತೆನೆಂಬ ಅಹಂಭಾವ, ವಿನಯವನರಿಯದ ಸ್ವಭಾವ, ಗುರುಕುಲದಿಂದ ಮನೆಗೆ ಹಿಂದಿರುಗಿದ ಶ್ವೇತಕೇತುವಿನಲ್ಲಿ ತಲೆದೋರುವಂತೆ, ಇಂದಿನ ವಿಜ್ಞಾನವೂ ತನ್ನ ವಿದ್ಯಾ-ಬುದ್ಧಿ-ಶಕ್ತಿಗೆ ತಾನೇ ತಲೆದೂಗಿ ಬೀಗುವಂತಿದೆ, – ಯಾವುದಕ್ಕೂ ಬಾಗದೆ.

ವಿಜ್ಞಾನದ ಕ್ಷೇತ್ರವು ದಿನದಿನಕ್ಕೆ ವಿಸ್ತಾರವಾಗುತ್ತ ನಡೆದಿದೆ. ಆಕಾಶ, ನಕ್ಷತ್ರ, ಅಗ್ನಿ, ವಾಯು, ಭೂಮಿ, ಜಲ, ಲೋಹ, ಸಸ್ಯ, ದೇಹ ಪ್ರಾಣ ಮನ ಬುದ್ಧಿ, ಸಮಾಜ ಧರ್ಮ ಅರ್ಥ ಕಾಮ, ನೀತಿ ನ್ಯಾಯ ನಯ, ಶಿಲ್ಪ ವೈದ್ಯ ಗಣಿತ ಶಬ್ದ – ಇವೇ ಮುಂತಾದ ನೂರೆಂಟು ವಿಷಯಗಳು ತಂತಮ್ಮ ಶಾಖೋಪಶಾಖೆಗಳೊಂದಿಗೆ ವಿಜ್ಞಾನದ ಹಿಡಿತಕ್ಕೆ ಒಳಗಾಗಿವೆ. ಈ ಕಡೆ ಅಣುವನ್ನು ಒಡೆದು, ಅಲ್ಲಿ ಒಳಗೆ ನಡೆದಿರುವ ಚೈತನ್ಯಕಣಗಳ ನಿತ್ಯಲೀಲೆಗೆ ಅವಕಾಶ ಕೊಡುತ್ತಿರುವ ಆಕಾಶದ ಹರವನ್ನು ಅಳೆಯುತ್ತಿರುವ ಅಣುವಿಜ್ಞಾನಿ.[೧] ಅದೋ ಆ ಕಡೆ ಜ್ಯೋತಿರ್ವಿಜ್ಞಾನಿ. ಆತನ ದೂರದರ್ಶಕ ಯಂತ್ರದ ಗಾಜಿನ ವ್ಯಾಸ (Diameter) ೨೦೦ ಅಂಗುಲ ![೨] ಯಂತ್ರದೊಳಗಿಂದ ನೋಡಿದರೆ ಕಾಣುತ್ತದೆ ಈ ಬ್ರಹ್ಮ ಅದ್ಭುತ:

'. . . . Light travels 186,000 miles in a second; the distance that it travels in a year is known as a light year; the distance of the nearest star is about four light years; the distance of the furthest stars in the Milky Way is about 220 thousand light years. Telescopes reveal about two million systems of stars each anologous to the Milky Way some at distances of over a hundred million light years[3] . . . .' ಮಾನವನ ಕಣ್ಣಿನ ಎದುರಿಗೆ ಹರವಿರುವ ಈ ವಿಶ್ವದ ಪರಮಾದ್ಭುತ ವಿಜ್ಞಾನದ ಸೀಮೆಯೊಳಗೆ ಸಿಲುಕಿದಂತಿದೆ. ಅಮೀಬಾ ಇಲೆಕ್ಟ್ರಾನ್‌ದಿಂದ ದಶಕೋಟಿ ಜ್ಯೋತಿರ್ವರ್ಷದೂರದ ನಕ್ಷತ್ರಪುಂಜದವರೆಗೆ ಮಾರುಹಾಕುತ್ತಿರುವ ವಿಜ್ಞಾನದ ಆತ್ಮವಿಶ್ವಾಸ ಅಭೂತಪೂರ್ವವಾಗಿದೆ, ಅನ್ಯಾದೃಶವಾಗಿದೆ. ವಿಶ್ವಪ್ರಪಂಚದ ಸ್ವಭಾವ ರೀತಿ, ನಿಯಮ ಶಕ್ತಿಗಳನ್ನು ಒಳಗೊಳಗೆ ಹೊಕ್ಕು ಶೋಧಿಸುತ್ತಿರುವ ವಿಜ್ಞಾನಪುರುಷನ ಬುದ್ಧಿ-ಸಾಮರ್ಥ್ಯ-ಸಾಹಸಗಳು ನಮ್ಮ ವೇದ ಪುರಾಣ

---

೧. The atom is as porous as the solar system. If we eliminated all the unfilled space in a man's body and collected his protons and electrons into one mass, the man would be reduced to a speck just visible with a magnifying glass.
The nature of the Physical world, pp. 1-2

೨. American astronomers enjoy privileges that are denied to their colleagues of the old World, for they possess instruments by the side of which ours appear mediaeval. The mirror of the Observatory at Nice—one of the largest in Europe—has a diameter of 29 inches; at Mount Wilson the diameter is 100 inches, and at Pasadena they are building a telescope with a diameter of 200.
The Magic of the Stars pp. 14.

೩. *The Scientific Outlook. p. 89.*

ಕಾಲದ ದೇವತೆಗಳನ್ನೂ ದಂಗುಬಡಿಸುವಮಂತಿವೆ! ಇಷ್ಟೇ ಅಲ್ಲ. ಹಿಂದಿನ ಹಿರಿಯರು ಭಯ ಭಕ್ತಿಯಿಂದ ಕೈಮುಗಿದು ಆರಾಧಿಸುತ್ತಿದ್ದ ಈ ದೇವತೆಗಳು – ನಿಸರ್ಗದ ಚೈತನ್ಯ ಶಕ್ತಿಗಳು – ಇಂದಿನ ಯುಗದಲ್ಲಿ ವಿಜ್ಞಾನಪುರುಷನ ಅಧೀನರಾಗಿ, 'ಕಿಂ ಕರೋಮಿ' ಎಂಬ ಕಿಂಕರವೃತ್ತಿಯನ್ನು ಸ್ವೀಕರಿಸಿದ್ದಾರೆ, ಅರ್ಥಾತ್ ಸ್ವೀಕರಿಸಿವೆ.[೧]

ಹಿಂದೆ ಕಂಡ ಹೊಂಗನಸುಗಳು ಇಂದು ಪ್ರತ್ಯಕ್ಷವಾಗಿ ಕಣಸಾಗುತ್ತಿವೆ. ಹಿಂದೆ ಮಾನವನ ತಲೆಯಲ್ಲಿ ಮೊಳೆಯದ ಕಲ್ಪನೆಗಳು ಇಂದು ಸತ್ಯಸೃಷ್ಟಿಯ ಸೀಮೆಯೊಳಗೆ ಸುಳಿದಾಡುತ್ತಿವೆ. ಮತ್ತೆ ಕನಸು-ಕಲ್ಪನೆಗಳ ಸೀಮೆ ಹನುಮಂತನ ಬಾಲದಂತೆ ಬೆಳೆಯುತ್ತ ಬೆಳೆಯುತ್ತ ಮುಂದುವರಿದಂತೆ, ವಿಜ್ಞಾನಪುರುಷನ ಸಾಹಸ ಬಲಗೊಂಡು, ಕಳೆಯೇರಿ ಗಗನಕ್ಕೆ ಚಿಗಿವಂತಿದೆ. ಕಲ್ಪನಾಶಕ್ತಿಯೊಡನೆ ಸ್ಪರ್ಧೆಯಾಡುತ್ತಿದೆ ವಿಜ್ಞಾನಿಯ ಸಾಹಸ ಶಕ್ತಿ. ಭೌತಿಕಶಕ್ತಿಗಳ ಹೃದಯವನ್ನು ಭೇದಿಸುತ್ತ, ಆ ಶಕ್ತಿಗಳ ಬಹಿರಂತರಂಗವನ್ನು ಅತ್ಯಂತ ಕುಶಲತೆಯಿಂದ ಯಂತ್ರ ತಂತ್ರವಾಗಿ ನಿಯೋಜಿಸುತ್ತ, ತ್ವರಿತಗತಿಯಿಂದ ಮುನ್ನುಗ್ಗುತ್ತಿರುವ ವಿಜ್ಞಾನಿ ಅಭೇದ್ಯ ಭೇದಕನಾಗಿ, ಅಸಾಧ್ಯ ಸಾಧಕನಾಗಿ, ಧರೆಯ ಮಾನವ ಕುಲದ 'ಪುರಾತನ ಜ್ಞಾನಭಾಂಡಾರ'ವನ್ನು ನೋಡಿ, 'ಪ್ರಾಚೀನ ಅಜ್ಞಾನ ಪ್ರದರ್ಶನಾಲಯ'ವೆಂದು ಕರೆದು, ಕಡೆಗಣಿಸಿ ಮುಂದೆ ನಡೆಯುತ್ತಿದ್ದಾನೆ. "ಸತ್ತ 'ಭೂತ'ವನ್ನು ಹುಗಿದು, ಜೀವಂತ ವರ್ತಮಾನವನ್ನು ನಿರ್ಮಿಸು" – ಎಂಬುದು ಆತನ ಪ್ರಕಟ ಘೋಷಣೆ. 'ಹಿಂದಿನ ಹಳೆಯ ಪುರಾಣ ಕಟ್ಟಿಡು' – ಎಂಬುದು ಆತನ ಸುಗ್ರೀವಾಜ್ಞೆ. ಈ ಆಜ್ಞೆ ಮೀರಬಾರದು, ಮೀರದಿರಬಾರದು. ಮಾನವಜನಾಂಗವನ್ನು ಈ ಇಕ್ಕಟ್ಟಿನಲ್ಲಿ ಹಾಕಿದ್ದಾನೆ ಇಪ್ಪತ್ತನೆಯ ಶತಮಾನದ ವಿಜ್ಞಾನಿ. ಹಸಿದು ನೀರಡಸಿದ ಕತ್ತೆ ಮುಂದಿದ್ದ ಹುಲ್ಲಿನ ಹೊರೆ ಮತ್ತು ನೀರಿನ ಡೋಣಿಯನ್ನು ಕಂಡು, ಮೊದಲು ಹುಲ್ಲು ತಿನ್ನಬೇಕೋ ಇಲ್ಲವೆ ನೀರು ಕುಡಿಯಬೇಕೋ – ಎಂಬ ಭ್ರಾಂತಿಯ ವ್ರತದಲ್ಲಿ ಅತ್ತೊಮ್ಮೆ ಇತ್ತೊಮ್ಮೆ ತಲೆ ನೀಡುತ್ತಿರುವಂತೆ, ಸಾಮಾನ್ಯ ಮನುಷ್ಯನ ಸ್ಥಿತಿ ಗತಿಯಾಗಿದೆ. ಹಳದನ್ನು ನಂಬುವುದೆಂತು? ಹೊಸದನ್ನು ನಿರಾಕರಿಸುವುದೆಂತು? ಇದು ಒಬ್ಬಿಬ್ಬರ ಪ್ರಶ್ನೆಯಲ್ಲ. ಇಂದು ಈ ಪ್ರಶ್ನೆ ಮನುಷ್ಯಕುಲಕೋಟಿಯ ತಲೆ ತಿನ್ನುತ್ತಿದೆ. ಸದ್ಯ ಈ ಪ್ರಶ್ನೆಗೆ ಪರಿಹಾರವಿಲ್ಲ; ಪರಿಹಾರವಿಲ್ಲದೆ ಮುಂದೆ ಗತಿಯಿಲ್ಲ. ಪ್ರಶ್ನೆ ಅತಿ ಗಭೀರ, ಅತ್ಯಂತ ಜಟಿಲ. ಬಿಡಿಸುವುದು ಕಷ್ಟ, ಬಿಡಿಸದೆ ಇರುವುದು ಬುದ್ಧಿಯ ದಿವಾಳಿ.

ಸ್ಟೀಮ್ ಎಂಜಿನ್, ಇಲೆಕ್ಟ್ರಿಸಿಟಿ, ರೇಡಿಯೋ, ಮೋಟರ್ ಕಾರ್, ಟೆಲಿಫೋನ್, ಟೆಲಿಗ್ರಾಫಿ, ಟೆಲಿವಿಜನ್, ಟೆಲಿಪ್ರಿಂಟರ್, ಸ್ಟೀಮರ್, ಸಬ್‌ಮರೀನ್, ಏರೋಪ್ಲೇನ್, ಜೆಟ್ ಫಾಯಿಟರ್, ರಾಕೆಟ್, ಸ್ಪುಟ್ನಿಕ್, ಹೆಲಿಕಾಪ್ಟರ್, ಎಕ್ಸರೇ, ಎನ್ಯಾಸ್ಥಿಟಿಕ್ಸ್, ಎಟಾಮಿಕ್ ಬಾಂಬ್, ಹಾಯ್‌ಡ್ರೋಜನ್ ಬಾಂಬ್......ಹೀಗೆ ಒಂದಲ್ಲ ಎರಡಲ್ಲ, ವಿಜ್ಞಾನದ ವಿಜಯಸ್ತಂಭಗಳು 'ದ್ಯಾವಾಪೃಥಿವಿ'ಯನ್ನು ಆಕ್ರಮಿಸಿ, ಎಲ್ಲಿ ನೋಡಿದಲ್ಲಿ ಕಣ್ಣಿಗೆ

೧. Traditional religion was based upon a sense of man's impotence in the face of natural forces, whereas scientific technique induces a sense of the impotence of natural forces in face of man's intelligence.

The Scientific Outlook. p. 268.

ಬೀಳುತ್ತಿವೆ. ಎಲ್ಲೆಲ್ಲಿ ಅಬ್ಬರಿಸುವ ಯಂತ್ರಗಳ ನಿರ್ಘೋಷ ಪುರಾತನಸಂಪ್ರದಾಯಕ್ಕೆ ಪ್ರಳಯಘೋಷವಾಗಿ ಬೊಬ್ಬಿರಿಯುತ್ತಿದೆ.

ತರ್ಕಬುದ್ಧಿ (Intellectual reasoning), ವೈಜ್ಞಾನಿಕ ಪ್ರಯೋಗ (Scientific experiment), ವಸ್ತುನಿರೀಕ್ಷಣೆ (Observation of facts), ತಾಂತ್ರಿಕ ನೈಪುಣ್ಯ (Technical skill) – ಇವು ನಿತ್ಯ ನಿತ್ಯ ಹಡೆಯುತ್ತಿರುವ ಅದ್ಭುತಗಳ ಮುಂದೆ ಹಿಂದಿನ ಮಹಿಮಾಪುರುಷರ ಪವಾಡಗಳು ನಾಚಿ ತಲೆಬಾಗಿ ಕತ್ತಲೆಕೋಣೆಯೊಳಗೆ ಹೊಕ್ಕು ಭದ್ರವಾಗಿ ಬೀಗ ಹಾಕಿಕೊಂಡು, ಕತ್ತಲೆಯಲ್ಲಿ ಕಂಗಳರ ಮುಂದೆ ತಮ್ಮ ಪೌರುಷವನ್ನು ಕೊಚ್ಚಿಕೊಳ್ಳುವಂತಿವೆ. ಅವಿಜ್ಞಾನಕ್ಕೆ 'ಗೋಪ್ಯ'ವೇ ಅಭೇದ್ಯಕೋಟೆ ಯಾಗಿದೆ. ಈ ಲಜ್ಜೆ, ಈ ಬೆಳಗಿನ ಭೀತಿ, ಈ ಕತ್ತಲೆಯ ಕೋಟೆ ಎಷ್ಟು ದಿನ? ಎಷ್ಟು ಜನರಿಗೆ? ಒಳಗೆ ಕತ್ತಲೆಯಲ್ಲಿ ಕುಳಿತು ಬಾಳುವ ಸೆರೆಮನೆಯ ವಾಸದ ಅವಧಿ ಎಷ್ಟು? ವಿಜ್ಞಾನದ ಪ್ರಖರತೇಜದ ಮುಂದೆ ಹಿಂದಿನ ಪವಾಡಗಳು ಕುಸಿದು ಬೀಳು ತ್ತಿರುವಂತೆ, ವಿಜ್ಞಾನದಿಂದ ಪ್ರೇರಿತವಾದ ಬುದ್ಧಿಯ ಇದಿರು ಪುರಾತನ ತತ್ತ್ವ ಧರ್ಮ ನೀತಿ ಪುರುಷಾರ್ಥಗಳೆಲ್ಲ ಮಂಕಾಗಿ, ಅಪ್ರತಿಭವಾಗಿ, ತಲೆ ಕೆಳಗುಮಾಡಿ ನಿಂತಿವೆ. ವೇದ ಆಗಮ ಉಪನಿಷತ್ತು ಪುರಾಣ, ಬಾಯಿಬಲ್, ಕುರಾಣ, ದ್ವೈತ, ಅದ್ವೈತ, ದ್ವೈತಾ-ದ್ವೈತ, ಅಲ್ಲಾ, ಗಾಡ್, ಬ್ರಹ್ಮ ವಿಷ್ಣು ರುದ್ರ, ಸ್ವರ್ಗ ನರಕ ಹದಿನಾಲ್ಕು ಲೋಕ, ವರ್ಣಾಶ್ರಮ, ಕ್ರಿಶ್ಚಿಯನ್-ಹಿದನ್, ಮುಸಲ್ಮಾನ-ಕಾಫರ್, ಶಿವದಾರ ಜನಿವಾರ, ಲಿಂಗ ವಿಭೂತಿ, ಯಜ್ಞ-ಯಾಗ, ಪೂಜೆ-ಗಂಟೆ, ಗಾಯತ್ರಿ ಪಂಚಾಕ್ಷರಿ, ಬತ್ತಲೆ ಕಾವಿ, ಪೂರ್ವ ಜನ್ಮ ಪುನರ್ಜನ್ಮ, ಪಾಪ ಪುಣ್ಯ, ಕರ್ಮ ಪಾಶ, ಆಚಾರ ನೀತಿ, ಸತ್ಯ ಅಹಿಂಸೆ – ಹಿಂದೆ ಮಾನವನ ಜೀವನದಲ್ಲಿ ಹಾಸು ಹೊಕ್ಕಾಗಿ ಹಬ್ಬಿದ್ದ ಇಂತಹ ಸಾವಿರಾರು ಜೀವನ ಘಟಕ ಗಳು ವಿಜ್ಞಾನದ ಪ್ರಚಂಡ ಪ್ರಭಾವಕ್ಕೆ ಒಳಗಾಗಿ, ಏನೋ ಅಕ್ಷಮ್ಯ ಅಪರಾಧವನ್ನು ಅನಂತಕಾಲ ಮಾಡಿದ ಅಪರಾಧಿಗಳಂತೆ ಕುಗ್ಗಿ ಕುಗ್ಗಿ ಹೇಗೋ ಜೀವಿಸಿಕೊಂಡು ನಿಸ್ಸತ್ತ್ವ ವಾಗಿ ಭೂಮಿಯ ಮೇಲೆ ಇನ್ನೂ ಎಂತೋ ಉಳಿದಿವೆ. ವಿಜ್ಞಾನದ ಯೌವನ ರಭಸದಿಂದ ಕಳೆಯೇರುತ್ತ ನಡೆದಿರುವಾಗ, ಅದರ ವಿಲಾಸ-ವೈಭವಕ್ಕೆ ಮಾರುವೋದ ಇಂದಿನ ಜೀವ ನಕ್ಕೆ ಬೇಡಾಗಿ ಭಾರವಾಗಿ, ಹಾಕಿದ್ದನ್ನುಂಡು, ಕೆಡವಿದಲ್ಲಿ ಬಿದ್ದು, ಅಂದರೆ ಅನಿಸಿಕೊಂಡು ಅರೆಮರುಳನಂತೆ ವಿಕಾರವಾಗಿ ವರ್ತಿಸುತ್ತಿರುವ ಪುರಾತನ ಸಂಪ್ರದಾಯ, ನೂರೊಂದು ವಯಸ್ಸಿನ ವೃದ್ಧನಂತೆ 'ಒಂದು ಕಾಲು ಮನೆಯಲ್ಲಿ ಮತ್ತೊಂದು ಕುಣಿಯಲ್ಲಿ' ಎಂದು ಒಟಗುಡುತ್ತ ಅಂತ್ಯಕಾಲವನ್ನೆ ನರಳುತ್ತಿದೆ.

'ನಡೆವವರ ಕಾಲಿಗೆ ನಮಸ್ಕಾರ.' ಮಾನವಕೋಟಿಗೆ ವಿಜ್ಞಾನ ಸೌಕರ್ಯಗಳನ್ನು ಸೂರೆಮಾಡುತ್ತಿದೆ; ಮನೆ ಮನೆಯ ಬಾಗಿಲಿಗೆ ತಂದು ಸೌಲಭ್ಯಗಳನ್ನು ಒಟ್ಟುತ್ತಿದೆ; ವಿವಿಧ ಸುಖ ಭೋಗ ವಿಲಾಸಗಳನ್ನು ರಾಶಿರಾಶಿಯಾಗಿ ಹರವುತ್ತಿದೆ. 'ತಿನ್ನು, ಕುಡಿ, ಮನ ಬಂದಂತೆ ಸುಖವಾಗಿರು.' ಆರೋಗ್ಯ ಕೆಟ್ಟರೆ ಆಪರೇಶನ್ ಇದೆ; ತಲೆ ಕೆಟ್ಟರೆ ಮೆಂಟಲ್ ಹಾಸ್ಪಿಟಲ್ ಇದೆ. ಕಾಲಲ್ಲಿ ಶಕ್ತಿ ಇಲ್ಲ? ಏಕೆ? 'ಕಾರು' ಸಿದ್ಧವಾಗಿ ಇದೆ. ನಿದ್ರೆ ಇಲ್ಲ? ಈ ಗುಳಿಗೆ ನುಂಗು. ಮೂಗು ಮೊಂಡವಾಗಿದೆಯೆ? ಅದು ರೂಪಸೌಂದರ್ಯಕ್ಕೆ

ಕೊರತೆ, ನೆಟ್ಟಗೆ ಮಾಡುತ್ತೇನೆ. ಇದಾವ ಘನ? ಬೇಸರವೆ? ಇಕೋ ಗುಣಿಸಿ ಭಾಗಿಸುವ ಯಂತ್ರ. ಏಕೆ ಸುಮ್ಮನೆ ಮೆದುಳಿಗೆ ತೊಂದರೆ?...ಹರಗುವುದು, ಬಿತ್ತುವುದು, ಗೊಬ್ಬರ ಮಾಡುವುದು, ಕೊಯ್ದು ರಾಶಿಮಾಡುವುದು, ನೂಲುವುದು ನೇಯುವುದು – ಇಂತಹ ಸಾವಿರಾರು ದೈಹಿಕ ಶ್ರಮಗಳನ್ನು ಯಂತ್ರದ ಕೈಯಲ್ಲಿ ಕೊಟ್ಟು, 'ವ್ಯರ್ಥಕಾಲ' ಕಳೆಯದೆ ಕ್ಲಬ್, ಟಾಕೀಜ್, ಪಾರ್ಟೀಜ್, ರಾಜಕಾರಣ, ಸಮಾಜಸೇವೆ, ಸಾರ್ವಜನಿಕ ಭಾಷಣ, ಕಥೆ ಕಾದಂಬರಿ, ನೃತ್ಯ ಸುಗಮಸಂಗೀತಗಳಲ್ಲಿ ಕಾಲದ ಸದ್ವಿನಿಯೋಗ ಒಂದು ಕಡೆ. 'ಫ್ಯಾಕ್ಟರಿ' 'ಪ್ಲ್ಯಾಂಟ್' 'ಕಾರ್ಪೋರೇಶನ್'ಗಳಲ್ಲಿ ಯಂತ್ರದೊಡನಾಡುತ್ತ, ಯಂತ್ರದಿಂದ ಲೋಕದ ಬಯಕೆ ಬೇಡಿಕೆಗಳನ್ನು ಪೂರೈಸುತ್ತಿರುವ ಯಾಂತ್ರಿಕರು, 'ಕಾಮಗಾರ'ರು ಮತ್ತೊಂದು ಕಡೆ. ಎಲ್ಲೆಲ್ಲಿ ಯಂತ್ರ, ಶಬ್ದ, ಹೊಗೆ, ಬೆಂಕಿ. ವಿಜ್ಞಾನವೆಂದರೆ ಸಾಮಾನ್ಯಜನದ ಕಣ್ಣ ಮುಂದೆ ನಿಲ್ಲುವ ವಸ್ತು ಇವೇ. ನಿತ್ಯಜೀವನದಲ್ಲಿ ಪ್ರವೇಶ ಮಾಡಿ, ಜೀವನದ ಜೀವರಕ್ತವೆ ಆಗಿ ಪರಿಣಮಿಸುತ್ತಿರುವ ಈ ವಿಜ್ಞಾನ ಮಾನವ ಜೀವನವನ್ನು 'ಯಂತ್ರಜೀವನ'ವನ್ನಾಗಿಯೆ ಪರಿವರ್ತಿಸುತ್ತಿದೆ. ಇಂತಹ ಯಂತ್ರ ಜೀವನದಲ್ಲಿ ಬುದ್ಧಿಗಿರುವ ಪ್ರಾಶಸ್ತ್ಯ ಹೃದಯಕ್ಕಿಲ್ಲ, ಭಾವ-ಭಾವನೆಗಳಿಗಿಲ್ಲ. ಈ ದೃಷ್ಟಿಯಲ್ಲಿ **Soul, Spirit,** ಆತ್ಮ, ಪರಮಾತ್ಮ ಮುಂತಾದ ವಸ್ತು ಅಥವಾ 'ಕಲ್ಪನೆ'ಗಳಿಗೆ ಯಾವ ಬೆಲೆಯೂ ಇಲ್ಲ. ಬೆಲೆ ಏಕೆ ಕೊಡಬೇಕು? ಇಂದಿನ ವಿಜ್ಞಾನದ ಅದ್ಭುತಕಾರ್ಯವನ್ನು ಹಿಂದಿನ ಧರ್ಮ ದೇವರು ನಿರ್ವಹಿಸಬಲ್ಲರೆ? ಮಂತ್ರದಿಂದ ಹೋದೀತೇ ಹೊಟ್ಟೆಬೇನೆ?. ಪೂಜೆಯ ಬಲದಿಂದ ಅಂತರಿಕ್ಷದಲ್ಲಿ ವಿಮಾನದಂತೆ ಹಾರಬಲ್ಲನೆ ದೇವಭಕ್ತ? ಗಂಟೆ ಬಾರಿಸಿ 'ಟೆಲಿಗ್ರ್ಯಾಮ್' ಕಳಿಸಬಹುದೇ ನ್ಯೂಯಾರ್ಕಿಗೆ? ದೇವರಿಗೆ ದೀಪಾರಾಧನೆ ಮಾಡಿ ವಿದ್ಯುದ್ದೀಪ ಹಚ್ಚಬಹುದೇ ನಗರಕ್ಕೆಲ್ಲ? 'ಹರಿ ನೀರು' ಹಾಕಿದರೆ, ಹಡೆಯಬಲ್ಲಳೆ ಬಾಣಂತಿ? ಮೈಯೊಳಗಿನ ಜಡ್ಡು 'ತಾಯತ'ದಿಂದ, ಮಂತ್ರ ಬೂದಿಯಿಂದ ಬಿಡಬಲ್ಲುದೆ? ದೇವರಿಗೆ ಧೂಪ ಹಾಕಿದರೆ, ವೈರಿಗಳಿಗೆ 'ವಿಷವಾಯು' (Poison gas) ಆಗುವ ಸಾಮರ್ಥ್ಯ ಬರಬಹುದೆ? ಧರ್ಮ ದೇವರು, ಮಹಿಮೆ ಪವಾಡ, ಭಕ್ತಿ ಪೂಜೆ, ಯೋಗ ಸಿದ್ಧಿ, ಜಪ ತಪ, ತೀರ್ಥ ಕ್ಷೇತ್ರ ಯಾತ್ರೆ, ವ್ರತ ನಿಯಮ ಮುಂತಾದಿವೆಲ್ಲ ಅಜ್ಞಾನದ 'ಕಾಡು'. ಇವೆಲ್ಲ ಕೂಡಿ ಸಾಧಿಸದ ಅದ್ಭುತ ಸಿದ್ಧಿಗಳ 'ನಾಡು' ವಿಜ್ಞಾನ. 'ಪುರಾತನ'ವೆಂಬ ವ್ಯಾಮೋಹದಿಂದ ಅಜ್ಞಾನದ ಅಂಧ ಪಾರಂಪರ್ಯವನ್ನು ಪೂಜಿಸುವುದೇ? ಮನೆಯ ದೀವಿಗೆ ಎಂದು ಮುದ್ದು ಕೊಟ್ಟವರುಂಟೆ? ಪರ್ವತಗಳನ್ನು ಕೊರೆದೊಗೆದು, ಸಮುದ್ರಗಳನ್ನು ಹನುಮಂತನಿಗಿಂತ ನೂರುಮಡಿ ವೇಗವಾಗಿ ದಾಟಿ, ಪುರಾಣದ ಪುಷ್ಪಕವಿಮಾನಗಳನ್ನು ಮೀರಿ, ಪುಣ್ಯಪಾಪದ ಭಯವನ್ನು ಮೆಟ್ಟಿ, ಸಮತೆಯನ್ನು ಘೋಷಿಸುತ್ತ, ಆಕಾಶವನ್ನು ಸಲೀಲವಾಗಿ ಆಕ್ರಮಿಸುತ್ತಿರುವ ವಿಜ್ಞಾನಿಯ ಅಗಾಧ ಮಹಿಮೆಗೆ ದೇವರು ಕೈಮುಗಿಯಬಹುದು. ಮನುಷ್ಯನ ಪಾಡೇನು ? ರಾಕೆಟ್, ಹಾಯ್‌ಡ್ರೋಜನ್ ಬಾಂಬ್, ಕೃತಕಗ್ರಹಗಳನ್ನು ನಿರ್ಮಿಸಬಲ್ಲ ಕಣ್ಣ ಮುಂದಿನ ವಿಜ್ಞಾನಿ, ಕಾಣದ ಬ್ರಹ್ಮಾದಿ ದೇವತೆಗಳಿಗಿಂತ ಹೆಚ್ಚು ಮಾನ್ಯನಲ್ಲವೆ? ನಿಸ್ಸಂಶಯವಾಗಿ ಹೌದು ಎಂಬ ಉತ್ತರ ಕೊಟ್ಟಿ

ಕಂಠದಿಂದ. 'ವಿಜ್ಞಾನ'ವೇ ಇಂದು ಯುಗಧರ್ಮ. 'ನಾನ್ಯಃ ಪಂಥಾ ವಿದ್ಯತೇಽಯನಾಯ'!

ಅನಿವಾರ್ಯವೆನಿಸಿರುವ ಈ ಧರ್ಮಾಂತರದಿಂದ ಮಾನವನ ಜೀವನದಲ್ಲಿ, ಆತನ ದೃಷ್ಟಿಯಲ್ಲಿ ಅತ್ಯಪೂರ್ವವಾದ ಬದಲಾವಣೆಯಾಗಿದೆ.

'One hundred and fifty years of science have proved more explosive than five thousand years of pre-scientific culture.'[೧]

ಸಾವಿರ ಸಾವಿರ ವರ್ಷಗಳ ಪರಿಶ್ರಮ, ತಪಸ್ಸು, ಅನುಭವದಿಂದ ಕಟ್ಟಿದ ಮಾನವ ಸಂತತಿಯ ತತ್ತ್ವ-ಧರ್ಮ, ಸಮಾಜ-ನೀತಿ, ಕಲೆ, ಮತ್ತೆ ಆರ್ಥಿಕ ರಾಜಕೀಯ ಸಂಸ್ಥೆಗಳೆಲ್ಲ ಹಳೆಯ ಮಾದರಿಯ 'ಒಡ್ಡರ ಬಂಡಿ'ಗಳಂತೆ ತೋರುತ್ತಿವೆ. ದ್ವೈತಾದ್ವೈತಗಳ ತತ್ತ್ವ ವಿಚಾರ, ಹೊತ್ತು ಹೋಗದ ಸೋಮಾರಿಗಳ ವ್ಯರ್ಥ ಕಾಲಹರಣ. ಧರ್ಮ ಭಕ್ತಿ ಅಜ್ಞಾನಿ 'ಬಾಲಕ'ರ ಅಂಧಾನುಕರಣ. ನೀತಿ ಸತ್ಯ ನಿರ್ಬಲರ ನಿವಾಸಸ್ಥಾನ. ಕಲೆ ಬುದ್ಧಿಯ ಕೊಲೆ. ಒಳ್ಳೆಯತನ ಅಂದರೆ ಮೂರ್ಖತನ. ಸದಾಚಾರ ಅಂದರೆ ಅವಿಚಾರ. ವಿಶ್ವಾಸ ಗೌರವ ಹಿಂದಿನ 'ಗುಲಾಮಗಿರಿ'ಯ ಅವಶೇಷ. ಶಾಂತಿ ಸೈರಣೆ ಅಕ್ಷಮ್ಯವಾದ ದೌರ್ಬಲ್ಯ. ಹಿಂದಿನ ಉಡುಪುತೊಡಪೆಲ್ಲ ದಿನದಿನಕ್ಕೆ ಕ್ಷೀಣವಾಗಿ, ಹೊಸ ಹೊಸ 'ಠೀವಿ' ಸೆಟೆದು ನಡೆಯುತ್ತಿರುವಂತೆ, ಹಿಂದಿನ ಜೀವನದ ರೀತಿ ನೀತಿ ಕ್ರಮೇಣ ಮಾಯವಾಗುತ್ತ, ಇಂದಿನ ಯುಗಧರ್ಮದ ಹೊಸ ರೀತಿ ಹೊಸ ನೀತಿ ಪ್ರತಿನಿತ್ಯ ನೂತನವಾಗಿ ಪ್ರಚಾರವಾಗುತ್ತಿದೆ.

ವಿಜ್ಞಾನದ ಪ್ರಭಾವ, ಸಮಾಜ ಕುಟುಂಬದ ರಚನೆ, ವ್ಯಕ್ತಿ ವ್ಯಕ್ತಿಯ ಜೀವನವನ್ನು ಆವರಿಸಿ, ಅಲ್ಲಿಯೂ ಕಲ್ಪನೆಗೆ ಮೀರಿದ ಕ್ರಾಂತಿಯನ್ನು ಉಂಟುಮಾಡಿದೆ. ದೇವರು, ಧರ್ಮ, ನೀತಿ, ಪುರುಷಾರ್ಥಗಳಿಂದ ಮುಕ್ತನಾಗಿ ಸ್ವಾತಂತ್ರ್ಯವನ್ನು ಸಂಪಾದಿಸಿದ ಮಾನವವ್ಯಕ್ತಿ, ತಂದೆ ತಾಯಿ ಸಮಾಜ ಸಮಯದ ಬಂಧನಗಳನ್ನೂ ಕತ್ತರಿಸಿ, ಪರಂಪರಾಗತವಾಗಿ ಬಂದ ಸಂಪ್ರದಾಯದ ಸೀಮೋಲ್ಲಂಘನೆಯನ್ನೇ ಮಾಡಿ ದಿಗ್ವಿಜಯಕ್ಕೆ ಪ್ರಯಾಣವನ್ನು ಬೆಳೆಸುತ್ತಿದ್ದಾನೆ. ಭಕ್ತಿ ಪ್ರೇಮ ವಾತ್ಸಲ್ಯ ಪರೋಪಕಾರ ಸಹಕಾರ ಸರ್ವಕಲ್ಯಾಣಬುದ್ಧಿಯಿಂದ ಕಟ್ಟಿದ ಸಮಾಜ ಕುಟುಂಬಗಳೊಡೆದು, ಭಿನ್ನ ವಿಭಿನ್ನ ವ್ಯಕ್ತಿಗಳೆಲ್ಲ 'ತನಗೆ ಒಡೆಯ ತಾನು' ಎಂಬ ವ್ಯಕ್ತಿಸ್ವಾತಂತ್ರ್ಯವನ್ನು ಉದ್ಘೋಷಿಸುತ್ತ ತಂತಮ್ಮ ಹಾದಿಯನ್ನು ತಾವೇ ಕಂಡುಕೊಳ್ಳುತ್ತಿದ್ದಾರೆ. 'ವ್ಯಕ್ತಿಸ್ವಾತಂತ್ರ್ಯ' ಎಂಬ ಸೂತ್ರಕ್ಕೆ ಭಿನ್ನ ಭಿನ್ನ ವ್ಯಕ್ತಿಗಳು ತಮತಮಗೆ ಸರಿಕಂಡಂತೆ, ಕಾಲಕಾಲದ ಉದ್ದೇಶಕ್ಕೆ ಹೊಂದಿಕೆಯಾಗುವಂತೆ, ಒಮ್ಮೆ ಹೀಗೆ ಒಮ್ಮೆ ಹಾಗೆ ತಿದ್ದುತ್ತ, ಭಾಷ್ಯ ಬರೆಯುತ್ತ ನಡೆದಿದ್ದಾರೆ. 'ಇದ್ದವರಿದ್ದ ಸ್ಥಲವನೆ ನುಡಿವರು. ಅದಕ್ಕದು ಸಹಜ.'

'ಮಾತೃದೇವೋ ಭವ' 'ಪಿತೃದೇವೋ ಭವ', 'ಏಕಪತ್ನೀವ್ರತ' 'ಪತಿಯೇ ಪರದೈವ', 'ಗುರುಹಿರಿಯರ ಮಾತು ಕೇಳಬೇಕು' 'ದೈವವೇ ದೇವರು', 'ಪರೋಪಕಾರಾರ್ಥ

೧. The Scientific Outlook: *Introdnction p. 9.*

ಮಿದಂ ಶರೀರಂ' – ಮುಂತಾದ ಪುರಾತನ ಬುದ್ಧಿಯ ಮಾತುಗಳಲ್ಲಿ ಉಳಿದ ಜೀವಾಂಶವೆಷ್ಟು? ಹಿತೋಪದೇಶ, ಬುದ್ಧಿಯ ಮಾತೆಲ್ಲ ಬುದ್ಧಿಗೆಟ್ಟ ಧಾರ್ಷ್ಟ್ಯ. ದೇವರೇ ಗತಿಗೆಟ್ಟು ಬಾಳುತ್ತಿರುವಾಗ ಮಾತೃ ದೇವರು, ಪಿತೃ ದೇವರು ಎಂದು ತಿಳಿ, ಭಾವಿಸು, ನಡೆ – ಎಂಬ ಉಪದೇಶ ಮೂರ್ಖತನವಲ್ಲದೆ ಮತ್ತೇನು? ದೇವರೇ ಭಕ್ತಿಯಿಲ್ಲದ ಬರಗಾಲದಲ್ಲಿ ಬಳಲುತ್ತಿರುವಾಗ, ಸತಿ ಎಲ್ಲಿಂದ ತರಬೇಕು ಪತಿಗೆ ಭಕ್ತಿಯನ್ನು? ನನ್ನ ಶರೀರ – ಅದು ಇರುವುದು 'ಪರೋಪಕಾರಾರ್ಥಂ!' ಹಾಗಾದರೆ ನನ್ನ ಹೊಲ ಮನೆ ಮಂದಿಗೆ ಕೊಟ್ಟು, ನಾನು 'ಬೈರಾಗಿ'ಯಾಗಬೇಕೆಂಬುದು ನಿಮ್ಮ ಅಭಿಪ್ರಾಯವೆ? ಬುದ್ಧಿವಂತರಲ್ಲಿ ಇಂಥ ಅಭಿಪ್ರಾಯ ಹೇಗೆ ತಾನೇ ಹುಟ್ಟೀತು? ನಿಮಗಿಲ್ಲದಿದ್ದರೂ ನನಗೆ ಬುದ್ಧಿ – ಇದೆ. ಪರೋಪಕಾರದಿಂದ ಪುಣ್ಯ? ಪುಣ್ಯಮಾಡಿಯೇ ಹಾಳಾದರು ಹಿಂದಿನವರು.

ಇಂದು ತಂದೆ ಮಕ್ಕಳಿಗಿರುವುದು ವಾತ್ಸಲ್ಯದ ಬಂಧನವಲ್ಲ, ಆರ್ಥಿಕ ಅವಲಂಬನ. ಕಲಿತು 'ನೌಕರಿ' ಆದರೆ, ವ್ಯಕ್ತಿಸ್ವಾತಂತ್ರ್ಯ ಮಕ್ಕಳಿಗೆ. ಜೊತೆಗಾರ ಇಲ್ಲವೆ ಜೊತೆಗಾರ್ತಿಯಾದರೆ, ಆ ಸ್ವಾತಂತ್ರ್ಯ ಸಂಪೂರ್ಣ. ತಂದೆ ತಾಯಿ ಮಕ್ಕಳಿಗೆ ದುಡಿದು ಮುಪ್ಪಾದರು. ಅವರ ಸಂರಕ್ಷಣೆ? ಇಂಥ ಕ್ಷುಲ್ಲಕ ಸಂಗತಿಗೆ ತಲೆ ಕೆಡಿಸಿಕೊಳ್ಳಬಾರದು. 'ಜಾತಸ್ಯ ಹಿ ಧ್ರುವೋ ಮೃತ್ಯುಃ'. ಇಂದಿನ ದಾಂಪತ್ಯಜೀವನವೂ ಯುಗಧರ್ಮಕ್ಕನುಗುಣವಾಗಿ ಒಂದು ವಿಶೇಷಾರ್ಥವನ್ನೇ ತಳೆದಿದೆ. ಸತ್ಯ ಪ್ರೇಮಕ್ಕಿಂತ ನಿತ್ಯಕಾಮವೆ ಈ ಜೀವನದ ತಳಹದಿ. ಮದುವೆ ಎಂಬುದು ಬಿಚ್ಚಬಾರದ ಬ್ರಹ್ಮಗಂಟಲ್ಲ. ಸ್ವೈರ (Free love) ಇಲ್ಲವೆ ಘಟಸ್ಫೋಟ, ಈ ಗಂಟನ್ನು ಸಲೀಲವಾಗಿ ಸಡಿಲಿಸಬಲ್ಲುದು. ನವೀನ ಸತಿಯರ ಆದರ್ಶ ಇದು.

'... Economic independence with freedom from the ties of marriage and the responsibilities of motherhood is the ambition of many a young woman of the growing "smart set." Divorces are increasing in numbers and children are pushed back and forth between the parents whose only communications with each other are through their solicitors.'[೧]

'... ಒಬ್ಬನ ಕೈವಿಡಿದು, ಒಬ್ಬನಿಗೆ ಮಾತು ಕೊಟ್ಟು,
ಒಬ್ಬನಿಗೆ ಸನ್ನೆಯ ಮಾಡಿ ಮತ್ತೊಬ್ಬನ ಸಂಗವ ಮಾಡುವ, .. '[೨]

ನವಯುಗದ ಪತಿವ್ರತಾಧರ್ಮ. ವಿಧವಿಧ ಪುಷ್ಪಗಳ ಸೌರಭಸಾರವನ್ನು ಹೀರಿ ಝೇಂಕರಿಸುತ್ತಿರುವ 'ಭ್ರಮರವ್ರತ'ವನ್ನು ಕೈಕೊಂಡ ಬ್ರಹ್ಮಚಾರಿ ಇಂದಿನ ನವಯುವಕ. ಶ್ರೀರಾಮಚಂದ್ರನಿಗೆ ಫ್ರಾಯಿಡನ ಮನಃಶಾಸ್ತ್ರ ಗೊತ್ತಿದ್ದರೆ ಏಕಪತ್ನೀವ್ರತದ ಅಜ್ಞಾನತನವನ್ನು ಮಾಡುತ್ತಿದ್ದನೆ? ತಲೆಯಲ್ಲಿ ಏಳುವ ಬಯಕೆಗಳನ್ನು ಹತ್ತಿಕ್ಕಿದರೆ 'ಸುಪ್ತಮನ'

೧. Kalki or the Future of Civilization p. 19.
೨. ಗ. ಭಾ. ರ. ಪು. ೨೮೯, ವ. ೧.

(Subconscious Mind, 'Libido') ದಲ್ಲಿ ಅವಿತ ಆ ಬಯಕೆ ಕರಾಳಭೂತವಾಗಿ ಕಾಡದಿರುವುದೆ? ಮತ್ತು ಯಂತ್ರದಂತೆ ಅವಿಶ್ರಾಂತವಾಗಿ ಕೆಲಕಾಲ ಉರಿದು ಆರುವ ಕ್ಷಣಭಂಗುರ ಜೀವನಕ್ಕೆ ಈ ಅಲ್ಪ ಸುಖಭೋಗಗಳೂ ತ್ಯಾಜ್ಯವೆ? 'ಯೋ ವೈ ಭೂಮಾ ತತ್ ಸುಖಂ, ನಾಲ್ಪೇ ಸುಖಮಸ್ತಿ'[೧] – ಎಂಬ ನುಡಿ ಹಿಂದಿನ ಪುರಾಣ. 'ಅಲ್ಪ'ದರಲ್ಲಿಯೆ ಮಹಾಸುಖವಿದೆ. ಹನಿಹನಿಯಂತಿರುವ ಈ 'ಅಲ್ಪ'ಗಳೆ ಜೀವನದ ಸುಖಸಮುದ್ರ. ವ್ಯಕ್ತಿಸ್ವಾತಂತ್ರ್ಯದ ಅಂಗವಾಗಿ ಹರಿವ ಪ್ರೇಮ ಸ್ವಾತಂತ್ರ್ಯದ ಇಂದಿನ 'ಮನು'ಗಳು ಅಜ್ಞಾನಾವಸ್ಥೆಯಲ್ಲಿ ಬರೆದ ಹಿಂದಿನ ಧರ್ಮ-ನೀತಿಸೂತ್ರಗಳನ್ನು, ಸಂಸ್ಥೆಗಳನ್ನು ಮನ್ನಿಸುವುದೆಂತು?[೨]

ವಿದ್ಯಾ–ಶಿಕ್ಷಣಕ್ಷೇತ್ರ: ಗುರುಶಿಷ್ಯ ಸಂಬಂಧ – ಅದು ಭೂತಪುರಾಣ ಅಥವಾ ಪುರಾಣದ ಭೂತ. ಇಂದಿನ ವಿದ್ಯಾರ್ಥಿಗೆ 'ಗುರುದೇವೋ ಭವ' ಎಂದು ಹೇಳುವ ಧೈರ್ಯ ಯಾವ ಗುರುವಿಗೂ ಇಲ್ಲ; ಇಲ್ಲದ ದೇವರಿಗೂ ಇಲ್ಲ. ವಿದ್ಯಾಶಿಕ್ಷಣ ಒಂದು ವಿಶುದ್ಧ ವ್ಯಾಪಾರ. ದುಡ್ಡಿಗೆ ಕಲಿಸುವ ಗುರು, 'ನೌಕರಿ'ಗೆ ಓದುವ ವಿದ್ಯಾರ್ಥಿ. ಇಂಥ ಗುರುವಿಗೆ 'ಗೌರವ' ಯಾರಿಂದ? ಈ ವಿದ್ಯಾರ್ಥಿಗೆ ಭಯ ವಿನಯ ಭಕ್ತಿ ಎಲ್ಲಿಂದ? ವಿದ್ಯಾರ್ಥಿಯ ಕೃಪೆಯಿಂದಲೇ ಇಂದಿನ ಗುರು ತನ್ನ ಬಾಳನ್ನು ಬೆಳಗಬೇಕು. ಕೃಪೆ ತಪ್ಪಿದರೆ 'ಸಂಪು' 'ಹರತಾಳ' 'ನೆರೆವಣಿಗೆ' 'ಮೆರೆವಣಿಗೆ'. ಗುರುವಿಗೆ ಬೇರೆ ಗತಿಯಿಲ್ಲ, 'ತಲೆದಂಡ, ತಲೆದಂಡ'. ವಿದ್ಯೆ ದೊರೆವುದು ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ. ಭಾಷೆ, ಕಾವ್ಯ, ಸಂಗೀತ, ಗಣಿತ, ಭೂಗೋಲ, ಇತಿಹಾಸ, ಪ್ರಾಣಿಶಾಸ್ತ್ರ, ಮನಶ್ಶಾಸ್ತ್ರ ಮುಂತಾದ ಕಲಾವಿಜ್ಞಾನ ವಿಷಯಕವಾದ ಸಾವಿರ ಸಂಗತಿಗಳನ್ನು ಎಳೆಯ ತಲೆಯಲ್ಲಿ ತುಂಬುವ ವಿವಿಧ ಪ್ರಯತ್ನವಿಲ್ಲಿ. ಒತ್ತಿ ಹಣ್ಣುಮಾಡುತ್ತಿರುವ ಈ ವಿದ್ಯಾಯಂತ್ರದಲ್ಲಿ ರೂಪುಗೊಂಡು ಹೊರಬೀಳುತ್ತಿರುವ 'ಸುಶಿಕ್ಷಿತ' ತರುಣರ ಚಿತ್ರ ಮನವನ್ನು ಬೆಪ್ಪುಬೆರಗಾಗಿಸುತ್ತದೆ. ಏಕೆ ಕಲಿತೆ? ಏನು ಕಲಿತೆ? ಕಲಿತ ವಿದ್ಯೆಯಿಂದ ಸುಶಿಕ್ಷಿತನಾಗಿರಬಹುದು; ಪದವೀಧರನಾಗಿರಬಹುದು. ಆದರೆ ಸತ್ತ್ವಯುತವಾದ ಜೀವನವನ್ನು ಸುಂದರವಾಗಿ ಅರಳಿಸಿ, ಎಲ್ಲೆಲ್ಲಿ ಆನಂದವನ್ನು ಪರಿಮಳಿಸುವ ಸುಸಂಸ್ಕೃತ ವ್ಯಕ್ತಿತ್ವವನ್ನು ಕಟ್ಟುವ ವಿದ್ಯೆಯನ್ನು ಕಲಿತೆನೆ? ತನಗೆ ಶೋಭನ, ತನ್ನ ಬಂಧುಬಳಗವಾದ 'ಅನ್ಯ'ರಿಗೆ ಕಲ್ಯಾಣವಾಗುವಂತೆ ಜೀವನವನ್ನು ನಡೆಸುವ ಜೀವನ ಕಲೆಯನ್ನು ಅಭ್ಯಾಸ ಮಾಡಿದೆನೆ? ಜೀವನದ ಅರ್ಥವೇನು? ರಸವೇನು? ಚರಮಧ್ಯೇಯವೇನು? ಸಾಧಿಸುವ ಕೌಶಲ ರಹಸ್ಯವೇನು? ವಿಷಮಪ್ರಪಂಚದಲ್ಲಿ ಧುಮುಕಿ ವಿಷಯದೊಡನೆ ಹೋರಾಡಿ, ಸಮತೆಯಲ್ಲಿ ಮುಂದೆ ಮುಂದೆ ಸಾಗಿ ಜೀವನದ ಪರಮಾದರ್ಶವನ್ನು ಸೇರುವ ಬಗೆ

---

೧. ಛಾಂ. ಉ., ಅ. ೭, ಖಂಡ ೨೩, ಮಂ. ೧.

೨. 'They dismiss moral restraint as antequated humbug and piety as mere superstition. Adultry is the only outward sign of inner freedom. Established institutions happen to be the most powerful enemies of life and so they must be turned down before we can build a better social order'.

Kalki pp. 22-23.

ಯಾವುದು? – ಎಂಬಿಂತಹ ಸತ್ಯಪ್ರಶ್ನೆಗಳಿಗೆ ಜಗತ್ತಿನಲ್ಲಿ ಉತ್ತರ ಬರೆಯಬಲ್ಲೆನೆ? ಇಂಥ ಪ್ರಶ್ನೆ ಗುರುಗಳಲ್ಲಿ ಕೇಳಿದೆನೆ? ಅಥವಾ ಅವರು ಇಂಥ ಪ್ರಶ್ನೆ ಎತ್ತಿದರೆ? ಸಾವಿರ ಪುಸ್ತಕಗಳಿಂದ ತುಂಬಿರುವ ಇಂದಿನ ವಿದ್ಯಾಪದ್ಧತಿಯಲ್ಲಿ ಇಂಥ ಪ್ರಶ್ನೆ ಕೇಳುವುದು ಮೂರ್ಖತನ; ಹೇಳುವುದು 'ಕೆಳದರ್ಜೆ'. ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಉಳಿದೆಲ್ಲ ವಿದ್ಯೆ ಒಟ್ಟಿ, ಜೀವನವಿದ್ಯೆಗೆ ಸ್ಥಳವಿಲ್ಲದಂತಾಗಿದೆ. ಅಲ್ಲಿಯ ವಿದ್ಯೆಯನ್ನೆ ತಲೆಯಲ್ಲಿ ತುರುಕಿಕೊಂಡಿರುವ ಸುಶಿಕ್ಷಿತ ವರ್ಗದಲ್ಲಿ ಜೀವನವಿದ್ಯೆಯ ಆವಶ್ಯಕತೆಯೆ ತೋರಿಲ್ಲ.

ಇದೇ ರೀತಿ ದೇಶವಿದೇಶಗಳಲ್ಲಿ ನಡೆದಿರುವ ರಾಜನೀತಿ ರಾಜಕಾರಣ, ವ್ಯಾಪಾರ ಉದ್ಯೋಗ ಮುಂತಾದ ಮಾನವಜೀವನದ ವಿವಿಧ ರಂಗಗಳನ್ನು ನೋಡುತ್ತ ನಡೆದರೆ ಎಲ್ಲ ಕಡೆ ಪ್ರಭಾವಿಸಿ ತೋರುತ್ತದೆ ವಿಜ್ಞಾನದ ಹಸ್ತಕ್ಷೇಪ, ಸುತೀಕ್ಷ್ಣಬುದ್ಧಿಯ ವಕ್ರಗಮನ, ಮಾತಿನ ರೀತಿಯ ವಿನೂತನ ಬ್ರಹ್ಮಜಾಲ. ನವನಾಗರಿಕತೆಯ ಕಟ್ಟಡ ಮೇಲಕ್ಕೇಳುತ್ತಿರುವಾಗ, ಪುರಾತನಸಂಸ್ಕೃತಿ ಕುಸಿಯುತ್ತ ಭೂಗತವಾಗುತ್ತಿದೆ. ಹಿರಿಯು ರಿಟ್ಟುಕೊಂಡಿದ್ದ ಧರ್ಮ, ಅರ್ಥ, ಕಾಮ, ಮೋಕ್ಷ, ಸತ್ಯ, ಶಿವ, ಸುಂದರ ಮುಂತಾದ ಮಾನವಪುರುಷಾರ್ಥಗಳೆಲ್ಲಾ ಸತ್ತು ಸಮಾಧಿಗೊಂಡಂತಿದ್ದರೆ, ಯಂತ್ರ ಜೀವನದ ಇಂದಿನ ಪೀಳಿಗೆಗೆ 'ಪುರುಷಾರ್ಥ'ದ ಕಲ್ಪನೆ, ಮಾತು ಅಸಂಬದ್ಧ ಪ್ರಲಾಪ.

ಇದೆಲ್ಲದರ ಪರಿಣಾಮವೇನು? ಗುಣಿತಾರ್ಥವೇನು? ಬುದ್ಧಿ, ವಿಜ್ಞಾನ, ಯಂತ್ರ ತಂತ್ರ, ಶಿಕ್ಷಣ, ವ್ಯಕ್ತಿಸ್ವಾತಂತ್ರ್ಯಗಳೆ ಮೂಲಾಧಾರವಾಗಿ ನಿಂತಿರುವ ಮಾನವ ಕುಲ ಹೊರಗೆ ಬದುಕಿ, 'ಯಮಕಿ'ನಿಂದ ಬಾಳಿ, ಗಳಿಗೆಯ ಬೇಟಕ್ಕೆ ಮರುಳಾಗಿ ಅಸ್ತಮಾನಕ್ಕೆ ಆಹುತಿಯಾಗುವಂತಿದೆ. ಹೊರಗೆ ತೇಜ, ಒಳಗೆ ನಿಸ್ತೇಜ. ಸುಖ ಭೋಗ ಭಾಗ್ಯ ವಿಲಾಸ ಸಾಧನ ಸೌಕರ್ಯ ಸೌಲಭ್ಯ ತುಂಬಿದ್ದು ನಿಜವಾಗಿ ಸುಖವಿಲ್ಲ. ಮಾರಿಸ್ ಮ್ಯಾಟರ್‌ಲಿಂಕನ 'ನೀಲಪಕ್ಷಿ' (Blue Bird) ಯಂತೆ, ಸುಖ ಎಲ್ಲಿ ಹಿಡಿದಲ್ಲಿ ಮಾಯವಾಗುತ್ತಿದೆ. ವೇಳೆ ಉಳಿಸುವ ಅದ್ಭುತ ಯಂತ್ರಗಳಿದ್ದು ವಿಶ್ರಾಂತಿಗೆ ಎಡೆಬಿಡುವಿಲ್ಲ. ಭೂಮಂಡಲವನ್ನೆ ಹುರುಪಳಿಸುವ ಬ್ರಹ್ಮಾಸ್ತ್ರಗಳಿದ್ದು ಶಾಶ್ವತಭೀತಿಯೆ ಜೀವನದ ಉಸಿರಾಗಿದೆ. ವಿದ್ಯೆ ಕಲಿತು ಬುದ್ಧಿ ಕೆಡುತ್ತಿದೆ. ಬುದ್ಧಿಯಿಂದ ಸ್ವಾರ್ಥದ ಪೂಜೆ ಬಲಗೊಳ್ಳುತ್ತಿದೆ. ವ್ಯಕ್ತಿ ವ್ಯಕ್ತಿಗಳ ಸ್ವಾತಂತ್ರ್ಯ ಸ್ವದೇಶವನ್ನು ಪರದೇಶವನ್ನಾಗಿ, ಸ್ವಕೀಯರನ್ನು ಪರಕೀಯರನ್ನಾಗಿ ಮಾರ್ಪಡಿಸುತ್ತಿದೆ. ಮಾತಿನಲ್ಲಿ ವಿಶ್ವಶಾಂತಿ, ವಿಶ್ವಪ್ರೇಮ, ವಿಶ್ವಬಾಂಧವ್ಯ, ವಿಶ್ವಕಲ್ಯಾಣ ನೆಲಸಿದ್ದರೂ ಹೃದಯದಲ್ಲಿ ಇವೆಲ್ಲ ದೊಡ್ಡ ಸೊನ್ನೆಗಳಾಗಿ ತೋರುತ್ತಿವೆ.

ಹಿಂದು ನೋಡದೆ, ಮುಂದು ಕಾಣದೆ, ಎಡಬಲಕ್ಕೆ ಕಿವುಡಾಗಿ ಅತ್ಯಂತ 'ಪ್ರಖರ' ವೇಗದಿಂದ ಮುಂದೆಸಾಗಿರುವ ಇಂದಿನ ಯಂತ್ರಜೀವನ ಎಲ್ಲಿಗೆ ಮುಟ್ಟೀತೆಂಬ ಅರಿವು ಮಾನವನಾಯಕರಿಗೇ ಖಚಿತವಾಗಿ ಗೊತ್ತಿಲ್ಲ. ವೇಗದ ಪ್ರಖರತೆಯಿಂದ ತಾವು ಬೆರಗಾಗಿ, ಲೋಕವನ್ನೆಲ್ಲ ದಂಗುಬಡಿಸುತ್ತ ನಡೆದಿರುವ ಈ ಯಂತ್ರವಾಹಕರು ಮಾನವಕುಲವನ್ನು ಸ್ವರ್ಗದಿಂದ ಪಾತಾಳಲೋಕಕ್ಕೆ ಇಳಿಸಿದರೆ ಹೇಗೆ? 'ರಕ್ಕಸಿ

ಬಾಣತಿಯಾದರೆ ಮಕ್ಕಳಿಗಿನ್ನೆಂತೊ?'[೧] – ಎಂಬ ಪರಿಸ್ಥಿತಿ! ವೇಗಕ್ಕೆ ಘನಸೋತು, ಏನೂ ಪ್ರಯೋಜನವಿಲ್ಲದ ಪ್ರಯಾಣವನ್ನು ಬೆಳೆಸಬೇಕೆ, ಸಿದ್ದ ಕವಲೂರಿಗೆ ಹೋದಂತೆ? ಹಾರುತ್ತ ಹಾರುತ್ತ ಸುಖ ಶಾಂತಿ, ಸತ್ಯ ಶಿವ ಸುಂದರದಿಂದ ದೂರ ದೂರ ಹೋದರೆ, ವಿಜ್ಞಾನ-ಬುದ್ಧಿಯ ನವೀನ ನಿರ್ಮಾಣಗಳು ತಮ್ಮ ಅಸ್ತಿತ್ವದ ಸಾಫಲ್ಯವನ್ನು ಪಡೆದಂತಾಯಿತೆ?

'Few men in the present day, for example, can be induced to believe that there is no inherent excellence in rapid locomotion. To climb from Hell to Heaven is good, though it be a slow and laborious process; to fall from Heaven to Hell is bad, even though it be done with the speed of Milton's Satan.'[೨] ವಿಜ್ಞಾನ ಪುರುಷನಿಗೆ, ಮಾನವನಾಯಕರಿಗೆ ಈ ಅರಿವು, ಈ ಸಾವಧಾನ ಬೇಕು. ಅದು ಇಲ್ಲದಿದ್ದರೆ 'ಬಳ್ಳಿಗುರುಡರು ಕೂಡಿ ಹಳ್ಳವನು ಬಿದ್ದಂತೆ' ಆಗಬಹುದು.

'ಬಹುದು' ಎನ್ನುವ ಸಂಶಯಕ್ಕಿಂತ 'ಅಹುದು' ಎಂಬ ನಿರ್ಧರವನ್ನು ನುಡಿಯ ಬೇಕಿಲ್ಲಿ. ವಿಜ್ಞಾನಿಯ ಬುದ್ಧಿ ಸಾಹಸ ಪ್ರಯತ್ನಶೀಲತೆಯಿಂದ ನಿಸರ್ಗದಲ್ಲಿ ನಿಗೂಢ ವಾಗಿ ಹುದುಗಿರುವ ಅನಂತ ಚೈತನ್ಯ ಶಕ್ತಿಗಳು ಒಂದನ್ನು ಮೀರಿ ಮತ್ತೊಂದು ಹೊರಬೀಳುತ್ತಿವೆ. ಸ್ವಯಂಪ್ರಜ್ಞೆಯಿಲ್ಲದ ಈ ಅದ್ಭುತ ಶಕ್ತಿಗಳಿಗೆ ನೀತಿಯ ನಿಯಮ ಗೊತ್ತಿಲ್ಲ. ಅವಕ್ಕೆ ಸುಖ ದುಃಖ, ಕಲ್ಯಾಣ ಅಕಲ್ಯಾಣದ ಕಲ್ಪನೆಯಿಲ್ಲ. ಕುರುಡನಿಗೆ ಕತ್ತಲೆ ಕತ್ತಲೆ; ಬೆಳಗು ಅದೂ ಕತ್ತಲೆ. 'ಬಣವೆ ಸುಡಬಾರದು, ಅಡಿಗೆ ಮಾಡಬೇಕು'- ಎಂಬ ವಿಚಾರ ಬೆಂಕಿಗೆ ಗೊತ್ತೆ? 'ಬೆಳಕು ಕೊಡಬೇಕು. ಶಾಕ್ ಕೊಡಬಾರದು'-ಎಂಬ ಕಲ್ಯಾಣಬುದ್ಧಿ ವಿದ್ಯುತ್ತಿಗಿದೆಯೆ? ಅಂಧಶಕ್ತಿಗಳಿಗಿಲ್ಲದ 'ಅಹಂಪ್ರಜ್ಞೆ' ಅವನ್ನು ಉಪಯೋಗಿಸುವ ಮಾನವನಲ್ಲಿದೆ. ಈ ಶಕ್ತಿಗಳನ್ನು ಧರಿಸಿರುವ ಮಾನವನು ಅವರಂತೆ ನೀತಿ ಕಲ್ಯಾಣ ಸುಖ ಶಾಂತಿಯ ಭಾವನೆಗಳಿಗೆ ಕುರುಡನಾಗಿ ಉಳಿದರೆ, ಮಾನವ ಕುಲಕ್ಕೆ ದುಃಖವಲ್ಲದೆ ಸುಖವಿಲ್ಲ; ಅಳಿವಲ್ಲದೆ ಉಳಿವಿಲ್ಲ. ಬಹಿರಂಗದ ಶಕ್ತಿ-ವೈಭವ-ವಿಲಾಸ ಸುಳಿಗೊಂಡು ಬೆಳೆಯುತ್ತಿರುವ ವಿಜ್ಞಾನಯುಗದಲ್ಲಿ ಅಂತರಂಗದ ದಿವ್ಯ ನೀತಿ, ದಿವ್ಯ ಸಂಸ್ಕೃತಿ ಒಣಗಿ ಬಡವಾಗುತ್ತಿದೆ. ಅಂತರಂಗದ ಸಾರಸೌಂದರ್ಯ ವೆನಿಸುವ ಸದುಹೃದಯ ಸದ್ಬುದ್ಧಿ ಸದಸದ್‌ವಿವೇಕ ಸದ್ಭಾವನೆಯಿಲ್ಲದ ಮಾನವ ಪ್ರಾಣಿಗಳ ಕೈಯಲ್ಲಿ ನಿಸರ್ಗದ ಭೀಷ್ಮಶಕ್ತಿಗಳು ದೊರೆತರೆ ಇನ್ನೇನು? ಇನ್ನೇನು ಎಂಬುದನ್ನು ರಶಿಯಾದ ಮಹಾವಿಜ್ಞಾನಿ ಪ್ಯಾವ್‌ಲಾವ್‌ನ ಗಭೀರ ಅನುಭವ ಹೀಗೆ ಹೇಳುತ್ತದೆ:

'...Let the mind rise from victory to victory over surrounding nature, let it conquer for human life and activity not only the

---

೧. ಪ್ರ. ವ. ಪು. ೧೨, ವ. ೧೪.

೨. The Scientific Outlook p. 277.

surface of the earth, but all that lies between the depth of the seas and the outer limits of the atmosphere, let it command for its service prodigious energy to flow from one part of the universe to the other, let it annihilate space for the transference of its thoughts–yet the same human creature, led by dark powers to wars and revolutions and their horrors, produces for itself incalculable material losses and inexpressible pain, and reverts to bestial conditions.'[೧] ಮಾನವನ ಬುದ್ಧಿ ತನ್ನ ಮಹಾನ್ನೈಪುಣ್ಯದಿಂದ ಮಾನವನ ಹೃದಯುವನ್ನು ಕತ್ತರಿಸಿ, ಮಾನವನನ್ನು ದಾನವನನ್ನಾಗಿ ಪರಿವರ್ತಿಸುವ ಭರದಲ್ಲಿದ್ದರೆ, ಕ್ಷಣಕಾಲ ನಿಂತು ವಿಚಾರಿಸಬೇಕು ಗಂಭೀರವಾಗಿ. 'For what is a man profited, if he shall gain the whole world, and lose his own soul?...'[೨] ಎಂಬ ಯೇಸುವಿನ ಮಂತ್ರವಚನದ ಮಹಾರ್ಥವನ್ನು ನಿದಿಧ್ಯಾಸ ಮಾಡಬೇಕು.

ಕ್ಷಣಕಾಲ ನಿಲ್ಲಬೇಕು, ಯೋಚಿಸಬೇಕು. 'ವಿಶ್ವಜೀವನ'ದ ಅಂಗವಾದ ಮಾನವ ಜೀವನದ ಅರ್ಥವೇನು? ಸಂಪೂರ್ಣ ಪರಮಾರ್ಥವೇನು? ಆ ಪರಮಾರ್ಥವನ್ನು ಸಾಧಿಸುವ ಸತ್‌ಪಥವಾವುದು? ವಿಜ್ಞಾನ ಆ ಪರಮಾರ್ಥದ ದರ್ಶನವನ್ನು ಪಡೆದಿದೆಯೆ? ಪಡೆವ ಯತ್ನವನ್ನಾದರೂ ಮಾಡುತ್ತಿದೆಯೆ? ಸತ್ಯಜೀವನದ ಸನ್ಮಾರ್ಗವನ್ನು ಕಟ್ಟುತ್ತಿದೆಯೆ? ಕಟ್ಟುವ ಬಯಕೆಯಾದರೂ ಅದಕ್ಕೆ ಇದೆಯೆ? ವಿಜ್ಞಾನ–ತಂತ್ರವು ಸಾವಿರ ಕೈಗಳಿಂದ ನೀಡುತ್ತಿರುವ ಅನಂತ ಸುಖಸೌಕರ್ಯಗಳು ಸತ್ಯ ಸಂಪೂರ್ಣವಾದ ಮಹಾಜೀವನದ ಆದ್ಯಂತ ಮಂಗಲಕ್ಕೆ ಪೋಷಕಪದಾರ್ಥವಾಗುತ್ತಿವೆಯೆ? ಮಾನವನ ಹೃದಯುದ ಗಂಭೀರದಲ್ಲಿ ಮಾನವನ ಪ್ರಜ್ಞೆ ಕೇಳಿ ಕೇಳದಂತೆ ನಿನಾದಗೈಯುತ್ತಿರುವ 'ಅಸತೋ ಮಾ ಸದ್‌ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ'[೩] – ಎಂಬ ದಿವ್ಯಾಪೇಕ್ಷೆಯ ಧ್ವನಿ ವಿಜ್ಞಾನಿಯ 'ಟೆಲಿಫೋನಿ'ಗೆ ಕೇಳಬರುತ್ತಿದೆಯೆ? ಅರ್ಥಶಾಸ್ತ್ರ ವೈದ್ಯಶಾಸ್ತ್ರ ಮುಂತಾದವುಗಳಿಂದ ಮಾನವಕುಲದ ದಾರಿದ್ರ್ಯ ರೋಗ ರುಜಿನಾದಿಗಳನ್ನು ನಿರ್ಮೂಲಗೊಳಿಸುವ ಹವಣಿಕೆಯಲ್ಲಿರುವ ವೈಜ್ಞಾನಿಕ ಬುದ್ಧಿ, ಮಾನವ ಹೃದಯಾನುಭಾವದ 'ಸರ್ವಂ ಖಲ್ವಿದಂ ಬ್ರಹ್ಮ'[೪] 'ಅಯಮಾತ್ಮಾ ಬ್ರಹ್ಮ'[೫] – ಎಂಬ ದಿವ್ಯಸಂಪತ್ತಿನ ಸೂತ್ರವನ್ನು ಕಂಡುಹಿಡಿದಿದೆಯೆ? ಮಾನವನ ಪ್ರಜ್ಞೆಗೆ ಅಂಟಿರುವ ಅಹಂಭಾವ ಮದ ಮತ್ಸರ ಕಾಮ ಕ್ರೋಧ ದಂಭ ಕಪಟ ಅನ್ಯಾಯ ಮೋಸ ಮುಂತಾದ ಮಹಾರೋಗವನ್ನು ಕಳೆದು, ಮಾನವನ ಬುದ್ಧಿ-ಹೃದಯದ ವ್ಯವಹಾರಕ್ಕೆ ನಿತ್ಯ ನಿರಾಮಯವನ್ನು ಪಸರಿಸುವ

೧. The Scientific Outlook p. 54.
೨. Bible, St. Matthew, Ch. 16-26.
೩. ಬೃ.ಉ., ಅ.೧, ಬ್ರಾ.೩., ಮಂ.೨೮.
೪. ನಿರಾ. ಉ., ಪು. ೨೧೭.
೫. ಮಾಂ. ಉ., ಮಂ. ೨.

ವಿಚಾರದಲ್ಲಿದೆಯೆ ವಿಜ್ಞಾನ? ಅಂತರಾಳದ ಆರುಣಿ ಮಾನವಶ್ವೇತಕೇತುವಿಗೆ ಕೇಳುವ ನಿರಂತರ ಪ್ರಶ್ನೆಗಳಿವು. ಗೊತ್ತಿದ್ದರೆ ಉತ್ತರ ಕೊಡಬೇಕು. ಇಲ್ಲದಿದ್ದರೆ ಗೊತ್ತಿದ್ದವರನ್ನು ಕೇಳಬೇಕು, ತಿಳಿಯಬೇಕು.

'Men can be provincial in time, as well as in place.'[೧] ತನ್ನ ದೇಶದಲ್ಲಿ ಮಂಡೂಕವಾಗಿ ಕೂಡಬಲ್ಲ ಮನುಷ್ಯ ತನ್ನ ಕಾಲದಲ್ಲಿಯೂ 'ಕೂಪ ಮಂಡೂಕ' ವೃತ್ತಿಯಿಂದ ಇರಬಲ್ಲ. ಇದರಂತೆ ತಾನು ದೊಡ್ಡವನೆಂಬ, ತನ್ನದು ದೊಡ್ಡದೆಂಬ ಅಭಿಮಾನದಿಂದ ತನ್ನ ಧರ್ಮ ಮತ ತತ್ತ್ವ ದರ್ಶನ, ತನ್ನ ಜೀವನ ಆದರ್ಶ ವ್ಯವಹಾರ, ತನ್ನ ರೀತಿ ನೀತಿ ನಡತೆ, ತನ್ನ ಜ್ಞಾನ-ವಿಜ್ಞಾನಗಳಲ್ಲಿ ವಾಸ ವಾಗಿರಬಲ್ಲುದು ಒಂದೊಂದು ಯುಗದ ಮಾನವಜನಾಂಗ. ಇಂಥ ಸಂಕುಚಿತ ಸ್ವಾಭಿಮಾನ ಆಯಾ ಮಾನವ ಕುಲಕ್ಕೆ ಭದ್ರವಾದ ಕೋಟೆಯಿದ್ದಂತೆ. ಇಂಥ ಕೋಟೆ ಯಲ್ಲಿದ್ದ ಸ್ವಾಭಿಮಾನದ ಹಮ್ಮಿಗೆ ಹಿಂದು ಮುಂದು, ಸುತ್ತು ಮುತ್ತು, ಮೇಲು ಕೆಳಗು ಕಾಣುವುದು ಕಷ್ಟ. ಹೊರಗೆ ಹೇಗೇ ಇರಲಿ, ಒಳಗಾದರೂ ಸುಕ್ಷೇಮವೇ? ಕೋಟೆ ಯೊಳಗೆ ಅಡ್ಡಾಡಿ ನೋಡಿದರೆ, ಮಾನವಕುಲದ ಸಮುದ್ರಜೀವನಕ್ಕೆ ಅಭದ್ರವೆ (insecurity) ಪೀಠಿಕೆಯಾಗಿದೆ; ಅಶುಭವೇ ಚಾರಿತ್ರವಾಗಿದೆ; ಮರಣವೆ ಮಂಗಲ ಪಾಠವಾಗಿದೆ. ಜೀವನದಲ್ಲಿ ಅವಿಶ್ರಾಂತವಾಗಿ ತಲೆದೋರುತ್ತಿರುವ ಅಶಾಂತಿ ಅಪಸ್ವರ ವೈಷಮ್ಯ ವೈರಸ್ಯಗಳು ವಿಜ್ಞಾನ-ಬುದ್ಧಿಯಲ್ಲಿ ಮಲಗಿದ 'ಮಹಾಪುರುಷ'ರನ್ನು ಎಚ್ಚರಿಸಲು ಅಸಮರ್ಥವಾದಂತಿವೆ. ಎಲ್ಲಿಯೋ ಸೂತ್ರ ತಪ್ಪಿದೆ. ಇಲ್ಲವಾದರೆ ಮಾನವ ಕೋಟಿಯ ಜೀವನ ಸುಸೂತ್ರವಾಗಿ ಏಕೆ ನಡೆದಿಲ್ಲ?

'...Even more important than knowledge is the life of the emotions. A world without delight and without affection is a world destitute of value. These things the scientific manipulator must remember, and if he does his manipulation may be wholly beneficial. All that is needed is that men should not be so intoxicated by new power as to forget the truths that were familiar to every previous generation. Not all wisdom is new, nor is all folly out of date.'[೨] ಜ್ಞಾನ ಶಕ್ತಿ ಯೌವನ ಧನ ಅಧಿಕಾರ ಕೀರ್ತಿ–ಈ ಯಾವುದೇ ರೂಪದ ಸಂಪತ್ತು ಎಷ್ಟೇ ಇರಲಿ, ಹೃದಯವಾಗಲಿ ಬುದ್ಧಿಯಾಗಲಿ ಉನ್ಮತ್ತವಾಗ ಬಾರದು. ಸಂಪತ್ತು ತಲೆಗೇರಿ ಉನ್ಮತ್ತವಾದರೆ ಮನುಷ್ಯ ಮಂದವಾಗುತ್ತಾನೆ. ಕಾಣುವುದು ಕಾಣುವುದಿಲ್ಲ, ಕೇಳುವುದು ಕೇಳುವುದಿಲ್ಲ. ತೀಕ್ಷ್ಣತೆ ಸೂಕ್ಷ್ಮತೆ ಗಂಭೀರ ಭಾವವಳಿದ ಮಂದ-ಜಡ-ಅಜ್ಞಾನ-ಅಂಧಕಾರ ಜೀವನ ವಿರಸವಾಗಿಯೇ ಜೀವಿಸ ಬೇಕಾಗುತ್ತದೆ. ವಿರಸವೇ ಜೀವನದ ಶಾಶ್ವತ ಧರ್ಮವೆಂಬ ಸಿದ್ಧಾಂತಕ್ಕೆ ಬಂದು,

---

೧. Science and the Modern world, preface p. IX.

೨. The Scientific Outlook, pp. 278-279.

ನಿರಾಶೆಯಲ್ಲಿ ನಿಂದು, ಬಂದ ಸುಖದುಃಖಗಳನ್ನು ತಿಂದು, ಇರುವವರೆಗೆ ಜೀವಿಸಬೇಕಾಗುತ್ತದೆ ಮಾನವಕೋಟಿ. ಆದರೆ ಮಾನವನ ಪರಮಾಂತರಂಗ ಈ ಸಿದ್ಧಾಂತವನ್ನು ಎಂದೂ ಒಪ್ಪಿಲ್ಲ, ಒಪ್ಪುವುದಿಲ್ಲ. ನೀರು 'ಸಮಪಾತಳಿಗೆ' ಬರುವವರೆಗೆ ಅದಕ್ಕೆ ವಿಶ್ರಾಂತಿಯೆಲ್ಲಿ? ಮನುಷ್ಯ ತನ್ನ ಸ್ವ-ಸ್ಥಲವನ್ನು ಸೇರಿ 'ಸ್ವ-ಸ್ಥ'ವಾಗುವವರೆಗೆ ಮುಂದುವರಿಯಲೆಬೇಕು. ತಾಯಿಯಿಂದಗಲಿದ ಶಿಶು ಆಟ ನೋಟ ತಿನಿಸುಗಳಿಂದ ಕೆಲಕಾಲ ತಾಯಿಯನ್ನು ಮರೆದಿರಬಹುದು. ಆದರೆ ಆ ಮರವು ಎಷ್ಟುಕಾಲ? ಆ ಸಮಾಧಾನ ಎಲ್ಲಿಯವರೆಗೆ?

ಯುಗಧರ್ಮದ ಕೋಟೆಯನ್ನು ಕೆಡವಬೇಕು. ಮುಚ್ಚಿದ ದಿಕ್ಕುಗಳನ್ನೆಲ್ಲ ತೆರೆಯಬೇಕು. ಭೂತಕಾಲದ ಮಹಾದ್ವಾರವನ್ನು ತೆಗೆದು ಅಲ್ಲಿ ಅನುಭವ ಜ್ಞಾನ ಜೀವನ ಕೌಶಲ ಬುದ್ಧಿವಂತಿಕೆ (wisdom) ಯಿದ್ದರೆ ಅದನ್ನೆಲ್ಲ ಸ್ವಾಗತಿಸಬೇಕು, ಸ್ವೀಕರಿಸಬೇಕು. 'ಹಳೆ ಎಂದರೆ ಕೊಳೆ' ಎಂಬ ಬುದ್ಧಿ ಪಕ್ವಬುದ್ಧಿಯಲ್ಲ. ಅದರಂತೆ 'ಹಳದೆಲ್ಲ ಹೊನ್ನು' ಎಂಬ ಬುದ್ಧಿಗೆ ಸಾಕಷ್ಟು ಬುದ್ಧಿಯಿಲ್ಲ. ವರ್ತಮಾನದಲ್ಲಿಯೂ ಬುದ್ಧಿವಂತರು (wise men) 'ಕಶ್ಚಿದ್ಧೀರ'[೧]ರು, ಮಹರ್ಷಿಗಳು ಸತ್ಯದ್ರಷ್ಟಾರರು ಇರಬಹುದು. ಮಾನವಕುಲವನ್ನು ಸತ್ಯಸನ್ಮಾರ್ಗದಲ್ಲಿ ಕರೆದೊಯ್ಯಬಲ್ಲ ಇಂಥ ನೇತಾರರ ನುಡಿಗೆ ವಿಚಾರಕ್ಕೆ ಕಿವುಡರಾಗಿ ಕುರುಡರಾಗಿ ಕುಳಿತರೆ, 'ಯೇ ಕೇ ಚಾತ್ಮಹನೋ ಜನಾಃ'[೨] ನಾವೇ ಆಗಬಹುದು. ಭೂತವರ್ತಮಾನದಂತೆ ಭವಿಷ್ಯದ ಮಹಾಕಾಶವನ್ನೂ ನೋಡಬೇಕು. ಭವಿಷ್ಯದಲ್ಲಿಯೂ ನಡೆಯಬೇಕು. ಮಾನವನ ಪರಮಾಭ್ಯುದಯಕ್ಕೆ ಯಾವುದೂ ಎಲ್ಲಿಯೂ ಯಾವ ಕಾಲದಲ್ಲಿಯೂ ಅಡ್ಡಿಯಾಗಬಾರದು. ತೆರೆದ ಎದೆ, ಎಚ್ಚತ್ತ ಬುದ್ಧಿಯಿದ್ದರೆ ಯಾವುದೂ ಅಡ್ಡಿಯಾಗಲಾರದು. ವೇದಕಾಲದ 'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ' ಎಂಬ ದಿಗಂಬರಬುದ್ಧಿಗೆ ಹೃದಯಕ್ಕೆ ಆತಂಕ ಎಲ್ಲಿಂದ ಬರಬೇಕು? ಭದ್ರ ಕಲ್ಯಾಣ ಶುಭ ಮಂಗಲ ಪಾವನ ಪವಿತ್ರ ಸತ್ಯ ಸುಂದರ ಶಿವವೆಲ್ಲ ನಮಗೆ ಬರಲಿ. ವಿಶ್ವಮುಖವಾಗಿ ಬರಲಿ; ವಿಶ್ವದಿಕ್ಕಿನಿಂದ ಬರಲಿ. ವಿಶ್ವಕಾಲದಿಂದ ಬರಲಿ.

---

೧. ಕಠ. ಉ., ಅ. ೨, ವಲ್ಲೀ ೪, ಮಂ. ೧.

೨. ಈ. ಉ., ಮಂ. ೩.

೨

ಹಗಲು ಕತ್ತಲೆ

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥

ಭಗವದ್‌ಗೀತೆ, ಅ. ೨, ಶ್ಲೋ. ೬೯

'ಎಲ್ಲ ಭೂತಗಳು ಮಲಗಿರುವ ರಾತ್ರಿಯಲ್ಲಿ ಎಚ್ಚತ್ತಿರುತ್ತಾನೆ ಬಹಿಃಪ್ರವೃತ್ತಿಯಿಂದ ನಿವೃತ್ತನಾದ ಸಂಯಮಿ; ಎಲ್ಲ ಭೂತಗಳು ಎಚ್ಚತ್ತಿರುವ ಹಗಲೇ ರಾತ್ರಿ,– ನೋಡಬಲ್ಲ ಆ ಬ್ರಹ್ಮನಿಷ್ಠ ಸಂಯಮಿಗೆ'.

ಹಗಲಾವುದು? ರಾತ್ರಿ ಯಾವುದು? ಕಣ್ಣು ಕಾಣುವುದು ಹಗಲು; ಕಣ್ಣು ಕಾಣುವಷ್ಟು ಹಗಲು. ಕಣ್ಣು ಕಾಣದಿದ್ದರೆ ರಾತ್ರಿ; ಕಾಣದುದೆಲ್ಲ ರಾತ್ರಿ. ಕಿವಿ ಕೇಳುವ ಶಬ್ದ ಕಿವಿಗೆ ಹಗಲು; ಕಿವಿಗೆ ಕೇಳಬಾರದ ಶಬ್ದ ಕಿವಿಗೆ ರಾತ್ರಿ. ಇದರಂತೆ ಜ್ಞಾನೇಂದ್ರಿಯಗಳಿಗೆ ಗೋಚರವಾಗುವ ವಿಷಯವೆಲ್ಲ ಇಂದ್ರಿಯಗಳ ಹಗಲು; ಗೋಚರವಾಗದುದೆಲ್ಲ ರಾತ್ರಿ, ಕತ್ತಲೆ. ಮತ್ತೆ ಗೂಗೆಯ ಹಗಲು ಕಾಗೆಗೆ, ಮನುಷ್ಯರಿಗೆ ರಾತ್ರಿ; ಇವರ ಹಗಲು ಗೂಗೆಯ ರಾತ್ರಿ. ಇಲಿಯ ಹಗಲುರಾತ್ರಿಯೆಲ್ಲ ಬೆಕ್ಕಿಗೆ ಹಗಲೇ. ಸಸ್ಯಪ್ರಪಂಚವೂ ಈ ರಾತ್ರಿಹಗಲುಗಳನ್ನು ಅವಿಜ್ಞಾತವಾಗಿ ಅನುಭವಿಸುತ್ತಿರಬಹುದು. ಆದರೆ ಮಾನವನ ಬುದ್ಧಿ ತಿಳಿದ ಮಟ್ಟಿಗೆ ಮಣ್ಣು ಕಲ್ಲು ಮುಂತಾದ ಜಡಪ್ರಪಂಚಕ್ಕೆ ಹಗಲು ರಾತ್ರಿಯ ಭೇದವಾಗಲಿ ಅಥವಾ ಭೇದಮಾಡುವ ಅರಿವಾಗಲಿ ಇಲ್ಲ; ಅಥವಾ ಅರಿವಿನ ಅಂಶವೆ ಅಲ್ಲಿ ಇಲ್ಲ. ಇದ್ದರೆ 'ಜಡ'ವೆಂಬ ಮುದ್ರೆ ಆ ಪ್ರಪಂಚಕ್ಕೆ ಬೀಳುತ್ತಿರಲಿಲ್ಲ. ಪ್ರಾಣಿಗಳಲ್ಲಿ, ಮಾನವ ಪ್ರಾಣಿಗಳಲ್ಲಿ ಇರುವ ಇಂದ್ರಿಯ ರಚನಾಭೇದವೇ ಅವರವರ ಹಗಲುರಾತ್ರಿಗಳ ಹಂತಕ್ಕೆ ಕಾರಣವೆಂಬುದು ಸ್ಪಷ್ಟ. ಮತ್ತು ಜಾಗ್ರ ಸ್ವಪ್ನ ಸುಪ್ತ—ಈ ಮೂರವಸ್ಥೆಗಳಿಗೆ ಅನುಗುಣವಾಗಿಯೂ ಹಗಲು ರಾತ್ರಿಗಳು ಏರಿ ಇಳಿಯುತ್ತಿರಬಹುದು.

ಜ್ಞಾನೇಂದ್ರಿಯಗಳಿಗೆ ಹಗಲು ರಾತ್ರಿಗಳಿರುವಂತೆ ಮಾನವನ ಹೃದಯಕ್ಕೂ ಹಗಲಿದೆ, ರಾತ್ರಿಯಿದೆ, ತಾಯಿಯ ಹೃದಯಕ್ಕೆ ತನ್ನ ಮಗು ಹಗಲು; ಕಾದಲನ ಹೃದಯದಲ್ಲಿ ಕಾದಲೆ ಹಗಲು. 'Thou shalt love thy neighbour'[೧] ಎಂದ

---

೧. Bible, St. Matthew, Ch. 5-43. ಇದರ ಪೂರ್ಣ ಪಾಠ ಇಂತಿದೆ: Ye have heard that it hath been said, Thou shalt love thy neighbour, and hate thine enemy. 44. But I say unto you, Love your enemies, bless them that curse you, do good to them that hate you, and pray for them which despitefully use you, and persecute you.

ಯೇಸುವಿನ ಹೃದಯಕ್ಕೆ ಮಾನವಕೋಟಿಯೆಲ್ಲ ಹಗಲು. 'ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದಮಮ'[೧] ಎಂದು ಹಾಡಿದ ನಿಜಗುಣಶಿವಯೋಗಿಗಳಿಗೆ ಎಲ್ಲರೂ ಹಗಲು. ಹೃದಯದ ದೃಷ್ಟಿ ಪ್ರೀತಿಯ ಜ್ಯೋತಿಯಲ್ಲಿ ಭೂತಜಾತವನ್ನು ನೋಡುವುದೇ ಈ ಹಗಲು. ಬೇಡ ಕ್ರೌಂಚಮಿಥುನವನ್ನು ಕಂಡುದು ಕಣ್ಣಿನ ಹಗಲಲ್ಲಿ, ಹೃದಯದ ಕತ್ತಲೆಯಲ್ಲಿ. ಆದಿಕವಿ ವಾಲ್ಮೀಕಿ ಅದೇ ಮಿಥುನವನ್ನು ಕಂಡುದು ಹೃದಯ ನಯನಗಳು ಹಡೆದ ಹಗಲಲ್ಲಿ. ಕತ್ತಲೆ ಕವಿದ ಎದೆಯಲ್ಲಿ ದೇವನ ದ್ವೈತಲೀಲೆಯನ್ನು ಕಾಣದೆ, ಕಣ್ಣಲ್ಲಿ ಮಾಂಸದ ಮುದ್ದೆಗಳನ್ನು – ತನ್ನ ಹೊಟ್ಟೆಯ ಆಹಾರವನ್ನು – ಕಂಡು, ಬೇಡ ಬಿಟ್ಟ ಬಾಣ ಹಕ್ಕಿಯ ದೇಹದಲ್ಲಿ ಹೊಕ್ಕು ಪಾರಾಗಿ, ನೋಡುತ್ತ ನಿಂತಿದ್ದ ವಾಲ್ಮೀಕಿಯ ಎದೆಯಲ್ಲಿ ಸಹಸ್ರ ಬಾಣವಾಗಿ ನಾಟಿತು! ಸರ್ವಭೂತಹಿತ ದಯೆ ಪ್ರೇಮ ವಾತ್ಸಲ್ಯ ಮಹರ್ಷಿಯ ಹೃದಯದ ಪ್ರೇಮಲ ಪ್ರಭೆ. ಈ ಪ್ರಭೆ, ಈ ಹಗಲು ಬೇಡನ ಎದೆಯಲ್ಲಿ ಬೆಳಗುತ್ತಿದ್ದರೆ ಕ್ರೌಂಚಪಕ್ಷಿಗಳು ಬೇರೊಂದು ಬೆಳಗಿನಲ್ಲಿ ಬೆಳಗುತ್ತಿದ್ದುವು ಆ ನಿಷಾದನಿಗೆ.

ಭಾವಕ್ಕೂ ಈ ಹಗಲು ರಾತ್ರಿಗಳುಂಟು. ಗಂಗೆ ತುಂಗಭದ್ರೆ ನಿಮ್ಮ ಭಾವಕ್ಕೆ ಮಂಗಲ ಪಾವನ, ಶುಭ ಶೋಭನ; ನನ್ನ ಭಾವಕ್ಕೆ ಅವು ಹರಿವ ನೀರು, ಅಷ್ಟೇ. ಹಂಪೆ ಕಾಶಿ, ಜೆರುಸಲೇಮ್, ಮಕ್ಕಾ ನಿಮಗೆ ಪವಿತ್ರ ಕ್ಷೇತ್ರ; ನನಗೆ ಮಣ್ಣಿನ ನೆಲ, ಅಷ್ಟೇ. ವಿಶ್ವನಾಥ ವಿರೂಪಾಕ್ಷ ವಿಠ್ಠಲ ಬನಶಂಕರಿ ಬುದ್ಧ ತೀರ್ಥಂಕರ – ಇವರ ವಿಗ್ರಹಗಳೆಲ್ಲ ದೇವರು ನಿಮ್ಮ ಭಾವನೇತ್ರದಲ್ಲಿ; ಇವೆಲ್ಲ ಶಿಲಾಮೂರ್ತಿ ನನ್ನ ಭಾವದಲ್ಲಿ. ನನ್ನ ಭಾವ ಮಬ್ಬಾಗಿದೆ. ಕತ್ತಲೆಯಲ್ಲಿ ಮಂಗಲ ಪವಿತ್ರ ಶಿವ ಶೋಭನಗಳು ಕಾಣುವುದಿಲ್ಲ. ನಿಮ್ಮ ಭಾವದ ನಯನ ಮಾಂಗಲ್ಯದ ಪ್ರಭೆಯಲ್ಲಿ ಗಂಗೆ ಹಂಪೆ ವಿರೂಪಾಕ್ಷರನ್ನು ಕಾಣುತ್ತಿದೆ, ಅವರವರ ಗುಣ ಧರ್ಮದಲ್ಲಿ. ಹಗಲು ರಾತ್ರಿ ಗಂಡನೊಡನೆ ಸಂಸಾರ ಮಾಡುತ್ತಿದ್ದ ಸಾಕ್ರೆಟಿಸ್‌ನ ಹೆಂಡತಿಗೆ, ಹೆಂಡತಿಯ ಭಾವಕ್ಕೆ ಗೋಚರವಾದ ಸಾಕ್ರೆಟಿಸ್ ಎಷ್ಟು? ಆತನ ಶಿಷ್ಯ ಪ್ಲೇಟೋನಿಗೆ ಕಂಡ ಸಾಕ್ರೆಟಿಸ್ ಮತ್ತೆ ಎಷ್ಟು? ತನ್ನ ಕತ್ತಲೆಯಲ್ಲಿ ಗಂಡನನ್ನು ಕಾಣದೆ, ದಾಂಪತ್ಯಜೀವನದ ವಿರಸವನ್ನೆ ಕುಡಿದು ಕುದಿಯುತ್ತ ಸತ್ತಳು ಆ ಮಹಾಸತಿ! ಸಾಕ್ರೆಟಿಸ್‌ನನ್ನು ಕಂಡು ಭಾವದ ಹಗಲು ಹೊಗರೇರಿ, ತನ್ನ ಭಾವಬುದ್ಧಿಯನ್ನೆಲ್ಲ ಗುರುವಿಗರ್ಪಿಸಿ ಮರ್ತ್ಯದ ಮಣಿಹ ಪೂರೈಸಿ ಕೃತಕೃತ್ಯನಾದ ಪ್ಲೇಟೊ. ಶೂದ್ರಕನ ಮೃಚ್ಛಕಟಿಕ ನಾಟಕದ ಮೊದಲನೆಯ ಅಂಕದಲ್ಲಿ ಬರುವ ಸನ್ನಿವೇಶ: ಮಬ್ಬುಗತ್ತಲೆಯಲ್ಲಿ ವಸಂತಸೇನೆಯನ್ನು ನರ್ಮಸಖರಾದ ವಿಟ ಚೇಟರೊಡನೆ ಬೆನ್ನು ಹತ್ತಿದ ಶಕಾರ. ವಸಂತಸೇನೆ ಜಾತಿಯಲ್ಲಿ ಗಣಿಕೆ, ಹೃದಯದಲ್ಲಿ ಆರ್ಯೆ. ಶಕಾರನ ಭಾವದ ಮಬ್ಬಿನಲ್ಲಿ ಆಕೆ –

> ಏಶಾ ಣಾಣಕ ಮೂಶಿಕಾ ಮಕಶಿಕಾ ಮಚ್ಛಾಶಿಕಾ ಲಾಶಿಕಾ
> ಣಿಣ್ಣಾಶಾ ಕುಲಣಾಶಿಕಾ ಅವಶಿಕಾ ಕಾಮಸ್ಸ ಮಂಜೂಶಿಕಾ
> ಏಶಾ ವೇಶವಹೂ ಶುವೇಶಣಿಲಆ ವೇಶಂಗಣಾ ವೇಶಿಆ
> . . . . [೨]

---

೧. ವೇ. ಗ್ರಂ., ಕೈ. ಪ., ನೀ. ಸ್ಥ., ಪು. ೪೦, ಪ. ೧೫.

೨. ಮೃಚ್ಛ. ಅಂ. ೧, ಪ. ೨೩.

ಇಂಥ ಗರ್ಭದಾಸಿ, ವೇಶ್ಯಾವಧು ದರಿದ್ರ ಚಾರುದತ್ತನಿಗೆ ಮನ ಸೋಲುವುದೆ? ಬೆಂಕಿಯಲ್ಲಿ ಬೇಯುತ್ತಿರುವ ಮಾಂಸಖಂಡದಂತೆ ಕಾಮದಿಂದ ಕುದಿವ ತನ್ನನ್ನು – ರಾಜಶ್ಯಾಲಕನನ್ನು – ಸಂತೈಸಬಾರದೆ? ಚಾರುದತ್ತನ ಗುಣಗಳಿಂದ ಉಜ್ಜಯಿನಿ ಅಲಂಕೃತವಾಗಿದೆ? ಆತನ ಗುಣಕ್ಕೆ ವಿಟ ಹೆದರುವುದು? 'ಕೇ ತಶ್ಶ ಗುಣಾ ಜಶ್ಶ ಗೇಹಂ ಪವಿಶಿಅ ಅಶಿದವ್ವಂ ಪಿ ಣತ್ಥಿ?' 'ಗರ್ಭದಾಸ್ಯಾಃ ಪುತ್ರ' ಚಾರುದತ್ತ – ಯಾವನ ಮನೆಯಲ್ಲಿ ತಿನ್ನಲಿಕ್ಕೆ ಕೂಳಿಲ್ಲ ಅವನವೆಂಥ ಗುಣ ! ಶಕಾರನ ಮಾತು ಸಂಸ್ಕೃತ ಭಾವನಾದ ವಿಟನ ಕಿವಿಗೆ ಕಾದ ಕಬ್ಬಿಣದ ಶಲಾಕೆಯಂತೆ. ವಿಟನ ಮೈಯೆಲ್ಲ ಉರಿಯುತ್ತದೆ.

ವಿಟ: ಮೂರ್ಖ, ಆರ್ಯ ಚಾರುದತ್ತಃ ಖಲು ಅಸೌ
ದೀನಾನಾಂ ಕಲ್ಪವೃಕ್ಷಃ ಸ್ವಗುಣಫಲನತಃ ಸಜ್ಜನಾನಾಂ ಕುಟುಂಬೀ ।
ಆದರ್ಶಃ ಶಿಕ್ಷಿತಾನಾಂ ಸುಚರಿತನಿಕಷಃ ಶೀಲವೇಲಾಸಮುದ್ರಃ ॥
ಸತ್ಕರ್ತಾ ನಾವಮಂತಾ ಪುರುಷಗುಣನಿಧಿರ್ದಕ್ಷಿಣೋದಾರಸತ್ತ್ವೋ ।
ಹ್ಯೇಕಃ ಶ್ಲಾಘ್ಯಃ ಸ ಜೀವತ್ಯಧಿಕಗುಣತಯಾ ಚೋಚ್ಛ್ವಸಂತೀವ ಚಾನ್ಯೇ ॥[೧]

ಅಧಿಕ ಗುಣದಿಂದ ನಿಜವಾಗಿ ಬದುಕುತ್ತಿರುವ ಆರ್ಯ ಚಾರುದತ್ತನ ಮುಂದೆ ಉಳಿದವರೆಲ್ಲ ಉಸಿರುಬಿಡುತ್ತಿರುವ ಪ್ರಾಣಿಗಳು. ಶಕಾರನ ಭಾವದ ಮಬ್ಬುಗಣ್ಣಿಗೆ ವಸಂತಸೇನೆ 'ನಷ್ಟ'ವಾಗಿರುವಂತೆ, 'ಗುಣಾಃ ಪೂಜಾಸ್ಥಾನಂ'[೧] ಎಂಬ ಸತ್ಯ ಕತ್ತಲೆಯಲ್ಲಿ ಕಾಣದಾಗಿದೆ. ವಿಟ-ವಿದೂಷಕರ ಕಂದೆರೆದ ಭಾವದಲ್ಲಿ ಆ ಸತ್ಯ ಝುಗಝುಗಿಸುತ್ತಿದೆ. 'ಕಣ್ಣು ಕಾಣದ ಗಾವಿಲ' ಶಕಾರ ಅದೆಷ್ಟು ಮಾನವಪ್ರಾಣಿಗಳಾದ ನಮ್ಮ ಭಾವದಲ್ಲಿ ವಿಕಾರವಾಗಿ ವರ್ತಿಸುತ್ತಿದ್ದಾನೆ, ಅಥವಾ ನರ್ತಿಸುತ್ತಿದ್ದಾನೆ !

ಭಾವದ ಉನ್ಮೇಷ ಇನ್ನೂ ಉಜ್ವಲವಾಗಬಹುದು: ಸುಖ ಸುಖಕರ, ದುಃಖ ದುಃಖದಾಯಕ ಸಾಮಾನ್ಯ ಭಾವಕ್ಕೆ. ಸುಖದ ಸೋಂಕಿಗೆ ಹಿಗ್ಗುವುದು, ದುಃಖದ ಮುಟ್ಟಿಗೆಯಲ್ಲಿ ಮುದುಡುವುದು ಸ್ವಭಾವ ಮಾನವನಿಗೆ. ಪ್ರಕೃತಿಯಿಂದ ಹೊರ ಹೊಮ್ಮುತ್ತಿರುವ ಈ 'ಸ್ವಭಾವ'ಕ್ಕೆ ಪ್ರಕೃತಿಯ ಜಾಡ್ಯ, ಅಂಧಕಾರ ಮೆತ್ತಿದೆ. ಅದು ಪ್ರಾಕೃತ, ಅಪ್ರಾಕೃತವಲ್ಲ – ಸಂಸ್ಕಾರ ಹೊಂದಿದುದಲ್ಲ. ಅಧಃಪ್ರಾಣಿಗಳ (Lower animals) ಪ್ರವೃತ್ತಿಯೇ ಇಂಥ ಪ್ರತಿಕ್ರಿಯೆಗೆ ಮೂಲಾಧಾರವಾಗಿದೆ. ಭಯಕ್ಕೆ ಓಡುವುದು, ಆಶೆಗೆ ಹರಿವುದು ಹೇಗೆ ಪ್ರಾಣಿಕುಲಕ್ಕೆಲ್ಲ ಸ್ವಾಭಾವಿಕವೋ, ಹಾಗೆ ಸುಖ ದುಃಖಗಳಿಗೆ ಮಾನವನ ಭಾವ ಹಿಗ್ಗಿ ಕುಗ್ಗುವುದು ಸಹಜ. ನಿಮಿಷ ನಿಮಿಷಕ್ಕೆ ಗಳಿಗೆ ಗಳಿಗೆಗೆ ಜೀವನವು ತಂದೊಡ್ಡುವ ಸುಖದುಃಖಗಳ ಚಕ್ರವ್ಯೂಹದಲ್ಲಿ ಪರಿಭ್ರಮಿಸುತ್ತಿರುವ ಮಾನವಪ್ರಾಣಿಗೆ ಒಂದು ಗಟ್ಟಿ ಆಧಾರ ಇಲ್ಲ. ಗಂಡನ ಮನೆಯಲ್ಲಿ ಅತ್ತೆಯ ಕಾಟ, ತವರುಮನೆಯಲ್ಲಿ ಅತ್ತಿಗೆಯ ಕಾಟ. ಅಲ್ಲಿ ಇರಬಾರದು, ಇಲ್ಲಿಗೆ ಹೋಗಬಾರದು. ಈ ಇಕ್ಕುಳದಲ್ಲಿ ಸಿಕ್ಕ ಭಾವ ಸುಖದುಃಖಗಳ ನಿಜಸ್ವರೂಪವನ್ನು ಕಂಡಿಲ್ಲ. ಕತ್ತಲಿಸಿದ ಭಾವಕ್ಕೆ ಕಾಣುವುದಾದರೂ ಹೇಗೆ?

---

೧. ಮೃಚ್ಛ. ೮-೧, ಪ. ೪೮.

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ
ಆಗಮಾಪಾಯಿನೋಽನಿತ್ಯಾಃ ತಾನ್ ತಿತಿಕ್ಷಸ್ವ ಭಾರತ[೧]

ಶ್ರೀಕೃಷ್ಣನ ಧೀರ ಸ್ಥಿರ ಭಾವಕ್ಕೆ ತೋರುವ ಈ ಸತ್ಯ, ಸುಖ ದುಃಖದ ತಿರುಗುಣೆಯ ಭಾವಕ್ಕೆ ತೋರಬಲ್ಲುದೆ? ತೋರಿದರೂ ತೋರಿಸಿದರೂ ಅದು 'ಸ್ವಭಾವ'ಕ್ಕೆ ರುಚಿಯಾಗಬಲ್ಲುದೆ? 'ನಾಯಿಗೆ ನಾರಿವಾಣವಪ್ಪುದೆ?' ಆದರೆ ಭಾವದ ಜಾಡ್ಯ, ಅಂಧಕಾರ ತೊಲಗಿದಂತೆ ಸ್ಥಿತಪ್ರಜ್ಞವಾದ ಸಮತಾಭಾವವಾಗಿ ಪರಿಣಮಿಸುತ್ತದೆ. ಸುಖದುಃಖಗಳ ಕೋಟಿತರಂಗಗಳಿಗೆ ಮೂಲವಾದ ಆನಂದಸಾಗರದಲ್ಲಿ ನಿಂತ ಈ ಭಾವ ಸುಖದುಃಖಗಳ ವೇಧೆಯನ್ನು ಸಮಾನವಾಗಿ ಅನುಭವಿಸುತ್ತದೆ. ತಲೆಯ ಮೇಲೆ ಮುಗಿಲು ಹರಿದು ಬೀಳಲಿ, ಚಕ್ರಾಧಿಪತ್ಯದ ರತ್ನಮುಕುಟವಿಡಲಿ – ಎರಡೂ ಸಮ ಈ ಗಭೀರಭಾವಕ್ಕೆ[೨].

ದೇಹ ಪ್ರಾಣಗಳನ್ನು ವಿದಾರಿಸುವ ದಾರುಣದುಃಖದ ಶರಶಯ್ಯೆಯ ಮೇಲೆ ಮಲಗಿದ್ದರೂ ಅಚಲಭಾವ ಸಮತೆಯ ಪ್ರಭೆಯಲ್ಲಿ ಪ್ರಶಾಂತವಾಗಿ ಪರಿಣಮಿಸುತ್ತಿರುವ ಒಂದು ಸತ್ಯಘಟನೆಯನ್ನು ಕಾಣಬಹುದು ಮಾರಿಸ್ ಮ್ಯಾಟರಲಿಂಕರ ಒಂದು ಅಮರ ಕೃತಿಯಲ್ಲಿ. ರೋಮದ ಚಕ್ರವರ್ತಿ, ಜೀವನತತ್ತ್ವ ಚಕ್ರವರ್ತಿ ಎಂಟೋನಿನಸ್ ಪಿಯಸ್ (Antoninus Pius) ಮರಣಕ್ಕೆ ಉನ್ಮುಖವಾಗಿ ಮಲಗಿ ಚಿತ್ರದುಃಖವನ್ನು ಅನುಭವಿಸುತ್ತಿದ್ದ ಪ್ರಸಂಗವದು:

'Antoninus Pius–who was perhaps truly the best and most perfect man this world has known, better even than Marcus Aurelius; for in addition to the virtues, the kindness, the deep feeling and wisdom of his adopted son, he had some thing of greater virility and energy, of simpler happiness, some thing more real, spontaneous, closer to every day life–Antoninus Pius lay on his bed, awaiting the summons of death, his eyes dim with unbidden tears, his limbs moist with the pale sweat of agony. At that moment there entered the Captain of the guard, come to demand the watch-

---

೧. ಭ. ಗೀ., ಅ. ೨, ಶ್ಲೋ. ೧೪.

೨. The ordinary human soul takes a pleasure in the customary disturbances of its nature-life . . . . . We do not recognize this truth because under the actual stroke of the adverse distrubance, smitten by grief, pain, discomfort, misfortune, failure, defeat, blame, dishonour, the mind shrinks back from the blow, while it leaps eagerly to the embrace of the opposite and pleasurable disturbances, joy, pleasure, satisfactions of all kinds, prosperity, success, victory, glory, praise; but this does not alter the truth of the soul's pleasure in life which remains constant behind the dualities of the mind.

Essays on the Gita, First Series, p. 277.

word, such being the custom. Æquanimitas–evenness of mind, he replied, as he turned his head to the eternal shadow.'[೧] ಗಾಳಿಗೊಡ್ಡಿದ ಸೊಡರಿನಂತೆ ಸಾಮಾನ್ಯಮಾನವನ ಭಾವ ಸುಖದುಃಖಿಗಳಿಗೆ ಹೊಯ್ದಾಡುತ್ತದೆ. ಆದರೆ ಪಿಯಸ್‌ನಂಥ ಮಹಾಪುರುಷರ ಪ್ರಬುದ್ಧಭಾವ ಸುಖದುಃಖಗಳ ಸೋಂಕಿಗೆ, ಹೊಡೆತಕ್ಕೆ ರತ್ನದೀಪದಂತೆ ಅಚಲವಾಗಿದ್ದು, ತನ್ನ ಸಹಜ, ಉಜ್ವಲ ಕಾಂತಿಯನ್ನು ಸುಖಕ್ಕೆ, ಅಂತೆಯೆ ದುಃಖಕ್ಕೆ ಸಮನಾಗಿ ನೀಡುತ್ತದೆ. 'ಹೆಮ್‌ಲಾಕ್' ವಿಷ ಕುಡಿದ ಸಾಕ್ರೆಟಿಸ್, ಸಿಲುಬೆಗೆ ಏರಿದ ಯೇಸು ಕ್ರಿಸ್ತ, ಕಲ್ಯಾಣ ಬಿಟ್ಟು ಕಪ್ಪಡಿಗೆ ನಡೆದ ಬಸವಣ್ಣ ಮುಂತಾದವರ ಪ್ರಬುದ್ಧವಾದ ಮಹನೀಯಭಾವ ಆ ಭೀಷ್ಮಪ್ರಸಂಗಗಳಲ್ಲಿ ಯಾವ ನಿವಾತಸ್ಥಲದಲ್ಲಿ ನಿಂದು ಪ್ರಶಾಂತವಾಗಿ ಬೆಳಗಿರಬಹುದು?

ಇನ್ನು ಮಾನವನ ಬುದ್ಧಿಯ ಹಗಲು, ರಾತ್ರಿ. ಕಲ್ಲುಪಡೆ, ಗವಿ, ಹೊದರುಗಳಲ್ಲಿ ವಾಸಮಾಡುತ್ತಿದ್ದ 'ಗುಹಾಮಾನವ'ನನ್ನು ಒಂದು ಕಡೆ, ಚಂದ್ರ ಮಂಗಳ ಗ್ರಹಗಳಲ್ಲಿ ಮನೆಮಾಡಬೇಕೆಂದಿರುವ ಚಂದ್ರ-ಮಂಗಳ ಮಾನವನನ್ನು ಮತ್ತೊಂದು ಕಡೆ–ಅವರವರ ಆವರಣದಲ್ಲಿ ನಿಲ್ಲಿಸಿ ನೋಡಿದರೆ, ಬೆಳೆಯುತ್ತ, ಹೆಚ್ಚುಹೆಚ್ಚಾಗಿ ಬೆಳಗುತ್ತ ಬಂದ ಬುದ್ಧಿಯ ಸ್ವರೂಪ ತಾನೇ ಗೊತ್ತಾಗುತ್ತದೆ. ಒಮ್ಮೆ 'ದ್ವಿಪಾದ ಪಶು'ವಾಗಿ, ಉಳಿದೆರಡು 'ಕೈಕಾಲ' ಬಲದಿಂದ ನಾಲ್ಕುಕಾಲ ಪ್ರಾಣಿಗಳ ಮೇಲೆ ಪ್ರಭುತ್ವವನ್ನು ಪಡೆದ ಮಾನವ ಇಂದು ಅತಿಧ್ವನಿವೇಗ (Supersonic speed) ದಿಂದ ರಾಕೆಟ್ಟಿನಲ್ಲಿ ಪ್ರಯಾಣ ಬೆಳೆಸಿ ವಿಶ್ವ ವಿಜಯಕ್ಕೆ ಹೊರಟಿರುವುದನ್ನು ನೋಡಿದರೆ, ಮಾನವಬುದ್ಧಿಯ ವಿಕಾಸ ಆಕಾರಗೊಂಡು ನಿಲ್ಲುತ್ತದೆ – ನಮ್ಮ ಬುದ್ಧಿಯ ಕಣ್ಣ ಮುಂದೆ. ಇಂದಿನ ನಾಗರಿಕ ಜೀವನ, ವಿಜ್ಞಾನ ಸಿದ್ಧಿಗಳನ್ನು ಮನದಂದರೆ, ಹಗಲಾಗುತ್ತ ಬಂದ ಬುದ್ಧಿಯ ಪ್ರಖರಚೈತನ್ಯ ತಾನೇ ಮನದಟ್ಟಾಗುತ್ತದೆ. ಬುದ್ಧಿಯ ಉಗಮವೆಲ್ಲಿ? ಬುದ್ಧಿಯ ಕಂದೆರವಿಯಾದುದು ಎಂದು? ಕಲ್ಲು ಮಣ್ಣಿನಲ್ಲಿ, ಗಿಡ ಬಳ್ಳಿಯಲ್ಲಿ ಬುದ್ಧಿಯ ಅಂಶವಿದೆಯೆ? ಮಾನವನ ಬುದ್ಧಿಗೂ ಮಂಗ (Ape), ನಾಯಿ ಘಾರಿವಾಳ ಮುಂತಾದ ಪ್ರಾಣಿಗಳಲ್ಲಿ ತೋರುವ ಬುದ್ಧಿಗೂ ಇರುವ ಅಂತರವೇನು? ಬೀಜ ತನ್ನ ಆಹಾರ ನೀರು ಗಾಳಿ ಬೆಳಕನ್ನು ಕೊಂಡು ಗಿಡಮರವಾಗಿ ಬೆಳೆವಲ್ಲಿ, ಜೇಡಹುಳು ತನ್ನ ಬಲೆ ನೆಯ್ವಲ್ಲಿ, ಗುಬ್ಬಿ ಕಾಗೆ ತಮ್ಮ ಗೂಡು ಕಟ್ಟಿಕೊಂಡು ವಾಸಿಸುವಲ್ಲಿ, ಇರುವೆ ಜೇನ್ನೊಣಗಳ ಜೀವನರೀತಿಯಲ್ಲಿ ಕಾಣುವ ನಿಸರ್ಗಸಹಜಬುದ್ಧಿ ಮಾನವಪ್ರಾಣಿಯಲ್ಲಿ ತರ್ಕಬುದ್ಧಿಯಾಗಿ ವಿಕಾಸವಾಗುತ್ತಿರುವಲ್ಲಿ, ಬುದ್ಧಿಯ ಹಗಲು ಹಂತಹಂತವಾಗಿ ಬೆಳಗುತ್ತ ಬಂದಿರುವ ವಿಚಿತ್ರರೀತಿಯೇನು? – ಎಂಬ ಬುದ್ಧಿತತ್ತ್ವದ ಸಮಸ್ಯೆಗಳು ಬುದ್ಧಿಗೆ ಇನ್ನೂ ಸಮಸ್ಯೆಗಳೆ.

ಹಿಂದೊಮ್ಮೆ ಅರಣಿಯಲ್ಲಿ ಬೆಂಕಿಯನ್ನು ಹೊಸೆದ ಬುದ್ಧಿ, ಇಂದು ಅಣುವಿನಲ್ಲಿ ಅದ್ಭುತ ಚೈತನ್ಯವನ್ನು ಕಡೆಯುತ್ತಿದೆ. ಬಿಲ್ಲು ಬಾಣ ಅಂದಿನ ಅದ್ಭುತ; 'Guided Missiles', ಕ್ಷಿಪಣಿಗಳು ಇಂದಿನ ಬುದ್ಧಿಯ 'ರಾಮಬಾಣ'. ಇಂದು ಮಾನವ ಬುದ್ಧಿಯ ಹಗಲು ಮಧ್ಯಾಹ್ನದ ಪ್ರಖರವಾಗಿ ರುಮುರುಮು ಹೊಡೆಯುತ್ತಿದೆ. ಈ

---

೧. Wisdom and Destiny, pp. 23-24.

ಪ್ರಚಂಡ, ಪ್ರಖರ ತೇಜದಲ್ಲಿ ಬುದ್ಧಿವಂತ ಮಾನವನೇ ಹುರುಪಳಿಸಿ ಹೋಗುವಂತಿದೆ. ಮಾನವನ ಬುದ್ಧಿಯ ಈ ಹಗಲು ಕಲ್ಯಾಣಕಾರಿಯಾಗಿಲ್ಲ, ಪ್ರಲಯಕಾರಿಯಾದಂತಿದೆ. ಉನ್ಮತ್ತತನದಲ್ಲಿ ತನ್ನ ತಲೆಯ ಮೇಲೆ ತನ್ನ ಕೈ ಇಟ್ಟು ಕುಣಿದು, ತಾನೆ ಸುಟ್ಟು ಭಸ್ಮವಾದ ಭಸ್ಮಾಸುರನ ಕಥೆ ಇಲ್ಲಿ ನೆನಪಾಗುತ್ತದೆ.

ಗಿರಿ-ಕಾನನದ ಜನರಲ್ಲಿ, ಚಿಕ್ಕ ಮಕ್ಕಳಲ್ಲಿ, ವಿದ್ಯಾಬುದ್ಧಿಯಿಲ್ಲದ ಹೆಣ್ಣುಗಂಡಿನ ಸಮಾಜದಲ್ಲಿ ಬುದ್ಧಿಯ ಮಬ್ಬುಗತ್ತಲೆ ಪ್ರತ್ಯಕ್ಷವಾಗಿ ತೋರುತ್ತದೆ. ಎರಡು ಎರಡು ಕೂಡಿ ಮೂರು, ಎರಡನ್ನು ಎರಡರಿಂದ ಗುಣಿಸಿದರೆ ಐದು, ಎರಡರಲ್ಲಿ ಮೂರು ಕಳೆದರೆ ಒಂದು, ನಾಲ್ಕು ಹಣ್ಣನ್ನು ಮೂವರಲ್ಲಿ ಹಂಚಿದರೆ ಒಬ್ಬೊಬ್ಬರಿಗೆ ಎರಡು ಹಣ್ಣು – ಮುಂತಾದ ಗಣಿತ ಎಲ್ಲರ ಅನುಭವ.

'ಅಂದಿರ್ದ ಪಂಚಪಾಂಡವರು ಮಂಚದ ಕಾಲ್ಗ-
ಳಂದದಿಂ ಮೂವರೇದೆರಡಂಗುಲಿಗಳಂ
ಮುಂದಿಹಗೆ ತೋರ್ಪನಂತೆ . . . . '[೧]

ಸರ್ಪಭೂಷಣ ಶಿವಯೋಗಿಗಳ ಈ ಉದಾಹರಣೆಯಲ್ಲಿ ಬುದ್ಧಿಯ ಮಂಕು, ಬುದ್ಧಿಯಿಲ್ಲದವರನ್ನೂ ನಗಿಸುವಂತಿದೆ. ಮದ್ರಾಸ ಪ್ರಾಂತದ ತಾಂಜೋರ ಜಿಲ್ಹೆಯಲ್ಲಿ ಕುಂಭಕೋಣದ ಸಮೀಪದಲ್ಲಿರುವ ಎಡೋರ (Edore) ದಲ್ಲಿ ಕ್ರಿ. ಶ. ೧೮೮೭ರಲ್ಲಿ ಹುಟ್ಟಿ, ಬಿ. ಎ. 'ಫೇಲಾ'ಗುವವರೆಗಾದರೂ ಕಲಿವ ಭಾಗ್ಯವಿಲ್ಲದಿದ್ದರೂ, ಗಣಿತಶಾಸ್ತ್ರದಲ್ಲಿ ಮಹಾಪ್ರತಿಭಾಶಾಲಿ ರಾಮಾನುಜನ್‌ನ ಹೆಸರು ಜಗತ್ತಿನಲ್ಲಿಯೇ ಪ್ರಖ್ಯಾತ. ಕೇಂಬ್ರಿಜ್ ವಿಶ್ವವಿದ್ಯಾಲಯದ ಗಣಿತ ಪ್ರಾಧ್ಯಾಪಕರು ಮತ್ತು 'ರಾಮಾನುಜನ್' ಎಂಬ ಗ್ರಂಥ ಬರೆದ ಜಿ. ಎಚ್. ಹಾರ್ಡಿ ಒಮ್ಮೆ ರಾಮಾನುಜನ್ ಅವರನ್ನು ಕಾಣಲು ಹೋಗಿದ್ದರು. ಮೈಯಲ್ಲಿ ಸ್ವಸ್ಥವಿಲ್ಲದ ಅವರನ್ನು ನೋಡಲು ೧೭೨೯ ನಂಬರಿನ ಟ್ಯಾಕ್ಸಿಯಲ್ಲಿ ಬಂದುದು ಅಪಶಕುನವೋ ಎಂದು ಹಾರ್ಡಿಯವರ ಪ್ರಶ್ನೆ. ಏಕೆಂದರೆ ಆ ಸಂಖ್ಯೆ ಏನೋ ಕುರೂಪ ಸಂಖ್ಯೆ! ಹಾರ್ಡಿಯ ಪ್ರಶ್ನೆಗೆ ಮಿಂಚಿನಂತೆ ಉತ್ತರ ಬಂತು ರಾಮಾನುಜನ್‌ರಿಂದ:

"No," he replied, "it is a very interesting number; it is the smallest number expressible as a sum of two cubes in two different ways." (೧೭೨೯=೧೨³+೧³=೧೦³+೯³)[೨]

ರಾಮಾನುಜನ್ ಅವರ ಗಣಿತಪ್ರತಿಭೆಯ ಈ ಉದಾಹರಣೆ ಮಾನವಬುದ್ಧಿಯ ತೇಜವನ್ನು ಸ್ಪಷ್ಟವಾಗಿ ಪ್ರತಿಫಲಿಸುತ್ತದೆ.

ಸಾಪೇಕ್ಷವಾದ (Theory of Relativity) ಅಥವಾ 'ಅನಿಶ್ಚಿತತ್ವ' (Principle of Indeterminacy) ಎಂಬ ವಿಜ್ಞಾನವಿಚಾರಗಳು ಆಲ್ಬರ್ಟ ಆಯಿನ್‌ಸ್ಟೀನ್ (Albert Einstein)ನಿಗೆ ಅಥವಾ ಹೆಸನ್‌ಬರ್ಗ (Heisenberg)ನಿಗೆ ಎಷ್ಟು ಹಗಲೋ ಅಷ್ಟು ಮಟ್ಟದ ಕತ್ತಲೆ, ಅವು ನನಗೆ. ಮಾನವ ಮಾನವರಲ್ಲಿ ತೋರುತ್ತಿರುವ ವಿಭಿನ್ನ

---

೧. ಕೈ. ಕ. ಪು. ೧೩೦-೧. ಜ್ಞಾ. ಸ್ಥಲ, ಪ. ೨೪.

೨. 'Ramanujan' p. 12.

ವಿಚಾರ, ವಿರುದ್ಧ ಅಭಿಪ್ರಾಯ ಅವರವರಲ್ಲಿ ವಿಕಾಸವಾಗಿರುವ ಬುದ್ಧಿಯ ಹಂತವನ್ನು ಬಹುಮಟ್ಟಿಗೆ ಅವಲಂಬಿಸಿವೆ. ಬುದ್ಧಿಯಲ್ಲಿರುವ ಈ ತರತಮದ ಅರಿವು ಮನುಷ್ಯ ಕೋಟಿಗಿದ್ದರೆ ತರ್ಕಯುದ್ಧದ ಅರ್ಥ ತಾನಾಗಿ ಆಗುತ್ತದೆ. ಈ ಅರ್ಥ ಹೊಳೆದ ವ್ಯಕ್ತಿಗಳಲ್ಲಿ ಘರ್ಷಣೆಯ ವಿಷ ತಾನೆ ಮಾಯವಾಗುತ್ತದೆ.

ಕೊನೆಯದಾಗಿ ಅರಿವಿನ ವಿಚಾರ. ಕಲ್ಲು ಮಣ್ಣಿನಲ್ಲಿ ಅರಿವು – 'ನಾನು ಇದ್ದೇನೆ' ಎಂಬ ಸ್ವಯಂಪ್ರಜ್ಞೆ ಇದೆಯೆ? ಗಿಡ ಮರ ಬಳ್ಳಿಗಳಲ್ಲಿಯಾದರೂ ಸ್ವಯಂಪ್ರಜ್ಞೆಯ ಕುರುಹು ಇದೆಯೆ? ಮಾನವೇತರ ಪ್ರಾಣಿಗಳಲ್ಲಿ ತೋರುವ ಅರಿವಿನ ಸ್ವರೂಪವೇನು? – ಎಂಬೀ ಪ್ರಶ್ನೆಗಳಿಗೆ ಮನುಷ್ಯಪ್ರಾಣಿ ನಿರ್ಧಾರವಾಗಿ, ನಿರ್ದಿಷ್ಟವಾಗಿ ಉತ್ತರ ಕೊಡುವುದು ಕಠಿಣ. ಅಥವಾ ಅಶಕ್ಯ. ಮಾನವಕುಲದಲ್ಲಿ ಸ್ವಯಂಪ್ರಜ್ಞೆ – ಆತ್ಮಪ್ರತ್ಯಯ – ಇದೆ ಎಂಬುದು ಸರ್ವಸಮ್ಮತವಾದರೂ ನನ್ನ ಅರಿವು ನಿಮಗೆ ಕಂಡಿಲ್ಲ; ನಿಮ್ಮ ಅರಿವನ್ನು ನಾನು ನೋಡಿಲ್ಲ. ಎಲ್ಲ ಪ್ರಮಾಣಗಳಿಗೆ ಮೂಲಾಧಾರವಾದ ಈ ಅರಿವು 'ಅಪ್ರಮಾಣ'. ಅದಕ್ಕೆ ಬೇರೆ ಪ್ರಮಾಣದ ಆವಶ್ಯಕತೆಯೇ ಇಲ್ಲ. ತನಗೆ ತಾನೇ ಪ್ರಮಾಣ. ಭಾರತೀಯ ಮನಶ್ಶಾಸ್ತ್ರದ ಮತದಂತೆ ಈ ಅರಿವಿಗೆ ಜಾಗ್ರತ್‌ಸ್ವಪ್ನ ಸುಷುಪ್ತ್ಯಾವಸ್ಥೆಗಳಲ್ಲಿ ಮರವೆ ಎಂಬುದಿಲ್ಲ.

ಅರಿವೆ ಬರಿಯರಿವೆ, ನೀನು
ಮರೆಯದೊಮ್ಮೆಯು ಜಗ
ದಿರವನಿಂತರಿವೆ ಪಲ್ಲವಿ
ಜಾಗರಣದ ಜಡಪೂಗವಿದನು ವಿಶ್ವ-
ನಾಗಿ ನೇತ್ರಾದಿಕ ಯೋಗದಿಂದರಿವೆ ೧
ಕನಸಿನ ಕಲ್ಪನೆಯನು ಮನವೆಂಬ ಸಾ-
ಧನದಿಂದೆ ತೈಜಸನೆನಿಸಿ ನೀನರಿವೆ ೨
ಪರಸುಖವನು ನಿದ್ರೆವೆರಸಿ ಮಾಯಾವೃತ್ತಿ
ಕರಣದಿ ಪ್ರಾಜ್ಞವೆಸರುದಳೆದರಿವೆ ೩[೧]

ಹೀಗೆ ಮಾನವನ ಅರಿವಿಗೆ ಕನಸಿನಲ್ಲಿ, ಅದೇಕೆ ನಿದ್ರೆಯಲ್ಲಿಯೂ ಎಚ್ಚರ. ಆದರೆ ಈ ಎಚ್ಚರದ ಹಂತ ಬೇರೆ ಬೇರೆ. ಜಗತ್ತು ದೇಹ ಇಂದ್ರಿಯ ಕರಣಾದಿಗಳ ವ್ಯವಹಾರಕ್ಕೆಲ್ಲ ತಾನೆ ಬೆಳಗು ನೀಡಿ, ಅವನ್ನು ಸಾಕ್ಷಿಕನಾಗಿ ನೋಡುತ್ತಿರುವ ಈ ಅರಿವಿನ ಕಲ್ಪನೆಯನ್ನು ಸುಂದರವಾಗಿ ಸುಸ್ಪಷ್ಟಗೊಳಿಸಿದ್ದಾರೆ ನಿಜಗುಣರು, ಕೆಳಗಿನ ಈ ಪದ್ಯದಲ್ಲಿ:

ಅರಸು ನರ್ತಕ ತಾಳಧಾರಿ ಸೂರಿಗಳನಾ
ವರಿಸಿ ಬೆಳಗುವ ರಂಗದೆಡೆಯ ಸೊಡರಂತೆ
ನೆರೆದಹವಮು ಬುದ್ಧೀಂದ್ರಿಯಾದಿ ವಿಷಯಂಗಳಾ
ಚರಣ ಸಾಕ್ಷಿಕ ಚಿತ್ತು ತಾನೆಂಬ ಸುಖವ[೨]

೧. ವೇ. ಗ್ರಂ. ಕೈ. ಪ. ಪು. ೭೪, ಪ. ೧೮
೨. ಅದೇ „ ಪು. ೭೫, ಪ. ೧೪

ಸಿಂಹಾಸನದ ಮೇಲೆ ಅರಸು, ರಂಗಸ್ಥಲದಲ್ಲಿ ನರ್ತಕಿ; ಅಲ್ಲಿಯೇ ಆಕೆಗೆ ಮೇಳವಾಗಿ ತಾಳಬಾರಿಸುವವ; ಸಭೆಯೆಲ್ಲ ರಸಿಕ ಪ್ರೇಕ್ಷಕರು; ಲಯಬದ್ಧವಾಗಿ ನರ್ತನ ನಡೆದಿದೆ. ಅರಸನ ಮೆಚ್ಚುಗೆ, ರಸಿಕರ 'ಭಾಪು, ಭಳಿರೆ, ವಾಹವ್ವಾ' ನಡೆದಿದೆ. ಈ ಎಲ್ಲವನ್ನು, ಎಲ್ಲರನ್ನು ವ್ಯಾಪಿಸಿ ತೋರಿ, ತನ್ನಿರವನ್ನೂ ತೋರುತ್ತ, ಎಲ್ಲವನ್ನು ನೋಡುತ್ತಿರುವ, ರಂಗಸ್ಥಲದ ಬಳಿ ಇರುವ ಒಂದು ದೀಪ. ಈ ದೀಪವಿದ್ದರೆ ಎಲ್ಲ ಬೆಳಗು; ಇಲ್ಲದಿದ್ದರೆ ಎಲ್ಲ ಕತ್ತಲೆ. ಚಿತ್ತು ಅಂದರೆ ಅರಿವೇ ಈ ದೀಪ. ಅಹಂಭಾವವೆ ಅರಸು, ಮನಸ ಇಲ್ಲವೆ ಬುದ್ಧಿಯೆ ನರ್ತಕಿ. ಇಂದ್ರಿಯಗಳೆ ತಾಳಧಾರಿಗಳು, ಶಬ್ದಾದಿ ವಿಷಯಪ್ರಪಂಚವೆ ಸೂರಿಗಳು, ದೇಹವೆ ರಂಗಸ್ಥಲ, ಜಗತ್ತೇ ಸಭಾಮಂಟಪ. – ಹೀಗೆ ಅಥವಾ ಬೇರೆ ಬಗೆಯಾಗಿ ಈ ಚಿತ್ರವನ್ನು ವಿವರಿಸಿದರೆ ತನಗೆ, ತನ್ನ ವಿವಿಧ ಚೇಷ್ಟೆಗೆ ಚೈತನ್ಯ-ಜ್ಞಾನದಾಯಕವಾಗಿ, ತನಗೆ ಬಾಹ್ಯ ಪ್ರಪಂಚವನ್ನು ತೋರಿ, ಆ ಪ್ರಪಂಚಕ್ಕೆ ತಾನು ತೋರದೆ ಮರೆಯಾಗಿ ಇರುವ ಅರಿವು ಒಂದು ವಿಚಿತ್ರ ದೀಪ.

ಮಾನವಸಾಮಾನ್ಯವಾಗಿ ನನ್ನಲ್ಲಿರುವ ಈ ಅರಿವನ್ನು ನಾನು, ನೀವು, ಸಮಾಜ, ಸಂಸ್ಥೆ, ಸರಕಾರ ಇಲ್ಲವೆ ಧರ್ಮ ಮಲಗಿಸಬಹುದು, ಎಚ್ಚರಿಸಲೂ ಬಹುದು; ಕತ್ತಲು ಮಾಡಿ ಹತ್ತಿಕ್ಕಬಹುದು; ಬೆಳಗಿನಲ್ಲಿ ಪ್ರಫುಲ್ಲವಾಗಿ ಅರಳಿಸಲೂ ಬಹುದು. ದೇವತ್ವಕ್ಕೆ ಏರಿಸಬಹುದು, ಪಶುತ್ವಕ್ಕೆ ಇಳಿಸಬಹುದು. ಕ್ರಮಬದ್ಧವಾಗಿ ಶಿಕ್ಷಣಕೊಟ್ಟು ಮಾನವನನ್ನು ಹಿಂಸ್ರಪಶುವನ್ನಾಗಿಸುವ ವಿಧಾನವನ್ನು ರಾಷ್ಟ್ರ ರಾಷ್ಟ್ರಗಳ ಸೈನಿಕರಿಗೆ ಕೊಡುತ್ತಿರುವ ಯುದ್ಧಶಿಕ್ಷಣ (Military Training) ದಲ್ಲಿ ಧಾರಾಳವಾಗಿ ಕಾಣಬಹುದು. ಸೈನಿಕ ಮನುಷ್ಯ ನಿಜ. ಆತನಿಗೂ ಬುದ್ಧಿಭಾವಗಳಿವೆ, ನಿಜ. ಆದರೆ ಆತನ ಅರಿವಿನ ಮಟ್ಟ ಶಿಕ್ಷಣಹೊಂದಿ ಪಶುತಳಕ್ಕೆ ಇಳಿದಂತಿದೆ. ಹೊರಗೆ ಮನುಷ್ಯಪ್ರಾಣಿಯಾಗಿದ್ದರೂ ಒಳಗೆಲ್ಲ ಹಿಂಸ್ರ ಪ್ರಜ್ಞೆ ತುಂಬಿರುವ ಪಶುವೇ ಆತ. ಆದ್ದರಿಂದ ಆತನನ್ನು ಮನುಷ್ಯನೆಂದು ಗುರುತು ಹಿಡಿವುದೇ ಕಷ್ಟವಾಗಿ ಬಿಡಬಹುದು – ನಿಷ್ಕಲ್ಮಷವಾದ ಭಾವಕ್ಕೆ. ಹೆಯಿನ್ (Heine) ಎಂಬಾತ ಕವಾಯತೊಂದನ್ನು ತೋರಿಸಲು ತನ್ನ ಚಿಕ್ಕ ಮಗುವನ್ನು ಕರೆದುಕೊಂಡು ಹೋಗಿದ್ದ. ಅದನ್ನು ನೋಡಿ ಬೆರಗು ಬೆಪ್ಪಾದ ಹುಡುಗ ತಂದೆಗೆ ಹೇಳಿದ: "These soldiers were once men."[೧] ಚಿಕ್ಕ ಬಾಲಕನ ನಿರ್ಮಲ ಅಂತಃಕರಣಕ್ಕೆ, ಇವರೂ ಈಗ ಮನುಷ್ಯರೇ? ಎಂಬ ಸಂಶಯ. ಯುದ್ಧವೇ ದೇವರು, ಹಿಂಸೆಯೇ ಶಾಶ್ವತಧರ್ಮವೆಂದಿರುವ ಈ 'ರಣಭಕ್ತ'ರಿಗೆ 'ದಯವಿಲ್ಲದ ಧರ್ಮವದಾವುದಯ್ಯಾ?' ಅಥವಾ 'ಅಹಿಂಸಾ ಪರಮೋ ಧರ್ಮಃ' ಎಂಬ ಮಾತನ್ನು ತೋರಿದರೆ ಅವರು ನಗದೆ ಇರುವುದು ಹೇಗೆ? ಅವರು ನಿಂತಿರುವ ಅರಿವಿನ ಸ್ಥಲದಲ್ಲಿ ಈ ಮಾತು

---

೧. How true was Heine's little boy who said to his father who had taken him to witness the splendours of a review: 'These soldiers were once men'. They are now without will, without soul and without hope . . . . . . Reasonable men are turned into will-less slaves . . . . . .

Kalki, p. 33.

ರಣಹೇಡಿಯ ಹುಚ್ಚು ವಿಕಾರವಾಗಿ ಕಾಣುತ್ತದೆ. ಪುಂಶ್ಚಲಿಗೆ ಪಾತಿವ್ರತ್ಯದ ಪುರಾಣ ಯಾವ ಆಕಾರವಾಗಿ ಕಾಣಬಹುದು? ಮದೋನ್ಮತ್ತ ಯೌವನಕ್ಕೆ ಶುಕಮುನಿಯ ಸಹಜವರ್ತನದ ಕಥೆ ಸುಳ್ಳಿನ ಕಂತೆ ಇಲ್ಲವೆ ಜಾತಿಷಂಢನ ನಿರ್ಭಾಗ್ಯ ಚರಿತೆ.

ಸೈನಿಕನಲ್ಲದ ನನಗೆ ಅಥವಾ ನಿಮಗೆ, 'ದಯವಿಲ್ಲದ ಧರ್ಮ ಧರ್ಮವಲ್ಲ, ಅಹಿಂಸೆಯೇ ಪರಮಧರ್ಮ' – ಎಂಬ ಮಾತಿನ ಶಬ್ದಾರ್ಥ ಆಗುತ್ತದೆ. ಅದರಲ್ಲಿರುವ ನೀತಿಯ ಅರ್ಥವೂ ಆಗುತ್ತದೆ. ಸುಂದರವಾದ ಮಾತು, ನೀತಿ ಎಂಬುದೂ ಗೊತ್ತಾಗುತ್ತದೆ. ಆದರೆ ಅದರ ಜೀವಕಳೆ ನನಗೆ ಹೊಳೆದಿಲ್ಲ. ಇದಕ್ಕೆ ಕಾರಣ, ನಾನು ವಾಸಿಸುತ್ತಿರುವ ಸರ್ವಸಾಮಾನ್ಯ ಅರಿವಿನ ಚೌಕಟ್ಟು. 'ಶಾಸ್ತ್ರ ಹೇಳಾಕ, ಬದ್ನೀಕಾಯಿ ತಿನ್ನಾಕ' – ಎಂಬ ವಿಶ್ವನಿರ್ಣಯದ ಲೌಕಿಕರುಚಿ ನನ್ನ ಅರಿವಿನ ಆಳ ವನ್ನೆಲ್ಲ ಆವರಿಸಿದಂತಿದೆ. ಅರೆಮಬ್ಬಾದ ಅರಿವಿಗೆ ಪ್ರಾಣೋಜ್ವಲವಾದ ನೀತಿಯೂ ನಿಷ್ಪ್ರಾಣವೇ.

ದಸರಯ್ಯ ೧೨ನೆಯ ಶತಮಾನದ ಕರ್ನಾಟಕದಲ್ಲಿದ್ದ ಒಬ್ಬ ಶರಣ. ಆತನ ಸ್ವಭಾವ ಹೂವು, ನಡೆ ನುಡಿ ಮಧುರ ಮಕರಂದ. ಆದರೂ ಈ ದಸರಯ್ಯ ಕೆಲವು ಕುಚೋದ್ಯಗಾರರಿಗೆ ಮುಳ್ಳುಮಂಕಾಗಿ ತೋರಿದ. ಒಬ್ಬ ದುಷ್ಟ ಮೋಟಮಲ್ಲನನ್ನು ಛೂಬಿಟ್ಟರು; ನಿಂತು ನೋಡಿದರು ಆ ಕುಚೇಷ್ಟೆಯವರು. ಜಂಗಮವೇಷದ ಮಲ್ಲ ಗುದ್ದಿ ಗುದ್ದಿ, ಒದ್ದು ಒದ್ದು ನಿಶ್ಶಕ್ತನಾದ. ಮೈ ಒಡ್ಡುತ್ತಿದ್ದ ದಸರಯ್ಯ. ದಣಿದು ನಿಂತ ಮಲ್ಲನ ಕೈ ಮೈ ಕಾಲು ಹಿಸುಕುತ್ತ – 'ನೊಂದಾ, ಎನ್ನಯ್ಯ' ಎಂದು, ತಂದೆಗೆ ಮರುಗುವಂತೆ ಮಲಮಲನಾದ ದಸರಯ್ಯನ ಅರಿವಿನಲ್ಲಿ 'ದಯವೇ ಧರ್ಮದ ಮೂಲ' ಎಷ್ಟು ಕಳೆಗೊಂಡು ಹಬ್ಬಿರಬಹುದು. ಹೂಪತ್ರಿ ಎತ್ತಿದರೆ, ಗಿಡಬಳ್ಳಿಯಲ್ಲಿ ರಕ್ತ ಸ್ರವಿಸುವುದನ್ನು ಕಂಡ ದಸರಯ್ಯನ ಅರಿವು ಯಾವ ಮಟ್ಟದಲ್ಲಿ ಅರಳಿ ನಿಂತಿರ ಬಹುದು? ಮೋಟಮಲ್ಲನಲ್ಲಿ ತೋರಿದ ಆತನ ಪ್ರತಿಕ್ರಿಯೆ ದೌರ್ಬಲ್ಯದಿಂದ ಒತ್ತಾಯ ವಾಗಿ ಬಂದ ಉಪಚಾರವಲ್ಲ; ಆದರೆ ಅದು ಆತನ ಅರಿವಿನ ಅಪಾರ ಶಕ್ತಿಯಿಂದ ಧುಮ್ಮಿಕ್ಕಿದ ಪ್ರೇಮ, ಭಕ್ತಿ.

ನಾನು ಈಗ ನಮ್ಮ ಮನೆಯ ಮುಹಡಿಯ ಮೇಲೆ ಕುಳಿತು ಬರೆಯುತ್ತಿದ್ದೇನೆ. ಬುದ್ಧಿ ಒಮ್ಮೊಮ್ಮೆ ವಿಚಾರದಲ್ಲಿ ಮಗ್ನವಾಗುತ್ತದೆ. ಬರೆಯುತ್ತಿದ್ದಂತೆ ಮನಸ್ಸು ಹಲವುಕಡೆ ಅಡ್ಡಾಡಿ ಬರುತ್ತಿದೆ. ಗುಬ್ಬಿ ಕಾಗೆ ಗೊರವಂಕಗಳ ಶಬ್ದ ಹೊರಗಿನಿಂದ ಕೇಳಬರುತ್ತಿದೆ. ಅರಿವಿನ ಹಗಲು-ಕತ್ತಲೆಗಳನ್ನು ಕುರಿತು ಬರೆಯುತ್ತಿರುವಾಗ ಇದೇನು ಹೇಳುತ್ತಿರುವಿರಿ? – ಎಂದು ನೀವು ಕೇಳಬಹುದು. ಉತ್ತರ ಇದು: ಪ್ರಾಣಚೈತನ್ಯದ ಆಧಾರದಲ್ಲಿ, ಜಾಗ್ರದವಸ್ಥೆಯಲ್ಲಿ ಕುಳಿತಿದೆ ನನ್ನ ದೇಹ. ವಿಚಾರದಲ್ಲಿ ಮುಳುಗಿ ಎದ್ದು ವಾಕ್ಯಮಾಲೆಯಲ್ಲಿ ಹರಿಯುತ್ತಿದೆ ನನ್ನ ಬುದ್ಧಿ. ಹಣ, ಹಸಿವು, ಹೆಂಡತಿ,ಮಕ್ಕಳು, ನಿನ್ನೆ ಆದ ಅಪಮಾನ, ಮೊನ್ನೆ ಪಡೆದ ಗೌರವ ಮುಂತಾದ ಕಡೆ ಹರಿದಾಡಿ ಬರುತ್ತಿದೆ ನನ್ನ ಮನಸ್ಸು. ಹೊರಗಿನ ಸದ್ದು ನನ್ನ ಒಳಗೆ ಹರಿದು, ನನ್ನ ಹೊರಗೆ ಶಬ್ದವಾಗು ವಂತೆ, ನನ್ನ ಒಳಗೆ ಎನಿಸುತ್ತಿದೆ. ನಾನು ಮೊದಲಾಗಿ ಹೊರಗಿನ ಶಬ್ದದ ವರೆಗೆ

ಎಲ್ಲವನ್ನು ತೋರುತ್ತಿರುವುದೆ ಅರಿವು. ಅಂದರೆ ನಾನು, ನನ್ನ ಮನೆ, ಮಹಡಿ, ನನ್ನ ದೇಹ ಮನ ಬುದ್ಧಿ, ಹೊರಗಿನ ಶಬ್ದ ಮುಂತಾದ ರೂಪಪ್ರಪಂಚ ನನ್ನ ಅರಿವು ಎಚ್ಚರವಾಗಿದ್ದರೆ ಅವೆ; ಇಲ್ಲವಾದರೆ? ಎಲ್ಲವೂ ಗಭೀರವಾದ ತಮಸ್ಸು.

ಅಭಿಜ್ಞಾನ ಶಾಕುಂತಲದ ೪ನೆಯ ಅಂಕದ ವಿಷ್ಕಂಭಕದಲ್ಲಿ ತೋರುವ ಒಂದು ಸಣ್ಣ ಸನ್ನಿವೇಶ.[೧] ಕಣ್ವ ಮಹರ್ಷಿಯ ಆಶ್ರಮಕ್ಕೆ ಬಂದ ದುರ್ವಾಸ ಮಹರ್ಷಿಗೆ ತಕ್ಕ ಆತಿಥ್ಯವನ್ನು ನೀಡದೆ, ಅನ್ಯಮನಸ್ಕಳಾಗಿದ್ದಾಳೆ ಶಕುಂತಲೆ. ಶಕುಂತಲೆಗೆ ಕಿವಿಯಿದ್ದು ಕಿವಿ ಕೇಳಲಿಲ್ಲ; ಕಣ್ಣಿದ್ದು ಕಣ್ಣು ಕಾಣಲಿಲ್ಲ. ಏಕೆ? ಶಕುಂತಲೆ ಆಶ್ರಮದಲ್ಲಿ ಕುಳಿತಿದ್ದರೂ ಶಕುಂತಲೆಯ ಮನಸ್ಸು ಅಲ್ಲಿ ಇಲ್ಲ. ಅದು ಕುಳಿತಿರುವುದು ದುಷ್ಯಂತನಲ್ಲಿ. ಅಂದ ಮೇಲೆ ಅಲ್ಲಿಲ್ಲದ ಶಕುಂತಲೆಯ ಕಣ್ಣು ಮುಂತಾದ ಜ್ಞಾನೇಂದ್ರಿಯಗಳಿಗೆ ಏನು ತೋರ ಬಹುದು? ದುರ್ವಾಸಮುನಿಯ ಮೂರ್ತಿಯಿಂದ ಬೆಳಕಿನ ತರಂಗಗಳು (Light waves) ಶಕುಂತಲೆಯ ಕಣ್ಣ ಮೇಲೆ, ಆತನ ನುಡಿಯ ಧ್ವನಿ ತರಂಗಗಳು (Sound waves) ಶಕುಂತಲೆಯ ಕಿವಿಯನ್ನು ಅಪ್ಪಳಿಸಿದುದು ಸತ್ಯ. ಆದರೆ ಅವನ್ನು ಒಳಗೆ ಕರೆದು ಕೊಳ್ಳುವ ಮನವೇ ಎಲ್ಲಿಯೋ ಹೋಗಿರುವಾಗ ಆ ತರಂಗಗಳನ್ನು ಸ್ವಾಗತಿಸುವವರಾರು?

ಸಾಲೆಯಲ್ಲಿ ಒಬ್ಬ ಹುಡುಗನಿಗೆ ಶಿಕ್ಷಕರು ಪ್ರಶ್ನೆ ಕೇಳಿದರು: 'ಮಾವಿನ ಗಿಡದಲ್ಲಿ ಯಾವ ಕಾಯಿ ಆಗುತ್ತವೆ?' ಹುಡುಗ ಒಮ್ಮೆಲೆ ಉತ್ತರ ಕೊಟ್ಟ 'ಕರಚೀ ಕಾಯಿ' ಎಂದು. ಹೀಗೇಕೆ ಉತ್ತರ? ಅಂದು ಮನೆಯಲ್ಲಿ ಮಾಡುತ್ತಿದ್ದ ಕರಚೀಕಾಯಿ ಬುಟ್ಟಿ ಯಲ್ಲಿ ಹುಡುಗನ ಮನಸ್ಸು ಈಸಾಡುತ್ತಿದೆ. ಅನ್ಯಮನಸ್ಕಳಾದ ಶಕುಂತಲೆಯ ಕಿವಿ ಕೇಳಲಿಲ್ಲ. ಅನ್ಯಮನಸ್ಕನಾದ ಈ ಬಾಲಕನ ಕಿವಿ ಕೇಳಿತು; ಆದರೆ ಮನಸ್ಸು ತಾನು ಕಾಣುತ್ತಿದ್ದ ಉತ್ತರವನ್ನೆ ಹೇಳಿತು.

ಜ್ಞಾನೇಂದ್ರಿಯಗಳಲ್ಲಿ ಮತ್ತು ಮನಸ್ಸಿನಲ್ಲಿ ಅರಿವಿನ ದೀಪವನ್ನು ಮಂದಮಾಡಿ ಅಥವಾ ತೆಗೆದು, ಬುದ್ಧಿಯ ವಿಚಾರವ್ಯಾಪಾರದಲ್ಲಿಯೇ ಮಗ್ನವಾಗಿ ಬಿಡಬಹುದು. ನ್ಯೂಟನ್ನನ (Sir Isaac Newton) ವಿಚಾರಮಗ್ನತೆ ಸುಪ್ರಸಿದ್ಧ. ಗಣಿತಶಾಸ್ತ್ರದ ಗಭೀರ ವಿಚಾರದಲ್ಲಿ ಮುಳುಗಿದ ಆತನಿಗೆ ೨-೩ ದಿನಗಳಾದರೂ ಊಟ ನಿದ್ರೆಯ ಅರಿವೇ ಇರುತ್ತಿರಲಿಲ್ಲವಂತೆ. 'ಊಟ ಬೇಕು, ಹಸಿವೆಯಾಗಿದೆ; ನಿದ್ರೆ ಬೇಕು, ತೂಕಡಿಕೆ ಎನಿಸುತ್ತದೆ.' – ಎನ್ನುವ ನ್ಯೂಟನ್ ಎಲ್ಲಿದ್ದಾನೆ? ಒಳಗೆ ಮುಳುಗಿದ್ದಾನೆ; ಮೇಲೆ ಚಲಿಸುವ ಮನದಲ್ಲಿ, ಅಥವಾ ಸ್ಥೂಲದೇಹದಲ್ಲಿ ನ್ಯೂಟನ್ – ಆತನ ಅರಿವೆಲ್ಲ ಬುದ್ಧಿ ಯಲ್ಲಿ ಕೇಂದ್ರೀಕೃತವಾಗಿ ಬಹುಶಃ 'ಗುರುತ್ವಾಕರ್ಷಣ ಶಕ್ತಿ'ಯ ವಿಶ್ವನಿಯಮ (Law

---

೧. . . . (ನೇಪಥ್ಯೇ) ಆಃ ಅತಿಥಿಪರಿಭಾವಿನಿ,

ವಿಚಿಂತಯಂತೀ ಯಮನನ್ಯಮಾನಸಾ
ತಪೋಧನಂ ವೇತ್ಸಿ ನ ಮಾಮುಪಸ್ಥಿತಂ ।
ಸ್ಮರಿಷ್ಯತಿ ತ್ವಾಂ ನ ಸ ಬೋಧಿತೋಽಪಿ ಸನ್
ಕಥಾಂ ಪ್ರಮತ್ತಃ ಪ್ರಥಮಂ ಕೃತಾಮಿವ ॥

ಅಭಿಜ್ಞಾನ ಶಾಕುಂತಲಮ್ ಅಂ. ೪. ಪ. ೧.

of Gravitation) ದ ಸತ್ಯಸ್ವರೂಪವನ್ನು ಗ್ರಹಿಸಲು ಹಾತೊರೆಯುತ್ತಿದೆ. ಆತನದೊಂದು ವಿಚಾರಸಮಾಧಿ; ಶಕುಂತಲೆಯ ಪ್ರೇಮಸಮಾಧಿ ಮತ್ತೊಂದು ಪ್ರಕಾರ.

ಅಡ್ಡಾಡುತ್ತ ಹೋಗಿ ಬಯಲಲ್ಲಿ ಕುಳಿತು, ಸಾಯಂಕಾಲದ ವಿಶ್ವಸೌಂದರ್ಯವನ್ನು ನೋಡುತ್ತ ನೋಡುತ್ತ, ಬಯಲ ಹರವು ಭಾವವನ್ನು ಸೆಳೆಯುತ್ತದೆ; ಬರಿಗಣ್ಣಿನ ಮುಂದೆ ಹರವಿರುವ ಬಯಲೇ ಸಾಕಷ್ಟು ಅಗಲು, ಎತ್ತರವಾಗಿದೆ. ಆದರೂ ಜ್ಯೋತಿಶ್ಶಾಸ್ತ್ರವು ತೋರಿಸುವ ಬಯಲಿನ ಮುಂದಿಟ್ಟರೆ ಇದರ ಗಾತ್ರ ಒಂದು ಅಣುಮಾತ್ರ. ಕಣ್ಣಿಗೆ ೧೦–೨೦ ಮೈಲುಗಳಾಚೆ ಕಾಣುವ ಸೂರ್ಯ ನಮ್ಮಿಂದ ೯೨,೫೦೦,೦೦೦ ಮೈಲು ದೂರ! ಬೆಳಕಿಗೆ ಇದು ಸುಮಾರು ೮ ನಿಮಿಷದ ಹಾದಿ ಮಾತ್ರ. ಆದರೆ ದಿನ ತಿಂಗಳು ವರ್ಷ, ನೂರು ಸಾವಿರ ಲಕ್ಷ ಕೋಟಿ ದಶಕೋಟಿ ವರ್ಷ ನಕ್ಷತ್ರಗಳ ಬೆಳಕು ಪ್ರವಾಸಮಾಡಿ ಬರಬೇಕಾದರೆ ಆಕಾಶದ ಎತ್ತರವೆಷ್ಟು? ಇಂತಹ ನಕ್ಷತ್ರಗಳಾಚೆಯೂ ಮತ್ತೆ ಬಯಲು. ಬಯಲಿನ ಎತ್ತರವನ್ನು ನೋಡುತ್ತಿರುವಂತೆ ಅದರ ಅಗಲವೂ ಕಣ್ಣನ್ನು ಕೆಣಕಿ ತನ್ನತ್ತ ಆಹ್ವಾನಿಸುತ್ತದೆ. ಆಕಾಶದ ಅಗಲ ಎಷ್ಟು? ಹೇಳಬಲ್ಲವರಾರು? ಜ್ಯೋತಿರ್ವಿಜ್ಞಾನಿಗಳು. ಜೇಮ್ಸ್ ಜೀನ್ಸರಂತಹ ಮಹಾವಿಜ್ಞಾನಿಗಳ ಕೈಹಿಡಿದುಕೊಂಡು ಆಕಾಶದ ಅಗಲವನ್ನು ಅಳೆಯುತ್ತ ಹೋದರೆ, ಅದೊಂದು ಅದ್ಭುತ ವಿಚಿತ್ರ. ಅವರು ತಮ್ಮ 'The Mysterious Universe' ಎಂಬ ಗ್ರಂಥದಲ್ಲಿ ಉದಹರಿಸಿರುವ (Plate I) The Depths of Space ಎಂಬ ಚಿತ್ರವನ್ನು ನಿರೀಕ್ಷಿಸಿದರೆ, ಅವರು ಹೇಳುವ ಮಾತನ್ನು ಕೇಳಿದರೆ ಬುದ್ಧಿ ವಿಭ್ರಮವಾಗುತ್ತದೆ. ಅದೋ ಕೇಳಿ:

'A cluster of Nebulae in Coma Berenices. This is a photograph of a minute piece of the sky, taken with the largest telescope in existence (Mount Wilson, 100–inch). The majority of objects are nebulae, at a distance such that their light takes 50 million years to reach us. Each nebula contains some thousands of millions of stars, or the material for their formation. About two million such nebulae can be photographed in all, and there are probably millions of millions of others beyond the range of any telescope.'[೧]

ಕೋಟ್ಯಂತರ ನಕ್ಷತ್ರಗರ್ಭ-ಪುಂಜ-ಮಾಲಿಕೆ-ನಕ್ಷತ್ರಗಳನ್ನು ತನ್ನ ಆಳ ಅಗಲದಲ್ಲಿ ಒಳಕೊಂಡಿರುವ ಬಯಲಿನ ನೋಟ ನಕ್ಷತ್ರಗಳ ಬೃಹದ್‌ಗಾತ್ರವನ್ನು ಅವಲೋಕಿಸಿದರೆ, ಇನ್ನೂ ಭವ್ಯ, ಮತ್ತು ರಮಣೀಯ, ಗಂಭೀರವಾಗುತ್ತ ವಿಶ್ವದ ಅನಂತ್ಯವನ್ನು ಘೋಷಿಸುತ್ತ ಮುಂದೆ ಸಾಗುತ್ತದೆ. ಚರ್ಮದ ಕಣ್ಣಿಗೆ ನಾವು ವಾಸಿಸುತ್ತಿರುವ ಭೂಮಿಯೇ ಒಂದು ಮಹಾಭೂಮ – ಬಹಳ ದೊಡ್ಡದು. ಆದರೆ . . . . . ಆದರೆ ವಿಜ್ಞಾನಿಯ ಕಣ್ಣೊಳಗಿಂದ ನೋಡಿರಿ – ಕಾಣುತ್ತದೆ ನಮ್ಮ ಭೂಮಿ ಮತ್ತು ಆಕಾಶ

೧. The Mysterious Universe.

ನಕ್ಷತ್ರಗಳ ಸತ್ಯಸ್ವರೂಪ. [೧]ನಮ್ಮ ಪೃಥ್ವಿಯ ಎಡಬಲ ಪ್ರಮಾಣದ ನಕ್ಷತ್ರಗಳ ಸಂಖ್ಯೆ ಅತಿ ಸಣ್ಣದು. ಆದರೆ ಸಾವಿರ ಲಕ್ಷ ಕೋಟಿ ಪೃಥಿವಿಗಳನ್ನು ಒಳಕೊಳ್ಳಬಲ್ಲ ನಕ್ಷತ್ರಗಳೇ ಬಹುಸಂಖ್ಯಾಕ. ಮತ್ತು ಈ ನಕ್ಷತ್ರಗಳು ಎಷ್ಟು ಇರಬಹುದು? ಬಹುಶಃ ನಮ್ಮ ಪೃಥ್ವಿಯ ಎಲ್ಲ ಸಮುದ್ರಗಳ ದಂಡೆಯಲ್ಲಿರುವ ಉಸುಬಿನ ಕಣಗಳಷ್ಟು. ಗಣಿತ-ಗುಣಿತ ವನ್ನು ಪ್ರತಿಭಟಿಸುವ ಈ ಗಾತ್ರದ, ಈ ಸಂಖ್ಯೆಯ ನಕ್ಷತ್ರಗಳಿಗೆ ವಿಹಾರಭೂಮಿ ಯಾಗಿರುವ ಬಯಲು ಎಷ್ಟು ವಿಶಾಲ? ನಭೋಮಾರ್ಗದಲ್ಲಿ ಸದಾ ಸಂಚರಿಸುತ್ತಿರುವ ನಕ್ಷತ್ರಗಳ ಈ ಮಹಾಕೋಟಿ ಒಂದರ ಸಮೀಪಕ್ಕೆ ಒಂದು ಹಾಯುವುದಿಲ್ಲ. ಜೊತೆಯಲ್ಲಿ ತಿರುಗಾಡುವ ಕೆಲವು ಮಿತ್ರನಕ್ಷತ್ರಗಳನ್ನುಳಿದರೆ ಎಲ್ಲವು ಏಕಾಕಿಯಾಗಿ ನಡೆದವೇ. ಹೀಗೆ ಪ್ರವಾಸಮಾಡುತ್ತಿರುವ ಯಾವುದೇ ಎರಡು ನಕ್ಷತ್ರಗಳ ಅಂತರ ೧೦ ಲಕ್ಷ ಮೈಲು ಗಳಿಗಿಂತ ಹೆಚ್ಚು. ವಸ್ತುಸ್ಥಿತಿ ಹೀಗಿದ್ದರೆ ಆಕಾಶದ ಅಗಲ ಎಷ್ಟು? ಆಕಾಶದಷ್ಟು.[೨]

ಇಂದಿನ ವಿಜ್ಞಾನಪುರುಷನ ಬುದ್ಧಿಯ ಅತ್ಯಪೂರ್ವ ಬಲ, ಯಂತ್ರಸಾಧನ ಸಾಮಗ್ರಿ ಇಂದು ನಮಗೆ ಭೌತವಿಶ್ವದ ಇಂಥ ಅವಾಢವ್ಯ ದರ್ಶನವನ್ನು ಮಾಡಿಸುತ್ತದೆ. ಈ ಬುದ್ಧಿ ಬಲಿದಂತೆ, ಸಾಧನ ಸಾಮಗ್ರಿ ಬೆಳೆದಂತೆ, ಇನ್ನೂ ಈ ವಿಶ್ವದ ಹರವು – ಆಳ ಅಗಲ ಎತ್ತರ -- ಎಷ್ಟು ಹಿಗ್ಗುವುದೋ ಯಾರಿಗೆ ಗೊತ್ತು? ಹಿಂದಿನ ನಮ್ಮ ಪುರಾಣ ಹೇಳುವ 'ಅನಂತ ಬ್ರಹ್ಮಾಂಡ'ಗಳು 'ಚತುರ್ದಶ ಭುವನ'ಗಳು ಮುಂತಾದ ಮಾತುಗಳಿಗೆ ಗಣಿತ-ಯಂತ್ರ-ಪ್ರಯೋಗಗಳ ಆಧಾರ ಇರಲಿಲ್ಲ, ಬಹುಮಟ್ಟಿಗೆ ಅವು ಹೃದಯ ಹೇಳಿದ ಮಾತು. ಸಾವಿರಾರು ವರ್ಷ ಬಳಕೆಗೆ ಬಿದ್ದು ಸತ್ತ್ವಹೀನವಾಗಿ ಉಳಿದಿದ್ದ ಅವಕ್ಕೆ ಇಂದು ನವೀನ ಉಜ್ವಲ ಅರ್ಥಕಾಂತಿ ಆವರಿಸುತ್ತಿದೆ.

ವಿಶ್ವಪ್ರಪಂಚವನ್ನು ಗರ್ಭೀಕರಿಸಿಕೊಂಡಿರುವ ಬಯಲು ವಾಚಾಮತೀತವಾಗಿ ಹರವಿಕೊಂಡಿದ್ದರೂ ಆ ಹರವನ್ನೆಲ್ಲ ಮಾನವನ ಅರಿವು – ಅದಾವ ಮೋಡಿಯಿಂದಲೋ ಏನೋ! – ಲೀಲಾಜಾಲವಾಗಿ ಆಲಿಂಗಿಸುತ್ತದೆ, ತಾಯಿ ಮಗುವನ್ನು ಅಪ್ಪಿಕೊಳ್ಳು

---

೧. A few stars are known which are hardly bigger than the earth, but the majority are so large that hundreds of earths could be packed inside each and leave room to spare; here and there we come upon a giant star large enough to contain millions of millions of earths. And the total number of stars in the universe is probably something like the total number of grains of sand on all the sea-shores of the world. Such is the littleness of our home in space when measured up against the total substance of the universe.

The Mysterious Universe. p. 11.

೨. This vast multitude of stars are wandering about in space. A few form groups which journey in company, but the majority are solitary travellers. And they travel through a universe so spacious that it is an event of almost unimaginable rarity for a star to come anywhere near to another star. For the most part each voyages in splendid insolation, like a ship on an empty ocean.

The Mysterious Universe. p. 11.

ವಂತೆ. 'ಬಳ್ಳಿಗೆ ಕಾಯಿ ದಿಮ್ಮಿತ್ತೇ?' ಎಂದೆನಿಸುತ್ತದೆ ಈ ಅದ್ಭುತ ಆಲಿಂಗನವನ್ನು ನೋಡಿದಾಗ. ಅರಿವೇ ವಿಶ್ವದ ತಾಯಿಯಾಗಿರಬಹುದೆ?

ಹಿಂದೆ ಒಂದುಕಡೆ ಹೇಳಿದಂತೆ 'The atom is as porous as the solar system.' ಅಣುವೂ ಒಂದು ಸೌರವ್ಯೂಹ. ಇತ್ತೀಚಿನವರೆಗೆ ಅಭೇದ್ಯವಾಗಿದ್ದ ಈ ವ್ಯೂಹವನ್ನು ಭೇದಿಸಿ ನೋಡಬಲ್ಲ ಅಣುವಿಜ್ಞಾನಿ. ಅದರ ಒಳಗು ಎಲ್ಲ ಬಹು ಮಟ್ಟಿಗೆ ಬಯಲೇ. ಯಾವುದೊಂದು ಅಣುವಿನಲ್ಲಿ ಮಧ್ಯವರ್ತಿಯಾಗಿರುವ ಪ್ರೋಟಾನ್ ಮತ್ತು ಸುತ್ತು ತಿರುಗುತ್ತಿರುವ ಇಲೆಕ್ಟ್ರಾನ್, ಫೊಟಾನ್ ಮುಂತಾದವುಗಳ ಗತಿಯಿಂದಲೇ ಅಣು ಅಣುವಿನ ರೂಪವಾಗಿ ಕಾಣುತ್ತದೆ. ಗತಿಯನ್ನು ತಡೆವುದು ಸಾಧ್ಯವಾದರೆ ಅಣುವೆಲ್ಲ ಬಯಲೇ ಎನ್ನಬೇಕು. ಅಲ್ಲಿ ಉಳಿವ ಪದಾರ್ಥ (Substance)ದ ಗಾತ್ರ, ಅಣುಗಾತ್ರದ .೦೦೦,೦೦೦,೦೦೦,೦೦೦೧ರಷ್ಟು ಮಾತ್ರ.[೧] ಅಣುಗರ್ಭದ ಈ ಬಯಲೂ ಮಾನವನ ಅರಿವಿನ ತಕ್ಕೆಯಲ್ಲಿ.

ಇದೆಲ್ಲ ಒಂದಲ್ಲ ಒಂದು ವಿಧವಾಗಿ ಇಂದ್ರಿಯ ಮುಖದಲ್ಲಿ ಅರಿವಿಗೆ ಗೋಚರವಾಗುಪ ವಿಶ್ವ. ಕಣ್ಣು ಮೊದಲಾದ ಜ್ಞಾನೇಂದ್ರಿಯಗಳಿಗೆ ಕಾಣಬಾರದ ವಿಶ್ವ ಅದೆಷ್ಟೊ! 'Infra-red' ಕಿರಣಗಳು ಕಣ್ಣಿಗೆ ಕಾಣುವುದಿಲ್ಲ, ಅದರಂತೆ 'Ultra-violet' ಕಿರಣಗಳು. ಅತೀಂದ್ರಿಯವಾದ ಇಂಥ ಪ್ರಭಾಕಿರಣಗಳ ತರಂಗಮಾಲೆ ಎಂಥ ಅಪಾರ ವಾರಾಶಿಯನ್ನು ಸೂಚಿಸುತ್ತದೆ! 'Infra-red' 'Ultra-violet'ದ ವಿಜ್ಞಾನದ ಬುದ್ಧಿಯಲ್ಲಿ ಮೌನವಾಗಿ ಕುಳಿತು ವರ್ಣರೂಪದ ಈ ವಿಶ್ವಸಾಗರವನ್ನು ವೀಕ್ಷಿಸಲು ಅರಿವಿಗೆ ಶರಣು ಹೊಕ್ಕರೆ ಕಣ್ಣಿಗೆ, ಬುದ್ಧಿಗೆ ಕಾಣಬಾರದುದು ಕಾಣಬಹುದೆ? ಕರಣೇಂದ್ರಿಯಗಳಿಗೆ ದೃಶ್ಯವಾದ ವಿಶ್ವರೂಪಕ್ಕಿಂತ ಅವಕ್ಕೆ ಅದೃಶ್ಯವಾದ, ಆದರೆ ಅರಿವಿಗೆ ದೃಶ್ಯವಾಗಬಹುದಾದ ವಿಶ್ವದ ವಿರಾಟ್‌ಸ್ವರೂಪ ಅದೆಂಥ ಬ್ರಹ್ಮವೋ! ಇದರಂತೆ ಕಿವಿಯಾಚೆ, ಕಿವಿಯ ಬುದ್ಧಿಯಾಚೆ ಶಬ್ದಬ್ರಹ್ಮದ ಅನಂತ ಸೀಮೆ. ಹಾಗೆಯೆ ನಾಲಗೆ ಮೂಗು ತೊವಲು ಕಾಣುವ ರಸ-ಗಂಧ-ಸ್ಪರ್ಶ ಪ್ರಪಂಚವನ್ನು ಮೀರಿ, ಇಲ್ಲಿಯೂ ಬುದ್ಧಿಯ ಮಾರುಗೋಲನ್ನು ಕಡೆಗಣಿಸಿ ಮೇರೆವರಿವ ವಿಶ್ವರಸ-ಗಂಧ-ಸ್ಪರ್ಶದ ಹೆಗ್ಗಡಲು ಏನಿದೆಯೋ? ಕಾಣುವ ವಿಶ್ವಕ್ಕಿಂತ ಕಾಣದ ವಿಶ್ವ ಎಷ್ಟು ದೊಡ್ಡದು? ಈ ಪ್ರಶ್ನೆಗೆ ಉತ್ತರ ವಿಜ್ಞಾನಿಯ ಬುದ್ಧಿಗಿಂತ ಮಾನವನ ಅರಿವಿನಲ್ಲಿ ಅವಿತಿದೆ ಎಂದು ಹೇಳಬಹುದು. ಕರಣೇಂದ್ರಿಯಗಳಿಗೆ ದೃಶ್ಯ-ಅದೃಶ್ಯವಾದ ವಿರಾಟ್ ವಿಶ್ವವನ್ನು ಕಂಡು ಕನವರಿಸುತ್ತಿರುವ ಮಾನವನ ಅರಿವು ಒಂದು ರೀತಿಯಲ್ಲಿ ವಿಶ್ವಕ್ಕಿಂತ ಅದ್ಭುತ.

ಮಾನವಕುಲಕೋಟಿಯಲ್ಲಿ ಸಮಷ್ಟಿಯಾಗಿರುವ ಅರಿವು. – ಅನಾದಿಕಾಲದಿಂದ ಸಂಗ್ರಹವಾಗಿರುವ, ಇಂದು ಸಂಗ್ರಹವಾಗುತ್ತಿರುವ ಅನೇಕ ದರ್ಶನ ಶಾಸ್ತ್ರ ಮತ

---

೧. My scientific table is mostly emptiness. Sparsely scattered in that emptiness are numerous electric charges rushing about with great speed; but their combined bulk amounts to less than a billionth of the bulk of the table itself . . . . . *The Nature of the Physical World, Introduction p. XII.*

ಪುರಾಣ ಇತಿಹಾಸ, ಇಂದಿನ ವಿಜ್ಞಾನ ಅದರ ಶಾಖೋಪಶಾಖೆ, ಕಲೆ ಧರ್ಮ ನೀತಿ ಮುಂತಾದವುಗಳಿಗೆ ಒಡೆಯನಾಗಿದೆ. ಆದರೂ ಅದು ವಿಶ್ವದಲ್ಲಿ ಅಲ್ಪಜ್ಞನಾಗಿ, ಅನೀಶನಾಗಿ, ಅಲ್ಪಸುಖಿಯಾಗಿ ಜಗತ್ತಿನಲ್ಲಿ ವ್ಯವಹರಿಸುತ್ತಿದೆ. ಕಾರಣವೇನು? ಬುದ್ಧಿಯ ಹಿರಿಯರಿಗೆ ಕಾರಣ ತಿಳಿಯದು. ಬುದ್ಧಿ ಇಲ್ಲದ ಅಥವಾ ಬುದ್ಧಿಗೆಟ್ಟ ಹಿರಿಯರ ಮಾತಂತೂ ಸರಿಯೇ. 'Our reason is only a feeble ray that has issued from Nature'[೧] ಎಂದು ಮಾರಿಸ್ ಮ್ಯಾಟರಲಿಂಕ್ ಹೇಳುವಂತೆ ಪ್ರಕೃತಿಯಿಂದ ಹೊಮ್ಮಿದ ಒಂದು ಅಬಲ ಕಿರಣ ಬುದ್ಧಿ, ಅರಿವಿನ ಅಂಶ ಈ ಬುದ್ಧಿ. ಆದರೆ ಈ ಅಂಶಕ್ಕೆ ಪೂರ್ಣವನ್ನು ಅಳೆವ ಸಾಮರ್ಥ್ಯವಿಲ್ಲ. ಕೊಳಗದಿಂದ ಆಕಾಶವನ್ನಳೆಯಲಾದೀತೆ? ಅಥವಾ ಈ ಬುದ್ಧಿಗೆ ವಿಶ್ವದ, ವಿಶ್ವವನ್ನು ಅಪ್ಪುವ ಅರಿವಿನ ನಿಜಸ್ವರೂಪವನ್ನು ನೋಡಬಲ್ಲ ಶಕ್ತಿಯಿಲ್ಲ.

ಆದರೆ 'ಯಃ ಪಶ್ಯತಿ ಸ ಪಶ್ಯತಿ'[೨] ಎಂಬ ಬಲ್ಲ ಹಿರಿಯರನ್ನು ಕೇಳಿದರೆ ಹೇಳುತ್ತಾರೆ ಅದರ ಕಾರಣವನ್ನು, – ಮಾನವಸ್ಥಲದ ಈ ಅರಿವು ಅರೆಗತ್ತಲೆ ಎಂದು. ಅಲ್ಪಜ್ಞಾನವಾಗಲಿ, ಅಜ್ಞಾನವಾಗಲಿ, ಸುಖದುಃಖವಾಗಲಿ ಸುಖದುಃಖವನರಿಯದ ತಮಂಧವೇ ಆಗಲಿ, ಅಲ್ಪಪ್ರಭುತ್ವವಾಗಲಿ ಅಪ್ರಭುತ್ವವೆ ಆಗಲಿ – ಅರಿವಿನ ಮಬ್ಬುಗತ್ತಲೆಯಲ್ಲಿ ಮೂಡುವ ಸಹಜಸಂಗತಿಗಳೆ. ದಾರಿ ತಪ್ಪುವುದು, ಎಡಹುವುದು, ಕುಳಿಯಲ್ಲಿ ಬೀಳುವುದು, ಬಂಡೆಗೆ ಹಾಯುವುದು – ಇವೇ ಮುಂತಾದುವು ಕತ್ತಲೆಯ ಸಹಜ ಭ್ರಮಣಗಳೆ. ಕತ್ತಲೆಯಲ್ಲಿ ತನಗೆ ತಾನೇ ಕಾಣುವುದಿಲ್ಲವೆಂದ ಬಳಿಕ ಇದಿರಿನ ಮಾತು ದೂರ ಉಳಿಯಿತು. ಹಾಗೆಯೆ ಮಾನವ ಸಹಜವಾದ ಅರಿವಿಗೆ – ಅಥವಾ ಅರಿವು ಮರವೆಗೆ – ತನ್ನ ನಿಜಸ್ಥಿತಿ ಕಂಡಿಲ್ಲ; ವಿಶ್ವದ ನಿಜರೂಪವೂ ಅದಕ್ಕೆ ತೋರಿಲ್ಲ.

ಕಂಗಳ ಮುಂದಣ ಕತ್ತಲೆ, – ಇದೇನೊ?
ಮನದ ಮುಂದಣ ಮರವೆ, – ಇದೇನೊ?
ಒಳಗಣ ರಣರಂಗ, ಹೊರಗಣ ಶೃಂಗಾರ,
ಬಳಕೆಗೆ ಬಂದ ಬಟ್ಟೆ, – ಇದೇನೊ ಗುಹೇಶ್ವರಾ?[೩]

ಕಂಗಳ ಮುಂದೆ ವಿರಾಟ್ ಸ್ವರೂಪದ ವಿಶ್ವಪ್ರಪಂಚ ಹರವಿದ್ದರೂ ಅದರ ನಿಜಾರ್ಥ, ಸತ್ಯಸ್ವರೂಪ, ಗಭೀರರಹಸ್ಯ, ನಿಶ್ಶಬ್ದ ನಿಶೆಯೆ. ಜಡವಾಗಿ ತೋರುವ ಅಣುವನ್ನು ಭೇದಿಸಿ ಚೈತನ್ಯವನ್ನು, ಈ ಚೈತನ್ಯವಿಹಾರಕ್ಕೆ ಇಂಬುಗೊಡುವ ಅಣ್ವಾಕಾಶವನ್ನು ಕಾಣುತ್ತಿರುವ ಅಣುವಿಜ್ಞಾನಿಗೆ ಅಣುವೆಲ್ಲ ಅದ್ಭುತ ರಾತ್ರಿಯೆ. ಅಣುವಿನಲ್ಲಿ ಚೈತನ್ಯ ವೇಕೆ? ಈ ಚೈತನ್ಯ ಜಡಚೈತನ್ಯವೆ? ವಿಶ್ವದ ಮಹಾಮನೆಯ ಕಟ್ಟಡದಲ್ಲಿ ಇಟ್ಟಿಗೆಯಂತಿರುವ ಅಣುಗಳಲ್ಲಿ ಪ್ರಾಣಚೈತನ್ಯ ಹುಟ್ಟಿತು ಹೇಗೆ? ಪ್ರಾಣದಲ್ಲಿ ಪ್ರಜ್ಞೆ

೧. **Wisdom and Destiny p. 15.**
೨. ಭ. ಗೀ. ಅ. ೫, ಶ್ಲೋ. ೫.
೩. ಪ್ರ. ಮ. ಪು. ೧೫೮, ವ. ೬.

(Consciousness) ಒಡಮೂಡಿದುದು ಹೇಗೆ? ಏಕೆ? ಆಕಾಶವೆಲ್ಲಿಂದ ಹುಟ್ಟಿತು? ಎಂದು ಏಕೆ ಹುಟ್ಟಿತು? ತಾರಾಗರ್ಭ, ನಕ್ಷತ್ರ-ಗ್ರಹಮಾಲಿಕೆಗಳು ಎಲ್ಲಿಂದ ಬಂದುವು? ಹೇಗೆ ರೂಪುಗೊಂಡುವು? ನಿಮಿಷದ ವಿಶ್ರಾಂತಿಯಿಲ್ಲದೆ ಏಕೆ ಭ್ರಮಿಸುತ್ತಿವೆ? ಚೈತನ್ಯಮಹಾಸಾಗರಗಳಂತಿದ್ದ ಈ ನಕ್ಷತ್ರಗಳಿಗೆ ಚೈತನ್ಯ ಕೊಟ್ಟವರಾರು? ಅನಂತ ಪ್ರಕಾಶವನ್ನು ತುಂಬಿದವರಾರು? ಭೂಮಿ ಪರ್ವತ ಸಮುದ್ರ ಮೋಡ ಮಿಂಚು ಗುಡುಗು ಮಳೆ ಗಾಳಿ ಇವೆಲ್ಲ ಮೊದಲು – ವಿಜ್ಞಾನಿಗಳು ಹೇಳುವಂತೆ ಸು. ೨,೦೦೦,೦೦೦,೦೦೦ ವರ್ಷಗಳ ಹಿಂದೆ ಸೂರ್ಯನಿಂದ ಭೂಮಿಯೆಂಬ ಕಣ ಸಿಡಿದು ಬೇರಾಗುವದಕ್ಕಿಂತ ಮೊದಲು – ಎಲ್ಲಿದ್ದುವು? ಕೋಟಿವರ್ಷ ಜ್ವಲಿಸಿ ಕ್ರಮೇಣ ತಂಪಾದ ಭೂಮಿಯಲ್ಲಿ ಪ್ರಾಣಕಣಗಳು ಮೂಡಿದುವು ಹೇಗೆ? ಮಣ್ಣಿನಲ್ಲಿ ಪ್ರಾಣ, ಪ್ರಾಣದಲ್ಲಿ ಅರಿವು ಎಲ್ಲಿಂದ ಬಂದಿರಬಹುದು? ಏಕೆ ಬಂದಿರಬಹುದು? ಸುತ್ತು ಮುತ್ತು ತೋರುವ ಕೇಳುವ ಒಂದೊಂದು ವಸ್ತುವಿನ ಬಳಿ ಹೋಗಿ 'ಇದೇನು? ಇದು ಹೇಗೆ? ಇದು ಏಕೆ?' ಎಂಬ ಪ್ರಶ್ನೆ ಕೇಳುತ್ತ ಹೋದರೆ ಪರಿಚಯದವರೆಲ್ಲ ಅಪರಿಚಿತ ರಾಗುತ್ತಾರೆ; ಪರದೇಶದವರಂತೆ ವರ್ತಿಸುತ್ತಾರೆ. ಪ್ರಹ್ಲಾದನಿಗೆ ಎಲ್ಲೆಡೆ ದೇವರು ತೋರುತ್ತಿದ್ದಂತೆ ಮಾನವನ ಕಂಗಳ ಹಿರಣ್ಯಕಶಿಪುವಿನ ಮುಂದೆ ಎಲ್ಲಿ ನೋಡಿದಲ್ಲಿ ನರಸಿಂಹ, – ಹಗಲುಗತ್ತಲೆ.[೧]

ಶ್ರೀ . . . , ಅವರ ಮನೆ ಎಲ್ಲಿದೆ? – ಎಂದು ನಾನು ಕೇಳಿದರೆ ನೀವು ಹೇಳುತ್ತೀರಿ ಅದೋ ಅಲ್ಲಿ ಎಂದು. ಆ 'ಅಲ್ಲಿ' ಇದ್ದಲ್ಲಿ ಇದೆಯೆ? ಅಥವಾ ತನ್ನ ಮೈಸುತ್ತು ಮತ್ತು ಸೂರ್ಯನ ಸುತ್ತು ತಿರುಗುತ್ತಿರುವ ಭೂಮಿಯೊಡನೆ ತಿರುಗುತ್ತಿದೆಯೆ? ನನಗೆ ನಿಮಗೆ 'ಅಲ್ಲಿ'ಯಾಗಿರುವ ಅದು ಆ ಮನೆಯವರಿಗೆ ಎಲ್ಲಿ? 'ಇಲ್ಲಿ' ಅಲ್ಲವೆ? ಮತ್ತು ನೀವು ಹೇಳುವ 'ಅಲ್ಲಿ' ನಿಜವಾಗಿ ಅಲ್ಲಿದೆಯೆ? ಅಥವಾ ನಿಮ್ಮ ಇಲ್ಲವೆ ನನ್ನ ತಲೆಯ ಲ್ಲಿದೆಯೆ? ಆಕಾಶವೇ ಪ್ರಜ್ಞಾಮಯ ಪುರುಷನಾದರೆ ಅಲ್ಲಿ, ಇಲ್ಲಿ, ಎಲ್ಲಿ ಎಂಬ ಭೇದ ಗಳುಳಿಯಬಹುದೆ? ಈ ನಿಮಿಷದಲ್ಲಿ ಬರೆಯುತ್ತಿದ್ದೇನೆ. ವಾಕ್ಯ ಮುಗಿಯಗೊಡದೆ 'ನಿಮಿಷ' ಹಾರಿಹೋಯಿತು. ಎಲ್ಲಿಗೆ? 'ಭೂತಕಾಲದ ಗಭೀರ ಗರ್ಭಕ್ಕೆ'. ಅಂದರೇನು? ಎಲ್ಲಿ ಅವಿತಿದೆ ಆ ಗರ್ಭ? ನನ್ನ ಹೊರಗೋ ಅಥವಾ ಒಳಗೋ? ನಿನ್ನೆ ಇಂದು ನಾಳೆಗಳ ಕಾಲಚಕ್ರ ಎಂದು ಪ್ರಾರಂಭವಾಯಿತು? ಕೋಟಿ ದಶಕೋಟಿ ಅಬ್ಜ . . . ಮಹಾಪದ್ಮ ವರ್ಷಗಳ ಹಿಂದೆಯೆ? ಅದರ ಹಿಂದೆ ಯಾವ ನಿಮಿಷ? ಅಥವಾ ಭವಿಷ್ಯ ಮಹಾಪದ್ಮಗಳ ಮುಂದೆ? ಹೀಗೆ ದೇಶ ಕಾಲವನ್ನಾವರಿಸಿರುವ ಕತ್ತಲೆಯಂತೆ ನಾನು,

---

೧. ನೋಡಿರಿ:

ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೋ?
ಬೆಳಗೂ ಅದೆ, ಕತ್ತಲೆಯೂ ಅದೆ; ಇದೇನು ಚೋದ್ಯವೋ?
ಒಂದಕ್ಕೊಂದಂಜದು.
ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು, ಬೆಱಗಾದೆನು ಕಾಣಾ ಗುಹೇಶ್ವರಾ.

ಅ. ವ. ಚಂ. ಪು. ೧೧೦, ವ. ೪೯೯.

'ನನ್ನ' ಶರೀರ ಪ್ರಾಣ ಇಂದ್ರಿಯ ಮನ ಬುದ್ಧಿ ಭಾವ – ಈ ನನ್ನಲ್ಲಿಯೂ ಕತ್ತಲೆಯೆ. ನನಗೆ ನಾನೇ ಕತ್ತಲೆಯಾಗಿದ್ದ ಬಳಿಕ, ನೀನು ಅವನು ಅದು ವಿಶ್ವದ ಗತಿ ಏನು?

> ಅವಿದ್ಯಾಯಾಮಂತರೇ ವರ್ತಮಾನಾಃ
> ಸ್ವಯಂಧೀರಾಃ ಪಂಡಿತಂಮನ್ಯಮಾನಾಃ
> ದಂದ್ರಮ್ಯಮಾಣಾಃ ಪರಿಯಂತಿ ಮೂಢಾಃ
> ಅಂಧೇನೈವ ನೀಯಮಾನಾ ಯಥಾಂಧಾಃ[೧]

ನಮ್ಮ ನಾಗರಿಕತೆ, ನಮ್ಮ ಸಂಸ್ಕೃತಿ, ನಮ್ಮ ವಿಜ್ಞಾನ, ನಮ್ಮ ಯಂತ್ರ-ತಂತ್ರ ಸೌಕರ್ಯ-ಸೌಲಭ್ಯ, ನಮ್ಮ ಭೋಗ ಭಾಗ್ಯ ನಮ್ಮ ವಿವಿಧವಿಲಾಸಗಳಲ್ಲಿ ನಿಮಗ್ನ ವಾಗಿರುವ ಮಾನವಜೀವನ ಹೊರಗೆ ಸುಧಾರಣೆ-ಶೃಂಗಾರ, ಒಳಗೆ ರಣರಂಗ, ತುಮುಲ ಯುದ್ಧ. ಇದೇ ಬಳಕೆಗೆ ಬಂದ ಬಟ್ಟೆ, ಬಲ್ಲವರು ಬೇರೆ ಬಟ್ಟೆಯನ್ನು, ಕಲ್ಯಾಣ ಮಾರ್ಗವನ್ನು ತೋರಿದರೆ, ನೂತನ ವಿಜ್ಞಾನಸಿದ್ಧಿಯಿಂದ ಬೀಗುತ್ತಿರುವ ಇಂದಿನ ಹೊಸ ಬುದ್ಧಿಗೆ ಸೊಗಸೀತೇ? ಹೊಸ ಯುಗದ ಹೊಸ ಬಟ್ಟೆ ಜನಸಾಮಾನ್ಯದ ಬಳಕೆಗೆ ಬಂದಿದೆ. ಇನ್ನೇನು? '... ಇದೇನು ಗುಹೇಶ್ವರಾ !' ಕತ್ತಲೆಯೆ ಹಗಲೆಂದರೆ, ರಣರಂಗವೆ ಶಾಂತಿಸಾಮ್ರಾಜ್ಯವೆಂದರೆ, ಅಪೂರ್ಣವಿದ್ಯೆಯೆ ಪರಿಪೂರ್ಣವೆಂದರೆ ಇನ್ನೇನು? ಇದೇನು !

---

೧. ಕಠ. ಉ., ಅ, ೧, ವ. ೨. ಮಂ. ೫.

೩

ಜಾಗರದಾಚೆ ಜಾಗರ

'And still there is a beyond.'

The life Divine Vol. I, p. 25.

'The ancient dawns of human knowledge have left us their witness to this constant aspiration; to-day we see a humanity satiated but not satisfied by victorious analysis of the externalities of Nature preparing to return to its primeval longings. The earliest formula of wisdom promises to be its last,—God, Light, Freedom, Immortality.'

The life Divine Vol. I, p. 2.

ಮಾನವನ ದೇಹ ಇಂದ್ರಿಯ ಕರಣ, ಅರಿವು ಇರವನ್ನು ಆವರಿಸಿದೆ ಕತ್ತಲೆ. ಈ ಕತ್ತಲೆಯೇ ಅಜ್ಞಾನ, ಅವಿದ್ಯೆ. ತನ್ನ ನಿಜರೂಪವನ್ನು, ತನ್ನ ನಿಜ ನಿರಾಳದಿರವನ್ನು ಮುಸುಕಿರುವ ಈ ಅಜ್ಞಾನ ತಿಮಿರದಾಚೆ ಬೆಳಗಿನ ಸೀಮೆ, 'ಮಾತು ಮನಂಗಳಿಂದತ್ತತ್ತ ಮೀರಿದ, ಸಾತಿಶಯದ ನಿರುಪಾಧಿಕ ನಿರ್ಮಲ'ವಾದ ಪರಂಜ್ಯೋತಿಯ ಸಾಮ್ರಾಜ್ಯ ಬೆಳಗುತ್ತಿದೆ ಎಂದು ಬಲ್ಲವರು ಹೇಳುತ್ತಾರೆ. ವಿಶ್ವಬೀಜವಾಗಿ ವಿಶ್ವವ್ಯಾಪಿಯಾಗಿ, ವಿಶ್ವಮುಖವಾಗಿ ವಿಶ್ವಗಂಭೀರವಾಗಿ ವಿಶ್ವೋನ್ನತವಾಗಿ ವಿಶ್ವಾತೀತವಾಗಿ, ವಿಶ್ವಲೀಲೆಯ ವಿಶ್ವಾನಂದದ ಸಾರಸಾಗರವಾಗಿ, ವಿಶ್ವಂಭರವಾಗಿರುವ ಮಹಾಬೆಳಗಿನಲ್ಲಿ ಮುಳುಗಿ ಬೆಳಗಾಗಿ ಬಾಳುವ ಮಹಾಂತರು ತಮ್ಮ ಮಹಾನುಭೂತಿಯ ಪರಮ ರಹಸ್ಯವನ್ನು ಕತ್ತಲೆಯ ಕೋಟಿಗೆ ಸಾರಿ ಸಾರಿ ಹೇಳಿದ್ದಾರೆ. ಆದರೆ ಅಜ್ಞಾನದ ಮಾಯಾನಿದ್ರೆಯಲ್ಲಿ ಮರೆದೊರಗಿರುವ ಮಾನವಕುಲಕ್ಕೆ ಕೇಳುವರೆ ಕಿವಿಯಿಲ್ಲ; ನೋಡುವರೆ ಕಣ್ಣಿಲ್ಲ.

ನಾನೆಂಬಹಂಕಾರ ತಲೆದೋಱಿದಲ್ಲಿ ಅಟಮಟ
ಕುಟಿಲ ಕುಹಕವೆಂಬ ಬಿಱುಗಾಳಿ ಹುಟ್ಟಿತ್ತು.
ಆ ಬಿಱುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು.
ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ
ಅಱುಹಿರಿಯರೆಲ್ಲರು ತಾಮಸಕ್ಕೊಳಗಾಗಿ ಸೀಮೆದಪ್ಪಿ
ಕೆಟ್ಟರು ಕಾಣಾ ಗುಹೇಶ್ವರಾ.[೧]

---

೧. ಲಿಂ. ಲೀ. ವಿ. ಚಾ. ಪು. ೬೧, ವ. ೧೦.

ಮಾನವನಿರುವುದು ಮಾಯೆಯ ಪಂಜರದೊಳಗೆ, ಅಹಂಭಾವದ ಅಜ್ಞಾನ ಸಮಾಧಿಯಲ್ಲಿ. ಇಲ್ಲಿ ಕೇಳುವುದು ಕಾಣುವುದು ಲೋಕ ಲೌಕಿಕವಷ್ಟೆ.

ನಾನೆಂಬುದೇನು? ಅಜ್ಞಾನವೆಂದರೇನು? ನಾನು ಮರೆದೊರಗಿರುವ ಮಾಯಾ ನಿದ್ರೆ, ಸಮಾಧಿ – ಅದೆಂಥದು? ನನಗೆ ಕಣ್ಣು ಕಿವಿ ಇದ್ದು 'ನೋಡುವರೆ ಕಣ್ಣಿಲ್ಲ. ಕೇಳುವರೆ ಕಿವಿ ಇಲ್ಲ' – ಎಂದು ನೀವು ಹೇಳುವುದೇಕೆ? ಬಲ್ಲವರು, ಮಹಾಂತರು – ಅವರೂ ನಮ್ಮಂತೆ ಇಲ್ಲವೆ? ಬೆಳಗಾಗಿ ಬಾಳುವುದು – ಇದನ್ನಂತೂ ನಾನು ಎಲ್ಲೆಲ್ಲಿಯೂ ಕಂಡಿಲ್ಲ. ಮೋಸಮಾಡುವ ಈ ಹೊಸ ಯುಕ್ತಿಯನ್ನು ಎಷ್ಟು ತಪಮಾಡಿ ಪಡೆದಿರಿ? – ನೀವು ಹೀಗೆ ಕೇಳುವುದು, ಹೇಳುವುದು ಯೋಗ್ಯ, ಸಹಜ, ಸ್ವಾಭಾವಿಕ.

ಯಾರು ನಾನು? – ಎಂಬ ಪ್ರಶ್ನೆಗೆ ಲೌಕಿಕ ದೃಷ್ಟಿಯಿಂದ ಉತ್ತರ ಕೊಡುವ ಕಾರಣವೇ ಇಲ್ಲ. ಆ ಪ್ರಶ್ನೆಯ ಉತ್ತರವನ್ನೇ ಮಾನವಕುಲವೆಲ್ಲ ಅಪರೋಕ್ಷವಾಗಿ ಅನುಭವಿಸುತ್ತಿದೆ. ಹಾಗಾದರೆ ನೀನಾರು ಎಂದು ಕೇಳುವಿರಾ? ನಾನು ಮೊದಲು ಕಲ್ಲಪ್ಪ. ಹೆಸರೇಕೋ ಚೆನ್ನಾಗಿಲ್ಲವೆಂದು ಹೆಸರು ಬದಲು ಮಾಡಿದೆ; ಈಗ ನಾನು ಕಲಾಕಾಂತ. ನಾನು ವೀರಶೈವ ಹತ್ತು ವರ್ಷಗಳ ಹಿಂದೆ. ಏನೋ ಸುದೈವ–ಅಥವಾ ದುರ್ದೈವ, 'ಜೇನ'ಳಲ್ಲಿ ಮನ ನಟ್ಟು ತಿರುಗಿ ಬರಲೇ ಇಲ್ಲ. ಲಗ್ನವಾಯಿತು. ಅದರೊಡನೆ ಭಿನ್ನವಾಯಿತು ನನ್ನ ವರ್ಣ. ಹೆಸರು ಬದಲಾದರೂ ನಾನು ನಾನೇ. ಮತ ಭಿನ್ನ ವಾಗಿದ್ದರೂ ನನಗೆ ನಾನು ಭಿನ್ನವಾಗಿಲ್ಲ. ಉದ್ಯೋಗ? ನಾವು ಒಕ್ಕಲ ಮಕ್ಕಳು. ಸಣ್ಣವನಿದ್ದಾಗ ನಾನು ಸಾಲೆಗೆ ಹೋಗುತ್ತಿದ್ದರೂ ಮೇಲಿನ ಕೆಲಸ ಮಾಡುತ್ತಾ ಇದ್ದೆ. ಮಾಡುವುದೆಲ್ಲಾ ಮಾಡಿ 'ಮ್ಯಾಟ್ರಿಕ್ ಆದೆ.' ಕಾಲೇಜದ ಕಟ್ಟೆ ಹತ್ತಿದೆ. ಆದರೆ ಕಾಲೇಜ ಮಾತ್ರ ನನಗೆ ಎಷ್ಟೂ ಹತ್ತಲಿಲ್ಲ. ಕಾರಕೂನ ಆದೆ. ಏನೋ ಆರೋಪ ಹೊರಿಸಿ ನೌಕರಿ ತೆಗದರು. ಈಗ ವ್ಯಾಪಾರ ಧಂದೆ. ಒಕ್ಕಲುತನ ನೌಕರಿ ವ್ಯಾಪಾರ ಮಾಡಿದರೂ. ಸಣ್ಣವನೇ ದೊಡ್ಡವನಾಗಿದ್ದರೂ, ಕಲಿತು ಮೂಢನಾಗಿದ್ದರೂ ನಾನು ಮಾತ್ರ ನಾನೇ ಆಗಿ ಉಳಿದಿದ್ದೇನೆ – ದೇವರ ಕೃಪೆಯಿಂದ.

ಮತ್ತೆ ನೀನಾರು? ಒಳ್ಳೇ ಪ್ರಶ್ನೆ ! ಕಾಣುವುದಿಲ್ಲವೇ ಮೂರುವರೆ ಮೊಳ ದೇಹ. ಕೈಕಾಲು, ಕಣ್ಣು ಮೂಗು? ಉಸುರಾಡಿಸುತ್ತಿದ್ದೇನೆ; ನನಗೂ ಮನಸ್ಸು. ಬುದ್ಧಿ ಇದೆ. ಇಲ್ಲವಾದರೆ ನಿಮ್ಮ ಪ್ರಶ್ನೆ ನನಗೆ ಹೇಗೆ ತಿಳಿಯಬೇಕು? ನಿಮಗೆ ಉತ್ತರ ಕೊಡುತ್ತಿರುವ ನಾನು ನಾನೇ. ಶೀತ ಉಷ್ಣ, ಸುಖ ದುಃಖ, ಕಾಮ ಕ್ರೋಧ, ಮಾನ ಅಪಮಾನ, ವಾರ್ತೆ ಕೀರ್ತಿ, ರೋಗ ರುಜಿನ, ಸಂಪತ್ತು ಬಡತನ, ವಿದ್ಯೆ ಮೂಢತನ – ಇವನ್ನು, ಇನ್ನೂ ಹಲವನ್ನು ಕಂಡು ಉಂಡು ಅನುಭವಿಸುವ ಮೂರ್ತಿ ನಾನೇ. ಇದೆಲ್ಲ ನಿಮಗೆ ಕಾಣಲಿಕ್ಕಿಲ್ಲ. ಅದು ನನಗೇ ಗೊತ್ತು. ನೀವೂ ಹೀಗೆಯೆ ಅನುಭವಿಸುತ್ತಿರಬೇಕು. ಅದು ನಿಮಗೇ ಗೊತ್ತು.

ಮತ್ತೆ ನೀನಾರು? ವಿಚಿತ್ರ ಪ್ರಶ್ನೆ ! ಆದರೂ ನನಗೆ ತಿಳಿದ ಮಟ್ಟಿಗೆ ಹೇಳುವದ ನ್ನೆಲ್ಲ ಹೇಳಿಬಿಡುತ್ತೇನೆ: ಇದು ನನ್ನ ಹೊಸ ಮನೆ, ನಮ್ಮ ಹಿರಿಯರಿಂದ ಬಂದ ಮನೆ – ಅಕೋ ಆಚೆ ಕಡೆಯದು, ಸಾವಕಾರ ನಿಂಗಪ್ಪ ಮೋಸಮಾಡಿ ಬರೆಸಿಕೊಂಡು ಎತ್ತಿ ಹಾಕಿದ.

ನಾನು ಹೋದರೂ ಬಿಡುತ್ತಿದ್ದಿಲ್ಲ. ಮಾನ-ಮರ್ಯಾದೆಗೆ ಹೆದರಿದೆ. ಕೈಬಿಟ್ಟಿತು ನಮ್ಮ ಹಿರಿಯರ ಮನೆ. ಮನೆ ನನ್ನ ಕೈ ಬಿಟ್ಟರೂ ಆದರ ಕೈ ಬಿಟ್ಟಿಲ್ಲ ನಾನು. ಇದೋ ಇವಳೇ ನನ್ನ ಹೆಂಡತಿ – ಅಂದರೆ ನನ್ನ ಅರ್ಧಾಂಗಿ. ಇವರೇ ನನ್ನ ಮಕ್ಕಳು – ಅಂದರೆ ನನ್ನ ಗಿರ್ಧಾಂಗಗಳು. ಅಕೋ ಅಲ್ಲಿ ಕಾಣುವ ಕೆರೆಯ ಕೆಳಗಿನದೇ ನನ್ನ ಹೊಲ. ಹಣ ಸ್ವಲ್ಪ ಗಳಿಸಿದ್ದೇನೆ. ಬಂಧುಬಳಗದವರು ಇಷ್ಟರು ಮಿತ್ರರು ಸಾಕಷ್ಟು ಇದ್ದಾರೆ ನನಗೆ. ನಿಮ್ಮ 'ನೀನಾರು' ಪ್ರಶ್ನೆಗೆ 'ನನ್ನ, ನನಗೆ' ಎಂಬ ಉತ್ತರ ಸರಿಯಾಗಿಲ್ಲವೆಂದು ತಿಳಿಯ ಬೇಡಿ. ಮನೆ-ಮಾರು, ಹೆಂಡತಿ-ಮಕ್ಕಳು, ಆಪ್ತೇಷ್ಟರು – ಮುಂತಾದುವೆಲ್ಲ ನಾನೆಂಬ ವೃಕ್ಷ ವಿವಿಧರೂಪವಾಗಿ, ವಿಲಕ್ಷಣವಾಗಿ ಪಸರಿಸಿರುವ ನನ್ನ ಶಾಖೆಗಳೇ. ಇದರಂತೆ ನನ್ನ ದೇಶ ಭಾಷೆ ಜನಾಂಗ. ನಾನು ಇಂದ್ರಿಯಮುಖವಾಗಿ ಮಾಡುತ್ತಿರುವ, ಅನುಭವಿ ಸುತ್ತಿರುವ ಪ್ರಪಂಚವೆಲ್ಲ ನನ್ನ ಶಾಖೆ ಉಪಶಾಖೆಗಳೆ.

ಇವಕ್ಕೆಲ್ಲ ಮೂಲ ಬೊಡ್ಡೆಯಂತಿರುವ ನನ್ನ ಪ್ರಾಣರಸ ಈ ಶಾಖೋಪಶಾಖೆ ಗಳಲ್ಲಿ, ಎಲೆ ಹೂ ಕಾಯಿ ಹಣ್ಣುಗಳಲ್ಲಿ ಹರಿದಿದೆ. ಎಲೆಗೆ ಧಕ್ಕೆಯಾದರೆ ಮರಕ್ಕೆ ನೊವು; ಟೊಂಗೆ ಟೊಂಗೆ ಪಲ್ಲವಿಸಿ, ಹೂತು ಕಾತು ಹಣ್ಣಾದರೆ ಮರಕ್ಕೆ ಆನಂದ. ಹೆಂಡತಿಗೆ ತಲೆ ನೋವಾದರೆ, ನನಗೆ ಮೊದಲು ಅಮೃತಾಂಜನ ಬೇಕು. ಹೊಲದ ಬೆಳೆ ಸೊಂಪಾಗಿದ್ದರೆ ನಾನೇ ಹೊಗರೇರಿ ಹೊಡೆಯಾಗಿ ನಿಂತಂತೆ. 'ಎಲ್ಲಿ ನೋಡಿದಡಲ್ಲಿ ನೀನೆ ದೇವಾ' – ಎಂದು ನೀವು ಹೇಳಿದರೆ, ನಾನು ಕಾಣುತ್ತಿರುವುದು 'ಎಲ್ಲಿ ನೋಡಿದ ಡಲ್ಲಿ ನಾನೆ ದೇವ.' ನಿಮಗೆ ಬೇಕಾದರೆ ಈ ದೇವನ ಚಿತ್ರವನ್ನು ಹೀಗೆ ರೂಪಿಸಿಕೊಳ್ಳಿ: ನಿಮಗೆ ಕಾಣದ ನನ್ನ ಬುದ್ಧಿ ಭಾವ ಸುಖ ದುಃಖ ಮುಂತಾದ ನಾನು ನನ್ನ ಅಂತರಂಗ; ನಿಮಗೆ ಕಾಣುತ್ತಿರುವ ನನ್ನ ದೇಹ ಕರ್ಮ-ಜ್ಞಾನೇಂದ್ರಿಯಾದಿ ನಾನು ನನ್ನ ಬಹಿರಂಗ; ಈ ನನಗೆ ಹೊರಗಾಗಿ ನಿಮಗೆ ತೋರುತ್ತಿರುವ ಹೆಂಡತಿ ಮಕ್ಕಳು, ಮನೆಮಾರು ಮುಂತಾದ ನಾನು ಸರ್ವಾಂಗ. ಈ ಅಂತರಂಗ ಬಹಿರಂಗ ಸರ್ವಾಂಗದ ಸಂಘಾತವೆ ಪೂರ್ಣ ನಾನು. ನಿಮ್ಮ ಕಥೆಯಾದರೂ ಇಷ್ಟೇ ಇರಬಹುದಲ್ಲವೆ?

ಅರಸು-ನಾನು, ಮಂತ್ರಿ-ನಾನು, ಅಧಿಕಾರಿ-ನಾನು, ನೌಕರ-ನಾನು, ವ್ಯಾಪಾರಿ-ನಾನು, ಒಕ್ಕಲಿಗ-ನಾನು, ಶ್ರೀಮಂತ-ನಾನು, ಬಡವ-ನಾನು, ಕವಿ-ನಾನು, ಭಕ್ತ-ನಾನು, ಬ್ರಾಹ್ಮಣ-ನಾನು, ಬೌದ್ಧ-ನಾನು, ವಿಜ್ಞಾನಿ-ನಾನು, ತತ್ವಜ್ಞಾನಿ-ನಾನು, ಹೆಣ್ಣು-ನಾನು, ಗಂಡು-ನಾನು, . , . , – ಎಂಬೀ ನಾನುಗಳು ಕೋಟಿರೂಪವಾಗಿ ತೋರುತ್ತಿದ್ದರೂ, ವರ್ತಿಸುತ್ತಿದ್ದರೂ ಚೌಕಟ್ಟು ಮಾತ್ರ ಒಂದೇ–ಅದೇ ಅಹಂಭಾವದ ಚೌಕಟ್ಟು. ಒಂದರ್ಥ ದಲ್ಲಿ ಹೇಳುವುದಾದರೆ 'ದೇವನೊಬ್ಬ, ನಾಮ ಹಲವು.'

ಅಹಂಭಾವ, ಅಹಂಕಾರ, ಹಮ್ಮು ಎಂದು ಹೇಳಿಸಿಕೊಳ್ಳುವ ಈ ನಾನಿನ ಮೂಲಾಧಾರ, ಜನ್ಮಭೂಮಿಯೆ ಆತ್ಮ. ಈ ಆತ್ಮನ ಚಿತ್-ಚೈತನ್ಯ (Conscious Energy), ಅಂದರೆ ಅರಿವಿನ ಚೈತನ್ಯದಿಂದಲೆ ಅಹಂಭಾವಕ್ಕೆ ಅಹಂಕರಿಸುವ ಗುಣವಿದೆ; ಬುದ್ಧಿ ವಿಚಾರ ಮಾಡುತ್ತದೆ; ಮನ ಸಂಕಲ್ಪವಿಕಲ್ಪಗಳಲ್ಲಿ ಸಂಚಲಿಸುತ್ತದೆ. ನೋಡುವ ಕಣ್ಣು ಕೇಳುವ ಕಿವಿಗೆ ಅರಿವಿನ ಚೈತನ್ಯ ಅವಶ್ಯ. ನುಡಿವ ನಾಲಗೆ ಹಿಡಿವ ಕೈಗೂ ಈ

ಚಿಚ್ಚೈತನ್ಯ ಆತ್ಮಗತ್ಯ. ಕರ್ಮೇಂದ್ರಿಯಗಳ ವ್ಯಾಪಾರ ಕ್ರಿಯಾಚೈತನ್ಯವೆಂದು ತೋರಿದರೂ, ಈ ಕ್ರಿಯೆಯಲ್ಲಿ ಅರಿವು ಸದಾ ಸನ್ನಿಹಿತ. ಕ್ರಿಯಾಶಕ್ತಿ ನಿಜವಾಗಿ ಜ್ಞಾನಶಕ್ತಿಯ ಸಂತತಿ. ಆತ್ಮನ ಈ ಚಿತ್‌ಚೈತನ್ಯದ ಮಂದಪ್ರಕಾಶದಲ್ಲಿಯೆ ನಡೆದಿದೆ ಮಾನವ ಜೀವನದ ತುದಿ ಮೊದಲಿಲ್ಲದ ನಾಟಕ. ನಿತ್ಯ ನೂತನವಾದ, ನಿತ್ಯ ರಮ್ಯವಾದ ಈ ನಾಟಕದ ಮೂಲಸೂತ್ರವಾದ ಆತ್ಮರುಗಳ ಸ್ವರೂಪವೇನು? ಸಾವಧಾನ! ಸ್ವಲ್ಪ ಸಾವಕಾಶ! ಆತ್ಮರು ಅಂದರೆ ಅನೇಕಾತ್ಮರು ಎಂದರ್ಥ; ಅನ್ಯೋನ್ಯ ಭಿನ್ನವಾಗಿರುವ ಆತ್ಮರೆಂದೂ ಅರ್ಥ. ಅವರೇ ಜೀವಾತ್ಮರು. ಅವರನ್ನೇ ನಾವು ಸಾಮಾನ್ಯವಾಗಿ ಮಾನವ, ಮನುಷ್ಯರೆಂದು ಕರೆವುದು. ಆದರೆ ಈ ಆತ್ಮರುಗಳ ಸಂಖ್ಯೆ 'ಅಣುಕೋಟಿ.'[೧] ಅಂದರೆ ಮಾನವಕೋಟಿಯೊಂದಕ್ಕೇ 'ಆತ್ಮ'ವೆಂದು ತಿಳಿದುಕೊಂಡಿದ್ದರೆ ಅದು ತಪ್ಪು.

ಜೀವಾತ್ಮರು ಹಲವರಾಗಿ ತೋರುವುದು ಅಜ್ಞಾನದ ಅರೆಗತ್ತಲೆಯಲ್ಲಿ, ಮಾಯೆ ನೆಯ್ದಿರುವ ದ್ವೈತಜಾಲದಲ್ಲಿ. ಆಕಾಶದಂತೆ ವಿಭುವಾಗಿರುವ ಆತ್ಮ ಅ-ಪರಿಚ್ಛಿನ್ನ, ಅ-ಖಂಡ. ಪರಿಚ್ಛಿನ್ನವಾಗಿ ಹಲವಾಗಿ ಕಂಡರೆ ಹಾಗೆ ಕಾಣುವುದು ದೋಷದೃಷ್ಟಿ – ಅದೇ ಮಿಥ್ಯಾದೃಷ್ಟಿ. ಭಿನ್ನ ದೃಷ್ಟಿ. ಮಠದ ಆಕಾಶಕ್ಕೆ ಮಠದ ಆಕಾರ, ಘಟದ ಆಕಾಶಕ್ಕೆ ಘಟದ ಆಕಾರ. ಚೆಂಡಿನಲ್ಲಿರುವ ಆಕಾಶ ದುಂಡಗಿದ್ದರೆ. ಪೆಟ್ಟಿಗೆಯ ಆಕಾಶ ತಾನು ಚೌಕ ಎಂದು ಹೇಳುತ್ತದೆ. ಹೀಗಲ್ಲ, ಆಕಾಶಕ್ಕೆ ಆಕಾರವೇ ಇಲ್ಲವೆಂದು ಹೇಳಿದರೆ ನಮ್ಮ ಹುಡುಗ ಸಿಟ್ಟಿಗೇಳುತ್ತಾನೆ. ಕೊಪ್ಪರಿಗೆ ಚೌಕ ದುಂಡಗೆ, ಸೇರು ಚಟಾಕು ಸೊಲಗೆಯಾಕಾರ ಪ್ರತ್ಯಕ್ಷ ಕಣ್ಣಿಗೆ ಕಾಣುತ್ತಿರುವಾಗ, ಅಲ್ಲಲ್ಲಿ ಬೇರೆ ಬೇರೆ ಆಕಾರ ಸ್ವತಃ ಸಿದ್ಧವಾಗಿರುವಾಗ. ಮಠ ಗಡಿಗೆ ಸೇರು ಪಡಿ ಹರವಿ ಹಂಡೆ – ಎಲ್ಲಾ ಒಂದೇ, ನಿರಾಕಾರ ಎಂದು ಹೇಳಿದರೆ ಧೃತರಾಷ್ಟ್ರರು ಒಪ್ಪಬೇಕು, ಅಷ್ಟೇ! – ಎಂದು ನನಗೆ ಬುದ್ಧಿ ಹೇಳಿ ನಗುತ್ತಾನೆ. ನನ್ನ ಕಣ್ಣಿನಲ್ಲಿ ನನಗೆ ವಿಶ್ವಾಸವಿದೆ ನಿಜ; ಆದರೆ ನಮ್ಮ ಹುಡುಗನಿಗೆ ನನಗಿಂತ ನೂರು ಪಟ್ಟು ಹೆಚ್ಚು ತೀಕ್ಷ್ಣ ವಿಶ್ವಾಸವಿದೆ ತನ್ನ ಕಣ್ಣಿಲ್ಲಿ.

ಇಲ್ಲಿ ತಪ್ಪು ಯಾರದು? ನಿಜವಾಗಿ ನೋಡಿದರೆ ಇಬ್ಬರದೂ ತಪ್ಪಲ್ಲ. ತನಗೆ ಕಂಡ ಪ್ರತ್ಯಕ್ಷ ಅನುಭವ ನಮ್ಮ ಹುಡುಗ ಹೇಳುತ್ತಾನೆ; ನನ್ನದು ನಾನು ಹೇಳುತ್ತೇನೆ. ಈಗ ಹಗಲು ಎಂದು ನಾನು ಹೇಳಿದರೆ, ಈಗ ರಾತ್ರಿ ಎಂದು ಪ್ರತಿಭಟಿಸುತ್ತಾನೆ ಅಮೇರಿಕಾದ ವಿಲ್ಸನ್. ಗೋಲವಾದ ಭೂಮಿಯ ಮೇಲೆ ನಾನು ತಲೆ ಮೇಲಾಗಿ ನಡೆವುದು ನಿಜವಿದ್ದರೆ, ವಿಲ್ಸನ್ ತಲೆ ಕೆಳಗಾಗಿ ನಡೆವುದು ಅಷ್ಟೇ ನಿಜ. ಆದರೆ ಆತ ಒಪ್ಪಬಹುದೆ? ತನ್ನ ಅನುಭವವಲ್ಲದುದನ್ನು ಆತನೇಕೆ ಒಪ್ಪಬೇಕು? ನಾಲ್ಕು ಮೂರು. ಏಳು ಎಂದು ನಾನು ಹೇಳುತ್ತೇನೆ. ಈ ಏಳು ಅಂದರೆ ಒಂದು ಎಂದು ಹೇಳುತ್ತಾನೆ ನ್ಯೂಟನ್. – ಹೀಗೆ ಪರಸ್ಪರ ವಿರೋಧವೆನಿಸುವ ಮತ, ಅಭಿಪ್ರಾಯಗಳಿಗೆ ಕಾರಣ. ಅವರವರ ಅನುಭವ. ಇಂಥ ಅಭಿಪ್ರಾಯಗಳಲ್ಲಿ ಅದು ತಪ್ಪು ಇದು ಒಪ್ಪು ಎಂದು ಅಂತಿಮ

---

೧. ಶೂ. ಸಂ. ಪು. ೪, ಪ್ರ.
ಈ ಪಜ್ಞಾತು 'ಅನಂತಕೋಟಿ ಬ್ರಹ್ಮಾಂಡಂಗಳಿ'ಗೆ ಅನ್ವಯವಾಗುತ್ತದೆ ಎಂಬುದನ್ನು ಲಕ್ಷ್ಯದಲ್ಲಿಟ್ಟಿರಬೇಕು.

ನಿರ್ಧಾರಕ್ಕೆ ಬರುವದಕ್ಕಿಂತ ಆಯಾ ಅಭಿಪ್ರಾಯಗಳ ಹಿಂದಿರುವ ಅನುಭವಗಳನ್ನು ನಿರ್ವಿಕಾರ ಬುದ್ಧಿಯಿಂದ ಪರಿತಃ ಈಕ್ಷಿಸಬೇಕು, ನಿರ್ಮಲ ಭಾವದಿಂದ ತಿಳಿದು ನೋಡಬೇಕು. ನನಗೆ ಅದು ಮೀರಿದರೆ ಬಲ್ಲವರನ್ನು ಕೇಳಿ, ತಿಳಿದುಕೊಳ್ಳಬೇಕು.

ಅದೋ ಕೇಳಿ, ಆತ್ಮರುಗಳ ಮತ್ತು ಆತ್ಮನ ನಿಜಸ್ವರೂಪವನ್ನು, ನಿಜಸಂಬಂಧವನ್ನು ಕಬ್ಬುದಲ್ಲಿ ಬೆಳಗಿಸಿ ಹಾಡುವ ಸ್ವತಂತ್ರ ಸಿದ್ಧಲಿಂಗೇಶ್ವರನ ಗಂಭೀರ ವಚನವನ್ನು:

೧ ಘಟ ಮಠೋಪಾಧಿಯೊಡನೆ ಕೂಡಿ ಆಕಾಶವಿದ್ದಿತ್ತೆಂದಡೆ, ಆ ಘಟ ಮಠದಂತೆ ಖಂಡಿತವಹುದೇ ಅಖಂಡ ಬಯಲು? ಪಿಂಡದೊಳಗಾತ್ಮನಿದ್ದನೆಂದಡೆ, ಆ ಪಿಂಡದಂತೆ ಖಂಡಿತನಹನೆ ಪರಿಪೂರ್ಣ, ಪರಂಜ್ಯೋತಿ, ಪರಮಾತ್ಮನು? ಷಟ್‌ತ್ರಿಂಶತ್ ತತ್ವಗಳಿಂದ ಕೂಡಿದ ಜ್ಞಾನಪಿಂಡದೊಳಗೆ, ಹೃದಯಕಮಲ ಸಿಂಹಾಸನದ ಮೇಲೆ ಮೂರ್ತಿಗೊಂಡಿದ್ದನಯ್ಯಾ, ಜಲದೊಳಗೆ ಹೊಳೆವಾಸ(?)ದಂತೆ, ಮನದೊಳಗೆ ಮನರೂಪನಾಗಿ ಬೆಳಗುತ್ತಿದ್ದನಯ್ಯಾ ಪರಶಿವನು. ಇಂತಾದ ಕಾರಣ ಸಪ್ತಧಾತು ಸಹಿತವಾದ ಶರಣನ ಕಾಯವೇ ಕೈಲಾಸವಾಯಿತ್ತು, ಮನವೇ ಸಿಂಹಾಸನವಾಯಿತ್ತು – ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಂಗೆ[೧]

ಮತ್ತೆ ಕೇಳಿ ಆತ್ಮದ್ರಷ್ಟಾರರ ಆತ್ಮಾನುಭಾವಗಳನ್ನು:

೨ 'ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಾಽಸ್ಯ ಜಂತೋರ್ನಿಹಿತಂ ಗುಹಾಯಾಂ
ತಮಕ್ರತುಃ ಪಶ್ಯತಿ ವೀತಶೋಕೋ
ಧಾತುಃ ಪ್ರಸಾದಾನ್ಮಹಿಮಾನಮಾತ್ಮನಃ
. . . .
ಅಶರೀರಂ ಶರೀರೇಷು ಅನವಸ್ಥೇಷು ಅವಸ್ಥಿತಂ
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ[೨]

೩ ಏಷ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ[೩]

೪ ಏಕ ಏವಾತ್ಮಾ ಮಂತವ್ಯೋ ಜಾಗ್ರತ್ ಸ್ವಪ್ನ ಸುಷುಪ್ತಿಷು
ಸ್ಥಾನತ್ರಯಾದ್ ವ್ಯತೀತಸ್ಯ ಪುನರ್ಜನ್ಮ ನ ವಿದ್ಯತೇ
ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ
ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್
ಘಟಸಂಭೃತಮಾಕಾಶಂ ಲೀಯಮಾನೇ ಘಟೇ ಯಥಾ
ಘಟೋ ಲೀಯೇತ ನಾಕಾಶಂ ತದ್ವಜ್ಜೀವೋ ಘಟೋಪಮಃ[೪]

---

೧. ಸ್ವ. ಸಿ. ವ. ಪು. ೯೫, ವ. ೩೭೦.
೨. ಕಠ. ಉ., ಅ. ೧, ವ. ೨, ಮಂ. ೨೧.
೩. ಅದೇ. ಅ. ೧, ವ. ೩, ಮಂ. ೧೨.
೪. ಬ್ರ. ಉ., ಮಂ. ೧೧-೧೨.

> ೫ ಅಂತು ಸತ್ತು ಚಿತ್ತಾನಂದ ನಿತ್ಯವನುಳ್ಳ ಪರಶಿವನು ಲೀಲೆಯಿಂದ ತನ್ನ ಚಿಚ್ಚೈತನ್ಯಾಂಶಕಲೆಯೊಂದ ಬೇರ್ಪಡಿಸೆ ಆತ್ಮನಾಯಿತ್ತು ....[1]

> ೬ .... ಅಂತು ಮಹಾಘನವಸ್ತು ಲೀಲೆಯಿಂದ ತಾನೇ ಲಿಂಗಮೂರ್ತಿಯಾಯಿತ್ತು. ತನ್ನ ತದಂಶವಪ್ಪ ಚಿಚ್ಚೈತನ್ಯಕಲೆಯೊಂದ ಬೇರ್ಪಡಿಸಿ ಆ ಚಿಚ್ಚೈತನ್ಯಕ್ಕೆ ಮಿಥ್ಯಾ ಮಾಯಾಸಂಬಂಧಮಂ ಮಾಡೆ ಗುಣತ್ರಯ ಸಂಬಂಧಿಯಾಗಿ ನಾನಾತ್ವವನ್ನೈದಿ ಪರಿಚ್ಛಿನ್ನಾತ್ಮರಾಗಿ, ದೇಹೋಹಮೆಂದು ಜೀವರಾಗಿ ತಮ್ಮ ನಿಜವ ಮಱೆದು ಪರಿಭವದ ಬಂಧನದಲ್ಲಿ ಸಿಕ್ಕಿ ತಾಪತ್ರಯಂಗಳಲ್ಲಿ ನೋವುತ್ತಿರ್ದ ಜೀವಿಗಳು ....[2]

ಘಟ ಖಂಡಿತ, ಮಠ ಖಂಡಿತ, – ಇದೂ ಸಂಶಯ – ಆದರೆ ಬಯಲು ಖಂಡಿತವೇ? ಒಂದು ಸೇರು ಬಯಲನ್ನು ಕಡಿದು ತುಂಡುಮಾಡಿ ನನಗೆ ಕೊಡಬಲ್ಲಿರಾ? ಮಾನಗಳಿಗೆಲ್ಲ ಪ್ರಮಾಣವಾದ ಬಯಲಿಗೆ ಮತ್ತೆ ಮಾನವೆಂಬುದುಂಟೆ? 'ಚಿನ್ನವನೊರೆಯಬಹುದಲ್ಲದೆ ಬಣ್ಣವನೊರೆಯಬಹುದೆ?' ಪಿಂಡ ಪಿಂಡದೊಳಗೆ, ದೇಹ ದೇಹದೊಳಗೆ, ಸರ್ವಭೂತಗಳಲ್ಲಿ ಚಿಚ್ಚೈತನ್ಯನಾದ, ಚಿದಾಕಾಶನಾದ ಚಿತ್‌ಪ್ರಕಾಶನಾದ ಆತ್ಮ ಇದ್ದಾನೆ. ನನ್ನ ದೇಹ ನಿಮ್ಮ ದೇಹ ಖಂಡಿತ, – ಇದೂ ಸಂಶಯ – ಆದರೆ ಆತ್ಮನ ನಿಜದಿರವಾದ ಪರಿಪೂರ್ಣ ಪರಂಜ್ಯೋತಿಯನ್ನು ಖಂಡಿಸುವ ಶಕ್ತಿ ನನಗಿಲ್ಲ, ನಿಮಗಿಲ್ಲ. ಜಡ, ಭೌತಿಕ ಆಕಾಶವನ್ನೇ ಖಂಡಿತಗೊಳಿಸುವ ಶಕ್ತಿಯಿಲ್ಲ ನಮಗೆ. ಈ ಆಕಾಶಕ್ಕೇ ತೆರಹುಗುಡುವ ಚಿದಾಕಾಶವನ್ನು ನಮ್ಮ ಉಳಿ ಮುಟ್ಟಬಲ್ಲುದೇ? ಅದರಂತೆ ನನ್ನ ಅಥವಾ ನಿಮ್ಮ ದೇಹ – ಅಷ್ಟೇ ಏಕೆ, ಅಮೀಬಾದಿಂದ ಬ್ರಹ್ಮ ವಿಷ್ಣು ರುದ್ರಾದಿಗಳ ದೇಹ ಪ್ರಾಣ ಮನ ಬುದ್ಧಿ ಅಹಂಭಾವಗಳು ಪರಂಜ್ಯೋತಿಯಾದ ಪರಿಪೂರ್ಣವನ್ನು ಖಂಡಿತಗೊಳಿಸಲರಿಯವು. ಅಖಂಡಿತವನ್ನು ಖಂಡಿಸುವುದೆಂತು? ಆತ್ಮನ ಅಂತರಂಗವಾದ ಪರಮಾತ್ಮನಲ್ಲಿ, ಈ ನಿತ್ಯ ಪರಿಪೂರ್ಣದಲ್ಲಿ ಕೋಟಿ ಪೃಥ್ವಿ ಸೂರ್ಯ ಚಂದ್ರ ನಕ್ಷತ್ರಗಳು ಮೂಡಲಿ. ಮೂಡಿದರೇನು? ಆ ಪರಿಪೂರ್ಣ ಮತ್ತೆ ಬಚ್ಚಬರಿಯ ಪರಿಪೂರ್ಣವೆ. ಇದು ಹೇಗೆ ಎನ್ನುವಿರಾ? ಅದೋ ಕಿವಿಗೊಟ್ಟು ಕೇಳಿ, ದಿವ್ಯಾನುಭಾವದ ಭವ್ಯಮಂತ್ರವನ್ನು:

> ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
> ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ[3]

ಈ ಗಣಿತ ನನ್ನ ತಲೆಗೆ ಹತ್ತುವುದಿಲ್ಲ. ನಿಮ್ಮಂತೆಯೇ ನನ್ನ ತಲೆಗೆ. ಆದರೆ ತಲೆಯ ಗಣಿತ ಅಲ್ಲ ಈ ಪೂರ್ಣ. ೦+೦=೦, ೦ – ೦=೦,—ಈ ಅಂಕಗಣಿತ ಗೊತ್ತಿದೆಯೆ? 'ಪರಿಪೂರ್ಣ' ಗಣಿತದ ಸ್ವಲ್ಪ ಹೋಲಿಕೆ ಇದೆ ಈ ಅಂಕಗಣಿತದಲ್ಲಿ. ಮತ್ತೆ ೦×೦=೦, ೦ ÷ ೦ = ಅನಂತ – ಇಲ್ಲಿಯೂ ಏನಾದರೂ ಹೋಲಿಕೆಯಿದ್ದರೆ ನೀವೇ ನೋಡಿಕೊಳ್ಳಿ.

---

೧. ಲಿ. ಲೀ. ವಿ. ಚಾ. ಪು. ೫೨, ವ. ೧೧ ಟೀ.

೨. ಲಿ. ಲೀ. ವಿ. ಚಾ. ಪು. ೫೧, ವ. ೧೦ ಟೀ.

೩. ಈಶಾವಾಸ್ಯ ಉಪನಿಷತ್ತಿನ ಪ್ರಾರಂಭದಲ್ಲಿ ಬರುವ ಶಾಂತಿಪಾಠ.

ನನ್ನ ಆತ್ಮ ಮತ್ತೂ ನಿಮ್ಮ ಆತ್ಮ. ಅಂದರೆ ನನ್ನ ನಿಮ್ಮಲ್ಲಿರುವ ಒಂದು ಆತ್ಮ. ಅದು ಅ-ಖಂಡಿತ, ಪರಿಪೂರ್ಣ. ಅದು ಚಿಚ್ಛೈತನ್ಯಾತ್ಮಕವಾದ ಚಿದಾಕಾಶ, ಅಂದರೆ ಅರಿವ ಬಯಲು ಅಥವಾ ಚಿದ್‌ಬಯಲು. ನನ್ನಲ್ಲಿದ್ದು ಅ-ಪರಿಚ್ಛಿನ್ನವಾಗಿ, ಅ-ಖಂಡಿತ ವಾಗಿ, ನಿಮ್ಮಲ್ಲಿಯೂ ಅಂತೆ ಆಗಿದ್ದು, 'ಒಂದೆ ಆಗಿದ್ದು' ಈ ಆತ್ಮ ಅಂದರೆ ಈ ಚಿದ್ ಬಯ್ಲಲು ತನಗೆ ತಾನು ಕಾಣದಿರುವುದೇಕೆ? ನಿಮ್ಮ ಅರಿವು ನನಗೆ ಕಾಣಲಿಲ್ಲ; ನನ್ನ ಅರಿವು ನಿಮಗೆ ಕಂಡಂತೆ ನನಗೆ ತೋರುವುದಿಲ್ಲ. ಅಲ್ಲವೇ? ಅಷ್ಟೇಕೆ? ನಿಮ್ಮ ವಿಚಾರದ ಗಾಡಿ ನನಗೆ ಕತ್ತಲೆ. ನನ್ನ ವಿಚಾರದ ಲಹರಿಗಳು ನಿಮಗೇನೋ! ಅದು ನನಗೆ ಗೊತ್ತಿಲ್ಲ . . . ನಿಜ, ನೀವು ಹೇಳುತ್ತಿರುವುದು ದಿಟ, ದಿಟ. ಆದರೆ ಒಂದು ಪ್ರಶ್ನೆ. ನನ್ನ ಅರಿವನ್ನು ನೋಡಬಯಸುವ ನಿಮ್ಮ ಅರಿವು ಕುಳಿತಿರುವುದೆಲ್ಲಿ? ಈ ಮೊದಲು ನಾವು ನೋಡಿರುವ ಜೀವಾತ್ಮನ 'ಅಹಂಭಾವ'ದ ಚೌಕಟ್ಟಿನಲ್ಲಿ ಅಲ್ಲವೆ? ಈ ಚೌಕಟ್ಟನ್ನು ಕೊರೆದು ಅಲ್ಲಿ ನಿಮ್ಮನ್ನು ಹೊಂದಿಕೆ ಮಾಡಿ ಕುಳ್ಳಿರಿಸಿರುವ ಶಕ್ತಿ ಪ್ರಕೃತಿ, ಮಾಯೆ. ಈ ಶಕ್ತಿಯನ್ನು ಮೀರುವ ಶಕ್ತಿ ನಿಮಗಿಲ್ಲ, ನನಗಿಲ್ಲ. ಅದೇಕೆ? ಸುರ ನರ ಉರಗ ದಾನವ ಮಾನವ ಮನು ಮುನಿಗಳಿಗಿಲ್ಲ. ಅರಿವಿನಿಂದ ನಾನನ್ನು. ನನ್ನಿಂದ ಮಾಯಾಪ್ರಕೃತಿಯನ್ನು ಕಿತ್ತೊಗೆವುದು ಅಸದಳ, ಅಸಾಧ್ಯವಲ್ಲದಿದ್ದರೂ ಸುದುಸ್ಸಾಧ್ಯ. ಈ ಮಾತಿಗೆ ನಿಮಗೆ ಪ್ರತ್ಯಕ್ಷ ಪ್ರಮಾಣ ಬೇಕಿದ್ದರೆ ನಮ್ಮ ಮನೆಗೆ ಬನ್ನಿ, ತೋರಿಸುತ್ತೇನೆ.

ನಾನು ಗಾಢವಾಗಿ ನಿದ್ರಿಸುತ್ತಿದ್ದೇನೆ. ನನ್ನ ಬದಿ ನೀವು ಕುಳಿತು: 'ನೀನು ಕಲ್ಲಪ್ಪ – ಅಲ್ಲ, ಕಲಾಕಾಂತ. ನಿನ್ನ ಹೆಂಡತಿ ಜೇನ್. ನಿನ್ನ ಹೊಲ ಮನೆ ಇವು . . .' ಎಂದು ಮುಂತಾಗಿ ನನ್ನ ಸಂಗತಿ ನನಗೇ ಹೇಳಿದರೂ ಅದನ್ನು ನಾನು ನಂಬಬಹುದೇ? ಮಲಗುವಾಗ ನಾನೂ ಕಿವಿ ತೆರೆದಿಟ್ಟೇ ಮಲಗಿಕೊಳ್ಳುತ್ತೇನೆ. ಆದರೂ ನಿಮ್ಮ ಮಾತು ನನಗೆ ಕೇಳಬಹುದೇ? ನಿದ್ರೆಯ ನನ್ನ ಈ ಅರಿವಿನ ಸ್ಥಲದಲ್ಲಿ ನೀವು ಕತ್ತಲೆ. ನಿಮ್ಮ ಮಾತು ಕತ್ತಲೆ. ನೀವೇ ಕತ್ತಲೆಯಾಗಿರುವಾಗ ನಿಮ್ಮ ಮಾತನ್ನು ನಂಬುವ ಪ್ರಶ್ನೆ ಎಲ್ಲಿಂದ ಬಂತು? ಅರಿವಿನ ಈ ಗಾಢಾಂಧಕಾರದಲ್ಲಿ ನನ್ನ ದೇಹ ಪ್ರಾಣಾದಿ, ನನ್ನ ಹೆಂಡತಿ ಮಕ್ಕಳು ಮುಂತಾಗಿ ಏನೂ ಕಾಣುವುದಿಲ್ಲ ನನಗೆ. ಇಷ್ಟೇ ಏಕೆ, ನನಗೆ ನಾನೇ ಕತ್ತಲೆ, ಕಾಣುವುದಿಲ್ಲ. ಈ ನಿದ್ರಾವಸ್ಥೆಯ ಅರಿವಿನ ತಮಸ್ಸಿನಲ್ಲಿ 'ನಾನು' ಎಲ್ಲಿ ಮಾಯವಾಗಿರುವೆನೋ ಏನೋ? ಒಂದು ಗಳಿಗೆಯ ಮೇಲೆ ನಾನು ಕನವರಿಸುತ್ತಿದ್ದೇನೆ. ನನಗೆ ಕನಸು – ದುಸ್ಸ್ವಪ್ನ: ಮೋಟಾರದಲ್ಲಿ ಕುಳಿತು ನನ್ನ ಅರ್ಧಾಂಗಿಯೊಡನೆ ಬೆಂಗ ಳೂರಿಗೆ ಪ್ರವಾಸ – ವೇಗದಲ್ಲಿ ಟ್ರಕ್ಕಿಗೆ ಅಪ್ಪಳಿಸಿದ ಮೋಟಾರಕ್ಕೆ ಅಪಘಾತ. ಜೇನ್‌ಳ ಕಾಲು ಮುರಿದಿದೆ, ನನ್ನ ತಲೆ ಒಡೆದಿದೆ. ಒಂದೇ ಸವನೆ ರಕ್ತಸ್ರಾವ. ಕತ್ತಲೆ ಕವಿಯುತ್ತಿದೆ. ಕತ್ತಲೆಯ ರಕ್ಕಸರಂತಿದ್ದ ಕಳ್ಳರು, ಮನ ಬಂದಂತೆ ಪ್ರಯಾಣಿಕರನ್ನು ಥಳಿಸುತ್ತಿದ್ದಾರೆ. ನನ್ನ ಕಡೆ ಒಂದು ಕರಾಳಕಾಲ. ಬಡಿಗೆ ಎತ್ತಿ ತೂರಿದಾಗಲೆ ಚೀರಿದೆ, ಎಚ್ಚತ್ತೆ. ಕನಸಿನಲ್ಲಿ ನಾನು ನನ್ನ ಮನೆಯಲ್ಲಿ ಮಲಗಿರಲಿಲ್ಲ. ನೀವು ನನ್ನ ಬದಿಯಲ್ಲಿ ಕುಳಿತಿರಲಿಲ್ಲ. ಮೋಟಾರಿನ ಪ್ರವಾಸವೇ ಸತ್ಯ. ಅಪಘಾತ ನೀವು ನನ್ನೆದಿರು ಕುಳಿತಿರುವಷ್ಟು ಗಟ್ಟಿ. ಹೆಂಡತಿಯ ಕಾಲು ಮುರಿದುದು, ನನ್ನ ತಲೆಯೊಡೆದುದು, ರಕ್ಕಸಗಳ್ಳರ ಕರಾಳ ಆಕೃತಿ,

ಕೃತಿ – ಇವೇ ನಡೆದ ಸಂಗತಿ, ನಾನು ಇಲ್ಲಿ ಮಲಗಿ ಕನಸು ಕಂಡುದು – ಅದೇ ನಡೆಯದ ಸಂಗತಿ. ಕನಸಿನಲ್ಲಿ ಕನಸೇ ಸತ್ಯ, ಕಣಸೇ ಅಸತ್ಯ. ಎಚ್ಚತ್ತ ಮೇಲೆ, ಈಗ ನಾನು ನಾನು, ನೀವು ನೀವು. ನನ್ನ ತಲೆ ಭದ್ರವಾಗಿದೆ. ನನ್ನ ಹೆಂಡತಿಯ ಕಾಲು ಸುರಕ್ಷಿತವಾಗಿದೆ. ಎಲ್ಲಾ 'ಬರೋಬರಿ' ಅದೆ.

'ಸ್ಥೂಲ ತನುವಿನ ಜಾಗ್ರ ಸ್ವಪ್ನದ
ಕಾಲದಲಿ ಹುಸಿ ಸೂಕ್ಷ್ಮ ತನುವಿಗೆ
ಮೇಲೆ ಕಾರಣ ತನುವಿನಲ್ಲಿ ಸುಷುಪ್ತಿ ಪಸರಿಸಲು ।
ಬೀಳು ಬಿದ್ದುವು ಜಾಗ್ರ ಸ್ವಪ್ನಗ-
ಳಾಳುತಿಹುದಿವನೊಂದೆ ಮನವಾ-
ಕಾಳುಮನವೊಂದಳಿದುದಾದರೆ ನಿತ್ಯರಹರೆಂದ' ॥[೧]

ನಾನು ಮಲಗಿದರೆ ವಿಶ್ವವೆ ಮಲಗುತ್ತದೆ; ನಾನು ಕನಸು ಕಂಡರೆ ನಾನಿರುವುದು ಕನಸಿನ ವಿಶ್ವದಲ್ಲಿ; ನಾನು ಎಚ್ಚತ್ತು ಕಾಣುವ ಈ ವಿಶ್ವದ ಭಾವನೆ ಆಲ್ಲಿಲ್ಲ. ಮೂರು ನಾನು, ಮತ್ತು ನನ್ನೊಡನೆ ಮಲಗಿ ಏಳುತ್ತಿರುವ ಮೂರು ವಿಶ್ವಗಳಲ್ಲಿ ಯಾವುದು ಸತ್ಯ, ನೀವೇ ಹೇಳಿ. ಒಂದೊಂದು 'ನಾನು' ಅವಸ್ಥಾತ್ರಯಕ್ಕನುಗುಣವಾಗಿ ಕುಳಿತುಕೊಳ್ಳುವ ಒಂದೊಂದು ವಿಶ್ವದ ಪೆಟ್ಟಿಗೆಯಿಂದ ನನ್ನನ್ನು ಹೊರಗೆ ತೆಗೆವುದು ಅಥವಾ ಆ ಪೆಟ್ಟಿಗೆ ಯನ್ನೊಡೆವುದು ನಿಮ್ಮ 'ಕುವ್ವತ್ತ'ಲ್ಲ. ಹರಿಹರಬ್ರಹ್ಮಾದಿಗಳಿಗೂ ಅಸಾಧ್ಯ! ಅಂದಮೇಲೆ ಪಾಪ ನಿಮ್ಮ ಪಾಡೇನು? ಈ ಸಂದರ್ಭದಲ್ಲಿ ಒಂದು ರುದ್ರ ಸುಂದರ ಘಟನೆಯನ್ನು ನಿಮ್ಮ ಮುಂದಿಡುತ್ತೇನೆ: ನಮ್ಮೂರಲ್ಲಿ ಹಿಂದೆ ಆಡಿದ ಒಂದು ದೊಡ್ಡಾಟ – 'ಮಹಿಷಾಸುರಮರ್ದಿನಿ.' ರುದ್ರಪ್ಪ ದೇವಿಯ 'ಪಾರ್ಟು,' ಭೀಮಣ್ಣ ಮಹಿಷಾಸುರ. ಒಳ್ಳೇ ರಭಸದಿಂದ, 'ಹಲ, ಹಲಲಲಲಲಲಲಲ'ಗಳಿಂದ ಬ್ರಹ್ಮಾಂಡ ಕಟಾಹವೇ ಬಿರಿಯುತ್ತ ಆಟ 'ರಂಗಿ'ಗೇರಿತು. ಯುದ್ಧದ ಆರ್ಭಟದಲ್ಲಿ ದೇವಿಯ 'ಪಾರ್ಟು ಮಾಡುವ ರುದ್ರಪ್ಪ' ಮಾಯವಾದ. ಉಳಿದವಳು ಚಾಮುಂಡಿ, ಮಹಾಕಾಳಿ, ದೇವಿ ಮಾತ್ರ. ದೇವಿ ಅಸುರನನ್ನೆತ್ತಿ ಕೆಳಗಿಕ್ಕರಿಸುವಾಗ ಅಸುರ ಒದರಿದ: 'ಎಲೇ ನಾನೋಲೇ ಭೀಮ....' ಕೆಳಗೆ ಬೀಳುವಷ್ಟರಲ್ಲಿ ದೇವಿಯ ದಿವ್ಯಾಸ್ತ್ರದಿಂದ ಅಸುರ ಸಂಹಾರವಾಯ್ತು! ಮಹಿಷಾಸುರಮರ್ದಿನಿಯ ಮರ್ದನೆ ಹಿಂದುಗಡೆ ಕೂಡಿದವರೆಲ್ಲ ಮಾಡಿದರು.

— ರುದ್ರಪ್ಪ ತನ್ನಲ್ಲಿ ದೇವಿಯನ್ನು ಆರೋಪ ಮಾಡಿಕೊಂಡು ತನ್ನ ಮರೆದು ನಿಜವಾಗಿ ದೇವಿಯಾದ. ದೇವಿಗೆ ಆಟ ಯುದ್ಧವಾಯ್ತು. ಅಸುರನ ಮರೆಯ ಪಾಪ! ಭೀಮಣ್ಣ ಆಕೆಗೆ ಕಾಣಿಸಲಿಲ್ಲ. ಪರಿಣಾಮ – ಭಿಮಣ್ಣನ ಇಹಲೋಕಯಾತ್ರೆ ಅಂದೇ ಸಮಾಪ್ತವಾಯ್ತು. – ಆರೋಪಿತವಾದ ಅರಿವಿನ ಅಹಂಭಾವದಲ್ಲಿ ಈ ರಭಸವಿದ್ದ ಮೇಲೆ ಒಡಹುಟ್ಟಿ, ಒಡನಾಡಿ ಒಡನೆ ಬೆಳೆದಿರುವ ಜೀವಾತ್ಮನ ಅಹಂಭಾವ, ಆತನಿರುವ

೧. ಪ್ರ. ಲೀ. ಗ. ೨೪, ಪ. ೮.

ವಿಶ್ವ ಎಷ್ಟು ಘಟ್ಟಿ ಇರಬಹುದು? ಅಹಂಭಾವದ ಚೌಕಟ್ಟಿನಲ್ಲಿ ಬಿಚ್ಚಬಾರದಂತೆ ಒಂದಾಗಿ ಹೊಂದಿಕೊಂಡು, ತನ್ನ ವಿಶ್ವದ ಪೆಟ್ಟಿಗೆಯಲ್ಲಿರುವ ಮಾನವನಿಗೆ ಬಯಲು ದೇಹಿಗಳು ಬಂದು, 'ಔ ಪೂರ್ಣಮದಃ ಪೂರ್ಣಮಿದಂ . . .' 'ಅಣುವಿಗೆ ಅಣು, ಮಹತ್ತಿಗೆ ಮಹತ್ತು . . .' ಅನಂತ ದೇಹಗಳ ಅಂತರಾಳದಲ್ಲಿ ನಿಗೂಢವಾಗಿರುವ, ಮಹಾಂತ ವಿಭುವಾಗಿರುವ, ಅವಸ್ಥಾತ್ರಯಗಳನ್ನು ಮೀರಿ ನಿರವಸ್ಥೆಯಲ್ಲಿ ನಿಂದಿರುವ, ಕಾಯವೇ ಕೈಲಾಸವಾಗಿ, ಮನವೇ ಸಿಂಹಾಸನವಾಗಿ ಮೇಲೆ ಬೆಳಗುವ ಪರಿಪೂರ್ಣ ಪರಂಜ್ಯೋತಿಯನ್ನು 'ಇದು ನಿನ್ನ ಗಂಭೀರ ಸತ್ಯ' 'ಇದೇ ನೀನು' 'ತತ್ ತ್ವಮ್ ಅಸಿ' ಎಂದು ಹೇಳಿದರೆ ಆತನಿಗೆ ಕೇಳಬೇಕೇನು? ಕಾಣಬೇಕೇನು? ತನಗೆ ತಿಳಿಯದ ಅದು ಅಸತ್ಯ, ತನಗೆ ತಿಳಿವ ಇದುವೇ ಸತ್ಯ.[೧]

ದೇವಿಯ ದೊಡ್ಡಾಟದಂತಿದೆ ಮಾನವನ ವ್ಯವಹಾರ, ಆತನ ಸಂಸಾರ. ಚಿದಂಶಿಕ ನಾದ ಆತ್ಮ ತಾನೇ ಜೀವನೆಂದು ತಾನೇ ಪ್ರಕೃತಿಪಿಂಡವೆಂದು, ತನ್ನ ನಿಜವ ತಾ ಮರೆದು ಇರುವುದೇ ಅಜ್ಞಾನ. ಮಲಗಿರುವ ಎಚ್ಚರ ಇದು. ತನ್ನ ಜಾಗ್ರದವಸ್ಥೆಯೆ ತಾನಿರಬಲ್ಲ ಚರಮಾವಸ್ಥೆ, ಅದೇ ಪರಮಾವಸ್ಥೆಯೆಂಬ 'ಅಜ್ಞಭಾವ'ದಲ್ಲಿ ಎಚ್ಚತ್ತು ನಿತ್ಯ ನಿರಂತರ ನಿದ್ರಿಸುತ್ತಿದ್ದಾನೆ ಮಾನವ. 'ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ' ಯಾರಿಗೆ? 'ಪಶ್ಯತೋ ಮುನೇಃ.' ಸುಪ್ತಿಯಲ್ಲಿ ಸ್ವಪ್ನ ಜಾಗರವು ಕಾಣುವುದಿಲ್ಲ. ಸ್ವಪ್ನದಲ್ಲಿ ಸುಪ್ತಿ ಜಾಗರ ಕಾಣುವುದಿಲ್ಲ. ಆದರೆ ಜಾಗರದಲ್ಲಿ ಸ್ವಪ್ನ ಸುಪ್ತಿಗಳ ಸ್ವರೂಪ ವೇದ್ಯವಾಗುತ್ತದೆ. ಇದರಂತೆ ಜಾಗರದಾಚೆ ಜಾಗರವಾಗುವುದು ಮನುಷ್ಯ ಕಾಣದ ಜಾಗರ. ಆದರೆ ಈ ಅತಿ-ಜಾಗ್ರದವಸ್ಥೆ 'ಪಶ್ಯತೋ ಮುನಿ'ಗೆ ಸಹಜ. ಅಂತೆಯೇ ಈತ ನೋಡಬಲ್ಲ ಭೂತಜಾತದ ಜಾಗ್ರದವಸ್ಥೆಯ ನಿಶೆಯನ್ನು. ಆದರೆ ನಿಜಾವಸ್ಥೆಯಲ್ಲಿ ಎಚ್ಚರವಾಗಿರುವ ಮುನಿ ಜಾಗ್ರದವಸ್ಥೆಯ ಭೂತಜಾತಕ್ಕೆ – 'ಇದು ಕತ್ತಲೆ, ನೀವು ನಿದ್ರಿಸುತ್ತಿದ್ದೀರಿ' ಎಂದು ಹೇಳಿದರೆ ಅವರು ಹೇಗೆ ನಂಬಬೇಕು? ನಂಬದಿರುವುದು ಅವರ ತಪ್ಪಲ್ಲ, ಅದು ಅವರು ವಾಸಮಾಡುತ್ತಿರುವ ಅಜ್ಞಾನಸ್ಥಲದ ಶಕ್ತಿದೋಷ.

ಹಿಂದೆ ಹೇಳಿದ 'ನಾನೆಂಬಹಂಕಾರ ತಲೆದೋಱಿದಲ್ಲಿ . . . .' ಎಂಬ ಪ್ರಭುದೇವರ ವಚನವನ್ನು ಹೀಗೆ ಅರ್ಥಯಿಸಿದ್ದಾರೆ ಕಲ್ಲುಮಠದ ಪ್ರಭುದೇವರು:

'ಮಹಾಲಿಂಗವು ತನ್ನ ನಿಜವ ತಾನೆ ಅಱಿವುತ್ತಿರ್ದು, ತಾನೆ ಘನವೆಂಬ ಚಿತ್ತು ವೊಮ್ಮೆ ತೋಱಲು, ಆ ತೋಱಿದ ಚಿದಹಂಕಾರದಲ್ಲಿ ಲೀಲೆದೋಱಿ ಲಿಂಗವು ಸಾಕಾರ ವಾಗುತ್ತವೆ ತನ್ನ ನಿಜಚಿತ್ತಿನಲ್ಲಿ ತಾನುಳಿದು, ತನ್ನ ಮಹದಹಂಕಾರದ ಚಿತ್ತುವ ಬೇರ್ಪಡಿಸೆ, ಆ ಚಿತ್ತು ಆತ್ಮನಾಯಿತ್ತು. ಆಯಾತ್ಮಂಗೆ ನಾನೆಂಬ ಅಹಂಭಾವ ತಲೆ ದೋಱಲು, ಆ ತೋಱಿದ ಅಹಂಭಾವದ ಭ್ರಾಂತಿಯೆ ಅಜ್ಞಾನವಾಗಿ, ಅಂಗ ಮನ ಕರಣಂ ಗಳೆಂಬ ಮಾಯಾಕುಟಿಲ ಸಂಬಂಧಿಸಿತ್ತೆಂಬುದೀಗ 'ನಾನೆಂಬ ಅಹಂಕಾರ ತಲೆದೋಱಿದಲ್ಲಿ

---

೧. ಇಲ್ಲಿ ರ. ಠಾಕೂರ ಅವರು ಹೇಳುವ ವನದ ಹಕ್ಕಿ ಮತ್ತು ಮನೆಯ ಹಕ್ಕಿ ಎಂಬ 'The Gardener' ದಲ್ಲಿರುವ ಕಥೆ ನೋಡಿರಿ. (p. 14, Poem 6.)

ಅಟಮಟ ಕುಟಿಲ ಕುಹಕಮೆಂಬ ಬಿಱುಗಾಳಿ ಹುಟ್ಟಿತ್ತು' ಎಂಬ ಶಬ್ದಕ್ಕರ್ಥ. ಅಂತು ಆತ್ಮಂಗೆ ಅಹಂಭಾವದಿಂದ ಮಾಯಾತನು-ಕರಣ ಸಂಬಂಧವಾದಲ್ಲಿ ತನ್ನ ನಿಜದ ಸಮ್ಯಗ್‌ಜ್ಞಾನವಿಲ್ಲದೆ ಹೋಯಿತ್ತೆಂಬುದೀಗ 'ಬಿಱುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತೆಂ'ಬ ಶಬ್ದಕ್ಕರ್ಥ. ಅಂತು ಆತ್ಮಂಗೆ ಸಮ್ಯಗ್‌ಜ್ಞಾನವಿಲ್ಲದೆ ಹೋದಲ್ಲಿ ತನ್ನ ಶಿವತತ್ತ್ವದ ನಿಜವ ತಪ್ಪಿ ಕೆಟ್ಟು ತಾನು ಆಗಮ ಶಾಸ್ತ್ರಜ್ಞಾನಂಗಳಿಂದ ತನ್ನ ನಿಜವ ನಱಿದು ಕೂಡಬಲ್ಲೆನೆಂಬ ಶ್ರುತಜ್ಞಾನಿಗಳೆಲ್ಲಾ ಮಱವೆಗೊಳಗಾಗಿ ಹೊಲಬುದಪ್ಪಿ ಕೆಟ್ಟರು ಎಂಬುದೀಗ ಈ ವಚನದ ಅಪರಾರ್ಧದರ್ಥ.'[೧]

ಮೊದಲು ಮಹಾಲಿಂಗ ಪರಶಿವ ಪರಮಾತ್ಮ, ಪರಬ್ರಹ್ಮವೆನಿಸುವ ಸಚ್ಚಿದಾನಂದ ನಿತ್ಯಪರಿಪೂರ್ಣದ ಚಿದಂಶವೆ ಆತ್ಮ. ಅಹಂಭಾವದ ಸ್ಪರ್ಶವಿಲ್ಲದ ಈ ಆತ್ಮನಲ್ಲಿ ಚಿಜ್ಜ್ಯೋತಿ, ಜ್ಞಾನಜ್ಯೋತಿ ಉದಯಾಸ್ತಮಾನಗಳಿಲ್ಲದೆ ಬೆಳಗುತ್ತಿದೆ. ಈ ಅರಿವಿನ ಬೆಳಗು ತನ್ನ ನಿಜದಿರವಾದ ಪರಿಪೂರ್ಣವನ್ನೆ ಅರಿಯುತ್ತಿದೆ. ಇಲ್ಲಿ ಇರವೆಲ್ಲ (ಸತ್, Existence) ಅರಿವು. ಅರಿವೆಲ್ಲ (ಚಿತ್, Consciousness) ಆನಂದ (Bliss). ಈ ಇರವು-ಅರಿವು-ಆನಂದವೆಲ್ಲ ಮಹಾಬೆಳಗು. ಅಹಂಭಾವದ ಲೇಪವಿಲ್ಲದ ಶುದ್ಧಾತ್ಮನಲ್ಲಿ ಅ-ಜ್ಞಾನ, ಅಂಧಕಾರದ ಮಾತೇ ಇಲ್ಲ. ಆದರೆ ಆತ್ಮನಲ್ಲಿ, ಚಿದಹಂಕಾರದ ನೆಳಲಾದ ಅಹಂಭಾವ ತಲೆದೋರಿದಾಗಳೆ ಮನೋವಿಕಾರವೆಂಬ[೨] ಬಿರುಗಾಳಿ ಬೀಸಿ ಆತ್ಮನ ಸ್ವಯಂಜ್ಞಾನದ ಜ್ಯೋತಿಯನ್ನು ನಂದಿಸಿ ಭ್ರಾಂತಿಯಾಗಿ ನಿಲ್ಲುತ್ತದೆ. ಈ ಅಜ್ಞಾನ ಭ್ರಾಂತಿಯ ಕಾಲಪ್ರಭಾವದಿಂದಲೆ ಆತ್ಮನಿಗೆ ಕಾಯದ ಜೀವದ ಹೊಲಿಗೆ, ಹೃದಯಗ್ರಂಥಿ ಬಿಚ್ಚಬಾರದಂತೆ ಹುರಿಗೊಂಡು ನಿಲ್ಲುತ್ತದೆ. ಮತ್ತೆ ಕಳೆಗೊಂಡು ನಾನು – ಮಾನವನ ಶಾಖೋಪಶಾಖೆಗಳಲ್ಲಿ ಹಬ್ಬಿ ಹೊಗರೇರುತ್ತದೆ. ಜ್ಞಾನಶೂನ್ಯವಾದ ಮಾನವನ ಅಂತರಂಗದ ಪರಮಾತ್ಮನೆಲ್ಲ ಕತ್ತಲೆಯಾಗಿ, ಜೀವೋಹಂಭಾವದ ಮಾನವ ಇದ್ದಬಿದ್ದ ಕತ್ತಲೆಯ ಬೆಳಗಿನಲ್ಲಿ ಹೊರಗೆ ಹೊಗರೇರಿ ತಾನೇ ಬ್ರಹ್ಮವಾಗಿ ಬೆಳೆಯುತ್ತ ನಡೆಯುತ್ತಾನೆ. ಅಹಂಭಾವದ ಅಜ್ಞಾನ ಭ್ರಾಂತಿಯಿಂದಲೆ ಜೀವಾತ್ಮನಿಗೆ–ಮಾನವನಿಗೆ ದೇಹೇಂದ್ರಿಯ ಕರಣಾದಿಗಳು, ಅವಕ್ಕೆ ಪೋಷಕವಾದ ಹೆಂಡತಿ ಮಕ್ಕಳು, ಧನ ಧಾನ್ಯ, ಮನೆ ಮಾರು ಮುಂತಾದುವು ಒಳ್ಳೇ ಗಟ್ಟಿಯಾಗಿ ಲೆಪ್ಪವಾಗಿವೆ. ಆತನ ಸಂಸಾರ ಸುರಕ್ಷಿತ ನಡೆದಿದೆ.

---

೧. ಲಿಂ. ಲೀ. ವಿ. ಚಾ. ಪು. ೬೧, ವ. ೧೦ ಟೀ.

೨. 'ಮನ ಬೀಸರವೆಂಬ ಗಾಳಿ ಬೀಸಿತ್ತು. ವಿದ್ಯಾಮುಖದ ಜ್ಯೋತಿ ನಂದಿತ್ತು. ಕತ್ತಲೆಯಲ್ಲಿ ಗತಿಯ ಕಾಣದೆ ದುಮ್ಮಾನ ನೆಲೆಗೊಂಡಿತ್ತು ನೋಡಾ! ಸುಮ್ಮಾನ ಹೋಯಿತ್ತು ....'
ಪ್ರ. ವ. ಪು ೮೯, ವ. ೧೫೩

ಟೀ—ಮನವಿಕಾರವೆಂಬ ಗಾಳಿ ಬೀಸಲು ಜ್ಞಾನಜ್ಯೋತಿ ನಂದಿತ್ತು. ಜ್ಞಾನಜ್ಯೋತಿ ನಂದಿದ ಕಾರಣ ಅಜ್ಞಾನದಲ್ಲಿ ನಡೆವ. (?) ಪಥ ಕಾಣಬಾರದಾಯಿತ್ತು. ಕಾಣಬಾರದ ಕಾರಣ ದುಮ್ಮಾನವೆ ಮುಖವಾಯಿತ್ತು. ದುಮ್ಮಾನವೆ ಮುಖವಾದ ಕಾರಣ ಸಮ್ಮಾನ ಹೋಯಿತ್ತು.
ಪ್ರ. ವ. ಪು. ೮೯, ವ. ೧೫೩ ಟೀ

೧ **ಪರಶಿವನ ಚಿಚ್ಚೈತನ್ಯಾಂಶ ಕಲೆಯಪ್ಪ ಆತ್ಮನು ಅಹಂ ಮಮತೆಯನೆಯ್ದಿಪ್ಪುದೆ ಮರವು.**[೧]

೨ **ದೇಹ ಕರಣಂಗಳಲ್ಲಿ ಅಹಂಮಮತೆಯನೆಯ್ದಿಪ್ಪ ಅಜ್ಞಾನದೊಳಗಿರ್ದ ಆತ್ಮನೇ ಜೀವ.**[೨]

೩ **ಆತ್ಮನು ತನ್ನ ನಿಜವ ಮರೆದು ದೇಹೋಹಮೆಂದು ದೇಹಸಂಸಾರ ಸಂಬಂಧಿಯಾದ.**[೩]

೪ **ಅಜ್ಞಾನದಿಂದ ಭ್ರಮೆಗೊಂಡು . . . . ತಿರುಗುತ್ತಿಪ್ಪ ಜೀವನಿಗೆ ತಾನು ಶಿವನೆಂಬ ನಿಜದರಿವು ತಲೆದೋರದು.**[೪]

೫ **ಪರಮಂಗೆ ಪ್ರಕೃತಿಯ ಸಂಗದಿಂದ ಜೀವಭಾವ . . . .**[೫]

ಎಂಬಿಂತಹ ದಿವ್ಯವಚನಗಳನ್ನು ಪರಾಮರ್ಶಿಸಿ ನೋಡಿದರೆ ಅಜ್ಞಾನದ ಸ್ವರೂಪ, ಅದರ ವ್ಯಾಪ್ತಿ ಕಾರ್ಯರಂಗಗಳು ಕೆಲಮಟ್ಟಿಗಾದರೂ ಸ್ಪಷ್ಟವಾಗುತ್ತವೆ.

ಅಹಂಭಾವದ ಮಾನವನಿಂದ ಆತನ ನಿಜದ ನಿಲವಾದ ಸಚ್ಚಿದಾನಂದ ನಿತ್ಯ ಪರಿಪೂರ್ಣವನ್ನು ಮರೆಸಿರುವುದೆ ಅಜ್ಞಾನ ಅಥವಾ ಮರವು. ಮತ್ತು 'ನಾನು' ಎಂದರೆ ನನ್ನ ದೇಹ ಕರಣ ಇಂದ್ರಿಯ ವಿಷಯಾದಿಗಳನ್ನಷ್ಟೆ ತೋರಿ, ಉಳಿದ ವಿಶ್ವಬ್ರಹ್ಮವನ್ನೆಲ್ಲ ನನ್ನಿಂದ ಮರೆಮಾಡಿರುವುದು ಅದೇ ಅಜ್ಞಾನ ಅಥವಾ ಮರವು. ಅಂತೆಯೇ ನನ್ನ ಅರಿವು ನಿಮಗೆ ಕಾಣುವುದಿಲ್ಲ, ನಿಮ್ಮ ಅರಿವು ನನಗೆ ಕಾಣುವುದಿಲ್ಲ. ಬಿಚ್ಚಿ ಹೇಳಬೇಕೆಂದರೆ ನನಗೆ ನೀವು ಕಾಣುವುದಿಲ್ಲ, ನಿಮಗೆ ನಾನು ಕಾಣುವುದಿಲ್ಲ. ಕಂಡರೆ ನನಗೆ ನೀವು ಅನ್ಯವಲ್ಲ, ಭಿನ್ನವಲ್ಲ; ನಿಮಗೆ ನಾನು ಅನ್ಯನಲ್ಲ, ಭಿನ್ನನಲ್ಲ.

ಮಾಯಾಪ್ರಕೃತಿಯ ಕುಂಭವೆನಿಸುವ ದೇಹದಲ್ಲಿ ಕುಳಿತು ಅದೇ ತಾನೆಂಬ ಅಹಂಭಾವ ಅಲ್ಲಿ ಬೆಸೆದುಕೊಂಡು ಕಾಣಬಾರದ ಅಜ್ಞಾನದ ಕತ್ತಲೆಯಲ್ಲಿ ಹಿಂದು ಮುಂದು ತಿಳಿಯದೆ ಭ್ರಮಿಸುತ್ತಿರುವ ಈ ನಾನಿನ ಪ್ರವೃತ್ತಿಯನ್ನು ನೋಡಬೇಕೆನ್ನುವಿರಾ? ಹಾಗಿದ್ದರೆ ನಾನು – ಮಾನವನ ಒಳಗೆ ಪ್ರವೇಶಮಾಡಿ ಅಲ್ಲಿ ಹುದುಗಿರುವ ಆತನ ಬುದ್ಧಿಯ ವಿಚಾರ, ಆತನ ಹೃದಯದ ಆಶೆ ಆಕಾಂಕ್ಷೆ, ಆತನ ಪ್ರಾಣ ದೇಹದ ತೃಷ್ಣೆ ಪಿಪಾಸೆಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ. ಮಾನವರೊಳಗೆ ಸ್ವಲ್ಪ ಆರಿಸಿಕೊಂಡು ಪ್ರವೇಶ ಮಾಡಿ.

'ಬರ್‍ರಿ ಶಂಕ್ರಪ್ಪ, ಏನ್ ಬೇಕಾಗಿತ್ತು?' 'ಮತ್ತೇನೂ ವಿಶೇಷ ಇಲ್ಲ ರಾಯರ, ನಿಮ್ಮನ್ನ ನೋಡಬೇಕಾಗಿತ್ತು ಅಷ್ಟೇ.' 'ಉದ್ದೇಶ'? 'ನಿಮ್ಮನ್ನ ನೋಡೂದ ಉದ್ದೇಶ.' 'ಅಂದ್ರ?' 'ಅಂದ್ರ – ನೀವು ಒಳಗ ಹ್ಯಾಗದೀರಿ, ಏನ ಅದೀರಿ, ಏನ

---

೧. ಲಿಂ. ಲೀ. ವಿ. ಚಾ. ಪು. ೫೨, ವ. ೧೧ ಟೀ. (ಆಯ್ದುಕೊಂಡ ಸಂಗ್ರಹ).
೨. ಅದೇ „ ೫೩, ಸೂತ್ರ. „
೩. ಅದೇ „ „ „ „
೪. ಅದೇ „ ೬೫, ವ. ೧೯ ಟೀ. „
೫. ಅದೇ „ ೬೩, ವ. ೧೫.

ಮಾಡತೀರಿ ಅನ್ನೂದ ನೋಡೂದ ಉದ್ದೇಶ. ಮನಸ್ಯಾನ ಒಳಗ ನೋಡ್ರಿ ಅಂತ ಹೇಳಿದರ ಹೀಗ ಒಬ್ರು, ಅದಕ ಬಂದೆ.' 'ಪರವಾ ಇಲ್ಲ. ಆದ್ರು ಇನ್ನೂ ತನಕ, ಹೊರಗಿನವರು ಹೋಗಲಿ, ನಮ್ಮ ಅಣ್ಣ ತಮ್ಮ, ಅಕ್ಕ ತಂಗಿ, ಅದ ಯಾಕ, ನಮ್ಮ ತಂದೆ ತಾಯಿಗೆ ಸಹಿತ ನನ್ನ ಅಂತರಂಗ ಬಿಚ್ಚಿ ತೋರಿಸಿಲ್ಲ. ಶ್ರೀಕೃಷ್ಣ ಪರಮಾತ್ಮನ ಕಥೆ ನಿಮಗೆ ಗೊತ್ತಿದೆಯಲ್ಲವೆ? ಅರ್ಜುನ ಆತನಿಗೆ 'ಶಿಷ್ಯಸ್ತೇಹಂ ಶಾಧಿ ಮಾಂ ತ್ವಾ ಪ್ರಪನ್ನಂ' ಎಂದು ಬೇಡಿಕೊಂಡ ಮೇಲೆ ಗೀತೆಯನ್ನು ಬೋಧಿಸಿ, ಆ ಮೇಲೆ ತನ್ನ ವಿಶ್ವ ರೂಪವನ್ನು ತೋರಿಸಿದ ಅರ್ಜುನನಿಗೆ. ಅರ್ಜುನನ ಚರ್ಮಚಕ್ಷು ಆ ವಿಶ್ವರೂಪವನ್ನು ಕಾಣುವುದು ಸಾಧ್ಯವಿದ್ದಿಲ್ಲ. ಅಂತೆಯೇ ಆತನಿಗೆ ಪರಮಾತ್ಮ ಜ್ಞಾನಚಕ್ಷುವನ್ನು ದಯ ಪಾಲಿಸಿದ. ಹಾಗೆ ನಿಮಗೆ ಗೀತಾಬೋಧೆ ಮಾಡುವುದು ಅವಶ್ಯವಿಲ್ಲ. ಜಗತ್ತೇ ಘಂಟಾಘೋಷವಾಗಿ 'ಮಾನವಗೀತೆ'ಯನ್ನು ಬೋಧಿಸುತ್ತಿದೆ. ಒಬ್ಬರಲ್ಲ ಇಬ್ಬರಲ್ಲ, ಹುಟ್ಟಿದ ಹುಳುವೆಲ್ಲ ಆ ಗೀತೆಯನ್ನು ಉದ್ಘೋಷಿಸುತ್ತಿದೆ. ವರ್ತಮಾನ ಮಹಾಭಾರತ ದಲ್ಲಿ ಮಾನವಕೋಟಿಯಿದ್ದಷ್ಟು ಗೀತೆಗಳ ಸಂಖ್ಯೆ. ಈ ಬೋಧೆಧೀಧೆಯ ಗೊಡವೆಗೆ ಹೋಗದೆ, ಒಮ್ಮೆಲೆ ನಿಮಗೆ 'ನನ್ನ ವಿಶ್ವರೂಪ' ದರ್ಶನವನ್ನು ಮಾಡಿಸುತ್ತೇನೆ. ಸ್ವಲ್ಪ ಆ ಕದ ಮುಚ್ಚಿ, ಭದ್ರವಾಗಿ ಬೀಗ ಹಾಕಿ. ಯಾರೂ ನೋಡಬಾರದು ಆ ರೂಪವನ್ನು. ದೀವಿಗೆಯ ಪ್ರಕಾಶವನ್ನು ಮಂದಮಾಡಿ, ನೋಡೋಣ. ನಿಮಗೆ ನಿಮಗಿದ್ದ ಅಜ್ಞಾನ ಚಕ್ಷುವೆ ಸಾಕು. ಏಕೆಂದರೆ ಜ್ಞಾನಚಕ್ಷುವಿಗೆ 'ನನ್ನ' 'ನಿಗೂಢೋsತ್ಮಾ ನ ಪ್ರಕಾಶತೇ.' ನಿಮಗೆ ಮನಸ್ಸು ಬಿಚ್ಚಿ ಹೇಳಬೇಕೆಂದರೆ ನಿಮಗೆ ತೋರುವ ನಾನು ಸತ್ತು ಸೊರಗಿ ಸಣ್ಣಾಗಿರುವ ನಾನು. ಕಾರಣ – ವೇದ ಶಾಸ್ತ್ರಾದಿಗಳ ವಿಧಿ ನಿಷೇಧ, ಹದಿನೆಂಟು ಪುರಾಣಗಳ ಸ್ವರ್ಗ ನರಕ, ಪುಣ್ಯ ಪಾಪ, ಮತ ಧರ್ಮಗಳ ಕಟ್ಟು ನಿಟ್ಟು, ಸಮಾಜದ ರೀತಿ ನೀತಿ, ಜನಜಂಗುಳಿಯ ಸ್ವಾರ್ಥ ಆಕ್ರಮಣ, ಸರಕಾರದವರ ಕಾಯದೆ ಕಾನೂನು, ಆರ್ಥಿಕ ಪರಿಸ್ಥಿತಿಯ ಮುಗ್ಗಟ್ಟು, ಜಾತ್ಯಂಧ ಸಂಪ್ರದಾಯ . . . ಇನ್ನೂ ಏನೇನೋ ನನ್ನನ್ನು ಬಿಗಿದು ಸಾಯದಂತೆ ಬದುಕಿಸಿವೆ. ಈ ಪಾಶಗಳಿಂದ ಮುಕ್ತನಾಗಿ ಸ್ವತಂತ್ರನಾದ ನನ್ನ ಸ್ವರೂಪ ನನಗೇ ದಿಗ್ಭ್ರಮೆಯನ್ನುಂಟುಮಾಡುತ್ತದೆ. ನಾನು – ಅಂದರೆ ನನ್ನ ದೇಹ – ತಿನ್ನಬೇಕು, ಉಣ್ಣಬೇಕು, ಕುಡಿಯಬೇಕು. ಬೆಳೆಯಬೇಕು. ಭೀಮಸೇನನಂತೆ ತಿನ್ನಬೇಕು, ಬಕಾಸುರನಂತೆ ಉಣ್ಣಬೇಕು, ಅಗಸ್ತ್ಯನಂತೆ ಸವಿನೀರಿನ–ಅಥವಾ ಉಪ್ಪು ನೀರಿನ -- ಸಾಗರವನ್ನೆ ಕುಡಿಯಬೇಕು. ಈ ಮಾತು ಕೇಳಿ ನೀವು ನಗಬೇಡಿ. ಏಕೆಂದರೆ ನನ್ನನ್ನು ಬಿಗಿದ ಪಾಶಗಳಲ್ಲಿ ನನ್ನ ದೇಹದ ಗಾತ್ರ, ಶಕ್ತಿಯ ಸಾಮರ್ಥ್ಯ, ಬುದ್ಧಿಶಕ್ತಿಯ ಪ್ರಮಾಣ, ಹೃದಯದ ಸಂಕೋಚಗಳು ನನ್ನ ದಾಹಕ್ಕೆ, ನನ್ನ ತೃಷ್ಣೆಗೆ, ನನ್ನ ಆಶೆ ಆಕಾಂಕ್ಷೆಗೆ, ನನ್ನ ಭಾವನೆ ಕಲ್ಪನೆಗೆ ಬಂಡೆಗಲ್ಲಾಗಿ ಅಡ್ಡಿ ಬರುತ್ತವೆ. ಹಸಿದು ಹಾವಾದಾಗ ಹೋಳಿಗೆಯ ರಾಶಿ ಸಣ್ಣದು ಕಾಣಿಸುತ್ತದೆ. ಸೀಕರಣೆಯ ಹೊಳೆ ಮಹಾಪೂರವಾಗಿ ಹರಿಯಬೇಕೆನಿಸುತ್ತದೆ. ಅದನ್ನೆಲ್ಲ ಕವಳಿಸಬೇಕೆಂದು ಹಾತೊರೆಯುತ್ತೇನೆ ನಾನು. ಆದರೆ ಹೊಟ್ಟೆಯ 'ಸತ್ಯಾಗ್ರಹ'. ನಾನು ನಿರುಪಾಯನಾಗುತ್ತೇನೆ. ಕುಂಭಕರ್ಣನಂತೆ ನಿದ್ರೆ ಮಾಡಬೇಕು, ರಾವಣನಂತೆ ಸಮುದ್ರ ಮೊಳಕಾಲಾಗಿ ಅಡ್ಡಾಡಬೇಕು. ಅಟ್ಲಾಸ

ನಂತೆ ಮಹಾಸಮರ್ಥನಾಗಿರಬೇಕು. ಭಗವಂತನ 'ಗೋಪಿಕಾವಿಲಾಸ' ಗೊತ್ತಿದೆಯೆ? ಹದಿನಾರು ಸಾವಿರ ಅಲ್ಲ, ಲಕ್ಷದೊಡನೆ ರಾಸಕ್ರೀಡೆ ಆಡಬೇಕು. 'ಎಲ್ಲಿ ನೋಡಿದಲ್ಲಿ ಮನವೆಳಿಸದಿರ್ದಡೆ ನಿಮ್ಮಾಣೆ, ನನ್ನಾಣೆ'. ದೇವೇಂದ್ರಭವನದಲ್ಲಿ ವಾಸಿಸಬೇಕು, ನಂದನವನದಲ್ಲಿ ವಿಹರಿಸಬೇಕು. 'ಕಾಯದೊಳು ಮನ್ಮಥನ ಪಳಿವ ಸುಂದರ ರೂಪು' ನನ್ನದಾಗಬೇಕು. ರಂಭೆ ಊರ್ವಶಿ ತಿಲೋತ್ತಮೆ ತಾರೆಯರ ನೃತ್ಯ ಸಂಗೀತ, ಹಾವ ಭಾವ, ವಿಭ್ರಮ ವಿಲಾಸ, ಗಾಡಿ ಗಮಕ ನನ್ನನ್ನು ಮುತ್ತಬೇಕು. ನನ್ನ ನೋಟ ಬೇಟಕ್ಕೆ ಅವರ ಹೃದಯವೆಲ್ಲ ಕರಗಿ ನೀರಾಗಬೇಕು.

ನನ್ನ ರಾಜಮಹಾಲಿಗೆ ನಕ್ಷತ್ರಗಳ 'ಲಾಯಿಟ'ನ್ನೆ ಹಾಕಿಸಬೇಕು. ಬೇಸಗೆಯ ಕಾಲದಲ್ಲಿ ಬೆಳುದಿಂಗಳನ್ನೆ ಬಳಸಿಕೊಂಡು ಶೀತಲಸೌಧವನ್ನು ನಿರ್ಮಿಸಬೇಕು. ಮಲಯ ಮಾರುತವನ್ನೆ ಬೀಸಣಿಗೆ ಮಾಡಬೇಕು. ಜೇಮ್ಸ್ ಜೀನ್ಸ್ ಹೇಳುವ ನಕ್ಷತ್ರಗಳಾಚೆ ಸಂಚರಿಸಬೇಕು..... ನಕ್ಷತ್ರಗಳ ಗಾನದಲ್ಲಿ ನಡೆಯಬೇಕು ನಮ್ಮ ನಾಟ್ಯ ಮತ್ತು ನೃತ್ಯದ ವಿಲಾಸ.

ನಾನು ಡಾಕ್ಟರನಾಗಬೇಕು. ಆರೋಗ್ಯ ನಿರ್ಮೂಲ ಮಾಡಬೇಕು. ಸಾವವರ ಸಂಖ್ಯೆ ಕಡಮೆಯಾಗಬೇಕು, ರೋಗಿಗಳ ಸಂಖ್ಯೆ ಹೆಚ್ಚಾಗಬೇಕು. ಬದುಕಬಲ್ಲವರಿಗಿಂತ ಬದುಕದವರಿಗೆ ಅಂದರೆ ಸತ್ತವರಿಗೆ ಔಷಧ ಕೊಡಬೇಕು. ಹಣ ಸುರಿಯಬೇಕಾದರೆ ಭಗವಂತನ ದವಡೆಯಲ್ಲಿ ಪ್ರವೇಶಮಾಡಿದ ಕೌರವರಿಂದಲೆ. ಹಣದ ರಾಶಿ ಹೆಣದ ರಾಶಿ ಅಲ್ಲವೆ? ಬಡವರ ಗತಿ? ಅವರಿಗೆ ನಾನೇ ಗತಿಯಾದರೆ ದೀನದರಿದ್ರಬಂಧುವಾದ ದೇವರ ಗತಿ ಏನು? ಮತ್ತೆ, ನಾನು ಅಧಿಕಾರಿಯಾಗಬೇಕು. ಹೆಡ್ ಕಾರಕೂನ, ಮಾಮಲೇದಾರ, ಕಲೆಕ್ಟರ್, ಗವರ್ನರ್ ಮಂತ್ರಿ, ಮುಖ್ಯಮಂತ್ರಿ ಸಾಮ್ರಾಟ್ ಸರ್ವಾಧಿಕಾರಿ ನಾನಾಗಬೇಕು. ಕತ್ತಲೆಯ ಬೆಳಕಿಂಡಿಯಲ್ಲಿ ಹಣ ಸುರಿಯಬೇಕು. ಎಲ್ಲೆಲ್ಲಿ ದರ್ಪ, ಭಯ ಭೀತಿ ಕಂಪನ. ಅವನನ್ನು ತುಳಿಯಬೇಕು. ಇವನನ್ನು ಒದೆಯಬೇಕು. ಹೆದರಿಸಬೇಕು ಬೆದರಿಸಬೇಕು. ಅವರಿಂದಲೇ ನನಗೆ ಮಾನ ಮನ್ನಣೆ. ಮಾನಪತ್ರ ಮೆರವಣಿಗೆ ನಡೆಯಬೇಕು. ಎಲ್ಲ ವರ್ತಮಾನಪತ್ರಗಳ ಮುಖಪತ್ರದಲ್ಲಿ ನನ್ನ ಹೆಸರಿಗಲ್ಲದೆ ಸ್ಥಳವಿರ ಕೂಡದು. ಮತ್ತೆ, ನಾನು ಸಮಾಜ ಸುಧಾರಕನಾಗಬೇಕು. ದೇಶೋದ್ಧಾರ ರಾಷ್ಟ್ರೋದ್ಧಾರ. ಜಗತ್‌ಕಲ್ಯಾಣ ಮಾಡಬೇಕು. ಆದರೆ ಮೊದಲು ನನ್ನ ಕಲ್ಯಾಣ. ಆ ಮೇಲೆ ಕಲ್ಯಾಣದಲ್ಲಿ ಏನಾದರೂ ಅಂಶ ಉಳಿದರೆ ಮುಂದಿನ ಮಾತು. ರಾಮಕೃಷ್ಣ, ವಿವೇಕಾನಂದ, ಕ್ರೈಸ್ತ, ಬುದ್ಧ, ಶಂಕರಾಚಾರ್ಯ, ಭಾಸ್ಕರಾಚಾರ್ಯ, ನ್ಯೂಟನ್, ಆಯಿನ್‌ಸ್ಟೀನ್, ಶೆಕ್ಸ್‌ಪಿಯರ್, ಡಾಂಟೆ, ಕಾಳಿದಾಸ, ಪಂಪ, ಬಿರ್ಲಾ, ಟಾಟಾ, ಫೋರ್ಡ್, ತೇನಸಿಂಗ – ಹೀಗೆ 'ಯದ್ ಯದ್ ವಿಭೂತಿಮತ್ ಸತ್ತ್ವಂ' ಇದೆಯೊ ಅದೆಲ್ಲ ನಾನಾಗಬೇಕು. ಏನು, ಇದೆಲ್ಲ ಅಸಂಬದ್ಧ ಪ್ರಲಾಪ ಎನ್ನುವಿರಾ? ಹಾಂ ಒಂದಕ್ಕೊಂದು ಸಂಬಂಧವಿಲ್ಲದ ಅಸಂಬಂಧವೆ ನಾನು. ಇನ್ನೂ ಗಂಭೀರವಾಗಿರುವ ನನ್ನ ಪುರಾತನ, ವಿಶ್ವವಿಸ್ತಾರವಾದ ರೂಪವನ್ನು ನಿಮಗೆ ತೋರಿಸಬೇಕೆಂದರೆ ನನ್ನೊಳಗೆ ಯಮಧರ್ಮ ನನ್ನೊಳಗೆ ಧರ್ಮರಾಜ, ಬ್ರಹ್ಮರಾಕ್ಷಸ ಪರಬ್ರಹ್ಮ ದೇವಾದಿದೇವತೆಗಳು; ಕೀಚಕ

ನಾನು, ವಲಲ ನಾನು, ... ಹೀಗೆಯೇ ಸನಾತನನಾದ ನನ್ನೊಳಗೆ ಸಂಚರಿಸುತ್ತ ನೋಡುತ್ತ ಹೋದರೆ, ಭೂತ ವರ್ತಮಾನ ಭವಿಷ್ಯ(?)ದ ಮಾನವಕಣಕೋಟಿಗಳೆಲ್ಲ ನಾನು. ಪೃಥ್ವಿಯ ಸಸ್ಯ, ಧಾನ್ಯ, ಪಶುಪಕ್ಷಿಯನ್ನು ತಿಂದು, ರಕ್ತ ಮಾಂಸ ಮಜ್ಜ ಎಲು ತೋವಲಾಗಿರುವ ನಾನು ಪೃಥ್ವಿಯೆ. ಉಸಿರಾಡಿಸುತ್ತಿರುವ ನಾಸು ವಾಯು ರೂಪ. ಹೀಗೆ ಪಂಚಭೂತ ನಾನು, ಪಂಚವಿಂಶತಿ ತತ್ತ್ವ ನಾನು. ಏನು? ಇದು ನಿಮಗೆ ಕಾಣುವುದಿಲ್ಲವೇ? ದೀವಿಗೆಯ ಪ್ರಕಾಶ ಇನ್ನೂ ಮಂದಮಾಡಿ. ಅಥವಾ ಇನ್ನೂ ಹೆಚ್ಚು ಭಯಾನಕ, ರುದ್ರ, ಭೀಕರ, ಭೀಷ್ಮವಾದ ನನ್ನ ಕರಾಳರೂಪವನ್ನು ನೋಡುವು ದಾಗಲಿಕ್ಕಿಲ್ಲ. ಇದನ್ನು ನಿಮ್ಮಿಂದ ಈ ಕ್ಷಣವೆ ಮರೆಮಾಡುತ್ತೇನೆ. ನನ್ನ ಸೌಮ್ಯ, ಶಾಂತರೂಪವೆಂದರೆ ನೀವು ಪ್ರತಿದಿನ ನೋಡುತ್ತಿರುವುದೆ. ಸಮಾಜ ಶಾಸ್ತ್ರ ಕಾಯದೆ ಮತ್ತು ನನ್ನಂತೆ ಭಯಾನಕವಾಗಿ ಸುತ್ತಿ ಮುತ್ತಿರುವ ಅಸಂಖ್ಯಾತ 'ನಾನು'ಗಳ ಭಯದಿಂದ ವ್ಯವಹಾರದಲ್ಲಿ ತೋರುವ ನನ್ನ ರೂಪ ಬಹಳ ಸೌಮ್ಯವಾಗಿದೆ. ಒಳಗಿರುವ ಮಹಾಘೋರಾರಣ್ಯ ಹೊರಗೆ ಸಣ್ಣ ಕೈದೋಟವಾಗಿ ಕಾಣುತ್ತಿದೆ ನಿಮಗೆ. ಇವೆಲ್ಲ ಮನಸು. ಆಶೆಯ ಬುದ್ಧಿಯ ಕಲ್ಪನೆಯ 'ಮಹಾಕಾಡು' ಎಂದು ತಿಳಿಯಬೇಡಿ. ಮನ ಬುದ್ಧಿಗಳೆಂಬವೆ ನನ್ನ ಅರಿವಿನ ಉಪಕರಣವೆಂಬುದು ನಿಮಗ ಗೊತ್ತೇ ಇದೆ. . . . . ಶರಣಾರ್ಥಿ. ನನ್ನಲ್ಲಿ ಅಂದರೆ ನನ್ನ ಒಳಗೆ ರುದ್ರಾಂಧ ಪಾತಾಳವಿರುವಂತೆ ಸುರಮ್ಯ ಸುರಲೋಕವಿರುವುದನ್ನು ಮರೆಯಬೇಡಿ ಶಂಕ್ರಪ್ಪಾ.'[೧]

ಇಂಥ ಶಿವ-ರುದ್ರ, ಈ ಜೀವ-ಬ್ರಹ್ಮ! ಅನಾದಿ ಕಾಲದಿಂದ ಅನಂತ ರೂಪವಾಗಿ ಹರಿದು ಬಂದಿರುವ ಈ ಅಹಂಬ್ರಹ್ಮ ತನಗೆ ಅನ್ಯ ಭಿನ್ನವಾಗಿ ಹೊರಗೆ ತೋರುವ

---

[೧] ಹೋಲಿಸಿ ನೋಡಿರಿ:

ಸ ವಾ ಅಯಮಾತ್ಮಾ ಬ್ರಹ್ಮ ವಿಜ್ಞಾನಮಯೋ ಮನೋಮಯಃ
ಪ್ರಾಣಮಯಶ್ಚಕ್ಷುರ್ಮಯಃ ಶ್ರೋತ್ರಮಯಃ ಪೃಥಿವೀಮಯ
ಆಪೋಮಯ ವಾಯುಮಯ ಆಕಾಶಮಯಸ್ತೇಜೋಮಯೋಽತೇಜೋಮಯಃ
ಕಾಮಮಯೋಽಕಾಮಮಯಃ ಕ್ರೋಧಮಯೋಽಕ್ರೋಧಮಯೋ
ಧರ್ಮಮಯೋಽಧರ್ಮಮಯಃ
ಸರ್ವಮಯಸ್ತದ್ಯದೇತದಿದಂಮಯೋಽದೋಮಯ ಇತಿ
ಯಥಾಕಾರೀ ಯಥಾಚಾರೀ ತಥಾ ಭವತಿ
ಸಾಧುಕಾರೀ ಸಾಧುರ್ಭವತಿ
ಪಾಪಕಾರೀ ಪಾಪೋ ಭವತಿ
ಪುಣ್ಯಃ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ ।
ಅಥೋ ಖಲ್ವಾಹುಃ ಕಾಮಮಯ ಏವಾಯಂ
ಪುರುಷ ಇತಿ ಸ ಯಥಾ ಕಾಮೋ ಭವತಿ ತತ್ಕ್ರತುರ್ಭವತಿ
ಯತ್ಕ್ರತುರ್ಭವತಿ ತತ್ಕರ್ಮ ಕುರುತೇ ಯತ್ಕರ್ಮ
ಕುರುತೇ ಯತ್ಕರ್ಮ ಕುರುತೇ ತದಭಿಸಂಪದ್ಯತೇ ॥

ಬೃ.ಉ., ಅ. ೪, ಬ್ರಾ. ೪., ಮಂ. ೫.

ವಿಷಯಪ್ರಪಂಚದಲ್ಲಿ ಆಕ್ರಮಣ ಮಾಡಿ, ಅದನ್ನು ತಿಂದು ಉಂಡು ಭೋಗಿಸಿ ಸುಖಿಸಬೇಕೆನ್ನುತ್ತಾನೆ. ಆದರೆ ನಿಸರ್ಗದ ನಿಯಮ ಈ ಬ್ರಹ್ಮನ ಕೈಯಲ್ಲಿಲ್ಲ. ಪ್ರಕೃತಿಯ ಫಲವನ್ನು ಭುಂಜಿಸಿದ ಆದಾಮ್ (Adam) ಮತ್ತು ಈವ್ಹ್ (Eve)ರ ಗತಿ ಏನಾಯ್ತು? ವಿಷಯ ಫಲ ಅಧರಕ್ಕೆ ಸಿಹಿ, ಉದರಕ್ಕೆ ಕಹಿ.

> ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ
> ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ, ಅನಶ್ನನ್ನನ್ಯೋ ಅಭಿಚಾಕಶೀತಿ ॥
> ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ
> ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ ॥
> ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ
> ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ ॥[೧]

ವೃಕ್ಷ ಒಂದು – ವಿಶ್ವ ವಿಷಯ ವೃಕ್ಷ. ಹಕ್ಕಿ ಎರಡು – ಒಂದು ಪರಮಾತ್ಮ ಮತ್ತೊಂದು ಜೀವಾತ್ಮ. ನಾನೆಂಬಹಂಕಾರದಲ್ಲಿ ಹಣ್ಣು ತಿನ್ನುವ ಹಕ್ಕಿ ಜೀವಾತ್ಮ; ಹೀಗೆ ತಿನ್ನದೆ ನಿತ್ಯಾನಂದದಲ್ಲಿ ಬೆಳಗುತ್ತಿರುವ ಹಕ್ಕಿ ಶುದ್ಧಾತ್ಮ – ಅದೇ ಪರಮಾತ್ಮ. ಒಂದಕ್ಕೆ ಮೋಹ, ಶೋಕ; ಮತ್ತೊಂದು ನಿರಂಜನ. '....ತಲೆಯಿಲ್ಲದ ಮುಂಡ ತಳಿಗೆಲೆಯ ಮೇದರೆ, ಎಲೆ ಮಱೆಯಾಯಿತ್ತು ಗುಹೇಶ್ವರಾ'![೨] ಅಂತರಂಗವನ್ನು ಬೆಳಗುವ ಸಮ್ಯಗ್‌ಜ್ಞಾನ ಜ್ಯೋತಿ ನಂದಿದ ಜೀವಾತ್ಮ, 'ರಸೋ ವೈ ಸಃ'[೩] ಎಂಬ ರಸವರತು ಒಣಗಿದ ಸುಖ ದುಃಖವನ್ನುಂಡು ಶೋಕಕ್ಕೊಳಗಾಗಿರುವುದು ಸಹಜ. ಒಣಗಿದೆಲೆಯಿಂದ ಹೊಟ್ಟೆಯನ್ನು ತುಂಬಿಸಬಹುದು. ಆದರೆ ರಸವಂತ ಎಲೆಯನ್ನು ತಿನ್ನಬೇಕೆಂಬ ಜೀವಾತ್ಮನ ಮರೆಯ ಶುದ್ಧಾತ್ಮನಿಗೆ, ಅಂತರಾತ್ಮನಿಗೆ ತೃಪ್ತಿಯಾದೀತೆ? ಜೀವಾತ್ಮನ ಅರಿವು ಮರವೆಗೆ ವಿಶ್ವವಿಷಯದ ಮರೆಯ ದಿವ್ಯನಿಧಾನ-ರಸಪ್ರಸಾದ ತೋರುವುದಿಲ್ಲ. ತೋರದ ರಸ ಜೀವಾತ್ಮನ ರಸನೆಯ ಹವಣಲ್ಲ. ಅಂತೆಯೆ ತರಗೆಲೆಯನ್ನೆ ಪ್ರತಿನಿತ್ಯ ಮೇದು ನಿತ್ಯ ನಿರಂತರವಾದ ಅಸಮಾಧಾನದಲ್ಲಿಯೆ ಸಮಾಧಾನಹೊಂದಬೇಕು 'ನಾನು'. 'ಎನಗಿದು ವಿಧಿಯೆ?' ಎಂಬ ಶಾಶ್ವತಗೀತ ಎದೆಯಲ್ಲಿ ಮಿಡಿಯಬೇಕು. ಆದರೆ ಇದೇ ತರಗೆಲೆಗೆ ಹೋರಾಟವೆಷ್ಟು? ಜಗವಗಲ. ನೀರಿಲ್ಲದ ನೆಳಲಲ್ಲಿ, ಮೃಗಜಲವಲ್ಲಿ. ಮಂಜಿನಲ್ಲಿ ಬಾಯಾರಿಕೆ ಹಿಂಗೀತೆ? ಅದು ನೀರು ಅಲ್ಲ, ನೀರಿನ ಹೆಣ ಮೃಗಜಲ. ಏಕೆ ಕಚ್ಚಾಡುವಿರಿ? ಅದೋ ಅಲ್ಲಿ, ಅಚೆ ದಿವ್ಯಗಂಗೆ, ತ್ರಿಪಥಗೆ ಹರಿಯುತ್ತಿದ್ದಾಳೆ. ಮುಂದಕ್ಕೆ ಹೋಗಿ, ಆಚೆ, ಇನ್ನೂ ಆಚೆ. ಇಲ್ಲಿ ನೀರು ಇಲ್ಲ, ಕಾಣುವುದಿಲ್ಲವೇ?

---

೧. ಮುಂ. ಉ., ಮುಂಡಕ ೩, ಖಂ. ೧, ಮಂ. ೧.

ಹೋಲಿಸಿರಿ: ಜ್ಞಾ ಜ್ಞೌ ದ್ವಾವಜಾವೀಶಾನೀಶಾವಜಾ ಹ್ಯೇಕಾ ಭೋಕ್ತೃ ಭೋಗಾರ್ಥಯುಕ್ತಾ ।
ಅನಂತಶ್ಚಾತ್ಮಾ ವಿಶ್ವರೂಪೋ ಹ್ಯಕರ್ತಾ ತ್ರಯಂ ಯದಾ ವಿಂದತೇ ಬ್ರಹ್ಮಮೇತತ್ ॥
ಶ್ವೇ. ಉ., ಅ. ೧. ಮಂ. ೯.

೨. ಶೂ. ಸಂ. ಪು. ೧೦., ವ. ೨೭.

೩. ತೈ. ಉ., ಅ. ೨., ಅನು. ೭.

'ಸಂಸಾರವೆಂಬ ಹೆಣ ಬಿದ್ದಿರೆ ತಿನಬಂದ ನಾಯ ಜಗಳವ ನೋಡಿರೆ !
ನಾಯ ಜಗಳವ ನೋಡಿ ಹೆಣ ನಗುತ್ತಿದೆ !
ಗೊಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರಯ್ಯಾ.'[೧]

ಅದೆಂತು ಕಾಣುವುದು? ಎಲ್ಲಿ ಕಾಣುವುದು? ಏಕೆ ಕಾಣುವುದು? ಗಿಳಿಯಿದೆ, ಗಿಳಿಗೆ ನಾಲಗೆ ಇದೆ. ಕಾಗೆ ಇದೆ, ಕಾಗೆಗೆ ನಾಲಗೆ ಇದೆ, ಮಾವಿನ ಹಣ್ಣಿನಲ್ಲಿರುವ ಮಧುರವನ್ನು ಗಿಳಿಯ ನಾಲಗೆ ಕಾಣಬಲ್ಲುದು, ಅನುಭವಿಸಬಲ್ಲುದು. ಕಾಗೆಯ ನಾಲಗಗೆ ಈ ಮಧುರ ಮಾಯವಾಗುವುದೇಕೆ? ಈ ಮಧುರ ಲಿಂಗವನ್ನ ಕಾಣದ ಕಾಗೆ ಮಾವಿನ ಹಣ್ಣನ್ನು ಆರಾಧಿಸಬೇಕೇಕೆ? ಅನುಭವಿಸಬಲ್ಲುದೆಂತು? ಬೇವಿನ ಹಣ್ಣೇ ಕಾಗೆಯ ಆರಾಧ್ಯದೇವತೆ, ಇಷ್ಟಲಿಂಗ. ನನಗೆ ಹೆಣ್ಣು ರುಚಿ, ನಿಮಗೂ ಹೌದು. ಆದರೆ ಅದಕ್ಕಿಂತ ನಿಮಗೆ ಮಣ್ಣು ರುಚಿ. ಅದೋ ಆತನಿಗೆ ಇವೆರಡಕ್ಕಿಂತ ಹೊನ್ನು ರುಚಿ. ನನಗೆ ಅಧಿಕಾರ, ನಿಮಗೆ ವಾರ್ತೆ ಕೀರ್ತಿ, ಆತನಿಗೆ ನೆರೆವಣಿಗೆ ಮೆರೆವಣಿಗೆ, ಈತನಿಗೆ ವಿದ್ಯಾಬುದ್ಧಿ, ಅವರಿಗೆ ಬಂಗಲೆ ಕಾರು, ಅವರಿಗೆ ಲಂಚ ಬಿಟ್ಟಿ, ಮತ್ತೆ ಅವರಿಗೆ ಪದವಿ ಗೌರವ. 'ಭಿನ್ನರುಚಿರ್ಹಿ ಲೋಕಃ' ಇವೇ ನಮ್ಮ ಆರಾಧ್ಯವಸ್ತು; ಇವೇ ನಮ್ಮ ಪರಬ್ರಹ್ಮ, ನಮ್ಮ ಗುಹೆಯ ಈಶ್ವರಲಿಂಗಗಳು. ಸಂಸಾರವೇ ನಮ್ಮ ಶಿವಪೂಜೆ, ಅಥವಾ ವಿಷ್ಣುಪೂಜೆ; ವಿಷಯದಾಶೆಯೇ ನಮ್ಮ ನಿಮ್ಮ ನಿಷ್ಠಾಭಕ್ತಿ.

ಅವರವರಿಗವರವರ ಮನವೊಲಿದುದೇ ಬ್ರಹ್ಮ
ಸುವಿವೇಕಿಗಳಿಗಾತ್ಮತತ್ತ್ವವೇ ಬ್ರಹ್ಮ ಪಲ್ಲವಿ
ಚೋರರಿಗೆ ಪರಪದಾರ್ಥಾಪಹೃತಿಯೇ ಬ್ರಹ್ಮ
ಜಾರರಿಗೆ ಮನವಾರೆ ಸುರತವೇ ಬ್ರಹ್ಮ
ಶೂರರಿಗೆ ನಿಜಶತ್ರುಸಂಹರಣವೇ ಬ್ರಹ್ಮ
ದಾರಿದ್ರರಿಂಗಶನ ವಸನವೇ ಬ್ರಹ್ಮ ೧[೨]

ಭಿನ್ನ ಸ್ಥಲ, ಭಿನ್ನ ಬುದ್ಧಿ, ಭಿನ್ನ ಮತಿ, ಭಿನ್ನ ರುಚಿ – ಅಂತೆಯೆ ಭಿನ್ನ ವಿಭಿನ್ನ ಬ್ರಹ್ಮಗಳು ಮಾನವಕುಲಕೋಟಿಗೆ.

ಬಾಳೆಯ ದಿಂಡಿಗೆ ಪದರು ಪದರುಗಳಿದ್ದಂತೆ ಅರಿವಿಗೂ ಭಿನ್ನ ಭಿನ್ನ ಕೋಶಗಳಿವೆ. ಪರಮಾಣು, ಮೃತ್‌ಪಿಂಡ, ಕಲ್ಲು ಚಿನ್ನ ವಜ್ರ ತರು ಲತೆ ತಿರ್ಯಗ್ ಜಂತು ಪಶು ಪಕ್ಷಿ ಚಿಂಪಾಂಜಿ ಗೋರಿಲ್ಲಾ ಮಾನವ – ಇಲ್ಲೆಲ್ಲ ಅರಿವಿದೆ, ಅರಿವು ಮೂಡಿದೆ ಅರಿವು ತುಂಬಿ ಸಂಭ್ರಮಿಸುತ್ತಿದೆ, ಅರಿವು ಪ್ರಬುದ್ಧವಾಗಿದೆ. ಆದರೆ ಅಲ್ಲಲ್ಲಿಯ ಪದರು ಹಂತ, ಸ್ಥಲ, ಶಕ್ತಿ, ಕ್ರಿಯೆ ಬೇರೆಬೇರೆ. ಗೋರಿಲ್ಲಾನ ಪ್ರಜ್ಞೆ, ನನ್ನ ಪ್ರಜ್ಞೆಯಂತೆ ಇದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಹೀಗೆ ಹೇಳುವುದಕ್ಕೆ ಯಾವ ಆಧಾರವೂ ಇದ್ದಂತೆ ತೋರುವುದಿಲ್ಲ. ನಾನಂತೂ ಇದನ್ನು ಎಂದೂ ಒಪ್ಪುವುದಿಲ್ಲ; ನೀವೂ

---

೧. ಶೂ. ಸಂ. ಮ. ೮, ವ. ೧೦.
೨. ಕೈ. ಕ. ಮ. ೧೩೪-೧೩೫, ಜ್ಞಾ. ಸ್ಥ. ಪ. ೩೦.

ಒಪ್ಪಲಿಕ್ಕಿಲ್ಲ. ಇದರಂತೆ ಒಬ್ಬ ವ್ಯಕ್ತಿಯಲ್ಲಿ, ವ್ಯಕ್ತಿ ವ್ಯಕ್ತಿಗಳಲ್ಲಿ ಅರಿವಿನ ಪಡೆಗಳು (Layers) ಬೇರೆ ಬೇರೆ. ಕನಸು ನಿದ್ದೆ ಎಚ್ಚರಗಳಲ್ಲಿಯಂತೂ ಈ ಮಾತಿನ ಸತ್ಯ ಸುಸ್ಪಷ್ಟ. ಈಗ ನಾನು ಬರೆಯುತ್ತಿದ್ದೇನೆ. ನನ್ನ ಪ್ರಜ್ಞೆ ಒಂದು ಹಂತದಲ್ಲಿದೆ. ಬರೆವುದನ್ನು ಮುಗಿಸಿ ಅಳತೆಗೆಟ್ಟು ತಿಂದು, ತೇಗುತ್ತ ಬಿದ್ದು ನಿದ್ದೆ ಮಾಡಿ ಸಮಾಧಾನ ವಾಗದೆ ಮತ್ತೆ ಏಳುತ್ತೇನೆ. ಈಗ ತಾಮಸ ಜಡ ಮಂದ ಆಲಸ್ಯ. ಬರೆವಾಗಿದ್ದ ಪ್ರಸನ್ನ ಆಕಾಶವೆಲ್ಲ ಮೋಡ ಮುಸುಕಿ ಮಬ್ಬಾಗಿದೆ. ಈ ಜಡ ತಾಮಸ ಮಬ್ಬು ನನ್ನಲ್ಲಷ್ಟೇ ಅಲ್ಲ, ನಾನು ನೋಡುತ್ತಿರುವ ಜಗತ್ತನ್ನೂ ವ್ಯಾಪಿಸಿದೆ. ಬರೆವಾಗ ಒಳ್ಳೇ ಎಚ್ಚರವಾಗಿ ನನ್ನೊಡನೆ ಮಾತಾಡಿ ನಕ್ಕ ಜಗತ್ತು ಒಮ್ಮೆಲೆ ತಾಮಸದ ತವರಾಗಿದೆ. ಕಾರಣವೇನು? ಕಾರಣ ಇಷ್ಟೇ. ಅರಿವಿನಂತೆ ಇರವು, – ತನ್ನ ಮತ್ತು ಜಗತ್ತಿನ – ಅರಿವಿನಷ್ಟು ಇರವು. ಇರವಿನಂತೆ ಅನುಭವ, ಇರವಿನಷ್ಟು ಅನುಭವ. ಈ ಅನುಭವವೇ ಜೀವನದ ಸ್ಥಲ ಮತ್ತು ಆಚರಣೆಯನ್ನು ನಿರ್ಧರಿಸುತ್ತದೆ. ಮನುಷ್ಯ, ಕವಿ, ವಿಜ್ಞಾನಿ, ಅನುಭಾವಿ — ಇವರನ್ನು ಹೊರಗಿನಿಂದ ನೋಡಿದರೆ 'ಸಾದಾ' ಮನುಷ್ಯ ಪ್ರಾಣಿಗಳೇ. ಆದರೆ ಮನುಷ್ಯ ಸಾಮಾನ್ಯ ಜಗತ್ತಿನಲ್ಲಿ ಎಚ್ಚತ್ತಿದ್ದರೆ, ಕವಿ 'ಕಾವ್ಯ'ದಲ್ಲಿ ಎಚ್ಚರ ವಿರುತ್ತಾನೆ; ವಿಜ್ಞಾನಿ ವೈಜ್ಞಾನಿಕ ಪ್ರಪಂಚದಲ್ಲಿ ಎಚ್ಚರವಾಗಿದ್ದರೆ, ಅನುಭಾವಿ ದೇವನಲ್ಲಿ, ತನ್ನಲ್ಲಿ. ಇದೋ ನೋಡಿ ಇವರ ಅರಿವು ಅನುಭವವನ್ನು:

೧. ನನ್ನ ಅನುಭವ ನಿಮಗೆ ಗೊತ್ತೇ ಇದೆ. ಅದೂ ನಿಮ್ಮಂತೆ.

೨. ವರ್ಡ್ಸ್‌ವರ್ಥ (Wordsworth):

'She was a phantom of delight
When first she gleam'd upon my sight;
A lovely apparition, sent
To be a moment's ornament;
Her eyes as stars of Twilight fair,
Like Twilight's, too, her dusky hair;
But all things else about her drawn
From May-time and the cheerful dawn;
A dancing shape, an image gay,
To haunt, to startle, and waylay!'[೧]

೩. ಬರ್ಟ್ರಾಂಡ್ ರಸೆಲ್ (Bertrand Russell):

'...Colour and sound, light and shade, form and texture belong no longer to that external nature that the Ionians sought as the bride of their devotion. All these things have been transferred from the beloved to the lover, and the beloved has become a

೧. The Golden Treasury, Book Fourth p. 10.

skeleton of rattling bones, cold and dreadful, but perhaps a mere phantasm. . . .[೧]

೪ ಸೇಂಟ್ ಕ್ಯಾಥರಿನ್ (St Catherine of Genoa):

My Me is God, nor do I recognize any other Me except my God Himself.[೨]

ಮೇರಿ ಹಚಿನ್‌ಸನ್ ವರ್ಡ್ಸ್‌ವರ್ಥನ ಹೆಂಡತಿ. ಆಕೆಯನ್ನು ಮೊತ್ತಮೊದಲು ಕಂಡಾಗ ತನಗಾದ ಅನುಭವವನ್ನು ಶಬ್ದದಲ್ಲಿ ಕಂಡರಿಸಿದ್ದಾನೆ ಈ ಭಾವಕವಿ. ಕಣ್ಣಲ್ಲಿ ಮಿಂಚಿದ ಆಶೆ ನೆಲದ ಮೇಲೆ ನಡೆದಾಡುವ ದೇಹಿಯಲ್ಲ, ಆನಂದದ ಒಂದು ಛಾಯಾಮೂರ್ತಿ; ನಿಮಿಷ ಒಂದನ್ನು ಅಲಂಕರಿಸ ಬಂದ ಒಂದು ಮಾಯಾಮೂರ್ತಿ. ಸಂಧ್ಯಾಸಮಯದ ನಕ್ಷತ್ರ ಆಕೆಯ ಕಣ್ಣು, ಸಂಧ್ಯಾರಾಗ ಆಕೆಯ ಕೇಶರಾಶಿ. ಆ ರಮಣೀಯ ಮೂರ್ತಿಯ ಉಳಿದೆಲ್ಲ ಅವಯವ ವಸಂತ-ಉಷಃಕಾಲಗಳಿಂದ ನಿರ್ಮಿತ. ಬೆಂಬತ್ತಿ ಚಕಿತಗೊಳಿಸಿ ಹಾದಿಯಲ್ಲಿಯೆ ಹಿಡಿದು ಬಿಡುವ ನಲ್ಗನಸು, ನರ್ತಿಸುವ ಹೊಳಪು ಆಕೆ. – ವರ್ಡ್ಸ್‌ವರ್ಥನ ಮೇರಿ ನನ್ನ ಎದೆಯಲ್ಲಿ ಎದ್ದ ರೀತಿ ಇದು. ಮೊದಲು ನನ್ನಲ್ಲಿ ಇಲ್ಲದ ಈ ಮನೋಜ್ಞಮೂರ್ತಿಯನ್ನು ನನ್ನ ಅರಿವಿನಲ್ಲಿ ಎಬ್ಬಿಸಿದಾತ ಕವಿ. ಮೇರಿಯ ಈ ಕಾವ್ಯಮೂರ್ತಿ ಆಕೆಯಲ್ಲಿಯೆ ಇದೆಯೆ? ಅಥವಾ ಕವಿಯಲ್ಲಿ ಕಲ್ಪಿತ ಮೂರ್ತಿಯೆ? ಆಕೆಯಲ್ಲಿಯೆ ಇದ್ದರೆ ಆಕೆಯನ್ನು ನೋಡಿದವರೆಲ್ಲ ಈ ಮೂರ್ತಿಯನ್ನೇಕೆ ಕಾಣಲಿಲ್ಲ? ಕವಿಯಲ್ಲಿಯೆ ಕಲ್ಪಿತವಾಗಿದ್ದರೆ ಸಾವಿರ ಸುಂದರಿಯರನ್ನು ಕಂಡಾಗ ಈ ಮೂರ್ತಿ ರೂಪುಗೊಳ್ಳಲಿಲ್ಲವೇಕೆ? ವರ್ಡ್ಸ್‌ವರ್ಥನಲ್ಲಿದ್ದ ಒಂದು ವಿಶೇಷ ಕಾವ್ಯಪ್ರಜ್ಞೆ (Poetic Consciousness), ಅದನ್ನು ದೀಪಿಸಬಲ್ಲ ಮೇರಿಯ ಒಂದು ವಿಶೇಷರೂಪ ಸಮ್ಮಿಲನವಾಗಿ ಬಳ್ಳಿಮಿಂಚಾಗಿ ಹೊಳೆದಿದೆ ಈ 'Phantom of Delight.' ಮೊದಲು ನಾನು ಕವಿಯೆಂದು ನನ್ನ ಕಲ್ಪನೆಯಿರಲಿಲ್ಲ. ಆದರೆ ವರ್ಡ್ಸ್‌ವರ್ಥನ 'ಛಾಯಾಪುತ್ಥಳಿ' ನನ್ನ ಅರಿವಿನಲ್ಲಿ ಮೂರ್ತಿಯಾದಾಗ ನಾನೂ ವರ್ಡ್ಸ್‌ವರ್ಥ – ಇಷ್ಟರ ಮಟ್ಟಿಗೆ ಎನ್ನಿಸಿತು. ನನ್ನಲ್ಲಿರುವ ಕವಿ ಎಚ್ಚರವಾದ – ಅದೇ ನನ್ನ ಪುಣ್ಯ.

ಮೇರಿ ಹಚಿನ್‌ಸನ್ನಳ, ಒಬ್ಬ ಮಾನವಸುಂದರಿಯ ಮರೆಯ ಸೌಂದರ್ಯದ ಮಾಯೆಯನ್ನು ಕವಿ ತೋರಿಸಿದರೆ, ವಿಜ್ಞಾನಿ ರಸೆಲ್ ನಿಸರ್ಗ ಸುಂದರಿಯ ವರ್ಣ ಧ್ವನಿ, ಬೆಳಕು ನೆಳಲು. ಆಕೆಯ ರೂಪ ಮತ್ತು ನೆಯ್ಗೆಯನ್ನೆಲ್ಲ ತೆಗೆದು, ಅವು ಅಲ್ಲಿಲ್ಲ, ನೋಡುವ ಅನುರಕ್ತ ಚಿತ್ತದಲ್ಲಿವೆ – ಎಂದು ಹೇಳಿ ಇಲೆಕ್ಟ್ರಾನ್ ಪ್ರೋಟಾನುಗಳ ಪರಿಭ್ರಮಣದ ನಗ್ನ, ಭೀಕರ, ಸಪ್ಪಗಿರುವ ಬರಿಯ ಹಂದರವನ್ನು, ವೈಜ್ಞಾನಿಕ ಭೂತವನ್ನು ತೋರಿಸುತ್ತಾನೆ. ಇಲ್ಲಿಯ ಅರಿವಿಗೆ (Scientific Consciousness) ಬುದ್ಧಿಯ ಕಣ್ಣಿದೆ. ಅಲ್ಲಿಯದಕ್ಕೆ ಹೃದಯದ ಕಣ್ಣು. ಇಲ್ಲಿಯ 'ಭೂತ'ವನ್ನು ನೋಡುವಾಗ ನನ್ನ ಅರಿವು (Human Consciousness) ಸ್ಥಳಾಂತರಿಸಬೇಕಾಗುತ್ತದೆ. ಹಾಗೆ ಮಾಡುವ ಶಕ್ತಿ ನನ್ನ

೧. Scientific Outlook, p. 272.

೨. The Perennial Philosophy p. 18.

ಅರಿವಿಗಿದ್ದರೆ ನಾನೂ ಅಷ್ಟರ ಮಟ್ಟಿಗೆ ವಿಜ್ಞಾನಿಯೆ. ಮೊದಲು ನನ್ನಲ್ಲಿಲ್ಲವೆಂದು ಭಾವಿಸಿದ ಈ ಪ್ರಜ್ಞೆ ನನ್ನಲ್ಲಿ ಎಚ್ಚರವಾದರೆ ಮಲಗಿದ ವಿಜ್ಞಾನಿ ನನ್ನಲ್ಲಿಯೂ ಇಲ್ಲವೆ?

My Me is God! – ನನ್ನ ನಾನು ದೇವರು. ಅರಿವನ್ನು ಇಲ್ಲಿಗೆತ್ತರಿಸುವುದು, ಎಚ್ಚರಿಸುವುದು – ಅಸಾಧ್ಯ ಪ್ರಯತ್ನ. ನಾನು ಅಜ, ಅಮರ, ಸತ್ಯ ನಿತ್ಯ, ಪರಿಪೂರ್ಣ ಪರಂಜ್ಯೋತಿ ! ನನ್ನ ಅರಿವು ಇಷ್ಟು ಹಿಗ್ಗಬಲ್ಲುದೆ? ಇಷ್ಟು ಪ್ರದೀಪ್ತವಾಗಬಲ್ಲುದೇ? ಆಗಲಾರದು. ಅಂತೆಯೆ ಕ್ಯಾಥರಿನ್ ಹೇಳುವುದು ಸುಳ್ಳು. 'ಇದು ಸುಳ್ಳಲ್ಲ, ಸತ್ಯದ ಸತ್ಯ, ಮಹಾಸತ್ಯ, ಪರಮ ಸತ್ಯ, ಏಕಮೇವ ಸತ್ಯ . . . ' ಎಂದು ಎಲ್ಲ ದೇಶದಿಂದ, ಎಲ್ಲ ಕಾಲದಿಂದ ಎದ್ದು ದಿವ್ಯಾನುಭಾವಿಗಳು ಸಾರಿ ಸಾರಿ ಹೇಳುತ್ತಾರೆ. ಆದರೆ ಕೇಳುವರೆ ಕಿವಿಬೇಕು, ನೋಡುವರೆ ಕಣ್ಣುಬೇಕು.

'. . . On another occasion some one knocked at the saint's door and cried, 'Is Bayazid here?' Bayazid answered, 'Is anybody here except God'?[೧] ನಾನು ನಿಮ್ಮ ಮನೆಗೆ ಬಂದ್ಯು 'ಮನೆಯೊಳಗಿದ್ದೀರಾ?' ಎಂದು ಒದರಿದರೆ ನೀವು, 'ನಾನು? ಮನೆಯೊಳಗಿಲ್ಲ. ಮನೆ ಇದೆ' ಎಂದು ಉತ್ತರ ಕೊಟ್ಟ ಹಾಗಲ್ಲವೆ ಮಹಾನುಭಾವಿ ಬಯಜಿದ್ದನ ಉತ್ತರ ! ಈ ದಿವ್ಯ ಪ್ರಜ್ಞೆ (God-Consciousness ಅಥವಾ Divine Consciousness), 'ದೇವ ತಾನು' ಎಂಬ ದಿವ್ಯದ ಅರಿವು ತನ್ನೊಳಗೆಯೆ ಇದೆ, ಇದೆ; ನಿಮ್ಮಲ್ಲಿಯೆ ಇದೆ, ಒಳಗೆ ತಿಳಿದು ನೋಡಿರಿ, ಎಚ್ಚರವಾಗಿ ನೋಡಿರಿ ಎಂದು ಮಾರ್ಗ ತೋರುತ್ತಾರೆ ಕಂಡು ಬಲ್ಲವರು.

ನಿಮ್ಮಲ್ಲಿ ನೀವು ತಿಳಿದು ನೋಡಿರೇ. ಅನ್ಯವಿಲ್ಲ ಕಾಣಿರಣ್ಣಾ.
ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ.
ಅನ್ಯಭಾವವ ನೆನೆಯದೆ, ತನ್ನೊಳಗೆ ತಾನೆ ಎಚ್ಚರವಿರಬಲ್ಲರೆ
ತನ್ನಲ್ಲಿಯೆ ತನ್ಮಯ ಗುಹೇಶ್ವರಲಿಂಗವು.[೨]

ನೀವು ಅಂದರೆ ಗೊತ್ತಿದೆಯಲ್ಲವೆ? ನೀವು ಅಂದರೆ ನಾನು. ಕಲ್ಲಪ್ಪನ ನೆನಪಿದೆಯೆ? . . ರಾಯರ ವಿಶ್ವರೂಪ ಮರೆತಿರಲಿಕ್ಕಿಲ್ಲ. ದೇಹ ಕರಣ ಇಂದ್ರಿಯಗಳಲ್ಲಿ ಅಹಂಮಮತೆಯನ್ನೈದಿ, ಜ್ಞಾನಜ್ಯೋತಿ ನಂದಿ, ಒಳಗೆ ಕತ್ತಲೆಯಾಗಿ, ಹೊರಗೆ ಅಜ್ಞಾನದೊಳಗಿದ್ದು ಕರಣೇಂದ್ರಿಯಂಗಳ ಬಾಗಿಲಲ್ಲಿ ಹೊರಗೊಳಗೆ ಸಂಚರಿಸುತ್ತ ವ್ಯವಹರಿಸುತ್ತಿರುವ ನಾನೇ ಸಾಮಾನ್ಯವಾಗಿ ನೀವು. ಈ ನಿಮ್ಮ ಒಳಗೆ ನೀವು ನೋಡಬೇಕು. ನಿಮ್ಮ ಪರವಾಗಿ ಈ ಕೆಲಸ ಮತ್ತೊಬ್ಬರು ಕೈಕೊಳ್ಳುವುದು ಸಾಧ್ಯವಿಲ್ಲ. ನನ್ನ ಒಳಗೆ ನಾನು ನೋಡಬೇಕು. ಕಲ್ಲಪ್ಪ ತನ್ನ ಒಳಗೆ ತಾನು ನೋಡಬೇಕು. ನೋಡಬೇಕು – ಆದರೆ ತಿಳಿದು ನೋಡಬೇಕು. ತಿಳಿದು ಅಂದರೆ ವಿಚಾರಮಾಡಿ ಎಂಬುದು ಸಾಮಾನ್ಯವಾದ ಅರ್ಥ. ಈ ಅರ್ಥದಲ್ಲಿ ತಿಳಿದು ಅಂದರೆ ನಿರ್ಮಲವಾಗಿ, ಪ್ರಸನ್ನವಾಗಿ ಎಂಬರ್ಥವನ್ನೂ ಒಂದು

೧. Perennial Philosophy p. 18.
೨. ಪ್ರ. ವ. ಮ. ೧೮೩, ವ, ೬೬.

ಗೂಡಿಸಬೇಕು. ನೀವು ನಿರ್ಮಲವಾದರೆ, ನಿಮ್ಮ ದೇಹ ಕರಣ ಇಂದ್ರಿಯ ಅಜ್ಞಾನ ಅಹಂಭಾವ—ಇವು ಬಹುಮಟ್ಟಿಗೆ ತೊಳೆದು ಹೋದಂತೆಯೆ. ತಿಳಿದು ನಿರ್ಮಲವಾದ ನಿಮ್ಮ ಒಳಗೆ ನೋಡಿರೆ. ಇಲ್ಲಿ ಒಳಗೆ ನೋಡುವುದು ತೊವಲ ಕಣ್ಣಲ್ಲ. ಈ ಕಣ್ಣಿಗೆ ಒಳಗೆ ಹೇಗೆ ಕಂಡೀತು? ಇಲ್ಲಿ ನೋಡಬೇಕು ನೀವು ಅಂದರೆ ಜೀವಾತ್ಮ, ಅಂದರೆ ನಿರ್ಮಲವಾದ, ಪ್ರಸನ್ನವಾದ ಅರಿವು. ಈ ಜ್ಞಾನದೃಷ್ಟಿ ಅಂತರ್ಮುಖವಾಗಿ ನೋಡಿದರೆ 'ಅನ್ಯವಿಲ್ಲ ಕಾಣಿರಣ್ಣಾ.' ತನಗೆ ಅನ್ಯವಾದ ಬೇರೊಂದು ವಸ್ತು ಬ್ರಹ್ಮಾಂಡದಲ್ಲಿಯೆ ಇಲ್ಲ.[೧] ಎಲ್ಲೆಲ್ಲಿ 'ನೀವೇ' ಕಾಣಿರಣ್ಣಾ! ಇದೊಂದು ಮಾನವನ ಮನ ಬುದ್ಧಿ ನಿಲುಕದ ದರ್ಶನ. ಅಲ್ಲವೇ? 'ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂತ್ ವಿಜಾನತಃ ... ...'[೨] ಎಂಬ ಉಪನಿಷತ್ತಿನ 'ಮಂತ್ರದರ್ಶನ'ದ ವಿಷಯ ನೀವು ಕೇಳಿರಬಹುದು. 'ಆತ್ಮಾ ವಾ ಅರೇ ದ್ರಷ್ಟವ್ಯಃ'[೩] ಎಂಬ ಉಪನಿಷತ್ತಿನ ಮಂತ್ರಾನುಭವವನ್ನೂ ನೀವು ಕೇಳಿರಬಹುದು.

ಮತ್ತೆ ಮುಂದೆ. ಅರಿವು ಅಂದರೆ ಚಿನ್ಮಯವಾದ ದಿವ್ಯ ಪ್ರಜ್ಞೆ, ನಿಮ್ಮಲ್ಲಿಯೆ ತದ್ಗತವಾಗಿದೆ ಅಂದರೆ ಸನ್ನಿಹಿತವಾಗಿದೆ, – ನೆಲದ ಮರೆಯ ನಿಧಾನದಂತೆ. ಈ ಅರಿವು ನಿಮ್ಮ ಮರೆಯ ನಿಧಾನವೆ. ಹೀಗೆ ನೋಡುವಲ್ಲಿ ಬೇರೆ ವಿಚಾರ, ಕಲ್ಪನೆ, ಯುಕ್ತಿಯನ್ನು ಮನದಲ್ಲಿ ತಾರದೆ, ತನ್ನ ಒಳಗೆ ತಾನೇ ಎಚ್ಚರವಾಗಿ ಇರಬಲ್ಲರೆ – ಅಂದರೇನು? ತನ್ನೊಳಗೆ ತಾನೆ ಎಚ್ಚರವಿರಬಲ್ಲುದೆ ಆತ್ಮ, ಶುದ್ಧ ಆತ್ಮ, ಚಿದಾತ್ಮ. ಈ ಚಿನ್ಮಯದಲ್ಲಿಯೆ ತನ್ಮಯ ಗುಹೇಶ್ವರಲಿಂಗ. ಹೀಗೆ ಎಚ್ಚರವಾದ ಅರಿವಿನ ಅಂಗವೆಲ್ಲ ಲಿಂಗಮಯ. ಇಂಥ ಸ್ವಾನುಭಾವಿಯ ಕಡೆ ಹೋಗಿ, 'ನೀವಿದ್ದೀರಾ?' ಎಂದು ಕೇಳಿದರೆ ಬಯಜಿದ್ದನೇ ಮತ್ತೆ ಉತ್ತರಿಸಬಹುದಲ್ಲವೆ, 'Is anybody here except God?' ಎಂದು?

ಜೀವನದ ಪರಮರಹಸ್ಯವನ್ನು ಬಲ್ಲ ಇಂಥ ಮಹಾನುಭಾವರ ಮಾತನ್ನು ಕೇಳಬೇಕು. ಇವರ ಮಾತು ಮಾತಲ್ಲ. ಮಂತ್ರ, ದಿವ್ಯಮಂತ್ರ. ಅವು ಶ್ರೋತವ್ಯ, ಮಂತವ್ಯ, ನಿದಿಧ್ಯಾಸಿತವ್ಯ. 'My Me is God', 'Is anybody here except God?', 'ತನ್ನಲ್ಲಿಯೆ ತನ್ಮಯ ಗುಹೇಶ್ವರಲಿಂಗವು' – ಇಲ್ಲಿಯ ಶಬ್ದ ಅರ್ಥ ಭಾವ ತೀರ ಸರಳ; ಆದರೆ ಒಳಗೆ ಹೂಳಿದ್ದ ಅನುಭವ ನಿರುಪಾಧಿಕವಾಗಿ ಬೆಳಗುವ ನಿರಾಳ. ಇದು ಮಾನವನ ಸಾಮಾನ್ಯ ಮನ ಬುದ್ಧಿ ಭಾವಕ್ಕೆ ಅಗಮ್ಯ, ಅಗೋಚರ. ಸುಜ್ಞಾನ ಜ್ಯೋತಿ ನಂದಿ, ಅಜ್ಞಾನದ ಸೀಮೆಯಲ್ಲಿಯೆ ಸುಳಿದಾಡುತ್ತಿರುವ ಮಾನವನ ಪ್ರಜ್ಞೆಗೆ ಬೆಳಗಿನ ನಾಡು 'ಪರದೇಶ'. ಅಲ್ಲಿ ಹೋಗಲು ಬಾರದು, ಆದರೆ ಹೋಗದೆ ಇರಲೂ

---

೧. ಹೋಲಿಸಿರಿ: ತನ್ನ ತಾನರಿದ ಮಹಾಂತ ಶರಣನು ಆವ ದೆಸೆ ದಿಕ್ಕು ನೋಡಿದಡೆಯು
ಅಲ್ಲಲ್ಲಿಯು ತಾನೆಯಾಗಿಹನಲ್ಲದೆ ಮತ್ತೇನು ಅನ್ಯವಿಲ್ಲ......
ಪ್ರ. ವ. ಪು. ೩೯, ವ. ೬೧. ಟೀಕು.

೨. ಈ. ಉ. ಮಂ. ೭.

೩. ಬೃ. ಉ. ಅ. ೨, ಬ್ರಾ. ೪, ಮಂ. ೫.

ಬಾರದು. ನನ್ನ ನಿಮ್ಮ ಅಂದರೆ ಜೀವಾತ್ಮನ, ಮಾನವನ ಮರೆಯ ಮಹಾದೇವ, ಗುಹೇಶ್ವರ ಲಿಂಗ ಸುಮ್ಮನೆ ಕೂಡುವುದಿಲ್ಲ. ನಾನು ಅದರ 'ಉಸಾಬರಿ'ಯನ್ನೇ ಬಿಟ್ಟು, ನನ್ನ ವ್ಯವಹಾರ ನನ್ನ ಉದ್ಯೋಗ, ನನ್ನ ವಿದ್ಯೆ, ನನ್ನ ಕಲೆ, ನನ್ನ ವಿಜ್ಞಾನ, ನನ್ನ ಅಧಿಕಾರ, ನನ್ನ ಸಂಪತ್ತು, ನನ್ನ ಕೂಲಿ ನನ್ನ ಕುಂಬಳಿ, ನನ್ನ ಯಂತ್ರ ನನ್ನ ತಂತ್ರ, ನನ್ನ ಸೀಮ್ಲಾ ಪ್ಯಾರಿಸ್ ವ್ಹಾಯಿಟ್‌ಹೌಸ್, ನನ್ನ ಮಠ ನನ್ನ ಆಶ್ರಮ, ನನ್ನ ಹೆಂಡಿರು ಮಕ್ಕಳು ಮನೆ ಮಾರು, ನನ್ನ ಪ್ರಗತಿ ಪ್ರಖ್ಯಾತಿ ಪ್ರಸಿದ್ಧಿ, ನನ್ನ ನವೀನ ಸಂಸ್ಕೃತಿ ನೂತನ ಜೀವನದಲ್ಲಿ ಸುಖವಾಗಿದ್ದು, ಲೋಕದ ಡೊಂಕು ನಾಯಿ ಬಾಲವೆಂದು, ದುಃಖ ದಾರಿದ್ರ್ಯ ಅನ್ಯಾಯ ಮೋಸ ಕಪಟ ದಂಭ ಲೋಕಕ್ಕೆ ಸಹಜವೆಂದು, ಬಂದು ದನ್ನು ನುಂಗಿ ಇದ್ದುದನ್ನುಂಡು ಮಲಗಿಕೊಂಡು ಇರಬೇಕೆಂದರೆ, ಮಾನವನ ಹೃದಯಾಂತರಾಳದ ಗುಹೇಶ್ವರಲಿಂಗ ಹೊಕ್ಕಲ್ಲಿ ಹೊಕ್ಕು, ಇದ್ದಲ್ಲಿ ಬಂದು ಹೊಡೆದೆಬ್ಬಿಸುತ್ತಾನೆ. ಹೊರಗೆ ಗಂಡನ ಕಾಟ, ಒಳಗೆ ನಲ್ಲನ ಕಾಟ. ಈ ಇಕ್ಕುಳದಲ್ಲಿ 'ನಾನು'.

ಯಾರ ಮಾತು ಕೇಳಬೇಕು? ಪ್ರಕೃತಿ, ಲೋಕ ಲೌಕಿಕ, ವಿಷಯ ಸಂಸಾರ ತನ್ನ ಕಡೆ ನನ್ನನ್ನು ಬಲವಾಗಿ ಜಗ್ಗಿದರೆ, ಹೃದಯದಲ್ಲಿ ಹುದುಗಿದ ಅವಿಜ್ಞಾತ ಶಕ್ತಿ ತನ್ನೆಡೆ ನನ್ನನ್ನು ಕರೆಯುತ್ತಿದೆ. ಈ ಅವಿಜ್ಞಾತ ಶಕ್ತಿ, ಈ ಗುಹೇಶ್ವರ ಈ ಬೆಳಗು ಈ ಬಯಲು ಈ ನಿತ್ಯಾನಂದ ಈ ಪರಿಪೂರ್ಣಪರಂಜ್ಯೋತಿ ವಿಶ್ವಪ್ರಪಂಚದ ಗುಹಾಂತರಾಳದಲ್ಲಿ ಹಗಲು ರಾತ್ರಿಯೆನ್ನದೆ ಎಚ್ಚರವಿದ್ದು, ಜಡ ಚೈತನ್ಯದ ಲೀಲೆಗೆ ಎಡೆಗೊಟ್ಟಿದ್ದರೂ, ಹೊರಗೆ ಜಿಗಿದಾಡುವ ಎಳೆಗರುವನ್ನು ಆಕಳು 'ಅಂಬಾ' ಎಂದು ಕರೆವಂತೆ, ವಿಶ್ವವನ್ನೆ ತನ್ನೆಡೆ ಬಾರೆಂದು ಸನ್ನೆದೋರುವಂತಿದೆ ವಿಶ್ವಹೃದಯದ ಗಂಭೀರದಿಂದ. ಇಲ್ಲಿ ಬುದ್ಧಿಯ ಸಿದ್ಧಾಂತದ ಆವಶ್ಯಕತೆ ಇಲ್ಲ. 'ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ'[೧] ಇಲ್ಲಿ ಸದುಹೃದಯದ ಶಿವಾಪೇಕ್ಷೆಯೆ ಪ್ರಮಾಣ. ಮತ್ತು ಮಹರ್ಷಿ ಅರವಿಂದರು ಹೇಳುವಂತೆ 'God, Light, Freedom, Immortality'— ಇವು ಪುರಾತನರ ದಿವ್ಯಪ್ರಜ್ಞೆಯ ಉಷಃಕಾಲದಲ್ಲಿಯೆ ಮೂಡಿದ ದಿವ್ಯಾಪೇಕ್ಷೆಗಳು. ಇವಕ್ಕೂ ಸಿದ್ಧಾಂತ, ಪ್ರಮಾಣ ಬೇಕೆಂದರೆ, ಮಹಾವಿಜ್ಞಾನಿ ಎಡಿಂಗ್ಟನ್ನರು ಹೇಳುವ ಮಾತನ್ನು ಕೇಳಿ:

'We all know that there are regions of the human spirit untramelled by the world of physics. In the mystic sense of the creation around us, in the expression of art, in a yearning towards God, the soul grows upward and finds the fulfilment of something implanted in its nature. The sanction for this development is within us, a striving born with our consciousness or an Inner Light proceeding from a greater power than ours. Science can scarcely question this sanction, for the pursuit of science springs from

---

೧. ಅಭಿ. ಶಾ. ಅಂ. ೧, ಪ. ೨೨.

striving which the mind is impelled to follow, a questioning that will not be suppressed. Whether in the intellectual pursuits of science or in the mystical pursuits of the spirit, the light beckons ahead and the purpose surging in our nature responds.'[೧]

ವಿಜ್ಞಾನಪ್ರಪಂಚಕ್ಕೆ ಅಗೋಚರವಾದ ಪ್ರದೇಶಗಳು ಮಾನವನ ಅಂತರಂಗದಲ್ಲಿ ಹರಹಿಕೊಂಡಿವೆ ಎಂಬುದು ನಮಗೆಲ್ಲ ಗೊತ್ತು. ವಿಶ್ವಸೃಷ್ಟಿಯ ಅಪಾರ ಲೀಲೆಯನ್ನು, ಅನಂತ ವೈಭವವನ್ನು ಕಂಡು ಭಯಭಕ್ತಿಯಿಂದ ಕೈಮುಗಿಯುತ್ತೇವೆ; ಕಲೆಯ ಮುಖವಾಗಿ ಗಂಭೀರವಾದ ವಿಶ್ವಸೌಂದರ್ಯವನ್ನು ಎಚ್ಚರಿಸಲು ಹವಣಿಸುತ್ತೇವೆ. ವಿಶ್ವದ ಅಂತರ್ಯಾಮಿಯಾದ ವಿಶ್ವೇಶ್ವರನಿಗಾಗಿ ಹಂಬಲಿಸುತ್ತೇವೆ. ಈ ಭಕ್ತಿ ಈ ಪ್ರಯತ್ನ ಈ ಹಂಬಲದಿಂದ ಆತ್ಮ ಮೇಲುಗಡೆ ಹಬ್ಬಿ ಬೆಳೆಯುತ್ತದೆ; ತನ್ನ ಹೃದಯದ ನಿಗೂಢಕ್ಕೆ ಸಂತೃಪ್ತಿಯನ್ನು ಕಾಣುತ್ತದೆ. ಆತ್ಮನ ಈ ವಿಕಾಸಕ್ಕೆ ಅಂತರಾಳದ ಆಶೀರ್ವಾದವಿದೆ. ಅರಿವಿನೊಡನೆಯೆ ಹುಟ್ಟಿದೆ ಈ ಹೋರಾಟ. ನಮ್ಮ ಶಕ್ತಿಯಾಚೆಗಿರುವ ಮಹಾಶಕ್ತಿಯಿಂದ ಹರಿವ ಅಂತರಂಗಜ್ಯೋತಿಯೆ 'ತಥಾಸ್ತು' ಎನ್ನುತ್ತಿದೆ ಈ ಆತ್ಮವಿಕಾಸಕ್ಕೆ. ಈ 'ತಥಾಸ್ತು'ವನ್ನು ವಿಜ್ಞಾನ ವಿರೋಧಿಸಲಾರದು. ಅಂತರಾಳದ ಈ 'ತಥಾಸ್ತು'ವಿನ ಬಲದಿಂದಲೇ ವಿಜ್ಞಾನ ಹುಟ್ಟಿದೆ; ಬದುಕಿದೆ, ಬೆಳೆದಿದೆ. ವಿಜ್ಞಾನದ ಮೂಲಾಧಾರವಾದ ಹೃದಯಾಂತರಾಳವೆ ಸ್ವಾನುಭಾವಕ್ಕೆ ಪ್ರೇರಕಶಕ್ತಿಯಾಗಿದೆ. ಅಂತರಂಗದ ಜ್ಯೋತಿ ಮುಂದೆ ಸನ್ನೆ ಮಾಡುತ್ತಿದೆ, ನಮ್ಮ ಸ್ವಭಾವದಿಂದ ಚಿಮ್ಮುವ ಉದ್ದೇಶ ಅದಕ್ಕೆ 'ಹೂಂ' ಎನ್ನುತ್ತಿದೆ.

ಮಾನವಕಲ್ಯಾಣಕ್ಕಾಗಿ ವಿಜ್ಞಾನ ಮುಂದುವರಿಯಲಿ. ಆತ್ಮಕಲ್ಯಾಣಕ್ಕಾಗಿ, ಅಂದರೆ ಮಾನವ ಕಲ್ಯಾಣಕ್ಕಾಗಿ ಮಾನವಹೃದಯದ ದಿವ್ಯಾಪೇಕ್ಷೆ ಫಲಿಸಲಿ. 'ಶಿವಂ ಭೂಯಾತ್.'

---

೧. The Nature of the Physical World pp. 327-328.

೪

ಏನಿದೆ ಅಲ್ಲಿ?

ಅನುದಿನಂಗಳೆಂಬವು ಪ್ರಣತೆಯಾಗಿ, ವರುಷಂಗಳೆಂಬವು ಬತ್ತಿಯಾಗಿ,
ಜೀವಜಾತಿಯು ಬೆಳಗಿನ ಬೆಳಗ ಬೆಳಗಿನಲಱಸಬೇಕು.
ಬೆಳಗುಳ್ಳಲ್ಲಿ ಆತ ನಡೆಸಿದಂತೆ ನಡೆಯಬೇಕು. ಬೆಳಗುಳ್ಳಲ್ಲಿ ಆತನಿರಿಸಿದಂತೆ ಇರಬೇಕು.
ಎಣ್ಣೆಯೆಂಬ ಜವ್ವನ ಸವೆಯದ ಮುನ್ನ, ಬೆಳಗು ಕತ್ತಲೆಯಾಗದ ಮುನ್ನ
ರೇಕಣ್ಣಪ್ರಿಯ ನಾಗಿನಾಥನ ಬೆಳಗ ಬೆಳಗಿನಲಱಸಬೇಕು.'

ಲಿಂಗಲೀಲಾವಿಲಾವಿಲಾಸಚಾರಿತ್ರ, ಪು. ೮೭, ವ. ೧೩.

ಜೀವನ ಒಂದು ಗಭೀರ ಸಮಸ್ಯೆ, ಪ್ರಶ್ನೆಗಳ ಪ್ರಶ್ನೆ ಮಹಾಪ್ರಶ್ನೆ. ಬಿಡಿಸಬಾರದು, ಬಿಡಿಸದಿರಬಾರದು. ಹೊರಗೆ ತೊಡಕು, ಒಳಗೆ ದಸರಿದೊಡಕು. 'ಹೊತ್ತು ಹೋಗದ ಮುನ್ನ, ಮೃತ್ಯು ಮುಟ್ಟದ ಮುನ್ನ', ಆಯುಷ್ಯವೆಂಬ ಎಣ್ಣೆ ಸವೆದು ಅರಿವಿನ ಮಾನವ ಪ್ರಾಣಿ ಮೃತ್ಯುವಿನ ಗಭೀರಗರ್ತದಲ್ಲಿ ಮುಳುಗಿ ಕತ್ತಲೆಯಾಗುವುದಕ್ಕಿಂತ ಮೊದಲೇ ಸಮಸ್ಯೆಯನ್ನು ಪರಿಹರಿಸಬೇಕು; ಪ್ರಶ್ನೆಗೆ ಉತ್ತರ ಕೊಡಬೇಕು. ಅಂದರೆ ಸತ್ತರೂ ಬದುಕುವ ಆಶೆ ಇದೆ, ಆಶ್ವಾಸನವಿದೆ. 'ಮೃತ್ಯೋರ್ಮಾ ಅಮೃತಂ ಗಮಯ'– ಎಂಬ ಮಾನವನ ಹೃದಯದ ಪುರಾತನಗೀತ ಚಿರಂತನ ಪ್ರಾರ್ಥನೆಯಾಗಿ, ಮಂಗಲಾರತಿಯಾಗಿ, ಸಮಾಪ್ತ ಸಿದ್ಧಿಯಾಗಿ ನಿಲ್ಲುವ ಶುಭಸೂಚನೆ ಇದೆ.

ಜೀವನದಲ್ಲಿಯ ಪ್ರಶ್ನೆ ಸಮಸ್ಯೆಗಳಿಗಂತೂ ಲೆಕ್ಕವೇ ಇಲ್ಲ. ನನಗೆ ಅಥವಾ ನನ್ನಂತೆ ಸಾಮಾನ್ಯರ ಮಟ್ಟದಲ್ಲಿದ್ದರೆ ನಿಮಗೆ ಈ ಪ್ರಶ್ನೆಗಳ ಲೆಕ್ಕ ಲೆಕ್ಕಹತ್ತಿದಂತೆ ತೋರುತ್ತದೆ. ಏಕೆಂದರೆ ಹೆಚ್ಚಾಗಿ ನನ್ನ ಪ್ರಶ್ನೆಗಳೇ ನನಗೆ ಪ್ರಶ್ನೆಗಳು, ನಿಮ್ಮ ಆತನ ಈತನ ಪ್ರಶ್ನೆಗಳು ನನಗೆ ಸುಸ್ಪಷ್ಟವಾಗಿ ಕಾಣುವುದಿಲ್ಲ. ಸಮಾಜ, ದೇಶ, ರಾಷ್ಟ್ರದ ಪ್ರಶ್ನೆಗಳು ಮತ್ತಷ್ಟು ನನ್ನಿಂದ ದೂರದೂರವಾಗುತ್ತ ಅಸ್ಪಷ್ಟದ ಸೀಮೆಯಲ್ಲಿ ಕಾಣದಾಗುತ್ತವೆ. ಇನ್ನು ಎಲ್ಲ ಕಾಲ, ಎಲ್ಲ ದೇಶ, ಎಲ್ಲ ರಾಷ್ಟ್ರದ ಮಾನವ ಕುಲಕೋಟಿಯನ್ನು ಎದುರಿಸಿರುವ, ಎದುರಿಸುತ್ತಿರುವ, ಎದುರಿಸಬಹುದಾದ ಪ್ರಶ್ನೆಗಳಂತೂ ನನಗೆ ಕತ್ತಲೆಯ ಕರಿಯುರು.

ನನ್ನ ಜೀವಮಾನದಲ್ಲಿ 'ನಾನು'– ಇಲ್ಲಿಯೂ ಕಲ್ಲಪ್ಪನನ್ನು ಮರೆಯಬೇಡಿ– ಸಾಯುವ ವರೆಗೆ ಜೀವಂತವಾಗಿದ್ದು, ಸಾಧ್ಯವಿದ್ದಷ್ಟು ಅಥವಾ ಶಕ್ತಿ ಮೀರಿ 'ನಾನಿ'ನ ಬಳ್ಳಿಯನ್ನು ಹಬ್ಬಿಸುತ್ತ ಬೆಳೆದು ದೊಡ್ಡವನಾಗಿ, ಈ ಹಬ್ಬುಗೆಗೆ ಅಡ್ಡಬಂದುದೆಲ್ಲ ತನ್ನ ವೈರಿಯೆಂದು ಬಗೆದು ದ್ವೇಷಮಾಡಿ, ಸಾಧ್ಯವಿದ್ದರೆ ಕತ್ತರಿಸಿ ಕಡಿದುಹಾಕಿ, ಅದಕ್ಕೆ ಅನುಕೂಲವಾದುದೆಲ್ಲ ತನ್ನದೆಂದು, ತನ್ನ ಮಿತ್ರ ಬಂಧು ಬಾಂಧವರೆಂದು ವ್ಯಾಮೋಹ

ದಿಂದ ಒಲಿದು ಪ್ರೀತಿಸಿ ಬೆಳೆಸುವಷ್ಟರಲ್ಲಿ ಹಣ್ಣು ಹಾಗಲ ಆಗಿ, ಒಂದು ದಿನ 'ಎಣ್ಣೆ ತೀರಿದ ದೀವಿಗೆ'ಯಂತೆ ತಣ್ಣಗೆ ಕತ್ತಲೆಯಾಗುವುದು. ಇದು 'ನನ್ನ' ಪುರಾಣ, ಕಥೆ, ಇತಿಹಾಸ.

ಈ ಸಣ್ಣ – ಅಥವಾ ನನ್ನ ದೃಷ್ಟಿಯಲ್ಲಿ ದೊಡ್ಡ – ಸಾಮ್ರಾಜ್ಯದ ಇತಿಹಾಸದಲ್ಲಿ ತಲೆಯೆತ್ತುವ ಪ್ರಶ್ನೆ ಸಮಸ್ಯೆಗಳ ಸಂಖ್ಯೆ ಕಡಮೆಯಾಗಿದ್ದರೂ, ಅಷ್ಟೇ ಸಾಕು ನನ್ನ ಇತಿಹಾಸವನ್ನು ರೋಮ ಸಾಮ್ರಾಜ್ಯ ಇತಿಹಾಸದ ಮಟ್ಟಕ್ಕೇರಿಸಲು. ಹೆಂಡತಿ ಮಾತು ಕೇಳುವುದಿಲ್ಲ, ಮಗ ನೂರುಮೂರ್ಖ, ಮಗಳಿಗೆ ವರ ಬೇಕು, ವರನಿಗೆ ವರದಕ್ಷಿಣೆ ಬೇಕು. ಎಮ್ಮೆ ಗೊಡ್ಡು, ಏನೋ ಹಿಂಡುವುದೇ ಇಲ್ಲ. ಹೋದ ವರ್ಷ ಕಳೆದ ಕುರ್ಚಿಗೆ ಇನ್ನೂ ಸಿಗಲೊಲ್ಲದು. ಮಳೆ ಬಂದರೆ ಹಿತ್ತಲ ಕಡೆ ಗೋಡೆ ಬೀಳುವಂತಿದೆ. ಮೇಲೆ ಬಿದ್ದು ಯಾರಾದರು ಸಿಕ್ಕರೆ? .... ನೌಕರಿ ಮಾಡಬಾರದು. 'ಮೇಲಿನವರ ಕಾಟ, ಒದಿಕೆ ಎಂದೂ ತಪ್ಪಿದ್ದಲ್ಲ. ಅವನ ಹೊಲದ ಕಾಳು ಹತ್ತು ಹೇರು, ನನ್ನದು ಕರಿಸಾಲು. ಕಾರಣವೇನು? – ಇಂಥ ಜೀವನದ ಕಥೆಯಲ್ಲಿ ಪ್ರಶ್ನೆಗಳ ಸಂಖ್ಯೆಗಿಂತ ಸಮಸ್ಯೆಗಳ ಸಂಖ್ಯೆಯೆ ಹೆಚ್ಚು. ಇವೆಲ್ಲ ಬಾಲಿಶವೆಂದು ಅನ್ನಬಹುದು ಹೆರವರು. ಆದರೆ ಅವು ನನಗೆ ಬ್ರಹ್ಮಗಂಟುಗಳೆ. ಕಣ್ಣು ಒರೆಸಿಕೊಳ್ಳುವ ಪುರಸೊತ್ತಿಲ್ಲದೆ ನೂರು ಕಾಟ, ತೊಡಕು ತೊಂದರೆ. ಇರಬೇಕು, ಇರಬಾರದು. ದೇವರು ಕಣ್ಣುಮುಚ್ಚಬೇಕು. ಇಲ್ಲಿ ಚುಚ್ಚುವ ಮುಳ್ಳುಗಳ ತೀಕ್ಷ್ಣತೆ, ಗಾಯ ನನಗೇ ಗೊತ್ತು.

ಇನ್ನು ಸಮಾಜ, ಧರ್ಮ, ದೇಶ, ರಾಷ್ಟ್ರ, ಜಗತ್ತಿನ ಉದ್ಧಾರದಲ್ಲಿ ತೊಡಗಿದವರ ಪ್ರಶ್ನೆ ಸಮಸ್ಯೆಗಳ ಗಾತ್ರ, ಸಂಖ್ಯೆ, ತೀಕ್ಷ್ಣ, ಗಾಯ ನೋವು ಒದ್ದಾಟ ಅವರಿಗೇ ಗೊತ್ತು. – ಜನಕ್ಕೆ ಬುದ್ಧಿಯಿಲ್ಲ, ಎಲ್ಲರಲ್ಲಿ ಸ್ವಾರ್ಥ. ಸ್ವಚ್ಛತೆ ಆರೋಗ್ಯದ ಕಲ್ಪನೆಯೇ ಇಲ್ಲ. ಎಲ್ಲ ಧರ್ಮ ಗಾಳಿಗೆ ತೂರಿದರು. ಲಿಂಗ ಕಟ್ಟುವುದಿಲ್ಲ, ಜನಿವಾರ ಹರಿದೊಗೆದರು. ಕಳ್ಳಪೇಟೆ, ಲಂಚ, ಅನ್ಯಾಯ, ಮೋಸ, ದಂಭ ಕಪಟ. ಸಭೆ ಕರೆಯಬೇಕು, ಜನ ಕೂಡು ವುದಿಲ್ಲ. ಏಕೆ? ಇವನ್ನು ಹೇಗೆ ನಿರ್ಮೂಲ ಮಾಡಬೇಕು? ಯುದ್ಧ ಆಕ್ರಮಣ, ಆಹಾರದ ಅಭಾವ, ಅಶಾಂತಿಯ ತಾಂಡವ – ಇವನ್ನು ಹೇಗೆ ತಡೆಯಬೇಕು? ಇವೇ ಮುಂತಾದ ಸಾವಿರ ಸಮಸ್ಯೆ ಪ್ರಶ್ನೆಗಳು ಉದ್ಧಾರಕರಿಗೆ. ಇಂಥವರಿಗೆ ಎರಡು ಮುಖ, ಇದು ಎಲ್ಲರಿಗೂ ಗೊತ್ತಿದ್ದ ಮಾತು. ಒಂದು ಗುಪ್ತ, ಮತ್ತೊಂದು ಪ್ರಕಟ. ಪ್ರಕಟ ಮುಖ ಯಾವಾಗಲೂ ಪರಾರ್ಥವನ್ನೆ, ಪರಹಿತ ಪರಚಿಂತೆಯನ್ನೇ ಸಾರುತ್ತದೆ. ಗುಪ್ತ ಮುಖ 'ಪರಹಿತ' ಮಾಡುವ ವ್ಯಾಪಾರದಿಂದ ಬಂದ ಲಾಭವನ್ನೆಲ್ಲ ಒಳಗೇ ನುಂಗುತ್ತದೆ. ಒಂದು ಮುಖವುಳ್ಳ, ಕಲ್ಯಾಣಭಾವನೆ ನಿಷ್ಕಾಮಬುದ್ಧಿಯುಳ್ಳ ನಿಜವಾದ ಉದ್ಧಾರಕರ ಸಂಖ್ಯೆ ಸೊನ್ನೆಯೆಂದು ನಮ್ಮ ಅಭಿಪ್ರಾಯವಲ್ಲ. ಅಂಥವರು ನೂರಕ್ಕೊಬ್ಬರು, ಸಾವಿರ ಕ್ಕೊಬ್ಬರು, ಲಕ್ಷ ಕೋಟಿಗೊಬ್ಬರು.

ಮತ್ತೆ ಕಲೆ, ವಿದ್ಯೆ, ಶಿಕ್ಷಣ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಮೂಡುವ ಪ್ರಶ್ನೆಗಳು ಲಾಭ-ಹಾನಿಯ ಪ್ರಶ್ನೆಗಳಲ್ಲ. ಇಲ್ಲಿ ಬಹುಮಟ್ಟಿಗೆ ನಿಸ್ಸ್ವಾರ್ಥ, ಅನಾಸಕ್ತಿ, ನಿರ್ಭೀತಿ, ಸತ್ಯನಿಷ್ಠೆ, ಪ್ರಾಮಾಣಿಕತನ – ಇವು ಇಲ್ಲಿಯ ಪ್ರಶ್ನೆಗಳ, ಸಮಸ್ಯೆಗಳ ಗುಣ

ಧರ್ಮವೆಂದು ಹೇಳಬಹುದು. ಇಲ್ಲಿ ಸಮಸ್ಯೆಗಳಿಗಿಂತ ಪ್ರಶ್ನೆಗಳೆ ಅಧಿಕ. ಈ ಪವಿತ್ರ ತೀರ್ಥ ಕ್ಷೇತ್ರಗಳಿಗೆ ಲೋಕದ ಯಾತ್ರಿಕರು ಬಂದು, ತಮ್ಮ ಪಾಪ ಇಲ್ಲಿ ತೊಳೆದು ಕೊಂಡು, ಇಲ್ಲಿದ್ದ ಪುಣ್ಯವನ್ನು ಕೊಂಡೊಯ್ದು ಈ ತೀರ್ಥಕ್ಷೇತ್ರಗಳನ್ನೂ 'ಸಂತೆ ಬಜಾರ'ದ ಮಟ್ಟಕ್ಕೆ ಇಳಿಸುತ್ತಿದ್ದಾರೆ. ಇದು ಲೋಕದ ನೀತಿಯೆ.

ಹೀಗೆ ಜೀವನದ ವಿವಿಧ ರಂಗವನ್ನು ಪರೀಕ್ಷಿಸುತ್ತ ತಿರುಗಾಡಿ ನೋಡಿದರೆ, ಒಂದು ಮಾತು ಸ್ಪಷ್ಟವಾಗಿ ಎದ್ದು ನಿಲ್ಲುತ್ತದೆ ಕಾಣಬಲ್ಲ ಕಣ್ಣುಗಳ ಮುಂದೆ. ಜೀವನದ ಒಂದು ಮುಖ್ಯಾಂಶ ವಿದ್ಯೆ, ಮತ್ತೊಂದು ವ್ಯವಹಾರ. ಎಲ್ಲ ಕಲೆ ಶಾಸ್ತ್ರ ವಿಜ್ಞಾನವನ್ನೆಲ್ಲ 'ವಿದ್ಯೆ' ಎಂದು ಕರೆದರೆ, ಸಾವಿರ ಮುಖವಾಗಿ ಹರಿವ ಮಾನವನ ಚಟುವಟಿಕೆಗಳನ್ನೆಲ್ಲ 'ವ್ಯವಹಾರ' ಎಂದು ಕರೆಯಬಹುದು. ವಿದ್ಯೆಗೆ ಸಂಶಯ ಪ್ರಶ್ನೆಗಳೆ ನಿತ್ಯಾನುಸಾರಿಗಳು; ವ್ಯವಹಾರಕ್ಕೆ ತೊಂದರೆ ಸಮಸ್ಯೆಗಳೆ ಬೇಡಾದ ಬಂಧುಗಳು. ಈ ವಿದ್ಯೆ ಮತ್ತು ವ್ಯವಹಾರ ಜೀವನಪಟದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ ಎಂಬುದನ್ನು ನಾವೆಂದೂ ಮರೆಯತಕ್ಕುದಲ್ಲ. ನಿಸರ್ಗವಾಗಿ ನಡೆವ ಮಾನವಪ್ರಾಣಿಯ ವ್ಯವಹಾರಕ್ಕೆ, ಈ ವ್ಯವಹಾರವನ್ನು ಕುರಿತು ವಿಚಾರಮಾಡಿ, ಆಲೋಚಿಸುವ ವಿದ್ಯೆಯ ನೂತನ ಪ್ರಭೆಯಲ್ಲಿ ತನ್ನ ಪ್ರಾಪಂಚಿಕ ವ್ಯವಹಾರವನ್ನು ಒಂದು ವಿಶಿಷ್ಟ ಪದ್ಧತಿಯಲ್ಲಿ ಕ್ರಮಗೊಳಿಸುವ ಶಕ್ತಿ ಇರುವುದರಿಂದಲೆ ಮಾನವನು ಎಲ್ಲ ಪ್ರಾಣಿಗಳಲ್ಲಿ ಮಿಗಿಲಾದ, ಹೆಚ್ಚಿನ ಪ್ರಾಣಿ ಎಂದು ಹೇಳಿಸಿಕೊಳ್ಳುವುದು.

ನನಗೆ ಕಾಣುವ ಬಾಹ್ಯಪ್ರಪಂಚ, ವ್ಯವಹಾರವನ್ನು ಪ್ರಶ್ನಿಸಿ, ಸಂದೇಹಿಸಿ ಒಂದು ನಿರ್ಣಯಕ್ಕೆ, ಸಿದ್ಧಾಂತಕ್ಕೆ ಬರುವ ವಿದ್ಯೆಯೆ ಪ್ರಾಪಂಚಿಕ ವಿದ್ಯೆ ಎಂದು ಹೆಸರಿಟ್ಟರೆ, ಈ ಪ್ರಪಂಚ, ವ್ಯವಹಾರವನ್ನು ತನಗೆ ಇದಿರಿಟ್ಟು ನೋಡುವ 'ನನ್ನ'ನ್ನೇ ಪ್ರಶ್ನಿಸಿ, ಸಂದೇಹಿಸಿ ಪರೀಕ್ಷಿಸಿ ಒಂದು ನಿರ್ಣಯ, ಸಿದ್ಧಾಂತಕ್ಕೆ ಬರುವುದೆ ಆತ್ಮವಿದ್ಯೆ ಎಂದು ಕರೆಯಬಹುದು. ಪ್ರಪಂಚ, ವ್ಯವಹಾರದ ವಿದ್ಯೆ, ವಿದ್ಯೆ ಹೌದು; ಆದರೆ 'ಅಪರಾ ವಿದ್ಯೆ'. ಈ ವಿದ್ಯೆಗೆ ಮೂಲವಾದ ವಿದ್ಯೆಯೆ ಆತ್ಮವಿದ್ಯೆ, ಅದೇ 'ಪರಾವಿದ್ಯೆ', ಅದೇ ಬ್ರಹ್ಮವಿದ್ಯೆ.

ಮುಂಡಕೋಪನಿಷತ್ತಿನ ಪ್ರಥಮಖಂಡದಲ್ಲಿ ಅಂಗಿರಸನು ಶೌನಕನಿಗೆ ಪರಾ ಮತ್ತು ಅಪರಾ ವಿದ್ಯೆಗಳನ್ನು ಹೀಗೆ ಉಪದೇಶಿಸುತ್ತಾನೆ:

. . . .

'ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ
ಯದ್ ಬ್ರಹ್ಮವಿದೋ ವದಂತಿ ಪರಾ ಚೈವಾಪರಾ ಚ ॥
ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ
ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ ॥
ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ॥'[೧]

---

೧. ಮುಂ. ಉ. ಮುಂಡಕ ೧, ಖಂ. ೧, ಮಂ. ೪-೫.

ನಾಲ್ಕು ವೇದ ಆರು ವೇದಾಂಗಗಳೆಲ್ಲ 'ಅಪರಾ ವಿದ್ಯೆ' ಎಂದು ಹೇಳಿ, ಯಾವ ವಿದ್ಯೆಯಿಂದ 'ಅಕ್ಷರ'ದ ಪ್ರಾಪ್ತಿಯಾಗುವುದೋ ಅದೇ 'ಪರಾ ವಿದ್ಯೆ' ಎಂದು ಬೋಧಿಸುತ್ತಾನೆ ಮಹರ್ಷಿ ಅಂಗಿರಸ. 'ಅಕ್ಷರ'ವೆಂದರೇನು? 'ಯತ್ತದದ್ರೇಶ್ಯಂ ಅಗ್ರಾಹ್ಯಂ ಅಗೋತ್ರಂ ಅವರ್ಣಂ ಅಚಕ್ಷುಃಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ತದ್ಭೂತಯೋನಿಂ ಪರಿಪಶ್ಯಂತಿ ಧೀರಾಃ'[೧] – ಎಂದು 'ಅಕ್ಷರ'ದ ಸ್ವರೂಪವನ್ನು ನಿರೂಪಿಸುತ್ತಾನೆ ಅಕ್ಷರದ್ರಷ್ಟಾರ ಅಂಗಿರಸ. ಯಾವುದು ದೃಶ್ಯವಲ್ಲ, ಗ್ರಾಹ್ಯವಲ್ಲ, ಯಾವುದಕ್ಕೆ ಗೋತ್ರವರ್ಣವಿಲ್ಲ, ಯಾವುದಕ್ಕೆ ಕಣ್ಣುಕಿವಿಯಿಲ್ಲ, ಕೈಯಿಲ್ಲ ಕಾಲಿಲ್ಲ, ಇಂಥ ನಿತ್ಯ ಸರ್ವವ್ಯಾಪಿ, ಸರ್ವಗತ, ಅತ್ಯಂತ ಸೂಕ್ಷ್ಮ, ಅವ್ಯಯ, ಎಲ್ಲ ಭೂತಜಾತದ ಬೀಜವಾದ 'ಅಕ್ಷರ'ವನ್ನು ಧೀರರು ನೋಡುತ್ತಾರೆ.

ಜೀವಜಾತಿಯ ಮೂಲಪ್ರಕಾಶವಾದ ಆತ್ಮದ ನಿಜಸ್ವರೂಪವೇ ಅಕ್ಷರಬ್ರಹ್ಮ. ತಾನೇ ಬ್ರಹ್ಮ, 'ಅಯಮಾತ್ಮಾ ಬ್ರಹ್ಮ' ಎಂಬ ವಿಚಾರವನ್ನಿಲ್ಲಿ ಗಮನದಲ್ಲಿಟ್ಟುಕೊಳ್ಳುವುದು ಅತ್ಯವಶ್ಯ. ಇದಲ್ಲದೆ 'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ'[೨], 'ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ । ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥'[೩] – ಎಂಬ ಭಗವದ್ಗೀತೆಯ ಉಕ್ತಿಗಳನ್ನೂ ಇಲ್ಲಿ ನೆನೆಸಿಕೊಳ್ಳುವುದುಚಿತ. ಪುರಾತನ ಆತ್ಮಾನುಭಾವಿಗಳ ವಿಚಾರ ಧೋರಣೆಯನ್ನೇ ಇಂದು ನಾವು ಮುಂದುವರಿಸಿ ಅರ್ಥಯಿಸಬೇಕಾದರೆ ಹಿಂದಿನ ವೇದ ಆಗಮ ಪುರಾಣ ಇತಿಹಾಸ ಶಾಸ್ತ್ರಗಳೊಡನೆ ಇಂದಿನ ನಮ್ಮ ಬಹುಮುಖವಾದ ವಿಜ್ಞಾನ ಶಾಸ್ತ್ರ ಕಲೆಗಳನ್ನೆಲ್ಲ 'ಅಪರಾ ವಿದ್ಯೆ'ಯಲ್ಲಿಯೆ ಸಮಾವೇಶಗೊಳಿಸಬೇಕಾಗುತ್ತದೆ. ಏಕೆಂದರೆ ನನಗಿದಿರಿಟ್ಟು ಅಂದರೆ ಅಹಂಪ್ರಜ್ಞೆಯ ಮುಂದೆ ನಿಂದು ತೋರುವ ಪ್ರಪಂಚದ ವಿದ್ಯೆಯೆಲ್ಲ ತನಗೆ ಮೂಲವಾದ 'ಅಹಂ'ನ್ನೆ ಬದಿಗಿರಿಸಿ ಜಗತ್ತನ್ನು ತಿಳಿಯಲು ಯತ್ನಿಸುತ್ತದೆ. ಕರಣೇಂದ್ರಿಯಗಳಿಗೆ ಅದೃಶ್ಯ, ಅಗ್ರಾಹ್ಯವಾದ 'ನಾನ'ನ್ನೆ ತಿರುಗಿ ನಿಂದು ನೋಡಿ ತಿಳಿವುದೆ 'ಪರಾವಿದ್ಯೆ', ಅದೇ ಆತ್ಮವಿದ್ಯೆ, ಅದೇ ಬ್ರಹ್ಮವಿದ್ಯೆ.

> ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನವೆಂಬ ಜ್ಞಾನತ್ರಯಂಗಳೇನಾದವು?
> ಅಂತು ತ್ರಿಕಾಲಜ್ಞಾನಂಗಳಿಂದೇನಹುದು?
> ಕೂಡಲಸಂಗಮದೇವಾ, ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ ![೪]

ಕೇವಲ ಶಾಸ್ತ್ರಜ್ಞಾನವಷ್ಟೆ ಅಲ್ಲ, ತ್ರಿಕಾಲಜ್ಞಾನವೂ ನಿಜವಾದ ಜ್ಞಾನವಲ್ಲ, ಸಮ್ಯಗ್ ಜ್ಞಾನವಲ್ಲ, ಪರಾವಿದ್ಯೆಯಲ್ಲ. ಆದರೆ 'ಕೂಡಲಸಂಗಮದೇವಾ, ನಿಮ್ಮ ನರಿದ ಜ್ಞಾನವೆ ಪರಮಜ್ಞಾನ, ಅದೇ ಪರಾವಿದ್ಯೆ' ಎಂದು ಧ್ವನಿಸುವ ಅರ್ಥ ಬಸವಣ್ಣ

---

೧. ಮುಂ. ಉ. ಮುಂಡಕ ೧, ಖಂ. ೧, ಮಂ. ೬.

೨. ಭ. ಗೀ. ಅ. ೨, ಶ್ಲೋ. ೪೫.

೩. ಅದೇ ಅ. ೨, ಶ್ಲೋ. ೪೬.

೪. ಲಿಂ. ಲೀ. ವಿ. ಚಾ. ಪು. ೨೭೫, ವ. ೭.

ನವರ ಮಾತಿನಲ್ಲಿ 'ಮತ್ಸ್ಯ ನುಂಗಿದ ಮಾಣಿಕ್ಯದಂತೆ' ಹೊಳೆಯುತ್ತದೆ. ಮತ್ತು ಬಸವಣ್ಣನವರ ಈ ಕೂಡಲಸಂಗಮದೇವ ಬಸವಣ್ಣನ ಮರೆಯ ಬಸವಣ್ಣನೆ. ಹೊರಗೆ ಮುಗಿಲು, ಒಳಗೆ ಮಿಂಚು. ಮಾನವನ ಮರೆಯ ಈ ಮಿಂಚು, ಈ ಕೂಡಲ ಸಂಗಮದೇವ, ಈ ರೇಕಣ್ಣಪ್ರಿಯ ನಾಗಿನಾಥ 'ಜೀವಜಾತಿಯ ಬೆಳಗಿನ ಬೆಳಗು.' ಈ ಬೆಳಗನ್ನು 'ಬೆಳಗಿನಲರಸಬೇಕು.' ಅಂದರೆ ಜೀವಜಾತಿಯ ಸಾರವಾದ ಮಾನವ ತನ್ನ ಬೆಳಗಿನಿಂದ, ತನ್ನ ಅರಿವಿನ ಕಣ್ಣಿಂದ ಅರಸಬೇಕು, ಕಾಣಬೇಕು. ಈ ಮಹಾಬೆಳಗನ್ನು ಕಂಡು ಬೆಳಗು ನಡೆಸಿದಂತೆ ನಡೆಯಬೇಕು, ಬೆಳಗು ಇರಿಸಿದಂತೆ ಇರಬೇಕು. ಜೀವ ಜಾತಿಯ ಬೆಳಗಿನ ಬೆಳಗಿನಲ್ಲಿ ಬೆಳಗಾಗಿ ಇರುವುದೇ ದಿವ್ಯ ಜೀವನ. ಈ ಮಹಾಬೆಳಗು ನಿರೂಪಿಸಿದಂತೆ, ಪ್ರೇರಿಸಿದಂತೆ ವರ್ತಿಸುವುದೇ ದಿವ್ಯಾಚರಣೆ, ಅದೇ ಬೆಳಗಿನಾಚರಣೆ. ಮಹಾಬೆಳಗಿನಲ್ಲಿ ಎಚ್ಚತ್ತು ಬೆಳಗಾದ ಅರಿವು ಆಚರಣೆಯಾಗಿ ಸರ್ವಾಂಗದಿಂದ ಹರಿದರೆ ಅದೇ ಪರಿಪೂರ್ಣವಾದ ದಿವ್ಯಜೀವನ. ಇಂಥ ಪರಿಪೂರ್ಣ ದಿವ್ಯಜೀವನ ದರ್ಶನವೇ ಪ್ರಭುದೇವರ ಶೂನ್ಯಸಂಪಾದನೆಯಲ್ಲಿ ಸಂವಾದರೂಪವಾಗಿ ನಡೆದಿರುವ ಸಮಾಲೋಚ ನೆಯ ಉಜ್ವಲ ಧ್ಯೇಯ.

ಶೂನ್ಯಸಂಪಾದನೆಯಲ್ಲಿ ಪ್ರತಿಪಾದಿತವಾಗಿರುವ ದಿವ್ಯಜೀವನದಲ್ಲಿ ಅಂತರಂಗದ ಅರಿವು ಬೇರಲ್ಲ, ಬಹಿರಂಗದ ಆಚರಣೆ ಬೇರಲ್ಲ. ಅರಿವು ಆಚಾರದ ಪ್ರಾಣ; ಆಚಾರ ಅರಿವಿಗೆ ಅಂಗ. ದೇಹದಲ್ಲಿ ಪ್ರಾಣಚೈತನ್ಯ ತುಂಬಿರುವಂತೆ ಇಲ್ಲಿಯ ಕ್ರಿಯಾಚರಣೆ ಯೆಲ್ಲ 'ಅರಿವುಮಯ'; ಅರಿವಿನ 'ಬೆಳಗುಮಯ'. ಅಂತೆಯೆ ಈ ಪರಿಪೂರ್ಣ ದಿವ್ಯ ಜೀವನವೆಂದರೆ ದಿವ್ಯಜ್ಞಾನ, ದಿವ್ಯಯೋಗ, ದಿವ್ಯಭಕ್ತಿ, ದಿವ್ಯಪೂಜೆ. ಈ ಜ್ಞಾನ, ಈ ಯೋಗ, ಈ ಭಕ್ತಿ, ಇಂಥ ಪೂಜೆ ಒಳಹೊರಗೆ ತೆರಹಿಲ್ಲದೆ ವ್ಯಾಪಿಸಿ, ಹಗಲು ರಾತ್ರಿ ಯೆನ್ನದೆ ನಿತ್ಯ ನಿರಂತರವಾಗಿ ನಡೆಯುತ್ತದೆ ಈ ದಿವ್ಯಜೀವನದಲ್ಲಿ. ದೇಹ ಕರಣೇಂದ್ರಿ ಯಗಳ ಕತ್ತಲೆಯನ್ನು ಕಳೆದು, ರಾಗ ದ್ವೇಷ ಬೇಕು ಬೇಡಗಳ ಸೀಮೆಯನ್ನು ದಾಟಿ, ದಿವ್ಯಸಾಮ್ರಾಜ್ಯದಲ್ಲಿ ನೆಲೆಯಾಗಿ ನಿಂದಿರುವ ಈ ದಿವ್ಯಜೀವನದ ವಿಶುದ್ಧಿಯಲ್ಲಿ, ವಿಸ್ತಾರದಲ್ಲಿ ಕತ್ತಲೆಯ ಕುನ್ನಿಗಳಾದ ಅನೀತಿ, ಅನಾಚಾರ, ಅನ್ಯಾಯ ಆಲಸ್ಯ, ಪರಪೀಡೆ ಪರಶೋಷಣೆ, ದರ್ಪ ದಂಭ, ಮೋಸ ವಂಚನೆ ಮುಂತಾದ 'ವ್ಯವಹಾರ ಕುಶಲ'ರಿಲ್ಲ ಈ ಸ್ವತಂತ್ರ ಸ್ವರಾಜ್ಯದಲ್ಲಿ. 'ಅಮೃತ ಸಾಗರದಲ್ಲಿ ಬೇವಿನ ಬಿಂದುವುಂಟೇ'?

ತಾಲುಮೂಲದ್ವಾದಶಾಂತದ ಮೇಲಣ ಚಿತ್‌ಕಲಾಸೂರ್ಯನು
ನೆತ್ತಿಯ ಮಧ್ಯಮಂಡಲದಲ್ಲಿ ನಿಂದು ಉದಯಾಸ್ತಮಯವಿಲ್ಲದೆ ಬೆಳಗಲು
ಮೂರುಲೋಕದ ಕತ್ತಲೆ ಹರಿದು ಹೋಯಿತ್ತು ನೋಡಾ!
ಆ ಮೂರುಲೋಕದ ಕಳ್ಳರೆಲ್ಲ ಬೆಳ್ಳಗಾಗಿ
ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನ ಶರಣನ ಬೆಂಬಳಿಯಲ್ಲಿಯೆ
ಲಿಂಗವನಾರಾಧಿಸುತ್ತಿರ್ದರು.[೧]

---

೧. ಸ್ವ. ಸಿ. ವ. ಪು. ೭೫-೭೬, ವ. ೨೯೦.

ಇಲ್ಲಿ ಹೇಳಿರುವ ಚಿತ್‌ಕಲಾಸೂರ್ಯ 'ಯಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ'.[೧] ಮತ್ತು ಈ ಸೂರ್ಯ 'ನಾಸ್ತಮೇತಿ ನ ಚೋದೇತಿ.'[೨] ಶಿವಯೋಗಸಾಧನೆಯಲ್ಲಿ ಉದಯವಾಗಿ ಚಂದ್ರ ಸೂರ್ಯ ಅಗ್ನಿಯೆಂಬ ಮಂಡಲತ್ರಯದ ಮಧ್ಯದಲ್ಲಿ ಉದಯಾಸ್ತಮಾನವೆನ್ನದೆ ಈ ಸ್ವಯಂಜ್ಯೋತಿ ಬೆಳಗಿದರೆ, ಮೂರುಲೋಕದ ಅಂದರೆ ಸ್ಥೂಲ ಸೂಕ್ಷ್ಮ ಕಾರಣವೆಂಬ ಶರೀರತ್ರಯದ ಕತ್ತಲೆ, ಅಜ್ಞಾನ ಇರಬೇಕೆಲ್ಲಿ? ದೇಹವನ್ನೆಲ್ಲ ಅರಿವಿನ ಬೆಳಗು, ಚಿಜ್ಜ್ಯೋತಿ ಆವರಿಸಿದರೆ, ಅಲ್ಲಿದ್ದ ಕಳ್ಳರು ಅಂದರೆ ಕರಣ ಇಂದ್ರಿಯಗಳು ತಮ್ಮ ಕಳ್ಳತನವನ್ನು ಸಾಗಿಸುವುದು ಹೇಗೆ? ಈ ಕಳ್ಳರೂ ಬೆಳ್ಳಗಾಗಿ, ಕರಣೇಂದ್ರಿಯಗಳಲ್ಲೆಲ್ಲ ಸಮ್ಯಗ್‌ಜ್ಞಾನಪ್ರಕಾಶ ಪಸರಿಸಿ, ಅಲ್ಲಿಂದ ಒಳಹೊರಗೆ ನಡೆದಾಡುವ ವ್ಯವಹಾರವೆಲ್ಲ ಜ್ಞಾನವ್ಯವಹಾರ, ಬೆಳಗಿನಲ್ಲಿ ನಡೆವ ವ್ಯವಹಾರ. ಇಲ್ಲಿಯ ಭಾವ ಬುದ್ಧಿ ಮನ ಚಿತ್ತ, ಕಣ್ಣು ಕಿವಿ ಕಾಲು ಕೈ -- ಈ ಕರಣೇಂದ್ರಿಯಗಳು ತಮ್ಮ ಪೂರ್ವಾಶ್ರಯವಾದ ಅಜ್ಞಾನ, ಮಾಯೆ, ಮೋಹ ಅಹಂಭಾವವನ್ನು ಬಿಟ್ಟು, ಅರೆಗತ್ತಲೆಯ ಪ್ರಪಂಚಸಂಸಾರವನ್ನು ಕಳೆದು, ಸುಜ್ಞಾನಜ್ಯೋತಿಯಲ್ಲಿ ಸ್ವತಂತ್ರವಾಗಿ ವ್ಯವಹರಿಸುತ್ತವೆ. ಇಲ್ಲಿ ಸುನೀತಿಯಲ್ಲದೆ ಅನೀತಿ ಮೂಡಲಿಲ್ಲ; ಸದಾಚಾರವಲ್ಲದೆ ದುರಾಚಾರ ಬೆಳೆಯಲಿಲ್ಲ. ವಿಶ್ವಪ್ರೇಮವಲ್ಲದೆ ದ್ವೇಷ ಇಲ್ಲಿ ಅಂಕುರಿಸಲಿಲ್ಲ. ಸತ್ಯ ನ್ಯಾಯವಲ್ಲದೆ ಅಸತ್ಯ ಅನ್ಯಾಯಕ್ಕೆ ಇಲ್ಲಿ ಇಂಬಿಲ್ಲ. ಪೂಜೆಗಲ್ಲದೆ ಲಾಭಹಾನಿಗೆ ಅವಸರವಿಲ್ಲಿಲ್ಲ. ದಿವ್ಯದತ್ತ ಊರ್ಧ್ವಮುಖವಾಗಿ ಹರಿವ ಈ ಜೀವನ ಭೌತಿಕದೇಹಪ್ರಪಂಚವನ್ನು ಕೆಳಗೆ ಒಗೆದು ಮೇಲೆ ಹಾರುವಂತಿಲ್ಲ. ಅದನ್ನೂ ಆಲಿಂಗಿಸಿ, ಅದನ್ನೂ ಸಂಸ್ಕರಿಸಿ ಪ್ರಕಾಶಗೊಳಿಸಿ, ಅದನ್ನೂ ಕೊಂಡುಹೋಗಿ ದಿವ್ಯಕ್ಕೆ ಅರ್ಪಿಸಬೇಕು.

ಸಾಮಾನ್ಯವಾಗಿ ಮಾನವನಲ್ಲಿ ಮಲಗಿದ ದೇವನಿಗಿಂತ ಮಾನವನಲ್ಲಿ ಎಚ್ಚತ್ತಿರುವ ಪಶು ಹೆಚ್ಚು ಬಲಶಾಲಿ. ಲಕ್ಷವರ್ಷದಿಂದ ಬಂದ ಸಂಪ್ರದಾಯ, ಕಟ್ಟು ನಿಟ್ಟು, ಧರ್ಮನೀತಿ, ಮಹಾತ್ಮರ ಬೋಧೆ, ಸಜ್ಜನರ ನಡೆ ನುಡಿ, ಪ್ರೇಮ ಬಾಂಧವ್ಯ, ಸಹಾಯ ಸಹಕಾರ, ಶೀಲ ವರ್ತನೆ, ಧ್ಯೇಯ ಆದರ್ಶಗಳನ್ನು ಬೇರೆ ಗತಿಯಿಲ್ಲದೆ ಅನಿವಾರ್ಯವಾಗಿ ಅಸಂತೋಷದಿಂದ ಹೊರಿಸಿಕೊಂಡು, ಚಾವಟಿಗೆಯ ಹೊಡೆತಕ್ಕೆ ಹೆದರಿಕೊಂಡು ಹಾದಿಹಿಡಿದು ನಡೆವಂತಿದೆ ಮಾನವಕುಲ. ಸಿಂಹ ಆನೆ ಹುಲಿ ಕುದುರೆ ಮಂಗ ಮನುಷ್ಯರನ್ನು ಕೂಡಿಸಿ ನಡೆಸುವ 'ಸರ್ಕಸ್ಸ'ನ್ನು ನೀವು ನೋಡಿರಬಹುದು. ಕಾಲು ಮೇಲಾಗಿ ನಡೆವುದು, ಸಿಂಹದ ಮೇಲೆ ಆನೆ ಆಡುವುದು, ಹುಲಿಯ ಮೇಲೆ ಮಂಗ ಸವಾರಿ ಮಾಡುವುದು, ತಂತಿಯ ಮೇಲೆ ಲಾಗ ಹೊಡೆಯುವುದು — ಇಂಥ ನೂರಾರು 'ಕಸರತ್ತು' ಮಾಡಬಹುದು. ಆದರೆ ಆಯಾ ಪ್ರಾಣಿಗಳಿಗೆ ಸಹಜವಲ್ಲದ, ಆರೋಪಿತವಾದ ಈ ಗುಣ ಧರ್ಮ ಕರ್ಮ ನಿಸರ್ಗವಾಗಬಲ್ಲುದೇ? ಮಾನವನ ಮೇಲೆ ಹೊರಗಿಂದ ಹೇರುವ ನೀತಿ ಸಹಕಾರ ವಿಶ್ವಬಾಂಧವ್ಯ ವಿಶ್ವಪ್ರೇಮ -- ಈ 'ಸರ್ಕಸ್ಸು' ಎಷ್ಟು ದಿನ

೧. ಮೊ. ಉ. ಮುಂಡಕ ೨, ಖಂ. ೨, ಮಂ. ೯.

೨. ಮೈ. ಉ. ಅ. ೨, ಮಂ. ೧೪.

ನಡೆಯಬಹುದು? ಆದರೆ ಮಾನವನ ಮರೆಯ ದೇವನೆದ್ದರೆ ಮಾನವನ ಅಧೋಮುಖವಾದ ಪ್ರವೃತ್ತಿ ತಾನೇ ಮಾಯವಾಗುತ್ತದೆ. ದೇವನಿಂದ ಪ್ರಕಾಶಿತನಾದ ದಿವ್ಯ ಮಾನವನಿಂದ ನೀತಿ ಸದಾಚಾರ ಭಕ್ತಿ ಪೂಜೆ ಸಹಾಯ ಸಹಕಾರ ವಿಶ್ವಪ್ರೇಮ ಸರ್ವಭೂತಹಿತ ಮುಂತಾದುವೆಲ್ಲ ಸಹಜವಾಗಿ ಹೊಮ್ಮುತ್ತವೆ,–ಪುಷ್ಪದಿಂದ ಪರಿಮಳ ಹೊಮ್ಮುವಂತೆ, ಕೋಗಿಲೆಯಿಂದ ಮಧುರ ಕೂಜನ ಸ್ಫುರಿಸುವಂತೆ. ಗಾಳಿಗೆ ಬೀಸಲು ಕಲಿಸುವ ಕಾರಣವಿಲ್ಲ. ಬೆಂಕಿಗೆ ಸುಡಲು ಶಿಕ್ಷಣ ಬೇಕಿಲ್ಲ. ಬೆಳುದಿಂಗಳನ್ನು ಹರವಲು ಚಂದ್ರನಿಗೆ ಒತ್ತಾಯ ಮಾಡಬೇಕಿಲ್ಲ. ದಿವ್ಯಜೀವನದ ನಡೆ ನುಡಿ ಆಚಾರ ವಿಚಾರ ವ್ಯವಹಾರ ದಿವ್ಯದಿಂದ ಚಿಮ್ಮುವುದು ಹೀಗೆ:

ಲಿಂಗದ ನಡೆಯಂತೆ ನಡೆವನಲ್ಲದೆ ಲೋಕದ ನಡೆಯಂತೆ ನಡೆವನಲ್ಲ ನೋಡಾ ಶರಣ.
ಲಿಂಗದ ನುಡಿಯಂತೆ ನುಡಿವನಲ್ಲದೆ ಲೋಕದ ನುಡಿಯಂತೆ ನುಡಿವನಲ್ಲ ನೋಡಾ ಶರಣ.
ಲಿಂಗದ ಮಚ್ಚಿನಲ್ಲಿ ಸುಳಿವನಲ್ಲದೆ ಲೋಕದ ಮಚ್ಚಿನಲ್ಲಿ ಸುಳಿವನಲ್ಲ ನೋಡಾ ಶರಣ.
ಲಿಂಗದ ವ್ಯವಹಾರದಲ್ಲಿ ಇರುತ್ತಿಹನಲ್ಲದೆ ಲೋಕದ ವ್ಯವಹಾರದಲ್ಲಿ ಇರುತ್ತಿಹನಲ್ಲ ನೋಡಾ ಶರಣ.
ಇಂತಿರ್ದ ಲಿಂಗಾಂಗ ಸಮರಸವನರಿದ ಶಿವಶರಣರ ಶಿವನೆನಬೇಕಲ್ಲದೆ
ಲೋಕದವನೆಂದು ನುಡಿವ ಸೂತಕ ದೇಹಿಗಳಿಗೆ ಪಾತಕ ತಪ್ಪದಯ್ಯಾ ಅಖಂಡೇಶ್ವರಾ.[೧]

ದಿವ್ಯಜೀವನ ಮಹಾಸಾಗರವಾಗಿ ಹರಿವುದು ಪರಮಾರ್ಥದಿಂದ; ಸ್ವಾರ್ಥದಿಂದಲ್ಲ, ಲೋಕಾರ್ಥದಿಂದಲ್ಲ. ಮಾನವಕುಲದ ಇತಿಹಾಸವನ್ನು ಸ್ವಲ್ಪ ಗಭೀರವಾಗಿ, ಮೌನವಾಗಿ ಸಮಾಲೋಚಿಸಿದರೆ ಮಾನವಕೋಟಿಯಲ್ಲಿ ಇಂದಿಗೂ ಜೀವಂತವಾಗಿ ಉಳಿದಿರುವ ತತ್ತ್ವ ಧರ್ಮ ನೀತಿ ಪ್ರೇಮ ತ್ಯಾಗ ಆನಂದ ಮುಂತಾದ ಮಾನವ ಸತ್ತ್ವಸಾರವೆಲ್ಲ ದಿವ್ಯವ್ಯಕ್ತಿಗಳಲ್ಲಿ ಪ್ರತಿಷ್ಠೆಗೊಂಡಿದ್ದ ದಿವ್ಯದಿಂದಲೆ ಬಂದ ಪ್ರಸಾದ. ವೇದ ಆಗಮ ಉಪನಿಷತ್ತು ಪುರಾಣ ಧರ್ಮಶಾಸ್ತ್ರ ನೀತಿಶಾಸ್ತ್ರ ಬಾಯಿಬಲ್ ಕುರಾಣ ಮುಂತಾದುವೆಲ್ಲ ದಿವ್ಯದಿಂದಲೆ ಉದಯವಾಗಿ ಮಾನವಕುಲಕೋಟಿಯ ಮೇಲೆ ಹರಿಯುತ್ತ ಬಂದಿವೆ. ಆದರೆ ಈ ದಿವ್ಯಕ್ಕೆ ಈ ಲಿಂಗಕ್ಕೆ ಈ ದೇವರಿಗೆ ಹರಿವ ಮುಖ, ದ್ವಾರ ಬೇಕು. ಅದೇ ಶರಣ, ಅದೇ ಕ್ರೈಸ್ತ, ಅದೇ ಪೈಗಂಬರ, ಅದೇ ಕೃಷ್ಣ. ದಿವ್ಯದ ಈ ಮುಖ ನುಡಿದು ವೇದಾಗಮಗಳಾದುವು; ಇವು ನಡೆದರೆ ನೀತಿ ಧರ್ಮ ಸದಾಚಾರ ಸನ್ಮಾರ್ಗಗಳಾದುವು.

ಲಿಂಗವನರಿತು ಲಿಂಗಾರ್ಚನೆಯ ಮಾಡಿ,
ಗುರು ಲಿಂಗ ಜಂಗಮಕ್ಕೆ ತನು ಮನ ಧನವ ಸವೆಸಿ,
ಲಿಂಗವಲ್ಲದೆ ಅನ್ಯವನರಿಯದಿರ್ಪ ಮಹಾಮಹಿಮನ ನಿಲವು
ಸರ್ವಾಂಗ ಲಿಂಗಮೂರ್ತಿ.
ಆತನ ನುಡಿಯೇ ವೇದ. ನಡೆಯೇ ಆಗಮ.

೧. ವ. ಶಾ. ಸಾ. ಭಾ. ೧, ಪು. ೫೨೧, ವ. ೩.

ಮಾಡಿತ್ತೇ ಶಾಸ್ತ್ರ, ಹೇಳಿತ್ತೇ ಪುರಾಣ.

ಆತನಿದ್ದುದೇ ದೇವಲೋಕ, ಆತನ ದರ್ಶನಸ್ಪರ್ಶನದಿಂದ ಪಾಪಕ್ಷಯ . . . .[೧]

ವಿಶ್ವಜೀವನಕ್ಕೆ ದಿವ್ಯಕಲ್ಯಾಣವನ್ನು ನಿರಂತರವಾಗಿ ನೀಡುತ್ತ ಬಂದಿರುವರು ಈ ಮಹಾಮಹಿಮರು, ಈ ಸರ್ವಾಂಗಲಿಂಗಮೂರ್ತಿಗಳು. ಈ ಮಹಿಮರಿಗೆ ಕೈಯೊಡ್ಡಿ ಸೆರಗೊಡ್ಡಿ ಬೇಡಿ ಪಡೆದು, ಈ ದಿವ್ಯಕಲ್ಯಾಣವನ್ನು ಉಂಡು ಕುಡಿದು ಹಾಸಿ ಹೊದ್ದು, ಉಟ್ಟು ತೊಟ್ಟು, ಕೊಟ್ಟು ಕೊಂಡು ಬದುಕಿದರೆ ಮಾನವನೆ ದೇವ, ಮರ್ತ್ಯವೆ ಕೈಲಾಸ. ಇಲ್ಲಿ ವಿಶ್ವ-ನೀತಿ-ಧರ್ಮ-ಪ್ರೇಮ-ಬಾಂಧವ್ಯವೆಂಬಿವೆಲ್ಲ ನಿಸರ್ಗವಾಗಿ ನಿಲ್ಲುತ್ತವೆ. ಪೃಥಿವಿಯೆಲ್ಲ ಸ್ವರ್ಗವನ್ನೆ ಹೂ ಬಿಡುತ್ತದೆ. ಸ್ವರ್ಗವೆಲ್ಲ ಪೃಥಿವಿಯಲ್ಲಿ ಬೇರೂರಿ ಬೆಳೆಯುತ್ತದೆ. ದಿವ್ಯಜೀವನಕ್ಕೆ ಸಹಜವಾದ ಜ್ಞಾನ ಕ್ರಿಯೆ, ತತ್ತ್ವ ನೀತಿ ಆಚಾರ ಕಾಯಕ, ವಿಚಾರ ವ್ಯವಹಾರ ಪ್ರಭುದೇವರ ಶೂನ್ಯಸಂಪಾದನೆಯಲ್ಲಿ ಪ್ರಸಂಗಾನುಸಾರವಾಗಿ ತಲೆದೋರಿ ರಸಜೀವನದ ಸಾರಸಂಪದವನ್ನು ಬೀರಿವೆ. ದಿವ್ಯಜೀವನದ ಪರಿಕರವಾದ ಇನ್ನೂ ಹಲಕೆಲವು ವಿಷಯ ಇಲ್ಲಿ ಬಂದಿರಲಿಕ್ಕಿಲ್ಲ. ಬಂದ ಕೆಲವು ವಿಷಯಗಳು ವಿಸ್ತಾರವಾಗಿ ಮೈವೆತ್ತು ನಿಂದಿರಲಿಕ್ಕಿಲ್ಲ. ಅವನ್ನೆಲ್ಲ ತಿಳಿಯಬೇಕು, ದಿವ್ಯಜೀವನದ ಸಮಗ್ರ ಸ್ವರೂಪವನ್ನು ಕಾಣಬೇಕು ಎಂಬ ಬಯಕೆ ಬಲವಾಗಿದ್ದರೆ ವಚನಸಾಹಿತ್ಯವನ್ನು ಓದಬೇಕು, ತಿಳಿಯಬೇಕು. ಇನ್ನೂ ಆ ಸ್ವರೂಪ ಅಸ್ಪಷ್ಟವಾಗಿ ಕಂಡರೆ ಆಗಮ ಉಪನಿಷತ್ತು ಭಗವದ್‌ಗೀತೆ, ಬಾಯಿಬಲ್ ಕುರಾಣಗಳನ್ನು ಓದಬೇಕು. ರಾಮಕೃಷ್ಣರನ್ನು ಅರವಿಂದರನ್ನು ಓದಬೇಕು. ಮತ್ತೆ ಈ ದೆಸೆಯಲ್ಲಿ ಸಹಾಯ ನೀಡಬಲ್ಲ ಮಹಾತ್ಮರನ್ನು ಓದಬೇಕು, ಕೇಳಬೇಕು, ತಿಳಿಯಬೇಕು. ತಿಳಿವ ಹೃದಯಕ್ಕೆ ವಿಚಾರಿಸುವ ಬುದ್ಧಿಗೆ ಯಾವ ಅಡ್ಡಗೋಡೆಯನ್ನೂ ಕಟ್ಟಬಾರದು. ಕಟ್ಟಿದರೆ ಹಾನಿ ಯಾರಿಗೆ? ಜಾತಿ ಮತ ಧರ್ಮ ದೇಶ ಕಾಲ ಭಾಷೆಗಳು ಇಲ್ಲಿ ಅಡ್ಡ ಬಂದರೆ ಅವನ್ನೆಲ್ಲ ಕೆಡವಬೇಕು. ಯಾವ ಬಂಧನವಿಲ್ಲದ ಬಯಲಲ್ಲಿ ನಿಲ್ಲಬೇಕು, ನಿಂದು ನೋಡಬೇಕು.

ಓದಿ ತಿಳಿದು ನೋಡಿದರೆ ಸ್ಪಷ್ಟವಾಗಿ ಒಡೆದು ಕಾಣಬರುವ ಈ ದಿವ್ಯಜೀವನ ದರ್ಶನವನ್ನು ಮಾಡಿಕೊಂಡು ನಾನು ಅಥವಾ ನೀವು ಇಲ್ಲಿಯೇ ಬೆರಗಾಗಿ ಕುಳ್ಳಿರುವ ಸಂಭವವಿದೆ. 'ಶೂನ್ಯಸಂಪಾದನೆ'ಯ ಚರಮ ಧ್ಯೇಯವಿದೇ ಎಂದು ಭ್ರಮಿಸುವ ಸಂಭವವೂ ಇದೆ. ಆದರೆ ಶೂನ್ಯಸಂಪಾದನೆಕಾರರಾದ ಗೂಳೂರ ಸಿದ್ಧವೀರಣ್ಣೊಡೆಯರಾಗಲಿ ಶೂನ್ಯಸಂಪಾದನೆಯ ಮಹಾನಾಯಕರಂತಿದ್ದ ಅಲ್ಲಮಪ್ರಭುದೇವರಾಗಲಿ ನಮ್ಮನ್ನು ಇಲ್ಲಿ ಕೂಡಗೊಡುವುದಿಲ್ಲ. ತನ್ನೂರು ಇನ್ನೂ ಮುಂದೆ ಇರುವಾಗ,

---

೧. ವ. ಶಾ. ಸಾ. ಭಾ. ೧, ಪು. ೫೦೬, ವ. ೧೮.
ಇಲ್ಲಿ ಹೋಲಿಸಿರಿ: ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್
ಯದ್ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ
ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ
ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನ್ಯಸ್ಯೈವೈತಾನಿ
ಸರ್ವಾಣಿ ನಿಃಶ್ವಸಿತಾನಿ, ಬೃ. ಉ. ಅ. ೨, ಬ್ರಾ. ೪, ಮಂ. ೧೦.

ನಡೆವ ದಾರಿ ಇನ್ನೂ ಉಳಿದಿರುವಾಗ ಹಿರಿಯರು ಕೇಳುವರೇ? 'ಕಾಣಬಾರದ' ಕದಳಿಯನ್ನು ಕಾಣಬೇಕೆಂದು ಹೋಗಿ, ಶ್ರೀಶೈಲದ ಮಲ್ಲಿಕಾರ್ಜುನನ ಗುಡಿಯಲ್ಲಿ 'ವಸ್ತಿ' ಮಾಡಿ ಮರಳಿದರೆ ಹೇಗೆ? ನಿಜಗ್ರಾಮ, ನಿಜಸ್ಥಲ, ಸ್ವಸ್ಥಾನವನ್ನು ಸೇರುವುದು ನಮ್ಮ ಪರಮೋದ್ದೇಶವಲ್ಲವೆ? ಹಾಗಿದ್ದರೆ ಏಳಿ, ಎಚ್ಚರಾಗಿ, ಪರಮಪದದ ಪ್ರಾಪ್ತಿಯಿಲ್ಲದೆ ನಿಲ್ಲಬೇಡಿ.

ಏಕೆಂದರೆ ಶೂನ್ಯಸಂಪಾದನೆಯ ಗುರಿ ಶೂನ್ಯ ಸಂಪಾದನೆ. ಶೂನ್ಯವನ್ನು ಸಂಪಾದಿಸುವವರೆಗೆ ನಡುವೆ ನಿಲುಕಡೆಯ ಸ್ಥಳವಿಲ್ಲ. 'ಶೂನ್ಯವನ್ನು ಸಂಪಾದಿಸುವುದು' ಎಂದೊಡನೆ ನೀವು ಚಕಿತರಾಗುವುದು ಸಹಜ. ಶೂನ್ಯವೆಂದರೆ ಸಾಮಾನ್ಯವಾಗಿ ಸೊನ್ನೆ ಅಂದರೆ 'ಪೂಜಿ' ಅಂದರೆ ಏನೂ ಇಲ್ಲ, 'ಬಂಡಿಗಾಲಿ' ಎಂದು ಅರ್ಥ. ಸಂಪಾದಿಸು ಅಂದರೆ ದೊರಕಿಸು, ಗಳಿಸು ಎಂದರ್ಥ. ಶೂನ್ಯ ಸಂಪಾದನೆ ಎಂದರೆ ಒಟ್ಟು ಅರ್ಥ 'ಇಲ್ಲ'ವನ್ನು, ಇಲ್ಲದ್ದನ್ನು ಗಳಿಸುವುದು ಎಂದಲ್ಲವೆ? ಮೊಲದ ಕೋಡು ಮುರಿವ ಸಾಹಸವಿದು! 'ಸಿಡಿಲುವಕ್ಕಿಯ ಪಕ್ಕವನು ಮುರಿದಡಬಳಿವ' ಮಾಡುವ ವಿಕಟ ಯತ್ನವಿದು! ಏನೂ ಇಲ್ಲ, ಎಂದೂ ಇಲ್ಲ, ಎಲ್ಲಿಯೂ ಇಲ್ಲ – ಇಂಥ ಇಲ್ಲ, ಇಲ್ಲವೆಯನ್ನು ಗಳಿಸುವ ವಿಚಿತ್ರವೀರರು ನೂರು ಸಾವಿರ ಲಕ್ಷ ಅಲ್ಲ, **ಕೋಟಿಮೂರ್ಖರು!** ಮತ್ತೆ ಶೂನ್ಯ ಅಂದರೆ ಆಕಾಶ, ಬಯ್ಲು, Void, Emptiness, Nothingness, Nihil – ಎಂದರ್ಥ. ಈ ಬರಿದನ್ನು ಈ ಬಯಲನ್ನು ಈ ಅಸತ್ತು ಈ ಅಭಾವವನ್ನು ಗಳಿಸುವುದು? ಬಯಲನ್ನು ತೋಡಿ, ಬಯಲು ಸಂಪತ್ತನ್ನು ಸಂಪಾದಿಸಿ ಎಷ್ಟು ಜನ ಶ್ರೀಮಂತರಾದರು? ಬಯಲು ಗುದ್ದಿ ಮೈಹಣ್ಣು ಮಾಡಿಕೊಳ್ಳುವ ಅರ್ಥಶೂನ್ಯ ಸಾಹಸವನ್ನು ಮಾಡುವವರು ಮಾಡಲಿ. ವೇದಾಗಮ ಉಪನಿಷತ್ತು ಗೀತೆಗಳಲ್ಲಿ 'ಏಕಮೇವಾದ್ವಿತೀಯಂ ಬ್ರಹ್ಮ', 'ಸರ್ವಂ ಖಲ್ವಿದಂ ಬ್ರಹ್ಮ', 'ಅಯಮಾತ್ಮಾ ಬ್ರಹ್ಮ', 'ತತ್ ತ್ವಮ್ ಅಸಿ' – ಎಂದು ಮುಂತಾಗಿ ಆತ್ಯಂತಿಕ ಸತ್ಯವಾದ ಒಂದು ವಸ್ತು, ಪರವಸ್ತು ಪರಬ್ರಹ್ಮ ಪರತತ್ತ್ವವನ್ನು ತತ್ತ್ವವೇತ್ತಾರರು ಹೇಳುತ್ತಾರೆ. 'ನೇಹ ನಾನಾಸ್ತಿ ಕಿಂಚನ' 'ನೇತಿ ನೇತಿ' ಎಂದರೂ, 'ಓಂ ತತ್ ಸತ್' ಎಂದು ತಮ್ಮ ತತ್ತ್ವನಿರ್ಣಯವನ್ನು ಅವರು ಸಾರುತ್ತಾರೆ. ಎಲ್ಲ ವಸ್ತುಗಳು ನಮ್ಮ ಕೈಬಿಟ್ಟರೂ 'ಪರವಸ್ತು'ವೊಂದು ನಮ್ಮ ತತ್ತ್ವವಿವೇಚನೆಗೆ ನಮ್ಮ ತತ್ತ್ವಾನುಭೂತಿಗೆ, ಇಲ್ಲವಲ್ಲದ, ಬಯಲಲ್ಲದ ಒಂದೇ ಒಂದಾದ ಪರಮತತ್ತ್ವದ ಸಂಪಾದನೆಗೆ ಒಂದು ಅಚಲವಾದ ಆಧಾರವನ್ನು ಮಾಡಿ ಕೊಡುತ್ತಾರೆ ಎಲ್ಲ ದ್ರಷ್ಟಾರರು. ಯೇಸುವಾಗಲಿ ಪೈಗಂಬರನಾಗಲಿ ಒಬ್ಬ ದೇವನ, ಒಂದು ನಿರಾಕಾರದ ಚರಮ ಆಶ್ರಯಸ್ಥಾನವನ್ನು ನೀಡಿದ್ದಾರೆ ಜಿಜ್ಞಾಸುಗಳಿಗೆ, ದಿದೃಕ್ಷುಗಳಿಗೆ, ದೇವಭಕ್ತರಿಗೆ. ಆದರೆ ಶೂನ್ಯ! ಬಯಲಿನ ಆಧಾರದ ಮೇಲೆ ಬಯಲಲ್ಲದೆ ಮತ್ತಾವ ತತ್ತ್ವ ನಿಲ್ಲಬಲ್ಲುದು? ಬೌದ್ಧರು ಹೇಳುವ 'ಶೂನ್ಯವಾದ'ದ 'ಅಣ್ಣತಮ್ಮ'ನಂತಿದೆ ಶೂನ್ಯ ಸಂಪಾದನೆಯ ಶೂನ್ಯ. ಆದರೆ 'ಕಥಮಸತಃ ಸಜ್ಜಾಯೇತೇತಿ ಸತ್ತ್ವೇವ ಸೋಮ್ಯೇದಮಗ್ರ ಆಸೀತ್ ಏಕಮೇವಾದ್ವಿತೀಯಂ',[೧] ಅಥವಾ,

೧. ಛಾಂ. ಉ., ಅ. ೬, ಖಂ. ೨., ಮಂ. ೨.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥[೧]

ಎಂಬ ಉಪನಿಷತ್ತು ಮತ್ತು ಭಗವದ್ಗೀತೆಯ ಬ್ರಹ್ಮವಾದಿಗಳು ಅಸತ್ತು ಇಲ್ಲವೆ ಶೂನ್ಯ ವಾದದ ನಿರರ್ಥಕತೆಯನ್ನು ಕಂಡೇ ನಾಮರೂಪದ ನಾನಾತ್ವಕ್ಕೆ ಪರಮಾಧಾರವಾದ ಏಕ ಮೇವಾದ್ವಿತೀಯವಾದ ಪರತತ್ತ್ವವನ್ನು ಪ್ರತಿಷ್ಠಾಪಿಸಿದರು. ಬುದ್ಧದೇವನ ಶೂನ್ಯವಾದಕ್ಕೆ ಈ ಪ್ರತಿಕ್ರಿಯೆಯಾಗಿರುವುದು ಸ್ವಾಭಾವಿಕ. ಮತ್ತು ಜಗತ್ತಿನ ಎಲ್ಲ ಮಹಾನುಭಾವಿ ಗಳು ಸದ್‌ವಾದವನ್ನೆ ಸ್ವೀಕರಿಸಿದ್ದಾರಲ್ಲದೆ, ಅನುಭವಿಸಿದ್ದಾರಲ್ಲದೆ, ಅಸದ್‌ವಾದವನ್ನು, ಶೂನ್ಯವನ್ನೆಂದೂ ಪುರಸ್ಕರಿಸಿದಂತೆ ತೋರುವುದಿಲ್ಲ. ಹೀಗಿದ್ದೂ ೧೨ನೆಯ ಶತಮಾನ ದಲ್ಲಿದ್ದ ಪ್ರಭುದೇವರು ಈ ಶೂನ್ಯವನ್ನು ಮತ್ತೆ ಮುಂದುಮಾಡುವುದೇಕೆ?

ನಿಮ್ಮ ಈ ವಿಚಾರಸರಣಿ ಒಪ್ಪತಕ್ಕುದೇ. ನೀವು ಎತ್ತುವ ಆಕ್ಷೇಪ ಬಲ ವಾದುವೇ. ಆದರೆ ಶೂನ್ಯ ಎಂದರೆ ಸಾಮಾನ್ಯವಾಗಿ ತಿಳಿವಳಿಕೆಯಲ್ಲಿ ಬರುವ ಅರ್ಥ ಶೂನ್ಯಸಂಪಾದನೆಯಲ್ಲಿಯೂ ಹೊರಡುತ್ತದೆಯೇ ಎಂಬ ವಿಷಯ ಗಭೀರವಿಚಾರಕ್ಕೆ ಅರ್ಹವಾದ ವಿಷಯ. ಮತ್ತು 'ಶೂನ್ಯ' ಶಬ್ದದಲ್ಲಿ 'ಶೂನ್ಯಸಂಪಾದನೆ'ಯ ಪರಮ ರಹಸ್ಯವಡಗಿದೆ, ಪ್ರಭುದೇವರ ಪರಮಾನುಭಾವದ ಗರ್ಭಿತಾರ್ಥವಿದೆ ಎಂಬ ಮಾತು ಎಂದಿಗೂ ಲಕ್ಷ್ಯದಲ್ಲಿಡತಕ್ಕ ವಿಷಯ.

ಪ್ರಭುದೇವರ 'ಶೂನ್ಯಸಂಪಾದನೆ'ಯಲ್ಲಿ ಮತ್ತು ವೀರಶೈವ ಸಾಹಿತ್ಯದಲ್ಲಿ ಸಂದರ್ಭೋಚಿತವಾಗಿ ಬರುವ 'ಶೂನ್ಯ'ದ ಪುರಾಣವನ್ನು ಬಿಚ್ಚಿದರೆ ನಿಮಗೆ ಬೇಸರ ವಾಗಬಹುದು; ಅಥವಾ ನಿಮಗೆ ಸಿಟ್ಟು ಬರಬಹುದು, ಕಣ್ಣು ಕೆಂಪಗಾಗಬಹುದು. ಆದರೆ ಕೆಲಮಟ್ಟಿಗಾದರೂ 'ಶೂನ್ಯ'ದ ಸ್ವರೂಪವನ್ನು ನಾವು ವಿವರಿಸಿ ನೋಡಲೇ ಬೇಕು. ನಿದ್ದೆ ಬೇಸರ ತಾಮಸದ ಸಂತತಿ, ಸಿಟ್ಟು ಕೆಂಪು ರಜೋಗುಣ. ಇವನ್ನುಳಿದು ಸಾತ್ವಿಕವಾದ ಸಮಾಧಾನ, ಸಾವಧಾನ, ಏಕಾಗ್ರಬುದ್ಧಿ ಹೃದಯ ಇಲ್ಲಿ ಅವಶ್ಯ ಬೇಕು. ಅಥವಾ ತ್ರಿಗುಣಾತೀತವಾದ ಒಂದು ಬಗೆಯ ಪ್ರಸನ್ನಭಾವದ ಸಮಾಧಿಯೆ ಬೇಕು. ಏಕೆಂದರೆ 'ಶೂನ್ಯಸಂಪಾದನೆ' ಎಂಬ ದಿವ್ಯ ಶಬ್ದಕ್ಷೇತ್ರದಲ್ಲಿ ಆವಿರ್ಭವಿಸಿ ಹತ್ತು ದಿಕ್ಕುಗಳಾಚೆ ಮೇರೆವಿೂರಿ ಹಬ್ಬುವ ಶರಣದಿವ್ಯಜೀವನದ ಗೌರೀಶಂಕರದಂತಿರುವ 'ಶೂನ್ಯ'ವನ್ನು ಅಸ್ಪಷ್ಟವಾಗಿಯಾದರೂ ಕಾಣಬೇಕಾದರೆ – ಏರುವುದು ಒತ್ತಟ್ಟಿಗಿರಲಿ – ಎಂಥ ಪ್ರಸನ್ನ ಮಂಗಲ ಭಾವ ಬೇಕು! ಮಾನವಬುದ್ಧಿ ತನ್ನ ಸಂಪ್ರದಾಯದ ಅಥವಾ ಪ್ರಚಲಿತವಾಗಿರುವ ಬಂಧನಗಳನ್ನು ಕಿತ್ತು, ಯಾವ ವಿಸ್ತಾರದ ಸೀಮೆಯಲ್ಲಿರಬೇಕು! ಕಾಣುವ ಕಣ್ಣು, ಬುದ್ಧಿ ಭಾವ ನೋಡುವ ದರ್ಶನದ ಸ್ವರೂಪವನ್ನು ನಿರ್ಧರಿಸುತ್ತದೆ. ಅಲ್ಲವೇ? ಮುಂದೆ ಹೊರಡೋಣವೆ?

ಪ್ರಭುದೇವರ ಅಭಿಮತದಲ್ಲಿ 'ಶೂನ್ಯ'ವೇ ಮಾನವನ ಪರಮ ಪುರುಷಾರ್ಥ. ಅದೇ ಚರಮ ವಿಶ್ರಾಮಸ್ಥಾನ, ಅದೇ ಪರತತ್ತ್ವ, ಅದೇ ನಿಷ್ಕಲ ಲಿಂಗ. ಅಥವಾ

---

೧. ಭ. ಗೀ. ಅ. ೨, ಶ್ಲೋ. ೧೬.

ಅದನ್ನೇ ಶೂನ್ಯಲಿಂಗವೆಂದೂ ಕರೆಯಬಹುದು. ಈ ಪರತತ್ತ್ವ ಅಥವಾ ನಿಷ್ಕಲಲಿಂಗದ ಸ್ವರೂಪವನ್ನು ಹೇಳುವಾಗ ನಮಗೆ ಶೂನ್ಯದ ಕಲ್ಪನೆ ಆಗಬಹುದು. ಮತ್ತು 'ಶೂನ್ಯ ಸಂಪಾದನೆ'ಯಲ್ಲಿ ಮುಕ್ತಾಯಕ್ಕ ಮೊದಲು ಗೋರಕ್ಷ ಕಡೆಯಾಗಿ ಶರಣರಿಗೆ 'ಶೂನ್ಯ'ವನ್ನು ಸಂಪಾದಿಸಲು ಅತ್ಯವಶ್ಯವಾದ 'ಸಮಾಧಿ'ಯ ಸ್ವರೂಪವನ್ನು ದೇವರು ಬೋಧಿಸುವಾಗಲೂ 'ಶೂನ್ಯ'ವೆಂದರೇನೆಂಬ ಕಲ್ಪನೆ ನಮಗೆ ಸ್ಪಷ್ಟವಾಗಬಹುದು.

೧ .... ಪ್ರಥಮದಲ್ಲಿ ಅಖಂಡಾದ್ವಯ ಅನುಪಮ ನಿರವಯ ನಿರಂಜನ ಸರ್ವಶೂನ್ಯವನೊಳಕೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲ ಲಿಂಗವು ....[೧]

೨ ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ ಎಲೆ ತಾಯೆ.[೨]

೩ .... ಅಖಂಡಾದ್ವಯ ನಿತ್ಯ ನಿರವಯ ನಿಶ್ಶೂನ್ಯವಪ್ಪ ನಿಷ್ಕಲ ಪರ ಶಿವನ ....[೩]

೪ .... ಭಾವವಿಲ್ಲದ ಬಯಲು ಪರವು ತಾನೆ.[೪]

೫ ಲಿಕಾರವೆ ಶೂನ್ಯ, ಬಿಂದುವೆ ಲೀಲೆ, ಗಕಾರವೆ ಚಿತ್ತು.[೫]

೬ ಊರ್ಧ್ವಶೂನ್ಯಮಧಃಶೂನ್ಯಂ ಮಧ್ಯಶೂನ್ಯಂ ನಿರಾಮಯಂ
ಸರ್ವಶೂನ್ಯಮನಾಭಾಸಂ ಸಮಾಧೇಸ್ತಸ್ಯ ಲಕ್ಷಣಂ.[೬]

೭ .... ಗೊಹೇಶ್ವರನೆಂಬ ಲಿಂಗ ನಿರಾಕಾರ ಬಯಲು; ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ, ಹೇಳಲಮ್ಮೆ ಕೇಳಲಮ್ಮೆ.[೭]

೮ .... ಸಿಲುಕಿತ್ತು ಶೂನ್ಯದೊಳಗೆ ಗೊಹೇಶ್ವರ ನಿರಾಳ.[೮]

೯ .... ಅಣು ರೇಣು ತೃಣಕಾಷ್ಠದೊಳಗೆ ಸೂಕ್ಷ್ಮನಕ್ಷಯ ನಿಂದ ನಿರಾಳ ಗೊಹೇಶ್ವರ.[೯]

೧೦ .... ಆ ಸ್ವಾನುಭಾವದೊಳಗಣ ಅಱಿವಿನಿಂ ಶರಣನಾಗಿ ಆ ಅಱಿವು ನಿಜದಲ್ಲಿ ಸಮರಸಭಾವವನ್ನೈದಿದ ನಿರ್ಭಾವ ಪದದೊಳು ನಿಂದ ಭೇದವೆಂತಿರ್ದುದೆಂದೊಡೆ ಮುಂದೆ ಐಕ್ಯಸ್ಥಲವಾದುದು.[೧೦]

---

೧. ಶೂ. ಸಂ. ಪು. ೪, ಗದ್ಯಭಾಗ.
೨. ಅದೇ ಪು. ೨೭, ವ. ೧೩.
೩. ಅದೇ ಪು. ೭೧, ಪ್ರ. ೧.
೪. ಅದೇ ಪು. ೧೬೧, ವದ. ಪಲ್ಲವಿ.
೫. ಅದೇ ಪು. ೨೦೨, ವ. ೮೧.
೬. ಅದೇ ಪು. ೧೧, ಪ್ರ. ೩೦.
೭. ಅದೇ ಪು. ೧೭, ವ. ೫೩.
೮. ಅದೇ ಪು. ೧೭, ವ. ೫.
೯. ಅದೇ ಪು. ೧೯, ವ. ೬೭.
೧೦. ಅದೇ ಪು. ೨೦, ಪ್ರ. ೭೨.

೧೧ ನಿಜವನಱಿದ ನಿಶ್ಚಿಂತನೆ. ಮರಣವ ಗೆಲಿದ ಮಹಂತನೆ. ಘನವನೊಳಕೊಂಡ ಮಹಿಮನೆ. ಪರವನೊಳಕೊಂಡ ಪರಿಣಾಮಿಯೆ. ಬಯಲಲೊದಗಿದ ಭರಿತನೆ. ಗೊಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ.[೧]

೧೨ . . . . ನಿರ್ಭಾವ ಪದದೊಳು ನಿಂದು ನಿಶ್ಶೂನ್ಯಮಂ ನಿರೀಕ್ಷಿಸಿ, ನಿಜಸಮಾಧಿಯೊಳು ಮೂರ್ತಿಗೊಂಡು ಇದ್ದರು . . . .[೨]

೧೩ ಇಹಲೋಕ ಪರಲೋಕ ತಾನಿದ್ದಲ್ಲಿ. ಗಗನ ಮೇರುಮಂದಿರ ತಾನಿದ್ದಲ್ಲಿ. ಸಕಲ ಭುವನ ಸತ್ಯಲೋಕ ತಾನಿದ್ದಲ್ಲಿ. ನಿತ್ಯ ನಿರಂಜನತತ್ತ್ವ ತಾನಿದ್ದಲ್ಲಿ. ಉತ್ತರೋತ್ತರ ಪದ ತಾನಿದ್ದಲ್ಲಿ. ಚಂದಸೂರ್ಯ ತಾರಾಮಂಡಲ ತಾನಿದ್ದಲ್ಲಿ. ಅಂತರ ಮಹದಂತರ ತಾನಿದ್ದಲ್ಲಿ. ಸ್ವತಂತ್ರ ಗೊಹೇಶ್ವರ ತಾನಿದ್ದಲ್ಲಿ.[೩] ಇಂತು ಪರಶಿವಯೋಗದಲ್ಲಿ ನಿಂದು ನಿರವಯನಾಗಿ, ಅನಂತ ಕೋಟಿ ಬ್ರಹ್ಮಾಂಡಂಗಳೆಲ್ಲವನೂ ತನ್ನ ಮಹಾಜ್ಞಾನ ಪ್ರಕಾಶದಲ್ಲಿ ಆಲಿಂಗಿಸಿ, ತೊಳಗಿ ಬೆಳಗಿ ಒಪ್ಪುತ್ತಿರ್ಪ ಪ್ರಭುದೇವರು . . . .[೩]

೧೪ ಜ್ಞಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದು, ತಾನಾಗಿರ್ದೆನೆಂಬ ಜ್ಞಾನ ಶೂನ್ಯವಾಗಿ, ತಾನೆ ತನ್ನೊಳು ಮೈಮಱೆದೊಱಗಿದ ನಿರಾಳ ಜ್ಞಾನಾತೀತಂ ನಿರುಪಮ ನಿಶ್ಚಲ ನಿಶ್ಚಲ ನಿರ್ಭೇದ್ಯಾ.[೪]

ಮೇಲೆ ಕೊಟ್ಟಿರುವ ಹೇಳಿಕೆಗಳನ್ನು ಪರಾಮರ್ಶಿಸಿ ನೋಡಿದರೆ 'ಶೂನ್ಯ'ದ ಅರ್ಥ ಬಹುಮಟ್ಟಿಗೆ ಹೊಳೆಯುತ್ತದೆ. ಮೊದಲು 'ಶೂನ್ಯ' ಎಂಬ ಶಬ್ದ ಇಲ್ಲಿ 'ಇಲ್ಲ', 'ಬಯಲು' ಎಂಬ ಅರ್ಥದಲ್ಲಿ ಬಳಸಿಕೊಂಡಿದ್ದರೂ ನಿಜ, ನಿರಾಳ, ನಿಷ್ಕಲ, ನಿರಾಕಾರ, ನಿರಂಜನ, ಸಹಜ, ನಿಶ್ಶಬ್ದಗಂಭೀರವಾದ ಪರಮಪದದಲ್ಲಿ ಪೃಥ್ವಿ ಮೊದಲಾಗಿ ಅಹಂಭಾವ ಕಡೆಯಾಗಿ ಏನೂ ಏನೂ ಇಲ್ಲ, ಎಲ್ಲ ಬಯಲು, ಎಲ್ಲಾ ತಮ್ಮ ನಿಜಸ್ವರೂಪದಲ್ಲಿ ನಿಂದಿವೆ — ಎಂಬೀ ನಿಶ್ಚಿತಾರ್ಥವಿಲ್ಲಿದೆ.

ಬರೆಯುತ್ತಿರುವ ಲೆಕ್ಕಣಿಕೆ ದಣಿದ ಕತ್ತೆಯಂತೆ ನಡೆಯಹತ್ತಿದೆ, ನಡೆಯದಂತೆ. 'ಶೂನ್ಯ'ವನ್ನು ಬದಿಗಿರಿಸಿ ನಾನು ನೀವು ಒಂದು ಕೆಲಸ ಮಾಡೋಣ. ಶೆಕ್ಸಪಿಯರ್‌ನ ಹೆಸರು ನೀವು ಕೇಳಿದ್ದೀರಿ. ಆತನ ಬಳಿಗೆ ಹೋಗೋಣ. ಸುಮಾರು ೪೦೦ ವರ್ಷದ ಹಾದಿ. ಮುಂದೆ ಮುಖವಾಗಿ ಅಲ್ಲ, ಹಿಂದಕ್ಕೆ ಮುಖವಾಗಿ. ೪೦೦ ವರ್ಷದ ಪ್ರವಾಸ! ಇಂದಿನ ಜೀವಮಾನ ೩೦–೬೦ ವರ್ಷ. ನಾನಾಗಲಿ ನೀವಾಗಲಿ ೪೦೦ ವರ್ಷ ಬದುಕಿದರಷ್ಟೆ ಶೆಕ್ಸಪಿಯರ್‌ನನ್ನು ಸೇರುವುದು. ಆದರೂ ಮನದ ಶಕ್ತಿ ಅತ್ಯದ್ಭುತ. ಒಂದು ಶಬ್ದ ಬರೆಯುವಷ್ಟರಲ್ಲಿ ಶೆಕ್ಸಪಿಯರ್‌ನ ಬಳಿ ಸಾರಿತು ಮನ. ಬೆಳಕಿಗಿಂತ ವೇಗ, ವೇಗಕ್ಕಿಂತ ವೇಗ ಮನದ ಪ್ರಯಾಣ. ಹಿಂದೆ ಮುಂದೆ ಕಾಲದ ಅನಂತವನ್ನು ನಿಮಿಷಾರ್ಧದಲ್ಲಿ ತುಳಿಯಬಲ್ಲ ಮನ ದಶದಿಕ್ಕುಗಳ ಮೇರೆಯನ್ನು ನಿಮಿಷದ ನಿಯಮವಿಲ್ಲದೆ ದಾಟಿ,

೧. ಶೂ. ಸಂ. ಪು. ೨೦, ವ. ೭೪.
೨. ಅದೇ ಪು. ೩೦೩-೩೦೪, ಪ್ರ. ೧೫.
೩. ಅದೇ ಪು. ೩೦೫-೩೦೬, ವ. ೨೫, ಪ್ರ. ೨೬.
೪. ಅದೇ ಪು. ೩೭೨. ಪದ ೬.

ಅತ್ತಾಚೆ ನಡೆಯಬಲ್ಲುದು. ಅಂದಮೇಲೆ ನಮಗೆ ಇಂಗ್ಲಂಡ್ ಅಥವಾ ೪೦೦ ವರ್ಷ ದೂರಲ್ಲ, ಮನೆಯಲ್ಲಿಯೆ ಇದ್ದಂತೆ.

ಮೂವತ್ತೇಳು ನಾಟಕ ಬರೆವೆನೆಂಬ ಕಲ್ಪನೆ ಕನಸುಮನಸಿನಲ್ಲಿಲ್ಲದ ಶೇಕ್ಸಪಿಯರ್ ಇನ್ನೂ ಸಣ್ಣ ಬಾಲಕ. ಮೀಸೆ ನನಗೂ ಮೂಡಬಹುದೇ ಎಂಬ ಸಂದೇಹದಲ್ಲಿದ್ದ ಹುಡುಗ. ನಾವು ಈ ಹುಡುಗನ ಬಳಿ ನಿಂದು, ತಲೆಯನ್ನು ಮನವನ್ನು ಭಾವವನ್ನು ಬುದ್ಧಿಯನ್ನು ಪ್ರತಿಭಾಶಕ್ತಿಯನ್ನು ಬಿಚ್ಚಿ ತೆರೆದು ನೋಡಿದರೆ ಅಲ್ಲಿ ೩೭ ನಾಟಕ ಇವೆಯೆ? ಇಲ್ಲ. ಒಂದು ನಾಟಕವಾದರೂ ಇದೆಯೆ? ಇಲ್ಲ. ನನಗಂತೂ ಕಾಣಿಸುವುದಿಲ್ಲ. ನಿಮಗೆ? ನಿಮಗೂ ಇಲ್ಲ ಎಂದು ನನಗೆನಿಸುತ್ತದೆ. ಆ ಹುಡುಗನಿಗೆ? ನಮ್ಮಂತೆ ಅವ. ಆತನಿಗೂ ತನ್ನ ಅಂತರಂಗದಲ್ಲಿ ಯಾವ ನಾಟಕವೂ ತೋರುವಂತೆ ತೋರುವುದಿಲ್ಲ. ಒಂದು ನಾಟಕ ಹೋಗಲಿ. ಒಂದೆರಡು ಪಾತ್ರ? ಅಲ್ಲಿ ಮ್ಯಾಕ್‌ಬೆಥ್ ಇದ್ದಾನೆಯೇ? ನಮ್ಮ ಮೂವರ ಉತ್ತರ – ಇಲ್ಲ. ಡಂಕನ್? ಇಲ್ಲ. ಹ್ಯಾಮ್ಲಟ್? ಇಲ್ಲ. ಅಥೆಲೋ, ಡೆಸ್ಡೆಮೋನಾ, ಆಯಾಗೊ, ಕ್ಯಾಸಿಯೋ? ಇಲ್ಲ. ಫಾಲ್‌ಸ್ಟಾಫ್? ಇಲ್ಲ. ಅದು ಹೋಗಲಿ.

1 Good name in man and woman, dear my lord.
Is the immediate jewel of their souls:[೧]

2 To be, or not to be: that is the question:
Whether't is nobler in the mind to suffer
The slings and arrows of outrageous fortune,
Or to take arms against a sea of troubles,
And by opposing end them? .....[೨]

3 All the world's a stage,
And all the men and women merely players:
They have their exits and their entrances:
And one man in his time plays many parts,
His acts being seven ages .....[೩]

4 This above all: to thine own self be true,
And it must follow, as the night the day,
Thou canst not then be false to any man.
Fare well; my blessing season this in thee.[೪]

---

೧. Othello, The Moor of Venice
Act III, Scene III, Lines 156-157.

೨. Hamlet, Prince of Denmark
Act III, Scene I, Lines 56-60.

೩. As You Like It
Act II, Scene VII, Lines 139-143.

೪. Hamlet, Prince of Denmark
Act I, Scene II, Lines 78-81.

ಎಂಥೆಂಥ ವಿಚಾರ, ಲೋಕಾನುಭವದ ಹಣ್ಣುಗಳಿವೆಯೆ ಶೆಕ್ಸಪಿಯರ್ ಹುಡುಗನಲ್ಲಿ? ಮತ್ತೂ ಮೂವರ ಉತ್ತರ – ದೊಡ್ಡ ಇಲ್ಲ. ಇದೂ ಹೋಗಲಿ, **'Put out the light and then put out the light'**[೧] ಎಂಬ ಇಂಥ ಅರ್ಥಗರ್ಭಿತ ಶಬ್ದಗಳಾದರೂ ಇವೆಯೆ? ಮತ್ತೆ ಅದೇ ಉತ್ತರ – ದೊಡ್ಡ ಸೊನ್ನೆ.

ನಾಟಕಸೃಷ್ಟಿಯಾದ ಶೆಕ್ಸಪಿಯರ್ ಅಂದರೆ ನಾಟಕ ಶೆಕ್ಸಪಿಯರ್ ಇಲ್ಲಿ ಇಲ್ಲ, ನಿಜ. ಆದರೆ ನಾಟಕಗರ್ಭಿತ ಶೆಕ್ಸಪಿಯರ್ ಇಲ್ಲಿ ಇಲ್ಲವೆ? ನನ್ನ ಉತ್ತರ – ಇದ್ದಾನೆ. ನಿಮ್ಮದು ಇದ್ದಾನೆಂದೇ ಅಲ್ಲವೆ? ಆ ಹುಡುಗನದು – ಅದಂತು ಸರಿಯೇ. ನಾನು ಇಲ್ಲ ಎಂದು, ಎಚ್ಚರವಿದ್ದ ಹುಡುಗನಾಗಲಿ ಹಿರಿಯರೇ ಆಗಲಿ ಹೇಳಬಹುದೆ? ಗಟ್ಟಿ ತಾನು ಬಯಲು ಎಂದು ಅಥವಾ ಬಯಲು 'ನಾನು ಘನ' ಎಂದು ಹೇಳಿದರೆ ಯಾರು ನಗಲಿಕ್ಕಿಲ್ಲ? ಅಂತು ನಮ್ಮೆಲ್ಲರ ಮಥಿತ ನಿಶ್ಚಯವೆಂದರೆ ನಾಟಕ, ವಿಚಾರ, ಭಾವ, ತಂತ್ರರಚನೆ, ಕೌಶಲ ಪಾತ್ರ ವೇಷ ಸಂಭಾಷಣೆ ಅರ್ಥ ಶಬ್ದವಾದ ಶೆಕ್ಸಪಿಯರ್ ಹುಡುಗನಲ್ಲಿ ಇಲ್ಲ, ಇಲ್ಲ. ಇಲ್ಲ, ಇಲ್ಲ......ಆದರೆ ಇವೆಲ್ಲ ಆಗ ಬಲ್ಲ ಶೆಕ್ಸಪಿಯರ್ ಹುಡುಗನಲ್ಲಿ ಇದ್ದಾನೆ, ಇದ್ದಾನೆ, ಇದ್ದಾನೆ. ಇದನ್ನು ತ್ರಿಕಾಲಾಬಾಧಿತವಾದ ಸತ್ಯ ಎಂದು ಕರೆಯೋಣವೆ?

ಇನ್ನೂ ಸ್ವಲ್ಪ ಮುಂದಕ್ಕೆ ಅಂದರೆ ಹಿಂದಕ್ಕೆ ಮಾರ್ಗಕ್ರಮಣ ಮಾಡೋಣ. ಶೆಕ್ಸಪಿಯರ್‌ನ ತಾಯಿ ಮೇರಿ ಆರ್ಡನ್ **(Mary Arden)**[೨] ಅದೇ ಹುಡುಗನ ಪಿಂಡವನ್ನು ಧರಿಸಿ ಗರ್ಭಿಣಿ ಇದ್ದ ಕಾಲಕ್ಕೆ ನಮ್ಮ ಪ್ರಯಾಣ. ತಾಯಿಯನ್ನು ಕೇಳೋಣ. ಶೆಕ್ಸಪಿಯರ್ ಇದ್ದಾನೆಯೆ? ಅವಳಿಗೆ ಆಶ್ಚರ್ಯ, ಗಾಬರಿ! ಇಲ್ಲ, 'ಆ ಹೆಸರಿನವರು ನಮ್ಮಲ್ಲಿ ಯಾರೂ ಇಲ್ಲ!' ನಾಟಕದ ಶೆಕ್ಸಪಿಯರ್ ಮತ್ತು ನಾಟಕವಾಗದ ಶೆಕ್ಸ ಪಿಯರ್‌ನನ್ನು ನೋಡಿದ್ದೇವೆ. ಅವನೇ ಗರ್ಭದಲ್ಲಿ ಪಿಂಡರೂಪವಾಗಿ ಇದ್ದಾನೆ – ಆದರೆ, ಶೆಕ್ಸಪಿಯರ್ ಇಲ್ಲ. ಇದ್ದಾನೆ+ಇಲ್ಲ—ದೊಡ್ಡ ಒಗಟು! ಇದು ನನಗೆ ನಿಮಗೆ ಒಗಟು. ನಿಸರ್ಗಕ್ಕೆ? ಏನೂ ಅಲ್ಲ, ಎಳ್ಳಷ್ಟೂ ಅಲ್ಲ. ಮತ್ತೆ ನಾವು ಮುಂದೆ ಅಂದರೆ ಹಿಂದೆ ಪ್ರಯಾಣ ಬೆಳೆಸೋಣ. ಶೆಕ್ಸಪಿಯರ್‌ನ ತಾಯಿ ಇನ್ನೂ ಲಗ್ನವಾಗಿಲ್ಲ. ಎಂಟು ಹತ್ತು, ಹದಿನಾಲ್ಕು ವರ್ಷದ ಕನ್ನೆ. ಚೆಲುವೆ ಇರಬಹುದು. ಆದರೂ ಕನ್ನೆ. ಈ ಕನ್ನೆಯ ಬಳಿಹೋಗಿ 'ಶೆಕ್ಸಪಿಯರ್ ಇದ್ದಾನೆಯೆ ನಿಮ್ಮ ಮಗ?' ಎಂದು ಕೇಳಿದರೆ – ಉತ್ತರವನ್ನು ನೀವೇ ಊಹಿಸಿಕೊಳ್ಳಿ. ಆಗ ಶೆಕ್ಸಪಿಯರ್ ನೆಲದಲ್ಲಿ. ನೀರಲ್ಲಿ ಗಾಳಿ ಬೆಂಕಿ ಬಯಲಲ್ಲಿ. ತಂದೆತಾಯಿಯ ಯಾವ ಯಾವ ಅಂಶದಲ್ಲಿ ಅವಿತಿದ್ದ? ಆಗ ಆತ ಇಲ್ಲ. ಇಷ್ಟೇ ಅಲ್ಲ ಬಯಲು. ಬಯಲು ಎಂದರೆ ಇಲ್ಲಿ ನೀವು ಹೇಳುವ ಅರ್ಥವೇನು? ಶೆಕ್ಸಪಿಯರ್ ಎಲ್ಲ ರೀತಿಯಿಂದ ಬಯಲು, ನಿಜ. ಏಕೆಂದರೆ ಎಲ್ಲಿ ಹುಡುಕಿದರೂ ಅವನ 'ಪತ್ತೆ' ಹತ್ತುವಂತಿಲ್ಲ. ಆದರೆ ನಿಸರ್ಗದ ಕೂಸಾದ ಆ ಕನ್ನೆಯಲ್ಲಿ ಶೆಕ್ಸಪಿಯರ್‌ನನ್ನು

---

೧. **Othello, The Moor of Venice.**
Act V, Scene II, Line 7.

೨. **The Life of Shakespeare.**

ಹಡೆಯಬಲ್ಲ, ಶೆಕ್ಸಪಿಯರ್‌ನಾಗಬಲ್ಲ ಸುಪ್ತ ಸತ್ತ್ವ ಇದೆ. ಇಲ್ಲವಾದರೆ ಶೆಕ್ಸಪಿಯರ್ ಹೇಗೆ ಮೂರ್ತಿಗೊಳ್ಳುತ್ತಿದ್ದ?

ಕನ್ನೆ ಹುಟ್ಟದ ಮುನ್ನ, ಆಕೆಯ ತಂದೆ ತಾಯಿ ಹುಟ್ಟದ ಮುನ್ನ, ಭೂಮಿಯ ಮೇಲೆ ಮಾನವಕುಲ ತಲೆದೋರದ ಮುನ್ನ, ಅಮೀಬಾ ಪ್ರೋಟೋಪ್ಲ್ಯಾಜಮ್ ಜನಿಸದ ಮುನ್ನ, ಅಷ್ಟೇ ಅಲ್ಲ, ಸಾಗರ ಪರ್ವತಗಳನ್ನು ಹಡೆದ ಪೃಥಿವಿ ರೂಪುಗೊಳ್ಳದ ಮುನ್ನ, ಚಂದ್ರ ಸೂರ್ಯ ನಕ್ಷತ್ರಪುಂಜ ತಾರಾಗರ್ಭಗಳು ಮೊಳೆಯದ ಮುನ್ನ, ವಿಶ್ವಪ್ರಪಂಚದ 'ತಳಮುಟ್ಟ'ಗೆ ನಾವು ಮಹಾಪ್ರಯಾಣ ಬೆಳೆಸಬೇಕು. ಈ ತಳಮುಟ್ಟು ಇದೆಯೆ? – ಎಂದು ನೀವು ಕೇಳಿದರೆ ನನಗೆ ಗೊತ್ತಿಲ್ಲ ಎಂದು ಒಮ್ಮೆಲೆ ನಾನು ಉತ್ತರ ಕೊಡುತ್ತೇನೆ. ಆದರೆ ಬ್ರಹ್ಮಜ್ಞಾನಿಗಳು ಬ್ರಹ್ಮದ್ರಷ್ಟಾರರು ವಿಶ್ವಕ್ಕೆ, ವಿಶ್ವಪ್ರಪಂಚಕ್ಕೆ ನಿಲುಕಡೆಯ ಚರಮಸ್ಥಲವಿದೆಯೆಂದು ಹೇಳುತ್ತಾರೆ. ಅದನ್ನೇ 'ಸ್ಥಲ'ವೆಂದೂ ಬ್ರಹ್ಮ, ಪರಬ್ರಹ್ಮ, ಪರವಸ್ತು, ಪರತತ್ತ್ವ, ಪರಶಿವ, ಮಹಾಲಿಂಗ, ಪರಮಪದವೆಂದೂ ಕರೆದಿದ್ದಾರೆ.

ಏಕಮೇವ ಪರಂ ಬ್ರಹ್ಮ ಸಚ್ಚಿದಾನಂದ ಲಕ್ಷಣಂ ।
ಶಿವತತ್ತ್ವಂ ಶಿವಾಚಾರ್ಯಾಃ ಸ್ಥಲಮಿತ್ಯಾಹುರಾದರಾತ್ ॥ ೨ ॥
ಅಧಿಷ್ಠಾನಂ ಸಮಸ್ತಸ್ಯ ಸ್ಥಾವರಸ್ಯ ಚರಸ್ಯ ಚ ।
ಜಗತೋ ಯದ್ ಭವೇತ್ತತ್ತ್ವಂ ತದ್ಧಿ ವೈ ಸ್ಥಲಮುಚ್ಯತೇ ॥ ೬ ॥
ಆಧಾರಂ ಸರ್ವಶಕ್ತೀನಾಂ ಜ್ಯೋತಿಷಾಮಖಿಲಾತ್ಮನಾಂ ।
ಯತ್ತತ್ತ್ವಂ ಭವತಿ ಪ್ರಾಜ್ಞೈಃ ಸ್ಥಲಂ ತತ್ ಪರಿಗೀಯತೇ ॥ ೭ ॥
ಆಲಯಃ ಸರ್ವಭೂತಾನಾಂ ಲೋಕಾನಾಂ ಸರ್ವಸಂಪದಾಂ ।
ಯದ್ಭವೇತ್ ಪರಮಂ ಬ್ರಹ್ಮ ಸ್ಥಲಂ ತತ್ ಪ್ರಾಹುರಕ್ಷರಂ ॥ ೮ ॥[೧]

ಏಕಮೇವಾದ್ವಿತೀಯವಾದ ಸಚ್ಚಿದಾನಂದ ಲಕ್ಷಣವುಳ್ಳ, ಸಕಲ ಚರಾಚರ ಪ್ರಪಂಚಕ್ಕೆ ಪರಮಾಶ್ರಯವಾದ, ಸರ್ವಶಕ್ತಿ ಸರ್ವಜ್ಯೋತಿ ಸರ್ವಾತ್ಮರಿಗೆ ಪರಮಾಧಾರವಾದ, ಸರ್ವಭೂತ ಸರ್ವಲೋಕ ಸರ್ವವೈಭವಕ್ಕೆ ತವರುಮನೆಯಾದ ಪರಮ ಬ್ರಹ್ಮವೇ ಸ್ಥಲ; ಅಕ್ಷರ, ಅಕ್ಷಯವಾದ ಸ್ಥಲ. ಎಲ್ಲ ಎಲ್ಲ ಎಲ್ಲಿ ಹುಟ್ಟಿ, ಎಲ್ಲಿ ಬೆಳೆದು, ಎಲ್ಲಿ ಅಡಗುವವೋ ಅದೇ ಈ ಪರಮಸ್ಥಲ (The Ultimate Ground of things). 'ಜನ್ಮಾದಿ ಅಸ್ಯ ಯತಃ'[೨] ಎಂಬ ವೈಯಾಸಿಕ ಸೂತ್ರವು ನಿರ್ದೇಶಿಸುವ ವಸ್ತು ಅಥವಾ ಸ್ಥಲ ಇದೇ. "ಸತ್ಯಂ ಜ್ಞಾನಮನಂತಂ ಬ್ರಹ್ಮ"[೩] ಎಂಬ ಉಪನಿಷತ್ತಿನ ಬ್ರಹ್ಮ ಇದೇ ವಸ್ತು, ಅಥವಾ ಸ್ಥಲ. ಅನುಭಾವಿಗಳ ಕೈಹಿಡಿದು ನಾವು ಇಲ್ಲಿಯವರೆಗೆ- ಈ ತಳಮುಟ್ಟಿಗೆ ಬಂದರೆ ಇಲ್ಲಿ ಏನಿದೆ?

---

೧. ಸಿ. ಸೂ. ಅಧಿ. ೨, ಶ್ಲೋ. ೨ ಮತ್ತು ೬-೮.
೨. ಬ್ರ. ಸೂ. ಅ. ೧, ಪಾ. ೧, ಅ. ೨, ಸೂ. ೨.
೩. ತೈ. ಉ. ಬ್ರಹ್ಮಾನಂದವಲ್ಲೀ, ಅನು. ೧.

ನಾಮ ರೂಪ ಕ್ರಿಯಾತ್ಮಕವಾದ ಅನಂತ ವಿಶ್ವದ ಸುಳಿವೇ ಇಲ್ಲಿ ಇಲ್ಲ. ಚಂದ್ರ ಸೂರ್ಯ ನಕ್ಷತ್ರಪುಂಜ ನಕ್ಷತ್ರಗರ್ಭ ಮತ್ತು ಅವನ್ನೊಳಗೊಂಡ ಆಕಾಶದ ಸುದ್ದಿಯೆ ಇಲ್ಲದ ಈ ಮೂಲಸ್ಥಲದಲ್ಲಿ ನನ್ನ ನಿಮ್ಮ ಹೆಸರೆಲ್ಲಿ? ದೆಸೆಯೆಲ್ಲಿ? ಇಲ್ಲಿ ಏನು ಕೇಳಿದರೂ 'ನಾಸ್ತಿ ನಾಸ್ತಿ' ಇಲ್ಲವೆ 'ಶೂನ್ಯ, ಬಯಲು' ಎಂದೇ ಉತ್ತರ ಕೊಡಬೇಕು. 'ಏನೂ ಇಲ್ಲ, ಎಲ್ಲ ಬಯಲು' – ಎಂದು ಹೇಳಿದರೂ ಸತ್ತು ಚಿತ್ತು ಆನಂದ, ನಿತ್ಯ ಪರಿಪೂರ್ಣವಾದ ಏಕಮೇವಾದ್ವಿತೀಯ ಜಗಜ್ಜನ್ಮಭೂಮಿಯಾದ ಪರಮತತ್ತ್ವಕ್ಕೆ, ಅದರ ಅಸ್ತಿತ್ವಕ್ಕೆ ಯಾವ ಭಂಗವೂ ಇಲ್ಲ. ತೆರೆ ನೊರೆ ಬುದ್ಬುದಗಳಡಗಿದರೆ ಸಮುದ್ರದ ಸತ್ತೆಗೆ ಕುಂದು ಕೊರತೆಯುಂಟೇ? ಅವು ಅಡಗುವುದಾದರೂ ಎಲ್ಲಿ? ರೂಪುಗೊಂಡು ಹುಟ್ಟಿ, ತರಂಗ ವೀಚಿ ಸೀಕರವಾಗಿ ಸಮುದ್ರದ ಮೇಲೆ, ಒಳಗೆ ಅನಂತಲೀಲೆಯಾಡಿದು ದಾದರೂ ಎಲ್ಲಿ? ನಿವಾತ ನಿಷ್ಕಂಪ ನಿಸ್ತರಂಗವಾದ ಮಹಾಸಾಗರದ ಮುಂದೆ ನಿಂತು ನೋಡಿದರೆ ತರಂಗಕೋಟಿಯ ಹೆಸರಿಲ್ಲ, ದೆಸೆಯಿಲ್ಲ. ವೀಚಿಗಳ ಅಬ್ಜ ಇಲ್ಲಿ ಇಲ್ಲ, ಎಲ್ಲ ಬಯಲಾಗಿವೆ. ಸೀಕರಗಳ ಪದ್ಮ ಇಲ್ಲ, ಎಲ್ಲ ಬಯಲು. ಅಂದರೆ ನಾಮ ರೂಪ ಕ್ರಿಯೆಯಾಗಿ ತೋರಿ, ತೋರಿದಲ್ಲಿ ಅಡಗಿದರೆ ಅದನ್ನೇ ಇಲ್ಲಿ ಬಯಲು, ಶೂನ್ಯ ಎಂದು ಹೇಳುವುದು. ಮತ್ತು ಯಾವುದೇ ವಸ್ತು ಒಂದು ನಾಮ, ಒಂದು ರೂಪ, ಒಂದು ಕ್ರಿಯೆಯಾಗಿ ತೋರಿ, ಅಡಗಿ, ಇಲ್ಲದಂತೆ ಬಯಲಾದರೂ ಸಾರವಸ್ತುವಿನಲ್ಲಿ (The Heart of things) ನಾಮ ರೂಪ ಕ್ರಿಯೆಯಾಗಬಲ್ಲ ಶಕ್ತಿ (Potentiality, or Force) ಅವಿನಾಭಾವ ಸಂಬಂಧದಿಂದ ಅಲ್ಲಿ ಹುದುಗಿಕೊಂಡೇ ಇದೆ, – ಬೀಜದಲ್ಲಿ ಮರವಾಗಬಲ್ಲ ಶಕ್ತಿಯಿದ್ದಂತೆ.

'ಇಂಗಡಲೊಳಿಂಪು ಬೆಳುದಿಂಗಳೊಳು ತಂಪು ಕುಸು ।
ಮಂಗಳೊಳು ಕಂಪು ಬೆರೆದಂತೆ ಪರಮನೊಳು ।
ಪಿಂಗದಗಸುತೆಗೆ ನತನಪ್ಪೆ ॥'[೧]

ಇಲ್ಲಿ ನಿಜಗುಣಶಿವಯೋಗಿಗಳು ಹೇಳುವ 'ಅಗಸುತೆ' ಪಾರ್ವತಿಯೆ ಪರಶಿವನ ಚಿತ್ ಶಕ್ತಿ; 'ಸದ್‌ಘನ' ಇಂಗಡಲಲ್ಲಿ ಎಂದೂ ಪಿಂಗದೆ ಇರುವ ಚಿದ್‌ಘನ ಶಕ್ತಿ.

ಸ್ವಾನುಭಾವದ ಸೀಮೆ ಪರಬ್ರಹ್ಮ, ಪರಮಾತ್ಮ, ಪರವಸ್ತು, ಮಹಾಲಿಂಗ, ಪರಶಿವಲಿಂಗದ ವರೆಗೆ ವಿಶ್ವಾತೀತವಿಸ್ತಾರವಾಗಿ ಹಬ್ಬಿತು ಒಂದು ಕಾಲದಲ್ಲಿ. ಆದರೆ ಅನುಭಾವಿಗಳು ಇದೇ ತಮ್ಮ ಸ್ವ-ಸ್ಥಲ, ಚರಮಸ್ಥಲವೆಂದು ಇಲ್ಲಿಯೆ ಕುಳಿತಂತೆ ತೋರುವುದಿಲ್ಲ. ಮತ್ತೆ ಮುಂದೆ ಮುಂದೆ ನಡೆದು ಪರಬ್ರಹ್ಮವನ್ನು ದಾಟಿ ನಿಃಸ್ಥಲದ ನಿಜದಲ್ಲಿ ನಿಂದಂತೆ ತೋರುತ್ತದೆ.

ಮುಂದೆ ಮುಂದೆ, ಇನ್ನೂ ಮುಂದೆ ಬನ್ನಿ. ಇಲ್ಲಿ, ಈ ಸರ್ವಶೂನ್ಯವಾದ ನಿಃಸ್ಥಲದಲ್ಲಿ, ಈ ಭಾವವಿಲ್ಲದ ಬಯಲಿನಲ್ಲಿ, ಈ ನಿರಾಕಾರ ನಿಶ್ಶೂನ್ಯದಲ್ಲಿ, ಈ ನಿಜದ ನಿರಾಳದಲ್ಲಿ ನಡೆವುದೆಂದರೆ ಗಮನವಿಲ್ಲದ ಗಮನ. ಇಲ್ಲಿ ಧ್ಯಾನ ಧ್ಯಾನಿಸಲರಿಯದು;

---

೧. ವೇ. ಗ್ರಂ. ಅನು. ಪು. ಸ್ತೋ. ಪು. ೧, ಪ. ೩.

ಭಾವ ಭಾವಿಸಲರಿಯದು. ಇಲ್ಲಿ ನಿಜಾನುಭಾವಿಗಳು 'ಶಬುದಕ್ಕೆ ಹೇಸಿ ಮುಗುದ'[೧] ರಾದರು. ಇದೇ 'ಬಂದು ಬಾರದ, ನಿಂದ ನಿರಾಳ.'[೨] ಚಾಮರಸನು ಹೇಳುವಂತೆ ಈ ನಿರವಯ, ನಿರವಯಲ ಪದದಲ್ಲಿಯೆ ೧೨ನೆಯ ಶತಮಾನದಲ್ಲಿದ್ದ ಶರಣರು

'....ತಮ್ಮಯ ನಾಮ ರೂಪು
ಕ್ರೀವಿಳಾಸವನಿಳುಹಿ ನಿತ್ಯ ನಿ-
ರಾವಲಂಬದ ಸುಖಿಗಳಾದರು....'[೩]

ಈ 'ನಿರಾವಲಂಬದ' ಮೀರಿದ ಪದವನ್ನೆ ಅಲ್ಲಮ ಪ್ರಭುದೇವರು ಶರಣರಿಗೆ ಸೂರೆ ಮಾಡಿದರು:

'....ಗುರುಕೃಪೆಯಾದ ಶರಣರಿಗೆ ॥
ಹವಣಿಸಲು ಬಾರದ ಪರಬ್ರ-
ಹ್ಮವನು ಮೀಱಿದ ನಿರುಪಮ ಸ್ಥಾ-
ನವನು ಸೂಱೆಯ ಕೊಟ್ಟನಲ್ಲಮ ಗಿರಿಜೆ ಕೇಳೆಂದ' ॥[೪]

ಪರಬ್ರಹ್ಮವನ್ನು ಮೀರಿ ಅನುಭಾವ ಮುಂದೆ ನಡೆದಿದೆ ಎಂಬ ಮಾತನ್ನು ಪ್ರಭುಲಿಂಗ ಲೀಲೆಯಲ್ಲಿ ಚಾಮರಸನಷ್ಟೇ ಅಲ್ಲ, ಸ್ವತಃ ಪ್ರಭುದೇವರು ತಮ್ಮ ವಚನದಲ್ಲಿ ಈ ಸ್ವಾನುಭಾವದ ಗೌರೀಶಂಕರವನ್ನು ತಾವು ಏರಿ ಮುಟ್ಟಿ, ಅಲ್ಲಿಯೇ ನಿರವಯಲಾಗಿ ನಿಂದ ನಿಲವಿನ ಉಲ್ಲೇಖವನ್ನು ಸಂಶಯಕ್ಕೆ ಎಳ್ಳಷ್ಟು ಇಂಬಿಲ್ಲದಂತೆ ಮಾಡಿದ್ದಾರೆ. ಅದೋ ಕೇಳಿ ಆ ನಿರವಯಲ ನಿಶ್ಶಬ್ದ ಗೀತವನ್ನು:

ಉಪಮೆ ಉಪಮಿಸಲರಿಯದೆ ಉಪಮಾತೀತವೆನುತಿರ್ದಿತ್ತು.
ಅರಿವುಮರವಿನ ಮರೆಯಲಿರ್ದುದನರಿಯದೆ, ಅರಿವು ಪರಾಪರವೆನುತಿರ್ದಿತ್ತು.
ಧ್ಯಾನ ಧ್ಯಾನಿಸಲರಿಯದೆ ಧ್ಯಾನರೂಪಾತೀತವೆಂದು, ಧ್ಯಾನ ತದ್ಧ್ಯಾನಗೊಂಡಿತ್ತು.
ಜ್ಞಾತೃ ಜ್ಞಾನ ಜ್ಞೇಯಕ್ಕಿನ್ನಾವ ಜ್ಞಾನವೋ?
ವೇದ ವಿಜ್ಞಾನವೆಂದುದಾಗಿ, ತತ್ತ್ವಮಸಿ ವಾಕ್ಯಂಗಳೆಲ್ಲ ಹುಸಿಯಾಗಿ ಹೋದವು;
ಸಚ್ಚಿದಾನಂದವೆಂದುದಾಗಿ, ದ್ವೈತಾದ್ವೈತ ಬ್ರಹ್ಮವಾದಿಗಳೆಲ್ಲ ಸಂಹಾರವಾಗಿ ಹೋದರು.

ಬಂದು ಬಾರದ, ನಿಂದ ನಿರಾಳ ನಮ್ಮ ಗುಹೇಶ್ವರನು.[೫]

ಮತ್ತೆ ಕೇಳಿ ನಿರವಯಲ ಸಮಾಧಿಯ ಸಂಗೀತವನ್ನು:

ಅಂಗದ ಧರೆಯ ಮೇಲೆ ಮೂರು ಭಾವಿಯುಂಟು.
ಮೊದಲ ಭಾವಿಯ ಮುಟ್ಟಿದಾತ ಅಂಗಸಂಗಿಯಾದನು.

---

೧. ಶೂ. ಸಂ. ಪು. ೩೧, ವ. ೨೯.
೨. ವ. ಶಾ. ಸಾ. ಭಾ. ೨. ಪು. ೫೬೦, ವ. ೬.
೩. ಪ್ರ. ಲೀ., ಗ. ೨೫, ಪ. ೧೭.
೪. ಅದೇ ಗ. ೨೫, ಪ. ೧೬.
೫. ವ. ಶಾ. ಸಾ. ಭಾ. ೨. ಪು. ೫೬೦, ವ. ೬.

ನಡುವಣ ಭಾವಿಯ ಮುಟ್ಟಿದಾತ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾದನು.
ಮೇಲಣ ಭಾವಿಯ ಮುಟ್ಟಿದಾತ ಜೀವನ್ಮುಕ್ತನಾದನು.
ಇವ ತಟ್ಟದೆ, ಮುಟ್ಟದೆ ಹೋದರು ನೋಡಾ, – ಪರಬ್ರಹ್ಮವ ದಾಂಟಿ,
ಗುಹೇಶ್ವರನೆಂಬ ಲಿಂಗದಲ್ಲಿ ಹಂಗುಹರಿದ ಶರಣರು.[೧]

ಇಲ್ಲಿ ತನು ಬಯಲು, ಮನ ಬಯಲು, ವಿಚಾರ ನಿರ್ವಿಚಾರ, ಭಾವ ನಿರ್ಭಾವ, ಶಬ್ದ ನಿಶ್ಶಬ್ದ. ಇಲ್ಲಿ ವೇದ ಉಪನಿಷತ್ತು ಗೀತೆಗಳಿಂದ ಬಂದ ಅಧ್ಯಾತ್ಮ ಪ್ರಪಂಚವೆಲ್ಲ ನಿಷ್ಪ್ರಪಂಚ. ನೀರು ಬತ್ತಿದ ಕೆರೆಗೆ ತೆರೆಯ ವಿಲಾಸವುಂಟೆ? ಜ್ಞಾನ, ವಿಜ್ಞಾನ[೨] ಅಂದರೆ ಬ್ರಹ್ಮಜ್ಞಾನ, ಪರಬ್ರಹ್ಮದ ಪಂಚಲಕ್ಷಣ ಸತ್ತು, ಚಿತ್ತು, ಆನಂದ. ನಿತ್ಯ. ಪರಿಪೂರ್ಣಗಳು, 'ಶಿವೋऽಹಂ,' 'ಶಿವಃ ಕೇವಲೋऽಹಂ,' 'ತತ್ ತ್ವಮ್ ಅಸಿ,' 'ಸರ್ವಂ ಖಲು ಇದಂ ಬ್ರಹ್ಮ,' 'ಅಯಮಾತ್ಮಾ ಬ್ರಹ್ಮ' 'ಅಹಂ ಬ್ರಹ್ಮಾಸ್ಮಿ' – ಮುಂತಾದ ಚಿದಹಂಭಾವದ ಸರ್ವಪ್ರಪಂಚವೆಲ್ಲ ಸರ್ವಶೂನ್ಯ. ಗೋಹೇಶ್ವರ, ಲಿಂಗ – ಅದರ ಹಂಗೂ ಹರಿದು ಏನೂ ಇಲ್ಲದೆ, ಏನೆಂದೆನಲಿಲ್ಲದ, 'ತನ್ನಲ್ಲಿ ತಾನಾದ ಬಯಲು, ತನ್ನಲ್ಲಿ ತಾನಾದ ಘನ' ತಾನಾಗಿರ್ದ, ತನ್ನನ್ನು ತಾನು ಎಂಬ ಭಾವದ ಸೊಲ್ಲಿಲ್ಲದ, ಸೊಮ್ಮಿಲ್ಲದ – ಏನು? ನುಡಿದು ಹೇಳಲಿಕ್ಕಿಲ್ಲದ ನಿರಾಳಕ್ಕೆ ನಾಮವೇನು?

ನಾಮ ನಾಮವೆಂದು ನೀನು ನಾಮಕ್ಕೆ ಬಳಲುವೆ.
ನಾಮ (ವಾವ?) ಸೀಮೆಯೊಳಗಿಪ್ಪುದು ಹೇಳಿಲೆ ಮರುಳೇ.
ನಾಮವೂ ಇಲ್ಲ, ಸೀಮೆಯೂ ಇಲ್ಲ; ಒಡಲೂ ಇಲ್ಲ, ನೆಳಲೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ನಾನೂ ಇಲ್ಲ, ನೀನೂ ಇಲ್ಲ.[೩]

ನಿಜ ನಿರಾಳದ ನಿಲುಕಡೆಯಲ್ಲಿ ಪರಬ್ರಹ್ಮವೆಂಬ ನಾಮವಿಲ್ಲ. ಪರಪ್ರಹ್ಮವೆಂಬ ಸೀಮೆಯಿಲ್ಲ. ಪರಬ್ರಹ್ಮವೆಂಬ ಒಡಲಿಲ್ಲ, ಸಚ್ಚಿದಾನಂದ ನಿತ್ಯಪರಿಪೂರ್ಣವೆಂಬ ನೆಳಲಿಲ್ಲ. ತಾನೇ ಪರಬ್ರಹ್ಮವೆಂಬ ಚಿದಹಂಭಾವದ ನಾನು ಎಲ್ಲಿದೆ?

ಆದಿ ಇಲ್ಲದ ಬಯಲು, ಅನಾದಿ ಇಲ್ಲದ ಬಯಲು.
ಶೂನ್ಯವಿಲ್ಲದ ಬಯಲು, ನಿಶ್ಶೂನ್ಯವಿಲ್ಲದ ಬಯಲು.
ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು.
ಅಖಂಡೇಶ್ವರನೆಂಬ ಬಯಲಲ್ಲಿಯ ಬಯಲು
ಮಹಾಘನ ಬಚ್ಚಬರಿಯ ಬಯಲೊಳಗೆ
ಎಚ್ಚರವಡಗಿ ನಾನೆತ್ತ ಹೋದೆನೆಂದರಿಯೆ[೪]

---

೧. ಪ್ರ. ವ., ಪು. ೨೯೫, ವ. ೧೩.
೨. ನೋಡಿರಿ: ತದ್‌ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್.
ಮುಂ. ಉ. ಮುಂಡಕ ೧, ಖಂ. ೨, ಮಂ. ೧೨.
೩. ವ. ಶಾ. ಸಾ. ಭಾ. ೧, ಪು. ೫೭೦, ವ. ೧.
೪. ವ. ಶಾ. ಸಾ. ಭಾ. ೧, ಪು. ೫೭೧, ವ. ೮.

ನೀನು? ಪರಬ್ರಹ್ಮ, ಗೊಹೇಶ್ವರಲಿಂಗ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ, ಅಖಂಡೇಶ್ವರನ ಗತಿ ಏನು?

ಅಯ್ಯಾ ಒಳಗೆ ನೋಡಿದರೆ ಬಯಲು, ಹೊರಗೆ ನೋಡಿದರೆ ಬಯಲು. ನೆನೆದಿಹೆನೆಂದರೆ ಮನ ಬಯಲು. ನೆನಹಿಸಿಕೊಂಡಿಹೆನೆಂದರೆ ನೀನಿಲ್ಲಾಗಿ ನಾನು ಬಯಲು, ನೀನು ಬಯಲು ನೋಡಾ! ಭಾವಿಸಿಕೊಂಬ ವಸ್ತುವಿಲ್ಲಾಗಿ ಭಾವ ಬಯಲೆಂಬೆನು ನೋಡಾ! ಮರಹು ನಷ್ಟವಾಯಿತ್ತಾಗಿ. ಅರುಹು ಶೂನ್ಯವಾಯಿತ್ತು ನೋಡಾ! ತನುವುಳ್ಳನ್ನಕ್ಕ ನಿನ್ನ ಸಾವಯವೆಂದೆ. ಮನವುಳ್ಳನ್ನಕ್ಕ ನಿನ್ನ ಸಾವಯವ ನಿರವಯನೆಂದೆ. ಅನುಭಾವವುಳ್ಳನ್ನಕ್ಕರ ನಿನ್ನ ನಿರವಯನೆಂದೆ. ನಾನುಳ್ಳನ್ನಕ್ಕರ ನೀನೆಂದೆ. ನಾ ಸತ್ತ ಬಳಿಕ ನೀನೆಲ್ಲಿಯವನು ಹೇಳಾ? ಇದು ಕಾರಣ ಸಾವಯವನ್ನೆ, ನಿರವಯವನ್ನೆ ನೋಡಾ! ನಿಶ್ಚಲವೆಂಬ ನಿರ್ದೇಹಿಯ ಮೇಲೆ ಸಚ್ಚಿದಾನಂದವೆಂಬ ಪದವು ಬಂದೆರಗಿ ಐದಿ [ದೆ?] ನುಂಗಿತ್ತು ನೋಡಾ! ಐದಿ [ದೆ?] ನುಂಗಲಾಗಿ, ಕಾರ್ಯವೆನಲಿಲ್ಲ, ಕಾರಣವೆನಲಿಲ್ಲ, ಪರಮಕಾರಣವೆನಲಿಲ್ಲ; ಜೀವವೆ [ನೆ?] ನಲಿಲ್ಲ, ಪರಮನೆನಲಿಲ್ಲ. ಜೀವಪರಮೈಕ್ಯವನೊಳಕೊಂಡು ತೀವಿ ಪರಿಪೂರ್ಣ ಪರಾಪರನೆನಲಿಲ್ಲ. ಲಕ್ಷನೆನಲಿಲ್ಲ, ನಿರ್ಲಕ್ಷನೆನಲಿಲ್ಲ. ಅಲಕ್ಷನದ್ವಯ ನಿಶ್ಶೂನ್ಯನೆನಲಿಲ್ಲ, ಮಹಾಶೂನ್ಯನೆನಲಿಲ್ಲ. ಏನೂ ಎನಲಿಲ್ಲದ ನಿರಾಕಾರ ಬಯಲು ನಿಶ್ಶಬ್ದಮಯ ಪರಬೊಮ್ಮನು ಚಿದಾದಿತ್ಯ ಸಂಗನ ಬಸವಣ್ಣನ ಬಯಲ ಬೆಳಗಿನೊಳು ಬಯಲಾದ ಗುಹೇಶ್ವರಲಿಂಗಕ್ಕಾವ ತೊಡಕುಂಟು ಹೇಳಾ?[೧]

ಇದೇ ಬಯಲಾದ ಬೆಳಗು, ಬೆಳಗಾದ ಬಯಲು. ಇದೇ ಚಿದ್ಬೆಳಗಿನ ಬಯಲು, ಇದೇ ಎಲ್ಲ ನಾಮ ಎಲ್ಲ ರೂಪು ಎಲ್ಲ ಕ್ರಿಯೆಗಳ ಅಧ್ಯಾತ್ಮಪ್ರಪಂಚದ ಪರಬ್ರಹ್ಮ ಪರಮಾತ್ಮ ಪರಶಿವ ಮಹಾಲಿಂಗ ಗೊಹೇಶ್ವರ ಕೂಡಲಸಂಗಮದೇವ ಚಿಕ್ಕಯಪ್ರಿಯ ಸಿದ್ಧಲಿಂಗನೆಂಬ ನಾಮ, ಸಚ್ಚಿದಾನಂದ ನಿತ್ಯಪರಿಪೂರ್ಣ ಅಖಂಡವೆಂಬ ರೂಪ, ತನ್ನ ತಾನರಿವ ತನ್ನ ತಾ ಭಜಿಸಿ ಪೂಜಿಸುವ, ತನ್ನಲ್ಲಿ ತಾನೊಡಗೂಡುವ ಕ್ರಿಯೆಗಳು ಸಹಿತ – ವಿಲಾಸವನ್ನು ಇಳುಹಿ ಮೀರಿ ನಿಂದ ನಿತ್ಯ ನಿರಾಲಂಬ. ಇದೇ ಬಂದು ಬಾರದ, ನಿಂದ ನಿರಾಳ. ಇದೇ ತೋಂಟದ ಸಿದ್ಧಲಿಂಗಯತಿಗಳು ಹೇಳುವ ಸರ್ವಶೂನ್ಯನಿರಾಲಂಬ.[೨] ಗಣಭಾಷಿತ ರತ್ನಮಾಲಿಕಾರರಾದ ಗುಬ್ಬಿ ಮಲ್ಲಣ್ಣಗಳು ಹೇಳುವ ಶೂನ್ಯಸ್ಥಲವಿದೇ.[೩]

ಅಂತಃಶೂನ್ಯಂ ಬಹಿಃಶೂನ್ಯಂ ಶೂನ್ಯಶೂನ್ಯಾ ದಶಾದಿಶಃ
ಸರ್ವಶೂನ್ಯಂ ನಿರಾಕಾರಂ ನಿರ್ದ್ವಂದ್ವಂ ಪರಮಂ ಪದಂ[೪]

ಇದೇ

ಆದಿಮಧ್ಯಾಂತಶೂನ್ಯಂ ಚ ವ್ಯೋಮಾವ್ಯೋಮವಿವರ್ಜಿತಂ
ಧ್ಯಾನ ಜ್ಞಾನದ್ವಯೋರ್ಹೀನಂ ಶೂನ್ಯಲಿಂಗಮನಾಶ್ರಯಂ[೫]

೧. ವ. ಶಾ. ಸಾ. ಭಾ. ೧, ಪು. ೫೭೩, ವ. ೧೭.
೨. ತೋಂ. ಸಿ. ವ. ಪು. ೪.
೩. ಗ. ಭಾ. ರ. ಪು. ೯೦.
೪. ಗ. ಭಾ. ರ. ಪು. ೯೧, ಶ್ಲೋ. ೭.
೫. ಅದೇ ಪು. ೯೧, ಶ್ಲೋ. ೬, ಮತ್ತು ಲಿಂ. ಲೀ. ವಿ. ಚಾ. ಪು. ೬.

ಭೌತಿಕ ಅಧ್ಯಾತ್ಮಪ್ರಪಂಚಗಳ ನಾಮ ರೂಪ ಕ್ರಿಯೆಗಳ ಆಶ್ರಯ, ಆಲಂಬ, ಅವಲಂಬ, ಆಧಾರವೆಳ್ಳನಿತಿಲ್ಲದೆ, ಈ ನಾಮ ರೂಪ ಕ್ರಿಯೆಗಳಿಗೆಲ್ಲ ತಾನೆ ಪರಮಾಶ್ರಯ, ಪರಮಾಧಾರವಾಗಿ ನಿಂದ ನಿರಾಳವೆ ಷಣ್ಮುಖಸ್ವಾಮಿಗಳು ಹೇಳುವ. 'ಮಹಾಘನ ಬಚ್ಚಬರಿಯ ಬಯಲು'. ವೇದಾಂತದರ್ಶನದಲ್ಲಿ ಸದ್ಘನ, ಚಿದ್ಘನ, ಆನಂದಘನವಾದ ಪರವಸ್ತು ಸದ್ ಬಯಲು, ಚಿದ್ ಬಯಲು, ಆನಂದ ಬಯಲೂ ಆಗಿ ನಿಂದ ಅನುಭವ ತನ್ನನ್ನು ತಾನು ಮೀರಿ ನಿಂತಿದೆ.

ಈ ಮಹಾಘನ ನಿರವಯಲ ಪದವನ್ನೇ ಲಿಂಗಲೀಲಾವಿಲಾಸಚಾರಿತ್ರಕಾರರಾದ ಕಲ್ಲಮಠದ ಪ್ರಭುದೇವರು ನಿಷ್ಕಲಲಿಂಗಸ್ಥಲವೆಂದು ಹೇಳಿ, ಅದರ ಸ್ವಭಾವವನ್ನು ಹೀಗೆ ನಿರೂಪಿಸುತ್ತಾರೆ:

> 'ಅಖಂಡಾದ್ವಯ ನಿತ್ಯ ನಿರವಯ ಪರಿಪೂರ್ಣ ಸಚ್ಚಿದಾನಂದವಪ್ಪ ನಿಷ್ಕಲ ವಸ್ತು ತಾನೊಂದೆಯಲ್ಲದೆ ಅನ್ಯವಾಗಿ ತೋಱುವ ತತ್ವಂಗಳೇನೂ ಇಲ್ಲದೆ ಸರ್ವವೂ ಶೂನ್ಯವಾಗಿ ಮತ್ತೇನೂ ಏನೂ ಇಲ್ಲದೆ ತಾನು ತಾನೆಯಾಗಿ, ತಾನೆಂಬ ಅಱಿವಿನ ತೋಱಿಕೆ ತೋಱದೆ ತನ್ನ ನಿಜಸ್ವಭಾವದಲ್ಲಿಪ್ಪ ನಿಶ್ಶೂನ್ಯವಸ್ತುವನು ನಿಷ್ಕಲ ಲಿಂಗಸ್ಥಳವೆಂದು ಹೇಳಲಾಯಿತ್ತು'.[೧]

ಸರ್ವಶೂನ್ಯವಾಗಿ, ತನ್ನ ತಾನು ಎಂಬ ಅರಿವೂ ಶೂನ್ಯವಾಗಿ, ತನ್ನ ನಿಜದಲ್ಲಿ ನಿಂದ ನಿಶ್ಶೂನ್ಯವಸ್ತುವೆ ನಿಷ್ಕಲಲಿಂಗ. ಹಿಂದೆ ಹೇಳಿದ, ಜ್ಞಾನಜ್ಯೋತಿಯ ಪ್ರಭೆಯೆ ತಾನಾಗಿ ನಿಂದಿದ್ದು, ತಾನು ಜ್ಞಾನಜ್ಯೋತಿಯ ಪ್ರಭೆಯಾಗಿದ್ದೇನೆ ಎಂಬ ಜ್ಞಾನ ಶೂನ್ಯವಾಗಿ, ತಾನೆ ತನ್ನೊಳು ನಿಂದ ನಿರಾಳವೇ ಈ ನಿಶ್ಶೂನ್ಯ ವಸ್ತು, ಈ ನಿಷ್ಕಲ ಲಿಂಗ, ಈ ಶೂನ್ಯ ಲಿಂಗ.[೨] ನಿಜಾನುಭೂತಿಯ ಈ ಪಾರಮ್ಯದಲ್ಲಿ ಏನು ಇಲ್ಲ, ಎಲ್ಲ ಬಯಲು, ತಾನು ತಾನೆ.

ನಾಮವಿಲ್ಲದ ಸೀಮೆಯಿಲ್ಲದ ಈ ಬಯಲು ಇಲ್ಲದ ಬಯಲಲ್ಲ, ಇದ್ದ ಬಯಲು, ಸರ್ವಶೂನ್ಯವನ್ನು ಒಳಕೊಂಡು ತಾನು ತಾನಾಗಿರ್ದ ಬಯಲು ಅಥವಾ ನಿರವಯಲು. ಅಂತೆಯೆ ಪ್ರಭುದೇವರು, ಶರಣರು ತಮ್ಮ ನಿರವಯಲ ಸಮಾಧಿಯಲ್ಲಿ ಅನುಭವಿಸಿ ಹೇಳುವ ಈ ಬಯಲು ಪರಮ ಪದ, ಪರಮ ಸತ್ಯ (Supreme Truth or Existence) ವೆಂಬ ಅರ್ಥದಲ್ಲಿಯೆ ಶೂನ್ಯಸಂಪಾದನೆಯಲ್ಲಿ ಬಳಕೆಯಾಗಿದೆ -- ಎಂಬ ಮಾತು ಎಂದೂ ನಮ್ಮ ಲಕ್ಷದಿಂದ ಜಾರತಕ್ಕುದಲ್ಲ. ಈ ಅರ್ಥದ ಎಚ್ಚರವಿದ್ದರೇ ನಮಗೆ 'ಶೂನ್ಯ ಸಂಪಾದನೆ'ಯು ದಿವ್ಯಸನ್ನಿಧಿಯಲ್ಲಿರುವ ಪರಮಭಾಗ್ಯ ದೊರೆಯುತ್ತದೆ. ಇಲ್ಲವಾದರೆ ಅದು ನಮಗೆ ಶೂನ್ಯ. ಈ ಅರ್ಥ ಇನ್ನೂ ಸ್ಪಷ್ಟವಾಗಬೇಕಿದ್ದರೆ ಪ್ರಭುದೇವರ ಮತ್ತೂ ಒಂದು ಮಾತನ್ನು ಕೇಳಿ:

---

೧. ಲಿಂ. ಲೀ. ವಿ. ಚಾ, ಪು. ೬.

೨. ಇಲ್ಲಿ ಶೂನ್ಯ ನಿಶ್ಶೂನ್ಯ ನಿಷ್ಕಲ ಶಬ್ದಗಳನ್ನು ಹೆಚ್ಚುಕಡಮೆ ಅದೇ ಅರ್ಥದಲ್ಲಿ ಉಪಯೋಗಿಸಿ ಕೊಂಡಿದ್ದಾರೆ,—ಬ್ರಹ್ಮವನ್ನು ಪರಬ್ರಹ್ಮ ಪರತರಬ್ರಹ್ಮ ಪರಮಬ್ರಹ್ಮ ಎಂದು ಹೇಳುವಂತೆ.

ಆದಿಯನಾದಿಯಿಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು,
ಸಚರಾಚರವೆಲ್ಲ ರಚನೆಗೆ ಬಾರದಂದು,
ಗುಹೇಶ್ವರನೊಬ್ಬನೇ ಇದ್ದೆಯಲ್ಲಾ ಇಲ್ಲದಂತೆ.[೧]

ಅಥವಾ

ವಾಯು ನಿದ್ರೆಗೈದರೆ ಆಕಾಶ ಜೋಗುಳವಾಡಿತ್ತು.
ಬಯಲು ಬಳಲಿದೆನೆಂದರೆ ನಿರಾಳ ಮೊಲೆಗೊಟ್ಟಿತ್ತು.
ಆಕಾಶವಡಗಿತ್ತು; ಜೋಗುಳ ನಿಂದಿತ್ತು.
ಗುಹೇಶ್ವರನೈದಾನೆ ಇಲ್ಲದಂತೆ.[೨]

ಪ್ರಭುದೇವರು ತಮ್ಮ ಅನುಭಾವದ ಪರಮಸೀಮೆಯಲ್ಲಿ ನಿಂದು ನುಡಿದ ನುಡಿಗಳಿವು. 'ಶೂನ್ಯಸಂಪಾದನೆ'ಯಲ್ಲಿ ಮುಕ್ತಾಯಕ್ಕ ಮುಂತಾದ ಶರಣರಿಗೆ ಈ ಸೀಮೆಯನ್ನು ನಿರ್ದೇಶಿಸುವಲ್ಲಿ ಪ್ರಭುದೇವರು ಶೂನ್ಯ, ಬಯಲು, ನಿರವಯಲು, ನಿಜಪದ ಎಂಬ ಪದಗಳನ್ನು ಸಾಕಷ್ಟು ಬಳಸಿಕೊಂಡಿದ್ದಾರೆ. ಈ ಎಲ್ಲ ಶಬ್ದಗಳ ನಿಶ್ಚಿತಾರ್ಥ – 'ಐದಾನೆ ಇಲ್ಲದಂತೆ', 'ಇದ್ದೆಯಲ್ಲಾ ಇಲ್ಲದಂತೆ.' ಇಲ್ಲದಂತೆ ಇರುವುದು? ಈ ಇರವನ್ನು 'ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಂ ವಿಭಾತಿ'[೩] ಎಂದು ಹೇಳುವುದಕ್ಕಿಂತ ಅದನ್ನು ಸೂಕ್ಷ್ಮತಮಂ ವಿಭಾತಿ ಎಂದು ಹೇಳಬೇಕು. 'ಐದಾನೆ ಇಲ್ಲದಂತೆ!' ಸೀಕರದಲ್ಲಿ ಸಮುದ್ರವಡಗಬಲ್ಲುದೆ? ಅಣುವಿನಲ್ಲಿ ಆಕಾಶ ಹಿಡಿಸಬಹುದೆ? ಅಸಾಧ್ಯ. ಆದರೆ ಇಂಥ ಅಸಾಧ್ಯವನ್ನು ಸಾಧಿಸಿವೆ ಈ ಒಂದೆರಡು ಶಬ್ದ. ಶರಣರ ಪರಮಾನುಭಾವವನ್ನು ಮೂಡಿಸುವ ಎರಡು ಶಬ್ದದ ಈ ವಾಕ್ಯ ಪರಮಾಣುವಿನಿಂದ ಪರಬ್ರಹ್ಮದವರೆಗೆ ಎಲ್ಲ ಎಲ್ಲ ವಸ್ತುಗಳ ಮೇಲೆ ಕೊರೆದಿಡುವಂತಿದೆ. ಅಣುವನ್ನು ಬಿಚ್ಚಿ ನೋಡಿದರೆ ಇಂದು ನಮಗೆ ಇಲೆಕ್ಟ್ರಾನ್ ಪ್ರೋಟಾನುಗಳು ಮತ್ತು ಆಕಾಶ ತೋರಬಹುದು. ಆದರೆ ಈ ಚಿದ್ಬೆಳಗಿನ ಮಹಾಘನ ಬಯಲು ಅಲ್ಲಿ ಕಾಣುವುದಿಲ್ಲ. ಆದರೆ ಅಣುರೇಣುವಿನೊಳಗೆ, ತೃಣಕಾಷ್ಠದೊಳಗೆ 'ಸೂಕ್ಷ್ಮನಕ್ಷಯ ನಿಂದ ನಿರಾಳ ಗುಹೇಶ್ವರ.' ಈ ಸೂಕ್ಷ್ಮ ಈ ಅಕ್ಷಯ, ಅಣು ಮೊದಲು ಆಕಾಶ ಕಡೆಯಾಗಿ ಎಲ್ಲೆಲ್ಲಿ ನಿಂದ ನಿರಾಳ. ಕರಣೇಂದ್ರಿಯ ಗಳಿಗೆ ಅಗಮ್ಯ ಅಗೋಚರವಾಗಿ, ನಿತ್ಯ ಪರಿಪೂರ್ಣವಾಗಿ ನಿಂದ ನಿರಾಳ ಅನುಭಾವಿಗಳ ನಿತ್ಯಸತ್ಯವಾದ ನಿರಂತರ ದರ್ಶನ. ಎಲ್ಲೆಲ್ಲಿ ಎಂದೆಂದು ಅಖಂಡವಾಗಿ ನಿಂದ ಈ ನಿರಾಳವನ್ನು ಬಿಟ್ಟು ಅಗಲಿ ಇರಲು ಬೇರೊಂದು ಎಡೆಯೇ ಇಲ್ಲ. ಮುಳ್ಳೂರಲು ತೆರಹಿಲ್ಲದ ಘನವ ಅಗಲಲಿಲ್ಲ; ಅಂತೆಯೇ ಕೂಡಲೂ ಇಲ್ಲ. ಅಗಲಿ ಇದ್ದರೆ ತಾನೇ

---

೧. ಗ. ಭಾ. ರ. ಪು. ೯೨, ವ. ೨. (ಈ ವಚನ ಶೂನ್ಯಸ್ಥಲದಲ್ಲಿಯೆ ಬಂದಿದೆ)

೨. ಪ್ರ. ವ. ಪು. ೩೨೦, ವ. ೬೩. (ಈ ವಚನ ಷಟ್‌ಸ್ಥಳಗಳಲ್ಲಿ ಕೊನೆಯದಾದ ಐಕ್ಯಸ್ಥಲದಲ್ಲಿ ಬಂದಿದೆ)

೩. ಮುಂ. ಉ., ಮುಂಡಕ ೩, ಖಂ. ೧, ಮಂ. ೭

ಕೂಡುವುದು? ಸಮುದ್ರದಲ್ಲಿ ತೋರುವ ತೆರೆ ಸಮುದ್ರವನ್ನು ಅಗಲಿ ಇರಬಲ್ಲುದೆ? ಅಗಲಿರದ ತೆರೆ ಸಮುದ್ರವನ್ನು ಕೂಡಿತು ಎಂದು ಹೇಳುವುದರಲ್ಲಿ ಯಾವ ಅರ್ಥವಿದೆ? ತೆರೆ ಆಗಿದ್ದಾಗ ಸಮುದ್ರವನ್ನು ಕೂಡಿ ಇರಲಿಲ್ಲವೆ? ಕೂಡಿದೆ ಅಗಲಿದೆನೆಂಬುದು ಅರಿವು ಮಱವೆಯ ಮಾಟವಲ್ಲದೆ ಪರಮಾರ್ಥವಲ್ಲ. ಅಂತೆಯೆ ಈ ನಿಂದ ನಿರಾಳ ಬಂದು ಬಾರದ ನಿರಾಳ. ತೆರೆ ಲೀಲೆಯಾಡುವಾಗ ಸಾಗರ ಹೋಗಿತ್ತೆಲ್ಲಿ? ಅದು ಲೀನವಾದಾಗ ಸಾಗರ ಬಂತು ಎಲ್ಲಿಂದ? 'ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ'[೧] ಎಂಬಿಂತಹ ಮಂತ್ರಗಳು ಜೀವ ಪರಮರ ಯೋಗವನ್ನು ಸೂಚಿಸುವುದು ನಿಜ. ಆದರ ಧ್ವನಿ ಅವರ ವಿಯೋಗವನ್ನು ಸೂಚಿಸುವುದೂ ನಿಜ.—ಇಂತಹ ಉಪಮೆಗಳು ಸ್ಥೂಲಬುದ್ಧಿಗೆ ತಿಳಿವಂತೆ ಹೇಳಲು ಬಳಸಿಕೊಂಡ ಅಲಂಕಾರಗಳಲ್ಲದೆ ಅನುಭವಸೂಕ್ಷ್ಮದ ಅಂತರಂಗವಲ್ಲ.

> ನೋಡುವುದ ನೋಡಲಱಿಯದೆ ಕೆಟ್ಟಿತೀ ಜಗವೆಲ್ಲಾ.
> ನೋಡುವುದ ನೋಡಬಲ್ಲರೆ ಕೂಡಲಿಲ್ಲ ಅಗಲಲಿಲ್ಲ.
> ನಿಮ್ಮ ನೋಟದ ಕೂಟದ ಅಗಲದ ಸುಖವನು
> ಗೊಹೇಶ್ವರಾ, ನಿಮ್ಮ ಶರಣರೆ ಬಲ್ಲರು.[೨]

ಬಹಿರ್ಮುಖವಾಗಿ ಹೊರಹೊರಗೆ ಮೇಲೆ ಮೇಲೆ ಹರಿದಾಡುವ ಮನ ಬುದ್ಧಿ ಕಣ್ಣು ಕಿವಿ, ಮಹಾಘನ ಶೂನ್ಯಲಿಂಗದ ತೆರೆ ನೊರೆ ಬುದ್ಬುದದಂತಿದ್ದ ತರಂಗವಿಶ್ವವನ್ನು ನೋಡಿ, ಓದಿ, ಅಭ್ಯಾಸಮಾಡಿ, ಗಭೀರ ವಿಚಾರಮಾಡಿ, ನಿದಿಧ್ಯಾಸಮಾಡಿ ವಿಜ್ಞಾನದ ಅದ್ಭುತವನ್ನು ಕಟ್ಟಬಹುದು. ಆದರೆ ತರಂಗಪ್ರಪಂಚದ ಮೂಲಾಧಾರವಾದ ನಿಜ ಸಹಜ ನಿಷ್ಕಲ ನಿರಾಳ ಬಯಲಿನ ಎಚ್ಚರವೆ ಆಗದಿದ್ದರೆ ತನಗೆ, ವಿಶ್ವಕ್ಕೆ, ವಿಶ್ವಜೀವನಕ್ಕೆ ಕಲ್ಯಾಣವೆಲ್ಲಿ? 'ನೋಡಲಱಿಯದೆ ಕೆಟ್ಟಿತೀ ಜಗವೆಲ್ಲಾ.'

ಮತ್ತೂ ಈ 'ಶೂನ್ಯ'ದ ನಿಜಾರ್ಥ ಹೆಚ್ಚು ಸ್ಪಷ್ಟವಾಗಬೇಕಿದ್ದರೆ ಕೆಳಗೆ ಕೊಟ್ಟ ಹೇಳಿಕೆಗಳನ್ನು ವೀಕ್ಷಿಸಬಹುದು:

೧ **ಶೂನ್ಯಂ ಶೂನ್ಯಂ ಪುನಃ ಶೂನ್ಯಂ ತ್ರಿಶೂನ್ಯಂ ಪಶ್ಯತಿ ಕ್ಷಣಾತ್**
ಸರ್ವಶೂನ್ಯಂ ನಿರಾಭಾಸಂ ಸಾಮರಸ್ಯಂ ತದಾ ಭವೇತ್ ॥[೩]

ಇದು 'ತತ್ತ್ವಸಾರ'ದ ಶ್ಲೋಕವೆಂದು ಕಲ್ಲುಮಠದ ಪ್ರಭುದೇವರು ಹೇಳುತ್ತಾರೆ. 'ಉತ್ಪತ್ತಿ ಸ್ಥಿತಿ ಲಯಗಳು ತನಗಿಲ್ಲ, ಶೂನ್ಯವೆಂಬುದನ್ನು ನೋಡಿದಾಕ್ಷಣವೆ ಬೇರಾವ ತೋರಿಕೆಯೂ ಇಲ್ಲದ ಸರ್ವಶೂನ್ಯ ಸಾಮರಸ್ಯವು ದೊರೆವುದು' ಎಂಬುದೀ ಶ್ಲೋಕ. ಐಕ್ಯ, ಸಾಮರಸ್ಯದ ಬೆಂಬತ್ತಿಯೆ ಈ ಶೂನ್ಯವಿದೆ ಎಂಬುದು ಸ್ಪಷ್ಟ.

೨ ...ಶೂನ್ಯವೆಂದಡೆ ನಿರಾಕಾರವಪ್ಪ ಮಹಾಘನಲಿಂಗವು[೪].

---

೧. ಮುಂ. ಉ., ಮುಂಡಕ ೩, ಖಂ. ೨, ಮಂ. ೮.
೨. ಶಿ. ಲೀ. ವಿ. ಚಾ. ಪು. ೩೨೫, ವ. ೧೧.
೩. ಅದೇ ಪು. ೩೬೩, ಶ್ಲೋ. ೨.
೪. ಅದೇ ಪು. ೩೭೪, ವ. ೨೩ರ ಟೀಕು.

೩ ಬಯಲೆಂದಡೆ ಮಹಾಘನಲಿಂಗವು...[೧]

೪ ಬಯಲೆಂದರೆ ಲಿಂಗ...[೨]

೫ ಬಯಲೆಂದಡೆ ಮಹಾಘನಲಿಂಗ...[೩]

೬ ಬಯಲೆಂದರೆ ನಿಃಕಲ ಪರಶಿವಲಿಂಗವು...[೪]

೭ ಪ್ರಥಮದಲ್ಲಿ ವಸ್ತು ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವಾಗಿದ್ದಿತ್ತು. ಅಂತಿರ್ದ ಪರವಸ್ತು ತಾನೆ...... ಇಂತು ಸಕಲನಾಗಬಲ್ಲ, ಸಕಲ ನಿಃಕಲನಾಗಬಲ್ಲ, ಸಕಲ ನಿಃಕಲಾತೀತನಾಗಿ ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವಾಗಿ ಇರಬಲ್ಲನಯ್ಯಾ ನಮ್ಮ ಗುಹೇಶ್ವರಲಿಂಗವು.[೫]

ಉಳಿದೆಲ್ಲ ತತ್ತ್ವಗಳು ತನ್ನಲ್ಲಿ ಅಡಗಿ ಬಯಲಾಗಿ, ಏನೂ ಏನೂ ಇಲ್ಲದೆ ತಾನು ತಾನೆ ಆಗಿರ್ದ ನಿರಾಕಾರ ಪರಬ್ರಹ್ಮ, ಪರಶಿವ, ಪರಶಿವಲಿಂಗ, ಮಹಾಘನಲಿಂಗ, ನಿಃಕಲಲಿಂಗ,[೬] ಮಹಾಘನ ಶೂನ್ಯಬ್ರಹ್ಮವೇ 'ಶೂನ್ಯ'ದ ಅರ್ಥ ಎಂಬುದಕ್ಕೆ ಮತ್ತಾವ ಆಧಾರ ಬೇಕು? ಈ ಶೂನ್ಯ 'ಘನ-ಶೂನ್ಯ', ಮಹಾಘನ ಶೂನ್ಯಬ್ರಹ್ಮವೆಂಬುದನ್ನು ಯಾವಾಗಲೂ ಗೋಪ್ಯವಾಗಿ ಎಚ್ಚರದಲ್ಲಿಟ್ಟುಕೊಂಡರೆ ಪ್ರಭುದೇವರ 'ಶೂನ್ಯ ಸಂಪಾದನೆ'ಯ ಸಹ ಜಾರ್ಥ ನಮ್ಮ ಕೈಜಾರಿ ಹೋಗುವ ಸಂಭವವೇ ಇಲ್ಲ.

ವೀರಶೈವರು ಹೇಳುವ ಷಟ್ಸ್ಥಲಮಾರ್ಗದಲ್ಲಿ ಐಕ್ಯಸ್ಥಲವೇ ದಿವ್ಯಜೀವನದ ಅವಸಾನ ಭೂಮಿ. ಲಿಂಗಾಂಗ ಸಾಮರಸ್ಯ, ಲಿಂಗೈಕ್ಯವನ್ನು ನಿರೂಪಿಸುವ ಈ ಐಕ್ಯಸ್ಥಲದಲ್ಲಿ ಈ ಶೂನ್ಯದ ಅಂದರೆ ಈ ಮಹಾಘನಶೂನ್ಯದ ವಿಚಾರ ತಾನೇ ತಾನಾಗಿ ಬರುತ್ತದೆ; ಬರಲೇಬೇಕು.

ಲಿಂಗವೆನ್ನೆ, ಲಿಂಗೈಕ್ಯವೆನ್ನೆ. ಸಂಗವೆನ್ನೆ, ನಿಸ್ಸಂಗವೆನ್ನೆ.
ಆಯಿತ್ತೆನ್ನೆ, ಆಗದೆನ್ನೆ. ನೀನೆನ್ನೆ, ನಾನೆನ್ನೆ.
ಚೆನ್ನಮಲ್ಲಿಕಾರ್ಜುನಲಿಂಗದಲ್ಲಿ ಘನಲಿಂಗೈಕ್ಯವಾದ ಬಳಿಕ
ಮತ್ತೇನೂ ಎನಲೊಲ್ಲದೆ ಇದ್ದೆನು.[೭]

---

೧. ಲಿಂ. ಲೀ. ವಿ. ಚಾ. ಪು. ೪೧೪, ವ. ೨೨ರ ಟೀಕು.
೨. ಅದೇ ಪು. ೩೭೪, ವ. ೨೪ರ ಟೀಕು.
೩. ಅದೇ ಪು. ೩೮೦, ವ. ೩೯ರ ಟೀಕು.
೪. ಅದೇ ಪು. ೩೮೭, ವ. ೫೩ರ ಟೀಕು.
೫. ಅದೇ ಪು. ೩೯೭-೩೯೮, ವ. ೭೩.
೬. 'ನಿಷ್ಕಲ ವಸ್ತು ತಾನೆಲ್ಲಾ ಚೈತನ್ಯ ಜ್ಞಾನ ಸ್ವರೂಪು. ಅಂತು ತಾನೆಲ್ಲಾ ಚೈತನ್ಯ ಜ್ಞಾನ ಸ್ವರೂಪವಾಗಿರ್ದ ಅಱಿವು ತನ್ನ ನಿಷ್ಕಲಾನಂದದಲ್ಲಿಯೆ ತೃಪ್ತಿಪಟ್ಟು, ಶಾಂತಿಯನೈದಿ ನಿಃಪತ್ತಿಯನೈದಿಪ್ಪುದಲ್ಲದೆ ಚೈತನ್ಯಜ್ಞಾನ ಶೂನ್ಯವಾಗಿರ್ದ ವಸ್ತುವಲ್ಲ.'

ಲಿಂ. ಲೀ. ವಿ. ಚಾ. ಪು. ೩೦, ವ. ೧, ಟೀಕು.

ಮತ್ತೆ—

'....ಮತ್ತೇನೂ ಏನೂ ಇಲ್ಲದಂದು ನಿಷ್ಕಲನಾಗಿರ್ದ ಪರಬ್ರಹ್ಮವು ಅಖಂಡ ಪರಿಪೂರ್ಣ ಚೈತನ್ಯ ಜ್ಞಾನ ಪ್ರಭಾಬೆಳಗಿನ ಬಯಲುಗನಾಗಿರುತ್ತಿದ್ದನು....'

ಲಿಂ. ಲೀ. ವಿ. ಚಾ. ಪು. ೩೯, ವ. ೫, ಟೀಕು.

೭. ಶೂ. ಸಂ. ಪು. ೨೯೮, ವ. ೬೦.

ಲಿಂಗ ಲಿಂಗೈಕ್ಯ, ಸಂಗ ನಿಸ್ಸಂಗ, ಆಯಿತ್ತು ಆಗದು, ನೀನು ನಾನು – ಎಂಬುದೇನೂ ಇಲ್ಲ, ಎಲ್ಲ ಬಯಲು ಈ ಘನ ಲಿಂಗೈಕ್ಯಸ್ಥಲದ ಅನುಭೂತಿಯಲ್ಲಿ. ಅಂತೆಯೆ ಈ ಸರ್ವಶೂನ್ಯ ಸಾಮರಸ್ಯದ ಅನುಭಾವ ನುಡಿದು ಹೇಳಲಿಕ್ಕೆ ಇಲ್ಲ. ಇದೇ ಷಟ್ಸ್ಥಲವನ್ನು ವಿಸ್ತಾರವಾಗಿ ನಿರೂಪಿಸುವ ಏಕೋತ್ತರಶತಸ್ಥಲ ಅಥವಾ ನೂರೊಂದು ಸ್ಥಲ ಕಟ್ಟಿನಲ್ಲಿ ಕೊನೆಯ ಸ್ಥಲ ಜ್ಞಾನಶೂನ್ಯ ಸ್ಥಲ. ಇಲ್ಲಿಯೂ 'ಶೂನ್ಯ'ದ ಅರ್ಥ ಅದೇ ಅರ್ಥ – ಏನು ಇಲ್ಲ, ಎಲ್ಲ ಬಯಲೆಂದು. ಆದರೆ ಈ ಬಯಲು ಮಹಾಘನದ ಘಟ್ಟಿ. Void, Emptiness, Nihil — ಎಂಬುದರ ಎಳ್ಳುನೆಳಲೂ ಇಲ್ಲಿ ಇಲ್ಲ. ಸಂಸ್ಕೃತದಲ್ಲಿ ಏಕೋತ್ತರಶತಸ್ಥಲವನ್ನು ಪ್ರಮಾಣಬದ್ಧವಾಗಿ ಪ್ರತಿಪಾದಿಸುವ 'ಸಿದ್ಧಾಂತ ಶಿಖಾಮಣಿ'ಯಲ್ಲಿ ಶಿವಯೋಗಿ ಶಿವಾಚಾರ್ಯರು ಜ್ಞಾನಶೂನ್ಯಸ್ಥಲವನ್ನು ರೂಪಿಸುವುದು ಹೀಗೆ:

> ನಿರ್ವಿಕಾರಂ ನಿರಾಕಾರಂ ನಿತ್ಯಂ ಸೀಮಾವಿವರ್ಜಿತಂ ।
> ವ್ಯೋಮವತ್ ಪರಮಂ ಬ್ರಹ್ಮ ನಿರ್ವಿಕಲ್ಪತಯಾ ಸ್ಥಿತಂ ॥
> ನ ಪೃಥ್ವ್ಯಾದೀನಿ ಭೂತಾನಿ ನ ಗ್ರಹಾ ನೈವ ತಾರಕಾಃ ।
> ನ ದೇವಾ ನ ಮನುಷ್ಯಾಶ್ಚ ನ ತಿರ್ಯಂಚೋ ನ ಚಾಪರೇ ॥
> ತಸ್ಮಿನ್ ಕೇವಲಚಿನ್ಮಾತ್ರಸತ್ತಾನಂದೈಕಲಕ್ಷಣೇ ।
> ತ್ವಂತಾಹಂತಾದಿ ಸಂರೂಢಂ ವಿಜ್ಞಾನಂ ಕೇನ ಭಾವ್ಯತೇ ॥
> ಜ್ಞೇಯಾಭಾವಾದ್ ವಿಶೇಷೇಣ ಶೂನ್ಯಕಲ್ಪಂ ವಿಭಾವ್ಯತೇ ।
> ಜ್ಞಾತೃಜ್ಞೇಯಾದಿಭಿಃ ಶೂನ್ಯಂ ಶೂನ್ಯಂ ಜ್ಞಾನಾದಿಭಿರ್ಗುಣೈಃ ॥
> ಆದಾವಂತೇ ಚ ಮಧ್ಯೇ ಚ ಶೂನ್ಯಂ ಸರ್ವತ್ರ ಸರ್ವದಾ ।
> ದ್ವಿತೀಯೇನ ಪದಾರ್ಥೇನ ಶೂನ್ಯಂ ಶೂನ್ಯಂ ವಿಭಾವ್ಯತೇ ॥
> ಕೇವಲಂ ಸಚ್ಚಿದಾನಂದಪ್ರಕಾಶಾದ್ವಯಲಕ್ಷಣಂ ।
> ಶೂನ್ಯಕಲ್ಪಂ ಪರಾಕಾಶಂ ಪರಬ್ರಹ್ಮ ಪ್ರಕಾಶತೇ ॥
> ಶೂನ್ಯಜ್ಞಾನಾದಿಸಂಕಲ್ಪೇ ಶೂನ್ಯಸರ್ವಾರ್ಥಸಾಧನೇ ।
> ಜ್ಯೋತಿರ್ಲಿಂಗೇ ಚಿದಾಕಾರೇ ಸ್ವಪ್ರಕಾಶೇ ನಿರುತ್ತರೇ ॥[೧]

ಶೂನ್ಯವನ್ನು ಕುರಿತು ಇಲ್ಲಿಯೂ ಅದೇ ಮಾತು, ಅದೇ ಕಥೆ, ಅದೇ ಮಹಾಘನ ಶೂನ್ಯಬ್ರಹ್ಮದರ್ಶನ. ಆದರೆ ಮತ್ತೂ ಬೇಕಾದರೆ ಹೆಚ್ಚಿನ ಬೆಳಕು? ವ್ಯೋಮದಂತಿದ್ದ, ಸರ್ವತ್ರ ಸರ್ವದಾ ಆದಿಮಧ್ಯಾಂತ ಶೂನ್ಯವಾದ, ಬೇರೊಂದು ತತ್ತ್ವಪದಾರ್ಥವೇನೂ ಇಲ್ಲದ, 'ಶೂನ್ಯಕಲ್ಪ'ವಾದ ಈ ಪರಾಕಾಶಕ್ಕೆ, ಚಿದಾಕಾರವಾದ ಈ ಜ್ಯೋತಿರ್ಲಿಂಗಕ್ಕೆ, ಈ ಪರಬ್ರಹ್ಮಕ್ಕೆ ಆಕಾರ ವಿಕಾರ ಇಲ್ಲ; ಸಂಕಲ್ಪ ವಿಕಲ್ಪ ಇಲ್ಲ; ಸೀಮೆ ಸಂಬಂಧವಿಲ್ಲ; ಇಲ್ಲಿ ಪೃಥಿವ್ಯಾದಿ ಪಂಚಭೂತ, ಚಂದ್ರ ಸೂರ್ಯ ತಾರಾಗಣವಿಲ್ಲ; ಅಮೀಬಾ ಮೊದಲಾಗಿ ಬ್ರಹ್ಮ ವಿಷ್ಣು ರುದ್ರರಿಲ್ಲ; ಕೇವಲ ಸಚ್ಚಿದಾನಂದ ಲಕ್ಷಣಲಕ್ಷಿತವಾದ ಈ ಕೈವಲ್ಯದಲ್ಲಿ ನಾನು ನೀನಿನ ಸಂಗದಲ್ಲಿ ಹುಟ್ಟುವ ಜ್ಞಾನದ ಮಾತೆಲ್ಲಿ? ಇಲ್ಲಿ ಅರಿವ ನಾನು ಇಲ್ಲ, ಅರುಹಿಸಿಕೊಂಬ ವಸ್ತು – ಏನೂ ಇಲ್ಲ, ಏನೂ ಇಲ್ಲ. ಹೀಗೆ ಏನೂ

೧. ಸಿ. ಶಿ. ಪರಿ. ೨೦, ಸ್ಥ. ೯, ಶ್ಲೋ. ೬೨-೬೮.

ಏನೂ ಇಲ್ಲದ 'ಶೂನ್ಯಕಲ್ಪ'ವಾದ — ಅಂದರೆ ಬೌದ್ಧರು ಹೇಳುವ ಶೂನ್ಯವಲ್ಲದ — ಈ ಪರಾಕಾಶದ ಸ್ವಪ್ರಕಾಶವೇ ಸಚ್ಚಿದಾನಂದ, ಅದೇ ಜ್ಯೋತಿರ್ಲಿಂಗ. ಇದೇ ಬಿದ್ದೆಳಗಿನ ಬಯಲು. ಇದಕ್ಕೆ ಮುಂದೆ ಉತ್ತರಪದ ಇಲ್ಲ. ಅಂತೆಯೆ ಇದು ನಿರುತ್ತರ. ಮತ್ತೆ ಈ ಸಂದರ್ಭದಲ್ಲಿ 'ರುದ್ರಯಾಮಳ'ದ ಈ ಶ್ಲೋಕವನ್ನು ಪರಿಶೀಲಿಸಬಹುದು:

'ಅಸ್ಮಿನ್ನೈಕತ್ವವಿಶ್ರಾಂತ್ಯಾ ಜಗದ್ ಗಚ್ಛತಿ ಶೂನ್ಯತಾಂ ।
ನ ಶೂನ್ಯಂ ಯತ್ ಸ್ವತಸ್ತತ್ ಸ್ಯಾತ್ ಮಹಾಶೂನ್ಯಮನುತ್ತಮಂ ॥'[೧]

ಜಗತ್ತು ತನ್ನಲ್ಲಿ ಒಂದಾಗಿ, ಬೇರೆನಿಸಿ ತೋರುವ ತೋರಿಕೆ ಏನೂ ಇಲ್ಲದೆ ಬಯಲಾಗಿ, ಶೂನ್ಯವಾಗಿ ವಿಶ್ರಾಂತಿಯನ್ನೈದಿದರೂ ನಿರತಿಶಯವಾದ ಮಹಾಶೂನ್ಯ ಮಾತ್ರ ತಾನು ಶೂನ್ಯತೆಯನ್ನೈದುವುದಿಲ್ಲ. ಇನ್ನು ಹೆಚ್ಚಿಗೆ ಹೇಳುವ ಅವಶ್ಯವೇನು — 'ಶೂನ್ಯ'ದ ವಿಚಾರವಾಗಿ?

ಇದೆ, ಇನ್ನೂ ವಿಚಾರಕ್ಕೆ ಆಸ್ಪದವಿದೆ. ಇಲ್ಲಿಯವರೆಗೆ ಶೂನ್ಯಕಲ್ಪವಾದ ಮಹಾಶೂನ್ಯ, ಮಹಾಘನಶೂನ್ಯ ಬ್ರಹ್ಮವನ್ನು, ಸರ್ವಶೂನ್ಯ ನಿರಾಲಂಬವಾದ ನಿಷ್ಕಲ ಪರಶಿವಲಿಂಗವನ್ನು ನಾವು ನೋಡಿ, ಎಲ್ಲ ತನ್ನಲ್ಲಿ ಲಯವಾದರೂ ತನಗೆ ಬೇರೊಂದು ಲಯಸ್ಥಾನವಿಲ್ಲದೆ ತಾನೇ ತಾನಾಗಿ ಬೆಳಗುವ ಪರಮಾಕಾಶ ಈ 'ಶೂನ್ಯ' ಎಂಬ ದರ್ಶನಕ್ಕೆ ಬಂದು ನಾವು ಮುಟ್ಟಿದಂತಾಯಿತು. ವಿಶ್ವಬ್ರಹ್ಮಾಂಡಗಳ ಲಯವನ್ನು ಒಳಕೊಳ್ಳಬಲ್ಲ ಈ ಮಹಾಬಯಲು ವಿಶ್ವಬ್ರಹ್ಮಾಂಡಗಳನ್ನು ಬಿತ್ತಿ ಬೆಳೆವ ಸಾಮರ್ಥ್ಯವುಳ್ಳ ಶಕ್ತಿಯನ್ನೂ ಒಳಕೊಂಡಿದೆ.

ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು.
ಆ ಸ್ವಯಂಭುಲಿಂಗದಿಂದಾಯಿತ್ತು ಮೂರ್ತಿವತ್ತು.
ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ . . . .[೨]

ಹೀಗೆ ವಿಶ್ವೋತ್ಪತ್ತಿಗೆ ಮೂಲಬೀಜವಾದ ಈ ಪರಮಾಕಾಶ ವಿಶ್ವಪ್ರಪಂಚದ ಸ್ಥಿತಿಗತಿಗೆ ತಾನೇ ಮೂಲ ಭಿತ್ತಿ, ಮೂಲಾಧಾರ. ಎಲ್ಲ ಎಲ್ಲ ತನ್ನಲ್ಲಿ, ತನ್ನಿಂದ, ತನಗೆ ಹುಟ್ಟಿ ಬೆಳೆದು ಬಾಳಿದರೂ ಈ ಶೂನ್ಯ 'ಪೂರ್ಣಮೇವಾವಶಿಷ್ಯತೇ.' 'ಅಳಿಯ,

---

೧. ಸಿ. ಶಿ. ಪು. ೩೫೨. ತಾ. ದೀ. ರುದ್ರಯಾಮಳದ ಶ್ಲೋಕ.
ಇಲ್ಲಿ ಸಿದ್ಧಾಂತ ಶಿಖಾಮಣಿಗೆ ತಾತ್ಪರ್ಯದೀಪಿಕೆಯನ್ನು ಬರೆದ ವೇ. ಎನ್. ಆರ್. ಕರಿಬಸವ ಶಾಸ್ತ್ರಿಗಳು 'ಶೂನ್ಯ'ದ ವಿಷಯವಾಗಿ ಈ ಶ್ಲೋಕವನ್ನು ಉದ್ಧರಿಸಿ ಹೀಗೆ ವಿವರಿಸುತ್ತಾರೆ: '. . . . ಅದು ಕಾರಣವೇ ಶೂನ್ಯ ಸಮಾನವಾಗಿಯೂ ಎಂದರೆ ಅದ್ವೈತಿಗಳು ಪೇಳುವಂತೆ ಕೇವಲ ಶೂನ್ಯವಲ್ಲವೆಂದರ್ಥವು.' ಮುಂದೆ ರುದ್ರಯಾಮಳದ ಶ್ಲೋಕ ಹೇಳಿ ಹೀಗೆ ವಿವರಿಸುತ್ತಾರೆ: 'ಈ ಬ್ರಹ್ಮನಲ್ಲಿ ನಾನಾತ್ವದ ವಿಶ್ರಾಂತಿಯುಂಟಾಗುವುದರಿಂದ ಜಗತ್ತು ಲಯಗೊಂಡು ಶೂನ್ಯತ್ವವನ್ನು ಪಡೆವುದೇ ಹೊರತು ಆ ಬ್ರಹ್ಮವು ಸ್ವಸ್ವರೂಪದಿಂದ ಶೂನ್ಯವಾದುದಲ್ಲವು ಎಂದು ಹೇಳಲ್ಪಟ್ಟಿರುವುದು. ಅದು ಕಾರಣ ಆ ಪರಬ್ರಹ್ಮವು ಕೇವಲ ಶೂನ್ಯವಾಗದೆ ಮಹಾಕಾಶ ಸ್ವರೂಪವುಳ್ಳುದಾಗಿ ಪ್ರಕಾಶಿಸುತ್ತಿರುವುದು.'

೨. ಲಿಂ. ಲೀ. ವಿ. ಚಾ. ಪು. ೫೮. ವ: ೬.

ಬೆಳೆಯು, ಸುಳಿವನಲ್ಲ. ಪ್ರಳಯವಿಲ್ಲದ ವಿಜಯನು....'[೧] ಪ್ರಳಯವಿಲ್ಲದ ವಿಜಯ ಈ ಪೂರ್ಣಸಾಗರ ಲೀಲೆದೋರಿದರೆ ವಿಶ್ವತರಂಗಗಳನ್ನು ಹಡೆದು ಅವನ್ನು ತಾನೇ ಧರಿಸಿ ಆನಂದವಾಗಿ ಆಡಬಲ್ಲುದು. ಬಿರುಗಾಳಿ ಬೀಸಿದರೆ ಸಮುದ್ರವೆಲ್ಲ ತೆರೆ, ಸಮುದ್ರವೆಲ್ಲ ಶೃಂಗಾರ. ತೆರೆ ಮೂಡುವುದು ಸಮುದ್ರದಲ್ಲಿ, ಆಡುವುದು ಸಮುದ್ರದ ಮೇಲೆ. ನಾಮ ರೂಪ ಕ್ರಿಯೆಯಾಗಿ ತೆರೆಯಾದರೂ ತೆರೆ ಸಮುದ್ರವೇ ಅಥವಾ ಸಮುದ್ರ ತೆರೆಯೇ. ಅದರಂತೆ ಶೂನ್ಯದಲ್ಲಿ ಲೀಲೆದೋರಿದರೆ, ಪ್ರಕೃತಿಯ ಅನಂತವೈಭವ ಮೂಡಿ ಅಲ್ಲಿಯೆ ಶೃಂಗಾರವಾಗಿ ಆಡುತ್ತದೆ. ಸಮುದ್ರಕ್ಕೆ ತೆರೆ ಭಾರವಲ್ಲ. – ಒಂದು ವೇಳೆ ಆದರೂ ಆಗಬಹುದು, ಆದರೆ ಬಯಲಿಗೆ ಭಾರ ಉಂಟೇ?

ನಿರವಯಲ ಸಮಾಧಿಯಲ್ಲಿ, ಲಿಂಗಾಂಗ ಸಮರಸವಾದ ನಿಜೈಕ್ಯಸ್ಥಲದಲ್ಲಿ ನಿಂದ ಶರಣ ಚಿದ್‌ಬೆಳಗಿನ ಬಯಲು ತಾನಾಗಿ, ಅಲ್ಲಿಂದ ಹೊಮ್ಮುವ ವಿಶ್ವಲೀಲೆಯನ್ನು ತಾನೂ ಧರಿಸಿ, ಆಲಿಂಗಿಸಿ ತೊಳಗಿ ಬೆಳಗಬಲ್ಲ. 'ಪರಶಿವಯೋಗದಲ್ಲಿ ನಿಂದು ನಿರವಯ ನಾಗಿ, ಅನಂತಕೋಟಿ ಬ್ರಹ್ಮಾಂಡಗಳೆಲ್ಲವನು ತನ್ನ ಮಹಾಜ್ಞಾನಪ್ರಕಾಶದಲ್ಲಿ ಆಲಿಂಗಿಸಿ, ಪ್ರಭುದೇವರು ತೊಳಗಿ ಬೆಳಗಿ ಒಪ್ಪುತ್ತಿ'ದ್ದರೆಂದು ಹಿಂದೆ ಹೇಳಿದ ಮಾತಿನ ಅರ್ಥ ಇದೇ.

ನಿರ್ಭಾವಪದದಲ್ಲಿ ನಿಂದು ನಿಶ್ಶೂನ್ಯವನ್ನು ನಿರೀಕ್ಷಿಸುತ್ತಿದ್ದು ನಿಜಸಮಾಧಿಯಲ್ಲಿ ಮೂರ್ತಿಗೊಂಡಿದ್ದ ಪ್ರಭುದೇವರ ಮಹಾಂತ ಸ್ವರೂಪವನ್ನು ನೋಡಿ! ಎಷ್ಟು ಭವ್ಯ?

೧ ...,. ಗೊಹೇಶ್ವರ ನಿಂದ ನಿಲವು ಸಚರಾಚರವ ಮೀಱಿತ್ತು ![೨]

೨ .... ಗೊಹೇಶ್ವರ ನಿಂದ ನಿಲವು ಹೊಱಗು ಒಳಗ ನುಂಗಿತ್ತು.[೩]

೪ .... ಸ್ವತಂತ್ರ ಗೊಹೇಶ್ವರ ತಾನಿರ್ದಲ್ಲಿ.[೪]

ಸಚರಾಚರ ಪ್ರಪಂಚವನ್ನು ಮೀರಿ, ಹೊರಗೆ ಒಳಗೆ ಎಂಬುದೇನು ಇಲ್ಲದೆ ಗೊಹೇಶ್ವರ ನನ್ನೂ ಒಳಕೊಂಡಿದ್ದ ಇರವೇ ಪ್ರಭುದೇವರು. ಆದರೆ ಪ್ರಭುದೇವರೆಂಬ ನಾಮ ರೂಪ ಕ್ರಿಯೆಯೇನೂ ಇಲ್ಲಿ ಇಲ್ಲ. ಇಹಲೋಕ ಪರಲೋಕ, ಗಗನ ಮೇರುಮಂದಿರ, ಚಂದ್ರ ಸೂರ್ಯ ತಾರಾಮಂಡಲಗಳನ್ನು ಆಲಿಂಗಿಸುವ ಪರಮಾಕಾಶವೇ 'ಶೂನ್ಯಸಂಪಾದನೆ' ಹೇಳುವ ಶೂನ್ಯ. ಹೆಸರಿಡಬೇಕಿದ್ದರೆ ಇದೇ ಗೊಹೇಶ್ವರಲಿಂಗ, ಇದೇ ಅಲ್ಲಮ ಪ್ರಭುದೇವರು.

ಅಲ್ಲಮಪ್ರಭುದೇವರು ಅಂದರೆ ಗೊಹೇಶ್ವರಲಿಂಗ? ಇದೇನು ಹೇಳುವಿರಿ ಎಂದು ನಿಮ್ಮ ಆಕ್ಷೇಪವೇ? ನಿಮ್ಮ ಆಕ್ಷೇಪ ಸಮಯೋಚಿತವೇ. ನಿಮ್ಮ ಆಕ್ಷೇಪಕ್ಕೆ ಸಮಾಧಾನ ಸಿಗಬೇಕಾದರೆ ಮತ್ತೆ ಕೇಳಬೇಕು 'ನಾನು ಯಾರು' ಎಂಬ ಪ್ರಶ್ನೆಯನ್ನು. ನಾನು ಯಾರು? ನಾನು – ನನ್ನ ಅನುಭವ, ನೀವು ನಿಮ್ಮ ಅನುಭವ. ರಾಮಚಂದ್ರ ತನ್ನ ಅನುಭವ, ರಾವಣ ಆತನೂ ತನ್ನ ಅನುಭವ. ಇರುವೆ ಇರುವೆಯ ಅನುಭವ, ಆನೆ ತನ್ನ ಅನುಭವ. ಈ ಅನುಭವ ಅರಿವಿನಲ್ಲಿ, ಅರಿವಿನೊಡನೆಯೆ ಮೂಡುತ್ತದೆ.

---

೧. ಪ. ಶಾ. ಸಾ. ಭಾ. ೧, ಪು. ೧೩, ವ. ೫.

೨. ಶೂ. ಸಂ. ಪು. ៩೦೪, ವ. ೧೫.

೩. ಅದೇ ಪು. ៩೦೪, ವ. ೧೭.

೪. ಅದೇ ಪು. ៩೦೫, ವ. ೨೫.

ನನ್ನ ದೇಹೇಂದ್ರಿಯ ಕರಣಾದಿಗಳು, ನನಗೆ ಸಂಬಂಧಿಸಿದ ಬಾಹ್ಯ ಪ್ರಪಂಚ, ನನ್ನಂತಹ ವ್ಯಕ್ತಿಗಳು ನೀವು – ಈ ಪರಿಸರದಲ್ಲಿ ನಾನು ಅನುಭವಿಸುವ ಅನುಭವಸಂಘಾತವೆ ನಾನು. ಇದು ಪ್ರತಿಯೊಂದು ವ್ಯಕ್ತಿಯ ಅನುಭವ ಎಂದು ನನ್ನ ತಿಳಿವಳಿಕೆ. ನಾನು = ನನ್ನ ಅನುಭವ ಎಂಬುದು ಸತ್ಯವಿದ್ದರೆ, ಅಲ್ಲಮಪ್ರಭು = ತನ್ನ ಅನುಭವ. ಪ್ರಭುದೇವರ ಅನುಭವ ತಾನು ಗುಹೇಶ್ವರಲಿಂಗ ಎಂದು. 'ಲಿಂಗೋದಯ ಪ್ರಜ್ವಲಿಸುತ್ತಿದೆ ಗುಹೇಶ್ವರಲಿಂಗವು ತಾನೆಯಾಗಿ.'[೧] ಎಂಬಿಂತಹ ನೂರಾರು ನುಡಿಗಳ ಬೆಳಗು, ಪ್ರಭುಲಿಂಗವೆ ತಾನಾಗಿ ಪ್ರಜ್ವಲಿಸುವುದನ್ನು ಸ್ಪಷ್ಟಗೊಳಿಸುತ್ತದೆ. ಚಾಮರಸನು ತನ್ನ ಕಾವ್ಯಕ್ಕೆ ಪ್ರಭು – ಲಿಂಗಲೀಲೆ ಎಂದು ಹೆಸರು ಕೊಟ್ಟುದಕ್ಕೆ ಇದೇ ಕಾರಣ. ಬಸವಣ್ಣನವರನ್ನು 'ಬಸವಲಿಂಗ' ಎಂದು ಕರೆದು, ಅದನ್ನು ಮಹಾಮಂತ್ರದ ಮಟ್ಟಕ್ಕೆ ಏರಿಸಲು ಇದೇ ಕಾರಣ.

ಮಾನವನ ಅನುಭವದಲ್ಲಿ ಸ್ವಯಂಭುಲಿಂಗ ಒಡಮೂಡಿ, ಮಾನವನ ಅರಿವನ್ನು ಪ್ರಜ್ವಲಗೊಳಿಸಿ. ಆತನ ಒಳಹೊರಗನ್ನೆಲ್ಲ ನುಂಗಿ 'ಅತ್ಯತಿಷ್ಠದ್ದಶಾಂಗುಲಂ'[೨] ಆಗಿ ನಿಂದರೆ ಮಾನವನೆಲ್ಲ ಲಿಂಗ; ಈ ಲಿಂಗಾನುಭಾವವುಳ್ಳ ಮಾನವನೆ ಶರಣ. ಮಾನವ ಬೀಜದಲ್ಲಿ ಶರಣಲಿಂಗ ಸರ್ವಾತಿಗವಾಗಿ ಹಬ್ಬಿ ನಿಲ್ಲುವ ಕ್ರಮವನ್ನು ಬೇಕಾದರೆ ಪರಾಮರ್ಶಿಸಿ ನೋಡಿ ಪ್ರಭುಲಿಂಗದ ಒಂದೆರಡು ವಚನಗಳಲ್ಲಿ – 'ಸ್ವಸ್ಥಾನ ಸ್ವಸ್ಥಿರದ ಸುಮನಮಂಟಪದೊಳಗೆ....'[೩] ಪ್ರಭುದೇವರ ಈ ವಚನದ ಅಂತರಂಗವನ್ನು ಕಲ್ಲಮಠದ ಪ್ರಭುದೇವರು ಹೀಗೆ ವಿವರಿಸಿದ್ದಾರೆ: 'ಮನಕ್ಕೆ ಸದ್ವಿವೇಕದೋಜಿ, ತನ್ನ ನಿಜಸ್ಥಲವೆ ಪರಬ್ರಹ್ಮವೆಂದಱಿದು, ಮನವು ದುರ್ವಿಕಾರದ ಸಂಚಲವನಳಿದು. ಶಿವಭಾವದಲ್ಲಿ ನೆಲೆಗೊಂಡು ಸ್ವಸ್ಥನಾಗಿ ನಿಂದ ಮನವೀಗ ಸುಮನ. ಅಂತಪ್ಪ ಸುಮನವೆ ಮನೆಯಾಗಿ ನಿತ್ಯ ನಿರಂಜನ ಸುಪ್ರಭೆಯ ಬೆಳಗ ಪ್ರಜ್ವಲಿಸುತ್ತ ಪರಶಿವಲಿಂಗವು ನೆಲೆಗೊಂಡು ವಿಶ್ರಮಿಸಿ. ಆ ಶರಣನ ಅಂಗವೆಲ್ಲವ ಲಿಂಗವೆ ಅಂಗೀಕರಿಸಿ, ಲಿಂಗಾಂಗ ಸಂಯೋಗವಾದಲ್ಲಿ ಅಂಗ ಲಿಂಗವೆಂಬ ಭೇದವಳಿದು ಮಹಾಘನಲಿಂಗವೆಯಾಗಿರ್ದ ಶರಣನ ಪರಮಸುಖವನುಪಮಿಸಬಾರದು....'[೪] ಮತ್ತೆ 'ಇಹಲೋಕ ಪರಲೋಕ ತಾನಿಪ್ಪಲ್ಲಿ...'[೫] ಎಂಬ ವಚನದ ಅನುಭವವನ್ನು ಹೀಗೆ ವಿವರಿಸುತ್ತಾರೆ ಪ್ರಭುದೇವರ ವಚನಗಳಿಗೆ ಟೀಕೆ ಬರೆವ ಕುಮಾರ ಬಂಕನಾಥದೇವರು: ಅನಂತ ಬ್ರಹ್ಮಾಂಡ ನಾನಾಲೋಕ ಸಚರಾಚರ ಪ್ರಪಂಚಗಳೆಲ್ಲವು ಲಿಂಗದಲ್ಲಿ ಅಡಗಿರ್ಪವು. ಆ ಲಿಂಗವೇ ಮಹಾಜ್ಞಾನ ಪ್ರವೇಶಿತವಾಗಿಪ್ಪುದು. ಅಂತಪ್ಪ ಮಹಾಜ್ಞಾನವಳವಟ್ಟ ದಿವ್ಯಶರಣನ ಸರ್ವಾಂಗವಲ್ಲಿ ಆ ಲಿಂಗವು. ಆ ಲೋಕಾದಿ ಲೋಕಂಗಳೆಲ್ಲವು ಅಡಗಿಪ್ಪುವು.[೬] ಈ ಎರಡೂ ವಿವರಣೆಗಳನ್ನು ಓದಿ, ಮತ್ತೆ ಓದಿ. ವಿಚಾರ ಮಾಡಿ ಮತ್ತೊಮ್ಮೆ ಮಾಡಿ.

---

೧. ವ. ಶಾ. ಸಾ. ಭಾ. ೨, ಪು. ೪೨೮. ವ. ೮.
೨. ಶ್ವೇ. ಉ. ಅ. ೩, ಮಂ. ೧೪.
೩. ಶೂ. ಸಂ. ಪು. ೩೦೪. ವ. ೧೬.
೪. ಲಿಂ. ಲೀ. ವಿ. ಚಾ. ಪು. ೩೯೧, ವ. ೫೯. ಟೀಕು.
೫. ಶೂ. ಸಂ. ಪು. ೩೦೫, ವ. ೨೫.
೬. ಪ್ರ. ವ. ಮ. ೧೭೯, ವ. ೬೦, ಟೀಕು.

ಅವು ತೋರುವ ಪರಮಾರ್ಥವನ್ನು 'ಸುಮನೋಮಂಟಪ'ದಲ್ಲಿ ನೆಲೆಗೊಳಿಸಿದರೆ, ದಿವ್ಯ ಶರಣನ ಬ್ರಹ್ಮಸ್ವರೂಪ ವೇದ್ಯವಾಗುತ್ತದೆಯಲ್ಲವೆ?

ಶ್ರೀಮದ್ ಭಗವದ್‌ಗೀತೆಯ ೧೧ನೆಯ ಅಧ್ಯಾಯದಲ್ಲಿ ಶ್ರೀಕೃಷ್ಣ ಪರಮಾತ್ಮನು ತನ್ನ ವಿಶ್ವರೂಪ ದರ್ಶನವನ್ನು ಅರ್ಜುನನಿಗೆ ಮಾಡಿಕೊಟ್ಟ ಪ್ರಸಂಗ ನಿಮಗೆ ಗೊತ್ತಿದೆಯಲ್ಲವೆ? ಭಗವದ್ ಭಕ್ತ, ದಿವ್ಯಶರಣ, ವಿಶ್ವರೂಪವನ್ನೊಳಕೊಂಡ ಪರಮಾತ್ಮನನ್ನೂ ಗರ್ಭೀಕರಿಸಿಕೊಂಡು ಮೆರೆದ ಸಂಗತಿ ಬಹುವಿಚಿತ್ರವಾದ ಸಂಗತಿಯೇನೂ ಅಲ್ಲ. 'ಮಹಾಜ್ಞಾನವಳವಟ್ಟ ದಿವ್ಯಶರಣನ ಸರ್ವಾಂಗದಲ್ಲಿ ಆ ಲಿಂಗವು, ಆ ಲೋಕಾದಿ ಲೋಕಂಗಳೆಲ್ಲವು ಅಡಗಿಪ್ಪುವು.' ಮತ್ತೆ ಮತ್ತೆ ಪರ್ಯಾಲೋಚಿಸಿ ನೋಡಿ ಈ ಹೇಳಿಕೆಯನ್ನು. ವಿಶ್ವರೂಪದ ಶ್ರೀಕೃಷ್ಣಪರಮಾತ್ಮರು ಕರ್ನಾಟಕದ ನೆಲದಲ್ಲಿ ಹುಟ್ಟಿ ವಿಶ್ವವನ್ನೆ ಬೆಳಗಿದರು. ಅಂಥ ಶರಣರ ಸಂಖ್ಯೆ ಅಸಂಖ್ಯ. ಅಂತೆಯೇ ಶರಣರಿಗೆ 'ಅಸಂಖ್ಯಾತರು' ಎಂಬ ಹೆಸರು. ಅಥವಾ ಯೇಸು ಕ್ರಿಸ್ತ, ಬುದ್ಧ, ತೀರ್ಥಂಕರ, ಮಹಮ್ಮದ, ಶ್ರೀಕೃಷ್ಣ – ಎಂದು ಶರಣರ ನಾಮ ಹಲವು, ಶರಣ ಒಬ್ಬ.

ಈ ಶೂನ್ಯ, ಈ ಲಿಂಗ, ಈ ಬ್ರಹ್ಮ, ಈ ದೇವರು ಎಲ್ಲಿದ್ದಾನೆ? ಸರ್ವ ಭೂತದಲ್ಲಿ, ಮಾನವ ಬೀಜದಲ್ಲಿ, ಮಾನವ ಬೀಜದ ಮಹಾಫಲವಾದ ಶರಣನಲ್ಲಿ. ತನ್ನ ಮತ್ತು ವಿಶ್ವದ ಹೃದಯದ ಗುಹೆಯಲ್ಲಿ ನಿತ್ಯ ನಿರಂಜನವಾಗಿ, ಸಚ್ಚಿದಾನಂದವಾಗಿ, ಪರಿಪೂರ್ಣವಾಗಿ ಬೆಳಗುವ ಪರಮಾಕಾಶವನ್ನು ಇಲ್ಲಿ ಕತ್ತಲೆಮಾಡಿ, ಪರಲೋಕಕ್ಕೆ, ವೈಕುಂಠ ಕೈಲಾಸಕ್ಕೆ, ಸ್ವರ್ಗ ಪ್ಯಾರಾಡಾಯಿಜಿ (Paradise) ಗೆ, ಕಾಶಿ ಮಕ್ಕಾ ಜೆರುಸಲೇಮಕ್ಕೆ ಒಯ್ದು ದೂರ ದೂರವಿಟ್ಟು, ದೇವರಿಂದ ದೂರವಾಗುತ್ತಿರುವುದು ಮಾನವಕೋಟಿಯ ಮಹಾಪರಾಧ. '.... ಅರಿಯಬಲ್ಲಡೆ ಗುಹೇಶ್ವರಲಿಂಗವು ಹೃದಯದಲ್ಲಿದ್ದಾನೆ.'[೧]

---

೧. ಪ್ರ. ವ. ಪು. ೯೪, ವ. ೧೨.

೫

ಒಂದು ಎರಡು

'ಬಯುಲು ಬಯುಲನೆ ಬಿತ್ತಿ, ಬಯುಲು ಬಯುಲನೆ ಬೆಳೆದು,
ಬಯುಲು ಬಯುಲಾಗಿ ಬಯುಲಾಯಿತಯ್ಯಾ.
ಬಯುಲು ಜೀವನ ಬಯುಲು ಭಾವನೆ,
ಬಯುಲು ಬಯುಲಾಗಿ ಬಯುಲಾಯಿತ್ತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೆ ಬಯುಲಾದರು.
ನಾ ನಿಮ್ಮ ಪೂಜಿಸಿ ಬಯುಲಾದೆ ಗುಹೇಶ್ವರಾ'

ವಚನಶಾಸ್ತ್ರಸಾರ ಭಾಗ ೧, ಪು. ೫೭೨, ವ. ೧೨.[1]

'. . . ತಾನಲ್ಲದೆ ಮತ್ತೇನು ಇಲ್ಲ.'

ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು, ಪು. ೧೯, ವ. ೪೭.

'ತನ್ನ ಬಿಟ್ಟು ದೇವರಿಲ್ಲ, ಮಣ್ಣ ಬಿಟ್ಟು ಮಡಕೆಯಿಲ್ಲ.'

ನಾಣ್ನುಡಿ.

ಶೂನ್ಯವೆಂದರೆ ಏನು ಎಂಬ ಕಲ್ಪನೆ ನನಗೆ ಬಂದಿದೆ. ನಿಮಗೂ ಬಂದಿರಬಹುದು. ಶೂನ್ಯವೆಂದರೆ ಬಯಲು. ಅದು ಇಲ್ಲದ ಬಯಲಲ್ಲ, ಇದ್ದ ಬಯಲು; ಅದೇ ಘನಕ್ಕೆ ಘನವಾದ, ಮಹಾಘನವಾದ ಬಯಲು. ಅದೇ ನಿಷ್ಕಲ ಲಿಂಗ, ನಿಷ್ಕಲ ವಸ್ತು, ನಿಷ್ಕಲ ಪರಬ್ರಹ್ಮ, ಮಹಾಘನ ಶೂನ್ಯಬ್ರಹ್ಮ. ವಿಶ್ವ ಬ್ರಹ್ಮಾಂಡಗಳನ್ನು, ವಿಶ್ವ ತತ್ತ್ವಗಳನ್ನು ಒಳಕೊಂಡು ಯಾವ ತತ್ತ್ವಗಳ ತೋರಿಕೆಯೂ ಇಲ್ಲದೆ ಇರಬಲ್ಲ ಪರವಸ್ತು ಅದೇ. ಅದರಂತೆ ಸಚರಾಚರ ಪ್ರಪಂಚದ ತೋರಿಕೆಗೆ, ಸೃಷ್ಟಿಸ್ಥಿತಿಗೆ ಮೂಲಭಿತ್ತಿ ಅದೇ. ಸ್ವಯಂಜ್ಯೋತಿ ಪರಂಜ್ಯೋತಿ ಅದೇ. ಸಚ್ಚಿದಾನಂದ ನಿತ್ಯಪರಿಪೂರ್ಣ ಅಖಂಡವಾದ ಚಿದ್ಬೆಳಗಿನ ಮಹಾಬಯಲು ಅದೇ. ಆದರೆ ಇದೆಲ್ಲ ನನ್ನ ನಿಮ್ಮ ಕಲ್ಪನೆಗೆ ಬಂದ ಬಯಲು ಅಷ್ಟೇ. ಈ ಕಲ್ಪನೆಯ ಬಯಲೊಳಗೆ ಕುಳಿತು ನಾವು ಶೂನ್ಯವನ್ನು ಸಂಪಾದಿಸಿದೆವು ಎಂದು ತಿಳಿದುಕೊಂಡರೆ ಅದೊಂದು ಬಯಲ ಭ್ರಮೆ. ನ್ಯೂಯಾರ್ಕಿನ ಬಗೆಗೆ ಓದಿ, ಅಲ್ಲಿಯ ಸಂದಿಗೊಂದಿಗಳನ್ನೆಲ್ಲ ಅಭ್ಯಾಸಮಾಡಿ ನ್ಯೂಯಾರ್ಕಿನ ಕಲ್ಪನೆ ನನಗೆ ಸ್ಪಷ್ಟವಾದರೆ, ಅಲ್ಲಿ ಪ್ರತ್ಯಕ್ಷವಾಗಿ ಇದ್ದಂತೆ ಆಗಬಹುದೆ? ಬೆಲ್ಲದ ಕಲ್ಪನೆ ರುಚಿಯಿರಬಹುದು. ಆದರೆ ಬೆಲ್ಲದ ರುಚಿ ಅದಕ್ಕುಂಟೆ? ಕೋಟಿ ಕಲ್ಪಿಸಿದರೂ ಕಲ್ಪನೆ ಬೆಲ್ಲವನ್ನು ಮುಟ್ಟಲಿಲ್ಲ; ಬೆಲ್ಲದ ರುಚಿಯನ್ನು ಅನುಭವಿಸಲಿಲ್ಲ. ಕಲ್ಪನೆಯ ಮಾಯಾ

---

೧. ಇದೇ ವಚನದ ಪಾಠಾಂತರಗಳನ್ನು ಕೆಳಗಣ ಗ್ರಂಥಗಳಲ್ಲಿ ನೋಡಿರಿ:
ಲಿಂ. ಲೀ. ವಿ. ಚಾ. ಪು. ೩೦೭, ವ. ೫೩.
ಪ್ರ. ವ. ಪು. ೩೦೬, ವ. ೩೪.

ಜಾಲ ದೊಡ್ಡ ಮಹೇಂದ್ರಜಾಲ. ಈ ಜಾಲದಲ್ಲಿ ಸಿಕ್ಕುಬಿದ್ದರೆ ಪಾರಾಗುವುದು ಕಠಿಣ. ಕಲ್ಪನೆಯ ಸತ್ಯವೆಂಬುದು ತಿರುಕ ಕಂಡ ಕನಸಿನಂತೆ. ಅಂತೆಯೆ ಕಲ್ಪನೆ ಸತ್ಯದರ್ಶನ ಅಲ್ಲ, ಸತ್ಯಾನುಭವ ಅಲ್ಲ ಎಂಬ ಮಾತು ಎಂದಿಗೂ ನಮ್ಮಲ್ಲಿ ಎಚ್ಚರವಾಗಿರಬೇಕು. ಲಿಂಗಗಂಭೀರರಾದ ದಿವ್ಯಾನುಭಾವಿಗಳು ಮೇಲಿಂದ ಮೇಲೆ ಈ ಎಚ್ಚರವನ್ನು ಕೊಡುತ್ತಾರೆ:

> ಕದಳಿಯ ಬನವ ಹೊಕ್ಕು ಹೊಲಬು ತಿಳಿಯದನ್ನಕ್ಕ,
> ಬಯಲ ಗಾಳಿಯ ಹಿಡಿದು ಗಟ್ಟಿಮಾಡದನ್ನಕ್ಕ,
> ಬರಿದೆ ಬಹುದೆ ಶಿವಜ್ಞಾನ,—ಷಡುವರ್ಣಾವಳಿಯದನ್ನಕ್ಕ?
> ಬರಿದೆ ಬಹುದೆ ಅಷ್ಟಮದವಳಿಯದನ್ನಕ್ಕ?
> ಮದಮತ್ಸರವ ಮಾಡಲಿಲ್ಲ; ಹೊದಕುಳಿಗೊಳಲಿಲ್ಲ.
> ಗುಹೇಶ್ವರಲಿಂಗವು ಕಲ್ಪಿತದೊಳಗಲ್ಲ.[೧]
>
> ಅಗ್ನಿಯ ಸುಡುವಲ್ಲಿ, ಉದಕವ ತೊಳೆವಲ್ಲಿ,
> ವಾಯುವ ಮೆಟ್ಟಿ ಆಕಾಶವ ಹಿಡಿವಲ್ಲಿ
> ಯೋಗದ ಹೊಲಬ ಬಲ್ಲರೆ ನೀವು ಹೇಳಿರೆ.[೨]
>
> ಕದಳಿಯ ಬನವ ನಿನ್ನಲ್ಲಿ ನೀನು ತಿಳಿದು ನೋಡು.
> ಮದ ಮತ್ಸರ ಬೇಡ; ಹೊದಕುಳಿಗೊಳಬೇಡ.
> ಗುಹೇಶ್ವರನೆಂಬ ಲಿಂಗ ಕಲ್ಪಿತವಲ್ಲ ನಿಲ್ಲೊ.[೩]

ಅಪ್ಪಾ ತಡೆ, ಸ್ವಲ್ಪ ನಿಲ್ಲು. ಲಿಂಗ, ಪರವಸ್ತು, ನಿಷ್ಕಲಬ್ರಹ್ಮ ಕಲ್ಪಿತ ಅಲ್ಲ; ಕಲ್ಪನೆಯ ಆಲಿಂಗನಕ್ಕೆ ಒಳಗಾಗುವ ವಸ್ತುವೂ ಅದಲ್ಲ. ಕಾಯವಿಕಾರವೇ ಕದಳಿಯ ಬನ. ಈ ಬನದಲ್ಲಿ ಹೊಕ್ಕು ನೋಡು. ವಿಕಾರದ ಪಾಲಾಗದೆ ಹಾದಿ ಹಿಡಿದು ನಡೆ. ಎಡೆಬಿಡುವಿಲ್ಲದೆ ಬೀಸುತ್ತಿರುವ ಮನವನ್ನು ಸ್ವಸ್ಥಿರಗೊಳಿಸು. ಅಗ್ನಿಯ ವಿಕಾರದಿಂದಾದ ಭಿನ್ನರೂಪವನ್ನು ಜ್ಞಾನಾಗ್ನಿಯಲ್ಲಿ ಸುಟ್ಟುಹಾಕು. ಸಂಸಾರರಸವನ್ನು ಪರಮಾನಂದ ವೆಂಬ ಜಲದಲ್ಲಿ ತೊಳೆ. ಭೌತಪ್ರಾಣದ ಗುಣಧರ್ಮವನ್ನು ಮೆಟ್ಟಿ ಆತ್ಮತತ್ತ್ವವನ್ನು ಮುಟ್ಟು. ಮದ ಮತ್ಸರದಲ್ಲಿ ಮುಳುಗಿ ದುಃಖಿಸಿದರೆ ನಿನಗೆ ನೀನು ದೂರಾಗುವಿ. ಎಚ್ಚರ. ಇದೇ ನಿನ್ನ ನಿಜ ನಿರಾಳವ ಕಾಂಬ ರೀತಿ. ಇದೇ ಶೂನ್ಯವನ್ನು ಸಂಪಾದಿಸುವ ಮಾರ್ಗ. ಈ ಮಾರ್ಗವೇ ನಿನ್ನನ್ನು ಶಿವನಲ್ಲಿ ಯೋಗಿಸುತ್ತದೆ. ಅಂತೆಯೇ ಇದು ಶಿವಯೋಗಮಾರ್ಗ. ಯೋಗವೇ ಅನುಭವದ ಅರುಣೋದಯ. ಅನುಭವವಿಲ್ಲದ ಕಲ್ಪನೆ ಕನಸಿನ ಬುತ್ತಿ, ಮಂಜಿನ ಕೆರೆ. ಹೊಟ್ಟೆ ತುಂಬೀತೇ? ಕಲ್ಪಿತಸತ್ಯ ಸತ್ಯದರ್ಶನವಲ್ಲ.

---

೧. ಪ್ರ. ವ. ಪು. ೯೦, ವ. ೧.

೨. ಪ್ರ. ವ. ಪು. ೧೧೩, ವ. ೫೭ರ ಟೀಕಿನ ಪಾಠಾಂತರ. ಮೂಲಪಾಠದ ಪಾಠ 'ನೀವೆತ್ತ ಬಲ್ಲೈ' ಎಂದಿದೆ.

೩. ಪ್ರ. ವ. ಪು. ೧೧೩, ವ. ೫೭.

ಅದರಂತೆ ಬುದ್ಧಿಯು ಭಿನ್ನಜ್ಞಾನವೂ ಈ ಆತ್ಯಂತಿಕ ಸತ್ಯದ ಸೀಮೆಯನ್ನು ಮುಟ್ಟಲಾರದು. ಅರಿವ ನಾನು ಅರುಹಿಸಿಕೊಳ್ಳುವ ನೀನು, ವಿಚಾರ ಮಾಡುವ ನಾನು ವಿಚಾರಿಸಿಕೊಂಬ ವಿಷಯವಿಲ್ಲದೆ ಬುದ್ಧಿಗೆ ಮುಂದೆ ನಡೆಯಲು ಆಧಾರವೇ ಇಲ್ಲ. ಆದರೆ ಜ್ಞಾತೃ ಜ್ಞೇಯ ಹಡೆವ ಈ ಜ್ಞಾನ ಸತ್ಯಜ್ಞಾನವಲ್ಲ, ಸತ್ಯದ ದರ್ಶನವಲ್ಲ, ಸತ್ಯದ ಅನುಭವವಲ್ಲ. 'ತಾನಲ್ಲದೆ ಮತ್ತೇನೂ ಇಲ್ಲ' ಎಂಬ ನಿಜೈಕ್ಯಜ್ಞಾನ, ನಿಜೈಕ್ಯಾನುಭವ ಬುದ್ಧಿಯ ಹವಣಲ್ಲ, ವಿಚಾರದ ನೆಯ್ಗೆ ಅಲ್ಲ. ನಾನು ನೀನೆಂಬ ಭಿನ್ನಭಾವದ ಸುಳಿವೇ ಇಲ್ಲದ ಈ ಸಮರಸಾನುಭವದಲ್ಲಿ ಬುದ್ಧಿಯೂ ವಿಚಾರವೂ ಇಲ್ಲ. '...ಗೊಹೇಶ್ವರಲಿಂಗವು ತನ್ನ ತಿಳಿದು ನೋಡಿಹೆನೆಂಬವರ ವಿಚಾರವೆಂಬ ಬಲೆಯಲ್ಲಿ ಕೆಡಹಿದನು.'[೧]

ವಸ್ತುವನ್ನು ವಿವರಿಸಿ ನೋಡುವುದು, ವಿಶ್ಲೇಷಣ ಮಾಡುವುದು ಬುದ್ಧಿ. ತುಣುಕುಗಳನ್ನೆಲ್ಲ ಒಂದುಗೂಡಿಸಿ ಮತ್ತೆ ವಸ್ತುವಿನ ಸ್ವರೂಪವನ್ನು ಕಾಣಬಯಸುತ್ತದೆ ಬುದ್ಧಿ. ಕಪ್ಪೆಯನ್ನು ಕೊಯ್ದು ಅವಯವಗಳನ್ನು ವಿಂಗಡಿಸಿ ನೋಡಿದರೆ, ಕಪ್ಪೆಯ ಆಕಾರ ಆಹಾರ ಚಲನವಲನಗಳನ್ನು ವೀಕ್ಷಿಸಿದರೆ ಕಪ್ಪೆಯ ಪ್ರಾಣಾನುಭವ, ಕಪ್ಪೆ ತನ್ನಲ್ಲಿ ತಾನಾಗಿ ಜೀವಿಸುತ್ತಿರುವ ಜೀವಂತ ಅನುಭವ ಆದೀತೇ? ವೀಕ್ಷಿಸುವ ವಸ್ತು ತಾನಾಗಬಲ್ಲರೆ, ಅದರ ಪೂರ್ಣ ಅನುಭವ ತಾನು ನಿಷ್ಕಲನಾಗಿ ನಿಂದರೆ ಸಾಧ್ಯ. ಈ ಸಾಕ್ಷಾದನುಭವ. ಅಪರೋಕ್ಷಾನುಭೂತಿ, ವೇದ ಶಾಸ್ತ್ರ ಪುರಾಣ ದರ್ಶನ ಮತ ತತ್ತ್ವಗಳಿಂದಲೂ ಸಾಧ್ಯವಲ್ಲ. ಏಕೆಂದರೆ ಓದಿ ಅಭ್ಯಾಸಮಾಡಿದರೆ, ಮತ್ತೆ ಮತ್ತೆ ಮನನ ಮಾಡಿದರೆ ವಸ್ತುವಿನ ಸತ್ಯಸ್ವರೂಪವನ್ನು ಕಂಡುಂಡಂತೆ ಅಲ್ಲ. ಇಂಥ ಪಠನ ಮನನದಿಂದ ಅಜ್ಞಾನದ ಪಾಶ ಬಿಗಿಯಾಗಬಹುದಲ್ಲದೆ ಸಮ್ಯಗ್‌ಜ್ಞಾನಾನುಭವದ ನಿರಾಳದಲ್ಲಿ ತಾನೆ ತಾನಾಗಿ. ತಾನಲ್ಲದೆ ಮತ್ತೇನೂ ಇಲ್ಲದೆ ನಿಲ್ಲಲಿಲ್ಲ; ನಿಷ್ಕಲವಸ್ತುವಿನ ಸಂಪಾದನೆ ಆಗಲಿಲ್ಲ. ಅದೋ ಕೇಳಿ ಪ್ರಭುದೇವರ ಮತ್ತೊಂದು ಅನುಭವದ ಮಾತನ್ನು:

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದ ಶಾಸ್ತ್ರಂಗಳೆಂಬ ನೇಣ ಕಟ್ಟಿ ಹಿಡಿದು ತೂಗಿ,
ಜೋ ಜೋ ಎಂದು ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ.
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು.[೨]

---

೧. 'ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ!
ವಿಚಾರಿಸುವನ್ನಕ್ಕರ ನೀನಾನೆಂಬುದನೆತ್ತ ಬಲ್ಲೆ?
ಮರುಳೆ. ವಾಙ್ಮನೋತೀತವಾದ ಘನವು ವಿಚಾರಕ್ಕೆ ಸಿಲುಕುವುದೇ?
ಗೊಹೇಶ್ವರಲಿಂಗವು ತನ್ನ ತಿಳಿದು ನೋಡಿಹೆನೆಂಬವರ
ವಿಚಾರವೆಂಬ ಬಲೆಯಲ್ಲಿ ಕೆಡಹಿದನು.'
ಶೂ. ಸಂ. ಪು. ೬೨, ವ. ೧೧೨.

೨. ಪ್ರ. ವ. ಪು. ೨೨೩, ವ. ೧೫೦. ಟೀಕಿನಲ್ಲಿಯ ಹೆಚ್ಚಿನ ಪಾಠಾಂತರ ನೋಡಿರಿ.

೩. ಅದೇ ಪು. ೨೨೩, ವ. ೧೫೦.

ಕಾಯದ ವಿಕಾರ, ಪ್ರಾಣದ ಸಂಚಲ, ಮನದ ಮರವೆ, ಬುದ್ಧಿಯ ಸಂಶಯ ವಿಪರೀತಗಳನ್ನೆಲ್ಲ ಬಿಟ್ಟು ತನ್ನ ಒಳಗೆ ಇಳಿದು ನೋಡಿದರೆ ತಾನು 'ಜ್ಞಾನಶಿಶು', ಲಿಂಗದ ಕೂಸು. ಈ ಕೂಸನ್ನು ನಿರಂತರ ನಿದ್ರೆಯಲ್ಲಿ ಇಡಬೇಕೆಂಬ ಪ್ರಯತ್ನ ಭ್ರಾಂತಿ ಎಂಬ ತಾಯಿಗೆ. ಅಂತೆಯೆ ತನ್ನ ನಿಜವ ಮರೆಸಿರುವ ಅಜ್ಞಾನವನ್ನೆ ತೊಟ್ಟಿಲು ಮಾಡಿ, ಅದನ್ನು ವೇದ ಶಾಸ್ತ್ರ ಆಗಮ ಪುರಾಣ ತತ್ತ್ವದರ್ಶನಗಳೆಂಬ ಹಗ್ಗದಿಂದ ತೊಲೆಗೆ ಕಟ್ಟಿ, ತೊಟ್ಟಿಲಲ್ಲಿ ಅರಿವಿನ ಅಂಕುರವನ್ನೆ ಮರವೆಗೊಳಗುಮಾಡಿ ಮಲಗಿಸಿ, 'ಅಹಂಬ್ರಹ್ಮಾಸ್ಮಿ' ಜೋ ಜೋ, 'ಸರ್ವಂ ಖಲ್ವಿದಂ ಬ್ರಹ್ಮ' ಜೋ ಜೋ, 'ಸರ್ವಂ ಲಿಂಗಮಯಂ ಜಗತ್' ಜೋ ಜೋ, 'ಮಲಗಿದರೆ ನೀನೇ ಸಂಸಾರವೀರ, ನೀನೇ ಧೀರ, ನೀನೇ ದೊರೆ' ಜೋ ಜೋ ಎಂದೇನೇನೋ ಹಲವು ಜೋಗುಳ ಹಾಡಿ, ತಾಯಿ – ಭ್ರಾಂತಿ ಸ್ವಯಂಜ್ಯೋತಿಯ ದಿವ್ಯಜ್ವಾಲೆಯನ್ನು ಕತ್ತಲೆಗೊಳಿಸಿ ನಿದ್ರೆಗೆ ಹಚ್ಚಿದ್ದಾಳೆ. ಕೂಸು ಬೇಕಾದರೆ ಮಲಗಬಹುದು, ಸಾಕಾದರೆ ಏಳಬಹುದು. ಮಲಗಿದರೆ ತಾನಾರೆಂಬ ಪ್ರಜ್ಞೆ ತನಗಿಲ್ಲ. ಎದ್ದರೆ ತನ್ನರಿವಿನ ಇರವು ತನಗೆ. ವೇದ ಶಾಸ್ತ್ರಗಳಿಂದ ಆಧಾರಗೊಂಡ ಅಜ್ಞಾನದಲ್ಲಿ ಎಷ್ಟು ಕಾಲ ಮಲಗಬೇಕು? ಅಜ್ಞಾನವನ್ನು ಮುರಿದು, ಶಾಸ್ತ್ರ ವಿಚಾರಗಳನ್ನು ಹರಿದು ಭ್ರಾಂತಿಯ ನಿದ್ರಾಗೀತಗಳನ್ನು ನಿಲ್ಲಿಸಿದರೆ, ದಿವ್ಯಜ್ಯೋತಿಯ ಕೂಸು ದಿವ್ಯದ ವಿಸ್ತಾರದಲ್ಲಿ ಆಡಬಲ್ಲುದು. ಹಾಗಲ್ಲದೆ ಜೋಗುಳದ ಮೋಹನ ಮಂತ್ರದಲ್ಲಿ ಮಲಗಿದರೆ, ತನ್ನ ನಿಜದಿರವಾದ ಗುಹೇಶ್ವರಲಿಂಗವ ಕಾಣಬಾರದು; ಎಂದೂ ಕಾಣಲಿಕ್ಕೆ ಬರುವುದಿಲ್ಲ. ಉಪನಿಷತ್‌ಕಾರರ ಅನುಭವ 'ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್'[೧] ಎಂಬ ಮಾತು ನಿಮಗೆ ಗೊತ್ತಿದೆಯಲ್ಲವೆ? ವಿದ್ಯಾಪಾಂಡಿತ್ಯದ, ವೇದಾಗಮಾದಿಗಳ ಹೊರೆಯನಿಳುಹಿದಲ್ಲದೆ, ತನ್ನ – ಗುಹೇಶ್ವರಲಿಂಗವ – ತಾ ಕಾಣಬಾರದು.

ಕೇವಲ ವಿದ್ಯೆ ಬುದ್ಧಿ ವಿಚಾರ ಪಾಂಡಿತ್ಯ ಕಲ್ಪನೆಯಿಂದ ಮಾನವನ ಪರಮೈಶ್ವರ್ಯವಾದ ಶೂನ್ಯದ ಅಂದರೆ ತನ್ನ ನಿಜ ನಿರಾಳದ ಸಂಪಾದನೆ ಆಗುವಂತಿಲ್ಲ. ವೇದಾಗಮಗಳಲ್ಲಿ ತತ್ತ್ವದರ್ಶನಗಳಲ್ಲಿ ಹೊಳೆವ ಆತ್ಮಜ್ಞಾನ ತನ್ನ ನಿಜಸ್ವರೂಪದ ಸತ್ಯಾನುಭವವಲ್ಲ; ಅದು ಕನ್ನಡಿಯ ಗಂಟು, ಕನಸಿನ ಸಾಮ್ರಾಜ್ಯ. ಹೀಗೆಂದ ಮಾತ್ರಕ್ಕೆ ವಿದ್ಯೆ ಬುದ್ಧಿ ಮುಂತಾದುವೆಲ್ಲ ಏನೂ ಬಾತೆಯಲ್ಲ ಎಂದು ನಮ್ಮ ಅಭಿಪ್ರಾಯವಲ್ಲ. ಆತ್ಮತತ್ತ್ವಸಂಪಾದನೆಯಲ್ಲಿ ಅವು ಬೇಕು, ಅತ್ಯವಶ್ಯ ಬೇಕು. ಆದರೆ ಅವೇ ಆ ನಿಜ ತತ್ತ್ವದ ಸೀಮೆಗೆ ನಮ್ಮನ್ನು ಕರೆದೊಯ್ದು ಮುಟ್ಟಿಸಬಲ್ಲವು ಎಂಬ ಮಾತು ಇಲ್ಲಿ ಹುರುಳಿಲ್ಲ. ನನ್ನ ಅನುಭವ ನನಗೆ, ನನ್ನದು; ನಿಮ್ಮ ಅನುಭವ ನಿಮಗೆ, ನಿಮ್ಮದು. ವೇದಾದಿಗಳ, ಕುರಾನ್, ಬಾಯಿಬಲ್ಲುಗಳ ಅನುಭವ – ಅದು ಯಾವ ಮಟ್ಟದ್ದೇ ಇರಲಿ – ಆಯಾ ದ್ರಷ್ಟಾರರದು. ಹೊರಮುಖವಾಗಿ ಹರಿದಾಡುವ ಬುದ್ಧಿ ವಿಚಾರ ಕಲ್ಪನೆಗೆ ತಮ್ಮ ಹೊರಗು ತಿಳಿವುದಲ್ಲದೆ ಒಳಗು ಬೆಳಗುವುದಿಲ್ಲ. ಆದರೂ ಇವರೆಲ್ಲರ

೧. ಬೃ. ಉ. ಅ. ೩. ಬ್ರಾ. ೫, ಮಂ. ೧.

ಸಹಾಯ ಪಡೆದುಕೊಂಡು ಹೋಗಬೇಕು ಮುಂದೆ ಮುಂದೆ. ಇವರ ಸಹಾಯ ಅನವಶ್ಯ ವೆನಿಸಿದಲ್ಲಿ, ಸಂಪಾದನೆಯ ಮಾರ್ಗದಲ್ಲಿ ತೊಡಕಾದಲ್ಲಿ, ಆಗಲೂ ಇವನ್ನೇ ಹತ್ತಿಕೊಂಡು ಅಥವಾ ಹೊತ್ತುಕೊಂಡು ಪ್ರಯಾಣ ಮಾಡುವುದೆ? ನಮ್ಮ ಹಳ್ಳಿಯಿಂದ ಬಂಡಿ ಯಲ್ಲಿ ಬಂದು ರಾಜಮಾರ್ಗ ಕೂಡಿ, ಬಸ್ಸಿನಲ್ಲಿ ನಗರಕ್ಕೆ ಬಂದು ವಿಮಾನದಲ್ಲಿ ಹಾರಿ ಲಂಡನ್ನಿಗೆ ಹೋಗುವುದಿದ್ದರೆ, ಬಂಡಿ-ಬಸ್ಸನ್ನು ವಿಮಾನದಲ್ಲಿ ಹೇರಿಕೊಂಡೇ ಹಾರಬೇಕೆ?

'ಆಱು ದರುಶನದೊಡೆಯನಂತರಂಗದೊಳಿಪ್ಪ.'[1] ವೇದಾಗಮೋಪನಿಷತ್ತುಗಳ ಮತ ತತ್ತ್ವ ದರ್ಶನಗಳ ಒಡೆಯ ಋಷಿ ಮಂತ್ರ ವಿಚಾರ ಕಲ್ಪನೆಯಲ್ಲಿ ಮೂರ್ತಮಾಡಿಲ್ಲ. ಆತನಿರುವುದು ತನ್ನ ಅಂತರಂಗದಲ್ಲಿ. ತನ್ನ ಅಂತರಂಗದ ಮೂರ್ತಿ ತನ್ನ ಅನುಭವಕ್ಕೆ ಗಮ್ಯನಲ್ಲದೆ ಅನ್ಯರು ತಂದು ಅದನ್ನು ನನ್ನಲ್ಲಿ ಪ್ರತಿಷ್ಠಾಪಿಸಲಿಲ್ಲ. ವಿಶ್ವಬ್ರಹ್ಮಾಂಡಗಳ ಅನಂತವಿಲಾಸಕ್ಕೆ ತಾನೆ ಮೂಲಕಾರಣವಾಗಿ, ತನ್ನ ಕುರುಹನೆಲ್ಲಿಯೂ ತೋರದೆ, ಎಲ್ಲೆಲ್ಲಿ ಭರಿತವಾಗಿ ನಿಂದ ನಿರಾಳ ಅಂತರಂಗದ ಒಡೆಯನನ್ನು ಕಂಡು, 'ನಾನು ನೀನಾಗಿ' ನಿಂದ ನಿಲವು ಅನುಭವಕ್ಕೆ ಸಾಧ್ಯ. ಶರಣರು ಶೂನ್ಯವನ್ನು ಸಂಪಾದಿಸಿಕೊಂಡುದು ಈ ಅನುಭವಮಾರ್ಗದಿಂದಲೆ ಎಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಪ್ರಭು ದೇವರ ಶೂನ್ಯಸಂಪಾದನೆ 'ಅಲ್ಲಮಪ್ರಭುರಾಯನ ಪರಮಾನುಭಾವ ಬೋಧೆ'[2] ಎಂಬ ಮಾತನ್ನು ಗೂಳೂರ ಸಿದ್ಧವೀರಣ್ಣೊಡೆಯರು ಗ್ರಂಥಾರಂಭದಲ್ಲಿಯೆ ಹೇಳಿಬಿಟ್ಟಿದ್ದಾರೆ. ಅಂತೆಯೆ ಈ 'ಅನುಭವ'[3]ದ ಅಥವಾ ಈ ಪರಮಾನುಭಾವದ ಮರ್ಮವನ್ನು ತಿಳಿಯದೆ 'ಶೂನ್ಯಸಂಪಾದನೆ'ಯನ್ನು ಓದುತ್ತ ಹೋದರೆ. ಅದರ ದಿವ್ಯ, ಭವ್ಯ ಅಂತರಂಗ ನಮ್ಮಿಂದ ಜಾರಿ ಕಣ್ಮರೆಯಾಗುವ ಸಂಭವವೇ ಸಂಭವ.

'ಹಾಗಾದರೆ ಅನುಭವವೆಂದರೇನು,' ಎಂದು ಕೇಳುವಿರಾ? 'ಹಾಗಾದರೆ ಅನು ಭವವೆಂದರೇನು' – ಎಂಬ ಧ್ವನಿರೂಪದ ಶಬ್ದಗಳು ನಿಮ್ಮ ಮುಖದಿಂದ ಹೊರಟು, ನನ್ನ ಕಿವಿಯ ಮುಖವಾಗಿ ನನ್ನ ಒಳಗೆ ಪ್ರವೇಶ ಮಾಡಿದುವು. ಅಲ್ಲೆ ಹೋಗಿ ನನ್ನ ಅರಿವಿನಲ್ಲಿ ಮೂಡಿ ಅಲ್ಲಿಯೇ ವಿಚಾರತರಂಗಗಳನ್ನು ಎಬ್ಬಿಸಿದುವು. ನಿಮ್ಮ ಶಬ್ದದ ಅರ್ಥ ನನಗೆ ಹೊಳೆಯಿತು. ಒಳಗೆ 'ಅನುಭವವೆಂದರೇನು?' ಎಂಬ ವಿಷಯವಾಗಿ ಆಲೋಚನೆ ನಡೆದಿದೆ. ನಿಮಗೆ ಉತ್ತರ ಕೊಡುವ ಮೊದಲು ಒಂದೆರಡು ನನ್ನ ಮಾತು ನಿಮ್ಮ ಮುಂದೆ ಇಡುತ್ತೇನೆ: ನನ್ನ ಕಣ್ಣಿನ ಬಾಗಿಲಲ್ಲಿ ನಿಮ್ಮ ದೇಹ ಹಾಯ್ದು ನನ್ನೊಳಗೆ ಮೂಡಿ ನೀವು ನನ್ನೊಳಗಲ್ಲ, ನನ್ನ ಹೊರಗೆ, ನನ್ನ ಇದಿರು ಖುರ್ಚಿಯ ಮೇಲೆ ಕುಳಿತಿರುವುದು ಕಾಣುತ್ತದೆ. ನಿಮ್ಮ ದೊಡ್ಡ ರೂಪ ಅತಿ ಸಣ್ಣ ಬಾಗಿಲಲ್ಲಿ ಹೊಕ್ಕು ಒಳಗೆ ಬಂದು, ಹೊರಗೆ ನಿಂತಿರುವುದು ಇದೊಂದು ದೊಡ್ಡ ಬೆಡಗಲ್ಲವೆ? ಈ ಬೆಡಗನ್ನೆ ನಾನು ನಿಮ್ಮ ರೂಪದ ಅನುಭವ ಎಂದು ಹೇಳುವುದು. ನಿಮ್ಮ ಶಬ್ದ ಗಳ ಧ್ವನಿರೂಪ ತರಂಗದ ಅನುಭವ – ಅದೂ ಅಂತಹದೇ ವಿಚಿತ್ರ ರಹಸ್ಯ. ಹೀಗೆ

೧. ಶೂ. ಸಂ. ಪು. ೧೬೧, ಪದ ೪.

೨. ಅದೇ ಪು. ೩.

೩. ಅನುಭವ ಮತ್ತು ಅನುಭಾವ ಶಬ್ದಗಳು ಸಮಾನಾರ್ಥದಲ್ಲಿಯೆ ಬಳಸಿಕೊಂಡಂತೆ ತೋರುತ್ತದೆ.

ಹೊರಗಿಂದ ಒಳಗೆ ಬಂದು, ಹೊರಗೆ ತೋರುವ ಶಬ್ದಸ್ಪರ್ಶಾದಿಗಳ ಅನುಭವ ಇದೊಂದು ಬಗೆ. ಬೇಕಾದರೆ ಇದನ್ನು ಬಹಿರಂಗದ ಅನುಭವ ಎಂದು ಕರೆಯಿರಿ.

ನಿಮ್ಮ ರೂಪಾದಿಗಳ ಅನುಭವ ನನಗಿರುವಂತೆ ನನ್ನ ರೂಪಾದಿಗಳ ಅನುಭವವೂ ನಿಮಗಿದೆ ಎಂದು ನನ್ನ ಗೃಹೀತ. ನನ್ನ ಹೊರಗು ನಿಮ್ಮ ಅನುಭವಕ್ಕೆ ಬಂದಿದೆ ನಿಜ. ಆದರೆ ನನ್ನ ಒಳಗು ನಿಮ್ಮ ಅನುಭವದ ಹೊರಗು. 'ಅನುಭವವೆಂದರೇನು?'–ಎಂದು ನೀವು ಕೇಳಿದ ಕೂಡಲೆ ನಿಮ್ಮ ಈ ಶಬ್ದಗಳಲ್ಲಿ ಹುದುಗಿರುವ ಅರ್ಥ, ಪ್ರಶ್ನಾರ್ಥಕ ಭಾವ, ನಿಮ್ಮ ಪ್ರಶ್ನೆಗೆ ಏನು ಉತ್ತರ ಕೊಡಬೇಕೆಂಬ ನನ್ನ ಆಲೋಚನೆಯ ಮಗ್ನಸ್ಥಿತಿ ಇವು ನನ್ನ ಒಳಗೆ, ನನ್ನ ಅರಿವಿನಲ್ಲಿಯೆ ಎದ್ದು ಧ್ವನಿರೂಪ ಶಬ್ದದ ವಿಚಿತ್ರ ವಸನ ವನ್ನುಟ್ಟು ನನ್ನ ಬಾಯ ಬಾಗಿಲಿಂದ ಹೊರಗೆ ಧುಮುಕಲು ಯತ್ನಿಸುತ್ತಿವೆ. ಆದರೂ ಮತ್ತೆ ಮತ್ತೆ ಆಲೋಚನೆ, ಮತ್ತೆ ಮತ್ತೆ ವಿಚಾರ ನನ್ನ ಒಳಗೆ,– ನಾನು ನಿಮಗೆ ಕಳಿಸುತ್ತಿರುವ ವಿಚಾರ ಸರಿಯೋ ತಪ್ಪೋ ಎಂದು. ನನ್ನಲ್ಲಿ ಕೆಲಸ ನಡೆಸಿರುವ ಈ ನನ್ನ ಒಳಗು ನನ್ನ ಸ್ವಂತ ಆಸ್ತಿ, ಅದು ನನ್ನ ಸಂಪೂರ್ಣ ಅಧಿಕಾರಕ್ಕೆ ಒಳಪಟ್ಟ ಸಾಮ್ರಾಜ್ಯ. ಯಾವ ಚಕ್ರವರ್ತಿ ಸಾಮ್ರಾಟನಿದ್ದರೂ ಈ ನನ್ನ ಸ್ವಂತ ಆಸ್ತಿಯಾದ ಅನುಭವವನ್ನು ಕಾಣಲಾರ; ಕಸಿದುಕೊಳ್ಳುವ ಮಾತಂತೂ ಆಕಾಶದಾಚೆ. ಹೀಗೆ ನನ್ನ ಒಳಗನ್ನು ನಾನು ನೋಡುತ್ತ ಅನುಭವಿಸುತ್ತಿರುವಂತೆ, ನಿಮ್ಮ ಒಳಗು ಏನು ಮಾಡು ತ್ತಿದೆಯೋ ನನಗೆ ಗೊತ್ತಿಲ್ಲ. ಅದು ನಿಮ್ಮ ಸ್ವಂತ ಆಸ್ತಿ; ನಿಮ್ಮ ಸ್ವಂತ ಅನುಭವ. ನನ್ನ ಅಥವಾ ನಿಮ್ಮ, ಆ ರಾಮಣ್ಣನ ಇಲ್ಲವೆ ಆಚೆಮನೆಯ ಕಾಮಣ್ಣನ – ಇಷ್ಟೇ ಅಲ್ಲ, ಪಶುಪಕ್ಷಿ ಹುಳುಹುಪ್ಪಡಿ ಗಿಡಬಳ್ಳಿ ಮಣ್ಣುಕಲ್ಲು ನದಿಪರ್ವತ ಮುಂತಾದ ಶಬ್ದ ಸ್ಪರ್ಶ ರೂಪ ರಸ ಗಂಧಾತ್ಮಕವಾದ ವಿಶ್ವಪ್ರಪಂಚ, ಕಣ್ಣು ಕಿವಿ ಮೊದಲಾದ ಜ್ಞಾನೇಂದ್ರಿಯಗಳ ಅಳವಿನೊಳಗೆ ಸಿಕ್ಕರೆ, ಇವೆಲ್ಲ ಮಾನವರ ಅನುಭವಕ್ಕೆ ಬರುತ್ತವೆ. ಪಶುಪಕ್ಷಿಗಳು, ಮರಬಳ್ಳಿಗಳು ಈ ಅನುಭವವನ್ನು ಪಡೆಯುತ್ತಿರಬಹುದು. ಕಲ್ಲುಮಣ್ಣಿಗೆ ಅರಿವು, ಅಂತೆಯೆ ತಮಗೆ ಹೊರಗೆನಿಸುವ ಬಹಿಃಪ್ರಪಂಚದ ಅನುಭವವಿದೆಯೋ ಇಲ್ಲವೋ ಯಾರಿಗೆ ಗೊತ್ತು? ಇಲ್ಲವೆಂದು ನಾವು – ಮನುಷ್ಯಪ್ರಾಣಿಗಳು ಭಾವಿಸಿದ್ದೇವೆ. ತನಗೆ ಹೊರಗೆನಿಸುವ ಪ್ರಪಂಚವನ್ನು ಬೇಕಾದವರು ಸಾಧ್ಯವಿದ್ದಮಟ್ಟಿಗೆ ಅನುಭವಿಸಬಹುದು. ಹಾಗೆಯೇ ನಾನು ಎಂದು ಹೇಳಿಕೊಳ್ಳುವ ನನ್ನ ದೇಹ, ನನ್ನಿಂದ ಹೊರಡುವ ಶಬ್ದ, ನನ್ನ ಮೈ ಕೈಯ ಸ್ಪರ್ಶ, ನನ್ನ ದೇಹದ ಸುಗಂಧ ದುರ್ಗಂಧ ಮುಂತಾದ ವಾಸು ಬಹಿಃಪ್ರಪಂಚದಂತೆಯೆ ನನ್ನ ಜ್ಞಾನೇಂದ್ರಿಯ ಮುಖವಾಗಿ ಒಳಹೊಕ್ಕು, ನನ್ನ ದೇಹ ಪ್ರಪಂಚದ ಅನುಭವವೂ ನನಗೆ ಆಗುತ್ತದೆ. ಈ ಮಾತನ್ನು ಸ್ವಲ್ಪ ಗಭೀರವಾಗಿ ಆಲೋ ಚಿಸಿದರೆ, ನನ್ನನ್ನುಳಿದ ಬಹಿಃಪ್ರಪಂಚ ಸುರುವಾದುದೆಲ್ಲಿಂದ? ನನ್ನ ದೇಹಪ್ರಪಂಚ ಎಲ್ಲಿ ಸುರುವಾಗಿ ಮುಗಿವುದೆಲ್ಲಿಗೆ? – ಎಂಬ ತೊಡಕು ಜಗಿಯಾಗುತ್ತದೆ.

ಅದು ಏನೇ ಇರಲಿ, ನನ್ನ ಅರಿವಿನಲ್ಲಿ ಮೂಡಿ ವ್ಯವಹರಿಸುವ ನನ್ನ ಬುದ್ಧಿಯ ತರ್ಕ ಪ್ರತಿತರ್ಕ, ಆಲೋಚನೆ, ವಾದ ವಿವಾದಗಳೆಲ್ಲ ನಿಮಗೆ – ಅನ್ಯರಿಗೆ ಅಗಮ್ಯ ಅಗೋಚರವಾಗಿ, ನನ್ನಲ್ಲಿ ಒಳಗಿಂದೊಳಗೆ ನಡೆದಿರುವ ಅನುಭವ ನನ್ನದು. ನನ್ನ

ರೂಪಾದಿಗಳನ್ನು ನೀವು ಅನುಭವಿಸಬಲ್ಲಿರಿ. . ಆದರೆ ನನ್ನೊಳಗೆ ನಡೆದಿರುವ ಅನುಭವವನ್ನು ನೀವು ಅನುಭವಿಸಲಾರಿರಿ. ಅದರಂತೆ ನಿಮ್ಮ ಅನುಭವದ ಸಂಗತಿ ನನಗೆ. ಬುದ್ಧಿಯ ವ್ಯಾಪಾರದಂತೆ ನನ್ನ ಮನಸ್ಸಿನ ಸುಳಿದಾಟ ನನಗೆ ಗೊತ್ತು: ನಿಮ್ಮದು ನಿಮಗೆ ವೇದ್ಯ. ಇದರಂತೆ ನನ್ನ ಸುಖ ದುಃಖ, ರಾಗ ದ್ವೇಷ. ಹರ್ಷ ಉದ್ವೇಗ. ಕಾಮ ಕ್ರೋಧ ಮುಂತಾದುವೆಲ್ಲ ನನ್ನ ಸ್ವಂತ ಅನುಭವ. ನಿಮ್ಮ ಪ್ರಶ್ನೆಗೆ ಉತ್ತರ ಕೊಡುವ ಭರದಲ್ಲಿರುವ ನನ್ನ ತಲೆಯ ಮೇಲೆ ಹೊರಗಿಂದ ಯಾರೋ ಒಗೆದ ಕಲ್ಲು ಬಿದ್ದು ತಲೆಯೊಡೆದು ರಕ್ತ ಸೋರಿದರೆ. ನಿಮಗೆ ನನ್ನ ಒಡೆದ ತಲೆ, ಸ್ರವಿಸುವ ರಕ್ತ ಕಾಣಬಹುದು. ನನಗೆ ದೊಡ್ಡ ಗಾಯ ಆಯಿತು, ಬಹಳ ನೋವಾಗಿರಬಹುದೆಂದು ನೀವು ವ್ಯಥೆ ಪಡಬಹುದು. ಆದರೆ ಈ ನಿಮ್ಮ ವ್ಯಥೆಯಷ್ಟೇ ನಿಮ್ಮ ಅನುಭವ: ನನ್ನ ನೋವಿನ ಅನುಭವ ನಿಮಗಿಲ್ಲ. ನಿಮ್ಮ ವ್ಯಥೆ ಅನುಕಂಪೆಯಿಂದ ಪ್ರೇರಿತವಾದುದಷ್ಟೇ.

ಹೀಗೆ ನನ್ನ ಒಳಗೆ ಅಥವಾ ನಿಮ್ಮ ಒಳಗೆ ನಡೆದಿರುವ ಅಂತಃಕರಣಗಳ ಚೇಷ್ಟೆಯ ಅನುಭವವನ್ನು ಅಂತರಂಗದ ಅನುಭವವೆಂದು ಹೆಸರಿಸಿರಿ – ನಿಮಗೆ ಸರಿದೋರಿದರೆ. ಹೊರಗಿಂದ ಒಳಗೆ ಬಂದು ಹೊರಗೆ ತೋರುವ ಬಹಿಃಪ್ರಪಂಚದ ಅನುಭವವನ್ನು ಬಹಿರಂಗದ ಅನುಭವವೆಂದು ಕರೆದರೆ, ಒಳಗೆ ಮೂಡಿ ಒಳಗೇ ಕಾಣುವ ಅನುಭವ ಅಂತರಂಗದ ಅನುಭವ ಎಂದ ಹಾಗಾಯ್ತು. ಈ ದ್ವಿವಿಧ ಅನುಭವಗಳ ಸೀಮೆ ಸಂಬಂಧವನ್ನು ನಿರ್ಧರಿಸುವುದು ದುಸ್ಸಾಧ್ಯ ಅಥವಾ ಅಸಾಧ್ಯ. ಏಕೆಂದರೆ ಮಾನವನ ಬುದ್ಧಿ ಇಲ್ಲವೆ ಕಲ್ಪನೆಯ ಕೂಸುಗಳಾದ ಈ ಗಡಿರೇಖೆಗಳು ಪರಮಾರ್ಥತಃ ಇವೆಯೋ ಇಲ್ಲವೋ ಯಾರಿಗೆ ಗೊತ್ತು? ನನ್ನ ಮನೆಯಲ್ಲಿ ವಾಸವಾಗಿ ಇರುವ ಬಯಲನ್ನು ನೆರೆ ಮನೆಯಲ್ಲಿ ಬೀಡುಬಿಟ್ಟಿರುವ ಬಯಲಿನಿಂದ ಬೇರೆ ಮಾಡುವ ಸೀಮಾರೇಷೆಯೊಂದಿದೆಯೆ? ನೆರೆಯುವರಾಗಿರುವ ಸಂಬಂಧ ಈ ಬಯಲುಗಳಿಗೆ ಅನ್ವಯವಾಗುತ್ತಿದೆಯೆ? ನಮ್ಮ ಮತ್ತು ನೆರೆಮನೆಯ ಒಳಗೆ – ಅಂತರಂಗದಲ್ಲಿ ಬಯಲು ವಾಸಮಾಡಿಕೊಂಡಿದೆಯೆ? ಅಥವಾ ಮನೆಯಲ್ಲದ, ಮನೆಯಿಲ್ಲದ ಬಯಲಲ್ಲಿ ಮನೆ ವಾಸಮಾಡಿಕೊಂಡು ಬಾಳುತ್ತಿದೆಯೆ? ದೇಹದ ಮನೆಯಲ್ಲಿ ಹೊರಗೊಳಗೆಂದು ನಡೆದಿರುವ ಅನುಭವದ ಮಾತು ಹೀಗೆಯೇ ಇದ್ದಂತಿದೆ.

ಇದೋ ಇಲ್ಲಿ ನೋಡಿ, ಅನುಭವದ ಮತ್ತೊಂದು, ಬೇರೊಂದು ಬಗೆಯಿದೆ:

ಒಳಗೆ (ಗು?) ಹೊರಗಾಯಿತ್ತು, ಹೊರಗೆ (ಗು?) ಒಳಗಾಯಿತ್ತು.
ತಿಳಿದು ನೋಡಲು ಒಳಹೊರಗೆಂಬುದಿಲ್ಲ ನೋಡಾ.
ಒಳಹೊರಗು ಕೂಡಿದ ತ್ರಿಮಂಡಲದ ಬೆಡಗಿನ ತಾವರೆಯೊಳಗೆ ಥಳಥಳಿಸುವ
ದಿವ್ಯಪೀಠದ ಮೇಲೆ ಹೊಳೆವ ಲಿಂಗವದು
ಒಳಹೊರಗು ಬೆಳಗುತ್ತಿಪ್ಪ ಶುದ್ಧ ಜ್ಯೋತಿ ನೋಡಯ್ಯಾ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನೆ (ನಿ?) ಲವು ತಾನೆ ನೋಡಾ.[೧]

೧. ಸ್ವ. ಸಿ. ವ. ಪು. ೬೭-೬೮, ವ. ೨೫೯.

ಈ ಮೌನದ ಅನುಭವ ನನಗೆ ಬಂದಿಲ್ಲ. ನಿಮ್ಮ ವಿಚಾರ ನಿಮಗೆ ಗೊತ್ತು. ಇಲ್ಲಿಯು ಭಾವ ನನ್ನ ಕಲ್ಪನೆಗೆ ಗೋಚರಿಸುವಂತಿದೆ. 'ಒಳಗು ಹೊರಗಾಯಿತು, ಹೊರಗು ಒಳಗಾಯಿತು.' ಇದು ನನಗೆ ನಿಮಗೆ ಎಲ್ಲರಿಗೆ ಸಾಮಾನ್ಯವಾದ ಲೋಕಾನುಭವ ಅಂತರಂಗದೊಳಗೆ ಆಗಲಿ ಬಹಿರಂಗದೊಳಗೆ ಇರಲಿ ಅಷ್ಟು ಒಂದು ಮಾತು ಸ್ಪಷ್ಟ. ಒಳಗು ಎಂಬುದು ಪಸರಿಸಿ ಹೊರಗನೆಲ್ಲ ಮುಚ್ಚಿ ಒಳಗುಗೊಳಿಸಿ. ಹೊರಗು ಒಳಗನೊಳಗೆ ಇಳಿದು ಒಳಗನೆಲ್ಲ ವ್ಯಾಪಿಸಿ ಹೊರಗುಗೊಳಿಸಿದ ಬಳಿಕ ಒಳಗೆ ಹೊರಗಿಲ್ಲ. ಹೊರಗೆ ಒಳಗಿಲ್ಲ. ತಿಳಿದು ಅಂದರೆ ನಿರ್ಮಲನಾಗಿ ನಿಷ್ಕಲ್ಮಷನಾಗಿ. ನಿರಾಮಯನಾಗಿ ನಿರಂಜನನಾಗಿ ನಿರಘ ನಿರೀಹನಾಗಿ. ನಿರ್ಮಮ ನಿರಹಂಕಾರನಾಗಿ ನೋಡಿದರೆ ಹೊರಗನ್ನು ಮಾತ್ರ ನೋಡಬಲ್ಲ ಕೇಳಬಲ್ಲ ಕಣ್ಣು ಕಿವಿ ಮುಂತಾದ ಜ್ಞಾನೇಂದ್ರಿಯಗಳಿಂದಲ್ಲ. ಆ ಇಂದ್ರಿಯಗಳನ್ನು ದೀವಿಗೆ ಹಚ್ಚುವ ಸ್ವಂತ ಜ್ಞಾನದಿಂದ. ಒಳಹೊರಗನ್ನರಿ ತನ್ನ ತಾ ನೋಡಬಲ್ಲ ಅರಿವಿನ ಕಣ್ಣಿಂದ – ನೋಡಿದರೆ ಒಳಗು ಹೊರಗೆಲ್ಲ ಹರಿದು ಹಬ್ಬಿ ಹೊರಗಾಗಿದೆ, ಅದರಂತೆ ಹೊರಗು ಒಳಗೇ ಆಗಿದೆ. ಹೀಗೆ ತಿಳಿದು ನೋಡಿದರೆ ಒಳಗೆಂಬುದಿಲ್ಲ. ಹೊರಗೆಂಬುದಿಲ್ಲ. ಒಳಗು ಹೊರಗು ಕೂಡಿ ಏಕಾರ್ಥವಾಗಿ ಏಕಾಕಾರವಾಗಿ ನಿಂದಿವೆ ಈ ಅನುಭವದಲ್ಲಿ.

ಈ ಅನುಭವದೃಷ್ಟಿಯನ್ನು ನನ್ನ ಮತ್ತು ನಿಮ್ಮ ನಡುವೆ ನಡೆಯುವ ವ್ಯವಹಾರಕ್ಕೆ ಇಳಿಸಿ ನೋಡಿದರೆ. ಪರಿಸ್ಥಿತಿಯಲ್ಲಿ ಅತ್ಯದ್ಭುತವಾದ ಬದಲಾವಣೆ ಉಂಟಾಗುತ್ತದೆ. ಅಲ್ಲವೆ? ನಾನು ಮತ್ತು ನೀವು – ಅಂದರೆ ವಿಶ್ವಪ್ರಪಂಚ ಎಂದು ಬೇಕಾದರೆ ನೀವು ವಿಸ್ತಾರಮಾಡಿಕೊಳ್ಳಿ. ನಿಮಗೆ ಇಷ್ಟವಾದರೆ ನನ್ನನ್ನು ನೀವೇ ಅಗಲ ಮಾಡಿ ನೋಡಿ. ನನಗೆ, ನನ್ನ ಕಣ್ಣು ಕಿವಿಗಳಿಗೆ ಇದಿರಿಟ್ಟು ತೋರುವ ನೀವು ನನ್ನ ಹೊರಗು. ನೀವು ಹಾಗೆ ನನಗೆ ಹೊರಗಾಗಿ ತೋರಲೇಬೇಕು. ಹೀಗೆ ನಿಮ್ಮನ್ನು ನನ್ನಿಂದ ಹೊರಗೆ ಹಾಕಿ ಹೊರಗೆಂದು ನೋಡಿದರೆ ಅದು ನಿಮ್ಮ ತಪ್ಪಲ್ಲ, ತಪ್ಪು ನನ್ನದು. ದಯವಿಟ್ಟು ಕ್ಷಮಿಸಿ. ಅಥವಾ ಪಾಪ! ನಾನಾದರೂ ಏನು ಮಾಡಲಿ? ನನ್ನ ಕಣ್ಣು ಕಿವಿಗಳಿಗೆ. ಇಷ್ಟೇ ಏಕೆ, ನನ್ನ ಅಂತಃಕರಣಗಳಾದ ಮನಬುದ್ಧಿಗಳಿಗೆ 'ಸದಾಶಿವನಿಗೆ ಅದೇ ಉದ್ಯೋಗ' ಎಂದು ಹೇಳುವಂತೆ. ಹೊರಗೆ ನೋಡುವುದೇ ಸತತೋದ್ಯೋಗವಾಗಿ ಬಿಟ್ಟಿದೆ. ಅದಕ್ಕೆ ಅದೇ ಸ್ವಭಾವ, ಅದೇ 'ಚಟ'ವಾಗಿ ಹೋಗಿದೆ. ನೀವು ನನ್ನನ್ನು ಬೇಕಾದರೆ ಸದಾ + ಅಶಿವ, ಸದಾಶಿವನೆಂದು ಕರೆಯಿರಿ. ನನಗೆ ಸಿಟ್ಟಿಲ್ಲ. ಆದರೆ ಕಲಿತ ಚಟ ಕಲ್ಲು ಹಾಕಿದರೂ ಬಿಡುವಂತಿಲ್ಲ. ನಿಮಗೂ ಈ ಚಟ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಮನುಷ್ಯಪ್ರಾಣಿಗಳಿಗೆಲ್ಲ ಇದು ಸಾಮಾನ್ಯ ಧರ್ಮವೆಂದು ಬಲ್ಲವರು ಹೇಳುತ್ತಾರೆ: ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಕಣ್ಣಿಗೆ ತನ್ನ ಇದಿರು ಕಾಣುತ್ತದೆ. ಆದರೆ ಕಣ್ಣು ತನಗೆ ತಾನೇ ಕಾಣುವುದಿಲ್ಲ. ಮನ ಬುದ್ಧಿ ಬಹಿರ್ಮುಖವಾಗಿ ವ್ಯವಹರಿಸುತ್ತಿದ್ದರೂ ಅವು ಇಷ್ಟಪಟ್ಟರೆ ತಾವು ನಡೆಸಿರುವ ಕ್ರಿಯೆಯನ್ನು ನೋಡಬಲ್ಲವು. ಆದರೂ ತಾವು ನಡೆಸಿರುವ ಜ್ಞಾನಕ್ರಿಯಾ ಕಲಾಪಕ್ಕೆ ಜ್ಞಾನ-ಚೈತನ್ಯ ಎಲ್ಲಿಂದ ಹರಿದು ಬರುತ್ತದೆ? ಹೇಗೆ ಹರಿದು ಬರುತ್ತದೆ?

ಇಂಥ ಜ್ಞಾನ ಚೈತನ್ಯದ ಕೇಂದ್ರಸ್ಥಲವೊಂದಿದೆಯೆ? – ಎಂದು ತಮ್ಮನ್ನು ತಾವು ಹೊರಳಿ ನೋಡಿಕೊಳ್ಳುವ ವಿಚಾರ, ಶಕ್ತಿ ಇಲ್ಲ. 'ತಮ್ಮ ಬೆನ್ನು ತಮಗೆ ಕಾಣಿಸುವುದಿಲ್ಲ' ಎಂದು ಹೇಳುತ್ತಾರಲ್ಲ, ಹಾಗೆ ಅಂತರಂಗದಲ್ಲಿ ವ್ಯವಹರಿಸುತ್ತಿರುವ ಮನ ಬುದ್ಧಿಗಳಿಗೆ ತಮ್ಮ ಬೆನ್ನು ತಮಗೆ ಕಂಡಿಲ್ಲ. ಆ ಬೆನ್ನು ತಮಗಿದೆ ಎಂಬ ಅರಿವೂ ಅವಕ್ಕಿದ್ದಂತೆ ತೋರುವುದಿಲ್ಲ.

ಕರಣ ಇಂದ್ರಿಯಗಳ ನಾಳದಲ್ಲಿ ಹೊರಮುಖವಾಗಿ ಹರಿವ ಜ್ಞಾನವನ್ನು ಒಬ್ಬುಳಿ ಮಾಡಿ, ಒಳಮುಖವಾಗಿ ತನ್ನ ಒಳಗನ್ನು ನೋಡಿದರೆ, ಅನುಭವಕ್ಕೆ ಬರುವುದೇನು? 'ಒಳಹೊರಗು ಕೂಡಿದ ತ್ರಿಮಂಡಲದ ಬೆಡಗಿನ ತಾವರೆಯೊಳಗೆ ಥಳಥಳಿಸುವ ದಿವ್ಯ ಪೀಠದ ಮೇಲೆ ಹೊಳೆವ ಲಿಂಗ.,..' ಅಂದರೇನು? 'ಲಿಂಗವದು ಒಳಹೊರಗು ಬೆಳಗುತಿಪ್ಪ ಶುದ್ಧ ಜ್ಯೋತಿ ನೋಡಯ್ಯಾ.' ತನ್ನ ಒಳಗನ್ನು ಅದರಂತೆ ತನ್ನ ಹೊರಗನ್ನು ಒಳಗುಹೊರಗೆಂಬ ಬಿರುಕಿಲ್ಲದೆ ಸ್ವಯಂ ಜ್ಯೋತಿರ್ಲಿಂಗ ಬೆಳಗಿದರೆ, ಒಳಹೊರಗು, ನಾನು ನೀನು ಎಂಬ ಕತ್ತಲೆ ಹರಿದು ಎಲ್ಲ ಬೆಳಗು. ಇದೇ ಚಿದ್‌ಬೆಳಗು. ವಿಶ್ವಬ್ರಹ್ಮಾಂಡಗಳ ತೋರಬಲ್ಲ ಈ ಬೆಳಗು ಯಾರಿಗೂ ತೋರಲಿಲ್ಲ. ಆದರೆ ಇದನ್ನು 'ಯಃ ಪಶ್ಯತಿ ಸ ಪಶ್ಯತಿ.'[೧] ವಿಶ್ವವನ್ನೆ ವ್ಯಾಪಿಸಿ, ವಿಶ್ವಾತೀತವಾಗಿ ಬೆಳಗುತ್ತಿರುವ ಈ ಚಿದ್‌ಬೆಳಗಿನ ಮಹಾಸಾಗರ – ಶರಣರಲ್ಲಿ ಒಡೆದು ಮೂಡಿದ ಈ ಸ್ವಯಂಭು ಲಿಂಗಸ್ಥಲ ಒಳ ಹೊರಗು ಕೂಡಿ ಸಮರಸವಾದ ಮಹಾಸ್ಥಲ. ಈ ಸ್ಥಲದ ಅನುಭವ ನನಗೆ ಬಂದರೆ, ನನಗೆ ಒಳಗೆಂಬುದಿಲ್ಲ. ನನಗೆ ಹೊರಗು ಎಂಬ ನೀವಾಗಲಿ, ನಿಮ್ಮಂತೆ ನನಗೆ ಇದಿರಿಟ್ಟು ತೋರುವ ವಿಶ್ವಪ್ರಪಂಚವಾಗಲಿ ಉಳಿದಿಲ್ಲ. ಇಲ್ಲಿ ಉಳಿದಿರುವ ಉಳಿಮೆ ತಾನು – ಲಿಂಗ, ಶುದ್ಧಜ್ಯೋತಿ. ನಾವು – ನೀವು – ವಿಶ್ವದ ಮೂಲಸ್ಥಲ, ನಿಜಸ್ಥಲ ಇದು. ಈ ನಿಜಸ್ಥಲವನ್ನು ಮುಟ್ಟಿ ಅನುಭವಿಸಿ ನಿಜದ ನಿರಾಳದಲ್ಲಿ ನಿಂದಿರುವ ಮಹಾನು ಭಾವಿಗಳ ಲೋಕೋತ್ತರವಾದ ಇಂಥ – ಅನುಭವ ಒಂದಿದೆ. ಮೊದಲು ಹೇಳಿದ ಬಹಿರಂಗ – ಅಂತರಂಗದ ಅನುಭವದ ಆಚೆಸೀಮೆಯಲ್ಲಿ ಮೀರಿ ತೋರುವ ದಿವ್ಯದ ಅನುಭವ ಇದು.

ನದಿಯ ನೀರು ಎಲ್ಲಿಂದ ಬಂತು? ಮೇಘಜಾಲದಿಂದ. ಮೇಘಮಾಲೆಯ ತವರೂರು, ಸಮುದ್ರ. ನದಿ ಹರಿದು ಸಮುದ್ರವನ್ನು ಕೂಡಿದರೆ ನದಿ ಸಮುದ್ರ ಆಯ್ತು, ಸಮುದ್ರ ನದಿಯಾಯ್ತು. ಒಳಹೊರಗೆಲ್ಲ ಸಮುದ್ರವೆ ತುಂಬಿ ಜಲಸಮುದ್ರವೆ ತಾನಾದ ನದಿಗೆ ಸಮುದ್ರದ ಇರವನ್ನು ಬಿಟ್ಟು ಬೇರೊಂದಿರವಿಲ್ಲ: ಅದಕ್ಕೆ ಅರಿವಿದ್ದರೆ ಸಮುದ್ರವೆ ತಾನೆಂಬ ಅರಿವಲ್ಲದೆ ಭಿನ್ನ ಬುದ್ಧಿ, ಭಿನ್ನ ಜ್ಞಾನವಿಲ್ಲ. ಹೀಗೆ ಒಂದೊಂದರಲ್ಲಿ ಸಮರಸವಾದ ಅನುಭವವೇ ನದಿಯ ಐಕ್ಯಾನುಭವ, ನಿಜಾನುಭೂತಿ, ಸಹಜ ಭಾವ. ಸಮುದ್ರ ನದಿಗೆ ಚರಮ ವಿಶ್ರಾಂತಿಸ್ಥಾನ, ನಿಜೈಕ್ಯಸ್ಥಲ. ಇಲ್ಲಿಂದ ಮುಂದೆ ನದಿಗೆ ಹರಿದಾಡುವ ದಂದುಗವೇ ಇಲ್ಲ. ನಿಜಸ್ಥಲದಲ್ಲಿ ಸ್ವಸ್ಥಿರವಾಗಿ ನಿಂದ ಬಳಿಕ

---

೧. ಭ. ಗೀ. ಅ. ೫, ಶ್ಲೋ. ೫.

ಮುಂದೇನು? ಹಿಂದೆ ಮುಂದೆ, ಮೇಲೆ ಕೆಳಗೆ, ಒಳಗೆ ಹೊರಗೆ, ನದಿ ನಾನು-ನೀನು-ವಿಶ್ವ ಅತ್ಯತಿಷ್ಠದ್ದಶಾಂಗುಲಲಿಂಗ–ಕೂಡಿ ಸಮರಸವಾಗಿ ಏಕಾರ್ಥವಾಗಿ ಏಕಾಕಾರವಾಗಿ ನಿಂದ ನಿಲವಿನ ಬ್ರಹ್ಮಾನುಭವದಲ್ಲಿ ಜ್ಞಾನದ ಪರಮರಹಸ್ಯ ತನ್ನ ತಾನೆ ಪ್ರಕಟವಾಗಿ ಪ್ರಜ್ವಲಿಸುತ್ತದೆ. ಅವ್ಯಾಹತವಾಗಿ, ಅವಿಶ್ರಾಂತವಾಗಿ, ಯುಗಯುಗಾಂತರದಲ್ಲಿ ವೇದಾಗಮ ಶಾಸ್ತ್ರ ದರ್ಶನ ಮತ ತತ್ತ್ವ ವಿಜ್ಞಾನ ವಿಚಾರವಾಗಿ ಹರಿದು ಹರಿದು, ಬಳಲಿ ಬೆಂಡಾಗಿ, ಹಸಿದು ಹಾಯಾಗಿರುವ ಅರಿವಿಗೆ ಈ ದಿವ್ಯಾನುಭವದಲ್ಲಿ ಮಹಾತೃಪ್ತಿ ದೊರೆಯುತ್ತದೆ. ತನ್ನ ತಪ್ಪಿಸಿಕೊಂಡು ಏನು ಮಾಡಿ ತಿಂದುಂಡರೂ ಸಮಾಧಾನವಿಲ್ಲದ ಅರಿವು ಇಲ್ಲಿ ತನ್ನ ಬ್ರಹ್ಮಭಾವವನ್ನು ಕಂಡು ಪರಿಪೂರ್ಣತೃಪ್ತಿಯನ್ನೈದಿ ಪರಮಾನಂದದ ಬ್ರಹ್ಮಸಾಗರವಾಗಿ ನಿಲ್ಲುತ್ತದೆ.

'ಅರಿವಿನ ಆಪ್ಯಾಯನಕ್ಕೆ ಅನುಭಾವವೇ ತೃಪ್ತಿ . . . '[೧] – ಬಸವಣ್ಣನವರ ಈ ಮಾತು ಒಂದು ಮಹಾಸೂತ್ರ. ಹೊಟ್ಟೆ ಹಸಿದರೆ ರೊಟ್ಟಿ ಕೊಡಬಹುದು. ಮನ ಹಸಿದರೆ ಹೊನ್ನು ಹೆಣ್ಣು ಮಣ್ಣು ಸಿಕ್ಕಬಹುದು. ಭಾವ ಹಸಿದರೆ ಗೀತಸಾಹಿತ್ಯವ ನೂಡಬಹುದು. ಬುದ್ಧಿ ಹಸಿದರೆ ವೇದಾಗಮಶಾಸ್ತ್ರಸಂತತಿಯ ತಂದೊಡ್ಡಬಹುದು. ಆದರೆ ಇವಕ್ಕೆಲ್ಲ ಪರಮಾಧಾರವಾದ ಅರಿವಿನ ಆಕಾಶ ಹಸಿದೆನೆಂದರೆ, ಒಂದು ರೊಟ್ಟಿ ಹೋಳಿಗೆ, ಒಂದು ಹೆಣ್ಣು ಹೊನ್ನು ಮಣ್ಣು, ಒಂದು ಶಾಸ್ತ್ರ ವಿಜ್ಞಾನ ವಿಚಾರ ಗೀತ ನೃತ್ಯ ತಣಿಸಬಲ್ಲವೆ? ಇಷ್ಟೇ ಅಲ್ಲ, ಬೇಡಿದುದನ್ನೆಲ್ಲ ನೀಡಿ. ವಾರ್ತೆ ಕೀರ್ತಿಯನ್ನು ನೀಡಿ, ಐಶ್ವರ್ಯ ಅಧಿಕಾರವನ್ನು ಬಡಿಸಿ, ಮಹಾಪಾಂಡಿತ್ಯ ಚಾಣಕ್ಯತನವನ್ನು ನೀಡಿ, ರಾಜ್ಯ ಸಾಮ್ರಾಜ್ಯಗಳನ್ನು ಹಾಕಿ,–ಮತ್ತೆ ಏನು ಬೇಕು ಅದನ್ನೆಲ್ಲ ಎಡೆಮಾಡಿ. ಆದರೆ ಮಾನವನ ಅರಿವಿನ ಎದೆಯಲ್ಲಿ ತೃಪ್ತಿ ಮೂಡಬಲ್ಲುದೆ? ಇಲ್ಲ ಎಂಬುದಕ್ಕೆ ಎದೆಯೇ ಸಾಕ್ಷಿ. ಆದರೆ ಈ ಅರಿವಿನ ಹಸಿವು ತನ್ನ ಪರಮಾನುಭಾವದಿಂದ ಹಿಂಗಿ ಪರಮ ಸಂತೃಪ್ತಿಯಾಗುತ್ತದೆ ಎಂದು ಹೇಳುತ್ತಾರೆ, ಎಲ್ಲ ಕಾಲ ಎಲ್ಲ ದೇಶ ಎಲ್ಲ ಜನಾಂಗದಲ್ಲಿ ಹುಟ್ಟಿ ಎಚ್ಚತ್ತು ಬದುಕಿದ ಮಹಾನುಭಾವಿಗಳು.

ಈ ದಿವ್ಯದರ್ಶಿಗಳ, ಈ ದಿವ್ಯಾನುಭಾವಿಗಳ ಮತದಂತೆ ಸ್ವಾನುಭವವಿಲ್ಲದ ಜೀವನ ವ್ಯರ್ಥ. ಏಕೆ? ಏಸು ಕಲಿತು, ಏಸು ಮಾಡಿ, ಏಸು ಗಳಿಸಿ, ಏಸು ಬಾಳಿದರೇನು? ಏಸು ಉಂಡುಟ್ಟು, ಏಸು ಭೋಗ ಭಾಗ್ಯ ವಿಲಾಸ ಅಧಿಕಾರ ಕೀರ್ತಿಯಲ್ಲಿದ್ದರೇನು? ಲೋಕದೊಡೆಯ ತಾನಾಗಿದ್ದರೂ ಮಾನವನೆದೆಯ ಸಾವಿರ ಮುಖವಾದ ಆಪ್ಯಾಯನ, ಹಸಿವು, ಬಯಕೆ ಹೇಗೂ ಹಿಂಗಲಿಲ್ಲ. ಮಾನವನ ಅಜ್ಞಾನ ಅಹಂಭಾವದಲ್ಲಿ ಮೂಡಿದ ಈ ಹಸಿವು, ದಾಹ ಹೃದಯದ ಗಭೀರದಲ್ಲಿ ಹುದುಗಿರುವ ದಿವ್ಯಾಪೇಕ್ಷೆಯು, ಶಿವಾಪೇಕ್ಷೆಯು, ಪರಿಪೂರ್ಣಪರವಸ್ತುವಿನ ಬ್ರಹ್ಮಾಪೇಕ್ಷೆಯ ವಿಕಟ ವಾಮನಮೂರ್ತಿ ಎಂಬ ಗುರುತು ನಮಗೆ ಹತ್ತಲೊಲ್ಲದು. ಸಾವಿರ ಕೈಯಿಂದ ವಿಷಯರಾಶಿಯನ್ನು ತುಡುಕಿ ಹಿಡಿದು, ಸಾವಿರ ಮುಖದಲ್ಲಿ ನುಂಗಿ ನೀರು ಕುಡಿದು, ಮತ್ತೆ ಹಸಿದು

೧. ಶಿ. ಶೀ. ವಿ. ಶಾ. ಪು. ೨೮೭, ವ. ೪೮.

ಬಾಯಾರಿದೆನೆಂಬ ಮಾನವನ ರಕ್ಕಸಬಯಕೆಗೆ ಹಗಲು ರಾತ್ರಿ ನಿದ್ದೆ ಇಲ್ಲ. ಮಾನವ ಕೋಟಿಯ ಕೋಟಿಯತ್ನವೆಲ್ಲ ಬೇಡಿಬೇಡಿದುದನ್ನೆಲ್ಲ ಹಾಕಿ ಈ ಬಯಕೆಯ ಹೊಟ್ಟೆಯನ್ನು ಭರ್ತಿಮಾಡುವುದು. ಪ್ರತಿ ಮಾನವವ್ಯಕ್ತಿ ತನ್ನ ಶಕ್ತಿಮೀರಿ ಪ್ರಯತ್ನ ನಡೆಸಿದ್ದಾನೆ ಈ ದುರ್ಭರ ಕಾರ್ಯದಲ್ಲಿ. ಎಡೆಬಿಡುವಿಲ್ಲದೆ ನಡೆದಿರುವ ಪ್ರಯತ್ನ ಅತ್ಯದ್ಭುತವಾಗಿದ್ದರೂ 'ಪ್ರಯತ್ನ ಯಾತಕ್ಕಾಗಿ' ಎಂದು ಪ್ರಶ್ನೆ ಮಾಡಿ ವಿಚಾರಿಸುವ ಪುರಸೊತ್ತಿಲ್ಲ, – ತನ್ನ ಶಕ್ತಿ ಸಾಹಸ ಪರಾಕ್ರಮದಲ್ಲಿ, ತನ್ನ ವಿಷಯ ಭೋಗ ವಿಲಾಸದಲ್ಲಿ ಸರ್ವತಃ ಸಂಪ್ಲುತನಾದ ವೀರ ಮಾನವನಿಗೆ. ಆದರೆ ಅಜ್ಞಾನದಿಂದ ಉನ್ಮತ್ತನಾದ ಮಾನವನ ಎದೆಯಲ್ಲಿ ನಿಗೂಢವಾಗಿರುವ ದೈವ, ಸರ್ವಾಂತರ್ಯಾಮಿ, ಸರ್ವಕರ್ತ 'ಗುಹೇಶ್ವರ' ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ಮಾನವನ ಬೆಂಬತ್ತಿದ್ದಾನೆ. ತನ್ನ ನಿಜವಾದ, ಸ್ವಸ್ವರೂಪವಾದ, ತನ್ನ ನಿರಾಳದ ನಿಜ ನಿವಾಸವಾಸವಾದ ಗುಹೇಶ್ವರನನ್ನು ಗುರುತಿಸದೆ, ತಿಳದು ನೋಡದೆ, ಕಂಡು ಕೇಳಿ ಉಂಡುಟ್ಟು ಅನುಭವಿಸದೆ, ಮಾನವಕುಲಕ್ಕೆ, ಭೂಮಿಯ ದಿವ್ಯಕಲ್ಯಾಣಕ್ಕೆ ಮತ್ತೆ ಬೇರೆ ಮಾರ್ಗವಿಲ್ಲ. ಒಂದೇ ರಾಜಮಾರ್ಗ, – ಅದು ದಿವ್ಯದ ಅನುಭಾವ.

ಅರಿವು ಇರವು ಆನಂದ ಬೆಳಗು ಬಯಲಿನ ಅಖಂಡ, ಅನಂತ ನಿತ್ಯ ಪರಿಪೂರ್ಣ ವಾರಾಶಿ ತಾನಾದ ಈ ಅನುಭವ 'ನೆಲದ ಮರೆಯ ನಿಧಾನ,' 'ಅಂತರಂಗದ ರತ್ನ,' 'ಶಿಶು ಕಂಡ ಕನಸು', ಮೂಗನ ಬಾಯ ಕಾವ್ಯ. ಈ ಅಕ್ಷಯ ನಿಧಾನ, ಈ ದಿವ್ಯ ಜ್ಯೋತಿ, ಅವಸ್ಥೆಯನರಿಯದ ಈ ಸ್ವಪ್ನ, ಶಬ್ದ ಮುಗ್ಧವಾದ ಈ ನವ್ಯ ಭವ್ಯ ಕಾವ್ಯ ತನಗೆ ತಾ ಮರೆಯಾದ ಮಾನವನ ಎದೆಗೆ ಕಂಡಿಲ್ಲ; ತನಗೆ ತಾ ಕತ್ತಲೆಯಾದ ಮಾನವನ ತಲೆಗೆ ಹೊಳೆದಿಲ್ಲ. ತನ್ನ ನಿಜದ ನಿರಾಳವನ್ನು ಕಂಡು ಉಂಡು, ತಾನಲ್ಲದೆ ಮತ್ತೇನೂ ಇಲ್ಲದ ತನ್ನಲ್ಲಿ ಓಲಾಡಿ ತೇಲಾಡಿದ ನಿಜಾನುಭಾವಿ ಸ್ವತಂತ್ರ ಸಿದ್ಧಲಿಂಗೇಶ್ವರ, ಅನುಭವವಿಲ್ಲದೆ ಅನುಭವ ಮಾಡುವ ಅಣ್ಣಗಳಿಗೆ ಎಚ್ಚರ ಕೊಡುತ್ತ, ಸ್ವಾನುಭಾವದ ನಿಜಸ್ವರೂಪವನ್ನು ಇಲ್ಲಿ ನಿರೂಪಿಸಿದ್ದಾನೆ:

ಅನುಭಾವವ ನುಡಿದು [ವ?] ಅಣ್ಣಗಳಿರಾ,
ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ.
ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವುದು.
ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು.
ಇಂತಪ್ಪ ಅನುಭಾವದನುವನರಿಯದೆ, ಶಾಸ್ತ್ರಜಾಲದ ಪಸಾರವನಿಕ್ಕಿ.
ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ,
ನೀವೆತ್ತ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ.[1]

ಏನನೋದಿದರೂ ಫಲವಿಲ್ಲ, ಏನು ಕೇಳಿದರೂ ಫಲವಿಲ್ಲ. ಬುದ್ಧಿ ವಿಚಾರಕ್ಕೆ ನಿಲುಕದ ಸ್ವಯಂಭುಲಿಂಗವನ್ನು ತರ್ಕ ಶಾಸ್ತ್ರ ವಿಚಾರ ಪಾಂಡಿತ್ಯದಿಂದ ಸಾಧಿಸುವೆನೆಂಬ

೧. ವ. ಶಾ. ಸಾ. ಭಾ. ೧, ಪೃ. ೨೦೫, ವ. ೧೬.

ಪಂಡಿತ ವಿದ್ವಾಂಸ ಮೇಧಾವಿ ನಾನು, 'ಪ್ರಾಂಶುಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ'[೧] ಎಂಬಂತೆ ಎಲ್ಲರ ಹಾಸ್ಯಕ್ಕೆ ಪಾತ್ರನಲ್ಲದೆ ಪ್ರಶಂಸೆಗಲ್ಲ. ತನುವಿಕಾರ ಮನ ವಿಕಾರ ಬುದ್ಧಿಭಾವಗಳ ವಿಚಾರ ವಿಕಾರಗಳೆಲ್ಲ ಅಡಗಿ ಸ್ತಬ್ಧವಾಗಿ ನಿಂದು, ನಿಶ್ಚಲ ವಾದ ನಿರ್ಮಳವಾದ ಅಂತರ್ಮುಖವಾದ ಅನಿಮಿಷವಾದ ತನ್ನ ಅರಿವಿನ ಕಣ್ಣಿಂದ ತನ್ನ ತಾ ನೋಡಿ ಕಂಡು ಅನುಭವಿಸ ಬರುವ ತನ್ನ ನಿಜಸ್ವರೂಪವನ್ನು, ಸಚ್ಚಿದಾನಂದ ನಿತ್ಯ ಪರಿಪೂರ್ಣವನ್ನು, ಮಹಾಘನಶೂನ್ಯಬ್ರಹ್ಮವನ್ನು ತೊವಲ ಕಣ್ಣಿಂದ, ಹಲವಕ್ಕೆ ಹರಿದು ಹೊಲಸಾಗಿ ಹೊಲೆಯಾಗಿರುವ ಸಂಚಲಮನದಿಂದ, ಏಸು ವಿಚಾರಮಾಡಿದರೂ ಸಂಶಯ ವಿಪರೀತ ಪರ-ವಿರೋಧದಲ್ಲಿ ಸಿಕ್ಕು, ಈ ಬಂಧನದಿಂದ ಮುಕ್ತವಾಗುವ ಮಾರ್ಗವೆ ಇಲ್ಲದೆ ಅಲ್ಲಿಯೆ ತೊಳಲಿ ಬಳಲುತ್ತಿರುವ ಬುದ್ಧಿಯಿಂದ ಕಾಣಬಹುದೆ? ಕಾಣದ ವಸ್ತು ಅನುಭವಕ್ಕೆ ಬರುವುದೆಂತು? ಅನುಭವಕ್ಕೆ ಬಾರದ ವಸ್ತು ಪರಮಸತ್ಯ ವೆಂದು, ತನ್ನ ಅಂದರೆ ವಿಶ್ವಪ್ರಪಂಚದ ಚರಮರಹಸ್ಯವೆಂದು ಸ್ವೀಕರಿಸುವುದೆಂತು? ನಂಬುವುದೆಂತು? ನಂಬುಗೆ ವಿಶ್ವಾಸ ಭಕ್ತಿಗೆ ಅನುಭವವೆ ಅಚಲ ಆಧಾರ. ಸತ್ಯಜ್ಞಾನ ಪರಮಾನಂದಕ್ಕೆ ಅನುಭವವೆ ವಿಸ್ತಾರವಾದ ಸುಭದ್ರ ಪೀಠಿಕೆ. ಅನುಭವದಲ್ಲಿ ನಿತ್ಯ ಮೂರ್ತಮಾಡಿ ಬೆಳಗುವ ದೇವನೆ ದೇವ. ನಿಮಿಷ ನಿಮಿಷಕ್ಕೆ ನೂತನವಾಗಿ ಪುರಾತನ ದಿಂದ ಹರಿಯುತ್ತ, ಯಾವುದೋ ದಿವ್ಯಸಾಮರಸ್ಯಕ್ಕಾಗಿ ತವಕಿಸುತ್ತ ತಡವರಿಸಿ ಮುಗ್ಗುರಿಸುತ್ತ ನಡೆದಂತೆ, ನನ್ನ ಅನುಭವಕ್ಕೆ ಬರುವ ನಾಮ ರೂಪ ಕ್ರಿಯೆಯೆ ವಿಶ್ವ. ಅನುಭವದಲ್ಲಿ ಉದಯವಾಗುವ ಧರ್ಮವೆ ಧರ್ಮ. ಅನುಭವದ ಮಾತೇ ಅಧ್ಯಾತ್ಮ ಶಾಸ್ತ್ರ, ಸತ್ಯವಿಜ್ಞಾನ. ಜೀವನ ಅನುಭವ, ಅನುಭವ ಜೀವನ. ಲಿಂಗದ ಅನುಭವ ವುಳ್ಳಾತ ದಿವ್ಯಜೀವಿ, ಅಂಗದ ಅನುಭವದಲ್ಲಿ ಮಲಗಿದಾತ ಮಾನವಜೀವಿ.

ತಾನು ಯಾರು? ತನ್ನ ನಿಜಸ್ವರೂಪವೇನು? ಜಗತ್ತಿನಲ್ಲಿ ತಾನು ಪೂರೈಸಬೇಕಾದ ಮಣಿಹವಾವುದು? ತನಗೂ ಜಗತ್ತಿಗೂ ಇರುವ ಸಂಬಂಧವೇನು? ಹಗಲುರಾತ್ರಿ ಯೆನ್ನದೆ, ದೇಶ ಕಾಲವೆನ್ನದೆ ತಾನು ನಿತ್ಯ ನಿರಂತರ ವಾಸಮಾಡಿಕೊಂಡಿರಬೇಕಾದ ನಿಜ ನಿವಾಸ, ಸ್ವ-ಸ್ಥಲ ಸ್ವ-ದೇಶ ಸ್ವ-ರಾಜ್ಯವಾವುದು? – ಎಂಬುದನ್ನು ಪ್ರತ್ಯಕ್ಷ ಮುಂತಾದ ಪ್ರಮಾಣದ ಹಂಗಿಲ್ಲದೆ, ತನ್ನ ಒಳಗೆ ತಾನೆ ಉದಯವಾಗಿ, ತನ್ನನೆಲ್ಲ ಪ್ರಜ್ವಲಿಸಿ ತನಗೆ ತಾನೆ ಥಳಥಳಿಸಿ ಹೊಳೆದು ಸ್ವಯಂವೇದ್ಯವಾಗಿ ತೋರುವ ಆತ್ಮವಿದ್ಯೆಯೆ ಅನುಭಾವ. ಪ್ರಮಾಣಗಳಿಗೆಲ್ಲ ಪ್ರಮಾಣವಾಗಿ, ತಾನು ಅಪ್ರಮಾಣವಾಗಿರುವ ಅನುಭವ ಪ್ರಮಾಣಿಸಿ ಕಂಡ ಪರತತ್ತ್ವ, ಪರಮಾರ್ಥವೆ 'ಶೂನ್ಯಸಂಪಾದನೆ' ಹೇಳುವ ಶೂನ್ಯ. ಈ ಶೂನ್ಯ, ಈ ನಿಷ್ಕಲಲಿಂಗವನ್ನು ಕುರಿತು ಶರಣರಲ್ಲಿ ಮಹಾನುಭಾವಗೋಷ್ಠಿ ನಡೆದ ಪ್ರಸಂಗವೇ 'ಶೂನ್ಯಸಂಪಾದನೆ.' ವಿಶ್ವವೈಭವ, ವಿಶ್ವಲೀಲೆ, ವಿಶ್ವವಿಲಾಸವನ್ನೊಳಕೊಂಡು ವಿಶ್ವ ಬ್ರಹ್ಮಾಂಡಗಳ ಪರಮಸಾರಸಂಪದವೆನಿಸುವ ಈ ಮಹಾಘನ ಶೂನ್ಯಬ್ರಹ್ಮವನ್ನು ಗಳಿಸಿ ಕೊಂಡು ಆಳವಡಿಸಿಕೊಂಡು ಅನುಭವಿಸಿಕೊಂಡು, ಅನಂತ ಬ್ರಹ್ಮಾಂಡಗಳನ್ನು ಹೆತ್ತು

---

೧. ರ. ವಂ. ಪ್ರ. ಸ. ಶ್ಲೋ. ೩.

ಹೊತ್ತು, ಲಾಲಿಸಿ ಪಾಲಿಸಿ ಮತ್ತೆ ತನ್ನ ಹೊಟ್ಟೆಯೊಳಗಿಟ್ಟುಕೊಂಡು, ಜ್ಯೋತಿಯಿಲ್ಲದೆ ಬೆಳಗುವ ಚಿದ್ಬಯಲೆ ತಾನು, ತಾನೆ ಆ ಚಿದ್ಬಯಲಾಗಿ ನಿಂದ ನಿಲವೆ ಶೂನ್ಯದ ಸಂಪಾದನೆ. ಚಿದ್ಬಯಲೆ ತಾನಾಗಿ, ಆ ಬಯಲು ಬಿತ್ತಿ ಬೆಳೆದ ವಿಶ್ವವೆಲ್ಲ ತಾನಾಗಿ, ತಾನಲ್ಲದೆ ಮತ್ತೇನು ಇಲ್ಲದ್ದೆ '....ಮನೋಲಯವಾಗಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವೂ ಜ್ಞಾನಸಾಪ್ತ ಶಬ್ದ ನೋಡಾ....'[೧]

ಈ ಅನುಭವ ಕಂಡ ಪರಮರಹಸ್ಯ ದರ್ಶನವೇ ನಿಷ್ಕಲ ಲಿಂಗ, ನಿಃಕಲ ಪರಶಿವ ಲಿಂಗ, ನಿಃಕಲ ಪರಶಿವ, 'ನಿಮ್ಮ ನೀವರಿಯದೆ' ಅನಂತಕಾಲ ಬಯಲುಗನಾಗಿ ಇರ್ದ ಬಯಲು ಲಿಂಗ, ಶೂನ್ಯ ಲಿಂಗ, ಶೂನ್ಯ. ಈ ಶೂನ್ಯ, ಈ ನಿಷ್ಕಲಲಿಂಗವೇ ಜಗದಾದಿ ಬೀಜ. ಅದೇ ತತ್ತ್ವಗಳನ್ನೆಲ್ಲ ಹಡೆದ ಪರತತ್ತ್ವ.

> 'ಪ್ರಥಮದಲ್ಲಿ ಅಖಂಡಾದ್ವಯ ಅನುಪಮ ನಿರವಯ ನಿರಂಜನ ಸರ್ವಶೂನ್ಯವ ನೊಳಕೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲಲಿಂಗವು ಧ್ಯಾನಪೂಜೆ ಗಳಿಲ್ಲದೆ ನಿರವಯದಲ್ಲಿ ಬಯಲಿಗನಾಗಿ ಇರಬಾರದೆಂದು ತನ್ನ ಸ್ವೇಚ್ಛಾಲೀಲಾ ವಿಲಾಸದ ನೆನಹಿಂನಿಂದ ತನ್ನ ಚಿತ್ಪ್ರಭಾಸಾಮರ್ಥ್ಯ ಶಕ್ತಿಯ ಮುಂದುಗೊಂಡು ಅನಂತಕೋಟಿ ಬ್ರಹ್ಮಾಂಡಂಗಳನು ಅಣುಕೋಟಿ ಆತ್ಮರುಗಳನು ತನ್ನಲ್ಲಿಯೆ ಪುಟ್ಟಿಸಿ, ಆ ಆತ್ಮರುಗಳಿಗೆ ಪಂಚವಿಂಶತಿ ತತ್ತ್ವಂಗಳ ಸಂಬಂಧಿಸಿದಲ್ಲಿ, ...'[೨]

ಸರ್ವಶೂನ್ಯ ನಿರಾಲಂಬವಾಗಿ ತನ್ನ ತಾನೆಂಬ ಅರಿವು ತಲೆದೋರದೆ, 'ತನ್ನ ನಿಷ್ಕಲಾನಂದ ವಲ್ಲಿಯೆ ತೃಪ್ತಿಪಟ್ಟು ಶಾಂತಿಯನ್ನೈದಿ ನಿಃಪತ್ತಿಯನ್ನೈದಿ'[೩] ತಾನೆ ತಾನಾಗಿದ್ದ ನಿಜವಸ್ತು, ನಿಷ್ಕಲಲಿಂಗ, ಶೂನ್ಯ ಇಲ್ಲದ ಬಯಲಲ್ಲ. ಎಲ್ಲೆಲ್ಲಿ ಎಂದೆಂದು ಉಂಟಾದ ಪರವಸ್ತು. ವಿಶ್ವ ವಸ್ತುಗಳಿಗೆಲ್ಲ ಮೂಲವಸ್ತು, ತತ್ತ್ವಗಳಿಗೆಲ್ಲ ತಂದೆತಾಯಾದ ಈ ಶೂನ್ಯ, ಈ ನಿಷ್ಕಲ ವಸ್ತು ತನ್ನಲ್ಲಿಯೆ ತನ್ನ ಬಿತ್ತಿ, ತನ್ನಲ್ಲಿಯೆ ತಾನು ವಿಶ್ವಬ್ರಹ್ಮವೃಕ್ಷವಾಗಿ ಬೆಳೆದು, ದಿಗ್ದಿಗಂತವೆಲ್ಲ ಶಾಖೆಯಾಗಿ ಹರಡಿಕೊಂಡು, ಫಲ ಪತ್ರ ಪುಷ್ಪಗಳೆಂಬ ಬ್ರಹ್ಮಾಂಡ ಗಳನ್ನು ತಳೆದು, ಅಣುಕೋಟಿ ಆತ್ಮರೆಂಬ ಪ್ರಾಣಕಳೆ ತುಂಬಿ ನಿಂತಿದೆ ಆಕಾಶ ಪಾತಾಳ

---

೧. ಶೂ. ಸಂ. ಪು. ೩೩, ವ. ೩೭.

೨. ಶೂ. ಸಂ. ಪು. ೪. ಈ ಗದ್ಯಭಾಗವನ್ನು [illegible] ಮಹಾಲಿಂಗಸ್ಥಲದ ಸೂತ್ರದೊಡನೆ ಹೋಲಿಸಿ ನೋಡಿ:

'ಇನ್ನು ಇಂತಪ್ಪ ಅಖಂಡಾದ್ವಯ ನಿತ್ಯ ನಿರುಪಮ ಪರಿಪೂರ್ಣ ಸಚ್ಚಿದಾನಂದ [illegible] ಲಿಂಗವು ತಾನು ನಿಷ್ಕಲನಾಗಿ ನಿರವಯದಲ್ಲಿ [illegible] ಧ್ಯಾನ ಪೂಜೆಗಳಿಲ್ಲದೆ ಇರಬಾರದೆಂದು ತನ್ನ ಸ್ವೇಚ್ಛಾ [illegible] ಮಾತ್ರದಲ್ಲಿಯೆ ತನ್ನ ಚಿತ್ಪ್ರಭಾಸಾಮರ್ಥ್ಯಶಕ್ತಿ [illegible] ಮುಂದುಗೊಂಡು [illegible] ಮೂರ್ತಿಯಪ್ಪ ಮಹಾಲಿಂಗವಾಯಿತ್ತು ...' [illegible] ೨೨.

೩. [illegible] ಪು. ೩೦, ವ. ೧. [illegible]

ಒಂದಾಗಿ.[೧] ಈ ವೃಕ್ಷದಲ್ಲಿ ಮಯವಾಗಿ ಅತೀತವಾಗಿ ಪ್ರಾಣರಸವಾಗಿ ಪ್ರಾಣಲಿಂಗವಾಗಿ, ಆಯಾ ವಸ್ತುವಿನ ಸದ್-ಭಾವಲಿಂಗವಾಗಿ, ವೃಕ್ಷವನ್ನೆಲ್ಲ ಮೂಳ್ಕೂರ ತೆರಹಿಲ್ಲದಂತೆ ತುಂಬಿ ತುಳುಕಿ ಥಳಥಳಿಸಿ ಬೆಳಗುವ ಮಹಾಲಿಂಗದ ಬಯಲು, ಅದೇ ನಿಷ್ಕಲಲಿಂಗ. ಈ ಬಯಲು ಬಿತ್ತಿ ಬಯಲು ಬೆಳೆದ ವಿಶ್ವೇ ಭೂತಗಳು ಒಂದಕ್ಕೊಂದು ಅನ್ಯವಾಗಿ, ಒಂದರಿಂದೊಂದು ಭಿನ್ನವಾಗಿ ತೋರಿದರೂ ತಿಳಿದು ನೋಡಿದರೆ ವಿಶ್ವವೃಕ್ಷ ಒಂದು. ಇದು ದೊಡ್ಡೆ, ಅವು ಶಾಖೆ, ಇವು ಪತ್ರಕೋಟಿ, ಅವು ಪುಷ್ಪಪುಂಜ, ಇವು ಫಲ ಲಕ್ಷವೆಂದು ನಾವು ನಮ್ಮ ವ್ಯವಹಾರದ ಅನುಕೂಲಕ್ಕಾಗಿ ವಿಂಗಡಿಸಿ ಹೆಸರಿಟ್ಟು ಕರೆದರೆ, ವೃಕ್ಷದ ಒಂದುತನಕ್ಕೆ ಯಾವ ಭಂಗವೂ ಇಲ್ಲ. ಪರಮಾಣುವಿನಿಂದ ಪರಬ್ರಹ್ಮದವರೆಗೆ ಒಂದು ರಕ್ತ ಒಂದು ರಸದ ಸಂಬಂಧವಿದೆ. ಈ ಸಂಬಂಧದಲ್ಲಿ ಸಂದು ಇಲ್ಲ, ಬಿರುಕು ಇಲ್ಲ. ಇದೋ ಇಲ್ಲಿ ನೋಡಿ ಈ ಸತ್ಯಬಾಂಧವ್ಯದ ಪರಮರಹಸ್ಯವನ್ನು:

> ಚಿತ್ತುವೆಂಬ ಬಿತ್ತು ಬಲಿದು ಎರಡಾದಲ್ಲಿ ಲಿಂಗವೆಂಬ ಕಳೆ ಅಂಕುರಿಸಿ
> ಮೂರ್ತಿಯಾಯಿತ್ತು.
> ಆ ಮೂರ್ತಿಯ ಘನತೆಯನೇನೆಂದುಪಮಿಸಬಾರದು.
> ನೋಡಿದಡೆ ಮೂರ್ತಿ, ಹಿಡಿದಡೆ ಬಯಲು.
> ಆ ಮೂರ್ತಿಯೊಳಗಾದೆ ಈರೇಳು ಲೋಕದ ಪ್ರಾಣಕಳೆ.
> ಆ ಕಳೆಯ ಬೆಳಗು ತಾನೆ ನಮ್ಮ ಗೊಹೇಶ್ವರಲಿಂಗದ ಲೀಲಾ
> ಮೂಲದ ಪ್ರಥಮ ಭಿತ್ತಿ.[೨]

ಇಲ್ಲಿ ಹೇಳುವ ಚಿತ್ತು ನಿಷ್ಕಲವಸ್ತುವಿನಲ್ಲಿ ಅವ್ಯಕ್ತವಾಗಿ, ಅವಿನಾಭಾವ ಸಂಬಂಧವುಳ್ಳುದಾಗಿ ಇರುವ ಚಿತ್‌ಶಕ್ತಿ. ಹಣ್ಣಿಗೆ ರುಚಿಗೆ ಯಾವ ಸಂಬಂಧ? ಬೆಳುದಿಂಗಳಿಗೆ ತಂಪಿಗೆ, ಬಂಗಾರ ಬಣ್ಣಕ್ಕೆ ಯಾವ ನಂಟು? ನನಗೆ ಮತ್ತು ನನ್ನಲ್ಲಿ ತಿಳಿವ, ಭಾವಿಸುವ, ಜೀವಿಸುವ, ವ್ಯವಹರಿಸುವ ಶಕ್ತಿಗೆ ಯಾವ ಬಂಧುತ್ವ? ಇದೇ ತರಹದ ಬಾಂಧವ್ಯ

---

೧. ಈ ವಿಶ್ವವೃಕ್ಷದ, ಸಂಸಾರವೃಕ್ಷದ ಅನುಭವಚಿತ್ರ ಕಠೋಪನಿಷತ್ತಿನಲ್ಲಿ ಮತ್ತು ಭಗವದ್ಗೀತೆಯಲ್ಲಿ ಇಂತಿದೆ:

> ಊರ್ಧ್ವಮೂಲೋಽವಾಕ್‌ಶಾಖ ಏಷೋಽಶ್ವತ್ಥಃ ಸನಾತನಃ ।
> ತದೇವ ಶುಕ್ರಂ ತದ್‌ಬ್ರಹ್ಮ ತದೇವಾಮೃತಮುಚ್ಯತೇ ।
> ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ಏತದ್ವೈ ತತ್ ॥
> ಕ. ಉ. ಅ. ೨. ವಲ್ಲಿ ೬, ಮಂ. ೧.
> ಊರ್ಧ್ವಮೂಲಮಧಃ ಶಾಖಮಶ್ವತ್ಥಂ ಪ್ರಾಹುರವ್ಯಯಂ ।
> ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ ॥
> ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾ ಗುಣಪ್ರವೃದ್ಧಾ ವಿಷಯಪ್ರವಾಲಾಃ ।
> ಅಧಶ್ಚ ಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ ॥
> ಭ. ಗೀ., ಅ. ೧೫, ಶ್ಲೋ. ೧-೨.

೨. ಶೂ. ಸಂ. ೩. ಶಾ. ಪ್ರ. ೩೦. ವ. ೧.

ಪರಶಿವ ಮತ್ತು ಪರಾಶಕ್ತಿಯಾದ ಚಿತ್‌ಶಕ್ತಿಗೆ. 'ನೀವು ನಿಮ್ಮ ಸ್ವಲೀಲೆಯಿಂದ ಜಗದ ಲೀಲಾವೈಭವಂಗಳ ನಟಿಸಬೇಕೆಂದು ನಿಮ್ಮಲ್ಲಿ ನೆನಹುದೋಱಲು ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು.....'[೧] ಪರವಸ್ತುವಿನಲ್ಲಿ ನೆನಹು, ಚಿಂತನೆ ಗಟ್ಟಿಗೊಂಡು ನಿಂದುದೇ ಚಿತ್‌ಶಕ್ತಿ. ಪರಶಿವನ ಈ ಆತ್ಮಶಕ್ತಿ, ಸ್ವ-ಶಕ್ತಿಯ ಕ್ಷೋಭ, ಸ್ಫುರಣೆ, ಚಲನೆಯೆ ಎರಡಕ್ಕೆ, ಅಂದರೆ ನಾನಾತ್ವಕ್ಕೆ, ಹಲವು ನಾಮ ಹಲವು ರೂಪ ಹಲವು ಕ್ರಿಯೆಗಳಿಂದ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ವಿಶ್ವಪ್ರಪಂಚ, ಅನಂತಕೋಟಿ ಬ್ರಹ್ಮಾಂಡ, ಅಣುಕೋಟಿ ಆತ್ಮರುಗಳ ಸೃಷ್ಟಿಗೆ ಕಾರಣವೆಂಬುದು ಶರಣರ ಮತ. ಸ್ವ-ಶಕ್ತಿಯ ಬೆಂಬಳಿವಿಡಿದು ಲಿಂಗಮೂರ್ತಿಯಾಗಿ ನಿಂದಿರುವುದು ಪರಶಿವ ಶಕ್ತಿಯರ ಅವಿನಾಭಾವ ಸಂಬಂಧಕ್ಕೆ ಸಹಜವೇ. ಸಚರಾಚರಪ್ರಪಂಚದ ಹೃದಯಗಂಭೀರದಲ್ಲಿ ಬೆಳಗುವ ಪ್ರಾಣಕಳೆಯೆ ವಿಶ್ವಪುರುಷನ ಪ್ರಾಣಲಿಂಗ.[೨] ನನ್ನಲ್ಲಿ ನಿಮ್ಮಲ್ಲಿ, ಅವರಲ್ಲಿ ಇವರಲ್ಲಿ, ಭೂಮಿ ಆಕಾಶದಲ್ಲಿ, ಬೆಂಕಿ ನೀರು ಗಾಳಿಯಲ್ಲಿ, ಚಂದ್ರ ಸೂರ್ಯ ಗ್ರಹ ನಕ್ಷತ್ರಕೋಟಿಯಲ್ಲಿ, ಭೂತ ವರ್ತಮಾನ ಭವಿಷ್ಯದ ಹಿಂದೆ ಮುಂದೆ ಹರಿಯುತ್ತಿದೆ ಈ ದಿವ್ಯ ಪ್ರಾಣಕಳೆ. ಶಿವನಿಗೆ ಅಷ್ಟತನುವೆಂದು ಅಷ್ಟಮೂರ್ತಿಯೆಂದು ಹೇಳುವ ಮಾತಿನ ಅರ್ಥ ಇದೆ. ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮ – ಇವೇ ಶಿವನ ಶರೀರ.[೩] ಈ ಎಂಟು ಶರೀರದ ಪ್ರಾಣವೇ, ಪ್ರಾಣಕಳೆಯೇ ಶಿವ. ಹೀಗಿದ್ದ ಮೇಲೆ ನಾನು ನೀವು ಅವು ಅವರು ಎಲ್ಲ ಎಲ್ಲ – ಈ ಪ್ರಾಣಕಳೆಯಿಂದ ಪ್ರಾಣಿಸುವ, ಜೀವಿಸುವ ಜೀವಾಣುಗಳಲ್ಲವೇ? ನನಗೆ ನಿಮಗೆ ಅಥವಾ ನೀವಾಗಿ ನನಗೆ ಇದಿರಿಟ್ಟು

---

೧. ಅಖಂ. ವ. ಪು. ೩, ವ. ೧.

೨. '... ಇಂತು ಪರಬ್ರಹ್ಮವೆ ಪರಮಾತ್ಮ; ಪರಮಾತ್ಮನೆ ಸರ್ವಾತ್ಮ; ಪರಮಾತ್ಮನೆ ಸರ್ವಗತ, ಪರಮಾತ್ಮನೆ ಆತ್ಮಗತ. ಇದು ಕಾರಣ ಪರಮಾತ್ಮನೆ ಅಂತರಂಗ ಬಹಿರಂಗ ಭರಿತ ಪ್ರಾಣಲಿಂಗ. ಇಂತು ಅರಿದುದೆ ಪರಮಾತ್ಮಯೋಗ; ಮರವೆಯೆ ಮಾಯಾ ಸಂಬಂಧವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.'

ಉ. ಪೆ. ವ. ಪು. ೭, ವ. ೫.

೩. ನೋಡಿರಿ:

'... ಅಂತಾದ ಲಿಂಗದ ಚಿದಂಗವೆ ಅಷ್ಟತನುಗಳಾಗಿ ಲಿಂಗಕ್ಕೆ ಸ್ಥೂಲದೇಹವಾಯಿತ್ತು ...

ಲಿಂಗಲೀಲಾವಿಲಾಸಚಾರಿತ್ರ ಪ್ರ. ೫೧, ವ. ೧೦, ಟೀಕು.

ಮತ್ತೆ ನೋಡಿರಿ:

ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ ಯಾ ಹವಿರ್ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾ ಸ್ಥಿತಾ ವ್ಯಾಪ್ಯ ವಿಶ್ವಂ ।
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ ಪ್ರಾಣಿನಃ ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಸ್ತಾಭಿರಷ್ಟಾಭಿರೀಶಃ ॥

ಅಭಿಜ್ಞಾನ ಶಾಕುಂತಲಂ, ಅಂಕ. ೧, ಪ. ೧.

ಈ ಪದ್ಯದಲ್ಲಿ ಹೇಳಿರುವ 'ಹೋತ್ರೀ' ಇವರ ಬದಲು ಆತ್ಮನೇ ಎಂಟನೆಯ ತನುವೆಂದು ಅನೇಕ ಕಡೆ ಹೇಳಿದ್ದಾರೆ ಶಾಸ್ತ್ರಜ್ಞರು.

ತೋರುವ ಜಗತ್ತಿಗೆ ಯಾವ ಸಂಬಂಧ? ಅದರಂತೆ ನಿಮಗೆ ಮತ್ತು ನನಗೆ ಅಂದರೆ ನಿಮಗಿದಿರಿಟ್ಟು ತೋರುವ ಜಗತ್ತಿಗೆ ಎಂಥ ಸಂಬಂಧ? ನನ್ನ ಕೈ ಮತ್ತು ನನ್ನ ಕಾಲಿಗೆ, ಅಥವಾ ಎಡಗಣ್ಣು ಬಲಗಣ್ಣಿಗೆ, ಇಲ್ಲವೆ ನನ್ನ ತಲೆಗೆ ಹೊಟ್ಟೆಗೆ ಅಥವಾ ನನ್ನ ಶರೀರವನ್ನು ಕಟ್ಟಿರುವ ಕೋಟಿಕೋಟಿ ಜೀವಾಣುಗಳಲ್ಲಿ (Cells) ಇರುವ ಅನ್ಯೋನ್ಯ ಸಂಬಂಧವೇನು? ನನ್ನ ಈ ಜೀವಾಣುಗಳಲ್ಲಿ ಒಂದು ಮತ್ತೊಂದಕ್ಕೆ ನಾನು ನಾನು, ನೀನು ನೀನು, ಅವು ಅವು ಎಂದು ಹೇಳಿದರೆ ಹೇಗೆ? ಎಲ್ಲ ಜೀವಾಣುಗಳು ತಂತಮ್ಮ ವ್ಯಕ್ತಿತ್ವವನ್ನು ಬೇರ್ಪಡಿಸಿಕೊಂಡು, ಒಂದಕ್ಕೊಂದು ಸಂಬಂಧವಿಲ್ಲದಂತೆ ಸ್ವಾತಂತ್ರ್ಯವನ್ನು ಸಾರಿದರೆ ಶರೀರದ ಗತಿ ಏನು? ಇಂಥ ವ್ಯಕ್ತಿಸ್ವಾತಂತ್ರ್ಯವನ್ನು ಸಾರುವ ಶಕ್ತಿಸ್ವಾತಂತ್ರ್ಯ, ಪಾಪ! ಜೀವಕಣಗಳಿಗಿಲ್ಲ. ಇದ್ದರೆ? – ಈ ಪ್ರಶ್ನೆಗೆ ಅವಕಾಶವೆ ಇಲ್ಲ. ಶರೀರದಿಂದ ಭಿನ್ನವಾಗಿ ಜೀವಾಣು ಸ್ವತಂತ್ರವಾದರೆ ಅದಕ್ಕೆ ಉಳಿವು ಎಂಬುದಿಲ್ಲ. ಅದು ಸತ್ತರೆ ಅದರ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ.

ಇದರಂತೆ ಪೃಥ್ವಿಯ ರಕ್ತ, ಪೃಥ್ವಿ ಬೆಳೆದ ಸಸ್ಯಾದಿ ಪ್ರಾಣಿಗಳ ರಕ್ತ ನನ್ನಲ್ಲಿ ಹರಿದಿಲ್ಲವೇ? ಹಗಲು ರಾತ್ರಿಯನ್ನದೆ ಹರಿಯುತ್ತಿಲ್ಲವೇ ಈ ಪ್ರಸಾದ ನನ್ನ ಅನ್ನಮಯ ಕೋಶದಲ್ಲಿ? ವಾಯುಮಂಡಲದ ಹಾಲು ಕುಡಿಯುತ್ತ ಅನ್ನಕೋಶ ಪ್ರಾಣಮಯವಾಗಿ ನನ್ನ ಶರೀರ ಜೀವಿಸುತ್ತಿಲ್ಲವೆ? ಜಲಮಂಡಲದ ರಸಪಾನವಿಲ್ಲದಿದ್ದರೆ ನಾನೆಲ್ಲ ಒಣಗಿದ ಬಳ್ಳಿಯ ಹಂದರವೇ. ಇದರಂತೆ ಅಗ್ನಿದೇವನ ಕರುಣಪ್ರಸಾದ ದೊರೆಯದಿದ್ದರೆ ನಾನು ಏನಾಗಬಹುದು? ನನಗೆ ಗೊತ್ತಿಲ್ಲ. ಆಕಾಶ ನನಗೆ ಇರಲು ಇಂಬುಗೊಡದಿದ್ದರೆ ನನ್ನ ಗತಿ ಏನು? ಇಲ್ಲಿ ಗತಿಯ ಪ್ರಶ್ನೆಯೇ ಇಲ್ಲ. ಸ್ಥಿತಿಯೇ ಇಲ್ಲ, ಗತಿ ಎಲ್ಲಿ? ಇದರಂತೆ ವಿಶ್ವದ ವಿಜ್ಞಾತ ಮತ್ತು ಅವಿಜ್ಞಾತ ಶಕ್ತಿಯ ಅಥವಾ ಶಕ್ತಿಗಳ ಮೊಲೆವಾಲನುಂಡು ಕೈಕಾಲು, ಕಣ್ಣು ಕಿವಿ, ಮನ ಬುದ್ಧಿಯಾಗಿ ರೂಪುಗೊಂಡಿರುವ ನಾನು ವಿಶ್ವಶಕ್ತಿಗಳ ಕಾರುಣ್ಯದ ಶಿಶು. ನನ್ನಂತೆ ನೀವು, ಅವರು. ಅವು ಎಂದು ಮಾನವನಿಂದ ಕರೆಸಿಕೊಂಡಿರುವ ಸಣ್ಣ ದೊಡ್ಡ ಭೂತವಸ್ತುಗಳೆಲ್ಲ ಈ ವಿಶ್ವಶಕ್ತಿಗಳ ಕೂಸುಗಳೆ. ಒಂದು ಕಣ, ಒಂದು ಕಲ್ಲು ಬಂಡೆ, ಒಂದು ಗಿಡ ಬಳ್ಳಿ. ಒಂದು ನಾಯಿ ನರಿ, ಒಂದು ಕಾಗೆ ಕೋಗಿಲೆ, ಒಂದು ಎತ್ತು ಕಾಂಗರೂ – ಇವರ ಇತಿಹಾಸದ ಪುಟಗಳನ್ನು ಹಿಂದೆ ಹಿಂದೆ ಹಿಂದೆ ತೆರೆಯುತ್ತ ಓದುತ್ತ ವಿಚಾರತರಂಗಗಳ ಕೆಳಗೆ ಮಲಗಿರುವ ಗಭೀರಮೌನದಲ್ಲಿ ಮುಳುಗುತ್ತ ಮುಂದೆ ಮುಂದೆ ನಡೆದರೆ, ಕಣ ಕಲ್ಲು ಬಂಡೆ ಗಿಡ ಬಳ್ಳಿ ನಾಯಿ ನರಿ ಎತ್ತು ಕತ್ತೆ ಗಂಡು ಹೆಣ್ಣೆಲ್ಲ ಕರಗಿ, ವಿಶ್ವಶಕ್ತಿಗಳ ಅನಂತ ರಸವಾಗಿ ಕಣ್ಣಿಗೆ ಬಣ್ಣವಿಲ್ಲದಂತೆ ಕಿವಿಗೆ ಶಬ್ದವಿಲ್ಲದಂತೆ ಸೋಂಕಿಗೆ ತಟ್ಟು ಮುಟ್ಟಿಲ್ಲದಂತೆ ನಿಂದು, ಎಲ್ಲ ಇದ್ದು ಒಂದೂ ಇಲ್ಲದಂತೆ ತೋರುತ್ತವೆ. ನವಿಲ ತತ್ತಿಯನ್ನು ನಾನು ನೋಡಿಲ್ಲ. ನೀವು ನೋಡಿರಬಹುದು. ತತ್ತಿಯಲ್ಲಿ ರಸದಲ್ಲಿ ಗರಿಯಿಲ್ಲ. ತುರಾಯಿ ಇಲ್ಲ. ಕಾಲಿಲ್ಲ ಮೂಗಿಲ್ಲ, ಪುಚ್ಛ ಇಲ್ಲ. ಬಣ್ಣಬಣ್ಣದ ಸಂತೆ ಒಳಗೆ ನೆರೆದಿಲ್ಲ. ನವಿಲ ಪ್ರಾಣಕಳೆ ಇದ್ದರೂ ಪ್ರಾಣ ಅಲ್ಲಿಲ್ಲ. ಆದರೆ ತತ್ತಿ ಒಡೆದು ಹಕ್ಕಿ ಹೊರಬಿದ್ದರೆ ಅದೆಂಥ ಅದ್ಭುತ ಸೃಷ್ಟಿ! ಬಣ್ಣ ಬಣ್ಣ ರೂಪವಾಗಿ, ಪ್ರಾಣವಾಗಿ, ಗರಿಗೆದರಿ ಕುಣಿವ ನವಿಲು. ಏನು ಮಾಯಾ

ಜಾಲ! ಯಾವ ಮಹೇಂದ್ರ ಜಾಲ? ನವಿಲು ಒಂದು ಪಿಂಡಾಂಡ.; ವಿಶ್ವಪ್ರಪಂಚ ಬ್ರಹ್ಮಾಂಡ. ಅದು ಬ್ರಹ್ಮನ ಬಹುದೊಡ್ಡ, ಅಳತೆಗೆಟ್ಟ ದೊಡ್ಡ ತತ್ತಿಯಂತೆ. ಇದು ಭಾರತದ ಅತಿಪುರಾತನ ದರ್ಶನ. ಈ ತತ್ತಿ ತೆರೆಯುತ್ತಿರುವಂತೆ ಬಣ್ಣಬಣ್ಣದ ರೂಪ ರೂಪದ ಚೈತನ್ಯ ಚೈತನ್ಯದ ವಿಶ್ವಪ್ರಪಂಚ ಪ್ರಾಣವಾಗಿ ನಿಷ್ಪ್ರಾಣವಾಗಿ ಲೀಲಾವಿಲಾಸದ ಅನಂತವೈಭವವನ್ನು ಬೀರುತ್ತ ಹರಿಯುತ್ತಿದೆ. ಇಲ್ಲಿ ಇಂಥ ವಿರಾಟ್‌ಪುರುಷನ ಅಂಡವಾದ, ಅಥವಾ ಅಂಗವಾದ ವಿಶ್ವದ ವಸ್ತು ಶಕ್ತಿ ರೂಪ ಕ್ರಿಯೆಗಳಲ್ಲಿ ಒಂದೊಂದಕ್ಕೆ, ಎಲ್ಲ ಎಲ್ಲಕ್ಕೆ ಇರುವ ಸಂಬಂಧ ಜೀವಂತ ವಿಶ್ವದ ಒಂದಾಗಿರುವ ಸಂಬಂಧ. ಈ ಒಂದರ ಸಂಬಂಧ ವೈಜ್ಞಾನಿಕ ವಿಚಾರದೃಷ್ಟಿಗೂ ಮಸುಮಸುಕಾಗಿ ಮತ್ತೆ ಮುಂದೆ ಸ್ಪಷ್ಟವಾಗಿ ಕಾಣಬರುವಂತಿದೆ. ಒಂದು ಕಡ್ಡಿ ಅಲುಗಿದರೆ, ಆಕಾಶದ ತುದಿಯಲ್ಲಿರುವ ನಕ್ಷತ್ರಗಳ ಗತಿಯ ವರೆಗೆ ಈ ಅತ್ಯಂತ ಕ್ಷುಲ್ಲಕ ಚೈತನ್ಯತರಂಗ ಹರಡಿ, ಅಲ್ಲಿಯ ವರೆಗೆ ತನ್ನ ಪ್ರಭಾವದ ಸೀಮೆಯನ್ನು ಪಸರವುತ್ತದೆ ಎಂದು ಹೇಳುವ ವಿಜ್ಞಾನಪುರುಷರ ಮತ ವಿಶ್ವದ ಹಲವನ್ನು ಒಂದುಗೂಡಿಸುತ್ತ ನಡೆದಿದೆ.

ಇದೋ ಇಲ್ಲಿ ನೋಡಿ ವಿಶ್ವದ ಒಳಗುಹೊರಗನ್ನು ಎತ್ತಿ ತೋರುವ ಸಿದ್ಧರಾಮಯ್ಯನವರ ಅನುಭವವನ್ನು:

ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ
ಬಣ್ಣ ಮೂಜಗಕೆ ಮುಕ್ಕಣ್ಣ ತಾನು
ಬಣ್ಣಕರು ಬಣ್ಣದೊಳಗಾಳುವದನೇ ಕಂಡು
ಅಣ್ಣ ನಗುತಿರ್ದನೈ ಯೋಗಿನಾಥ[1]

ಈ ಪದ್ಯದಲ್ಲಿ ಒಬ್ಬ ಮಹಾನುಭಾವಿ ಕಂಡ ವಿಶ್ವಪ್ರಪಂಚದ ಪರಮರಹಸ್ಯ ದರ್ಶನ ವಿದೆ. ಈ ದರ್ಶನದ ಸ್ವರೂಪವನ್ನು ನಾವು ನಮ್ಮ ಬುದ್ಧಿ ನಮ್ಮ ಭಾವ ನಮ್ಮ ಸ್ಥೂಲದ ಅರಿವಿಗೆ ತೋರಿಸುವುದಿದ್ದರೆ ಈ ಪದ್ಯಕ್ಕೆ ಟೀಕು ಬರೆದ ಕಲ್ಲಮಠದ ಪ್ರಭು ದೇವರೇ ಗತಿಮತಿ. ಬಣ್ಣ ಅಂದರೆ ಮಹಾಲಿಂಗದ[2] ಚಿತ್‌ಪ್ರಭಾಂಗ ಅದೇ ಚಿತ್ ಪ್ರಭಾಪ್ರಕಾಶ. ಈ ಲಿಂಗಕ್ಕೆ ಲೀಲಾವಿಲಾಸದ ಇಚ್ಛೆಯಾದಲ್ಲಿ ಚಿತ್‌ಪ್ರಭಾಪ್ರಕಾಶವೆ ಸ್ಫುರಿಸಿ ನಾನಾತ್ವವನ್ನೈದಿ, ಪರಿಚ್ಛಿನ್ನ – ಒಂದಕ್ಕೊಂದು ಬೇರೆ ಬೇರೆ ಆದ – ಆತ್ಮರಾಗಿ

---

೧. ಲಿಂ. ಲೀ. ವಿ. ಚಾ. ಪು. ೬೨, ವ. ೧೧.

೨. 'ಮಹಾಲಿಂಗ'ವೆಂದರೇನು ಎಂಬ ವಿಚಾರವಾಗಿ ತೋಂಟದ ಸಿದ್ಧಲಿಂಗದೇವರ ಅನುಭವ ಹೀಗಿದೆ:

'ಇಂತು ತನ್ನ ಸ್ವಲೀಲೆಯಿಂದ ನಿಷ್ಕಲಲಿಂಗಸ್ಥಲವನ್ನೈದಿದ ಪರವಸ್ತು ತಿಳಿದುಪ್ಪವೆ ಗಟ್ಟಿಗೊಂಡು ಹೆರೆದುಪ್ಪವಾದ ಹಾಗೆ ಅನಂತಮೂರ್ತಿಗಳನು ಅನಂತತತ್ವಂಗಳನು ಅನಂತ ಕೋಟಿ ಬ್ರಹ್ಮಾಂಡಗಳನು ಸರ್ವ ಸಮಸ್ತವೆಲ್ಲವನು ತನ್ನಲ್ಲಿ ಹುಟ್ಟಿಸಿ ತನ್ನಲ್ಲಿ ಗರ್ಭೀಕರಿಸಿ ತನ್ನಲ್ಲಿ ಲಯುವ ಮಾಡಿಕೊಂಡು ಅಖಂಡ ಪರಿಪೂರ್ಣಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗಸ್ಥಲವನೆಬ್ಬಿತ್ತು . . .'

ತೋಂಟದ ಸಿದ್ಧೇಶ್ವರ ವಚನ ಪುಟ ೯.

ನಿಂದುಬೇ ಒಂದು ಬಣ್ಣ ಒಡೆದು ಬೇರೆ ಬೇರೆ ಹಲವು ಬಣ್ಣ ಮೂಡಿ ಮೈದೋರಿದಂತೆ. ಬೇರೆ ಬೇರೆ ಬಣ್ಣವಾದ ಹಲವಾತ್ಮರ ಬಣ್ಣ – ನಿಜಸ್ವರೂಪ ತಾನೊಂದು. ಅದೇ ಚಿಚ್ಚೈತನ್ಯಲಿಂಗ. ಈ ಲಿಂಗದ ಚಿತ್‌ಪ್ರಭಾಂಗವಾದ ಚಿತ್‌ಪ್ರಕಾಶವೆ ಮೂಜಗ ವಾಯಿತ್ತು. ಮೂಜಗದ ಬಣ್ಣ – ನಿಜಸ್ವರೂಪ ಮುಕ್ಕಣ್ಣ ಅಂದರೆ ಲಿಂಗ. ವಿಶ್ವ ವರ್ಣ, ವಿಶ್ವರೂಪದ ಈ ಸಕೀಲ ಸಂಬಂಧ 'ಯೋಗಿನಾಥ'ನಿಗೆ ಕಂಡ ಸಂಗತಿ. ಮೂರ್ತವಿರಲಿ ಅಮೂರ್ತವಿರಲಿ, ಜಡವಿರಲಿ ಚೈತನ್ಯವಾಗಿರಲಿ, ಆತ್ಮ-ಅನಾತ್ಮರಾಗಲಿ, ವಿಶ್ವಬ್ರಹ್ಮಾಂಡಗಳ ನಾನಾವರ್ಣದ ತಂದೆತಾಯಿ ಒಂದು, ಎರಡಲ್ಲ. ಎಲ್ಲ ಬಣ್ಣದ ಉದಯ ಒಂದರಲ್ಲಿ; ಎಲ್ಲ ಬಣ್ಣದ ಪ್ರಾಣವಿಲಾಸ ಒಂದರಲ್ಲಿ. ಎಲ್ಲ ಬಣ್ಣದ ಅಸ್ತ ಮಾನ ಒಂದರಲ್ಲಿ. ಯೋಗಿನಾಥ ಕಾಣಬಲ್ಲ ಈ ವಿಶ್ವಲೀಲೆ 'ಬಣ್ಣಕರಿ'ಗೆ ಕಾಣಲಿಲ್ಲ. ಹಲವು ಬಣ್ಣದಲ್ಲಿ ತಾನೊಂದು ಬೇರಾಗಿ ತಾನೆ ಬೇರೆ, ಉಳಿದೆಲ್ಲ ಬಣ್ಣ ಬೇರೆ ಎಂದು ಬಣ್ಣವಿಲ್ಲದ ಬಣ್ಣಕ್ಕೆ ತನ್ನ ಅಹಂಭಾವದ ಬಣ್ಣ ಹಚ್ಚಿ ಅಲ್ಲಿಯೆ ಮುಳುಗಿ ಅಲ್ಲಿಯೆ ತೇಲಿ, ತನ್ನ ನಿಜವಾದ 'ಒಂದು' ಸತ್ತು, ತಾನು ಬೇರೆ ಜೀವಿಸುತ್ತಿರುವೆನೆಂಬ ಭ್ರಮೆ ಹಲವು ಬಣ್ಣದ, ಬೇರೆ ಬೇರೆ ಬಣ್ಣದ ಭ್ರಾಮಕರ ಬಾಳುವೆ. ಇಂಥ ಬಾಳುವೆ ನೋಡಿ ಯೋಗಿನಾಥ ನಗದೇನು? ಚಿತ್‌ಚೈತನ್ಯಪ್ರಕಾಶದ ಅಂಶಿಕರಾದ, ವಂಶವಾದ ಆತ್ಮರು ದೇಹ ಕರಣ ಇಂದ್ರಿಯ, ಕುಲ ಗೋತ್ರ ಜಾತಿ ವರ್ಣ ಆಶ್ರಮ, ಮನೆಮಾರು, ಮಠ ಮಾನ್ಯ, ಹೆಂಡತಿಮಕ್ಕಳು, ಬಂಧುಬಳಗ, ಆಪ್ತೇಷ್ಟರು, ಮಿತ್ರಪರಿವಾರದವರು, ದೇಶ ಕೋಶ ಜನಾಂಗ ಸಂಸ್ಕೃತಿ – ಎಂಬ 'ನಾನಾ ಪ್ರಪಂಚಿನ ಬಣ್ಣದ ಸಂಸಾರ ಸಾಗರದೊಳಗೆ ಮುಳುಗಿ' ತೇಲುತ್ತಿರುವ ವಿವರ್ಣ ಚಿತ್ರ ಎಂಥ ಕತ್ತಲೆಯ ಬೆಳಗಿನ ಮಾಟ! ಅರಿವಿನ ಬೆಳಗು ತನ್ನ ತಾ ಕತ್ತಲಿಸಿಕೊಂಡು ಹಲವು ಬಣ್ಣದ ವಿಶ್ವಬ್ರಹ್ಮವಾಗಿ, ತನ್ನ ತಾ ಮರೆದು ವಿಶ್ವಲೀಲೆಯಾಗಿ ತಾಂಡವವಾಡಿದರೆ, ಸಾಕು ಬೇಕು ಎನಲುಂಟೆ? 'ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ'[೧]

ಇಂಥ ವಿರಾಟ್ ಸ್ವರೂಪದ ವಿಶ್ವಲೀಲೆಯಲ್ಲಿ, ವಿಶ್ವಬ್ರಹ್ಮಾಂಡದ ತಾಂಡವದಲ್ಲಿ ನಿಮಗ್ನವಾಗಿದ್ದರೂ ಜ್ಯೋತಿರ್ಮಯ ಮಹಾಲಿಂಗದ ಚಿತ್‌ಪ್ರಭಾಂಗಕ್ಕೆ ಹಲವು ಬಣ್ಣದ ಕತ್ತಲೆಯ ಲೇಪವಿಲ್ಲ. ಕುಂಬಾರಹುಳು ಕೆಸರಿನಲ್ಲಿ ಆಡುವಂತೆ ಈ ಲೀಲೆ. ಅಥವಾ ನೂರು ಪಾತ್ರಗಳನ್ನು ನಟಿಸಿ, ತನ್ನ ತಾನು ಮರೆಯದೆ ತಾನು ತಾನಾಗಿರುವ ಮಹಾ ನಟನ ಕಲೆಯಂತೆ ಈ ವಿಶ್ವಲೀಲಾವಿಲಾಸ. ಈ ದಿವ್ಯವಿಲಾಸದ ಅನಂತ ಭಂಗಿಯನ್ನು ಶ್ರೀ ಅರವಿಂದರು ಶಬ್ದದಲ್ಲಿ ಹೀಗೆ ಉಜ್ವಲವಾಗಿ ಚಿತ್ರಿಸಿದ್ದಾರೆ:

'...World-existence is the ecstatic dance of Shiva which multiplies the body of the God numberlessly to the view: it leaves that white existence precisely where and what it was, ever is and ever will be; its sole absolute object is the joy of the dancing.'[೨]

೧. ಪಂ. ರಾ. ಆ. ೯, ಪ. ೯೨.
೨. **The Life Divine, Volume I, p. 119.**

ನಿಷ್ಕಲ ಪರಬ್ರಹ್ಮದಲ್ಲಿ ಮೂಡಿದ ಲೀಲಾವಿಲಾಸದ ನೆನಹು ನಿರ್ಧರವಾಗಿ ಗಟ್ಟಿಗೊಂಡು ಚಿತ್ತೆನಿಸಿ, ಚಿಚ್ಚೈತನ್ಯ ಲಿಂಗಕ್ಕೆ ಚಿತ್ರಭಾಂಗವೆನಿಸಿ ಲಿಂಗಲೀಲಾವಿಲಾಸ ನಡೆದರೆ ಎಣಿಕೆ ಹತ್ತದ ನಾಮ, ಗಣಿತವಿಲ್ಲದ ರೂಪ, ಗುಣಿಸಲಿಲ್ಲದ ಸರ್ವಾಭಂಗಿಯ 'ನಾಟಕ ನಾಟಕ ನಟಿಸಿತ್ತು.'[೧] ಈ ನಾಟ್ಯವಿಲಾಸವೆ ವಿಶ್ವವೈಭವದ ಮೂಲ ಭಿತ್ತಿ. 'ತನ್ನ ಚಿತ್‌ಪ್ರಭಾಸಾಮರ್ಥ್ಯ ಶಕ್ತಿಯ ಮುಂದುಗೊಂಡು ಅನಂತಕೋಟಿ ಬ್ರಹ್ಮಾಂಡಗಳನು ಅಣುಕೋಟಿ ಆತ್ಮರುಗಳನು ತನ್ನಲ್ಲಿಯೆ ಪುಟ್ಟಿಸಿ'ದ, – ಏನೂ ಇಲ್ಲದೆ ಬಯಲುಗನಾಗಿದ್ದ ಮಹಾಘನಶೂನ್ಯಬ್ರಹ್ಮ. ತನ್ನಲ್ಲಿಯೆ ಹುಟ್ಟಿ ಬೆಳೆದ ಅನಂತ ಕೋಟಿಯ ಬ್ರಹ್ಮವೃಕ್ಷ ಇಂಬಾಗಿ ಬೆಳೆಯಲು ಇಂಬುಗೊಡುವ ಬಯಲು ತಾನು. ಈ ಮಹಾಂತ ಮರ ಹುಟ್ಟಿದ ನೆಲ ತಾನು. ಅದಕ್ಕೆ ಪ್ರಾಣಾಹಾರವಾದ ಗಾಳಿ ನೀರು ತಾನು, ಅದರ ಜಠರಾಗ್ನಿಯ ಬೆಂಕಿ ತಾನು -- ಆ ಅಖಂಡ ಪರಿಪೂರ್ಣವಾದ ಚಿದ್ಬೆಳಗಿನ ಬಯಲು. ಮೇಲೆ ಬೇರು ಕೆಳಗೆ ಟೊಂಗೆ ಬಿಟ್ಟು ಹರಡಿರುವ ಈ ವೃಕ್ಷದ ಬೃಹದ್‌ವೈಭವವನ್ನು ಬೇಕಾದರೆ ಸರಿದು ನಿಂತು ನೋಡಿ. ಅದು ನಿಮಗೆ ಹೇಗೆ ಕಾಣುತ್ತದೆ? ಅನಂತ ಆಕಾಶ, ಆಕಾಶದ ನಟ್ಟೆಗೊಂಬಿನಲ್ಲಿ ಶುಕ್ರವಾಗಿ ಹೂತಿರುವ ಅನಂತಕೋಟಿ ನಕ್ಷತ್ರ ಮಂಜರಿ. ಈ ಮಂಜರಿ ಹಗಲಿರುಳೆನ್ನದೆ ಅರಳಿ ಬೆಳಗುತಿದ್ದರೂ ಭೂಲೋಕದ ಮಾನವರಿಗೆ ಅವು ರಾತ್ರಿಯ ದೀಪಮಾಲೆ. ಇದೇ ಆಕಾಶದ ಕೊಂಬಿನಲ್ಲಿ, ಮಳೆಗಾಲದಲ್ಲಿ ಪಲ್ಲವಿಸಿ ಕೊಬ್ಬಿ, ಕೊಂಬಿನ ಕವಲುಗಳಾದ ದಶದಿಕ್ಕುಗಳನ್ನೆಲ್ಲ ವ್ಯಾಪಿಸಿ, ಕಾಲಭೀಷಣವಾಗಿ ತೋರಿ, ಗುಡುಗಿ ಮಿಂಚಿ ಮಳೆಗರೆವ ನೀಲ ಮೇಘಮಂಡಲ. ಆಕಾಶವನ್ನೆ ಆಸರ ಮಾಡಿಕೊಂಡು ಒಡೆದು ಮೂಡುವ ಟೊಂಗೆ ವಾಯುಮಂಡಲ. ಎಳಗಾಳಿ ತಿಳಿಗಾಳಿ ತಂಬೆಲರು ತೆಂಬೆಲರು ಮಂದಾನಿಲ ಝುಂಝಾಮಾರುತಗಳೆ, ಪ್ರಾಣ ಅಪಾನಾದಿಗಳೆ ಈ ಶಾಖೆಯ ಎಲೆ ಹೂ ಕಾಯಿಗಳು. ಮತ್ತೆ ನೀರೊಂದು ಶಾಖೆ. ಹನಿ ಹಳ್ಳ ಹೊಳೆ ಕೊಳ ಕೆರೆ ಬಾವಿ ಸಮುದ್ರವೆ ಇಲ್ಲಿಯ ಚಿಗುರು ಹೂ ಕಾಯಿ. ಪೃಥ್ವಿಯೊಂದು ಟೊಂಗೆ ಈ ಬೃಹದ್‌ವೃಕ್ಷಕ್ಕೆ. ಕಲ್ಲು ಮಣ್ಣು ಗಿರಿಗಹ್ವರ ಲೋಹ ಮಣಿ ಗಿಡು ಮರ ಬಳ್ಳಿ, ಇರುವೆ ಮೊದಲು ಆನೆ ಕಡೆಯಾದ ಸಕಲ ಜೀವಜಂತು ಲೋಕ, ಮೇಲೆ ಮನುಷ್ಯ ಪ್ರಾಣಿಗಳು ಈ ಭೂಮಿಶಾಖೆಯ ಪಲ್ಲವ ಪತ್ರ ಪುಷ್ಪ ಫಲಗಳು.[೨]

ನೋಡಿ ನೋಡಿದಂತೆ ವಿಸ್ತಾರವಾಗುತ್ತ, ವಿಧವಿಧವಾಗುತ್ತ ರೂಪ ವರ್ಣ ಆಕಾರದ ಆನಂತ್ಯವನ್ನು ಬೀರುತ್ತ, ನಿಮಿಷ ನಿಮಿಷಕ್ಕೆ ಹೊಸ ಹೊಸತು ಸೃಷ್ಟಿವಿಲಾಸವನ್ನು ಹೂ ಬಿಡುತ್ತ, ಭೀಷ್ಮಶಾಂತಿಯಾಗಿ ಶಿವರುದ್ರವಾಗಿ, ಭದ್ರಕಾಳಿಯಾಗಿ, ಭಯಂಕರಿ

---

೧. ಶೂ. ಸಂ. ಪು. ೧೯, ವ. ೬೬.

೨. ಹೋಲಿಸಿ ನೋಡಿರಿ:

ಯಥಾ ನ್ಯಗ್ರೋಧಬೀಜಸ್ಥಃ ಶಕ್ತಿರೂಪೋ ಮಹಾದ್ರುಮಃ ।
ತಥಾ ಹೃದಯಬೀಜಸ್ಥಂ ವಿಶ್ವಮೇತಚ್ಚರಾಚರಂ ॥

ಪರಾಪ್ರಾವೇಶಿಕಾ. ಪು. ೧೧.
(ಷಟ್ತ್ರಿಂಶತ್ ತತ್ತ್ವಸಂದೋಹಃ)

ಶಂಕರಿಯಾಗಿ, ಬಿಸಿಲು ಬೆಳುದಿಂಗಳಾಗಿ ಬೆಳಗುಗತ್ತಲೆಯಾಗಿ, ನುಡಿವ ಶಬ್ದದ ಬಾಯಿ ಮುಚ್ಚಿ, ನೆನೆವ ಮನದ ಕಾಲುಗೆಡಿಸಿ, ಬಗೆವ ಬುದ್ಧಿಯ ಭ್ರಾಂತಿಗೊಳಗುಮಾಡಿ, ಭಾವದ ಕಲ್ಪನೆಯ ಬಣ್ಣಗೆಡಿಸಿ, ನನ್ನ ತನ್ನ ಹವಣಲ್ಲದೆ ಆಕಾಶದಾಳವಾಗಿ ಪಾತಾಳದೆತ್ತರವಾಗಿ, ವಿಶ್ವತೋ ಶಾಖೆಯಾಗಿ, ವಿಶ್ವತೋ ಪತ್ರಪಲ್ಲವವಾಗಿ, ವಿಶ್ವತೋ ಪುಷ್ಪ ಫಲವಾಗಿ, ಜಗತ್‌ಪ್ರಪಂಚವಾಗಿ, ಸೃಷ್ಟಿ ಸ್ಥಿತಿ ಲಯವಾಗುತ್ತ ಈಗ ತೋರಿ ಹಿಂದೆ ಅಡಗಿ, ಮುಂದು ಮುಂದು ಹಿಂದು ಹಿಂದಾಗುತ್ತ, ಹಿಂದು ಇಂದು ಮುಂದಿನ ಪ್ರವಾಹ ಒಂದಾಗಿ ಹರಿಯುತ್ತ ನಿಂತಿದೆ ಈ ಮಹಾ ಅಶ್ವತ್ಥವೃಕ್ಷ. ಅದೇ ಬ್ರಹ್ಮ ವೃಕ್ಷ, ವಿಶ್ವ-ಸಂಸಾರ ವೃಕ್ಷ.

ವಿಶ್ವಸಾಗರದ ಸೀಕರವಾದ ನಾನು, ವಿಶ್ವವೃಕ್ಷದ ಅತ್ಯಲ್ಪ ಜೀವಕಣ, ಚಿತ್‌ಕಣವಾದ – ಅರಿವಿನ ಅಣುವಾದ – ನಾನು ವಿಶ್ವದಿಂದ ಬಿಚ್ಚಿ ಬೇರಾಗದ ಅಂಗವಾಗಿದ್ದರೂ ವಿಶ್ವದಿಂದ ಭಿನ್ನವಾಗಿ, ಅದಕ್ಕೆ ಅನ್ಯವಾಗಿ ಅದನ್ನು ನಾನು ನೋಡುತ್ತೇನೆ; ಅದು ನನಗೆ ಇದಿರಿಟ್ಟು ತೋರುತ್ತದೆ. ಏಕೆ? ನನಗೆ ಗೊತ್ತಿಲ್ಲ. ನೀವೂ ನನ್ನಂತೆ ಸಾಮಾನ್ಯ ಮನುಷ್ಯಪ್ರಾಣಿಯಾಗಿದ್ದರೆ ವಿಶ್ವದಲ್ಲಿ ನೀವೂ ಒಂದು ಸ್ವತಂತ್ರ ಜೀವಬಿಂದುವಾಗಿ ನಿಮಗೆ ಇದಿರಿಟ್ಟ ವಿಶ್ವವೃಕ್ಷವನ್ನು ನೋಡುತ್ತೀರಿ. ನಾನು ಮತ್ತು ನೀವು, ಅಥವಾ ನಮ್ಮಂಥ ಅರಿವ ಚೈತನ್ಯಕಣಗಳ ಎಡ ಬಲ ಹಿಂದೆ ಮುಂದೆ ಮೇಲೆ ಕೆಳಗೆ ಆವರಿಸಿ, ಕಣ್ಣು ಕಿವಿ ಮುಂತಾದ ಜ್ಞಾನೇಂದ್ರಿಯಗಳ ಸೀಮೆಯನ್ನು ದಾಟಿ, ಆಚೆ ಆಚೆ ಹಬ್ಬಿ ಹರಡಿ ಅವಿಜ್ಞಾತದ ಸೀಮೆಯಲ್ಲಿ ಮಸುಕಾಗುತ್ತ ಮಾಯವಾಗುತ್ತದೆ ವಿಶ್ವದ ರೂಪ ವಿಸ್ತಾರ. ನಾನು ನೀವು ಅವರು ಇವರು ನೋಡುವ ವಿಶ್ವ ಒಂದೇ ರೂಪ ಆಗಿರಬಹುದು. ನನ್ನ ಕಣ್ಣು ಕಿವಿಯಲ್ಲಿ ಹಾಯ್ದು ನನ್ನ ಅರಿವಿನಲ್ಲಿ ಮೂಡಿ ಹೊರಗೆ ಬಿಂಬಿಸುವ ಪ್ರಪಂಚ ಮತ್ತು ನಿಮ್ಮ ಹೊರಗೆ ಬಿಂಬಿಸುವ ಪ್ರಪಂಚ ಒಂದೆ ಎಂದು ಇಟ್ಟುಕೊಂಡಿದ್ದೇವೆ. ಹೀಗೆ ಭಾವಿಸಿಕೊಂಡರೆ ವ್ಯವಹಾರಕ್ಕೆ ಅನುಕೂಲ; ಅನ್ಯಥಾ ಭಾವಿಸಿದರೆ ಜಗತ್ತಿನಲ್ಲಿ ವ್ಯವಹಾರ ತೀರ ಕಠಿಣವಾಗಬಹುದಲ್ಲವೇ? ಮತ್ತೆ, ನನಗೆ ತೋರುವ ಪ್ರಪಂಚ ನನ್ನ ಪ್ರತ್ಯಕ್ಷ;[೧] ನನಗೆ ಕಾಣುವ ಪ್ರಪಂಚವೇ ನಿಮಗೆ ತೋರುತ್ತದೆ ಎಂಬುದು ನನ್ನ ಅನುಮಾನ. ಎಲ್ಲರ ಕಣ್ಣಿಗೆ – ಅಂದರೆ ಜ್ಞಾನೇಂದ್ರಿಯಗಳಿಗೆ – ವಿಶ್ವ ಒಂದೇ ರೂಪ, ಒಂದೇ ವರ್ಣ ಒಂದೇ ಆಕಾರವಾಗಿ ಕಾಣುತ್ತದೆ ಎಂಬ ನಿಶ್ಚಯ ಎಲ್ಲಿದೆ? ಕಾಣುವ ಕಣ್ಣುಗಳಿದ್ದಷ್ಟು ತೋರುವ ವಿಶ್ವಗಳಿವೆ ಎಂದು ಹೇಳಲು ಯಾವ ಆತಂಕವಿದೆ? ಮಾನವಪ್ರಾಣಿಗಳಲ್ಲದ ಪಶು ಪಕ್ಷಿ ಇರುವೆ ಹಾವು ಮರ ಬಳ್ಳಿ ಮುಂತಾದ ಸೇಂದ್ರಿಯ ಮತ್ತು ನಿರಿಂದ್ರಿಯ ಜೀವಾಣುಗಳಿಗೆ ಗೋಚರವಾಗುವ ವಿಶ್ವದ ಸ್ವರೂಪವೇನು? ಇರುವೆಯ ಕಣ್ಣಲ್ಲಿ ನನ್ನ ರೂಪ ಆಕಾರ ಗಾತ್ರವೇನು? ಆನೆಯ ಕಣ್ಣಲ್ಲಿ ಅದು ಹೇಗೆ? ಎರೆಹುಳ ಕಣ್ಣಲ್ಲಿ ನಾನು ಒಂದೇ ವಿಧವಾಗಿ ಮೂಡಿಲ್ಲವೆಂದು

---

೧. ಮನಸ್ಸಿಗೆ ಅಥವಾ ಅರಿವಿನೊಡನೆ ನೇರವಾಗಿ ಸಂಬಂಧವಿಲ್ಲದೆ, ಕಣ್ಣು ಕಿವಿಯ ದ್ವಾರದಲ್ಲಿ ಪ್ರವೇಶಮಾಡಿ. ಮೆದುಳಿನಲ್ಲಿ ಹೊಳೆವ ವಿಷಯಪ್ರಪಂಚ ಪ್ರತ್ಯಕ್ಷವಾಗಿ ಅಲ್ಲ, ಅನುಮಾನ ಪ್ರಮಾಣದಿಂದಲೇ ನಮಗೆ ಗೊತ್ತಾಗುತ್ತದೆ – ಎಂದು ವಿಜ್ಞಾನಿಗಳ ಮತ.

ನನ್ನ ವಿಚಾರ. ಮತ್ತು ವಿಶ್ವದ ಭಾನ ಆಗುವಲ್ಲಿ ಜ್ಞಾನೇಂದ್ರಿಯಗಳು ಕಾರಣವಾಗಿರುವಂತೆ, ಮನ ಬುದ್ಧಿ ಮುಂತಾದ ಕರಣಗಳೂ ವಿಶ್ವವನ್ನು ತಂತಮ್ಮ ಸ್ಥಲ ಭಾವ ಗುಣ ಧರ್ಮಕ್ಕೆ ಅನುಗುಣವಾಗಿ ಪ್ರತಿಬಿಂಬಿಸಿಕೊಳ್ಳುತ್ತವೆ ಎಂಬ ಮಾತೂ ಸತ್ಯಸಂಗತಿ ಎನಿಸುತ್ತದೆ. ಕಾಮಿನಿಯ ಬಣ್ಣ ಕಾಮಿಯ ಕಣ್ಣ ಬಣ್ಣವನ್ನೂ ಹಚ್ಚಿಕೊಂಡು ಅನೇಕ ಗುಣಿತವಾಗಿ ಕಾಂತಿಯಾಗುತ್ತದೆ. ಬಣ್ಣವಿಲ್ಲದ ನಿಷ್ಕಾಮಿಯ ಕಣ್ಣಲ್ಲಿ ಅದು ಒಂದು ಹೆಣ್ಣು ರೂಪಲ್ಲದೆ ಈ ಗುಣಿತ ಕಾಂತಿ ಅಲ್ಲಿಲ್ಲ.

ಹಾಗಾದರೆ ಅನುಭವಿಸಬಲ್ಲ ಜೀವಿಗಳು ಅನುಭವಿಸುವ ವಿಶ್ವಗಳೆಷ್ಟು? ಅಥವಾ ಒಂದಾಗಿದ್ದ ವಿಶ್ವಪ್ರಪಂಚದ ರೂಪ ವರ್ಣ ಗಾತ್ರ ಆಕಾರ ಎಷ್ಟು ಪ್ರಕಾರ? ಲೆಕ್ಕ ಇಲ್ಲದಷ್ಟು – ಇದೇ ಗೊತ್ತಿಲ್ಲದ ನನಗೆ ಗೊತ್ತಿದ್ದ ಉತ್ತರ. ನಿಮಗೆ ಗೊತ್ತಿದ್ದರೆ ನೀವು ಸಾಮಾನ್ಯಕೋಟಿಯನ್ನು ಮೀರಿ ಮೇಲೆ ನಿಲ್ಲುತ್ತೀರಿ. ಇಲ್ಲಿಗೇ ಮುಗಿಯಲಿಲ್ಲ ವಿಶ್ವ ಲೋಕ ಪ್ರಪಂಚದ ಪ್ರಕರಣ. 'ಲೋಕ್ಯತ ಇತಿ ಲೋಕಃ' ಎಂದು ಸಂಸ್ಕೃತ ವೈಯಾಕರಣಿಗಳು ಹೇಳುವ ಮಾತನ್ನು ಗಮನದಲ್ಲಿಡಿ. ನೋಡಲ್ಪಡುವುದು, ತೋರುವುದು ಲೋಕ. ಎಲ್ಲರು ಅವಲೋಕಿಸಬಲ್ಲುದೇ ಲೋಕ. ಕನ್ನಡದಲ್ಲಿ ಅಥವಾ ವಚನ ಸಾಹಿತ್ಯದಲ್ಲಿ ಲೋಕ ಎಂಬರ್ಥದಲ್ಲಿಯೆ ತೋರಿಕೆ ಎಂಬ ಶಬ್ದ ಉಪಯೋಗವಾದಂತಿದೆ. ವಿಶ್ವವೃಕ್ಷ, ಸಕಲ ಲೋಕ ಅಥವಾ ಎಲ್ಲ ತೋರಿಕೆ ಎಲ್ಲರಿಗೆ ತೋರುತ್ತದೆ. ಆದರೆ ಎಲ್ಲರಿಗೆ ತೋರದೆ ತನಗೆ ಮಾತ್ರ ತೋರುವ ತೋರಿಕೆ, ಲೋಕ, ವಿಶ್ವ ಒಂದಿದೆ. ನನ್ನ ಮುಂದೆ ಕುಳಿತಿರುವ ನೀವು ನನಗೆ ತೋರುತ್ತೀರಿ; ನಾನು ನಿಮ್ಮನ್ನು ನೋಡುತ್ತೇನೆ. ನನ್ನಂತೆ ನೀವು ನಡೆದಾಡಬಲ್ಲಿರಿ, – ಪ್ರಾಣ ಚೈತನ್ಯಬಲದಿಂದ ಎಂಬುದೂ ನನಗೆ ಗೊತ್ತು. ನಿಮ್ಮ ರೂಪ ಆಕಾರ ವರ್ಣವನ್ನು ನೋಡಬಲ್ಲ ನಾನು ನಿಮ್ಮ ಬಾಹ್ಯವ್ಯಾಪಾರವನ್ನೆಲ್ಲ ಜ್ಞಾನೇಂದ್ರಿಯ ಮುಖವಾಗಿ ಕಾಣಬಲ್ಲೆ. ಆದರೆ ನಿಮ್ಮ ಒಳಗೆ ಇರುವ, ವ್ಯವಹಾರ ನಡೆಸಿರುವ ನಿಮ್ಮ ಮನಸ್ಸು ಹೃದಯ ಬುದ್ಧಿ ಭಾವ – ಇವು ನನಗೆ ತೋರುವುದಿಲ್ಲ. ನಿಮಗೆ ತೋರುತ್ತವೆ. ಅಲ್ಲವೆ? ಹೀಗೆ ನಾನು ಹೇಳಲು ಕಾರಣವೆಂದರೆ ನನ್ನ ಮನ ಬುದ್ಧಿ ಮುಂತಾದವರ ಅಂತಃಕ್ರಿಯೆಗಳನ್ನೆಲ್ಲ ನಾನು ನೋಡಬಲ್ಲೆ. ಅವು ನನಗೆ ತೋರುತ್ತವೆ. ಅವನ್ನು ನಾನು ನೋಡುವುದು ಕಣ್ಣು ಕಿವಿ ಮೂಗು ನಾಲಗೆ ತೊವಲಿನಿಂದಲ್ಲ, ನನ್ನ ಅರಿವಿನಿಂದ. ನನ್ನಂತೆಯೆ ನಿಮ್ಮ ಅರಿವಿನ ಕಣ್ಣಿಂದ ಅಥವಾ ಅರಿವಿನ ಕಿವಿ ಮೂಗಿನಿಂದ ನಿಮ್ಮ ಒಳಗೆ ನಡೆದಿರುವ 'ಜಗತ್ತ'ನ್ನು ನೀವು ನೋಡಬಲ್ಲಿರಿ. ನಿಮ್ಮ ಈ ಜಗತ್ತನ್ನು ನೀವು ನನಗೆ, ಅಂದರೆ ಎರಡನೆಯವರಿಗೆ ತೋರಿಸಬೇಕೆಂದು ನೀವು ಇಚ್ಛಿಸಿದರೂ ಅದನ್ನು ಹೊರಗಿಟ್ಟು 'ಲೋಕ'ದ ವಸ್ತುವನ್ನಾಗಿ ಮಾಡುವ ಶಕ್ತಿ ನಿಮಗಿಲ್ಲ, ನನಗೂ ಇಲ್ಲ. ಇಲ್ಲಿಯ ವರೆಗೆ ನಾನು ಮಾತ್ರ ಬಯಲಿಗೆ ಬಿದ್ದು ಅಡ್ಡಾಡುವ ಯಾರ ಮನ ಬುದ್ಧಿ ಹೃದಯಗಳನ್ನೂ ನೋಡಿಲ್ಲ. ಅಂತರಂಗದಲ್ಲಿಯೆ ವಾಸಮಾಡಿಕೊಂಡಿರುವ ಈ ಗುಪ್ತ ಚಿತ್‌ಚೈತನ್ಯ ಬಾಹ್ಯಲೋಕ ಪ್ರಪಂಚವನ್ನು ನೋಡುತ್ತ, ಅದರೊಡನೆ ವ್ಯವಹರಿಸುತ್ತದೆ. ಆದರೆ ತನ್ನನ್ನು ಮಾತ್ರ ಲೋಕ ಪ್ರಪಂಚದಿಂದ ಯಾವಾಗಲೂ ಮರೆಮಾಡಿಕೊಂಡೇ ಇರುತ್ತದೆ. ಅಂತರಂಗದ

ಈ ಮನ ಬುದ್ಧಿ ಭಾವದ ಚೈತನ್ಯಮೂರ್ತಿ ಹೊರಗೆ ಬಿದ್ದರೆ, ಬೇರೆ ರೂಪ ಧರಿಸಿಯೇ ಹೊರಬೀಳಬೇಕು. ಸಂಗೀತ, ಸಾಹಿತ್ಯ, ತರ್ಕಶಾಸ್ತ್ರ, ಮತ, ಧರ್ಮ, ತತ್ತ್ವದರ್ಶನ ಮುಂತಾದುವೆಲ್ಲ ಮನುಷ್ಯನ ಅಂತರ್ವಿಶ್ವದ ಬಹಿಃಸ್ವರೂಪವೆ. ಈ ಅಂತರ್ವಿಶ್ವ ಅತ್ಯಂತ ಸೂಕ್ಷ್ಮ; ಅಂತೆಯೆ ಬಹಿರ್ವಿಶ್ವಕ್ಕಿಂತ ಹೆಚ್ಚು ವಿಸ್ತಾರ. ವಿಜ್ಞಾನದ ಅದ್ಭುತಗಳು, ಸಾಹಿತ್ಯದ ಅಮರ್ತ್ಯ ಕೃತಿಗಳು, ಅಣು ಬಾಂಬು, ರಾಕೆಟುಗಳು, ಮೇಘದೂತ, ಡಿವ್ಹಾಯಿನ್ ಕಾಮೆಡಿ, ಪಿರಾಮಿಡುಗಳ ಬೀಜ ಬೇರು ಮಾನವನ ಹೃದಯ ಬುದ್ಧಿ ಭಾವಾಂತರಾಳದಲ್ಲಿಯೆ ಮೊದಲು ಅಂಕುರಿಸಿ ಹೊರಗೆ ಹೊಮ್ಮಿ ಬೆಳೆದು ನಿಂತುವೆ. ಹೀಗೆ ಹೊರಗೆ ತೋರುವ ಸ್ಥೂಲ ವಿಶ್ವಪ್ರಪಂಚ, ಈ ಪ್ರಪಂಚದ ಒಳಗೊಳಗೆ ಮಾನವನಿಗೆ ಕಾಣುವ ಮತ್ತು ಕಾಣದ ಸೂಕ್ಷ್ಮ ಜಗತ್‌ಪ್ರಪಂಚವನ್ನು ವಿಶ್ವಪುರುಷನ ಹೊರಮೈ ಒಳಮೈ ಎಂದು ಹೇಳಿದರೆ ಇವೆರಡನ್ನು ನೋಡಿ ಅನುಭವಿಸಬಲ್ಲ ಅರಿವು, ಒಳಹೊರಗೆ ನಡೆದಿರುವ, ಹರಿಯುತ್ತಿರುವ ವಿಶ್ವವನ್ನು ಗರ್ಭೀಕರಿಸಿಕೊಂಡಿರುವ 'ಕಾರಣವಿಶ್ವ'ವೆಂದು ಕರೆಯಬಹುದು. ಈ ಕಾರಣವಿಶ್ವವೇ ಶೂನ್ಯದ ನೆನಹು ನಿರ್ಧರಿಸಿ ಗಟ್ಟಿಗೊಂಡ ಚಿತ್ತು. ಅದೇ ಬ್ರಹ್ಮಾಂಡಕೋಟಿಯ ಚಿದ್ಬೀಜ, ಚಿದ್ಬ್ರಹ್ಮನ ಅಂಡ, ಅಂದರೆ ಚಿದ್‌ಬ್ರಹ್ಮಾಂಡ.

ನವಿಲ ತತ್ತಿಯ ನೆನಪು ಮತ್ತೆ ಬರುತ್ತದೆ ಇಲ್ಲಿ ನನಗೆ. ತತ್ತಿಯ ರಸವೇ ನವಿಲಿನ ಕಾರಣಕಾಯ ಅಥವಾ ನವಿಲುಬೀಜ. ತತ್ತಿಯ ಒಳಗಿದ್ದು ಕಾಲು ಗರಿ ಬಣ್ಣ ಪ್ರಾಣ ಕಳೆ ರೂಪುಗೊಳ್ಳುತ್ತಿರುವ, ಅಂಡಗರ್ಭದಲ್ಲಿ ಮೊಳೆಯುತ್ತಿರುವ ಮೂರ್ತಿಯೇ ಮಯೂರದ ಸೂಕ್ಷ್ಮತನು. ತತ್ತಿಯಿಂದ ಹೊರಬಿದ್ದ ಹಕ್ಕಿಯೇ ನಾಮ ರೂಪ ಕ್ರಿಯೆಯ ಸಾಕಾರ ಜೀವ. ಅದೇ ನವಿಲಿನ ಸ್ಥೂಲ ರೂಪ. ಈ ಸ್ಥೂಲ ರೂಪವಾಗಿ ನವಿಲುಜೀವನವನ್ನು ಕುಣಿಯುತ್ತಿರುವ ನವಿಲಿಗೆ ಮೊದಲು ತಾನು ಅಂಡರಸವಾಗಿದ್ದ, ತಾಯ ಹೊಟ್ಟೆಯಲ್ಲಿದ್ದು ಅಂಡವಾಗಿ ಸೃಷ್ಟಿಯಾಗುತ್ತಿದ್ದ, ಅಥವಾ ಹೊಟ್ಟೆಯಿಂದ ಹೊರಬಿದ್ದ ತತ್ತಿಯಲ್ಲಿದ್ದು ಸೂಕ್ಷ್ಮರೂಪವಾಗಿ ವಿಲಾಸಿಸುತ್ತಿದ್ದ ತನ್ನ ಪೂರ್ವದ ಸಂಗತಿ ಗೊತ್ತಿರಲಿಕ್ಕಿಲ್ಲ. ಅಲ್ಪಸ್ವಲ್ಪ ಗೊತ್ತಿದ್ದರೆ, ತತ್ತಿಯಲ್ಲಿ ರಸ ಗಟ್ಟಿಗೊಂಡು ಮರಿಯಾಗಿ, ತತ್ತಿಯ ಸೆರೆಯಲ್ಲಿ ಸಿಕ್ಕುದರ ಅರಿವು ಅದಕ್ಕಿರಬಹುದು. ಬಹುಮಟ್ಟಿಗೆ ವಿಶ್ವವೂ ಹೀಗೆಯೇ ಕಾರಣ ಸೂಕ್ಷ್ಮ ಸ್ಥೂಲ ರೂಪವಾಗಿ ಜೀವನವಿಲಾಸವನ್ನು ನಾಟ್ಯಮಾಡುವಂತಿದೆ.

ಸ್ಥೂಲ ಜಡ ಸಾಕಾರವಾದ ಭೌತಪ್ರಪಂಚಕ್ಕೆ ತಾನು ಎಲ್ಲಿಂದ ಬಂದೆನೆಂಬ ವಿಚಾರ ತಿಳಿಯದು. ಅಥವಾ ತಿಳಿವ ತತ್ತ್ವದ ಹೊಳಹೇ ಅಲ್ಲಿ ಸ್ಫುಟವಾಗಿ ಕಾಣಬರುವುದಿಲ್ಲ. ಆದರೆ ವಿಶ್ವವೃಕ್ಷದ ಹೂಮೊಗ್ಗೆಯಂತಿರುವ ಮಾನವಕೋಟಿಯಲ್ಲಿ ಅರಿವಿನ ಪರಿಮಳ, ಹೃದಯ ಮನ ಬುದ್ಧಿಯ ರೂಪದಲ್ಲಿ ಇನ್ನೂ ಕಹಿಯಾಗಿ, ಅಹಂಭಾವದ ಸೆರೆಮನೆಯ ಅಜ್ಞಾನ ತಮಸ್ಸಿನಲ್ಲಿದ್ದ, ಇನ್ನೂ ಬಂಧನಸಮಾಧಿಯಲ್ಲಿ ಕುಳಿತು. 'ಕನ್ನೆಯ ಸ್ನೇಹದಂತೆ' ಒಳಗೊಳಗೆ ಮಸು ಮಸುಕಾಗಿ ಪರಿಮಳಿಸುತ್ತಿದೆ. ಆದರೂ ಅರಿವಿನ ಮೊಗ್ಗೆಯ ಪರಿಮಳದ ಪ್ರಭಾವ ವಿಶ್ವಪ್ರಪಂಚದ ಅಂತರಂಗ ಸೂಕ್ಷ್ಮವನ್ನು ಆವರಿಸಿ, ಬಾಹ್ಯವಿಶ್ವವನ್ನು ಎಬ್ಬಿಸಿ ನುಡಿಸುವ ಭರದಲ್ಲಿದೆ. ಅದರಂತೆ

ಇದೇ ಮೊಗ್ಗೆ-ಅರಿವು ವಿಶ್ವದ ಬೀಜವನ್ನೂ ಕಾಣುವ ತವಕದಲ್ಲಿದೆ. ಮಾನವನಾಗಿ ಅರಳುತ್ತಿರುವ ಪ್ರಪಂಚಕ್ಕೆ ಇನ್ನೂ ಅತ್ಯಂತ ಸಾರೋಜ್ವಲವಾಗಿ ಅರಳಿ, ದಿವ್ಯರಸ ಫಲವಾಗುವ ಬಯಕೆ ಹತ್ತಿದಂತೆ ತೋರುತ್ತದೆ. ಈ ಬಯಕೆ ಪೂರ್ತಿಯಾಗದೆ ಪ್ರಪಂಚದ ಸಾರಮೂರ್ತಿಯಾದ ಮಾನವನಿಗೆ ವಿಶ್ರಾಂತಿಯಿಲ್ಲ, ಶಾಂತಿಯಿಲ್ಲ.

ಬಹಿರ್ಮುಖವಾಗಿ ವಿಶ್ವವನ್ನು ನೋಡಿದರೆ, ವಿಶ್ವದ ಬಹಿರಂಗವೈಭವ ಕಾಣಬಹುದು. ಆದರೆ ಬಹಿರ್ಮುಖವಾದ ಬುದ್ಧಿಯಿಂದ ವಿಶ್ವದ ಮೂಲ, ವಿಶ್ವದ ಪ್ರಥಮ ಬೀಜ, ಅದರ ರಸ ರಹಸ್ಯ, ಅದರ ಪರಮಾಂತರಂಗ ಕಾಣುವ ಸಂಭವವೇ ಇಲ್ಲ. ಖಂಡ ಬುದ್ಧಿ, ಖಂಡ ಇಂದ್ರಿಯಮುಖದಲ್ಲಿ ವಿಶ್ವದ ಪರಿಪೂರ್ಣರಹಸ್ಯವನ್ನು ಕಾಣುವೆನೆಂಬ ಸಾಹಸ, ಮನೆಯೊಳಗೆ ಕುಳಿತು ಕಿಡಿಕಿಯೊಳಗೆ ಇಣಿಕಿ ಮುಗಿಲನ್ನೆಲ್ಲ ನೋಡಬೇಕೆಂಬ ನನ್ನ ಸಾಹಸದಂತೆಯೆ. ಮತ್ತು ರಸ, ರಹಸ್ಯ ಎಂಬುದು ಒಳಗೆ ಹುದುಗಿರುವುದು ವಸ್ತುಲೋಕದ ಸಾಮಾನ್ಯ ನಿಯಮ. ವೃಕ್ಷದ ಕೊನೆಯ ಅಂಕ, ಪಕ್ವಹೃದಯ ಹಣ್ಣು; ಹಣ್ಣಿನ ಹೃದಯರಹಸ್ಯ ಅಂತರಂಗದ ರಸ. ಅದರಂತೆ ವಿಶ್ವಪ್ರಪಂಚದ ಕೋಟಿವರ್ಷದ ತಪಸ್ಸಿನ ಫಲ ಮಾನವ; ಮಾನವನ, ಮಾನವನನ್ನು ಹಡೆದ ಪ್ರಪಂಚದ ರಹಸ್ಯ, ತಿರುಳು, ರಸ, ಮಾನವನ ಒಳಗೆ ಹುದುಗಿರಬಹುದಲ್ಲದೆ ಹೊರಗೆ ಕಾಣುವ ತೋಟೆಯ ತೊವಲ ಬಣ್ಣ ಅದು ಅಲ್ಲ. ಮಾನವನ ಅಂತರಂಗದ ವಿಶ್ವವಾದ ಮನ ಬುದ್ಧಿಗೆ ವಿಶ್ವದ ರಹಸ್ಯ ಕಾಣದಿದ್ದರೆ, ಆ ಅಂತರಂಗದ ವಿಶ್ವವನ್ನು ಭೇದಿಸಿ ಇನ್ನೂ ಒಳಗೆ ನೋಡಬೇಕು. ಎಲ್ಲಿಯವರೆಗೆ ತನ್ನ ಸದುಹೃದಯಕ್ಕೆ ಸಂತೃಪ್ತಿ. ಸಂಪೂರ್ಣ ಸಮಾಧಾನ ಇಲ್ಲವೋ ಅಲ್ಲಿಯವರೆಗೆ ಮನ ಬುದ್ಧಿಯನ್ನು ತೋಡಿ, ಅವಕ್ಕೆ ಲೀಲಾಭಿತ್ತಿಯಾದ ಅರಿವನ್ನು ಅಗೆದು ಒಳಗೆ, ಇನ್ನೂ ಒಳಗೆ, ಒಳಗೆಂಬುದು ಮುಗಿದು ಮತ್ತೆ ನೋಡಿದರೆ, ಹೊರಗೆ ತೋರುವ ವಿಶ್ವ ತನ್ನೊಳಗೆಯೆ ತೋರಿ, ಹೊರಗೊಳಗಿಲ್ಲದೆ ಎಲ್ಲ ತಾನಾಗಿ ನಿಂದ ಸ್ಥಲದಲ್ಲಿ ನಿಲ್ಲಬೇಕು. ಇಂಥ ಪರಮಾಕಾಶದ ನಿಲವಿನ ಮಹಾನುಭಾವಿಗಳು ವಿಶ್ವಪ್ರಪಂಚದ ನಿಜವಾದ ಬಣ್ಣವನ್ನು ಹೀಗೆಂದು ತೋರುತ್ತಾರೆ:

೧ ವಿಶ್ವದೊಳಗೆಲ್ಲ ನೀನೆ ದೇವ.
ವಿಶ್ವಭರಿತನು ನೀನೆ ದೇವ.
ವಿಶ್ವರೂಪನು ನೀನೆ ದೇವ.
ವಿಶ್ವಪತಿ ನೀನೆ ದೇವ.
ವಿಶ್ವಾತೀತನು ನೀನೆ ದೇವ, ಅಖಂಡೇಶ್ವರ.[೧]

೨ ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ.
ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ.
ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.[೨]

---

೧. ಅಖಂ. ವ. ಪು. ೧೬೮, ವ. ೧೯. ೨. ಮ. ವ. ಪು. ೨, ವ. ೪.

೩ ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ;
ಸಕಲವಿಸ್ತಾರದ ರೂಹು ನೀನೇ ದೇವಾ;
ವಿಶ್ವತೋ ಚಕ್ಷು ನೀನೇ ದೇವಾ;
ವಿಶ್ವತೋ ಮುಖ ನೀನೇ ದೇವಾ;
ವಿಶ್ವತೋ ಬಾಹು ನೀನೇ ದೇವಾ;
ವಿಶ್ವತೋ ಪಾದ ನೀನೇ ದೇವಾ, ಕೂಡಲಸಂಗಮದೇವಾ.[೧]

೪ ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರುತ ವಿಶ್ವತಸ್ಪಾತ್ ।
ಸಂ ಬಾಹುಭ್ಯಾಂ ಧಮತಿ ಸಂ ಪತತ್ರೈರ್ದ್ಯಾವಾಭೂಮೀ
ಜನಯನ್ ದೇವ ಏಕಃ ॥[೨]

೫ ಸರ್ವಂ ಖಲ್ವಿದಂ ಬ್ರಹ್ಮ.[೩]

೬ ಸರ್ವಂ ಲಿಂಗಮಯಂ ಜಗತ್.

ವಿಶ್ವದ ನಿಜಸ್ವರೂಪ ಮಹಾಘನಲಿಂಗವೆಂದು, ಪರಶಿವ ಪರಬ್ರಹ್ಮವೆಂದು ಕಣ್ಣಾರೆ ಕಂಡರು ದ್ರಷ್ಟಾರರು, ಶರಣರು, ಅನುಭಾವಿಗಳು. 'ಎರಡೆಂಬರಯ್ಯಾ' ಕರಣದ ಕಂಗಳಲ್ಲಿ ನೋಡಿದವರು....[೪] ಮನ ಬುದ್ಧಿಗಳಿಗೆ ಕಂಗಳಾದ ಕಣ್ಣು ಕಿವಿ ಮೂಗು ತೊವಲು ನಾಲಗೆಯಿಂದ ನೋಡಿದರೆ, ಹಲವು ನಾಮ ಹಲವು ರೂಪ ಹಲವು ಕ್ರಿಯೆ, ನಾನಾವರ್ಣ ನಾನಾವಸ್ತು ನಾನಾಪ್ರಕಾರ ನಾನಾವಿಕಾರ, ಅನಂತ ಜಡ, ಅನಂತ ಚೈತನ್ಯ, ಅನಂತ ಪ್ರಾಣ, ಅನಂತ ದೇಹ, ಅನೇಕ ಭಾವ, ಅನೇಕ ಬುದ್ಧಿ, ಅನೇಕ ಮನ ಅನೇಕ ಅಹಂಕಾರಗಳು ನಾನು ತಾನೆಂದು, ನಾನು ನೀನಲ್ಲ ನೀನು ನಾನಲ್ಲ ಎಂದು, ನಾನು ಬೇರೆ ನನಗೆ ತೋರುವ ವಿಶ್ವವಸ್ತುಜಾಲ ಬೇರೆ ಎಂಬ ದ್ವೈತಬ್ರಹ್ಮದ ಸಾಮ್ರಾಜ್ಯ 'ಎತ್ತೆತ್ತ ನೋಡಿದತ್ತತ್ತ ನೀನೆ ದೇವಾ'–ಎಂದು ಹೇಳಿಸಿಕೊಳ್ಳುವಂತೆ ವಿಶ್ವ ವ್ಯಾಪಿಯಾಗಿ ಹಬ್ಬಿಕೊಂಡಿದೆ. ಇಂಥ ದ್ವೈತದ ರಾಜ್ಯದಲ್ಲಿಯೆ ಹುಟ್ಟಿ ಬೆಳೆದು ಬಾಳು ತ್ತಿರುವ ಮಾನವಪ್ರಾಣಿಗೆ ತನ್ನ ಸ್ವರಾಜ್ಯ, ತನ್ನ ಅನಾದಿ ನಿಜಸಾಮ್ರಾಜ್ಯದ ನೆನಹು ದೋರಿ, ಎಚ್ಚತ್ತು ತಿಳಿದು ನೋಡಿ ದ್ವೈತಪ್ರಪಂಚದ ಸತ್ಯಸಂಗತಿಯನ್ನು ಕಂಡು ಹೇಳುತ್ತಾನೆ – ಎರಡರ ತಾಯಿ ಒಂದು ಎಂದು; ಎರಡು ಮತ್ತು ಒಂದರ ತಾಯಿ-ತಂದೆ ಶೂನ್ಯ (0) ಎಂದು.

ಮಾಯಾಸಮೇತಃ ಸಕಲೋ ನಿಷ್ಕಲಃ ಕೇವಲಃ ಪರಃ
ಅಸ್ತಿನಾಸ್ತಿದ್ವಯಾತೀತೋ ವಾಙ್ಮನೋಽಗೋಚರಾತ್ಮಕಃ[೫]

ಮಾತಿಗೆ ಮನಕ್ಕೆ ಅಗೋಚರವಾದ, 'ಇಲ್ಲ ಉಂಟು' ಎಂಬುದನ್ನೂ ಮೀರಿದ ನಿಷ್ಕಲ ವಸ್ತುವೆ ತನ್ನ ಮಾಯಾಶಕ್ತಿಯಲ್ಲಿ ತನ್ನ ಚಿತ್ತಿ, ಹಲವನ್ನು ಪಡೆದು ವಿಶ್ವಬ್ರಹ್ಮಾಂಡವಾಗಿ,

---

೧. ಬ. ವ. ಪು. ೧೩೯, ವ. ೭.
೨. ಶ್ವೇ. ಉ. ೩, ಮಂ. ೩.
೩. ಛಾಂ. ಉ. ಅ. ೩, ಖಂ. ೧೪, ಮಂ. ೧.
೪. ಪ್ರ. ವ. ಪ್ರು. ೨೬೩, ವ. ೧೦.
೫. ಶಿ. ಪ್ರ. ಪಟಲ ೧. ಶ್ಲೋ. ೧೯.

ಲೋಕಪ್ರಪಂಚವಾಗಿ, ಸಕಲವಿಸ್ತಾರವಾಗಿ ಎಲ್ಲಿ ನೋಡಿದಲ್ಲಿ ತಾನೆ ತಾನಾಗಿ ಹರಡಿ ಕೊಂಡು ಹರವಿಕೊಂಡು ನಿಂತಿದೆ.

"ದೇವಾ, ಚೆನ್ನಮಲ್ಲಿಕಾರ್ಜುನಾ, ಕೂಡಲಸಂಗಮದೇವಾ, ಅಖಂಡೇಶ್ವರಾ, ಅನಂತ ವಿಶ್ವವಸ್ತುಜಾಲದ ಒಳಗು ಅಂದರೆ ಅಂತರಂಗವೆಲ್ಲ ನೀನೆ. ಕಲ್ಲು ಕಡ್ಡಿ ಆನೆ ಇರುವೆ ಗಾಳಿ ಬಯಲು ಪರ್ವತ ಸಮುದ್ರ, ಈ ಕೂಸು ಆ ಜವ್ವನೆ ಈ ಮುದುಕ, ನನ್ನ ಅರಿವು ಕಂಬದ ಮರವು, ಈ ರತಿಸುಖ ಆ ರಣರಣಕ ದುಃಖ, ಈ ಕೊಲೆ ಆ ಕಲ್ಯಾಣ, ಪುಣ್ಯ ಪಾಪ ಬ್ರಾಹ್ಮಣ ಶೂದ್ರ, ನಿಗ್ರೋ ಹಿದನ್ ಕ್ರಿಶ್ಚಿಯನ್, ಇಲ್ಲಿ ನಡೆದ ಮೋಸ ಕಪಟ, ಅಲ್ಲಿ ಮಳೆಗರೆವ ಸತ್ಯ ದಯೆ ಪ್ರಾಮಾಣಿಕತನ, ಈ ವಿಕಟ ಪಲ್ಲಟ ಆ ಸುಂದರ ಸುರಮ್ಯ, ಕಾರ್ಮೋಡ ಬರಸಿಡಿಲು ಛಿಳಿಲುಮಿಂಚು, ಭೂಕಂಪ ಜ್ವಾಲಾ ಮುಖಿ ಬಸಂತ ಬನಸಿರಿ ಕೋಗಿಲೆ ಬೆಳುದಿಂಗಳು, ಹುಲಿ ಸಿಂಹ ಹುಲ್ಲೆ ಆವು, ನನ್ನ ಬುದ್ಧಿ-ವಿಚಾರ, ಹೃದಯ-ಭಾವನೆ, ನನ್ನ ಮನ ಮನದ ಚಂಚಲ, ನನ್ನ ದೇಹ ನನ್ನ ಪ್ರಾಣ ಕರಣ ಇಂದ್ರಿಯ ಇವನ್ನೆಲ್ಲ ಹೊಂದಿಸಿ ಒಂದುಮಾಡಿ ಕಟ್ಟಿರುವ ಆತ್ಮ – ಎಲ್ಲ ಎಲ್ಲ ರೂಪ, ವಿಶ್ವರೂಪ ನೀನೆ ದೇವಾ ಅ-ಖಂಡೇಶ್ವರಾ. ಎಲ್ಲಿ ನೋಡಿದಲ್ಲಿ, ಎಲ್ಲಿ ಕೇಳಿದಲ್ಲಿ, ಎಲ್ಲಿ ರುಚಿಸಿದಲ್ಲಿ, ಎಲ್ಲಿ ವಾಸಿಸಿದಲ್ಲಿ, ಮುಟ್ಟಿದಲ್ಲಿ, ಎಲ್ಲಿ ಬಗೆದಲ್ಲಿ ಎಲ್ಲಿ ಭಾವಿಸಿದಲ್ಲಿ ನೀನೆ ನೀನೆ ತುಂಬಿರುವೆ ದೇವಾ. ನಿನ್ನ ಚಿಚ್ಛಕ್ತಿಯ ಮಹಾವೈಭವ ವಿಲಾಸವಾದ ವಿಶ್ವವಿಲಾಸಿನಿಯ ವಿಶ್ವಪತಿ ನೀನೆ ದೇವಾ. ವಿಶ್ವರೂಪದ ಉಗಮ, ವಿಶ್ವ ರೂಪದ ಪ್ರವಾಹ, ವಿಶ್ವರೂಪದ ಅವಸಾನಭೂಮಿ ನೀನೆ ದೇವಾ. ವಿಶ್ವಭರಿತ ನೀನುಃ ವಿಶ್ವಾಂಗನೆಯ ಸರ್ವಾಂಗವನ್ನು ಆಲಿಂಗಿಸಿ ಮೀರಿ ಮೆರೆವ ವಿಶ್ವತೋಧಿಕ, ವಿಶ್ವಾತೀತ, ಅತ್ಯತಿಷ್ಠದ್ದಶಾಂಗುಲ ನೀನು. ಸಕಲದ ವಿಸ್ತಾರವೆಲ್ಲ ನೀನು, ಸಕಲನಿಷ್ಕಲದ, ನೋಡಿದರೆ ಮೂರ್ತಿ ಹಿಡಿವರೆ ಬಯಲಾದ ಮೂರ್ತಾಮೂರ್ತ ನೀನು. ನಿಷ್ಕಲದ ಏನು ಏನು ಇಲ್ಲದ ಇರವು ನೀವು-ನೀನು. ಒಳಗಿನ ಒಳಗು ನೀನು, ಹೊರಗಿನ ಹೊರಗು – ಅಖಂಡೇಶ್ವರ (ಅಖಂಡ+ಈಶ್ವರ) ನೀನು. ಕಾಲ ನೀನು, ಕಾಲಕಾಲ ನೀನು, ಕಾಲಾತೀತ ನೀನು. ಸಗುಣ ನಿರ್ಗುಣ ನೀನು, ಸಾಂಜನ ನಿರಂಜನ ನೀನು. 'ಎತ್ತನೋಡಿದತ್ತತ್ತ ನೀನೆ ದೇವಾ, ಸಕಲ ವಿಸ್ತಾರದ ರೂಹು ನೀನೆ ದೇವಾ...' ಎಲ್ಲೆಲ್ಲಿ ಎಲ್ಲ ನೋಡುವ ಕಣ್ಣು ನೀನು. ಎಲ್ಲೆಲ್ಲಿ ಎಲ್ಲ ಕೇಳುವ ಕಿವಿ ನೀನು. ಎಲ್ಲ ಮುಖವಾಗಿ ಎಲ್ಲ ಭೋಗಿಸುವ ವಿಶ್ವತೋಮುಖ ನೀನು. ಎಲ್ಲವನ್ನು ಧರಿಸುವ ವಿಶ್ವಚೈತನ್ಯ ಬಾಹು ನೀನು. ಎಲ್ಲೆಲ್ಲಿ ನಡೆವ ಗಮನ ನೀನು. ಎಲ್ಲಕ್ಕೆ ರೆಕ್ಕೆ ತೋಳನ್ನು ಸಂಯೋಜಿಸುವ ದೇವ, ದ್ಯಾವಾಪೃಥಿವಿಯನ್ನು ಹುಟ್ಟಿಸಿದ ದೇವ ನೀನು. ಎಲ್ಲ ಲಿಂಗದಲ್ಲಿ, ಲಿಂಗವೆಲ್ಲೆಲ್ಲಿ. ಎಲ್ಲ ಬ್ರಹ್ಮ ತಾನೆಂಬುದು ಸತ್ಯ ಸತ್ಯ." – ಎಂಬ ವಿಶ್ವ ಸ್ವರೂಪದ ಸತ್ಯಾನುಭವ ಅತ್ಯಂತ ಪುರಾತನಕಾಲದಿಂದ ಕಾಲ ದೇಶ ವಸ್ತುಗಳ ಲೋಕಾನುಭವವನ್ನು ಪ್ರತಿಭಟಿಸುತ್ತ ಹರಿದು ಬಂದಿದೆ ಇಂದಿನ ವರೆಗೆ.

ಆದರೆ 'ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.' ಏಕೆ? ಮಹಾದೇವಿಯಕ್ಕನಿಗೆ ವನ ದೇವತರು ಕೋಗಿಲೆ – ಇಷ್ಟೇ ಅಲ್ಲ, ಎಲ್ಲೆಲ್ಲಿ ಎಂದೆಂದು

ಎಲ್ಲ ಭೂತ ಪ್ರಾಣಿ ಪ್ರಪಂಚದಲ್ಲಿ ಭರಿತನಾಗಿ, ಆಯಾ ರೂಪ ನಾಮ ಕ್ರಿಯೆಂ ತಾನೆ ಆಗಿ ಚೆನ್ನಮಲ್ಲಿಕಾರ್ಜುನ ಇದ್ದಾನೆ ಎಂದು ಆಕೆಯ ಎಚ್ಚತ್ತ ಎದೆ ಸೂಚನೆದೋರುತ್ತಿದೆ. ಆದರೆ ಸರ್ವಸಾಮಾನ್ಯನಾದ ನನ್ನ ಎದೆಯಲ್ಲಿ ಈ ಸೂಚನೆಯ ಕುರುಹೇ ಇದ್ದಂತಿಲ್ಲ. ಒಮ್ಮೊಮ್ಮೆ ಈ ಸೂಚನೆ ಹೊಳೆದರೂ ನನ್ನ ಲೋಕಾನುಭವ ಅದನ್ನು ಎಳ್ಳಷ್ಟು ಗಣನೆಗೆ ತಾರದೆ ತಳ್ಳಿಹಾಕಿ ಬಿಡುತ್ತದೆ. ನನ್ನ ಹೃದಯ ಬುದ್ಧಿಯ ಮಟ್ಟದ, ನಾನಿರುವ, ನಾನು ನಿಂದಿರುವ ನನ್ನ ಸ್ಥಲದಲ್ಲಿ ನನಗೆ ತೋರುವ ವಿಶ್ವಲೋಕವೇ ನನ್ನ ಅನುಭವ; ಅದೇ ನನಗೆ ಕಂಡ ಸತ್ಯ. ನನ್ನ ಅನುಭವದ ಈ ನೀರಸ ವಿಶ್ವವನ್ನೇ ರಸಿಕ ಹೃದಯವುಳ್ಳ ನೀವು ನೋಡುತ್ತೀರಿ. ಕಾವ್ಯರಸಮಯವಾದ ವಿಶ್ವ ನಿಮಗೆ ತೋರುತ್ತದೆ. ಅದು ನಿಮ್ಮ ಅನುಭವ, ನಿಮ್ಮ ಸುಂದರ ಸತ್ಯ. ಚೈತನ್ಯದ ಪರಮಾಣುಗಳಾದ ಇಲೆಕ್ಟ್ರಾನ್ ಪ್ರೋಟಾನು....ಗಳ ಸುತ್ತುಗತಿಯ ಬಯಲುಲೀಲೆಯೆ ವಿಜ್ಞಾನಿಯ ಅನುಭವ, ಅದು ಆತನ ವೈಜ್ಞಾನಿಕ ಸತ್ಯ.[೧] ವಿಜ್ಞಾನಿಯೆ ತತ್ವಜ್ಞಾನಿಯಾಗಿದ್ದರೆ ಆತನ ಅನುಭವ ಮತ್ತೆ ಬೇರೆ ಬೇರೆ. ದ್ವೈತಜ್ಞಾನವೆಂಬ ವೃಕ್ಷದ ಉಳಿದೆಲ್ಲ ಶಾಖೆಗಳನ್ನು ಬದಿಗಿರಿಸಿ ಭೌತ, ರಸಾಯನ, ಭೂಗೋಲ ಖಗೋಲಗಳೆಂಬ ಒಂದೊಂದು ಶಾಖೆಯ ಅಭ್ಯಾಸ ಪ್ರಯೋಗ ಪರೀಕ್ಷೆಯಲ್ಲಿ ನಿಮಗ್ನನಾಗಿ ತಾನು ಕಂಡ ಸತ್ಯವೆ ಸತ್ಯವೆಂದು ವಿಜ್ಞಾನಿ ತನ್ನ ಅನುಭವವನ್ನು ಲೋಕಕ್ಕೆ ನೀಡುತ್ತಿದ್ದರೆ, ಭಿನ್ನಶಾಖಾಭ್ಯಾಸಿಗಳಾದ ಇಂಥ ವಿಜ್ಞಾನಿಗಳ ಸತ್ಯದ ತುಂಡುಗಳನ್ನೆಲ್ಲ ಜೋಡಿಸಿ ನೋಡಿ, ಸಮನ್ವಯ ಮಾಡಿ, ವಿಶ್ವವೃಕ್ಷದ ಸ್ವರೂಪವನ್ನು ಕಂಡು, ಹಿಡಿಯಲು ಹವಣಿಸುತ್ತಿದ್ದಾನೆ ತತ್ತ್ವಜ್ಞಾನಿ. ವಿಜ್ಞಾನಿಯ ದೃಷ್ಟಿ ಪಕ್ಷಪಾತದೃಷ್ಟಿ, ತತ್ತ್ವಜ್ಞಾನಿಯ ದೃಷ್ಟಿ ಸಮಗ್ರ ದೃಷ್ಟಿ, ಸಮನ್ವಯ ದೃಷ್ಟಿ, ಬಹುಮುಖವಾದ ಜೀವನದೃಷ್ಟಿ. ಸಾಮಾನ್ಯಮಾನವರ, ಕವಿ ಕಲಾವಿದರ, ವಿಜ್ಞಾನಿಗಳ ಮತ್ತೆ ಇನ್ನುಳಿದವರ ಅನುಭವಗಳನ್ನೆಲ್ಲ ಸೋಸಿ ನೋಡಿ 'ದರ್ಶನ' (System of Philosophy) ಗಳನ್ನು ಕಟ್ಟುತ್ತಿದ್ದಾರೆ ತತ್ತ್ವಜ್ಞಾನಿಗಳು. ಇಲ್ಲಿಯೂ ಅವರವರ ದರ್ಶನ ಅವರವರ ಸತ್ಯಾನುಭವ. ಪ್ಲೇಟೋ ಅರಿಸ್ಟಾಟಲ್, ಕಾಂಟ, ಹೆಗೆಲ್ ಮುಂತಾದವರೊಡನೆ ಶಂಕರ ರಾಮಾನುಜ ಮುಂತಾದ ಭಾರತೀಯ ದರ್ಶನಕಾರರನ್ನು ಬೇಕಾದರೆ ಇದೇ ಪಂಕ್ತಿಯಲ್ಲಿ ಸೇರಿಸಬಹುದು.

ವಿಶ್ವದರ್ಶನದ ಅನುಭವದ ಕಥೆ ಇಲ್ಲಿಗೆ ಮುಗಿಯಲಿಲ್ಲ. ಎಲ್ಲಾ ಒಂದು, ಒಂದರಲ್ಲಿ ಹಲವು ಹುಟ್ಟಿ ಬೆಳೆದು ವಿಶ್ವಬ್ರಹ್ಮಾಂಡಗಳಾಗಿರುವುದು. ಆಗಿ ತೋರುವುದು

---

೧. ....It seemed to consist of a fortuitous jumble of atoms, which was destined to perform meaningless dances for a time under the action of blind purposeless forces, and then fall back to form a dead world. Into this wholly mechanical world, though the play of the same blind forces, life had stumbled by accident. One tiny corner at least, and possibly several tiny corners, of this universe of atoms had chanced to become conscious for a time, but was destined in the end, still under the action of blind machanical forces, to be frozen out and again leave a lifeless world.

The Mysterious Universe p. 186.

ಒಂದರ ಹಲವು ಲೀಲಾವಿಲಾಸ; ನಾನು ನೀನೆಂಬ, ತಾನು ಇದಿರೆಂಬ ಅಜ್ಞಾನ ಅಹಂಭಾವಗಳೆ ಆ ಲೀಲಾವಿಲಾಸದ ಅನಂತಕೋಟಿ ಸೀಕರಗಳು. ವಿಶ್ವದ ಗಭೀರ ಸತ್ಯವನ್ನು ಕಣ್ಣು ಕಿವಿಯಿಲ್ಲದೆ, ಮನ ಬುದ್ಧಿಯಿಲ್ಲದೆ ತನ್ನ ತಾನೆ, ತನಗೆ ಅನ್ಯವಲ್ಲದ ತನ್ನನೆಲ್ಲ–ಅಂದರೆ ಒಂದಾದ ತಾನು-ವಿಶ್ವ-ಬ್ರಹ್ಮವನ್ನು ಅನುಭವಿಸಿ, 'ಸಾ ಕಾಷ್ಠಾ ಸಾ ಪರಾಗತಿಃ,' 'ಇನ್ನು ಮೇಲೆ ಮತ್ತೇನು?'–ಎಂದು ಇರವು ಅರಿವು ಆನಂದದ ಪರಿಪೂರ್ಣಪರಂಜ್ಯೋತಿ ಸಾಗರದಲ್ಲಿ, ಅಸತ್ತು ತಮಸ್ಸು ಮೃತ್ಯು ಮುಟ್ಟದ ಪರಮ ಸೀಮೆಯಲ್ಲಿ, ನಿತ್ಯ ನಿಜಪದದಲ್ಲಿ ನಿಂದು, ತಮ್ಮ ನಿಜಾನುಭವವನ್ನು ವಿಶ್ವಕ್ಕೆ ನೀಡಿದ್ದಾರೆ ನಿಜಾನುಭಾವಿಗಳು. ಚಂದಿಮರಸರು ನೆಟ್ಟಗೆ ಸ್ವಾನುಭಾವದಿಂದ ಕಂಡ ವಿಶ್ವವಿಸ್ತಾರದ ಸತ್ಯದರ್ಶನ ಇಲ್ಲಿ ಹೇಗೆ ಒಡೆದು ಮೂಡುತ್ತಿದೆ ನೋಡಿ:

ಘನಗಂಭೀರ ಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ ಫೇನ ತರಂಗಗಳು
ತೋಱುತ್ತಲ್ಲಾ ಎಂದಡೆ ಅವು ಬೇಱಾಗಬಲ್ಲವೆ?
ಪರಶಿವನೆಂಬ ಅಂಬುಧಿಯಲ್ಲಿ ಸಕಲಬ್ರಹ್ಮಾಂಡಗಳಾದವಲ್ಲದೆ ಬೇಱಾಗಬಲ್ಲವೆ?
ಇದ ಬೇಱೆಂಬ ಅಱುಮರುಳರ ನಾನೇನೆಂಬೆ?
ವಿಶ್ವವ ತಿಳಿದು ನೋಡಲು ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ.[1]

ಮಹಾವಾರಿಧಿ! ಅದು ವಾರಿಘನ, ವಾರಿಗಂಭೀರ. ಈ ಘನ ಗಂಭೀರದಲ್ಲಿ ಮಾಲೆ ಮಾಲೆಯಾಗಿ ಮುರಿದೇಳುವ ತೆರೆ ನೊರೆ ಗುಳ್ಳೆ ಸೀರ್ಪನಿಗಳು ತಾವೆಲ್ಲ ನೀರೇ. ಅವೆಲ್ಲ ಜಲಮಯವೆ. ನೊರೆ ತೆರೆಯೆಂಬ ಹೆಸರು, ನೊರೆ ತೆರೆಯ ರೂಪ ಕ್ರಿಯಾ ಲೀಲೆ ಬೇರೆ ಬೇರೆ ತೋರಿದರೂ ಅವರ ಬೀಜ ಬೇರು ಬೊಡ್ಡೆ ಶಾಖೆ ಪಲ್ಲವಗಳೆಲ್ಲ ಮಹಾ ವಾರಿಧಿಯೆ. ಆ ವಾರಿಧಿಯನ್ನು ಬೇರೊಂದೆಡೆ ಇರಿಸಿ, ನೊರೆ ತೆರೆ ಬುದ್ಬುದಗಳನ್ನು ನೋಡಲುಂಟೆ? ಅದರಂತೆ ಪರಶಿವ ಮತ್ತು ವಿಶ್ವಬ್ರಹ್ಮಾಂಡಗಳ ಸಂಬಂಧ ಬಿಚ್ಚಿ ಬೇರಿಡಬಾರದ ಸಂಬಂಧ. ಪರಶಿವ, ಪರವಸ್ತು ಸದ್‌ಘನ ಚಿದ್ಘನ ಆನಂದಘನ. ಅದು ಭೂತ ಭವ್ಯಗಳನ್ನೊಳಕೊಂಡು ಮೀರಿ ನಿಂದ ನಿತ್ಯ; ವಿಶ್ವಬ್ರಹ್ಮಾಂಡಗಳನ್ನೆಲ್ಲ ಗರ್ಭೀಕರಿಸಿಕೊಂಡು ವಿಶ್ವತೋಧಿಕವಾಗಿ ನಿಂದ ಮಹಾಪರಿಪೂರ್ಣ. ಈ ಪರಿಪೂರ್ಣ ವಾರಾಶಿಯಲ್ಲಿ ಮೂಡಿ ಆಡಿ ಅಲ್ಲಿಯೆ ಲಯವಾಗುವ – ಮತ್ತೆ ಒಳಗೆ ಮುಳುಗುವ – ಆಕಾಶ ಪ್ರಕಾಶಗಳು. ಭೂಮಿ ಜಲ ವಾಯುಮಂಡಲಗಳು, ಎಲ್ಲವನ್ನು ತುಂಬಿ ಮೇಲೆ ತುಳುಕುತ್ತಿರುವ ಆ ಪರಿಪೂರ್ಣ ಪರಶಿವಸಮುದ್ರವನ್ನು ಬಿಟ್ಟು ಬೇರೆ ಮೂಡುವುದೆಂತು? ಆಡುವುದೆಂತು? ಅಡಗುವುದೆಲ್ಲಿ?[2] ಪರವಸ್ತು ಬೇರೆ ವಿಶ್ವ-ಭೂತ ಜಾತ ಬೇರೆ ಬೇರೆ ಎಂಬ ತಿಳಿವಳಿಕೆ ಅಜ್ಞಾನಬುದ್ಧಿಯ ಅಲ್ಪಕಲ್ಪನೆ, ಅಲ್ಪದರ್ಶನ.

---

೧. ಲಿಂ. ಲೀ. ವಿ. ಚಾ. ಪು. ೪೮, ವ. ೭.

೨. ಹೋಲಿಸಿ ನೋಡಿರಿ:
ಬ್ರಹ್ಮಾಂಡಬುದ್ಬುದಸ್ತೋಮಾ ಯಸ್ಯ ಮಾಯಾಮಹೋದಧೌ ।
ಉನ್ಮಜ್ಜಂತಿ ನಿಮಜ್ಜಂತಿ ಪರಮಾತ್ಮಾ ಸ ಉಚ್ಯತೇ ॥
ಸಿ. ಶಿ. ಪು. ೨೮೭, ಪರಿ. ೧೮, ಶ್ಲೋ. ೩೧.

ನಿಜದರಿವಿಗೆ ಆವರಿಸಿರುವ ಅಜ್ಞಾನಬುದ್ಧಿಯ ಮರೆಯನ್ನು ಓರೆಮಾಡಿ ನೋಡಿದರೆ, ಅಂದರೆ ತಿಳಿದು ನೋಡಿದರೆ, ವಿಶ್ವ 'ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ.'[೧]

ಇಂತಿದೆ ವಿಶ್ವವಿಸ್ತಾರದ ನಿಜಸ್ಥಿತಿ. ಈ ಅನಂತ ಅಪಾರ, ಅಚಿಂತ್ಯ ಅಗಮ್ಯ ಅಗೋಚರವಾದ ಬೃಹದ್‌ವಿಸ್ತಾರದಲ್ಲಿ ಮುಳ್ಳುಮೊನೆಯ ಗಾತ್ರದ ಭೂಮಿಯ ಮೇಲೆ, ಅದರ ಪರಮ ಪರಮಾಣುಗಾತ್ರದ ದೇಹದಲ್ಲಿ ವಾಸಮಾಡಿ ಜೀವಿಸುತ್ತಿರುವ, ಅಹಂಭಾವದರಿವಿನ ತುಂತುರುಗಳಾದ ಮಾನವಕೋಟಿಯ ಬಾಳುವೆ ನಡೆದಿದೆ ಹೇಗೆ ಈ ವಿಶ್ವಬ್ರಹ್ಮದ ಮನೆಯಲ್ಲಿ? ಇಂಥ ಮಹಾಮನೆಯಲ್ಲಿ, 'ತಾನಲ್ಲದೆ ಮತ್ತೇನು ಇಲ್ಲದ' ತನ್ನ ಮನೆಯಲ್ಲಿ ತಾನಿದ್ದು, ತನ್ನ ವಿಶ್ವವೈಭವವಿಲಾಸದ ಅನಂತ ಆನಂದ ದಲ್ಲಿ ವಿಶ್ವಲೀಲೆಯ ವಿವಿಧಸಾಮರಸ್ಯದಲ್ಲಿ ತಾನೂ ಶ್ರುತಿಗೂಡಿ, ಲಿಂಗದ ನುಡಿ ಲಿಂಗದ ನಡೆ ಲಿಂಗದ ವಿಚಾರ ಲಿಂಗದ ಆಚಾರವನ್ನೆ ಉಕ್ಕಂದವಾಗಿ ಹರಿಸುತ್ತ ಬದುಕಿ, 'ನಿರವಯಲು-ಸಮಾಧಿ'ಯಲ್ಲಿ ನಿಜದ ನಿರಾಳವಾದ ಇರವೆ ತಾನಾಗಿ ಬೆಳಗಬಲ್ಲ ಮಾನವನ ಇದ್ದ ಪರಿಸ್ಥಿತಿ ಏನು?

ಮಾನವ – ವಿಶ್ವದ ನಿಜಸ್ಥಿತಿಗೂ ಇದ್ದ ಪರಿಸ್ಥಿತಿಗೂ ಭೂಮಿ ಆಕಾಶದಷ್ಟು ಅಂತರವಿದೆ! ಚಂದಿಮರಸರಂತಹ ನಿಜಾನುಭಾವಿಗಳು ತಾನು-ವಿಶ್ವ-ಲಿಂಗದ ಅನು ಭವವನ್ನು ನನ್ನ ನಿಮ್ಮ ಮುಂದಿಟ್ಟರೆ 'ಅದೆಲ್ಲ ಬಯಲು ಭ್ರಮೆ, ತಲೆ ಇಲ್ಲದವರ ವಿಚಾರ. ಕಾಳಕರಾಳವಾದ ವಿಕಟ ಪ್ರಪಂಚವನ್ನು 'ಲಿಂಗವು ತಾನೆ' ಎಂದು ಹೇಳುವುದು 'ನೀಲಿ ಕೆಟ್ಟ ಸುದ್ದಿ.' ಎಲ್ಲರ ಅನುಭವಕ್ಕೆ ತೀರ ವಿರುದ್ಧ ವಿಚಾರ. ಬುದ್ಧಿ ಸರಿ ಯಾಗಿದ್ದವರು ಈ ಮಾತನ್ನು ಎಂದೂ ಎಂದೂ ಒಪ್ಪಲಾರರು. ಕಲ್ಲು ಮಣ್ಣು ಸುಖ ದುಃಖ ಕೊಲೆ ಹಾದರ, ಕಪ್ಪಿಗಿಂತ ಕಪ್ಪಾದ ಪಾಪ, ಬೆಳುದಿಂಗಳಿಗಿಂತ ಶುಭ್ರ ವಾದ ಪುಣ್ಯ, ಕ್ರಿಮಿ ಕೀಟಕ ದನುಜ ಮನುಜರೆಲ್ಲ 'ಲಿಂಗವು ತಾನೆ' ಎಂದರೆ, ಕಲ್ಲು ನಗಬಹುದು'! – ಎಂದು ನಾವು ಒಕ್ಕೊರಲಿನಿಂದ ಆರ್ಭಟಿಸಬಹುದು. ಹೀಗೆ ಸಿಡಿ ದೇಳುವುದು ನನ್ನ ನಿಮ್ಮ ತಪ್ಪಲ್ಲ; ದೇಹೇಂದ್ರಿಯ ಕರಣಗಳ ರೂಪಾಗಿ, ಅವೇ ತಾನೆಂದು ವ್ಯವಹರಿಸುತ್ತಿರುವ ಮಾನವಸ್ಥಳದ ಅರಿವಿನ ದೋಷ. ಮತ್ತೆ ಕೇಳಿ ಅದೇ ಮಹಾನುಭಾವರ ಮತ್ತೊಂದು ಅನುಭವದ ನುಡಿಯನ್ನು:

ನಿಜ ವಸ್ತುವೊಂದೇ. ತನ್ನ ಲೀಲೆಯಿಂದ ಎರಡಾಗಬಲ್ಲುದದೊಂದೇ.
ಬೇಱೆ ತೋಱಬಲ್ಲುದದೊಂದೇ. ತನ್ನ ಮಱೆಯ ಬಲ್ಲುದದೊಂದೇ.

---

೧. '....ವೀರಶೈವರ ಮತವೆಂತೆಂದರೆ: ಘನ ಗಂಭೀರ ವಾರಿಧಿಯೊಳಗೆ ಫೇನ ತರಂಗ ಬುದ್ಬುದ ಸೀಕರಾದಿಗಳು ತೋರಿದಡೆ ಆ ಸಾಗರದ ಹೊರತಾಗಿ (ಹೊರಗಾಗಿ) ತೋರಬಲ್ಲವೇ? ಆ ಪರಶಿವ ಸಾಗರದಲ್ಲಿ ತೃಣಾದಿ ಬ್ರಹ್ಮಾಂತವಾದ ದೇಹಿಗಳು ಉತ್ಪತ್ತಿಯಾಗಿ ಮತ್ತಲ್ಲಿಯೇ ಅಡಗುತ್ತಿರ್ಪರು ನೋಡಾ. ಇದು ಕಾರಣ ಲಿಂಗನಿರ್ಮಿತದಿಂದ ಜಗತ್ತಾಯಿತ್ತೆಂದೆ ಕಾಣಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೇ.

ತೋಂ. ಸಿ. ವ. ಪು. ೨೬-೨೭, ವ. ೭೧.

ಆ ಮಱೆವೆಯು ಬಲ್ಲುದದೊಂದೇ.

ತಾನಲ್ಲದನ್ಯವಿಲ್ಲೆಂದಱಿದಱಿವು ತಾನೆ ಸಿಮ್ಮಲಿಗೆಯ ಚೆನ್ನರಾಮನು.[೧]

ಈ ಮಹಾವಾಕ್ಯದಲ್ಲಿ ವಿಶ್ವತತ್ತ್ವಾರ್ಥವನ್ನು ನಿರ್ದಿಷ್ಟವಾಗಿ ಸ್ಪಷ್ಟಗೊಳಿಸುವ ಆರು ಅಂಶಗಳು ಬೆಳಗುತ್ತಿವೆ:

೧. ನಿಜವಸ್ತು (The Reality) ಒಂದು, ಏಕಮೇವ ಮತ್ತು ಅದ್ವಿತೀಯ. ಗೂಳೂರ ಸಿದ್ಧವೀರಣ್ಣೊಡೆಯರು ಹೇಳುವ 'ಪ್ರಥಮದಲ್ಲಿ ಅಖಂಡ ಅದ್ವಯ ಅನುಪಮ ನಿರವಯ ನಿರಂಜನ ಸರ್ವಶೂನ್ಯವನೊಳಕೊಂಡ ಸಚ್ಚಿದಾನಂದ ನಿತ್ಯ ಪರಿಪೂರ್ಣವಪ್ಪ ನಿಃಕಲ ಲಿಂಗವು' ಇದೇ ನಿಜವಸ್ತು.

೨. ತಾನಲ್ಲದೆ ಮತ್ತೇನು ಇಲ್ಲದ ಈ ನಿಜವಸ್ತುವಿನಲ್ಲಿ ತನ್ನ ಲೀಲಾ ಸ್ವತಂತ್ರತೆಯಿಂದ ಎರಡು ಆಗುವ ಬಲುಹು, ಶಕ್ತಿ, ಸಾಮರ್ಥ್ಯ ಸದಾಸನ್ನಿಹಿತ. ಲೀಲೆಯಿಂದ ಎರಡು ಆದರೆ, ಆ ಎರಡರ ಬಂಧನ ನಿಜವಸ್ತುವಿಗೆ ಎಂದೂ ಇಲ್ಲ. ಅದರಂತೆ ಲೀಲೆಯ ಬಂಧನವೂ ಆ ವಸ್ತುವಿಗಿಲ್ಲ; ಆಡಬಹುದು ಬಿಡಬಹುದು. ಆಡಿದರೆ ಲೀಲಾಸಹಿತ, ಬೇಡವಾದರೆ ಲೀಲಾರಹಿತ.[೨] ಇಲ್ಲಿ ಬೇಕಾದರೆ ಮತ್ತೊಬ್ಬ ಮಹಾನುಭಾವಿಗಳ ಅನುಭವದ ಮಾತನ್ನು ಕೇಳಿ:

ಶಿವ ತನ್ನ ವಿನೋದಕ್ಕೆ ರಚಿಸಿದನನಂತ ವಿಶ್ವವ.
ರಚಿಸಿ ಏನು ವಿಶ್ವಕ್ಕೆ ಹೊಱಗಾಗಿದ್ದನೇ? ಇಲ್ಲ. ವಿಶ್ವಮಯ ತಾನಾದನು.
ವಿಶ್ವವೆಲ್ಲವು ತಾನಾದನೆಂದರೆ ವಿಶ್ವದ ಉತ್ಪತ್ತ್ಯಸ್ಥಿತಿಲಯಕ್ಕೆ ಒಳಗಾದಾತನೇ? ಅಲ್ಲ.
ಅದೇನು ಕಾರಣವೆಂದಡೆ, ಅಜಾತನಾಗಿ ಉತ್ಪತ್ತ್ಯನಲ್ಲ;
ಸ್ಥಿತಿ ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ; ಮರಣ ವಿರಹಿತನಾಗಿ ಲಯಕ್ಕೆ ಒಳಗಲ್ಲ.
ಇಂತೀ ಗುಣತ್ರಯಂಗಳು ಹೊದ್ದಲಱಿಯವು.
ತಾನಲ್ಲದೆ ವಿಶ್ವಕ್ಕೆ ಆಧಾರವಿಲ್ಲವಾಗಿ ದೂರಸ್ಥನಲ್ಲ.
ತನ್ನಲ್ಲಿ ತಾನಲ್ಲದೆ ಅನ್ಯವು ತೋಱಲಱಿಯದಾಗಿ ಇದಿರಿಲ್ಲ.
ಇದಿರಿಲ್ಲವಾಗಿ ವಿಶ್ವಮಯವು ತಾನಾದುದೇ ಸತ್ಯ.
ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ. ಮರಳಿ ಅರಸಾಗಬಲ್ಲ.

---

೧. ಲಿಂ. ಲೀ. ವಿ. ಚಾ. ಪು. ೪೫, ವ. ೨.

೨. ನೋಡಿರಿ:

(೧) ಮರದೊಳಗಣ ಪತ್ರೆಫಲಂಗಳು ಮರಕಾಲವಶದಲ್ಲಿ ತೋಱುವಂತೆ
ಹರನೊಳಗಣ ಲೀಲಾಪ್ರಕೃತಿ ಸ್ವಭಾವಂಗಳು ಹರಲೀಲಾವಶದಲ್ಲಿ ತೋಱುವವು.
ಲೀಲೆಯಾದಡುಮಾಪತಿ, ಲೀಲೆ ನಿಂದಡೆ ಸ್ವಯಂಭು ನಮ್ಮ ಗೊಹೇಶ್ವರಲಿಂಗವು.
ಲಿಂ. ಲೀ. ವಿ. ಚಾ. ಪು. ೬೧, ವ. ೨.

(೨) ಲೀಲಯಾ ಸಹಿತಃ ಸಾಕ್ಷಾದುಮಾಪತಿರಿತೀರಿತಃ ।
ಲೀಲಯಾ ರಹಿತಃ ಪಶ್ಚಾತ್ ಸ್ವಯಂಭುರಿತಿ ಕಥ್ಯತೇ ॥
ಲಿಂ. ಲೀ. ವಿ. ಚಾ. ಪು. ೨೨, ಶ್ಲೋ. ೧.

ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ,
ಜಗವಾಗದಿರಲೂ ಬಲ್ಲ.[೧]

ಅರಸು ತನ್ನ ಲೀಲಾವಿನೋದಕ್ಕೆ ಕಾಲಾಳು ಆಗಿ ಯುದ್ಧವಾಡಬಹುದು, – ತನಗೆ ಬೇಕಾದರೆ. ಲೀಲೆ ಸಾಕಾದರೆ ಮತ್ತೆ ಅರಸು ತಾನಾಗಬಹುದು. ಆದರೆ ಕಾಲಾಳಿಗೆ ತಾನು ಅರಸನಾಗಿ ಮರಳಿ ಕಾಲಾಳಾಗುವ ಶಕ್ತಿಯಿಲ್ಲ, ಅಧಿಕಾರವಿಲ್ಲ. ಕಾಲಾಳಿಗೆ ಬಂಧನವಿದೆ; ಅರಸು ಸರ್ವಸ್ವತಂತ್ರ. ಅದರಂತೆ 'ವಿಶ್ವೇಶ್ವರ' 'ನಿಃಕಲ ಲಿಂಗ' 'ನಿಜವಸ್ತು'ವಿನಲ್ಲಿ ಲೀಲಾಭಾವದ ಹೊಳಹುದೋರಿದರೆ ಆ ಹೊಳಹೇ ಗಟ್ಟಿಗೊಂಡು, ಚಿಚ್ಛಕ್ತಿ ಎನಿಸಿ, ವಿಶ್ವವಿಲಾಸದ ಮಹಾವೈಭವವನ್ನು ನಿಃಕಲಲಿಂಗಕ್ಕೆ ಹಡೆದಿತ್ತು, – ಶರಣರ ಅಭಿಮತದಂತೆ. ಕೇವಲ ವಿನೋದವೇ ಲೀಲೆಯ ಉದ್ದೇಶವಲ್ಲ ಈ ನಿಃಕಲ ಲಿಂಗಕ್ಕೆ. ತನ್ನ ಶಕ್ತಿಯ ಕೋಟಿವಿಲಾಸವನ್ನು ಬಿತ್ತಿ ಬೆಳೆದು, ತನ್ನ ಅನಂತ ಮಹಿಮೆಯನ್ನು ತನಗೆ ತಾನೇ ಅನ್ಯವಾಗಿ ಭಿನ್ನವಾಗಿ ಅಣುಕೋಟಿಮುಖದಿಂದ ಕಂಡು ಉಂಡು ಅನುಭವಿಸಿ, ಈ ಕಾಲಾಳಿನ, ಜೀವಾತ್ಮನ ಅಣುಮುಖದ ಅನುಭವ ಸಾಲದೆ, ಮತ್ತೆ ತನ್ನ ನಿಜದೆಡೆಗೆ ಗಮಿಸುವ ನಿಜಭಕ್ತಿವಿಲಾಸವನ್ನು ಧ್ಯಾನ ಪೂಜೆಗಳಿಂದ ಬಿತ್ತರಿಸುತ್ತ, ತನಗೆ ಸುತ್ತಿದ ಮಾಯಾಪ್ರಪಂಚದ – ಒಂದಕ್ಕೊಂದು ಅನ್ಯ ಭಿನ್ನವಾದ, ಅಲ್ಪದ ಕತ್ತಲೆಯ ಬಿಡಿಬಿಡಿಯ ಬವಣೆಯ ಲೀಲಾವಿಲಾಸವಾದ ಸಂಸಾರಪಂಜರದ – ಜವನಿಕೆಯನ್ನು ಓರೆಮಾಡುತ್ತ ನಡೆದು ತನ್ನ ನಿಜಸ್ಥಲದಲ್ಲಿ ಅಂದರೆ ಲಿಂಗಸ್ಥಲದಲ್ಲಿ ನೆಲಸಿ ನಿಂದು, ಅಧೋಮುಖವಾದ ಅಂದರೆ ಪ್ರಪಂಚಮುಖವಾದ ಶಕ್ತಿವಿಲಾಸವನ್ನು ನೋಡುತ್ತ, ಆ ವಿಲಾಸವನ್ನು ತನ್ನತ್ತ ಊರ್ಧ್ವಮುಖಗೊಳಿಸುತ್ತಿರುವ ವಿಶ್ವಮುಖದ ಶಕ್ತಿ-ಭಕ್ತಿ ವಿಲಾಸವೆ ನಿಜವಸ್ತುವಿನ ಲೀಲೆಯ ಅರ್ಥ. ಶಿವ-ಶಕ್ತಿಯರ ಲೀಲೆ ಉತ್ಪತ್ತಿ ಸ್ಥಿತಿ ಲಯಕ್ಕೊಳಗಾದ ವಿಶ್ವಪ್ರಪಂಚವನ್ನು ಹಡೆದು, ನಾನಾತ್ವದ ಅನಂತ ನಾಮರೂಪ ಕ್ರಿಯೆಯನ್ನು ನಟಿಸಿದರೆ, ಶಿವ-ಭಕ್ತಿಯರ ಲೀಲೆ ಹುಟ್ಟುಹೊಂದಿಲ್ಲದ, 'ಎಂತಿರ್ದಂತೆ ಪರಬ್ರಹ್ಮವೆ' ಆದ, ಸ್ವಯಂಭುಲಿಂಗವೆ ಆದ ದಿವ್ಯಶರಣರನ್ನೆ ಹಡೆದು, ಎಲ್ಲ ತಾನು, ತಾನು ಎಲ್ಲವಾದ ಶಿವಾದ್ವೈತ ಲೀಲಾವಿಲಾಸವನ್ನು ಬೀರುತ್ತದೆ. ಪ್ರಪಂಚಮುಖವಾದ ಶಕ್ತಿಯ ಲೀಲೆ ಸಂಸಾರ; ಊರ್ಧ್ವಮುಖವಾದ ಭಕ್ತಿಯ ಲೀಲೆ ಸಚ್ಚಿದಾನಂದ ವಿಲಾಸ.

೩. ಇಂಥ ಲೀಲೆಯ ನೆನಹುದೋರಿ ಎರಡಾದ ಒಂದೇ ನಿಜವಸ್ತುವಿನಲ್ಲಿ ಬೇರೆ ಬೇರೆಯಾಗಿ ತೋರುವ ಸಾಮರ್ಥ್ಯ ಇದೆ. ನದಿ ಸಮುದ್ರ ಎರಡು, ಹೌದು. ಆದರೆ ಅವೆರಡು ಒಂದು ನೀರು. ಇಂಥ ಎರಡು ಒಂದನ್ನೊಂದು ಗುರುತಿಸಿ ಒಂದಾಗುವುದು ಸುಲಭ. ಆದರೆ ಇವರ ನೀರು ಉಗಿಯಾಗಿ ಮೇಘಮಾಲೆಯಾಗಿ ಸಿಡಿಲು ಮಿಂಚಾಗಿ ತೋರಿದರೆ, ನದಿ ಸಮುದ್ರಗಳ ನೀರಿಗೆ ತಾನೆ ಉಗಿ ತಾನೆ ಮೋಡ ತಾನೆ ಮಿಂಚು ಸಿಡಿಲೆಂದು ಗುರುತುಹಿಡಿವುದು ಕಠಿಣ. ಒಂದು ನೀರು, ಉಗಿ ಮೋಡ ಸಿಡಿಲು ಮಿಂಚು ಆಗಿ ಬೇರೆ ಬೇರೆ ತೋರುವಂತೆ, ಎರಡಿಲ್ಲದ ಒಂದೇ ನಿಜವಸ್ತು

---

೧. ಲಿಂ. ಲೀ. ವಿ. ಚಾ. ಪು. ೪೮, ವ. ೬.

ಭೂಮಿ ಸಮುದ್ರ ಪರ್ವತವಾಗಿ ಗಿಡು ಮರ ಬಳ್ಳಿಯಾಗಿ ಕ್ರಿಮಿ ಕೀಟಕ ಪತಂಗವಾಗಿ ಕಲ್ಲು ಕಬ್ಬಿಣ ಬಂಗಾರವಾಗಿ ಮುತ್ತು ಮಾಣಿಕ್ಯ ರತ್ನವಾಗಿ ಹುಲಿ ಕರಡಿ ಮಂಗ ಮಾನವಪ್ರಾಣಿಯಾಗಿ ಗಾಳಿ ಬೆಂಕಿಯಾಗಿ ಆಕಾಶ ಪ್ರಕಾಶಕೋಟಿಯಾಗಿ ಮನಬುದ್ಧಿ ಯಾಗಿ ತೋರಿದರೆ, ಒಂದನ್ನೊಂದು ಗುರುತು ಹಿಡಿವುದು ಅತ್ಯಂತ ಕಠಿಣವಲ್ಲದೆ ಮತ್ತೇನು? ಇಲೆಕ್ಟ್ರಾನ್ ಪ್ರೋಟಾನ್ ಫೋಟಾನ್ ಮುಂತಾದ ಹತ್ತಿಪ್ಪತ್ತು ಮೂಲ ಭೂತ ಪರಮಾಣುಕಣಗಳು ತಾವೆ ಪರಿಭ್ರಮಿಸಿ, ತಾವೆ ಜಗತ್ತಿನ ಮಹಾಮನೆಯ ಕಟ್ಟಡಕ್ಕೆ ಕಲ್ಲು ಮಣ್ಣು ಇಟ್ಟಿಗೆಗಳಾಗಿ ತಮ್ಮನ್ನು ತಾವೆ ಬಳಸಿಕೊಂಡು ಹಾಯ್‌ಡ್ರೋಜೆನ್ ಯುರೇನಿಯಮ್ ಪೃಥ್ವಿ ಸೂರ್ಯ ನಕ್ಷತ್ರ ಲೋಹ ಮರಬಳ್ಳಿ ಪ್ರಾಣಿಕೋಟಿ ಮನುಷ್ಯಪ್ರಾಣಿಯಾಗಿವೆ ಎಂದು ವಿಜ್ಞಾನಿಗಳು ಹೇಳಿದರೆ, 'ಇರಬಹುದು' ಎಂದು ನಾವು ತಲೆದೂಗಿದರೂ ಈ ಸು-ಸೂಕ್ಷ್ಮ ಕಣಗಳ ಬೇರೆ ಬೇರೆ ರೂಪದ ಜಡ ಚೈತನ್ಯ ಪ್ರಾಣ ಮನ ಬುದ್ಧಿ ಅನುಭವ ತತ್ತ್ವಜ್ಞಾನವಾಗಿ ರೂಪುಗೊಂಡಿವೆ ಎಂಬುದನ್ನು ಕೇಳಿ, ಒಂದಕ್ಕೊಂದು ಸತ್ಯ ನಿತ್ಯ ಬಂಧುವಾಗಿರುವುದನ್ನು ಗುರುತಿಸುವುದು ಅತ್ಯಂತ ದುಷ್ಕರ; ಸಾಮಾನ್ಯರ ಕೈಗೆ ನಿಲುಕದ ಮುಗಿಲು ಈ ವೈಜ್ಞಾನಿಕ ದರ್ಶನ. ಈ ದರ್ಶನ ನನಗೆ ಕಾಣದಿದ್ದರೂ ಕಂಡಂತೆ ಒಪ್ಪಿಕೊಳ್ಳುತ್ತೇನೆ ವಿಜ್ಞಾನಪುರುಷರ ಮಾತನ್ನು. ಏಕೆ? ಕಾರಣವನ್ನು ನಿಮಗೆ ಬಿಚ್ಚಿ ಹೇಳಬಾರದು. – ಅದು ಏನೇ ಇರಲಿ, ಅನುಭಾವಿಗಳ ಮತದಂತೆ ಒಂದೆ ನಿಜವಸ್ತು ಬೇರೆ ಬೇರೆ ನಾಮ ರೂಪ ಕ್ರಿಯಾತ್ಮಕವಾದ ಅನಂತ ವಿಶ್ವಪ್ರಪಂಚವಾಗಲು ಬಲ್ಲುದು; ಆಗದೆ ಇರಲೂ ಬಲ್ಲುದು.

೪. ನಿಜವಸ್ತುವಿನ ಚಿಚ್ಚೈತನ್ಯದ ಭಿತ್ತಿಯಲ್ಲಿ ಆ ಚೈತನ್ಯವೆ ರೂಪುಗೊಂಡು ಬೇರೆ ಬೇರೆ ನಾಮ ರೂಪ ಕ್ರಿಯೆಯಾಗಿ, ಖಂಡಖಂಡವಾದ ಭಿನ್ನತೆಯ ಮಹಾ ಪರಾರ್ಧವನ್ನು ಬೀರಿದರೂ ಚಿಚ್ಛಕ್ತಿಯ ಅರಿವಿನ ಬೆಳಗು ಅರಿವಾಗಿಯೆ ಬೆಳಗುತ್ತಿದ್ದರೆ, ಈ ಭಿನ್ನತೆಯಲ್ಲಿಯೂ ಒಂದರ, ತಾನೆಲ್ಲ ಒಂದು ಎಂಬ ಏಕತ್ವದ ಪ್ರತ್ಯಯ ಕಡ್ಡಿ ಕೊಂಕದಂತೆ ಪ್ರತಿಯೊಂದು ಭಿನ್ನ – ಒಡೆದು ಬಿಡಿಬಿಡಿಯಾದ – ವಸ್ತುವಿನಲ್ಲಿ ಉಳಿಯ ಬಹುದಿತ್ತು. ಆದರೆ ತನ್ನ ಮರೆಯಲು ಬಲ್ಲುದು ಅದೊಂದೆ ನಿಜವಸ್ತು. ಸರ್ವ ಶೂನ್ಯವನ್ನೊಳಕೊಂಡ ಈ ನಿಜವಸ್ತು, ಮಹಾಘನಶೂನ್ಯಬ್ರಹ್ಮ, ನಿಃಕಲಲಿಂಗದಲ್ಲಿ ತನ್ನ ಲೀಲಾವಿನೋದಕ್ಕೆ ತಾನೆ ಎರಡಾಗಿ, ಬೇರೆ ಬೇರೆಯಾಗಿ ತೋರುವ ಬಲ್ಲತನ, ಶಕ್ತಿ ಇರುವಂತೆ, ತನ್ನ ತಾ ಮರೆವ, ತಾನೆ ತನಗೆ ಮರೆಯಾಗಿ ತನ್ನ ತಾ ಕಾಣದೆ ಇರುವ ಸಾಮರ್ಥ್ಯವೂ ಅದೊಂದೆ ವಸ್ತುವಿನಲ್ಲಿ ಉಳ್ಳ ಶಕ್ತಿ. ಅದೇ ಅಜ್ಞಾನ, ಅದೇ ಅವಿದ್ಯಾ ಶಕ್ತಿ. ಒಂದೆ ವಸ್ತು ಎರಡಾಗಿ, ಬೇರೆ ಬೇರೆಯಾಗಿ ತೋರಿದಲ್ಲಿ ತನಗೆ ತಾ ಪೂರ್ಣ ಮರೆಯಾದ ಕಗ್ಗತ್ತಲೆ ಕವಿದರೆ, ಸರ್ವಾಂಧವಾದ ಜಡಚೈತನ್ಯದ ಲೀಲಾವಿಲಾಸ ಸಾಂಗ ವಾಗಿ ನಡೆಯಿತ್ತು. ಚೈತನ್ಯಶಕ್ತಿಯ ರಚನೆಗಳಾದ ಆಕಾಶ ವಾಯು ತೇಜ ಅಪ್ಪು ಪೃಥಿವಿಯಲ್ಲಿ ನಡೆದಿರುವ ನಿತ್ಯ ನಿರಂತರ ಲೀಲೆ ಅಧೋಮುಖವಾಗಿರುವ ಪ್ರಕೃತಿಯ ಅಜ್ಞಾನವಿಲಾಸ. ಇಲ್ಲಿ ಇರವು-ಅರಿವು-ಆನಂದ 'ನೆಲದ ಮರೆಯ ನಿಧಾನ'ದಂತೆ ನಿಗೂಢವಾಗಿ ಅವಿತುಕೊಂಡಿದೆ ಅಂತೆಯೇ ಇಂಥ ಭೌತಿಕ ಜಗತ್ತಿನಲ್ಲಿ ಸುಖ ದುಃಖ,

ಪುಣ್ಯ ಪಾಪ, ನೀತಿ ಅನೀತಿ, ನ್ಯಾಯ ಅನ್ಯಾಯ, ಜ್ಞಾನ ಅಜ್ಞಾನ, ಉಂಟು ಇಲ್ಲ –
ಎಂಬ ದ್ವೈತದ, ಇದು ಕಲ್ಲು ಅದು ಮಣ್ಣು ಅಲ್ಲಿ ಬೆಂಕಿ ಇಲ್ಲಿ ಗಾಳಿ, ಅದು ಮರ
ಇದು ಪ್ರಾಣಿ – ಎಂಬ ನಾನಾತ್ವದ ಸುಳಿವು ಇಲ್ಲ. ಅರಿವಿನ ಬೆಳಕಿನಲ್ಲಿ ತೋರುವ ಈ
ಲೋಕ ಮರವೆಯ ಕತ್ತಲೆಯಲ್ಲಿ ಇದ್ದರೂ ಇಲ್ಲದಂತೆಯೆ. ತರುಲತೆಯಲ್ಲಿ ಪಶುಪಕ್ಷಿ
ಮುಂತಾದ ಪ್ರಾಣಿಗಳಲ್ಲಿ ಅಂಕುರಿಸಿ ಪಲ್ಲವಿಸುವ ಪ್ರಾಣಚೈತನ್ಯದಲ್ಲಿ ಅರಿವಿನ ಅಂಕುರ
ಉದಯವಾದರೆ, ಮರವೆಯ ಕಗ್ಗತ್ತಲೆ ತಿಳಿಗತ್ತಲೆಯಾಗುತ್ತ, ಮಾನವಪ್ರಾಣಿಯಲ್ಲಿ
ಬಿಳಿಗತ್ತಲೆಯಾಗಿ ವಿಲಾಸ ಮಾಡುತ್ತದೆ.

ಅಜ್ಞಾನಶಕ್ತಿಯ ಕೊನೆಯ ಅಧ್ಯಾಯವೇ ಜಡವೆನಿಸಿ ತೋರುವ ಜಗಜ್ಜಾಲ.
ಲಿಂಗಗಂಭೀರದೊಳಗೆ ತೋರಿ ಅಡಗುವ ಈ ಜಾಲದಲ್ಲಿ ತನ್ನ ತಾನೆಂದರಿವ ಚಿಚ್ಚೈತನ್ಯದ
ಸುಳಿವಿಲ್ಲ; ಈ ಚೈತನ್ಯಕ್ಕೆ ಮೂಲಾಧಾರಸ್ತಂಭವಾದ ಲಿಂಗದ ಹೊಳಹೂ ಇಲ್ಲ. ನನಗೆ
ಅಥವಾ ನಿಮಗೆ 'ನಾನು ಇದ್ದೇನೆ' ಎಂಬ ಅರಿವು ಇದೆ. ಇಂಥ ಇರವಿನ ಅರಿವು ಕಲ್ಲು
ಮಣ್ಣು ನದಿ ಪರ್ವತ ಸಮುದ್ರ ಆಕಾಶ ನಕ್ಷತ್ರಗಳಲ್ಲಿದೆಯೆ? ಅರಿವು ಇಲ್ಲಿ ಗಾಢವಾಗಿ
ನಿದ್ರಿಸುತ್ತಿದೆ; ಮರವೆಯ ಸಾಮ್ರಾಜ್ಯ ಮೇರೆವರಿದು ಮೆರೆಯುತ್ತಿದೆ. ಅರಿವು
ನಿಸ್ತರಂಗವಾಗಿ ಸುಪ್ತಿಯನ್ನೈದಿರುವ ಜಡಪ್ರಪಂಚದ ಈ ಅವಸ್ಥೆಯನ್ನು ನೋಡಿದರೆ,
ವಿಶ್ವವ್ಯಾಪಿಯಾದ ಕತ್ತಲೆ ವಿಶ್ವತೋಧಿಕವಾದ ಬೆಳಗಿನ ಹೆಗ್ಗಡಲನ್ನೆ ಕುಡಿದು ಮತ್ತೆ
ಕತ್ತಲೆಯ ಕಪ್ಪುಸಮುದ್ರವಾಗಿ ಭೋರ್ಗರೆವಂತಿದೆ. '....ಗೋಹೇಶ್ವರನ ನಿಲವ
ವಸುಧೆಯಾಕೃತಿ ನುಂಗಿತ್ತು.'[೧] ಇಲ್ಲಿಯೂ '....ಗೊಹೇಶ್ವರನೈದಾನೆ ಇಲ್ಲದಂತೆ.'
ಗೊಹೇಶ್ವರನ ಚಿದ್ಬೆಳಗೂ ಇಲ್ಲಿದೆ ಇಲ್ಲದಂತೆ.[೨] ಆ ಹೃದಯೇಶ್ವರನ ಚಿಚ್ಚೈತನ್ಯವೂ
ಅಜ್ಞಾನಶಕ್ತಿಗೆ ಸಹಜವಾದ ಜಡಕರ್ಮದ ಮರೆಯಲ್ಲಿ ಅವಿತು ಆಟವಾಡುತ್ತಿದೆ.
ಇಲ್ಲಿಗೆ ಅಧೋಮುಖವಾದ ಸೃಷ್ಟಿಯ ಲೀಲೆ ಸಮಾಪ್ತ.

೫. ಆದರೆ 'ಆ ಮಱವೆಯ ಬಲ್ಲುದದೊಂದೇ.' ಜಡಪ್ರಪಂಚ ಜಡಲೋಕ
ವಾಗಿ ತೋರಿದರೂ, ಅದೂ ಜಗತ್ತು; ಎಂದಿಗೂ ಗಮಿಸುತ್ತಿರುವ ಗತಿಯುಳ್ಳ ಜಡ
ಚೈತನ್ಯ. ಜಡಲೋಕದ ಹೃದಯಾಂತರಾಳದಲ್ಲಿ ನಡೆದಿರುವ ಚೈತನ್ಯಲೀಲೆ ಮರವೆಯ
ಅಂಧವಿಲಾಸವಾಗಿದ್ದರೂ, ಅದೇ ಅಜ್ಞಾನಸ್ಪಂದ ಅರಿವಿನ ಉದಯಕ್ಕೆ ಮೂಡಲ ದಿಕ್ಕು.
ಈ ಭೌತಚೈತನ್ಯ ಪ್ರಾಣಚೈತನ್ಯವಾಗಿ ಹೊರಹೊಮ್ಮಿದಂತೆ, ಮರವೆಯ ಕತ್ತಲೆ
ತೆಳ್ಳಗಾಗುತ್ತ ನಡೆಯುತ್ತದೆ. ಸಸ್ಯ-ಪ್ರಾಣಿಗಳಲ್ಲಿ ತೋರುವ ಆತ್ಮರಕ್ಷಣೆ ಹಸಿವು
ತೃಷೆ ಭಯ ಮೈಥುನ ಮುಂತಾದ ಕ್ರಿಯಾಕಲಾಪವನ್ನು ಪರಾಮರ್ಶಿಸಿದರೆ, ಪ್ರಾಣ
ತತ್ತ್ವದಲ್ಲಿ ಅರಿವಿನ ಉದಯ ಸ್ಪಷ್ಟವಾಗಿ ಗೋಚರವಾಗುತ್ತದೆ. ನಮ್ಮ ಮನಸ್ಸು

---

೧. ಶೂ. ಸಂ. ಪ್ರ. ೭. ಪ. ೧೫.

೨. ಹೋಲಿಸಿರಿ:

ಯಥಾ ವ್ಯಾಪ್ಯ ಜಗತ್ಸರ್ವಂ ಸ್ವಭಾಸಾ ಭಾತಿ ಭಾಸ್ಕರಃ ।
ತಥಾ ಸ್ವಶಕ್ತಿಭಿರ್ವ್ಯಾಪ್ಯ ಪರಮಾತ್ಮಾ ಪ್ರಕಾಶತೇ ॥

ಸಿ. ಶಿ. ಪರಿ. ೧೮, ಪ್ರ. ೨೦೭-೨೦೮, ಶ್ಲೋ. ೨೩.

ಮುಂದೆ ಎರಡು ಮಾವಿನ ಗಿಡಗಳಿವೆ. ಮಾವಿನ ಬೀಜ ಹೇಗೆ ಹುಟ್ಟಿತು, ಏಕೆ ಹುಟ್ಟಿತು, ಎಂದು ಹುಟ್ಟಿತು ನನಗೆ ಗೊತ್ತಿಲ್ಲ. ಭೂಮಿತಾಯಿಯೆ ಗರ್ಭವತಿಯಾಗಿ ಸಸ್ಯ ಪ್ರಪಂಚವನ್ನು ಲಕ್ಷಾಂತರ ಕಾಲದಿಂದ ಹಡೆಯುತ್ತ ಬಂದಿದ್ದಾಳೆ ಎಂಬುದಿಷ್ಟೇ ನನಗೆ ಗೊತ್ತು. ಪ್ರಾಣವಿಲ್ಲದ ಈ ತಾಯಿ ಹುಲ್ಲು ಬಳ್ಳಿ ಗಿಡ ಮರಗಳನ್ನು ಹೇಗೆ ಹಡೆದಳು? ಇದೊಂದು ದೊಡ್ಡ ಸಮಸ್ಯೆ! ಮಾವಿನ ಬೀಜ ನೀರು ನೆಲದ ಸಂಗಮಾಡಿ ಉಬ್ಬಿ ಮೊಳಕೆಯೊಡೆದು, ಎಲೆಯಾಗಿ ಬೊಡ್ಡೆ ಶಾಖೆಯಾಗಿ ಬಯಲಲ್ಲಿ ತನ್ನನ್ನು ಹರವಿ ಕೊಂಡು, ಹೂವು ಕಾಯಿ ಹಣ್ಣು ಹಡೆದು ಮತ್ತೆ ತನ್ನ ಪೀಳಿಗೆಗೆ ಕಾರಣವಾದ ಬೀಜ ವನ್ನು ನಿರ್ಮಿಸಿಕೊಂಡು, ತನ್ನ ಬಾಳುವೆಯನ್ನು ಮುಂದುವರಿಸಿಕೊಂಡು, ತಾನು ಸತ್ತರೂ ತನ್ನ ಸಂತತಿಯಲ್ಲಿ ಉಳಿದುಕೊಂಡು ಬೆಳೆಯುತ್ತಿರುವ ಬೀಜದ ಜೀವನ-ಚೇಷ್ಟೆಯನ್ನು ನೋಡುತ್ತ ನಿದಿಧ್ಯಾಸ ಮಾಡುತ್ತ ಹೋದರೆ, ಪ್ರಾಣತತ್ತ್ವವನ್ನೊಳಕೊಂಡ ಈ ಬೀಜದಲ್ಲಿ, ಈ ಗಿಡದಲ್ಲಿ ಅರಿವಿನ ತತ್ತ್ವ ಇಲ್ಲ ಎಂದು ಹೇಳುವುದು ಬಲು ಕಷ್ಟ. ತನಗೆ ಬೇಕಾದ ಆಹಾರ ನೀರು ಗಾಳಿಗಳನ್ನು ಪ್ರಕೃತಿಯ ಅನಂತದಿಂದ ಆಯ್ದು ಕೊಂಡು, ಬಾಳಿ ಬೆಳೆಯುತ್ತಿರುವ ನೆಲದ ಈ ಕೂಸಿನಲ್ಲಿ ಅರಿವು ಇರಲೇ ಬೇಕು. ಈ ಕೂಸಿಗೆ ತನ್ನಲ್ಲಿ ಪ್ರಕೃತಿಸಹಜವಾಗಿ ಇರುವ ಅರಿವಿನ ಅರಿವು ಇರಲಿಕ್ಕಿಲ್ಲ,– ನನ್ನ ಮನದ ಕೆಳಗೆ ಮನ (Subconscious Mind) ಇದ್ದು, ಅದರ ಇರವಿನ ಅರಿವು ನನಗಿಲ್ಲ ದಿರುವಂತೆ. ಮತ್ತೆ ಎಡಗಡೆಯ ಮರ ಬಲಗಡೆಯದರಂತಿಲ್ಲ. ಅದು ತನ್ನಂತೆ ತಾನಿದೆ. ತನ್ನ ಇಚ್ಛೆ ತನ್ನ ಜ್ಞಾನ ತನ್ನ ಕ್ರಿಯಾಶಕ್ತಿಗನುಗುಣವಾಗಿ ಅದು ಬೆಳೆದು ನಿಂತಿದೆ. ಆದರೆ ಅದಕ್ಕೆ ಅಥವಾ ಇದಕ್ಕೆ ತಾವು ಬೇರೆಬೇರೆಯಾಗಿ ಬೆಳೆದಿರುವ, ಬೇರೆಬೇರೆಯಾಗಿ ಇರುವ ಅರಿವು ಇರಬಹುದೆಂದು ಬಲ್ಲವರಾರು?

ನಾನು ಬರೆಯುತ್ತಿರುವಂತೆ ಗುಬ್ಬಿಯೊಂದು ಏನೋ ತನ್ನ ಭಾಷೆಯಲ್ಲಿ ನುಡಿ ಯುತ್ತಿದೆ. ಅದರ ಅರ್ಥ ನನಗಿಲ್ಲ. ಮತ್ತೊಂದು ಗುಬ್ಬಿಗೆ ಅದು ಗೊತ್ತಾಗಬಹುದು. ನೆಲದಲ್ಲಿ ಸಸಿ ಮೂಡಿದರೆ, ಸಸಿಯಲ್ಲಿ ಈ ಗುಬ್ಬಿ ಮೂಡಿದೆ. ಪ್ರಾಣದ ತತ್ತ್ವ ಇಲ್ಲಿ ಮತ್ತಷ್ಟು ಸ್ಫುಟವಾಗಿ ಸುವ್ಯಕ್ತವಾಗಿ ಮೂಡಿರುವಂತೆ, ಅರಿವೂ ಇಲ್ಲಿ ಹೆಚ್ಚು ಸ್ವಚ್ಛವಾಗಿ ಹೆಚ್ಚು ವಿಶಾಲವಾಗಿ ಹಬ್ಬುತ್ತಿದೆ. ಕಾಲದಲ್ಲಿ ಹಿಂದೆ ಮುಂದೆ, ದೇಶದಲ್ಲಿ ಅಲ್ಲಿ ಇಲ್ಲಿ, ನಾನು ತಾಯಿ ಇದು ನನ್ನ ಮರಿ, ಆ ಹಕ್ಕಿ ಆ ಸಪ್ಪುಳ ನನ್ನ ಜೀವಕ್ಕೆ ವೈರಿ, ಹಸಿವು ಅನ್ನದ ಗೊತ್ತು, ನೀರಡಿಕೆ ನೀರಿನ ಸ್ಥಾನ, ಭಯ ಓಡುವುದು ಹೆಣ್ಣು ಗಂಡು ಮೈಥುನ ಮುಂತಾದ ಅದರ ಭಾವ-ಚೇಷ್ಟೆಗಳನ್ನು ಪರೀಕ್ಷಿಸಿದರೆ, ಪ್ರಾಣಿಪ್ರಪಂಚದಲ್ಲಿ ಅರಿವು ತಾನೊಂದು ಗುಬ್ಬಿ ಕಾಗೆಯಾಗಿ, ನಾಯಿ ನರಿ ಮಂಗವಾಗಿ, ತನಗೆ ಇದಿರಿಟ್ಟು ತೋರು ವುದೆಲ್ಲ ತನ್ನಿಂದ ಅನ್ಯ, ತನಗೆ ಭಿನ್ನವೆಂದು ಕಾಣುವ ಸಾಮರ್ಥ್ಯವನ್ನು ಪಡೆದಿದೆ ಎಂದೇ ಹೇಳಬೇಕು. ಆದರೂ ಪ್ರಕೃತಿಶಕ್ತಿಯ ವಶದಲ್ಲಿಯೆ ಬಾಳುತ್ತಿರುವ ಪ್ರಾಣಿಪ್ರಪಂಚಕ್ಕೆ ತನ್ನನ್ನು ಮುತ್ತಿರುವ ಅಜ್ಞಾನದ ಅರಿವಿಲ್ಲ. ಆದರೆ ಮಾನವಪ್ರಾಣಿಯಲ್ಲಿ ಅರಿವಿನ ತತ್ತ್ವ ಪಟುವಾಗಿ ಏಳುತ್ತದೆ. ಇಲ್ಲಿ ತಾನೆಂಬ 'ಅಹಂ-ಭಾವ', ತನಗೆ ಇದಿರಿಟ್ಟು ತೋರುವ, ತನಗೆ ಅನ್ಯ ಭಿನ್ನವಾದ, ಬೇರೆ ಬೇರೆ ಬೇರೆಯಾಗಿ ಅನಂತ ನಾಮ ರೂಪ

ಕ್ರಿಯಾತ್ಮಕವಾಗಿ ತೋರುವ 'ಇದಂ-ಭಾವ'ಗಳು ಅತ್ಯಂತ ದೃಢವಾಗಿ ಇಲ್ಲಿ ಪ್ರತಿಷ್ಠಾಪಿತವಾಗುತ್ತವೆ. ಈ ಅರಿವು ಎಷ್ಟೇ ಜಾಗ್ರತವಾಗಿದ್ದರೂ, 'ಬೇಱೆ ತೋಱಬಲ್ಲುದದೊಂದೇ' ನಿಜವಸ್ತು – ಎಂಬ ಸ್ಥಲಕ್ಕೆ, ಮಟ್ಟಕ್ಕೆ ಏರಿಲ್ಲ. ಮರವೆಯ ನಿದ್ರೆಯಿಂದ ಅರೆ ಎಚ್ಚತ್ತಿರುವ ಮಾನವನ ಅರಿವಿಗೆ ಎಲ್ಲ ಭೂತ ಜಾತ ಬೇರೆ ಬೇರೆ, ಒಂದು ಮತ್ತೊಂದಲ್ಲ, ತಾನೊಂದು ಬೇರೆ ಉಳಿದೆಲ್ಲ ಬೇರೆ ಎಂಬ ದ್ವೈತ, ಅನೇಕತ್ವ, ನಾನಾತ್ವದ ದರ್ಶನ, ಅನುಭವ ಪ್ರಕೃತಿಸಹಜವಾಗಿಯೆ ಆಗುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಇದೇ ಸ್ಥಲದಲ್ಲಿ, ಇದೇ ಅರಿವು ಇರವಿನ ಮಟ್ಟದಲ್ಲಿ ಸದಾ ವಾಸಮಾಡಿಕೊಂಡಿರಲು ಆತನ ಅನಾದಿಕಾಲದ ನಿಜವಸ್ತುವಿನ ಸ್ವಪ್ನ ಆಸ್ಪದ ಕೊಡುವುದಿಲ್ಲ. 'ನಾನಾರು? ವಿಶ್ವವೇನು? ನಮ್ಮಿಬ್ಬರ ಸಂಬಂಧವೇನು? ಎಲ್ಲ ಕಾಲ ದೇಶ ವಸ್ತುಗಳನ್ನು, ಅದರಂತೆ 'ನಾನ'ನ್ನು ಕವಿದು ಅಭೇದ್ಯಕೋಟೆಯಾಗಿರುವ ಕತ್ತಲೆ, ಅಜ್ಞಾನ ಇದೇನು'? – ಎಂಬಿಂತಹ ಪ್ರಶ್ನೆಗಳು ಮಾನವನ ಅರಿವಿನಲ್ಲಿ ಮೂಡಿ, ತನ್ನ ಮತ್ತು ವಿಶ್ವದ ನಿಜಸ್ವರೂಪವನ್ನು ನೋಡುವ ಹವಣಿಕೆಯೇ ಅರಿವಿನ ಮುಂದಿನ ಪ್ರವಾಸ. ಕವಿದ ಕತ್ತಲೆಯನ್ನು ಕಾಣುವ ಸಾಮರ್ಥ್ಯ 'ಆ ಮಱವೆಯ ಬಲ್ಲ' ಸಾಮರ್ಥ್ಯ. ಇದು ಮಣ್ಣು ಕಲ್ಲಿನಲ್ಲಿ ಮರ ಬಳ್ಳಿಯಲ್ಲಿ ನಾಯಿ ನರಿಯಲ್ಲಿ ಇಲ್ಲ. 'ಮಱಹನಱಿವುದು', ತನ್ನೊಂದು ಪಾದದಿಂದ ಭೂಮಿಯನ್ನೆಲ್ಲ ಮೆಟ್ಟಿ ನಿಂದಂತೆ ಇರುವ ವಾಮನಮೂರ್ತಿ.

ಮರವೆಯಲ್ಲಿ ಮಲಗಿರುವ ನೆಲ ನೀರು ಗಾಳಿ ಬೆಂಕಿ ಬಯಲುಗಳು, ಈ ಪಂಚಭೂತಗಳಲ್ಲಿಯೆ ಹುಟ್ಟಿ ಪ್ರಾಣವಾಗಿ ಎಚ್ಚತ್ತು, ಪ್ರಕೃತಿಶಕ್ತಿಯ ವಶಗತವಾದ ಅರಿವಿನ ಸ್ಥಲದಲ್ಲಿ ಜೀವಿಸುತ್ತಿರುವ ಜೀವಕೋಟಿಗಳು – ಇದೇ ಮಾನವಜೀವನದ ರಂಗಭೂಮಿ. ಲಕ್ಷಾಂತರ ವರ್ಷಗಳಿಂದ ಹರಿದು ಬಂದಿರುವ ಮಾನವಜೀವನದ ಕ್ರಿಯಾಕಲಾಪ, ವಿಚಾರವಾರಾಶಿ, ಭಾವದ ಬ್ರಹ್ಮಸೃಷ್ಟಿಗಳನ್ನು ಗಭೀರಧ್ಯಾನದಲ್ಲಿ ನಿಂದು ನೋಡಿದರೆ, ತನ್ನ ಮನ ಬುದ್ಧಿ ಪ್ರಾಣ ಶರೀರವನ್ನು ಆವರಿಸಿರುವ ಮಾಯಾಪ್ರಕೃತಿಯ ಬಂಧನವನ್ನು ಸಡಿಲುಗೊಳಿಸುತ್ತ, ಸಾಧ್ಯವಾದ ಮಟ್ಟದಲ್ಲಿ ಸ್ವತಂತ್ರನಾಗುತ್ತ, ಈ ಸ್ವಾತಂತ್ರ್ಯವನ್ನೆ ಬಳಸಿಕೊಂಡು ಊರು ನಾಡು ಮನೆ ಮಾರು ಮದುವೆ ಮುಂಜೆ ಕುಟುಂಬ ಸಮಾಜ ಯುದ್ಧ ಆಯುಧ ಧರ್ಮ-ಅರ್ಥ-ಕಾಮ-ಮೋಕ್ಷಶಾಸ್ತ್ರ, ಗುಡಿ ಗುಂಡಾರ ವೇದಾಗಮ ಬಾಯಿಬಲ್ ಕುರಾನ್ ರೇಡಿಯೋ ಟೆಲಿವ್ಹಿಜನ್ ಮುಂತಾದವುಗಳನ್ನು ನಿರ್ಮಿಸಿಕೊಂಡು, ಜಗತ್ತಿನಲ್ಲಿ ತಾನೆ ಸಾರಜಗತ್ತಾಗಿ ಮಾನವ ಬಾಳುತ್ತ ಬಂದಿರುವುದು ಒಡೆದು ಕಾಣುತ್ತದೆ.

೬. ಆದರೆ ಮರವೆಯ ಬಿಗಿ ಬಂಧನ ಇಲ್ಲಿಗೆ ಮುಗಿಯಲಿಲ್ಲ. 'ಮರಹನರಿವೆ ಮೊದಲರಿವನರಿವೆ ಬಳಿಕರಿವು ಮರವೆ ಸೋಂಕದಿರವ ನೀನರಿವೆ.'[10] – ಎಂದು ನಿಜಗುಣ ಶಿವಯೋಗಿಗಳು ಹೇಳುವಂತೆ 'ನನ್ನ ನಿಜಸ್ವರೂಪವನ್ನು ಮರೆದು ನಾನು ಕಲ್ಲಪ್ಪ ಮಲ್ಲಪ್ಪನಾಗಿ ಮಾನವಸ್ಥಲದಲ್ಲಿ ನೆಲೆಯೂರಿ ನಿಂದು, ಸುಖ ದುಃಖ, ಅಜ್ಞಾನ

೧೦. ಷೆ. ಗ್ರಂ. ಕೈ. ಪ. ಪ್ರಾ. ಸ್ವ. ಪು. ೭೪, ಪ. ೧೪.

ತಮಸ್ಸಿನ ಅಲ್ಪ ಜೀವನವನ್ನು ಜೀವಿಸುತ್ತಿದ್ದೇನೆ' – ಎಂದು ತನ್ನ ಗಂಭೀರದಿಂದ ತನ್ನ ತಾ ತಿಳಿದು, ತನ್ನ ಮುತ್ತಿದ ಮರಹಿನ ಕತ್ತಲೆಯನ್ನು ನೋಡುವುದೇ ಮಾನವಸ್ಥಲದಿಂದ ಮೇಲಕ್ಕೇರಬಲ್ಲ ಮೊದಲ ಹೆಜ್ಜೆ, -- ತನ್ನ ಲೀಲಾವಿನೋದಕ್ಕೆ ಆಳಾದ ತಾನು ಲೀಲೆಯಲ್ಲಿ ಮಗ್ನವಾಗಿ ತನ್ನ ಅರಸುತನವನ್ನೆ ಮರೆದು. ಬಳಿಕ ಎಚ್ಚತ್ತು ಅರಸು ತಾನು ಎಂಬುದನ್ನು ಅರಿವಂತೆ. ಮನುಷ್ಯಪ್ರಾಣಿ ತನ್ನ ಮುತ್ತಿದ ಮರವೆಯ ಕತ್ತಲೆಯನ್ನು ಮೆಲ್ಲಗೆ ಓರೆಮಾಡುತ್ತ, 'ಅರಿವು ತಾನು, ಅರಿವೇ ತನ್ನ ನಿಜರೂಪ'ವೆಂದು ತಿಳಿದು ನೋಡುವುದೇ ಮಾನವನ ಅರಿವು ತನ್ನ ನಿಜದತ್ತ ನಡೆದ ಎರಡನೆಯ ಹೆಜ್ಜೆ. ಅರಿವಿನ ಆಪ್ಯಾಯನ ಇಲ್ಲಿಯೂ ಹಿಂಗದೆ, ಅರಿವು-ಮರಹು ಸೋಂಕದ ಇರವನ್ನು ಅರಿದು ಅಂದರೆ ಅನುಭವಿಸಿ ನಿಜವಾದ ಪರಿಪೂರ್ಣ ತೃಪ್ತಿಯನ್ನು ಹೊಂದುತ್ತದೆ. ಚಂದಿಮರಸರು: ಅನ್ಯವೆಂದು ಕಂಡುದು ಕತ್ತಲೆಯಲ್ಲಿ, ಮರವೆಯ ಭಿನ್ನದೃಷ್ಟಿಯಲ್ಲಿ. ತಾನಲ್ಲದೆ ಅನ್ಯವಿಲ್ಲಾ. ತನಗೆ ತಾನೆ ಮರೆಯಾಗಿ 'ಚಂದಿಮರಸ'ನೆಂಬ ರೂಪು ಆಯ್ತು ಒಂದೆ ನಿಜವಸ್ತು. ಮತ್ತೆ ವಿಶ್ವಭೂತ ಬ್ರಹ್ಮಾಂಡವಾಯ್ತು ಅದೊಂದೇ ನಿಜವಸ್ತು. ಎಲ್ಲ ಎಲ್ಲ ನಿಜವಸ್ತು, 'ಚಂದಿಮರಸ ಅದೇ ನಿಜವಸ್ತು' – ಎಂದು ಹೇಳುವ ವಿಶ್ವಾತ್ಮ ಭಾವದ ಅನುಭಾವವೇ ಸಿಮ್ಮಲಿಗೆಯ ಚೆನ್ನರಾಮ. ತಾನಲ್ಲದೆ ಅನ್ಯವಿಲ್ಲಾ. ಅನ್ಯವೆಲ್ಲ ನಿಜವಾಗಿ ತಾನೇ ಎಂದು ಅರಿದ ಅರಿವು ತಾನೇ ಚಂದಿಮರಸ; ಅದೇ ಚೆನ್ನರಾಮ. ಅದೇ ಶರಣಲಿಂಗ.

೬

ಎಚ್ಚರಿಸಿದ ಗುರು–ತಂದೆ

'ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ.
ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ!
ಕತ್ತಲೆ ಕವಿಯಿತ್ತು ಮೂಱು ಲೋಕದೊಳಗೆ!
ಇದಱಚ್ಚುಗವೇನು ಹೇಳಾ ಗೊಹೇಶ್ವರಾ?'[೧]

ಅಲ್ಲಮಪ್ರಭುದೇವರು.

'ಎನ್ನಂಗದ ಮಧ್ಯದೊಳಗೆ ಮಂಗಳಾಂಗನ ಬೆಳಗು
ಥಳಥಳಿಸಿ ಹೊಳೆಯುತ್ತಿರ್ಪುದಾಗಿ
ಎನ್ನ ಕಂಗಳ ಕಳವಳಿಕೆ ಕಡೆಗಾಯಿತ್ತು;
ಎನ್ನ ಮನದ ಮುಂದಣ ಮರವೆ ಹಾರಿಹೋಯಿತ್ತು;
ಅಖಂಡೇಶ್ವರನ ನಿಲವು ನಿಶ್ಚಲವಾಗಿ ಕಾಣಬಂದಿತ್ತು.'[೨]

ಷಣ್ಮುಖಸ್ವಾಮಿಗಳು.

'ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಂ ।
ಲಿಂಗದಿನೊಲ್ದು ವಿಸ್ತರಿಸಿ ಲಿಂಗಕೆ ಲಿಂಗಮನರ್ಪಿಸುತ್ತುಮಾ ॥
ಲಿಂಗಪದಾರ್ಥಮಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ ।
ಲಿಂಗನಿಜೈಕ್ಯನಯ್ಯ ಪರಮಪ್ರಭುವೇ ಮಹದೈಪುರೀಶ್ವರಾ' ॥[೩]

ಮಗ್ಗೆಯ ಮಾಯಿದೇವರು.

ಉದಯಮಾನ, ಅಸ್ತಮಾನ! ಮೂಡುವುದು ಮುಳುಗುವುದು; ಮತ್ತೆ ಮೂಡುವುದು ಮತ್ತೆ ಮುಳುಗುವುದು! ಆಯಿತ್ತು. ಹೋಯಿತ್ತು! ಹೇಗೋ ಬಂತು; ಹೇಗೋ ಹೋತು! ಏಕೆ ಬಂದಿತ್ತು? ಏಕೆ ಹೋಯ್ತು? ಯಾರಿಗೆ ಗೊತ್ತು? '...ಕರೆಯದೆ ಬಂದುದ, ಹೇಳದೆ ಹೋದುದನಾರು ಅಱಿಯರಲ್ಲಾ!'[೪] ಇದೋ ಬರೆಯುತ್ತಿರುವಂತೆ ಇದೇ ಪತ್ರದ ಮೇಲೆ ಅತಿಸೂಕ್ಷ್ಮವಾದ ಜೀವಾಣುವೊಂದು ಪರಿದಾಡುತ್ತ ಬಂದು ಲೆಕ್ಕಣಿಕೆಯ ತುದಿಯಲ್ಲಿ ಸಿಕ್ಕು ಮಾಯವಾಯಿತು! ಪ್ರಾಣವಧೆಯಾದುದು ನನ್ನಿಂದ, ಅಚಾತುರ್ಯದಿಂದ. ಈ ಜೀವಜಂತು ನಿನ್ನೆ ಮೊನ್ನೆ ಅಥವಾ ಇಂದೇ ಜಗತ್ತಿನಲ್ಲಿ ಪ್ರಾಣಕಣವಾಗಿ ಮೂಡಿತು; ಏಕೋ ಇಲ್ಲಿ ಹರಿದಾಡಿತು; ಲೇಖನಿ ಒರಸಿದರೆ ಹರಿವ-ಮಸಿಯಲ್ಲಿ ಮುಳುಗಿ ಹೋಯ್ತು ಅದರ ಭೌತಿಕ ಕಾಯ. ಆದರೆ ಅದರ ಪ್ರಾಣಕಳೆ ಎಲ್ಲಿ ಅಡಗಿತು? ಅದರ ಮಟ್ಟದಲ್ಲಿದ್ದ ಪ್ರಜ್ಞಾವಿಲಾಸ

---

೧. ಶೂ. ಸಂ. ಪು. ೮, ವ. ೯,
೨. ಅಖಂ. ವ. ಪು. ೪. ವ. ೬.
೩. ಶಿ. ತ್ರಿ. ಪು. ೧೮೦, ಪ. ೫೭.
೪. ಅ. ವ. ಚಂ. ಪು. ೧೧, ವ. ೪೧.

ಅದೆಲ್ಲಿ ಮಾಯವಾಯ್ತು? ಅನಂತಕಾಲದ ಅಪಾರವಾರಾಶಿಯಲ್ಲಿ ತುದಿ ಬುಡ ವಿಲ್ಲದ ಈ ಮಹಾವಿಶ್ವಾಲಯದಲ್ಲಿ ಒಂದು ನಿಮಿಷವನ್ನಾಯ್ದುಕೊಂಡು ಜೀವಕಣ ವೊಂದು ರೂಪಾಗಿ ಉದಯಿಸಿ, ಹಸಿವು ನೀರಡಿಕೆಗಾಗಿಯೋ, ಹರಿದಾಡಿ ಆಡುವ ಸಂಭ್ರಮ ವಿಲಾಸಕ್ಕಾಗಿಯೋ – ಮತ್ತಾವ ಕಾರಣವೋ ಗೊತ್ತಿದ್ದರೆ ಅದಕ್ಕೇ ಗೊತ್ತು – ಇಲ್ಲಿ ಒಂದು ನಿಮಿಷ ಅಡ್ಡಾಡಿ ಅಸ್ತಂಗತವಾಗಿ ಹೋಯ್ತು,–ನನ್ನ ಪ್ರಮಾದದಿಂದ. ಕಾಲ ದೇಶದ ಒಂದು ನಿಮಿಷಬಿಂದುವಿನಲ್ಲಿ ಹಲವು ಕೋಟಿ ಇಂಥ ಪ್ರಾಣಕಣಗಳು ತೋರಿ ಜೀವನಲೀಲೆಯನ್ನು ಬೀರಿ ಅಸ್ತಮಿಸಿ ಹೋಗುತ್ತಿವೆ. ಇದರಂತೆ ಗಿಡು ಮರ ಬಳ್ಳಿ ಕ್ರಿಮಿ ಕೀಟಕ ಪತಂಗ ನರಿ ನಾಯಿ ಎತ್ತು ಕತ್ತೆ ಮಾನವಚೋಹದ ಹೆಣ್ಣು ಗಂಡು ಎಂತೋ ಹುಟ್ಟಿ, ಏಕೋ ಬಾಳಿ, ಎಣ್ಣೆ ತೀರಿದ ದೀವಿಗೆಯಂತೆ ಕತ್ತಲೆಯ ಅಸ್ತಿತ್ವದಲ್ಲಿ ಓರೆಯಾಗಿ ಮರೆಯಾಗುತ್ತವೆ. ಏಕೆ? ಈ ಮಹಾಸಮಸ್ಯೆಯ ತರಂಗ ಮಾಲೆ ವಿಶ್ವಬ್ರಹ್ಮಾಂಡಗಳ ಭೂತಜಾತವನ್ನೆಲ್ಲ ಅಪ್ಪಳಿಸುತ್ತಿದೆ. ಅದಕ್ಕೆ ಪ್ರತಿ ಉತ್ತರ ಕೊಡಬಾರದು, ಕೊಡದೆ ಇರಲು ಬಾರದು. ಹಗಲಿರುಳೆನ್ನದೆ ನಿತ್ಯ ನಿರಂತರವಾಗಿ ಬುದ್ಧ ಮಾನವನೆದೆಯನ್ನು ಹೊಡೆದೆಬ್ಬಿಸುತ್ತಿರುವ 'ಏಕೆ' ಲಕ್ಷವರ್ಷದ ಯಕ್ಷಪ್ರಶ್ನೆ. ಕಾಯದ ಕತ್ತಲೆಯಲ್ಲಿ ಮಲಗಿ ಜೀವಿಸುತ್ತಿರುವ ತಾಮಸರಿಗೆ ಇದೊಂದು ರಾಕ್ಷಸ ಪ್ರಶ್ನೆ. ಪ್ರಶ್ನೆಯೆ ಕಾಣದ ಇಂಥ ಕಿವಿಗುರುಡರನ್ನು ನುಂಗಿ ನುಂಗಿ ಅಂಧತಮಸ್ಸಿಗೆ ನೂಕುತ್ತಿದೆ ಈ ಪ್ರಶ್ನೆ. '.....ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ! ಕತ್ತಲೆ ಕವಿಯಿತ್ತು ಮೂಱು ಲೋಕದೊಳಗೆ!.....' ನೀರ ಬೊಬ್ಬುಳಿಕೆಯಂತೆ ವಿಶ್ವಸಾಗರ ದಲ್ಲಿ ತೋರುತ್ತಿರುವ ನೀರು ನೆಲದ ನಿರ್ಮಾಣಗಳು, 'ನೀರ ಭೊಂಬೆಯ ಚೋಹವ ತೊಟ್ಟು, ಅಗ್ನಿ ಬಣ್ಣದ ಹೊದಕೆಯ ಹೊದ್ದು, ಗಾಳಿಯ ಗತಿಯಲ್ಲಿ ಸುಳಿದಾಡುವ ಪ್ರಾಣಿಗಳು...'[೧] ಜೀವನದ ಮಹಾಪ್ರಶ್ನೆಯನ್ನೇ ಅಲಕ್ಷ ಮಾಡಿ, ಜೀವದಿವ್ಯತೆಯ ಸುಳಿವೇ ಹತ್ತದೆ ವ್ಯರ್ಥ ಮುಳುಗಿ ಹೋದರಲ್ಲಾ ಕತ್ತಲೆಯ ಲೋಕದೊಳಗೆ! ಏಕೆ ಹುಟ್ಟಿದರು? ಏಕೆ ಸತ್ತರು? ಹುಟ್ಟು ಸಾವಿನ ನಡುನಿಮಿಷದಲ್ಲಿ ನಡೆದ ಸಂಸಾರ ನಾಟಕದ ಅಂಧವಿಲಾಸವೇನು?

ಹುಟ್ಟಲೇಕೆ? ಮತ್ತೆ ಸಾಯಲೇಕೆ? – ಎಂಬ ಪ್ರಶ್ನೆ ಇನ್ನೂ ಮೂಡದ, ಮೂಡಿ ದ್ದರೂ ತಿಳಿದು ನೋಡುವ ತಿಳಿವಳಿಕೆಯ ಮಟ್ಟವನ್ನು ಮುಟ್ಟದ ಉಳಿದ ಪ್ರಾಣಿಗಳ ಮಾತು ಇರಲಿ. ಈ ಸಾಮರ್ಥ್ಯವುಳ್ಳ ಮನುಷ್ಯಪ್ರಾಣಿಯೂ ಉದಯಮಾನಕ್ಕೆ ಹುಟ್ಟಿ, ಅಸ್ತಮಾನಕ್ಕೆ ಅಳಿವುದೇ? ಸತ್ತ ದೇಹಕ್ಕೆ ಸುಡುಗಾಡು ಗತಿಯಾದಂತೆ, ದೇಹದಲ್ಲಿ ಹೊಳೆವ ಅರಿವಿನ ಬೆಳಗನ್ನೂ ಮಣ್ಣಲ್ಲಿ ಮುಚ್ಚಿ ಮಣ್ಣುಗೊಡುವುದೇ? ನಿಸರ್ಗದ ನಿಯಮ ಇದಲ್ಲ. ದೇಹ ಸತ್ತರೂ ಪ್ರಾಣ ಚಿಗಿಯುತ್ತ ಬಂದಿದೆ. ಭಿನ್ನ ವಿಭಿನ್ನ ದೇಹಗಳನ್ನು ಧರಿಸುತ್ತ ವಿಶಾಲವಾಗಿ ಪಲ್ಲವಿಸುತ್ತ ಬಂದಿದೆ. ಅರಿವಿನ ಮೊಗ್ಗೆ ಹೂ ಕಾಯಿ ಹಣ್ಣುಗಳನ್ನು ಪಡೆಯುತ್ತ ಬಂದಿದೆ. ಜಡಭೂತಕ್ಕೆ ಚಿದ್ವಿಲಾಸವೇ

---

೧. ಶೂ. ಸಂ. ಪು. ೮, ವ. ೧೧.

ಉದ್ದೇಶವಾದಂತಿದೆ. ಕತ್ತಲೆ ಬೆಳಕಿಗೆ ಗುರಿಯಿಟ್ಟಂತಿದೆ. ಅಜ್ಞಾನಕ್ಕೆ ಸಮ್ಯಗ್ ಜ್ಞಾನವೆ ವಿಶ್ರಾಮಸ್ಥಾನವಾದಂತಿದೆ. ತಾಮಸದ ಸುಖದುಃಖಕ್ಕೆ ನಿತ್ಯಾನಂದವೆ ನಿಲುಕಡೆಯ ಸ್ಥಲವಾದಂತಿದೆ. ಹುಟ್ಟುಸಾವಿನ ಭವಚಕ್ರ 'ಅಮೃತ'ದ ಸೀಮೆಯನ್ನು ಮುಟ್ಟುವ ವರೆಗೆ ತಿರುಗುವಂತೆ ತೋರುತ್ತದೆ. ಹೀಗೆ ತೋರುವುದು ಯಾರಿಗೆ? ಮಾನವನ ಪರಿಶುದ್ಧ ಅಂತರಂಗಕ್ಕೆ. ಇದಕ್ಕೆ ಸಾಕ್ಷಿ ಯಾರು? ಮಾನವನ ಹೃದಯ ಗಂಭೀರದಲ್ಲಿ ಜನನ ಮರಣದ ಬಿರುಗಾಳಿ ಎಷ್ಟು ಹೊಯ್ದರೂ ನಂದದೆ ಉರಿಯುತ್ತಿರುವ ಶಿವಾಪೇಕ್ಷೆಯೆ ಸಾಕ್ಷಿ; 'ಮರಣವಿಲ್ಲದ ಮಹಾಂತ'ರ ದಿವ್ಯಜೀವನಗಳೆ ಸಾಕ್ಷಿ.

'ಜಾತಸ್ಯ ಹಿ ಧ್ರುವೋ ಮೃತ್ಯುಃ'.[೧] ಹುಟ್ಟಿದ ಮೇಲೆ ಸಾಯಲೆ ಬೇಕು – ಈ ಸಂಗತಿ ಮಾನವನೆದೆಯಲ್ಲಿ ಶಿಲಾಶಾಸನವಾಗಿ, ಹುಟ್ಟಿನ ಹಣೆಬರಹವಾಗಿ ಕೊರೆಯುತ್ತಿದ್ದರೂ, ಹೃದಯದ ಗಭೀರ ಈ ಮಾತನ್ನು ಪ್ರತಿಭಟಿಸುತ್ತಲೆ ಬಂದಿದೆ. ಪ್ರಾಣ ಚೈತನ್ಯ ಯಾವುದೇ ರೂಪದಲ್ಲಿರಲಿ, ಸಾವನ್ನು ಕಂಡು ಸಿಡಿಮಿಡಿಗೊಳ್ಳುವುದೇಕೆ? ಪ್ರಾಣ ಸತ್ತು ಜಡವಾಗುವುದೇ 'ಧ್ರುವ'ವಾಗಿದ್ದರೆ, 'ಸಾವು ಬೇಡ, ಎಂದೆಂದಿಗೂ ಬೇಡ, ಏನಾದರೂ ಬೇಡ' – ಎಂಬ ಪ್ರಾಣದ ಹೃದಯಪ್ರವೃತ್ತಿಗೆ (Natural Instinct) ಕಾರಣವೇನು? ಅರ್ಥವೇನು? ಹೆಚ್ಚು ತಿಳಿವಳಿಕೆಯಿಲ್ಲದ ನಾಯಿ ನರಿ ಇರುವೆ ಆನೆ ಸಾವಿಗೆ ಹೆದರಿ ಸಾಯಲಿ. ಆದರೆ ತಾನು ಸತ್ತು ಜಡಭೂತವಾಗಲೆ ಬೇಕೆಂದು ಖಂಡಿತ ಗೊತ್ತಿದ್ದ ಮನುಷ್ಯಪ್ರಾಣಿಯ ಹೃದಯದಲ್ಲಿಯೂ ಈ ಪ್ರವೃತ್ತಿ ಏಕೆ ಉಳಿದಿದೆ? ಕಾಲಕಾಲಾಂತರದಿಂದ ಹುಟ್ಟಿದ ಪ್ರಾಣವನ್ನು ನುಂಗುತ್ತ, ಹರಿಯುತ್ತ ಬಂದಿರುವ ಸಾವನ್ನು ಕಂಡು, ತಪ್ಪಿಸಿಕೊಂಡು ತಾನು ಬಾಳಬೇಕು ಎಂದು ಮಾನವನ ಎದೆ ಹಗಲಿರುಳು ಹಂಬಲಿಸುತ್ತಿರುವುದೇಕೆ? ಇದರಂತೆ, ಜಗದಗಲವಾಗಿ ಹಬ್ಬಿರುವ ಅಜ್ಞಾನದ ಕತ್ತಲೆಯನ್ನು ಪ್ರತಿಭಟಿಸಿ, ತಾನೆ ಬದುಕಿ ಬೆಳಗಬೇಕೆಂದಿರುವ ಮಾನವನ ಹೃದಯದ ಸತ್ಯಜ್ಞಾನಾಪೇಕ್ಷೆಗೆ ಅರ್ಥವೇನು? ಇಂತೆಯೆ ದುಃಖ ದುಗುಡ ದುಮ್ಮಾನದ ನೆಲದಲ್ಲಿ ನಿತ್ಯಸುಖದ ಕಲ್ಪವೃಕ್ಷವನ್ನು ಬೆಳೆಯಲಿಚ್ಛಿಸುವ ಹೃದಯ ಗಂಭೀರದ ಭವಿಷ್ಯವೇನು?

ಸತ್ಯ ಜ್ಞಾನ ಆನಂದ ನಿತ್ಯ ಪರಿಪೂರ್ಣದ ಕಡೆ ಹರಿವ ಹೃದಯವೆ ಶಿವಾಪೇಕ್ಷೆ ಅಥವಾ ದಿವ್ಯಾಪೇಕ್ಷೆ. ಪ್ರಾಣಪ್ರಕೃತಿಯ ವಶವರ್ತಿಯಾಗಿ ಹೆಣ್ಣು ಹೊನ್ನು, ಮನೆ ಮಾರು, ವಾರ್ತೆ ಕೀರ್ತಿ ಅಧಿಕಾರ ಪ್ರಭುತ್ವ ಮುಂತಾದ ವಿಷಯ ಪ್ರಪಂಚದತ್ತ ಹರಿವ ಹೃದಯವೆ ಆಶೆ ಆಕಾಂಕ್ಷೆ ಅಥವಾ ಕಾಮ ಲೋಭ; ಅದೇ ಬಹಿರ್ಮುಖವಾಗಿ ಗಮಿಸುತ್ತಿರುವ ವಿಷಯೇಚ್ಛೆ. ಊರ್ಧ್ವಮುಖವಾದ ದಿವ್ಯಾಪೇಕ್ಷೆಯ ಪಲ್ಲಟರೂಪವೆ ಮಾನವನ ಆಶೆ, ತೃಷ್ಣೆ. ಏಳು ಸಮುದ್ರದ ನೀರು ಕುಡಿಸಿದರೂ ಈ ತೃಷ್ಣೆಯ ದಾಹ ಹಿಂಗಿಲ್ಲ, ಹಿಂಗುವಂತಿಲ್ಲ. ಆದರೂ '... ಸೊಡರು ನಂದಿ ಕಾಣದೆ ಅನ್ನಪಾನದ ಹಿರಿಯರೆಲ್ಲರು ಅಧರಪಾನವನುಂಡು ಸುರಾಪಾನವ ಬೇಡುತ್ತೈದಾರೆ ... '[೨] '.. ಉಷ್ಣ

---

೧. ಭ. ಗೀ. ಅ. ೨; ಶ್ಲೋ. ೨೭. ೨. ಶೂ. ಸಂ. ಮ. ೮, ವ. ೧೪.

ತೃಷ್ಣೆ ಘನವಾಗಿ ಕಡಲೇಳು ಸಮುದ್ರವ ಕುಡಿದು ನೀರಡಿಸಿ ಅಱಲುಗೊಂಡು ಬೆಱಗಾದ..'[೧] ಯಾರು? ವಿಷಯದ ವಿರಾಟ್-ಪುರುಷ-ಮನುಷ್ಯಪ್ರಾಣಿ. ಅನ್ನಪಾನ ಅಧರಪಾನ ಸುರಾಪಾನದ ಸಾಗರಗಳಿಂದ ತನ್ನ ಹೊಟ್ಟೆ ತುಂಬಲಿಲ್ಲವಲ್ಲಾ ಎಂಬ ನಿಬ್ಬೆರಗು ಈ ಪ್ರಾಣಿಗೆ. ಆದರೂ 'ಸೊಡರು ನಂದಿ ಕಾಣದೆ,' ವಿಷಯಸಂಸಾರದ ಮಾರ್ಗವಲ್ಲವೆ ಬೇರೆ ಮಾರ್ಗವಿಲ್ಲ; ಅನ್ನ ಅಧರ ಸುರೆಯ ಸುಖವೆ ಗತಿಯಲ್ಲದೆ ಬೇರೆ ಗತಿ ಇಲ್ಲ. ಈ ಮಾರ್ಗವನ್ನೆ ಹಿಡಿದು, ಇಲ್ಲಿಯೆ ನಡೆದು ನಡೆದು ತಳಮಳಿಸುತ್ತ ಇರುವುದೆ ಮನುಷ್ಯ ಜೀವನದ 'ಬ್ರಹ್ಮಲಿಖಿತ'ವಾಗಿದೆ. ತರಹರ, 'ಓಂ ಶಾಂತಿಃ ಶಾಂತಿಃ ಶಾಂತಿಃ' ಸತ್ತ ಮೇಲೆ. ಎಲ್ಲಿ? ಬಲ್ಲವರಾರು? ಪ್ರಶ್ನೆಯೆ ಉತ್ತರವಾಗಿದೆ ಪ್ರಾಣಿಜೀವನದ ಅಧ್ಯಾಯದಲ್ಲಿ.

ವಿಷಯದಾಶೆಯ ಮೂಲ ಕೊರತೆ. ಆದರೆ ವಿಷಯಸಂಪಾದನೆಯಿಂದ ಕೊರತೆ ತುಂಬಿಲ್ಲ; ತುಂಬುವಂತಿಲ್ಲ. ಆಶೆಯ ಸತ್ಯಸ್ವರೂಪವಾದ ದಿವ್ಯಾಪೇಕ್ಷೆಯ ಮೂಲವೂ ಕೊರತೆ. ಈ ಕೊರತೆ ದಿವ್ಯದ ಸಂಪಾದನೆಯ ಮೂಲಕ ತುಂಬಬೇಕು. ಇದಕ್ಕೆ ಸಾಕ್ಷಿ ದಿವ್ಯ ಜೀವನಗಳೆ. ಅದೋ ಕೇಳಿ ಪ್ರಭುದೇವರ ಅನುಭವದ ಮಾತನ್ನು:

ತನುವಿನ ಕೊರತೆಗೆ ಸುಳಿಸುಳಿದು,
ಮನದ ಕೊರತೆಗೆ ನೆನೆನೆನೆದು,
ಭಾವದ ಕೊರತೆಗೆ ತಿಳಿತಿಳಿದು,
ಶಬ್ದದ ಕೊರತೆಗೆ ಉಳಿ(ಲಿ ?)ದುಳಿ(ಲಿ ?)ದು,
ಗುಹೇಶ್ವರನೆಂಬ ಲಿಂಗವು ಮನದಲ್ಲಿ ನೆಲೆಗೊಳ್ಳದಾಗಿ[೨]

ಅಂತರಂಗದ ಒಡೆಯ ಗುಹೇಶ್ವರಲಿಂಗ ಅಂತರಂಗದಲ್ಲಿ ನಿತ್ಯನಿವಾಸಿಯಾಗಿ ನೆಲಸದಿದ್ದರೆ, ಮನುಷ್ಯಕೋಟಿಯ ತನು ಆ ಒಡೆಯನ ಕೊರತೆಯಿಂದ ಸುಳಿಯಲೆ ಬೇಕು; ಮನ ಆ ಗುಹೇಶ್ವರನ ಕೊರತೆಯಿಂದ ನೆನೆಯಲೆ ಬೇಕು; ಭಾವ ಆ ಲಿಂಗದೇವನ ಅಭಾವದಿಂದ ತಿಳಿವ ಸಂಸಾರದಲ್ಲಿಯೆ ಇರಬೇಕು; ಶಬ್ದ ಆ ನಿರಾಳ ನಿಶ್ಶಬ್ದದ ಹಂಬಲದಿಂದ ಉಲಿವ ಜಾಲದಲ್ಲಿಯೆ ತೊಳಲಬೇಕು. ಮಾನವನಿಗೆ ವಿಷಯಪ್ರಪಂಚದ ಕೊರತೆ ಯಿದೆ, ನಿಜ. ಆದರೆ ಆತನ ಆಶೆಯ ಆಳ ಲಿಂಗದ ಕೊರತೆಯನ್ನೆ ಗಂಭೀರವಾಗಿ ನಿನಾದಿಸುತ್ತಿದೆ.[೩] ಮಾನವಪಿಂಡದ ಒಳಗೆ ನಡೆದಿರುವ ಈ ಗುನುಗುನು ಗಾನವನ್ನು ಕೇಳಿ ತಿಳಿಯ ಬಲ್ಲವನೇ ಶರಣರು ಹೇಳುವ 'ಪಿಂಡಜ್ಞಾನಿ.'

---

೧. ಶೂ. ಸಂ. ಪು. ೮, ವ. ೧೫. ೨. ಪ್ರ. ವ. ಪು. ೨೫೧, ವ. ೨೯೯.

೩. ನೋಡಿರಿ:

ಆಶೆಯುಳ್ಳಾತ ಒಬ್ಬರಧೀನದಲ್ಲಿಪ್ಪನು.
ಆಶೆಯ ಮನದ ಕೊನೆಯನರಿದಾತ
ಕೈಲಾಸದಾಚೆಯಲ್ಲಿಪ್ಪನೆಂದಾತ ಅಂಬಿಗರ ಚೌಡಯ್ಯ.

ಅಂ. ಚೌ. ವ. ಪು. ೭೩, ವ. ೯೭.

ಶರಣರ ಸತ್ಯತತ್ತ್ವದರ್ಶನದಲ್ಲಿ, ದಿವ್ಯ ಜೀವನದ ಅನುಭಾವಮಾರ್ಗದಲ್ಲಿ ಪಿಂಡಸ್ಥಲವೆ ಮೊದಲ ಹೆಜ್ಜೆ. 'ಪಿಂಡ' ಎಂದರೇನು? 'ಪಿಂಡಜ್ಞಾನ' ಎಂದರೇನು? – ಎಂದು ಕೇಳಿದರೆ ಜೀವನದ ಪರಮ ಸತ್ಯಾರ್ಥವನ್ನು ಕಂಡು ಬದುಕಬೇಕೆಂದಿರುವ ಊರ್ಧ್ವಮುಖವಾದ ಮಾನವನಾರು? ಆತನಲ್ಲಿ ಆತ್ಮಾನಾತ್ಮ ವಿವೇಕದ ಚಿಂತನೆ ಎಂಥದು? ಎಂದು ಕೇಳಿದಂತೆ. ಪಿಂಡಸ್ಥಲದಿಂದ ಹೊರಟು

ಆದಾವಂತೇ ಚ ಮಧ್ಯೇ ಚ ಶೂನ್ಯಂ ಸರ್ವತ್ರ ಸರ್ವದಾ।
ದ್ವಿತೀಯೇನ ಪದಾರ್ಥೇನ ಶೂನ್ಯಂ ಶೂನ್ಯಂ ವಿಭಾವ್ಯತೇ॥[೧]

ಎಂದು ಶಿವಯೋಗಿ ಶಿವಾಚಾರ್ಯರು ಷಟ್‌ಸ್ಥಲಮಾರ್ಗದಲ್ಲಿ ಹೇಳುವ ಜ್ಞಾನಶೂನ್ಯ ಸ್ಥಲದ ವರೆಗೆ ನಡೆದು, ನಿಜೈಕ್ಯಸ್ಥಲದಲ್ಲಿ ನಿಂದು, ಸರ್ವಶೂನ್ಯ ನಿರಾಲಂಬವಾಗಿ ಬದುಕನ್ನು ಬೆಳಗಿದ ಶರಣರ ದಿವ್ಯಜೀವನವನ್ನು ನೋಡಿದರೆ, ಮಾನವಪ್ರಾಣಿಯ ನಿಜ ಸ್ವರೂಪವೇನು? ಹುಟ್ಟು ಹೊಂದಿನ ನಡುವೆ ಒಂದು ನಾಮ ಒಂದು ರೂಪ ಒಂದು ಕ್ರಿಯಾಚೈತನ್ಯದ ಹೊಳಹಾಗಿ ಕೆಲಕಾಲ ತೋರಿ, ತೊಟ್ಟ ದೇಹವನ್ನು ನೆಲ ನೀರು ಬೆಂಕಿ ಗಾಳಿ ಬಯಲಿಗೆ ಗುರಿಮಾಡಿ, ದೇಶ ಕಾಲ ವಸ್ತುವಿನ ಕತ್ತಲೆಯಲ್ಲಿ ಎಂತೋ ಮಾಯವಾಗಿ ಅಡಗಿ ಹೋಗುವ ಈ ಪ್ರಾಣಿಯ ನಿಜವಾದ ಮಹಿಮೆಯೇನು? – ಎಂಬ ಮಾನವಜೀವನದ ಮಹಾಸಮಸ್ಯೆಗಳನ್ನು ಬಿಡಿಸಲು ಸಾಧ್ಯವಿದ್ದಂತೆ ತೋರುತ್ತದೆ. ವಿಶ್ವದ ಅನುಭಾವಿಗಳು ತೋರುವ ದಿವ್ಯಮಾರ್ಗಗಳಲ್ಲಿ ಶರಣಮಾರ್ಗವೂ ಒಂದು ಮಹಾಮಾರ್ಗ. ಅದಕ್ಕೆ ಅವರಿಟ್ಟ ಹೆಸರು ಷಟ್ಸ್ಥಲಮಾರ್ಗ.

ಈ ಮಾರ್ಗವನ್ನು ಹಿಡಿದು ನಡೆದ ಶರಣಜೀವನದ ಬೇರೆ ಬೇರೆ ಹಂತಗಳನ್ನು, ಆ ಜೀವನ ದಿವ್ಯದಲ್ಲಿ ವಿಕಾಸವಾಗುತ್ತ ಹೋಗುವ ರೀತಿ ನೀತಿಯನ್ನು, ಸರ್ವಾಂಗ ಲಿಂಗವಾದ ಆ ಜೀವನ ಸಮರಸಾನಂದವನ್ನು ಹೊರಸೂಸುತ್ತ ಹರಿದು ಮರ್ತ್ಯಕ್ಕೆ ಮಹವನ್ನು ನೀಡುತ್ತಿರುವ ಭರವನ್ನು ನೋಡಲು ಸಾಹಸ ಮಾಡೋಣವೇ? ಹಾಗಾದರೆ ಇಲ್ಲಿ ಬನ್ನಿ, 'ಶೂನ್ಯ ಸಂಪಾದನೆ'ಯ ಒಳಗೆ ಬನ್ನಿ. ಶರಣರ, ದಿವ್ಯಾನುಭಾವಿಗಳ ಒಳಗೆ ಬನ್ನಿ. ಜೊತೆಯಾಗಿ ಮಾರ್ಗ ಕ್ರಮಿಸೋಣ. ನನ್ನಂತೆ ನೀವು, ನಿಮ್ಮಂತೆ ನಾನು ಎಂದು ತಿಳಿದು ಸಲುಗೆಯಿಂದ ನಿಮ್ಮೊಡನೆ ಮಾತಾಡುತ್ತೇನೆ. ತಪ್ಪು ಮಾಡಿದರೆ ದಯವಿಟ್ಟು ಮನ್ನಿಸಿ. ತಪ್ಪುವುದು ಮಾನವನ ಸ್ವಭಾವ. ಅಲ್ಲವೇ?

ಇಲ್ಲಿ ನಮಗೆ ಮಾರ್ಗದರ್ಶಕರು ಶರಣರು, ಅನುಭಾವಿಗಳು ಮತ್ತೂ ಗೂಳೂರ ಸಿದ್ಧವೀರಣ್ಣೊಡೆಯರು. ದಿವ್ಯಶರಣರ, ಸ್ವಾನುಭಾವಿಗಳ ವಿಷಯವಾಗಿ ಹೆಚ್ಚು ಹೇಳುವ ಕಾರಣವೇ ಇಲ್ಲ. 'ಪರಮ ವೀರಶೈವ ಸಿದ್ಧಾಂತ ತತ್ತ್ವಜ್ಞಾನ'[೨], 'ದಿವ್ಯ ವೇದಾಂತ ಶಿರೋಮಣಿ'[೨], 'ಪರಮಾನುಭಾವ ಸಂಬೋಧೆ'[೨], 'ಶೂನ್ಯಸಂಬೋಧೆ'[೩],

---

೧. ಸಿ. ಶಿ. ಪು. ೩೫೨, ಪರಿ. ೨೦, ಜ್ಞಾ. ಶೂ. ಸ್ಥ. ಶ್ಲೋ. ೬೬. ೨. ಶೂ. ಸಂ. ಪು. ೪೦೬, ಗದ್ಯ.
೩. ಅದೇ. ಪು. ೪೦೭, ಪದ್ಯ. ೨.

ಯಾದ 'ಶೂನ್ಯ ಸಂಪಾದನೆ'ಯನ್ನು ಸಂಗ್ರಹಿಸಿದ ಅಥವಾ ರಚಿಸಿದ್‌ ಸಿದ್ಧವೀರಣ್ಣೊಡೆಯರೂ ಸಾಮಾನ್ಯರಲ್ಲ; ಅಂಥಿಂಥವರಲ್ಲ. ಅಸಾಮಾನ್ಯ ಅನುಭಾವಿಗಳು ಅವರು. 'ದಿವ್ಯಜ್ಞಾನಾನುಭಾವಿಯು'[೧] ಈ ಒಡೆಯರು ದೇವರು. ದಿವ್ಯಮಾರ್ಗದ ಜ್ಞಾನ ಅನುಭಾವವುಳ್ಳ ಇಂಥ ಮಹಾತ್ಮರ ಬೆನ್ನ ಹಿಂದೆ ನಡೆದು ಹೋದರೆ, ನಮ್ಮ ಜೀವನದ ದರ್ಶನ, ಅತಿಭವ್ಯವಾದ ಅದರ ಮಹಾನಿಲವು, ಮತ್ತೆ ಅದರ ದಿವ್ಯವೈಭವದ ವಿಸ್ತಾರಗಳನ್ನು ನೋಡುವ ಸಂಭವ ಹೆಚ್ಚು. ಸಂತೆ ಸಭೆಯ ಪಂಡಿತರ ಬೆನ್ನು ಹತ್ತಿದರೆ, 'ಬಳ್ಳಿ ಗುರುಡರು ಕೂಡಿ ಹಳ್ಳವನು ಬಿದ್ದಂತೆ'ಯೆ. 'ಬಿದ್ದರೆ ಬೀಳಬೇಕು ದೊಡ್ಡವರ ಬೆನ್ನು' ಎಂಬ ಲೋಕೋಕ್ತಿ ಗೊತ್ತಿದೆಯಲ್ಲವೇ? ಅದರಂತೆ ನಡೆದರೆ ನಡೆಯಬೇಕು ಬಲ್ಲ ಮಹಾತ್ಮರ ಬೆಂಬಳಿವಿಡಿದು.

ನಿಃಕಲಲಿಂಗವು ತನ್ನ ಶಕ್ತಿಯ ಮುಂದುಗೊಂಡು ಅನಂತಕೋಟಿ ಬ್ರಹ್ಮಾಂಡ, ಅಣುಕೋಟಿ ಆತ್ಮರನ್ನು ತನ್ನಲ್ಲಿಯೆ ಹಡೆಯಿತು. 'ಆತ್ಮರುಗಳಿಗೆ ಪಂಚವಿಂಶತಿ ತತ್ತ್ವಂಗಳ ಸಂಬಂಧಿಸಿದಲ್ಲಿ, ಆ ಆತ್ಮರುಗಳು ದೇಹೋऽಹಂ ಎಂದು ಜಾತಿ ವರ್ಣಾಶ್ರಮ ಕುಲಗೋತ್ರ ನಾಮಸೀಮೆ ಸುಖದುಃಖ ಬಂಧಮೋಕ್ಷಕ್ಕೊಳಗಾಗಿ, ತಮ್ಮ ನಿಜ ಸ್ವರೂಪವ ಮಱೆದ ಆತ್ಮರುಗಳ ಕಾಲಕಾಮರಿಗೆ ವಶವ ಮಾಡಿ, ಅವರ ಸುಖ ದುಃಖ ಬಂಧಮೋಕ್ಷಂಗಳ ಹೊದ್ದದೆ ಯಂತ್ರವಾಹಕನಾಗಿ ಆಡಿಸುತ್ತಿರ್ಪನಾ ಪರಶಿವ ಲಿಂಗವು...'[೨] ಒಡೆಯರು ಹೇಳುವ ಈ ಮಾತು ನನ್ನ ನಿಮ್ಮ ಅನುಭವಕ್ಕೆ ನಿಲುಕದಿದ್ದರೂ ಭಾರತೀಯ ತತ್ತ್ವಜ್ಞಾನ ಸಂಪ್ರದಾಯದಲ್ಲಿ ಹರಿಯುತ್ತಿರುವ ನಮ್ಮ ಬುದ್ಧಿಗೆ ಈ ಮಾತಿನ ಅರ್ಥ ಗೊತ್ತಾಗುತ್ತದೆ. ಇಪ್ಪತ್ತೈದು ತತ್ತ್ವಗಳಿಂದ ಕೂಡಿದ ದೇಹ ಸಂಬಂಧವಾಗಿ, ದೇಹವೇ ತಾನು ಎಂದು ಜಾತಿ ವರ್ಣ ಆಶ್ರಮ ಸುಖ ದುಃಖ ಬಂಧ ಮೋಕ್ಷ ಮುಂತಾದುವು ತನಗೆ ಎಂದು ದೇಹ ಸಂಸಾರದಲ್ಲಿ ಭ್ರಮಿಸುತ್ತಿರುವ ಆತ್ಮನೇ ಜೀವಾತ್ಮ. ಈ ಜೀವಾತ್ಮನೇ ತನ್ನ ನಿಜಸ್ವರೂಪವನ್ನು ಮರೆದು, ತಾನು ಒಂದು

---

೧. ಶೂ. ಸಂ. ಪು. ೪೦೭, ಗದ್ಯ.

೨. ಶೂ. ಸಂ. ಪು. ೪, ಗದ್ಯಭಾಗ.

ಇಲ್ಲಿ ಹೋಲಿಸಿ ನೋಡಿರಿ:

> 'ಅಂತು ಮಹಾಘನಲಿಂಗವು ತನ್ನ ಸ್ವಲೀಲೆಯಿಂದ ಲಿಂಗಾಂಗವೆರಡಾಗಿ ಉಪಾಸ್ಯೋಪಾಸಕನಪ್ಪ ಭೇದದಿಂದ ಆ ಮಹಾಘನಲಿಂಗವು ತನ್ನ ಪಂಚಸಾದಾಖ್ಯಮುಖಂಗಳಲ್ಲಿ ಪಂಚತತ್ತ್ವಂಗಳಂ ಪುಟ್ಟಿಸಿ, ಆ ಪಂಚವಿಂಶತಿ ತತ್ತ್ವದೇಹಮಂ ಆತ್ಮಂಗೆ ಸಂಬಂಧಿಸಿ, ಸಂಬಂಧಿಸಿದ ದೇಹಕರಣಂಗಳಲ್ಲಿ ಅಹಂಮಮತೆಯನೆಯ್ದುವ ಅಜ್ಞಾನಮಂ ಪುಟ್ಟಿಸಿ ಜೀವನೆಂದೆನಿಸಿ, ಆ ಜೀವಂಗೆ ಪುಣ್ಯ ಪಾಪವೆಂಬ ಕರ್ಮದ್ವ ಉದ್ಯೋಗಮಂ ಕೊಟ್ಟು ಪಾಶಬದ್ಧನಮಾಡಿ, ಜೀವರನಾಡಿಸಿ ನೋಡುತ್ತಿಪ್ಪನು. ಆ ಮಹಾಲಿಂಗವು ತನ್ನ ಲೀಲಾವಿಲಾಸದಿಂದ. ಇಂತು ಆತ್ಮಂಗೆ ದೇಹಸಂಸಾರ ಸಂಬಂಧಿಸಲು, ಆ ಆತ್ಮನು ತನ್ನ ನಿಜವಂ ಮಱೆದು ದೇಹೋऽಹಮೆಂದು ದೇಹಸಂಸಾರ ಸಂಬಂಧಿಯಾದನಾಗಿ ಸಂಸಾರ ಸಂಬಂಧ ಸ್ಥಲ ಹೇಳಲಾದುದು.'
>
> ಲಿಂ. ಲೀ. ವಿ. ಚಾ. ಪು. ೫೩, ಗದ್ಯ.

ಶ್ರೇಷ್ಠ ಪ್ರಾಣಿ, ಎಂದಿರುವ ಮಾನವ ಮರವೆಯ ಮಾನವ. ಆದರೆ ಆತನ ಅಂತರಂಗದಲ್ಲಿ 'ನಿನ್ನ ನಿಜವ ನೀನೆ ನೋಡೋ...' ಎಂದು ಯಂತ್ರವಾಹಕನಾದ ಪರಮಾತ್ಮನ ಪ್ರೇರಣೆ. ಈ ಪ್ರೇರಣೆ ಬಲವಾಗಿ ಒಡಮೂಡಿದರೆ, ಅದೇ ಪಿಂಡಸ್ಥಲದ ಕುರುಹು. ಇದೇ ಸತ್ತ್ವಗುಣ ಪ್ರಧಾನವಾದ ಪರಿಶುದ್ಧ ಮಾನವಸ್ಥಲವೆಂದು ಹೇಳಬಹುದು.

> ಬಹುಜನ್ಮಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ ।
> ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ ॥[1]

ರಾಜಸ ತಾಮಸಗುಣದ ಅಂಕಿತದಲ್ಲಿದ್ದು ಮಾಡಿದ ಪಾಪ – ಜನ್ಮಜನ್ಮಾಂತರದ ಪಾಪ ತೊಳೆದು, ಸತ್ಯ ಸದಾಚಾರ ಸದ್ಭಾವನೆ ಸದ್ವಿಚಾರ, ಪರಹಿತ ಪರೋಪಕಾರ, ದಾನ ದಯೆ ದಾಕ್ಷಿಣ್ಯ, ಆದರ ಪ್ರೇಮ. ಸತ್ತ್ವ ಸಾಹಸ, ಆತ್ಮತ್ಯಾಗ ಅರ್ಪಣ.... ಮುಂತಾದ ಶುಭ್ರಕಳೆಯೊದಗಿ, ಅಂತರಂಗ ಬಹಿರಂಗ ನಿರ್ಮಲವಾಗಿ, ಸರ್ವಾಂಗ ಶುದ್ಧವಾದ, ಸಜ್ಜನ ಸದ್ಭಾವಿಯಾದ ವಿಶುದ್ಧ ಮಾನವನೆ ಶುದ್ಧ ಪಿಂಡ. ಪುಣ್ಯದ ಪ್ರವೃತ್ತಿ ದಿವ್ಯದ ವಾಸನೆ. ದಿವ್ಯದ ಬೆಳೆಭೂಮಿ ಈ ಪುಣ್ಯಪಿಂಡ. ಪಾಪಕರ್ಮದ ಪಿಂಡ ಮನುಷ್ಯ, ಹೌದು. ಆದರೆ ಆ ಪಿಂಡ ಊಷರಭೂಮಿ. ಇಲ್ಲಿಯೂ ದಿವ್ಯ ಇದೆ. ಆದರೆ ಅದು ಇಲ್ಲಿ ಅಂಕುರಿಸುವ ಸಂಭವವೆ ಇಲ್ಲ. ಪಾಪದ ಕತ್ತಲೆ ಕವಿದ ಮಾನವಪಿಂಡದಲ್ಲಿ ಬೆಳೆಯಬಹುದು ಕಾಡುಕಸ. 'ರಸ' ಬೆಳೆಯಬಲ್ಲ ಹದ ಇಲ್ಲಿ ಇನ್ನೂ ಬಂದಿಲ್ಲ. ಆದರೆ ಬರಲೇ ಬಾರದೆಂಬ ನಿಯಮ ದೇವನದಲ್ಲ. ಪಾಪ ತೊಳೆದುಕೊಂಡು ಪವಿತ್ರಾತ್ಮನಾಗುವ ಸ್ವಾತಂತ್ರ್ಯ ಮನುಷ್ಯನಿಗಿದೆ. ಪಾಪದಿಂದ ಮುಕ್ತ, ಪವಿತ್ರ ಪಾವನ ನಿರ್ಮಲ ಶುದ್ಧ ಪುಣ್ಯಮಯನಾಗುವ ಸ್ವಾತಂತ್ರ್ಯ ಮನುಷ್ಯನಿಗಿರದಿದ್ದರೆ ಪಾಪ ಮಾಡುವುದೂ ಪಾಪವಾಗಲಿಕ್ಕಿಲ್ಲ. ಪಾಪಿ ಇರಲಿ, ಹೀನ ಅಧಮ ದುರ್ಜನ ದುರಾತ್ಮನಿರಲಿ, ಕುಲ-ಜಾತಿ ವರ್ಣ ಪರಿಸರ ಯಾವುದೇ ಇರಲಿ – ಎಲ್ಲೆಲ್ಲಿ 'ಸಿಮ್ಮಲಿಗೆಯ ಚೆನ್ನರಾಮ' ಅವಿತು ಆಧಾರವಾಗಿ, ಅಂತಃಪ್ರೇರಕ ಶಕ್ತಿಯಾಗಿದ್ದಾನೆ. ಇಲ್ಲಿಯೂ 'ಗೊಹೇಶ್ವರನೈದಾನೆ ಇಲ್ಲದಂತೆ.'

> 'ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್
> ಸಾಧುರೇವ ಸ ಮಂತವ್ಯಃ ಸಮ್ಯಗ್ ವ್ಯವಸಿತೋ ಹಿ ಸಃ'[2]

ಎಂಬ ಗೀತೆಯ ವಚನ ನಿಮಗೆ ಗೊತ್ತಿದೆಯಲ್ಲವೆ? ಶಿವಾಪೇಕ್ಷೆ, ಶಿವಭಕ್ತಿ, ಅನನ್ಯ ಭಕ್ತಿ ಹೃದಯದಲ್ಲಿ ಹೊಮ್ಮಿದರೆ, ಪಾಪದ ರಾಶಿ ಹೋಳಾಗುತ್ತದೆ. ಅಂತರಂಗ ನೆತ್ತೆ ನಿರ್ಮಳವಾಗುತ್ತದೆ. ಅಂತರಂಗದೊಡೆಯ ಕೈನೀಡುತ್ತಾನೆ, ಕರೆದು ಎತ್ತಿಕೊಳ್ಳುತ್ತಾನೆ. ಪಾಪಿಯೆಂದು ಪ್ರಪಂಚವೆ ಕೈಬಿಡಬಹುದು. ಆದರೆ ಪ್ರಪಂಚದ ಕರ್ತ ಎಂದೂ ಯಾರ ಕೈಯನ್ನೂ ಬಿಟ್ಟಿಲ್ಲ.

---

೧. ಸಿ. ಶಿ. ಪು. ೪೮, ಪರಿ. ೫, ೨೦. ಸ್ಥ. ಶ್ಲೋ. ೩೨. ೨. ಭ. ಗೀ. ಅ. ೯, ಶ್ಲೋ. ೩೦.

ಇದೋ ಇಲ್ಲಿ ನೋಡಿ, ಜಡ ಪಿಂಡ, ಮಾಂಸ ಪಿಂಡ, ಜೀವ ಪಿಂಡ, ಪ್ರಕೃತಿ ಪಿಂಡವೆನಿಸಿದ ಮಾನವನ ಮರೆಯಲ್ಲಿ ಏನಿದೆ?

ಜಲದೊಳಗಣ ಕಿಚ್ಚು ಜಲವ ಸುಡದೆ ಜಲವು ತಾನಾಗಿಯೆ ಇದ್ದಿತ್ತು ನೋಡಾ.
ನೆಲೆಯೆನಬಾರದು ನೋಡಿಹೆನೆಂದರೆ ಅದು ಜಲವು ತಾನಲ್ಲ.
ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರೋ?
ಹೊಱಗೊಳಗೆ ತಾನಾಗಿದ್ದು ತಲೆದೋಱದಿಪ್ಪುದು –
ಗೊಹೇಶ್ವರಾ, ನಿಮ್ಮ ನಿಲವು ನೋಡಾ.'[೧]

ಹೊರಗೆ ಒಳಗೆ ತಾನೆ ಆಗಿ ಇದ್ದ 'ಗೊಹೇಶ್ವರ'ನ ನಿಲವು ಇದೆ. ಆದರೆ ಆ ನಿಲವು, ಆ 'ಗೊಹೇಶ್ವರಲಿಂಗಸ್ಥಲ' ಯಾರಿಗೂ ಕಾಣಿಸಿಕೊಳ್ಳದೆ 'ಇಪ್ಪುದು.' ಮಾನವ ಪಿಂಡದ ಮರೆಯಲ್ಲಿ, ಅಂತರಂಗ ಬಹಿರಂಗದಲ್ಲಿ ಭರಿತವಾಗಿ ತಲೆದೋರದೆ, ತಲೆ ದೋರುವ ಭರದಲ್ಲಿ ನಿಂದಿರುವ ಗೊಹೇಶ್ವರನ ನಿಲವನ್ನು ಜಲಸಮುದ್ರ – ವಡ ಬಾಗ್ನಿಯ ದೃಷ್ಟಾಂತದಿಂದ ಸ್ಪಷ್ಟಮಾಡಲು ಹಾಡಿದ್ದಾರೆ ಪ್ರಭುದೇವರು, ಮೇಲೆ ಕೊಟ್ಟ ವಚನವನ್ನು. ಜಲದ ಒಳಗೆ, ನೀರಿನ ಹೃದಯದಲ್ಲಿ ನೀರುಗಿಚ್ಚು ಇದೆ. ಈ ಕಿಚ್ಚು ನೀರನ್ನು ಸುಡದೆ ನೀರೇ ತಾನಾಗಿ ಇದೆ. ಜಲದ ರೂಪ ಜಲದ ನಾಮ ಜಲದ ಗುಣಕ್ರಿಯೆಯೆ ತಾನಾದ ಈ ಬೆಂಕಿಯ ನೆಲೆಯನ್ನು, ಅಂದರೆ ಅದರ ಹೃದಯಾಂತರಂಗವನ್ನು, ಅದರ ಮೂಲಸ್ಥಾನ ಮೂಲಸ್ವರೂಪವನ್ನು, ಅದರ ಗಂಭೀರ ರಹಸ್ಯವನ್ನು 'ವಿವೇಕ'ದಿಂದ ತಿಳಿದು ನೋಡಿದರೆ, ಅದು ಜಲವಲ್ಲ. ಅದು ತಾನು ಜಲದ ಕುಲದಲ್ಲಿ ವೇಧಿಸಿಕೊಂಡಿದ್ದರೂ 'ಹೊದ್ದಿಯೂ ಹೊದ್ದದೆ ಸರ್ವತೋ ಧಿಕವಾಗಿ ಇದ್ದಿತ್ತು.'[೨] 'ಆ ಪರಬ್ರಹ್ಮವು ಅಂತರಂಗ ಬಹಿರಂಗದೊಳಗೆ ಪರಿಪೂರ್ಣ ವಾಗಿರ್ದು ಅನ್ಯವಾಗಿ ತೋರಿಸಿಕೊಳ್ಳಲರಿಯದೆ ಗೋಪ್ಯವಾಗಿಪ್ಪುದು.'[೨]

'ಲಿಂಗಲೀಲಾವಿಲಾಸ ಚಾರಿತ್ರ'ದಲ್ಲಿ ಮತ್ತು 'ಪ್ರಭುದೇವರ ವಚನಗಳ'ಲ್ಲಿ ಮೇಲೆ ಹೇಳಿದ ವಚನ ಪಿಂಡಸ್ಥಲದಲ್ಲಿ ಬಂದಿದೆ. ಇದಕ್ಕೆ ಟೀಕು ಬರೆದ ಕಲ್ಲಮಠದ ಪ್ರಭುದೇವರು ಮತ್ತು ಕುಮಾರ ಬಂಕನಾಥದೇವರು (ಮಹಾಲಿಂಗದೇವರು?) 'ಶುದ್ಧಾಂತಃಕರಣ ದೇಹಿ'ಯಾದ ಮಾನವನ ಮರೆಯಲ್ಲಿ ಪರಶಿವ ಜ್ಞಾನಾಗ್ನಿ ಹುದುಗಿದ್ದ ರೀತಿಯನ್ನು ವಿವರಿಸಿದ್ದಾರೆ. ಮಾನವಪಿಂಡಕ್ಕೆ ಅನ್ವಯ ಮಾಡಿದ ಈ ವಚನದ ಅರ್ಥವನ್ನು ಬೇಕಿದ್ದರೆ ಇನ್ನೂ ಗಭೀರವಾಗಿ ವಿಸ್ತಾರವಾಗಿ ನೋಡ ಬಹುದು. ಪರಶಿವ, ಶಿವಜ್ಞಾನ, ಈ ಜ್ಞಾನಾಗ್ನಿ ಕೇವಲ ಮಾನವಪಿಂಡದಲ್ಲಿ ಅಷ್ಟೇ ಅಲ್ಲ, ವಿಶ್ವಪಿಂಡದಲ್ಲಿಯೆ ಈ ಚಿತ್‌ಕಳೆ ಹೊರಗೊಳಗೆ ತಾನೆ ಆಗಿ ಬೆಳಗುತ್ತಿದೆ. ಆದರೆ ಅದು ಅಜ್ಞಾನಸಕ್ತಿಯ ಸಾಮರ್ಥ್ಯದಿಂದ ಜಲದ ಕುಲದಲ್ಲಿ ನಿಂದು ಜಲವೆನಿಸಿ, ಪೃಥ್ವಿ ಪಿಂಡದಲ್ಲಿ ನಿಂದು ಪೃಥ್ವಿ ಎನಿಸಿ, ವಾಯುಪಿಂಡ ಅಗ್ನಿಪಿಂಡ ಆಕಾಶಪಿಂಡದಲ್ಲಿ

೧. ಲಿಂ. ಲೀ. ವಿ. ಚಾ. ಪು. ೭೧, ವ. ೨. ೨. ಪ್ರ. ವ. ಪು. ೫, ವ. ೩, ಟೀಕು.

ನಿಂದು ವಾಯು ಅಗ್ನಿ ಆಕಾಶದ ರೂಪ ನಾಮ ಕ್ರಿಯೆಯಾಗಿ, ಸಸ್ಯಪಿಂಡದಲ್ಲಿ ವೇಧಿಸಿ ಕೊಂಡಿದ್ದು ಸಸ್ಯಪ್ರಪಂಚವೆನಿಸಿ, ಕ್ರಿಮಿ ಕೀಟಕ ಆನೆ ಸಿಂಹದ ಪಿಂಡದಲ್ಲಿ ಆಯಾ ಆಕಾರವೆ ಆಗಿ, ಆಯಾ ಹೆಸರು ಅವರವರ ಕ್ರಿಯಾವ್ಯಾಪಾರದಲ್ಲಿಯೆ ತೊಡಗಿಕೊಂಡಿದೆ. ವಿಶ್ವೇ ಭೂತಜಾತದ ಪಿಂಡದ ಮರೆಯಲ್ಲಿ ಹುದುಗಿದ್ದು ಕಾಣಿಸಿಕೊಳ್ಳದೆ, ಪಿಂಡದ ಗುಣ ಧರ್ಮ ಕರ್ಮವ ಹೊದ್ದದೆ. ಗೂಢವಾಗಿ ಅಭೇದ್ಯವಾಗಿ ಬೇರಿಟ್ಟು ತೋರದೆ, ವಿಶ್ವಮಯವಾಗಿ ಅತೀತವಾಗಿ ಜಲಭೂತ ಪಿಂಡಗಳಲ್ಲಿ ನಿಶ್ಚಲವಾಗಿ. ಯಾವ ಸ್ಥಲ ಕುಲದ ಹಂಗಿಲ್ಲದೆ ನೆಲೆಗೆಷ್ಟು ನಿಂದ ನಿಲವು ಯಾವ ಪಿಂಡಕ್ಕೂ ಗೊತ್ತಿಲ್ಲ. ಗೊತ್ತು ಪಡಿಸಿಕೊಳ್ಳುವ ಸಾಮರ್ಥ್ಯವೂ ಎಲ್ಲ ಪಿಂಡಗಳಿಗಿಲ್ಲ. ಇದ್ದರೆ ಆ ಶಕ್ತಿ ಮಾನವ ಪಿಂಡಕ್ಕಿದೆ. ಮಾನವಸ್ಥಲಕ್ಕೆ ಏರಿದ ವಿಶ್ವಪ್ರಪಂಚದಲ್ಲಿ ಈ ಶಕ್ತಿ ಅತ್ಯಂತ ಜಾಗ್ರತ ವಾಗಿ ನಿಂತಿದೆ.

ವಿಶ್ವವಿರಲಿ, ವಿಶ್ವದಲ್ಲಿ ತೋರುವ ಅಣುರೇಣು ತೃಣಕಾಷ್ಠ ಮೃಗ ಪಕ್ಷಿ ಮಾನವ ಪ್ರಾಣಿ ಇರಲಿ, ವಿಶ್ವವನ್ನು ಸೃಷ್ಟಿಸಿದನೆಂದು ಹೇಳುವ ಬ್ರಹ್ಮನೆ ಇರಲಿ, ಗರುಡ ಗಂಧರ್ವ ಸುರಾಸುರರೆ ಇದ್ದರೆ ಇರಲಿ, ಇವೆಲ್ಲ ಪಿಂಡಕುಲವೇ. ಮತ್ತು ಅಣು ಮೊದಲು ಬ್ರಹ್ಮ ಕಡೆಯಾದ ಎಲ್ಲ ಪಿಂಡ ಲಿಂಗಕರಂಡ, ಲಿಂಗವ ಕರಡಗೆ. ಕರಡಿಗೆ ಗುಂಡಗಡಿಗೆ ಚೌಕ ಪೆಟ್ಟಿಗೆ ಇವೆಲ್ಲ ನಿಮಗೆ ಗೊತ್ತು. ಎಳ್ಳು ಎಣ್ಣೆಯ ಕರಡಿಗೆ, ಕಲ್ಲು – ಅರಣಿ – ಬೆಂಕಿಯ ಕರಡಿಗೆ, ಮೊಗ್ಗೆ ಪರಿಮಳದ ಪೆಟ್ಟಿಗೆ, ಮುಗಿಲು ಮಿಂಚಿನ ಗಡಿಗೆ, ಬೆಳುದಿಂಗಳು ತಂಪು ಆನಂದದ ಭರಣಿ, ಬೀಜ ವೃಕ್ಷದ ಗರ್ಭಗುಡಿ. ಹೀಗೆ ಚರಾಚರ ಪ್ರಪಂಚದ ಜಡಚೈತನ್ಯ ವಸ್ತುಜಾತವನ್ನೆಲ್ಲ ತೆರೆದು ನೋಡಿದರೆ ಏನಿದೆ? ಹೊರಗೊಳಗೆ ತಾನೆ ತಾನಾಗಿದ್ದ ಗೊಹೇಶ್ವರನ ನಿಲವಿದೆ. ಪಿಂಡಕರಂಡದಲ್ಲಿ ಆಯಾ ಪಿಂಡವಾಗಿ ನಿಂದ ಈ ನಿಲವು ಪಿಂಡದ ಒಳಗೆ ಪಿಂಡದ ಹೊರಗೆ, ಒಳಹೊರಗೆಂಬ ಭೇದವಿಲ್ಲದೆ ಸರ್ವತೋಧಿಕವಾಗಿ ನಿಂದಿದೆ. ಕರಂಡದ ರೂಪ ನಾಮ ಕ್ರಿಯೆ, ಅದರ ಸ್ಥಾನ ಕಾಲದ ಸೀಮೆಗಲ್ಲನ್ನು ಗೊಹೇಶ್ವರನ ನಿಲವಿಗೆ ಹಾಕಿ, ನಾಮ ಸೀಮೆಯಾಗಿ ಸ್ಥಳ ಕುಳವಾಗಿ ನಿಂದ ನಿಲವೇ ವಿಶ್ವಬ್ರಹ್ಮಾಂಡ ಪಿಂಡಸ್ಥಲ. ವಿಶ್ವಭೂತಜಾತಕ್ಕೆ ಸೀಮೆಗಲ್ಲು ಹಾಕಿದ ಅಹಂಭಾವ, ಅಜ್ಞಾನದಿಂದ ಕೂಡಿದ ಮಾಯಾಶಕ್ತಿ. ಈ ಶಕ್ತಿ-ಜಾಲಕ್ಕೆ ಹೊರಗಾದ ಒಂದು ಪ್ರೋಟಾನ್ ಇಲೆಕ್ಟ್ರಾನ್ ಇಲ್ಲ. ಈ ಜಾಲದ ಬಂಧನ ಸಹಜ, ನಿಸರ್ಗವೆಂದು ಸ್ವೀಕರಿಸಿದಂತಿದೆ ವಿಶ್ವಬ್ರಹ್ಮಾಂಡ. ಆದರೆ ಬಂಧನದ ಬಿಗಿ ತನಗೆ ಸಹಜವಲ್ಲ, ಆರೋಪಿತವೆಂದು ಎಚ್ಚತ್ತು ನೋಡುವ ಸಾಹಸದಲ್ಲಿದೆ ಮಾನವ ಪಿಂಡ. ದೇಹವಂತ ಪ್ರಾಣವಂತ ಕರ್ಮಜ್ಞಾನೇಂದ್ರಿಯವಂತ ಮನ ಬುದ್ಧಿ ಚಿತ್ತ ಅಹಂಕಾರವಂತವಾದ ಜೀವಾತ್ಮಪಿಂಡ, ಮಾನವಕರಂಡಕ್ಕೆ ತನ್ನೊಳಗೆಯೆ ಹೂಳಿದ್ದ 'ಗೊಹೇಶ್ವರ'ನ ನಿಲವಿನ ವಾಸನೆ ಹತ್ತಿದೆ. ದಿವ್ಯವಾಸನೆಯ ಅರ್ಥಮಾಡಿಕೊಳ್ಳದೆ, ಏನೋ ಎಲ್ಲಿಂದಲೋ ಏಕೋ ಎಂದು ದುರ್ಲಕ್ಷಿಸಿ ತನ್ನ ಜಡ ಮಾಂಸ ರಕ್ತ ಪ್ರಾಣ ಮನ ಬುದ್ಧಿ ಪಿಂಡವೆ, ಅದರ ಬಂಧನವೆ ತನಗೆ ಸಹಜವೆಂದು ಅಲ್ಲಿಯೆ ನಿಂದು, ಅಸ್ತ ಮಾನಕ್ಕೆ ಅಳಿದು ಹೋಗುವುದೆ ರಾಜಸ – ತಾಮಸಪಿಂಡ. ದಿವ್ಯವಾಸನೆ ಏನು?

ಏಕೆ, ಎಲ್ಲಿಂದ ಬರುತ್ತಿದೆ ಎಂದು 'ತಿಳಿವ ಗಮನ,' ಒಳಗೆ ನಡೆದಿರುವ ಮಾನವನೇ ಶರಣರು ಹೇಳುವ ಪಿಂಡಸ್ಥಲದಲ್ಲಿ ನಿಂದ ಶುದ್ಧಾತ್ಮ.

ಕಲ್ಲ ಒಳಗೆ ಕಿಚ್ಚು ಉಂಟು, ಇಲ್ಲ; ಬೀಜದೊಳಗೆ ವೃಕ್ಷ ಉಂಟು ಅಥವಾ ಇಲ್ಲ. ಕಿಚ್ಚು ಒಳಗೆ ಉಂಟಾದರೂ ಅದಕ್ಕೆ ಹೊರಗೆ ಉರಿವ ಸಾಮರ್ಥ್ಯ ಇಲ್ಲ. ಇದೋ ಇಲ್ಲಿ ಮಾವಿನ ಬೀಜ ಇದೆ. ಗರ್ಭದ ಕೂಸಿನಂತೆ, ಯಾರೂ ಕಾಣಬಾರದಂತೆ ಒಳಗೆ ಕುಳಿತಿದೆ. ಮಾವಿನ ಮರ ಪ್ರಳಯದ ಬಿರುಗಾಳಿ ಹೊಡೆದರೂ, ಬೀಜದ ಗರ್ಭದಲ್ಲಿ ವೃಕ್ಷ ಹೊಯ್ದಾಡಿ ಧ್ವನಿ ಮಾಡಬಲ್ಲುದೇ? ಅದರಂತೆ ಪರಿಶುದ್ಧ ಮಾನವಪಿಂಡದಲ್ಲಿ ದಿವ್ಯದ ಶಕ್ತಿ ಇದೆ; ಇದ್ದರೂ ಅದು ಪ್ರಕಟವಾಗಿ ಯಾರಿಗೂ ತೋರಲಿಲ್ಲ. 'ತೋಱಲಿ ಲ್ಲಾಗಿ ಬೀಱಲಿಲ್ಲಾರಿಗೆಯು. ಕಣ್ಣು ಕಿವಿಗೆ ಮನ ಬುದ್ಧಿಗೆ ಇದಿರಿಟ್ಟು ತೋರದ ಈ ಗೊಹೇಶ್ವರ ನಿಂದ ನಿಲವನ್ನು ಅನುಭಾವಿ ಬಲ್ಲ.

ಪಿಂಡಸ್ಥಲದಿಂದ ಮುಂದೆ ನಡೆದರೆ, ನಾವು ಪಿಂಡಜ್ಞಾನಸ್ಥಲಕ್ಕೆ ಬರುತ್ತೇವೆ. ಅಂತರಂಗ ಬಹಿರಂಗ ನಿರ್ಮಲವಾಗಿ ಪರಿಶುದ್ಧನಾದ ಮಾನವ '...ಅಂತಪ್ಪ ಆತ್ಮರು ಗಳೊಳಗೆ ಜನ್ಮದ ಕಡೆಗಂಡು ಶಿವಸಂಸ್ಕಾರವೊದಗಿ...',[೧] ತನ್ನ ನಿತ್ಯನಿಜ ನಿವಾಸ ಸ್ಥಲ ವಾದ ನಿಃಕಲಲಿಂಗದ ಕಡೆ ಸಾಗುತ್ತಿರುವ ಚರಮದೇಹಿ ಈತ. ಜನ್ಮ ಮರಣ, ಮತ್ತೆ ಜನ್ಮ ಮತ್ತೆ ಮರಣದ ಭವಚಕ್ರದಿಂದ ಪಾರಾಗಿ, ಭೌತಪ್ರಪಂಚದ ಯಂತ್ರದಿಂದ ಬಿನ್ನಾಣದಿಂದ ಹೊರಬಂದು, ಅಂತರಂಗದಲ್ಲಿ ಕುಳಿತ ಯಂತ್ರವಾಹಕ, ಅಂತಃಪ್ರೇರಕನ ನಿಗೂಢ ಧ್ವನಿಯನ್ನು ಕೇಳಿ ಅತ್ತ, ಆತನೆಡೆಗೆ ಗಮಿಸುತ್ತಿರುವ ದಿವ್ಯ ಪ್ರಯಾಣಿಕನೀತ.

'ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ।
ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ॥
ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ।
ಜಂತುರಂತ್ಯಶರೀರೋಽಸೌ ಪಿಂಡಶಬ್ದಾಭಿಧೇಯಕಃ'॥[೨]

ಪಿಂಡಜ್ಞಾನದ ಸ್ಥಲಕ್ಕೆ ನಡೆದಿರುವ ಈ ಮಾನವಪಿಂಡಕ್ಕೂ, ಬಹಿರ್ಮುಖವಾಗಿ ಪ್ರಪಂಚದ ಯಂತ್ರದಲ್ಲಿಯೆ ಸಂಸರಿಸುತ್ತಿರುವ ಸಾಮಾನ್ಯ ಲೌಕಿಕ ಮಾನವಪಿಂಡಗಳಿಗೂ ಒಂದು ವಿಶೇಷ ಅಂತರವಿದೆ. ಹಚ್ಚ ಹಸಿ ಕಟ್ಟಿಗೆಗೆ, ಒಣಗಿ ಬೆಂಕಿಯ ಸಂಗದಿಂದ ಬೆಂಕಿಯಾಗಬಲ್ಲ ಒಣ ಕಟ್ಟಿಗೆಗೆ ಎಷ್ಟು ಅಂತರ? ಇನ್ನೂ ಕಹಿಯಾಗಿರುವ ಕನ್ನೆಗೂ ಋತುಗಂಡ ಜವ್ವನೆಗೂ ಎಷ್ಟು ಭೇದ? ಇದೋ ಈ ಶುದ್ಧಪಿಂಡದಲ್ಲಿ, ಶುದ್ಧ ಜೀವನಲ್ಲಿ, ದಿವ್ಯದತ್ತ ಮುಖವಾಗಿ ಅಂತ್ಯಶರೀರಿಯಾಗಿರುವ ಮನುಷ್ಯನಲ್ಲಿ ಏನಿದೆ ನೋಡಿ. ಇಲ್ಲಿ ಶಿವನ ಕಾರುಣ್ಯ, ದಿವ್ಯಪ್ರಸಾದ, ಅನುಗ್ರಹ, ಸನ್ಮಂಗಲವಾದ ಕೃಪೆ ಇದೆ. ಈ ದಿವ್ಯಋತು ಒದಗಿದರೆ ಮನುಷ್ಯಪ್ರಾಣಿಯ ಹಸಿ, ಕಸುಕು, ಕಹಿಯಳಿದು ಪ್ರಸ್ಫುಟ ವಾದ ಐಶ್ವರೀ ಭಕ್ತಿ, ದಿವ್ಯದ ರತಿ ಅರಳಿ ಪರಿಮಳ ಬೀರುತ್ತದೆ. ರಕ್ತ ಮಾಂಸ ಎಲು

---

೧. ಶೂ. ಸಂ. ಪು. ೪, ಗದ್ಯಭಾಗ.

೨. ಸಿ. ಶಿ. ಪು. ೫೪, ಪರಿ. ೫, ಪಿಂ. ಸ್ಥ. ಶ್ಲೋ. ೫೪-೫೫.

ತೊಗಲಿನಲ್ಲಿ, ಪ್ರಾಣಜೀವನದಲ್ಲಿ, ಹಿಂದೆ ತೋರದ ಒಂದು ಹೊಚ್ಚ ಹೊಸ ಕಳೆ, ಕಣ್ಣು ಕಿವಿಯಲ್ಲಿ, ಮನಭಾವದಲ್ಲಿ, ಪರಿವರ್ತಿತವಾದ ಒಂದು ತೇಜ ಬಂದು 'ಮಾಂಸಪಿಂಡ' ದಲ್ಲಿ ತುಂಬಿ ನೆಲಸಿದರೆ, ಭಕ್ತಿರತಿಯ ಸಂತೃಪ್ತಿಯಾಗುವವರೆಗೆ ಯಾರು, ಏನು ಕೊಟ್ಟು ಸಮಾಧಾನ ಮಾಡಬಲ್ಲರು?

ಶುದ್ಧಹೃದಯದಲ್ಲಿ ಮೂಡಿದ ಶಿವಾಪೇಕ್ಷೆ, ದಿವ್ಯದ ರತಿಯು ಬಯಕೆ ಏನು? ಅನ್ನಮಯವಾದ ಕೋಶಕ್ಕೆ ಅನ್ನಪಾನಾದಿಗಳನ್ನು ತುಂಬಿ, ಪ್ರಾಣಮಯ ಕೋಶಕ್ಕೆ ಪ್ರಾಣವಾಯುವನ್ನು ತುಂಬಿ ತುಂಬಿ, ಮನೋಮಯದ ಚೀಲದಲ್ಲಿ ವಿಷಯ ವ್ಯವಹಾರ ವನ್ನು ತುಂಬಿ, ವಿಜ್ಞಾನದ ಗಳಿಗೆಯಲ್ಲಿ ವಿಚಾರ ಶಾಸ್ತ್ರ ತರ್ಕವನ್ನು ತುಂಬಿ, ಆನಂದ ಮಯ ಕೋಶದಲ್ಲಿ ಸುಖ ಭೋಗ ವಿಲಾಸವನ್ನು ಒಟ್ಟಿ ಒಟ್ಟಿ ಸಾಕಾಯ್ತು. ಅಂತರಂಗದ ರತಿಗೆ ಹೇಗೂ ಏನೂ ಸೊಗಸಿಲ್ಲ. ಏಕೆ? ಬಯಕೆ, ಶರೀರ ಪ್ರಾಣ ಕರಣಾದಿಗಳಲ್ಲಿ ಮೂಡಿದ್ದರೆ, ಅವರವರ ಇಚ್ಛಿತ ವಸ್ತುವನ್ನು ನೀಡಿದಾಗಳೆ ಹೊಟ್ಟೆ ತುಂಬಿ ಸಮಾಧಾನ ಹೊಂದಬಹುದಿತ್ತು. ಎಲ್ಲಿಂದ ಸೆಲೆಯೊಡೆಯುತ್ತಿದೆ ಈ ಶಿವಾಪೇಕ್ಷೆ? 'ಅಹಂಭಾವ'ದ ಸೀಮೆಯಲ್ಲಿಯೆ ಈ ಬಯಕೆ ಅಂಕುರಿಸಿಲ್ಲ. 'ಅಹಂಭಾವ'ದ ಲಕ್ಷ ತರಂಗಲೀಲೆಯ ಹಿಂದೆ ಏನೋ ಆಟ, 'ದೇವರಾಟ' ನಡೆದಿದೆ. ಅದು ಏನಿರಬಹುದು? ಯಾರು ನಾನು? ಎಲ್ಲಿಂದ ಬಂದೆ ನಾನು? ಎಲ್ಲಿಗೆ ಹೋಗಬೇಕು? ನನ್ನ ಹೃದಯಗಂಭೀರ ಬಯಸುವ ಬಯಕೆಯಾದರೂ ಏನು? ಅದರ ತೃಪ್ತಿ ಎಲ್ಲಿದೆ? ಇಂಥ ಪ್ರಶ್ನೆ ಪ್ರಾಣದ ಪ್ರಶ್ನೆಯಾಗಿ ನಿಲ್ಲುತ್ತದೆ, ಕರಣಶುದ್ಧಿ ಕರ್ಮಶುದ್ಧಿಯಲ್ಲಿದ್ದ ಪಕ್ವಜೀವನದ ಮುಂದೆ.

ತನ್ನ ಇರವು, ತನ್ನ ಅರಿವು, ತನ್ನ ಶರೀರ ಪ್ರಾಣ ಇಂದ್ರಿಯ ಕರಣ, ತನಗಿದಿರಿಟ್ಟು ತೋರುವ ವಿಶ್ವಪ್ರಪಂಚ, ತನ್ನ ಒಳಗೆ ಹೊರಗೆ ಹರಿದಾಡುತ್ತ ನಡೆದಿರುವ ವ್ಯವಹಾರ ವನ್ನು ಕುರಿತು ಮಾನವನ ಹೃದಯದಲ್ಲಿ ಏಳುತ್ತಿರುವ, ಮೈಮುರಿದೆದ್ದು ಜಾಗ್ರತವಾಗು ತ್ತಿರುವ ಪ್ರಶ್ನೆಗಳಿಲ್ಲದಿದ್ದರೆ, ಮಾನವ ಮಾನವಪ್ರಾಣಿಯಾಗಿಯೆ ನಿದ್ರಿಸುತ್ತಿದ್ದ. ಮಲಗಿದರೆ ಎಚ್ಚರಿಸುವ ದೇವ, ಈ ಪ್ರಶ್ನೆಗಳು. ಈ ಪ್ರಶ್ನೆಗಳ ಉತ್ತರವೂ ದೇವನೇ. ಅದು ಹೇಗೆ ಎಂದು ನೀವು ಕೇಳುವಿರಾ? ಇಲ್ಲಿ ನೋಡಿ, ಶುದ್ಧಪಿಂಡದಲ್ಲಿ ನಡೆದಿರುವ ಕಾರ್ಯಕ್ರಮವನ್ನು: 'ಇಂತು ಪಿಂಡದಲ್ಲಿ ಶಿವತತ್ತ್ವವನಡಗಿಸಿಕೊಂಡಿರ್ದ ಆತ್ಮನ ಅಂತರಂಗದೊಳಗಣ ಶಿವತತ್ತ್ವವೆ ಜ್ಞಾನಾಂಕುರಸ್ವರೂಪಮಾಗಿ, ಆ ಸುಜ್ಞಾನ ದೃಷ್ಟಿಯಿಂ ತಿಳಿದು ನೋಡಿ, ನಾನೀ ಮಾಂಸಪಿಂಡದುತ್ಪತ್ತಿ ಸ್ಥಿತಿ ಲಯದವನಲ್ಲ. ಈ ಬ್ರಹ್ಮಾಂಡಾದಿ ಸಮಸ್ತ ಪ್ರಪಂಚಗಳು ತೋಱದ ಮುನ್ನ ಆದಿ ಚಿತ್‌ಶಕ್ತಿಯಿಂದು ದಯಿಸಿದೆನೆಂದು ಆತ್ಮನು ತನ್ನ ತಾನು ವಿವೇಕಿಸುತ್ತಿರ್ದನು ....' ೧

'ಆತ್ಮನು ತನ್ನ ತಾನು ವಿವೇಕಿಸುತ್ತಿರ್ದನು.' ತನ್ನನ್ನು ತಾನು ವಿವರಿಸಿ, ಬಿಚ್ಚಿ, ಬೇರೆ ಬೇರೆ ಮಾಡಿ, ತಿಳಿದು ನೋಡುತ್ತಿದ್ದಾನೆ ಶುದ್ಧಪಿಂಡನೆನಿಸಿದ ಮಾನವನಿಲ್ಲಿ. –

---

೧. ಶೂ. ಸಂ. ಪು. ೬, ಪ್ರ. ೩.

ಇಲ್ಲಿ ಅಂದರೆ ಪಿಂಡಜ್ಞಾನದ ಸೀಮೆಯಲ್ಲಿ, ಅಥವಾ ಸ್ಥಲದಲ್ಲಿ. ತನ್ನ ತಾನು ವಿವರಿಸಿ, ವಿವೇಕಿಸಿ ನೋಡುವ ಜ್ಞಾನಕ್ರಿಯೆಯನ್ನೇ ನಿಮಗೆ ಇಷ್ಟವೆನಿಸಿದರೆ ನಿತ್ಯ-ಅನಿತ್ಯ ವಿವೇಕ, ಆತ್ಮ-ಅನಾತ್ಮ ವಿವೇಕ, ಅಧ್ಯಾತ್ಮ ವಿಚಾರ, ಶರೀರಾತ್ಮ ವಿಚಾರ, ಕ್ಷೇತ್ರ-ಕ್ಷೇತ್ರಜ್ಞ ವಿಚಾರ ಎಂದು ಮುಂತಾಗಿ ಹೆಸರು ಕೊಡಿರಿ. ತನ್ನನ್ನು ತಾನು ವಿವೇಕಿಸಿ ನೋಡು ತ್ತಿರುವಲ್ಲಿ ವಿವೇಕಿಸುವಾತ ಯಾರು? ತಾನು, – ಕರ್ತೃ. ಯಾರನ್ನು ಅಥವಾ ಏನನ್ನು ವಿವೇಕಿಸಿ ನೋಡುತ್ತಿದ್ದಾನೆ ತಾನು? ಉತ್ತರ: ತನ್ನನ್ನು, – ಕರ್ಮ. ಪ್ರತಿನಿತ್ಯ ನಾನು ನನ್ನನ್ನು ನೋಡುತ್ತಿದ್ದೇನೆ. ಇದರಲ್ಲಿ ವಿಶೇಷವೇನು? ನನಗೆ ದೇಹ ಇದೆ, ಪ್ರಾಣ ಇದೆ, ಬುದ್ಧಿಯೂ ಇದೆ. ಜ್ಞಾನೇಂದ್ರಿಯಗಳಿಂದ ಹೊರಗೆ ಜಗತ್ತನ್ನು ನೋಡುತ್ತೇನೆ. ಕೈ ಕಾಲು ಮುಂತಾದ ಕರ್ಮೇಂದ್ರಿಯಗಳಿಂದ ನನಗೆ ಉಪಯೋಗ ವಿದ್ದಷ್ಟು ಜಗತ್ತಿನೊಡನೆ ಕ್ರಿಯಾವ್ಯಾಪಾರ ನಡೆಸುತ್ತೇನೆ. ಎಲ್ಲರಂತೆ ನನಗೂ ಒಳಗೆ ಹರಿದಾಡುವ ಮನಸ್ಸು, ವಿಚಾರ ಮಾಡಬಲ್ಲ ಬುದ್ಧಿ ಇದೆ. ಇದೆಲ್ಲ ನಾನು. ಕಣ್‌ಗಂಡು ಇಷ್ಟೆಲ್ಲ ಗೊತ್ತಿದ್ದು, ಮತ್ತೆ ತನ್ನನ್ನು ತಾನು 'ವಿವೇಕಿಸಿ ನೋಡುವುದೆಂದರೇನು?' – ಎಂದು ನೀವು ಚಕಿತರಾಗಬಹುದು. ನೀವು ಚಕಿತರಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ನಾನು ಈಗ ನಿಮ್ಮನ್ನು ನೋಡುತ್ತಿದ್ದೇನೆ. ಇದು ಕಣ್ಣು ಕಂಡ ಮಾತು. ಇಲ್ಲಿ ನಮ್ಮ ಗೆಳೆಯ ರಾಮಣ್ಣ ಬಂದು: 'ನಾನು ಈಗ ನಿಮ್ಮನ್ನು ನೋಡುತ್ತಿದ್ದೇನೆ ಎಂಬುದಕ್ಕಿಂತ, ನೀವು ಈಗ ನನಗೆ ಕಾಣುತ್ತೀರಿ ಎಂದು ಹೇಳುವುದು ಮೇಲಲ್ಲವೆ?' – ಎಂದು ಅಡ್ಡ ಪ್ರಶ್ನೆ ಹಾಕಿದರೆ ನೀವು ನಗಬಹುದು, ನಾನೂ ನಗುತ್ತೇನೆ, – ಅಡ್ಡ ರಾಮಣ್ಣನ ಗೊಡ್ಡು ವಿಚಾರಕ್ಕೆ. ಆದರೆ ರಾಮಣ್ಣ ತನ್ನ ವಿಜ್ಞಾನದ ಆಧಾರದ ಮೇಲೆ ತನ್ನ ಮಾತನ್ನು ಸಮರ್ಥಿಸಿಕೊಂಡರೆ, ನಾವಿಬ್ಬರೂ ಬೆಪ್ಪರಾಗುತ್ತೇವೆ. ಅದಕ್ಕೇ ಬಲ್ಲವರು ನುಡಿವಾಗ ನಡೆವಾಗ, ಒಮ್ಮೆಲೆ ನಾವು ದುಡುಕಿ 'ಇದಾವ ಗಹನ' ಎಂದು ಹರಿಹಾಯಬಾರದು. ಸ್ವಲ್ಪ ಸಮಾಹಿತ ಚಿತ್ತರಾಗಿರಬೇಕು ಇಂಥ ಗಂಭೀರ ಸಮಸ್ಯೆಯ ವಿವೇಚನೆ ನಡೆದಾಗ.

ಯಾರು ನಾನು? – ಎಂಬ ಪ್ರಶ್ನೆಯನ್ನು ವಿವೇಕಿಸಿ ನೋಡಿ, ಶುದ್ಧಾತ್ಮನಾದ ಮಾನವ ಈ ನಿರ್ಣಯಕ್ಕೆ ಬರುತ್ತಾನೆ. ಬುದ್ಧಿ ಮನ ಪ್ರಾಣ ದೇಹವ ಮಾಂಸ ಪಿಂಡಕ್ಕೆ ಹುಟ್ಟು ಬಾಳು ಸಾವು ಸಂಗಾತಿಗಳೆ. ಆದರೆ ಈ ಪ್ರಕೃತಿಪಿಂಡದೊಡನೆ ಹುಟ್ಟಿ, ಒಡನೆ ಬಾಳಿ, ಅದರೊಡನೆ ಸಾವ ಜೀವಿ ನಾನಲ್ಲ. ಉದಯಮಾನಕ್ಕೆ ತೋರಿ ಅಸ್ತಮಾನಕೆ, ಮಾಯವಾಗುವ 'ನೀರಲಾದ' ನಿರ್ಮಾಣ ನಾನಲ್ಲ. 'ಈ ಬ್ರಹ್ಮಾಂಡಾದಿ ಸಮ... ತೋಱದ ಮುನ್ನ ಆದಿ ಚಿತ್‌ಶಕ್ತಿಯಿಂದುದಯಿಸಿದೆನು...' ಇಲ್ಲಿ ಶಿವನ ಕಾರುಣ್ಯ... ನಾನು, ಚಿದಾತ್ಮ ನಾನು, ಚಿತ್‌ಸ್ವರೂಪ ನಾನು. ಚಿತ್‌ಶಕ್ತಿ ದಿವ್ಯಮುತು ಒದಗಿದರೆ ಎಂದೂ ಬಿಚ್ಚಿ ಬೇರೆಯಾಗದ ಶಕ್ತಿ. ಅಂತೆಯೆ ಪರ ವಾದ ಐಶ್ವರೀ ಭಕ್ತಿ, ದಿವ್ಯ... ಪ ನಾನು.

---

೧. ಶೂ. ಸಂ. ಪು. ೪, ಗದ್ಯ... ತ್ತಾನಿ ನಾಹಂ ।

೨. ಸಿ. ಶಿ. ಪು. ೫೪, ಪರಿ. : ಘ್ರಾಣನೇತ್ರೇ ॥

ನ ಚ ವ್ಯೋಮ ಭೂಮಿರ್ನ ತೇಜೋ ನ ವಾಯುಃ ।
ಚಿದಾನಂದರೂಪಃ ಶಿವೋಽಹಂ ಶಿವೋಽಹಂ ॥[೧]

ಎಂದು ಶಂಕರಾಚಾರ್ಯರು ಹಾಡಿದ 'ಶಿವೋಹಂ' ಗೀತವನ್ನು ನೀವು ಕೇಳಿರಬಹುದು. ಮನ ಬುದ್ಧಿ ಚಿತ್ತ ಅಹಂಕಾರ ನಾನು ಅಲ್ಲ. ಕಣ್ಣು ಮೂಗು ಕಿವಿ ನಾಲಗೆ ತೊಗಲು, – ಇವೂ ನಾನು ಅಲ್ಲ. ನೆಲ ನೀರು ಗಾಳಿ ಬೆಂಕಿ ಬಯಲು, – ಅವೂ ಅಲ್ಲ ನಾನು. ಹಾಗಾದರೆ ಯಾರು ನಾನು? ಸತ್ತು ಚಿತ್ತು ಆನಂದವೆ ತನ್ನ ರೂಪು ಆದ ಶಿವ ನಾನು. ಈ 'ಅಹಂ ಬ್ರಹ್ಮಾಸ್ಮಿ' ಎಂಬ ಮಂತ್ರಗೀತ ಹುಡುಗಾಟದ ಮಾತು ಅಲ್ಲ; ಹುಚ್ಚರ ಹುಂಬರ ಪ್ರಲಾಪ ಅಲ್ಲ. ಮನುಷ್ಯಪ್ರಾಣಿ ಸಾವಿರ ಸಾವಿರ ವರ್ಷ ಕಾಲ ತನ್ನನ್ನು ತಾನು ಬಿಚ್ಚಿ ನೋಡಿ, ವಿವೇಕಿಸಿ ನೋಡಿ, ತನ್ನ ಗಂಭೀರವನ್ನು ನೋಡಿ ಕಂಡ ಅನುಭವದ ಕೆನೆ ಮೇಲಿನ ಮಂತ್ರಗೀತ. ಇದೋ ಈ ಕಡೆ, ನಿಜಗುಣಶಿವ ಯೋಗಿಗಳ ಕಡೆ ಬನ್ನಿ. ಅವರ ವಿಚಾರ ಕೇಳಿ ಈ ವಿಷಯದಲ್ಲಿ:

ನೇತಿಗಳೆದು ಕಾಯ ಕರಣ ಕಾರ್ಯಂಗಳ ।
ಭೂತ ಕಾರಣಪಂಚಕವನುಳಿದು ॥
ನೇತಿ ಭೀತಿಯ ಮೀರಿ ನಿಂದು ನೋಡಲು ಪರಂ ।
ಜ್ಯೋತಿ ಸ್ವರೂಪ ನೀನಾಗುತಿಂತು ॥ [೨]

ದೇಹ ಇಂದ್ರಿಯಾದಿಗಳನ್ನು ನೇತಿಗಳೆದು (ನ + ಇತಿ + ಕಳೆದು), ಇವು ನಾನು ಅಲ್ಲ ಎಂದು ಬಿಚ್ಚಿ ಬೇರೆ ಮಾಡಿ ನೋಡಿ, ನೇತಿಗಳೆವ ಕ್ರಿಯೆಯನ್ನು ಮುಗಿಸಿ, ದೇಹ ಪ್ರಾಣ ಮನ ಬುದ್ಧಿ ಮುಂತಾದ ಭೂತಪ್ರಪಂಚವನ್ನು ನನ್ನಿಂದ ಕಳೆದರೆ, 'ಎಲ್ಲ

---

೧. ನಿ. ಷ. ಶ್ಲೋ. ೧.
ಹೋಲಿಸಿರಿ: ಸಚ್ಚಿದಾನಂದಮೇವ ತ್ವಂ ಸಚ್ಚಿದಾನಂದಕೋಽಸ್ಮ್ಯಹಂ
ಮನೋ ಬುದ್ಧಿರಹಂಕಾರಚಿತ್ತಸಂಘಾತಕಾ ಅಮೀ ॥
ನ ತ್ವಂ ನಾಹಂ ನ ಚಾನ್ಯದ್ ವಾ ಸರ್ವಂ ಬ್ರಹ್ಮೈವ ಕೇವಲಂ
ತೇ. ಬಿಂ. ಉ., ಅ. ೬, ಮಂ. ೩-೪.

೨. ವೇ. ಗ್ರಂ. ಕೈ. ಪ. ಪು. ೭೩, ಜ್ಞಾ. ಪ್ರ. ಸ್ಥ, ಪ. ೧೩.
ಹೋಲಿಸಿರಿ:
ಪಂಚಮಹಾಭೂತಂಗಳು ಪಂಚ ಪಂಚೀಕೃತಿಯನೆಯ್ದಿ,
ಪಂಚವಿಂಶತಿ ಅಂಗರೂಪಾದ ಕಾಯದ ಕೀಲನು ಸ್ವಾನುಭಾವದ ನಿಷ್ಠೆಯಿಂದ ಅರಿದು,
ಈ ದೇಹದ ಸ್ವರೂಪು ತಾನಲ್ಲವೆಂದೂ
ತನ್ನ ಸ್ವರೂಪು ಪರಂಜ್ಯೋತಿಸ್ವರೂಪವೆಂದೂ ತಿಳಿದು,
ಆ ಜ್ಯೋತಿರ್ಮಯ ಲಿಂಗಕಳೆಯೊಳಗೆ ಅಂಗಕಳೆಯ ಸಂಬಂಧಿಸಿ,
ಅಂಗ ಲಿಂಗ ಸಂಬಂಧ, ಪ್ರಾಣ ಲಿಂಗ ಸಂಬಂಧವ ಮಾಡುವ ಕ್ರಮವಿದಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.
ತೋಂ. ಸಿ. ವ. ಪು. ೩೦, ಷಿ. ಸ್ಥ, ಪ. ೭೪.

ಕಳೆದು ಹೊಯ್ತು, ನಾನು ಅನ್ನುವುದರಲ್ಲಿ ಉಳಿಯಿತಾದರೂ ಏನು? ಮುಂದೆ ಗತಿ ನನಗೆ!' – ಎಂಬ ಭೀತಿಯನ್ನು ಬದಿಗಿರಿಸಿ, 'ನೇತಿ ಭೀತಿಯ ಮೀರಿ ನಿಂದು ನೋಡಲು' ಕಾಣುವುದೇನು? ಪರಂಜ್ಯೋತಿಸ್ವರೂಪ! -- ನಾನು.

ಅಂತೂ ಅರಿವಿನ ಭಿತ್ತಿಯಲ್ಲಿ ಮೂಡುವ 'ನಾನು' ಎರಡು. ಮಾನವಸ್ಥಲದಲ್ಲಿ ನಿಂದಿರುವ ನಮ್ಮ ನಾನು ಒಂದು; ಈ ಸ್ಥಲದ ಮೇರೆಯ ಮೀರಿ ಇಲ್ಲಿಂದ ಕಾಣದ ಸ್ಥಲದಲ್ಲಿ ನಿಂದು ತನ್ನ ತಾನು ನೋಡುತ್ತಿರುವ ಶಂಕರಾಚಾರ್ಯರ ಅಥವಾ ನಿಜಗುಣ ಶಿವಯೋಗಿಗಳ ನಾನು ಮತ್ತೊಂದು. ಮೊದಲನೆಯ 'ನಾನು' ನಮ್ಮೆಲ್ಲರಿಗೆ ಪರಿಚಿತ ವ್ಯಕ್ತಿ; ಎರಡನೆಯ 'ನಾನು' ನಾವೆಂದೂ ನೋಡದ ವ್ಯಕ್ತಿ. ಅಂದ ಮೇಲೆ ಪರಿಚಯದ ಪ್ರಶ್ನೆಯೇ ಇಲ್ಲ. ಎಲ್ಲ ಎಲ್ಲರ ಪ್ರತ್ಯಕ್ಷ ಅನುಭವವನ್ನೆ ಅಲ್ಲಗಳೆವ, ತಾನು ಸಚ್ಚಿದಾನಂದ ರೂಪ, ಪರಂಜ್ಯೋತಿಸ್ವರೂಪ, 'ಬ್ರಹ್ಮಾಂಡಾದಿ ಸಮಸ್ತ ಪ್ರಪಂಚುಗಳು ತೋರಿದ ಮುನ್ನ ಆದಿ ಚಿತ್‌ಶಕ್ತಿಯಿಂದುದಯಿಸಿದೆನು' – ಎಂದು ಹೇಳಿಕೊಳ್ಳುವ ನಾನನ್ನು ನಂಬುವುದೆಂತು? ಮಾಂಸಪಿಂಡದ ಉತ್ಪತ್ತಿ ಸ್ಥಿತಿ ಲಯದವ ನಾನು ಅಲ್ಲ: ಮನ ಬುದ್ಧಿ ದೇಹ ಕರಣ ನಾನು ಅಲ್ಲ – ಎಂದು ಆಚಾರ್ಯರೇ ಹೇಳಲಿ ಶಿವಯೋಗಿಗಳೇ ಹೇಳಲಿ, ಹೀಗೆ ಹೇಳುವಾಗ ಇವರು ದೇಹ ಪ್ರಾಣ ಮನ ಬುದ್ಧಿಯನ್ನು ಕಳೆದಿಟ್ಟು ಬೇರೆ ದೂರ ಎಲ್ಲಿಯೋ ನಿಂತುಕೊಂಡಿದ್ದರೋ? ದೇಹ ಪ್ರಾಣ ಕರಣಾದಿಗಳ ಸಂಘಾತವೆ ನಾನು, ಅಲ್ಲದೆ ನಾನಿಗೆ ನಿಲ್ಲಲಿಕ್ಕೆ ಇಂಬಾದರೂ ಎಲ್ಲಿದೆ? ಹಣ್ಣಿನ ಸಿಪ್ಪೆ ಪಿಂಡ ಬೀಜವನ್ನೆಲ್ಲ ನೇತಿಮಾಡಿ ಕಳೆದರೆ ಹಣ್ಣಿನ ರಸ ರುಚಿ ಕಾಣಬಹುದು ಎಂದು ಹೇಳಿದರೆ, ಈ ಮಾತನ್ನು ನಂಬಿದರೆ, ಹೀಗೆ ಹೇಳುವ 'ಮಹಾತ್ಮ'ರನ್ನೇ ನಂಬಬೇಕು. ಮತ್ತು ಹೀಗೆ ದೇಹ ಪ್ರಾಣಾದಿಗಳನ್ನು ಮನೆಯೊಳಗಿಟ್ಟು ಹೊರಗೆ ಅಡ್ಡಾಡಿದ 'ನಾನು'ಗಳನ್ನು, 'ಪರಂಜ್ಯೋತಿಸ್ವರೂಪ'ಗಳನ್ನು, 'ಸಚ್ಚಿದಾನಂದ'ಗಳನ್ನು ಯಾರೂ ಎಂದೂ ಕಂಡಂತೆ ತೋರುವುದಿಲ್ಲ! 'ಬಲ್ಲವರು ಬಲ್ಲರು ಇದರ ಮರ್ಮವ' ಎಂದು ಒಂದು ಗುಳಿಗೆ ಕೊಟ್ಟರೆ, ಬುದ್ಧಿಗೆ ನಿದ್ದೆ ಬಂದು ತಲೆದೂಗಿದರೂ ತೂಗಬಹುದು. 'ಅಹಂ ಬ್ರಹ್ಮ ಅಸ್ಮಿ'. 'ಅಯಮಾತ್ಮಾ ಬ್ರಹ್ಮ'. 'ಪರಂಜ್ಯೋತಿಸ್ವರೂಪ ನೀನು', 'ಸಚ್ಚಿದಾನಂದ ನಿತ್ಯ ಪರಿಪೂರ್ಣ ನೀನೆ' ಎಂಬ ಇಂಥ ಬ್ರಹ್ಮಘುಟಿಕೆಗಳಿಂದಲೇ ಕೋಟಿ ಕೋಟಿ ಜನ ಸಾವಿರ ಸಾವಿರ ವರ್ಷ ಬುದ್ಧಿ ಕೆಟ್ಟು ಮಬ್ಬಾಗಿ, 'ಶಿವೋಹಂ ಶಿವೋಹಂ' ಎಂದು ಭಜನೆ[1] ಮಾಡಿ. ಹುಚ್ಚರಂತೆ ಕುಣಿಯುತ್ತ ಬಂದಿದ್ದಾರೆ. ಸಾಕು, ನಿಮ್ಮ ಹಳೇ ಪುರಾಣ.

ನೀವು ಹೀಗೆ ಪ್ರತಿಭಟಿಸಿ ಪ್ರತಿರೋಧಿಸಿದರೆ, ಮತ್ತೆ ಬಿನ್ನವಿಸಿಕೊಳ್ಳುತ್ತೇನೆ ನಿಮ್ಮನ್ನು. ಸ್ವಲ್ಪ ಸಮಾಹಿತಚಿತ್ತರಾಗಿರಿ ಎಂದು. ನನ್ನ ನಿಮ್ಮ ಬುದ್ಧಿಗಿಂತ

---

೧. ಇಲ್ಲಿ ಮತ್ತೊಂದು ತತ್ತ್ವ ಪದ:

ಶಂಭೋ ಮಹಾದೇವ ಶಂಭೋ ಮಹಾದೇವ
ಶಂಭೋ ಮಹಾದೇವ ಸಾಂಬ ಪ್ರಭೋ
ಸದಾನಂದರೂಪಶ್ಚಿದಾನಂದರೂಪಃ
ಶಿವೋऽಹಂ ಶಿವೋऽಹಂ ಶಿವೋऽಹಂ ಶಿವೋऽಹಂ

ಆಚಾರ್ಯರದಾಗಲಿ ಶಿವಯೋಗಿಗಳದಾಗಲಿ ಕಡಮೆಯ ಮಟ್ಟದ್ದೆಂದು ನನಗನಿಸುವುದಿಲ್ಲ. ಮಾನವಕೋಟಿಯಲ್ಲಿ ಮಹಾಮೇರುಸದೃಶ ಪುರುಷರವರು. ಜಗತ್ತನ್ನೇ ಮೋಸಗೊಳಿಸಿ ನಿದ್ರೆಗೆ ನೂಕಿದ ಪ್ರತಾರಕರು ಅವರು ಎಂದೂ ನನಗನಿಸುವುದಿಲ್ಲ. ಹೀಗಿದ್ದರೆ ಕ್ರೈಸ್ತ ಆಚಾರ್ಯ ಶಿವಯೋಗಿ ಶಿವಾನುಭಾವಿಗಳ ವಿಚಾರ ಅನುಭವವನ್ನೆಲ್ಲ ಅಗ್ನಿನಾರಾಯಣನಿಗೆ ಆಹುತಿಕೊಟ್ಟು, ನಾವು ನಮ್ಮ ಹಾದಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಇದಕ್ಕೆ ಮಾನವನ ಹೃದಯ ಒಪ್ಪಿಲ್ಲ. ಮೇಲೆ ಮೇಲೆ ಒಪ್ಪಿಗೆ ಕೊಟ್ಟು ನಮ್ಮ ಎದೆಗಳು ಒಳಗೊಳಗೆ 'ಅಸತೋ ಮಾ ಸದ್ ಗಮಯ' ಎಂದು ಮುಂತಾಗಿ ಗುನುಗುಡುತ್ತಲೆ ಬಂದಿವೆ, ಅಥವಾ ಗುಡುಗುತ್ತಲೆ ಬಂದಿವೆ.

ತತ್ತ್ವಜ್ಞಾನಿಗಳು ಪರಮಾನುಭಾವಿಗಳು ಮಾನವನನ್ನು ವಿಶ್ಲೇಷಣ ಮಾಡಿ, ವಿವೇಕಿಸಿ ನೋಡುವ ರೀತಿ ಹೀಗೆ: ಅರಿವಿನಲ್ಲಿ ಮೂಡಿ ಆಡುವ ಕೂಸು ನಾನು. ಅರಿವು ಇಲ್ಲದಿದ್ದರೆ ನನ್ನ 'ನಾನು' ಇಲ್ಲ, ನಿಮ್ಮ 'ನಾನೂ' ಇಲ್ಲ. ಇಷ್ಟೇ ಅಲ್ಲ, ನಾನು ಎಂಬ ಅರಿವಿನಲ್ಲಿ ಹೊಳೆದು ಮೂಡಿ, ತೋರಿ ಹರಿಯುತ್ತಿರುವ ಜಗತ್ತು ಇದ್ದರೂ ಇಲ್ಲದಂತೆಯೆ. ಅದೋ ಅಲ್ಲಿ ದೊಡ್ಡ ಒಂದು ಬಂಡೆಗಲ್ಲು. ಆ ಕಲ್ಲಿಗೆ ತಾನು ಕಲ್ಲು ಇದೆಯೆ? ಆ ಕಲ್ಲಿಗೆ ಜಗತ್ತು ಇದೆಯೆ? ಹಿಂದೆ ನೋಡಿದಂತೆ ಪೂರ್ಣ ಮರವೆಯ ಕತ್ತಲೆಯ ಸ್ಥಲದಲ್ಲಿರುವ ಕಲ್ಲಿಗೆ ತಾನು ಇಲ್ಲ, ಇದಿರು ಇಲ್ಲ. ಈ ಕತ್ತಲೆ ಕರಗುತ್ತ, ಅರಿವು ಮನುಷ್ಯಪ್ರಜ್ಞೆಗೆ ಬಂದು ಮುಟ್ಟಿದೆ. ಅನುಭಾವಿಗಳು ಹೇಳುವುದು ಇನ್ನೂ ಕತ್ತಲೆ ಉಳಿದಿದೆ ಈ ಪ್ರಜ್ಞೆಯಲ್ಲಿ ಎಂದು; ಈ ಪ್ರಜ್ಞೆ ತಮಸ್ಸೀಮೆಯನ್ನು ಉಲ್ಲಂಘಿಸಿ ಜ್ಯೋತಿಯ ಸೀಮೆಯಲ್ಲಿ ಸೇರಬಹುದು ಎಂದು; ಆತ್ಮನ ಅರಿವು ಮತ್ತು ದೇಹದ ಮರವೆಯ ಸಂಜೆಯಾದ ಮನಸ್ಸು ಮನುಷ್ಯ ಎಂದು. ದೇಹಾದಿಗಳಲ್ಲಿ 'ತದ್ಗತ'ವಾಗಿ, 'ತಲ್ಲೀನ'ವಾಗಿ, ಸಮರಸವಾಗಿ, 'ತದಾಕಾರ'ವಾಗಿ, ಮನುಷ್ಯಪ್ರಾಣಿಯ ಅರಿವು 'ನಿಸ್ತರಂಗವಾಗಿ ಸುಪ್ತಿಯನ್ನೈದಿಹುದು.' ನನ್ನ ಆಕಾರವಾಗಿ ನನ್ನ ದೇಹ ಪ್ರಾಣಾದಿಗಳಲ್ಲಿ ಎಚ್ಚರದಪ್ಪಿ ಮಲಗಿದೆ ನನ್ನ ಅರಿವು; ಅದರಂತೆ ನಿಮ್ಮ ಅರಿವು, ಕಲ್ಲಿನ ಅರಿವು. ದೇಹಾದಿಗಳಲ್ಲಿ ಬೆರೆದು ಮುಳುಗಿ ಸಮರಸವಾಗಿ ಆಯಾ ಆಕಾರವಾಗಿ ವ್ಯವಹರಿಸುತ್ತಿರುವ ಈ ಅರಿವಿನ ಕೂಸು ನಾನನ್ನು ಎಚ್ಚರಿಸಬೇಕು: 'ಎಲೆ ಅರಿವೇ, ಎಲೆ ನಾನೇ, ಎಲೆ ಮನವೆ, ಏಳು ಎಚ್ಚರಾಗು. ದೇಹದಲ್ಲಿ ದೇಹವಾಗಿಯೆ ಮಲಗಿ ಬಿಟ್ಟೆಯಲ್ಲಾ ! ಚಿತ್ ಚೈತನ್ಯದಿಂದೊಗೆದ ನೆಲ ನೀರು ಗಾಳಿ ಬೆಂಕಿ ಬಯಲು ಕಟ್ಟಿದ ದೇಹಜಾಲ ನೀನು ಹೌದು. ಏಕೆಂದರೆ ನೀನೂ ಆ ಶಕ್ತಿಯ ಕೂಸು. ಆದರೆ ಮಾಂಸಪಿಂಡ ಪ್ರಾಣಪಿಂಡದ ದೇಹ ಅಂಧಕಾರದ ಅರಮನೆ. ಇಲ್ಲಿಯೆ ಬಂಧನವಡೆದು ಕುಳಿತರೆ, ದೇಹಾತ್ಮನಾಗಿ ಜೀವಾತ್ಮನಾಗಿ ದೇಹದೊಡನಾಡಿ ಕೆಟ್ಟು ಹೋಗುವೆ. ಪ್ರಾಕೃತಶಕ್ತಿಯ ವಶವರ್ತಿಯಾಗಿಯೆ ರೂಪುಗೊಂಡು ಪ್ರಾಣಿಸುತ್ತಿರುವ ಪ್ರಕೃತಿಯ ಪಿಂಡಕ್ಕೆ ಪ್ರಾಣಸ್ಥಲವನ್ನು ಬಿಟ್ಟು ಮೇಲೆ ಏಳುವ ಸಂಭವವೇ ಇಲ್ಲ. ಎಲೆ ಮನವೇ, ನೀನು ಈ ಪಿಂಡದಲ್ಲಿ ಸಮರಸವಾಗಿ ಸಂಕಲ್ಪ ವಿಕಲ್ಪದಲ್ಲಿ ವ್ಯವಹರಿಸುತ್ತ ಹೋದರೆ, ಒಳಗೆ ಸತ್ತು ಹೊರಗೆ ಆಡಿದರೆ, ಯಾರೇನು ಮಾಡಬಲ್ಲರು? ಎಲೆ ನಾನೇ, ಅರಿವಿನ ಅಂಕುರವಾದ ನೀನೂ ಪ್ರಾಣಪಿಂಡ

ದಲ್ಲಿ ಸಮರಸವಾಗಿ, ತದಾಕಾರವಾಗಿ 'ಜಡ'ರಂತೆ ವರ್ತಿಸಿದರೆ, 'ಇನ್ನಾರಿಗೆ ದೂಱುವೆ ಕೂಡಲಸಂಗಮದೇವಾ !'[೧] ಅರಸು ಕಾಲಾಳು ಆಗಬಲ್ಲ. ಅರಸುಕಾಲಾಳು ತನ್ನ ಅರಸುತನವನ್ನು ಮರೆತು ಬಿಟ್ಟರೆ, ಸ್ಮೃತಿ ಕೆಟ್ಟು ಭ್ರಾಂತಿಯೆ ಗಟ್ಟಿಗೊಂಡರೆ, ಈ ಹಿಡಿದ ಹುಚ್ಚು ಭ್ರಾಂತಿಯನ್ನು ಕಡೆಗೆ ಮಾಡಬಲ್ಲ ಗರುವರಾರು? ಎಲೆ ಅರಿವೇ, ನಿನಗೆ ಮರವೆಯೆ? ಬೆಳಗು ಕತ್ತಲೆಯಾದರೆ, ಅಮೃತ ವಿಷವಾದರೆ, ಬಯಲು ಬಂಧನಕ್ಕೆ ಒಳಗಾದರೆ, ಬೆಂಕಿ ಚಳಿಗೆ ನಡುಗಿದರೆ, ಗಾಳಿ ಉಸಿರುಕಟ್ಟಿ ಸತ್ತರೆ, ಇನ್ನೇನು ಇನ್ನೇನು? – ಎಂದು ತಿಳಿಹೇಳಿ ದೇಹ ಕರಣೇಂದ್ರಿಯಗಳಲ್ಲಿ ತಲ್ಲೀನವಾಗಿರುವ ಅರಿವನ್ನು, ಜೀವಾತ್ಮನನ್ನು ಅಲ್ಲಿಂದ ಕಿತ್ತು ತೆಗೆದು ಅಂತರ್ಮುಖವಾಗಿಸಿದರೆ, ಮಾನವಪಿಂಡದ ಗಭೀರ ಅಂತರಂಗ ಮುಸುಕು ತೆಗೆದು ತನಗೆ ತಾನೆ ಗೋಚರವಾಗುತ್ತದೆ. ಇದೋ ಇಲ್ಲಿ ಬನ್ನಿ. ತನ್ನಲ್ಲಿ ಅರಿವನ್ನು ಒಬ್ಬುಳಿಗೊಳಿಸಿ, ತನ್ನ ಅಂತರಂಗವನ್ನು ಭೇದಿಸಿ, ತನ್ನ ಒಳಗೆ ಅಡಗಿ ಸ್ವಯಂಭುವಾಗಿ ಕುಳಿತಿದ್ದ ತನ್ನನ್ನು, ತನ್ನ ನಿಜಸ್ವರೂಪವನ್ನು, ಶಂಕರಾಚಾರ್ಯರು ಮತ್ತು ನಿಜಗುಣಶಿವಯೋಗಿಗಳು ಹೇಳಿದ ಎರಡನೆಯ 'ನಾನ'ನ್ನು ತಿಳಿದು ನೋಡುತ್ತಿರುವ ಮಹಾದೇವಿಯಕ್ಕನ ಅರಿವಿನ ಪರಿಯನ್ನು ಪರಿತಃ ಈಕ್ಷಿಸಿರಿ:

> ಹಾಲು ತುಪ್ಪವ ನುಂಗಿ ಬೇಱಾಗಬಲ್ಲುದೆ?
> ಸೂರ್ಯಕಾಂತದ ಅಗ್ನಿಯನಾರು ಭೇದಿಸಬಲ್ಲರು?
> ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನನೆನ್ನೊಳಗಡಗಿಪ್ಪ ಪರಿಯ
> ಬೇಱಿಲ್ಲದೆ ಕಂಡು ಕಣ್ದೆಱೆದೆನು.[೨]

ಪಿಂಡದಲ್ಲಿ ಶಿವಜ್ಞಾನ ಉದಯವಾಗಿ, ಆ ಜ್ಞಾನವೆ ದೃಕ್ಕಾಗಿ, ದೃಕ್ಕೇ ದೃಶ್ಯವಾಗಿ. ದೃಶ್ಯವೇ ದೃಕ್ಕಾಗಿ, ಕಣ್ಣು ಕಾಣಿಕೆಯೆಂಬ ಭೇದವಿಲ್ಲದೆ, ತನ್ನ ಒಳಗೆ ಅಡಗಿ ಇರುವ. ಅಂತು ಪಾರ ಇಲ್ಲದ ಅಪಾರಮಹಿಮ ಚೆನ್ನಮಲ್ಲಿಕಾರ್ಜುನನನ್ನು ಚೆನ್ನಮಲ್ಲಿಕಾರ್ಜುನನ ಕಣ್ಣಿಂದ ಕಂಡು ಅಕ್ಕನ ಸುಜ್ಞಾನದೃಷ್ಟಿ ಕಂದೆರವಿಯಾಯ್ತು. ಕಲ್ಲಮಠದ ಪ್ರಭುದೇವರು ಈ ಅನುಭವವನ್ನು ಹೀಗೆ ವಿಸ್ತರಿಸುತ್ತಾರೆ: ಹಾಲ ಒಳಗೆ ತುಪ್ಪವು ಸಮರಸವಾಗಿ ಇರುವುದು. ಅಂತು ಇದ್ದು ತನ್ನ ಬೇರ್ಪಡಿಸಿ ತೋರದು. ಅದರಂತೆ ಪಿಂಡದಲ್ಲಿ ಪರಬ್ರಹ್ಮವು ಸಮರಸವಾಗಿ ಇದ್ದು, ತನ್ನ ನಿಜವ ಕಾಣಿಸಿ ತೋರದೆ ಇರುವುದು. ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಇದ್ದು ಪ್ರಕಾಶಿಸದೆ ಅಡಗಿ ಇರುವಂತೆ, ಪಿಂಡಮಧ್ಯದಲ್ಲಿ ಶಿವಜ್ಞಾನಾಗ್ನಿ ಇದ್ದು ಪ್ರಕಾಶಿಸದೆ ಅಡಗಿ ಇರುವುದು. ಅಂತು ಜಗದ ಒಳಗೆ ಹೊಱಗೆ ತುಂಬಿ ಅಖಂಡವಾಗಿ ಇದ್ದ ಪರಬ್ರಹ್ಮವ ಸಮ್ಯಗ್‌ಜ್ಞಾನೋದಯವಾದ ಶರಣನು ತನ್ನ ಸಮ್ಯಗ್‌ಜ್ಞಾನದೃಕ್ಕಿಂದ ಭಿನ್ನವಿಡದೆ ನೋಡಿ ಕಾಣಲಾಗಿ ಶರಣ ತಾನೆಲ್ಲ ಪರಬ್ರಹ್ಮವೆಂಬುದು ತನಗೆ ಕಣ್ಸಾಱವಾಗಿ ತೋಱುತ್ತ ಇದ್ದಿತ್ತು.

ಹಾಲಿನ ಮರೆಯಲ್ಲಿ ತುಪ್ಪವಿದೆ. ಪಿಂಡದ ಮರೆಯಲ್ಲಿ ಪರಬ್ರಹ್ಮವಿದೆ: ಅಥವಾ ಆತ್ಮನ ಮರೆಯಲ್ಲಿ ಶಿವತತ್ತ್ವವಿದೆ. ಸೂರ್ಯಕಾಂತದ ಒಳಗೆ ಅಗ್ನಿಯ ಕಳೆ ಇದೆ.

---

೧. ಬ. ವ. ಪು ೯, ವ. ೩೬.　　೨. ಲಿಂ. ಲೀ. ವಿ. ಚಾ. ಪು. ೮೭, ವ. ೧೫.

ಅದರಂತೆ ಆತ್ಮನ ಮರೆಯಲ್ಲಿಯೆ ಶಿವತತ್ತ್ವವ ಕಾಂಬ ಶಿವಜ್ಞಾನಾಗ್ನಿ ಇದೆ. ಶಿವತತ್ತ್ವದಲ್ಲಿಯೆ ಸಹಜವಾಗಿ, ಸ್ವಯಂಭುವಾಗಿ ಇರುವ ಈ ಸಮ್ಯಗ್‌ಜ್ಞಾನಾಗ್ನಿ ಶಿವನ ಸ್ವಯಂಜ್ಯೋತಿಯೆ. ಶುದ್ಧ ಮಾನವಪಿಂಡದಲ್ಲಿ ನಿಗೂಢವಾಗಿ ಹುದುಗಿದ್ದ ಈ ಸ್ವಯಂಜ್ಯೋತಿ, ಶಿವಜ್ಞಾನಾಗ್ನಿ ಮೈದೋರುವುದು ಶಿವಕಾರುಣ್ಯವೆ. ಸೂರ್ಯಕಾಂತ ಶಿಲೆಯಲ್ಲಿ ಬೆಂಕಿ ಅಂಕುರಿಸುವುದು ಸೂರ್ಯನ ಕಾರುಣ್ಯ. ಚಂದ್ರಕಾಂತದಲ್ಲಿ ನೀರು ಒಸರುವುದು ಚಂದ್ರನ ಪ್ರಸಾದ. ಗಿಡು ಮರ ಬಳ್ಳಿ ಚಿಗಿತು ತಳಿರೇರುವುದು ವಸಂತನ ಅನುಗ್ರಹ. ಹೀಗೆ ಶುದ್ಧಾತ್ಮನಲ್ಲಿ ಶಿವಜ್ಞಾನವಂಕುರಿಸಿ ಶಿವತತ್ತ್ವದ ಗಭೀರೋನ್ನತವಾದ ನಿಲವು ಮಾನವನ ಅರಿವಿನ ಒಳಗಿಂದೇಳುವುದು ಪರಶಿವತತ್ತ್ವದ ಪರಮ ಕಾರುಣ್ಯ. ಮಾನವಜೀವನದಲ್ಲಿ ಪ್ರಸಾದಚೈತ್ರ ಪ್ರಾಪ್ತವಾದರೆ 'ಇಂತು ಪಿಂಡದಲ್ಲಿ ಶಿವತತ್ತ್ವವನಡಗಿಸಿಕೊಂಡಿರ್ದ ಆತ್ಮನ ಅಂತರಂಗದೊಳಗಣ ಶಿವತತ್ತ್ವವೆ ಜ್ಞಾನಾಂಕುರಸ್ವರೂಪಮಾಗಿ ....'[೧] ಉದಯವಾಗುತ್ತದೆ. ಮಾನವನ ಅರಿವಿನ ಮರೆಯ ಈ ಶಿವಜ್ಞಾನ, ಈ ಜ್ಞಾನಪ್ರಕಾಶವೆ ತಾನಾಗಿ ಬೆಳಗುವ ಶಿವತತ್ತ್ವ ಮರೆಯನ್ನು ಭೇದಿಸಿ ಮೂಡುವ ಬಗೆಯನ್ನು ಇದೋ ಇಲ್ಲಿ ನೋಡಿ:

> ಬೆಳಗಿನ ಬೀಜ ಮಹಾಬೆಳಗು ಕತ್ತಲೆಯನೊಳಕೊಂಡು ಕಣ್ದೆರೆವ
> ಪರಿಯ ನೋಡಾ !
> ತಿಳಿವಡೆ ಬೆಳಗಲ್ಲ. ಒಳಗೊಳಗೆ ಹೊಳೆವ ಕಳೆ ಇದೇನೋ !
> ಅದೆಲ್ಲಿಂದ ಹುಟ್ಟಿ ಅದೆಲ್ಲಿಂದ ತೋಱಿತ್ತು ಅಲ್ಲಿಯೆ ಆಗಾಗಿ ಅಲ್ಲಿಯೆ ಬೆಳೆಯಿತ್ತು.
> ಚಿಮ್ಮಲಿಗೆಯ ಚೆನ್ನರಾಮನೆಂಬ ಮಹಾಘನಲಿಂಗದಲ್ಲಿಯೆ
> ಕಾಲೂಱಿ ನಿಂದ ಪರಿಯನೇನೆಂಬೆ?[೨]

ಚಂದಿಮರಸರು ಹೇಳುವ ಬೆಳಗು ಮಾನವನ ಅಹಂಪ್ರಜ್ಞೆ, ಜೀವೋಹಂಭಾವದ ಅಹಂಪ್ರಕಾಶ, ಆತ್ಮಪ್ರಕಾಶ, ನನ್ನ ನಿಮ್ಮ ಅರಿವು. ಇದರ ಬೀಜ, ಮೂಲ ಬೇರು

---

೧. ಹೋಲಿಸಿರಿ:

1. ಇಂತು ಪಿಂಡಸ್ಥಲವನರಿದು ನಿಶ್ಚಯಿಸುತಿರಲು ಮುಗಿಲ ಮರೆಯಿಂದ ಉದಯವಾದ ಸೂರ್ಯನಂತೆ ಪಿಂಡದೊಳಗಿರ್ದ ಶಿವತತ್ತ್ವವು ಉದಯವಾಗಿ ತೋರಲು, ಆತ್ಮತತ್ತ್ವವಿದು ಶಿವತತ್ತ್ವವಿದು ಎಂಬ ವಿವೇಕ ತಲೆದೋರಿ, ಶಿವತತ್ತ್ವದ ಆದಿ ಮಧ್ಯ ಅವಸಾನ ಕಾಣಬಂದಿತ್ತು ....

   ತೋಂ. ಸಿ. ವ. ಪು. ೩೨-೩೩, ಪಿಂ. ಜ್ಞಾ. ಸ್ಥ. ಗದ್ಯ.

2. ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು ಬಹಿರ್ಗತವಾದಂತೆ.
   ಮುಗಿಲ ಮರೆಯಲ್ಲಿ ಅಡಗಿರ್ದ ಕ್ಷಣೆತ್ (ಕ?) ಸ್ಫುರಿಸಿದಂತೆ,
   ಎನ್ನ ಮನದಲ್ಲಿ ಅಡಗಿರ್ದ ಮಹಾಘನಲಿಂಗವು ತನ್ನ ಲೀಲೆಯಿಂದ
   ತಾನೇ ಉದಯವಾಗಲು, ನಿಮ್ಮ ಆದಿ ಅನಾದಿಯ ನಿಲವ ಕಂಡೆನಯ್ಯಾ ಅಖಂಡೇಶ್ವರಾ.

   ಅಖಂ. ವ. ಪು. ೩-೪, ಪಿಂ. ಜ್ಞಾ. ಸ್ಥ, ವ. ೩.

೧. ಲಿಂ. ಲೀ. ವಿ. ಚಾ. ಪ್ರ. ೮೯, ಪಿಂ. ಜ್ಞಾ. ಸ್ಥ, ವ. ೧೮.

ಎಲ್ಲಿ? ನನಗೆ ಕಂಡಿಲ್ಲ; ಅಂದರೆ ನನ್ನ ಅರಿವಿಗೆ ಕಂಡಿಲ್ಲ. ಚಂದಿಮರಸರಿಗೆ ಇದರ ಗೊತ್ತು ಹತ್ತಿದೆ. ಅದೇ ಮಹಾಬೆಳಗು ಅಥವಾ ಶಿವತತ್ತ್ವದಿಂದ ಹರಿವ ಶಿವಪ್ರಕಾಶ. ನನ್ನ ನಿಮ್ಮ, ಎಲ್ಲ ಭೂತಕೋಟಿಯ ಹೃದಯಗಂಭೀರದಲ್ಲಿ ಬೆಳಗುತ್ತಿರುವ ಪರತತ್ತ್ವ ಜ್ಞಾನಜ್ಯೋತಿ ಇದೇ. ಶುದ್ಧಾಂತಃಕರಣನಾದ ಮಾನವನ ಒಳಗೆ ಈ ಮಹಾಬೆಳಗು ಕಳೆದೋರಿದರೆ, ದೇಹ ನಾನು ಜೀವ ನಾನು ಕರಣೇಂದ್ರಿಯ ನಾನು ಎಂಬ ದೇಹಾತ್ಮನ ಮರವೆಯ ಕತ್ತಲೆ ಮಹಾಬೆಳಗಿನ ಸರ್ವಾಂಗಾಲಿಂಗನದಲ್ಲಿ ಕರಗುತ್ತದೆ. ಈ ಮಹಾ ಬೆಳಗು, ಈ ಚಿದ್ಬೆಳಗು ಮಾನವನ ಅರಿವಿನಂತೆ ದೇಹದ ಕಾಡಿಗೆಯನ್ನು ಲೆಪ್ಪಿಸಿಕೊಂಡ ಬೆಳಗುಗತ್ತಲೆಯಲ್ಲ. ಇದು ನಿರಂಜನ ನಿರ್ಲೇಪ ನಿರ್ಮಾಯ. ಮಾನವನ ಅರಿವನ್ನು ಆವರಿಸಿ ಕತ್ತಲೆಗೊಳಗುಮಾಡಿದ ಮರವೆಯನ್ನು ಬಿಚ್ಚಬಲ್ಲ ಚಿಜ್ಜ್ಯೋತಿ ಇದೇ. ಆತ್ಮನ ಅರಿವು ಮತ್ತು ದೇಹದ ಮರವೆಗೆ ಬಿದ್ದ ಕೋಟಿಕಾಲದ ಹೃದಯಗ್ರಂಥಿಯನ್ನು ಭೇದಿಸಬಲ್ಲ ಬಿನ್ನಾಣದ ಬೆಳಗು ಇದೇ. ಹಾಲು ನೀರಿನಲ್ಲಿ ಬೆರೆದು ಸಮರಸವಾದರೆ, ಹಾಲು ನೀರಿನ ತೊಡಕನ್ನು ನಾನು ಬಿಚ್ಚಲಾರೆ, ನೀವೂ ಬಿಡಿಸಲಾರಿರಿ. ಆದರೆ ಹಂಸೆಯ ಕೈಯಲ್ಲಿ ಈ ತೊಡಕುಗಂಟು ತಾನೇ ಸಡಿಲಾಗಿ, ಹಾಲು ನೀರಿನಿಂದ ಮುಕ್ತ ವಾಗುತ್ತದೆ. ಪುಷ್ಪದಿಂದ ಮಕರಂದವನ್ನು ಬಿಡಿಸುವ ತುಂಬಿ ಎಂಥ ಕುಶಲ! ತಂತಿಯಿಂದ 'ರಾಗರಸದ ತರಂಗಿಣಿ'ಯನ್ನು ಬಿಡಿಸಿ ನಡೆಸುವ ವೈಣಿಕನ ಜಾಣು ಏನು? ಹೀಗೆ ಕಾಯದ ಕತ್ತಲೆ, ಮಾಯೆಯ ಮೋಹ, ಮನದ ಸಂಚಲ, ಬುದ್ಧಿಯ ಸಂದೇಹ ಸಂಕಲ್ಪಗಳಿಂದ, ಇವರ ಕರಿಯ ನೂಲಿನ ಜಾಲದಲ್ಲಿ ಮುಳುಗಿ ತನ್ನ ತಾನು ಮರೆದು, ಈ ಮಗವೆಯಲ್ಲಿಯೆ ಮಲಗಿರುವ ಅರಿವನ್ನು ಮರವೆಯ ಕತ್ತಲೆಯಿಂದ ಬಂಧಮುಕ್ತ ಮಾಡುವ 'ಒಳಗೊಳಗೆ ಹೊಳೆವ ಕಳೆ ಇದೇನೋ?' ಇದು ಹುಟ್ಟಿತೆಲ್ಲಿ? ತೋರಿ ತೆಲ್ಲಿಂದ? ಈ ಪ್ರಶ್ನೆಗೆ ಉತ್ತರ ಮುಂದೇ ಇದೆ. ಚಂದಿಮರಸಪಿಂಡದ ಗುಹೆಯಲ್ಲಿ ನಿಕ್ಷೇಪವಾಗಿದ್ದ ಚಿಮ್ಮಲಿಗೆಯ ಚೆನ್ನರಾಮನೆಂಬ ಮಹಾಘನಲಿಂಗದಲ್ಲಿಯೆ ಮೂಡಿ, ಅಲ್ಲಿಯೆ ರೂಪುಗೊಂಡು, ಅಲ್ಲಿಯೆ ವಿಸ್ತಾರವಾಗಿ ಹಬ್ಬಿ, ಅಲ್ಲಿಯೆ ಬೇರೂರಿ ನಿಲ್ಲುತ್ತದೆ ಒಳಗೊಳಗೆ ಹೊಳೆವ ಈ ಚಿತ್ಕಳೆ, ಈ ಶಿವತತ್ತ್ವದ ಶಿವಜ್ಞಾನಾಂಕುರ.

ಮಾನವನ ಕಣ್ಣು ಮನ ಬುದ್ಧಿ ಅರಿವಿನ ಹವಣಲ್ಲದ ಈ ದಿವ್ಯಜ್ಞಾನದ ಮಹಾಬೆಳಗಿನಲ್ಲಿ ಪರಿಶುದ್ಧನಾದ ಆತ್ಮ ಅಥವಾ ಶರಣ ತನ್ನ ದೇಹ ಪ್ರಾಣ ಕರ್ಮೇಂದ್ರಿಯ ಜ್ಞಾನೇಂದ್ರಿಯ, ತನ್ನ ಮನ ಬುದ್ಧಿ ಚಿತ್ತ ಅಹಂಕಾರ ಮತ್ತು ಈ ಮನುಷ್ಯಕುಂಭವನ್ನು ರೂಪಿಸಿದ ದ್ರವ್ಯ ನೆಲ ನೀರು ಮುಂತಾದ ಪಂಚಭೂತ ಗಳನ್ನು ಬಿಚ್ಚಿ ಬೇರೆ ಬೇರೆ ಮಾಡಿ ವಿವೇಕಿಸಿ ನೋಡಿದರೆ, ಆ ಬೆಳಗಿನಲ್ಲಿ ನಿತ್ಯ ಅನಿತ್ಯದ ಬೆಸುಗೆ ಬಿಟ್ಟು, ಕಾಯದ ಜೀವದ ಹೊಲಿಗೆ ಬಿಚ್ಚಿ, ಹಾಲು ಆತ್ಮ ನೀರು—ದೇಹಾದಿ ಗಳಿಂದ ಬೇರಾಗಿ, ತತ್ತ್ವಾತತ್ತ್ವಗಳ ಸ್ವರೂಪ ಕಾಣಿಸಿಕೊಂಡು, ತನ್ನ ಅಂದರೆ ಆತ್ಮನ, ಶರಣನ ಮರೆಯ ಮಹಾಘನಲಿಂಗ, ಚಿಮ್ಮಲಿಗೆಯ ಚೆನ್ನರಾಮ, ಚೆನ್ನಮಲ್ಲಿ ಕಾರ್ಜುನ, ಅಖಂಡೇಶ್ವರ, ಗುಹೇಶ್ವರನ ನಿಲವು ಕಂದೆರವಿಯಾಗುತ್ತದೆ. ತನ್ನ ಒಳಗೆ ಚೆನ್ನರಾಮ, ರಾಮನಿಂದಲೆ ಸ್ಫುರಿಸುವ ದಿವ್ಯಜ್ಞಾನ ಪ್ರಕಾಶ. ಈ ಪ್ರಕಾಶ 'ತಿಳಿವಡೆ

ಬೆಳಗಲ್ಲ.' ಈ ಪ್ರಕಾಶ ತನ್ನಲ್ಲಿ? ಈ ಪ್ರಕಾಶ ಚಿಮ್ಮುವುದು ಚೆನ್ನರಾಮನಿಂದ? ಯಾರು ನಾನು? ದೇಹಾದಿಗಳೊಡನೆ ಕೂಡಿ ಬಾಳುವೆ ನಡೆಸಿರುವ ನಾನು ಅಹಂ ಪ್ರಜ್ಞೆ. ಆದರೆ ಈ ನನ್ನ ಒಳಗೆ ಮತ್ತೆ ಬೇರೆ ಬೆಳಗಿನ ಅಪಾರ ನಿಧಾನ! ಮತ್ತೆ ಬೇರೆ ಮಹಾಘನಲಿಂಗಮೂರುತಿ ಚೆನ್ನರಾಮ! ಮತ್ತೆ ಯಾರು ನಾನು? ಅಹಂ ಪ್ರಜ್ಞೆ ತುಂಬಿದ ಪ್ರಕೃತಿಯ ಕುಂಭ ಚಂದಿಮರಸನೆ? ಅಲ್ಲ ಅಲ್ಲ. ಚೆನ್ನರಾಮ ನಾನು; ಚೆನ್ನರಾಮನ ಪ್ರಕಾಶ ನಾನು. ಮರವೆಯ ಕತ್ತಲೆಯಲ್ಲಿ ನನಗೆ ನಾ ಕಾಣದೆ ಚಂದಿಮರಸ ನಾನು ಎಂದುಕೊಂಡಿದ್ದೆ. ಆದರೆ ಬೆಳಕಿನೊಳಗೆ ಬಂದು ನೋಡಿದರೆ, ನಿಜವಾಗಿ ಚೆನ್ನರಾಮ ನಾನು, ನಿಶ್ಚಯವಾಗಿ ಚೆನ್ನರಾಮ ನಾನು, ನಿಶ್ಚಲವಾಗಿ ಚೆನ್ನರಾಮ ನಾನು.[೧] ಕತ್ತಲೆಯಲ್ಲಿ ತಿಳಿಯದೆ ಒಂದು ದೇಹ ಒಂದು ಪ್ರಾಣ ಒಂದು ಕರಣೇಂದ್ರಿಯ ಒಂದು ನಾನಿನಲ್ಲಿ ವಾಸಮಾಡಿಕೊಂಡು ಎಷ್ಟು ಕಾಲ ಕಳೆದೆನಲ್ಲಾ! ಅನಘ ಅದ್ವಯ ಸತ್ಯ ನಿತ್ಯ ಜ್ಞಾನ ಆನಂದ, ಹುಟ್ಟುಹೊಂದು ಎಂದೂ ಸೋಂಕದ ದಿವ್ಯ ಅಮೃತ ಮಹಾಘನಲಿಂಗವೆಂಬ ಮಹಾನಿಧಾನ ತನ್ನ ಒಳಗೆಯೆ ಸನ್ನಿಹಿತವಾಗಿರಲು, ಎಷ್ಟು ಬಡವನಾಗಿ ಎಂಥ ಬಡಕಲಾಗಿ ಎಷ್ಟು ಅಲ್ಪನಾಗಿ ಎಂಥ ಶತಮೂಢನಾಗಿ ಅರ್ಥವಿಲ್ಲದೆ ಒಳಹೊರಗೆ ಬಡಕೊಂಡು ಬಡಿದಾಡಿದೆನಲ್ಲಾ! ಇನ್ನು ಸಾಕು ಈ ನಾನು ಚಂದಿಮರಸ. ಇನ್ನು ನಾನು ಸರ್ವಶ್ರೀಮಂತ ಚೆನ್ನರಾಮ. 'ಶಿವೋऽಹಂ ಶಿವೋऽಹಂ'. 'ಇದು ಸತ್ಯ, ಶಿವನಾಣೆ.'

ನಿಮಗೆ ನಿದ್ರೆ ಬಂದಂತೆ ತೋರುತ್ತದೆ, ಆಕಳಿಸುತ್ತಿರಿ? ಒಂದೆರಡು ಅಡ್ಡ ಕತೆ ಹೇಳುತ್ತೇನೆ. ದಯವಿಟ್ಟು ಮನವನ್ನು ಮಲಗಿಸಬೇಡಿ. ಒಂದು ನನ್ನ ಕತೆ. ನಿಮ್ಮ

---

೧. ನೋಡಿರಿ:

ಸ್ವಾನುಭಾವದುದಯದಿಂದೆ ಜ್ಞಾನನೇತ್ರ ಮುಸುಕ ತೆಗೆದು
ತಾನು ತನ್ನ ನಿಜವ ನೋಡಿ ತಿಳಿದ ಮಹಿಮನು ಪಲ್ಲವಿ
ಚಿತ್ತ ಬಿಂದು ಪ್ರಕೃತಿ ಓಂಗಿ ನಿತ್ಯಾನಿತ್ಯ ವಿವೇಕದಿಂದ
ಲತ್ತ ನಿಲುಕಿ ನೋಡಿ ಕಂಡ ಸಕಲದಳಿವನು
ತತ್ವದಲಿ ವಿವೇಕಿಯಾಗಿ ನಿಶ್ಚಲ ನಿಜಾಂತರಂಗ
ತತ್ವಜಯುವನೈದಿ ಸುಖದ ಮುಖವನರಿದನು ೧
ಜ್ಞಾನಮುಕುರದೊಳಗೆ ನೋಡಿ ತಾನು ತನ್ನ ಕುರುಹುಹಿಡಿದು
ತಾನು ತನಗೆ ಅನ್ಯವಿಲ್ಲೆಂಬ ಭೇದವಾ
ತಾನೆಯರಿದು ಮಾಯೆ ಮಿಥ್ಯವಂ ನಿವೃತ್ತಿಮಾಡಿ ಶಿವ-
ಧ್ಯಾನದಲ್ಲಿ ಮನವನಿತ್ತ ಸೌಖ್ಯ ಶರಣನು ೨
. . . .
ಆದಿ ಮಧ್ಯ ಅಂತ್ಯವೆಂಬ ಭೇದವಾಕ್ಯದೊಳಗೆ ಸಿಗದ-
ನಾದಿಸಿದ್ಧವಾಗಿ ತನ್ನ ತಾನೆ ಕಂಡು ಅ-
ಭೇದ್ಯ ಪದವನೈದಿ ಕೂಡಲಚೆನ್ನಸಂಗನಲ್ಲಿ
ಭೇದವಿಲ್ಲದಿಪ್ಪ ದಿವ್ಯಜ್ಞಾನಿ ನೋಡಾ ೫

ಷ. ಶ., ಸ್ಥ.. ಪು. ೧. ಪಿಂಡಜ್ಞಾನಸ್ಥಲ.

ಮುಂದೆ ಹೇಳಿದರೆ ತಪ್ಪೇನೂ ಇಲ್ಲ. ನಾನು ನೀವು ಒಂದೇ. ಸಜಾತೀಯ ಜೀವ ಜಂತುಗಳು, ಮೇಲಾಗಿ ಸಭ್ಯಗೃಹಸ್ಥರು. ಸಮಾನ ಶೀಲ ವ್ಯಸನ ಮನ ಬುದ್ಧಿಯುಳ್ಳ ಸಖರು ನಾವು. ಮತ್ತು ಇಬ್ಬರೂ ಜೊತೆಯಾಗಿ ದಿವ್ಯಜೀವನದ ಸ್ಥಲಗಳನ್ನು ನೋಡ ಹೊರಟವರು. ನಿಮ್ಮಲ್ಲಿ ನನ್ನನ್ನು ತೋಡಿ ತೋರುವುದು ಹುಚ್ಚುತನವೆಂದು ಭಾವಿಸಬೇಡಿ. ಮುತ್ತಜ್ಜನ ಕಾಲದಿಂದ ನಮ್ಮದು ಶ್ರೀಮಂತರ ಮನೆತನ. ನಮ್ಮ ತಂದೆ ನಿಜವಾಗಿ ಆ ಶ್ರೀಮಂತಿಕೆಯನ್ನು ಬೆಳೆಸಿದವನೇ. ಆದರೆ... ನಿಮ್ಮ ಮುಂದೆ ಮುಚ್ಚುವದೇನು, ಜೀನ ಅಂದರೆ ಲೋಭಿ, ಕಡುಲೋಭಿ, ಅತಿ ಲೋಭಿ—ಅಥವಾ ಶಬ್ದವೇ ಬೇಡ. ಬಂದ ಬಂದ ಹಣ ಹೊನ್ನೆಲ್ಲ ನೆಲದ ಪೆಟ್ಟಿಗೆಯಲ್ಲೇ. ಸುತ್ತು ಹಳ್ಳಿಯಲ್ಲಿ ಹೆಸರಾದ ನಮ್ಮ ಶ್ರೀಮಂತ ತಂದೆಗೂ ರೋಗ ಬಂತು. ದಮ್ಮು ಹೆಚ್ಚಿ ನಿದ್ದೆ ಮಾಯವಾಯ್ತು. ಆದರೂ ಔಷಧೋಪಚಾರವಿಲ್ಲ, ಹಾಲು ಹಣ್ಣು ಇಲ್ಲ. ದುಡ್ಡಿನ ಬೆಲೆ ನಮ್ಮಪ್ಪನಿಗೆ ಚೆನ್ನಾಗಿ ಗೊತ್ತು! ತೇಕಿ ತೇಕಿ ಕೆಮ್ಮಿ ಕೆಮ್ಮಿ ಸಾವಿನ ನೆಳಲು ಬಿತ್ತು ಆತನ ಮುಖದ ಮೇಲೆ. ಪಾರ್ಥಿವ ಶರೀರವನ್ನು ಬಲವಂತವಾಗಿ ಬಿಡುವ ಗಂಭೀರ ನಿಮಿಷ. ಬಾಯಿಂದ ಏನೋ ಹೇಳಬೇಕೆಂದ. ನಾಲಿಗೆಯಲ್ಲಿ ಶಕ್ತಿ ಇಲ್ಲ. ಏನೋ ಆಚೆ ಮೂಲೆಯ ಕಡೆ ಕೈಸನ್ನೆ ಮಾಡಿ ಮಾಡಿ, ಸ್ವರ್ಗದಲ್ಲಿ ಮನೆಮಾಡಿ ವಾಸಮಾಡಹೋದ ನಮ್ಮ ಈ ತೀರ್ಥ ರೂಪ... ನಾನು ಪ್ರಪಂಚಕ್ಕೆ ತೊಡಗಿದೆ. ಇಬ್ಬರು ಹೆಂಡರು ಹತ್ತು ಮಕ್ಕಳು ಬರು ಹೋಗುವ ಬಂಧು ಬಳಗ, ಆಪ್ತೇಷ್ಟರು. ಖರ್ಚು ಹೆಚ್ಚಿ ಕೈ ಕಟ್ಟಾಯ್ತು. ಹೊಲ ಮಾರಿದೆ, ಅರ್ಧ ಮನೆ ಮಾರಿದೆ. ಹನ್ನೆರಡು ವರ್ಷ ಬಡತನ ಕಳೆಯೇರಿ ಹೂ ಕಾಯಿ ಹಣ್ಣು ಬಿಟ್ಟಿತು. ಕೈ ಕಟ್ಟಾಗಿ ಬಾಯಿ ಕಾಲು ಕಟ್ಟಾಗಿ, ನೀರವ ನಿರಾಶೆಯಲ್ಲಿ ಹಣೆಗೆ ಕೈಹಚ್ಚಿ ಕುಳಿತಾಗ. ನಮ್ಮ ತಂದೆ ಸಾವಾಗ ಕೈಸನ್ನೆ ಏಕೆ ಮಾಡಿದ? ಆತ ಕೈ ಮಾಡಿದ ಮೂಲೆಯಲ್ಲಿ ಏನಿರಬಹುದು?— ಎಂಬ ಯೋಚನೆ! ಆರು ತಾಸು ರಾತ್ರಿ. ಮೂಲೆಯನ್ನು ಅಗೆಯಹತ್ತಿದೆ. ಎರಡು ಮೂರು ನಾಲ್ಕು ತಾಸು ಹರಡಿದ ಮೇಲೆ ಏನೋ ಸಪ್ಪಳ. ದೊಡ್ಡ ಕಬ್ಬಿಣದ ಪೆಟ್ಟಿಗೆ. ಒಳಗೆ ತೆಗೆದರೆ ಒಂದು ಕಡೆ ಹೊನ್ನಿನ ಅಡಕಲ, ಬೇರೆ ಕಡೆ ಮುತ್ತು ರತ್ನ ವಜ್ರ. ನನ್ನ ಕಣ್ಣು ನಂಬದೆ ಚಿಕ್ಕ ಹೆಂಡತಿಯನ್ನೆಬ್ಬಿಸಿ ತೋರಿಸಿದೆ. ಆಕೆಯ ಕಣ್ಣು ನನ್ನ ಕಣ್ಣನ್ನೇ ಸಮರ್ಥಿಸಿದವು... ಈಗ ನಾನು ಮತ್ತೆ ಮತ್ತೆ ದೊಡ್ಡ ಮನೆಯ ಮಹಾಲು ಕಟ್ಟಿಸಿಕೊಂಡಿದ್ದೇನೆ. ಹೊಲ ೫೦ ಕೂರಿಗೆ ಮತ್ತೆ ಹಿಡಿದೆ. ಹತ್ತು ಎತ್ತಿನ ಕಮತ. ಈಗ ನಾನು ಶ್ರೀಮಂತನೆಂದರೆ ನೀವು ಸೊಕ್ಕೆಂದು ಭಾವಿಸ ಬೇಡಿ. ಬಡತನದಲ್ಲಿ ಇದ್ದ ನಾನು ಈಗ ಶ್ರೀಮಂತಿಕೆಯಲ್ಲಿ ಇದ್ದೇನೆ.

ಮತ್ತೊಂದು ಕರ್ಣನ ಕತೆ. ಕರ್ಣ ಯಾರು? ಆತ ಸೂತನ ಮಗ, ರಾಧೆಯ ಮಗ; ಕುಲದಲ್ಲಿ ಬೆಸ್ತರವ. ಅಧಮಕುಲಜನಾದರೂ ತನ್ನ ಸತ್ತ್ವ ಸಾಹಸ ವೀರ್ಯದ ಬಲದಿಂದ ದುರ್ಯೋಧನನ ಪರಮಮಿತ್ರನಾಗಿ, ಆತನ ಪ್ರಸಾದದಿಂದ ಅಂಗಾಧಿಪತಿ ಯಾಗಿದ್ದಾನೆ. ಕರ್ಣ ಯಾವ ಮಟ್ಟಕ್ಕೆ, ಪಟ್ಟಕ್ಕೆ ಏರಿದರೂ ಹೀನ ಕುಲದವನೇ. ತಾನು ಹೀನನೆಂಬ ಭಾವ ಕರ್ಣನ ಒಳಗೆ ತುಂಬಿದೆ. ಹೊರಗೆ ಲೋಕವೆಲ್ಲ ಕರ್ಣನನ್ನು ಕಂಡರೆ ತಿರಸ್ಕಾರ ಭಾವನೆಯನ್ನೆ ಉಗುಳುತ್ತಿದೆ. ಆದರೆ ಮುಂದೆ ಶ್ರೀಕೃಷ್ಣನಿಂದ

ಕರ್ಣನಿಗೆ ತಾನು ಸೂತ ರಾಧೆಯರ ಮಗ ಅಲ್ಲ, ಸೂರ್ಯ ಕುಂತಿಯರ ಮಗ, 'ಭಾನುವಂಶಲಲಾಮ ರಾಮ'ನಿಗೆ ಸರಿ ತಾನು ಎಂಬುದು ತಿಳಿಯಿತು. ಈಗ ಕರ್ಣ ಯಾರು? ರವಿಸುತ, ಕುಂತೀಪುತ್ರ, ಪಂಚಪಾಂಡವರ ಅಗ್ರಜ, ಸ್ವಚ್ಛಕ್ಷತ್ರಿಯ, ಕ್ಷತ್ರಿಯಕುಲತಿಲಕ. ಪಾಂಡವ ಕೌರವರಿಂದ ಓಲೈಸಿಕೊಳ್ಳಬಲ್ಲ ಸಾರ್ವಭೌಮ ಆತನೆ. ಕೃಷ್ಣ ಕರ್ಣನಲ್ಲಿದ್ದ ಸೂತಸುತನನ್ನು ಕೊಂದು ರವಿಸುತನನ್ನು ಬದುಕಿಸಿದ.

ಇನ್ನೂ ಒಂದು ಮಹಾಭಾರತದ ಕತೆ. ಕೃಷ್ಣ ಯಾರು? ವಸುದೇವ ದೇವಕಿಯರ ಮಗ, ಯದುಕುಲನಂದನ. ಅಣ್ಣ ಬಲರಾಮ ತಂಗಿ ಸುಭದ್ರೆ; ರುಕ್ಮಿಣಿ ಸತ್ಯಭಾಮೆ ಹೆಂಡರು ಮತ್ತೆ ಸಾವಿರ ಸಾವಿರ ಗೋಪಿಕಾಂಗನೆಯರು. ಕೃಷ್ಣ ಜಾರ, ಚೋರ, ಕಪಟ ನಾಟಕಸೂತ್ರಧಾರ. ಕೃಷ್ಣನ ರಾಜತಂತ್ರ ಕೃಷ್ಣ. ಕೌರವರ ವಂಶವನ್ನೆ ನಿರ್ಮೂಲ ಮಾಡಿ, ಪಾಂಡವರನ್ನು ಚಕ್ರವರ್ತಿಪಟ್ಟದಲ್ಲಿ ಪ್ರತಿಷ್ಠಾಪಿಸಿದ 'ಪಾಂಡವಪ್ರತಿಷ್ಠಾಪನಾ ಚಾರ್ಯ.' ಇದೆಲ್ಲ ನಿಜ. ಆದರೆ ಕೃಷ್ಣ ಇಲ್ಲಿಗೆ ಮುಗಿದನೇ? ದಿವ್ಯಚಕ್ಷುವಿನಿಂದ[೧] ಕೃಷ್ಣನನ್ನು ನೋಡುತ್ತಿರುವ ಅರ್ಜುನನನ್ನು ವಿಚಾರಿಸಿ. ಆಕಾಶದಲ್ಲಿ ಒಮ್ಮೆಲೆ ಸಾವಿರ ಸೂರ್ಯರು ಉದಯವಾದಂತೆ ಶ್ರೀಕೃಷ್ಣನ ವಿಶ್ವರೂಪದ ಪ್ರಭೆ ಪ್ರಜ್ವಲಿಸುತ್ತದೆ. ಆಗ ಅರ್ಜುನ,

> ತತ್ರೈಕಸ್ಥಂ ಜಗತ್‌ಕೃತ್ಸ್ನಂ ಪ್ರವಿಭಕ್ತಮನೇಕಧಾ।
> ಅಪಶ್ಯತ್ ದೇವದೇವಸ್ಯ ಶರೀರೇ ಪಾಂಡವಸ್ತದಾ॥[೨]
> ಅನಾದಿಮಧ್ಯಾಂತಮನಂತವೀರ್ಯಮನಂತಬಾಹುಂ ಶಶಿಸೂರ್ಯನೇತ್ರಂ।
> ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ ತಪಂತಂ॥[೩]

ಇಂಥ ಪರಮಾದ್ಭುತವನ್ನು ದೇವದೇವನ ವಿಶ್ವಾತ್ಮಕ ಶರೀರದಲ್ಲಿ ಕಣ್ಣಾರೆ ಕಾಣುತ್ತಾನೆ. ಈಗ ಕೃಷ್ಣ ಯಾರು? ಕೃಷ್ಣ ಮೊದಲನೆಯ ಕೃಷ್ಣ – ಅಂದರೆ ಜಾರ, ಚೋರ ಮುಂತಾದ ಸಕಲ ಸದ್ಗುಣ ಸಂಪನ್ನ – ನಿಜ; ಆದರೆ ವಿಶ್ವರೂಪ ವಿಶ್ವಾತ್ಮಕ, ಆದಿ ಮಧ್ಯ ಅಂತ ರಹಿತ, ಅನಂತವೀರ್ಯ ಅನಂತಬಾಹು, ಚಂದ್ರಸೂರ್ಯನೇತ್ರ, ಪ್ರದೀಪಿಸುವ ಅಗ್ನಿಮುಖಿ, ಆತ್ಮತೇಜದಿಂದ ವಿಶ್ವವನ್ನೆ ಬಿಸಿಲುಗೊಳಿಸುತ್ತಿರುವ ಪ್ರಜ್ವಲರೂಪ ಶ್ರೀಕೃಷ್ಣ ಪರಮಾತ್ಮನೆಂಬುದು ಹೆಚ್ಚು ನಿಜ.

ಈಗ ನಿಮಗೆ ಗೊತ್ತಾಯಿತೇ, ನಾನು ಯಾರು ಯಾರು ಎಂಬುದು? ಮೊದಲು ನಾನು ಬಡವ; ದೊಡ್ಡ ನಿಧಾನವಡಗಿದ ನೆಲದ ಮೇಲೆ ಮಲಗಿದ ಕಡು ಬಡವ. ಈಗಿನ ನಾನು ಶ್ರೀಮಂತ. ಮಹಾಘನಲಿಂಗವೆಂಬ ದಿವ್ಯನಿಧಾನ ದೊರಕಿದ ಶ್ರೀಮಂತ– ಶರಣ, ನಿಜ ಆತ್ಮ. ಮೊದಲು ಕರ್ಣ – ನಾನು ಸೂತ ರಾಧೆಯರ ಮಗ, ಹೀನ

---

೧. ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ॥
ಭ. ಗೀ. ಅ. ೧೧. ಶ್ಲೋ. ೮.

೨. ಭ. ಗೀ. ಅ. ೧೧. ಶ್ಲೋ. ೧೩. ೩. ಅದೇ ,, ಶ್ಲೋ. ೧೯.

ಕುಲದವ; ಈಗ ಕರ್ಣ – ನಾನು ಸೂರ್ಯಮಂತ್ರದಿಂದ ಕುಂತಿಯ ಪುತ್ರ. ಮೊದಲು ಪ್ರಕೃತಿ ಹಡೆದ ನಾನು ಸಮ್ಯಗ್‌ಜ್ಞಾನೋದ್ಗಯವಾದ ಮೇಲೆ ಚಿಚ್ಛಕ್ತಿಯಿಂದ ಉದಯವಾದ ದಿವ್ಯದ ಸುತ ನಾನು. ಮೇಲೆ ಕೃಷ್ಣ ಒಳಗೆ ವಿರಾಟ್‌ಪುರುಷ. ಅದರಂತೆ ಶುದ್ಧ ಪಿಂಡದ ಒಳಗೊಳಗೆ ಮಹಾಘನಲಿಂಗ, ಚಿಮ್ಮಲಿಗೆಯ ಚೆನ್ನಾರಾಮ ನಾನು. ಬೇಕಾದರೆ ಬಸವಣ್ಣನನ್ನು 'ಸಂಗನ ಬಸವಣ್ಣ' ಎಂದು ಕರೆವಂತೆ 'ಚೆನ್ನರಾಮನ ಚಂದಿಮರಸ' ನಾನು ಎಂದು ಕರೆಯಿರಿ. ಅರ್ಜುನ ಶ್ರೀಕೃಷ್ಣನಲ್ಲಿ ಸಚರಾಚರ ಪ್ರಪಂಚವನ್ನು ಒಳಕೊಂಡ ದೇವದೇವನನ್ನು ಕಂಡ. ಚಂದಿಮರಸ ತನ್ನ ಒಳಗೆಯೆ ಉದಯವಾದ, ವಿಶ್ವಬ್ರಹ್ಮಾಂಡಗಳ ಲಯ ಗಮನ ಸ್ಥಾನವಾದ ಮಹಾಘನಲಿಂಗ ಚೆನ್ನರಾಮನನ್ನು ಕಂಡ. ಅರ್ಜುನನಿಗೆ ದಿವ್ಯಚಕ್ಷು ಬಂದುದು ಶ್ರೀಕೃಷ್ಣಪರಮಾತ್ಮನ ಕೃಪೆಯಿಂದ. ಚಂದಿಮರಸನ ಪರಶಿವಜ್ಞಾನದೃಷ್ಟಿ ತನ್ನ ಒಳಗೆ ಬೆಳಗಿದ ಚೆನ್ನರಾಮನದೇ. ಈ ದೃಷ್ಟಿಯೇ ಮಾನವನ ಅರಿವನ್ನು, ಆತ್ಮವನ್ನು ಅಥವಾ ಶರಣನನ್ನು ಪರಶಿವಶಕ್ತಿಯ ತೊಡೆಯ ಮೇಲೆ ತಂದಿಳಿಸುತ್ತದೆ. ಸಮ್ಯಗ್ ಜ್ಞಾನದಿಂದ ಪ್ರದೀಪ್ತವಾದ ಈ ದಿವ್ಯದೃಷ್ಟಿ ಕಾಲಗರ್ಭದ ಅನಂತ ಅಂಧಕಾರವನ್ನು ಭೇದಿಸಿ ನೋಡಿ ನುಡಿಯುತ್ತದೆ: 'ನಾನು ಈ ಮಾಂಸಪಿಂಡದ ಉತ್ಪತ್ತಿ ಸ್ಥಿತಿ ಲಯದವನು ಅಲ್ಲ. ಈ ಬ್ರಹ್ಮಾಂಡಾದಿ ಸಮಸ್ತ ಪ್ರಪಂಚುಗಳು ತೋಱದ ಮುನ್ನ ಆದಿಚಿತ್‌ಶಕ್ತಿಯಿಂದ ಉದಯಿಸಿದೆನು' ಎಂದು.

> ಆದಿಯಾಧಾರವಿಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು,
> ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು,
> ಸಚರಾಚರವೆಲ್ಲಾ ರಚನೆಗೆ ಬಾರದಂದು
> ಗೊಹೇಶ್ವರನ ಶರಣನುದಯಿಸಿದನಂದು.[೧]

ಕಾಲ ದೇಶ ವಸ್ತುವಿನ ಆದಿ (The Beginning)ಯ ಕುರುಹು ಇಲ್ಲ. ಅದಕ್ಕೆ ಆಧಾರ, ಮೂಲಭಿತ್ತಿಯ ಚಿಹ್ನವೂ ತೋರಿಲ್ಲ. ಮಹದಹಂಕಾರ, ಸಕಲ ನಿಷ್ಕಲ ತತ್ತ್ವಗಳ ಹೊಳಹಿಲ್ಲ, ಶೂನ್ಯ ನಿಶ್ಶೂನ್ಯವೆಂಬ ನಾಮವಿಲ್ಲ, ಚರಾಚರ ಪ್ರಪಂಚವಿನ್ನೂ ಪಸರಿಸಿಲ್ಲ. 'ಇವಾವುವು ಇಲ್ಲದಂದು ಇಪ್ಪ ಮಹಾಘನದೊಳಗೆ ಚಿಚ್ಛಕ್ತಿ ಹುಟ್ಟಲು. ಆ ಚಿಚ್ಛಕ್ತಿಯ ಸ್ವರೂಪವೇ ಶರಣರೂಪಾಗಿ ಉದಯವಾಯಿತ್ತು.'[೨] ಮಾನವನಾನು ಕಂಡ 'ನಾನು' ಇಲ್ಲಿಗೆ ಬಂದು ತನ್ನ ಗಭೀರ ಮೂಲವನ್ನು ಕಾಣುತ್ತದೆ. ಇದೇ 'ನಾನು ಕಂಡ ನಾನು;' ಇದೇ ಪಿಂಡಜ್ಞಾನ.

> ಆತ್ಮವ್ಯಕ್ತಿನಿಂದ ಈಶ್ವರನ ತಿಳಿದಲ್ಲದೆ ಜಾತಿಸ್ಮರತ್ವ ಕಾಣಬಾರದು.
> ಜ್ಯೋತಿರ್ಮಯಲಿಂಗದಿಂದ ಉದಯಿಸಿದ ಶರಣನ ಏತರಿಂದ
> ಕಂಡು ಹೇಳುವಿರಣ್ಣಾ?
> ಮಾತಿನಿಂದ ಹೇಳಿಹೆನೆಂದರೆ ವಾಚಾತೀತನು ಶಿವಶರಣನು.

೧. ಶೂ. ಸಂ. ಪು. ೬. ವ. ೩. ೨. ಪ್ರ. ವ. ಪು. ೬. ವ. ೫. ಟೀಕು.

ವಾಙ್ಮನಕ್ಕಗೋಚರವಾದ ಮಹಾಘನ ಪರತತ್ವದಲ್ಲಿ ಉದಯವಾದ ಶರಣನ
ಮಾತಿಗೆ ತಂದು ನುಡಿವ ಮರುಳು ಮಾನವರನೇನೆಂಬೆನಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ?[೧]

ಪರಶಿವ-ಶಕ್ತಿಯರಲ್ಲಿರುವ ಅವಿನಾಭಾವ ಸಂಬಂಧವನ್ನು ನಾವು ಎಲ್ಲೆಲ್ಲಿಯೂ ನೆನಪಿನಲ್ಲಿಡ ತಕ್ಕ ಸಂಗತಿ.[೨]

ಪಿಂಡಜ್ಞಾನ ಸ್ಥಲದಿಂದ ಮುಂದ ಸಿದ್ಧವೀರಣ್ಣೊಡೆಯರು ತೋರುವ ಸಂಸಾರ ಹೇಯಸ್ಥಲ ಮಾಯಾವಿಲಾಸವಿಡಂಬನಸ್ಥಲಗಳಿಗೆ ಹೋಗೋಣವೇ? ಈ ಸ್ಥಲ ಗಳನ್ನು ನೋಡುವ ಕುತೂಹಲ ನಿಮ್ಮ ಮುಖದಲ್ಲಿ ಮೂಡಿದಂತಿಲ್ಲ. ಅದಕ್ಕೆ ಬದಲು ಅವನ್ನು ನೋಡುವುದೇ ಬೇಡ ಎಂಬ ಭಾವ ಶಬ್ದವಿಲ್ಲದೆ ನಿಮ್ಮ ಮುಖದಲ್ಲಿ ನುಡಿವಂತಿದೆ! ಇದಕ್ಕೆ ಕಾರಣ ನನಗೆ ಹೊಳೆಯಿತು. ಸಂಸಾರ ಹೇಯ ಅಂದರೆ ಸಂಸಾರವನ್ನು ಬಿಡಬೇಕು. ಮನೆಮಾರು ಹೆಂಡಿರುಮಕ್ಕಳು ಧನಕನಕಸಂಪತ್ತು ಬಂಧು ಬಳಗ ಭೋಗಭಾಗ್ಯ ಊರುಕೇರಿಯನ್ನೆಲ್ಲ ಬಿಟ್ಟು, ಹೊಟ್ಟೆಗೆ ಕೇರು ಮೈಗೆ ಬೂದಿ ಬಡಿದುಕೊಂಡು, ಎಲ್ಲಿಯೋ ಗಿರಿಗಹ್ವರವನ್ನು ಸೇರಿ, ಜಪಮಣಿಯೊಡನೆ ದಿನಮಾನವನ್ನು ಎಣಿಸುತ್ತ ಸನ್ಯಾಸಿಯಾಗಿ ಸತ್ತುಹೋಗಬೇಕು ಎಂದು ನಿಮ್ಮ ವಿಚಾರವಲ್ಲವೇ? ಈ ವಿಚಾರ ಎಲ್ಲಿಂದ ಬಂದು ನಿಮ್ಮ ತಲೆಯಲ್ಲಿ ಸೇರಿದುವು ಎಂಬುದು ನನಗೆ ತಿಳಿದಿದೆ. ಬುದ್ಧದೇವ ಜಿನತೀರ್ಥಂಕರರು ಅದ್ವೈತವೇದಾಂತಿಗಳು ಮುಕ್ತಿ ನಿರ್ವಾಣ ಕೈವಲ್ಯ ಅದ್ವೈತಸುಖ ದೊರೆಯಬೇಕಾದರೆ, 'ಸನ್ಯಾಸಾಶ್ರಮ'ವನ್ನು ಸ್ವೀಕರಿಸಲೇ, ಬೇಕು, ಸಂಸಾರವನ್ನು ನಿರಾಕರಿಸಲೇ ಬೇಕು ಎಂದು ಹೇಳಿರಬಹುದು. ಪ್ರಪಂಚದಿಂದ ನಿವೃತ್ತ ರಾಗಿ, ಸರ್ವಸಂಗ ಪರಿತ್ಯಾಗಮಾಡಿ,

'ಯದಾ ಮನಸಿ ವೈರಾಗ್ಯಂ ಜಾತಂ ಸರ್ವೇಷು ವಸ್ತುಷು ।
ತದೈವ ಸಂನ್ಯಸೇದ್ ವಿದ್ವಾನನ್ಯಥಾ ಪತಿತೋ ಭವೇತ್ ॥'[೩]

ಹೀಗೆ ಪರಿವ್ರಾಜಕನಾಗದಿದ್ದರೆ ಮೋಕ್ಷಸಿದ್ಧಿಯಿಲ್ಲ ಎಂಬುದು ಅವರ ಮತವಾದರೆ, 'ಸಂಸಾರ ಹೇಯ' ಎಂದೊಡನೆ ಇವರೂ ಅದನ್ನೇ ಹೇಳಲಿಕ್ಕೆ ಬಂದಿದ್ದಾರೆ ಎಂದು ನೀವು ಗ್ರಹಿಸಬೇಕೇಕೆ? ಹೀಗೆಯೇ 'ಮಾಯೆ' ಎಂಬ ಶಬ್ದವನ್ನು ಕೇಳಿದೊಡನೆ ನನ್ನೊಬ್ಬನನ್ನೇ ಹಾದಿಗೆ ಹತ್ತಿದ ಮೊದಲಲ್ಲಿಯೆ ಕೈಬಿಟ್ಟು, 'ನಮ್ಮ ಸ್ಥಲ'ಕ್ಕೆ ತಿರುಗಿ ಓಡಿಹೋಗಬೇಕೆಂದಿರುವಿರಾ? ಸತ್ಯಪಥದಲ್ಲಿ ನಡೆದು ದಿವ್ಯಸ್ಥಲವನ್ನು ನೋಡ ಹೊರಟ ನಾವು, ಹಾದಿಯಲ್ಲಿ ಗರ್ಜಿಸುವ ಹುಲಿ ಕರಡಿಗೆ ಹೆದರಬಾರದು. 'ಭೀತಿಯ ಮೀರಿ' ಮುಂದೆ ಮುಂದೆ ನಡೆಯಬೇಕು. ನಾವಿರುವ ಸ್ವಸ್ಥಲವನ್ನು ಬಿಟ್ಟು ಪರಶಿವ ತತ್ತ್ವ ಸರ್ವತ್ರ ನೆಲೆಯೂರಿ ನಿಂದ ಪರಸ್ಥಲಕ್ಕೆ ನಾವು ಬೆಳೆಸುತ್ತಿರುವ ಈ ಪ್ರಯಾಣ

---

೧. ತೋಂ. ಸಿ. ವ. ಪು. ೩೪, ಪಿಂ. ಜ್ಞಾ. ಸ್ಥ. ವ. ೮೮.

೨. ಶಿವಾಂಶಿಕವಾದ ಚಿತ್‌ಸ್ವರೂಪವೆ ಶರಣುರೂಪಾಗಿ....' ಎಂಬ ಲಿಂ. ಲೀ. ವಿ. ಜಾ. ಪು. ೯೭, ವ. ೬ರ ಟೀಕು ನೋಡಿರಿ.

೩. ಮೈತ್ರೇ. ಉ., ಅ. ೨. ಮಂ. ೧೯.

ದಲ್ಲಿ ಇಂಥ ಭೀಕರ ಸಂಗತಿಗಳು ಎಷ್ಟೋ ತಲೆದೋರಬಹುದು. ಆದರೆ 'ಅಭೀಃ'. ಮಾಯೆ ಅಂದರೆ 'ನ ಸನ್ನಾಸನ್ನ ಸದಸತ್', 'ಉಂಟೆನಿಸದು, ಇಲ್ಲೆನಿಸದು, ಉಂಟಿಲ್ಲೆನಿಸದು'–ಎಂಬ ಒಂದು ಅನಿರ್ವಚನೀಯಶಕ್ತಿ ಎಂದು ಬಲ್ಲ ಹಲವರು ಹೇಳುತ್ತಾರೆ. ಮಾಯೆ ಜಗತ್ತು, ಸುಳ್ಳು, ಭ್ರಾಂತಿ, ಮಿಥ್ಯ, ಸಟೆ ಎಂದೂ ಹೇಳುತ್ತಾರೆ. ಆದರೆ ಎಲ್ಲ ಬಲ್ಲವರು ಹೀಗೆಯೆ, ಇದೇ ಅರ್ಥದಲ್ಲಿಯೆ ಮಾಯೆಯನ್ನು ಕಂಡರೆಂದು ಮೊದಲೇ ತಿಳಿದುಕೊಂಡು ಓಡಿ ಹೋಗುವುದೇಕೆ? ಮತ್ತೆ ಬಿನ್ನವಿಸುತ್ತೇನೆ ಸಾವಧರಾಗಿರಿ ಎಂದು.

ಸಂಸಾರವನ್ನು, ಮಾಯಾವಿಲಾಸವನ್ನು ಪರಾಮರ್ಶಿಸಿ ನೋಡುವಾಗ, ಹಿಂದೆ ನೋಡಿದ ಪಿಂಡಜ್ಞಾನಸ್ಥಲದ ವಿವರಗಳೆಲ್ಲಾ ನಮ್ಮ ಕಣ್ಣಮುಂದೆ ನಿಚ್ಚಳವಾಗಿ ನಿಂದಿರಬೇಕು. ಸಮ್ಯಗ್‌ಜ್ಞಾನೋದಯವಾಗಿ ಚಂದಿಮರಸ ತನ್ನ ಮಾನವಪಿಂಡದಲ್ಲಿ ಅಡಗಿ ಇದ್ದ 'ತಾನು ಚೆನ್ನರಾಮ'ನನ್ನು ಕಂಡ. ಮಹಾದೇವಿಯಕ್ಕ ಅದೇ ದಿವ್ಯೋದಯದಲ್ಲಿ 'ಅಪಾರ ಮಹಿಮ ಚೆನ್ನಮಲ್ಲಿಕಾರ್ಜುನನು ಎನ್ನ ಒಳಗೆ ಅಡಗಿ ಇಪ್ಪ ಪರಿಯ ಬೇಜಿಇಲ್ಲದೆ ಕಂಡು ಕಣ್ಣು ತೆಜಿದೆನು,' – ಬೇಕಾದರೆ ಕಣ್ಣುತೆಜಿದಳು, ಅಥವಾ ತೆಜಿದನು, ಅಥವಾ ತೆಜಿದುದು ಎಂದು ಹೇಳಿ. ಏನು ಹೇಳಿದರೂ ಅದರ ದಿವ್ಯಾರ್ಥ ಒಂದೇ. ನಿಜಗುಣರು ತಮ್ಮ ಪರಂಜ್ಯೋತಿಯಲ್ಲಿ ಕಣ್ಣು ತೆರೆದರೆ, ಶಂಕರಾಚಾರ್ಯರು 'ಸದಾನಂದ ರೂಪನಾದ, ಚಿದಾನಂದರೂಪ'ನಾದ 'ಶಿವೋಹಂ'ಭಾವದಲ್ಲಿ ಉದಯವಾದರು. ನನ್ನ ಅರಿವಿನ ಸ್ಥಲದ ಕಣ್ಣಿಗೆ ನಾನು 'ಕಲ್ಲಪ್ಪ' ಕಾಣುತ್ತೇನೆ. ನನ್ನ ಅರಿವಿನ ಮರೆಯ ನಿಧಾನವಾದ ಪರಂಜ್ಯೋತಿ ನನ್ನ ಅರಿವುನೆಲವನ್ನು ಭೇದಿಸಿ ಒಡೆದು ಮೂಡಿದರೆ, ನಾನೇನಾಗುವೆನೋ ನನಗೆ ಗೊತ್ತಿಲ್ಲ. ಋತುಗಾಣದ ಕನ್ನೆಗೆ ಋತುಧರ್ಮವೇನು ಗೊತ್ತು? ಋತುಮತಿಯಾದರೆ ತನ್ನ ಹೆಣ್ತನದ ನಿಜಸ್ವರೂಪ ತನಗೆ ತಾನೇ ವೇದ್ಯವಾಗುತ್ತದೆ. ಮಾನವಭಾವ ಮೈನೆರೆತರೆ ಶಿವಭಾವ ಮೈವೆತ್ತು ನಿಲ್ಲುತ್ತದೆ. ಈ ಶಿವೋಹಂಭಾವ, ಈ ಪರಂಜ್ಯೋತಿ, ಈ ಚೆನ್ನಮಲ್ಲಿಕಾರ್ಜುನ, ಈ ಚೆನ್ನರಾಮನನ್ನು ಮಾನವ ತನ್ನ ಅರಿವಿನಲ್ಲಿಯೆ ವಾಸವಾಗಿರಿಸಿಕೊಂಡರೆ ದಿವ್ಯಜ್ಞಾನದ ಆಪ್ಯಾಯನ ತೃಪ್ತಿಯಾಗಬಹುದು. ಆದರೆ ಉಳಿದವರ ಗತಿ ಏನು? ದೇಹದ ಗತಿ ಏನು? ಕೈ ಕಾಲು ಕಣ್ಣು ಮೂಗು, ಹೃದಯ ಮನಸ್ಸು ಬುದ್ಧಿ ಮೊದಲಿನಂತೆ ಅರೆಗತ್ತಲೆಯಲ್ಲಿಯೆ ಹಾಳು ಬಿದ್ದಿರಬೇಕೆ? ಮೇಲಂತಸ್ತಿನ ದೇವನನ್ನು ಕೆಳಮನೆಗಳಿಗೆಲ್ಲ ಬರಮಾಡಿಕೊಳ್ಳಬೇಕು. ಮಾನವನ ಅರಿವು ಎಡೆಯಾಡಿ ಈಗ ಬಾಳುವೆ ನಡೆಸಿರುವ ಕೋಣೆ ಕೋಣೆಯೊಳಗೆಲ್ಲ ಸಮ್ಯಗ್‌ಜ್ಞಾನೋದಯ ಪ್ರಕಾಶವಾಗಬೇಕು, ಪ್ರಜ್ವಲಿಸಿ ತೊಳಗಿ ಬೆಳಗಬೇಕು. ಆದರೆ ಚೆನ್ನರಾಮ ಬಂದು ಎಡೆಯಾಡಿ ಬೆಳಗಲು ಮಾನವದೇಹ ಕರಣ ಇಂದ್ರಿಯಗಳು ಪ್ರಶಸ್ತವಾಗಿವೆಯೆ? ಇಂಥಲ್ಲಿಗೆ ದೇವ ಬರುವುದು ಕಠಿಣ; ಬಂದರೆ ದೇಹ ಕರಣಾದಿಗಳು ಸ್ವಾಗತ ಮಾಡಿ ಬರಮಾಡಿಕೊಳ್ಳುವುದು ಇನ್ನೂ ಕಠಿಣ. ಏಕೆ ಎಂದು ಕೇಳುವಿರಾ? ಇದೋ ಇಲ್ಲಿ ನೋಡಿ ಮಾನವಾಲಯ ಹೇಗಿದೆ:

ಮನೆಯೊಳಗೆ ಮನೆಯೊಡೆಯ ಇದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ.

ಮನೆಯೊಳಗೆ ಮನೆಯೊಡೆಯ ಇದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲಸಂಗಮದೇವ.[೧]

ಈ ಮಾತನ್ನು ಹೇಳುವವರು ಯಾರು? ಬಸವಣ್ಣನವರು; ಪಿಂಡಜ್ಞಾನವಾದ ಬಸವಣ್ಣನವರು. ಈ ಜ್ಞಾನದೃಷ್ಟಿಯಲ್ಲಿ ತನ್ನ ದೇಹದ ಮನೆ, ತನ್ನ ಮನದ ವಿಷಯ ವ್ಯವಹಾರ, ಈ ವ್ಯವಹಾರವನ್ನು ನಡೆಸಿರುವ ನಾನು – ಬಸವಣ್ಣನನ್ನು ಪರೀಕ್ಷಿಸಿ ನೋಡಿ, ನುಡಿದ ಮಾತು ಇದು. ಮನೆಯಲ್ಲಿ ಮನೆಯೊಡೆಯ ಕೂಡಲಸಂಗಮದೇವನಿದ್ದರೆ ಮನೆ ಹುಲ್ಲುಗೂಡುತ್ತಿತ್ತೇ? ಕಸಗೂಡುತ್ತಿತ್ತೇ? ತನುವೆಲ್ಲ ಹುಲ್ಲುಗಾಡು, ಮನವೆಲ್ಲ ವಿಷಯುಗಾಡು, ಜೀವನವ್ಯವಹಾರವೆಲ್ಲ ಸಂಸಾರಗಾಡು. ಎಂಥ ಕಾಡಾಗಿ ಬೆಳೆದೆನಲ್ಲಾ ! ಮನೆಯೊಡೆಯ ಬಂದರೆ ಏನೆಂತು ವಾಸಮಾಡಬೇಕಿಲ್ಲಿ? 'ಆಸೆಯಾಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ', 'ಕಾಮ ಕ್ರೋಧ ಲೋಭ ಮೋಹ ಹಸಿವು ತೃಷೆ ವ್ಯಸನ ಪಂಚೇಂದ್ರಿಯ ಸಪ್ತಧಾತು' ಒಳಹೊರಗೆ ತುಂಬಿ ತುಳುಕುತ್ತಿವೆ. ಕಾಯದ ಕಳವಳ ನಿದ್ರೆ ಆಲಸ್ಯ ಜಾಡ್ಯ ಎಷ್ಟು ದಪ್ಪವಾಗಿವೆ? ಎಳ್ಳುಕೊನೆ ಮುಳ್ಳುಮೊನೆಯಷ್ಟು ಇಂಬಿಲ್ಲ ಕೂಡಲಸಂಗಮದೇವನಿಗೆ ! ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ, ಬೆಂದ ಮನವ ಸಂತೈಸ ಹೋಯಿತ್ತೆನ್ನ ಆಯುಷ್ಯ. ಹಗಲಿರುಳು ತೆರಹಿಲ್ಲಾ ಸಂಗಮದೇವ ಬಂದ ಬರವನರಿಯಲು. ಹೊನ್ನು ಹೆಣ್ಣು ಮಣ್ಣು ತುಂಬಿದ ಕಣ್ಣು ಎಡೆಯಿಲ್ಲಾ ಸಂಗಮದೇವ ನಿಂದ ನಿಲವ ನೋಡಲು. 'ಅವನ ಕೊಂದಿವನ ಕೊಂದರ್ಥವನು ಗಳಿಸುವ' ಯೋಚನೆಯಲ್ಲಿದ್ದ ಬುದ್ಧಿಗೆ ಹೊತ್ತಿಲ್ಲಾ ದೇವದೇವನ ವಿಚಾರ ಮಾಡುವುದಕ್ಕೆ. ಸ್ವಾರ್ಥಸಮಾಧಿಯಲ್ಲಿದ್ದ ಮನಕ್ಕೆ ಇಂಬಿಲ್ಲಾ ಲಿಂಗದೇವನ ನೆನೆಯಲಿಕ್ಕೆ. ಸಂಸಾರ ವ್ಯಾಪಾರ ತುಂಬಿ ನುಡಿವ ನಾಲಗೆಯಲ್ಲಿ ಸ್ಥಳವಿಲ್ಲಾ ನಿಶ್ಶಬ್ದ ಬ್ರಹ್ಮಕ್ಕೆ. ಹೆಣ್ಣಿನ ಗಾಡಿ ವಿಲಾಸ ತುಂಬಿದ ಕಣ್ಣಲ್ಲಿ ಚೆನ್ನರಾಮ ಬಂದರೆ ಸ್ಥಳವೆಲ್ಲಿದೆ? ಶಬ್ದದ ಸಂತೆ ನೆರೆದ ಕಿವಿಯಲ್ಲಿ ಜಾಗೆಯೆಲ್ಲಿದೆ ನಾದಮೂರ್ತಿ ಲಿಂಗಕ್ಕೆ? ವಿಷಯಕ್ಕೆ ಹರಿದಾಡಿ ಸವೆದ ಕಾಲಲ್ಲಿ ಎಳ್ಳಿನಷ್ಟು ಇಂಬು ಇದೆಯೆ, ಮಹಾಲಿಂಗದೇವ ಮನೆಗೆ ಬಿಜಯಂಗೈದರೆ ಇದಿರುಗೊಳ್ಳಲಿಕ್ಕೆ? ಆಶೆ ಆಮಿಷಕ್ಕೆ ಅಧಿಕಾರ ಗರ್ವಕ್ಕೆ ಹೊಡೆದಾಡುವ ಕೈಯಲ್ಲಿ ಎಲ್ಲಿದೆ ಅವಕಾಶ ಚೆನ್ನಮಲ್ಲಿಕಾರ್ಜುನನ ಆದರಾತಿಥ್ಯ ಮಾಡಲಿಕ್ಕೆ? ವಿಷಯರಸ ಮೈಯುಂಡ ಮೈ ಹೇಗೆ ಮಣಿಯಬೇಕು ಮಹಾದೇವನ ಸೇವೆ ಮಾಡಲಿಕ್ಕೆ? ಪರಂಜ್ಯೋತಿ ಮನೆಯೊಳಗೆ ಬಂದು ನೆಲಸಿದರೆ, ನನ್ನ ನಿದ್ದೆಯನ್ನು ಗಂಟುಕಟ್ಟಿ ಎಲ್ಲಿಯಾದರೂ ಇಡಬಲ್ಲೆನೇ? ಭೂತೇಶ ಕನಸಿನಲ್ಲಿ ಇಳಿದು ನಿಂತರೆ, ನನ್ನ ಸ್ವಪ್ನಸುಂದರಿ ಎಲ್ಲಿರಬೇಕು? ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ ನನ್ನ ಒಡಲು ನನ್ನ ಒಡವೆ, ನನ್ನ ಕಡುಗೂಪ ಮಡದಿ, ನನ್ನ ಮಡದಿಯ ನನ್ನ ಮಕ್ಕಳು, ನನ್ನ ಹೊಲ ಮನೆ, ನನ್ನ ವಿದ್ಯೆ ಬುದ್ಧಿ, ನನ್ನ

---

೧. ಬ. ವ. ಪು. ೨೬, ತಾ. ನಿ. ಸ್ಥ. ವ. ೯೭.

ಉದ್ಯೋಗ ವ್ಯಾಪಾರ ನನ್ನ ಯಜನ ಯಾಜನ, ನನ್ನ ಯುದ್ಧ ನನ್ನ ವಿಜಯ – ಇಂಥ ಸಾವಿರ ಕೆಲಸ ಬೊಗಸೆ ಬಿಟ್ಟು, ಸತ್ತೇನೆಂದರೂ ಪುರಸೊತ್ತಿಲ್ಲದ ನಾನು 'ಶಿವಶಿವಾ' 'ಹರಿ ನಾರಾಯಣಾ' ಎಂದು ಬಾಳುವೆ ಮಾಡುವಾಗ, ದೇವರೆ ಇರಲಿ, ಯಾರೇ ಇರಲಿ, ಮನೆಗೆ ಬಂದು ಕೂತುಬಿಟ್ಟರೆ ನನ್ನ ಬಾಳ್ವೆ ಹೇಗೆ ಸಾಗಬೇಕು? ದೇವರಿಗೆ ಈ ಮಾತು ತಿಳಿಯಬಾರದು! ದೇವರ ಚಿಂತೆಯನ್ನು ನಾನೇನು ಹಣೆಗೆ ಬಡಕೊಳ್ಳಲಿ? ನನ್ನ ಚಿಂತೆ ನನಗೆ 'ಹಾಸಲುಂಟು ಹೊದೆಯಲುಂಟು.' ದೇವರು ನನ್ನ ಸಂಸಾರ ಸುರಕ್ಷಿತ ನಡೆಸಿದರೆ ಸಾಕು. ದೇವರು ಮತ್ತೆ ಬೇಕು ಯಾಕೆ? ಬೇಕು ಯಾರಿಗೆ?

ಊರ ಮಧ್ಯದ ಕಣ್ಣ ಕಾಡಿನೊಳಗೆ ಬಿದ್ದಿದ್ದಾವೆ ಐದು ಹೆಣನು.
ಬಂದು ಬಂದು ಅಳುವರು, ಬಳಗ ಘನವಾದ ಕಾರಣ.
ಹೆಣನು ಬೇಯದು; ಕಾಡು ನೊಂದದು; ಮಾಡ ಉರಿಯಿತ್ತು ಗುಹೇಶ್ವರಾ.[೧]

ಪಂಚಭೂತಾತ್ಮಕವಾದ ಕಾಯ, ಇದೇ ಊರು. ನಡುವೂರಲ್ಲಿ ಕಣ್ಣ ಕಾಡು! ಅಜ್ಞಾನ ದೃಷ್ಟಿ, ಕಾಣದ ಕಣ್ಣು ಹಡೆದ ಸಂಸಾರವೆಂಬ ಹಗ್ಗಾಡು. ಈ ಹಗ್ಗಾಡಿನಲ್ಲಿ ಜೀವ ಕಳೆಯಿಲ್ಲದ ಐದು ಹೆಣ! – ಶಬ್ದ ಸ್ಪರ್ಶ ರೂಪ ರಸ ಗಂಧಗಳು. ನನಗೆ ತನಗೆ ಕೈವಶವಾಗಿ ಕೈಜಾರಿ ಹೋದವಲ್ಲಾ ಎಂದು ಸತ್ತ ವಿಷಯಗಳನ್ನು ಸ್ಪರ್ಶಮಾಡಿ ಮಾಡಿ ಮನ ಬುದ್ಧಿ ಕಣ್ಣು ಕಿವಿ ನಾಲಗೆ ಮೂಗು ತೊಗಲಿನ ಬಳಗ ಗೋಳು ಹಿಡಿಸಿವೆ. ಸುಖದುಃಖಾಗ್ನಿಯಲ್ಲಿ ಹಗ್ಗಾಡು ಸುಡುಗಾಡಾಗಿ ಉರಿಯುತ್ತಿದೆ. ಎಷ್ಟು ಉರಿದರೂ ಹೆಣ ಬೇಯದೆ ಕಿಚ್ಚಿನ ಮೇಲೆ ಮಲಗಿದೆ. ಮಾಡ, ಮನೆ, ದೇಹ ಉರಿಗೂಡಿ ಸುಟ್ಟು ಸುಟ್ಟು ಸುಣ್ಣದ ಹರಳು ಆಗುತ್ತಿದೆ. ನೋಡು ಗುಹೇಶ್ವರಾ, ಈ ಸಂಸಾರದುರಿಯ ಬೇಗೆಯನ್ನು! ಒಂದೇ ಸಮನೆ ಉರಿಯುತ್ತಿರುವ ಊರಲ್ಲಿ, ಮನೆಯಲ್ಲಿ ಮನೆ ಮಾಡಿಕೊಂಡು ನೆಲಸಿರುವ ಮಾನವಜೀವಿಯ ಗತಿ ಏನು? ಶಾಂತಿ, ಶಾಂತಿ! ಎಲ್ಲಿಂದ ಬರಬೇಕು ಶಾಂತಿ? ಸತ್ತರೆ ಸ್ವರ್ಗದಲ್ಲಿ--ಸ್ವರ್ಗವಿದ್ದರೆ- ಭೆಟ್ಟಿಯಾಗಬೇಕು; ಇಲ್ಲವಾದರೆ?

ಇದೇ ಸಂಸಾರಸಮಾಧಿ. ಹಗಲಿರುಳು ಕುಕ್ಕುಳುಗುದಿವ ಜೀವನ ಸಂಸಾರ ಯೋಗ. ನಿಮಿಷ ನಿಮಿಷಾರ್ಧ ಕೈತೆರಪಿಲ್ಲದೆ ಮಾನವಜೀವಿ ನಡೆಸಿರುವ ಸಂಸಾರ ಪೂಜೆ. ಈ ಪೂಜೆಯಲ್ಲಿ ಮಾನವನ 'ಭಕ್ತಿ' ಅಪಾರ ವಾರಾಶಿಯಾಗಿ ಧುಮ್ಮಿಕ್ಕುತ್ತಿದೆ. ಶಿರ ಹರಿದು ಬಿದ್ದರೂ 'ಶರಣೆಂಬುದ ಮಾಣೆ' ಸಂಸಾರಕ್ಕೆ. ಸಂಸಾರವನ್ನು ಬಿಟ್ಟರೆ ಬೇರೆ ಆಶ್ರಯಸ್ಥಾನವಾದರೂ ಎಲ್ಲಿದೆ ದೇಹಸಂಸಾರಿಗೆ! ಕತ್ತಲೆಗೆ ಗವಿಯೆ ಶರಣು; ಗೂಗೆಗೆ ಕತ್ತಲೆಯೆ ಶರಣು. ಕತ್ತೆಗೆ ಹಾಳುಗೋಡೆಯೆ ಆಸರ; ತೊತ್ತಿಗೆ ಅಧಮತನವೆ ಆಹಾರ. ತನ್ನ ತಾ ಮರೆವ ಕತ್ತಲೆಯ ಕಣ್ಣಲ್ಲಿ ಹುಲುಸಾಗಿ ಬೆಳೆವ ಸಂಸಾರಕ್ಕೆ ಬೆಳಕು ಆಗುವುದಿಲ್ಲ.

ಮತ್ತೆ, ಮಾನವಪ್ರಾಣಿ ನಡೆಸಿರುವ ಸಂಸಾರವ್ಯಾಪಾರದ ಲಾಭ ಹಾನಿ ಏನು? ಸುಖ ದುಃಖಗಳ 'ಜಮಾ ಖರ್ಚು' ಏನು? ನಾನು ನೀವು ನಮ್ಮ ಸಾಮಾನ್ಯದೃಷ್ಟಿ

೧. ಪ್ರ. ವ. ಪು. ೨೧, ವ. ೨೬.

ಯಿಂದ ನೋಡಿದರೆ ಆದಾಯಕ್ಕಿಂತ ಖರ್ಚೇ ಹೆಚ್ಚು ಇದ್ದಂತೆ ತೋರುತ್ತದೆ ಈ ಜೀವನ ವ್ಯವಹಾರದಲ್ಲಿ. ಬುದ್ಧಿಯು ಮುಖವಾಗಿ, ಮನದ ಸಂಚಲ ರೂಪವಾಗಿ – ಕಾಮ ಕ್ರೋಧ ಪ್ರೇಮ ದ್ವೇಷ ಮದ ಮತ್ಸರ ಮುಂತಾದ ನೂರು ಹರಿಯು ಮಾರ್ಗವಾಗಿ, ಅದೇ ಚೈತನ್ಯ ಕಣ್ಣು ಕಿವಿ ಮೂಗು ನಾಲಗೆ ತೊಗಲುಗಳಲ್ಲಿ ರೂಪ ಸ್ಪರ್ಶಾದಿಗಳ ಕಡೆ ಹರಿದು ಹರಿದು, ಅವನ್ನು ಹಿಡಿತಂದು ಮನ ಬುದ್ಧಿಗಳಿಗೆ ಒಪ್ಪಿಸುವ ಕ್ರಿಯೆಯ ಮುಖವಾಗಿ, ಕೈ ಕಾಲು ಮುಂತಾದ ಕರ್ಮೇಂದ್ರಿಯಗಳ ದ್ವಾರದಿಂದ ಹರಿಯುತ್ತಿರುವ ನಮ್ಮ ಅರಿವುಚೈತನ್ಯವನ್ನು 'ಕಿಲೋವಾಟ್' ಇಲ್ಲವೆ ಬೇರಾವ ಮಾನದಿಂದ ಅಳೆದರೆ, – ತಾಯಿಯ ಗರ್ಭದಿಂದ ನೆಲಕ್ಕೆ ಬಿದ್ದು ಮತ್ತೆ ನೆಲವನ್ನು ಸೇರುವವರೆಗೆ ಅವ್ಯಾಹತವಾಗಿ, ನಿರರ್ಗಲವಾಗಿ ಹರಿವ ಮಾನವಚೈತನ್ಯವನ್ನು ಲೆಕ್ಕ ಹಾಕಿದರೆ ಎಷ್ಟು 'ಡ್ರಮ್ಮು' ತುಂಬಬಹುದು? ಈ ಚೈತನ್ಯಪ್ರವಾಹವನ್ನು ವಿಶ್ವ ಪ್ರಪಂಚ ಮಹಾಸಾಗರದತ್ತ ಹರಿಸುತ್ತಿರುವ ಮಾನವಪ್ರಾಣಿ ಇದಕ್ಕೆ ಪ್ರತಿಯಾಗಿ ಏನು ಪಡೆಯುತ್ತಿದ್ದಾನೆ ಆ ಪ್ರಪಂಚದಿಂದ? ಸ್ವಲ್ಪ ಮೌನವಿದ್ದು ವಿಚಾರಿಸಿ ನೋಡಿದರೆ, ಅರಿವಿಗೆ ಪ್ರತಿಯಾಗಿ ತೂಗುವ ವಸ್ತು ವಿಶ್ವಪ್ರಪಂಚದಲ್ಲಿಯೆ ಇಲ್ಲವೆಂದು ನನ್ನ ಭಾವನೆ. ವಿಶ್ವಬ್ರಹ್ಮಾಂಡದ ಯಾವ ವಸ್ತುವೆ ಇರಲಿ, ಈ ಅರಿವಿಲ್ಲದಿದ್ದರೆ ಅದರ ಅಸ್ತಿತ್ವವನ್ನು ಕುರುಹಿಡುವವರಾವರೂ ಯಾರು? ಕುರುಹಿಗೊಳಗಾಗದ, 'ಅಸ್ತಿ'ಯ ಆಧಾರವೆ ಇಲ್ಲದ ವಸ್ತುವಿಗೆ ಬೆಲೆ ಏನು? ಇಲ್ಲದ ರತ್ನಹಾರಕ್ಕೆ ಒಂದು ದುಡ್ಡನ್ನಾದರೂ ನಾನು ನೀವು ಕೊಡಲಿಕ್ಕಿಲ್ಲ. ಪ್ರಪಂಚಹಾರದ ಇರವನ್ನು ನೆಲೆಗೊಳಿಸಿ, ಅದಕ್ಕೆ ಬೆಲೆಯನ್ನು ಕಟ್ಟುವ ಅರಿವಿಗೆ ಬೆಲೆ ಎಷ್ಟು? 'ಶ್ರೀಪತಿಗೆ ಸೊಬಗನ್ನು, ಉಡುಪತಿಗೆ ಶಾಂತಿಯನ್ನು, ಬ್ರಹ್ಮನಿಗೆ ಚಾತುರ್ಯ ಸೂರ್ಯನಿಗೆ ಪ್ರತಾಪವನ್ನು, ಇಂದ್ರನಿಗೆ ಭೋಗ ಮನ್ಮಥನಿಗೆ ಸೌಂದರ್ಯವನ್ನು, ಸಮುದ್ರಕ್ಕೆ ಗಾಂಭೀರ್ಯ ಅಗ್ನಿಗೆ ತೇಜವನ್ನು ಕೊಟ್ಟ'[೧] ಪಂಪಾಪತಿ ವಿರೂಪಾಕ್ಷನಂತೆ ಈ 'ಗುರುಮೂರ್ತಿ' ಮಾನವನ ಅರಿವು. ಇಂಥ ಅರಿವಿನ ಚೈತನ್ಯವನ್ನು ಕೊಟ್ಟು ಏನು ಕೊಳ್ಳುತ್ತಿದ್ದೇನೆ ನಾನು? ಅನ್ನ ವಸ್ತ್ರ ಹೊನ್ನು ಹೆಣ್ಣು ಮಣ್ಣು ಮುಂತಾದುವನ್ನು. ಇವನ್ನು ಏಕೆ ಕೊಳ್ಳುತ್ತೇನೆ? ನನ್ನ ದೇಹ ಧಾರಣೆ, ದೇಹದ ಭದ್ರತೆ, ದೇಹದ ಭೋಗ ವಿಲಾಸಕ್ಕಾಗಿ. ಇವು ಏಕೆ ಬೇಕು? ನನಗೆ ಇವರಿಂದ ಸುಖವಾಗುತ್ತದೆ. ಈ ಸುಖವನ್ನು ಕೊಂಡುಕೊಳ್ಳಲು ನಾನು ವ್ಯಯಿಸುತ್ತಿರುವ ದೇಹ ಪ್ರಾಣ ಕರಣೇಂದ್ರಿಯ ಮತ್ತೆ ಅರಿವುಗಳಿಗೆ ಈ ಸುಖ ಸರಿದೂಗುತ್ತಿದೆಯೇ? 'ಇಲ್ಲವಾದರೆ ನಾನೇಕೆ ವ್ಯಾಪಾರ ಮಾಡುತ್ತಿದ್ದೆ?' ಎಂಬುದೇ ನನ್ನ ನಿರ್ಣಯ ಸಿದ್ಧಾಂತ. ಆದರೆ ಈ ಸಿದ್ಧಾಂತವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ ಸಮ್ಯಗ್‌ಜ್ಞಾನಸ್ಥಲದಲ್ಲಿ ನಿಂದ ಪ್ರಭುದೇವರು. ಇದೋ ಕೇಳಿ ಅವರ ಮಾತನ್ನು:

> ಸಂಸಾರವೆಂಬ ಹೆಣ ಬಿದ್ದಿರೆ ತಿನಬಂದ ನಾಯ ಜಗಳವ ನೋಡಿರೆ!
> ನಾಯ ಜಗಳವ ನೋಡಿ ಹೆಣ ನಗುತ್ತಿದೆ.

---

೧. ಹ. ಕಾ. ಸಂ. ೧, ಪ. ೧.

ಗೊಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರಯ್ಯಾ.[೧]

ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ!
ಘಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ!
ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂಬನ್ನಕ್ಕರ ಬಿನ್ನಾಣ ತಪ್ಪಿತ್ತು ಗೊಹೇಶ್ವರಾ.[೨]

ವಿಷಯಸಂಸಾರ ಅನಿತ್ಯ, ನಿತ್ಯವಲ್ಲ; ಅಲ್ಲಿ ಲಿಂಗರಸವಿಲ್ಲ, ಅಂತೆಯೆ ನೀರಸ. ನಿಸ್ಸಾರ; ವಿಶ್ವಪ್ರಪಂಚದ ಪ್ರಾಣಲಿಂಗವಾದ ಗೊಹೇಶ್ವರಲಿಂಗದ ಪ್ರಾಣಕಳೆ ಅಲ್ಲಿಲ್ಲ. ಅಂತೆಯೆ ನಿಷ್ಪ್ರಾಣ, ನಿರ್ಜೀವ. ಜೀವನ್ಮೃತ, ಅಮೃತವಲ್ಲ. ಇದು ಹೇಗೆ ಎಂದು ನೀವು ಕೇಳಬಹುದು. ಅದೋ ಆ ಮಾಮರದ ಹಸಿರು ನೆಳಲಿನಿಂದ ಕುಹೂ ಕುಹೂ, ಚಂವ್ ಚಂವ್, ಕಾ ಕಾ, ಚಿಞ್ ಚಿಞ್ ಎಂದು ವಿವಿಧ ನಾದವಿಭವ ತಂಗಾಳಿಯ ಮೇಲೆ ಕುಳಿತು ತೇಲಿ ಬರುತ್ತಿದೆ. ಕೋಗಿಲೆಯ ಕೂಜನದ ಮರೆಯಲ್ಲಿ ಲಿಂಗದೇವನ ಕಂಠಧ್ವನಿ ಕೇಳುತ್ತಿದೆಯೆ ನಿಮಗೆ? ಕಾಗೆ ಗುಬ್ಬಿ ಗೊರವಂಕದ ಉಲುಹಿನಲ್ಲಿ ಅದೇ ದಿವ್ಯನಾದವನ್ನು ಕಂಡಿದೆಯೆ ನಿಮ್ಮ ಕಿವಿ? ಅದೋ ಅಲ್ಲಿ ಆಕಾಶದಲ್ಲಿ ಹಾರಿಬರುತ್ತಿರುವ ಬೆಳ್ಳಕ್ಕಿಗಳ ಪಂಕ್ತಿ. ಈ ಸಾಲಿನಲ್ಲಿ ಹಕ್ಕಿಗಳ ಬಹುರೂಪದ ಮರೆಯಲ್ಲಿ ದೇವನ ಮೈಹೊಳಹು ನಿಮ್ಮ ಕಣ್ಣೊಳಗೆ ಪ್ರಕಾಶವಾಯಿತೇ? ಅದೋ ಅಲ್ಲಿ ಮಲ್ಲಿಗೆ ಸಂಪಿಗೆ ಪಾರಿಜಾತ ಪುಷ್ಪಗಳ ಪರಿಮಳದ ಜಾತ್ರೆ. ಆ ಪುಷ್ಪಪರಿಮಳದಲ್ಲಿ ಪರಿಮಳ ಲಿಂಗದ ಪರಿಮಳ ಸೂಸುತ್ತಿದೆಯೆ ನಿಮ್ಮ ಮೂಗಿನಲ್ಲಿ? ಬೀಸುವ ಗಾಳಿಯ ಮರೆಯಲ್ಲಿ ಸುಳಿವ ಚೆನ್ನಮಲ್ಲಿಕಾರ್ಜುನನ ಸುಳಿವು ನಿಮ್ಮ ಮೈಗೆ ಹತ್ತಿದೆಯೆ? ಹೊನ್ನು ಹೆಣ್ಣು ಮಣ್ಣು ಮುಂತಾದ ಸುಖವಿಲಾಸದ ಹಿಂದೆ ಚೆನ್ನರಾಮನ ದಿವ್ಯ ವಿಲಾಸ ಗೋಚರಿಸಿದೆಯೆ ನಿಮ್ಮ ಮನ ಬುದ್ಧಿಗೆ? ಆದರೆ ಅದೇ ಸಂಸಾರ ವಿಷಯದ ಮರೆಯಲ್ಲಿ ಮೂರ್ತಮಾಡಿರುವ ಮಹಾದೇವನ ಪರಿಚಯವಿದೆ ಅನುಭಾವಿಗಳಿಗೆ. '....ವಿಶ್ವವ ತಿಳಿದು ನೋಡಲು ನಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ'— ಎಂಬ ಚಂದಿಮರಸರ ಅಮೃತತತ್ತ್ವಸೂತ್ರವನ್ನು ನೆನೆಸಿಕೊಂಡರೆ, ಅನುಭಾವದೃಷ್ಟಿಯ ಗಭೀರ ತೀಕ್ಷ್ಣತೆ ನಮಗೆ ಗೊತ್ತಾಗುತ್ತದೆ. ಜಾಗ್ರತವಾಗಿರುವ ಕಾವ್ಯಪ್ರತಿಭೆಯ ಪ್ರಜ್ಞೆಯಲ್ಲಿ ವಿಶ್ವಪ್ರಕೃತಿಯ ರಸಸೌಂದರ್ಯ ವೇದ್ಯವಾಗುವಂತೆ, ಶರಣನ ಸಮ್ಯಗ್ ಜ್ಞಾನದೃಷ್ಟಿಯಲ್ಲಿ ವಿಶ್ವಗೊಹೇಶ್ವರನ ಗುರುತು ಹತ್ತುತ್ತದೆ. ಆದ್ದರಿಂದಲೆ ಈ ಸಮ್ಯಗ್‌ಜ್ಞಾನೋದಯವಾಗದ ಅಜ್ಞಾನದೃಷ್ಟಿಯಲ್ಲಿ ತೋರುವ ವಿಷಯ ಸಂಸಾರವನ್ನು 'ಹೆಣನು' ಎಂದು ಹೇಳುವುದು. ಈ ಹೆಣಕ್ಕಾಗಿ ಕಚ್ಚಾಡುವ ಕರಣೇಂದ್ರಿಯಗಳನ್ನು ಅಥವಾ ಮಾನವಪ್ರಾಣಿಗಳನ್ನು ಇಲ್ಲಿ ತಿನಬಂದ ನಾಯಿಗಳಿಗೆ ಹೋಲಿಸಿರುವುದು. ವಿಷಯಸಂಸಾರಕ್ಕಾಗಿ ತನ್ನಲ್ಲಿ ನಡೆವ ಕಾಯವಿಕಾರ ಇಂದ್ರಿಯ ವಿಕಾರ ಮನೋವಿಕಾರಗಳ ಹೋರಾಟ, ಇಲ್ಲವೆ ಅದೇ ಅನಿತ್ಯಸಂಸಾರಕ್ಕೆ ಹೋರಾಡುವ ಎಲ್ಲ ಪ್ರಾಣಿಗಳ ರಣರಂಗ ಅತಿ ಘೋರ. ಆದರೆ ಅಲ್ಲಿ ಗೊಹೇಶ್ವರಲಿಂಗ ಇಲ್ಲ.

---

೧. ಶೂ. ಸಂ. ಪು. ೮, ವ. ೧೦.   ೨. ಲಿಂ. ಲೀ. ವಿ. ಚಾ. ಪು. ೬೬, ವ. ೨೧.

ಇದ್ದರೆ ಸಂಸಾರನಾಟಕ ದಿವ್ಯ ಲೀಲೆಯಾಗಿ ಮಾರ್ಪಡುತ್ತದೆ. ಸಂಸಾರನಾಟಕವನ್ನು ಲಿಂಗಲೀಲಾವಿಲಾಸವಾಗಿಪರಿವರ್ತಿಸುವ ಉದ್ದೇಶದಿಂದಲೇ ಸಂಸಾರ ಹೇಯ ಎಂದು ಹೇಳುತ್ತಾರೆ, ಸಮ್ಯಗ್ ಜ್ಞಾನದೃಷ್ಟಿಯುಳ್ಳ ಶರಣರು. ಅವರು ಈ ಅರ್ಥದಲ್ಲಿ ಸಂಸಾರವನ್ನು ಬಿಡಬೇಕು ಎಂದು ನುಡಿದರೆ, ಹೆಂಡಿರು ಮಕ್ಕಳನ್ನು ಮನೆಮಾರನ್ನು ಬಿಟ್ಟು ಗಿರಿಗಹ್ವರಕ್ಕೆ ಓಡಿಹೋಗಬೇಕೆಂದು ನೀವೇಕೆ ಅರ್ಥಮಾಡಿಕೊಳ್ಳುವಿರಿ?

ಮತ್ತೆ, ಈ ಸಂಸಾರಸಂಪಾದನೆಯಲ್ಲಿ ಸುಖವೆಷ್ಟು? ದುಃಖವೆಷ್ಟು? ಒಂದು ಸುಖಕ್ಕೆ ಸಾವಿರ ದುಃಖ. ಇನ್ನೂ ಮೆತ್ತಗಾಯಿತು ಈ ಮಾತು. ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ. ಮತ್ತೆ ಈ ಸುಖದ ಭೋಗ ಒಂದು ಗಳಿಗೆಯ ಬೇಟ. ಇಂಥ ಗಳಿಗೆಯ ಬೇಟದ ಅಲ್ಪಸುಖಕ್ಕೆ ತನ್ನನ್ನೆ ಬಲಿಕೊಡುವುದೆ? ತನ್ನ ಮಾರಿ ಜಗತ್ತನ್ನೆ ಸಾಧಿಸಿಕೊಂಡರೆ ಪ್ರಯೋಜನವೇನು? ಯಾರಿಗೆ? ನಮ್ಮ ಅರಮನೆ, ಸಿಂಹಾಸನ, ನಮ್ಮ ಕೋಟಿ ಹಣ ಕೋಟಿ ವಿಲಾಸಗಳ ಸಂಸಾರಸುಖದ ನಿಜಸ್ವರೂಪ ವನ್ನು ಅತ್ಯಂತ ಸುಂದರವಾದ ಒಂದು ದೃಷ್ಟಾಂತದಿಂದ ಸ್ಪಷ್ಟವಾಗಿ ನಮ್ಮ ಕಣ್ಣೆದಿರು ಹಿಡಿಯುತ್ತದೆ ಚಂದಿಮರಸರ ಈ ವಚನ:

> ಬಟ್ಟೆಗೊಂಡುವೋಗುತ್ತಿಪ್ಪ ಮನುಜನೊಬ್ಬ
> ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು ನಾಲ್ಕುದೆಸೆಯಲಟ್ಟುತ್ತ ಬರೆ ಕಂಡು,
> ಭರದಿಂದ ಹೋಗ ದೆಸೆಯಿಲ್ಲದೆ ಬಾವಿಯ ಕಂಡು,
> ತಲೆಯನೂಱ ಬೀಳುವಲ್ಲಿ ಹಾವ ಕಂಡು,
> ಇಲಿ ಕಡಿದ ಬಳ್ಳಿಯ ಹಿಡಿದು ನಿಲೆ, ಜೇನ ಹುಳುಗಳು ಮೆಯ್ಯನೂಱುವಾಗ,
> ಮೂಗಿನ ತುದಿಯಲ್ಲಿ ಒಂದು ಹನಿ ಮಧು ಬಂದು ಬೀಳೆ,
> ಆ ಮಧುವ ಕಂಡು ಹಿರಿದಪ್ಪ ದುಃಖವನೆಲ್ಲಾ ಸೈರಿಸಿ,
> ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ,
> ಈ ಸಂಸಾರಸುಖ ವಿಚಾರಿಸಿ ನೋಡಿದಡೆ ದುಃಖದಾಗರ.
> ಇದನಱಿದು, ಸಕಲವಿಷಯಂಗಳಲ್ಲಿ ಸುಖವಿಂತುಂಟೆಂದು
> ನಿರ್ವಿಷಯನಾಗಿ ನಿಂದ ನಿಲವು ಚಿಮ್ಮಲಿಗೆಯ ಚೆನ್ನರಾಮ.[೧]

ಚಂದಿಮರಸರು ಬರೆದ ಸಂಸಾರಸುಖದ ಚಿತ್ರ ಬಾಯ್ದೆರೆದು ಮಾತಾಡುವಂತಿದೆ. ನಿರ್ವಿಷಯನಾಗಿ ನಿಂದ ನಿಲವಾದ ಚಿಮ್ಮಲಿಗೆಯ ಚೆನ್ನರಾಮನೆ ಒಳಗಿಂದ ಹೊರಗೆ ಬಂದು, ಹೊರಗಿಂದ ಒಳಗೆ ಹೋದರೆ, ಆ ಸುಖದ ಹೆಸರೇ ನಿಜ ಸುಖ, ನಿತ್ಯ ಸುಖ, ಸಚ್ಚಿದಾನಂದ. ಸುಜ್ಞಾನೋದಯವಾಗಿ ತಾನು – ಚೆನ್ನರಾಮ ಅರಿವಿನಿಂದ ಇಳಿದು, ಮಾನವಾಲಯದ ಕೋಣೆ ಕೋಣೆಗಳಲ್ಲಿ ಮೂರ್ತಮಾಡಿ, ತನ್ನ ಮಹಾಮನೆಯಾದ ವಿಶ್ವಾಲಯದಲ್ಲಿ ವಿಲಾಸವಾಗಿ ಇರಬೇಕೆಂಬುದೇ 'ಸಂಸಾರಹೇಯ' ಸ್ಥಲದ ಘನೋದ್ದೇಶ.

---

೧. ಲಿಂ. ಲೀ. ವಿ. ಚಾ. ಪು. ೯೮, ವ. ೯.

ಚಂದ್ರಮನಂತೆ ಮಾನವನಿಗೆ ಶಿವಜ್ಞಾನಕಳೆ ಸಮನಿಸಿದೆ. ಆದರೆ ಬಸವಣ್ಣನವರು ಹೇಳುವಂತೆ, ಸಂಸಾರವೆಂಬ ರಾಹು ದೇಹಕರಣಾದಿಗಳನ್ನು ಸರ್ವಗ್ರಾಸಿಯಾಗಿ ನುಂಗಿದೆ. ಶಿವಜ್ಞಾನೋದಯವಾದಲ್ಲಿ ಅರಿವು, ಕಾಯ ಕರಣ ಇಂದ್ರಿಯಗಳಿಂದ ಮುಕ್ತವಾಗಿ ತನ್ನ ನಿಜವಾದ ಪರಂಜ್ಯೋತಿಸ್ಥಲದಲ್ಲಿ ನಿಲ್ಲುವಂತೆ, ಅದೇ ದಿವ್ಯೋದಯ ದೇಹ ಇಂದ್ರಿಯ ಮನ ಬುದ್ಧಿ ಜೀವನಲ್ಲಿ ಅವತರಿಸಿದರೆ, ಅಲ್ಲಿಯ ದೇಹಸಂಸಾರದ ನಿಜಸ್ವರೂಪ ತಾನೆ ಹೊಳೆಯುತ್ತದೆ. ಈ ರಾಹು ಮಾನವಕುಲವನ್ನೆಲ್ಲ ನುಂಗಿದಂತಿದೆ. ಇನ್ನೂ ವಿಸ್ತಾರವಾಗಿ ನೋಡಿದರೆ ಸಂಸಾರದ ಕತ್ತಲೆ ಮೂರು ಲೋಕವನ್ನೇ ಆವರಿಸಿದೆ ಎಂದು ಹೇಳುತ್ತಾರೆ ಪ್ರಭುದೇವರು. 'ನರಲೋಕದ ನರರುಗಳೆಲ್ಲರು ನರಸಂಸಾರಕ್ಕೊಳಗಾದರು. ಸುರಲೋಕದ ಸುರರುಗಳೆಲ್ಲರು ಸುರಸಂಸಾರಕ್ಕೊಳಗಾದರು. ಮುನಿಲೋಕದ ಮುನಿಗಳೆಲ್ಲರು ತಪೋಸಂಸಾರಕ್ಕೊಳಗಾದರು....'[1] ಇದೇ ಸರಣಿಯನ್ನು ಮುಂದುವರಿಸಿದರೆ ನಮ್ಮ ನಮ್ಮ ಸಂಸಾರ ನಮನಮಗೆ ಕಾಣಬಹುದು. ವಿಜ್ಞಾನಿಗಳಿಗೆ ವಿಜ್ಞಾನದ ಸಂಸಾರ. ವ್ಯಾಪಾರಿಗಳಿಗೆ ಲಾಭಹಾನಿಯ ಸಂಸಾರ. ಒಕ್ಕಲಿಗನಿಗೆ ಮಳೆಬೆಳೆಯ ಸಂಸಾರ.... ಹೀಗೆ ಹೇಳಿದರೆ, ಮತ್ತೆ ನೀವು ಸಿಡಿದೆದ್ದು 'ಈ ಸಂಸಾರ'ಗಳನ್ನೆಲ್ಲ ಬಿಡಬೇಕೇ ಎಂದು ಕೇಳಿದರೆ, ಅದಕ್ಕೆ ಮತ್ತೆ ಉತ್ತರವೆಂದರೆ: ಮರವೆಯಲ್ಲಿ ನಡೆದ ಬಾಳುವೆ ಅರಿವಿನಲ್ಲಿ ನಡೆದು ಬದುಕಲಿ ಎಂದು.

ಅಂಧಕಾರದಲ್ಲಿ ತಾನು ದೇಹದೊಡನೆ 'ಸಮರಸವಾಗಿ ನಡೆಸಿರುವ ಅಜ್ಞಾನ ವ್ಯಾಪಾರವನ್ನು ಶರಣ ತನ್ನಿಂದ ಬೇರ್ಪಡಿಸುವಂತೆ, ತನಗಿದಿರಿಟ್ಟು ತೋರುವ ವಿಶ್ವ ಪ್ರಪಂಚದ ತಾಮಸವಿಲಾಸವನ್ನು ತಿಳಿದು ನೋಡಿ, 'ಇದೆಂಥ ಕತ್ತಲೆಯ ಬಯಲಾಟ'! ಎಂದು ಬಗೆಯಲ್ಲಿ ನಗೆ ಅಂಕುರಿಸಿದರೆ, ಅದೇ ಮಾಯಾವಿಲಾಸವಿಡಂಬನಸ್ಥಲ. ಈ ಮಾಯಾವಿಲಾಸ, ಈ 'ಆಡಂಬರದೊಳಗಾಡಂಬರ' ನನಗೆ ಕಾಣುವುದಿಲ್ಲ, ನಿಮಗೂ ಕಾಣಲಿಕ್ಕಿಲ್ಲ. ಕಾರಣ ಸ್ಪಷ್ಟ. ನೋಡುವ ಕಣ್ಣಿಗೇ ಈ ಮಾಯೆ ಕವಿದಿದ್ದರೆ, ಮಾಯಾಜಾಲದ ಬಲೆಯಲ್ಲಿ ಸಿಕ್ಕು ಮಾಯೆ ಕುಣಿಸಿದಂತೆ ಕುಣಿಯುತ್ತಿರುವ ವಿಶ್ವಪ್ರಪಂಚದ ಮಹಾನಾಟಕ ನಾಟಕವೆಂದು ಹೇಗೆ ಕಂಡೀತು? ನಾನು ನೀವು ಅದೇ ನಾಟಕದಲ್ಲಿ 'ನಾನು' ಪಾತ್ರಗಳನ್ನು ಧರಿಸಿ ಕುಣಿವ ಕೆಲಸದಲ್ಲಿಯೆ ನಿಮಗ್ನರಾಗಿರುವಾಗ, ಆ ಮಹಾನಾಟಕವನ್ನು ನಾವು ನೋಡಬಲ್ಲೆವೆಂತು? ಹಾಗಾದರೆ ನೋಡಬಲ್ಲವರು ಯಾರು? ಬಲ್ಲವರು. ಅಂದರೇನು? ತಿಳಿದವರು, ಕಂಗಳ ಕತ್ತಲೆ ಹರಿದವರು, ಸ್ವಯಂ ಜ್ಯೋತಿಯಾದ ಅರಿವನ್ನು ಮುಸುಕಿದ ಮರವೆ ನಷ್ಟವಾದವರು, ಮಾಯಾಪಾಶದಿಂದ ನಾಮ ರೂಪ ಕ್ರಿಯೆಗೆ ಬದ್ಧವಾಗಿ ಅಭಿನಯಿಸುತ್ತಿರುವ ನಾನು ಪಾತ್ರದ ನಟನೆಯನ್ನು ಬಿಟ್ಟು, ವೇಷಭೂಷಣಗಳನ್ನುಳಿದು, ರಂಗಸ್ಥಲದಿಂದ ಕಾಲ್ದೆಗೆದು ಮುಂದೆ ಬಂದು ಕುಳಿತವರು. ಇವರೇ ನೋಡಬಲ್ಲವರು ಮಾಯಾಶಕ್ತಿಯ ಮಹಾವಿಲಾಸವನ್ನು, ವಿಶ್ವಾಡಂಬರದೊಳಗೆ ಅತಿ ಸೂಕ್ಷ್ಮವಾಗಿ ನೆಯ್ದುಕೊಂಡಿರುವ ಮಾಯಾಜಾಲದ ಕುಸುರಿಗೆಲಸವನ್ನು. ಇದೋ

೧. ಶೂ. ಸಂ. ಪು. ೧೫೭, ವ. ೫೫.

ಇಲ್ಲಿ ಬೇಕಾದರೆ ನೋಡಿ, ನಿಜಗುಣ ಶಿವಯೋಗಿಗಳು ತೋರುವ ಈ ಮಹಾನಾಟಕದ ದಿವ್ಯ ವಿಲಾಸವನ್ನು:

ಆಡುತೈದಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿ ಬಲ್ಲವರು ಸಂಸಾರನಾಟಕವ ಪ.

ಶಿವಶಕ್ತಿಯೆಂಬ ರಂಗದೊಳು ನರನಾಗದಾ-
ನವದೇವತಾದಿ ಪೆಸರಿನ ತನುಗಳೆಂಬ
ವಿವಿಧರೂಪಿನ ಬೊಂಬೆಗಳಿಗಾತ್ಮರೆಂಬ ಸೂ-
ತ್ರವನು ಹವಣಿಸಿ ಮೋಹದೊಡನೆ ಪೇಳ್ಳೈಸಿ ೧

ಮೂರವಸ್ಥೆಯ ಮರೆಯೊಳಿರ್ದು ತಾನಲ್ಲಲ್ಲಿ-
ಯಾರು ವಿಕೃತಿಗಳು ನವಗುಣೋನ್ನತಿಗಳೆಂಬ
ಪೇರುವಡೆದಿಹ ಭಾವರಸ ಚಿತ್ರರಚನೆ ಕೆಲ-
ಜಾರದಂತಭಿನಯಿಸಿ ತೋರಿ ನಿಯತಿಯೊಳು ೨

ಪರಮುಕ್ತರೆಂಬ ಕೋವಿದರೊಂದುಗೂಡಿ ಪರ-
ತರ ಶಂಭುಲಿಂಗವೆಂಬತುಳ ಭೂಭುಜನು
ಪರಿವಿಡಿದು ತನ್ನ ಸನ್ನಿಧಿಯೊಳಿಂತೆಸೆವವರ
ಪರಿಯನವಿಕಾರದಿಂದೀಕ್ಷಿಸುತ್ತಿರಲು ೩

ಸಂಸಾರನಾಟಕವನ್ನು ಆಡುತ್ತಿದ್ದಾಳೆ ಮಾಯಾಂಗನೆ; ಆ ನಾಟಕವನ್ನು ನೋಡುತ್ತಿದ್ದಾನೆ ಶಂಭುಲಿಂಗ; ಆ ಲಿಂಗದೇವನೊಡನೆ ಒಂದುಗೂಡಿ ಅದೇ ನಾಟಕವನ್ನು ನೋಡುತ್ತಿದ್ದಾರೆ ಅಜ್ಞಾನ – ಮಾಯೆಯಿಂದ ಮುಕ್ತರಾದ ಸಮ್ಯಗ್‌ಜ್ಞಾನಿಗಳು. ಇವರೆಲ್ಲ ನಾಟಕವನ್ನು ನೋಡುತ್ತಿರುವುದು ನಿರ್ವಿಕಾರಭಾವ – ಬುದ್ಧಿ – ದೃಷ್ಟಿಯಿಂದ. ನೀವೂ ಮಾಯಾ ವಿಲಾಸವನ್ನು ನೋಡುವುದಿದ್ದರೆ ನೋಡಿರಿ ನೋಡಬಲ್ಲವರು ಎಂದು ಎಲ್ಲರನ್ನು ಆಮಂತ್ರಿಸುತ್ತಾರೆ ನಿಜಗುಣ ಶಿವಯೋಗಿಗಳು. ನೋಡುವ ಕಣ್ಣು, ನೋಡುವ 'ಬಲ್ಲತನ' ಅಂದರೆ ನೋಡುವ ಸಾಮರ್ಥ್ಯ ಮತ್ತು ನೋಡುವ ಜಾಣ್ಮೆ ಇದ್ದವರೆಲ್ಲ ಈ ಶಕ್ತಿಯ ವಿಲಾಸವನ್ನು ಅವಶ್ಯ ನೋಡಬೇಕು.[೨]

ಒಂದೇ ಒಂದು ವಸ್ತುವನ್ನು ನಾನಾತ್ವಗೊಳಿಸಿ, ಆ ನಾನಾತ್ವವನ್ನು ಭದ್ರವಾಗಿಟ್ಟು ಲೀಲೆಯಾಡಿಸುವ ಮಾಯಾಶಕ್ತಿ ಪರಶಿವನ ಪರಾಶಕ್ತಿಯ ಒಂದು ಮುಖವೇ.

---

೧. ವೇ. ಗ್ರಂ., ಕೈ. ಪ., ಜೇ. ಸಂ. ಸ್ಥ, ಪು. ೩೦, ಪ. ೧೮.

೨. ಹೋಲಿಸಿರಿ: ಫಲಪದಗಳ ಮೀರಿ ಶಿವಪದವೆಂಬುವ ।
ಹೊಳೆವ ಮೇಲುಪ್ಪರಿಗೆ ಮೇಲೆ ಕುಳಿತು ಮಾಯಾ- ॥
ಕಲಿಯುಗನರ್ತಕಿಯಾಟವ ನೋಡುತ ।
ನಲಿವ ಪರಶಿವ ಮಹಂತಲಿಂಗ ಶ್ರೀಬಾಲಕ ॥
ಕೈ. ದ. ಪು. ೧೧೫, ಪ. ೯೮ (ಸೋ. ಒಳಪಿಡಿ)

'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'[೧] ಚಿತ್ ಚೈತನ್ಯವಾದ ಅರಿವಿಗೆ ಅಜ್ಞಾನದಿಂದ ಜಡವೆನಿಸುವ ಮರವೆಯನ್ನು ಮೇಳೈಸಿ, ಅರಿವನ್ನು ಮರವೆಯ ತಾಳಕ್ಕೆ ಬದ್ಧಮಾಡಿ, ವಿಶ್ವಪ್ರಪಂಚವನ್ನೆ ಕುಣಿಸುತ್ತಿದೆ ಈ ಮಾಯಾಶಕ್ತಿ. ತನ್ನ ನಿಜವ ತಾ ಮರೆದ ಅರಿವು ಎಚ್ಚರದಪ್ಪಿ ಕುಣಿಯುತ್ತಿದೆ ಈ ಮಾಯಾವಿಲಾಸ ವಾದ ಸಂಸಾರದಲ್ಲಿ. ಈ ಮಾಯೆಯ ಮುಷ್ಟಿಯಲ್ಲಿ ಸಿಕ್ಕದ ಪರಮಾಣುವಿಲ್ಲ, ಪರಮೇಷ್ಠಿಯಿಲ್ಲ. ಇದೋ ನನ್ನನ್ನೇ ನೋಡಿ. ನನ್ನ ದೇಹ ಪ್ರಾಣ ಮನ ಬುದ್ಧಿಗೂ, ಇವನ್ನೆಲ್ಲ ನೋಡುವ ನನ್ನ ಅರಿವಿಗೂ ಬಿಚ್ಚಲಿಕ್ಕೆ ಬಾರದಂತೆ ಕಗ್ಗಂಟು ಬಿದ್ದಿದೆ. ದೇಹದ ಹಸಿವು ವಿಷಯೇಚ್ಛೆಗೆ ಶ್ರುತಿಗೂಡಿಸಿ ರಾಗಾಲಾಪ ನಡೆಸಿದೆ ನನ್ನ ಅರಿವು. ಪ್ರಾಣಚೈತನ್ಯ ಕಳೆಯೇರಿದರೆ ಕಳೆಯೇರಿ, ಕುಂದಿದರೆ ಕುಂದುತ್ತಿದೆ ಅದೇ ನಾನೆಂಬ ಅರಿವು. ಮನದ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಮನೋವಿಕಾರವಾಗಿ ನರ್ತಿಸುತ್ತಿದೆ ಅದೇ ಅರಿವು. ದೇಹ ಇಂದ್ರಿಯ ಮನದ ಕೈಯಲ್ಲಿ ಸಿಕ್ಕ ಬುದ್ಧಿಯ ವ್ಯಾಪಾರಕ್ಕೆ ಮೇಳವಾಗಿ ವಿಚಾರವನ್ನು ನಾಟ್ಯವಾಡುತ್ತಿದೆ ಅದೇ ಪ್ರಜ್ಞೆ. ನನ್ನ ದೇಹ ಪ್ರಾಣಾದಿಗಳಲ್ಲಿ ಮನೆ ಮಾಡಿಕೊಂಡು 'ಅಹಂಭಾವ'ವಾಗಿ ಅಭಿನಯಿಸುತ್ತಿದೆ ನನ್ನ ರೂಪಾದ ಸಂವಿತ್ತು. ಈ ನನ್ನ ಅರಿವಿಗೆ ತನ್ನ ಆದಿ ಚಿತ್‌ಶಕ್ತಿ, ತನ್ನ ಮೂಲ 'ಚೆನ್ನರಾಮ' ಹೊಳೆದರೆ, ನಾನಾಡುತ್ತಿರುವ ನನ್ನ ಪಾತ್ರ ಆಭಾಸವಾಗುತ್ತದೆ; ಸಂಸಾರನಾಟಕದಲ್ಲಿ ರಸಭಂಗ ವಾಗುತ್ತದೆ. ಈ ರಸಾಭಾಸ, ರಸಭಂಗವಾಗದಂತೆ ಎಲ್ಲರನ್ನು 'ಮೋಹದೊಡನೆ ಮೇಳೈಸಿ' ಆಟವಾಡಿಸುತ್ತಿದ್ದಾಳೆ ಈ ಮಾಯಾಮೋಹಿನಿ. ನಾನು ನಿಮ್ಮಲ್ಲಿ ಇಣುಕಿ ನೋಡಿ, ನಿಮ್ಮಲ್ಲಿ ನನ್ನನ್ನು ಕಾಣದಂತೆ ಮಾಯೆ ಭದ್ರಕೋಟೆ ಕಟ್ಟಿದ್ದಾಳೆ ನನ್ನ ನಿಮ್ಮ ನಡುವೆ. ಪ್ರೋಟಾನುಗಳ ಸುತ್ತು ತಿರುಗುತ್ತಿರುವ ಒಂದು ಇಲೆಕ್ಟ್ರಾನನ್ನು ಅದರ ಸುತ್ತುವಲಯದ ಪಥದಿಂದ (Orbit) ತೆಗೆದು ಬೇರೊಂದು ಪಥದಲ್ಲಿರಿಸುವುದು ಎಷ್ಟು ಕಠಿಣವೋ ಅದಕ್ಕಿಂತ ಕೋಟಿ ಕಠಿಣ. ಮಾಯೆ ಕಟ್ಟಿದ ಈ ಕೋಟೆಗಳನ್ನು ಭೇದಿಸು ವುದು. ಜಡವೆನಿಸುವ ಪರಮಾಣುಪಿಂಡ ಮೊದಲು ಸೃಷ್ಟಿಕರ್ತನೆನಿಸುವ ಬ್ರಹ್ಮ ಪಿಂಡದವರೆಗೆ ಅವರವರ ಅರಿವು–ಮರವೆಯ ಮಟ್ಟದಂತೆ ಅವರವರಿರುವುದು ಈ ಅಭೇದ್ಯ, ಅಚ್ಛೇಯ ಕೋಟೆಗಳಲ್ಲೇ. ಇದೋ ನೋಡಿ ಪ್ರಭುದೇವರು'ಹಾಡುತ್ತಿದ್ದಾರೆ ಮಾಯೆಯನ್ನು:

ಬ್ರಹ್ಮ ಘನವೆಂಬೆನೆ? ಬ್ರಹ್ಮನ ನುಂಗಿತ್ತು ಮಾಯೆ.
ವಿಷ್ಣು ಘನವೆಂಬೆನೆ? ವಿಷ್ಣುವ ನುಂಗಿತ್ತು ಮಾಯೆ.
ರುದ್ರ ಘನವೆಂಬೆನೆ? ರುದ್ರನ ನುಂಗಿತ್ತು ಮಾಯೆ.
ತಾ ಘನವೆಂಬೆನೆ? ತನ್ನ ನುಂಗಿತ್ತು ಮಾಯೆ.
ಇಂತು ಸರ್ವವು ನಿನ್ನ ಮಾಯೆ ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ
ಗುಹೇಶ್ವರಾ?[೨]

---

೧. ಶ್ವೇತಾ. ಉ. ಅ. ೬, ಮಂ. ೮. ೨. ಪ್ರ. ವ. ಪು. ೧೮, ವ. ೨೨.

ದೇವರನ್ನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ.
ಹರಹರಾ, ಮಾಯೆ ಇದ್ದೆಡೆಯ ನೋಡಾ. ಶಿವಶಿವಾ, ಮಾಯೆ ಇದ್ದೆಡೆಯ ನೋಡಾ.
ಎರಡೆಂಬತ್ತುಕೋಟಿ ಪ್ರಮಥಗಣಂಗಳು,
ಅಂಗಾಲ ಕಣ್ಣವರು, ಮೆಯ್ಯೆಲ್ಲಾ ಕಣ್ಣವರು, ನಂದಿವಾಹನ ರುದ್ರರು,
ಇವರೆಲ್ಲರು ಮಾಯೆಯ ಕಾಲುಗಾಹಿನ ಸರಮಾಲೆ ಕಾಣಾ ಗುಹೇಶ್ವರಾ.[೧]

ದೇವಾಧಿದೇವತೆಗಳು ಸಿದ್ಧರು ಸಾಧಕರು ಮನು ಮುನೀಶ್ವರರು 'ಅಹಂ ಬ್ರಹ್ಮಾಸ್ಮಿ' ಎಂಬ ಬ್ರಹ್ಮಜ್ಞಾನಿಗಳೆಲ್ಲ ಮಾಯೆಗೆ ಒಳಗಾಗಿ, ಸೂತ್ರಧಾರಿಣಿಯಾದ ಈ ಜಗನ್ಮೋಹಿನಿ ಕುಣಿಸಿದಂತೆ ಕುಣಿಯುತ್ತಿದ್ದಾರೆ. ಗಂಡ ಕುಣಿವುದಿಲ್ಲವೇ ತನ್ನ ಹೆಂಡತಿ ಹೇಳಿದಂತೆ? ಶ್ರೀಮಂತನ ಉನ್ಮತ್ತ ನೃತ್ಯ ನಡೆವುದಿಲ್ಲವೇ ತನ್ನ ಧನ ಸಂಪತ್ತು ಆಜ್ಞಾಪಿಸಿದಂತೆ? ಅಧಿಕಾರಿ ನಾಟ್ಯವಾಡುವುದಿಲ್ಲವೇ ತನ್ನ ದರ್ಜೆಯ ಅಪ್ಪಣೆಯಂತೆ? ಹೀಗೆ ಮಾಯಾಪ್ರಕೃತಿಯ ವಶವರ್ತಿಯಾಗಿ ಸಂಸಾರನಾಟಕ ನಡೆದಿದೆ ಶಿವಶಕ್ತಿಯ ರಂಗಸ್ಥಲದಲ್ಲಿ. ಶಿವಶಕ್ತಿಯ ಗರ್ಭದಲ್ಲಿಯೆ ಉದಯವಾದ ಭೂತಜಾತಕ್ಕೆ, ಪಾತ್ರ ಪ್ರಪಂಚಕ್ಕೆ ತಾವು ಕುಣಿಯುತ್ತಿರುವ ರಂಗಭೂಮಿಯ ಸ್ವರೂಪವೇ ಗೊತ್ತಿಲ್ಲ. ನಿಮಗೆ ಗೊತ್ತಿದೆಯೇ ನೀವು ಜೀವನಲೀಲೆಯನ್ನು ನಡೆಸಿರುವುದು ಚಿಚ್ಛೈತನ್ಯಶಕ್ತಿಯ ರಂಗಮಂಟಪದಲ್ಲಿ ಎಂದು? ನನಗೆ? ಅದು ಗೊತ್ತೇ ಇಲ್ಲ. ನಮ್ಮ ಮನೆಯಲ್ಲಿದ್ದು ನನ್ನ ಬಾಳುವೆ ನಡೆಸಿದ್ದೇನೆ. ಅಥವಾ ನಮ್ಮ ಊರಲ್ಲಿ, ಅಥವಾ ಇಂಥ ದೇಶದಲ್ಲಿದ್ದು, ಇಲ್ಲವೆ ಭೂಮಿಯ ಮೇಲೆ ಆಕಾಶದ ಕೆಳಗೆ ಇದ್ದು ಬಾಳುತ್ತಿದ್ದೇನೆ ಎಂದು ನಾನು ನನ್ನ ಜೀವನದ ರಂಗಸ್ಥಲವನ್ನು ಹೇಳಬಹುದು. ನನ್ನಂತೆ ನಿಮ್ಮದು, ನನ್ನ ನಿಮ್ಮಂತೆ ಸಾಮಾನ್ಯವಾಗಿ ಎಲ್ಲರದು.

---

೧. ಪ್ರ. ವ. ಪು. ೧೮, ವ. ೨೩.

ಈ ಸಂದರ್ಭದಲ್ಲಿ ಪ್ರಭುಲಿಂಗಲೀಲೆಯ ಮಾಯಾಂಗನೆ ಅಲ್ಲಮಪ್ರಭುವಿಗೆ ತನ್ನ ಪ್ರತಾಪವನ್ನು ಆಡಿ ತೋರಿದ ಮಾತುಗಳನ್ನು ನೋಡಿರಿ:

ಹರಿಯಯೆದೆಯನು ಮೆಟ್ಟಿದೆನು ಶಂ- ।
ಕರನನರ್ಧಾಂಗದೊಳು ನೆಟ್ಟನೆ ।
ಹರಿಸುಟಿಗೆಯಾಡಿದೆನು ಬ್ರಹ್ಮನ ಬಾಯ ಮುದ್ರಿಸಿದೆ ॥
ಸುರನರೋರಗರೆಂಬ ಮಱಿವೆಯ ।
ಮೆರುಳತಂಡವನೆನ್ನ ತೊತ್ತಿರ ।
ಶರಣವೊಗಿಸಿದೆನೇನ ಕೇಳುವೆಯೆಂದಳಾ ಮಾಯೆ ॥

ಜಿನುಗು ಮತಿಗಳ ಸಿದ್ಧ ಸಾಧಕ ।
ಮುನಿಗಳೆಂಬವದಿರುಗಳನು ನಾ ।
ಮುನಿದು ಕಚ್ಚಟ ಕಂತೆ ಬತ್ತಲೆ ಬೋಳು ಜೆಡೆ ಲೋಚು ॥
ಅನಶನವ್ರತ ನಾರು ಬೇರಿಂ ।
ಬನಿತಱಲಿ ದಂಡಿಸುವೆನಾ ಕಾ.।
ನನದ ಮರುಳರನೇನ ಕೇಳುವೆಯೆಂದಳಾ ಮಾಯೆ ॥

ಗ. ೭, ಪು. ೯೫, ಪ. ೫೭-೫೭.

ವಿಶ್ವವಿಲಾಸದ ಸ್ವರೂಪವೇನು ಎಂದು ವಿಜ್ಞಾನಿಗಳನ್ನು ಕೇಳಿದರೆ ಅವರು ಹೇಳುತ್ತಿರುವುದೇನು? ರಂಗಭೂಮಿಯೆನಿಸುವ ವಿಶ್ವಪ್ರಪಂಚ, ಪಾತ್ರಕೋಟಿಯಾಗಿರುವ ಪ್ರಾಣಪ್ರಪಂಚ, ಅವರ ಪ್ರಸಾಧನ ವಿಧಿ, ಅವರ ಅನಂತ ಅಭಿನಯವೆಲ್ಲ ಜಡಚೈತನ್ಯ, ವಿಶ್ವಚೈತನ್ಯದ ಜಡಲೀಲೆಯೆ. ಇಲ್ಲಿ ಸಾಮಾಜಿಕರೆ ಇಲ್ಲ. ಎಲ್ಲರು ಪಾತ್ರವಹಿಸಿದವರೆ. ಇದೇ ವಿಶ್ವನಾಟಕವನ್ನು ಕುರಿತು ಮಹಾತತ್ತ್ವಜ್ಞಾನಿಗಳಾದ ಹೆನ್ರಿ ಬರ್ಗಸನ್ (Henri Bergson) ಅಥವಾ ಆಲ್‌ಫ್ರೆಡ್ ನಾರ್ಥ ವ್ಹಾಯಿಟ್‌ಹೆಡ್ (Alfred North Whitehead) ಇಂಥವರನ್ನು ವಿಚಾರಿಸಿದರೆ ವಿಶ್ವವಿಲಾಸ, ವಿಶ್ವದ ವಿಕಾಸ, ಈ ಮಹಾವಿಲಾಸವನ್ನು ಸೃಜಿಸುತ್ತಿರುವ ಬ್ರಹ್ಮಚೈತನ್ಯ ಜಡವಲ್ಲ, ಅದು ಸಜೀವ ಚೈತನ್ಯ (Elan Vital) ಪ್ರಾಣವಂತ ಶಕ್ತಿ ಎಂದು ಹೇಳುತ್ತಾರೆ. ಅದ್ವೈತ ವೇದಾಂತಿಗಳು 'ಬ್ರಹ್ಮ ಸತ್ಯಂ ಜಗನ್ ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂದು ಹೇಳಿ, ಜೀವ ಪರಮಾತ್ಮರ ಏಕತ್ವವನ್ನು, ವಿಶ್ವಪ್ರಪಂಚದ ಮಿಥ್ಯಾತ್ವವನ್ನು, ಮಾಯಾವಾದವನ್ನು ನಮ್ಮ ಮುಂದೆ ಇರಿಸುತ್ತಾರೆ. ಆದರೆ ಶಿವಾನುಭಾವಿಗಳಾದ ಶರಣರ ಅನುಭವ ಏಕಮೇವಾದ್ವಿತೀಯವಾದ ನಿಜವಸ್ತು ಒಂದು. ಅದೇ ಲಿಂಗ ಅಂಗವೆಂದು ಎರಡಾಯಿತ್ತು. ·ಪಂಚವಿಂಶತಿ ತತ್ತ್ವಗಳು, ಈ ತತ್ತ್ವಗಳಿಂದ ನಿರ್ಮಿತವಾದ ದೇಹ, ಅಲ್ಲಿ ವಾಸವಾಗಿರುವ ಅಂಗ, ಆತ್ಮ, ಅರಿವು ಇವೆಲ್ಲ ಶಿವಶಕ್ತಿಯ ವಂಶವೇ. ಅಂತೆಯೇ ವಿಶ್ವವಿಲಾಸದ, ವಿಶ್ವಸಂಸಾರದ ನಾಟಕಸ್ವರೂಪವನ್ನು ಕೇಳಿದರೆ, ಅವರ ಉತ್ತರ ಇದು: ವಿಶ್ವರಂಗಸ್ಥಲ, ವಿಶ್ವಪಾತ್ರಪ್ರಪಂಚ, ವಿಶ್ವವೇಷ, ವಿಶ್ವಾಲಂಕಾರ, ವಿಶ್ವಾಭಿನಯವೆಲ್ಲ ಪರಶಿವಶಕ್ತಿಯ ಅಧೋಮುಖವಾದ ಲೀಲೆ. ಈ ಲೀಲೆ, ಈ ಮಾಯಾವಿಲಾಸ ತಲೆ ಕೆಳಗಾಗಿ ಕಾಲು ಮೇಲಾಗಿ ನಡೆದ, ಅಜ್ಞಾನದ ಅಂಧಕಾರದಲ್ಲಿ ನಡೆದ, ಮಾಯಾಶಕ್ತಿಗೆ ಅಧೀನವಾಗಿ ನಡೆದ ವಿಕ್ಷಿಪ್ತ ವಿಲಾಸ. ಈ ವಿಕಾರ ವಿಲಾಸವನ್ನು ನೋಡುತ್ತಾರೆ ನೋಡಬಲ್ಲ ಶರಣರು. ನೋಡಿ, ನಿರ್ವಿಕಾರವಾಗಿ ನೋಡಿ, ಒಳಗನ್ನು ತಿಳಿದು ನೋಡಿ ನಗುತ್ತಾರೆ ಆ ಮಹಾನುಭಾವಿಗಳು. ಏಕೆ?

ನಗಲೇ ಬೇಕು. ಒಳಹೊರಗೆ ಮೆತ್ತಿದ ಕತ್ತಲೆಯಲ್ಲಿ 'ಮ್ಯಾಯಾರಕ್ಕಸಿ'ಯ ಕೈಗೊಂಬೆಗಳಾಗಿ ವಿಕಾರವಾಗಿ 'ಕರಡಿ'ಯಂತೆ ಕುಣಿದರೆ, ಯಾರು ನಗಲಿಕ್ಕಿಲ್ಲ? ಪೃಥ್ವಿ ಯಾರು? ಅಥವಾ ಏನು? ಎಲ್ಲಿಂದ ಬಂದಿದೆ? ಅದರ ನಿವಾಸಸ್ಥಲವಾವುದು? ಅದರ ಗುಣ ಧರ್ಮ ಕರ್ಮವೇನು? ಇವೇ ಪ್ರಶ್ನಾರ್ಥಕ ಚಿಹ್ನೆ ನೀರು ಗಾಳಿ ಬೆಂಕಿ ಬಯಲಿಗೆ. ತಿಳಿದು ನೋಡಿದರೆ, ಮರೆಯ ಒಳಗೆ ನೋಡಿದರೆ, ಚಿಚ್ಚೈತನ್ಯದ, ಚಿಜ್ಜ್ಯೋತಿಯ ಪರಮಾಕಾಶದ ಗರ್ಭದಲ್ಲಿ ಒಗೆದ ಮೂರ್ತಿಗಳೇ ಇವು ಅಥವಾ ಇವರು. ಆದರೆ ಈ ಅರಿವು ಅವಕ್ಕಿದೆಯೆ? ಅದೋ ಅಲ್ಲಿ ಗಗನವೆಲ್ಲ ಕಾಲಮೇಘಮಂಡಲ. ಬಿರುಗಾಳಿ ತಂಪನ್ನೆ ಹೊಯ್ಯುತ್ತಿದೆ. ಮಳೆ ಸುರಿಯುತ್ತಿದೆ ಧೋ ಧೋ ಎಂದು. ಮಳೆ ಸುರಿದಂತೆ ನೆಲವೆಲ್ಲ ನೀರು ನೀರಾಗುತ್ತಿದೆ. ಪರಶಿವಶಕ್ತಿಯ ಚಿಜ್ಜಲದಿಂದ ಭೂತಜಲ ವೃಷ್ಟಿಯಾಗುತ್ತಿದೆಯೆಂದು ಅರಿವಿನ ಮಾನವನಿಗೆ–ನನಗೆ ಗೊತ್ತಿಲ್ಲ; ಆ ಜಡ ಜಲಕ್ಕೇನು ಗೊತ್ತು? ಚಿಚ್ಚೈತನ್ಯಗರ್ಭದ ಚಿದ್ವಾಯುವೆ ಗಾಳಿಯಾಕಾರವಾಗಿರುವುದು

ಗಾಳಿಗೇನು ಗೊತ್ತು? ಇದರಂತೆ ಭೂಮಿ ಆಕಾಶದ ಮೂಲಸಂಗತಿ. 'ಇಳೆ ನಿಮ್ಮದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ...' ಆಕಾಶ ನಿಮ್ಮ ಸೃಷ್ಟಿ, ನಿಮ್ಮ ದಾನ, ಅಂದರೆ ದೇವನ ಸೃಷ್ಟಿ ದಾನ. ಪ್ರಕಾಶ ನಿಮ್ಮದಾನ, ಮೇಘ ನಿಮ್ಮದಾನ. ಗುಡುಗು ಮಿಂಚು ನಿಮ್ಮ ದಾನ. ಇದರಂತೆ ದೇಹ ನಿಮ್ಮದಾನ, ಪ್ರಾಣ ನಿಮ್ಮದಾನ, ಕಿವಿ ಕಣ್ಣು ಮನಸ್ಸು ಬುದ್ಧಿ ನಿಮ್ಮದಾನ; ಎಲ್ಲ ಎಲ್ಲ ನಿಮ್ಮಲ್ಲಿ ಮೂಡಿವೆ, ನಿಮ್ಮಲ್ಲಿ ಆಡಿ ನಿಮ್ಮಲ್ಲಿ ಲೀನವಾಗುತ್ತಿವೆ. ಈ ಬ್ರಹ್ಮಪ್ರಜ್ಞೆಯಲ್ಲಿ ನಿಂದು, ಮಾಯೆಯ ನಿರ್ಮಾಣವಾದ ಕೋಟೆಗಳನ್ನೆಲ್ಲ ಕೆಡವಿ,'ಎಲ್ಲ ತಾನು – ಚೆನ್ನರಾಮ'ನೆಂಬ ಪರಿಪೂರ್ಣತೆಯಲ್ಲಿ ದಿವ್ಯಲೀಲಾವಿಲಾಸವನ್ನು ಬೀರದೆ, ಒಂದು ದೇಹ ಪ್ರಾಣ ಮನ ಬುದ್ಧಿ ಕಣ್ಣು ಕಿವಿಯಲ್ಲಿ ಕುಳಿತು, ತನ್ನ ಅಂತರಂಗದ ಚೆನ್ನರಾಮನನ್ನು ನೋಡದೆ, ತನ್ನ ಬಹಿರಂಗವಾದ ವಿಶ್ವದ ಮರೆಯ ಅದೇ ಪರಿಪೂರ್ಣ ಪರಂಜ್ಯೋತಿಯನ್ನು ಕಾಣದೆ, ಒಂದು ಚೋಟು ಚೋಟಾದ ಕತ್ತಲೆಯ ಪುತ್ಥಳಿಗಳು ಜಗದಗಲದಲ್ಲಿ ತಮ್ಮಗಲವಾಗಿ ಕುಣಿದರೆ ಬಲ್ಲವರು ನಗದಿರುವರೆ?

ಮಾನವನ ಒಳಹೊರಗೆ ವ್ಯಾಪಿಸಿರುವ ಜೀವೋಹಂಭಾವ, ಅಜ್ಞಾನ ಮತ್ತು ಇವರಿಂದ ಹೊರಡುವ ಸಂಸಾರವ್ಯಾಪಾರವನ್ನು ಅತಿಗಳೆದು, ಅಲ್ಲಿ ಶಿವೋಹಂಭಾವ, ಸಮ್ಯಗ್‌ಜ್ಞಾನ ಲಿಂಗಲೀಲೆಯನ್ನು ತುಂಬುವ ಭರ ಸಂಸಾರಹೇಯಸ್ಥಲದಲ್ಲಿ ನಡೆದರೆ, ಮಾಯಾವಿಲಾಸವಿಡಂಬನಸ್ಥಲದಲ್ಲಿ ಶರಣ ತನ್ನ ಶಿವಜ್ಞಾನ ದೃಷ್ಟಿಯಿಂದ ತನಗಿದಿರಿಟ್ಟು ತೋರುವ ವಿಶ್ವಪ್ರಪಂಚದ ಸ್ವರೂಪ, ಒಳಹೊರಗೆ ಹಬ್ಬಿರುವ ಪ್ರಗಾಢ ಅಜ್ಞಾನ, ಇವರಿಂದ ಗಮಿಸುತ್ತಿರುವ ಮಾಯಾವಿಲಾಸದ ಮುಸುಕನ್ನು ಓರೆಮಾಡಿ, ಅಲ್ಲಿಯೂ ಅದು 'ತಾನು – ಚೆನ್ನರಾಮ' ಎಂಬುದನ್ನು ನೋಡಿ, ತನ್ನ ಅಂತರಂಗದಂತೆ ತನ್ನ ಬಹಿರ್ + ಅಂಗವಾದ ವಿಶ್ವದಲ್ಲಿಯೂ ತಾನು – ಚೆನ್ನರಾಮನನ್ನು ಹಬ್ಬಿಸಿ, ಒಂದು ದೇಹ – ಪ್ರಾಣ ಎಂಬ ಸೀಮೆಯನ್ನು ಉಲ್ಲಂಘಿಸಿ, ತಾನು – ಚೆನ್ನರಾಮ ವಿಶ್ವಪ್ರಾಣಿಯಾಗಿ, ಮತ್ತೆ ಮುಂದೆ ವಿಶ್ವಪ್ರಪಂಚದ ಲಯ ಗಮನಸ್ಥಲವಾದ ಲಿಂಗಪ್ರಾಣಿಯಾಗಿ ನಿಲ್ಲಬೇಕೆಂಬ ಹವಣಿಕೆಯಲ್ಲಿದ್ದಾನೆ ಎಂಬ ಮಾತು ನನ್ನ ನಿಮ್ಮ ಗಭೀರ ಉನ್ನತ ವಿಶಾಲವಾದ ನಿದಿಧ್ಯಾಸಕ್ಕೆ ನಿಲುಕುವುದೆಂದು ನನ್ನ ವಿಚಾರ. ಶೂನ್ಯಸಂಪಾದನೆಯಲ್ಲಿ ಬರುವ 'ಪರಮ ಪರತತ್ತ್ವ...ಗಗನ ಸ್ಥಾನವೆ ಕಂಥೆ, ಆಕಾಶವೆ ಒಪ್ಪರ, ಅಜಾಂಡ ಬ್ರಹ್ಮಾಂಡವೆ ಕರ್ಣಕುಂಡಲ...'[೧] ಎಂಬ ಅಲ್ಲಮ ಪ್ರಭುದೇವರ ಪರಬಹ್ಮ ನಿಲವನ್ನು ಗಭೀರವಾಗಿ ನೋಡಿದರೆ, ಮಾನವಪಿಂಡದ ಮರೆಯ ಬ್ರಹ್ಮಬೀಜ ಮಾನವನನ್ನು ಭೇದಿಸಿ ಮೊಳಕೆಯೊಡೆದು, ವಿಶ್ವವ್ಯಾಪಿಯಾಗಿ ಹಬ್ಬಿ, ವಿಶ್ವಾತೀತವಾಗಿ ನಿಲ್ಲುವ ಬಗೆ ಮಸುಮಸುಕಾಗಿ ಕಾಣುವಂತಿದೆ. ಮರಣವನ್ನು ಗೆಲ್ಲುವ ರಹಸ್ಯವೂ ಇಲ್ಲಿ ಹುದುಗಿದಂತಿದೆ. ಕತ್ತಲೆಯನ್ನು ದಾಟಿ ಬೆಳಗಿನ ಪರಮವಿಸ್ತಾರದಲ್ಲಿ ನಿಲ್ಲುವ ಗೋಪ್ಯ ಇಲ್ಲಿ ದೊರೆವಂತಿದೆ. ಅಸತ್ತಿನ ಮೇರೆಯನ್ನು ಮೀರಿ ಸತ್ತಿನ ಸೀಮೆಯಲ್ಲಿ ನಿತ್ಯವಾಗಿ, ಪರಿಪೂರ್ಣವಾಗಿ, ಅಖಂಡವಾಗಿ ಇರುವ ಮಹಾಕೀಲ ಇಲ್ಲಿ ಅವಿತಂತೆ ಇದೆ. ಮಾನವ

೧. ಶೂ. ಸಂ. ಪು. ೨೧-೨೨, ವ. ೭೫.

ಘಟದಲ್ಲಿ ಮೂರ್ತವಾಗಿರುವ ಚಿದಾಕಾಶ ವಿಶ್ವಮಠದಲ್ಲಿ ವಿರಮಿಸುತ್ತಿರುವ ಚಿದಾಕಾಶ ವಾಗಿ ಹಬ್ಬಿ, ವಿಶ್ವಪ್ರಪಂಚವೆಂಬ ಪಟವೆ ಹಾರಾಡುತ್ತಿರುವ ಅರಿವಿನ ಮಹಾಬಯಲಾಗಿ ನಿಲ್ಲುವ ಮಹಾಸಾಹಸ ನಡೆದಿದೆ ಈ ಮಾಯಾವಿಲಾಸವಿಡಂಬನಸ್ಥಲದಲ್ಲಿ.

ರಾಮಕೃಷ್ಣ ಪರಮಹಂಸರು ಬ್ರಹ್ಮಜ್ಞಾನದ ಅಜ್ಞಾನದಲ್ಲಿದ್ದ ಒಬ್ಬ ಶಿಷ್ಯನಿಗೆ ಬೋಧಿಸಿದ ಲೋಕನೀತಿಯ ಕಥೆಯೊಂದು ಇಲ್ಲಿ ನನಗೆ ನೆನಪಾಗುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ,' 'ಅಹಂ ಬ್ರಹ್ಮಾಸ್ಮಿ' ಎಂಬ ತಾತ್ತ್ವಿಕ ವಿಚಾರವನ್ನು ಪರಮಹಂಸ ರಲ್ಲಿ ಕೇಳಿದ ಶಿಷ್ಯ, ಬ್ರಹ್ಮದ 'ಗುಂಗಿ'ನಲ್ಲಿ ಹಾದಿ ಹಿಡಿದು ನಡೆದಿರುವಾಗ, ಎದುರಿಗೆ ಒಂದು ಆನೆ ಬಂತು. ಆನೆಯ ಮೇಲಿದ್ದ ಮಾವುತ ಕೂಗಿದರೂ ಮುಂದಿಟ್ಟ ಹೆಜ್ಜೆ ಹಿಂದಿಡಲಿಲ್ಲ ಶಿಷ್ಯ. ಸೊಂಡಿಲಿನಿಂದ ಈ 'ಕ್ಷುದ್ರಜಂತು'ವನ್ನು ಬಿಗಿದು ಆಚೆ ತೂರಿತು ಆನೆ. ತಲೆಯೊಡೆದು, ಮೈ ಕೈ ಕೆತ್ತಿ ನೋವಾಗಿ, ನರಳುತ್ತ ಬಂದ ಶಿಷ್ಯ ಪರಮಹಂಸರ ಬಳಿ. ಇದೇನು ಎಂದು ಅವರು ಕೇಳಿದರೆ, 'ಹಾದಿ ಹಿಡಿದು ನಡೆದಿದ್ದ ನಾನುಬ್ರಹ್ಮ, ಎದುರಿಗೆ ಬರುತ್ತಿದ್ದ ಆನೆಬ್ರಹ್ಮ. ಅದ್ವೈತಬ್ರಹ್ಮ ತನಗೆ ತಾನೇ ಏನು ಮಾಡೀತು ಎಂದು ನಿಮ್ಮ ಬೋಧೆಯ ಸೆರಗನ್ನು ಹಿಡಿದು ಹಾಗೆಯೆ ನಡೆದೆ. ಸರಿ ಸರಿ ಎಂದು ಮಾವುತ ಕೂಗಿದ. ಸರಿಯಲಿಲ್ಲ ನಾನು. ಆನೆ – ಬ್ರಹ್ಮ ನಾನು – ಬ್ರಹ್ಮವನ್ನು ಎಳ್ಳಷ್ಟು ಲೆಕ್ಕಿಸದೆ ಹೀಗೆ ಮಾಡಿತು. ನಿಮ್ಮ ಅಧ್ಯಾತ್ಮಬೋಧೆಯನ್ನು ಪ್ರಯೋಗ ದಲ್ಲಿ ತರಬೇಕೆಂದರೆ ಈ ಗತಿಯೇ?' – ಎಂದು ದೂರಿಕೊಂಡ. 'ಆನೆ ಬ್ರಹ್ಮ, ನೀನೂ ಬ್ರಹ್ಮ, ನಿಜ. ಆದರೆ ಮಾವುತ – ಬ್ರಹ್ಮವನ್ನು ನೀನು – ಬ್ರಹ್ಮ ಏಕೆ ಲೆಕ್ಕಿಸಲಿಲ್ಲ? ಅದರಂತೆ ಆನೆ – ಬ್ರಹ್ಮ ನೀನು – ಬ್ರಹ್ಮವನ್ನು ಲೆಕ್ಕಿಸದಿದ್ದರೆ ತಪ್ಪೇನು?' – ಎಂದು ಹೇಳಿ 'ಬಳಸದಿರದ್ವೈತವನು ಬಾಹ್ಯದಲ್ಲಿ ನಿನ್ನೊಳಗೇಕೋ ಭಾವನೆಯೊಡಗೂಡು'[೧] – ಎಂಬ ದ್ವೈತಾದ್ವೈತ ಜೀವನದ ನೀತಿಯ ಆವಶ್ಯಕತೆಯನ್ನು ಬೋಧಿಸಿ, 'ನಾನು ಬ್ರಹ್ಮ, ನೀನು ಬ್ರಹ್ಮ, ಅವ ಅದು ಬ್ರಹ್ಮ, ಎಲ್ಲಾ ಬ್ರಹ್ಮ' – ಎಂಬುದರ ಹೃದಯವನ್ನು ತೋರಿದರು ಪರಮಹಂಸರು ಶಿಷ್ಯನಿಗೆ. ಈ ಕಥೆಯ ಶಿಷ್ಯ ಬ್ರಹ್ಮಜ್ಞಾನಿ ಹೌದೋ ಅಲ್ಲವೋ ನನಗೆ ಗೊತ್ತಿಲ್ಲ. ಬ್ರಹ್ಮಜ್ಞಾನಿ ಆಗಿದ್ದರೂ, ದ್ವೈತಪ್ರಪಂಚದ ಮಾಯಾ ಶಕ್ತಿಯ ವಿಲಾಸವನ್ನು ಈ ಶಿಷ್ಯ ಕಂಡೇ ಇರಲಿಲ್ಲವೆಂದು ನನ್ನ ವಿಚಾರ. ಕಂಡಿದ್ದರೆ ಹೀಗೇಕೆ ವರ್ತಿಸುತ್ತಿದ್ದ? ಎಂಬುದು ನನ್ನ ಪ್ರಶ್ನೆ. ತನ್ನ ನಿಜಸ್ವರೂಪದಲ್ಲಿ ಆನೆ ಬ್ರಹ್ಮ, ನಿಜ. ಆದರೆ ಪಂಕದಲ್ಲಿ ಬಿದ್ದು ಮೇಲಕ್ಕೆ ಎಂದೂ ಏಳಲಾರದ ಬಡಪಶು ಶಿಷ್ಯನನ್ನು ಕಿತ್ತು ಎಸೆದ ಆ ಆನೆ. ಅದು ಹೇಗೆ ಎಂದು ಕೇಳುವಿರಾ?

ಆನೆತನದ ಪ್ರಕೃತಿಯ ಕುಂಭದಲ್ಲಿ ಅಥವಾ ದ್ವೈತಭಾವದ ಪ್ರಪಂಚದ ಪಂಕದಲ್ಲಿ ಸಿಕ್ಕ ಆನೆ, ಪಾಪ! ಮೇಲಕ್ಕೆ ಹೇಗೆ ಕಿತ್ತು ಬಂದೀತು? ಆನೆಯ ಅಹಂಪ್ರಜ್ಞೆ ಆನೆಯಾಕಾರದಲ್ಲಿ ಭದ್ರವಾಗಿ ಕುಳಿತಿದೆ. ಇಲ್ಲಿ ಹೀಗೆ ಈ ಪ್ರಜ್ಞೆ ಚಲಿಸಬಾರದಂತೆ ಗಟ್ಟಿಯಾಗಿ ಕುಳ್ಳಿರಿಸಿರುವುದೇ ಮಾಯಾಶಕ್ತಿ. ಶಕ್ತಿಯ ಈ ಮಾಯಾಗ್ರಂಥಿಯನ್ನು, ಮಾಯಾಪಾಶವನ್ನು, ಮಾಯಾಬಂಧನವನ್ನು, ಮಾಯಾಮೋಹವನ್ನು ಹರಿದು ಬ್ರಹ್ಮ-

೧. ವೇ. ಗ್ರಂ. ಪು. ೭, ಕೈ. ಪ., ಶಿ. ಸ್ಥ., ಪ. ೧.

ಪ್ರಜ್ಞೆಗೆ ಏಳುವ ಶಕ್ತಿ ಆ ಗಜರಾಜನಿಗೆ ಇಲ್ಲ. ಮೇಲುಮಟ್ಟದ ಪ್ರಜ್ಞಾಶಕ್ತಿಯುಳ್ಳ ಮಾನವನೇ ತನ್ನ ಮಾನವತನವನ್ನು ಬಿಟ್ಟೇಳಲಾರನೆಂದ ಬಳಿಕ, ಪಶುಪ್ರಜ್ಞೆಯ ಗಜದ ಗತಿಯೇನು? ಅಣು ಮೊದಲು ಆನೆ ಕಡೆಯಾಗಿ ಎಲ್ಲ ಜಡಭೂತ, ಎಲ್ಲ ಪ್ರಾಣಿಗಳ ಗತಿ ಇದೇ ಗತಿ, ಮಾಯಾಬದ್ಧವಾದ ಅಧೋಗತಿ. ಹರಿ ಎದೆಯ ಮೆಟ್ಟಿದ ಮಾಯೆ ಕರಿ ಎದೆಯನ್ನು ಬಿಟ್ಟಾಳೆ? ಆದರೆ ಮಾನವರಲ್ಲಿ, ಮಾನವಕೋಟಿಯಲ್ಲಿ 'ಕಶ್ಚಿದ್ಧೀರ' ಈ ಮಹಾಸಾಹಸವನ್ನು ಮಾಡಿ, ಬ್ರಹ್ಮಪ್ರಜ್ಞೆಯಲ್ಲಿ ನಿಂದು ವಿರಾಟ್‌ಪುರುಷನಾಗಿ, ನಿಜದ ನಿರಾಳವಾಗಿ ನಿಲ್ಲಬಲ್ಲ.

ಸಂಸಾರಹೇಯ ಮತ್ತು ಮಾಯಾವಿಲಾಸವಿಡಂಬನ ಸ್ಥಲಗಳನ್ನು ನೋಡಿಕೊಂಡು ನಾವು ಮುಂದೆ ನಡೆದರೆ, ಗುರುಕರುಣಸ್ಥಲಕ್ಕೆ ಬಂದು ಮುಟ್ಟುತ್ತೇವೆ. ತನ್ನ ಮರೆಯಲ್ಲಿ ಹೊಳಿದ್ದ ತನ್ನ ನಿಜಸ್ವರೂಪದ ನಿಧಾನ ಕುರುಹುದೋರಿದೆ ಪಿಂಡಜ್ಞಾನಿಯಲ್ಲಿ. ತನ್ನನ್ನು ಸುತ್ತಿದ ಸಂಸಾರ – ಮಾಯಾವಿಲಾಸವನ್ನು ನಿವೃತ್ತಿಮಾಡಿದ ಈ ಆತ್ಮ – ಜ್ಞಾನಿ ಶರಣ ಬರಿಯ ಜ್ಞಾನದಿಂದ ತನ್ನ ತಾನೇ ಮೇಲಕ್ಕೆ ಎತ್ತಿಕೊಳ್ಳಲಾರ. 'ಮಮ ಮಾಯಾವಿಮೋಹಿತ'ನಾಗಿ ದೇಹದೊಡನೆ, ದೇಹಸಂಸಾರದೊಡನೆ ಸಮರಸವಾಗಿ, ಹಗಲು ಇರುಳು ಎನ್ನದೆ ವಿಷಯಪ್ರಪಂಚದತ್ತ ಹರಿಯುತ್ತಿರುವ ಮಾನವನ ಅರಿವಿಗೆ ತನ್ನ ನಿಜದಿರವಿನ ಅರಿವಾದರೂ, ಅದಕ್ಕೆ ಲೆಪ್ಪವಾದ ದೇಹ ಪ್ರಾಣ ಕರಣಾದಿಗಳ ವಾಸನೆ, ಆ ದೇಹಸಂಸಾರದ ಅಜ್ಞಾನಪ್ರವೃತ್ತಿ ಒಮ್ಮೆಲೆ ಹೇಗೆ ಬಿಟ್ಟಾವು ಅದರ ಸಂಬಂಧ, ಅದರ ಸಂಗವನ್ನು? ಕಲ್ಲಿಗೆ ಹತ್ತಿದ ಕಠಿಣವನ್ನು ತೊಳೆವ ಉಪಾಯವೇನು? ಕಪಿಗೆ ಗಂಟು ಬಿದ್ದಿರುವ ಚಂಚಲವನ್ನು 'ಘಟಸ್ಫೋಟ' ಮಾಡಬೇಕಾದರೆ ಎಂಥ ಸಾಮರ್ಥ್ಯ ಬೇಕು? ನನ್ನ ಅರಿವನ್ನು ಅಂದರೆ ನನ್ನನ್ನು ಬೇಕಾದರೆ ಮೂಸಿ ನೋಡಿ. ಯಾವ ವಾಸನೆ ಬರುತ್ತದೆ ನಿಮಗೆ? ನನ್ನ ದೇಹ, ಅಲ್ಲಿ ತುಂಬಿ ತುಳುಕುತ್ತಿರುವ ಆಸೆ ಅಹಂಭಾವ ಹಸಿವು ತೃಷೆ, ವಿಷಯ ಭೋಗಾದಿಗಳೆ ನನ್ನ ಗಂಧದ ವಾಸನೆಯಲ್ಲವೆ? ನಿಸರ್ಗದ ನಿಯಮಕ್ಕೆ ಅಧೀನವಾಗಿ, ಅಧೋಮುಖವಾಗಿ ವಿಷಯ ಪ್ರಪಂಚದತ್ತ ಧುಮ್ಮಿಕ್ಕುತ್ತಿರುವ ದೇಹ ಪ್ರಾಣ ಇಂದ್ರಿಯ ಮನ ಬುದ್ಧಿ ಭಾವಗಳ ಅಧಃಪ್ರವೃತ್ತಿಯನ್ನು ಬಿಡಿಸಿ ತಿದ್ದಿ ಮೇಲುಗಡೆಗೆ, ದಿವ್ಯದತ್ತ ಹೊರಳಿಸುವ ಸಾಮರ್ಥ್ಯ ಸಾಮಾನ್ಯವಲ್ಲ. ತನಗೆ ಅಸಾಧ್ಯ ಅಥವಾ ದುಸ್ಸಾಧ್ಯವಾದ ಈ ಮಹಾಕಾರ್ಯವನ್ನು ಸಾಧಿಸಲು ಸದ್ಗುರುವಿನೆಡೆಗೆ ಬರಬೇಕು, ಆತನ ದಿವ್ಯಾನುಗ್ರಹವನ್ನು ಪಡೆಯಬೇಕು. ತನಗೆ ನೀಗದ ಈ ಕಾರ್ಯ ಗುರುಕಾರುಣ್ಯದಿಂದ ಸಲೀಲವಾಗಿ, ಸಾಂಗವಾಗಿ ಮಂಗಲವಾಗುತ್ತದೆ. ಇದೋ, ಇಲ್ಲಿ ಕೇಳಿ ಕಲ್ಲಮಠದ ಪ್ರಭುದೇವರ ಅನುಭವವನ್ನು:

'ಜ್ಞಾನೋದಯದಿಂದ ತನ್ನ ನಿಜವ ತಾನಱಿದು ಬ್ರಹ್ಮವಾದೆನೆಂಬಡೆ ಸಾಧ್ಯವಾಗದು. ಅದೇಕಯ್ಯಾ ಎಂದಡೆ: ದೇಹವಾಸನೆ ತನ್ನಾಧೀನದಲ್ಲಿ ಹಿಂಗಿ ಹೋಗದಾಗಿ, ಅದು ಶಿವಾಧೀನದಲ್ಲಿಪ್ಪುದಾಗಿ, ಸ್ವಯಾಧೀನ ಮುಕ್ತಿ ಆರಿಗೂ ಇಲ್ಲ. ಮತ್ತೆಂತೆಂದಡೆ: ಜ್ಞಾನೋದಯವಾದ ಬಳಿಕ ಗುರುವಚನಪ್ರಮಾಣವಿಡಿದು,

ಪರಬ್ರಹ್ಮವು ಗುರು ಲಿಂಗ ಜಂಗಮ ಪ್ರಸಾದ ಸ್ವರೂಪಾಗಿಪ್ಪುದೆಂದಱಿದು,
ತನು ಮನ ಪ್ರಾಣಂಗಳ ನಿವೇದಿಸಿ, ತನ್ನ ನಿಜವ ಕೂಡುವ ವರ್ಮವ ಗುರುಮುಖ
ದಿಂದಲ್ಲದೆ ಸಾಧ್ಯವಲ್ಲ.'[೧]

ಮತ್ತೂ ಬೇಕಾದರೆ ಷಣ್ಮುಖಸ್ವಾಮಿಗಳನ್ನು ಕೇಳಿ:

ಗುರುವಚನದಿಂದಲ್ಲದೆ ಭವಪಾಶ ಹರಿಯದು.
ಗುರುವಚನದಿಂದಲ್ಲದೆ ಜಾತಿಭೇದ ಮಾಣದು.
ಗುರುವಚನದಿಂದಲ್ಲದೆ ಸೂತಕ ಪಾತಕಂಗಳು ಕೆಡದಿಹವು.
ಗುರುವಚನದಿಂದಲ್ಲದೆ ಅಂಗ ಮನ ಪ್ರಾಣಂಗಳು ಶುದ್ಧವಾಗಲರಿಯವು.
ಗುರುವಚನದಿಂದಲ್ಲದೆ ಲಿಂಗಕ್ಕೆ ಕಳೆ ವೇಧಿಸದು.
ಗುರುವಚನದಿಂದಲ್ಲದೆ ಸದ್ಭಕ್ತಿ ನೆಲೆಗೊಳ್ಳದು.
ಗುರುವಚನದಿಂದಲ್ಲದೆ ನಿಜಮುಕ್ತಿ ಕಾಣಬಾರದು.
ಇದು ಕಾರಣ, ಗುರು ಮುಟ್ಟಿ ಗುರುವಾದ ಪರಮಶರಣರ ಚರಣಕ್ಕೆ
ಶರಣು ಶರಣೆಂಬೆನಯ್ಯಾ ಅಖಂಡೇಶ್ವರಾ.[೨]

ಮಾನವನ ಅಜ್ಞಾನ ಅಹಂಭಾವದ ಮಾಯಾಜಾಲದಲ್ಲಿ ಮೂಡಿ ವಿಲಾಸ ಮಾಡುತ್ತಿರುವ ಭವ ಮರಣದ ಬಂಧನ, ವರ್ಣ ಜಾತಿ ಕುಲ ಗೋತ್ರ ಸೂತ್ರ ಬಗೆ ಬೆಡಗು ದೇಶ ವಂಶ ಜನಾಂಗವೆಂಬ ಲೆಕ್ಕಗೆಟ್ಟ ಭೇದಭಾವ, ಹೊಲೆ ಮೈಲಿಗೆ ಎಂಜಲ ಅಶುದ್ಧ ಕಲ್ಮಷ ದುಷ್ಕರ್ಮ ದುರಾಚಾರ ಪಾಪ ಮಹಾಪಾಪಗಳ ರಾಶಿ ರಾಶಿ, ಮತ್ತೆ ದೇಹ ಪ್ರಾಣ ಮನ ಭಾವ ಬುದ್ಧಿಯಲ್ಲಿ ತುಂಬಿದ ದುರ್ಬುದ್ಧಿ ದುರ್ಭಾವ, ದುಷ್ಟಸಂಕಲ್ಪ ಪಶುಭಾವದ ಪ್ರವೃತ್ತಿ, ಇವೆಲ್ಲ ಕೂಡಿ ಹಡೆದ ವಿಷಯಸಂಸಾರವಾರಾಶಿ – ಇವನ್ನೆಲ್ಲ ತನ್ನಿಂದ ಕಿತ್ತೊಗೆದು ತಾನು ಅನಿರ್ಬಂಧನಾಗಿ ನಿರ್ಮಲ ನಿಸ್ಸೂತಕನಾಗಿ, ನಿಷ್ಕಲ್ಮಷ ನಿಷ್ಪಾಪನಾಗಿ ನಿಲ್ಲುವ ಸಾಮರ್ಥ್ಯ ಜ್ಞಾನೋದಯವಾದ ಮಾನವನಿಗೂ ಇಲ್ಲ. ಈ ಶಕ್ತಿ ಸ್ವಯಾಧೀನ ಅಲ್ಲ, ಶಿವಾಧೀನ. ಆದರೂ ಈ ಶಿವ ಮತ್ತು ಸ್ವಯ ಅತ್ಯಂತ ಭಿನ್ನವೆಂದು ಭಾವಿಸಲು ಯಾವ ಕಾರಣವೂ ಇಲ್ಲ. ಸ್ವಯ, ಅಂದರೆ ತನ್ನ ಮರೆಯ ನಿಧಾನವೇ ಶಿವ ಎಂಬ ಮಾತನ್ನು ನಾವೆಂದೂ ಮರೆಯಲಾಗದು.

ತನಗೆ ನೀಗದ ಕೆಲಸವನ್ನು ನೀಗಿಸಬಲ್ಲ ಗುರುವಿನೆಡೆಗೆ ಬರುತ್ತಾನೆ, 'ಸದುಗತಿಯಾಶೆಯೊಳುರಿ'ಯುತ್ತಿರುವ ಶುದ್ಧಜೀವ. 'ಶಿವಪಥವನರಿವರೆ ಗುರುಪಥವೆ ಮೊದಲು,' ಎಂಬ ಬಸವಣ್ಣನವರ ಮಾತು ನಿಮಗೆ ಗೊತ್ತಿರಬಹುದು. ಮೊದಲು ಗುರುಮಾರ್ಗ ಹಿಡಿದು ನಡೆದರೆ ಮುಂದೆ ಆ ಗುರುನಾಥ ತೋರುತ್ತಾನೆ ಶಿವನಲ್ಲಿಗೆ ಕೊಂಡೊಯ್ವ ಶಿವಮಾರ್ಗವನ್ನು. ವಿಷಯಸಂಸಾರಸಾಗರದಲ್ಲಿ, ತನ್ನ ತಾ ಕಾಣಬಾರದ ಅಜ್ಞಾನದ ವಿಚಿತ್ರ ಕತ್ತಲೆಯಲ್ಲಿ, ನಖ ಶಿಖಾಂತ ತುಂಬಿರುವ ಅವಗುಣದ

---

೧. ಲಿಂ. ಲೀ. ವಿ. ಚಾ. ಪು. ೧೧೪, ವ. ೪೨ ಟೀಕು.
೨. ಅಖಂ. ವ. ಪು. ೧೫, ವ. ೩.

ಅತಿಘೋರ ಅರಣ್ಯದಲ್ಲಿ ಹೊಲಬುದಪ್ಪಿ. ಗತಿಗೆಟ್ಟು, ಮತಿ ಮಸುಳಿಸಿ ಅಯ್ಯೋ ಎಂದು ಹುಯ್ಯಲಿಡುತ್ತ ಬಂದ ಸಂಸಾರದ ಕೂಸನ್ನೆತ್ತಿ, ತಲೆದಡವಿ, ಮೂರ್ಧ್ನಿಘ್ರಾಣ ಮಾಡಿ. ಅಂಗಾಂಗವನ್ನೆಲ್ಲ ನೇವರಿಸಿ, 'ತೊಳಲಿ ಬಳಲಿದೆ ಮಗೂ !' – ಎಂದು ಹೃದಯ ಕರಗಿ ಭಾವ ಕರುಣರಸವಾಗಿ, ಬಂದ ಕೂಸು ತನ್ನವನಿವನೆಂದರಿದು ಮೇಲಕ್ಕೆತ್ತಿಕೊಂಡು, ಹಿಂದ ಬಿಡಿಸಿ ಮುಂಡೆ ಮಾರ್ಗಕ್ಕೆ ಹಚ್ಚುವಾತ 'ಕರುಣರಸದ ಕೋಡಿವರಿವ ಕಟಾಕ್ಷದ, ಪರತತ್ವವರುಪುವಾಲಾಪದ, ವರಪುಣ್ಯಮಯ ಶರೀರದ ನಿರಾಭಾರಿ ಸದ್ಗುರು.'[೧]

ಇಂಥ ಸದ್ಗುರು ಬ್ರಹ್ಮ ವಿಷ್ಣು ರುದ್ರ. ವಿಷಮಸಂಸಾರಕ್ಕೆ ಅಲಸಿ. ಆಸತ್ತು ಬೇಸತ್ತು ತನ್ನ ಬಳಿಗೆ ಬಂದ ಶಿಷ್ಯನ ಪೂರ್ವಜನ್ಮವನ್ನು ತೊಡೆದು. ಪುನರ್ಜಾತನನ್ನಾಗಿ ಮಾಡುವ ನವೀನ ಬ್ರಹ್ಮನೀತ; ವಾಯುಪ್ರಾಣಿಯನ್ನು ಕಳೆದು, ಲಿಂಗಪ್ರಾಣಿಯನ್ನಾಗಿ ಮಾಡಿ ರಕ್ಷಿಸುವ ವಿನೂತನ ವಿಷ್ಣುವೀತ; ಶಿಷ್ಯನ ಭೌತಿಕಕಾಯವನ್ನು ನಿರ್ಮಲ ಮಾಡಿ, ಪರಶಿವಲಿಂಗದ ಪರಮಪ್ರಸನ್ನತೆಯನ್ನು ನೆಲೆಗೊಳಿಸಿ. ಅಂಗಕ್ಕೆ ಲಿಂಗವನ್ನು ಯೋಗಿಸಿ, ಲಿಂಗಾಂಗಸಾಮರಸ್ಯದ ಪರಮರಹಸ್ಯವನ್ನು ಬೋಧಿಸಿ, ಮರ್ತ್ಯ ಮಾನವನನ್ನು ಕೊಂದು. ದಿವ್ಯಾಮೃತದಿಂದ ಲಿಂಗದಲ್ಲಿ ಬದುಕಿಸುವ ಕಾಲಕಾಲನೀತ. ಮಾನವಕುಲದ ಹೃದಯಗಂಭೀರದಲ್ಲಿ ಅನಾದಿಕಾಲದಿಂದ ಹರಿಯುತ್ತ ಬಂದಿರುವ ದಿವ್ಯಾಪೇಕ್ಷೆಯನ್ನು ಪೂರೈಸಬಲ್ಲ ಸದ್ಗುರು, ಲೋಕದ ವಿದ್ಯಾಗುರುಗಳಂತೆ ಹಲವು ವಿದ್ಯೆಗಳನ್ನು ಕಲಿಸಿ. 'ಅವಿದ್ಯೆ'ಯಲ್ಲಿಯೆ ಶಿಷ್ಯನ ಕೈಬಿಡುವ ತಾಮಸ ಮೂರ್ತಿಯಲ್ಲ. ಅಪರಾವಿದ್ಯೆಯಲ್ಲಿ ಬಲ್ಲಿದರಾದ ಗುರುಗಳಿಗೂ ನಿಜವಿದ್ಯೆಯನ್ನು ಕರುಣಿಸಿ. ದಿವ್ಯಕ್ಕೆ ಎತ್ತಿ ಉದ್ಧರಿಸಬಲ್ಲ ಈ ಸದ್ಗುರು 'ಜಗದ್ಗುರು.'

> 'ಗು'ಕಾರಸ್ತ್ವಂಧಕಾರಃ ಸ್ಯಾದ್ 'ರು'ಕಾರಸ್ತನ್ನಿರೋಧಕಃ
> ಅಂಧಕಾರಂ ನಿರೋಧಿತ್ವಾತ್ ಗುರುರಿತ್ಯಭಿಧೀಯತೇ[೨] -
>
> ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
> ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ[೩]

ಶಿಷ್ಯನ ಕಣ್ಣು ಮನ ಭಾವವನ್ನು, ಆತನ ಅಂತರಂಗ ಬಹಿರಂಗವನ್ನು, ಆತನ ಆಚಾರ ವಿಚಾರ ಆತನ ಜ್ಞಾನ-ಕ್ರಿಯೆಯನ್ನು, ಆತನನ್ನು, ಆತನ ಸುತ್ತಿರುವ ವಿಶ್ವಪ್ರಪಂಚವನ್ನು ತನುಗತ್ತಲೆಯಿಂದ ಕಂಡು ಕಾಣಬಾರದಂತೆ ಕತ್ತಲಿಸಿರುವ ಅಜ್ಞಾನವನ್ನು ತಡೆದು, ತೆಗೆದು ಕಿತ್ತು ಒಗೆದು, ಅಂತರಂಗಬಹಿರಂಗವೆನ್ನದೆ ಹೊರಗೊಳಗೆ ಎವೆಯಿಕ್ಕದೆ ನೋಡಬಲ್ಲ ಅನಿಮಿಷವಾದ ಶಿವಜ್ಞಾನದೃಷ್ಟಿಯನ್ನು ಶಿಷ್ಯನ ಅರಿವಿನಲ್ಲಿ, ಅದರಂತೆ ಆತನ ಆಚಾರ

---

೧. ವೇ. ಗ್ರಂ., ಪು. ೯೬, ಪ. ಬೋ. ಸೂ. ೧, ಪ. ೫.

೨. ಗ. ಭಾ. ರ. ಪು. ೨೦೬, ವ. ೩ರಲ್ಲಿ ಬಂದಿರುವ ಈ ಶ್ಲೋಕದ ಪಾಠ ಹೀಗಿದೆ:
'ಗು'ಶಬ್ದಸ್ತ್ವಂಧಕಾರಃ ಸ್ಯಾದ್ 'ರು'ಶಬ್ದಸ್ತನ್ನಿರೋಧಕಃ ।
ಅಂಧಕಾರನಿರೋಧೇನ ಗುರುರಿತ್ಯಭಿಧೀಯತೇ ॥

೩. ಲಿಂ. ಲೀ. ವಿ. ಚಾ. ಪು. ೧೦೩, ಗು. ಕ. ಸ್ಥ., ಶ್ಲೋ. ೩.

ದಲ್ಲಿ ಸುಸ್ಥಿರವಾಗಿ ನೆಲೆಗೊಳಿಸಿ, ಭೂತಪಿಂಡವಾದ ಮಾನವಕ್ಷೇತ್ರದಲ್ಲಿ ಶಿವಬೀಜವನ್ನು ಬಿತ್ತುತ್ತಾನೆ ಸಾಕಾರಪರಶಿವನಾದ ಗುರುಮೂರ್ತಿ. ಶ್ರೀಗುರುಕಾರುಣ್ಯವೆಂಬ ಅಮೃತವರ್ಷದಿಂದ ಹದವಾದ ಶಿಷ್ಯನಲ್ಲಿ ಆ ದಿವ್ಯಬೀಜ ಅಂಕುರಿಸಿ ಪಲ್ಲವಿಸಿ, ಶಿಷ್ಯನ ಭಾವ ಬುದ್ಧಿ ಹೃದಯ ಮನ, ಕಣ್ಣು ಕಿವಿ ನಾಲಗೆ ತೊವಲು ಕೈ ಕಾಲುಗಳಲ್ಲೆಲ್ಲ ಹಬ್ಬಿ, ಹೊರಗೆ ಇದಿರಿಟ್ಟು ತೋರುವ ವಿಶ್ವಬ್ರಹ್ಮಾಂಡವನ್ನೆಲ್ಲ ವಿಶ್ವತೋಮುಖವಾಗಿ ವ್ಯಾಪಿಸಿ, ಬೆಳಗುತ್ತ ಬೆಳಗುತ್ತ ಒಳಹೊರಗನೊಂದುಗೂಡಿಸಿ, ಬೆಳೆದು ನಿಲ್ಲುತ್ತದೆ ಮಹಾಂತ ಬ್ರಹ್ಮವೃಕ್ಷವಾಗಿ. ಬೀಜ ಮೊಳೆತು ವೃಕ್ಷವಾದರೆ ಬೀಜದ ಸಿಪ್ಪೆ ತಾನೇ ಕಳಚುವಂತೆ, ಶಿಷ್ಯನ ಮಾನವಪ್ರಕೃತಿಯ ಕೋಶ ತಾನೇ ಉದುರಿ ಬೀಳುತ್ತದೆ; ಉದುರಿ ಬಿದ್ದಂತೆ ಮರ ಎಲ್ಲೆಡೆ ಪಸರಿಸಲು ಹೆಚ್ಚು ಹೆಚ್ಚು ಅನುವಾಗುತ್ತ ಹೋಗುತ್ತದೆ. ಇದೋ ಇಲ್ಲಿ ಕೇಳಿ ಸದ್ಗುರುವಿನಿಂದ ಕರುಣಪ್ರಸಾದವನ್ನು ಪಡೆದ ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭವವನ್ನು:

ಶಿವನೇ ತಾನೆನಗೆ ಗುರುವಾಗಿ ಬಂದು ಎನ್ನ ಸಂಸಾರಸಾಗರವ ದಾಂಟಿಸಿ,
ಅಖಂಡ ಪರಮಚೈತನ್ಯ ಶಿವಲಿಂಗವ ವಿಶ್ವದೊಳಗೆಲ್ಲಿಯೂ ಕಾಂಬಂತೆ ತೋರಿಸಿ,
ವಿಶ್ವವ ಲಿಂಗದೊಳಗೆ ತೋರಿ, ಲಿಂಗವನೆನ್ನಂಗದೊಳಹೊರಗೆ ತೋರಿ,
ಅಂಗವ ಲಿಂಗದೊಳಗಿರಿಸಿ ರಕ್ಷಿಸಿದನಯ್ಯಾ
ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.[೧]

---

೧. ಸ್ವ. ಸಿ. ವ. ಪು. ೧೬. ವ. ೬೩.
ಹೋಲಿಸಿರಿ:

1. ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ,
ಆ ಲಿಂಗದೊಳಗೆ ಎನ್ನ ತೋರಿದ,
ಎನ್ನೊಳಗೆ ತನ್ನ ತೋರಿದ
ಮಹಾಗುರುವಿಂಗೆ ನಮೋ ನಮಃ
ಎಂಬೆನಯ್ಯಾ ಅಖಂಡೇಶ್ವರಾ.

ಅಖಂ. ವ. ಪು. ೧೭, ವ. ೮.

2. ಅಖಂಡಂ ಯೇನ ಚೈತನ್ಯಂ ವ್ಯಜ್ಯತೇ ಸರ್ವವಸ್ತುಷು ।
ಆತ್ಮಯೋಗಪ್ರಭಾವೇನ ಸ ಗುರುರ್ವಿಶ್ವಭಾಸಕಃ ॥

ಸಿ. ಶಿ. ಪು. ೨೧೬, ಪರಿ. ೧೫, ಶ್ಲೋ. ೧೧.

3. ವಸ್ತುವೆಂದೊಡೆ ಪರಬ್ರಹ್ಮದ ನಾಮವು. ಅದು ಹೇಗೆಂದೊಡೆ:
ಹರಿ ಸುರ ಬ್ರಹ್ಮಾದಿಗಳಿಗೆ ಅಗೋಚರವಾಗಿಪ್ಪುದು.
ಸಾಧ್ಯಕ್ಕಸಾಧ್ಯವಾಗಿಪ್ಪುದು; ಭೇದ್ಯಕ್ಕಭೇದ್ಯವಾಗಿಪ್ಪುದು.
ಕೋಟಿ ಸೋಮ ಸೂರ್ಯಪ್ರಕಾಶಕ್ಕೆ ಮಿಗಿಲಾಗಿಪ್ಪುದು.
ಈರೇಳು ಭುವನವ ತುಂಬಿಕೊಂಡಿಪ್ಪುದು.
ಅಪ್ರಮಾಣ ಅಗೋಚರವಾದ ವಸ್ತುವು ಎನ್ನ ಕರ ಮನ ಭಾವದೊಳಗಿಪ್ಪ ಭೇದವ
ತಿಳುಹಿದಾತ ನಮ್ಮ ಶಾಂತಕೂಡಲಸಂಗಮದೇವ.

ಗ. ವೀ. ವ. ಪು. ೫, ವ. ೨.

ಇಲ್ಲಿ ಮತ್ತೊಮ್ಮೆ ದಿಟ್ಟಿಸಿ ನೋಡಬೇಕಾದ ಸಂಗತಿಯೆಂದರೆ, ಶಿವನೇ ಗುರು ಎಂಬುದು, ಅಥವಾ ಗುರುವೇ ಶಿವನೆಂಬುದು. ಇದೆಂಥ 'ನೀಲಿ ಕೆಟ್ಟ ಸುದ್ದಿ' ಎಂದು ನೀವು ಗಾಬರಿಯಾಗಬಹುದು! ಮಾನವಸ್ಥಲದ ಭಾವ ಬುದ್ಧಿಯನ್ನು ಹಾಗೆ ಚಕಿತಗೊಳಿಸುವ ಮಾತೇ ಇದು. ಏಕೆಂದರೆ ಒಂದು ಮಾನವವ್ಯಕ್ತಿಯನ್ನು ದೇವನಿಗೆ, ಮಹಾದೇವನಿಗೆ ಸರಿ ಮಾಡುವುದು ಹೇಗೆ? ಒಂದು ಕುಡಿಕೆಯನ್ನು ಬ್ರಹ್ಮಾಂಡ ಕಟಾಹಕ್ಕೆ, ಒಂದು ಹುತ್ತವನ್ನು ಮಹಾಮೇರುಪರ್ವತಕ್ಕೆ ಸರಿಸಮನೆಂದು ಹೇಳಿದರೆ ನುಂಗುವುದು ಕಷ್ಟ. ಅಲ್ಲವೇ? 'ನೀರಿಟಿಯುವ ಗಂಟಲೊಳ್ ಕಡುಬಂ ತುಱುಕಿದಂತೆ.' ಮತ್ತೆ ಕೇಳಿ ಗುರುಮಹತ್ತ್ವದ ಬ್ರಹ್ಮ ಶ್ಲೋಕಗಳನ್ನು:

ಗುರುದೇವೋ ಮಹಾದೇವೋ ಗುರುದೇವಃ ಸದಾಶಿವಃ
ಗುರುದೈವಾತ್ ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ[೧]

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ[೨]

ನಿರಾಕಾರ ಪರಬ್ರಹ್ಮವೇ ಸಾಕಾರವಾಗಿ, ಪ್ರತ್ಯಕ್ಷ ಪರಬ್ರಹ್ಮವೆನಿಸಿದ ಗುರು. ಮತ್ತೆ ಗುರುದೇವನಿಗಿಂತ ಅಧಿಕವಾದ ದೈವವೊಂದಿಲ್ಲ. ಗುರುವೆ ಪರತತ್ತ್ವ, ಗುರುವೆ ಪರವಸ್ತು, ಗುರುವೆ ಪರಶಿವಮಹಾಲಿಂಗ. ಹೀಗೆ ಗುರುಕಾರುಣ್ಯವನ್ನು ಪಡೆದು ಪರಮ ಪುನೀತರಾದ ಮಹಿಮರಿಂದ ಸದ್ಗುರುವಿನ ಘನಮಹಿಮೆಯನ್ನು ಕೇಳುತ್ತ ಹೋದರೆ, ಅದೊಂದು ಮುಗಿಯಲಿಲ್ಲದ ದಿವ್ಯ ಮಹಾಪುರಾಣವೇ. ಎಲ್ಲ ದೇಶ ಎಲ್ಲ ಕಾಲದ ಶಿಷ್ಯಕೋಟಿಯಿಂದ ಬೆಳೆಯುತ್ತ ಬಂದಿರುವ ಈ ಗುರುಪುರಾಣದ ರಹಸ್ಯವೇನು?

ಮಾನವಜೀವನ ವಿಶ್ವಜೀವನ ದಿವ್ಯಜೀವನದ ಪರಮಾರ್ಥವಾದ ಪರಮ ರಹಸ್ಯವನ್ನು ಕಣ್ಣಾರೆ ಕಂಡು, ಅರಿವಾರೆ ಅನುಭವಿಸಿ, ಅದನ್ನೇ ಕರಣತ್ರಯದಲ್ಲಿ ತುಂಬಿ ಶಿವಾಚಾರವನ್ನು ಸೂಸುತ್ತಿರುವ ಪರಮಾಚಾರ್ಯ, ಪರಮಗುರುವೆಂದರೆ ಹತ್ತರ ಕೂಡೆ ಹನ್ನೊಂದಲ್ಲ. ವಿಶ್ವಬ್ರಹ್ಮಾಂಡಗಳ ಉದಯ ಅಸ್ತಮಾನಕ್ಕೆ ಇಂಬಾಗಿ ಇದ್ದು ಒಳಹೊರಗೆ ಬೆಳಗುವ ಆಗಸಗಡಲಾದ ಮಹಾಲಿಂಗದ ಅಖಂಡ ಪರಂಜ್ಯೋತಿಯಾಗಿ ನಿಂದಿರುವ ಗುರುಮೂರ್ತಿ ಮಾನುಷಾಕಾರದ ಮಹಾಲಿಂಗ, ಗುರುಮೂರ್ತಿಲಿಂಗ.[೩]

---

೧. ಗ. ಭಾ. ರ. ಪು. ೨೦೫, ಪ. ೧. ('ಶಿವರಹಸ್ಯ'ದ ಶ್ಲೋಕವೆಂದು ಉರಿಲಿಂಗಪೆದ್ದಿಯ ವಚನದಲ್ಲಿ ಇದು ಉದ್ಧೃತವಾಗಿದೆ.)

೨. ಮತ್ತೆ ನೋಡಿರಿ:

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರುದೇವಃ ಸದಾಶಿವಃ ।
ನ ಗುರೋರಧಿಕಃ ಕಶ್ಚಿತ್ ತ್ರಿಷು ಲೋಕೇಷು ವಿದ್ಯತೇ ॥

ಯೋ. ಶಿ. ಅ. ೫, ಪಂ. ೫೬.

೩. ನೋಡಿರಿ:

'ದಿಗ್ದೆಸೆಗಳನೊಳಕೊಂಡಿಪ್ಪ ಅಖಂಡ ಚಿತ್‌ಪ್ರಕಾಶವೇ
ಗುರುಮೂರ್ತಿಯಾಗಿ ಬಂದ ಶಿಷ್ಯ ಕಾರಣ......'

ವ. ಶಾ. ಸಾ. ಭಾ. ೨, ಪು. ೪೪೩, ಪ. ೧೮ ಟೀಕು.

ಅಂತೆಯೆ ಈ ಸದ್ಗುರುಮಹಾಲಿಂಗದಲ್ಲಿ ಶಿಷ್ಯನನ್ನು ಲಿಂಗಜ್ಯೋತಿಯಿಂದ ದೀಪಿಸಿ ಪ್ರಜ್ವಲಗೊಳಿಸುವ ದಿವ್ಯಸಾಮರ್ಥ್ಯವಿದೆ. ಅಂತೆಯೆ ಗುರುದೇವ ಲೋಕದಡವಿಯ ಕಾಡುಮರನಲ್ಲ, ದಿವ್ಯಸ್ವರ್ಗದ ಕಲ್ಪವೃಕ್ಷ. ಸಾಮಾನ್ಯ ಧೇನುವಲ್ಲ, ಪರಮಾರ್ಥ ಕಾಮಧೇನು.

'ಶ್ರೀಗುರುವೆ, ನೀನೆ ಶರಣಾಗೆನಗೆ ನಿಜಸುಖದ ಸಾಗರವೆ, ಸಕಲವಿದ್ಯಾಗುಣ ನಿವಾಸ'[೧] – ಎಂದು ಬೇರೆ ಗತಿದೋರದೆ, ತನ್ನನ್ನೆ ಮರೆಹೊಕ್ಕ ಶಿಷ್ಯನ ಅಜ್ಞಾನ ಅಹಂ ಭಾವ, ಮಾಯೆ ಕರ್ಮ, 'ತನುವಿನ ಹುಸಿ' 'ಮನದ ವಿಷಯ' ಸಂಸಾರವನ್ನು ತೊಳೆದು, ಶಿಷ್ಯನ ಸರ್ವಾಂಗವನ್ನು ಸ್ವಚ್ಛ ಮಾಡಿ, ಪರಿಶುದ್ಧ ಮಾಡಿ[೨], 'ಮನೆಯೊಡೆಯ ಕೂಡಲ ಸಂಗಮದೇವ'ನನ್ನು ದೇವರ ಮನೆ ಎನಿಸುವ ಶಿಷ್ಯನ ಸದ್ಭಾವದಲ್ಲಿ, ನಡುಮನೆ ಎನಿಸುವ ಆತನ ಪ್ರಾಣಚೈತನ್ಯದಲ್ಲಿ, ಮನೆಯ ಹೊಸ್ತಿಲು ಎನಿಸುವ ಆತನ ಕಂಗಳಲ್ಲಿ, ಅಲ್ಲಲ್ಲಿ ಕಣ್ಣಾರೆ ಕಾಣಿಸಿ, ಅಗಲಬಾರದಂತೆ ನೆಲೆಗೊಳಿಸುವ ಪರಮಗುರುದೇವ ನಿಜವಾಗಿ ದಿವ್ಯ ಕಾರುಣ್ಯದ ವಾರಾಶಿ. ಈ ಅಪಾರವಾರಾಶಿ ಶಿಷ್ಯನಲ್ಲಿ ಹರಿಯದಿದ್ದರೆ, ಆತನ ಮಾನವತನದ ಸೂತಕವೆಲ್ಲ ತೊಳೆದು ಹೋಗಿ, ಅಲ್ಲಿ ಸಚ್ಚಿದಾನಂದ ನಿತ್ಯ ಪರಿಪೂರ್ಣ ವಾದ ಅಖಂಡ ಪರಂಜ್ಯೋತಿ ಸುಪ್ರತಿಷ್ಠಿತವಾಗುವ ಸಂಭವವೇ ಇಲ್ಲ.

ಕಟ್ಟಿಗೆಯನ್ನು ಹೊಸೆದು, ಕಟ್ಟಿಗೆಯ ಮರೆಯಲ್ಲಿರುವ ಬೆಂಕಿಯ ಕಳೆಯನ್ನು ಹೊರಕ್ಕೆ ತೆಗೆದು, ಅದನ್ನೆ ಕಟ್ಟಿಗೆಗೆ ಜೋಡಿಸಿದರೆ ಮುಂದೆ ಕಟ್ಟಿಗೆಯ ಗತಿಯೇನು? ಬೆಂಕಿಯೆ ಗತಿಯಲ್ಲದೆ ಮತ್ತೆ ಬೇರೆ ಹಾದಿ ಇದೆಯೆ ಕಟ್ಟಿಗೆ ಪಾರಾಗಿ ಹೋಗಲಿಕ್ಕೆ? ಒಳಗೆ ಕಿಚ್ಚು, ಹೊರಗೆ ಕಿಚ್ಚು; ಅದರ ಸರ್ವಾಂಗವೆಲ್ಲ ಕಿಚ್ಚು. ಇದೋ ಹೀಗಿದೆ ಗುರುಕರುಣ! ಇದೋ, ಇಲ್ಲಿ ನೋಡಿ ಬಸವಣ್ಣನವರನ್ನು, 'ಎನ್ನ ಆರಾಧ್ಯ ಕೂಡಲ ಸಂಗಮದೇವ' ಅವರಿಗೆ ಲಿಂಗದ ಬೆಳಗನ್ನು ಮುಡಿಸುವ ಪರಿಯನ್ನು. ಅವರ ಭಾವ

---

೧. ವೇ. ಗ್ರಂ. ಪು. ೪೬, ಕೈ. ಪ. ಯೋ. ಪ್ರ. ಸ್ಥ., ಪ. ೧.

೨. ನೋಡಿರಿ:

1. ಗುರು ಕರುಣಿಸೆ ಬಿಟ್ಟಿತ್ತು ಮಾಯೆ.
ಗುರು ಕರುಣಿಸೆ ಬಿಟ್ಟಿತ್ತು ಮಱವೆ.
ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚು.
ಕೂಡಲಚೆನ್ನಸಂಗಮದೇವಾ, ಗುರು ಕರುಣಿಸೆ ಬಿಟ್ಟಿತ್ತು ಎನ್ನ ಕರ್ಮಪಾಶ.
ಲಿಂ. ಲೀ. ವಿ. ಚಾ. ಪು. ೧೪೧, ವ. ೫೭.

2. ಬಿಸಿಲ ಮುಂದಣ ಮಂಜಿನಂತಾಯಿತ್ತು. ದಿಟದ ಮುಂದಣ ಸಟೆಯಂತಾಯಿತ್ತು.
ಪುಣ್ಯದ ಮುಂದಣ ಪಾಪದಂತಾಯಿತ್ತು. ಯೋಗಿಯ ಮುಂದಣ ಸಂಸಾರದಂತಾಯಿತ್ತು.
ಧೀರನ ಮುಂದಣ ಹೇಡಿಯಂತಾಯಿತ್ತು. ಉರಗನ ಮುಂದಣ ಭೇಕನಂತಾಯಿತ್ತು.
ಹರಿಯ ಮುಂದಣ ಕರಿಯಂತಾಯಿತ್ತು. ವಿವೇಕಿಯ ಮುಂದಣ ದುಃಖದಂತಾಯಿತ್ತು.
ಪುಣ್ಯಾರಣ್ಯದಹನ ಭೀಮೇಶ್ವರನೆಂಬ ಸದ್ಗುರು ಕಾರುಣ್ಯವಾಗಲೊಡನೆ
ಎನ್ನ ಸುತ್ತಿಹ ಪ್ರಪಂಚು ಸರ್ವವೂ ಓಡಿದುವಯ್ಯಾ
ಲಿಂ. ಲೀ. ವಿ. ಚಾ. ಮ. ೧೪೦, ವ. ೫೩.

ಂ

ಮನ ಕಣ್ಣು ಕಿವಿ ಮುಂತಾದ ಅಂಗಾಂಗದೊಳಗೆಲ್ಲ ಚಿಲ್ಲಿಂಗದ ಮಹಾಜ್ಯೋತಿ ಪ್ರಕಾಶವಾಗಿ ಥಳಥಳಿಸುವ ಪರಿಕ್ರಮವನ್ನು:

ಅಯ್ಯಾ, ಎನ್ನ ಹೃದಯದಲ್ಲಿ ನ್ಯಸ್ತವಾಗಿರುವ ಪರಮ ಚಿದ್‌ಬೆಳಗ
ಹಸ್ತಮಸ್ತಕ ಸಂಯೋಗದಿಂದೊಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ !
ಅಯ್ಯಾ, ಎನ್ನ ಮಸ್ತಕದೊಳೊಂದುಗೂಡಿದ ಮಹಾಬೆಳಗ ತಂದು
ಭಾವದೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಭಾವದೊಳಗೆ ಕೂಡಿದ ಮಹಾಬೆಳಗ ತಂದು
ಮನಸ್ಸಿನೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಮನಸ್ಸಿನೊಳು ಕೂಡಿದ ಮಹಾಬೆಳಗ ತಂದು ಎನ್ನ
ಕಂಗಳೊಳಗಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕಂಗಳೊಳು ಕೂಡಿದ ಮಹಾಬೆಳಗ ತಂದು
ಕರಸ್ಥಲದೊಳಿಂಬಿಟ್ಟಿರಲ್ಲಾ !
ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆವುತ್ತಿಪ್ಪ ಅಖಂಡತೇಜವನೆ
ಇಷ್ಟಲಿಂಗವೆಂಬ ದೃಷ್ಟವ ತೋಱಿ, ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ !
ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ
ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ !
ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ,
ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ ![೧]

ಇಲ್ಲಿ ಬಸವಣ್ಣನವರು ಹೇಳುವ ಹೃದಯ, ಶಿಷ್ಯನ ಮಸ್ತಕದ ಸಹಸ್ರದಳಕಮಲವುಳ್ಳ ಬ್ರಹ್ಮರಂಧ್ರಸ್ಥಾನ,[೨] ಇದೇ ಶಿಖಾಗ್ರ. ಇಲ್ಲಿಯೇ ನ್ಯಸ್ತವಾಗಿದೆ ಚಿತ್‌ಕಳೆ. ಇದೇ ತಿಲದ ಮರೆಯ ತೈಲ, ಮುಗಿಲ ಮರೆಯ ಮಿಂಚು, ಕಾಷ್ಠದಲ್ಲಿ ಸನ್ನಿಹಿತವಾಗಿರುವ ಮಂದಾಗ್ನಿ. ಇದನ್ನು ಪ್ರಕಾಶಗೊಳಿಸಿ ತೋರುವಾತನೆ ಗುರುದೇವ. ಈ ಚಿತ್‌ಕಳೆ, ಶಿವಕಳೆ, ಲಿಂಗಕಳೆಯೇ ಬಸವಣ್ಣನವರು ಹೇಳುವ ಚಿದ್‌ಬೆಳಗು. ಮಸ್ತಕದಲ್ಲಿ ನ್ಯಸ್ತವಾಗಿರುವ ಈ ಚಿತ್‌ಕಳೆ, ಈ ಚಿದ್‌ಬೆಳಗು ಹೇಗಿದೆ ಎಂಬುದನ್ನು ನೋಡಿ:

1 ಜ್ವಲತ್‌ಕಾಲಾನಲಾಭಾಭಾ ತಟಿತ್‌ಕೋಟಿಸಮಪ್ರಭಾ
ತಸ್ಯೋರ್ಧ್ವಂ ಚ ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ[೩]

---

೧. ಲಿಂ. ಲೀ. ವಿ. ಚಾ. ಪು. ೧೪೨, ವ. ೫೮.

೨. ಈ ಬ್ರಹ್ಮರಂಧ್ರಸ್ಥಾನದ ವಿಶಾಲ ವರ್ಣನವನ್ನು ನೋಡಿ:
... ಆ ಬ್ರಹ್ಮರಂಧ್ರದ ಸಹಸ್ರಪತ್ರದ ಮಧ್ಯದಲ್ಲಿ ಶತಪತ್ರ. ಆ ಶತಪತ್ರದ ಮಧ್ಯದಲ್ಲಿ ಪಂಚಪತ್ರ. ಆ ಪಂಚಪತ್ರದ ಮಧ್ಯದಲ್ಲಿ ಮಂಡಲತ್ರಯ. ಆ ಮಂಡಲತ್ರಯದ ಮಧ್ಯದಲ್ಲಿ ಪ್ರಣವತ್ರಯ. ಆ ಪ್ರಣವತ್ರಯದ ಮಧ್ಯದಲ್ಲಿ ಪ್ರಣವಪೀಠ. ಆ ಪ್ರಣವಪೀಠದ ಮಧ್ಯದಲ್ಲಿ ಮೂರ್ತಿಗೊಂಡು ಬೆಳಗುವ ಪೂಜ್ಯವಾದ ನಿಷ್ಕಲಬ್ರಹ್ಮವು ...
ಶಿ. ತ್ರಿ. ಮು. ೫೨, ಪ. ೭೧ರ ಟೀಕು.

೩. ಲಿಂ. ಲೀ. ವಿ. ಚಾ ಪು. ೧೦೮, ಶ್ಲೋ. ೮.

ಕಲ್ಲಮಠದ ಪ್ರಭುದೇವರು ಈ ಶ್ಲೋಕದ ಅರ್ಥವನ್ನು ಹೀಗೆ ವಿವರಿಸುತ್ತಾರೆ: ಹೊಳೆವುತ್ತಿರ್ದ ಕಾಲಾಗ್ನಿಯೋಪಾದಿಯ ಕಾಂತಿಯನುಳ್ಳಂಥಾ, ಕೋಟಿ ಮಿಂಚುಗಳಿಗೆ ಸಮಾನವಹ ಪ್ರಭೆಯನುಳ್ಳಂಥಾ, ಜ್ಞಾನಸ್ವರೂಪವಹಂಥಾ, ಸೂಕ್ಷ್ಮವಹಂಥಾ, ಉತ್ತಮವಹಂಥಾ ಕಳೆ ಶಿಖಾಗ್ರದಲ್ಲಿರುತ್ತಿಹುದು.[೧]

2 ...ದೇಹಿಗಳ ಹೃತ್ಕಮಲಮಧ್ಯದಲ್ಲಿ ಕಾಲೂರಿ ನಿಂದು ವಿಶ್ವವಿಲಾಸಿಯಾಗಿ ನೋಡುತ್ತಿಪ್ಪನು ಪರಮ ಚಿತ್ಕಲಾಲಿಂಗವು[೨]...

3 ...ಶ್ರೀಗುರು ಕರುಣಿಸಿ... ಶಿವಕಳೆಯ ಬ್ರಹ್ಮರಂಧ್ರದಲ್ಲಿರ್ದುದ ತಂದು ಕರಸ್ಥಲದಲ್ಲಿರಿಸಿ, ಷಡುಸ್ಥಲ ಲಿಂಗಾಂಗಸಂಬಂಧವ ಮಾಡಿ, ವಾಯುಪ್ರಾಣವ ನಳಿದು ಲಿಂಗಪ್ರಾಣವ ಮಾಡಿದ ಗುರು ಚೆನ್ನಬಸವಣ್ಣನ ಕೃಪೆಯಿಂದ ಬದುಕಿದೆನು[೩]...

4 ಇಪ್ಪತ್ತೈದು ಗ್ರಾಮದೊಳಗೊಪ್ಪಿಪ್ಪ ನಿನ್ನುವನು ।
ಉತ್ತಮಾಂಗಕೆ ತಂದು ಕರಸ್ಥಲದಲಿ ॥
ತತ್ತ್ವ ತುರಿಯಾರ್ಥದಿಂದತ್ತಲಾಗಿಹ ಬ್ರಹ್ಮ ।
ಮತ್ತೆ ನಾ ನೀನಾದೆ ಯೋಗಿನಾಥಾ ॥[೪]

ಟೀ: ಇಪ್ಪತ್ತೈದು ತತ್ತ್ವಸ್ವರೂಪವಾಗಿಪ್ಪ ಶರೀರವೆಂಬುದೇ ಗ್ರಾಮ. ಆ ಗ್ರಾಮದಲ್ಲಿಪ್ಪ ಜೀವನ ಪರಮಚೈತನ್ಯನಾಗಿಪ್ಪ ಶಿವಕಳೆಯ, ಶ್ರೀಗುರು ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ ಮಥನಿಸಿ ತೆಗೆದು ಕರಸ್ಥಲದಲ್ಲಿರಿಸಿದ ಇಷ್ಟಲಿಂಗವೆಂಬ ತತ್ಪದವು ಆತ್ಮನೆಂಬ ಅಂಗವು ಸಂಬಂಧವಾಗಿ ಭೇದವಳಿದ ಅಱಿವಿಂದ ಪರಬ್ರಹ್ಮವಾದೆನು...[೪]

5 ...ಅಂತು ತನ್ನ ಅಂತರಂಗವಾಗಿರ್ದ ತನ್ನ ನಿಜವಪ್ಪ ಚಿತ್ಕಲಾಲಿಂಗವ ಪ್ರತ್ಯಕ್ಷವ ಮಾಡಿ ಕರಸ್ಥಲಕ್ಕೆ ತಂದು, ಆ ಲಿಂಗವ ತನ್ನ ನಿಜವೆಂದು ಭಿನ್ನ ಭಾವವ ಬಿಡಿಸಿ, ಅಂಗವನೆಲ್ಲಾ ಲಿಂಗವ ಮಾಡಿದ ಗುರು ಚೆನ್ನಬಸವಣ್ಣನಿಂದ ಲಿಂಗವಾದೆನಾಗಿ ಇನ್ನು ತನಗೆ ಜನನಮರಣವಿಲ್ಲೆಂದು ಬಸವಣ್ಣ ನುಡಿದ.[೫]

6 ಸದ್ಗುರುಪ್ರಸಾದದಿಂದೊಗೆದ ತಾರಕಬ್ರಹ್ಮದ ಆಖ್ಯಾನವೆಂತೆನೆ: ಆ ತಾರಕ ಬ್ರಹ್ಮವು ನಾದವೆಂದು ಕಲೆಯೆಂದು ಬಿಂದುವೆಂದು ಮೂರುಪ್ರಕಾರಮಪ್ಪುದು.

---

೧. ಲಿಂ. ಲೀ. ವಿ. ಚಾ. ಪು. ೧೦೯, ಶ್ಲೋ. ೮, ಟೀಕು. ೨. ಅದೇ ಪು. ೧೨೬, ವ. ೨೬, ಟೀಕು.
೩. ಅದೇ ,, ಪು. ೧೩೫, ವ. ೩೭, ಟೀಕು. ೪. ಅದೇ ,, ೧೩೭, ವ. ೪೫, ಟೀಕು.
೫. ಅದೇ ,, ಪು, ೧೪೦, ವ. ೫೨, ಟೀಕು.

ಅವರೊಳಗೆ ಆ ಕಲೆಯು ಕಮಲತಂತುವಿನಂತೆ ಪರಮಸೂಕ್ಷ್ಮವಾಗಿ ಪರಿಪೂರ್ಣವಾಗಿ ಹಂಚಿಲ್ಲದೆ ಬ್ರಹ್ಮರಂಧ್ರಸ್ಥಾನದಲ್ಲಿ ದಿವ್ಯಪ್ರಕಾಶದಿಂದಿಹುದು ....[೧]

7 .... ಶ್ರೀಗುರು ಶಿಷ್ಯಂಗೆ ಉಪದೇಶವ ಮಾಡುವ ಕಾಲದಲ್ಲಿ ಆ ಶಿಷ್ಯನ ಸ್ಥೂಲತನು ಸೂಕ್ಷ್ಮತನು ಕಾರಣತನುವೆಂಬ ತನುತ್ರಯಂಗಳಲ್ಲಿ ಮುಸುಕಿದ ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಮಾಯಾಪ್ರಕೃತಿಕಾಯದ ಪೂರ್ವಾಶ್ರಯವನು ಚಿದಗ್ನಿಯಿಂದೆ ಸುಟ್ಟು ಚಿತ್ಕಾಯವೆನಿಸಿ, ಆ ಚಿತ್ಕಾಯಸ್ವರೂಪನಾದ ಶಿಷ್ಯನ ಮಸ್ತಕದ ಮೇಲೆ ಹಸ್ತವನಿರಿಸಿ

ಯಥಾ ಕಲಾ ತಥಾ ಭಾವೋ ಯಥಾ ಭಾವಸ್ತಥಾ ಮನಃ ।
ಯಥಾ ಮನಸ್ತಥಾ ದೃಷ್ಟಿರ್ಯಥಾ ದೃಷ್ಟಿಸ್ತಥಾ ಸ್ಥಲಂ ॥

ಎಂಬಾಗಮೋಕ್ತವಾಗಿ ಆ ಶಿಷ್ಯನ ಪಶ್ಚಿಮದಿಶೆಯಲ್ಲಿ ಬೆಳಗುತಿರ್ದ ನಿತ್ಯ ನಿರಂಜನ ಪರಮಕಳೆಯ ಧ್ಯಾನಿಸಿ ಭಾವಸ್ಥಲಕ್ಕೆ ತಂದು, ಆ ಭಾವಸ್ಥಲದಿಂದೆ ಮನಸ್ಥಲಕ್ಕೆ ತಂದು. ಆ ಮನಸ್ಥಲದಿಂದೆ ದೃಷ್ಟಿಸ್ಥಲಕ್ಕೆ ತಂದು, ಆ ದೃಷ್ಟಿಸ್ಥಲದಿಂದೆ ಕರಸ್ಥಲಕ್ಕೆ ತಂದು ಸಾಕಾರಲಿಂಗಮೂರ್ತಿಯಲ್ಲಿ ತುಂಬಿ ಇಷ್ಟಲಿಂಗವೆನಿಸಿ ಕರಸ್ಥಲದಲ್ಲಿ ಮೂರ್ತಿಗೊಳಿಸಿ ....[೨]

8 ಪಾವನಾತ್ಮಕ ಸುಪುತ್ರನ ಮಸ್ತಕದ ಮೇಲೆ ಗುರು-
ದೇವ ಕರವಾಂತು ಸಾಸಿರದಳದ ಚಿತ್ಕಳೆಯ
ಭಾವಯಿಂ ಮನ ಮನದಿ ನೇತ್ರ ನೇತ್ರಂಗಳಿಂ ತೆಗೆದಿಷ್ಟರೂಪುಗೊಳಿಸಿ
ಶ್ರೀಪಿ ತಚ್ಛಿಷ್ಯನಂಗದ ಮೇಲೆ ಧರಿಸಿ ಸಂ-
ಜೀವ ಷಣ್ಮಂತ್ರಲಿಂಗವಿದೆಂದು ತಿಳುಹಿ ಚಿದ್-
ಭಾವ ಕಳೆಯೊಳಗಿಷ್ಟಲಿಂಗವೇ ತಾನಾದ ಲಿಂಗಭಕ್ತನೆ ಶ್ರೇಷ್ಠನು.[೩]

9 ಆ ಕಳೆಯ ಮಂತ್ರದಿಂ । ದಾಕರಿಸಿ ಭಾವ ಮನ ।
ಜೋಕೆಯಿಂ ನೇತ್ರ ಕರತಳಕೆ ತಂದಿತ್ತ- ।
ನೇಕ ಏವಾತ್ಮ ಗುರುಲಿಂಗ ॥

---

೧. ಅಖಂ. ವ. ಪು ೧೮೫, ವ. ೬೬.
ಮತ್ತೂ ನೋಡಿ: 'ಬ್ರಹ್ಮರಂಧ್ರದ ಕೊನೆಯ ಪರ್ವಾಧಿಪರ್ವವನು ....' ಎಂಬ ಪದ್ಯಕ್ಕೆ ಕಲ್ಲಮಠದ ಪ್ರಭುದೇವರ ಟೀಕನ್ನು:
ಅಖಂಡ ಚಿದ್‌ಬ್ರಹ್ಮದ ಕಲೆಯ ಅಂಶಿಕವೇ ಬ್ರಹ್ಮರಂಧ್ರದಲ್ಲಿರುವ ಸೂಕ್ಷ್ಮ ಚಿತ್‌ಕಳೆ. ಇದೇ ಬ್ರಹ್ಮರಂಧ್ರದ ಕೊನೆಯ ಪರ್ವಾಧಿಪರ್ವ.
ಮಂ. ಗೋ. ಪು. ೪೯, ಪ. ೨೬, ಟೀ. ೧.

೨. ಅಖಂ. ವ. ಪು. ೨೨೬-೨೨೭, ಪ. ೧೪.

೩. ಪ್ರೈ. ಬ. ಕೃ. ಪು. ೨, ಪ. ೪.

ಟೀ. ಹಿಂದೆ ಹೇಳಿದ ನವಚಕ್ರಂಗಳಲ್ಲಿ ಪ್ರಕಾಶಿಸುತ್ತಿರ್ದ ಚಿತ್ಕಳೆಯನು ಷಡಕ್ಷರ ಮಂತ್ರದಿಂದಾಹ್ವಾನಿಸಿ ಭಾವಸ್ಥಲಕ್ಕೆ ಭಾವಲಿಂಗವಾಗಿ ತಂದು, ಮನಸ್ಥಲಕ್ಕೆ ಪ್ರಾಣಲಿಂಗವಾಗಿ ತಂದು, ಸಾವಧಾನದಿಂದೆ ದೃಷ್ಟಿಸ್ಥಲಕ್ಕೆ ಶಿವಲಿಂಗವಾಗಿ ತಂಧು, ಕರಸ್ಥಲಕ್ಕೆ ಇಷ್ಟಲಿಂಗವಾಗಿ ತಂದುಕೊಟ್ಟನು; – ಇಂತು ಕರಸ್ಥಲಕ್ಕೆ ಇಷ್ಟಲಿಂಗವನನುಗ್ರಹಿಸಿ ಕೊಟ್ಟ ಶ್ರೀಗುರುವೇ ಒಂದೇಯಾಗಿರ್ದಂಥ ಪರ ಬ್ರಹ್ಮವು.[೧]

ಸದ್ಗುರುವಿನ ಪರಮಕಾರುಣ್ಯದಿಂದ ಶಿಷ್ಯನ ದೇಹ ಕರಣೇಂದ್ರಿಯಗಳನ್ನು ತೆರಹಿಲ್ಲದೆ ತುಂಬಿರುವ ಪ್ರಕೃತಿ – ಮಾನವ ಸುಟ್ಟು, ಲಿಂಗಶರಣ ಚಿತ್‌ಕಳೆಯಾಗಿ, ಚಿಜ್ಜ್ಯೋತಿಯಾಗಿ ಉದಯವಾಗುತ್ತಾನೆ. ಗುರುವಿನ ಹಸ್ತದಲ್ಲಿ ಉದ್ಭವವಾದ ಈ ಶಿಷ್ಯ, ಶರಣ ಗುರುಪುತ್ರ. ಪ್ರಕೃತಿಪಿಂಡದ ಗುಣ ಧರ್ಮ ಕರ್ಮವಳಿದ ಈ ಚಿದ್ ಬೆಳಗು ಶರಣ, ತಂದೆತಾಯಿ ಹಡೆದ ರಕ್ತಮಾಂಸದ ಶಿಶುವಲ್ಲ; ಗುರುಕಾರುಣ್ಯದ ಶಿಶು. ಮತ್ತು ತನುವಿನ ಹೊಲದಲ್ಲಿ ದಿವ್ಯವನ್ನು ಬಿತ್ತಿ ಬೆಳಗನ್ನು ಬೆಳೆಯುತ್ತಿರುವ ಈ ಗುರುಮೂರ್ತಿ, ಮಾನವಜಾತಿಯ ಕತ್ತಲೆಯನ್ನು ಕಳೆದು ಮಹಾಬೆಳಗಿನ ಸೀಮೆಗೆ, ಮರಣವನ್ನು ದಾಟಿಸಿ ಪರಿಪೂರ್ಣನಿತ್ಯದೆಡೆಗೆ, ಅಸತ್ತಿನ ಗಡಿಯಾಚೆ ಇರುವ ಇರವಿನ ಸಾಮ್ರಾಜ್ಯದಲ್ಲಿ ಇರಿಸುವ 'ಗುರುಃ ಸಾಕ್ಷಾತ್ ಪರಬ್ರಹ್ಮ', ಸಾಕಾರಲಿಂಗದೇವ.

ಸಹಸ್ರದಳಕಮಲದ ಚಿತ್‌ಕಳೆಯನ್ನು ಪ್ರಭಾವಿಸಿ ಭಾವಕ್ಕೆ ತಂದಿಳುಹಿ ಭಾವ ಗೋಚರವೆನಿಸಿ, ಭಾವದಲ್ಲಿ ಸುಸ್ಥಿರವಾಗಿ ನೆಲೆಗೊಳಿಸಿ, ಭಾವದಿಂದ ಮನಕ್ಕೆ ಇಳುಹಿ ಮನಕ್ಕೆ ಪ್ರತ್ಯಕ್ಷಮಾಡಿ ಮನದಲ್ಲಿ ಸ್ಥಾಪಿಸಿ, ಮನದಿಂದ ತಂದು ಕಣ್ಣಿಗೆ ಪ್ರತ್ಯಕ್ಷ ಕಾಣಿಸಿ ಅಲ್ಲಿ ಪ್ರತಿಷ್ಠಾಪಿಸಿ, ಅಲ್ಲಿಂದ ಕರಸ್ಥಲಕ್ಕೆ ಕರೆತಂದು ಇಷ್ಟಲಿಂಗದಲ್ಲಿ ಆ ಕಳೆಯನ್ನೆ ವೇಧಿಸಿ ಕೊಟ್ಟರೆ ಈ ಕರಸ್ಥಲದ ಲಿಂಗ, ತನ್ನ ನಿಜವಾದ ಚಿತ್‌ಕಳೆಯನ್ನು, ತನ್ನ ನಿಜ ಸ್ವರೂಪವನ್ನು ತೋರಿಕೊಡುವ ದಿವ್ಯ ದರ್ಪಣವಾಯ್ತು.[೨] ಅದಿ ಚಿಚ್ಛಕ್ತಿಯಿಂದ ಉದಯಿಸಿದೆನೆಂದು ಅರಿದ ಶರಣ ತನ್ನ ಗಂಭೀರದಲ್ಲಿ ಒಡೆದು ಮೂಡಿದ ಚಿತ್‌ಕಳೆಯನ್ನು ಕರತಲದ ಆಮಲಕದಂತೆ ಕರಸ್ಥಲದಲ್ಲಿ ನೋಡಿ ಕಂಡು ಪೂಜಿಸುವ ಪೂಜೆ ಯಾರಿಗೆ? ಪೂಜಿಸುವ ಪೂಜಕ ಯಾರು?

ಭಾವದ ಮರೆಯ ಶಿವಕಳೆಯನ್ನು ಪ್ರಭಾವಿಸಿ ಕೊಟ್ಟುದೇ ವೇಧಾದೀಕ್ಷೆ; ಅದೇ ಕಳೆಯನ್ನು ಮನಸ್ಥಲದಲ್ಲಿ ನೆಲೆಗೊಳಿಸಿ, ಮನಕ್ಕೆ ಆ ಲಿಂಗಕಳೆಯ ನೆನಹನ್ನು ಸಂಬಂಧಿಸಿ ಕೊಟ್ಟುದೆ ಮಂತ್ರದೀಕ್ಷೆ; ದೃಷ್ಟಿಗೆ ಇಷ್ಟಲಿಂಗವ ಯೋಗಿಸಿ ಕೊಟ್ಟುದೆ ಕ್ರಿಯಾದೀಕ್ಷೆ.

---

೧. ಶೀ. ತ್ರಿ. ಪು. ೪೯-೫೦, ಪ. ೭೫ ಮತ್ತು ಟೀಕು (ಇಲ್ಲಿ ಟೀಕನ್ನು ಸಂಗ್ರಹಿಸಿ ಕೊಟ್ಟಿದೆ)

೨. ನೋಡಿರಿ: ಮುಕುರವನೀಕ್ಷಿಪಂಗನೆಯ ಬುದ್ಧಿಯದೇಂ ವರರೂಪಹಾವಧಾ ।
ವಕಲಿತ ವಿಭ್ರಮಾಪ್ತ ನಿಜಮಂಗಳಮೂರ್ತಿಯನೀಕ್ಷಿಪಲ್ಲಿಘೋ ॥
ಮುಕುರವನೇ ನಿರೀಕ್ಷಿಪೆಡೆಯಲ್ಲಿಯೊ ತನ್ನನೆ ನೋಳ್ಪಳೈಸೆ ಲೈಂ ।
೧೩ ನಿಯಮಾರ್ಚನಾನುಭವದರ್ಪಣದೊಳ್ ಶರಣಂ ಶಿವಾಧವಾ ॥
ಶ. ತ್ರ., ಶಿ. ಶ., ಪು. ೧೮, ಪ. ೨೬

ಈ ತ್ರಿವಿಧ ದೀಕ್ಷೆ[೧] ಎಂದರೆ ತನು ಮನ ಭಾವ ಪಡೆದ ದಿವ್ಯ ಸಂಸ್ಕಾರ. ಸ್ಥೂಲ ಸೂಕ್ಷ್ಮ ಕಾರಣತನುವಿನ ಮಲತ್ರಯವನ್ನು ತೊಳೆದು ಸ್ವಚ್ಛಮಾಡಿ, ಕರ್ಮೇಂದ್ರಿಯ ಜ್ಞಾನೇಂದ್ರಿಯಗಳ ವಿಷಯ ಸಂಸಾರದಲ್ಲಿ ಮುಳುಗಿದ ಅಹಂಭಾವ ಅಜ್ಞಾನ ಮಾಯಾಭ್ರಾಂತಿಯನ್ನು ಕಿತ್ತು ತೆಗೆದು, ಅಲ್ಲಲ್ಲಿ ಗುರುದೇವ ಚಿತ್ಕಳೆಯನ್ನು, ಚಿದ್ಬೆಳಗನ್ನು ಊರಿದರೆ ಶಿಷ್ಯನಲ್ಲಿ ತೋರುವ ಅದ್ಭುತ ಪರಿವರ್ತನೆ ಎಂಥದು! ಭಾವ ಹೃದಯ ನೇತ್ರದಲ್ಲಿ ದೀಪ್ತವಾದ ಕಳೆ ಮೂಗಿನೊಳಗೆ ಬೆಳಗಿದರೆ ಆಚಾರಲಿಂಗ, ನಾಲಗೆಯೊಳಗೆ ಬೆಳಗಿದರೆ ಗುರುಲಿಂಗ, 'ಕಂಗಳಾಲಯದ ಚಿಜ್ಜ್ಯೋತಿ'ಯೇ ಶಿವಲಿಂಗ, ತ್ವಕ್ಕಿನಲ್ಲಿ ಪ್ರಕಾಶವಾದರೆ ಅದೇ ಜಂಗಮಲಿಂಗ, ಕಿವಿಯಲ್ಲಿ ಮುಡಿಸಿದರೆ ಅದೇ ಪ್ರಸಾದಲಿಂಗ; ಇವೆಲ್ಲವನೊಳಕೊಂಡು ಆತ್ಮಾಂಗದಲ್ಲಿ ಥಳಥಳಿಸುವುದೇ ಮಹಾಲಿಂಗ. ಜ್ಞಾನೇಂದ್ರಿಯಗಳಂತೆ ಕರ್ಮೇಂದ್ರಿಯಗಳಿಗೆ, ಅವಕ್ಕೆಲ್ಲ ಮೂಲಭೂತವಾದ ಪೃಥ್ವಿ ಮುಂತಾದ ಪಂಚಭೂತಗಳಿಗೆ ಅದೇ ದೀವಿಗೆ ಹಚ್ಚಿಕೊಡುತ್ತಾನೆ ಗುರುರಾಯ.[೨] ಅಂತೆಯೇ ಶ್ರೀಗುರುವಿನ ಕರಕಮಲದಲ್ಲಿ ಹುಟ್ಟಿದ ಶಿಷ್ಯನ ಜೀವನ ಶಿವಯೋಗಜೀವನ; ಚಿಜ್ಜ್ಯೋತಿಯ ಪ್ರಭೆಯಲ್ಲಿ ನಡೆವ ಪ್ರಕಾಶಜೀವನ; ಶಿವಜ್ಞಾನದಿಂದ ಪ್ರೇರಿತವಾದ ಸುಜ್ಞಾನಜೀವನ; ಲಿಂಗಕ್ಕೆಂದೆ ಮಾಡುವ ಸತ್‌ಕ್ರಿಯಾಜೀವನ. ಈ ಹೊಸ ಜೀವನ, ಮಾನವನಲ್ಲಿ ಮಲಗಿರುವ ಮಹಾಲಿಂಗ ದೇವರೆದ್ದು, ವಿಶ್ವಬ್ರಹ್ಮಾಂಡವನ್ನು ಹೊದ್ದು ಗಾಢಾಂಧಕಾರನಿದ್ರೆಯಲ್ಲಿ ಗೂಢವಾಗಿ ಮಲಗಿರುವ ತನ್ನನ್ನೆ ಎಬ್ಬಿಸಿ, ಲಿಂಗ ಅಂಗ ಎಂಬ ದ್ವೈತಲೀಲೆಯಲ್ಲಿ ತೊಡಗಿದ ರಸಲೀಲೆಯ ಜೀವನ. ಇಂಥ ಶರಣಜೀವನ ನಡೆವ ಜ್ಞಾನ-ಕ್ರಿಯಾ-ಯೋಗ-ಭಕ್ತಿ ಮಾರ್ಗವೇ ಶರಣರು ಹೇಳುವ ಷಟ್‌ಸ್ಥಲಮಾರ್ಗ.

---

೧. ಪರಿಶೀಲಿಸಿರಿ:

ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಂ ।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ ॥
ಸಾ ದೀಕ್ಷಾ ಪರಮಾ ಶೈವೀ ತ್ರಿಧಾ ಭವತಿ ನಿರ್ಮಲಾ ।
ಏಕಾ ವೇಧಾತ್ಮಿಕಾ ಸಾಕ್ಷಾದನ್ಯಾ ಮಂತ್ರಾತ್ಮಿಕಾ ಮತಾ ॥
ಕ್ರಿಯಾತ್ಮಿಕಾ ಪರಾ ಕಾಚಿದೇವಮೇವ ತ್ರಿಧಾ ಭವೇತ್ ।
ಹಸ್ತಮಸ್ತಕಸಂಯೋಗಚ್ಛಲಾದ್ ವೇಧೇತಿ ಗೀಯತೇ ॥
ಗುರುಣೋದೀರಿತಾ ಕರ್ಣೇ ಯಾ ಸಾ ಮಾಂತ್ರೀತಿ ಕಥ್ಯತೇ ।
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾತ್ಮಿಕಾ ॥

ಶಿ. ಸೂ. ಅಧಿ. ೫, ಶ್ಲೋ. ೩೮-೪೧.

೨. ನೋಡಿರಿ:

1 ಘ್ರಾಣಕ್ಕೂ ಗಂಧಕ್ಕೂ ಪೃಥ್ವಿಯೆಂಬ ಮಹಾಭೂತ, ಅಲ್ಲಿ ನಿವೃತ್ತಿಯೆಂಬ ಕಲೆಯಿಹುದು. ಆ ಕಲೆಯಲ್ಲಿ ಕ್ರಿಯಾಶಕ್ತಿಯುಕ್ತವಾದ ಆಚಾರಲಿಂಗವ ಧರಿಸಿದಾತನು ಭಕ್ತನು . . . .

ಸ್ವ. ಸಿ. ವ. ಪು. ೧೮, ವ. ೭೧.

2 ಮಗ್ಗೆಯ ಮಾಯಿದೇವರ ಶಿವಾನುಭವಸೂತ್ರದಲ್ಲಿ ೭ನೆಯ ಅಧಿಕರಣದ ಮೊದಲಲ್ಲಿ ಬರುವ ೧೮ ಶ್ಲೋಕಗಳನ್ನು ಅವಲೋಕಿಸಿರಿ.

೭

ಬೆಳಗೆದ್ದು ಪೂಜೆ

'The power of God is the worship He inspires.'[೧]

A. N. Whitehead.

'The astrolabe of the mysteries of God is love.'[೨]

ಜಲಾಲುದ್ದೀನ್ ರುಮಿ.

'ಪಂಚಮಃ ಪುರುಷಾರ್ಥೋ ಹಿ ಭಕ್ತಿಃ ಶೈವೀ ಸನಾತನೀ.'[೩]

ಮಗ್ಗೆಯ ಮಾಯಿದೇವರು.

'ಎಂತಿರುತಿರ್ದೊಡಂತೆ ಶಿವಪೂಜೆ ಶಿವಾರ್ಪಣವೈಕ್ಯಸಂಪದಂ.'[೪]

ಮಗ್ಗೆಯ ಮಾಯಿದೇವರು.

ಗುರುಕಾರುಣ್ಯಸ್ಥಲದಿಂದ ಮುಂದೆ ನಡೆದರೆ, ಷಟ್ಸ್ಥಲ ಭಕ್ತಿಮಾರ್ಗವನ್ನು ಹಿಡಿದು ನಡೆದಿರುವ ಅಸಂಖ್ಯಾತ ಶರಣರು ನಮ್ಮ ಕಣ್ಣಿಗೆ ಬೀಳುತ್ತಾರೆ. ಈ ಸೀಮೆಯಲ್ಲಿ ಕಾಣಬಹುದು ದಿವ್ಯಜೀವನಯಾತ್ರೆಯ ಮಹಾವೈಭವವಿಲಾಸವನ್ನು. ಸದ್ಗುರು ಕೃಪೆಯಿಂದ ತನ್ನ ನಿಜದ ಗಭೀರವನ್ನು ಭಾವ ಮನಗಳು ಕಣ್ಣಾರೆ ಕಂಡು, ಆ ವಿಶ್ವಗಂಭೀರ ಚಿತ್‌ಕಳೆಯನ್ನೇ ಕರಸ್ಥಲದ ಇಷ್ಟಲಿಂಗದಲ್ಲಿ ಅಂಗದ ಕಂಗಳು ಕಂಡು. ಒಳಗು ಹೊರಗು ಏಕಸೂತ್ರವಾಗಿ ಅನಿಮಿಷ ದೃಷ್ಟಿಯಿಂದ ತನ್ನ ನಿಜವಾದ ಆ ಲಿಂಗಕಳೆಯ ನೋಡುತ್ತ ಪೂಜಿಸುತ್ತ, ತನ್ನ ತಾನರ್ಪಿಸುತ್ತ ತನ್ನ ತಾನನುಭವಿಸುತ್ತ, ತನ್ನ ನಿಜಾನಂದದಲ್ಲಿ ಸಮರಸವಾಗಿ, ಏಕವಾಗಿ ನಿಂದ ನಿಜಶರಣರ ಮಹಾನಿಲವಿನ ಅನುಕ್ರಮವನ್ನು ನಾವಿಲ್ಲಿ ಪ್ರಸ್ಫುಟವಾಗಿ ನೋಡಬಹುದು. ಸ್ಥಲದಿಂದ ಸ್ಥಲಕ್ಕೆ ಹೆಚ್ಚು ಹೆಚ್ಚು ಪ್ರಕಾಶವಾಗಿ ಹೆಚ್ಚು ಹೆಚ್ಚು ನಿರ್ಭರವಾಗಿ ಹೆಚ್ಚು ಹೆಚ್ಚು ನಿರ್ಮಲ ನಿರಹಂಭಾವವಾಗಿ, ಲಿಂಗವಿಸ್ತಾರವಾಗಿ, ಲಿಂಗಗಂಭೀರ ಲಿಂಗೋನ್ನತವಾಗಿ ಲಿಂಗದಲ್ಲಿ ಹಬ್ಬಿ ಲಿಂಗವಾಗಿ ನಿಲ್ಲುವ ಶರಣರ ಪ್ರಾಣರಸ ಭಕ್ತಿ. ಅಧೋಮುಖವಾಗಿ ಹರಿಯುತ್ತಿರುವ ಪ್ರಪಂಚ ಶಕ್ತಿಯಲ್ಲಿ ಮೇಲುಗಡೆ ಮುಖವಾಗಿ ನಿಜದ ನಿರಾಳಕ್ಕೆ ಈಜುತ್ತಿರುವ ಶಿವನ ಶಕ್ತಿಯೇ ಈ ಭಕ್ತಿ. ಶಿವಜ್ಞಾನದ ಪ್ರಭಾತದಲ್ಲಿ ಸದ್ಗುರುವಿನೆಡೆಗೆ ಬಂದ ಶಿಷ್ಯನ ಮಸ್ತಕದಲ್ಲಿ ಹಸ್ತಾಬ್ಜವನಿಳುಹಿ, ಮಥನಿಸಿ ತೆಗೆದು ಆತನ ಕಣ್ಣು ಮನ ಭಾವಕ್ಕೆ ಪ್ರತ್ಯಕ್ಷವ ಮಾಡಿ ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟ ಚಿತ್‌ಕಳೆಯನ್ನು, ಶಿವಕಳೆ ಲಿಂಗಕಳೆಯನ್ನು, ಸಚ್ಚಿ

---

೧. Science And The Modern World. p. 239.

೨. The Perennial Philosophy. p. 95.

೩. ಶಿ. ಸೂ. ಅಧಿ. ೮, ಶ್ಲೋ. ೭೮.

೪. ಶ. ತ್ರ., ಶಿ. ಶ. ಮು. ೪೬, ಪ. ೬೪.

ದಾತ್ಮಕನಾದ ತನ್ನ ಕಳೆಯನ್ನು ನೋಡಿ ಕಂಡು ಪೂಜಿಸುವ ಶಿಷ್ಯ, ಶರಣ ತಾನು ಅದೇ ಚಿಚ್ಛಕ್ತಿಯಿಂದುದಯವಾದೆನೆಂದು 'ಪಿಂಡಜ್ಞಾನಸ್ಥಲ'ದಲ್ಲಿ ತನ್ನ ಮೂಲದ ನಿಜವನರಿದ ಶರಣ. ಅಂತೆಯೆ ಶರಣ ಪೂಜಿಸುವ ಪೂಜೆ ತನ್ನ ಪೂಜೆ. ಶರಣ ಮಾಡುವ ಭಕ್ತಿ ತನ್ನ ನಿಜವಿಸ್ತಾರದೆಡೆಗೆ ಹರಿದು ತನ್ನಲ್ಲಿ ತಾನು ಕೂಡುವ ಭಕ್ತಿ.

ತನ್ನ ತಾನರ್ಚಿಸಿ ಪೂಜಿಸುವ ಈ ಶಿವಾದ್ವೈತಭಕ್ತಿಯು, ಸಹಜ ಭಕ್ತಿಯು, ಈ ಸ್ವಯಂಭುಭಕ್ತಿಯು ಉದಯ ಮಾನವನಲ್ಲಿ ಮೂಡಿದರೆ, ಅದು ಮಹಾದೇವನ ಶಿವಪ್ರಸಾದ. ಶಿವಾನುಗ್ರಹವಿಲ್ಲದೆ ಭಕ್ತಿಯಿಲ್ಲ; ಭಕ್ತಿಯಿಲ್ಲದೆ ಪ್ರಸಾದವಿಲ್ಲ.[೧] ಇದು ಬೀಜ ಅಂಕುರದ ತೊಡಕದ್ದಂತೆ. ಬೀಜವಿಲ್ಲದೆ ವೃಕ್ಷ ಇಲ್ಲ; ವೃಕ್ಷ ಇಲ್ಲದೆ ಬೀಜ ತೋರಲೆ ಇಲ್ಲ. ಈ ತೊಡಕನ್ನು ಹೇಗೋ ಬಗೆಹರಿಸಿ ಬೀಜವೃಕ್ಷವನ್ನು ಹಡೆದಿರುವ ಭೂಮಿಯಂತೆ, ಭಕ್ತಿಪ್ರಸಾದಗಳ ಪರಸ್ಪರ ಕಾರಣ ಕಾರ್ಯಭಾವದ ತೊಡಕನ್ನು ಬಿನ್ನಾಣದಿಂದ ಬಿಚ್ಚಿದೆ ಮಾನವ-ದೇವನ ಹೃದಯ. 'ಹುಚ್ಚು ಬಿಡದೆ ಲಗ್ನ ಇಲ್ಲ, ಲಗ್ನವಾಗದೆ ಹುಚ್ಚು ಬಿಡುವಂತಿಲ್ಲ' – ಎಂಬಿಂತಹ ಜೀವನದ ಸಾವಿರ ಕಗ್ಗಂಟು ಹೇಗೆ ಬಿಚ್ಚುತ್ತವೆ? ಮತ್ತು, ದೇವನನ್ನು ಬಿಟ್ಟು ಮಾನವನೆದೆಯಿಲ್ಲ; ಮಾನವನ ಎದೆಯನ್ನು ಬಿಟ್ಟು ದೇವನೆಂದೂ ಅಗಲಲಾರ. ಆಳವಾಗಿ ನೋಡಿದರೆ, ಎದೆಯಲ್ಲಿ ಮೂಡುವ ಭಕ್ತಿ, ಅದನ್ನು ಮೂಡಿಸುವ ಪ್ರಸಾದಗಳು ಎರಡಲ್ಲ, ಬೇರೆ ಬೇರೆ ಶಕ್ತಿಗಳಲ್ಲ. ಒಂದೇ ಶಕ್ತಿ ಭಕ್ತನ ಹೃದಯದಲ್ಲಿ ಹೊಳೆದು ಭಕ್ತಿ ಎನಿಸಿದರೆ, ಅಲ್ಲಿ ಹೊಳಹುದೋರುವ ಶಕ್ತಿಯೇ, 'ಶಕ್ತಿಪಾತ'ವೇ ಶಿವನ ಪ್ರಸಾದ.

ಹೀಗೆ ಶಿವಪ್ರಸಾದದಲ್ಲಿ ಅಂಕುರವಾದ ಶಿವಭಕ್ತಿ ಬೆಳೆದು ಪರಮಾನಂದವಾಗಿ ಪ್ರಕಾಶಿಸಬೇಕಾದರೆ, ಅದರ ಆಹಾರ ವಿಹಾರವೇನು? ಭಕ್ತಿಗೆ ಆಹಾರ ಜ್ಞಾನ. ಭಕ್ತಿಗೆ ವಿಹಾರಭೂಮಿ ಶಿವಾನಂದ ಸಾಮ್ರಾಜ್ಯ. ಜ್ಞಾನವಿಲ್ಲದೆ ಭಕ್ತಿ ಪ್ರಜ್ವಲವಾಗಿ ಬೆಳಗಲಿಲ್ಲವೆಂಬುದಕ್ಕೆ ಪ್ರಮಾಣ ಬೇಕೇ? ಅದೋ ಕೇಳಿ ಪ್ರಭುದೇವರ ಭಕ್ತಿಯ ವಿಲಾಸಗೀತವನ್ನು:

ಪ್ರಣತೆಯೂ ಇದೆ, ಬತ್ತಿಯೂ ಇದೆ;
ಜ್ಯೋತಿಯ ಬೆಳಗುವರೆ ತೈಲವಿಲ್ಲದೆ ಎಂತಪ್ಪುದಯ್ಯಾ?
ಗುರುವೂ ಐದಾನೆ, ಲಿಂಗವೂ ಐದಾನೆ;
ಶಿಷ್ಯಂಗೆ ಜ್ಞಾನೋದಯವಾಗದನ್ನಕ್ಕರ, ಭಕ್ತಿ ಎಂತಳವಡುವುದಯ್ಯಾ?
ಸೋಹಂ ಎಂಬುದ ಕೇಳಿ, ದಾಸೋಹವ ಮಾಡದಿದ್ದರೆ
ಅತಿಗಳೆದೆ ನಾನು ಗೊಹೇಶ್ವರಾ.[೨]

---

೧. ನೋಡಿರಿ:

ಭಕ್ತಿ ಶಿವಪ್ರಸಾದಜನನೀಭವನಂ ಶಿವನ ಪ್ರಸಾದವಾ ।
ಭಕ್ತಿಗೆ ಜನ್ಮಭೂಮಿ ವಿಮಲಾಂಕುರ ಬೀಜದವೋಲ್ ಪರಸ್ಪರಂ ॥ ವ್ಯಕ್ತವಮ್ ....

ಶ. ತ್ರ., ಪು. ೮, ಶಿ. ಶ., ಪ. ೮.

೨. ಶೂ. ಸಂ. ಪು. ೧೭, ವ. ೫೬.

ಪಟ್ಟಣದಲ್ಲಿರುವ ನಮ್ಮ ಮನೆಯಲ್ಲಿ ವಿದ್ಯುದ್ದೀಪಗಳು ಉರಿಯುತ್ತಿದ್ದರೂ ದೇವರ ಮನೆಯಲ್ಲಿ ದೇವರ ಮುಂದೆ ಸಣ್ಣ ಪಣತೆಯೊಂದನ್ನು ಹಚ್ಚುವ ಸಂಪ್ರದಾಯ ನಮ್ಮ ಮನೆಯಲ್ಲಿ. ದೇವರ ಮುಂದಿನ ಈ ದೀಪಕ್ಕೆ ಪಣತೆ ಬೇಕು; ಬತ್ತಿ ಬೇಕು; ಎಣ್ಣೆ ಬೇಕು. ಈ ಬತ್ತಿಗೆ ಬೆಳಗನ್ನು ಮುಡಿಸಿದರೆ, ದೇವರ ಮನೆಯೆಲ್ಲಾ ಶಿವಶಾಂತ ಪ್ರಕಾಶವಾಗಿ, ಶುಭ ಮಂಗಳವಾಗಿ ಬೆಳಗುತ್ತದೆ. ಇದೇನು ವಿಶೇಷ ಎಂದು ನೀವು ಜಿನುಗಬಹುದು. ಮತ್ತೇನು ವಿಶೇಷ ಬೇಕು ನಿಮಗೆ? ಒಂದು ಹವಳದಷ್ಟು ಗಾತ್ರದ ಜ್ಯೋತಿ ದೇವರ ಮನೆಯ ಕತ್ತಲೆಯನ್ನೆಲ್ಲ ನುಂಗಿ ಬೆಳಗು ಮಾಡುತ್ತಿದೆ, ಇದೇ ವಿಶೇಷ ನನ್ನ ದೃಷ್ಟಿಗೆ. ಜಗದಗಲದ ಮಹಾಮನೆಯಲ್ಲಿ, ಮಾನವದೇವರ ಮನೆಯಲ್ಲಿ ಗುರುವೆಂಬ ಹಣತೆ, ಗುರುಕಾರುಣ್ಯದಿಂದೊಗೆದ ಲಿಂಗವೆಂಬ ಬತ್ತಿ; ಆ ಬತ್ತಿಗೆ ಭಕ್ತಿಯೆಂಬ ಜ್ಯೋತಿಯ ಮುಟ್ಟಿಸಿದರೆ ದೀವಿಗೆಯಾಗಬಲ್ಲುದೆ? ಭಕ್ತಿಗೆ ಎಣ್ಣೆ ಬೇಕು, – ಉಂಡು ವಿಸ್ತಾರವಾಗಿ ದೇವರ ಮನೆಯನ್ನು ಬೆಳಗಲಿಕ್ಕೆ. 'ಅನ್ನಾದ್ ಭವಂತಿ ಭೂತಾನಿ' – ಎಂದು ಹೇಳುತ್ತಾರಲ್ಲಾ, ಹಾಗೆಯೇ ಇದೆ ಇಲ್ಲಿ ಭಕ್ತಿಯ ಸ್ಥಿತಿ. ಶಿವಪ್ರಸಾದದಿಂದ ಹುಟ್ಟಿದ ಭಕ್ತಿ ಜ್ಯೋತಿಗೆ ಶಿವಜ್ಞಾನವೆಂಬ ತೈಲ ನಿತ್ಯ ಹರಿಯುತ್ತಿದ್ದರೆ, ಲಿಂಗಪ್ರಕಾಶ ಮಾನವಾಂಗದಲ್ಲಿ ಮಂಗಳವಾಗಿ ಬೆಳಗುತ್ತದೆ. ಇಂಥ ಜ್ಞಾನಭಕ್ತಿ ಬೆಳಗುವ ಮಾನವಜೀವನವೇ ಲಿಂಗಾಂಗ ಜೀವನ; ಲಿಂಗಕ್ಕೆ ಅಂಗ ತಾನಾದ ಭಕ್ತಜೀವನ; ತನಗಂಗವಾದ ಭಕ್ತನ ಸರ್ವಾಂಗದಲ್ಲಿ ಹರಿವ ಲಿಂಗಜೀವನ. ಅಥವಾ ಭಕ್ತಲಿಂಗ ಜೀವನ.

ಜ್ಞಾನ ಜ್ಯೋತಿ ಎಂಬ ವಿಚಾರ ಸರ್ವಸಾಮಾನ್ಯ. ಆದರೆ ಈ ಜ್ಯೋತಿಯೆ ಮತ್ತೆ ಮೇಲಿನ ಮಹಾಜ್ಯೋತಿಯಾದ ಅದ್ವೈತಭಕ್ತಿಗೆ ತೈಲವಾಗಿ ಬಳಸಿಕೊಂಡುದೆ ಶರಣ ಮಾರ್ಗದ ವಿಶೇಷ. 'ಜ್ಞಾನಾದೇವ ಹಿ ಮೋಕ್ಷಃ ಸ್ಯಾತ್'.[೧] ಜ್ಞಾನದಿಂದ – ಅಂದರೆ ಶಿವಜ್ಞಾನ ಸಮ್ಯಗ್‌ಜ್ಞಾನ ಆತ್ಮಜ್ಞಾನ ತತ್ತ್ವಜ್ಞಾನ ಸುಜ್ಞಾನದಿಂದ ಜೀವಾತ್ಮ ಮಾಯೆ ಅಜ್ಞಾನ ಅಹಂಭಾವದ ಸೆರೆಮನೆಯಿಂದ ಮುಕ್ತನಾಗುತ್ತಾನೆ; ಅದು ನಿಜ, ದಿಟ ದಿಟ. ಆದರೆ 'ಜ್ಞಾನಾದುಪರಿ ಶಾಂಭವೀ ಭಕ್ತಿಃ ಗುರತರಾ ಭಾತಿ ಸ್ವತಂತ್ರಾ ನಿಜಲೀಲಯಾ'.[೨] ಜ್ಞಾನದಿಂದ ಮೇಲೆ ಪರತರವಾದ ಶಾಂಭವೀಭಕ್ತಿ ತನ್ನ ತಾನರ್ಚಿಸಿ ಪೂಜಿಸಿಕೊಳ್ಳುವ ಸ್ವತಂತ್ರವುಳ್ಳುದಾಗಿ ನಿಜಲೀಲೆಯಿಂದ ತಾನು ತಾನೆ ಆಗುತ್ತ ಬೆಳಗುತ್ತದೆ. ಈ ಕಡೆ ಕೇಳಿ ಕಲ್ಲಮಠದ ಪ್ರಭುದೇವರು ನಿರೂಪಿಸುವ ಇದೇ ವಿಷಯದ ವಿವರಣೆಯನ್ನು:

....ಇಂತು ಗುರುವಚನದಿಂದ ಎರಡಳಿದು, ಪೂಜ್ಯನಾದ ಲಿಂಗವು, ಪೂಜಿಸುವ ಭಕ್ತನು ಒಂದೆ ವಸ್ತುವೆಂದಱಿದು ಆಚರಿಸುವ ಷಟ್ಸ್ಥಲ ಮಾರ್ಗವೇ ಶರಣಮಾರ್ಗ... ಅಂತಪ್ಪ ಗುರುವಚನಂಗಳಲ್ಲಿ ಕರ್ಮ ಜ್ಞಾನ ಭಕ್ತಿಯೆಂಬ ಮೂಱಱೊಳಗೆ ಕರ್ಮವಂ ಬಿಟ್ಟು, ಜ್ಞಾನದಿಂದಲುತ್ತರವಾದುದು ಭಕ್ತಿಕಾಂಡವೆಂದು ನಿರೂಪಿಸಿದ ಭಕ್ತಿಕಾಂಡವೇ

೧. ಶಿ. ಸೂ. ಪು. ೧೪೧. ಅಧಿ. ೮, ಶ್ಲೋ. ೭೬.

೨. ಅದೇ ಪು. ೧೪೧, ಅಧಿ. ೮. ಶ್ಲೋ. ೭೭.

ಷಟ್ಸ್ಥಲಮಾರ್ಗ.... ಇದು ಷಟ್ಸ್ಥಲ ಲಿಂಗಾಂಗ ಸಂಬಂಧ ಜ್ಞಾನ ಕ್ರಿಯಾಯುಕ್ತವಾದ ಶರಣಮಾರ್ಗ. ಈ ಶರಣಮಾರ್ಗವೆಂಬುದು ಶಿವರಹಸ್ಯಾನುಭಾವ.'[೧]

ಶಿವಜ್ಞಾನವೇ ಶಿವಭಕ್ತಿಗೆ ಆಧಾರ, ಅದೇ ಆಹಾರ. ಜ್ಞಾನದಿಂದುತ್ತರ ಅಥವಾ ಜ್ಞಾನದಿಂದುಪರಿ ಭಕ್ತಿಯೆಂದರೆ, ಜ್ಞಾನದ ಕೈಬಿಟ್ಟು ಮೇಲೆ ತಾನೆ ನಿಜದೆಡೆಗೆ ನಡೆದು ನಿಜವನ್ನು ಕೂಡಬಲ್ಲುದು ಭಕ್ತಿ ಎಂದು ಹೇಳಿದಂತಲ್ಲ. ಒಂದರ ಮೇಲೆ ಎರಡು ಎಂದರೆ ಆ ಎರಡು ಒಂದನ್ನು ಒಳಕೊಂಡೇ ಎರಡಾಗಿದೆ. ಮೊಗ್ಗೆಯಾದ ಮೇಲೆ ಹೂ, ಕಾಯಾದ ಮೇಲೆ ಹಣ್ಣು, ಬಾಲ್ಯವಾದ ನಂತರ ಯೌವನ ಎಂದು ಹೇಳಿದರೆ, ಹೂ ಹಣ್ಣು ಯೌವನ ಮೊಗ್ಗೆ ಕಾಯಿ ಬಾಲ್ಯಗಳ ಪಕ್ವಾವಸ್ಥೆಗಳೆ. ಶರಣರು ಹೇಳುವ ಭಕ್ತಿ ಜ್ಞಾನತೈಲದಿಂದ ಭರಿತವಾದ ಭಕ್ತಿ. ಈ ರಸತೈಲವಿಲ್ಲದ ಭಕ್ತಿ ಮೂಢ ಭಕ್ತಿ, ಅಂಧ ಭಕ್ತಿ, ಅಜ್ಞಾನ ಭಕ್ತಿ, ಕುರುಡು ಭಕ್ತಿ. ಈ ಕತ್ತಲೆಯ ಭಕ್ತಿ – ತಾನಾರು? ತಾನು ಮುಟ್ಟಬೇಕಾದ ಚರಮ ವಿಶ್ರಾಮಸ್ಥಾನವಾವುದು? ಎಂಬುದರ ಅರಿವಿಲ್ಲದ ತಾಮಸಭಕ್ತಿ – ಎಳ್ಳಿಲ್ಲದೆ ಗಾಣವನಾಡಿದಂತೆ. ಕುರುಡ ಎಂತೋ ಸುತ್ತಿ ನಡೆದು ಊರಿಗೆ ಬಂದು, ಇದ್ದೂರಲ್ಲಿದ್ದರೂ ತನ್ನ ಊರು ತನಗೆ ಕಾಣು ವಂತಿಲ್ಲ. ಅಂತೆಯೆ ಅರಿದು ಮಾಡುವ ಭಕ್ತಿಯೆ ನಿಜಭಕ್ತಿ, ಅದೇ ಶಿವಾದ್ವೈತ ಭಕ್ತಿ, ಅದೇ ಶರಣರು ಹೇಳುವ ಷಟ್ಸ್ಥಲ ಭಕ್ತಿ.

'ತನಗಿಂದೆ ಪ್ರಿಯಮಾದ ವಿಷಯಮೊಂದುಂಟೇ?'[೨] – ಎಂದು ನಿಜಗುಣ ಶಿವ ಯೋಗಿಗಳು ಹೇಳುವ ಮಾತು ನಿಮಗೆ ಗೊತ್ತಿರಬಹುದು. ಈ ಮಾತು ಗೊತ್ತಿರ ದಿದ್ದರೂ ಮಾತಿನ ಮರೆಯ ಅನುಭವ ಎಲ್ಲರಿಗೂ ಗೊತ್ತಿದ್ದ ವಿಷಯ. ಈ ವಿಷಯ ವನ್ನು ಬೀರಬಲ್ಲ ಅಕಬರಬಾದಶಹನಿಗೆ ಮಂಗ, ಅದರಂಗವನ್ನು ಅವಚಿಕೊಂಡ ಮರಿಯನ್ನು ನೀರಿನ ಹೌದಿನಲ್ಲಿ ಇಡಿಸಿ ತೋರಿಸಿದ ಕತೆ ಎಲ್ಲರಿಗೆ ಗೊತ್ತು. ಪ್ರಾಣಕ್ಕೆ ನೀರು ಬರುವವರೆಗೆ ಮರಿಯನ್ನು ಮೇಲೆ ಮೇಲೆ ಎತ್ತಿಕೊಂಡು, ಪ್ರಾಣಕ್ಕೆ ಬಂದಾಗ ಮರಿಯ ಪ್ರಾಣವನ್ನೇ ನೀರಿಗೆ ನೀಡಿ, ಮಂಗ ತನ್ನನ್ನು ಉದ್ಧರಿಸಿಕೊಂಡುದನ್ನು ಪರೀಕ್ಷಿಸಿದರೆ ಕಾಣುವುದೇನು? ಮರಿಯಿರಲಿ ಮರಿಮಗ ಮೊಮ್ಮಗನಿರಲಿ, ಅರ್ಧಾಂಗಿ ಯಿರಲಿ ಅಣ್ಣ ತಮ್ಮ ಅಕ್ಕ ತಂಗಿ ಇರಲಿ, ಹೊಲ ಮನೆ ಹಣ ಅಧಿಕಾರ ಅಭಿಮಾನ ಕೀರ್ತಿ ವಾರ್ತೆಯಿರಲಿ, ಮಾನವಪ್ರಾಣಿಗೆ ಮುಳುಗುವ ಕಾಲ ಬಂದರೆ ಅವನ್ನೆಲ್ಲ ಆಹುತಿಕೊಟ್ಟು ತಾನು ಉಳಿಯಲು ವಿಶ್ವಪ್ರಯತ್ನ ಮಾಡುತ್ತಾನೆ; ಅಲ್ಲವೇ? ನನ್ನ ಹೆಂಡತಿಯನ್ನು ನಾನು ಪ್ರೀತಿಸುತ್ತೇನೆ, ನಿಜ; ಒದೆಸಿಕೊಂಡೂ ಪ್ರೀತಿಸುತ್ತೇನೆ, ನಿಜ. ಆದರೆ ಇಷ್ಟರಿಂದ ನನಗೆ ನನಗಿಂತ ನನ್ನ ಹೆಂಡತಿ ಹೆಚ್ಚು ಪ್ರೀತಿ ಎಂದು ಹೇಳಲಿಕ್ಕಾಗುವುದಿಲ್ಲ. ಹೆಂಡತಿಯಲ್ಲಿರುವ ನನ್ನ ಪ್ರೀತಿಯನ್ನು ಇದೋ ಬಿಚ್ಚಿ ತೋರಿಸುತ್ತೇನೆ, ನೋಡಿ – ಅದರಲ್ಲೇನಿದೆ? ಆ ಪ್ರೀತಿ ನನ್ನಿಂದ ಅವಳಿಗೇ ಹರಿದು ಅಲ್ಲಿಯೇ ವಿಶ್ರಮಿಸುವ ದ್ರವ್ಯವಲ್ಲ. ಈ ಹಣ ಕೊಟ್ಟು ಅವಳನ್ನೆ ನಾನು ತಿಂದು

೧. ಲಿಂ. ಲೀ. ವಿ. ಚಾ. ಪು. ೩, ಟೀಕೆ.

೨. ವೇ. ಗ್ರಂ., ಪು. ೩೩, ಕೈ. ಪ., ನೀತಿ. ಸ್ಥ., ಪದ ೧.

ಬಿಡಬೇಕೆಂಬ ಆಶಾಬುದ್ಧಿಯಿಂದಲೆ ನಾನು ಅವಳಿಗೆ ಅನ್ನ ವಸ್ತ್ರ ಅಲಂಕಾರಗಳನ್ನು ಕೊಟ್ಟು, ಪ್ರೀತಿದ್ರವ್ಯವನ್ನು ಕೊಡುತ್ತಿರುವುದು. ಅಂದರೆ ಅವಳಿಗಾಗಿ ಅವಳನ್ನು ನಾನು ಪ್ರೀತಿಸುತ್ತೇನೆ ಎಂದು ಹೇಳುವುದಕ್ಕಿಂತ ನನಗಾಗಿ, ನನ್ನ ಸುಖಕ್ಕಾಗಿ ಆಕೆಯನ್ನು ನಾನು ಪ್ರೀತಿಸುತ್ತೇನೆ ಎಂದು ಹೇಳುವುದು ಹೆಚ್ಚು ವಾಸ್ತವ. ಅಂತೆಯೇ ನನ್ನ ಹೆಂಡತಿಯನ್ನು ನಾನು ಪ್ರೀತಿಸುತ್ತೇನೆ ಎಂಬ ಮಾತನ್ನು ನಿರ್ಭಯವಾಗಿ, ದಿಗಂಬರ ವಾಗಿ ಹೇಳಿದರೆ 'ನನ್ನ ಸುಖದ ಉರಿಗೆ ನನ್ನ ಹೆಂಡತಿಯನ್ನು ಆಹುತಿ ಕೊಡುತ್ತಿದ್ದೇನೆ.' ಎಂಬ ಸಂಸಾರಸೂತ್ರ ಸಿದ್ಧವಾಗಿ ನಿಲ್ಲುತ್ತದೆ. ಈ ಸೂತ್ರಕ್ಕೆ ವ್ಯಾಖ್ಯಾನ ಬರೆದರೆ, 'ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ'[1] – ಎಂಬ ಉಪನಿಷದ್ ವಚನದ ಪಲ್ಲಟ ಅರ್ಥ ಸ್ಫುರಣ ವಾಗುತ್ತದೆ. ಇಲ್ಲಿ ಆತ್ಮ ಎಂದರೆ ಜೀವಾತ್ಮ, ನಾನು – ಮಾನವಪ್ರಾಣಿ ಎಂದು ತಿದ್ದಿ ಅರ್ಥಮಾಡಿಕೊಂಡರೆ ಪ್ರಾಣಿಪ್ರಪಂಚದ ಪ್ರೇಮಪ್ರಪಂಚ ಹೇಗಿದೆ ಎಂಬುದು ಸ್ಪಷ್ಟ ಕಾಣುತ್ತದೆ. ಮಥಿತಾರ್ಥ ಇಷ್ಟೇ, ನನ್ನ ಪ್ರೀತಿ ನನ್ನ ಪ್ರೀತಿ.

'ತಾನು ಬಲ ಜಗ ಬಲ', ಅಂದರೆ ತಾನು ಒಂದು ಬಲವಾಗಿ ತನಗಿದಿರಾಗಿರುವ ಜಗ ಒಂದು ವಿರುದ್ಧ ಬಲವಾಗಿ, ಹಗಲಿರುಳು ಪ್ರೀತಿಯ ಹೋರಾಟ ನಡೆದಿದೆ ಜಗತ್ತಿನ ಕರಿಯ ಜಾಲದಲ್ಲಿ. ಇಂಥ ಪ್ರೀತಿಯ ಸ್ವಾರ್ಥನೀತಿ, ಪ್ರೇಮ ಮೋಹ ರಾಗ ದ್ವೇಷ, ಅಮರಸ್ವರ್ಗ ವಿಶ್ವಾಸ ಭಕ್ತಿಯ ಬಣ್ಣ ಬಳೆದುಕೊಂಡು ನುಂಪು ಹೆಂಪಾಗಿ ಎಲ್ಲೆಲ್ಲಿ ಪ್ರದರ್ಶನವಾಗುತ್ತಿದೆ. ಆದರೆ ಬಣ್ಣ ಬಾಳಿಕೆ ಬರುವುದಿಲ್ಲ. ಮತ್ತೆ ಬಣ್ಣದ ಪ್ರೀತಿಗೆ ಬಣ್ಣದ ಸುಖವಲ್ಲದೆ ಸತ್ಯದ ಸುಖವಿಲ್ಲ, ನಿತ್ಯದ ಸುಖವಿಲ್ಲ. ಬಣ್ಣಕ್ಕೆ ಬಣ್ಣವೆ ಉತ್ತರ.

ಕತ್ತಲೆಯ ನಾನಿನಲ್ಲಿ ಕೇಂದ್ರೀಕೃತವಾಗಿರುವ ಈ ಪ್ರೀತಿ ಚಿದ್‌ಬೆಳಗಿನಲ್ಲಿ, ತನ್ನ ನಿಜಸ್ವರೂಪವನ್ನು ಕಂಡು ಸಚ್ಚಿದಾನಂದ ನಿತ್ಯಪರಿಪೂರ್ಣತ್ವದ ನೆಲೆಯಲ್ಲಿ ಕೇಂದ್ರೀಕೃತ ವಾದರೆ, ಸ್ವಾರ್ಥದ ಬಣ್ಣ ಮಾಯವಾಗಿ ಲಿಂಗಾರ್ಥದ ಭಕ್ತಿ ಪ್ರಜ್ವಲವಾಗುತ್ತದೆ. ಅಜ್ಞಾನ ಅಹಂಭಾವ ಮಾಯೆಯ ಮಾಟದಿಂದ ಸಂಕೋಚವಾಗಿ ದೇಹಾತ್ಮನೆನಿಸಿ ರುವ ನಾನು ವಿಶ್ವವಿಸ್ತಾರವಾಗಿ 'ಲೀಯತೇ ಗಮ್ಯತೇ ಯತ್ರ ಜಗದೇತತ್ ಚರಾಚರಂ' ಎಂಬ ಲಿಂಗದ ವಿಸ್ತಾರವಾಗಿ ನಿಜರೂಪದಲ್ಲಿ ಬೆಳೆದು ನಿಂದರೆ, ನನ್ನ ಪ್ರೀತಿಯೂ ನನ್ನ ನಿಜದ ನಿಲವಿನಲ್ಲಿ ಬೆಳೆದು ನಿಲ್ಲುತ್ತದೆ; ಇಲ್ಲಿಯೂ 'ತನಗಿಂದೆ ಪ್ರಿಯಮಾದ ವಿಷಯಮೊಂದುಂಟೇ?' – ಎಂಬ ಮಾತೇ ಅನ್ವಯವಾಗುತ್ತದೆ. ಆದರೆ ಇಲ್ಲಿಯ ಅರ್ಥದ ಭಾವ ಬ್ರಹ್ಮಭಾವ. ಇಲ್ಲಿಯೂ ತನ್ನಲ್ಲಿ ಮತ್ತೂ ವಿಶ್ವವಸ್ತು ಜಾಲದಲ್ಲಿ ಪ್ರೀತಿಯಿದೆ. ಆದರೆ 'ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ.' ಎಂಬ ಮಂತ್ರದ ಸಹ ಜಾರ್ಥದಲ್ಲಿ. 'ಎಲ್ಲೆಲ್ಲಿ ತಾನು – ಚೆನ್ನರಾಮ, ತನ್ನಲ್ಲಿ ಎಲ್ಲ – ಚೆನ್ನರಾಮ', 'ಸರ್ವಂ ಲಿಂಗಮಯಂ ಜಗತ್' – ಎಂಬ ಗಂಭೀರ ವಿಶ್ವದರ್ಶನದಲ್ಲಿ ಗಭೀರ ಪ್ರೇಮಜ್ಯೋತಿ ಅಂಕುರವಾಗಿ ಸರ್ವಾಂಗದಲ್ಲಿ ಹಬ್ಬಿ ಲಿಂಗಫಲವನ್ನು ಹಡೆಯುತ್ತದೆ. ಈ ಗಂಭೀರ

---

೧. ಬೃ. ಉ., ಅ. ೨. ಬ್ರಾ. ೪, ಮಂ. ೫.

ಜ್ಯೋತಿಯೆ ಶರಣ ಮಾರ್ಗದ ಸುಜ್ಞಾನ ಸದ್ಭಕ್ತಿ. ಇದೇ ಉಪನಿಷತ್‌ಕಾರರು ಹೇಳುವ ಆತ್ಮಕಾಮ, ತನ್ನ ನಿಜದ ಅತ್ಯುಷ್ಣ ತೃಷ್ಣೆ.

ನಿಜಜ್ಞಾನದಿಂದ ಸಂಪ್ಲುತವಾದ ಈ ಸದ್ಭಕ್ತಿಯೆ ಚಿದ್ ಭಕ್ತಿ. ಆನಂದ ಭಕ್ತಿ, ನಿತ್ಯ ಪರಿಪೂರ್ಣಭಕ್ತಿ. ಸಚ್ಚಿದಾನಂದ ನಿತ್ಯ ಪರಿಪೂರ್ಣವಸ್ತು ತಾನೆಂಬ ನಿಜದರಿವಿನಲ್ಲಿ ಅಂಕುರಿಸಿ ಪಲ್ಲವಿಸಿ, ಪರಬ್ರಹ್ಮವಿಸ್ತಾರವಾಗಿ ಹಬ್ಬುವ ಈ ಭಕ್ತಿ ಶರಣಮಾರ್ಗದ ವಿಶಿಷ್ಟಾದ್ವೈತ ಭಕ್ತಿ. ಈ ಭಕ್ತಿಯ ಕ್ರಿಯಾಚರಣೆಯಿಲ್ಲದೆ ಕೇವಲ ಜ್ಞಾನದಲ್ಲಿ ವಿರಮಿಸಿ ನಿಲ್ಲುವ ಅದ್ವೈತಜ್ಞಾನಿಗಳ ಜೀವನ ಪೂರ್ಣ ಜೀವನವಲ್ಲ. ಬರಿಯರಿವಿನಲ್ಲಿ ಪರವಶವಾಗಿ ಮಲಗಿದರೆ, ದೇಹದ ಅರ್ಥವೇನು? ಅದರ ಗತಿ ಏನು? ಕರಣೇಂದ್ರಿಯಗಳ ವಿಚಾರವೇನು? ದೇಹ ಪ್ರಾಣ ಕರಣಾದಿಗಳನ್ನು ರೂಪಿಸಿರುವ ವಿಶ್ವದ ಪರಮಾರ್ಥವೇನು?

ಜ್ಞಾನದಲಱಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ?
ನೆನೆದ ಮಾತ್ರದಲ್ಲಿ ಆಹುದೆ, ಕಾರ್ಯದಲಲ್ಲದೆ?
ಕುರುಡ ಕಾಣ ಪಥವ; ಹೆಳವ ನಡೆಯಲಱಿಯ.
ಒಂದಿಲ್ಲದಿರ್ದಡೊಂದಾಗದು.
ಜ್ಞಾನವಿಲ್ಲದಿರ್ದ ಕ್ರೀ ಜಡನು; ಕ್ರೀಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು.
ಇದು ಕಾರಣ ಸಿದ್ಧ ಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.[೧]

---

೧. ಲಿಂ. ಲೀ. ವಿ. ಚಾ. ಪು. ೧೬೩, ವ. ೧೬.

ಮತ್ತೆ ನೋಡಿರಿ:

ಕಣ್ಣು ಕಾಲು ಎರಡುಳ್ಳವ ದೂರವೆಯ್ದುವನಲ್ಲದೆ
ಕಣ್ಣು ಕಾಲು ಎರಡರೊಳಗೊಂದಿಲ್ಲದವನು ದೂರವೆಯ್ದಲರಿಯನೆಂಬಂತೆ,
ಜ್ಞಾನವಿರಹಿತನಾಗಿ ಕ್ರಿಯೆ ಎನಿತು ಮಾಡಿದಡೇನು?
ಅದು ಕಣ್ಣಿಲ್ಲದವನ ನಡೆಯಂತೆ.
ಕ್ರಿಯಾರಹಿತನಾಗಿ ಜ್ಞಾನಿಯಾದಡೇನು?
ಅದು ಕಾಲಿಲ್ಲದವನ ಇರವಿನಂತೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬೆರಸುವೊಡೆ
ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

ಸ್ವ. ಸಿ. ವ. ಪು. ೨೫, ವ. ೯೨.

ಮತ್ತೂ ನೋಡಿರಿ:

ಕ್ರಿಯೆಯೆ ಅಧಿಕವೆಂಬ ಗೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯಾ ಎನಗೆ.
ಜ್ಞಾನವೆ ಅಧಿಕವೆಂಬ ದಡ್ಡ ವೇದಾಂತಿಗಳ ಮಾತು ಸೊಗಸದಯ್ಯಾ ಎನಗೆ.
ಅದೇನು ಕಾರಣವೆಂದಡೆ: ಅವುದಾನೊಂದು ಪಕ್ಷಿ ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ.
ಅಂತರಂಗದಲ್ಲಿ ಸಮ್ಯಗ್‌ಜ್ಞಾನ ಬಹಿರಂಗದಲ್ಲಿ ಶಿವಸತ್ಕ್ರಿಯಾ ಸನ್ನಿಹಿತವಿಲ್ಲದೆ
ಪರವಸ್ತುವ ಕೂಡಬಾರದಾಗಿ.
ಇದು ಕಾರಣ ಸತ್ಕ್ರಿಯಾಸಮ್ಯಗ್‌ಜ್ಞಾನಸಂಪನ್ನರಾದ
ಮಹಾಶರಣರ ತೋರಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ.

ಅಖಂ. ವ. ಪು. ೯೧, ವ. ೫೪.

ಅಂತರಂಗದ ಅರಿವು ಗಟ್ಟಿಗೊಂಡು ಬಹಿರಂಗದಲ್ಲಿ ಕ್ರಿಯಾರೂಪವಾದರೆ ಆಗ ಪೂರ್ಣವಾಯ್ತು ಅರಿವಿನ ಅರ್ಥ; ಆಗ ತೋರಿತು ದೇಹ ಪ್ರಾಣಾದಿಗಳ, ವಿಶ್ವಬ್ರಹ್ಮಾಂಡದ ಕ್ರಿಯಾರ್ಥ. ಹಿಂದೆ ಕಲ್ಲಮಠದ ಪ್ರಭುದೇವರು ಹೇಳಿದಂತೆ, 'ಲಿಂಗಾಂಗ ಸಂಬಂಧ ಜ್ಞಾನಕ್ರಿಯಾಯುಕ್ತವಾದ ಶರಣಮಾರ್ಗ' ಶಿವರಹಸ್ಯಾನುಭಾವ. ಅಂದರೆ ಲಿಂಗಕ್ಕೆ ಅಂಗ ಸಂಬಂಧವಾಗಿ, ಅಂಗಕ್ಕೆ ಲಿಂಗ ಸಂಬಂಧವಾಗಿರುವ ಜ್ಞಾನ ಲಿಂಗಾಂಗ ಸಂಬಂಧವಾಗಿರುವ ಕ್ರಿಯೆಯಲ್ಲಿ ಸಮರಸವಾಗಿ ಹರಿವುದೇ ಜೀವನದ ಪರಮರಹಸ್ಯ, ಅದೇ ಜೀವನದ ಪರಮಾನುಭಾವ, ಅದೇ ಭಕ್ತಿ.

ಮತ್ತೆ, ಜ್ಞಾನ ತನ್ನ ನಿಜವನ್ನು, ಲಿಂಗವನ್ನು ಧರಿಸಿರುವಂತೆ ದೇಹ ಪ್ರಾಣಾದಿಗಳೂ ತಮ್ಮ ನಿಜವಾದ ಲಿಂಗವನ್ನು ಧರಿಸಿ ತಮತಮಗೆ ಸಹಜವಾದ ಕ್ರಿಯೆಯನ್ನು ಲಿಂಗದರಿವುವಿಡಿದು ನಡೆಸಿದರೆ ಅದೇ ಲಿಂಗಪೂಜೆ, ಅದೇ ಲಿಂಗಭಕ್ತಿ. ಕಣ್ಣು ನೋಡಲೆ ಬೇಕು, ಕಿವಿ ಕೇಳಲೆ ಬೇಕು. ಕೈ ಮಾಡಲೆ ಬೇಕು, ಕಾಲು ನಡೆಯಲೆ ಬೇಕು. ಮನಕ್ಕೆ ಹರಿದಾಟ, ಬುದ್ಧಿಗೆ ವಿಚಾರ ಸಹಜ. ಅದರಂತೆ ಕಾಮ ಕ್ರೋಧ ಮುಂತಾದ ಷಡ್‌ವರ್ಗ, ವ್ಯಸನ, ತಾಪತ್ರಯ, ಹಸಿವು ನಿದ್ರೆ ಜೀವನವೃತ್ತಿ ವ್ಯವಹಾರಗಳು ಮಾನವನ ಸ್ವಭಾವದ ಗುಣ ಧರ್ಮ ಕರ್ಮ. ಅಂತರಂಗದಲ್ಲಿ ಅರಿವಿನ ಶುದ್ಧಿಯಾಗಿ ಈ ಗುಣ ಧರ್ಮ ಕರ್ಮಗಳು ದೇಹಪ್ರಾಣಿಯ ಅಜ್ಞಾನ ಮಾಯೆ ವ್ಯಾಮೋಹದಲ್ಲಿಯೆ ವರ್ತಿಸಿದರೆ, ದೇಹ ಕರಣೇಂದ್ರಿಯಗಳೆಲ್ಲ ವಿಷಯಪಂಕದಲ್ಲಿ ಮುಳುಗಿ ದುರ್ಗಂಧ ವಾಸನೆ ಹೊರಗೆಲ್ಲ ತುಂಬಿದರೆ ಹೇಗೆ? ಶರಣಮಾರ್ಗ ಅದ್ವೈತಜ್ಞಾನ ಮಾರ್ಗವಲ್ಲ. ವಿಷಯಸುಖವಾಸನೆಯುಳ್ಳ ದೇಹ ಪ್ರಾಣ ಕರಣೇಂದ್ರಿಯಗಳನ್ನು ಹೆಂಡಿರು ಮಕ್ಕಳು ಮನೆಮಾರನ್ನು ಕತ್ತರಿಸಿ ಹಾಕಿ, ಅರಿವೆ ತಾನಾದ ತಾನೊಬ್ಬನೇ ಸರ್ವಸಂಸಾರ ಸನ್ಯಾಸಿಯಾಗಿ ಓಡಿ ಹೋಗಲಿಕ್ಕೆ ಮಾರ್ಗವಿಲ್ಲ ಶರಣಮಾರ್ಗದಲ್ಲಿ. ದೇವನೇ ವಿಶ್ವಸಂಸಾರದಲ್ಲಿ ಲೀಲೆಯಾಡುತ್ತಿರುವಾಗ, ಶಿವಕಳೆಯಾದ ಶರಣನಿಗೇಕೆ ಬೇಡ ದೇಹಾದಿ ವಿಷಯ ಪ್ರಪಂಚ? ಬರಿಯ ಜ್ಞಾನದಿಂದ ಹಿಂಗದ ದೇಹವಾಸನೆ ಭಕ್ತಿಯಿಂದ ಹಿಂಗುತ್ತದೆ. ಈ ದೇಹವಾಸನೆಯನ್ನು, ವಿಷಯದಾಸೆ ತುಂಬಿ ಪ್ರಾಕೃತವಾದ ದುರ್ಗಂಧ ಸರ್ವಾಂಗದಲ್ಲಿ ಇಡಿದಿರುವ ಮಾನವವಾಸನೆಯನ್ನು ಕಳೆದು, ಗುರುಕಾರುಣ್ಯದಿಂದ ಅಲ್ಲಲ್ಲಿ ನೆಲೆಗೊಂಡಿರುವ ಲಿಂಗವಾಸನೆಯನ್ನು ಬೀರುವ ಶಕ್ತಿಸಾಮರ್ಥ್ಯವೇ ಭಕ್ತಿ. ಅಂತರಂಗದ ಮನ ಬುದ್ಧಿಯ ಕತ್ತಲೆಯನ್ನು ಕಳೆದು ಬೆಳಗುಗೊಳಿಸುವುದಕ್ಕಿಂತ ದೇಹ ಪ್ರಾಣಾದಿಗಳ ಗಾಢತರವಾದ ಪಶುವಾಸನೆಯನ್ನು ತೊಳೆದು, ಅಲ್ಲಿ ಲಿಂಗದ ಕ್ರಿಯಾಚೈತನ್ಯವನ್ನು ದೀಪ್ತಗೊಳಿಸುವುದು ಅತಿ ಕಠಿಣ. ಮನದ ಕುದುರೆ ಏರಿ ಸಾವಿರ, ಲಕ್ಷ, ಕೋಟಿ ಮೈಲನ್ನು ನಿಮಿಷದಲ್ಲಿ ಹಾರಬಹುದು. ಆದರೆ ಕಾಲು-ಕುದುರೆಯನ್ನೇರಿ ಒಂದು ಮೈಲು ನಡೆಯಲು ಎಷ್ಟು ಹೊತ್ತು ಬೇಕು? ಆದರೂ ಈ ದುರ್ಧರ ಕಾರ್ಯವನ್ನು ಸಾಧಿಸಿದ್ದಾನೆ ಮಾನವ – ಶರಣ. ಅಂತರಂಗವನ್ನು ನಿರ್ಮಲಮಾಡಿ ಮಹಾಲಿಂಗದ ಅಖಂಡ ಚಿತ್‌ಪ್ರಕಾಶವನ್ನು ತುಂಬಿಕೊಂಡಿರುವಂತೆ, ಬಹಿರಂಗವನ್ನೂ ಸ್ವಚ್ಛವಾಗಿ ತೊಳೆದು, ಶಿವಪ್ರಸನ್ನವಾದ ಶಿವಭಕ್ತಿಯನ್ನು ತುಂಬಿದ್ದಾನೆ ತನ್ನ ಹೊರಗೊಳಗೆಲ್ಲ.

ಅಂತರಂಗದ ಜ್ಞಾನಕ್ಕೆ ಯೌವನ ಒದಗಿದಾಗಲೇ ಈ ಜ್ಞಾನ-ಭಕ್ತಿ, ಈ ನಿಜಭಕ್ತಿ ಒಳಹೊರಗೆನ್ನದೆ ವ್ಯಾಪಿಸಿ, ಮಾನವನ ಆತ್ಮ ದೇಹ ಪ್ರಾಣ ಕರಣ ಇಂದ್ರಿಯಗಳನ್ನೆಲ್ಲ ಲಿಂಗಪದದೆಡೆಗೆ ಕೊಂಡೊಯ್ದು, ಅಲ್ಲಿಯೆ ಅವನ್ನೆಲ್ಲ ಸಮರಸಗೊಳಿಸುತ್ತದೆ. ಬರಿಯ ಜ್ಞಾನದಿಂದ ಜೀವ ಪರಮರ, ಅಂಗ ಲಿಂಗದ ಸರ್ವಸಮರತಿಯ ಸರ್ವಾಂಗಲಿಂಗ ಸಾಮರಸ್ಯವಿಲ್ಲ.

ಸುಜ್ಞಾನ ವಿಕಾಸವಾಗಿ ಸದ್‌ಭಕ್ತಿ ಪುಷ್ಪವಾದರೆ ಲಿಂಗದ ದಿವ್ಯ ಪರಿಮಳ, ಲಿಂಗಾನಂದದ ದಿವ್ಯ ಮಕರಂದ, ಲಿಂಗವಿಸ್ತಾರದ ದಿವ್ಯರೂಪ ಸೌಂದರ್ಯ ವಿಲಾಸ, ಅನಾದ್ಯನಂತವಾದ ಲಿಂಗದ ನಿತ್ಯ ಪರಿಪೂರ್ಣತೆಗಳು ಮರ್ತ್ಯದ ಮಹಾನಂದವನ್ನು ದಿವ್ಯತೆಯಿಂದ ಅಲಂಕಾರಗೊಳಿಸುತ್ತವೆ. ಪುರುಷಾರ್ಥ ಚತುಷ್ಟಯಗಳೆನಿಸುವ ಧರ್ಮ ಅರ್ಥ ಕಾಮ ಮೋಕ್ಷಗಳು ಮಾನವಜೀವನದ ಪರಮ ಪ್ರಯೋಜನವೆಂದು ನಿಮಗೆ ಗೊತ್ತು, ನನಗೆ ಗೊತ್ತು, ಭಾರತೀಯ ಸಂಸ್ಕೃತಿಸಂಪನ್ನರಿಗೆಲ್ಲ ಗೊತ್ತು. ಆದರೆ ಜ್ಞಾನದಿಂದ ಮೋಕ್ಷವಡೆದು ಬಂಧನವಿಲ್ಲದ ಜ್ಞಾನ-ಭಕ್ತಿ ಪಂಚಮ ಪುರುಷಾರ್ಥವೆಂದು ಕಂಡುಕೊಂಡರು ಶರಣರು. 'ಪಂಚಮಃ ಪುರುಷಾರ್ಥೋ ಹಿ ಭಕ್ತಿಃ ಶೈವೀ ಸನಾತನೀ.' ಏನೂ ಏನೂ ಇಲ್ಲದ ಒಂದೇ ಒಂದು, ಭಕ್ತಿಲೀಲೆಯಿಂದ ತನ್ನಲ್ಲಿ ತಾನು ವಿಭಕ್ತವಾಗಿ, ಲಿಂಗ ಅಂಗವೆಂದು ಎರಡಾಗಿ, ತನ್ನ ತಾ ಮರೆದ ಅಜ್ಞಾನದ ಲೀಲೆಯಲ್ಲಿ ಭಿನ್ನ ಸಂಸಾರವ ಪೂಜಿಸಿ, ತನ್ನ ತಾನರಿದ ಸುಜ್ಞಾನದ ಲೀಲೆಯಲ್ಲಿ ಸ್ವಯಂ ಭಕ್ತ, ಸ್ವಯಂ ಲಿಂಗವಾಗಿ ತನ್ನ ತಾ ಪೂಜಿಸಿ, ತನಗೆ ಹೊದ್ದಿದ ಸಂಸಾರವನ್ನು ಮತ್ತು ತನ್ನನ್ನು ತನಗೆ, ಅಂದರೆ ಸ್ವಯಂ ಭಕ್ತನನ್ನು ಸ್ವಯಂ ಲಿಂಗಕ್ಕೆ ಅರ್ಪಿಸಿ, ಲಿಂಗಪ್ರಸಾದ ವಾಗಿ ಬಂದುದನ್ನೆಲ್ಲ ಸ್ವೀಕರಿಸಿ, ಲಿಂಗಸಂಗದಲ್ಲಿ ಒಂದೇ ಆಗಿ, ಭಕ್ತಿಲೀಲೆಯ ನಿಜಾನಂದ ದಲ್ಲಿ ನಿಂದಿರುವ ಶರಣ, ತಾನು ಕಂಡ ಭಕ್ತಿ ಪೂಜೆಯ ಅರ್ಥವನ್ನೇ ಸೃಷ್ಟಿವ್ಯಾಪಾರದ ಪಂಚಮಪುರುಷಾರ್ಥವೆಂದು ಲೋಕಕ್ಕೆ ಸಾರಿದ್ದಾನೆ.

ಅಂತೆಯೇ 'ಶಿವೋಹಂ', 'ಸೋಹಂ',[೧] 'ಅಹಂ ಬ್ರಹ್ಮಾಸ್ಮಿ'[೨] – ಎಂಬ ಅದ್ವೈತ ಜ್ಞಾನ ಸಿದ್ಧಿಯಾದರೂ ಅಲ್ಲಿಯೇ ವಿಶ್ರಮಿಸಿ ಕುಳ್ಳಿರಬಾರದು. 'ಸೋಹಂ ಎಂಬುದ ಕೇಳಿ ದಾಸೋಹವ ಮಾಡದಿದ್ದರೆ ಅತಿಗಳೆದೆ ನಾನು ಗೊಹೇಶ್ವರಾ,'[೩] – ಎಂದು ಪ್ರಭು ದೇವರು ಬರಿಯ ಅರಿವನ್ನು ನಿರಾಕರಿಸುವುದು. ಭಕ್ತನಿಗೆ ಸೋಹಂ-ಭಾವವೆ ಪ್ರಾಣ, ದಾಸೋಹಂ ಭಾವವೆ ದೇಹ. ಚೈತನ್ಯಮಯವಾದ ಪ್ರಾಣ ದೇಹದ ಮುಖವಾಗಿ,

---

೧. ಛಾ. ಉ. ಅ. ೪, ಖಂ. ೧೧, ಮಂ. ೧.

೨. ಬೃ. ಉ. ಅ. ೧, ಬ್ರಾ. ೪, ಮಂ. ೧೦.

೩. ನೋಡಿರಿ:

ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ— ಇವ ಮಾಡಲೇ ಬೇಕು.
ಸುಳಿವ ಸುಳಿಹುಳ್ಳನ್ನಕ್ಕ ಇವ ಮಾಡಲೇ ಬೇಕು.
ಗುಹೇಶ್ವರನೆಂಬ ಆತ್ಮನುಳ್ಳನ್ನಕ್ಕರ ಭಕ್ತಿಯ ಮಾಡಲೇ ಬೇಕು.

ಅ. ವ. ಚಂ., ಪು. ೨೦೭, ವ. ೮೨.

ವರ್ತಿಸುತ್ತಿರುವಂತೆ, ಭಕ್ತನ ನಿಜದರಿವು ಅರಿವಿನಾಚರಣೆಯಾಗಿ ಆತನ ಸರ್ವಾಂಗದಲ್ಲಿ ಸೂಸುತ್ತದೆ. ಚಿತ್‌ಕಳೆ, ಶಿವಕಳೆಯಾದ ಭಕ್ತ ದಾಸೋಹಂಭಾವದಿಂದ ಚಿತ್‌ಪರಿಪೂರ್ಣವನ್ನು ಆರಾಧಿಸುವುದು, ಭಜಿಸುವುದು, ಅಂದರೆ ಪರಿಪೂರ್ಣವನ್ನು ಸೇರುವುದೇ ಭಕ್ತಿಯ ರಹಸ್ಯ. ಇದೋ ಇತ್ತ ನೋಡಿ, ಜೋಧರ ಮಾಯಣ್ಣನ ಭಕ್ತಿಯ ಬದುಕು--ಬಾಳುವೆಯನ್ನು:

ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು.
ಸತ್ವ ರಜ ತಮಂಗಳು ನಿಮ್ಮ ಭೃತ್ಯರಯ್ಯಾ!
ಅಂತಃಕರಣಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯಾ!
ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ!
ಅರಿಷಡ್ವರ್ಗಂಗಳು ನಿಮ್ಮ ತೊತ್ತಿರು.
ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯಾ!
ಅಷ್ಟಮದಂಗಳು ನಿಮ್ಮ ದಳವಾಯಿಗಳು.
ನವರಸಂಗಳು ನಿಮ್ಮ ಭಂಡಾರಿಗಳಯ್ಯಾ!
ದಶವಾಯುಗಳು ನಿಮ್ಮ ಛತ್ರ ಚಾಮರ ಸೀಗುರಿಗಳು.
ಷೋಡಶಕಳೆಗಳು ನಿಮ್ಮ ರಾಣಿವಾಸ.
ಶಂಭುಸೋಮನಾಥಲಿಂಗ,
ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯಾ![೧]

ಜೀವಾತ್ಮ ಅಂತರಾತ್ಮ ಪರಮಾತ್ಮರೆಂಬ ತ್ರಿವಿಧಾತ್ಮರು ಮೊದಲು ದೇಹ ಕಡೆಯಾಗಿ ಭಕ್ತನೆಲ್ಲ ಲಿಂಗದೇವನ ಡಿಂಗರಿಗನಾಗಿ ಬಿಟ್ಟಿದ್ದಾನೆ. ಅರಸನಿಗೆ ೭೨ ನಿಯೋಗದವರು ಎಲ್ಲ ಬಗೆಯ ಸೇವೆಯನ್ನು ಸಮಯವರಿತು ಸಮರ್ಪಿಸುವಂತೆ, ಭಕ್ತನ ಸರ್ವಾಂಗವೆಲ್ಲ ದೇವದೇವನ ದಾಸೋಹಂಭಾವದಲ್ಲಿ ಸಮರ್ಪಿತವಾಗುತ್ತ ಶಂಭುಸೋಮನಾಥ ಲಿಂಗವಾಗಿ ಬೆಳೆಯುತ್ತದೆ, – ಎಣ್ಣೆ ತಾನು ದೀಪಕ್ಕೆ ಎಡೆಯಾಗಿ ದೀಪವಾಗುವಂತೆ. ಮತ್ತೊಂದು ವಿಶೇಷವಿದೆ ಈ ಭಕ್ತಜೀವನದಲ್ಲಿ. ಜೀವಾತ್ಮನ ದೇಹ ಪ್ರಾಣಾದಿಗಳೊಡನೆ ಆತನ ಅರಿಷಡ್ವರ್ಗ, ಸಪ್ತಧಾತು, ಅಷ್ಟಮದ, ನವರಸ ಮುಂತಾದುವೂ ತಂತಮ್ಮ ಅಧೋಗತಿಯನ್ನು ಬಿಟ್ಟು, ಲಿಂಗದೇವನ ನಿಯೋಗದಲ್ಲಿ ನಿರತವಾಗಿವೆ. ಭಕ್ತನೆ ತನಗೆ ಕಾಯವಾಗಿ ವಿಶ್ವಸುಖಸಾರವನ್ನು ಉಣ್ಣುತ್ತಿರುವ ದೇವನಿಗೆ ಭಕ್ತನೊಂದು ಆನಂದದ ಕರಂಡ. 'ಭಕ್ತಿಕಾಯ ಮಮಕಾಯ.' ಅಥವಾ ಭಕ್ತ ಲಿಂಗದ ಕಾಯ. ಲಿಂಗ ಭಕ್ತನ ಪ್ರಾಣ.

ವಸ್ತುಸ್ಥಿತಿ ಹೀಗಿದ್ದರೆ ಭಕ್ತ ಯಾರವ? 'ನಿಮ್ಮವ', ಲಿಂಗದವ. ಆತನ ಕೈ ಲಿಂಗದ ಕೈ; ಕಾಲು ಲಿಂಗದ ಕಾಲು; ಕಣ್ಣು ಕಿವಿ ಲಿಂಗದ ಕಣ್ಣು ಕಿವಿ; ಮನ ಬುದ್ಧಿ

೧. ಲಿಂ. ಲೀ. ವಿ. ಚಾ, ಪು. ೧೮೦, ಪ. ೭೨.

ಲಿಂಗದ ಮನ ಲಿಂಗದ ಬುದ್ಧಿ; ಆತನ ಆತ್ಮ ಲಿಂಗದ ಚಿದಂಗ. ಇಲ್ಲಿ ಸ್ವಲ್ಪ ನನ್ನ ಕಡೆ ನೋಡಿ. ಬರೆಯುತ್ತಿದ್ದೇನೆ ನಾನು. ಬರೆವುದು ನನ್ನ ಕೈ. ಬರೆದುದನ್ನು ನೋಡುತ್ತಿದೆ ನನ್ನ ಕಣ್ಣು. ವಿಚಾರ ಹರಿಯುತ್ತಿರುವುದು ನನ್ನ ತಲೆಯಿಂದ. ಹೀಗೆ ಬರೆಯುತ್ತಿರುವ ಕಾರ್ಯದಲ್ಲಿ ತೊಡಗಿದ ನಾನು ಯಾರು, ನಿಮಗೆ ಗೊತ್ತೇ? ನಾನೂ ಭಕ್ತ, ನಿಜವಾಗಿ ಭಕ್ತ. ಈ ಮಾತು ಕೇಳಿ ನೀವು ನಗಬಹುದು. ನೀವು ನಕ್ಕರೇನು? ಸತ್ಯ ಸತ್ಯವೇ? ನೀವು ನಕ್ಕರೆ ಬೆಂಕಿಯು ಕೆಂಡ ಹಿಮಖಂಡವಾದೀತೇ? ನಾನು ಭಕ್ತ. ಇದು ನಿಜ. ಯಾರ ಭಕ್ತ ಎಂದು ಕೇಳಿದರೆ, ಅದೊಂದು ಬೇರೆ ಪ್ರಶ್ನೆ. ನಾನು ನನ್ನ ಭಕ್ತ. ನನ್ನಲ್ಲಿರುವ ಮಾನವದೇಹ, ಮಾನವಪ್ರಾಣ, ಮಾನವಭಾವಿಯಾದ ನನ್ನ ಆತ್ಮ.–ಇದನ್ನೆ ನೀವು ಜೀವಾತ್ಮನೆಂದು ಕರೆವುದು–ಅದರ ಭಕ್ತ ನಾನು. ನನ್ನ ಕೈ ಕಾಲು, ಕಣ್ಣು ಕಿವಿ ಮೂಗು ನಾಲಗೆ ಮನಸ್ಸು ಬುದ್ಧಿ, ನನ್ನ ದೇಹ ನನ್ನ ಪ್ರಾಣ–ಇವೆಲ್ಲ ನನ್ನ ಅರಸು-ಆತ್ಮನ ಬಾಹತ್ತರ ಡಿಂಗರಿಗರೇ. ಹಗಲೆನ್ನದೆ ಇರುಳೆನ್ನದೆ, ಬಡತನ ಶ್ರೀಮಂತಿಕೆಯೆನ್ನದೆ, ಸುಖ ದುಃಖ, ಬೇನೆ ಬೇಸರ, ಚಿಂತೆ ಸಂಕಟ ಗಂಡಾಂತರ ಪ್ರಳಯಕಾಲ ಪ್ರಳಯಾಗ್ನಿಗಳು ಒಡ್ಡಿಕೊಂಡು ನಿಂತರೂ, ಈ ಡಿಂಗರಿಗರು ನನ್ನ ಸೇವೆ ಮಾಡುವುದನ್ನು ಬಿಟ್ಟು ಓಡುವುದಿಲ್ಲ. ನಾನು ಮುಳುಗಿದರೆ ಅವೂ ನನ್ನೊಡನೆ ಮುಳುಗುತ್ತವೆ ಕಾಲಭೂಮಿಯ ಸಾಗರದಲ್ಲಿ. ಈ ಡಿಂಗರಿಗರ ವಿಶ್ವಾಸ, ಭಕ್ತಿ, ಪೂಜೆ, ಸಾಮಾನ್ಯವಾಗಿ ಸಾಮಾನ್ಯರಿಗೆ ತೋರಿದರೂ, ನನಗೇನೋ ಅಸಾಮಾನ್ಯವಾಗಿ, ಅದ್ಭುತವಾಗಿ, ಅತ್ಯಂತ ಅದ್ಭುತವಾಗಿ ತೋರುತ್ತವೆ! ನನಗಾಗಿ ದುಡಿದು ದುಡಿದು, ಇದಿರಾದ ಜಗದೊಡನೆ ನನಗಾಗಿ ಹೋರಾಡಿ ಹೋರಾಡಿ, ಹೊನ್ನು ಹೆಣ್ಣು ಮಣ್ಣುಗಳ ಸಾವಿರಸುಖವನ್ನು ಹೊತ್ತು ಹೊತ್ತು ತಂದು ನನಗೆ ಕೊಟ್ಟು, ಮಾನಾಪಮಾನಕ್ಕೆ ಪಾಪಪುಣ್ಯಕ್ಕೆ. ನೀತಿ ಅನೀತಿ ನ್ಯಾಯ ಅನ್ಯಾಯಕ್ಕೆ ಹೆದರದೆ ಹೇಸದೆ. ನಾನು ಕೊಟ್ಟ ನಿರೂಪವನ್ನು ತಲೆಯಲ್ಲಿ ಹೊತ್ತು ತಿರುಗುತ್ತಿರುವ ನಾನು ನನ್ನ ಭಕ್ತನೇ. ದೇವರ ಪೂಜೆ ಮಾಡುವುದನ್ನು ನೀವು ನೋಡಿರಬಹುದು. ಮಜ್ಜನ ಗಂಧ ಮಾಲ್ಯ ಅಕ್ಷತೆ ಧೂಪ ದೀಪ ನೈವೇದ್ಯ ವಸ್ತ್ರ ವಾಹನ ತಾಂಬೂಲ ಮುಂತಾದುವೆಲ್ಲ ನನಗೆ ನಾ ಮಾಡಿಕೊಳ್ಳುತ್ತಿರುವ ಅರ್ಚನೆ ಪೂಜೆಗಳೆ. ನನಗೆ ನಾನು ನಡೆಸಿರುವ ಈ ಪೂಜೆ ಈ ಭಕ್ತಿ, ಈ ಅರ್ಪಣ ಈ ಸುಖದುಃಖಗಳ ಸಂಮಿಶ್ರವಾದ ಆನಂದಗಳನ್ನು ನೀವು ಸ್ವಾರ್ಥಪ್ರೇರಿತವಾದ ವ್ಯವಹಾರವೆಂದು, ಮಾನವಪ್ರಾಣಿಯ ಜೀವನವೆಂದು ಕರೆಯುತ್ತೀರಿ. ನಿಮಗಿಷ್ಟ ಬಂದ ಹೆಸರು ಕೊಡಿರಿ. ಅದಕ್ಕೆ ನನ್ನ ಆಕ್ಷೇಪವಿಲ್ಲ. ಅಂತೂ ಈ ನನ್ನ ಜೀವಾತ್ಮಪೂಜೆ, ಜೀವಾತ್ಮಭಕ್ತಿ ನಡೆದಿದೆ, ನಡೆದಿದೆ. ನನ್ನ ಈ ಮಾತಿನಲ್ಲಿ ನಿಮಗೆ ವಿಶ್ವಾಸವಿಲ್ಲದಿದ್ದರೆ, ಜೀವನಪ್ರಪಂಚದ ರಹಸ್ಯವನ್ನು ಕಂಡ ಅಲ್ಲಮ ಪ್ರಭುದೇವರ ಮಾತನ್ನು ಕೇಳಿ:

ಎಂಬತ್ತುನಾಲ್ಕು ಲಕ್ಷ ಯೋನಿಮುಖ ಜೀವಿಗಳಿಗೆ
ಎಂಬತ್ತುನಾಲ್ಕು ಲಕ್ಷಾರಾಧನೆ।

ಒಂದೊಂದಱಾರಾಧನೆಯನೊಂದೊಂದಱಿಯದೆ
ಗೊಂದಣಂಗೊಂಡು ಲಯವಾದುದಲ್ಲಾ ॥[೧]

ಇಲ್ಲಿ ಆರಾಧನೆ ಎಂದರೆ ಪೂಜೆಯೆಂದೇ ನಾನು ಅರ್ಥ ಮಾಡುತ್ತೇನೆ. ಪೂಜೆ ಇದ್ದಲ್ಲಿ ಭಕ್ತಿ ಅವಶ್ಯವಾಗಿ ಸನ್ನಿಹಿತವಾಗಿದೆ ಎಂದು ಇಟ್ಟುಕೊಳ್ಳುತ್ತೇನೆ. ಇರುವೆಗೆ ಇರುವೆ-ಜೀವನ ಪೂಜೆ; ಆನೆಗೆ ಆನೆ-ಜೀವನ ಪೂಜೆ. ಬೆಕ್ಕಿಗೆ ತನ್ನಲ್ಲಿಯೆ ಪ್ರೀತಿ, ಅದೇ ತನ್ನ ಭಕ್ತಿ. ಪಕ್ಷಿಗೆ ತನ್ನಲ್ಲಿ ಪಕ್ಷಿಭಕ್ತಿ; ಸಿಂಹಕ್ಕೆ ಸಿಂಹಭಕ್ತಿ. ಅಣುಜೀವಿಗೆ ಅಣುಭಕ್ತಿ, ತೃಣಜೀವಿಗೆ ತೃಣಭಕ್ತಿ. ಮರಕ್ಕೆ ಮರಭಕ್ತಿ, ಬಳ್ಳಿಗೆ ಬಳ್ಳಿಭಕ್ತಿ. ಅದರಂತೆ ನನ್ನಲ್ಲಿ ಭಕ್ತಿ ನನಗೆ. ಜಗತ್ತು ಪ್ರಳಯವಾದರೂ ಅಡ್ಡಿ ಇಲ್ಲ, ತಾನು ಉಳಿಯಬೇಕೆಂಬ ತನ್ನಲ್ಲಿಯ ಪ್ರೀತಿ, ಭಕ್ತಿ 'ಎಂಬತ್ತುನಾಲ್ಕು ಲಕ್ಷ ಯೋನಿಮುಖ ಜೀವಿಗಳಿಗೆ.' ಇರುವೆಯ ಜೀವನ ಇರುವೆಗೆ, ಮುಂಗುಲಿಯ ಜೀವನ ಮುಂಗುಲಿಗೆ, ನನ್ನ ಜೀವನ ವ್ಯವಹಾರ ನನಗೆ ಪೂಜೆಯಾಗಿದೆ, ಭಕ್ತಿಯಾಗಿದೆ ಎಂಬುದನ್ನು ಕೇಳಿದರೆ ನಿಮಗೆ ತಿಳಿಯಲಿಕ್ಕಿಲ್ಲ. ಆದರೆ ನೀವೇ ನಿಮ್ಮ ಜೀವನವನ್ನು ವಿಚಾರ ಮಾಡಿ ನೋಡಿರಿ. ಉಳಿದ ಜೀವಿಗಳಿಗೆ ವಿಚಾರಮಾಡಿ ನೋಡುವ ಸಾಮರ್ಥ್ಯವಿರಲಿಕ್ಕಿಲ್ಲ. ಆದರೂ ಮಾನವಪ್ರಾಣಿಯಲ್ಲಿ ಇತರ ಕೋಟಿ ಕೋಟಿ ಕೋಟಿ ಜೀವಾತ್ಮರಲ್ಲಿ ಅದೇ ಆರಾಧನೆ, ತನ್ನ ಆರಾಧನೆ, ತನ್ನಲ್ಲಿ ಏಕನಿಷ್ಠವಾದ ಆತ್ಮರತಿ 'ಗೊಂದಣಂಗೊಂಡು ಲಯ' ವಾಗುವ ವರೆಗೆ ಅವಿಚ್ಛಿನ್ನವಾಗಿ ನಡೆಯುತ್ತಿದೆ. ಈ ಪೂಜೆ ಭಕ್ತಿಗಳನ್ನು ಬೇಕಾದರೆ ಪಲ್ಲಟಪೂಜೆ ಭಕ್ತಿಗಳೆಂದು ಕರೆಯಿರಿ. ಅದು ತಪ್ಪಲ್ಲ. ಏಕೆಂದರೆ ಶರಣರು ಹೇಳುವಂತೆ, ಶಿವಶಕ್ತಿಯ ಅಧೋಮುಖವಾದ ಸೃಷ್ಟಿಯ ಲೀಲೆ ಅಜ್ಞಾನ ಮಾಯೆ ಅಹಂಭಾವದ ವ್ಯತ್ಯಸ್ತ ವಿಲಾಸ. ಅವರೇ ಹೇಳುವಂತೆ, 'ತನ್ನ ತಾನರ್ಚಿಸಿ ಪೂಜಿಸಿಕೊಂಬ' ಲೀಲಾವಿನೋದ, ಕೆಳಮುಖವಾಗಿ ಹಬ್ಬುತ್ತಿರುವ ಪ್ರಪಂಚಜೀವನವ್ಯವಹಾರದಲ್ಲಿ ಭವಸಂಸಾರದ ಮಾಯಾವಿಲಾಸವಾಗಿ ಕತ್ತಲೆ ಕವಿದು, ಬಂಧನ ಬಿಗಿದು, ಬೇರೆ ಗತಿಯಿಲ್ಲದೆ 'ಅನೀಶ'ವಾಗಿ ನಾಟಕ ನಾಟಕ ನಟಿಸುತ್ತಿದೆ.

ಪಂಚವಿಂಶತಿತತ್ತ್ವಾತ್ಮಕವಾದ ಪ್ರಕೃತಿಯಲ್ಲಿ ನಡೆದಿರುವ ಈ ಪೂಜೆ ನಿಮಗಿನ್ನೂ ಸ್ಪಷ್ಟವಾಗಿ ಕಂಡಂತೆ ತೋರುವುದಿಲ್ಲ. ಹಾಗಿದ್ದರೆ ಇಲ್ಲಿ ಕೇಳಿ, ಸಿದ್ಧರಾಮಯ್ಯದೇವರು ಮತ್ತು ಪ್ರಭುದೇವರು ನಡೆಸಿದ ಸಂಭಾಷಣೆಯನ್ನು:

---

೧. ಶೂ. ಸಂ. ಪು. ೩೮೨, ಪದ ೨.

ಈ ಸಂದರ್ಭದಲ್ಲಿ ಜೀವಪೂಜೆ ಶಿವಪೂಜೆ, ಜೀವಭಕ್ತಿ ಶಿವಭಕ್ತಿಯ ವಿಚಾರವನ್ನು ಸ್ಪಷ್ಟಗೊಳಿಸುವ ಉರಿಲಿಂಗಪೆದ್ದಿಗಳ ಮತ್ತೊಂದು ಮಾತು ಕೇಳಿ:

ಪಂಚಭೂತವಂಗವಾಗಿಪ್ಪಾತ್ಮಂಗೆ ಪಂಚೇಂದ್ರಿಯಂಗಳೇ ಮುಖಗಳು,
ಕರಣಂಗಳೇ ಕೈಗಳು, ಪಂಚವಿಷಯವು ಪೂಜೆ, ಪಂಚಪದಾರ್ಥವೆ ಭೋಗ.
ಇವನೆಲ್ಲವ ತನ್ನ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ,
ಆತ ಸರ್ವನಿರ್ವಾಣಿ, ಸಕಲ ನಿಃಕಲಾತ್ಮಕನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ವ. ಸಾ. ಸಂ. ಪು. ೧೮೬, ವ. ೧೮.

ಸಿದ್ಧ: ಅಣುವಿನೊಳಗೆ ಅಣುವಾಗಿಪ್ಪಿರೆಲೆ ದೇವಾ ನೀವು.
ಮನದೊಳಗೆ ಘನವಾಗಿಪ್ಪಿರೆಲೆ ದೇವಾ.
ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?
ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳ
ನೀವು ಮಾಡಿ ಒಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ,
ಕಪಿಲಸಿದ್ಧಮಲ್ಲಿನಾಥಯ್ಯಾ, ಎನಗೆ ಬೇಱೆ ಸ್ವತಂತ್ರವನಱಿಯೆನು.
ಪ್ರಭು: ಕಡೆನಾಡ ಲಿಂಗವ ನಡುನಾಡಿಗೆ ತಂದೆನೆಂಬ
ಅಹಂಕಾರವ ಮುಂದುಗೊಂಡಿದ್ದೆಯಲ್ಲಾ !
ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳೆಂಬ
ಬಯಲ ಭ್ರಮೆ ಇದೆಲ್ಲಿಯದು ಹೇಳಾ?
ಮಹಾಘನಲಿಂಗಕ್ಕೆ ಜಗದ ಜೀವರಾಶಿಗಳು ಶಿವಾಲಯವಾಗಬಲ್ಲರೆ?[೧]

. . . .

ಜೀವರಾಶಿಯೆಲ್ಲ ದೇವಾಲಯಗಳು. ಅಲ್ಲಿ ಒಳಗೆ, ದೇವಾಲಯ ದೇವಾಲಯದೊಳಗೆ ಕಪಿಲಸಿದ್ಧಮಲ್ಲಿನಾಥಯ್ಯ. ಇರುವೆ ಮೊದಲು ಆನೆ ಕಡೆಯಾಗಿ ಲಕ್ಷವಿಧದ ದೇವಾಲಯ. ಗರ್ಭಗುಡಿಯಲ್ಲಿ ವಾಸವಾಗಿರುವ ದೇವನೊಬ್ಬ, ಮಲ್ಲಿನಾಥಯ್ಯ. ಎಲ್ಲ ದೇವಾಲಯಗಳಲ್ಲಿ ಒಬ್ಬ ದೇವನ ಆರಾಧನೆಯೆ ನಡೆದಿದ್ದರೂ, ಜೀವಪೂಜೆ ಭಕ್ತಿ ಅರ್ಪಣಗಳು ನಡೆದಿದ್ದರೂ, ತಾನೆ ಮಲ್ಲಿನಾಥನಾಗಿ ನಿಂತಿದೆ ಇರುವೆ. ತಾನೆ ಮಲ್ಲಿನಾಥನಾಗಿ ತನ್ನ ಪೂಜೆ ನಡೆಸಿದೆ ಆನೆ. ಸಿಂಹದ ದೇವಾಲಯದಲ್ಲಿ ಮಲ್ಲಿನಾಥಸಿಂಹ ಆನೆದೇವಾಲಯವನ್ನು ಕೆಡವಿ ತನ್ನ ದೇವಾಲಯವನ್ನು ಭದ್ರಪಡಿಸಿಕೊಳ್ಳುತ್ತಿದೆ. ನೆಲದ ಮೇಲೆ ಜೀವನ ಪೂಜೆ ನಡೆಸಿರುವ ಈ ೮೪ ಲಕ್ಷ ಜೀವರಾಶಿಗಳ ಜೀವಂತ ದೇವಾಲಯದ ಮಾದರಿಯಲ್ಲಿಯೆ ಸಿದ್ಧರಾಮಯ್ಯ ಕಲ್ಲು ಮಣ್ಣಿನ ಶಿವಾಲಯಗಳನ್ನು ಕಟ್ಟಿಸಿದ,–'ಶಿವ ಜಗನ್ಮಯ'ಸ್ಥಲದ ಆಧಾರದ ಮೇಲೆ. ಅಜ್ಞಾನ-ಮಾಯೆ-ಅಹಂಭಾವದ ಜಾಡ್ಯದಲ್ಲಿ 'ಇರುವೆ ತಾನೆ ಮಲ್ಲಿನಾಥ'. 'ಆನೆ ತಾನು ಮಲ್ಲಿನಾಥ', 'ಸಿಂಹ ನಾನು ಮಲ್ಲಿನಾಥ'. 'ಅದೇಕೆ, ಮಾನವ ನಾನು ಮಲ್ಲಿನಾಥ'–ಎಂದು ತನಗೆ ತಾನೆ ದೇವನಾಗಿ, ತನ್ನ ತಾನೆ ಅರ್ಚಿಸಿ ಪೂಜಿಸಿಕೊಂಡು, ಅಂದರೆ ಜೀವನವನ್ನು ವ್ಯವಹರಿಸಿಕೊಂಡು, ಆನೆಯ ಪೂಜೆಯನ್ನು ಇರುವೆ ನೋಡದೆ, ಇರುವೆಯ ಪೂಜೆಯನ್ನು ಕರಡಿ ಗುರುತಿಸದೆ, ಕರಡಿಯ ಪೂಜೆಯನ್ನು, ಅದನ್ನು ತನ್ನ ಪೂಜೆಗೆ ಕುಣಿಸುವ 'ಕರೆತಲೆ'ಯ ಮನುಷ್ಯಪ್ರಾಣಿ ತಿಳಿಯದೆ, ಒಂದೊಂದು ಒಂದೊಂದರ ಭಕ್ತಿಪೂಜೆಯನ್ನು ವಿಧ್ವಂಸಗೊಳಿಸಿ, ತಮ್ಮ ಪೂಜೆಯೊಂದೇ ಪೂಜೆ, ತಾನೊಬ್ಬನೆ ಜಗದೇಕಭಕ್ತನಾಗಿ. ತನಗೆ ತಾನೆ ಜಗದೇಕ ದೇವನಾಗಿ ಬಾಳುತ್ತಿರುವ ಜೀವರಾಶಿಗಳು ಅದೆಂಥ ದೇವಾಲಯಗಳು? ಮಹಾಘನ ಲಿಂಗಕ್ಕೆ ಅವೆಂತು ಆಲಯವಾಗಬಲ್ಲುವು?–ಎಂದು ಪ್ರಭುದೇವರು ಆಕ್ಷೇಪಿಸುವುದು 'ಸರ್ವಗತ ನಿರಸನ' ಸ್ಥಲದ ಆಧಾರದ ಮೇಲೆ.[೨]

೧. ಶೂ. ಸಂ. ಪು. ೫೬, ವ. ೮೩-೮೪.

೨. ಹಿಂದೆ ಹೇಳಿದ 'ಎಂಬತ್ತುನಾಲ್ಕು ಲಕ್ಷ....' ಎಂಬ ಪ್ರಭುದೇವರ ಪದ್ಯವನ್ನೇ ಇಲ್ಲಿ ಗಮನಿಸಿ.

'ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ಶ್ರುತಿ ಹುಸಿ.

ಲಿಂಗವಿರ್ದ ಠಾವಿನಲ್ಲಿ ಪ್ರಳಯ ಉಂಟೆ?

ಭಕ್ತರ ಭಾವದಲ್ಲಿರ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗುಹೇಶ್ವರ.'[೧]

ಪ್ರಭುದೇವರು ಸಿದ್ಧರಾಮಯ್ಯನಿಗೆ ಕೊಟ್ಟ ಉತ್ತರದ ಅರ್ಥ ಇಲ್ಲಿ ಸ್ಪಷ್ಟವಾಗುತ್ತದೆ. ಜೀವರಾಶಿದೇವಾಲಯಗಳು ತಮ್ಮೊಳಗೆಲ್ಲ ಸಂಭ್ರಮಿಸಿ ತುಂಬಿರುವ ಗೊಹೇಶ್ವರನ ನರಿಯದ ಮರವೆಯ ಆಲಯಗಳು, ಪ್ರಳಯಕ್ಕೀಡಾದ ಆಲಯಗಳು, ನಿತ್ಯನಿರಾಳಕ್ಕೆ ಪೂಜೆ ತಾವಾಗಿ ಪೂಜಿಸಲರಿಯದ ಸ್ವಾರ್ಥಜೀವಪೂಜಕರು. ಅಗಲಲೆಡೆಯಿಲ್ಲದ ಗೊಹೇಶ್ವರ ಇಲ್ಲಿದ್ದಾನೆ, ನಿಜ. ಆದರೆ 'ಇದಾನೆ ಇಲ್ಲದಂತೆ.' ತನ್ನ ತಾನರಿದು ಪ್ರಳಯಕ್ಕೆ ಹೊರಗಾಗಿ, ತಾನೆ ತನ್ನ ನಿರಾಳದ ಪೂಜೆಯಲ್ಲಿ ನಿರತನಾದ ಭಕ್ತದೇವಾಲಯ ದಲ್ಲಿ 'ಗೊಹೇಶ್ವರನಿರ್ಪನು,' – ಮತ್ತೆಲ್ಲಿಯೂ ಇಲ್ಲದಂತೆ, ಇಲ್ಲಿಯೆ ಭಕ್ತರ ಭಾವದಲ್ಲಿ ಪ್ರಜ್ವಲಿಸುತ್ತ.

ಅಂತೂ ತಿಳಿದಾಗಲಿ ತಿಳಿಯದೆ ಆಗಲಿ, ಪರಶಿವಮಹಾಲಿಂಗದ ಭಕ್ತಿ ಪೂಜೆಯ ಲೀಲಾವಿಲಾಸ ವಿಶ್ವಪ್ರಪಂಚದಲ್ಲಿ ನಡೆದಿದೆ.[೨] ಈ ಅವಿರಳ ಪೂಜೆಯನ್ನು ನಡೆಸಿರುವ ಪ್ರತಿಯೊಂದು ಜೀವ-ಕಣಕ್ಕೆ ಅರ್ಥವಿದೆ. ಆ ಅರ್ಥವೇ ಪೂಜೆ, ಭಕ್ತಿ, ಅರ್ಪಣ. ತನ್ನ ನಿಜದರಿವಿನಲ್ಲಿ ತಾನು ಬೆಳಗಾಗಿ, ತನ್ನ ನಿಜವನ್ನೈದುವ ನಿಜರತಿಯೇ ಸದ್‌ಭಕ್ತಿ. ತಾನಾರೆಂದು ತನ್ನ ಅರಿವು ತನಗಿಲ್ಲದೆ ಬಹಿಃಪ್ರಪಂಚಮುಖವಾಗಿ ಹರಿವ ವಿಷಯ ಸಂಸಾರರತಿಯೇ ವಿಶ್ವಪ್ರಪಂಚಸೃಷ್ಟಿಯಲ್ಲಿ ಮಗ್ನವಾದ ಶಿವಶಕ್ತಿ.

---

೧. ಪ್ರ. ವ. ಪು. ೪೯, ವ. ೭೭.

೨. ಈ ವಚನವನ್ನು ಪರಿಶೀಲಿಸಿ ನೋಡಿರಿ:

ಅಖಂಡ ಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದೊಡೆ:
ಸದ್ಯೋಜಾತಮುಖದಿಂದಾದ ಪೃಥ್ವಿ, ಪತ್ರ ಪುಷ್ಪ ಲಿಂಗಕ್ಕೆ ಬೇಕೆಂದು
ಅನಂತ ಪತ್ರಪುಷ್ಪಂಗಳಿಂದ ಅರ್ಚಿಸುತ್ತಿಹುದು.
ವಾಮದೇವಮುಖದಿಂದಾದಪ್ಪು, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂದು
ಸಪ್ತಸಮುದ್ರ ದಶಗಂಗೆಗಳ ಕುಂಭವ ಮಾಡಿ ಮಜ್ಜನ ನೀಡಿಸುತ್ತಿಹುದು.
ಅಘೋರಮುಖದಿಂದಾದಗ್ನಿ ಲಿಂಗಕ್ಕೆ ಧೂಪ ದೀಪ ಆರುತಿಗಳಾಗಬೇಕೆಂದು
ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು.
ತತ್ಪುರುಷಮುಖದಿಂದಾದ ವಾಯು ಲಿಂಗಕ್ಕೆ ಜಪವ ಮಾಡಿಸುತ್ತಿಹುದು.
ಈಶಾನಮುಖದಿಂದಾದ ಆಕಾಶ, ಲಿಂಗಕ್ಕೆ ಭೇರಿ ಮೊದಲಾದ ನಾದಂಗಳ ಬಾರಿಸುತ್ತಿಹುದು.
ಗೋಪ್ಯಮುಖದಿಂದಾದ ಆತ್ಮನು ಲಿಂಗಕ್ಕೆ ಸಿಂಹಾಸನವಾಗಿರ್ಪುದು.
ಮನಚಕ್ಷುವಿನಿಂದಾದ ಚಂದ್ರಸೂರ್ಯರು ದೀವಿಗೆಗಳಾಗಿಹರು.
ಇಂತಪ್ಪ ಘನವಸ್ತುವು ಎರಡಾಗಿ,
ತನ್ನ ವಿನೋದಕ್ಕೆ ಅರ್ಚಿಸಿಕೊಂಬಾತನು ತಾನೇ, ಅರ್ಚಿಸುವಾತನು ತಾನೇ.
ಇಂತಪ್ಪ ಘನಲಿಂಗವು ಎನ್ನ ಕರಸ್ಥಲದೊಳಗೆ ಚುಳುಕಾಗಿ ನಿಂದ ನಿಲವ
ಎನ್ನೊಳರುಹಿದಾತ ನಮ್ಮ ಶಾಂತಕೂಡಲಸಂಗಮದೇವ.

ವ. ಸಾ. ಸಂ., ಪು. ೧೫೦, ವ. ೫೬.

ಶಿವಭಕ್ತಿಯು ಹಾದಿ ಲಿಂಗಸ್ಥಲಕ್ಕೆ ಹೋಗುವ ಲಿಂಗಮಾರ್ಗ. ಈ ಭಕ್ತಿಯ ಹಾದಿ ಹಿಡಿದು ನಡೆಯಲು ತನು ಮನ ಪ್ರಾಣ ಭಾವ ಮತ್ತೆ ವಿಶ್ವಪ್ರಪಂಚವೆಲ್ಲ ಅತ್ಯವಶ್ಯ ಬೇಕು. ಇವರಲ್ಲಿ ಒಂದು ಕೊರತೆಯಾದರೂ ಪರಿಪೂರ್ಣಭಕ್ತಿಯು ಸಂಭವವೆ ಇಲ್ಲ. ಅರಿವು ಲಿಂಗಸಂಗವಾಗಿ ಆನಂದಿಸುವಂತೆ, ತನುವಿನಲ್ಲಿ ತುಂಬಿರುವ ವಿಷಯಗಳ ಸಂಗಸುಖದ ವಾಸನೆ ಅಳಿದು, ಅಲ್ಲಿ ಲಿಂಗರತಿ ಲಿಂಗಪೂಜೆ ಲಿಂಗಭಕ್ತಿಯು ದಿವ್ಯವಾಸನೆ ತುಂಬಬೇಕು.

ಆದೊಡಾಲಿಸಿ ಕೇಳು ಭಕ್ತಿಯ ।
ಹಾದಿಗೊಂದೇ ಕೀಲು ದಿಟ ಬೇ ।
ಕಾಮದೀ ತನು ತನುವಿಡಿದು ಕಾಬುದು ಸಮಸ್ತವನು ॥
ಆದರಿಸಿಯೀ ತನುವ ಲಿಂಗೋ ।
ಪಾಧಿ (ದಿ?) ಯಲಿ ಜೋಗೈಸಿಕೊಳುತಲಿ ।
ಸಾಧಿಸುವುದು ಸಮಾಧಿಯನು ಬಸವಣ್ಣ ಕೇಳೆಂದ ॥[1]

ಭಕ್ತಿಯ ಹಾದಿಗೆ ತನುವೇ ಕೀಲು. ಅದೇ ಲಿಂಗಕ್ಕೆ ಹಾಕಿದ ಕಾಯಿ. ಅದೇ ಕೈ. ಅಂತೆಯೆ ಅದನ್ನು ಲಿಂಗದ ಓಪಾದಿಯಲ್ಲಿ ಜೋಗೈಸಬೇಕು: 'ತನುವೇ ಲಿಂಗವೆಂದು ಲಾಲಿಸಿ ಪಾಲಿಸಬೇಕು. ಕೇವಲಜ್ಞಾನಮಾರ್ಗದಲ್ಲಿ ತನುಮನಗಳನ್ನೆಲ್ಲ ಕಳೆದೊಗೆದು ನಿಲ್ಲಬಹುದು ಸೋಹಂಭಾವದಲ್ಲಿ. ಈ ಸರ್ವ ಸಂನ್ಯಾಸ ಮಾರ್ಗದಲ್ಲಿ. ವಿಶ್ವದಲ್ಲಿ ತೋರಿದ ಮಾನವಜೀವನದ ಅತಿಗಭೀರ ಅರ್ಥವನ್ನು, ಸುಖವನ್ನು ಕಂಡು ಉಣ್ಣುವ ಸಾವಧಾನಶಕ್ತಿ 'ದಿವಾಳಿ' ತೆಗೆದಂತಿದೆ. ಆದರೆ ಶರಣರ ಭಕ್ತಿಮಾರ್ಗದಲ್ಲಿ ತನು ಬೇಕು,- ಲಿಂಗವನಪ್ಪಿದ ತನು ಹಡೆಯಬಲ್ಲ ವಿಶ್ವಶೃಂಗಾರ ಸುಖ ವಿಲಾಸವನ್ನು ಅನುಭವಿಸಲಿಕ್ಕೆ. ಅದರಂತೆ ಪ್ರಾಣಲಿಂಗಕ್ಕೆ ವಾಹನವಾದ ಮನ ಬೇಕು; ಭಾವಲಿಂಗವನ್ನು ಹೊತ್ತು ಅನುಭಾವಸುಖ ಸಾಮ್ರಾಜ್ಯವನ್ನು ಸೂರೆಗೊಳಬಲ್ಲ ಭಾವ ಬೇಕು. – ಭಕ್ತಿ ಹಿಡಿದು ನಡೆದಿರುವ ಲಿಂಗಮಾರ್ಗದಲ್ಲಿ. ಲಿಂಗದ ಮುಖದಲ್ಲಿಯೆ ಮೂಡಿರುವ ನೆಲ ನೀರು ಮುಂತಾದ ವಿಶ್ವಪ್ರಪಂಚ ಬೇಕು, – ಲಿಂಗದ ಪೂಜೆ ಭಕ್ತಿ ಸರ್ವಾಂಗ ಮಂಗಳವಾಗಿ ಸಾಂಗವಾಗುವುದಕ್ಕೆ. ಹೆಂಡತಿ ಬೇಕು ಮಕ್ಕಳು ಬೇಕು, ಮನೆಮಾರು ಬಂಧು ಬಳಗ ದೇಶ ಕೋಶ ವಿಶ್ವಬ್ರಹ್ಮಾಂಡವೆಲ್ಲ ಬೇಕು.– ಲಿಂಗಮಾರ್ಗದ ಹಾದಿಕಾರನಿಗೆ. ಬೇಡ ಎಂಬ ವೈರಾಗ್ಯವಿಲ್ಲ ಈ ಶಿವಭಕ್ತಗೆ. ಆದರೆ ನನಗೆ ಬೇಕು ಎಂಬ ಆಶೆ ಇಲ್ಲ ಈ ಶಿವಭಕ್ತಿಯ ಎದೆಯಲ್ಲಿ. ಇದ್ದುದೆ ಪೂಜೆ, ಕೊಟ್ಟುದೆ ಅರ್ಪಣ, ಬಂದುದೆ

---

೧. ಪ್ರ. ಲಿಂ. ಲೀ. ಪು. ೨೧೮, ಗ. ೧೮. ಪ. ೧೩.

ಮತ್ತೆ ನೋಡಿರಿ:

'...ತನ್ನ ತನುವೇ ಲಿಂಗ ಮನವೇ ಪುಷ್ಪವಾಗಿ ಪೂಜೆಯ ಮಾಡುವಾತನೇ ಸದ್ಭಕ್ತ ಕಾಣಾ ಗುಹೇಶ್ವರಾ.'

ಅದೇ. ಪು. ೨೧೪, ವ. ೪.

ಪ್ರಸಾದ, ನಿಂದುದೆ ನಿಜನಿವಾಸ ಈ ಶಿವಭಕ್ತನಿಗೆ. ತನ್ನ ಅಂಗವನ್ನೆ ಲಿಂಗಕ್ಕೆ ಇರಲು ಅನು ಮಾಡಿಕೊಟ್ಟು ತಾನಿಲ್ಲದೆ ಇರುವ ಲಿಂಗಭಕ್ತ ಭಕ್ತಲಿಂಗನೆ.

ಸುಜ್ಞಾನ-ಸದ್ಭಕ್ತಿಯ ಹಾದಿಯಲ್ಲಿ ನಡೆಯುತ್ತ, ಬಲಿದು ಬೆಳೆಯುತ್ತ, ಅರಳಿ ಹೂವಾಗುತ್ತ, ಪರಿಪಕ್ವವಾಗಿ ಲಿಂಗದ ರಸ ತುಂಬಿ ಲಿಂಗದಲ್ಲಿ ಸಮರಸವಾಗುವ ಭಕ್ತಿಯ ವಿಕಾಸದ ಕ್ರಮವನ್ನು ಗೂಳೂರು ಸಿದ್ಧವೀರಣ್ಣೊಡೆಯರ ಮಾತಿನಲ್ಲಿ ಹೀಗೆ ಹೇಳಬಹುದು: ವಿಶ್ವಾಸವೇ ಪ್ರಾಣವಾಗಿ ಇರುವಾತ ಭಕ್ತ; ಆ ವಿಶ್ವಾಸದೊಳಗಣ ಏಕೋನಿಷ್ಠೆಯಲ್ಲಿ ನಿಂದಿರುವಾತ ಮಾಹೇಶ್ವರ; ಆ ನಿಷ್ಠೆಯೊಳಗೆ ಅತ್ತಿತ್ತ ಓಸರಿಸದೆ ನಿರಂತರ ಸಾವಧಾನದಿಂದ ಅರ್ಪಿತವ ಮಾಡುವಾತ ಪ್ರಸಾದಿ; ಆ ಸಾವಧಾನಾರ್ಪಿತ ದೊಳಗಣ ಸ್ವಾನುಭಾವ ವಿವೇಕ ಅಳವಟ್ಟಾತನೆ ಪ್ರಾಣಲಿಂಗಿ; ಆ ವಿವೇಕದೊಳಗಣ ಅರಿವಿನಿಂದ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವವನ್ನೈದಿದ ನಿರ್ಭಾವ ಪದದೊಳು ನಿಂದಾತನೆ ಐಕ್ಯ.

ಗುರುಕಾರುಣ್ಯದಿಂದ ಶಿವಜ್ಞಾನೋದಯವಾಗಿ, ಸರ್ವಾಂಗದಲ್ಲಿ ಲಿಂಗಕಳೆ ಅಂಕುರ ವಾಗಿ, ತಾನು ಜೀವಾತ್ಮನೆಂಬ ಜೀವಭಾವ ಹಿಂಗಿ, ತನ್ನ ಕಳೆಯಾದ ಲಿಂಗಕಳೆ,– ಚಿತ್ಕಳೆಯನ್ನು ಪ್ರತ್ಯಕ್ಷವಾಗಿ ಅಂಗೈಯ ನೆಲ್ಲಿಯಂತೆ ಕರಸ್ಥಲದಲ್ಲಿ ಕಂಡು, ಜೀವಾತ್ಮರತಿ ಕರಗುತ್ತ 'ತಾನು ಶಿವ'ನೆಂಬ ಶಿವಾತ್ಮಕಾಮ ಪಟುವಾಗಿ, ಶಿವಕಳೆಯೆ ತನ್ನ ಆತ್ಮ ಕಾಮದ, ಶಿವಾಪೇಕ್ಷೆಯ ಇಷ್ಟಮೂರ್ತಿಯ ಕಳೆ ಬೆಳಗು ದಿಟ ದಿಟವೆಂದು ನಂಬಿ ನಲಿದಿರುವುದೇ ವಿಶ್ವಾಸ. ಇದೇ ತಾನು ಲಿಂಗದ ಕಳೆಯೆಂಬ ದಿವ್ಯಶ್ರದ್ಧೆ. ತಾನು ಜೀವನೆಂಬ ಕಠೋರನಿಶ್ಚಯ ತನ್ನ ನಿಜಕಳೆಯ ದರ್ಶನದಲ್ಲಿ ಕರಗಿ, ಜೀವಭಾವಕ್ಕೆ ಕಟ್ಟಿದ ತನ್ನನ್ನು ಬಿಚ್ಚಿ, ತನ್ನ ನಿಜಭಾವಕ್ಕೆ ತನ್ನನ್ನು ಸಂಗಿಸುವುದೇ ಬಲಿದ ಶ್ರದ್ಧೆ, ವಿಶ್ವಾಸ, ಭಕ್ತಿ. ಈ ಭಕ್ತಿಯಲ್ಲಿ ಏಕನಿಷ್ಠೆ, ನಿಜನಿಷ್ಠೆಯಿಂದ ಅತ್ತಿತ್ತ ಸರಿದಾಡದ ನಿರಂತರ ಸಾವಧಾನ,– ಹಗಲಿರುಳು ಅನಿಮಿಷವಾಗಿರುವ ಎಚ್ಚರ–ಈ ಸಾವಧಾನದಲ್ಲಿ ಸರ್ವಾಂಗಲಿಂಗ ಪ್ರಸನ್ನವಾಗಿ ನಿಂದ ಸ್ವ-ಅನುಭಾವ, ಈ ಸ್ವಾನುಭಾವದ ಅರಿವಿನಲ್ಲಿ ಚಿತ್‌ಕಳೆಗೆ ಚಿತ್‌ಪರಿಪೂರ್ಣದೊಡನೆ ಸಮರತಿಯ ದಿವ್ಯಸಂಗಮ, ಈ ದಿವ್ಯರತಿಯ ಸುಖಾನಂದದಲ್ಲಿ ಎರಡು– 'ಸೋಹಂ ದಾಸೋಹಂ', 'ಸತಿ ಪತಿ', 'ಅಂಗ ಲಿಂಗ'– ಸಮರಸವಾಗಿ ಒಂದಾದ ಭಾವ, ತನ್ನ ತಾನರಿಯದಂತೆ ಪರವಶವಾಗಿ ನಿಂದ ನಿರ್ಭಾವ.– ಹೀಗೆ ಭಕ್ತಿಯ ರಸರತಿ ಮಾನವನನ್ನು ತನ್ನ ನಿಜಸ್ಥಲಕ್ಕೆ ಕೊಂಡೊಯ್ದು ಎರಡಿಲ್ಲ ದಂತೆ ಕೂಡಿಸುವ ಕ್ರಮವನ್ನೇ ಶರಣರು, ಆರು ಹಂತದಲ್ಲಿ ಅದರ ಹೊಸ ಹೊಸ ಆವಿಷ್ಕಾರವನ್ನು ಸೂಚಿಸುತ್ತಾರೆ. ಅದೇ ಷಟ್ಸ್ಥಲಮಾರ್ಗದ ಷಡ್ವಿಧವಾದ ಭಕ್ತಿ. ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸವೆಂದು ಆಯಾ ಸ್ಥಲದಲ್ಲಿ ವಿಶಿಷ್ಟವಾಗಿ ಆವಿಷ್ಕಾರವಾಗುವ ಆ ಸದ್ಭಕ್ತಿಗೆ ಹೆಸರು. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಲ್ಲಿ ಅಂಥ ಭಕ್ತಿ ಸುವ್ಯಕ್ತ ವಾಗುತ್ತ ನಡೆದರೆ, ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ– ಎಂಬ ಆರು ಲಿಂಗಾಂಗಸಂಬಂಧ ಸ್ಥಲಗಳ ಸಂಸಿದ್ಧಿ.

ಅನ್ಯರಜವ ಬೆರಸದೆ ತನ್ನ ರಜವ ಬಾಧಿಸದೆ,
ರವಿಯ ಬೆಳಸ ಬಳಸದೆ, ಲಿಂಗದ ಬೆಳಸ ತಂದು
ಜಂಗಮದಲ್ಲಿ ಸವೆಸುತ್ತಿರ್ಪನು.
ಆ ಭಕ್ತನಲ್ಲಿ ಗೊಹೇಶ್ವರನಿಪ್ಪನು೧

ಪ್ರಭುದೇವರ ಈ ವಚನದಲ್ಲಿ ಸದ್ಭಕ್ತನ ಹೃದಯವನ್ನು ಕಾಣಬಹುದು. ವೇದ ಆಗಮ ಗಳು ಹೇಳುವ 'ಶ್ರುತಜ್ಞಾನ'ವೇ ಅನ್ಯ ರಜ. ತನ್ನ ಸಮ್ಯಗ್‌ಜ್ಞಾನವೇ ತನ್ನ ರಜ. ಲಿಂಗಭಕ್ತ ಹೇಳಿಕೆಯ ಕೇಳಿಕೆಯ ಜ್ಞಾನವಿಡಿದು ನಡೆಯದೆ, ತನ್ನ ಶುದ್ಧಾಂತರಂಗ ದಲ್ಲಿಯೆ ಪ್ರತ್ಯಕ್ಷ ಅನುಭವಕ್ಕೆ ಬಂದ ಸ್ವಾನುಭಾವಜ್ಞಾನದ ಬೆಳಗಿನಲ್ಲಿಯೆ ಭಕ್ತಿಮಾರ್ಗ ದಲ್ಲಿ ಮುಂದೆ ಮುಂದೆ ನಡೆಯುತ್ತಾನೆ ಈತನಲ್ಲಿ ಪೂಜೆ ಭಕ್ತಿ ಅರ್ಪಣ ಮುಂತಾದ ಕ್ರಿಯೆ ನಡೆದಿವೆ. ಆದರೆ ಅವು ನಡೆವುದು ಸೂರ್ಯೋದಯದಲ್ಲಿ, ಮಾನವನ ಜಾಗ್ರದವಸ್ಥೆಯಲ್ಲಿ ನಡೆದ ಕ್ರಿಯೆಗಳಲ್ಲ. ಇನ್ನೂ ಮೇಲೆ ಎಚ್ಚರವಾಗಿದ್ದಾನೆ ಭಕ್ತ. ಆತನ ಎಚ್ಚರ ಸೂರ್ಯನ ಬೆಳಕಿಗೆ ಬೆಳಗನ್ನು ಕೊಡುವ ಲಿಂಗೋದಯದ ಎಚ್ಚರ. ಈ ಎಚ್ಚರದಲ್ಲಿ ನೆಲ ನೀರು ಗಿಡು ಮರ ಬಳ್ಳಿ ಧೂಪ ದೀಪ ಗಂಟೆ ಜಾಗಟೆ ದೇವಾನ್ನ ದಿವ್ಯಾನ್ನ ವಸ್ತ್ರ ತಾಂಬೂಲವೆಲ್ಲ ಸೂರ್ಯ – ಪೃಥಿವಿಗೆ ಹುಟ್ಟಿದ ರವಿಯ ಬೆಳಸಲ್ಲ. ಶಿವನ ಪಂಚಮುಖದಿಂದ ಒಗೆದ ಪಂಚವಿಂಶತಿ ತತ್ತ್ವ ಪದಾರ್ಥಗಳ ಬೆಳಸು; ಅಂತೆಯೆ ಲಿಂಗದ ಬೆಳಸು. ಇಲ್ಲಿ, ಸಮ್ಯಗ್‌ಜ್ಞಾನದ ವಿಶ್ವಗಭೀರ ಪ್ರಭೆಯಲ್ಲಿ ನಿಂದಿರುವ ಲಿಂಗಭಕ್ತ ಲಿಂಗಕ್ಕೆ ನಿವೇದಿಸುವ ನೆಲ ನೀರು ಪತ್ರಿ ಪುಷ್ಪ, ಅನ್ನ ಪಾನ ತಾಂಬೂಲ ಮುಂತಾದ ಪೂಜಾಸಾಮಗ್ರಿಯೆಲ್ಲ 'ಲಿಂಗದ ಬೆಳಸು', 'ನಿಮ್ಮ ದಾನ.' ಲಿಂಗದಲ್ಲಿ ಉದಯವಾದ ತಾನು ತನ್ನನ್ನು ಮತ್ತು ಲಿಂಗ ಬೆಳೆದ ವಿಶ್ವಪದಾರ್ಥಗಳನ್ನು ಲಿಂಗಕ್ಕೆ, ಲಿಂಗಮುಖವಾದ ಜಂಗಮಕ್ಕೆ ಸವೆಸುತ್ತಿರುವ ಭಕ್ತ ಲಿಂಗದೇವನ ನಿಜ ವಾಸಸ್ಥಲ. ಇಲ್ಲಿ ಹೇಳುವ ಜಂಗಮ ಎಂದರೆ ಷಟ್ಸ್ಥಲಜ್ಞಾನ ಭಕ್ತಿ ಸಂಪೂರ್ಣವಾಗಿ ಅಳವಟ್ಟ,

'ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ ॥'

ಎಂದು ಹೇಳುವ ಸರ್ವಲೋಕಕಲ್ಯಾಣಮೂರ್ತಿ. ಜಂಗಮ ಎಂದರೆ ಚರಲಿಂಗ, ನಡೆದಾಡುವ ಮಾನವಲಿಂಗ. ಗುರು ಕೊಟ್ಟ ಕರಸ್ಥಲದ ಇಷ್ಟಲಿಂಗ ಭಕ್ತ ಕೊಟ್ಟ ಭಕ್ತಿ ದ್ರವ್ಯವನ್ನು ಉಣ್ಣಲಿಲ್ಲ. ಆ ಲಿಂಗದ ಬಾಯಿ ಜಂಗಮಲಿಂಗ. ಮರದ ಬೇರಿಗೆ ನೀರನ್ನೆರೆದರೆ ಮರ ಪಲ್ಲವಿಸುವಂತೆ, ಜಂಗಮಲಿಂಗಕ್ಕೆ ಭಕ್ತಿಯನೆರೆದರೆ ಲಿಂಗದೇವ ಪಲ್ಲವಿಸಿ ಹಬ್ಬುತ್ತಾನೆ ಭಕ್ತನ ಸರ್ವಾಂಗದಲ್ಲಿ. ಈ ಭಕ್ತನಲ್ಲಿ 'ಗೊಹೇಶ್ವರನಿಪ್ಪನು.' ಇದು ಯಾರಿಗೆ ಗೊತ್ತು? ಭಕ್ತನ ಹೃದಯಕ್ಕೆ ಗೊತ್ತು; ಅಲ್ಲಿ, ಗುಹೆಯಲ್ಲಿ ಒಡೆದು ಮೂಡಿ ಬೆಳಗುವ ಹೃದಯೇಶ್ವರ, ಗುಹೇಶ್ವರಲಿಂಗಕ್ಕೆ ಗೊತ್ತು. ಅದು ಮೂಗ

೧. ಶೂ. ಸಂ. ಪು: ೧೮, ವ. ೫೭.

ಕಂಡ ಕನಸು. ಅಲ್ಲಿ ಶಬ್ದ ಮೀಸಲು, ಬುದ್ಧಿ ಮುಗ್ಧ. ಅದನ್ನು ತೋರಿಸಲಿಕ್ಕೆ ಕೈ ಇಲ್ಲ, ನೋಡಲಿಕ್ಕೆ ಕಣ್ಣು ಇಲ್ಲ.

'ತನುವಿನೊಳಗನು ಕಾಣದಿರ್ದೊಡೆ ಭಕ್ತಿರತಿಯಿಲ್ಲ'[೧] – ಎಂಬ ಪ್ರಭುದೇವರ ನಿಜಭಕ್ತಿಸೂತ್ರವನ್ನು ನಾವು ಯಾವಾಗಳೂ ನೆನಪಿನಲ್ಲಿಟ್ಟುಕೊಂಡಿರಬೇಕು, ಶರಣರ ಭಕ್ತಿಮಾರ್ಗದ ಮರ್ಮವನ್ನು ತಿಳಿವುದಕ್ಕೆ. ಕಂಡ ರಮಣನಲ್ಲಿ ರತಿಯ ಕಳೆಯಲ್ಲದೆ ಕಾಣದ ಕಲ್ಪಿತದಲ್ಲಿಯ ರತಿ ಕಲ್ಪಿತರತಿ. ಅದು ಸತ್ಯಪ್ರೇಮದ ರತಿಯಲ್ಲ. ಭಕ್ತನ ತನುವಿನೊಳಗೆ ಅನು ಅಂದರೆ ಲಿಂಗಮೂರ್ತಿ ಮೂಡಿ ನಿಂತಿದೆ. ಅಂತೆಯೆ ಭಕ್ತನ ಹೃದಯದಲ್ಲಿ ಭಕ್ತಿರತಿ ಮೂರ್ತಿಯಲ್ಲಿ ನೇರವಾಗಿ ನುಗ್ಗುತ್ತದೆ. ಭಕ್ತ ಲಿಂಗದಲ್ಲಿ ಹರಿದರೆ ಭಕ್ತಿ. ನದಿ ಸಮುದ್ರದಲ್ಲಿ ಹರಿದರೆ ಸಮುದ್ರ. ತನ್ನ ತಾ ಕೂಡುವ ತವಕವೆ ಭಕ್ತಿಯ ಶಿವಸಂಭ್ರಮ. ಅದೇ ಮಾನವಜೀವನದ ಪಂಚಮ ಪುರುಷಾರ್ಥ.

ಈ ಭಕ್ತಿಸ್ಥಲದಲ್ಲಿ ತನುವಂಚನೆ ಮನವಂಚನೆ ಧನವಂಚನೆಗೆ ಅನುವಿಲ್ಲ. ಅರ್ಥ ಪ್ರಾಣ ಅಭಿಮಾನ, ಗುರು ಲಿಂಗ ಜಂಗಮದ ಸೊಮ್ಮು. ಅವು ತನಗೆ ಬೇಕೆಂದು ಕದ್ದು ಮುಚ್ಚಿ ಇಟ್ಟುಕೊಂಡರೆ ಅದೆಂಥ ಭಕ್ತಿ? ಪ್ರಾಣನಾಥನಿಗೆ ನೀಡದೆ ಕದ್ದುಣ್ಣುವ ಹೆಂಡತಿ ಎಂಥ ಪ್ರಾಣಕಾಂತೆ? ಇಲ್ಲಿ ಮಾತಿನ ಮಾತಿನಲ್ಲಿ ಭಕ್ತಿಯನ್ನು ಬೆಳೆವಂತಿಲ್ಲ. ಮಾತಿನಲ್ಲಿ ಭಕ್ತಿ ಮನದಲ್ಲಿ ವಿಷಯದಾಶೆ! ಭಕ್ತಿ ಅಳವಡುವುದೆಂತು? ಒಳಗೆ ಭವಿ ಹೊರಗೆ ಭಕ್ತನುಂಟೇ? ಮತ್ತೆ ಹಮ್ಮಿನ ಭಕ್ತಿ ದ್ರವ್ಯದ ಕೇಡು, ದೇಹ ಪ್ರಾಣದ ಕೇಡು, ಕಡೆಗೆ ತನ್ನ ಕೇಡು. 'ದಾಸೋಽಹಂ'ಭಾವದ ಭಕ್ತನಲ್ಲಿ ಭೃತ್ಯಾಚಾರ ತುಂಬಿ ಹರಿಯಬೇಕು. ಕೈ ಭಕ್ತನಾಗಬೇಕು ಲಿಂಗಕ್ಕೆ, ಕಾಲು ಭಕ್ತನಾಗಬೇಕು ಲಿಂಗಕ್ಕೆ. ಕಣ್ಣು ನೋಡಬೇಕು ಲಿಂಗಕ್ಕೆ, ಕಿವಿ ಕೇಳಬೇಕು ಲಿಂಗಕ್ಕೆ. ಮನ ಭಾವ ಸದಾ ಸಿದ್ಧವಾಗಿರಬೇಕು ಲಿಂಗದೇವನ ತೊತ್ತುಗೆಲಸಕ್ಕೆ. ದಂಭ ಕಪಟ ಮೋಸ, ಖ್ಯಾತಿ ಆಡಂಬರ ಲೋಕವನ್ನು ಮರುಳುಗೊಳಿಸಬಹುದು, ಮೆಚ್ಚಿಸಬಹುದು. ಆದರೆ 'ಮನ ಮೆಚ್ಚಿ ನಡೆಯದೆ ಜನ ಮೆಚ್ಚಿ ನಡೆದರೆ ಮನದಾಣ್ಮ ಗುರುಸಿದ್ಧ ಮರೆಯಾಗ್ವನಲ್ಲಾ !' ಅಂತರಂಗ ಬಹಿರಂಗ ಶುದ್ಧವಿಲ್ಲದವನ ಭಕ್ತಿ ಆಕಾಶದ ನಕ್ಷತ್ರಕ್ಕೆ ಪಾತಾಳದ ಮಿಂಚುಹುಳು ಬಾಯಿಬಿಟ್ಟಂತೆ. ಮೋಡಗಳೆದ ಆಕಾಶದಂತೆ ಪ್ರಸನ್ನ ಗಂಭೀರವಾಗಿರಬೇಕು ಶಿವಭಕ್ತಿ ಬೆಳೆವ ಸದುಹೃದಯ.

ಮತ್ತೆ ಮುಂದೆ ನಡೆದರೆ ನಾವು ಬರುವುದು ಮಾಹೇಶ್ವರಸ್ಥಲಕ್ಕೆ. ಈ ಸ್ಥಲದ ವಿಶೇಷವೇನು? ನಿಷ್ಠೆ, ಏಕನಿಷ್ಠೆ, ಲಿಂಗೈಕನಿಷ್ಠೆ. ಸದ್‌ಭಕ್ತಿಗೆ ಯೌವನ ಪ್ರಾಪ್ತವಾಗಿದೆ ಇಲ್ಲಿ. ವೀರ ಧೀರ ಶೂರ, ಛಲ ನಿಯಮ ವ್ರತ, ದೃಢ ನಿರ್ಧಾರ ನಿಶ್ಚಯ, ನಿರ್ಭೀತಿ ನಿರ್ವಂಚನೆ ನಿಸ್ಸಂದೇಹಗಳು ಹುಲುಸಾಗಿ ಬೆಳೆದು ನಿಂತಿವೆ ಈ ಸ್ಥಲದಲ್ಲಿ. ಪತಿವ್ರತೆಯ ತನು ಮನ ಹೃದಯ ನಟ್ಟಿರುವುದು ತನ್ನ ಚಿತ್ರರಮಣನಲ್ಲಿ. ಸ್ವಾಮಿಯೇ ತನ್ನ ಪ್ರಾಣವೆಂದು ದುರ್ಯೋಧನನಲ್ಲಿ ಏಕನಿಷ್ಠನಾಗಿದ್ದ ಕರ್ಣ ನಿಮಗೆ ಗೊತ್ತು.

---

೧. ಪ್ರ. ಲಿಂ. ಲೀ. ಪು. ೨೨೦, ಗ. ೧೮, ಪ. ೧೫.

ರಾಮಚಂದ್ರನಲ್ಲಿ ತೆಗೆಯಬಾರದಂತೆ ನಟ್ಟಿದ್ದ ಸೀತಾದೇವಿ ನಿಮಗೆ ಗೊತ್ತು. ಲಿಂಗದಲ್ಲಿ ನಟ್ಟ ಭಕ್ತನ ಭಕ್ತಿಯೇ ನಿಷ್ಠಾಭಕ್ತಿ. ಆ ಏಕೈಕನಿಷ್ಠೆಯೇ ಮಾಹೇಶ್ವರನ ಪ್ರಾಣ.

ನಿಷ್ಠೆಯಿಲ್ಲದ ಭಕ್ತಿ ಪೂಜೆ, ಧ್ಯಾನ ಧಾರಣಗಳನ್ನು ಏಸು ಕಾಲ ಮಾಡಿದರೇನು? ಒಮ್ಮೆ ಲಿಂಗಭಕ್ತ ಮತ್ತೊಮ್ಮೆ ಶೈವಭಕ್ತ; ಒಮ್ಮೆ ಶಂಭೋಶಂಕರ ಮತ್ತೆ ಹರಿ ನಾರಾಯಣ, ವೆಂಕಟರಮಣ ಗೋವಿಂದ; ಮತ್ತೆ ಎಲ್ಲವ್ವ ನಿನ್ನ ಹಾಲಕುಧೋ ಉಧೋ, ಏಳುಕೋಟಿಗೋ, ಬಳಿಕ ಗೊಡಚಿ ವೀರಣ್ಣ ಕಾಶೀ ವಿಶ್ವನಾಥ, ನಂತರ ಮಾರಿ ಮಸಣಿ ದುರ್ಗವ್ವ ಕರಿಯವ್ವ ಮತ್ತೆ ಲಕ್ಷ್ಮಿ ಸರಸ್ವತಿ ಆಲ ಬೇವು, ಒನಕೆ ಬೆನಕ ಗುಂಡಕಲ್ಲು ನಾಗಬೆತ್ತ ತಾಯಿತ ಕರಿಮಣಿ, ಹನುಮಂತ ಬರ್ಮಪ್ಪಾ, ಬೀರಪ್ಪ ಕೆಂಚಪ್ಪ, ಮೇಲೆ ಶುಭ ಅಶುಭ ತಿಥಿ ವಾರ ನಕ್ಷತ್ರ, ತೀರ್ಥಯಾತ್ರೆ ಕ್ಷೇತ್ರ, ವರದಶಂಕರ ಸತ್ಯನಾರಾಯಣ, ಮತ್ತೆ ಕುಲ ಜಾತಿ ವರ್ಣ, ಗೋತ್ರ ಸೂತ್ರ ಶಾಖೆ ಪಂಚಸೂತಕ ಪಂಚಪಾತಕ, ಉಪವಾಸ ಜಾಗರಣೆ ಪಾರಾಯಣ, ಮಂತ್ರ ತಂತ್ರ ವಾದ ವಶ್ಯ, ಯಜ್ಞ ಯಾಗ ಜಪ ತಪ – ಹೀಗೆ ಹಲವಕ್ಕೆ ಹರಿವ ಹೃದಯದಲ್ಲಿ ಭಕ್ತಿ ನಿಷ್ಠೆಯ ಕುರುಹುಂಟೇ? ಧೃಢವಿಲ್ಲದ ಭಕ್ತಿಗೆ ಇಲ್ಲಿ ಆಧಾರವಿಲ್ಲ, ಅಲ್ಲಿ ಸ್ಥಾನವಿಲ್ಲ. ಕಾಲಕ್ಕೆ ತಕ್ಕಂತೆ, ಅನುಕೂಲ ಬಂದಂತೆ ಭಕ್ತಿಯನ್ನು ಕಿತ್ತು ಊರುತ್ತ ಹೋದರೆ, ಭಕ್ತಿ ಬೇರುಬಿಟ್ಟು ದಿವ್ಯದ ವಿಸ್ತಾರಕ್ಕೆ ಹರಡುವುದೆಂತು? 'ಗುರುಃ ಸಾಕ್ಷಾತ್ ಪರಬ್ರಹ್ಮ'ವು ಕರುಣಿಸಿ ಕರಸ್ಥಲಕ್ಕೆ ತಂದು ಕೊಟ್ಟ ಚಿತ್‌ಕಲಾಲಿಂಗವು ಕಣ್ಣ ಮುಂದೆ ಬೆಳಗುತ್ತಿರಲು, ಬೇರೆ ತಿಥಿ ವಾರ ಕರ್ಮ ಸೂತಕ ತೀರ್ಥಯಾತ್ರೆಗೆ ಹರಿವ ಬುದ್ಧಿಯನ್ನು, ತಾಮಸಭಕ್ತಿಯನ್ನು ಏನೆಂದು ಕರೆಯಬೇಕು?

> ಕೊಟ್ಟ ಕುದುರೆಯನೇಱಲಱಿಯದೆ
> ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ.
> ಇದುಕಾರಣ ಮೂಱುಲೋಕವೆಲ್ಲಾ
> ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ ಗುಹೇಶ್ವರಾ ![೧]

ಜಾತ್ಯಶ್ವವನ್ನು ಏರಿಕೊಂಡು ಊರಿಗೆ ಹೋಗೆಂದರೆ ಹಲ್ಲಣವ ಹೊತ್ತುಕೊಂಡು ಬೇರೆ ಬೇರೆ ಕುದುರೆಯ ಬೇಡುತ್ತ ಇಲ್ಲಿಯೆ ತೊಳಲಿ ಬಳಲುವ ಲೋಕ ಲೌಕಿಕಾಚಾರದ ವಿಶ್ವಾಸದವರೆಂಥ ವಿಚಿತ್ರ? ನೂರು ದೈವ, ಸಾವಿರ ಕುಲ ಜಾತಿ ವರ್ಣಾಶ್ರಮ, ತಿಥಿ ವಾರ ಶ್ರಾವಣ ಶಿವರಾತ್ರಿಯ ಭಕ್ತರು, ಕಲ್ಲು ಮಣ್ಣು ಮರ ಬೊಂಬೆಯ ಭಕ್ತರು, ತೀರ್ಥಯಾತ್ರೆಯ ಭಕ್ತರು, ನಿಯಮ ಉಪವಾಸ ನಮಕ ಚಮಕದ ಭಕ್ತರು ನಿಜ ಭಕ್ತಿಯ ಮಾರ್ಗವನವರೆತ್ತ ಬಲ್ಲರು? ಆಪತ್ತಿಗೆ ಒಬ್ಬ ದೇವರು ವಿಪತ್ತಿಗೆ ಬೇರೊಬ್ಬ ದೇವರು, ಬಡತನಕ್ಕೆ ಒಬ್ಬ ದೇವರು ಶ್ರೀಮಂತಿಕೆಗೆ ಮತ್ತೆ ಬೇರೆ ದೇವರು, ಮಳೆ ಹೋದರೆ ಜಲದೇವರು, ಬರಬಿದ್ದರೆ ಅನ್ನದೇವರು, – ಒಟ್ಟು ಎಷ್ಟು ದೇವರು? ಒಂದು ಮಾನವಪ್ರಾಣಿಯು ಹೃದಯವನ್ನು ಪುಡಿಮಾಡಿ ಎಷ್ಟು ಭಕ್ತರನ್ನು ನಿರ್ಮಿಸ ಬೇಕು? ನನ್ನ ದೇವರು, ನನ್ನ ಹೆಂಡತಿಯ ದೇವರು, ನೆರೆಯವರ ದೇವರು, ಹೊರೆ

---

೧. ಶೂ. ಸಂ. ವು. ೧೮, ವ. ೫೯.

ಯವರ ದೇವರು, ಈ ನಾಡಿನ ದೇವರು, ಆ ನಾಡಿನ ದೇವರು, ಈ ಕಾಲದ ದೇವರು, ಹಿಂದಿನ ಕಾಲದ ಪುರಾತನ ದೇವರು, – ಎಲ್ಲ ದೇವರನ್ನು ಕೂಡಿಸಿ ಒಂದೆಡೆಯಲ್ಲಿ ನಿಲ್ಲಿಸಿದರೆ ದೇವರೇ ನಕ್ಕಾನು. ನಾಮ ಹಲವಾದ ದೇವನೊಬ್ಬ ನಕ್ಕರೂ ಮನುಷ್ಯ ಪ್ರಾಣಿ ಬಿಟ್ಟಿಲ್ಲ ತನ್ನ ಭಿನ್ನ ಬುದ್ಧಿಯ ದೇವರ ಸೃಷ್ಟಿಯನ್ನು.

ನಿಚ್ಚಳ ಪತಿವ್ರತೆಗೆ ದೇವನೊಬ್ಬ ಪತಿದೇವ, ವ್ರತ ಒಂದು ಪತಿವ್ರತ. ಪತಿಯೇ ಕುಲ ಪತಿಯೇ ಜಾತಿ. ಪತಿಯೇ ತೀರ್ಥ ಕ್ಷೇತ್ರ ಯಾತ್ರೆ. ಪತಿಯೇ ತಿಥಿ ವಾರ ನಕ್ಷತ್ರ. ಆತನೇ ಸರ್ವ ಧರ್ಮ, ಆತನೇ ಸಕಲ ಪುಣ್ಯ. ಆತನೇ ಭಾಗ್ಯ ಆತನೇ ಸಂಪತ್ತು. ಇಂಥ ಮಹಾಸತಿಯ ಪರಿಶುದ್ಧ ಪ್ರೇಮ ತನ್ನ ನಾಥನಲ್ಲಿಯೆ ನಿಷ್ಠವಾಗಿರುವಂತೆ ಸದ್‌ಭಕ್ತನ ಭಕ್ತಿ ಲಿಂಗೈಕನಿಷ್ಠವಾಗಿದೆ. ಕೊಟ್ಟ ಕುದುರೆಗೆ ಹಲ್ಲಣ ಹಾಕಿ ನಿಜಸ್ಥಲಕ್ಕೆ ನಡೆದಿರುವ ಭಕ್ತ ದೇಹವನ್ನು ಹೊತ್ತುಕೊಂಡು ಬಳಲುವ ಹಲ್ಲಣದ ಹೇಡಿಯಲ್ಲ.

ಲಿಂಗದೇವೈಕನಿಷ್ಠನಾಗಿ, ಅಸತ್ಯ ಅನೀತಿ ಪರಧನ ಪರಸ್ತ್ರೀ ಪರಹಿಂಸೆ ಪರಲೋಕ ಪರದೈವವ ಹೊದ್ದಲೀಯದೆ, 'ಲಿಂಗವ ಪೂಜಿಸಿ ಲಿಂಗದ ಹಂಗನೊಲ್ಲ'ದೆ, ಅಪ್ರತಿಮ ಛಲಿಯಾಗಿ ಜಗದೇಕಧೀರನಾಗಿ 'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ' ಇಂದು ಬೇಕು ನಾಳೆಗೆ ಕಾದಿಡಬೇಕು ಎಂಬ ಲೋಭವ ಅತ್ತತ್ತ ಕೆಡೆನೂಕಿ, 'ಸದಾ ಸಂತುಷ್ಟಹೃದಯಃ ಸರ್ವಪ್ರಾಣಿಹಿತೇ ರತಃ'[೧] ತಾನಾಗಿ, ನಯ ವಿನಯ ಭಯ ಭೃತ್ಯಾಚಾರವೆ ಅಂಗವಾಗಿ ಇರಬಲ್ಲರೆ ಆತ ಮಾಹೇಶ್ವರ. ಲಿಂಗದೇವನಲ್ಲಿ ನಿಷ್ಠೆ, ಏಕೈಕನಿಷ್ಠೆ ಗಟ್ಟಿಗೊಂಡಿದೆಯೆ? 'ಗರಿ ಸೋಂಕೆ ಗಂಡರೆಂಬರ ಕಾಣೆ, ನಿರಿ ಸೋಂಕೆ ಮುನಿಯಿಲ್ಲವಯ್ಯಾ' ಎಂದು ಬಸವಣ್ಣನವರು ಹೇಳುವ ಮಾತು ನೀವು ಕೇಳಿರಬಹುದು. ನಾನು ವೀರ ನೀನು ಶೂರ. ನಾನು ಬ್ರಹ್ಮಚಾರಿ ನೀನು ಸಂಯಮಿ. ಬಾಣದ ಗರಿ ಎದೆಗೆ ಮುಟ್ಟಿದರೆ, ವೀರ ಅಚಲಿತವಾಗಿ ನಿಲ್ಲುವುದೇ? ಬಾಲೆಯರ ಸಿಂಗರದ ನಿರುಗೆ ಸೋಂಕಿದರೆ, ಬ್ರಹ್ಮಚಾರಿ ಓಡಿ ಹೋಗದೆ, ಸೋಲದೆ ನಿಲಬಲ್ಲನೆ? ಅಂದರೆ ಆತ ವೀರ, ಆತ ಮುನಿ, ಆದರೆ ಇವೆಲ್ಲ ಎಂಥ ಬೆಂಕಿಯ ತಿರುಗುಣಿ! ಜೀವನದಲ್ಲಿ ಎಂಥೆಂಥ ವಿಷಸನ್ನಿವೇಶಗಳು ಇದಿರೆದ್ದು ಸದ್ದುಹೊಡೆಯಬಹುದು! 'ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು.' ತನು ಮನ ಧನ ಪ್ರಾಣ ಹೃದಯ, ಹೆಂಡತಿ ಮಕ್ಕಳು ಮನೆ ಮಾರನ್ನು ಅಗಲಾಡಿಸಿ ನೋಡುವ ವಿಷಮಪರೀಕ್ಷೆಗಳ ಕಾಲ ಒಂದರ ಮೇಲೊಂದು ಬಿದ್ದು ಬರಬಹುದು, ತನು ಗಟ್ಟಿಯಾಗಿ ನಿಷ್ಠವಾಗಿದೆಯೆ ಲಿಂಗದಲ್ಲಿ? ಮನ ಅಲುಗದಂತೆ ಕೂತಿದೆಯೆ ತನ್ನ ಏಕೋ ದೇವನಲ್ಲಿ? ಒಡವೆ ಸವೆದರೆ ಒಡಲನ್ನು ದೇವನ ಸೇವೆಯಲ್ಲಿ ಸಮರ್ಪಿಸುವ ಕಡುಗಲಿತನವಿದೆಯೇ?

ಅಡಿಗಡಿಗೆ ಬಂದ(ದೆ?)ಡರುತಿಪ್ಪ ಕಡುಂಛಲ ನಿನಗೆ ಬೇಡ ಕಂಡಾ!
ಮೃಡನೆ, ಎನ್ನೊಡನೆ ನೀ ತೊಡರಿ ಸಸಿನ ಹೋಗಲರಿಯೆ.

---

೧. ಸಿ. ಶಿ. ಪು. ೧೩೪, ಪರಿ ೧೧, ಶ್ಲೋ. ೧೮.

ಎಂತೆಂದಡೆಯೂ ನಾನಂಜುವವನಲ್ಲ.
ಸಂತತ ಗಾಸಿಮಾಡಿದಡೆಯೂ ಕಂತುಹರ ಅಭಯಕರನು
ಎನ್ನ ನೇಮಕ್ಕೆ ಅಡ್ಡಬಂದಡೆಯೂ
ಒಡವೆಯ ಸವೆದು ಒಡಲನೊಡ್ಡುವೆ.
ಕಡಗುವಡೊಮ್ಮೆ ಹಳಚಿ ನೋಡುವೆ.
ಬಡವನ ಕೈಕಡುಹ ನೋಡು ನೋಡಯ್ಯ ಸಂಗಪ್ರಿಯ ಚೆನ್ನಬಂಕೇಶ್ವರ.[೧]

ಇದೋ ಇಲ್ಲಿದೆ ಜೀವನವೀರದ ವಜ್ರಹೃದಯ. ತನ್ನ ಒಡೆಯನಾದ ಲಿಂಗದೇವನನ್ನೆ ಸೆಣಸಿ 'ಭೃತ್ಯಾಚಾರ'ದ ಯುದ್ಧದಲ್ಲಿ ಲಿಂಗದೇವನನ್ನೆ ಗೆಲ್ಲುವ ಈ ವೀರ ದಿವ್ಯವೀರ. 'ಕೊಲುವೆನೆಂಬ ಭಾಷೆ ದೇವನದು,' ತನ್ನ ದೇವನ ಈ ಭಾಷೆಯನ್ನೆ ಭಂಗಿಸಿ ತೋರುವೆನೆಂಬ, 'ಗೆಲುವೆನೆಂಬ ಭಾಷೆ ಭಕ್ತನದು.' ಸತ್ಯವ ಹಿಡಿದು ಭಕ್ತ ಗೆದ್ದ. ನಿಷ್ಠೆಯ ಭಕ್ತಿಗೆ ದೇವ ಸೋತ.

ಕಡಿದು ಕೊಯ್ದು ಕೊರೆದು ಒರೆದು ತೇದು ನೋಡಿದರೆ, ಲಿಂಗದ ಮಧುರ ಲಿಂಗದ ಗಂಧ ಲಿಂಗದ ಪರಿಮಳ ಲಿಂಗದ ತೇಜ ಲಿಂಗದ ಕಾಂತಿಯನ್ನೆ ದೇಹ ಪ್ರಾಣ ಕಣ್ಣು ಕಾಲು ಭಾವ ಹೃದಯದಲ್ಲಿ ಹೊಮ್ಮಿ ಸೂಸುತ್ತಿರುವ ವೀರಮಾಹೇಶ್ವರ ಇಲ್ಲಿಗೆ ಮುಗಿಯಲಿಲ್ಲ. ಆತನ ದಿವ್ಯಸಾಹಸ ಇನ್ನೂ ಮುಂದೆ ಧುಮುಕುತ್ತದೆ. ಎಲ್ಲಿಗೆ? ಮತ್ತೆ ಕೇಳಿರಿ ಪ್ರಭುದೇವರ ಮಾತನ್ನು:

ಭಕ್ತ ಭಕ್ತನೆಂಬರು!
ಪೃಥ್ವಿಯ ಪೂರ್ವಾಶ್ರಯವ ಕಳೆಯದನ್ನಕ್ಕರ,
ಅಪ್ಪುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ,
ತೇಜದ ಪೂರ್ವಾಶ್ರಯವ ಕಳೆಯದನ್ನಕ್ಕರ,
ವಾಯುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ,
ಆಕಾಶದ ಪೂರ್ವಾಶ್ರಯವ ಕಳೆಯದನ್ನಕ್ಕರ,
ಸೋಮಸೂರ್ಯರ ಪೂರ್ವಾಶ್ರಯವ ಕಳೆಯದನ್ನಕ್ಕರ,
ಆತ್ಮನ ಪೂರ್ವಾಶ್ರಯವ ಕಳೆಯದನ್ನಕ್ಕರ
ಭಕ್ತರೆಂದು ಲಿಂಗವ ಪೂಜಿಸುವವರ ಕಂಡು ಬೆಱಗಾದೆನು ಗೊಹೇಶ್ವರಾ![೨]

ಲಿಂಗವನ್ನು, ಲಿಂಗೈಕನಿಷ್ಠಭೃತ್ಯನಾಗಿ ಲಿಂಗದೇವನನ್ನು ಪೂಜಿಸಬೇಕಾದರೆ, ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮರ ಪೂರ್ವಾಶ್ರಯವನ್ನು ಕಳೆಯಬೇಕು. ಕಳೆದರೆ ಲಿಂಗವ ಪೂಜಿಸಬಹುದು. ಕಳೆಯದಿದ್ದರೆ? ಲಿಂಗವ ಪೂಜಿಸಲು ಬಾರದು. ನೆಲ ನೀರುಗಳ ಪೂರ್ವಾಶ್ರಯವ ಕಳೆಯುವುದೆಂದರೇನು?

---

೧. ವ. ಶಾ. ಸಾ. ಭಾ. ೨, ಪು. ೩೭೪, ವ. ೫.
೨. ಶೂ. ಸಂ. ಪು. ೧೮, ವ. ೬೦.

ಅದೇ ನನಗೂ ಬಿಡಿಸಬಾರದ ಮಹಾಪ್ರಶ್ನೆ. ಹಾಗಾದರೆ ಮುಂದೆ ಗತಿ? ಶರಣರೇ ಗತಿ; ಅವರ ಅನುಭಾವದ ಮಾತೇ ಗತಿ. ಪೃಥ್ವಿ ಮುಂತಾದುವೆಲ್ಲ ಪ್ರಕೃತಿಯ, ಮಾಯಾಶಕ್ತಿಯ ಕಟ್ಟಡಗಳೆಂಬುದೇ ನಮ್ಮ ಲೋಕದ ಬುದ್ಧಿಯ ತಿಳಿವಳಿಕೆ. ಪ್ರಕೃತಿಯ ಆಶ್ರಯದಲ್ಲಿಯೆ ನೆಲ ನೀರು ಮುಂತಾದುವು ಮೊಳೆದೋರಿ ಬೆಳೆದು ನಿಂತಿರುವುದೇ ನಮ್ಮ ನಿಮ್ಮ ಅನುಭವ. ಆದರೆ ಹಿಂದೆ ನೋಡಿದ ವಿಶ್ವದ ನಿಜಸ್ವರೂಪವನ್ನು ಮತ್ತೆ ನಾವು ನಮ್ಮ ಅರಿವಿನ ಕಣ್ಣ ಮುಂದೆ ನಿಲ್ಲಿಸಿಕೊಳ್ಳಬೇಕು. ಚೆಂದಿಮರಸರ '....ವಿಶ್ವವ ತಿಳಿದು ನೋಡಲು ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ' ಎಂಬ ಮಾತನ್ನು ಮತ್ತೆ ಗಭೀರವಾಗಿ ಅವಲೋಕಿಸಬೇಕು; ವಿಶ್ವವನ್ನು ತಿಳಿದು ನೋಡಬೇಕು. ತಿಳಿದು ನೋಡಿದರೆ, ನೆಲ ನೀರು ಮುಂತಾದ 'ಅಷ್ಟಮೂರ್ತಿ'ಯ ಪೂರ್ವಾಶ್ರಯ ಕಳಚಿ ಬಿದ್ದು, ಲಿಂಗಾಶ್ರಯದಲ್ಲಿ ನೆಲ ನೀರುಗಳು ಬೆಳಗಿ ನಿಲ್ಲುತ್ತವೆ. ಮಾಹೇಶ್ವರಸ್ಥಲದಲ್ಲಿ ನಿಂದು, ವಿಶ್ವಬ್ರಹ್ಮಾಂಡದ ಪೂರ್ವಾಶ್ರಯವನ್ನು ತಿಳಿದು ನೋಡಿ ಕಳೆದು ಹಾಕುತ್ತಿರುವ ಮತ್ತೊಬ್ಬ ಶರಣನ ಅನುಭವವನ್ನು ಇಲ್ಲಿ ನೋಡಿ:

ಹೊರಗೆಂಟು ತನು, ಒಳಗೆ ನಿರಂಜನ ಜ್ಯೋತಿ
ತೆರಹಿಲ್ಲದಿಪ್ಪುದನೆಲ್ಲರೂ ಬಲ್ಲವರಿಲ್ಲ ಕೇಳಿರೋ.
ಶಿವನಲ್ಲದೆ ಬೇರೆ ದೈವವಿಲ್ಲ.
ಹುಲಿಗೆರೆಯ ವರದಸೋಮನಾಥನು ಏಕೋರುದ್ರನೆಂದುದು ಶ್ರುತಿ.[೧]

ಹೊರಗೆ ಪೃಥ್ವಿ ಮೊದಲು ಆತ್ಮ ಕಡೆಯಾಗಿ ಎಂಟು ತನು. ಯಾರ ತನು? ಮುಳ್ಳೂರಲು ತೆರಹಿಲ್ಲದಂತೆ ತೊಳಗಿ ಬೆಳಗುತ್ತಿರುವ ನಿರಂಜನ ಜ್ಯೋತಿಯ ತನು; ಏಕೋ ದೇವನಾದ ಸೋಮನಾಥನ ತನು. ಮೈಯ ಒಳಗೆ ಬೆಂಕಿ, ಮೈ ಕಟ್ಟಿಗೆ. – ಇದೇ ಈ ದಿವ್ಯ ಪ್ರಪಂಚದಲ್ಲಿಯ ಲಿಂಗದ ನಿಯಮ. ಎಂಟು ತನುವಿನ ವಿಶ್ವಬ್ರಹ್ಮಾಂಡವೆಲ್ಲ ಮಹಾ ಜ್ಯೋತಿರ್ಮಯ ಲಿಂಗದ ನಿಜತನು. ಅಥವಾ ವಿಶ್ವವೇ ದೇಗುಲ, ಒಳಗೆ ವಿಶ್ವನಾಥ ಲಿಂಗವೆ ಏಕೋ ದೇವ. ಈ ದೇಗುಲದಲ್ಲಿದ್ದು ಲಿಂಗಪೂಜೆಯ ಪೂಜಿಸಬೇಕಲ್ಲದೆ ಹತ್ತಿಪ್ಪತ್ತಡಿಯ ನಮ್ಮ ನಿಮ್ಮ ಕಲ್ಲು ಮಣ್ಣಿನ ದೇವರ ಮನೆಯಲ್ಲಿ ಕುಳಿತರೆ ಲಿಂಗ ಪೂಜೆ ಹೇಗೆ ಪೂರ್ಣವಾದೀತು?

ನಮ್ಮ ದೇವರ ಮನೆಯ ಪೂಜೆ, ನಮ್ಮ ಗುಡಿಯ ಪೂಜೆ ನಾಲ್ಕು ಗೋಡೆಯ ನಡುವಣ ಪೂಜೆ, ಮಾಳಿಗೆಯ ಕೆಳಗಣ ಪೂಜೆ. ಹಾಗೆಯೆ ನೇಮ ನಿತ್ಯ ಹಗಲು ಇರುಳು, ಅಷ್ಟವಿಧಾರ್ಚನೆ ಷೋಡಶೋಪಚಾರ ಸಾರಣೆ ಕಾರಣೆಗಳೆಂಬ ಗೋಡೆಗಳ ಮರೆಯ ಅಲ್ಪಪೂಜೆ. ಅಲ್ಲಿ ಭಕ್ತಿಯ ಗಾತ್ರ ಅಷ್ಟೇ. ನಿಷ್ಠೆಯ ಅಳತೆ ಅದೇ ಅಲ್ಪ. ಈ ಪೂಜೆ ಭಕ್ತಿ ನಿಷ್ಠೆಯಲ್ಲಿ ಸನ್ನಿಹಿತವಾಗಿರುವ ಜ್ಞಾನದ ನಿಲವೂ ಅದೇ ಪ್ರಮಾಣ. ವಿಶ್ವದ ಒಳಹೊರಗೆ 'ಅತ್ಯತಿಷ್ಠದ್ ದಶಾಂಗುಲ'ವಾಗಿ, ಸಚರಾಚರವನೊಳಕೊಂಡು ಅಷ್ಟತನು ಮೂರ್ತಿಯಾಗಿ, ತೆರಹಿಲ್ಲದೆ ಮೀರಿ ಬೆಳಗುವ ಪರಿಪೂರ್ಣ ಪರಂಜ್ಯೋತಿ

೧. ವ. ಶಾ. ಸಾ. ಭಾ. ೨, ಪು. ೩೮೨, ವ. ೬.

ಲಿಂಗವನ್ನು ಗೋಡೆ ಮಾಳಿಗೆಯ ಪೂಜೆ, ನೇಮ ನಿತ್ಯದ ಪೂಜೆ ನಿಲುಕೀತೇ? ಆದ್ದರಿಂದಲೆ ಸದ್ಗುರುವಿನ ಕರಕಮಲದಲ್ಲಿ ಸಂಜಾತನಾಗಿ, ಅಂದರೆ ಯೋನಿಮುಖದಲ್ಲಿ ಅ-ಜಾತನಾಗಿ, ಪೂರ್ವಜನ್ಮವಳಿದು ಪುನರ್ಜಾತನಾಗಿ, ಭೂತಕಾಯವಳಿದು ಮಂತ್ರ ಕಾಯನಾಗಿ, ವಾಯುಪ್ರಾಣವಳಿದು ಲಿಂಗಪ್ರಾಣನಾಗಿ, ಅಂಗಭಾವ ನಷ್ಟವಾಗಿ ಲಿಂಗ ಭಾವ ನೆಲೆಗೊಂಡು ನಿರ್ಧರವಾಗಿ ನಿಂದ ಲಿಂಗಭಕ್ತ, ತನ್ನ ಪೂರ್ವದ ಕಾಯ ಪ್ರಾಣ ಕರಣ ಇಂದ್ರಿಯ ಹೃದಯ ಭಾವದ ಆಶ್ರಯವನ್ನು ಕಳೆದಿಟ್ಟು, ಆ ಜೀವಭಾವಕ್ಕೆ ಹೊಂದಿಕೊಂಡಿದ್ದ ಭವಿಗಳ ನಂಟುತನವನ್ನು ಬಿಟ್ಟು, ಲಿಂಗವೆ ಆಶ್ರಯವಾಗಿ ಲಿಂಗವೆ ಶರಣಾಗಿ, ಅಂಗಕ್ಕೆ ಲಿಂಗವೆ ಗೂಡಾಗಿ ಲಿಂಗಕ್ಕೆ ಅಂಗವೆ ಗೂಡಾಗಿ ನಿಲ್ಲುವಂತೆ, ಪ್ರಪಂಚದ ಪೂರ್ವಾಶ್ರಯವನ್ನು ಬಿಡಿಸಿ ಅದನ್ನೂ ಲಿಂಗದೇವನ ಮಹಾಪೂಜೆಯ ಮಹಾಮಂದಿರವಾಗಿ ನಿಲ್ಲಿಸುತ್ತಾನೆ. ವಿಶ್ವದಲ್ಲಿ ತಾನು, ತನ್ನೊಳಗೆ ಲಿಂಗ, ಲಿಂಗದೊಳಗೆ ತಾನು–ವಿಶ್ವವಾಗಿ ಲಿಂಗಪೂಜೆಯ ಪೂಜಿಸುವ ಭಕ್ತನಿಗೆ ಅರ್ಚನೆ ಉಪಚಾರ, ನೇಮ ನಿತ್ಯ ಹೇಗೆ ನಡೆದಾವು? ನಿಷ್ಠೆಯ ಭಕ್ತನಿಗೆ ಪ್ರಾತಃಕಾಲ ಮಧ್ಯಾಹ್ನ ಸಂಧ್ಯಾಕಾಲಗಳ ತ್ರಿಕಾಲಪೂಜೆಯಷ್ಟೇ ಹೇಗೆ ಹೊಟ್ಟೆತುಂಬೀತು? ಬಯಲು ಹಸಿದರೆ ಬುಟ್ಟಿಯ ಕಡಬು ಸಾಕಾದಾವೆ? ಪರ್ವತಕ್ಕೆ ಚಳಿಯಾದರೆ ಏನ ಹೊದಿಸುವಿರಣ್ಣಾ?

ಮಹಾಮೇರುವಿನ ಮರೆಯಲಿರ್ದು
ಭೂತದ ನೆಳಲನಾಚರಿಸುವ ಕರ್ಮಿ ನೀ ಕೇಳಾ.
ಅದು ಆ ಮಹಾಲಿಂಗಕ್ಕೆ ಮಜ್ಜನವೆಂದೇನೋ?
ಪರಿಮಳಲಿಂಗಕ್ಕೆ ಪತ್ರೆ ಪುಷ್ಪಗಳೆಂದೇನೋ?
ಜಗಜ್ಜ್ಯೋತಿ ಲಿಂಗಕ್ಕೆ ಧೂಪ ದೀಪಾರತಿಯೆಂದೇನೋ?
ಅಮೃತಲಿಂಗಕ್ಕೆ ಆರೋಗಣೆಯೆಂದೇನೋ?
ಗುಹೇಶ್ವರಲಿಂಗದಂತುವ ಬಲ್ಲವರಾರೋ?[೧]

ಭೂತಸೂರ್ಯನ ಹಗಲು ರಾತ್ರಿಯ ಕ್ರಮವಿಲ್ಲ ಈ ಪೂಜೆಗೆ. ಮಹಾಲಿಂಗಕ್ಕೆ ಮಜ್ಜನವೆರೆಯಲು ಸಪ್ತ ಸಮುದ್ರಗಳಲ್ಲ, ಸಪ್ತಕೋಟಿ ಸಮುದ್ರಗಳ ನೀರಾದರೂ ಸಾಲಬಹುದೇ? ವಿಶ್ವವೃಕ್ಷದ ಪತ್ರ ಪುಷ್ಪಕ್ಕೆಯೆ ಪರಿಮಳವನ್ನು ದಯಪಾಲಿಸಿದ ಪರಿಮಳಲಿಂಗಕ್ಕೆ ಯಾವ ಪತ್ರಿ ಯಾವ ಪುಷ್ಪಗಳಿಂದ ಪೂಜೆಯನಲಂಕರಿಸುವಿರಿ? ಯಾರ ಬೆಳಗಿನಲ್ಲಿ ಜಗದುದಯವೋ ಅಂಥ ವಿಶ್ವಜ್ಯೋತಿಲಿಂಗಕ್ಕೆ ಯಾವ ದೀಪಾರತಿ? ಯಾವ ಧೂಪಾರತಿ? ಅಮೃತಕ್ಕೆ ಆರೋಗಣೆಯ ಉಪಚಾರವೆ?

ಮಹಾನಿಷ್ಠೆ ನೆಲೆಗೊಂಡಿರುವ ಭಕ್ತ ಕಾಲ ವೇಳೆಯನರಿಯ. ನೇಮ ನಿತ್ಯವ ನರಿಯ; ಅಷ್ಟವಿಧ ಷೋಡಶಪ್ರಕಾರವನರಿಯ. ಆತನ ಪೂಜೆ ನಿತ್ಯಪೂಜೆ, ನಿರಂತರ ಪೂಜೆ. ಆತನ ಜೀವನದಲ್ಲಿ ಪೂಜೆಯಿಲ್ಲದ ನಿಮಿಷವಿಲ್ಲ, ಭಕ್ತಿಯಲ್ಲದ ಕ್ರಿಯೆಯಿಲ್ಲ.

---

೧. ಪ್ರ ವ. ಪು. ೨೧, ವ. ೧೦೨.

ಹರಿವ ನದಿ, ಬೀಸುವ ಗಾಳಿ ಲಿಂಗನಿಷ್ಠ ಭಕ್ತ. ನಿರಂತರ ಹರಿಯುತ್ತಾನೆ, ಸದಾ ಕಾಲ ಬೀಸುತ್ತಾನೆ, ಮನ ಬಂದಂತೆ ಮಾಡುತ್ತಾನೆ. ಇಲ್ಲಿ ವಿಧಿ ನಿಯಮ ಉಪಚಾರದ ಮಾತೇ ಇಲ್ಲ.

ಅಷ್ಟವಿಧಾರ್ಚನೆ ಷೋಡಶೋಪಚಾರಗಳ ಹಂಗುಹಜಿ ಇಲ್ಲದೆ ಮಾಡುವೆನು.
ನಾನು ಮಾಡುವ ಕ್ರೀಗಳೆಲ್ಲವು ನೀನೆಯಾದ ಕಾರಣ
ಗೊಹೇಶ್ವರಾ, ನಿಮ್ಮಲ್ಲಿ ತದ್ಗತವಾದೆನು.[೧]

ಪೂಜಿಸುವ ಭಕ್ತನಾರು? ಪೂಜೆಗೊಂಬ ದೇವನಾರು? ಈ ಪ್ರಶ್ನೆ ಎರಡು, ಉತ್ತರ ಒಂದು; ಪೂಜ್ಯ ಪೂಜಕ ಭಾವದಿಂದ ಎರಡಾದ ಒಂದು. ಭಕ್ತ ಮತ್ತು ದೇವ ಪರಮಾರ್ಥತಃ ಒಂದಕ್ಕೊಂದು ಅನ್ಯ ಭಿನ್ನವಾಗಿದ್ದರೆ ಉಪಚಾರದ ಹಂಗು ಹರಿವುದು ಸಾಧ್ಯವೇ ಇರಲಿಲ್ಲ. ಇದೋ ನೋಡಿ, ನಾನು ನೀವು ಇಬ್ಬರು. ನಾನು ನೀವು ಅಲ್ಲ: ನೀವು ನಾನು ಅಲ್ಲ. ಈ ಭಾವದಲ್ಲಿದ್ದ ನಾವು ಪರಸ್ಪರ ಅನ್ಯ ಭಿನ್ನ ಆದವರು. ಇಲ್ಲಿ ಉಪಚಾರ ಬೇಕೇ ಬೇಕು. ನೀವು ನಮ್ಮಲ್ಲಿಗೆ ಬಂದರೆ ನಿಮ್ಮನ್ನು ಸ್ವಾಗತಿಸಬೇಕು, ಯೋಗ್ಯ ಆಸನದಲ್ಲಿ ಕುಳ್ಳಿರಿಸಬೇಕು. ಸ್ನಾನ ಭೋಜನ ಮಾಡಿಸಬೇಕು. ಇದೆಲ್ಲ ನಿಮಗೆ ನಾನು ಮಾಡುವ ಆದರೋಪಚಾರ. ಆದರೆ ನಾನೇ ನಮ್ಮ ಮನೆಗೆ ಬಂದು ಕುಳಿತು ಸ್ನಾನ ಮಜ್ಜನ ಮಾಡಿಕೊಂಡು ಭೋಜನ ತಾಂಬೂಲವನ್ನು ಸೇವಿಸಿದರೆ ಇದು ಉಪಚಾರವೇ? ನಿಮಗೆ ನಡೆವ ಉಪಚಾರ ಸಮಾಜ ನೀತಿಗೆ ಕ್ರಮಬದ್ಧವಾಗಿ ನಡೆಯಬೇಕು. ನನಗೆ ನಾ ಮಾಡಿಕೊಂಡರೆ ಹೇಗೆ ಬೇಕೋ ಹಾಗೆ ಮಾಡಿಕೊಳ್ಳಬಹುದು.

ಅನ್ಯಕ್ಕೆ ಉಪಚಾರ. ತನಗೆಲ್ಲಿ ಉಪಚಾರ? ಮತ್ತೆ, ಕೃತ್ರಿಮಕ್ಕೆ ಉಪಚಾರವಲ್ಲದೆ ಸಹಜಕ್ಕೇಕೆ ಉಪಚಾರ? ಅನ್ಯಭಾವ ಹೆಚ್ಚಿದಂತೆ ಕೃತ್ರಿಮ ಕಳೆಯೇರುತ್ತದೆ. ತನ್ನ ಭಾವ ಹೆಚ್ಚಿದಂತೆ ಉಪಚಾರ ಮಾಯವಾಗುತ್ತ, ರತಿ ಪ್ರೀತಿ ಪ್ರೇಮ ಶ್ರದ್ಧೆ ವಿಶ್ವಾಸ ಭಕ್ತಿ ನಿಷ್ಠೆಗಳು ನಿರರ್ಗಳವಾಗಿ ಹರಿವ ಪ್ರಾಣರಸಕಳೆಯಿಂದ ಹೊಗರೇರಿ, ಪ್ರೀತಿಸುವ ಪ್ರೀತಿಸಿಕೊಂಬ, ಉಪಚರಿಸುವ ಉಪಚರಿಸಿಕೊಂಬ ಎರಡನ್ನು ಕರಗಿಸಿ ಒಂದಿಸುತ್ತ ಹೋಗುತ್ತವೆ. ಭೃತ್ಯ ಭರ್ತ, ತಾಯಿ ಮಗು, ಹಸು ಕರು, ಸತಿ ಪತಿ – ಇವರನ್ನು ಬೆಸೆದಿರುವ ರಸ ಭಾವ ಬಂಧ ಅನ್ಯೋನ್ಯ ನಿಷ್ಠವಾಗಿ ದೃಢವಾಗುತ್ತ ಹೋದರೆ, ಒಂದರಲ್ಲಿ ಒಂದು ಲೀನವಾಗಿ ಸಮರಸವಾಗಿ, ಸಹಜಭಾವ, ಏಕೋಭಾವ ನೆಲೆಗೊಳ್ಳುತ್ತದೆ. ಈ ಸಹಜಭಾವದಿಂದ ಹರಿವ ಕ್ರಿಯೆಯೆಲ್ಲ ಸಹಜಕ್ರಿಯೆ, ಸಹಜ ಮಾಟ. ಲಿಂಗದಲ್ಲಿ ನಿಷ್ಠವಾದ ಭಕ್ತ ಮಾಡುವ ಕ್ರಿಯೆಯೆಲ್ಲ 'ನೀನೆ.' ಇದರ ಅರ್ಥ ನಾನೆಲ್ಲ ನೀನೆ ಎಂಬುದೇ. ನಾನು ಮಾಡಿದರೆ ನೀನು ಮಾಡಿದೆ, ನೀನು ಮಾಡಿದರೆ ನಾನು ಮಾಡಿದೆ. ನಾನು ಹಾಡಿದರೆ ನೀನು ಹಾಡಿದೆ, ನೀನು ಹಾಡಿದರೆ ನಾನು ಹಾಡಿದೆ. ನಾನು ಕೇಳಿದರೆ ನೀನು ಕೇಳಿದೆ, ನೀನು ಕೇಳಿದರೆ ನಾನು ಕೇಳಿದೆ. ನಾ ನೊಂದರೆ

೧. ಶೂ. ಸಂ. ಪು. ೧೯, ವ. ೬೨.

ನೀ ನೊಂದೆ, ನೀ ನೊಂದರೆ ನಾನು ನೊಂದೆ. ನಾ ಸುಖಿಸಿದರೆ ನೀ ಸುಖಿಸಿದೆ, ನೀ ಸುಖಿಸಿದರೆ ನಾನು ಸುಖವಾದೆ. ನಾ ಮಲಗಿದರೆ ನೀ ಮಲಗಿದೆ, ನೀ ಮಲಗಿದರೆ ನಾನು ಮಲಗಿದೆ. ನಾನು ನೀನು, ನೀನು ನಾನಾದ ಬಳಿಕ ನಿನಗೆಲ್ಲಿಯ ಉಪಚಾರ? ನನಗೆಲ್ಲಿಯ ಉಪಚಾರದ ಕ್ರಿಯೆ? ನಾನು ನಿನ್ನಲ್ಲಿ ನಿಷ್ಠವಾಗಿ, 'ತದ್ಗತ'ವಾಗಿ, ತಲ್ಲೀನವಾಗಿ ಮಾಡುವ ಕ್ರಿಯೆಯೆಲ್ಲ ನೀನೆ, ಅಥವಾ ನಾನೆ, ಇಲ್ಲವೆ ನೀನು—ನಾನೆ.

ಮತ್ತೆ ಮುಂದೆ ಮತ್ತೆ ಮೇಲೆ, ಇನ್ನೂ ಒಳಗೆ ಇನ್ನೂ ಹೊರಗೆ, ಒಳಗು ಹೊರಗೆಲ್ಲ ಒಳಹೊರಗಿಲ್ಲದ ನಿರಾಳಲಿಂಗಕ್ಕೆ ಅರ್ಪಿತವಾಗಿ, ಪ್ರಸಾದವೆ ಬೆಳಗುತ್ತಿರುವ ಆ ಕಡೆ ಸೀಮೆಯಲ್ಲಿ ಪ್ರಸಾದಿಸ್ಥಲ. ಇಲ್ಲಿ ಸ್ವಲ್ಪ ಹೊತ್ತು ನಿಲ್ಲೋಣ. ನಾನೂ ಬರೆವ ಕ್ರಿಯೆಯನ್ನು ನಿಲ್ಲಿಸಿ ಸುಮ್ಮನೆ ಕೂಡುತ್ತೇನೆ. ನಾನೊಬ್ಬ 'ಸುಮ್ಮನೆ ಕೂತರೆ ಜಗತ್ತೆಲ್ಲ ಕೈ ಕಟ್ಟಿಕೊಂಡು ಕೂಡುವುದೇ? ಅದೋ ಅಲ್ಲಿ, ಗಿಡದ ಮೇಲೆ ಕಾಗೆ ಕುಳಿತು ಒದರುತ್ತಿದೆ. ಆ ಗಿಡ ನಮ್ಮ ಮನೆಯ ಮುಂದಿರುವ ಮಾವಿನ ಗಿಡ. ಮಾವು ಹೂವನ್ನು ಹೊದ್ದುಕೊಂಡಿದೆ. ಹೂವಿನ ವಾಸನೆ ನನ್ನ ಮೂಗಿನ ಕದವನ್ನು ತೆಗೆದು ಒಳಗೆ ತುಂಬುತ್ತಿದೆ. ಮೂರು ತಾಸು ಹೊತ್ತೇರಿದ ಮುಂಜಾವಿನ ತಂಗಾಳಿ ಮೆಲ್ಲಗೆ ಬಂದು ನನ್ನ ತೊಗಲ ಬಾಗಿಲನ್ನು ಸೋಂಕಿ, ಒಳಗೆ ಪ್ರವೇಶ ಮಾಡಿ, ನನ್ನ ಅರಿವಿನಲ್ಲಿ 'ಭಾಷಾಂತರ' ಹೊಂದಿ ಆಹ್ಲಾದವಾಗಿ ಒಳಗೆ ಸುಳಿದಾಡುತ್ತಿದೆ. ಈ ಒಳಗಾಳಿಯನ್ನು ಸೇವಿಸುತ್ತಿರುವಾಗಲೆ ಕೆಳಗಿಂದ ನನ್ನ ಹೆಂಡತಿಯ ಕೂಗು: 'ಚಹಾ ಆಗ್ಯೆತೆ' ಎಂದು. ಕೆಳಗಿಳಿದು ಚಹಾ ಕುಡಿದೆ... ಮುಖ ನೋಡುತ್ತ! ಕುಡಿವುದು ಮುಗಿದರೂ ನೋಡು ವುದು ಮುಗಿಯಲಿಲ್ಲ. 'ಆತ!?' ಎಂಬ ಇನಿಯುಲಗು ಮೇಲಕ್ಕೆಬ್ಬಿಸಿ ಇಲ್ಲಿ ಮಹಡಿಯ ಮೇಲೆ ಕುಳ್ಳಿರಿಸಿದೆ ನನ್ನನ್ನು. ಆ ಮೇಲೆ ಊಟ, ಕಾಲೇಜಿಗೆ ಹೋಗುವುದು, ಪಾಠ ಹೇಳುವುದು. ತಿರುಗಿ ಮನೆಗೆ ಬಂದು ಏನೇನೋ ಮಾಡಿ ರಾತ್ರಿಯ ಊಟ, ನಿದ್ದೆ. ಮುಂಜಾವಿನಲ್ಲಿ ಎದ್ದು ಮತ್ತೆ ಚಹಾ ಕುಡಿದು, ಅಡ್ಡಾಡಲಿಕ್ಕೆ ಹೋಗಿ ಬಂದು ಜಳಕ ಪೂಜೆ ಮಾಡಿ ಚಪಾತಿ ತಿಂದು ಚಹಾ ಕುಡಿದು, ಮೇಲೆ ಬಂದು ಓದಿಕೊಂಡು ಮತ್ತೆ ಬರೆವ ಯತ್ನ. ಈ ನನ್ನ ದಿನಚರಿಯನ್ನು ನಿಮಗೇಕೆ ಹೇಳಿದೆ?—ಎಂಬ ನಾಚಿಕೆ ನನಗೆ. ಹೇಳಿದರೆ ತಪ್ಪೇನು?—ಎಂಬ ಸಮಾಧಾನ ಒಮ್ಮೊಮ್ಮೆ.

ಇಲ್ಲಿ ಕಾಗೆ ಒದರುವುದು, ಹೆಂಡತಿಯ ಕೂಗು ಮುಂತಾದುವು ಶಬ್ದಪ್ರಪಂಚ. ಗಿಡ ಕಾಗೆ ಹೆಂಡತಿ ಮುಂತಾದುವು ರೂಪರಾಶಿ. ಗಾಳಿಯ ಸೋಂಕು ಮುಂತಾದುವು ಸ್ಪರ್ಶಕೋಟಿ. ಚಹಾ ರೊಟ್ಟಿ ಅನ್ನ ಪಾನ ರಸವಿಸರ. ಹೂವಿನ ವಾಸನೆ ಮುಂತಾದುವು ಗಂಧದ ಗುಂಪು. ಈ ಶಬ್ದ ಮುಂತಾದ ವಿಷಯಪಂಚಕ ಬಾಹ್ಯಪ್ರಪಂಚದ ಸೊಮ್ಮು. ಇವನ್ನು ಕೇಳಿ ನೋಡಿ ಮುಟ್ಟಿ ತಿಂದು ವಾಸಿಸಿ ಬಾಳುತ್ತಿದ್ದೇನೆ ನಾನು. ಅಥವಾ ವಿಷಯಪ್ರಪಂಚವನ್ನು ನನಗೆ ಅರ್ಪಿಸಿಕೊಂಡು ಬೆಳೆಯುತ್ತಿದ್ದೇನೆ ನಾನು. ಇವರ ಮೃದು ಕರ್ಕಶ, ಸುರೂಪ ಕುರೂಪ, ಶೀತ ಉಷ್ಣ, ಮಧುರ ಕಟು, ಸುವಾಸನೆ ದುರ್ವಾಸನೆಗಳ ರುಚಿನೋಡಿ, ಸುಖ ದುಃಖವನ್ನು ಅನುಭವಿಸುತ್ತಿದ್ದೇನೆ ನಾನು. ಈ ಬಾಹ್ಯಪ್ರಪಂಚದಲ್ಲಿ ಸಣ್ಣದೊಂದು ಅಣುಸಾಮ್ರಾಜ್ಯ ಕಟ್ಟಿಕೊಂಡಿದ್ದೇನೆ ನಾನು.

ಇದೋ ಇಲ್ಲಿ ನೋಡಿ, ನನ್ನ ಸಾಮ್ರಾಜ್ಯದ ಸ್ವರೂಪ – ವೈಭವ – ವಿಸ್ತಾರವನ್ನು! ನನ್ನ ಮನೆ, ಮನೆಯಲ್ಲಿ ನನ್ನ ಹೆಂಡತಿ ನನ್ನ ಮಕ್ಕಳು ಮೊಮ್ಮಕ್ಕಳು ಮರಿ – ಗಿರಿ ಮಕ್ಕಳು. ಮನೆಯಲ್ಲಿ ಕಾಳು ಕಡಿ, ಎತ್ತು ಎಮ್ಮೆ, ಧನ ಕನಕ ವಸ್ತು ವಾಹನ. ನನ್ನ ಹೊಲ, ಹೊಲದಲ್ಲಿ ಬೆಳೆವ ಜೋಳ ಗೋದಿ ಕಡ್ಲಿ. ನನ್ನಂತೆ ನಿಮ್ಮದೂ ನಿಮ್ಮ ಸಾಮ್ರಾಜ್ಯ. ನಿಮ್ಮ ಉದ್ಯೋಗ ನಿಮ್ಮ ವೃತ್ತಿ ಬೇರೆ ಇರಬಹುದು. ಆದರೂ ನೀವೂ ನಿಮಗೆ ಬೇಕಾದ ಸಾಮ್ರಾಜ್ಯವನ್ನು ನಿರ್ಮಿಸಿಕೊಂಡಿದ್ದೀರಿ. ಇದರಂತೆ, – ಮನುಷ್ಯನಷ್ಟೇ ಅಲ್ಲ, – ಎಲ್ಲ ಜೀವರಾಶಿಗಳು ತಂತಮ್ಮ ಸಾಮ್ರಾಜ್ಯವನ್ನು ನಿರ್ಮಿಸಿಕೊಂಡು ಬಾಳುತ್ತಿವೆ. ಇದೆಲ್ಲ ಬಾಹ್ಯವಿಷಯಪ್ರಪಂಚವೆ. ಆದರೆ ಆ ಪ್ರಪಂಚದಲ್ಲಿಯೆ ಗೆರೆ ಹಾಕಿ ಸೀಮೆಗಲ್ಲು ಹಾಕಿಕೊಂಡು, ಜೀವನವ್ಯಾಪಾರವನ್ನು ನಡೆಸಿವೆ ಎಲ್ಲ ಪ್ರಾಣಿ ಕೋಟಿ.

ಈ ಅನಂತ ಸಾಮ್ರಾಜ್ಯಗಳ ನಿರ್ಮಾಣವೇಕೆ? ಎಲ್ಲರಿಗೂ ತಿಳಿದದ್ದೇ ಇದೆ ಈ ಪ್ರಶ್ನೆಯ ಉತ್ತರ. ನಾನು ಉಳಿವುದಕ್ಕೆ ನಾನು ಬಾಳುವುದಕ್ಕೆ, ನಾನು ಬೆಳೆವುದಕ್ಕೆ ನಾನು ಹಬ್ಬುವುದಕ್ಕೆ ಬೇಕು ಎಂದು ಕಟ್ಟಿದ ರಾಜ್ಯ ಇವು. ಸರ್ವಶ್ರಮ ಸಕಲಪ್ರಯತ್ನ ವಿಶ್ವ ಸಾಹಸ ಮಾಡಿ ನನ್ನ 'ಬೇಕು'ಗಳನ್ನೆಲ್ಲ ಒಂದೆಡೆ ಕೂಡಿಸಿ, ನನಗೆ ಸಾಧ್ಯವಿದ್ದ ಮಟ್ಟಿಗೆ 'ಬೇಡ'ಗಳನ್ನೆಲ್ಲ ನನ್ನ ರಾಜ್ಯ ಬಿಟ್ಟು ಹೊರಗೆ ಹಾಕಿ, ನಡೆಸಿಕೊಂಡು ನಡೆದಿದ್ದೇನೆ ನನ್ನ ಸಾಮ್ರಾಜ್ಯವನ್ನು ನಾನು.

ಯಾರು ನಾನು? ನನ್ನ ಸಾಮ್ರಾಜ್ಯ ನನ್ನದೇ? ಅದಕ್ಕೆ ನಾನು ಅಧಿಪತಿಯಾಗಿ, ರಾಜ್ಯಭೋಗಗಳನ್ನೆಲ್ಲ ನಾನೆ ಭೋಗಿಸುವ 'ಹಕ್ಕು', ಅಧಿಕಾರ ನನಗಿದೆಯೆ? ಎಲ್ಲಿಂದ ಬಂತು, ಯಾರು ಕೊಟ್ಟರು ಈ ಅಧಿಕಾರವನ್ನು ನನಗೆ? ಸಾವಧಾನದಿಂದ ವಿವೇಚನೆ ಮಾಡಬೇಕು ಈ ಪ್ರಶ್ನೆಗಳನ್ನು; ಗಭೀರವಾಗಿ ಪರೀಕ್ಷಿಸಬೇಕು ಈ ಸಮಸ್ಯೆಗಳನ್ನು. 'ಲೋಕವೆಲ್ಲ ಹೀಗೇ ನಡೆದಿದೆ'–ಎಂದು ಅನ್ನುವಿರಾ? ತಿಳಿದು ನೋಡದೆ ತನ್ನಂತೆ ನಡೆವ ಲೋಕ ಅಂತಿರಲಿ. ಆದರೆ ನಾನೂ ಲೋಕದಂತೆ ಕಣ್ಣು ಮುಚ್ಚಿಕೊಂಡು ಮಾರ್ಗ ಕ್ರಮಿಸಬೇಕೆಂಬ ನಿಯಮವಿದೆಯೇ? ಲೋಕ ಲೋಕದಂತೆ, ಸಮ್ಯಗ್‌ಜ್ಞಾನೋದಯವಾಗಿ ನಿಜಭಕ್ತಿಯಲ್ಲಿ ನಿಷ್ಠನಾಗಿರುವ ಶರಣ ತನ್ನಂತೆ. ಲೋಕದ ಸೂತ್ರ, ಲೋಕದ ಭಾಷ್ಯ, ಲೋಕದ ಟಿಪ್ಪಣಿ ಲೋಕಕ್ಕೆ. ಲಿಂಗಸೂತ್ರ, ಲಿಂಗಭಾಷ್ಯ, ಲಿಂಗನ ಟಿಪ್ಪಣಿ ಲಿಂಗಶರಣನಿಗೆ.

ತ್ರಿವಿಧದ ನಿತ್ಯ, ತ್ರಿವಿಧದ ಅನಿತ್ಯವನಾರು ಬಲ್ಲರಯ್ಯಾ?
ತ್ರಿವಿಧಕ್ಕೆ ತ್ರಿವಿಧವನಿತ್ತು, ತ್ರಿವಿಧ ಪ್ರಸಾದವ ಕೊಳಬಲ್ಲರೆ,
ಆತನ ತ್ರಿವಿಧನಾಥನೆಂಬೆನು; ಆತನ ವೀರನೆಂಬೆನು, ಧೀರನೆಂಬೆನು;
ಗೊಹೇಶ್ವರ ಲಿಂಗದಲ್ಲಿ ಪ್ರಸಾದಿಯೆಂಬೆನು.[೧]

---

೧. ಶೂ. ಸಂ. ಪು. ೧೯. ವ. ೬೩.

ಮಾನವಪ್ರಾಣಿ ಅನಿತ್ಯ, ಲಿಂಗದೇವ ನಿತ್ಯ. ಮಾನವನ ಸ್ಥೂಲತನು, ಕರ್ಮ ಜ್ಞಾನೇಂದ್ರಿಯ ಪಂಚಪ್ರಾಣ ಮನ ಬುದ್ಧಿಗಳ ಸಂಘಾತವಾದ ಸೂಕ್ಷ್ಮತನು, ಮಹದ ಹಂಕಾರರೂಪವಾದ ಕಾರಣತನು -- ಈ ತನುತ್ರಯ ಅನಿತ್ಯ. ಈ ಅನಿತ್ಯವನ್ನು ಲಿಂಗದ ನಿತ್ಯಕ್ಕೆ ಅರ್ಪಿಸಿದರೆ, ಮರ್ತ್ಯವನ್ನು ಅಮರ್ತ್ಯಕ್ಕೆ ಎಡೆಮಾಡಿದರೆ, ಅಧೋಮುಖವಾದ ಶಕ್ತಿಯ ನಿರ್ಮಾಣವಾದ ಜೀವಾತ್ಮನ ಖಂಡಿತವನ್ನು ಅಖಂಡ ಪರಿಪೂರ್ಣಕ್ಕೆ ನೀಡಿದರೆ, ತನ್ನ ಅಣುಸಾಮ್ರಾಜ್ಯವನ್ನು, ತನ್ನ ಅರಿವು ಮರವೆಯನ್ನು, ತನ್ನ ಸುಖ ದುಃಖವನ್ನು ಸಚ್ಚಿದಾನಂದಕ್ಕೆ ಸಮರ್ಪಿಸಿದರೆ, ಅನಿತ್ಯ ಮರ್ತ್ಯ ಖಂಡಿತ ದ್ವೈತವೆಲ್ಲ ನಿತ್ಯ ಪರಿಪೂರ್ಣ ಅಖಂಡ ಸತ್ತು ಚಿತ್ತು ಆನಂದ 'ಏಕಮೇವಾದ್ವಿತೀಯ'ವಾಗಿ ರೂಪಾಂತರ ಹೊಂದುವ ಸಂಭವವಿದೆ. ಮಾವು ಇರಲಿ ಬೇವು ಇರಲಿ, ಜಾಲಿ ತೇಗು ಹೆದ್ದೇಗು ಇರಲಿ, ಕಟ್ಟಿಗೆ ಯನ್ನು ಬೆಂಕಿಗೆ ಅರ್ಪಿಸಿದರೆ, ಕಟ್ಟಿಗೆಗೆ ರೂಪವೇನು? ಬೆಂಕಿಯ ರೂಪಲ್ಲವೆ? ಕರ್ಪುರ ವನ್ನು ಉರಿಗೆ ಉಣಬಡಿಸಿದರೆ ಕರ್ಪುರವೇನಾಗುತ್ತದೆ? ನದಿಯನ್ನು ಸಮುದ್ರಕ್ಕೆ ಎಡೆ ಮಾಡಿದರೆ? ಬೆಳಗಿನ ಕೈಯಲ್ಲಿ ಕತ್ತಲೆಯನ್ನು ಕೊಟ್ಟರೆ? ಬೆಂಕಿಯಲ್ಲಿ ಅರ್ಪಿತ ವಾದ ಕಟ್ಟಿಗೆ ಸುಟ್ಟು ಸತ್ತು ಹೋಗುತ್ತದೆ, ನಿಜ. ಆದರೆ ಕಟ್ಟಿಗೆ ತಾನು ಸತ್ತು ಬೆಂಕಿಯಾಗಿ ಬದುಕಿದರೆ, ಅದು ಕಟ್ಟಿಗೆಯ ಪುಣ್ಯವಲ್ಲವೇ? ಜ್ಯೋತಿಯ ಮುಖದಲ್ಲಿ ಎಡೆಗೊಂಡಿರುವ ಕರ್ಪುರ ಕರಗಿ ತಾನೇ ಜ್ಯೋತಿಯಾಗಿ ಬೆಳಗಿದರೆ, ಕರಗಿದ ಕರ್ಪುರಕ್ಕೆ ಅಳಬೇಕೇ? ಕತ್ತಲೆ ಬೆಳಗಾದರೆ ಕತ್ತಲೆಯ ಕೂಸುಗಳು ಅಳಬಹುದಲ್ಲದೆ, ಬೆಳಗಾದ ಕತ್ತಲೆ ತಾನೇಕೆ ಕೊರಗಬೇಕು? ನಿಜನಿಷ್ಠ ಭಕ್ತಿ, ಅಹಂಭಾವ ಅಜ್ಞಾನ ಮಾಯೆಯಲ್ಲಿ ನಿರತವಾದ ಪ್ರಕೃತಿಶಕ್ತಿಯನ್ನು ನಿಜದ ನಿರಾಳಕ್ಕೆ ನೈವೇದ್ಯ ಮಾಡಿದರೆ, ಶರಣನ ಭಕ್ತಿಗೆ ದಿವ್ಯಕಳೆ ಏರುತ್ತದೆ. ನೈವೇದ್ಯವಾದುದೆಲ್ಲ ನಿರಾಳದ ಪ್ರಸನ್ನ ಪ್ರಸಾದವಾಗಿ ಬೆಳಗು ತ್ತದೆ. ಅರ್ಪಣ ಮಾಡಿದರೆ ಪ್ರಸಾದ ಬರುತ್ತದೆ. ಕೊಟ್ಟು ಕೊಂಬುದೆ ಪ್ರಸಾದ; ತನ್ನ ನಿಜಕ್ಕೆ ನೀಡದೆ ತಾನೆ ಉಂಬುದೆ ವಿಷಯ, ಪದಾರ್ಥ. ಅದೇ ಅಹಂಭಾವದ ಸಂಸಾರ ವ್ಯಾಪಾರ, ಅದೇ ಅಜ್ಞಾನದ ಜೀವನ ಭೋಗ. ಅದೇ ಮಾಯೆ ಮಾನವ ಜೀವಿಯನ್ನು ಕೊಂದು ಕೂಗುವ ಕೈಮಾಟ.

ತನ್ನ ಹುಟ್ಟುಹೊಂದನ್ನು ಕಡೆಗೆ ಮಾಡಿ, ತನ್ನ ನಿಜವಾದ ಮಹಾವಿಸ್ತಾರ ವೈಭವ ವನ್ನು ಮರೆಮಾಡಿರುವ ಮರವೆಯ ಜವನಿಕೆಯನ್ನು ಓರೆಮಾಡಿ, ನಾಮ ಸೀಮೆಯಿಲ್ಲದ ತನ್ನನ್ನು ಮಾಯಾಪ್ರಪಂಚದಲ್ಲಿ ಕುಳ್ಳಿರಿಸಿ, ವಿಭ್ರಾಂತಿಯ ವಿಲಾಸದಲ್ಲಿ ತನ್ನನ್ನು ಲೀನ ಮಾಡಿ, ಸಂಸಾರನಾಟಕ ನಡೆಸಿರುವ ಮಾಯೆಯ ಮಹಾಬಲೆಯಿಂದ ತನ್ನನ್ನು ಕಿತ್ತು ತೆಗೆದು, ದಿವ್ಯಸ್ಥಲದಲ್ಲಿ ತನ್ನ ಹಡೆದ ಗುರುಲಿಂಗದೇವನಿಗೆ ತನ್ನ ತನುವನ್ನು ಅರ್ಪಿಸ ಬೇಕು ಭಕ್ತ. ತನ್ನ ಲೀಲೆಗೆ ವಿಶ್ವವನ್ನೆ ಹಡೆದು, ಹೊತ್ತು ಹೊರೆದು, ಮುಳುಗಿಸಿ ತೇಲಿಸಿ ನಿರಂಜನ ವಿನೋದದಲ್ಲಿ ಲೀಲೆಯಾಡಿ ನೋಡುತ್ತಿರುವ ಶಿವಲಿಂಗ ದೇವನಿಗೆ ತನ್ನ ಮನವನ್ನು ಎಡೆಮಾಡಬೇಕು ಭಕ್ತ. 'ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಾಭಿಧಃ' -- ಎಂಬ ಜಂಗಮಲಿಂಗದೇವನಿಗೆ ನೀಡಬೇಕು ತನ್ನ ಧನವನ್ನೆಲ್ಲ ಭಕ್ತ. ಗುರು ಲಿಂಗ ಜಂಗಮಕ್ಕೆ ತನು ಮನ ಧನವನ್ನು, ಹೊನ್ನು ಹೆಣ್ಣು ಮಣ್ಣನ್ನು, ಅರ್ಥ ಪ್ರಾಣ

ಅಭಿಮಾನವನ್ನು ವಂಚನೆಯಿಲ್ಲದೆ ಸರ್ವಸಮರ್ಪಣ ಮಾಡಬೇಕು ಲಿಂಗೈಕನಿಷ್ಠನಾದ ಮಹಾಸದ್ಭಕ್ತ.೧

ಭಕ್ತಿ ಎಂದರೆ ದಿವ್ಯದಲ್ಲಿ ಪ್ರೇಮ ಅನುರಾಗ ಶ್ರದ್ಧೆ ವಿಶ್ವಾಸ. ಅತ್ತಿತ್ತ ಓಸರಿಸದೆ ಅಲುಗದೆ ಅಚಲವಾಗಿ ನಿರ್ಧರವಾಗಿ ವೀರವಾಗಿ ಧೀರವಾಗಿ ದಿವ್ಯದಲ್ಲಿ ನಟ್ಟು ತಳವೂರಿ ಕೊಂಡು ನಿಂತ ಭಕ್ತಿಯೆ ನಿಷ್ಠಾಭಕ್ತಿ. ಮತ್ತೆ ಭಕ್ತಿ ಇಲ್ಲವೆ ದಿವ್ಯಪ್ರೇಮವೆಂದರೇನು? ಸೇವೆ ಪೂಜೆ ತೊತ್ತುಗೆಲಸ ಭೃತ್ಯಾಚಾರ ದಾಸೋಹಂಭಾವ. ಭಕ್ತಿ ಎಂದರೆ ಮತ್ತೆ ಏನು? ಕೊಡುವುದು ಅರ್ಪಿಸುವುದು ಎಡೆಮಾಡುವುದು, ಕಡೆಗೆ ಭಕ್ತ ತಾನೇ ದೇವನಿಗೆ, ದಿವ್ಯಕ್ಕೆ ಎಡೆಯಾಗುವುದು. ನನಗೆ ಉಂಬುದೆ ಆಶೆ, ವಂಚನೆ; ನನ್ನದು ಎಂಬುದೆ ವ್ಯಾಮೋಹ ಮಮಕಾರ; ನಾನು ಎಂಬುದೆ ಅಹಂಭಾವ,' ಅಜ್ಞಾನ. ಇಲ್ಲಿ ಸ್ವಲ್ಪ ಹೊತ್ತು ನನ್ನ ಕಡೆ ತಿರುಗಿ ನೋಡಿ. ನಾನೂ ಭಕ್ತ ಹೌದು. ನನ್ನಲ್ಲಿಯೂ ನಿಷ್ಠೆ ಗಟ್ಟಿಗೊಂಡಿದೆ ಅದೂ ನಿಜ. ಆದರೆ ನಾನು ನನ್ನ ಭಕ್ತ, ಸಂಸಾರದ ನಿಸ್ಸೀಮ ಭಕ್ತ, ಪ್ರಪಂಚದ ಏಕನಿಷ್ಠ ಸೇವಕ, ವಿಷಯವಾರಾಶಿಯನ್ನು ಒಂದೆ ಬೊಗಸೆಯಲ್ಲಿ ಆಪೋಷಣೆ ಮಾಡಬೇಕೆಂದಿರುವ ಪಂಚಭೂತ ಕುಂಭಜನ್ಮ. ನನ್ನಲ್ಲಿ ನಾನು ನಟ್ಟಿರುವ ಈ ನಿಷ್ಠೆಯನ್ನು ಕೀಳುವುದು ಹರಿ ಹರ ಬ್ರಹ್ಮರ ಹವಣಲ್ಲ. ಅಚಲವಾದ ಈ ನನ್ನ ಭಕ್ತಿಗೆ ನಿಮಿಷ ನಿಮಿಷಾರ್ಧದ ಬಿಡುವಿಲ್ಲ. ಕೈ ಕಾಲು ಕಣ್ಣು ಕಿವಿ ಮನ ಬುದ್ಧಿ ನನಗಾಗಿ ಹಗಲಿರುಳೆನ್ನದೆ, ಹೊತ್ತು ವೇಳೆಯನರಿಯದೆ, 'ಅವರ ಕೊಂದಿವರ ಕೊಂದು'

---

೧. ಗುರು ಲಿಂಗ ಜಂಗಮಕ್ಕೆ ತನು ಮನ ಧನವನ್ನು ಸಮರ್ಪಿಸುವ ವಿಶೇಷ ರಹಸ್ಯವನ್ನು ಹಡಪದಪ್ಪಣ್ಣಗಳ ಬಾಯಿಂದ ಕೇಳಿ:

ತನುವ ಕೊಟ್ಟು ಭಕ್ತರಾದೆವೆಂಬರು. ಮನವ ಕೊಟ್ಟು ಭಕ್ತರಾದೆವೆಂಬರು.
ಧನವ ಕೊಟ್ಟು ಭಕ್ತರಾದೆವೆಂಬರು. ತನುಮನಧನವನೆಂತು ಕೊಟ್ಟರಿ ಹೇಳಿರಣ್ಣಾ!
ನಿಮ್ಮ ಒಡವೆ ನಿಮ್ಮಲ್ಲಿ ಇವೆ. ಅದು ಹೇಗೆಂದರೆ, ಬಲ್ಲವರು ನೀವು ಕೇಳಿ.
ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವುದಕ್ಕೇನು?
ಮನವ ನೀವು ಕೊಟ್ಟರೆ ನಿಮಗೆ ನಡೆ ನುಡಿ ಚೈತನ್ಯವೇನು?
ಧನವ ನೀವು ಕೊಟ್ಟರೆ ಕ್ಷುತ್ತಿಂಗೆ ಭಕ್ಷ್ಯ, ಶೀತಕ್ಕೆ ರಗಟೆ ಏನು?
ಅಂತಲ್ಲ ಕೇಳಿರಣ್ಣಾ. ತನುವ ಕೊಟ್ಟುದಾವುದೆಂದರೆ:
ಹುಸಿ ಹೋದರೆ, ಉಟ್ಟೇನು ತೊಟ್ಟೇನೆಂಬ ಗುಣವಳಿದರೆ, ತನುವೆ ಗುರುವಾಯಿತ್ತು.
ಮನವ ಕೊಟ್ಟುದಾವುದೆಂದರೆ:
ವ್ಯಾಕುಳವನ್ನೆಲ್ಲ ಅಳಿದು ನಿರಾಕುಳವಾಗಿ ನಿಂದರೆ, ಮನವೆ ಲಿಂಗವಾಯಿತ್ತು.
ಧನವ ಕೊಟ್ಟಹೆನೆಂಬುದಾವುದೆಂದರೆ:
ಇಂದಿಗೆ ನಾಳಿಗೆ ಎಂಬ ಸಂದೇಹದ ಭಾವಕ್ಕೆ ಭಯಕ್ಕೆ
ಭವವಳಿದುದೇ ಜಂಗಮವಾಯಿತ್ತು.
ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆ ನುಡಿ, ಮಾಟ ಕೂಟ.
ಇದನರಿಯದೆ ಏನೊಂದು ಮಾಡಿದರೂ ನೀಡಿದರೂ, ಕೊಟ್ಟರೂ ಕೊಂಡರೆಯೂ
ವಾಯಕ್ಕೆ ವಾಯು ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಹಡ. ವ. ಪು. ೩೧, ವ. ೧೪.

ವಿಷಯಪದಾರ್ಥಗಳನ್ನು ಗಳಿಸಿ, ನನ್ನ ಭೋಗಕ್ಕೆ ಅವಿರಳವಾಗಿ ಅರ್ಪಿಸುತ್ತಿವೆ. ಹೆಂಡತಿ ಮಕ್ಕಳು ಹೊಲ ಮನೆ ಒಕ್ಕಲತನ ವ್ಯಾಪಾರ ವಿದ್ಯೆ ಬುದ್ಧಿ ಯಂತ್ರ ತಂತ್ರ ಬಂಧು ಬಳಗ ಇಷ್ಟರು ಮಿತ್ರರನ್ನೆಲ್ಲ, ನನ್ನ ತನು ನನ್ನ ಪ್ರಾಣ ನನ್ನ ಶಕ್ತಿ ಸಾಮರ್ಥ್ಯ ವನ್ನೆಲ್ಲ ಬಳಸಿ ಬಳಸಿ ಸವೆಸುತ್ತಿದ್ದೇನೆ ನನ್ನ ಭೋಗಕ್ಕೆಂದು. ಮಾಯಾಸಂಸಾರವನ್ನು ಹೊದ್ದಿರುವ ಈ ನಾನು ಲಿಂಗೋದಯದ ಬೆಳಗಿನಲ್ಲಿ ಲಿಂಗಕಳೆ, ಚಿತ್‌ಕಳೆ, ಶಿವಕಳೆ ದಿವ್ಯಕಳೆ ತಾನಾದ ನನ್ನನ್ನು, ನನ್ನ ನಿಜಸ್ವರೂಪವನ್ನು ಕಣ್ಣಾರೆ ಕಂಡ ಬಳಿಕ, ನನ್ನ ಕೈ ಕಾಲು ಕಣ್ಣು ಕಿವಿ ಹೃದಯ ಬುದ್ಧಿ ಹೆಂಡತಿ ಮಕ್ಕಳು ಮನೆ ಮಾರೆಲ್ಲ ಯಾವ ಕಡೆ ಹರಿಯಬೇಕು? ಯಾರಿಗಾಗಿ ಹರಿಯಬೇಕು? ಚಿತ್‌ಕಳೆ ಚಿದಂಶ ಶಿವಾಂಶ ತಾನೆಂದರಿದ ಭಕ್ತ ತನ್ನ ಪರಿಪೂರ್ಣಕ್ಕೆ ಮೊದಲು ಎಲ್ಲವನ್ನು ಉಣಬಡಿಸಿ, ಆ ಪೂರ್ಣದಿಂದ ಬಂದ ಪ್ರಸಾದವನ್ನು ಸ್ವೀಕರಿಸುತ್ತಾನೆ. ಹಾಗಲ್ಲದೆ ವಿಶ್ವ ವಿಷಯಪದಾರ್ಥಗಳನ್ನು ನಾನೇ ತುಡುಕಿ ಹಿಡಿದು ತಿಂದು ತೇಗುವ ಅಧಿಕಾರ ನನಗೆಲ್ಲಿ? ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ; ವಿಷಯ ಪದಾರ್ಥಗಳೆಲ್ಲ ನಿಮ್ಮ ದಾನ; ಹೆಂಡತಿ ಮಕ್ಕಳು ಮನೆ ಮಾರು, ನನ್ನ ಕೈ ಕಾಲು ಕಿವಿ ಮೂಗು ನಿಮ್ಮ ದಾನ. ನನ್ನ ಬುದ್ಧಿ ವಿಚಾರ ವಿಜ್ಞಾನ ಯಂತ್ರ ತಂತ್ರ ಶಾಸ್ತ್ರದ ಸಡಗರವೆಲ್ಲ ನಿಮ್ಮ ದಾನ. ಎಲ್ಲ 'ನಿಮ್ಮ ದಾನ'ವೆಂಬ ಪ್ರಜ್ಞಾ ಭಕ್ತಿಯೇ ಎಲ್ಲವನ್ನು ಮೊದಲು 'ನಿಮಗೆ' ನೀಡ್ಕಿ, ಆ ಬಳಿಕ ನೀವು ಕೊಟ್ಟ, ನೀವು ಬಿಟ್ಟ, ನಿಮ್ಮ ಒಕ್ಕ ಮಿಕ್ಕ ಪ್ರಸಾದವನ್ನು ಸ್ವೀಕಾರ ಮಾಡಿಕೊಳ್ಳುತ್ತದೆ.

ದೇವಾ, ನಿಮ್ಮ ಭಕ್ತನು ಶ್ರೋತ್ರಮುಖದಲ್ಲಿ ಶಬ್ದ ಪದಾರ್ಥವ ನಿಮಗೆ ಕೊಡುವನು;
ಆತಂಗೆ ನೀವು ಶಬ್ದ ಪ್ರಸಾದವ ಕೊಡುವಿರಿ.
ತನ್ನ ತ್ವಕ್ಕಿನ ಮುಖದಲ್ಲಿ ಸ್ಪರ್ಶನಪದಾರ್ಥವ ನಿಮಗೆ ಕೊಡುವನು;
ಆತಂಗೆ ನೀವು ಸ್ಪರ್ಶನಪ್ರಸಾದವ ಕೊಡುವಿರಿ.
ನೇತ್ರಮುಖದಲ್ಲಿ ರೂಪುಪದಾರ್ಥವ ನಿಮಗೆ ಕೊಡುವನು;
ನೀವು ಆತಂಗೆ ರೂಪುಪ್ರಸಾದವ ಕೊಡುವಿರಿ.
ಜಿಹ್ವೆಯ ಮುಖದಲ್ಲಿ ರಸಪದಾರ್ಥವ ನಿಮಗೆ ಕೊಡುವನು;
ಆತಂಗೆ ನೀವು ರುಚಿಪ್ರಸಾದವ ಕೊಡುವಿರಿ.
ಘ್ರಾಣಮುಖದಲ್ಲಿ ಗಂಧಪದಾರ್ಥವ ನಿಮಗೆ ಕೊಡುವನು:
ಆತಂಗೆ ನೀವು ಗಂಧಪ್ರಸಾದವ ಕೊಡುವಿರಿ.
ಇಂತು ಭಕ್ತ ಸರ್ವಪದಾರ್ಥವ ಕೊಟ್ಟರೆ, ನೀವು ಪ್ರಸಾದವ ಕೊಡುವಿರಿ.
'ಭಕ್ತಕಾಯ ಮಮಕಾಯ' ಎಂಬ ನಿಮ್ಮ ವಚನ ದಿಟವಾಗಿ,
ನಿಮ್ಮ ಪ್ರಸಾದಿಯನರಿದು ಸಲಹುತಿಪ್ಪೆ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.[೧]

ದಿವ್ಯದ ದಾನವಾದ ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚವಿಷಯಪದಾರ್ಥ ಗಳನ್ನು ಕಿವಿ ತೊವಲು ಕಣ್ಣು ನಾಲಗೆ ಮೂಗು ಎಂಬ ಹರಿವಾಣದಲ್ಲಿ ಓರಣವಾಗಿ

---

೧. ಸ್ವ. ಸಿ. ವ. ಪು. ೫೮, ವ. ೨೨೫.

ಗಡಣಿಸಿ, 'ಕರಸ್ಥಲದ ಲಿಂಗವನು ಮನಸ್ಥಲದಲ್ಲಿ ಕುಳ್ಳಿರಿಸಿ'[೧] ಸಾವಧಾನಭಕ್ತಿಯಿಂದ ಆರೋಗಣೆ ಮಾಡಿಸಿದರೆ, ಲಿಂಗದೇವನ ಒಲವು ತುಂಬಿ ಬರುವ ಶಬ್ದ ಸ್ಪರ್ಶಾದಿಗಳು ಪ್ರಸಾದವಾಗಿ ಪರಿಣಮಿಸುತ್ತವೆ. ತಾನೆಡೆಮಾಡುವ ಪದಾರ್ಥದ ಗಡಣದಲ್ಲಿ ಸಾವಧಾನವಿವೇಕದ ಸದ್ಭಕ್ತಿಯನ್ನು ತುಂಬಿ ಭಕ್ತ ಕೊಟ್ಟರೆ, ದಿವ್ಯಾನುಗ್ರಹವನ್ನು ತುಂಬಿ ಭಕ್ತನಿಗೆ ಪ್ರಸಾದವನ್ನು ಕರುಣಿಸುತ್ತಾನೆ ಲಿಂಗದೇವ. ಈ ಶಬ್ದ ಸ್ಪರ್ಶಾದಿಗಳ 'ರೂಪ' ಪ್ರಪಂಚವನ್ನು ದೇವನಿಗೆ ಅರ್ಪಿಸುವಂತೆ, ಅವರವರ ರುಚಿ ತೃಪ್ತಿಯನ್ನೂ ಭಕ್ತ ತಾನು ತಿನ್ನುವಂತಿಲ್ಲ, ಮೊದಲು ಅವನ್ನು ಪ್ರಾಣಲಿಂಗ ಭಾವಲಿಂಗಕ್ಕೆ ಅರ್ಪಿಸದೆ. 'ಅನರ್ಪಿತವ ಹೊದ್ದಲಾಗದು'–ಎಂಬುದು ಪ್ರಸಾದಿಯ ಮಹಾಸೂತ್ರ. 'ಪ್ರಸಾದವ ಬಿಡಲಾಗದು'–ಎಂಬುದು ಅದೇ ಸೂತ್ರದ ಅವಳಿಜವಳಿ. ಅರ್ಪಿತವೆ ಭಕ್ತ, ಅನರ್ಪಿತವೆ ಭವಿ. ಇದೇ ದೇವಶರಣನಿಗೆ ಮತ್ತು ಲೋಕದ ಮಾನವನಿಗೆ ಇರುವ ಮಹಾಭೇದ.

ಮತ್ತೆ ಬೇಕಾದರೆ ಇಲ್ಲಿ ನೋಡಿ ಷಣ್ಮುಖಸ್ವಾಮಿಗಳು ಶಬ್ದಾದಿಗಳನ್ನು ಆಚಾರಾದಿ ಷಡ್ವಿಧಲಿಂಗಕ್ಕೆ ನೈವೇದ್ಯ ಮಾಡಿ, ಲಿಂಗಪ್ರಸಾದವನುಂಡು ಸುಖಿಸುತ್ತಿರುವ ಪರಿಕ್ರಮವನ್ನು:

ಪೃಥ್ವಿಯೆ ಅಂಗವಾದ ಭಕ್ತಂಗೆ ಚಿತ್ತವೆ ಹಸ್ತ,
ಆ ಹಸ್ತಕ್ಕೆ ಕ್ರಿಯಾ ಶಕ್ತಿ,
ಆ ಶಕ್ತಿಗೆ ಆಚಾರಲಿಂಗ, ಆ ಲಿಂಗಕ್ಕೆ ಘ್ರಾಣೇಂದ್ರಿಯವೆಂಬ ಮುಖ,
ಆ ಮುಖಕ್ಕೆ ಸುಗಂಧವೆ ಪದಾರ್ಥ,
ಆ ಪದಾರ್ಥವನು ಘ್ರಾಣದಲ್ಲಿಹ ಆಚಾರಲಿಂಗಕ್ಕೆ ಶ್ರದ್ಧಾಭಕ್ತಿಯಿಂದರ್ಪಿಸಿ,
ಆ ಸುಗಂಧದ ಪ್ರಸಾದವನು ಪಡೆದು
ಸುಖಿಸುವಾತನೆ ಸದ್ಭಕ್ತನು ನೋಡಾ ಅಖಂಡೇಶ್ವರಾ.[೨]

ಇದರಂತೆ ಅಪ್ಪುವೆ ಅಂಗವಾದ ಮಾಹೇಶ್ವರ, ಅಗ್ನಿಯೆ ಅಂಗವಾದ ಪ್ರಸಾದಿ, ವಾಯುವೆ ಅಂಗವಾದ ಪ್ರಾಣಲಿಂಗಿ, ಆಕಾಶವೆ ಅಂಗವಾದ ಶರಣ, ಆತ್ಮನೆ ಅಂಗವಾದ ಐಕ್ಯನಿಗೆ ಕ್ರಮವಾಗಿ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವವೆ ಹಸ್ತವಾಗಿ, ಆ ಹಸ್ತಕ್ಕೆ ಪರಿವಿಡಿಯಿಂದ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ ಚಿಚ್ಛಕ್ತಿಯೆ ಶಕ್ತಿಯಾಗಿ, ಆ ಶಕ್ತಿಗೆ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವಾಗಿ, ಆಯಾ ಲಿಂಗಕ್ಕೆ ನಾಲಗೆ ಕಣ್ಣು ತೊವಲು ಕಿವಿ ಹೃದಯವೆ ಬಾಯಿ ಆಗಿ, ಅಲ್ಲಲ್ಲಿಗೆ ರಸ ರೂಪು ಸ್ಪರ್ಶ ಶಬ್ದ ತೃಪ್ತಿಯೆ ಪದಾರ್ಥವಾಗಿ, ಆಯಾ ಲಿಂಗಕ್ಕೆ ಮುಖವಾದ ನಾಲಗೆ ಮುಂತಾದ ಜ್ಞಾನೇಂದ್ರಿಯದಲ್ಲಿ ರಸ ಮುಂತಾದ ಪದಾರ್ಥವನ್ನು ಅಲ್ಲಲ್ಲಿಯೆ ಭೋಗಮೂರ್ತಿಯಾಗಿ ಪ್ರತಿಷ್ಠಿತವಾಗಿರುವ ಗುರುಲಿಂಗ ಮುಂತಾದ ಲಿಂಗಕ್ಕೆ ನಿಷ್ಠೆ ಅವಧಾನ ಅನುಭಾವ ಆನಂದ ಸಮರಸ ಭಕ್ತಿಯಿಂದ ಸಮರ್ಪಿಸಿ, ರಸ

೧. ಅಖಂ. ವ. ಪು. ೪೬, ವ. ೬೧.
೨. ಅದೇ ಪು. ೧೪೨, ವ. ೪೮.

ರೂಪ ಸ್ಪರ್ಶ ಶಬ್ದ ತೃಪ್ತಿಪ್ರಸಾದವನ್ನು ಪಡೆದು, ಪರಿಣಾಮಸುಖದಲ್ಲಿ ಮನೆಮಾಡಿಕೊಂಡು ನಿರಂತರ ನಿಸ್ಸೀಮವಾಗಿ ಪ್ರಸಾದತೇಜದಲ್ಲಿ ಬೆಳಗುತ್ತಿದ್ದಾನೆ ಶರಣ.[1]

ಇಲ್ಲಿ ಭಕ್ತನ ಧಾಸೋಹಂಭಾವದ ಪ್ರಜ್ಞೆ ಸೋಹಂಭಾವದವರೆಗೆ ಹಬ್ಬುತ್ತದೆ. ಪೃಥ್ವಿ ಮುಂತಾದ ಅಷ್ಟತನು ಮೂರ್ತಿಯಾದ ಮಹಾದೇವನ ನಿಲವಿನಂತೆ ಭಕ್ತನ ಮಹಾನಿಲವೂ ಪೃಥ್ವಿ ಮೊದಲು ಆತ್ಮ ಕಡೆಯಾದ ಷಡಂಗವೆ ತನಗಂಗವಾಗಿ ನಿಲ್ಲುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ', 'ಅಯಮಾತ್ಮಾ ಬ್ರಹ್ಮ'– ಎಂಬ ಉಪನಿಷದ್ ವಾಕ್ಯಗಳನ್ನು ಮಥಿಸಿದರೆ 'ಅಯಮಾತ್ಮಾ ಸರ್ವಂ ಖಲ್ವಿದಂ ಬ್ರಹ್ಮ'–ಎಂಬ ನವನೀತ ಹೊರಡುವಂತೆ, ವಿಶ್ವವೆ ಅಂಗವಾಗಿ, ವಿಶ್ವಾತ್ಮವೂ ತನಗಂಗವಾಗಿ ಅವಕ್ಕೆಲ್ಲ ತಾನೇ ಪರಮಾತ್ಮವಾಗಿ, ಭಕ್ತ, ತಾನು ಸಹಿತವಾಗಿ ವಿಶ್ವವನ್ನೆಲ್ಲ 'ತನ್ನ ನಿಜಮೂರ್ತಿಯಪ್ಪ ಘನಕ್ಕೆ', ಶೂನ್ಯದ ಘಟ್ಟಿಗೆ ಅರ್ಪಿಸುತ್ತಾನೆ; ಆ ಘಟ್ಟಿಯಿಂದ ಬಂದ ವಿಶ್ವಪ್ರಸಾದವನ್ನು ಭೋಗಿಸುತ್ತಾನೆ.

ಪ್ರಭುದೇವರ ಮತ್ತೊಂದು ಮಾತನ್ನು ಕೇಳಿ, ಅಂದರೆ ಮೇಲಿನ ವಿಚಾರ ಮತ್ತಷ್ಟು ಸ್ವಚ್ಛವಾಗಿ ಬೆಳಗಿ ಸುಸ್ಪಷ್ಟವಾಗುತ್ತದೆ.

---

೧. ಹೋಲಿಸಿರಿ:

ಪಂಚಭೂತವಂಗವಾಗಿಪ್ಪಾತ್ಮಂಗೆ ಪಂಚೇಂದ್ರಿಯಂಗಳೇ ಮುಖಗಳು.
ಕರಣಂಗಳೇ ಕೈಗಳು. ಪಂಚ ವಿಷಯವು ಪೂಜೆ.
ಪಂಚ ಪದಾರ್ಥವೆ ಭೋಗ.
ಇವನೆಲ್ಲವ ತನ್ನ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ,
ಆತ ಸರ್ವನಿರ್ವಾಣಿ,
ಸಕಲ ನಿಃಕಲಾತ್ಮಕನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. (ಈ ವಚನ ಹಿಂದೊಮ್ಮೆ ಬಂದಿದೆ.)

ಉರಿ. ಪೆ. ವ. ಪು. ೬೨, ವ. ೩೮.

ಮತ್ತೆ ನೋಡಿರಿ:

ಪೃಥ್ವಿ ಅಪ್ಪು ತೇಜ ವಾಯು ಆಕಾಶ ರವಿ ಶಶಿ ಆತ್ಮ
ಮನೋ ವಾಕ್ಕಾಯ ಹೊನ್ನು ಹೆಣ್ಣು ಮಣ್ಣು ಸರ್ವಪದಾರ್ಥವನರ್ಪಿಸಿ
ಗುರುಲಿಂಗಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ
ಸರ್ವವೂ ಪ್ರಸಾದವಲ್ಲದೆ ಮತ್ತೊಂದಿಲ್ಲ.
ಆ ಪ್ರಸಾದಿಗೆ ಪದಾರ್ಥ ಪ್ರಸಾದವೆಂದು ಬೇರುಂಟೇ?
ಅರ್ಪಿತ ಅನರ್ಪಿತವೆಂಬ ಸಂದೇಹ ಉಂಟೇ?
ಕೊಂಬಲ್ಲಿ ಕೊಡುವಲ್ಲಿ ಸೀಮೆಯುಂಟೇ?
ನಿಸ್ಸೀಮ ಪ್ರಸಾದಿಗೆ ಸರ್ವವೂ ಪ್ರಸಾದ.
ಆ ಭೋಗಕ್ಕೆ ಅವಧಿಯುಂಟೇ? ಮೇರೆಯುಂಟೇ?
ಮನವೇ ಮೇರೆ ಪರಿಣಾಮವೇ ಅವಧಿ ನೋಡಾ!

. . . .

ಉರಿ. ಪೆ. ವ. ಪು. ೮೭, ವ. ೬೩.

ಅರ್ಪಿತ ಅನರ್ಪಿತವನಾರು ಬಲ್ಲರಯ್ಯಾ?
ಅರ್ಪಿಸಿ ಕೊಂಬುದು ಅನರ್ಪಿತ; ಅರ್ಪಿಸದೆ ಕೊಂಬುದು ಅರ್ಪಿತ.
ಅರ್ಪಿಸಿ ಅರ್ಪಿಸದೆ ಕೊಳಬಲ್ಲರೆ–ಗೊಹೇಶ್ವರಾ, ನಿಮ್ಮ ಪ್ರಸಾದಿ.[೧]

ಅರ್ಪಿತವೆಂದರೇನು? ಅನರ್ಪಿತವೆಂದರೇನು? ನಾನು ಲಿಂಗದೇವನಿಗೆ ಅರ್ಚನೆ ಪೂಜೆ ಅನ್ನ ವಸ್ತ್ರ ವಾಹನ, ತನು ಮನ ಧನ, ಅರ್ಥ ಪ್ರಾಣ ಅಭಿಮಾನ, ಹೊನ್ನು ಹೆಣ್ಣು ಮಣ್ಣನ್ನು, ಶಬ್ದ ಮುಂತಾದ ವಿಷಯಗಳನ್ನು ನೈವೇದ್ಯ ಮಾಡುವುದೇ, ಗುರುಲಿಂಗ ಜಂಗಮದೇವನಿಗೆ ಎಡೆಮಾಡುವುದೇ ಅರ್ಪಣ, ಅದೇ ಲಿಂಗಕ್ಕೆ 'ಅರ್ಪಿತ'ವಾಯಿತು ಎಂದು, ಮತ್ತು ಹೀಗೆ ದೇವನಿಗೆ ಸರ್ವಾರ್ಪಣ ಮಾಡಿ ದೇವನಿಂದ ಬಂದ ಪ್ರಸಾದ ವನ್ನು ಕೊಂಬುದು 'ಅರ್ಪಿತ'ವೆಂದು ಪ್ರಸಾದತತ್ತ್ವದ ಗಭೀರವನ್ನು ಅಳಿದ ಭಕ್ತರು ತಿಳಿದುಕೊಂಡಿದ್ದರೆ, ಅದು ಪರಿಪಕ್ವ ವಿಚಾರ ಅಲ್ಲ ಎಂದು ಪ್ರಭುದೇವರ ಖಂಡಿತ ಅಭಿಪ್ರಾಯ. ಮೇಲೆ ಮೇಲೆ ನೋಡಿದರೆ ಪ್ರಭುದೇವರ ಮಾತು 'ನೀನು ನೀನಲ್ಲ' ಎಂಬಂತೆ ಇದೆ. ಅರ್ಪಿಸಿ ಕೊಂಬುದು ಅರ್ಪಿತ ಅಲ್ಲ! ಅರ್ಪಿಸದೆ ಕೊಂಬುದು ಅರ್ಪಿತ! ಒಂದಕ್ಕೊಂದು ವಿರುದ್ಧ. ಪ್ರಭುದೇವರು ಈ ವಿರುದ್ಧಗಳನ್ನು 'ಅರ್ಪಿಸಿ ಅರ್ಪಿಸದೆ' ಪ್ರಸಾದವನ್ನು ಕೊಳ್ಳುವ ಸಾವಧಾನ ಸುವಿವೇಕದಲ್ಲಿ ಸುಸಂಗತಗೊಳಿಸುತ್ತಾರೆ. ಅದು ಹೇಗೆ ಎಂದು ಕೇಳುವಿರಾ? ಸ್ವಲ್ಪ ಸಾವಧಾನವಾಗಿ ಪ್ರಭುದೇವರ ವಿಚಾರವನ್ನು ಪರೀಕ್ಷಿಸಿ ನೋಡಿ: ನಾನು ಲಿಂಗದೇವನಗೆ ತನು ಮನ ಧನ ಶಬ್ದ ಮುಂತಾದ ವಿಷಯ, ರೂಪು ರುಚಿ ತೃಪ್ತಿರೂಪವಾದ ಸಕಲ ಪದಾರ್ಥವನ್ನು ಅರ್ಪಿಸುತ್ತೇನೆ. ಅರ್ಪಿಸು ವಾತ ನಾನು; ಅರ್ಪಿಸಿದುದನ್ನು ಕೊಂಬಾತ ಲಿಂಗ; ಅರ್ಪಣವಾಗುವುದು ಸಕಲ ಪದಾರ್ಥ. ಅಲ್ಲವೇ? ಹೀಗೆ ಅರ್ಪಣ ಮಾಡುವಲ್ಲಿ ಮಾಡುವ 'ನಾನು' ಅರ್ಪಿತವಾಗದೆ ಉಳಿದುಕೊಂಡಂತಾಯ್ತು. ಈ 'ನಾನು' ಅಹಂ ಭಾವ, ಜೀವಭಾವ ಅಥವಾ ಲಿಂಗ ತಾನು ಎಂಬ ಸೋಹಂಭಾವವೂ ಲಿಂಗದೇವನಿಗೆ ಅರ್ಪಿತವಾಗಬೇಕು. ಈ ನಾನನ್ನು ಉಳಿಸಿಕೊಂಡು ಸರ್ವಾರ್ಪಣ ಮಾಡಿದರೂ ಆ ಅರ್ಪಿತ ಅನರ್ಪಿತವೇ. ಅಂದರೆ ಅದು ಸಂಪೂರ್ಣ ಅರ್ಪಿತವಲ್ಲ. ಆ ಮೇಲೆ ಈ 'ನಾನು' ತಾನಾದ ಲಿಂಗಕ್ಕೆ ಅರ್ಪಣವಾದ ಬಳಿಕ ಅರ್ಪಿಸುವ ಭಕ್ತನೆಲ್ಲಿ? ಅರ್ಪಿಸಿಕೊಂಬ ದೇವನೆಲ್ಲಿ? ಪೂಜ್ಯ ಪೂಜಕಭಾವದಲ್ಲಿ ಪೂಜಕ ಕರಗಿ ಪೂಜ್ಯದಲ್ಲಿ ಅಡಗಿ, ಸಮರಸ ಪೂಜೆ, ಐಕ್ಯಭಕ್ತಿ ತನಗೆ ತಾನೆ ನಡೆವಂತೆ, ದೇಹೇಂದ್ರಿಯ ವಿಷಯ ಭೋಗದೊಡನೆ ನಿಮಿಷ ನಿಮಿಷಕ್ಕೆ ತಾನೂ ಲಿಂಗಾರ್ಪಿತ ವಾಗುತ್ತಿರುವ ಪ್ರಸಾದಿಯ ಅರ್ಪಣಭಕ್ತಿ ಅವಿರಳವಾಗಿ ಸಹಜವಾಗಿ ನಿತ್ಯ ನಿರಂತರ ವಾಗಿ ತನಗೆ ತಾನೆ ನಡೆಯುತ್ತದೆ. ಇಲ್ಲಿ ಅರ್ಪಣ ದ್ರವ್ಯ, ಪದಾರ್ಥ ನಾನು ಮತ್ತು ನನ್ನ ಸಾಮ್ರಾಜ್ಯ; ಪ್ರಸಾದ ಲಿಂಗದೇವ ಮತ್ತು ದೇವನ ಪರಮೈಶ್ವರ್ಯದ ರಸ ಸಾಮ್ರಾಜ್ಯ. 'ಪದಾರ್ಥ ನಾನು, ಪ್ರಸಾದ ನೀನು'–ಎಂಬುದೆ ಪ್ರಸಾದ ತತ್ತ್ವದ ಸಾವಧಾನಸೂತ್ರ.

೧. ಶೂ. ಸಂ. ಮ. ೧೯, ವ. ೬೪.

ಹೇರನೊಪ್ಪಿಸಿದ ಬಳಿಕ ಮತ್ತೆ ಸುಂಕವ ಕೊಡಬೇಕೆ? ನಾನು ಲಿಂಗದೇವನಿಗೆ ಅರ್ಪಿತವಾದರೆ ನನ್ನ ಕಾಲ ನಡಿಗೆ ನನ್ನ ಕೈಯ ಮಾಟ, ನನ್ನ ನಾಲಗೆಯ ನುಡಿಗಡಣ ನನ್ನ ಕಣ್ಣ ರೂಪರಾಶಿ, ನನ್ನ ಕಿವಿ ಕೇಳುವ ಧ್ವನಿತರಂಗವಾರಾಶಿ ನನ್ನ ಮೂಗು ಕಂಡು ಹಿಡಿವ ಗಂಧದ ಪರುಷೆ, ನನ್ನ ತಲೆಯ ಆಕಾಶದಲ್ಲಿ ಮಿಂಚುವ ವಿಚಾರಗಳ ಕಪ್ಪು ನಕ್ಷತ್ರ ಮಾಲೆ ನನ್ನ ಹೃದಯಸಾಗರದಲ್ಲಿ ಹೊಮ್ಮಿ ತೇಲುವ ಭಾವತರಂಗಕೋಟಿ, ವಿಚಾರ ದನುವಿನಲ್ಲಿ ಹರಿವ ನನ್ನ ಆಚಾರದ ಅನೇಕ ರೂಪ – ನಾನು, ನನ್ನಲ್ಲಿ ಮೂಡಿ ತೋರುವ ಎಲ್ಲ ಎಲ್ಲ ಲಿಂಗಾರ್ಪಿತ. ಲಿಂಗಾರ್ಪಿತವಾಗುತ್ತಿರುವ ಇವೆಲ್ಲ ಲಿಂಗಕ್ಕೆ ಅರ್ಪಿಸಲು ತಕ್ಕುವೆ? – ಎಂಬ ಸಾವಧಾನ ಸದಾ ಜಾಗರವಾಗಿರಬೇಕು ಅರ್ಪಿತವಾಗುತ್ತಿರುವ ಭಕ್ತನಲ್ಲಿ.

ನಾನು ದೇವನಿಗೆ ಅರ್ಪಿಸಬೇಕು – ಎಂದು ಮಾಡುವ ಮಾಟದಲ್ಲಿ 'ನಾನು' ಇರುವವರೆಗೆ ಅಂಗ ಹಸ್ತ ಶಕ್ತಿ ದ್ರವ್ಯ ಮುಖ ಲಿಂಗ ಭಕ್ತಿಯನರಿದು ಅರ್ಪಿಸಬೇಕು. ಆದರೆ ಮಾಡುವ ಮಾಟದಲ್ಲಿ ತಾನಿಲ್ಲದೆ ಮಾಡಿದರೆ, ಅರ್ಪಣ ಸಹಜಾರ್ಪಣವಾಗು ತ್ತದೆ, ಭೋಗ ಅಥವಾ ಭೋಜನ ಸಹಭೋಜನವಾಗುತ್ತದೆ. ನಾನು ದೇವ ಒಂದಾಗಿ ಕೂಡಿ ಒಂದೇ ಭಾಜನದಲ್ಲಿ, ಒಂದೆ ತಳಿಗೆ ಅವೇ ಬಟ್ಟಲುಗಳಲ್ಲಿ ಕೂಡಿ ಉಂಡರೆ ಅದೇ ಸಹಭೋಜನ.[೧] ತಂದೆ ಮಗ ತಾಯಿ ಕೂಸು, ಅಣ್ಣ ತಮ್ಮ ಗಂಡ ಹೆಂಡತಿ ಒಂದೇ ಗಂಗಾಳದಲ್ಲಿ ಕೂಡಿ ಉಣ್ಣುವುದನ್ನು ನೀವು ನೋಡಿರಬಹುದು. ಅಥವಾ ನೀವೇ ಹೀಗೆ ಕೂಡಿ ಉಂಡಿರಬಹುದು. ನಾನು ಹೀಗೆ ಉಂಡಿದ್ದೇನೆ. ಅದರ ರುಚಿಯ ಪ್ರೇಮವಿಲಾಸ ವನ್ನೂ ಕಂಡಿದ್ದೇನೆ. ದೇಹವೆಂಬ ತಳಿಗೆ ತಾಟು ಗಂಗಾಳದಲ್ಲಿ, ಕಣ್ಣು ಕಿವಿ ನಾಲಗೆ ಮೂಗು ಮುಂತಾದ ಎಡೆಬಟ್ಟಲುಗಳಲ್ಲಿ ದೇವ ಭಕ್ತ ಕೂಡಿ ಆರೋಗಣೆಮಾಡಿದರೆ, ಆ ಊಟದ ರುಚಿ ದೇವನೊಡನುಣ್ಣುವ ಭಕ್ತನಿಗೆ ಗೊತ್ತು, ಭಕ್ತನೊಡನೆ ಭೋಗಿಸುವ ದೇವನಿಗೆ ಗೊತ್ತು. ಇಲ್ಲಿ ಎಂಜಲ, ಉಚ್ಚಿಷ್ಟಸೂತಕ ಉಂಟೇ? ನಾನು ತಿಂದು ಕೊಡುವುದು ನನ್ನ ಹೆಂಡತಿಯ ಬಾಯಿಗೆ ಎಂಜಲೆ? ನನ್ನ ಹೆಂಡತಿ ತಿಂದು ನನಗೆ ಕೊಟ್ಟರೆ ಎಂಜಲೆಂದು ನಾನು ಉಗುಳೇನೇ? ದೇವನುಂಡು ಬಿಟ್ಟುದು ಕೊಟ್ಟುದು ಭಕ್ತನಿಗೆ ಎಂಜಲವಲ್ಲ;

---

೧. ನೋಡಿರಿ:

ಶಿವನ ಶಿವಪ್ರಸಾದಿಯ ಉಭಯ ಸಂಬಂಧ ಸಹಭೋಗವೆಂತೆಂದೊಡೆ:
ಶಿವ ತನ್ನ ನೇತ್ರಂಗಳನು ಪ್ರಸಾದಿಯ ನೇತ್ರದಲ್ಲಿ ಕೂಡಿ ರೂಪನರಿವನು.
ಶಿವ ತನ್ನ ಶ್ರೋತ್ರಂಗಳನು ಪ್ರಸಾದಿಯ ಶ್ರೋತ್ರಂಗಳಲ್ಲಿ ಕೂಡಿ ಶಬ್ದವನರಿವನು.
ಶಿವ ತನ್ನ ಘ್ರಾಣವನು ಪ್ರಸಾದಿಯ ಘ್ರಾಣದಲ್ಲಿ ಕೂಡಿ ಗಂಧವನರಿವನು.
ಶಿವ ತನ್ನ ಜಿಹ್ವೆಯನು ಪ್ರಸಾದಿಯ ಜಿಹ್ವೆಯಲ್ಲಿ ಕೂಡಿ ರಸವನರಿವನು.
ಶಿವ ತನ್ನ ಅಂಗವನು ಪ್ರಸಾದಿಯ ಅಂಗದಲ್ಲಿ ಕೂಡಿ ಸ್ಪರ್ಶವನರಿವನು.
ಶಿವ ತಾನು ಬೇರೆ ಭೋಗಿಸಲೊಲ್ಲದೆ ಪ್ರಸಾದಿಯ ಹೊಕ್ಕು ಭೋಗಿಸ [ಸುವ?] ನಾಗಿ,
ಸೋಹಂ ಎನ್ನದೆ ದ್ವೈತಾದ್ವೈತವ ಮೀರಿ [ದ?] ಪ್ರಸಾದಿ,
ಸಂಗನ ಬಸವಣ್ಣನ ಸುಖಾತಿಶಯುವನೇನೆಂದುಪಮಿಸುವೆನಯ್ಯಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ?

ಸ್ವ. ಸಿ. ವ. ಪು. ೫೯, ವ. ೨೨೯.

ದೆಲ್ಲ ತನ್ನ ಸರ್ವಾಂಗವೆನಿಸುವ ವಿಶ್ವದಲ್ಲಿ ಹುಟ್ಟಿ, ತನ್ನೊಳಗೆ ಹರಿವುದೆಲ್ಲ ಹರಿಯಬೇಕು ಲಿಂಗಕ್ಕೆಂದೆ. ಲಿಂಗಗಂಭೀರದಿಂದ ಹರಿದು ಲಿಂಗಗಂಭೀರಕ್ಕೆ ಅರ್ಪಣವಾಗಲು ನಡೆದಿರುವ ಶರಣಜೀವನ ಎಂಥದು? ಶರಣನೆ ಬಲ್ಲ. ಕವಿಯ ಹೃದಯ ಕವಿಗೆ ಗೊತ್ತು; ವಿಜ್ಞಾನಿಯ ವಿಚಾರ ವಿಜ್ಞಾನಿಗೆ ಗೊತ್ತು.

ನೆಲ ತಳವಾರನಾದಡೆ ಕಳ್ಳಂಗೆ ಹೋಗಲೆಡೆಯುಂಟೇ?
ಸರ್ವಾಂಗಲಿಂಗಿಗೆ ಅನರ್ಪಿತ ಉಂಟೇ ನಿ:ಕಳಂಕಮಲ್ಲಿಕಾರ್ಜುನಾ?[೧]

ಶಬ್ದ ಸ್ಪರ್ಶ ರೂಪು ರಸ ಗಂಧ ಪಂಚೇಂದ್ರಿಯಂಗಳು ಮೊದಲಾಗಿ
ನಡೆದವು ಲಿಂಗದತ್ತತ್ತಲೆ.
ತಮತಮಗೆ ಭೋಗ ಸುಖ ಲಿಂಗಾರ್ಪಿತವೆಂದು ನಡೆದವು ಲಿಂಗದತ್ತತ್ತಲೆ,—
ಕೂಡಲಚೆನ್ನಸಂಗಯ್ಯ. ಲಿಂಗನಿವಾಸಿ ಶರಣಂಗೆ.[೨]

ನೆಲನೇ ಕಳ್ಳನ ಬೆಂಬತ್ತಿ ಹಿಡಿವ ತಳವಾರನಾದರೆ, ಕಳ್ಳ ಅಡಗುವುದೆಲ್ಲಿ? ಎಲ್ಲಿ ಹೊಕ್ಕರೆ ಅಲ್ಲಿ ತಳವಾರ, ಎಲ್ಲಿ ಅಡಗಿದಲ್ಲಿ ತಳವಾರ. ಶರಣನ ಕಾಯ-ಕರಣ-ಇಂದ್ರಿಯ-ಆತ್ಮ ವೆಂಬ ಅಂಗವೆಲ್ಲ ಲಿಂಗವಾದರೆ, ಶಬ್ದಸ್ಪರ್ಶಾದಿಗಳು, ಬಂದ ಬಂದ ಸುಖಭೋಗಾದಿಗಳು ಎಲ್ಲಿ ಹೋಗಬೇಕು? ಎಲ್ಲಿಗೆ ಗಮಿಸಬೇಕು? ಎಲ್ಲಿ ಅರ್ಪಿತವಾಗಬೇಕು? ಎಲ್ಲಿ ಅಡಗ ಬೇಕು? ಲಿಂಗದತ್ತ ಗಮಿಸಿ ಲಿಂಗದಲ್ಲಿ ಅರ್ಪಿತವಾಗಬೇಕಲ್ಲವೇ? ನಾನು ನನ್ನ ಮನೆ ಯಲ್ಲಿ ವಾಸವಾಗಿದ್ದರೆ, ನನ್ನ ಶಬ್ದಸ್ಪರ್ಶಾದಿಗಳು ನನ್ನ ಸುಖಭೋಗಗಳು ಕರಣೇಂದ್ರಿಯ ಮುಖವಾಗಿ ನನ್ನಲ್ಲಿಗೆ ಬಂದು ನನಗೆ ಅರ್ಪಿತವಾಗುತ್ತವೆ. ನಾನೇ ಲಿಂಗದಲ್ಲಿಗೆ ನಡೆ ಯುತ್ತ ಅಲ್ಲಿಯೆ ಅರ್ಪಿತವಾಗುತ್ತಿದ್ದರೆ, ಅರ್ಪಿತವಾಗಿದ್ದರೆ ಅವೆಲ್ಲಿಗೆ ಹೋಗಬೇಕು? ಲಿಂಗದಲ್ಲಿ ಅರ್ಪಿತವಾಗಿ ಅಲ್ಲಿಯೆ ವಾಸವಾಗಿರುವ ನಾನು—ಲಿಂಗದೆಡೆಗಲ್ಲವೆ? ಸರ್ವಾಂಗ ಲಿಂಗವಾದ ಶರಣನಿಗೆ ಅನರ್ಪಿತವೆಂಬುದೆ ಇಲ್ಲ. ಲಿಂಗಾರ್ಪಿತವಾಗಿ ತಾನು ಇಲ್ಲದ ಶರಣನಿಗೆ ಅರ್ಪಿಸಬೇಕೆಂಬುದೂ ಇಲ್ಲ. ಇದೇ ಸಹಜಾರ್ಪಣ; ಸಹಜಾರ್ಪಣವೆಲ್ಲ ಸಹಜ ಪ್ರಸಾದವೇ.

ಅಜ್ಞಾನ ಮಾಯೆ ಮೋಹ ಜೀವೋಽಹಂಭಾವದಲ್ಲಿ ವಾಸಮಾಡಿಕೊಂಡಿದ್ದು ವಿಷಯಸುಖಭೋಗಸಂಸಾರವನ್ನು ನಾನು ಉಂಡರೆ, ಮನೆಯೊಡೆಯ ಜಗದೊಡೆಯ, ಜಗದ ಕರ್ತ ಜಗದ ಭರ್ತ, ನನ್ನ ಕರ್ತ ನನ್ನ ಭರ್ತನ ಅರಿವಿಲ್ಲದೆ ಆತನ ಬಿಟ್ಟು ವಿಷಯ ಪ್ರಪಂಚವನ್ನು ನಾನು ಭೋಗಿಸಿದರೆ, ಅದು ನನ್ನ ಅಕ್ಷಮ್ಯ ಅಜ್ಞಾನ, ಪಂಚಮಹಾ ಪಾತಕ. ಆದರೆ ಒಡೆಯನಿಗೆ ತನು ಮನ ಧನ ಮನೆ ಮಾರು ಹೊನ್ನು ಹೆಣ್ಣು ಮಣ್ಣು ಶಬ್ದಸ್ಪರ್ಶಾದಿ ವಿಷಯಮಹಾವಾರಾಶಿ, ಸುಖ ಭೋಗ ಭಾಗ್ಯ ವಿಲಾಸವನ್ನೆಲ್ಲ ಕೈ ಮುಟ್ಟಿ ಕಣ್ಣು ಮುಟ್ಟಿ ಬುದ್ಧಿ ಹೃದಯ ಮುಟ್ಟಿ ಕಡೆಗೆ ನಾನು ಮುಟ್ಟಿ, ಅಹಂಭಾವದ ತಳಿಗೆಯಲ್ಲಿ ಅವನೆಲ್ಲ ಗಡಣಿಸಿ ನೈವೇದ್ಯಮಾಡಿ, ಆತನುಂಡು ಬಿಟ್ಟ ಕೊಟ್ಟ ತನು ಮನ ಮುಂತಾದ

೧. ವ. ಶಾ. ಸಾ. ಭಾ. ೧, ಪು. ೩೭೧, ವ. ೧೩.
೨. ಅದೇ „ „ ವ. ೧೧.

ಪ್ರಸನ್ನಪ್ರಸಾದವನುಂಡರೆ ಎಲ್ಲಿದೆ ದೋಷ? ಎಲ್ಲಿದೆ ಪಾತಕ? ಎಲ್ಲಿದೆ ಅಜ್ಞಾನ, ಮಾಯೆ, ಮೋಹದ ಸಂಸಾರ, ವಿಷಯದ ಪ್ರಪಂಚ? 'ಉಣಲಾಗದೆಂಬ ಶಾಸ್ತ್ರ ಉಂಟೇ ಲಿಂಗವಂತಂಗೆ?' ಒಡೆಯನ ಒಡವೆಯನ್ನು ನನ್ನದೆಂದು ಹಮ್ಮಿನಿಂದ ತಿಂದರೆ, ಅದು ಮಹಾಪರಾಧ. ಒಡೆಯನ ಒಡವೆಯಾದ ತಾನು ಮುಂತಾಗಿ ಸಕಲ ಪದಾರ್ಥವನೆಲ್ಲ ಒಡೆಯನಿಗೊಪ್ಪಿಸಿ, ಒಡೆಯನಿಗರ್ಪಿಸಿ, ಆತನಿಂದ ಬಂದ ಕಾರುಣ್ಯಪ್ರಸಾದವನ್ನು ಏಕೆ ಉಣ್ಣಬಾರದು? ಜಗದ ಕರ್ತನಿಗೆ ಸರ್ವಾರ್ಪಣಮಾಡಿ ಸರ್ವಭೋಗವ ಭೋಗಿಸಲು 'ಹಕ್ಕುದಾರ'ನಾಗುತ್ತಾನೆ ದಾಸೋಹಂಭಾವದಲ್ಲಿದ್ದ ಭಕ್ತ. ಮತ್ತೆ 'ಅರ್ಪಣ'ದ ತತ್ತ್ವವನ್ನು ಸುಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ, ಜೀವನದ ದಿವ್ಯಕಲೆ ದೃಗ್ಗೋಚರವಾಗುತ್ತದೆ. ದಿವ್ಯಕ್ಕೆ ಕೊಟ್ಟು ತಾನುಂಡರೆ, ಸಂಸಾರಸರ್ಪದ ವಿಷದ ಹಲ್ಲನ್ನೆ ಮುರಿದು, ಹಾವಿನೊಡನೆಯೆ ವಿನೋದವಿಲಾಸವಾಡಿದಂತೆ. ಸುಖವಿರಲಿ ದು:ಖವಿರಲಿ, ಅನುಕೂಲವಿರಲಿ ಪ್ರತಿಕೂಲವಿರಲಿ, ಉರಿ ಬರಲಿ ಸಿರಿ ಬರಲಿ, ಮಲ್ಲಿಗೆಯ ಮಾಲೆಯಿರಲಿ ಸಿಡಿಲಿನ ಗೊಂಚಲಿರಲಿ – ಅಂದಂದಿಗೆ ಬಂದಬಂದುದನ್ನೆಲ್ಲ ದೇವನಿಗೆ ಕೊಟ್ಟು, ದೇವ ತನಗೆ ಕೊಟ್ಟುದನ್ನು ಕೊಂಡು, ದಿವ್ಯದಿಂದೊದಗಿದ ಪ್ರಸಾದ ಸವಿ ಕಹಿಯೆನ್ನದೆ, ಒಂದಗುಳಾದರೂ ಬೀಸರವಾಗದಂತೆ ಎಲ್ಲವನ್ನು ತಾನುಂಡರೆ, ಸಂಸಾರಜೀವನ ಪ್ರಸಾದದಿಂದ ದಿವ್ಯ ಪ್ರಸನ್ನ ಜೀವನವಾಗುತ್ತದೆ. ಸಂಸಾರ ಲಿಂಗಸಾರವಾದರೆ, ಸಂಸಾರವೇಕೆ ಬೇಡ? ಭೌತ ಪ್ರಪಂಚ ಲಿಂಗದ ಬೆಳಸಾದರೆ, ಪ್ರಪಂಚವೇಕೆ ಬೇಡ? ವಿಷಯಸಂಸಾರಕ್ಕೆ ನಾನು ಎಡೆಯಾದರೆ, ವಿಷಯಸಂಸಾರವಾಗುತ್ತೇನೆ ನಾನು; ನಾನು ನನ್ನ ತನು ಮನ ಹೃದಯ ಬುದ್ಧಿ ಕೈ ಕಾಲು ಕಣ್ಣು ಕಿವಿ ಮತ್ತೆ ಇವೆಲ್ಲ ಹಡೆವ ಆಚಾರ ವಿಚಾರವಾರಾಶಿ ಲಿಂಗಕ್ಕೆ ನೈವೇದ್ಯವಾದರೆ, ಈ ನಾನೆಲ್ಲ ಲಿಂಗದೇವನುಂಡು ಲಿಂಗಮಯವೆ. ಉರಿಗೆ ಎಡೆಯಾದ ಕರ್ಪುರ, ಅದರ ನಾಮ ರೂಪ ಪರಿಮಳಕ್ರಿಯೆಯೆಲ್ಲ ಉರಿಯಮಯವೇ.

ಪ್ರಪಂಚವನ್ನೆ ಪಾರಮಾರ್ಥವನ್ನಾಗಿಸಿದ, ಪಾರಮಾರ್ಥವನ್ನೆ ಪ್ರಪಂಚಕ್ಕೆ ಇಳುಹಿ ತಂದು ಇಹ ಪರವನ್ನು ಕರಗಿಸಿ ಸಮರಸಮಾಡಿ ಅನಿತ್ಯವನ್ನು ನಿತ್ಯವಾಗಿಸುವ, ಮರ್ತ್ಯವನ್ನು ಅಮರ್ತ್ಯದಲ್ಲಿ, ಬಂಧವನ್ನು ನಿತ್ಯಮುಕ್ತಿಯಲ್ಲಿ ನಿಲಿಸುವ ದಿವ್ಯಜೀವನಕಲೆಯ ಬಿನ್ನಾಣವನ್ನು ಕೇಳಿ:

> ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ.
> ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ.
> ವಿಧಿಯ ಮೀಱುವ ಅಮರರಿಲ್ಲ.
> ಕ್ಷುಧೆ ವಿಧಿ ವ್ಯಸನಕ್ಕಂಜಿ ನಾ ನಿಮ್ಮ ಮಱೆಹೊಕ್ಕು ಬದುಕಿದೆ
> ಚೆನ್ನಮಲ್ಲಿಕಾರ್ಜುನಾ ![೧]

ಮಹಾದೇವಿಯಕ್ಕನ ಈ ವಚನದ ಅಂತರಂಗವನ್ನು ಕಲ್ಲಮಠದ ಪ್ರಭುದೇವರು ಅರ್ಥಯಿಸುವ ಉಜ್ವಲತೆಯನ್ನು ನೋಡಿ:

---

೧. ಲಿಂ. ಲೀ. ವಿ. ಚಾ. ಪು. ೨೭೦, ವ. ೭೯.

'ಕ್ಷುತ್ತಿನ ಬಾಧೆಯನೂ ಕಾಮವಿಕಾರವನೂ ಬಿಟ್ಟಹೆನೆಂದರೆಯೂ, ಅವು ಬಿಡದೆ ಹಿಡಿದು ಕಾಡುತ್ತಿಪ್ಪವಾಗಿ, ದೇಹಭೋಗ ಹಿಂಗದು. ದೇಹಭೋಗ ಹಿಂಗದಾಗಿ ಜನನ ಮರಣ ತಪ್ಪದು. ಅಂತು ದೇಹೇಂದ್ರಿಯ ವಿಷಯ ಸುಖ ಭೋಗಂಗಳನಾರು ಜಯಿಸಲ ಱಿಯದೆ ಷಡುದರುಶನಾದಿಗಳು ದೇವತಾದಿಗಳೆಲ್ಲರೂ ಜನನ ಮರಣಕ್ಕೊಳಗಾದರು. ಲಿಂಗದ ಮಱಿಹೊಕ್ಕು ಶರಣ ಅಂಗಭೋಗಂಗಳನೆಲ್ಲವ ಲಿಂಗಕ್ಕರ್ಪಿಸಿ. ಲಿಂಗಪ್ರಸಾದ ಭೋಗಿಯಾಗಿ ಶರಣ ನಿತ್ಯ ಮುಕ್ತನಾದನು . . . .'[೧]

ಅಂಗ ಮತ್ತು ಅಂಗದ ಭೋಗವನೆಲ್ಲವ ಲಿಂಗಕ್ಕೆ ಕೊಟ್ಟು, ಲಿಂಗದಿಂದ, ಗುರುಲಿಂಗ ಜಂಗಮದಿಂದ ಬಂದ ಪ್ರಸಾದವ ಭೋಗಿಸುವ ಶರಣ ವಿಷಯಸಂಸಾರಭೋಗದ ವಿಶ್ವ ಪ್ರಶ್ನೆಯನ್ನು ಹೀಗೆ ಬಿಡಿಸಿದ್ದಾನೆ. ದಿವ್ಯಕ್ಕೆ ತನ್ನನೆತ್ತಿಕೊಟ್ಟು ದಿವ್ಯವನ್ನು ಕೊಂಡರೆ ಮಾನವ ಬದುಕಬಲ್ಲ, ಸುಖವಾಗಿ ಬದುಕಬಲ್ಲ, ನಿತ್ಯಮುಕ್ತನಾಗಿ ಬದುಕಬಲ್ಲ.

ಇಲ್ಲಿ ಅಲ್ಲಿ ಇದು ಅದು ನಾನು ನೀನು ನಿತ್ಯ ಅನಿತ್ಯ ಮರ್ತ್ಯ ಅಮರ್ತ್ಯ, ದೇಹ ನಿರ್ದೇಹ ಪ್ರಾಣ ನಿಷ್ಪ್ರಾಣ ಭಾವ ನಿರ್ಭಾವ, ದೂರ ಸಮೀಪ ಮೇಲೆ ಕೆಳಗೆ ಒಳಗೆ ಹೊರಗೆ, ಪುಣ್ಯ ಪಾಪ ತಮಸ್ಸು ಜ್ಯೋತಿ ಅಸತ್ತು ಸತ್ತು ಶಿವ ಅಶಿವ ಜಡ ಅಜಡ, ಸಂದು ಸಂದೇಹ ಭ್ರಾಂತಿ ವಿಪರೀತ ಅಭಿನ್ನ ನಿಶ್ಚಯ ನಿರ್ಣಯ ಸಹಜ ನಿರಾಲಂಬ— ಮುಂತಾದ ದ್ವೈತಭಾವದ ಜಗದ್ವಿಲಾಸವನ್ನು ಪ್ರಸನ್ನಗೊಳಿಸಿ, ದ್ವೈತದಲ್ಲಿ ಹರಿದಾಡುವ ಪ್ರಾಣರಸವೆಲ್ಲ ಅದ್ವೈತ ವಸ್ತುವೆ ಎಂಬ ಅನುಭವದ ಉರಿಯೆದ್ದು ಬೆಳಗುವ ಸೀಮೆ ಯಿಲ್ಲದ ಸೀಮೆಯೆ ಪ್ರಸಾದಿಸ್ಥಲದಿಂದ ಒಳಹೊರಗೆ ಬಂದರೆ ತೋರುವ ಪ್ರಾಣಲಿಂಗದ, ಪ್ರಾಣಲಿಂಗಿಯ ದಿವ್ಯೋಜ್ವಲ ಸ್ಥಲ. ಈ ಸ್ಥಲವನ್ನು ಮುಟ್ಟಲು ಶರಣ ಹಾದಿಮಾಡಿ ಕೊಂಡಿರುವುದು ಹೀಗೆ:

1. ಬ್ರಹ್ಮಸ್ಥಾನದ ಬಳಿಯ ಸಹಸ್ರದಳ ಕಮಲಮಧ್ಯದಲ್ಲಿ
ಸೂಕ್ಷ್ಮರಂಧ್ರವೆಂಬುದೊಂದು ಕೈಲಾಸದ್ವಾರವುಂಟು.
ಆ ದ್ವಾರದ ಕವಾಟವ ತೆಗೆದು ನೋಡಲು,
ಕೋಟಿ ಚಂದ್ರಪ್ರಕಾಶದ ದಿವ್ಯಪೀಠದ ಮೇಲೆ ಮೂರ್ತಿಗೊಂಡಿದ್ದ ಶಿವನ ಕಂಡು,
ನೋಡಿದ ನೋಟವಲ್ಲಿಯೆ ಸಿಕ್ಕಿ, ಭಾವವಚ್ಚೊತ್ತಿ,
ಸರ್ವಕರಣಂಗಳು ನಿವೃತ್ತಿಯಾಗಿ, ಮನ ಉನ್ಮನಿಯಲ್ಲಿ ನಿಂದು,
ಸಮರಸ ಸಮಾಧಿಯಲ್ಲಿ ಇದ್ದನಯ್ಯಾ
ನಿಮ್ಮ ಶರಣ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.[೨]

2. ಎನ್ನ ಆರು ಚಕ್ರಂಗಳಲ್ಲಿ ಪೂರೈಸಿ ತುಂಬಿಕೊಂಡಿರ್ಪ ಪರಮಾತ್ಮನು ನೀನೆ ಅಯ್ಯ.
ಎನ್ನ ನವನಾಳಂಗಳಲ್ಲಿ ಹೊಳೆದು ಸುಳಿವ ಪರವಸ್ತುವು ನೀನೆ ಅಯ್ಯ.

---

೧. ಲಿಂ. ಲೀ. ವಿ. ಚಾ. ಪು. ೨೭೦, ವ. ೭೯ರ ಟೀಕು.

೨. ಸ್ವ. ಸಿ. ವ. ಪು. ೬೯, ವ. ೨೬೪.

ಎನ್ನ ಕರ ಮನ ಭಾವದ ಒಳಹೊರಗೆ ತೊಳಗಿ ಬೆಳಗುವ ಪರಬ್ರಹ್ಮವು ನೀನೆ ಅಯ್ಯ.
ಎನ್ನ ಬ್ರಹ್ಮರಂಧ್ರದ ಸಹಸ್ರದಳದ ಕಮಲಮಧ್ಯದಲ್ಲಿ
ನಿರಂತರ ಬೆಳಗುವ ಪರಂಜ್ಯೋತಿ ನೀನೆ ಅಯ್ಯ ಅಖಂಡೇಶ್ವರಾ.[೧]

3. ಪ್ರಾಣಲಿಂಗಸಂಬಂಧಿಗಳೆಂದು ನುಡಿಯುವವರು ಅನೇಕರುಂಟು.
ಪ್ರಾಣಲಿಂಗದ ಕಳೆಯನಾರು ಅರಿಯರಲ್ಲ.
ಪ್ರಾಣಲಿಂಗದ ಕಳೆ ಎಂತೆಂದಡೆ:
ಆಧಾರದಲ್ಲಿ ಎಳೆಯ ಸೂರ್ಯನಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಸ್ವಾಧಿಷ್ಠಾನದಲ್ಲಿ ಪೂರ್ಣಚಂದ್ರನಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಮಣಿಪೂರಕದಲ್ಲಿ ಮಿಂಚಿನ ಲತೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಅನಾಹತದಲ್ಲಿ ಸ್ಫಟಿಕದ ಸಲಾಕೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲದಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಆಜ್ಞೆಯಲ್ಲಿ ರತ್ನದ ದೀಪ್ತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಬ್ರಹ್ಮರಂಧ್ರದಲ್ಲಿ ಸ್ವಯಂಜ್ಯೋತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಶಿಖೆಯಲ್ಲಿ ಶುದ್ಧ ತಾರೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಪಶ್ಚಿಮದಲ್ಲಿ ಉಳುಕನಕ್ಷತ್ರದಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಇಂತಪ್ಪ ಪ್ರಾಣಲಿಂಗದ ಕಳೆಯನರಿದು, ಪ್ರಾಣನ ಸಂಯೋಗಿಸಿ ಪ್ರಳಯವ ಗೆಲಲರಿಯದೆ
ಮಾತಿನ ನೀತಿಶಾಸ್ತ್ರ ಘಾತಕದ ಕಥೆಗಳ ಕಲಿತು,
ಓತು ಎಲ್ಲರೊಡನೆ ಹೇಳಿ ಚಾತುರ್ಯನೆನಿಸಿಕೊಂಡು ಒಡಲ ಹೊರೆವ ಘಾತಕರ
ಪ್ರಾಣಲಿಂಗಸಂಬಂಧಿಗಳೆಂತೆಂಬೆನಯ್ಯಾ ಅಖಂಡೇಶ್ವರಾ?[೨]

ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಮುಗಿಲ ಮರೆಯ ಮಿಂಚಿನಂತೆ ಒಡಲ ಮರೆಯಲ್ಲಿ ಒಡೆದು ಮೂಡುವ ಲಿಂಗವೇ ಪ್ರಾಣಲಿಂಗ. ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಬ್ರಹ್ಮರಂಧ್ರ ಶಿಖೆ ಪಶ್ಚಿಮ ಎಂಬ ಒಂಬತ್ತು ಚಕ್ರಗಳಲ್ಲಿ ಬಾಲಸೂರ್ಯ ಪೂರ್ಣಚಂದ್ರ ಮುತ್ತಿನ ಗೊಂಚಲು ಶುದ್ಧ ತಾರೆ ಮುಂತಾದ ಅಂತರ್ಜ್ಯೋತಿಯ ವಿಚಿತ್ರ ಪ್ರತ್ಯಯಗಳನ್ನು ಬೀರುವ ಪ್ರಾಣಲಿಂಗ ಮಾನವನ ಕಣ್ಣು ಮಾನವನ ಮನ ಬುದ್ಧಿಯ ಹವಣಲ್ಲ. ನನಗೆ, ನನ್ನಂತಿದ್ದ ನಿಮಗೆ ಈ ಸ್ವಯಂಜ್ಯೋತಿ ಎಂದೂ ಯಾವ ಅವಸ್ಥೆಯಲ್ಲಿಯೂ ತೋರಿಲ್ಲವೆಂದೇ ನಮ್ಮಂಥವರು

---

೧. ಅಖಂ. ವ. ಪು. ೧೯೦, ವ. ೮೦. ೨. ಅದೇ ಪು. ೧೯೧, ವ. ೮೧.

ಅದನ್ನು ನಂಬುವುದು ಕಷ್ಟ. ಇಷ್ಟೇ ಅಲ್ಲ, ಕಾಣದ ವಸ್ತು ಇಲ್ಲವೇ ಇಲ್ಲವೆಂಬುದೇ ನಮ್ಮ ತರ್ಕದ ಕೊನೆಯ ನಿರ್ಣಯ. ನಮ್ಮಂಥ ಮಾನವಪ್ರಾಣಿಗಳು ಕೋಟಿ; ಸಿದ್ಧ ಲಿಂಗೇಶ್ವರ ಷಣ್ಮುಖಸ್ವಾಮಿಗಳಂಥ ಲಿಂಗಪ್ರಾಣಿಗಳು ಕೋಟಿಗೊಬ್ಬರು. ದೇಹವೆಂಬ ದೇಗುಲದಲ್ಲಿ ಪ್ರಜ್ವಲಿಸುವ ಪ್ರಾಣವೆಂಬ ಲಿಂಗ ಬೆಳಗುತ್ತಿದೆ, ಇದೋ ಈ ಸಾಧನ ಮಾರ್ಗ ಹಿಡಿದು ನಡೆದು ನಿಮ್ಮೊಳಗೆ ನೀವು ತಿಳಿದು ಎಚ್ಚತ್ತು ನೋಡಿರಿ, ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ ಎಂಬ ಅಷ್ಟಾಂಗ ಯೋಗಮಾರ್ಗವಿದೆ, ಮಂತ್ರ ಲಯ ಹಠ ರಾಜಯೋಗಗಳಿವೆ; ಅಥವಾ ರಾಜ ಯೋಗಕ್ಕಿಂತ ಮಿಗಿಲಾದ ಸುಗಮವಾದ ಶಿವಯೋಗಮಾರ್ಗವಿದೆ, ಇದೇ ದೃಷ್ಟಯೋಗ ಅಥವಾ ದೃಷ್ಟಿಯೋಗ—ಈ ಮಾರ್ಗ ಹಿಡಿದು ಬ್ರಹ್ಮಕ್ಕೆ ರಂಧ್ರವೆನಿಸುವ, ನೆತ್ತಿಯ ನಯನವಾದ ಬ್ರಹ್ಮರಂಧ್ರದ ಕವಾಟವನ್ನು ತೆಗೆದು ನೋಡಿರಿ. ಒಳಗೆ 'ಜ್ಯೋತಿ ಬೆಳಗು ತಿದೆ ವಿಮಳ ಪರಂಜ್ಯೋತಿ ಬೆಳಗುತಿದೆ.' ಶ್ರೀಗುರು ಕರುಣಿಸಿ ಕೊಟ್ಟ ಇಷ್ಟಲಿಂಗದಲ್ಲಿ ದೃಷ್ಟಿ ನಟ್ಟು, ಆ ದೃಷ್ಟಿಯಲ್ಲಿ ಮನ ನಟ್ಟು ಮನದಲ್ಲಿ ಪವನ ನಟ್ಟು ನಿಂದರೆ, ಹೃದಯದಲ್ಲಿ ಸದೋದಿತವಾಗಿ ಜ್ವಲಿಸುವ ಪ್ರಾಣಲಿಂಗವೆಂಬ ದಿವ್ಯನಿಧಾನ ಸ್ವಯಂಭುವಾಗಿ ನಿಂದು ಆಧಾರ ಮುಂತಾದ ನವಚಕ್ರಗಳಲ್ಲಿ, ಕಣ್ಣು ೨ ಮೂಗು ೨ ಕಿವಿ ೨ ಬಾಯಿ ೧ ಗುದ ಗುಹ್ಯ ವೆಂಬ ದೇಹದ ನವನಾಳ ಅಥವಾ ನವದ್ವಾರದಲ್ಲಿ, ಮತ್ತೆ ಕರಸ್ಥಲದಲ್ಲಿ ಮನಸ್ಥಲದಲ್ಲಿ ಭಾವಸ್ಥಲದಲ್ಲಿ ಮೂರ್ತಿಗೊಂಡು ಬೆಳಗುತ್ತದೆ ಈ ಪ್ರಾಣಲಿಂಗ. ಪ್ರಾಣಲಿಂಗದಲ್ಲಿ ಪ್ರಾಣವನ್ನು ಅಂದರೆ ವಾಯು ಮನವನ್ನು ಯೋಗಿಸಿದರೆ, ಪ್ರಾಣಕ್ಕೆ ಪ್ರಳಯವಿಲ್ಲ. ವಿಶ್ವಬ್ರಹ್ಮಾಂಡಕ್ಕೆ ಪ್ರಾಣಚೈತನ್ಯ, ಪ್ರಾಣಕಾಂತ, ಪ್ರಾಣೇಶ್ವರನಾದ ಪ್ರಾಣಲಿಂಗದಲ್ಲಿ ಮನುಷ್ಯನಾಗಿ ಪ್ರಾಣಿಸುವ ಪ್ರಾಣಕಳೆ ಯೋಗವಾಗಿ ಸಮರಸವಾದರೆ, ಮರಣದ ಭಯ ವೆಲ್ಲಿ? ವಿಶ್ವಚೈತನ್ಯಸಾಗರದಲ್ಲಿ ನನ್ನ ಪ್ರಾಣದ ಹನಿ ಕೂಡಿ ಸಮರಸವಾದರೆ, ಆ ಹನಿಗೆ ಬತ್ತಿ ಹೋಗುವ ಭಯವೇಕೆ?

> **ಅವ್ಯಕ್ತಂ ಕಾರಣಂ ಲಿಂಗಂ ಅಕ್ಷರಂ ಪರಮಂ ಪದಂ**
> **ನಿರ್ಗುಣಂ ಶುದ್ಧವಿಜ್ಞಾನಂ ಹೃದಿ ಪಶ್ಯಂತಿ ಯೋಗಿನಃ**[೧]

ವಿಶ್ವಪ್ರಪಂಚದ ಜನ್ಮ ಸ್ಥಿತಿ ಲಯಕ್ಕೆ ತಾನೆ ಮೂಲಕಾರಣವಾಗಿ, ವಿಶ್ವಚೈತನ್ಯಕ್ಕೆ ತಾನೆ ರಸರಕ್ತವಾಗಿ, ವಿಶ್ವದ ಒಳಹೊರಗೆಲ್ಲ ತುಂಬಿ ತುಳುಕಿ ಹರಿವ ವಿಶ್ವಪ್ರಾಣಲಿಂಗ ಅವ್ಯಕ್ತ. ಎಲ್ಲೆಲ್ಲಿ ಇದ್ದರೂ ಅದು ಎದ್ದು ತೋರುವುದಿಲ್ಲ. ಮತ್ತೆ ಈ ಲಿಂಗಚೈತನ್ಯ ಅಕ್ಷರ. ಅದು ಅವಿನಾಶಿ. ಕಪ್ಪು ಕೆಂಪು ಬೆಳ್ಳಗೆ ಇರುವ ಗುಣತ್ರಯದ ಸೋಂಕು ಪ್ರಾಣಲಿಂಗದ ಪರಂ ಜ್ಯೋತಿಗಿಲ್ಲ. ಈ ಪರಂಜ್ಯೋತಿ ಮನೆಯ ದೀಪದಂತೆ ಜಡದೀಪವಲ್ಲ. ಅದು ಶುದ್ಧ ವಿಜ್ಞಾನಜ್ಯೋತಿ. ವಿಶ್ವಕ್ಕೆಲ್ಲ ಮೂಲಚೈತನ್ಯ ಚಿತ್‌ಪ್ರಕಾಶ ಚಿದ್‌ಬೆಳಗಾದ ಪ್ರಾಣ ಲಿಂಗವನ್ನು ತಮ್ಮ ಹೃದಯಾಂತರಾಳದಲ್ಲಿ ಅಂದರೆ ವಿಶ್ವಬ್ರಹ್ಮಾಂಡದ ಹೃದಯಾಂತ ರಾಳದಲ್ಲಿ ಪಶ್ಯಂತಿ ಯೋಗಿನಃ'

---

೧. ಲಿಂ. ಲೀ. ವಿ. ಚಾ. ಪು. ೨೭೨, ಶ್ಲೋ. ೩.

ತನ್ನ ಪ್ರಾಣವನ್ನು ಅಂತರಂಗದಲ್ಲಿ ಹೊಳೆಹೊಳೆವ ದಿವ್ಯ ಪ್ರಾಣಲಿಂಗದಲ್ಲಿ ಯೋಗಿಸಿ, ವಿಶ್ವಪ್ರಾಣಚೈತನ್ಯಸಾಗರದಲ್ಲಿ ಬೆಳಗುತ್ತ ನಿಂದಿರುವ ಪರಮ ಶಿವಯೋಗಿ ಷಣ್ಮುಖಸ್ವಾಮಿಗಳ ಪ್ರಜ್ವಲಿಸುವ ಅಂತರಂಗದ ಹರವನ್ನು ಇದೋ ಇಲ್ಲಿ ನೋಡಿ ಈ ವಚನದಲ್ಲಿ:

ಪರಾತ್ಪರ ವಸ್ತುವನೊಡಗೂಡಿದ ಪ್ರಾಣಲಿಂಗಿಯ
ಒಡಲ ಬೆಳಗಿನ ಗಡಣವೆಂತಿಪ್ಪುದೆಂದಡೆ:
ಸ್ಫಟಿಕದ ಘಟದೊಳಗೆ ಜ್ಯೋತಿಯನಿರಿಸಿದಂತೆ
ಕತ್ತಲೆಯ ಮನೆಯಲ್ಲಿ ರತ್ನವ ಹರಹಿದಂತೆ
ರನ್ನದ ಗಿರಿಗೆ ರವಿಕೋಟಿ ಕಿರಣಂಗಳು ಮುಸುಕಿದಂತೆ
ಬೆಳಗು ಹಳಚಿದ ಮಹಾಬೆಳಗಿನೊಬ್ಬುಳಿಯನೊಳಕೊಂಡು ಘನಗಂಭೀರವಾದ
ಪ್ರಾಣಲಿಂಗಿಗಳ ಪಾದಕಮಲದಲ್ಲಿ ಸದಮಲ ತುಂಬಿಯಾಗಿರಿಸಯ್ಯ ಅಖಂಡೇಶ್ವರಾ.[೧]

ಮಾನವಪ್ರಾಣಿಯು ಗಂಭೀರ ಎಂಥ ಪರಮಾದ್ಭುತ ಪ್ರಕಾಶ! ಭೌತವಿಜ್ಞಾನಿ ಪ್ರಾಣ ವಿಜ್ಞಾನಿ ಮನೋವಿಜ್ಞಾನಿ ಮುಂತಾದ ಇಂದಿನ ವಿಜ್ಞಾನಿಗಳು ಅಣು ಮೊದಲು ಆಕಾಶ ಕಡೆಯಾದ ನಿಸರ್ಗದ ಗರ್ಭದಲ್ಲಿ ಮಲಗಿರುವ ಅನೇಕಾನೇಕ ಅದ್ಭುತಗಳನ್ನು ಹೊರಗೆ ತೆಗೆದು ಲೋಕದ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಆದರೆ ವಿಜ್ಞಾನಿಗೆ ತನ್ನ ಅಂತರಂಗ ದಲ್ಲಿಯ 'ಹೃದಾಕಾಶೇ ಚಿದಾದಿತ್ಯೋ ಸದಾ ಭಾಸತಿ ಭಾಸತಿ'–ಎಂಬ ಪರಮಾದ್ಭುತವಾದ ಜ್ಯೋತಿರ್ಲಿಂಗ ಅವಿಜ್ಞಾತವಾಗಿಯೆ ಉಳಿದಿದೆ. ಮರದೊಳಗಿರುವ ಮಂದಾಗ್ನಿಯಂತೆ ಈ 'ಪ್ರಾಣೇಷ್ವಂತರ್ಮನಸೋ ಲಿಂಗ'ವು ಮಾನವನನ್ನು ಸುಡದೆ, ಸುಟ್ಟು ದಿವ್ಯಾಗ್ನಿಯಾಗಿ ಪ್ರಜ್ವಲಿಸದೆ 'ತದ್ಗತ, ತಲ್ಲೀಯ, ತದಾಕಾರ'ವಾಗಿ ನಿಂತಿದೆ; ಇದೇ 'ನಿಮ್ಮ ಬೆಡಗು ಬಿನ್ನಾಣ'

ರಕ್ತ ಮಾಂಸ ಪ್ರಾಣ ಮನದ ಮುದ್ದೆಯ ಮರೆಯಲ್ಲಿ ಉರಿವ ಬೆಳಗನ್ನು ಹೊರ ಗೊಳಗೆ ಪ್ರತ್ಯಕ್ಷವಾಗಿ ಕಂಡ ಪ್ರಭುದೇವರು:

ನಿಮ್ಮ ತೇಜವ ನೋಡಲೆಂದು ಹಲವು ಸಾರಿ ನೋಡುತ್ತಿರಲು,
ಶತಕೋಟಿ ಸೂರ್ಯರು ಮೂಡಿದಂತಿರ್ದುದಯ್ಯಾ!
ಮಿಂಚಿನ ಬಳ್ಳಿಯ ಸಂಚವ ಕಂಡೆ. ಎನಗಿದು ಸೋಜಿಗವಾಯಿತ್ತು.
ಗುಹೇಶ್ವರಾ, ನೀನು ಜ್ಯೋತಿರ್ಲಿಂಗವಾದರೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ.[೨]

ಎಂದು ಹೇಳುವ ಜ್ಯೋತಿರ್ಲಿಂಗದ ಮಾತನ್ನು ಕೇಳಿ, ನಮನಿಮಗೆ ತಿಳಿವ ಮಟ್ಟಿನಲ್ಲಿ ತಿಳಿದು ನೋಡಿದರೆ, 'ಮನುಷ್ಯಪ್ರಾಣಿ ದಿವ್ಯಪ್ರಾಣಿ'–ಎಂಬ ಸಂಗತಿ, ಬೆಳಗಿನ ಕಡೆ ಅಂದರೆ ದಿವ್ಯದ ಕಡೆ ಕೈಸನ್ನೆ ಮಾಡಿ ಕರೆಯಬಹುದು. ದಿವ್ಯಪ್ರಾಣದ ಆಸಕ್ತಿ ನಿಮ್ಮಲ್ಲಿ ಇನ್ನೂ ಹೆಚ್ಚುತ್ತಿದ್ದರೆ ಪ್ರಭುದೇವರ ಮತ್ತೊಂದು ಪರಮಾಪ್ತ ವಚನವನ್ನು ಕಿವಿದೆರೆದು ಕೇಳಿ, ಕಣ್ದೆರೆದು ನೋಡಿ:

---

೧. ಅಖಂ. ವ. ಪು. ೧೬೧, ವ. ೧೫. ೨. ಶೂ. ಸಂ. ಪು. ೪೨, ವ. ೨೩.

ಕಂಗಳ ಬೆಳಗ ಕಲ್ಪಿಸಬಾರದು ! ಕರ್ಣದ ನಾದವ ವರ್ಣಿಸಬಾರದು !
ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂದಿತ್ತು.
ಮತಿಗೆ ಮಹಾಘನವಪ್ಪ ಸುಷುಮ್ನನಾಳದ ಸುಯಿದಾನವ ಪ್ರಮಾಣಿಸಬಾರದು.
ಅಣುರೇಣುತೃಣಕಾಷ್ಠದೊಳಗೆ ಸೂಕ್ಷ್ಮನಕ್ಷಯ ನಿಂದ ನಿರಾಳ ಗೊಹೇಶ್ವರ ![೧]

ಸಿದ್ಧವೀರಣ್ಣೊಡೆಯರು ಷಟ್ಸ್ಥಲದ ಲಕ್ಷಣವನ್ನು–'ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವವಿವೇಕದಿಂ ಪ್ರಾಣಲಿಂಗಿಯಾಗಿ, ಲಿಂಗಪ್ರಾಣಿಯಾಗಿರ್ದ ವರ್ತನವೆಂತಿರ್ದುದೆಂದೊಡೆ ಮುಂದೆ ಪ್ರಾಣಲಿಂಗಿಸ್ಥಲವಾದುದು'–ಎಂದು ಹೇಳುತ್ತ, ಮೇಲೆ ಕೊಟ್ಟಿರುವ ವಚನವನ್ನು ಪ್ರಾಣಲಿಂಗಿಯ ಪ್ರಾಣ, ಸ್ವಾನುಭಾವವಿವೇಕದಿಂದ ಅಂತರಂಗದ ಜ್ಯೋತಿರ್ಮಯಲಿಂಗದಲ್ಲಿ ಪ್ರವೇಶವಾಗಿ, ತನ್ನ ಪೂರ್ವಗುಣವಳಿದು, ಆ ಲಿಂಗದ ಗುಣಧರ್ಮದಿಂದಲೆ 'ದೀಕ್ಷಿತ'ವಾಗಿ, ದಿವ್ಯ ಸಂಸ್ಕಾರ ಹೊಂದಿ, ಲಿಂಗದಿಂದಲೆ ಪ್ರಾಣಿಸುವುದರಿಂದ ಲಿಂಗಪ್ರಾಣವಾದುದಕ್ಕೆ, ಇಂಥ ಪ್ರಾಣವುಳ್ಳ ಪ್ರಾಣಿ ಲಿಂಗಪ್ರಾಣಿಯಾದುದಕ್ಕೆ ಉದಾಹರಿಸಿದ್ದಾರೆ. ಲಿಂಗವೆ ಪ್ರಾಣವಾಗಿ, ಪ್ರಾಣಕಳೆಯೆ ಲಿಂಗದಲ್ಲಿ ವೇಧಿಸಿದ ಪ್ರಾಣಲಿಂಗಿಯ ಕಂಗಳ ಬೆಳಗು, ಕರ್ಣದ ನಾದ, ಜಿಹ್ವೆಯ ರುಚಿ, ಸುಷುಮ್ನಾನಾಡಿಯ ಸುಯಿದಾನ, ಅಣುರೇಣು ತೃಣಕಾಷ್ಠದ ಒಳಹೊರಗೆ ಅತ್ಯಂತ ಸೂಕ್ಷ್ಮವಾಗಿ ಅಕ್ಷಯವಾಗಿ ಭರಿತವಾಗಿ ನಿಂದ ನಿರಾಳ ಗೊಹೇಶ್ವರ ! ಒಳಹೊರಗೆ ಅನಿಮಿಷವಾಗಿ ನೋಡುವ ಅರಿವಿನ ಸುಜ್ಞಾನದೃಷ್ಟಿಗೆ ಪ್ರತಿಗೋಚರವಾಗುವ ಪ್ರಾಣಲಿಂಗ, ಜ್ಯೋತಿರ್ಲಿಂಗದ ದಿವ್ಯಜ್ಯೋತಿಯೇ ಕಲ್ಪಿಸಲಿಕ್ಕೆ ಬಾರದ ಕಂಗಳ ಬೆಳಗು. ಶಬ್ದದ ಗಡಣಕ್ಕೆ ಮೂಲಮಾತೃಕೆಯಾಗಿ, ಕಿವಿಗೆ ಕೇಳಬರುವ ಬಾಹ್ಯಶಬ್ದ ಪ್ರಪಂಚದ ಸುಳಿವಿಲ್ಲದೆ ಸ್ವಯಂಭುವಾಗಿ, ಅನಾಹತ (ನ-ಆಹತ)ವಾಗಿ, ಒಳಹೊರಗೆನ್ನದೆ ಕೇಳಬರುವ ನಾದವೆ ಕರ್ಣದ ನಾದ. ಅದೇ ಪ್ರಣವನಾದ, ನಾದಬ್ರಹ್ಮ, ಪ್ರಣವಾಕಾರದ ಪರಂಜ್ಯೋತಿ. ಶಿವಯೋಗಿಯಾದ ಪ್ರಾಣಲಿಂಗಿಯ ಅನುಭವಕ್ಕೆ ಬರುವ ಆನಂದಾಮೃತದ......ಪರಮ ರುಚಿಯೇ ಜಿಹ್ವೆಯ ರುಚಿ.[೨] '......ಆ ಶರಣನ ಅನುಭಾವವ

---

೧. ಶೂ. ಸಂ. ಪು. ೧೯, ವ. ೬೭.

೨. ಇಲ್ಲಿ ನೋಡಿ:

1. ....(ಹೃದಯ) ಕಮಲ ಕರ್ಣಿಕಾಮಧ್ಯದೊಳಿರ್ಪ ಯೋಗಾಮೃತಫಲರಸವನು ಕುಂಡಲಿಸ್ಥಾನದೊಳಿರ್ಪ ಸುಪ್ತಭುಜಂಗನು ಲಿಂಗಪ್ರಾಣಾನಿಲಮಿಶ್ರದಿಂ ಮಹಾನುಭಾವ ಬೋಧೆಯಿಂದೆಯ್ದಿ ಆ ಫಲರುಚಿಯ ರುಚಿಸಲು ....

   ಪ್ರ. ವ. ಪು. ೧೨೧, ವ. ೭೦ರ ಟೀಕು.

2. ನೆತ್ತಿಯಲಿ ಅಮೃತವ । ಹೊತ್ತಿಹುದು ಜಗವೆಲ್ಲ ।
   ಎತ್ತನೇರೆತ್ತನರಸುವ ಶಿವಯೋಗಿ । ಗೆತ್ತಣದು ಮುಕ್ತಿ ಸರ್ವಜ್ಞ ॥

   ಸ. ವ. ಪು. ೯೫, ಯೋ. ಪ್ರ. ವ. ೫೯೦.

ನೆಡೆಗೊಂಡ ಮಹಾಘನಪ್ರಕಾಶ ಜ್ಯೋತಿಯ ಪಶ್ಚಿಮಯೋಗವ ಪ್ರಮಾಣಕ್ಕೆ ತರಬಾರ ದೆಂಬುದೀಗ ಮತಿಗೆ ಮಹಾಘನವಪ್ಪ ಸುಷುಮ್ನನಾಳದಲ್ಲಿಯ ಸುಯಿದಾನವ ಪ್ರಮಾಣ ವಿಡಬಾರದೆಂಬ ಶಬ್ದಕ್ಕರ್ಥ......'[೧] 'ಆ ಶರಣನು ಸಚರಾಚರದೊಳಗೆ ಪರಿಪೂರ್ಣ ನಾಗಿರ್ದನೆಂಬುದೀಗ ಅಣು ರೇಣು ತೃಣ ಕಾಷ್ಠದೊಳಗೆ ಭರಿತ ಮನೋಹರ ನಿಂದ ನಿರಾಳವೆಂಬ ಶಬ್ದಕ್ಕರ್ಥ.'[೨]

ಪ್ರಾಣಲಿಂಗಿಯ ಸ್ಥಲದಲ್ಲಿ ಪ್ರಸಾದಿಸ್ಥಲದ ಅವಧಾನಭಕ್ತಿಯೇ ಪಕ್ವವಾಗಿ ಅನು ಭಾವ ಭಕ್ತಿಯಾಗಿ ನಿಲ್ಲುತ್ತದೆ. ಲಿಂಗಕ್ಕೆ ಪ್ರಾಣವನ್ನು ಪ್ರಾಣಕ್ಕೆ ಲಿಂಗವನ್ನು ಯೋಗಿ ಸುವ ಈ ಭಕ್ತಿ, ಶಿವಯೋಗಸಂಪತ್ತು ತುಂಬಿ ತುಳುಕುವ ಅಂತರಂಗದ ದಿವ್ಯಸಾಮ್ರಾಜ್ಯ ವನ್ನು ಹೆತ್ತ ಮಹಾತಾಯಿ. ಇಲ್ಲಿ ನಡೆವ ಪ್ರಾಣಲಿಂಗದ ಪೂಜೆ ಗಂಭೀರವಾಗುತ್ತ ನಡೆಯುತ್ತದೆ. ಇಲ್ಲಿಯ ಪೂಜಾಸಾಮಗ್ರಿ, ಅಷ್ಟವಿಧಾರ್ಚನೆ, ಷೋಡಶೋಪಚಾರಗಳು ಕರಸ್ಥಲದ ಇಷ್ಟಲಿಂಗಕ್ಕೆ ನೀಡುವ ಪೂಜೆ ಉಪಚಾರವಲ್ಲ. ಕೆರೆ ತೊರೆ ಮಡು ಬಾವಿಯ ನೀರಿಂದ ಅಂತರ್ಲಿಂಗಕ್ಕೆ ಮಜ್ಜನವಾಗಬಹುದೇ? ಚಂದನದ ಗಂಧ ಜ್ಯೋತಿರ್ಲಿಂಗದ ಮೈಗೆ ಹೇಗೆ ಲೇಪವಾದೀತು? ಮರಬಳ್ಳಿಯ ಪತ್ರಿ ಪುಷ್ಪಗಳನ್ನು ಉರಿಯ ಬೊಂಬೆಗೆ ಹೇಗೆ ಧರಿಸಬಹುದು? ಅಕ್ಕಿ ಗೋದಿಯ ದೇವಾನ್ನ ದಿವ್ಯಾನ್ನವನ್ನು ವಿಶ್ವಕ್ಕೆ ಪ್ರಾಣಲಿಂಗ ವಾಗಿ ಪ್ರಜ್ವಲಿಸುವ ವಿಶ್ವಾಂತಶ್ಚೈತನ್ಯಮೂರ್ತಿಗೆ ಎಡೆಮಾಡಿ ಉಣಿಸುವುದೆಂತು? 'ತೊಟ್ಟಿಲ ಕೂಸಿಗೆ ಜೋಗುಳವಲ್ಲದೆ ಹೊಟ್ಟೆಯ ಕೂಸಿಗೆ ಜೋಗುಳವುಂಟೇ?

ಇಲ್ಲಿ ನೋಡಿ ಸರ್ಪಭೂಷಣ ಶಿವಯೋಗಿಗಳ ಪ್ರಾಣಲಿಂಗದ ಪೂಜೆಯನ್ನು:

> ಲಿಂಗಪೂಜೆಯ ಮಾಡಿರೋ ನಿಮ್ಮೊಳೆ ಪ್ರಾಣ-
> ಲಿಂಗಪೂಜೆಯ ಮಾಡಿರೋ
> ಗಂಗೆ ಯಮುನೆಯರ ಸಂಗಮದೊಳು ಮಿಂದು
> ಶೃಂಗಾಟದುಪರಿಯ ರಂಗಮಂಟಪದೊಳು ಪಲ್ಲವಿ

---

೧. ಪ್ರ. ವ. ಪು. ೧೩೭, ವ. ೧೦೦ರ ಟೀಕು.

೨. ಅದೇ ಪು. ೧೩೮, „ „

ಇಲ್ಲಿ ಪ್ರಭುದೇವರ ಮತ್ತೊಂದು ವಚನವನ್ನು ನೋಡಿ:

> ಗಗನಮಂಡಲದ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಅನುತಿರ್ದಿತ್ತು ಒಂದು ಬಿಂದು.
> ಅಮೃತದ ವಾರಿಯ ದಣಿಯುಂಡು ತೃಪ್ತಿಯಿಂದ ಸುಖಿಯಾದೆ.
> ಗುಹೇಶ್ವರಾ. ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು.

ಈ ವಚನದ ಟೀಕನ್ನು ಹೀಗೆ ಸಂಗ್ರಹವಾಗಿ ಹೇಳಬಹುದು: ಗಗನಮಂಡಲವೆಂದರೆ ಬ್ರಹ್ಮ ರಂಧ್ರ. ಆ ಬ್ರಹ್ಮರಂಧ್ರಕ್ಕೆ ಸುಷುಮ್ನನಾಳ ಶಿವಯೋಗಮಾರ್ಗವಾಗಿರ್ಪ ಕಾರಣ ಶಿವೋಹಂ ಶಿವೋಹಂ ಎನುತ್ತ ಅಲ್ಲಿ ಶಿವಯೋಗಾಮೃತ ಬಂದು ನೆಲೆಯಾಗಿರ್ಪುದು. ಆ ಪರಮಾಮೃತವ ದಣಿಯುಂಡು ಶಿವಯೋಗಿ ಪರಶಿವತತ್ವದಲ್ಲಿ ವಿಶ್ರಾಂತಿಯನ್ನೈದಿದನು. . . .

ಪ್ರ. ವ. ಪು. ೧೨೪, ವ. ೭೪ ಮತ್ತು ಟೀಕು.

ವರಭಕ್ತಿ ಜಲವ ನೀಡಿ ಮಜ್ಜನಗೆಯ್ದು
ವಿರತಿಗಂಧವನೆ ತೀಡಿ
ಕರಣೇಂದ್ರಿಯಗಳೆಂಬ ಮಿರುಗುವಕ್ಷತೆಯನಿ-
ಟ್ಟರಿವೆಂಬ ನಿರ್ಮಲ ಸರಸಪುಷ್ಪವ ಸೂಡಿ ೧

ಹರುಷವೆಂಬುವ ಧೂಪವ ಸಮರ್ಪಿಸಿ
ಪರಬಿಂದು ರುಚಿದೀಪವ-
ನಿರದೆತ್ತಿ ಪರಿಪೂರ್ಣ ನೈವೇದ್ಯವನು ಮಾಡಿ
ಮೆರೆವ ತ್ರಿಗುಣವೆಂಬ ವರತಾಂಬೂಲವ ಕೊಟ್ಟು ೨

ಕರದಿಷ್ಟಲಿಂಗವಿದೇ ಶರೀರದಲ್ಲಿ
ಪರವಸ್ತು ತಾನಾಗಿದೆ
ಹೊರಗೊಳಗೆರಡೆನ್ನದರಿದರಿವನೆ ಮೀರಿ
ಗುರುಸಿದ್ಧನಂಘ್ರಿಯೊಳ್ ಬೆರೆದೇಕಮಯವಾಗಿ ೩[೧]

ಸುಷುಮ್ನೆಯ ಎಡಬಲಕ್ಕಿರುವ ಯಮುನೆ ಗಂಗೆಯರು – ಈಡೆ ಪಿಂಗಳೆ ನಾಡಿಗಳು ಕೂಡಿದ ಸಂಗಮಸ್ಥಾನದಲ್ಲಿ ಸ್ನಾನಮಾಡಬೇಕು.—ಇಲ್ಲಿ ಮೀವ ಶಕ್ತಿ ನನಗಿಲ್ಲ. ನೀವೂ ಇಲ್ಲಿ ಜಳಕ ಮಾಡಿರಲಿಕ್ಕಿಲ್ಲ.—ಈಡೆ ಪಿಂಗಳೆ ಸುಷುಮ್ನೆ ನಾಡಿಗಳು ಕೂಡಿದ ತ್ರಿಕೂಟ, ಶೃಂಗಾಟಕದ ಮೇಲೆ ಹೊಳೆವ ರಂಗಮಂಟಪದಲ್ಲಿ ಕೋಟಿ ಪ್ರಕಾಶದಿಂದ ಬೆಳಗುವ ಪ್ರಾಣಲಿಂಗದ ಮಜ್ಜನಕ್ಕೆ ಭಕ್ತಿಜಲ ಬೇಕು; ವಿರಕ್ತಿಯ ಗಂಧವ ತೀಡಬೇಕು; ಕರಣ ಇಂದ್ರಿಯವೆಂಬ ಅಕ್ಷತೆಗಳನ್ನು ಧರಿಸಿ ಅರಿವೆಂಬ ಪುಷ್ಪವನ್ನು ಅಲಂಕರಿಸಿ, ಹರ್ಷವೆಂಬ ಧೂಪವ ಬೀಸಿ, 'ಶಾಂಭವಿಯ ಕೋಣೆಯಲ್ಲಿ ಲಕ್ಷವಿಟ್ಟಾಕ್ಷಣದಿ' ಕಾಣುವ ಪರಬಿಂದು ವಿನ ಕಾಂತಿಯನ್ನು ಆರತಿ ಮಾಡಿ, ಪರಿಪೂರ್ಣಭಾವವನ್ನೆ ನೈವೇದ್ಯ ಮಾಡಿ, ತ್ರಿಗುಣ ವೆಂಬ ತಾಂಬೂಲವನ್ನೆ ಕೊಟ್ಟು, ಪೂಜೆಯನ್ನು ಸಾಂಗವಾಗಿ ಮಂಗಲ ಮಾಡಬೇಕು. ಕರಸ್ಥಲದ ಇಷ್ಟಲಿಂಗಕ್ಕೆ ಬಹಿರಂಗವನ್ನೆ ಪೂಜೆ ಮಾಡಿ ಅರ್ಪಣ ಮಾಡಿ ಪ್ರಸಾದವನ್ನು ಹಡೆದು, ಸಾಕಾರಲಿಂಗವನ್ನು ಅನುಭವಿಸಿ ಆನಂದಿಸುವಂತೆ, ಅಂತಃಸ್ಥಲದ ಪ್ರಾಣಲಿಂಗಕ್ಕೆ ಅಂತರಂಗವನ್ನೆ ಪೂಜೆ ಮಾಡಿ ಅರ್ಪಿಸಿ ಸಾಕಾರ–ನಿರಾಕಾರದ ಐಕ್ಯಾನುಭವವನ್ನು ಆನಂದಿಸಬೇಕು.

ಅಂತರ್ಲಿಂಗಪೂಜೆಯ ಮಹಾಘನಸೌಂದರ್ಯವನ್ನು ಇನ್ನೂ ನೋಡಬೇಕೆಂಬ ತವಕ ನಿಮಗಿದ್ದರೆ, ಇದೋ ಇಲ್ಲಿ ಬನ್ನಿ ಷಣ್ಮುಖಸ್ವಾಮಿಗಳ ಮಂಗಲ ಸನ್ನಿಧಿಯಲ್ಲಿ.

---

೧. ಕೈ. ಕ. ಪು. ೧೧೧-೧೧೨, ಯೋ. ಪ್ರ. ಸ್ಥ. ಪದ ೨೪.

ಅದೋ ಒಳಗೆ ನೋಡಿ ಹೇಗೆ ಹಬ್ಬುತ್ತಿದೆ ಪ್ರಾಣನಾಥನ ದಿವ್ಯಪ್ರೇಮದ ಮಹಾಶಿವ ಪೂಜೆ:

ಕೇಳು ಕೇಳಯ್ಯ ಪ್ರಾಣನಾಥನೆ. ಎನ್ನ ಪ್ರಾಣಪೂಜೆಯ ಬಗೆಯ
ಬಣ್ಣಿಸುತಿರ್ಪೆನು:
ಎನ್ನ ಕಾಯವೆ ಕೈಲಾಸವಯ್ಯ ನಿಮಗೆ.
ಎನ್ನ ಮನವೆ ಶೃಂಗಾರಮಂಟಪವಯ್ಯ ನಿಮಗೆ.
ಎನ್ನ ಭಾವವೆ ಶೂನ್ಯಸಿಂಹಾಸನವಯ್ಯ ನಿಮಗೆ.
ಎನ್ನ ಪರಮಾನಂದವೆ ಮಜ್ಜನವಯ್ಯ ನಿಮಗೆ.
ಎನ್ನ ಪರಮಶಾಂತಿಯೆ ಗಂಧವಯ್ಯ ನಿಮಗೆ.
ಎನ್ನ ನಿರಹಂಕಾರವೆ ಅಕ್ಷತೆಯಯ್ಯ ನಿಮಗೆ.
ಎನ್ನ ಅವಿರಳವೆ ಪುಷ್ಪದ ಮಾಲೆಯಯ್ಯ ನಿಮಗೆ.
ಎನ್ನ ಸ್ವಾನುಭಾವವೆ ಧೂಪವಯ್ಯ ನಿಮಗೆ.
ಎನ್ನ ದಿವ್ಯಜ್ಞಾನವೆ ದೀಪದ ಗಡಣವಯ್ಯ ನಿಮಗೆ.
ಎನ್ನ ಸುಚರಿತ್ರವೆ ಸರ್ವವಸ್ತ್ರವಯ್ಯ ನಿಮಗೆ.
ಎನ್ನ ಸುವಿವೇಕವೆ ಸಕಲಾಭರಣವಯ್ಯ ನಿಮಗೆ.
ಎನ್ನ ಆತ್ಮವೆ ಪರಮಾಮೃತದ ನೈವೇದ್ಯವಯ್ಯ ನಿಮಗೆ.
ಎನ್ನ ಪರಿಣಾಮವೆ ಹಸ್ತೋದಕವಯ್ಯ ನಿಮಗೆ.
ಎನ್ನ ಸದ್ಭಕ್ತಿ ರಾಗರಸವೆ ತಾಂಬೂಲವಯ್ಯ ನಿಮಗೆ.
ಎನ್ನ ನಿರ್ಮಲವೆ ದರ್ಪಣವಯ್ಯ ನಿಮಗೆ.
ಎನ್ನ ಸತ್ಯವೆ ಘಂಟೆಯಯ್ಯ ನಿಮಗೆ.
ಎನ್ನ ಸದಾನಂದವೆ ಶಂಖವಾದ್ಯವಯ್ಯ ನಿಮಗೆ.
ಎನ್ನ ಸಮತೆಯೆ ಚಾಮರವಯ್ಯ ನಿಮಗೆ.
ಎನ್ನ ಕ್ಷಮೆಯೆ ಆಲವಟ್ಟವಯ್ಯ ನಿಮಗೆ.
ಎನ್ನ ಸುಮನವೆ ವಾಹನವಯ್ಯ ನಿಮಗೆ.
ಎನ್ನ ಸುಬುದ್ಧಿಯೆ ಜಗಜಂಪ (?) ವಯ್ಯ ನಿಮಗೆ.
ಎನ್ನ ಸುಚಿತ್ತವೆ ನಂದಿಧ್ವಜವಯ್ಯ ನಿಮಗೆ.
ಎನ್ನ ಸುಜ್ಞಾನವೆ ಶೃಂಗಾರದ ಪಲ್ಲಕ್ಕಿಯಯ್ಯ ನಿಮಗೆ.
ಎನ್ನ ನುಡಿಗಡಣವೆ ಮಂಗಳಸ್ತೋತ್ರವಯ್ಯ ನಿಮಗೆ.
ಎನ್ನ ಸುಳುಹಿನ ಸಂಚಾರವೆ ಪ್ರದಕ್ಷಿಣೆಯಯ್ಯ ನಿಮಗೆ.
ಎನ್ನ ಮಂತ್ರೋಚ್ಚರಣವೆ ನಮಸ್ಕಾರವಯ್ಯ ನಿಮಗೆ.
ಎನ್ನ ಸಕಲಕರಣಂಗಳಿಂದೆ ಮಾಡುವ ಸೇವೆಯೆ ನಾನಾ ತೆರದ ಉಪಚಾರವಯ್ಯ
ನಿಮಗೆ.

ಇಂತೀ ಪ್ರಾಣಪೂಜೆಯ ನಿರಂತರ ತೆರಹಿಲ್ಲದೆ ನಿಮಗಳವಡಿಸಿ
ನಾ ನಿಮ್ಮೊಳಡಗಿರ್ದೆನಯ್ಯ ಅಖಂಡೇಶ್ವರಾ.[೧]

ಏನು ಪೂಜೆ! ಎಂಥ ಉಪಚಾರ! ಎಷ್ಟು ಸೊಗಸು! ಯಾವ ವೈಭವ! ಪ್ರಾಣನಾಥನಿಗೆ ಮಾನವಭಕ್ತನ ಕಾಯವೇ ಕೈಲಾಸಮಂದಿರ, ಮನವೇ ಮಂಟಪ, ಭಾವವೇ ಸಿಂಹಾಸನ. ಈ ಬಯಲ ಗದ್ದುಗೆಯ ಮೇಲೆ ಮಂಡಿಸಿ ಅಣು ರೇಣು ತೃಣ ಕಾಷ್ಠದೊಳಗೆ ಭರಿತವಾಗಿ ಬೆಳಗುವ ವಿಶ್ವಪ್ರಾಣನಾಥನ ಪೂಜೋಪಚಾರಕ್ಕೆ ಎಂಥ ಸಾಮಗ್ರಿ ಬೇಕು! ಎಂಥ ನೀರು ಎಂಥ ಪತ್ರಿ ಪುಷ್ಪ ಗಂಧ ಧೂಪ ದೀಪ ನೈವೇದ್ಯ ತಾಂಬೂಲ! ಇಲ್ಲಿ ಮಜ್ಜನಕ್ಕೆ ಬೇಕು ಪರಮಾನಂದಜಲ. ಭೂತಬ್ರಹ್ಮಾಂಡದ ಸೃಷ್ಟಿಯ ಕೆರೆ ಬಾವಿ ಹೊಳೆ ಹಳ್ಳ ಸಮುದ್ರಗಳನ್ನೆಲ್ಲ ತಿರುವಿ ಹಾಕಿದರೂ ಈ ಜಲ ದೊರೆಯಬಹುದೇ? ಪರಮಶಾಂತಿಯ ಗಂಧ! ಈ ಗಂಧವನ್ನು ಕೊಡುವ ಗಿಡವಾವುದು? ಮರವೆಲ್ಲಿದೆ? ನಿರಹಂಕಾರದ ಅಕ್ಷತೆಗಳು ಯಾವ ದೇಶದಲ್ಲಿ ಬೆಳೆಯುತ್ತವೆ? ಅವಿರಳ ಯಾವ ಮರ ಗಿಡ ಬಳ್ಳಿಯಲ್ಲಿ ಹೂವಾಗುತ್ತದೆ? ಅವಿರಳವನ್ನು ಮಾಲೆಗೊಳಿಸುವ ಕುಶಲನಾರು? ಸ್ವಾನುಭಾವ ಸುಜ್ಞಾನ ಸುಚರಿತ್ರ ಆತ್ಮ ಪರಿಣಾಮ ಸದ್ಭಕ್ತಿ ನಿರ್ಮಲ ಸತ್ಯ ಸದಾನಂದ ಸಮತೆ ಕ್ಷಮೆ ಸುಚಿತ್ತ ಸುಬುದ್ಧಿ—ಮುಂತಾದ ಪೂಜಾದ್ರವ್ಯಗಳು ಯಾವ ಪಟ್ಟಣ, ಯಾವ ಪೇಟೆಯಲ್ಲಿ ದೊರೆಯಬಹುದು? ಹೊರಗೆ ದೊರೆವ ಒಡವೆಯ ಗಡಣ ಇವಲ್ಲ. ವೇದ ಉಪನಿಷತ್ತು ಶಾಸ್ತ್ರ ಪುರಾಣ ವಚನ ಅಭಂಗಗಳೂ ಇವನ್ನು ಮಾರಲಿಕ್ಕೆ ಇಟ್ಟಿಲ್ಲ. ನನ್ನ ನಿಮ್ಮ ಬುದ್ಧಿಯ ವಾಗ್ಜಾಲವೂ ಈ ಪೂಜಾಸಾಮಗ್ರಿಯನ್ನು ಹಡೆವಂತಿಲ್ಲ. ಆದರೆ ಪ್ರಾಣನಾಥನನ್ನು ಹಡೆದ ಭಕ್ತನೇ ಇವನ್ನೆಲ್ಲ ತನ್ನ ಬಹಿರಂತರಂಗದಲ್ಲಿ ಬಿತ್ತಿ ಬೆಳೆದು, ಹೃದಯೇಶ್ವರನ ಪೂಜೆಗೆ ಎಡೆಮಾಡುತ್ತಿದ್ದಾನೆ. ಪ್ರಕೃತಿಶಕ್ತಿಯ ಸೃಷ್ಟಿ ಹೊಳೆ ಸಮುದ್ರ ಮಾವು ಮಲ್ಲಿಗೆಯಾದರೆ, ಶಿವಭಕ್ತಿಯ ಸೃಷ್ಟಿ ಪರಮಾನಂದ ಶಾಂತಿ ಸತ್ಯ

---

೧. ಅಖಂ. ವ. ಪು. ೨೦೧–೨೦೨, ವ. ೮೭.

ಇಲ್ಲಿ ಮತ್ತೆ ನೋಡಿರಿ:

ಎನ್ನ ಹೃದಯಕಮಲದಲ್ಲಿ ಮೂರ್ತಿಗೊಂಡಿಪ್ಪ ಎನ್ನ ಪ್ರಾಣೇಶ್ವರಂಗೆ
ಎನ್ನ ಕ್ಷಮೆಯೇ ಅಭಿಷೇಕ. ಎನ್ನ ಪರಮವೈರಾಗ್ಯವೇ ಪುಷ್ಪದ ಮಾಲೆ.
ಎನ್ನ ಸಮಾಧಿಸಂಪತ್ತೇ ಗಂಧ. ಎನ್ನ ನಿರಹಂಕಾರವೇ ಅಕ್ಷತೆ.
ಎನ್ನ ಸದ್ವಿವೇಕವೇ ವಸ್ತ್ರ. ಎನ್ನ ಸತ್ಯವೇ ದಿವ್ಯಾಭರಣ.
ಎನ್ನ ವಿಶ್ವಾಸವೇ ಧೂಪ. ಎನ್ನ ದಿವ್ಯಜ್ಞಾನವೇ ದೀಪ.
ಎನ್ನ ನಿಭ್ರಾಂತಿಯೇ ನೈವೇದ್ಯ. ಎನ್ನ ನಿರ್ವಿಷಯವೇ ತಾಂಬೂಲ.
ಎನ್ನ ಮೌನವೇ ಘಂಟೆ. ಎನ್ನ ನಿರ್ವಿಕಲ್ಪವೇ ಪ್ರದಕ್ಷಿಣೆ.
ಎನ್ನ ಶುದ್ಧಿಯೇ ನಮಸ್ಕಾರ. ಎನ್ನ ಅಂತಃಕರಣದಿಂದ ಮಾಡುವ ಸೇವೆಯೇ
ಉಪಚಾರಂಗಳು.

ಈ ಪರಿಯಲ್ಲಿ ಎಮ್ಮ ಗೊಹೇಶ್ವರಲಿಂಗಕ್ಕೆ ಪ್ರಾಣಪೂಜೆಯ ಮಾಡಿ
ಬಾಹ್ಯಕ್ರೀಯ ಮಱೆದೆನು ಕಾಣಾ ಸಂಗನ ಬಸವಣ್ಣಾ.

ಅ. ವ. ಚಂ. ಪು. ೨೦೬, ವ. ೯೨೨.

ಸಮತೆ ಮುಂತಾದುವು. ಈ ಸೃಷ್ಟಿ ಕಾವ್ಯವಲ್ಲ, ಕಲ್ಪಿತವಲ್ಲ; ಸತ್ಯಕ್ಕೆ ಸತ್ಯವಾದ ಅನುಭವ. ಮತ್ತೆ, ಕಾಯದಲ್ಲಿ ಪ್ರಾಣನಾಥನನ್ನು ಪ್ರತಿಷ್ಠಿಸಿಕೊಂಡು ಆತನ ಪೂಜೆಯನ್ನು ಸಾಂಗ ಗೊಳಿಸಬೇಕಾದರೆ, ಪಂಚಭೂತದ ಪೂರ್ವಾಶ್ರಯದ ಕರಣೇಂದ್ರಿಯ ಅಷ್ಟಮದ ಸಪ್ತ ವ್ಯಸನ ಷಡೂರ್ಮಿ ಷಡ್‌ಭ್ರಮೆ ಗುಣತ್ರಯ ತಾಪತ್ರಯ ಅವಸ್ಥಾತ್ರಯ ಮಲತ್ರಯ ಮುಂತಾದ ಕಸಕಾಡನ್ನು ದೇಹ ಹೃದಯ ಪ್ರಾಣ ಬುದ್ಧಿಯಿಂದ ಕಿತ್ತೊಗೆದು, ಕಾಯ ಪ್ರಾಣ ಭಾವವೆಲ್ಲ ದಿವ್ಯಪ್ರಸಾದದಿಂದ ಶಿವಪ್ರಸನ್ನವಾಗಿರಬೇಕು.

> ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚಭೌತಿಕ
> ಮನ ಬುದ್ಧಿ ಚಿತ್ತ ಅಹಂಕಾರ ಚತುಷ್ಟಯ ಕರಣಾದಿ ಗುಣಂಗಳು
> ಸತ್ವ ರಜ ತಮದಲ್ಲಿ ಆತ್ಮನನೆತ್ತಲೆಂದರಿಯರು.
> ಇದನರಿದಡೆ ಸಮತೆ ಸದಾಚಾರ ಆಶ್ರಮಸ್ಥಾನಕ
> ಸಹಸ್ರದಳಕಮಲದಲ್ಲಿ ಗುಹೇಶ್ವರನೆಂಬ ಲಿಂಗವು.[೧]

ಎಲ್ಲಿ ನೋಡಿದಲ್ಲಿ ನೆಲ ನೀರು ಬೆಂಕಿ ಗಾಳಿ ಬಯಲು—ಬಾಹ್ಯಪ್ರಪಂಚ. ಈ ಪ್ರಪಂಚ ದಲ್ಲಿಯೆ ನಿಸರ್ಗದ ನಿರ್ಮಿತಿಯಾದ ನನ್ನ ಶರೀರ ಕರ್ಮ-ಜ್ಞಾನೇಂದ್ರಿಯ. ಒಳಗೆ ನೋಡಿದಲ್ಲಿ ಪ್ರಾಣಚೈತನ್ಯ ಮನ ಬುದ್ಧಿ ಚಿತ್ತ ಅಹಂಕಾರದ ನಿರಂತರ ವ್ಯವಹಾರ— ಅಂತಃಪ್ರಪಂಚ. ಗುಣತ್ರಯ ಮುಸುಕಿದ ಈ ಮಾನವನ ಬಹಿರಂತಃಪ್ರಪಂಚದಲ್ಲೆ ಲ್ಲಿಯೂ 'ಗುಹೇಶ್ವರಲಿಂಗ'ದ ಸುಳುಹಿನ ಕುರುಹಿಲ್ಲ. ಕುರುಹು ತೋರದಿದ್ದರೆ ಗುಹೇಶ್ವರನಿಲ್ಲವೆಂದು ನಿರ್ಣಯಿಸಬಾರದು. '......ಸರ್ವಾಂಗವನು ಸಮತೆಯೆಂಬ ಸದಾಚಾರದಲ್ಲಿ ನಿಲಿಸಲು, ಆ ಬ್ರಹ್ಮರಂಧ್ರದ ಸಹಸ್ರದಳಕಮಲದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯನು ಕಾಣಬಹುದು.'[೨]

ಇದೋ ಸ್ವಲ್ಪ ಈ ಕಡೆ ಬನ್ನಿ, ಸಮುದ್ರದ ದಂಡೆಯ ಮೇಲೆ ನಿಲ್ಲೋಣ. ಎಲ್ಲಿ ನೋಡಿದರೂ ಸಮುದ್ರವೇ ಕಾಣುತ್ತದೆ! ಅಲ್ಲವೆ? ಸಮುದ್ರ ಕಾಣುತ್ತದೆ, ಅಂದರೇನು? ನೀರಿನ ಹರವು, ಅದರ ಮೇಲೆ ಅಲೆದಾಡುವ ತರಂಗಕೋಟಿಯಲ್ಲವೇ? ಸಮುದ್ರ ಕಾಣು ತ್ತದೆ, ಅಂದರೆ ಸಮುದ್ರದ ಮೇಲುಮೈ ಕಾಣುತ್ತದೆ ಎಂದರ್ಥ. ಅದಕ್ಕೆ ಒಳಮೈಯೂ ಅದೆ; ಅದೇ ಸಮುದ್ರದ ಬೃಹತ್‌ಕಾಯ: ಆದರೆ ಅದು ಕಾಣದ ಕಾಯ. ಸಮುದ್ರದ ಒಳಹೊರ ಗಿನ ಲೀಲೆಯಂತಿದೆ ಪ್ರಾಣಲಿಂಗದ ವಿಲಾಸ. ಪ್ರಾಣದ ತರಂಗಕೋಟಿ, ಸೀಕರ ಬುದ್ಬುದ ಕೋಟಿಯೆನಿಸುವ ಪ್ರಾಣಕೋಟಿ ಮೇಲೆ ಮೇಲೆ ಲೀಲೆಯಾಡುತ್ತಿದ್ದರೂ, ವಿಶ್ವಪ್ರಾಣ ಚೈತನ್ಯಮಹಾಸಾಗರ ವಿಶ್ವಾತೀತ ವಿಸ್ತಾರವಾಗಿ, ವಿಶ್ವಾಧಿಕ ಗಭೀರೋನ್ನತವಾಗಿ, ಚಿನ್ನಾದ ಚಿಜ್ಜ್ಯೋತಿ ಚಿತ್‌ಪ್ರಕಾಶಮಯವಾಗಿ 'ಬೆಳಗುತಿದೆ.'- ಅದೇ ಪ್ರಾಣಲಿಂಗ. ಭಕ್ತ ಇಲ್ಲವೆ ಶರಣನ ಪ್ರಾಣದ ಒಂದು ತರಂಗ ಅಂತರ್ಮುಖವಾಗಿ ತನಗೆ ಮೂಲಾಧಾರ ವಾದ ಪ್ರಾಣಲಿಂಗಸಾಗರದಲ್ಲಿ ಯೋಗವಾದರೆ, ತನಗೆ ಜನನ ಮರಣವಿಲ್ಲದೆ, ಜನನ

---

೧. ಪ್ರ. ವ. ಪು. ೯೯, ವ. ೨೬. ೨. ಪ್ರ. ವ. ಪು. ೯೯, ವ. ೨೬ರ ಟೀಕು.

ಮರಣದ ಕೋಟಿ ವಿಲಾಸಕ್ಕೆ ಲೀಲಾಭೂಮಿಯಾಗಿ ನಿಲ್ಲುತ್ತದೆ ಆ ತರಂಗಲಿಂಗ. ಎಲ್ಲ ಪ್ರಾಣಕೋಟಿಯಲ್ಲಿ ಪ್ರಾಣಿಸುವ ತನ್ನ ಪ್ರಾಣಲಿಂಗದ ಅರಿವು ಈ ಲಿಂಗಕ್ಕೆ ಸ್ವಯಂ ವೇದ್ಯ. ಎಲ್ಲ ಪ್ರಾಣಕೋಟಿಯಲ್ಲಿ, ಅಂತೆಯೆ ತನ್ನ ಪ್ರಾಣಸೀಕರದಲ್ಲಿ ಒಂದೆ ಪ್ರಾಣ ಮಹಾಚೈತನ್ಯಸಾಗರವಾದ ಪ್ರಾಣಲಿಂಗ ಲೀಲೆಯಾಡುತ್ತಿದೆ. ಈ ಪ್ರಾಣಲಿಂಗದ ನೆಲೆಯನ್ನು ಮುಟ್ಟಿ ಅಲ್ಲಿಂದ ಬದುಕುವ ಪ್ರಾಣಲಿಂಗಿ: 'ಎಲ್ಲ ಪ್ರಾಣದಲ್ಲಿ ಪ್ರಾಣಲಿಂಗ, ತನ್ನ ಪ್ರಾಣದಲ್ಲಿ ಅದೇ ಪ್ರಾಣಲಿಂಗ; ಆದ್ದರಿಂದ ಎಲ್ಲ ಪ್ರಾಣದಲ್ಲಿ ತನ್ನ ಪ್ರಾಣ, ತನ್ನ ಪ್ರಾಣದಲ್ಲಿ ಎಲ್ಲ ಪ್ರಾಣ' – ಎಂದು ತನ್ನ ನಿಜಪ್ರಾಣದ, ತನ್ನ ಪ್ರಾಣೋದಯದ ಮರ್ಮ ವನ್ನು ಹೇಳಬಲ್ಲ.

'ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ
ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ'[೧]

ಎಂದು ಹೇಳುವ ಮಾತನ್ನು ಭೂತಪ್ರಾಣಕ್ಕೆ ಅನ್ವಯಿಸಿ ಹೇಳುವ ಪ್ರಾಣಾನುಭವ ಪ್ರಜ್ವಲಿಸುತ್ತಿದೆ ಪ್ರಾಣಲಿಂಗಿಯಲ್ಲಿ. 'ಒಂದರಲ್ಲಿ ಹಲವು, ಹಲವರಲ್ಲಿ ಒಂದು' – ಎಂಬ ಘನವಚನ, ಪ್ರಾಣಲಿಂಗ—ಪ್ರಾಣಕೋಟಿಗೆ ಇರುವ ಸೂತ್ರಮಣಿ ಸಂಬಂಧ, ಇಲ್ಲಿ ತಾನೇ ಪ್ರತ್ಯಕ್ಷ ಅನುಭವಕ್ಕೆ ಬರುತ್ತದೆ. ನನ್ನ ಪ್ರಾಣ ಪ್ರಾಣಲಿಂಗದಲ್ಲಿ ಮುಳುಗಿ, ಎಲ್ಲ ಪ್ರಾಣಕ್ಕೆ ಪ್ರಾಣವಾದ ಪ್ರಾಣಲಿಂಗದಲ್ಲಿ ಸಮರಸವಾಗಿ ನಿಂದುದೇ 'ಬದುಕು'; ಅದೇ ಜನನ ಮರಣವಿಲ್ಲದ 'ಪ್ರಾಣಲಿಂಗ'ಲೀಲೆ.

ಶರಣನ ಪ್ರಾಣ ಪ್ರಾಣಲಿಂಗ, ವಿಶ್ವಪ್ರಾಣಲಿಂಗ. ಅದು ಹೇಗೆ ಎಂದು ನನ್ನನ್ನು ಕೇಳುವಿರಾ? ಭೂತಳದ ಪ್ರಾಣಿಯಾದ ನನಗೆ ಆಕಾಶದಗ್ರದಲ್ಲಿ ಪ್ರಾಣಿಸುವ ಪ್ರಾಣಲಿಂಗಿ ಶರಣನ ಪರಿ ಏನು ಗೊತ್ತು? ಅದೋ ಷಣ್ಮುಖಸ್ವಾಮಿಗಳನ್ನು ಕೇಳಿ:

ಕಾಯ ಜೀವದ ಕೀಲವನರಿದು, ಜನನಮರಣಂಗಳಾಯಾಸವಳಿದು,
ಅಂಗವ ಲಿಂಗದೊಳಗೆ ಏಕಾರ್ಥವ ಮಾಡುವ ಭೇದವೆಂತೆಂದಡೆ:
ಪಂಚಭೂತಂಗಳ ಪೂರ್ವಾಶ್ರಯವನಳಿದು, ಪಂಚಕರಣಂಗಳ ಹಂಚು ಹರಿಮಾಡಿ...
ಇಂತೀ ಅಂಗಪ್ರಕೃತಿಗುಣಗಳೆಲ್ಲ ನಷ್ಟವಾಗಿ, ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು
ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಾಭಾವವಿಂಬುಗೊಂಡು.
ಅನಿಮಿಷದೃಷ್ಟಿ ಅಚಲಿತವಾಗಿ ಬಲಿದು,
ಆ ಲಿಂಗವು ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗವೆನಿಸಿಕೊಂಡು
ಷಡಾಧಾರಚಕ್ರಂಗಳಲ್ಲಿ ಷಡ್ವಿಧಲಿಂಗಮಾಗಿ ನೆಲೆಗೊಂಬುದು.
ಆ ಷಡ್ವಿಧಲಿಂಗಕ್ಕೆ ಷಡಿಂದ್ರಿಯಂಗಳನೆ ಷಡ್ವಿಧಮುಖಂಗಳೆನಿಸಿ.
ಆ ಷಡ್ವಿಧಮುಖಂಗಳಿಗೆ ಷಡ್ವಿಧವಿಷಯಂಗಳನೆ ಷಡ್ವಿಧದ್ರವ್ಯ ಪದಾರ್ಥವೆನಿಸಿ,
ಆ ಪದಾರ್ಥಂಗಳು ಷಡ್ವಿಧಲಿಂಗಕ್ಕೆ ಷಡ್ವಿಧಭಕ್ತಿಯಿಂದ ಸಮರ್ಪಿತವಾಗಲು.

---

೧. ಈ. ಉ. ಮಂ. ೬.

ಅಂಗವೆಂಬ ಕುರುಹು ಅಡಗಿ,
ಒಳಹೊರಗೆಲ್ಲ ಮಹಾಘನಲಿಂಗದ ದಿವ್ಯಪ್ರಕಾಶವೆ ತುಂಬಿ ತೊಳಗಿ ಬೆಳಗುತ್ತಿಪ್ಪುದು.
ಇಂತಪ್ಪ ಘನಲಿಂಗದ ಬೆಳಗನೊಳಗೊಂಡಿಪ್ಪ ಚಿದಂಗವೆ ಚಿತ್ಪಿಂಡವೆನಿಸಿತ್ತು.
ಇಂತಪ್ಪ ಅತಿಸೂಕ್ಷ್ಮವಾದ ಚಿತ್ಪಿಂಡವಿಸ್ತಾರವನು ಚಿದ್ಬ್ರಹ್ಮಾಂಡದಲ್ಲಿ ವೇಧಿಸಿಕೊಂಡು,
ಚಿದ್ಬ್ರಹ್ಮಾಂಡದ ಅತಿಬಾಹುಲ್ಯವನು ಆ ಚಿತ್ಪಿಂಡದಲ್ಲಿ ವೇಧಿಸಿಕೊಂಡು,
'ಪಿಂಡ ಬ್ರಹ್ಮಾಂಡಯೋರೈಕ್ಯಂ' – ಎಂಬ ಶ್ರುತಿಪ್ರಮಾಣದಿಂದ
ಆ ಪಿಂಡ ಬ್ರಹ್ಮಾಂಡಂಗಳು ಒಂದೇ ಎಂದು ಕಂಡು,
ಆ ಪಿಂಡ ಬ್ರಹ್ಮಾಂಡಗಳಿಗೆ ತಾನೇ ಆಧಾರವೆಂದು ತಿಳಿದು,
ಆ ಪಿಂಡ ಬ್ರಹ್ಮಾಂಡಂಗಳ ತನ್ನ ಮನದ ಕೊನೆಯಲ್ಲಿ ಅಡಗಿಸಿ,
ಆ ಮನವ ಭಾವದ ಕೊನೆಯಲ್ಲಿ ಅಡಗಿಸಿ,
ಆ ಭಾವವ ಜ್ಞಾನದ ಕೊನೆಯಲ್ಲಿ ಅಡಗಿಸಿ,
ಆ ಜ್ಞಾನವ ಮಹಾಜ್ಞಾನದಲ್ಲಿ ಅಡಗಿಸಿ,
ಆ ಮಹಾಜ್ಞಾನವನು ಪರಾತ್ಪರವಾದ ಪರಿಪೂರ್ಣಬ್ರಹ್ಮದಲ್ಲಿ ಅಡಗಿಸಿ,
ಆ ಬ್ರಹ್ಮವೆ ತಾನಾದ ಶರಣಂಗೆ ದೇಹಭಾವವಿಲ್ಲ.
ಆ ದೇಹಭಾವವಿಲ್ಲಾಗಿ ಜೀವಭಾವವಿಲ್ಲ;
ಆ ಜೀವಭಾವವಿಲ್ಲಾಗಿ ಫಲ ಪದದ ಹಂಗಿಲ್ಲ.
ಫಲ ಪದದ ಹಂಗಿಲ್ಲವಾಗಿ ಭವಬಂಧನಂಗಳು ಮುನ್ನವೆ ಇಲ್ಲ.
ಭವಬಂಧನಂಗಳು ಇಲ್ಲವಾಗಿ ಆ ಶರಣನು ತಾನು ಎಂತಿರ್ದನಂತೆ ಪರಬ್ರಹ್ಮವೆ ಆಗಿ,
ಆತನ ಹೃದಯಾಕಾಶವು ಬಚ್ಚಬರಿಯ ಬಯಲನೈದಿಪ್ಪುದು.
ಇದು ಕಾರಣ, ಆ ಶರಣನ ದೇಹವಿದ್ದು
ಸುಟ್ಟ ಸರವಿಯಂತೆ ನಿರ್ದೇಹಿಯಾದ ಕಾರಣ ಉಪಮಾತೀತ,
ವಾಙ್ಮನಕ್ಕಗೋಚರವಾಗಿಪ್ಪನಯ್ಯ ಅಖಂಡೇಶ್ವರಾ.[೧]

ಯೋಗವಿಲ್ಲದೆ ಅನುಭವವಿಲ್ಲ; ಶಿವಯೋಗವಿಲ್ಲದೆ ವಿಶ್ವಶಿವಾನುಭವವಿಲ್ಲ. ಸ್ಥೂಲ ಶರೀರವನ್ನು 'ಕಂಗಳಾಲಯದ ಚಿಜ್ಜ್ಯೋತಿ'–ಎನಿಸುವ ಕರಸ್ಥಲದ ಇಷ್ಟಲಿಂಗಕ್ಕೆ ಯೋಗಿಸಿ, ಈ ಚಿಜ್ಜ್ಯೋತಿಯೆ ಅಂತರಂಗದ ಪ್ರಾಣಕ್ಕೆ ವೇಧಿಸಿ, ಷಡ್ವಿಧ ನವವಿಧ ಲಿಂಗವಾಗಿ ಪ್ರದೀಪ್ತವಾಗಿ ಪ್ರಜ್ವಲಿಸಿ, 'ಒಳಹೊರಗೆಲ್ಲ ಮಹಾಘನಲಿಂಗದ ದಿವ್ಯಪ್ರಕಾಶವೆ ತುಂಬಿ ತೊಳಗಿ ಬೆಳಗು'ತ್ತಿರಲು, ಪಿಂಡ ಬ್ರಹ್ಮಾಂಡಗಳ ಐಕ್ಯವನ್ನು ಪ್ರಕಾಶಮಾಡಿ ತೋರುವ ಪ್ರಾಣಲಿಂಗದಲ್ಲಿ ಸೂಕ್ಷ್ಮಶರೀರವೆನಿಸುವ ಮನ ಪವನಗಳನ್ನು ಯೋಗಿಸಿ ನಿಂದ ನಿಲವೇ ಪ್ರಾಣ

---

೧. ಅಖಂ. ವ. ಪು. ೧೫೮–೧೬೧, ವ. ೧೪.

ಬ್ರಹ್ಮದ ನಿಲವು. ಒಂದು ದೇಹ ಒಂದು ಪ್ರಾಣ ಒಂದು ಮನದಲ್ಲಿ ಮನೆಮಾಡಿಕೊಂಡಿದ್ದರೆ, ಈ ಬ್ರಹ್ಮನಿಲವು ಹೇಗೆ ಸಾಧ್ಯ? ವಿಶ್ವೇಭೂತಗಳ ಪ್ರಾಣಚೈತನ್ಯದ ಮೂಲ ಉಗಮಸ್ಥಲದಲ್ಲಿ ದೇಹಬಿಂದು ಪ್ರಾಣಬಿಂದು ಪ್ರಲಯವಾಗಿ, ಸಮರಸವಾಗಿ ನಿಲಬಲ್ಲ ಮಹಾಂತರಿಗೆ ಅದು ಸಾಧ್ಯ.

ಇಂಥ ಮಹಾಂತ ಶರಣನ ನಡೆ ನುಡಿ ಲಿಂಗದ ನಡೆ ಲಿಂಗದ ನುಡಿ ಎಂದು ವಚನಕಾರರು ಹೇಳುವ ಮಾತು ಈಗ ಭವ್ಯಾರ್ಥಮೂರ್ತಿಯಾಗಿ ನಮ್ಮೆದುರು ನಿಲ್ಲುತ್ತದೆಯಲ್ಲವೇ? ನನ್ನ ಪ್ರಾಣಚೈತನ್ಯ, ನನ್ನ ಅರಿವಿನ ಚೈತನ್ಯದಿಂದ ಹರಿವ ನಡೆ ನುಡಿ ನೋಟ ಮಾಟವೆಲ್ಲ ನನ್ನ ನಡೆ ನನ್ನ ನುಡಿ, ನನ್ನ ನೋಟ ನನ್ನ ಮಾಟ ಇತ್ಯಾದಿ. ಆದರೆ ಪ್ರಾಣಕ್ಕೆ ಲಿಂಗ ಯೋಗವಾಗಿ, ಪ್ರಾಣಲಿಂಗಸ್ಥಲದಿಂದ ನಡೆ ನುಡಿ ಮುಂತಾದ ಕ್ರಿಯಾಪ್ರಪಂಚ ಹರಿದರೆ ಅವೆಲ್ಲ ಲಿಂಗದ ನಡೆ ನುಡಿಯಲ್ಲವೇ? ನಾನು ಈಗ ಬರೆಯುತ್ತಿದ್ದೇನೆ; ವಿಚಾರಿಸುತ್ತ ಬರೆಯುತ್ತಿದ್ದೇನೆ. ಈ ಬರೆಹ ಈ ವಿಚಾರ ನನ್ನ ಪ್ರಾಣ ನನ್ನ ಅರಿವಿನ ಚೈತನ್ಯದಿಂದ ಹರಿಯುತ್ತಿವೆ. ನನ್ನ ಪ್ರಾಣ ನನ್ನ ಮನ ಪ್ರಾಣಲಿಂಗದಲ್ಲಿ ಯೋಗವಾದರೆ, ಆ ಮೇಲೆ ಬರೆವವರಾರು? ವಿಚಾರಿಸುವ ಚೈತನ್ಯವಾರದು? ಈ ಪ್ರಶ್ನೆಗಳಿಗೆ ಜ್ಯೋತಿರ್ಮಯವಾದ ಪ್ರಾಣಲಿಂಗದ ಪ್ರಾಣಾನುಭವದಿಂದ, ಮನವಳಿದ ಉನ್ಮನಿಯಿಂದ ಉತ್ತರ ಬರುತ್ತಿದೆ ನೋಡಿ:

ಶಿರದೊಳಗೆ ಶಿರ, ಕರದೊಳಗೆ ಕರ,
ಕರಣದೊಳಗೆ ಕರಣ, ಕಂಗಳೊಳಗೆ ಕಂಗಳು,
ಕರ್ಣದೊಳಗೆ ಕರ್ಣ, ಘ್ರಾಣದೊಳಗೆ ಘ್ರಾಣ,
ಜಿಹ್ವೆಯೊಳಗೆ ಜಿಹ್ವೆ, ದೇಹದೊಳಗೆ ದೇಹ,
ಪಾದದೊಳಗೆ ಪಾದವ ಕೂಡಿ ಶರಣರೊಡನಾಡುವ
ನಿಮ್ಮ ಬೆಡಗಿನ ಲೀಲೆಯನಾರು ಬಲ್ಲರು,—
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣರಲ್ಲದೆ?[೧]

ಜೀವನ ಸಂಸಾರವ್ಯಾಪಾರವೆಲ್ಲ ಪ್ರಾಣಲಿಂಗವಾದ ಶರಣನಿಗೆ ಬೆಡಗಿನ ಲೀಲೆ, ಅದೇ ದಿವ್ಯಲೀಲೆ, ಶರಣ-ಲಿಂಗ ಲೀಲೆ. ಪ್ರಾಣ ಲಿಂಗದಲ್ಲಿ ಯೋಗವಾಗಿ ಏಕಾರ್ಥವಾದರೆ, ನನ್ನ ಕೈ ಕಾಲು ಕಿವಿ ಮೂಗು ಮನ ಬುದ್ಧಿಯ ಚೈತನ್ಯದ ಕೈಹಿಡಿದು, ಆ ಚೈತನ್ಯವನ್ನು ಬಿಗಿದಪ್ಪಿ, ಒಡನೊಡನೆ ಅಲ್ಲಲ್ಲಿ ದಿವ್ಯ-ಚೈತನ್ಯವನ್ನು ತುಂಬಿ, ಜೀವನಲೀಲೆಯನ್ನು ಬಿತ್ತರಿಸುತ್ತಾನೆ ಪ್ರಾಣಲಿಂಗನಾಥ. ಬರೆವ ಕ್ರಿಯೆಯಲ್ಲಿ ಲಿಂಗಚೈತನ್ಯ ತುಂಬಿ ಬರೆಯುತ್ತಿದೆ. ಬುದ್ಧಿಯ ವಿಚಾರಕ್ರಿಯೆ ನಡೆದರೆ, ನಡೆಸುವ ಶಕ್ತಿ ಆ ಪ್ರಾಣಲಿಂಗಚೈತನ್ಯ. ಕಣ್ಣು ನೋಡಿದರೆ ನೋಡಿಸುವ ಶಕ್ತಿ, ಕಿವಿ ಕೇಳಿದರೆ ಕೇಳಿಸುವ ಶಕ್ತಿ, ಕಾಲು ನಡೆದರೆ ಕೈ ಮಾಡಿದರೆ, ಮೂಗು ವಾಸಿಸಿದರೆ ತೊವಲು ಸೋಂಕಿದರೆ, ಪ್ರಾಣವಾಯು ಹೊರಗೊಳಗೆ ಹರಿದಾಡಿದರೆ, ಹೃದಯದಲ್ಲಿ ಭಾವ ತರಂಗಿಸಿದರೆ—ಎಲ್ಲ ಬಹಿರಂತರಂಗವ್ಯಾಪಾರಕ್ಕೆ ಅದೇ ಪ್ರಾಣ

೧. ಸ್ವ. ಸಿ. ವ. ಪು. ೭೩, ವ. ೨೮೦.

ನಾಥ ಮೂಲಪ್ರೇರಕಮೂರ್ತಿ. 'ಅಂಗದ ಕ್ರಿಯೆಗಳೆಲ್ಲ ಲಿಂಗದ ಕ್ರಿಯೆಗಳು' – ಎಂಬ ಮಾತಿನ ಪ್ರಾಣಾರ್ಥ ಇದೇ.[೧]

ಇಂಥ ಲಿಂಗಕ್ರಿಯಾವರ್ತನೆ ನಡೆದರೆ ಶರಣನಿಗೆ, ಅಂದರೆ ಶಿವಯೋಗಿಗೆ 'ನನ್ನ ಮನ' ಎಂದು ಹೇಳಿಕೊಳ್ಳಲು ತನಗೊಂದು ಬೇರೆ ಮನಶ್ಚೈತನ್ಯವೆ ಉಳಿದಿಲ್ಲ. ಆ 'ನನ್ನ ಮನ' ಎಲ್ಲಿ ಮಾಯವಾಗಿದೆ? ಮನವಿಲ್ಲದಿದ್ದರೆ ಮಾನವನಿಗೆ ಬೇರೆ ಗತಿ ಮತಿ ಇಲ್ಲ. ಅದು ನಿಜ. ಆದರೆ ತನಗೊಂದು ಮನವಿದ್ದರೆ ಶರಣ ಶರಣನಲ್ಲ, ಶರಣ ಶಿವಯೋಗಿಯಲ್ಲ.

ಹರಿವ ಮನ ವಾಯುವನೊಂದು ಹುರಿಯ ಮಾಡಿ, ಮನವ ಸ್ಥಿರಗೊಳಿಸಿ,
ಸಗುಣಧ್ಯಾನದಲ್ಲಿ ಮನ ಸವೆದು, ನಿರ್ಗುಣದಲ್ಲಿ ನಿಂದು,
ಆ ನಿರ್ಗುಣಧ್ಯಾನ ಬಲಿದು, ಸಗುಣ ನಿರ್ಗುಣದಲ್ಲಿ ಅಡಗಿ,
ಆ ನಿರ್ಗುಣವಾದ ನಿಜದಲ್ಲಿ ಮನೋಲಯವಾದುದೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಪರಮ ರಾಜಯೋಗವು.[೨]

ಮನಸ್ಸು ಲಿಂಗದಲ್ಲಿ ಲಯವಾದರೆ, 'ಮನವಿಡಿದಿಹ ಇಂದ್ರಿಯ ವಿಷಯ ಪ್ರಾಣಂಗಳು' ಅದೇ ಲಿಂಗದಲ್ಲಿ ಲಯವಾಗಿ ಅದೇ ಲಿಂಗದಿಂದ ಹೊರಹೊರಟು ವ್ಯವಹಾರ ನಡೆಸಿದರೆ, ಈಗ ಹೊರಗೆಂಬುದುಳಿದಿಲ್ಲ. ಹೊರಗಿಲ್ಲ, ಆದ್ದರಿಂದ ಒಳಗಿಲ್ಲ. ಹೊರಗೂ ಒಳಗು ಒಂದರಲ್ಲೊಂದು ತುಂಬಿ ಸಮರಸವಾದ ಈ ದರ್ಶನ ಮನವುಳ್ಳ ಮಾನವನ ಕಣ್ಣಿಗೆ ಅ-ಗಮ್ಯ, ಅ-ಗೋಚರ.

ಮರ ಮೊದಲಿಗೆ ಬೀಳಲು, ಕೊನೆಯೆಲೆ ಹೂ ಕಾಯಿಗಳನಿರಿಸಿ ತಾ ಬೀಳದು ನೋಡಾ.
ಯೋಗಿಯ ಮನವಳಿಯಲು,
ಮನವಿಡಿದಿಹ ಇಂದ್ರಿಯ ವಿಷಯ ಪ್ರಾಣಂಗಳು
ಮನದೊಡನೆ ಅಳಿವವಲ್ಲದೆ ಉಳಿಯವು ನೋಡಾ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡುವರೆ ಮನವಳಿದು ಕೂಡುವುದು ನೋಡಾ.[೩]

ಶೂನ್ಯಸಂಪಾದನೆಯಲ್ಲಿ ಪ್ರಭುದೇವರು ಮೇಲಿಂದ ಮೇಲೆ ತೀಕ್ಷ್ಣವಾಗಿ ಹೇಳುವ 'ಮನವುಂಟೆ ಮರುಳೆ ಶಿವಯೋಗಿಗೆ?'—ಎಂಬ ಮಾತಿನ ಸೂಕ್ಷ್ಮ, ಸ್ವತಂತ್ರಸಿದ್ಧಲಿಂಗೇಶ್ವರನ ವಚನದ ಮುಖದಲ್ಲಿ ನೋಡಿದರೆ ಸ್ಪಷ್ಟವಾಗಿ ತೋರುವಂತಿದೆ. ಅಲ್ಲವೇ? ಮನವಳಿದು ನಿಂದುದೆ ಮಹಾಯೋಗ. ಮನದೊಡನೆ ಸುಳಿವುದೆ ಸಂಸಾರಯೋಗ.

---

೧. ನೋಡಿರಿ:

ಲಿಂಗದ ನಡೆ, ಲಿಂಗದ ನುಡಿ.
ಲಿಂಗದ ನೋಟ, ಲಿಂಗದ ಬೇಟ, ಲಿಂಗದ ಕೂಟ.
ಲಿಂಗದಲ್ಲಿ ಮನವಡಗಿರ್ದ ಲಿಂಗಾನುಭಾವಿಗಳ ಸಂಗದಲ್ಲಿರಿಸಿ,
ಸಲಹಯ್ಯ ಎನ್ನ ಅಖಂಡೇಶ್ವರಾ.

ಅಖಂ. ವ. ಪು. ೧೫೮, ವ. ೧೩.

೨. ಸ್ವ. ಸಿ. ವ. ಪು. ೭೪, ವ. ೨೮೩.

೩. ಅದೇ ,, ,, ವ. ೨೮೪.

ಲಿಂಗವೆ ಪ್ರಾಣವಾಗಿ ಪ್ರಾಣವೆ ಲಿಂಗವಾಗಿ, ಲಿಂಗಪ್ರಾಣದಿಂದ ಪ್ರಾಣಿಸುತ್ತಿರುವ ಪ್ರಾಣಲಿಂಗಿಯ ಸ್ಥಲದಿಂದ ಮತ್ತೆ ಮುಂದೆ ಬಂದರೆ, ನಾವು ಶರಣಸ್ಥಲಕ್ಕೆ ಬಂದು ಸೇರುತ್ತೇವೆ. ಇಲ್ಲಿಯ ದಿವ್ಯವೈಭವ ವಿಸ್ತಾರವನ್ನು, ಇಲ್ಲಿಯ ಭಕ್ತಿ ಪೂಜೆ ನಿಷ್ಠೆ ಅರ್ಪಣ ಅನುಭವ ಆನಂದದ ಪರಮಗಂಭೀರ ಪಾರಾವಾರವನ್ನು, ಇಲ್ಲಿಯ ಸತಿ–ಪತಿ ಭಾವದ ಸಮರಸ ಜೀವನವನ್ನು ಪರಿಭಾವಿಸಿ ನೋಡಿದರೆ, ದಾಸೋಹಂಭಾವದ ಲಿಂಗಭಕ್ತನ ಭಕ್ತಿ ರತಿಯೇರಿ, ಭಕ್ತನನ್ನು ಲಿಂಗದಲ್ಲಿ ಸಂಯೋಗಿಸಿ ಸಂಗಿಸುವ ಭಾವಾತೀತ ದೃಶ್ಯ ಅಗೋಚರವಾಗಿ ಗೋಚರವಾಗುತ್ತದೆ. ಹೀಗೆ ಹೇಳುವುದನ್ನು ಕೇಳ ಕೇಳುವಷ್ಟರಲ್ಲಿ ನಿಮ್ಮ ಮುಖಭಾವದಲ್ಲಿ ಮುನಿಸು ಮೊಳೆತಂತೆ ತೋರುತ್ತದೆ! ನಿಮ್ಮ ಮುನಿಸಿನ ಕಾರಣ ನನಗೆ ಗೊತ್ತು. '......ಭಾವಾತೀತ ದೃಶ್ಯ ಅಗೋಚರವಾಗಿ ಗೋಚರವಾಗುತ್ತದೆ', ಎಂದು ಹೇಳಿದ ಮಾತಿನಲ್ಲಿ ಸ್ಪಷ್ಟವಾಗಿ ಒಡಮೂಡುವ 'ಪರಸ್ಪರ ವಿರೋಧ'ವನ್ನು ಕಂಡು ನೀವು ಸಿಟ್ಟಿಗೇಳುವುದು ಅಸಹಜವೇನೂ ಅಲ್ಲ. ಇಲ್ಲಿ ನನ್ನ ವಿಚಾರದ ಅವಧಾನ ಸ್ವಲ್ಪ ತಪ್ಪಿದೆ, ಮನ್ನಿಸಿರಿ. ಮನುಷ್ಯನ ಭಾವದ ದೃಕ್ಕಿಗೆ ಅತೀತವಾದ ದೃಶ್ಯ, ಈ ಕಂಗಳ ಹಿಡಿತಕ್ಕೆ ಒಳಗಾಗುವುದೆಂತು? ನನ್ನ ನಿಮ್ಮ ಭಾವದ ಸೀಮೆಯಾಚೆಗಿರುವ ಶರಣಸ್ಥಲದ ದೃಶ್ಯ ಈಚೆಗಿರುವ ನಮ್ಮ ಭಾವಕ್ಕೆ ಗೋಚರಿಸಬಹುದೆಂತು? ಈ ಭಾವದ ಸೀಮೋಲ್ಲಂಘನೆಯಾದರೆ ಮಾತ್ರ ಅದು ನಮಗೆ ಕಾಣಬಹುದು. ಈ ಉಲ್ಲಂಘನೆ ಮಾಡಿ ಗೊತ್ತಿಲ್ಲ ಮಾನವನ ಭಾವದೃಕ್ಕಿಗೆ. ಮಾಯೆಗೆ ಅಧೀನವಾಗಿ ಜೀವಭಾವದಲ್ಲಿ ಭದ್ರವಾಗಿ ಕುಳಿತಿದೆ ಈ ಕಣ್ಣಿನ ನೋಡುವ ಶಕ್ತಿ. ಆದರೂ ಇಲ್ಲಿ ಒಂದು ತಾರಕ ಉಪಾಯ ಮಾನವನಲ್ಲಿ ಸದಾ ಸನ್ನಿಹಿತವಾಗಿದೆ. ವಿಶ್ವ ಬೇರೆ ನಾನು ಬೇರೆ, ಲಿಂಗದೇವ ಬೇರೆ ನಾನು ವಿಶ್ವ ಬೇರೆ ಎಂಬ ನಮ್ಮ ಭಿನ್ನಭಾವ ಮೇಲೆ ತೋರುವ ಭಿನ್ನ ತರಂಗ ಅಷ್ಟೇ. ಈ ಬೇರೆ ಬೇರೆ ಭಾವತರಂಗಗಳ ಮೂಲಾಧಾರವಾದ ಮಹಾಭಾವ ಆಕಾಶ-ಸಮುದ್ರ ಯಾವ ತರಂಗಶಿಶುವಿನ ಕೈಯನ್ನೂ ಎಂದೂ ಬಿಟ್ಟಿಲ್ಲ. ಅದರ ಮಹಾಲಿಂಗನದಲ್ಲಿಯೇ ಲೀಲೆಯಾಡುತ್ತಿದೆ ಭಾವತರಂಗಕೋಟಿ. ತರಂಗ ತಾನಷ್ಟೆ ಎಚ್ಚೆತ್ತಿದ್ದು ತನ್ನ ಆಕಾಶಸಮುದ್ರವನ್ನು ಮರೆದು ಮಲಗಿದ್ದರೂ, ಪರಿಪೂರ್ಣವನ್ನು ಎಚ್ಚೆತ್ತ ಶರಣರು ಮಾನವನ ಭಾವತರಂಗಗಳನ್ನು ಎಚ್ಚರಗೊಳಿಸಿದರೆ, ನಿದ್ರೆ ಪೂರ್ಣ ತಿಳಿಯದಿದ್ದರೂ ಅರ್ಧಮರ್ಧ ಎಚ್ಚೆತ್ತು ತಮ್ಮ ಭಾವಸಮುದ್ರದ ಭಾವಾಕಾಶದ ಹರವನ್ನು ಅರೆನಿದ್ರೆಯಲ್ಲಿ ಅಸ್ಪಷ್ಟವಾಗಿಯಾದರೂ ಕಾಣಬಹುದು. ಈ ಮಾತನ್ನು ಸೂಚಿಸುವ ಉದ್ದೇಶದಿಂದಲೇ ನಾನು '......ಅಗೋಚರವಾಗಿ ಗೋಚರವಾಗುತ್ತದೆ'—ಎಂದು ಹೇಳಿದೆ. ಅದನ್ನೇ ಶರಣಸ್ಥಲದ '......ಭಾವಾತೀತ ದೃಶ್ಯ ಅರೆನಿದ್ರೆಯಲ್ಲಿ ಅಸ್ಪಷ್ಟವಾಗಿ ತೋರಿ ತೋರದಂತೆ ಗೋಚರವಾಗುತ್ತದೆ'–ಎಂದು ಹೇಳಿದರೆ, ನಿಮ್ಮ ಆಕ್ಷೇಪ ಏನೂ ಇಲ್ಲವಷ್ಟೇ. ಮಾನವನ ಭಾವದ ಮರೆಯಲ್ಲಿ ಶರಣ 'ಇದಾನೆ ಇಲ್ಲದಂತೆ.' ಆದ್ದರಿಂದಲೆ 'ಭಕ್ತಿಯಿಂದ ಕರೆದರೆ' ಓ ಎನ್ನುತ್ತಾನೆ. ಓ ಎನ್ನುವ ಮಟ್ಟಿಗೆ ನಮ್ಮ ಶರಣ ನಮಗೆ ಗೋಚರವಾಗುತ್ತಾನೆ.

ಪ್ರಾಣಲಿಂಗಿಯ 'ಸ್ವಾನುಭಾವವಿವೇಕದೊಳಗಣ ಅಜಿವಿನಿಂ' ಶರಣನಾದ

ಪರಿಯನ್ನು ಸಿದ್ಧವೀರಣ್ಣೊಡೆಯರು ಪ್ರಭುದೇವರ ಮೂರು ವಚನಗಳಿಂದ ರೂಪಿಸಿ ತೋರುತ್ತಾರೆ. ಒಡೆಯರ ಮಾತನ್ನು ಕೇಳಿದರೆ, ನೋಡಿದರೆ, ಸ್ವಾನುಭಾವವಿವೇಕ ಉಳ್ಳಾತನೆ ಪ್ರಾಣಲಿಂಗಿ, ಅಂಥ ವಿವೇಕದ ಸಾರವೇ ಅರಿವು, ಈ ಅರಿವೆ ಶರಣಸ್ಥಲದ ಮುಖ್ಯ ಲಕ್ಷಣ ಎಂದು ಹೇಳಬಹುದು. ಈ ಅರಿವಿನ ಸ್ವರೂಪವನ್ನು ಪ್ರಭುದೇವರು ಹೀಗೆ ತೋರುತ್ತಾರೆ, ಇಲ್ಲಿ ನೋಡಿ:

ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು.
ಅಱಿವು ಮಱೆಯಿತ್ತು. ಕುಱುಹುಗೆಟ್ಟಿತ್ತು.
ಅಲ್ಲಿ ಗತಿಯನಱಿಸಲುಂಟೆ? ಅಲ್ಲಿ ಮತಿಯನಱಿಸಲುಂಟೆ?
ಅಂಗವೆಲ್ಲಾ ನಷ್ಟವಾಗಿ, ಲಿಂಗಲೀಯವಾಗಿ,
ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗೊಹೇಶ್ವರಾ.[೧]

ಶರಣನ ಒಳಹೊರಗೆ ನಡೆದಿರುವ ಸಂಗತಿಯ ದರ್ಶನ ಕಷ್ಟಪಟ್ಟು ಈ ವಚನವನ್ನು ಎತ್ತಿ ನೋಡಿದರೆ ಆಗಬಹುದು. ಆ ತೊಂದರೆಯನ್ನು ಕಡಮೆ ಮಾಡಿಕೊಳ್ಳಬೇಕಾದರೆ, ಕಲ್ಲ ಮಠದ ಪ್ರಭುದೇವರ ಬಳಿಬಳಿಯಲ್ಲಿ ನಡೆದು ಆ ದರ್ಶನವನ್ನು ಪಡೆಯಬಹುದು.[೨] ಕಂಗಳು ಅಂದರೆ ಸುಜ್ಞಾನ, ಸಮ್ಯಗ್‌ಜ್ಞಾನ ಅಥವಾ ಶಿವಜ್ಞಾನ ನಿಜಜ್ಞಾನದೃಷ್ಟಿ. ಈ ಕಣ್ಣು ತೆರೆದು ಒಳಗೆ ಹೊರಗೆ ನೋಡುತ್ತಿರುವ ಆತ್ಮನೇ ಚಿದಂಗ, ಚಿತ್‌ಸ್ವರೂಪ ನಾದ ಶರಣ. ಇದೇ ಶರಣ ಪ್ರಾಣಲಿಂಗಿಯ ಸ್ಥಲದಲ್ಲಿ ಇದ್ದಾಗ ಆರು ಚಕ್ರ, ಒಂಬತ್ತು ಹತ್ತು ಚಕ್ರ, ನವನಾಳ ನೇತ್ರ ಭ್ರೂಮಧ್ಯ ಹೃದಯ ಬ್ರಹ್ಮರಂಧ್ರ ಮುಂತಾದ ಲಕ್ಷ್ಯ ದಲ್ಲಿ ಮನ ಪವನ ನೇತ್ರಾದಿಗಳನ್ನು ಸ್ಥಿರವಾಗಿ ನೆಲೆಗೊಳಿಸಿ, ಪ್ರಾಣದ ಚೈತನ್ಯವಾದ ಚಿತ್‌ಪರಮ ಪ್ರಾಣಲಿಂಗವನ್ನು ನೆನೆಯಬೇಕು ನೋಡಬೇಕು, ಅರಿಯಬೇಕು ಅಲ್ಲಿಯೆ ಬೆರಸಬೇಕು ಎಂಬ ಹಲವು ಹಂಬಲ ಇತ್ತು ಆತನಿಗೆ. 'ಜ್ಞಾನಾತ್ಮನಾಗಿರ್ದ ಶರಣನು ತನ್ನ ನಿಜವಪ್ಪ ಲಿಂಗದ ಕಳಾಬೆಳಗ ಲಕ್ಷ್ಯವಿಟ್ಟು ನೆನೆವುದು, ಅಱಿವುದು, ಭಾವಿಸುವುದು, ಕ್ರೀಯ ಮಾಡುವುದು ಎಲ್ಲವೂ ಶರಣನೆಂಬ ಆತ್ಮಾಂಗಕ್ಕೆ ಬಾಧೆ. ಈ ಬಾಧೆ, ಭಂಗ, ಹಂಬಲವೆಲ್ಲ ಶರಣಸ್ಥಲದ ಸೀಮೆಯಲ್ಲಿ ಹಿಂಗಿ ಹೋಗಿದೆ. ಇಲ್ಲಿ ಪ್ರಾಣಲಿಂಗದ ಧ್ಯಾನ ಮಾಡಬೇಕೆಂಬ ಚಿಂತೆ ಇಲ್ಲ. ಅಲ್ಲಿ ಇಲ್ಲಿ, ಮೇಲೆ ಕೆಳಗೆ ಹತ್ತಿ ಹರಿದು 'ಉರಿವ ಜ್ಯೋತಿ' ಯನ್ನು 'ಮೊರೆವ ನಾದ'ವನ್ನು 'ಸುರಿವ ಅಮೃತ'ವನ್ನು ಕಂಡು ಕೇಳಿ ಸುಖಿಸಬೇಕೆಂಬ ಭಾವದ ಭ್ರಾಂತಿಯ ಉಲುಹು ಇಲ್ಲಿ ಅಡಗಿದೆ. 'ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು.' ನೆನಹಿನ ಮೂರ್ತಿ ಕಳೆಗೊಂಡು ಭಂಗವಿಲ್ಲದೆ ಬೆಳಗಿದರೆ, ನೆನೆಯಬೇಕಿ ನ್ನೇನು? ನೀವು ನನಗೆ ದೂರವಾಗಿದ್ದರೆ ನಿಮ್ಮನ್ನು ಕಾಣಬೇಕೆಂಬ ನೆನಹು ನನಗೆ. ಇಲ್ಲಿಯೇ ನನ್ನ ಕಣ್ಣ ಮುಂದೆ ನಿಂದಿರುವ ನಿಮ್ಮನ್ನು ಮತ್ತೆಯೂ ನೆನೆಯಬೇಕೇ?

---

೧. ಶೂ. ಸಂ. ಪು. ೨೦. ವ. ೬೯.
೨. ಲಿಂ. ಲೀ. ವಿ. ಚಾ. ಪು. ೩೧೮, ವ. ೯೦ರ ಟೀಕು ನೋಡಿರಿ.

ನೆನಹಿನ ನಲ್ಲನು ಮನೆಗೆ ಬಂದಡೆ, ನೆನೆವುದಿನ್ನಾರನು ಹೇಳವ್ವಾ?
ನೆರೆವ ಕ್ರಿಯಲ್ಲಿ ನೆರೆದು ಸುಖಿಯಹುದಲ್ಲದೆ, ನೆನೆವುದಿನ್ನಾರನು ಹೇಳವ್ವಾ?
ನೆನಹಿನ ನಲ್ಲ ಉರಿಲಿಂಗದೇವನ ಕಂಡ ಬಳಿಕ, ನೆನೆವುದಿನ್ನಾರನು ಹೇಳವ್ವಾ? [೧]

ನೆನಹಿನ ವಿಷಯ ಇನ್ನೂ ಮನಗಾಣಬೇಕಿದ್ದರೆ ಪ್ರಭುದೇವರನ್ನೇ ಕೇಳಿ:

ನೆನೆ ನೆನೆ ಎಂದಡೆ ಏನ ನೆನೆವೆನಯ್ಯಾ?
ಎನ್ನ ಕಾಯವೆ ಕೈಲಾಸವಾಯಿತ್ತು. ಎನ್ನ ಮನವೆ ಲಿಂಗವಾಯಿತ್ತು.
ಎನ್ನ ತನುವೇ ಸೆಜ್ಜೆಯಾಯಿತ್ತು.
ನೆನೆವಡೆ ದೇವರುಂಟೇ? ನೋಡುವಡೆ ಭಕ್ತರುಂಟೇ?
ಗುಹೇಶ್ವರಲಿಂಗ ಲೀಯವಾಯಿತ್ತು.[೨]

ಯುಗಯುಗದಲ್ಲಿ ತಿರುಗುತ್ತ, ಭವಭವಾಂತರದಲ್ಲಿ ಬವಣೆಗೊಂಡು ಅನಂತಕೋಟಿ ಕಾಲದ ತಪದಿಂದ, ಪುಣ್ಯದ ಫಲದಿಂದ ಮಾನವನಾಗಿ ಹುಟ್ಟಿ, ಮಾನವನಿದ್ರೆ ತಿಳಿದೆಚ್ಚತ್ತು, ಒಳಹೊರಗೆ ತೆರಹಿಲ್ಲದೆ ಇದ್ದು ಅಡಗಿ ಉರಿವ ನಲ್ಲನ ಬಯಕೆ ಘನವಾಗಿ, ನೆನೆನೆನೆದು ಅರಿದರಿದು ಭಾವಿಸಿ ಭಾವಿಸಿ ಕಲ್ಪಿಸಿ ಕಲ್ಪಿಸಿ ನಲ್ಲನ ಬರವ ಹಾರೈಸಿ ಹಂಬಲಿಸಿಕೊಂಡಿರಲು, ಮನೆಯೊಡೆಯ, ಮನದೊಡೆಯ ಪ್ರಾಣನಾಥ ಭಾವರಮಣ ಮನೆಗೆ ಬಂದರೆ, ಮತ್ತೆ ನಲ್ಲನ ನೆನೆವೆನೆಂಬ ಅಜ್ಞಾನವೇಕೆ? ನೆನಹಿನ ನಲ್ಲ ಆತನೆ ಉರಿಲಿಂಗದೇವ ಮನೆಗೆ ಬಂದರೆ? ಎಲ್ಲಿದೆ ಆ ಮನೆ? ಯಾವ ಊರಲ್ಲಿ? ಯಾವ ನಾಡು, ಯಾವ ದ್ವೀಪ, ಯಾವ ಖಂಡದಲ್ಲಿ? ಶರಣನ ಮನೆಯನ್ನು ನೋಡಬೇಕೆಂಬ ಕುತೂಹಲ ನಿಮಗಿದ್ದಂತೆ ತೋರುತ್ತದೆ. ಇದೋ ಇಲ್ಲಿ ಬನ್ನಿ, ಹಡಪದಪ್ಪಣ್ಣಗಳ ಪುಣ್ಯಾಂಗನೆ ಲಿಂಗಮ್ಮ ತೋರಿಸುತ್ತಾಳೆ ಆ ಮನೆಯನ್ನು:

ತುಂಬಿದ ಮನೆಯ ಹೊಕ್ಕರೆ ದಂದಳವಾಯಿತ್ತು.
ಈ ಸಂದಳಿಗಾರದೆ, ತುಂಬಿದ ಮನೆಯ ಕಿಚ್ಚನಿಕ್ಕಿದರೆ ನಿಶ್ಚಿಂತವಾಯಿತ್ತು.
ಬಟ್ಟಬರಿಯ ಮನೆಯೊಳಗೆ ನಿಮ್ಮ ಬೆಳಗನೆ ನೋಡಿ
ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.[೩]

---

೧. ವ. ಶಾ. ಸಾ. ಭಾ. ೨, ಪು. ೩೭೪, ವ. ೨.
೨. ಅದೇ ,, ,, ಪು. ೫೦೯, ವ. ೭.
ಇಲ್ಲಿ ಮತ್ತೆ ಬೇಕಾದರೆ ನೋಡಿರಿ ಲಿಂಗಮ್ಮನ ಅನುಭವವನ್ನು:
ನೆನೆದಿಹೆನೆಂದರೆ ಏನ ನೆನೆವೆನಯ್ಯಾ?
ಮನ ಮಂಕಾಯಿತ್ತು, ತನು ಬಯಲಾಯಿತ್ತು.
ಕಾಯ ಕರಗಿತ್ತು, ದೇಹ ಹಮ್ಮಳಿಯಿತ್ತು.
ತಾನು ತಾನಾಗಿ ಬೆಳಗಿನೊಳಗೋಲಾಡಿ
ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.
ಲಿಂ. ವ. ಪು. ೨೦, ವ. ೬೯.
೩. ಲಿಂ. ವ. ಪು. ೨೧, ವ. ೭೧.

ನನ್ನ ನಿಮ್ಮ ಮನೆ ತುಂಬಿದ ಮನೆ. ಧನ ಧಾನ್ಯ ಹೆಂಡಿರು ಮಕ್ಕಳು ದನ ಕರು ತಕ್ಕಡಿ ಪುಸ್ತಕ ಮೇಜು ಖುರ್ಚಿಯಿಂದ ನಮ್ಮ ಕಲ್ಲು ಮಣ್ಣಿನ ಮನೆ ತುಂಬಿದೆ. ಇಲ್ಲಿ 'ನಲ್ಲ' ಕಾಲಿಡಲು ಇಂಬಿಲ್ಲ. ನಮ್ಮ ದೇಹದ ಮನೆ? ಅವೂ ತುಂಬಿ 'ಭರ್ತಿ' ಆಗಿವೆ.—ವಿಷಯ ಸಂಸಾರ, ಕಾಮ ಕ್ರೋಧ ಆಸೆ ರೋಷ ಚಿಂತೆ ಸಂತಾಪದಿಂದ. ಈ ತುಂಬಿದ ಮನೆಯಲ್ಲಿ 'ನಲ್ಲ' ಕಾಲಿಡಲಿಕ್ಕೆ ಅಲ್ಲ, ಕಣ್ಣಿಟ್ಟು ನೋಡಲಿಕ್ಕೂ ಇಂಬಿಲ್ಲ. ಈ ತುಂಬಿದ ಮನೆಗೆ ಕಿಚ್ಚನಿಟ್ಟರೆ ಕಾಯದ ಗುಣ ಧರ್ಮ ಕರ್ಮ, ಪ್ರಾಣನ ಪ್ರಕೃತಿಯೆಲ್ಲ ಭಾವದ ಭ್ರಮೆಯೆಲ್ಲ ಸುಟ್ಟು ಬೆಂದು ನಷ್ಟವಾಗಿ ನಿಷ್ಪತ್ತಿಯಾಗಿ ಹೋದವು. ಈ ಮನೆಯಲ್ಲಿ ನೆನಹು ಸತ್ತು ಹೋಗಿದೆ, ಜೀವ ತಾನೆಂಬ ಭಾವದ ಭ್ರಾಂತಿ ಸುಟ್ಟು ಹೋಗಿದೆ. ತನ್ನ ತಾನರಿಯಬೇಕೆಂಬ ಅರಿವೂ ಕರಿಗೊಂಡು ನಿಂತಿದೆ. ತಾನು ದೇವನೆಂಬ, ಸತ್ತು ಚಿತ್ತು ಆನಂದವೆಂಬ, ಪಂಚಮುಖ ದಶಭುಜ ಎಂಬ, ಮಿಂಚಿನ ಬೆಳಗು ತಿಂಗಳ ಬೆಳಗೆಂಬ ಕುರುಹು ಏನೂ ಉಳಿಯದಂತೆ ಎಲ್ಲ ಸುಟ್ಟು ಧ್ವಂಸವಾಗಿ ಹೋಗಿದೆ. ಎಲ್ಲ ಸುಟ್ಟು ನಷ್ಟವಾದ ಬಳಿಕ ಬೇರೆ ಗತಿಯಿಲ್ಲ, ಬೇರೆ ಮತಿಯಿಲ್ಲ. ಬೆಳಗೇ ಗತಿ, ಅದೇ ಮತಿ.[೧] ಮನೆಯ ಮಾನವನೆಲ್ಲ ಕಿಚ್ಚುಗೂಡಿದ ಮೇಲೆ ಅಲ್ಲಿ ಮಾನವನಿಲ್ಲ, ಮನೆ ಇದೆ. ಆ ಮನೆ ಮಹಾಮನೆ; ನನ್ನ ನಿಮ್ಮ ಮರೆಯಲ್ಲಿ, ಭೂಮಿ ಆಕಾಶದ ಮರೆಯಲ್ಲಿ ಮೇರೆಗಳೆದು ನಿಂದಿರುವ ಮಹಾಮನೆ. ಅದೇ ಬಟ್ಟಬರಿಯ ಮನೆ. ಈ ಮನೆಯನ್ನು ಶರಣ ತೆರವು ಮಾಡಿ ಕೊಟ್ಟಿರುವನೆಂದೇ ನೆನಹಿನ ನಲ್ಲ—ಉರಿಲಿಂಗದೇವ ತೆರಹಿಲ್ಲದೆ ಬೆಳಗುತ್ತಿದ್ದಾನೆ ಇಲ್ಲಿ. ಈ ಉರಿದೇವ ತೋರಿ ಅಡಗುವ ಭಂಗ ಹಿಂಗಿ, ಹಿಂದಾಗಿ ಹೋಗಿದೆ. ಈ ಬಟ್ಟ ಬರಿಯ ಮನೆಯಲ್ಲಿ ಉರಿಲಿಂಗಪತಿ ಶರಣಸತಿಯನಪ್ಪಿದರೆ......!

ಶರಣಸತಿ ಲಿಂಗಪತಿಯನ್ನು ನೆರೆವ ಸವಿಸುಖ ಶರಣನಿಗೆ ಗೊತ್ತು, ಲಿಂಗಕ್ಕೆ ಗೊತ್ತು. ಸತಿಪತಿಗಳ ಸಂಯೋಗ ಸಂಬಂಧ ಸಂಗ ಸಮರತಿ ಸಮರಸ ಸಂಭೋಗ ಸಮ ಸುಖ ಸಮಾನಂದ ಮದುವೆಯಾಗದ ಹೆಣ್ಣು ಗಂಡಿಗೇನು ಗೊತ್ತು? ಮದುವೆಯಾಗಿದ್ದರೂ ಅಸಜ್ಜನ ಸತಿ-ಪತಿಗಳೆತ್ತ ಬಲ್ಲರು ಈ ಶಿವ ಮಂಗಲವಾದ ದಿವ್ಯಶೋಭನವನ್ನು? ಈ ದಿವ್ಯಸಮ್ಮಿಲನದಲ್ಲಿ ಸತಿಯ ಅಂಗವೆಲ್ಲಾ ನಷ್ಟವಾಗಿದೆ; ಪತಿಯನ್ನು ನೋಡಿದರೆ

---

೧. ಐಕ್ಯಸ್ಥಲದಲ್ಲಿ ಬರುವ 'ಗತಿ ಮತಿ'ಯ ರೂಪವನ್ನು ನೋಡಿ:

> ಸೊಪ್ಪಡಗಿದ ಸುಮ್ಮಾನಿಗಳವರಲ್ಲಿ ಗತಿಯನರಸುವರೆ?
> ಅವರಲ್ಲಿ ಮತಿಯನರಸುವರೆ,—ಅಂಗವೆಲ್ಲ ನಷ್ಟವಾಗಿ, ಲಿಂಗಲೀಯವಾದವರಲ್ಲಿ?
> ಗತಿಯನರಸುವರೆ, ಮತಿಯನರಸುವರೆ, ಗುಹೇಶ್ವರನೆಂಬ ನಿಜ ನಿಂದವರಲ್ಲಿ?

ಪ್ರಭುದೇವರ ಈ ವಚನದ ಟೀಕನ್ನೂ ಅವಶ್ಯ ನೋಡಿ:

> ತನುವಿನ ಮರವೆ, ಮನದ ವ್ಯಾಕುಳವಳಿದು, ನಿಜತತ್ವಸ್ವರೂಪ ತಾನೆಯೆಂದರಿದ ಮಹಾ ಲಿಂಗೈಕ್ಯನು ತನ್ನಲ್ಲಿ ತಾನೆ ವಿಶ್ರಾಂತಿಯನೆಯ್ದಿಪ್ಪನಾಗಿ, ಆ ಶರಣನಲ್ಲಿ ಆವ ಗುಣದ ಕರ್ಮಂಗಳನು ಅರಸಿ ನೋಡಿಹೆನೆಂದರೆ ಕಾಣಬಾರದು . . .

ಪ್ರ. ವ. ಪು. ೩೨೯, ವ. ೭೯ ಮತ್ತು ಟೀಕು.

'ರೂಹಿಲ್ಲದ ಚೆಲುವ'ನಾತ. ಈ ದಿವ್ಯಮಿಲನದ ಶೃಂಗಾರವನ್ನು ನಿಜಗುಣ ಶಿವಯೋಗಿಗಳು ಹೀಗೆ ನುಡಿಸುತ್ತಾರೆ ಶಬ್ದದಲ್ಲಿ:

ಸತಿ ಪತಿಗಳಿವರ ಸಮರತಿ ಸುಖದ ಬಾಳುವೆಗೆ
ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ಪಲ್ಲವಿ

ಕಂಗಳೂರಿನ ಸೋಮ ಸೂರ್ಯವೀಧಿಯ ನಡುವೆ
ಸಿಂಗರದ ನೀಲದರಮನೆಯ ಮಧ್ಯದೊಳು
ರಂಗುವೆಳಗೆಸೆವ ಸೆಜ್ಜೆಯ ಶಕುನಿಮಂಚದೆಡೆ
ಗಂಗವಿಸಿ ಬಂದು ಭರದೊಳು ಜವಳಿಗೊಂಡು ೧

ನಿರಿ ಸಡಿಲುತಿರೆ ತಾನೆ ತೊಟ್ಟ ಕಂಚುಕಗಳೆಯೆ
ನೆರೆ ತವಕವದರಿಂದೆ ಮುಂದುವರಿಯೆ
ಮುರಿದೋಡೆ ಲಜ್ಜೆ ಗಾಢಾಲಿಂಗನದ ಸೊಗಸು
ದೊರೆಯೊಳಾಳುತ್ತೆ ಸವಿಗಲೆಯೊಳೇಳುತ್ತೆ ೨

ಬೆರಸಿ ಬೇರೆನಿಸದೆರಡಾಲಿಕಲ್ಲುಗಳೇಕ,
ಸುರಸವಾದಂತೆ ಪತಿಶಂಭುಲಿಂಗ
ಶರಣಸತಿಯುಳ ಕೂಡಿ ಪರತರಾನಂದದೊಳು
ಪರವಶವನ್ನೈದಿಹುದನುಮಿಸಲು ಬಹುದೇ ೩[೧]

ಶರಣ-ಶಂಭುಲಿಂಗದ ಈ ಸಾಮರಸ್ಯ ನಡೆವುದು ತನ್ನೊಳಗೆಯೆ. ಇಲ್ಲಿ ಸತಿ ಹೊರಗಿನವಳಲ್ಲ. ಪತಿಯೂ ಮನೆಯೊಳಗಿನ ಸಂಬಂಧ. ಒಳಗಿನ ಗಂಡ ಒಳಗಿನ ಹೆಂಡತಿ. ಇಲ್ಲಿ ಗಂಡ ಬೇರಲ್ಲ, ಹೆಂಡತಿ ಬೇರಲ್ಲ. ಒಂದೇ ಸಂಬಂಧ.

ಅದು ಹೇಗೆ ಎಂದು ನೀವು ಕೇಳಬಹುದು. ನಾವು ತಿಳಿದುಕೊಂಡಂತೆ ಮತ್ತು ನಾವು ನೋಡುವಂತೆ ಸತಿ ಪತಿ ಎರಡು ಮಾನವಪ್ರಾಣಿಗಳು. 'ಮೊಲೆ ಮುಡಿ' ಇದ್ದ ಪ್ರಾಣಿ ಹೆಣ್ಣು; 'ಗಡ್ಡ ಮೀಸೆ' ಇದ್ದ ಪ್ರಾಣಿ ಗಂಡು. ಧರ್ಮ, ಸಂಪ್ರದಾಯಕ್ಕೆ ಅನುಗುಣವಾಗಿ ಒಂದಕ್ಕೊಂದು ಗಂಟು ಹಾಕಿದರೆ, ಅದೇ ಲಗ್ನದ ಸಂಬಂಧ. ಇದು ಎರಡರ ಸಂಬಂಧ. 'ಸತಿ-ಪತಿಭಾವ', 'ದಾಂಪತ್ಯ', 'ಸಂಗ', 'ಸಮರಸ' ಎಂಬ ಶಬ್ದಗಳನ್ನು ನಾವು ಕೇಳಿದೊಡನೆ ಎರಡು ಪ್ರಾಣಿಗಳು – ಒಂದು ಗಂಡು ಮತ್ತೊಂದು ಹೆಣ್ಣು – ನಮ್ಮ ಮನದ ಮುಂದೆ ಬಂದು ನಿಲ್ಲುತ್ತವೆ. ಇದು ಸ್ವಾಭಾವಿಕ. ಆದರೆ ಈ ಎರಡು ಒಂದರಲ್ಲಿಯೆ ಗಂಡುಹೆಣ್ಣಾಗಿ ತೋರುವ ಸಂಭವವಿದೆಯೇ, ಅರ್ಧನಾರೀಶ್ವರನಂತೆ? ಅಥವಾ ಒಂದೇ ವಸ್ತು ಪ್ರಾಣಿಯಲ್ಲಿ ಗಂಡು ಹೆಣ್ಣಿನ ಗುಣ ಧರ್ಮಗಳು ತೋರಬಹುದೇ? ಅದೋ ನೋಡಿ ಬೆಳುದಿಂಗಳು. ಅದು ತಿಂಗಳ ಬೆಳಗು, ಅಂದರೆ ಚಂದ್ರಮನ ಚಂದ್ರಿಕೆ. ಇಲ್ಲಿ ಚಂದ್ರಮ ಗಂಡು ಚಂದ್ರಿಕೆ ಹೆಣ್ಣು. ಅದರಂತೆ ರತ್ನ ಗಂಡು, ರತ್ನದ ಕಾಂತಿ

೧. ವೇ. ಗ್ರಂ. ಪು. ೬೬. ಕೈ. ಪ. ಬೊಂ. ಪ್ರ. ಸ್ಥ. ಪದ. ೩೮.

ಹೆಣ್ಣು, ನಾನು ಗಂಡು ನನ್ನ ಶಕ್ತಿ ಹೆಣ್ಣು. ಇದೆಲ್ಲ ಅಲಂಕಾರದ ಭಾಷೆ ಎಂದು ನೀವು ಹೇಳಬಹುದು. ನಮ್ಮ ಅನುಭವ ಭಾವ ಬುದ್ಧಿಗೆ ವ್ಯವಹಾರದ ಭಾಷೆ ಸಾಲದಿದ್ದರೆ ಭಾಷೆಯನ್ನು ಯಾವುದೇ ರೀತಿಯಲ್ಲಾಗಲಿ ಹಿಗ್ಗಿಸಿ ಆಳ ಅಗಲ ಎತ್ತರಮಾಡಲೇ ಬೇಕಲ್ಲವೇ? ಭಾಷೆಯ ಬಡತನವನ್ನು ಹೋಗಲಾಡಿಸಬೇಕಲ್ಲವೇ?

ಪ್ರತಿಯೊಂದು ಪ್ರಾಣಿಗೆ ಪ್ರಾಣವೇ ಪತಿ, ಪುರುಷ; ಅದರ ದೇಹವೆ ಆ ಪ್ರಾಣಕ್ಕೆ ಸತಿ, ಸ್ತ್ರೀ ಎಂದು ಹೇಳಿದರೆ ನೀವು ನಗಬಹುದಲ್ಲವೇ? ದೇಹ ಸತಿ, ಪ್ರಾಣ ಪುರುಷ – ಈ ಕಲ್ಪನೆಯಲ್ಲಿ ದೇಹ ಪ್ರಾಣಗಳ ಯಾವ ರಸಸಂಬಂಧ ಧ್ವನಿಗೊಳ್ಳುತ್ತಿದೆ ಎಂಬುದನ್ನು ಸ್ವಲ್ಪ ಮೌನವಾಗಿ ನಿದಿಧ್ಯಾಸ ಮಾಡಿ ನೋಡಿರಿ. ಪ್ರಾಣಪುರುಷನಲ್ಲಿ ನನ್ನ ಅಂಗಾಂಗದ ಪ್ರೀತಿ, ಭಕ್ತಿ; ಪ್ರಾಣವಂತ ಪ್ರೀತಿ, ಭಕ್ತಿ. ದೇಹ 'ನಿಮಿಷಾರ್ಧವೆಡೆಬಿಡದೆ' ತನ್ನ ಸರ್ವ ಸಮರ್ಪಣ ಮಾಡುತ್ತಿದೆ ತನ್ನ ಪುರುಷನಿಗೆ. ಈ ಪುರುಷ ತನ್ನ ಚೈತನ್ಯಪ್ರಸಾದವನ್ನು ನಿತ್ಯ ನಿರಂತರ ನೀಡುತ್ತಿದ್ದಾನೆ ತನ್ನ ಅಂಗನೆಯಾದ ಅಂಗಕ್ಕೆ. ಈ ಪ್ರಾಣಪುರುಷನಿಗೆ ಮತ್ತೆ ಗಂಡ, ಆತನೇ ಅರಿವಿನ ಭಾವ—ಜೀವಾತ್ಮ. ಇಲ್ಲಿ ಜೀವಾತ್ಮನೆ ಗಂಡ, ಪ್ರಾಣ ಕರಣ ದೇಹಾದಿಗಳೆ ಹೆಂಡತಿ. ಇಲ್ಲಿಯ ಸಂಬಂಧ ಮತ್ತಷ್ಟು ಗಾಢ, ಸೂಕ್ಷ್ಮ; ಹೆಚ್ಚು ವಿಸ್ತಾರ ಸಂಬಂಧ. ದೇಹ ಪ್ರಾಣಕ್ಕೆ ಪ್ರಾಣನಾಥನಾದ ಜೀವಾತ್ಮನ ಅಂತರಂಗದಲ್ಲಿ ಮತ್ತೆ ನಿಗೂಢವಾಗಿ ಸನ್ನಿಹಿತವಾಗಿರುವ 'ಉರಿಲಿಂಗದೇವ' ಜೀವಾತ್ಮನೆಂಬ ಸತಿಗೆ ತಾನೆ ಪತಿ. ಜೀವಾತ್ಮನ ಸರ್ವವಿಧವಾದ ವ್ಯಾಪಾರವೆಲ್ಲ ಉರಿಲಿಂಗದೇವನಿಗಾಗಿಯೆ. ದೇವನ ಅರಿವಿಲ್ಲದ ಆತ್ಮನ ವ್ಯಾಪಾರ ಮರವೆ, ಗಂಡನಿಲ್ಲದ ಬಾಳುವೆ. ಆ ಅರಿವು ಮಯವಾಗಿರುವ ಜೀವನ ವ್ಯಾಪಾರ, ಅದೇ ಸಮ್ಯಗ್‌ಜ್ಞಾನದ ಸಮರಸಜೀವನ, ಅದೇ ಶರಣಸತಿ ಲಿಂಗಪತಿಯ ಬದುಕು, ಬಾಳುವೆ.

ಜೀವಾತ್ಮ ಅಥವಾ ಜೀವಭಾವ ದೇಹೇಂದ್ರಿಯ ಕರಣಾದಿಗಳ ಸಂಗ ಮಾಡಿ ನಡೆಸಿರುವ ಬಾಳುವೆ, ಜೀವನ ದೇಹಸಂಸಾರ. ಅದೇ ಆತ್ಮ ಮುಗಿಲ ಮರೆಯ ಮಿಂಚಿನ ಬಯಲುಗಡಲಂತಿರುವ ಲಿಂಗದೇವನಿಗೆ ಭೃತ್ಯನಾಗಿ ಬಂಟನಾಗಿ ತೊತ್ತಾಗಿ, ಭಾಂಡವಾಗಿ ಭಾಜನವಾಗಿ, ಅಂಗವಾಗಿ ಅಂಗನೆಯಾಗಿ ಸತಿಯಾಗಿ ಶಕ್ತಿಯಾಗಿ ಸಂಬಂಧ ಸಂಗವ ಮಾಡಿದರೆ, ಈ ಬಾಳುವೆ ಲಿಂಗದೇವನ ಬಾಳುವೆ. ನಿಜವಾಗಿ ನೋಡಿದರೆ ಈ ಸಂಬಂಧ, ಈ ಸಂಗ ಎಂದಿಗೂ ವಿಯೋಗವಿಲ್ಲದ ಸಂಬಂಧ, ಎಲ್ಲಿಯೂ ಅಗಲಬಾರದ ಸಂಬಂಧ. ವಿಶ್ವಚೈತನ್ಯ (Cosmic Energy) ಮತ್ತು ಯಾವುದೇ ಒಂದು ವಸ್ತುವಿಗೆ, ಕಣಕ್ಕೆ ಸಂಬಂಧ ಯಾವ ರೀತಿಯದು? ಕಣ ವಿಶ್ವಚೈತನ್ಯವನ್ನು 'ಕೂಡಲಿಲ್ಲ, ಅಗಲಲಿಲ್ಲ'. ಆದರೂ ಮಾನವಬುದ್ಧಿಯ ಅಲ್ಪಶಕ್ತಿ, ಭಿನ್ನಭಿನ್ನ ಮಾಡಿ ಅಗಲಿಸಿ ಕೂಡಿಸುತ್ತಿದೆ. ಇದು ಬುದ್ಧಿಯ ಕೃತಕ, ವಿಶ್ವದ ಸಹಜ ಭಾವವಲ್ಲ. ಅದರಂತೆ ನಾನೆಂಬ ಅರಿವಿನ ಮಾನವಾತ್ಮ ಮತ್ತು ಅದರಲ್ಲಿ 'ಪರಂ ಗೂಢಂ ಶರೀರಸ್ಥಂ' ಆದ ಉರಿಲಿಂಗ—ಇವರಿಗೆ ಎಂದೆಂದೂ ಎಲ್ಲೆಲ್ಲೂ ಅಗಲಿಕೆ ಎಂಬುದಿಲ್ಲ. ಅಂತೆಯೆ ಕೂಡಬೇಕೆಂಬುದೂ ಇಲ್ಲ. ಆದರೆ ಮಾನವನ ಅರಿವಿಗೆ ಮತ್ತು ಅಲ್ಲಿಯೆ ನಿಹಿತವಾಗಿರುವ ಉರಿಗೆ ಮರವೆ ಅಡ್ಡ ಬಿದ್ದಿದೆ. ಅಡ್ಡಲಾದ ಈ ಮುಸುಕನ್ನು — ತನ್ನ ಮುಸುಕನ್ನು ಉರಿನಲ್ಲನ ಮುಸುಕನ್ನು

ಬಿನ್ನಾಣದಿಂದ ಓರೆಮಾಡಿ ನೋಡಿದರೆ, ಈ ನಲ್ಲ 'ನನ್ನ ನಲ್ಲ'. ಅಷ್ಟೇ ಅಲ್ಲ, ವಿಶ್ವ ಬ್ರಹ್ಮಾಂಡದ ನಲ್ಲ. ಈ ನಲ್ಲ ಈ ವಲ್ಲಭ ರಮಣ ನಾಥ ಕಾಂತ ಪ್ರಿಯನಿಗೆ, ಈ ವಿಶ್ವ ಹೃದಯೇಶ್ವರನಿಗೆ ಗಂಡು ಹೆಣ್ಣು ನಪ್ಪು ಎನ್ನದೆ ಜಡ ಚೈತನ್ಯವೆನ್ನದೆ ಪಕ್ಷಿಜಾತಿ ವೃಕ್ಷ ಜಾತಿ ಎನ್ನದೆ, ಅಣು ಮೊದಲು ಆಕಾಶ ಅಂತವಾಗಿ ಎಲ್ಲಾ ಎಲ್ಲರು ಎಲ್ಲಾ ಎಲ್ಲವು ಸತಿಯರೇ. ಈ ಎಲ್ಲಾ ಚಿತ್‌ಶಕ್ತಿಯ ಸಂತತಿ, ಈ ಶಕ್ತಿ ಪರಶಿವಲಿಂಗದ ಪರಾಶಕ್ತಿ. ಈ ರೀತಿ ನೋಡಿದರೆ ವಿಶ್ವವೆ ಸತಿ ಲಿಂಗವೆ ವಿಶ್ವಪತಿ. ಶರಣಸತಿಯ ಸಂಗ ಈ ವಿಶ್ವಪತಿ ಯೊಡನೆ ಮಾಡುವ ಸಂಗವೇ. ಇಲ್ಲಿ ಉರಿಲಿಂಗದೇವ ಬಂದು ನುಡಿವ ನುಡಿಯನ್ನು ನೋಡಿ:

> ಆರ ಪರಿಯಲ್ಲ ನಮ್ಮ ನಲ್ಲನು !
> ವಿಶ್ವವೆಲ್ಲ ಸತಿಯರು, ಸೋಜಿಗದ ಪುರುಷನು !
> ಅವರವರ ಪರಿಯಲ್ಲಿ ಅವರನೆ ನೆರೆವನು.
> ಅವರವರಿಗೆ ಅವರಂತೆ ಸುಖಮಯನು ಕೇಳಾ ಕೆಳದಿ.
> ಆರ ಪರಿಯಲ್ಲ,—ಎನ್ನನಗಲದ ಪರಿಯ ಕೇಳಾ ಕೆಳದಿ.
> ನೀನೊಳ್ಳಿದಳಾದರೆ ಮಹಾಮಂತ್ರವ ಜಪಿಸು.
> ನಿನ್ನನಗಲ, ನಿನ್ನಾಣೆ, ಉರಿಲಿಂಗದೇವ ತನ್ನಾಣೆ ಕೆಳದಿ.[೧]

ವಿಶ್ವವೆಲ್ಲ ಸತಿಯರು! ಅವರಿಗೆಲ್ಲ ಸೋಜಿಗದ ಪುರುಷನೊಬ್ಬ ಉರಿಲಿಂಗದೇವ! ಆಯಾ ಸತಿಯರನ್ನು ಅವರವರ ಪರಿಯಲ್ಲಿ ನೆರೆವ ಪುರುಷ, ಅವರವರಿಗವರವರ ಪರಿಯ ಸುಖವ ಸುರಿವ ಪುರುಷ!

ಇಂಥ ವಿಶ್ವರಮಣನನ್ನು ನೋಡಿ ಕಂಡು ಕೇಳಿ ಸೋಂಕಿ ಆಘ್ರಾಣಿಸಿ ರುಚಿಸಿ, ಆತನೊಡನೆ ಸಮರಸ ಸಂಗವ ಮಾಡುವ ಸತಿ ಶರಣ. ಈ ಸಂಗ ಸರ್ವಾಂಗಸಂಗ, ಅವಿರಳಸಂಗ, ಸತಿಯ ರೋಮ ರೋಮದ ಕೂಪಕೂಪವೆಲ್ಲ ಉರಿಲಿಂಗಮಯ ವಾಗುವ ಸಂಗ.

> ನಲ್ಲನ ರೂಪೆನ್ನ ನೇತ್ರ ತುಂಬಿತ್ತು. ನಲ್ಲನ ನುಡಿ ಎನ್ನ ಶ್ರೋತ್ರ ತುಂಬಿತ್ತು.
> ನಲ್ಲನ ಸುಗಂಧವೆನ್ನ ನಾಸಿಕ ತುಂಬಿತ್ತು. ನಲ್ಲನ ಚುಂಬನವೆನ್ನ ಜಿಹ್ವೆ ತುಂಬಿತ್ತು.
> ನಲ್ಲನ ಆಲಿಂಗನವೆನ್ನ ಸರ್ವಾಂಗ ತುಂಬಿತ್ತು. ನಲ್ಲನ ಪ್ರೇಮವೆನ್ನ ಮನ ತುಂಬಿತ್ತು.
> ನಲ್ಲನ ಅಂತರಂಗ ಬಹಿರಂಗದಲ್ಲಿ ನೆರೆದು ಸುಖಿಯಾದೆ,—ಉರಿಲಿಂಗ ದೇವನ.[೨]

ಸತಿಯ ಸರ್ವಾಂಗ ಉರಿಲಿಂಗದೇವನ ಸರ್ವಾಂಗಾಲಿಂಗನದಿಂದ ತುಂಬಿ, ಲಿಂಗಾಂಗಸುಖ ವನ್ನು ಹೊರಸೂಸುತ್ತಿದೆ. ಸತಿಯೆಲ್ಲ ಪತಿಮಯ, ಪತಿಯೆಲ್ಲ ಸತಿಮಯ. ಅಂತೆಯೆ

---

೧. ಶಿ. ಸು. ವ. ಭಾ. ೨. ಪು. ೯೪, ವ. ೩೮.
೨. ಅದೇ, ,, ,, ಪು. ೯೨, ವ. ೨೬.

'ಶರಣಭರಿತ ಲಿಂಗ, ಲಿಂಗಭರಿತ ಶರಣ'[೧]—ಎಂದು ಶರಣ ತನ್ನ ಅನುಭವವನ್ನು ಹಾಡಿ ಹರಸುವುದು. ಈ ಸತಿ-ಪತಿಗಳ ಸಂಗ, ಸತಿಯನ್ನು ಪತಿಗೆ ಅಂಗವಾಗಿಸುವ ಮಟ್ಟ ವನ್ನು ಮುಟ್ಟುತ್ತದೆ. ಶರಣ ಲಿಂಗದ ಅಂಗ, ಭಕ್ತಕಾಯ = ಮಮಕಾಯ. ಗಂಡ ಹೆಂಡತಿಯ ಬೇಟ ಕೂಟಕ್ಕೆ ಇನ್ನೂ ಮೇರೆ, ಅವಧಿಯುಂಟೇ?

ಕಾಯಕ್ಕೆ ಕಾಯವಾಗಿ, ಪ್ರಾಣಕ್ಕೆ ಪ್ರಾಣವಾಗಿ.
ಮನಕ್ಕೆ ಮನವಾಗಿ ನೆರೆದ ನೋಡೆಲಗವ್ವಾ !
ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿಪೆ ಕೆಳದಿ?
ಮಹಾಸುಖವ ನಾನೇನೆಂಬೆನೆಲಗೆ?
ನಲ್ಲನ ನೋಟದ ಕೂಟದನುವನೇನೆಂದುಪಮಿಸುವೆನವ್ವಾ?
ಮಹಾಘನವ ನಾನು ತಾನೆಂದು ವಿವರಿಸಬಾರದಂತೆ ನೆರೆದನೆನ್ನನುರಿಲಿಂಗದೇವನು.[೨]

ಶರಣನ ಕಾಯ ಅಂಗ. ಇದೇ ತ್ಯಾಗಾಂಗ. ಈ ಕಾಯದ ಕಾಯವೆ ಲಿಂಗ. ಅದೇ ಕ್ರಿಯಾ ಲಿಂಗ, ಇಷ್ಟಲಿಂಗ. ಇಲ್ಲಿ ಲಿಂಗ ಮತ್ತು ಅಂಗದ ಸಾಮರಸ್ಯ. ಶರಣನ ಪ್ರಾಣ ಅಂಗ. ಅದೇ ಭೋಗಾಂಗ. ಈ ಪ್ರಾಣದ ಪ್ರಾಣವೆ ಪ್ರಾಣಲಿಂಗ. ಇಲ್ಲಿ ಪ್ರಾಣ ಮತ್ತು ಲಿಂಗದ ಸಾಮರಸ್ಯ. ಶರಣನ ಮನ ಅದೂ ಅಂಗ, ಅದೇ ಯೋಗಾಂಗ. ಈ ಮನದ ಮನ ಭಾವಲಿಂಗ. ಇಲ್ಲಿಯೂ ಲಿಂಗಾಂಗ ಸಾಮರಸ್ಯ. ಹೀಗೆ ಶರಣನ ತ್ರಿವಿಧಾಂಗ ತ್ರಿವಿಧ ಲಿಂಗದಲ್ಲಿ ನೆರೆದರೆ, ತ್ರಿವಿಧ ಲಿಂಗ ತ್ರಿವಿಧ ಅಂಗದಲ್ಲಿ ಬೆರೆದರೆ ಮಹಾಸುಖ. ಶರಣನ ಸರ್ವಾಂಗ ಲಿಂಗಮಯವಾದ ಈ ಮಹಾಸುಖಕ್ಕೆ ಉಪಮೆ ಇಲ್ಲ, ಅಲಂಕಾರ ಇಲ್ಲ. ಪರಮಾನಂದವಾರಾಶಿಯಲ್ಲಿ ಮುಳುಗಿ ಓಲಾಡುವಾಗ, ಗಂಡನಿಗೆ ಗಂಡ ಗೊತ್ತಿಲ್ಲ, ಹೆಂಡತಿಗೆ ಹೆಂಡತಿ ಗೊತ್ತಿಲ್ಲ. ಈತ ಆಕೆ ಎಂದು ವಿವರಿಸಿ ನೋಡಲು ಏನೂ ಇಂಬಿಲ್ಲ.

ಶರಣಸತಿ ಲಿಂಗಪತಿಯ ಸಂಯೋಗ, ಸಂಭೋಗದ ಸಮರತಿಯ ಸಾಮರಸ್ಯದ ಈ ಪ್ರಯೋಗದಲ್ಲಿ ತೋರುವ ವಿಶಿಷ್ಟಾನುಭವವನ್ನು ದಿವ್ಯ ಪ್ರಯೋಗಶಾಲೆಯಾದ ಪ್ರಭುದೇವರಲ್ಲಿ ಇನ್ನೂ ಸ್ವಲ್ಪ ಮುಂದೆ ಬಂದು ನೋಡಿರಿ:

---

೧. ನೋಡಿರಿ:

ಜಗಭರಿತ ಶಿವನೆಂದು ನೆಗಳಿ ಹೊಗಳುತ್ತಲಿವೆ ವೇದಂಗಳೆಲ್ಲಾ.
ಏಕಮೇವಾದ್ವಿತೀಯನೆಂದು ಹೊಗಳುತ್ತಲಿವೆ ವೇದಂಗಳೆಲ್ಲಾ.
ವಿಶ್ವತೋ ಪಾದ ಪಾಣಿ, ವಿಶ್ವತೋ ನೇತ್ರ ಮುಖ,
ವಿಶ್ವತಃ ಶ್ರೋತ್ರನೆಂದು ಹೊಗಳುತ್ತಿವೆ ವೇದಂಗಳೆಲ್ಲಾ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ಶರಣಭರಿತ ಲಿಂಗ, ಲಿಂಗಭರಿತ ಶರಣನೆಂದು
ಹೊಗಳಲರಿಯದೆ ನಿಂದವು ವೇದಂಗಳೆಲ್ಲಾ !

ಸ್ವ. ಸಿ. ವ. ಪ್ರ. [illegible]. ವ. [illegible].

೨. ಶಿ. ಸಂ. ವ. ಭಾ. ೨, ಪು. ೯೩, ವ. ೩೨.

ಶತಪತ್ರ ಶತಲಿಪಿಯು ಶತಸಹಸ್ರದ ದಳವು
ಶತಕೋಟಿ ಸೋಮಸೂರ್ಯಪ್ರಕಾಶ ।
ಶತಪತ್ರವನು ಮೆಟ್ಟಿ ಹತಮಾಡಿ ಗತಿಗೆಡಿಸಿ
ಅತಿಶಯದ ಮಣಿಮಂಟಪದೊಳು ನಿಂದೆ ॥[೧]

ಹೀಗೆಂದರೇನು? ಇದರ ಅರ್ಥ, ಅರ್ಥದ ಮರೆಯ ಅನುಭಾವವೆಂಥದು? ಈ ಪ್ರಶ್ನೆ ಮುಂದಿಗೆ. ಎತ್ತುವ ಶಕ್ತಿ ನನಗಿಲ್ಲ. ಅನುಭವ ಅನುಭವಿಸಿದವರಿಗೆ ಗೊತ್ತು. ನಾನು ನಿಮ್ಮಂತೆ ರಕ್ತ ಮಾಂಸದ ಮಾನವಪ್ರಾಣಿ. ಇಂಥ ಪ್ರಶ್ನೆಗೆ ಉತ್ತರ ನನ್ನಲ್ಲಿ ಎಳ್ಳು ಕಾಳಷ್ಟಾದರೂ ಇಲ್ಲ. ಅಲ್ಲಮ ಪ್ರಭುದೇವರನ್ನು ಈ ಪದ್ಯದಲ್ಲಿ ಕಂಡ ಕಲ್ಲಮಠದ ಪ್ರಭುದೇವರನ್ನು ಕೇಳಿ. ಅದೋ ನೋಡಿ ಅವರ ಉತ್ತರದ ಉಜ್ವಲ ಪ್ರಕಾಶವನ್ನು:

'ಸಮಸ್ತ ದೇಹಿಗಳ ಶಿರದಲ್ಲಿರುವ ಕಮಲವು ನೂರು ಅಕ್ಷರವುಳ್ಳದ್ದಾಗಿರುವ ನೂರುದಳ ಮತ್ತು ಸಾವಿರದಳ ಕೂಡಿ ಇರುತ್ತದೆ. ಅಲ್ಲಿ ಕೋಟಿ ಚಂದ್ರಪ್ರಕಾಶ ವನುಳ್ಳ ಚಿತ್‌ಪ್ರಭಾಕಳೆಯು ಇರುತ್ತದೆ. ಪಿಂಡಾಂಡ ಬ್ರಹ್ಮಾಂಡಗಳನು ಒಳ ಕೊಂಡಿರುವ ಈ ಅಖಂಡ ಚಿತ್‌ಪ್ರಭಾಬೆಳಗೇ ಶರಣನ ಸರ್ವಾಂಗದಲ್ಲಿ ತುಂಬಿ ದಳ ಕಳೆಗಳ ಬೆಡಗನಡಗಿಸಿ ಮೆಟ್ಟಿ ನಿಂದು ತಾನೇ (ಅಖಂಡ ಚಿತ್‌ಪ್ರಭೆಯೇ) ತೋರುತ್ತದೆ. ಸೂರ್ಯನ ಪ್ರಕಾಶದಲ್ಲಿ ದೀಪದ ಪ್ರಭೆಯನು ಅಳಿವಂತೆ, ಚಿತ್ ಪ್ರಭಾಬೆಳಗಿನೊಳಗೆ ದಳ ಕಳೆಗಳ ಬೆಳಗನು ಅಳಿದು ನೆಲೆಗೆಡಿಸಿ, ಖಂಡಿತವನ್ನು ಅಳಿದು ಅತಿಶಯವಾದ ಆ ಅಖಂಡಚಿತ್‌ಪ್ರಭೆಯ ಚಿದಾಲಯದೊಳಗೆ ಚಿಲ್ಲಿಂಗ ವಾಗಿ ನಾನಿದ್ದೆನು.'[೨]

ಈ ಟೀಕೆಯನ್ನು ನೋಡುವಲ್ಲಿ ಅಲ್ಲಮ ಪ್ರಭುದೇವರ 'ನೆನಹು ಸತ್ತಿತ್ತು. ಭ್ರಾಂತು ಬೆಂದಿತ್ತು......ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗೊಹೇಶ್ವರಾ'–ಎಂಬ ಮಾತಿನಲ್ಲಿಯ ಜ್ಯೋತಿ ಮತ್ತಷ್ಟು ಅತಿಶಯವಾಗಿ ಅಖಂಡವಾಗಿ ಬೆಳಗುತ್ತದೆ. ಪ್ರಾಣಲಿಂಗಿಯ ಚಕ್ರ ದಳ ಕುಳದ ಅನುಭವ ದೀಪದ ಪ್ರಭೆ ಎಂದರೆ, ಶರಣನ ಅನುಭವ ಸೂರ್ಯನದೆಂದು ಹೇಳಬೇಕು. ಆದರೂ ಈ ಉಪಮೆಗಳೆಲ್ಲ ಶಬ್ದದ ಬಡತನಕ್ಕಾಗಿ ಅನಿವಾರ್ಯವಾಗಿ ಬಳಸಿಕೊಳ್ಳಬೇಕಲ್ಲದೆ 'ಅಖಂಡ ಚಿತ್‌ಪ್ರಭಾಬೆಳಗೇ ಶರಣನ ಸರ್ವಾಂಗದಲ್ಲಿ ತುಂಬಿ,' ಮಾನವಹೃದಯ-ಲೋಕೋತ್ತರವಾದ. ಅತಿಶಯವಾದ ಅಖಂಡವಾದ ಅರಿವು-ಬೆಳಗಿನ ಮಹಾಮನೆಯೊಳಗೆ ಶರಣ ಚಿಲ್ಲಿಂಗವಾಗಿ ನಿಂದ ಮಹಾನುಭಾವವನ್ನು, ಯಾವ ಆಕಾಶ ಸಮುದ್ರ ಪರ್ವತ ಸೂರ್ಯ ಚಂದ್ರ ನಕ್ಷತ್ರಾದಿ ಗಳೂ ಬಣ್ಣಿಸಲರಿಯವು. ಇಲ್ಲಿ ಉಪಮೆಗಳೆಲ್ಲ ಹೀನೋಪಮೆಗಳೆ. ನಮ್ಮ ನಿಮ್ಮ ಮನೆಯಲ್ಲಿ ಸಮುದ್ರವನ್ನು, ಆಕಾಶವನ್ನೆಲ್ಲ ತುಂಬಿಟ್ಟುಕೊಳ್ಳುವ ಸಾಹಸ ಈ ಅಲಂಕಾರ ಗಳ ಮಾತು.

---

೧. ಪ್ರ. ಮಂ. ಗೋ. ಪು. ೧೮, ಪ. ೧೧.
೨. ಅದೇ ,, ಪು. ೧೯, ಪ. ೧೧ರ ೧ನೆಯ ಟೀಕೆ.

ಪ್ರಭುದೇವರ 'ಉಪಾಧಿಕ ಮನವು......' ಎಂಬ ಶರಣಸ್ಥಲದ ವಚನವೂ ಶರಣ ಅಖಂಡವಾಗಿ ಅತಿಶಯವಾಗಿ ಅರಿವಾಗಿ ಚಿದ್ಬೆಳಗಾಗಿ ಬೆಳಗುವ ದಿವ್ಯಪ್ರಭೆಯ ದರ್ಶನ ವನ್ನೇ ಬಿತ್ತರಿಸುತ್ತದೆ. ಸೋಪಾಧಿಕವಿರಲಿ ನಿರುಪಾಧಿಕವಿರಲಿ ಮನಸ್ಸು 'ಉಲುಹಡಗಿದ ವೃಕ್ಷದಂತೆ' 'ತೆರೆಗಳೆದ ಕೆರೆಯಂತೆ' ನಿಶ್ಚಲವಾಗಿ ನಿಷ್ಕಂಪವಾಗಿ ನಿಂದಿದೆ, ನಿವಾತ ವಾಗಿದೆ. ನಿಂದಲ್ಲಿ ನಿವಾತವಾಗಿ ಪರಮಾನಂದಭಾವವಾಗಿದೆ. ಈ ಭಾವವು ನಿರ್ಭಾವ ವಾಗಿದೆ. ಈ ನಿರ್ಭಾವದ ಬಿಂದು ಪರಿಪೂರ್ಣ ಪ್ರಕಾಶವಾಗಿದೆ. 'ಇಂತಾಗಲು ಮಹ ಲಿಂಗಪ್ರಭೆ ಆ ಶರಣನ ಸರ್ವಾಂಗದಲ್ಲಿ ತಾನೆಯಾಗಿ ತೊಳಗಿ ಬೆಳಗಿ ಪ್ರಕಾಶಿಸು ತ್ತಿದ್ದುದು......'[೧] ಈ ಅಖಂಡವಾದ ಚಿದ್ಬೆಳಗನ್ನೇ ಕಂಡು ಉಂಡು ಅನುಭವಿಸಿ, ಆ ಬೆಳಗೆ ತಾನಾಗಿ ನಿಂದ ಪ್ರಭುದೇವರು 'ಲಿಂಗದ ಬೆಳಗು ಪ್ರಜ್ವಲಿಸುವುದ ಕಂಡೆನು ಗೊಹೇಶ್ವರಾ !'[೨]–ಎಂದು ಬೆಳಗನ್ನು ನುಡಿದಿದ್ದಾರೆ.

ಎಳ್ಳುಮೊನೆ ಮುಳ್ಳೂರಲು ತೆರಹಿಲ್ಲದಂತೆ ಪರಿಪೂರ್ಣವಾಗಿ, ವಿಶ್ವ ಬ್ರಹ್ಮಾಂಡದ ಭೂತ ವಸ್ತುಜಾತದಿಂದ ಹರಿದು ಕೊರೆಸಿಕೊಂಡು ಖಂಡಿತವಾಗದೆ, ಅಖಂಡವಾಗಿ ಅವಿರಳವಾಗಿ, ಯುಗಜುಗವೆನ್ನದೆ ವಿಶ್ವದ ಉತ್ಪತ್ತಿ ಪ್ರಳಯವೆನ್ನದೆ, 'ಕಾಲಕಾಲ'ವೆನಿಸಿ ನಿತ್ಯನಿರಂತರವಾಗಿ ಯಾರ ಯಾವ ಹಂಗಿಲ್ಲದೆ ನಿರುಪಾಧಿಕವಾಗಿ, ತನ್ನ ಮೀರುವರಾರನೂ ಕಾಣದೆ ನಿರತಿಶಯವಾಗಿ, ಇಪ್ಪತ್ತೈದಿರಲಿ ಐವತ್ತು, ನೂರು ಸಾವಿರವಿರಲಿ, ಪೃಥಿವ್ಯಾದಿ ಅಥವಾ ಹಾಯಡ್ರೊಜನ್ ಆದಿ ಎಲ್ಲ ತತ್ತ್ವಗಳ ಮೈಯಲ್ಲಿ ಒಳಹೊರಗೆ ತೆರಹಿಲ್ಲದೆ ಉರಿವ ಮೊರೆವ ಸುರಿವ ನಿಷ್ಕಂಪ ನಿವಾತ ಜ್ಯೋತಿಯೇ ಸ್ವಯಂಜ್ಯೋತಿ. ಅದೇ ತನ್ನ ತಾನರಿವು ಹಿಂಗದೆ ಬೆಳಗುವ ಸ್ವಯಂಜ್ಞಾನಜ್ಯೋತಿ. ಅದೇ ವಿಶ್ವತೋ ಮುಖ ಆನಂದದ ಸ್ವಯಾನಂದಜ್ಯೋತಿ. ಅದೇ ವಿಶ್ವತೋ ಪಾದ ವಿಶ್ವ ತೋ ಹಸ್ತವಾದ ವಿಶ್ವಚೈತನ್ಯ ತರಂಗರಾಶಿಯ ಮಹಾಮೂಲವಾರಾಶಿ. ವಿಶ್ವಪ್ರಪಂಚ ಜಾಲ ಮೇಲಕ್ಕೆದ್ದು ಮತ್ತೆ ತನ್ನೊಳಗೆ ಮುಳುಗಿಸಿಕೊಳ್ಳುವ ಸದ್ಭಾವ ಮಹಾಸಮುದ್ರ ಇದೇ 'ಅಖಂಡ ಚಿದ್ಬೆಳಗು'. ಈ ಬೆಳಗು ಒಳಹೊರಗೆನ್ನದೆ ಅಖಂಡವಾಗಿ – ತನ್ನ ದೇಹ ವಿಶ್ವದೇಹದಿಂದ ಭಿನ್ನ ಭಿನ್ನವಾಗದೆ – ಬೆಳಗಿದರೆ, ಈ ಬೆಳಗೇ ಶರಣ. ಈ ಅರಿವು ಈ ಆನಂದ ಈ ಚೈತನ್ಯವೇ ಶರಣ. ಈ ಶರಣವಿಸ್ತಾರ ಶರಣ ಬಲ್ಲ. ಶರಣಸತಿಗೆ ಪತಿಯಾದ ಲಿಂಗದೇವ ಬಲ್ಲ. ಪರಮ ಪತಿವ್ರತೆಯ ಸರ್ವಾಂಗದ ಚೆಲುವು ಗಂಡ ಹೆಂಡತಿಯ ಮೊಸಲು.

ಅಖಂಡವಾದ ಚಿದ್ಬೆಳಗೇ ಚಿದಂಗ, ಈ ಚಿದಂಗವೆ ಶರಣ; ಚಿದ್ವಲ್ಲಭನೆ ಚಿಲ್ಲಿಂಗ, ಅದೇ ಸದ್‌ರೂಪ, ಭಾವರೂಪನಾದ ಭಾವಲಿಂಗ. ಶರಣನ ಪ್ರಾಣಚೈತನ್ಯ ಪ್ರಾಣ ಲಿಂಗದಲ್ಲಿ ನೆಲೆಗೊಂಡಿರುವಂತೆ ಶರಣನ ಅರಿವು–ಬೆಳಗು ಭಾವಲಿಂಗದಲ್ಲಿ ನೆಲೆಗೊಂಡು ನಿಂದರೆ, ಆಗ ಶರಣನ ಸ್ವರೂಪವೇನು? ರತ್ನದಲ್ಲಿ ರತ್ನದ ಕಾಂತಿಯನ್ನು ನೆಲೆಯಾಗಿ ನಿಲ್ಲಿಸಿದವರಾರು? ಕಾಂತಿಯನ್ನು ತಂದು ರತ್ನಕ್ಕೆ ಬಂಧಿಸಿದ ಹಗ್ಗವೆಂಥದು? ಅಥವಾ

---

೧. ಪ್ರ. ವ. ಪ್ರ. ೩೨೧, ವ. ೬೪, ಟೀಕು. ೨. ಶೂ. ಸಂ. ಪು. ೨೦, ವ. ೭೦.

ಬೆಸೆವ ಬೆಳುಗಾರ ಹೇಗಿದೆ? ಚಿನ್ನಕ್ಕೆ ಬಣ್ಣವನ್ನು, ಪುಷ್ಪಕ್ಕೆ ಪರಿಮಳವನ್ನು, ಚಂದ್ರಮನಿಗೆ ಚಂದ್ರಿಕೆಯನ್ನು ಲಗ್ನ ಮಾಡಿದವರಾರು? ಅವಕ್ಕವು ಗುಣಧರ್ಮವೆಂದು ಹೇಳುವಿರಾ? ನೀವು ಹೇಳುವುದು ನಿಜ. ಆದರೆ ವಸ್ತುಗಳಲ್ಲಿ ಅವರವರ ಗುಣಧರ್ಮವನ್ನು ನೆಯ್ದವರಾರು? ಕಾಗೆಯಲ್ಲಿ ಕೋಗಿಲೆಯ ಕಂಠವನ್ನು ಕೆಚ್ಚಬಹುದೆ? ಹುಣಿಸೆಯ ಹೂವಿಗೆ ಮಲ್ಲಿಗೆಯ ಮಧುರವಿಲಾಸವನ್ನು ಉಡಿಸಬಹುದೇ? ವಸ್ತು ಮತ್ತು ಅದರ ಗುಣಧರ್ಮದಲ್ಲಿರುವುದು ಸಹಜ ಸಂಬಂಧ. ವಾಗರ್ಥದಂತೆ, ಪಾರ್ವತಿ ಪರಮೇಶ್ವರರಂತೆ ಈ ಬಂಧ ನಿತ್ಯ ಸಂಬಂಧ. ಮತ್ತು ವಸ್ತು ಗುಣಧರ್ಮದಲ್ಲಿ ಒಡಕನ್ನು ಹುಟ್ಟಿಸುವುದೇ ತಪ್ಪು. ಆದರೆ ಒಡಕು ತೋರಿದ ಮೇಲೆ?

ಬೆಳಗುವ ಶರಣ ಲಿಂಗದ ಬೆಳಗು. ಈ ಭಾವಲಿಂಗಕ್ಕೂ ಚಿದ್ರೂಪ ಶರಣನಿಗೂ ಎಂದೂ ವಿಯೋಗವಾಗಿಲ್ಲ. ಆದರೆ ಅಜ್ಞಾನ ಮಾಯೆ ಭಾವದ ಭ್ರಾಂತಿಯಿಂದ ಜೀವಾತ್ಮ ನಿಜಭಾವಲಿಂಗದಿಂದ ಸಿಡಿದು, ನನ್ನ ತಾನು, ನನ್ನ ಸ್ವರೂಪ 'ನಾನು' ಎಂದು ವ್ಯವಹಾರ ನಡೆಸಿದ್ದಾನೆ. ಈ ನಾನು ಅಖಂಡವಾದ ಬೆಳಗಾದರೆ? ಆ ಬೆಳಗುವ ಅರಿವಿನ ಒಡೆಯನೆ ಭಾವಲಿಂಗ. ವಿಶ್ವಪ್ರಪಂಚದ ಭಾವಕೋಟಿಯ ಏಕೈಕವಲ್ಲಭನೆ ಈ ಭಾವ ಲಿಂಗ. ನನ್ನ ಅರೆಗತ್ತಲೆಯ ಅರಿವು 'ನಾನು' ಎಂಬ ಇರವಿನ ಕಣದಲ್ಲಿ ಬೆಸಗೊಂಡಿರುವಂತೆ, ನಿಮ್ಮ ಅರಿವು ನಿಮ್ಮ ನಾನೆಂಬ ಕಣದಲ್ಲಿ ಗಟ್ಟಿಯಾಗಿ ತಳವೂರಿದೆ. ಈ ಅರಿವು ಅಖಂಡವಾಗಿ ಬೆಳಗಿದರೆ, ನನ್ನ ನಿಮ್ಮ ಇರವಿನ ಕಣದಲ್ಲಿ ಹೇಗೆ ಕುಳಿತೀತು? ಅಖಂಡವಾದ ಬೆಳಗಿಗೆ ತನ್ನ ಅಖಂಡವಾದ ಇರವು ಸ್ವಯಂಭುಲಿಂಗವಾಗಿಯೆ ಮೂಡುತ್ತದೆ. ಈ ಇರವು–ಲಿಂಗವೆ ಅರಿವು–ಶರಣನಾಗಿ ಬೆಳಗುತ್ತದೆ. ಮಾನವಭಾವದ ಅರಿವನ್ನು ದಿವ್ಯದರಿವಿನ ಸ್ಥಲಕ್ಕೆ ಕೊಂಡೊಯ್ದು, ದಿವ್ಯಭಾವಕ್ಕೆ ಅಂದರೆ ಭಾವಲಿಂಗಕ್ಕೆ ಅದನ್ನು ಸಂಗತಗೊಳಿಸುವ ಶಕ್ತಿಯೆ ಭಕ್ತಿ-ಶಕ್ತಿ. ಮಾಯಾಶಕ್ತಿಯ, ಅಜ್ಞಾನಶಕ್ತಿಯ ಪ್ರತಿದ್ವಂದ್ವಿಯೆ ಈ ಭಕ್ತಿ-ಶಕ್ತಿ. ಇರವಿನಿಂದ ಅಗಲಿದ ಅರಿವಿನ ಕಳೆಯ ಮಾಲಿನ್ಯವನ್ನು ತಿಕ್ಕಿ ತೊಳೆದು, ಅರಿವನ್ನು ಇರವಿನಲ್ಲಿ ಲಗ್ನ ಮಾಡಿ ಸಮರಸಗೊಳಿಸುವ ಶಕ್ತಿಯೆ ಈ ಭಕ್ತಿ.

ಜೀವಾತ್ಮನ ಜೀವಭಾವದ ಅರಿವು ತನಗೆ ಲೆಪ್ಪವಾದ ಮರೆಗತ್ತಲೆಯನ್ನು ಕಳೆದು ಬೆಳ್ಳಗೆ ಬೆಳಗಾದರೆ, ಜೀವಭಾವವಳಿದು ವಿಶ್ವತೋಭಾವದ ಪ್ರಾಣರಸವಾದ ಭಾವಲಿಂಗದಲ್ಲಿ ನಟ್ಟು 'ಸ್ವಸ್ಥಲದಲ್ಲಿ ಸುಸ್ಥಿರವಾಗಿ' ನಿಂದರೆ, ಭಾವಲಿಂಗವೆ ಆತ್ಮ, ಶರಣನೆ ಕಾಯವಾಗಿ ಅಥವಾ ಅಕಾಯವಾಗಿ ನಿಂದರೆ, ಆಗ ಶರಣನ ಇರವು ನಿಲವು, ಆತನ ಅರ್ಚನೆ ಭಜನೆ, ಆತನ ಸೇವೆ ಉಪಚಾರ, ಆತನ ಅರ್ಪಣ ಆತನ ಪ್ರಸಾದ ಹೇಗೆ ನಡೆಯುತ್ತದೆ? ಅದನ್ನೇ ಇಲ್ಲಿ ನೋಡಿ, ಸರ್ಪಭೂಷಣ ಶಿವಯೋಗಿಗಳ ಈ ಪದ್ಯದ ಮುಖದಲ್ಲಿ:

ಭಾವಲಿಂಗದ ನಿಜವನು ಪೂರ್ಣಮಯವಾಗಿ
ಭಾವಿಸಿ ಪೂಜೆಗೆಯ್ವನೆ ದಿವ್ಯಯೋಗಿ ಪಲ್ಲವಿ

ಧರೆಯೆ ಪೀಠಿಕೆಯಷ್ಟದಿಶೆಯೆ ಗೋಮುಖಮೂರ್ಧ್ವ
ಪರಿಪೂರ್ಣವಾಗಿರ್ಪ ಬಯಲೆ ಗೋಳಕವು

ಸರುವ ಲೋಕಗಳನಿಂತೊಳಕೊಂಡ ಲಿಂಗವ
ನರಿವೆಂಬ ಕರವಾರಿರುಹದೊಳಗಿರಿಸಿ ೧

ಶರಧಿ ಸಪ್ತಕದಿಂದಲಭಿಷೇಕವೆರೆದಿಂದು
ತರಣಿ ತಾರಕೆಗಳ ಕುಸುಮವ ಧರಿಸಿ
ಸ್ಫುರಿಸುವೋಷಧಿಗಳೆಲ್ಲವ ನೈವೇದ್ಯವ ಮಾಡಿ
ಮೆರೆವಜಾಂಡದ ವಸ್ತ್ರವಿದನು ಬಾಸಣಿಸಿ ೨

ಅದರ ಗರ್ಭದೊಳೆ ತಾನಿರುತಿರ್ದು ತನ್ನಯ
ಹೃದಯಮಧ್ಯದೊಳದ ಹುದುಗಿಸಿ ಬಳಿಕ
ಅದು ತಾನರ್ಚನೆಯೆಂಬ ತ್ರಿಪುಟಿಯಳಿದು ಮಿಕ್ಕ
ಸದಮಳ ಗುರುಸಿದ್ಧನಿರವೆ ತಾನಾಗಿ ೩[1]

ಈ ಪೂಜೆಯ ಹೆಸರೇನು? ವಿಶ್ವಪೂಜೆ ಎಂದು ಕರೆಯಬಹುದೆ? ವಿಶ್ವಭಾವಕ್ಕೆ ಮೂಲಾಧಾರವಾದ, ವಿಶ್ವಭಾವಕ್ಕೆ ಮೂಲಭಾವವಾದ ಭಾವಲಿಂಗದ ಈ ಮಹಾ ಪೂಜೆಯನ್ನು ಬ್ರಹ್ಮಪೂಜೆಯೆಂದೆನ್ನಬಹುದೇ? ಶರಣರು ಇದನ್ನು ಭಾವಲಿಂಗ ಪೂಜೆ, ಭಾವಪೂಜೆ ಎಂದು ಕರೆದಿದ್ದಾರೆ. ಕಣ್ಣಿಗೆ ಇಷ್ಟಲಿಂಗಪೂಜೆಯಾದರೆ ಮನಕ್ಕೆ ಪ್ರಾಣಲಿಂಗಪೂಜೆ, ಭಾವಕ್ಕೆ ಭಾವಲಿಂಗಪೂಜೆ ಅಥವಾ ಭಾವಪೂಜೆ. ಕಣ್ಣಿಗೆ ಕರ ಸ್ಥಲದ ಲಿಂಗ, ಮನಕ್ಕೆ ಪ್ರಾಣಸ್ಥಲದ ಲಿಂಗ, ಭಾವಕ್ಕೆ ಅರಿವಿನ ಕರಕಮಲ ಧರಿಸಿದ ಈ ವಿಶ್ವಭಾವಲಿಂಗ. ವಿಶ್ವದ ಅರಿವು ವಿಶ್ವವನ್ನೆ ಲಿಂಗಕ್ಕೆ ನಿವೇದಿಸಿ ಪೂಜಿಸುವ ಈ ಪೂಜಾ ಕ್ರಮದಲ್ಲಿ ಅನಂತ ಬ್ರಹ್ಮಾಂಡಗಳನ್ನೊಳಕೊಂಡ ಹರವೇ ಲಿಂಗ, ಸಪ್ತಸಮುದ್ರವೇ ಜಳ ಕಕ್ಕೆ ನೀರು, ಸೂರ್ಯನಕ್ಷತ್ರಗಳ ಮಾಲೆಯೆ ಪತ್ರಿ ಪುಷ್ಪ, ಗಿಡ ಮರ ಬಳ್ಳಿ ಹುಲ್ಲು ಹೊದರು ಕಂಟಿಯೆಲ್ಲ ಊಟದ ಅಡಿಗೆ, ವಿಶ್ವಬ್ರಹ್ಮಾಂಡಗಳೆ ಉಡಿಸಿ ತೊಡಿಸುವ ದಿವ್ಯ ದುಕೂಲ—ಹೀಗೆಯೆ ಈ ಪೂಜೆಯನ್ನು ಸಾಂಗಗೊಳಿಸಬಹುದು,–ಭಾವಲಿಂಗಕ್ಕೆ ಅಂಗ ವಾದ ಶರಣ. ಈ ಶರಣ ಕುಳಿತಿರುವುದೆಲ್ಲಿ? ಭಾವಲಿಂಗದಲ್ಲಿ. ಆ ಲಿಂಗ ಮೂರ್ತ ಮಾಡಿರುವುದೆಲ್ಲಿ? ಶರಣನ ಹೃದಯಗರ್ಭದಲ್ಲಿ. ವಿಶ್ವ ಪ್ರಪಂಚವೆಲ್ಲಿದೆ? ವಿಶ್ವಕ್ಕೆ ಲಯ ಗಮನಸ್ಥಾನವಾದ ಭಾವಲಿಂಗದಲ್ಲಿ. ಈಗ ಮತ್ತೊಮ್ಮೆ ಹೇಳಿ, ವಿಶ್ವವೆಲ್ಲಿದೆ? ಶರಣನ ಒಳಗೋ ಹೊರಗೋ? ಇಲ್ಲಿ ಒಳಗೆ ಹೊರಗೆ ಎಂಬ ವಿಚಾರಕ್ಕೆ ಇಂಬೇ ಇಲ್ಲ. ಶರಣ ವಿಶ್ವೇ ಭೂತಭಾವತರಂಗಗಳ ಬ್ರಹ್ಮಭಾವವಾರಾಶಿಯಲ್ಲಿ ನಿಂದು, ವಿಶ್ವವನ್ನೆಲ್ಲ ನೋಡಿದರೆ ಹೇಗೆ ನೋಡುತ್ತಾನೆ? ಕೇಳಿದರೆ ಹೇಗೆ ಕೇಳುತ್ತಾನೆ? ರುಚಿಸಿದರೆ ಹೇಗೆ ರುಚಿಸುತ್ತಾನೆ? ಮೂಸಿದರೆ? ಸೋಂಕಿದರೆ?

ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನಾಸಿಕವಾಯಿತ್ತು.
ತಾನಲ್ಲದನ್ಯ ವಾಸನೆಯಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಪೃಥ್ವಿಯಡಗಿತ್ತು.

---

೧. ಕೈ. ಕ. ಪು. ೧೦೪, ಯೋ. ಪ್ರ. ಸ್ಥ. ಪದ. ೨೭.

ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಜಿಹ್ವೆಯಾಯಿತ್ತು.
ತಾನಲ್ಲದನ್ಯ ರುಚಿಯಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಪ್ಪುವಡಗಿತ್ತು.
ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನೇತ್ರವಾಯಿತ್ತು.
ತಾನಲ್ಲದನ್ಯ ರೂಹಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಗ್ನಿಯಡಗಿತ್ತು.
ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ತ್ವಕ್ಕಾಯಿತ್ತು.
ತಾನಲ್ಲದನ್ಯ ಸೋಂಕಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ವಾಯುವಡಗಿತ್ತು.
ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಶ್ರೋತ್ರವಾಯಿತ್ತು.
ತಾನಲ್ಲದನ್ಯ ಶಬ್ದವಿಲ್ಲಾಗಿ ಅಲ್ಲಿಯೇ ಮಹತ್ತಪ್ಪ ಆಕಾಶವಡಗಿತ್ತು.
ಇಂತು ಪಂಚಭೂತಂಗಳಡಗಿದರೆ ಪಂಚಬ್ರಹ್ಮ ಮಯವಾಯಿತ್ತು.
ಅದರೊಳಗೆ ಜಗತ್ತಡಗಿದ ಭೇದ.
ಅದೇ ಪಂಚವರ್ಣಾತೀತವಾಗಿ ಮಹತ್ತನೊಳಕೊಂಡ
ಆ ಶರಣನ ಭೇದವನೇನೆಂದುಪಮಿಸುವೆನಯ್ಯಾ ಗೊಹೇಶ್ವರಾ?[೧]

ಪ್ರಭುದೇವರ ಈ ಮಾತಿನ ಮಂಟಪದಲ್ಲಿ ಯಾವ ಅಲೌಕಿಕ, ಸರ್ವಲೋಕೋತ್ತರ, ದಿವ್ಯ ಭವ್ಯ ನವ್ಯ ಅನುಭವ ಮಂಡಿಸಿರಬಹುದು? ಬನ್ನಿ, ಸ್ವಲ್ಪ ಒಳಗೊಳಗೆ ಬನ್ನಿ. ಆ ಅನುಭವ ನಮಗೆ ಅಗಮ್ಯ ಅಗೋಚರ, ನಮ್ಮ ಬುದ್ಧಿ ಭಾವದ ಹದ್ದುಮೀರಿ ಆಚೆ ಇನ್ನೂ ಆಚೆ ಅತೀತವಾಗಿ ಅಭೇದ್ಯವಾಗಿ ಅಸಾಧ್ಯವಾಗಿ ಇದ್ದರೂ ಅದರ ನೆಳಲನ್ನಾದರೂ ನೋಡೋಣ ಬನ್ನಿ.

ಜೀವಾತ್ಮನ ಖಂಡಿತಭಾವವಳಿದು, ತೆರಹಿಲ್ಲದೆ ಬೆಳಗುವ ಅರಿವಾಗಿ ಭಾವ ಲಿಂಗಕ್ಕೆ ಚಿದಂಗವಾಗಿ ನಿಂದಿದೆ. ಪೃಥ್ವಿಯೇ ಭಾವಲಿಂಗದ ಪೀಠ, ದಶದಿಕ್ಕೇ ಆ ಲಿಂಗದ ಗೋಮುಖ, ಪರಿಪೂರ್ಣವಾದ ಬಯಲೇ ಲಿಂಗದ ಗೋಲಕ ಆಕಾರ. ಈ ಲಿಂಗದ ಗರ್ಭ ಸರ್ವಲೋಕಗಳನ್ನೊಳಕೊಂಡ ಹೆಬ್ಬಸಿರು. ಇಂಥ ಬ್ರಹ್ಮವಿಸ್ತಾರದ, ಭಾವ ಲಿಂಗದ ಅಂಗ, ಚಿದಂಗ, ಶರಣ ಎಷ್ಟು ಎತ್ತರ, ಎಷ್ಟು ಅಗಲವಾಗಿರಬೇಕು? ಈ ಚಿದಂಗದ ಎಲ್ಲ ಅವಯವ, ಇಂದ್ರಿಯ ಎಂಥವಿರಬೇಕು? ಖಂಡಿತವಲ್ಲದ ಚಿದಂಗಕ್ಕೆ ನಾಸಿಕ, ಮೂಗು ಎಂಥದು? ನನ್ನ ನಿಮ್ಮ ಮೂಗು, ಪಶು ಪಕ್ಷಿ ಕ್ರಿಮಿ ಕೀಟಕದ ಮೂಗು, ದೇವ ದಾನವ ಗರುಡ ಗಂಧರ್ವ ಯಕ್ಷ ಕಿನ್ನರ ಕಿಂಪುರುಷ ಸಿದ್ಧ ಸಾಧ್ಯರ ಮೂಗು ಅದಕ್ಕೆ ಹೇಗೆ ಬಂದೀತು? ಹೇಗೆ ಒಪ್ಪೀತು? ಹೇಗೆ ನಡೆದೀತು? ವಿಶ್ವಬ್ರಹ್ಮಾಂಡಗಳ ಭಾವ-ಪುರುಷನಿಗೆ ಸುರ ನರ ಮುಂತಾದ ಖಂಡಿತವಾದ ಒಂದು ಭಾವದ ಮೂಗು ಹೇಗೆ ಹೊಂದಿಕೆಯಾದೀತು? ಮೂಗಿನ ಖಂಡಿತವಳಿದು ಶರಣನ ಸರ್ವಾಂಗವೆಲ್ಲ ನಾಸಿಕ ವಾಯಿತ್ತು. ಅಂದರೆ ಶರಣನ ಚಿದಂಗವೆಲ್ಲ ನಾಸಿಕವಾಯಿತ್ತು. ಭಾವಲಿಂಗದ ಅರಿವು-ಬೆಳಗು ಚೈತನ್ಯ ನಿತ್ಯ ಪರಿಪೂರ್ಣ ಉದಯವಾಗಿರುವ ಲಿಂಗನಾಸಿಕ, ಆದಿಯ ಅಂದಿನಿಂದ ಮಧ್ಯದ ಇಂದಿಗೆ ವಿಶ್ವದಲ್ಲಿ ಉತ್ಪತ್ತಿ ಸ್ಥಿತಿ ಲಯವಾಗಿರುವ ಯುಗಜುಗದ ಪರಿಮಳ

---

೧. ಲಿಂ. ಲೀ. ವಿ. ಚಾ. ಪು. ೩೬೧, ವ. ೮೪.

ವಾರಾಶಿಗಳನ್ನು, ಇಂದಿನಿಂದ ಮುಂದೆ ಅನಂತದವರೆಗೆ ವಿಶ್ವದಲ್ಲಿ ಮೂಡಬಹುದಾದ ಪರಿಮಳಪರ್ವತಗಳನ್ನು ಆಘ್ರಾಣಿಸಬಲ್ಲುದು. ಈ ಪರಮಾದ್ಭುತ ಪರಿಮಳ, ಈ ದಿವ್ಯವಾಸನೆ ಹೇಗಿದೆ? ಗಂಧವತಿಯಾದ ಪೃಥಿವಿಯ ಗಭೀರವನ್ನೆಲ್ಲ ಮೂಸಿ ನೋಡಿದರೆ, ಯಾವ ವಾಸನೆ ಬರುತ್ತದೆ? ತನ್ನ ವಾಸನೆ, ಚಿದಂಗದ ವಾಸನೆ, ಭಾವಲಿಂಗದ ಸ್ವಯಂವಾಸನೆ. ತನ್ನದಲ್ಲದೆ, ತಾನಲ್ಲದೆ ಬೇರೆ ವಾಸನೆ ಇಲ್ಲ. ಚಿದಂಗದ ನಾಸಿಕ ಪರಿಮಳಪ್ರಪಂಚದಲ್ಲಿ ವಾಸನೆಯ ನಾನಾತ್ವವನ್ನು ಭೇದಿಸಿ ನೋಡಿ, ಅಲ್ಲಿ ಸನ್ನಿಹಿತವಾಗಿರುವ 'ಪರಿಮಳಲಿಂಗ'ವನ್ನು ಕಾಣಬಲ್ಲುದು. ವಿಶ್ವಪರಿಮಳದ ಲಯಗಮನಸ್ಥಾನವಾದ ಪರಿಮಳಬ್ರಹ್ಮವಾರಾಶಿಯನ್ನು ಶರಣನ ಮೂಗು ಕಂಡರೆ, ಆ ಮೂಗು ಆ ಶರಣ ಆ ಶರಣನ ಮನೋನಾಥ ಭಾವಲಿಂಗಕ್ಕೆ ಯಾವ ಆನಂದ, ಎಷ್ಟು ಕೋಟಿ ಹಿಮಾಲಯಾನಂದ? ನನ್ನ ನಿಮ್ಮ ಮೂಗಿಗೆ ಸಮುದ್ರದ ಸೀಕರಸುಖ, ಲಿಂಗವಂತ ಅಂಗಕ್ಕೆ ಸಮುದ್ರಸುಖ. ಆದಿ ಮಧ್ಯಾಂತವೆನ್ನದೆ ವಿಶ್ವದಲ್ಲಿ ಪರಿಮಿತಿಯಿಲ್ಲದೆ ಮೊಳೆವ ಪರಿಮಳವನ್ನು ತನ್ನ ಪರಿಮಳವೆಂದು ಗುರುತಿಸುವ ಭಾವಲಿಂಗವನ್ನೇ ನಾಸಿಕದ ನಾಸಿಕ, ಆಚಾರಲಿಂಗವೆಂದು ಕರೆದಿದ್ದಾರೆ ಶರಣರು. ಆಚಾರಲಿಂಗದ ಮುಖವಾದ ನಾಸಿಕ ಪೂರ್ಣನಾಸಿಕ, ಅಂತೆಯೆ ಅದಕ್ಕೆ ಎಲ್ಲ ವಾಸನೆಯ ಪೂರ್ಣ ಪರಿಚಯವಿದೆ. ಈ ನಾಸಿಕವೇ ಸರ್ವಪರಿಮಳವನ್ನು ತನ್ನ ಪರಿಮಳವೆಂದು, ತಾನು-ಪರಿಮಳವೆಂದು ನೋಡಬಲ್ಲ ಚಿದ್‌ದೃಕ್ಕು. 'ಚಿತ್ತುವೆಂಬ ಬಿತ್ತು ಬಲಿದು......'[೧] ಎಂಬ ಪ್ರಭುದೇವರ ಮಾತನ್ನು ಇಲ್ಲಿ ನೆನೆಸಿಕೊಂಡರೆ ಚಿದಂಗವೆ ಸರ್ವಗಂಧಗರ್ಭೆ, ಚಿತ್ ಪೃಥ್ವಿ. ಈ ಅಖಂಡವಾದ ಚಿತ್‌ಪೃಥ್ವಿಯಿಂದಲೆ ಮಹಾಭೂತ ಪೃಥ್ವಿ ಉದಯವಾಗಿದೆ. ಚಿತ್ತಿನಲ್ಲಿ ಉದಯವಾದ ಪೃಥ್ವಿ ಅದರ ಆಲಿಂಗನದಲ್ಲಿಯೆ ಇದೆ, ಅಲ್ಲಿಯೆ ಅಡಗಿದೆ ಎಂಬುದೇ ಪ್ರಭುದೇವರ 'ತಾನಲ್ಲದನ್ಯವಾಸನೆಯಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಪೃಥ್ವಿಯಡಗಿತ್ತು......' ಎಂಬ ಮಾತಿನ ಅರ್ಥ.

ಇನ್ನು ಭಾವಲಿಂಗದ ಅಂಗವಾದ ಶರಣನ ನೇತ್ರ. ಜೀವಭಾವದಲ್ಲಿದ್ದ ತನ್ನ ದೇಹದ ಮುಖದಲ್ಲಿ ಮೊದಲಿದ್ದ ಎರಡು ಕಣ್ಣು ಬಹಳ ಸಣ್ಣವು. ಅವರ ಆಕಾರಕ್ಕೆ ತಕ್ಕಂತೆ ಅಲ್ಲಿ ನೋಡುವ ಶಕ್ತಿ, ನೋಡುವ ತೇಜ ಅತ್ಯಲ್ಪ. ಮತ್ತೆ ಅವಕ್ಕೆ ಇದಿರನ್ನಲ್ಲದೆ ತಮ್ಮನ್ನೆ ತಾವು ನೋಡುವ ಸಾಮರ್ಥ್ಯವಿಲ್ಲ. ಮತ್ತೆ ಮುಂದೆ ನೋಡಿದರೆ ಹಿಂದೆ ಕಾಣಲಿಲ್ಲ, ಹಿಂದೆ ನೋಡಿದರೆ ಮುಂದೆ ಮರೆ. ಇದರಂತೆ ಮೇಲೆ ತೆರೆದರೆ ಕೆಳಗು ಮುಸುಕು, ಎಡಕ್ಕೆ ಹೊರಳಿದರೆ ಬಲವೆಲ್ಲ ಕತ್ತಲೆ. ನೋಡುವ ಹೊಲಕ್ಕೆ ಸೀಮೆ, ಮತ್ತೆ ನೋಟ ವಸ್ತುವಿನಲ್ಲಿ ಉತ್ಪತ್ತಿಸುವ ತೀಕ್ಷ್ಣತೆಗೆ ಬದುವು. ಮತ್ತೆ ವಸ್ತು ಇದಿರಿಟ್ಟು ಇದ್ದರೆ ನೋಡುವುದು, ಬೇರೆ ಕಡೆ ಅಗಲಿ ಹೋದರೆ ನೋಡಲಿಲ್ಲ. ನಿನ್ನೆ ನೀವು ಸಾಯಂಕಾಲ ೫-೩೫ ಗಂಟೆಗೆ 'ಕಾರಿ'ನಲ್ಲಿ ಕುಳಿತಿದ್ದುದನ್ನು ಕಂಡೆ. ನನ್ನ ಕಣ್ಣಿನ ಹೊಲವನ್ನು ನೀವು ೫-೩೭ಕ್ಕೆ ದಾಟಿದರೆ ಮತ್ತೆ ನಿಮ್ಮನ್ನು ನೋಡಬೇಕೆಂದು ನನ್ನ ಕಣ್ಣು ತವಕಪಟ್ಟರೂ ನೀವಿಲ್ಲ. ನಿಮ್ಮ

೧. ಲಿಂ. ಲೀ. ವಿ. ಜಾ. ಪು. ೩೦, ವ. ೧.

ವಾಹನವೂ ಇಲ್ಲ. ನಾನು ಎಚ್ಚರವಿದ್ದಾಗ ಈ ಮಾತು, ಬದುಕಿದ್ದಾಗ ಈ ಮಾತು; ಕನಸು ನಿದ್ರೆ ದೀರ್ಘನಿದ್ರೆಯಲ್ಲಿ ಕಣ್ಣು ನೋಡುವ ಮಾತೇ ಮುಗಿಯಿತು. ಇದೆಲ್ಲ ಕಣ್ಣಿನ ಖಂಡಿತವೇ. ಜೀವಭಾವದ ಖಂಡಿತವಳಿದು ಅಖಂಡೇಶ್ವರ ಭಾವಲಿಂಗದಲ್ಲಿ ಬೆಸುಗೆಯಾದರೆ? ತಾನು ಮತ್ತು ಜೀವಕ್ಕಿರುವ ಬಂಧನ ಬಿಚ್ಚಿ ತಾನು ಮುಕ್ತವಾಗಿ,—ಮಣ್ಣಾದ ಮಾಣಿಕ್ಯ ಮಲಿನದಿಂದ ಮುಕ್ತವಾಗಿ ಕಾಂತವಾಗಿ ದೀಪಿಸುವಂತೆ—ಅಖಂಡವಾದ ಅರಿವು-ಬೆಳಗು ಶರಣ ಚಿದಂಗವಾಗಿ ನಿಜಭಕ್ತಿರತಿಯಿಂದ ಭಾವಲಿಂಗಕ್ಕೆ ಸಂಯೋಗವಾದರೆ, ಆಗ ಈ ಶರಣನ ಕಣ್ಣು ಎಂಥವಾಗಿವೆ? ಶರಣನ ಸರ್ವಾಂಗವೆಲ್ಲ ಕಣ್ಣು. ಯಾವ ವಿಧವಾದ 'ಖಂಡಿತ' ಇಲ್ಲಿ ಉಳಿದಿಲ್ಲ. ಖಂಡಿತವೆಲ್ಲ ಅಳಿದು, ಉಳಿದ ಉಳಿಮೆಯೆಲ್ಲ ಅಖಂಡಿತವೇ. ವಿಶ್ವಭಾವೈಕವಲ್ಲಭ, ವಿಶ್ವಮಹಾಕಾಂತ, ವಿಶ್ವಭಾವ ಬ್ರಹ್ಮರಮಣ, ವಿಶ್ವೇಶ್ವರಲಿಂಗಕ್ಕೆ, ಭಾವಲಿಂಗಕ್ಕೆ, ಸಚ್ಚಿದಾನಂದ ನಿತ್ಯ ಪರಿಪೂರ್ಣಕ್ಕೆ ತನ್ನ ವಿಶ್ವರೂಪದ ಮಹಾದಿವ್ಯ ಐಶ್ವರ್ಯವನ್ನು, ಬ್ರಹ್ಮರೂಪ ಸಂಪದವನ್ನು ನೋಡುವ ಬಯಕೆ ಮೂಡಿದರೆ ಆತನ, ಚಿದಂಗ-ಶರಣನ ಸರ್ವಾಂಗವೆಲ್ಲ ಕಣ್ಣಾಯಿತ್ತು. ಲಿಂಗದ ಈ ಕಣ್ಣು ತೆರೆದರೆ, ವಿಶ್ವತಶ್ಚಕ್ಷು ಎವೆದೆಗೆದರೆ ಏನು ಕಾಣಬಹುದು? ಏನು ಕಾಣಲಿಕ್ಕಿಲ್ಲ? ಈ ಕಣ್ಣು ತಪ್ಪಿಸಿ ಜಾರಿಕೊಳ್ಳುವ ರೂಪ ಎಲ್ಲೆಲ್ಲಿಯೂ ಇಲ್ಲ. ಆಕಾಶದ ಒಳಗೆ ಅದರ ಹೊರಗೆ, ಆದಿ ಅಂತದ ಒಳಗೆ ಹೊರಗೆ, ಅಣುರೇಣು ತೃಣಕಾಷ್ಠದ ಒಳಗೆ ನಡೆದಿರುವ ಪ್ರಾಣಸ್ಪಂದ ಚೈತನ್ಯಸ್ಪಂದ ಭಾವಸ್ಪಂದ, ಅವರ ಹೊರಗೆ ನಡೆದಿರುವ ಬಣ್ಣ ಆಕಾರ ಗಾಡಿ ಗಮಕ ವಿಭ್ರಮ ವಿಲಾಸ, ವಿಶ್ವಪ್ರಕೃತಿಯ ಭೀಕರ ಶಂಕರ ಶಿವಂಕರ ಅದ್ಭುತರಮ್ಯ ರಮಣೀಯ ಕಮನೀಯ, ಸಹ್ಯ ಅಸಹ್ಯ, ಸುಂದರ ಅಸುಂದರಗಳೆಲ್ಲ ಅದೇ ಪ್ರಕೃತಿಯ ರೂಪರೂಪದ ಒನಪು ಒಯ್ಯಾರ ಥಳಕು ಝಳಕುಗಳೆಲ್ಲ ಭಾವಲಿಂಗದ ನೇತ್ರಕ್ಕೆ ನಿತ್ಯಶಾಶ್ವತವಾಗಿ ಇರುವ ನಿಮಿಷದಲ್ಲಿ ಪ್ರತ್ಯಕ್ಷ ಗೋಚರ. ಆ ರೂಪು ರೂಪೆಲ್ಲ ಲಿಂಗರೂಪು. ಪೋಣಿಸಿದರೆ ಬಯಲ ಮೈಯನ್ನೆಲ್ಲ ಮುಚ್ಚಿ ಅಲಂಕರಿಸುವ ಮಾಲೆಯಾಗಬಹುದಾದ ಈ ರೂಪಮಾಲಾರಾಶಿಗೆಲ್ಲ ಒಂದೇ ಸೂತ್ರ, ಅದೇ ಭಾವಲಿಂಗ ಮಹಾಸೂತ್ರ. ಚಿದಂಗ ಶರಣಸತಿಯ ನೇತ್ರದ್ವಾರದಲ್ಲಿ ನಿಂದು ನೋಡುವ ಭಾವಲಿಂಗ ಪುರುಷನಿಗೆ ವಿಶ್ವರೂಪಪ್ರಪಂಚವೆಲ್ಲ ತನ್ನ ಪ್ರಪಂಚ, ತನ್ನ ಮಯ, ತಾನು ಭರಿತ. ತಾನು ತತ್ತದ್‌ರೂಪಗತನಾಗಿ ತತ್ತದಾಕಾರವಾಗಿ, ತತ್ತದ್‌ರೂಪವಾಗಿ ನಿಂದು ನಡೆದಿರುವ ತನ್ನನ್ನು ತಾನು ಚೆನ್ನಾಗಿ ಗುರುತಿಸಬಲ್ಲ ಆ ಪುರುಷ. ಅಥವಾ ಭಾವಲಿಂಗಕ್ಕೆ ತನ್ನ ತಾ ಗುರುತಿಸುವ ಪ್ರಶ್ನೆಯಾದರೂ ಏಕೆ? ನನ್ನ ಗುರುತು ನನಗೆ ತಪ್ಪಿದರೆ, ನನ್ನನ್ನು ನಾನು ಮತ್ತೆ ಗುರುತಿಸಬೇಕು! ಆ ಸಂಭವ ಕೆಲವೊಂದು ಪ್ರಸಂಗದಲ್ಲಿ—ಹುಚ್ಚು ಭ್ರಾಂತಿ ಪಿತ್ಥ ಕನಸು ಮುಂತಾದ ಕಡೆ—ನನಗೆ ಒದಗಬಹುದು. ಬಚ್ಚಬರಿಯ ಇರವು-ಅರಿವಾದ ಭಾವಲಿಂಗಕ್ಕೆ ಎಲ್ಲಿ? ಆದರೆ ಈ ಪ್ರತ್ಯಭಿಜ್ಞೆ ಜೀವಭಾವದ ನಿದ್ರೆ ತಿಳಿದು ಭಾವಲಿಂಗದಲ್ಲಿ ಎಚ್ಚತ್ತ ಚಿದಾತ್ಮ ಶರಣನಿಗೆ ಹೊಚ್ಚ ಹೊಸ ಅನುಭವವೆ.

ಚಿದಂಗ ಶರಣನ ಅಖಂಡವಾದ ಈ ನೇತ್ರವೆ ಚಿದ್‌ದೃಕ್ಕು. ಎಲ್ಲ ಕಣ್ಣುಗಳ ಮೂಲ ಮಹಾಮಾತೆಯೆ ಈ ಚಿದ್‌ದೃಕ್ಕು. ಈ ಮಹಾಮಾತೆಯಿಂದ ಅಗಲಿ ಸೊರಗಿ

ಕೊರಗಿ ಕಡ್ಡಿಯಾದಂತಿವೆ ನನ್ನ ನಿಮ್ಮಗಳ ಕಣ್ಣು. ಮಗು ತಾಯಿಯನ್ನು ಅಗಲಿ ಎಷ್ಟೋ ಕಾಲ ಎಷ್ಟೋ ದೇಶ ದೂರವಿದ್ದರೂ ತಾಯಿಯ ಹಂಬಲ ಎದೆಯಲ್ಲಿ ಕುದಿಯುತ್ತಿದೆ. ತಾಯಿಗೂ ಈ ಹಂಬಲ ಬಿಟ್ಟಿಲ್ಲ. ಹೊತ್ತು ಹೆತ್ತ ಹೊಟ್ಟೆಗೆ ಮಗುವಿನ 'ಅಳಾಪ' ಹೇಗೆ ಬಿಟ್ಟೀತು. ಈ ತಾಯಿ ಮಕ್ಕಳ ಒಳಹಂಬಲದ ಕುರುಹೇನೋ? – ನಮ್ಮ ಕಣ್ಣಿಗೆ ಯಾವ ರೂಪೂ ಎಂದೂ ನಮಗೆ ನಿತ್ಯತೃಪ್ತಿಯನ್ನು ನೀಡಿಲ್ಲ. ಓಂಪ್ರಥಮ ದರ್ಶನ ದಲ್ಲಿ ಶಕುಂತಲೆ ದುಷ್ಯಂತನ ಕಣ್ಣಿಗೆ 'ನೇತ್ರ ನಿರ್ವಾಣ.' ತಪೋವನದ ಶಕುಂತಲೆ ಗರ್ಭ ವತಿಯಾಗಿ ರಾಜಧಾನಿಯ ದುಷ್ಯಂತನೆದುರಿಗೆ ಬಂದು ನಿಂತರೆ, ಆ 'ನೇತ್ರನಿರ್ವಾಣ' 'ನೇತ್ರ ನರಕ'ವಾದಂತಿದೆ. ಏಕೆ? ಈಗ ಶಕುಂತಲೆಯ ರೂಪಿಗೆ ಯಾವ ರೂಪು – ಬೇನೆ ಬಂದಿತ್ತು? ಅಥವಾ ದುಷ್ಯಂತನ ಕಣ್ಣಿಗೆ ಎಂಥ ಕಣ್ಣು–ಬೇನೆ? ಯಾವ ಯಾವ ಎಂಥ ಎಂಥ ರೂಪ ಸೌಂದರ್ಯ, ಸಮುದ್ರ ನಕ್ಷತ್ರ ಆಕಾಶ ಪರ್ವತಶ್ರೇಣಿ ವನಮಾಲೆ ಮೇಘಪಂಕ್ತಿ, ಕಾಮನ ಬಿಲ್ಲು ರತಿಯ ಬಾಣಗಳನ್ನು ನೋಡಿದರೂ, ಸಾಮಾನ್ಯ ಮಾನವ ನಾದ ನನ್ನ ದೃಷ್ಟಿ, ಅಸಾಮಾನ್ಯ ಪುರುಷರಾದ ಕವಿಯ ದೃಷ್ಟಿ ಕಲಾವಿದರ ದೃಷ್ಟಿ, ಬುದ್ಧಿ ಮಾನವರಾದ ವಿಜ್ಞಾನಿಗಳ ದೃಷ್ಟಿ, ತತ್ತ್ವವನ್ನು ಹುಡುಕುತ್ತಿರುವ ತತ್ತ್ವಜ್ಞಾನಿಗಳ ದೃಷ್ಟಿ, ಹೆಣ್ಣು ಹುಡುಕುವ ಕಾಮನ ದೃಷ್ಟಿ, ಹಣಹುಡುಕುವ ವ್ಯವಹಾರದೃಷ್ಟಿ—ಹೀಗೆ ಯಾವ ದೃಷ್ಟಿಯಿಂದ ತನ್ನ 'ಆರಾಧ್ಯ' ರೂಪವನ್ನು ಪ್ರತ್ಯಕ್ಷ ಕಂಡು ಮುಟ್ಟಿ ಸಂಪಾದಿಸಿದರೂ ನಮ್ಮ ಕಣ್ಣಿಗೆ ತೃಪ್ತಿಯಿಲ್ಲ. ಏಕೆ? ನಿಮಿಷದ ತೃಪ್ತಿ 'ದುಷ್ಯಂತತೃಪ್ತಿ' ತೋರಿದರೂ ಆ ತೃಪ್ತಿಯ ಮೇಲೆ 'ಸವಾರಿ' ಮಾಡಿಕೊಂಡು, ಅತೃಪ್ತಿ ಅಲ್ಲಿಯೆ 'ಘುತ್' ಎಂದು ನಿಲ್ಲು ತ್ತದೆ. ಏಕೆ? ಮಾನವನ ಕಣ್ಣಿನಲ್ಲಿ ಮಾನವನ ಭಾವದಲ್ಲಿ ಖಂಡಿತವಾದ ಕೊರತೆ ಇದೆ. ಈ ಕಣ್ಣಿನ ಖಂಡಿತವಳಿದು ಮಾನವನಲ್ಲಿ ಭಾವಲಿಂಗ ಪ್ರಜ್ವಲಿಸುತ್ತ ಮೂಡಿ, ಆತನ ಕಣ್ಣಿನಲ್ಲಿ ಚಿದ್‌ದೃಕ್ಕು ಕಣ್ಣುತೆರೆಯುದವರೆಗೆ ಕಣ್ಣಿನ ಅತೃಪ್ತಿ, ಬರ ಹಿಂಗುವಂತಿಲ್ಲ. ವಿಶ್ವರೂಪದ ಅಂತರಾಳದಲ್ಲಿ ವಿಶ್ವಮಯವಾಗಿ ಹೊಳೆವ 'ಶಿವಲಿಂಗ' ಕಣ್ಣಿಗೆ ಕಾಣದ ವರೆಗೆ ಕಣ್ಣಿಗಾದ ಸಂಸಾರಬಂಧನ ಬಿಟ್ಟದ್ದಲ್ಲ. ಕಣ್ಣಿನ ಕಣ್ಣು 'ಶಿವಲಿಂಗ' ರೂಪರೂಪ ದಲ್ಲಿ ಕುಳಿತು ಬೆಳಗುತ್ತಿರುವ ತನ್ನನ್ನು ಕಾಣದೆ, ಕಣ್ಣಿಗೆ ವಿಶ್ರಾಂತಿ ಅವಿಶ್ರಾಂತಿ; ಅದಕ್ಕೆ ತೃಪ್ತಿ ಅಲ್ಪತೃಪ್ತಿ, ನಿಮಿಷ ತೃಪ್ತಿ; ಅಂತೂ ನಿತ್ಯ ನಿತ್ಯ ಅತೃಪ್ತಿ.

ಭಾವಲಿಂಗಕ್ಕೆ ಅಂಗವಾದ ಶರಣನ ನಾಸಿಕ ನೇತ್ರದಂತೆ ಆತನ ಜಿಹ್ವೆ ಆತನ ಶ್ರೋತ್ರ ಆತನ ತ್ವಕ್ಕು. ಈ ಬಾಗಿಲುಗಳಲ್ಲಿಯೂ ಕತ್ತಲೆ ಹರಿದಿದೆ, ಖಂಡಿತವಳಿದಿದೆ. ಭಾವಲಿಂಗದ ಅರಿವು–ಬೆಳಗು ಅಖಂಡವಾಗಿ ಸುರಿವ ಶರಣನ ನಾಲಗೆ, ಹೊರಗಿಂದ ಬರುವ ಮಧುರ ಆಮ್ಲ ಲವಣ ತಿಕ್ತ ಕಟು ಕಷಾಯಗಳಲ್ಲಿ ರಸಲಿಂಗ, 'ಗಂರುಲಿಂಗ,' ಅಮೃತಲಿಂಗವನ್ನು ನೋಡಬಲ್ಲುದು. ವಿಶ್ವತೋ ಜಿಹ್ವೆಯಾದ ಭಾವಲಿಂಗದ ಈ ಜಿಹ್ವೆ ವಿಶ್ವಜಿಹ್ವೆಯ ರಸರುಚಿಯನ್ನು ಆಸ್ವಾದಿಸಬಲ್ಲುದು. ಎಲ್ಲ ನಾಲಗೆ ಇದರಲ್ಲಿ, ಇದು ತಾನೆ ಎಲ್ಲ ನಾಲಗೆಯುಲ್ಲಿ. ಮನುಷ್ಯ ಪಶು ಪಕ್ಷಿ ಮೃಗ ದೇವ ದಾನವರ ಜಿಹ್ವೆ ಗಳೆಲ್ಲಾ ಭಾವಲಿಂಗದ ಜಿಹ್ವೆಯಲ್ಲಿಯೆ ಕವಲೊಡೆದಿವೆ. 'ಶ್ರೀಪತಿಗೆ ಸೊಬಗನುಮಾಪತಿಗೆ ಶಾಂತಿಯನು......' ವಿರೂಪಾಕ್ಷ ದಯಪಾಲಿಸಿರುವಂತೆ, ಎಲ್ಲ ನಾಲಗೆಗೆ ರುಚಿ ನೋಡುವ

ಸಾಮರ್ಥ್ಯವನ್ನು ನೀಡಿದ ನಾಲಗೆಯ ರಸ ಈ ಚಿದಂಗ ಶರಣನ ಅಖಂಡವಾದ ಜಿಹ್ವೆ. ನಾಲಗೆಯ ಮಂಟಪದಲ್ಲಿ ಮಂಡಿಸಿರುವ 'ಗುರುಲಿಂಗ' ನಾಲಗೆಯ ಬಾಗಿಲ ತೆಗೆದು ರಸ ವಿಷಯದ ಅಂತರಂಗದಲ್ಲಿ ಹೊಳೆವ 'ರಸೋ ವೈ ಸಃ' ತನ್ನ ರಸ, ಲಿಂಗರಸವನ್ನು ಅದೇ ಬಾಗಿಲೊಳಗಿಂದ ಸ್ವೀಕರಿಸಿದರೆ, ನಾಲಗೆಗೆ ನಿರ್ವಾಣಸುಖ, ಶರಣನಿಗೆ ಸರ್ವಾಂಗ ಲಿಂಗ ಸುಖ, ಭಾವಲಿಂಗಕ್ಕೆ ಸ್ವಯಂಭುಲೀಲೆಯ ನಾಮ ಸೀಮೆಯಿಲ್ಲದ ಸುಖ. ಇದರಂತೆ ಶರಣನ ಕಿವಿ ತೊಗಲು ಬಾಗಿಲವಾಗಿ, 'ಪ್ರಸಾದಲಿಂಗ' ಮತ್ತು 'ಜಂಗಮಲಿಂಗ'ಗಳು ಶಬ್ದ ಮತ್ತು ಸ್ಪರ್ಶಪ್ರಪಂಚವನ್ನು, – ಆ ಪ್ರಪಂಚದ ಸಿಪ್ಪೆಯನ್ನು ಕಳೆದು, ಅವರ ಗಂಭೀರವನ್ನೇ ಕೈಹಿಡಿದು ಶಬ್ದಬ್ರಹ್ಮದ, ಪ್ರಣವಲಿಂಗದ ದಿವ್ಯನಾದಮಾಧುರ್ಯವನ್ನು, ಸೋಂಕಿದುದನ್ನೆಲ್ಲ ಶಿವಮಯ ಪಾವನ ಪವಿತ್ರಗೊಳಿಸುವ ದಿವ್ಯ ಕೋಮಲಲಿಂಗವನ್ನು– ಕೈಕೊಂಡು ಉಂಡರೆ, ಕಿವಿಗೆ ಬೇರೆ ಶಬ್ದಸುಖವೆಂಬುದಿಲ್ಲ, ತೊಗಲಿಗೆ ಬೇರೆ ಸೋಂಕಿನ ಸೊಗಸೆಂಬುದಿಲ್ಲ. ಶರಣನ ಈ ಜಿಹ್ವೆ ಈ ಶ್ರೋತ್ರ ಈ ತ್ವಕ್ಕು ಚಿದ್‌ದೃಕ್ಕುಗಳೇ ಅಥವಾ ಚಿದ್‌ದೃಕ್ಕೇ. ಪಂಚವಿಧವಾದ ಇಂಥ ಚಿದ್‌ದೃಕ್ಕು ಉಳ್ಳ ಶರಣ ಪಂಚ ಮಹಾಭೂತ ತನ್ನಲ್ಲಡಗಿದ ಪಂಚಬ್ರಹ್ಮಮಯನೇ.[೧]

ಇರವಿನ ಎಲ್ಲಾ ತರಂಗಗಳ ಲೀಲಾವಾರಾಶಿಯಾದ ಸದ್ರೂಪ ಭಾವಲಿಂಗಕ್ಕೆ ತನ್ನ ಚಿದಂಗ – ಅಂದರೆ ಶರಣ–ದಲ್ಲಿ ಮೂಡಿರುವ ಕಿವಿ ಮುಂತಾದ ಐದಿಂದ್ರಿಯಗಳ ಮುಖ ವಾಗಿ ಶರಣ ಹೊರಗೆ ನೋಡಿದರೆ ಹೊರಗೆ ಲಿಂಗ, ಹೊರಗೆಲ್ಲ ಲಿಂಗದ ಬೆಳಸು; ಒಳಗೆ ನೋಡಿದರೆ ಒಳಗೆಲ್ಲ ಬೆಳಸಿನ ವಲ್ಲಭ, ಭಾವಲಿಂಗ. ನೆಲ ನೀರು ಬೆಂಕಿ ಗಾಳಿ ಬಯಲು, ಶಬ್ದ ಸ್ಪರ್ಶ ರೂಪ ರಸ ಗಂಧ, ಪಂಚ ಪ್ರಾಣವಾಯು ಹತ್ತು ಜ್ಞಾನ–ಕರ್ಮೇಂದ್ರಿಯ, ಅದರಂತೆ ಮನ ಬುದ್ಧಿ ಚಿತ್ತ ಅಹಂಕಾರಗಳೆಲ್ಲ–ಅಖಂಡವಾದ ಚಿದ್‌ದೃಕ್ಕು ಗಭೀರವಾಗಿ ನೋಡಿದರೆ, ಇವೆಲ್ಲ ಲಿಂಗದ ಬೆಳಸೇ. ಬಿಸಿಲು ಬೆಳುದಿಂಗಳು, ಕಾಗೆ ಕೋಗಿಲೆ, ಮೃಗರಾಶಿ ವನಪಂಕ್ತಿ, ಸಪ್ತ ಸಮುದ್ರ ಸಪ್ತ ಕುಲಪರ್ವತ, ಸ್ವರ್ಗ ಮರ್ತ್ಯ ಪಾತಾಳ—ಎಲ್ಲ ಎಲ್ಲ

೧. ಇಲ್ಲಿ ಶಿವಲೆಂಕ ಮಂಚಣ್ಣಗಳ ವಚನವನ್ನು ನೋಡಿರಿ:

ರಸವನರಿವುದಕ್ಕೆ ಜಿಹ್ವೆಯಾಗಿ ಬಂದು,
ಗಂಧವನರಿವುದಕ್ಕೆ ನಾಸಿಕವಾಗಿ ಬಂದು,
ರೂಪನರಿವುದಕ್ಕೆ ನೇತ್ರವಾಗಿ ಬಂದು,
ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು,
ಸ್ಪರ್ಶವನರಿವುದಕ್ಕೆ ತ್ವಕ್ಕಾಗಿ ಬಂದು,—
ಇಂತೆನ್ನ ಘಟದ ಮಧ್ಯದಲ್ಲಿ ನಿಂದು
ಪಂಚವಕ್ತ್ರನಾದೆಯಲ್ಲಾ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ.

ಶಿ. ಸಂ. ವ. ಭಾ. ೨, ಪು. ೭೧, ವ. ೧೬.

ಲಿಂಗದ ಬೆಳಸು. ಇದನ್ನು 'ಯಃ ಪಶ್ಯತಿ ಸ ಪಶ್ಯತಿ'ಯೇ ದಿವ್ಯದ್ರಷ್ಟಾರ ಶರಣ.[೧] ಇಂಥ ದಿವ್ಯ ದೃಷ್ಟಿಯುಳ್ಳ ಶರಣನೇ ಲಿಂಗದ ಬೆಳಸಿನ ಭೋಕ್ತಾರ.

ವಿಶ್ವವಿಷಯಸುಖಭೋಗದ ಪರಮರಹಸ್ಯ ಇಲ್ಲಿದೆ ಈ ಶರಣಸ್ಥಲದಲ್ಲಿ. ನಾವು ಮೊದಮೊದಲು ನೋಡಿದ ಸಂಸಾರಹೇಯಸ್ಥಲ ಮಾಯಾವಿಲಾಸವಿಡಂಬನಸ್ಥಲಗಳನ್ನು ಹೊರಳಿ ನೋಡಿದರೆ, 'ಮನೆ ಬೇಡ ಮಾರು ಬೇಡ. ಹೆಂಡಿರು ಮಕ್ಕಳು ಬೇಡ, ಧನ ಧಾನ್ಯ ಬೇಡ. ನೆಲದ ಮೇಲೆ ನಿಲ್ಲ ಬೇಡ, ನೀರು ಕುಡಿಯ ಬೇಡ. ಉಸುರಾಡಿಸಬೇಡ, ಕಣ್ಣು ತೆರೆದು ನೋಡಬೇಡ. ಎಲ್ಲಿಗಾದರು ಓಡು, ಓಡಿ ಹೋಗು. ಎಲ್ಲಿಯೂ ಇರಬೇಡ. ಇರುವುದು ಕ್ಷೇಮವಲ್ಲ. ಎಲ್ಲ ಬಿಟ್ಟು 'ಇರದೆ ಇರುವುದೆ' ಲೇಸು......'—ಎಂಬಿಂಥ ವಿರಾಗದ ವಿರಸತರಂಗಗಳು 'ಸಂಸಾರ=ಹೇಯ, ಮಾಯೆ=ವಿಡಂಬನ' ಎಂಬ ಸುಡಿಯ ಮೇಲೆ ಮೂಡಿ ಬಂದು ಬಂದು ಮಾನವನ ಭಾವ ಬುದ್ಧಿಗೆ ಹೊಡೆಯುತ್ತವೆ. ಭಾವ ಬುದ್ಧಿಗಳು 'ಸತ್ತು ಸ್ವರ್ಗಕ್ಕೆ ಹೋಗುವುದಕ್ಕಿಂತ ಇದ್ದು ನರಕವನುಂಬುದೆ ಲೇಸು' ಎಂದು ಸ್ವರ್ಗದಾಸೆಯನ್ನೆ ಬಿಟ್ಟು, 'ಉಂಡದ್ದೇ ಬಂತು'—ಎಂದುಕೊಂಡು, ಸಂಸಾರದ ಸಾಸಿವೆಯ ಸುಖಗಳನ್ನೆ ಶರೀರಕ್ಕೆ ಮೇಸಿ, ತಾವೂ ಮೇಯುತ್ತ ಬಂದಿವೆ. ಆದರೆ ಅದೇ ಭಾವ ಬುದ್ಧಿ ಶರಣಸ್ಥಲಕ್ಕೆ ಬಂದು ಸಾವಧಾನವಾಗಿ ವಿಷಯಸುಖಭೋಗದ ಗಭೀರ ಸ್ವರೂಪವನ್ನು ನೋಡಿದರೆ, ತಮ್ಮ ತಪ್ಪು ತಿಳಿವಳಿಕೆಗೆ ತಾವೇ ಬೆಪ್ಪಾಗುತ್ತವೆ.

'ಲಿಂಗಸಂಗತತ್ಪರ ಶರಣಂಗೆ ಸರ್ವವಿಧ ಭೋಗ ಸುಖಂ, ಪೆರತೇಂ ಶಿವಾಧವಾ?,' 'ಉಣಲಾಗದೆಂಬ ಶಾಸ್ತ್ರವುಂಟೇ ಲಿಂಗವಂತಂಗೆ'—ಎಂಬಿಂಥ ಶರಣರ ದಿವ್ಯಭೋಗ ಸೂತ್ರಗಳನ್ನು ಕೇಳಿದರೆ, ಅವರು ಲೋಕದ ಅಣ್ಣಗಳಾದ ನಮಗೆ ಹೇಳುವುದೇನು? 'ರವದಿಯ ಮೇದು ರಸವ ಮರೆದಿರಲ್ಲಾ ಅಣ್ಣಗಳಿರಾ! ಮನೆಯೊಳಗೆ ಹಾಲು ಜೇನು ಮಳೆಗರೆಯುತ್ತಿರಲು, ಮಂಜಿನ ನೀರಿಗೆ ಬೊಗಸೆಯನೊಡ್ಡಿದಿರಲ್ಲಾ ವಿಷಯದ ತಮ್ಮಗಳಿರಾ! ಒಳಗೆ ತುಂಬಿರುವ ರಸವನರಿಯಲರಿಯದೆ ಭೇದಿಸಲರಿಯದೆ ತಿನ್ನಲರಿಯದೆ, ಕಬ್ಬಿನ ಹೊರಗಿರುವ ಎಲೆಯನ್ನೆ ಮೇದು ಅದೇ ತಮ್ಮ ಲಭ್ಯ, ಅದೇ ತಮ್ಮ ಸರ್ವ ಸುಖ, ಅದೇ ತಮ್ಮ ಪ್ರಾಣದ ರಕ್ತ ಮಾಂಸವೆಂದಿರುವ ಕುರಿಗಳಂತಾಗದೆ, ಕಬ್ಬನ್ನು ಕಡಿದು ಭೇದಿಸಿ ರಸವನ್ನು ಕುಡಿವ ಕರಿಗಳಾಗಿರಣ್ಣಾ......'— ಎಂದು ಮಾನವಜಾತಿಯ ಪ್ರಾಣಿಗಳನ್ನು ಕನಿಕರಿಸಿ, ಅವರನ್ನು ಜೀವನದ ರಹಸ್ಯ ರಸಸಮುದ್ರದೆಡೆಗೆ ಕೊಂಡೊಯ್ದು

---

೧. ಇಲ್ಲಿ ಬಸವಣ್ಣನವರ 'ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ . . .' (ಬ. ಪ., ವ. ಪು. ೧೩೯, ಮಾ. ಜ್ಞಾ. ಸ್ಥ. ವ. ೭.)—ಎಂಬ ವಚನವನ್ನು ಹಿಗ್ಗಿಸಿ ಹೀಗೆ ಹೇಳಬಹುದು:

ಎತ್ತೆತ್ತ ನೋಡಿದಡತ್ತತ್ತ ನೀನೆ ದೇವಾ.
ಎತ್ತೆತ್ತ ಕೇಳಿದಡತ್ತತ್ತ ನೀನೆ ದೇವಾ.
ಎತ್ತೆತ್ತ ವಾಸಿಸಿದಡತ್ತತ್ತ ನೀನೆ ದೇವಾ.
ಎತ್ತೆತ್ತ ರುಚಿಸಿದಡತ್ತತ್ತ ನೀನೆ ದೇವಾ.
ಎತ್ತೆತ್ತ ಸೋಂಕಿದಡತ್ತತ್ತ ನೀನೆ ದೇವಾ.
ಸಕಲ ವಿಸ್ತಾರದ ರೂಹು ನೀನೆ ದೇವಾ.

"ಬನ್ನಿ, ಕುಳ್ಳಿರಿ ತಿನ್ನಿರಿ ಉಣ್ಣಿರಿ; ಷಡ್‌ರಸ ನವರಸ ಶತಸಹಸ್ರರಸಗಳ ಪ್ರಾಣರಸವನ್ನು ಸರ್ವಾಂಗದಲ್ಲಿ ಭೋಗಿಸಿ ಪರಮಸುಖದೊಳಗೆ ಬದುಕಿ ಬಾಳಿ ನಿತ್ಯರಾಗಿ ಇರಿ; ಅವಿರಳ ವಾಗಿ ತೆರಹಿಲ್ಲದಂತೆ ಪರಿಪೂರ್ಣವಾಗಿ ಇರಿ; ಪರಿಪೂರ್ಣವಾಗಿ ಭೋಗಿಸಿ, ಕೊರತೆ ಒಂದಿನಿಸಿಲ್ಲದಂತೆ ದಿವ್ಯಭೋಗವನ್ನೆ ಭೋಗಿಸಿ. ಆದರೆ 'ಭೋಕ್ತಾರ, ತಾನು, ಲಿಂಗದ ಅಂಗ, ಭೋಗ್ಯವಸ್ತುವೆಲ್ಲ ಲಿಂಗಮಯವಾದ ಲಿಂಗದ ಬೆಳಸು; ಅಂಗಮುಖವಾಗಿ ಒಳಗೆ ನಡೆವ ನಾದ ಪರಿಮಳ ಬೆಳಗು ರಸ ಸೋಂಕು ಸಂಬಂಧಗಳೆಲ್ಲ ವಿಶ್ವಕರ್ತ ವಿಶ್ವಭರ್ತ ವಿಶ್ವಭೋಕ್ತಾರ ಲಿಂಗದೇವನಿಗೆ ನೈವೇದ್ಯ. ಏಕೆಂದರೆ ತನ್ನ ಅಂಗವೆ ಲಿಂಗದಲ್ಲಿ ಅರ್ಪಿತ ವಾದ ಬಳಿಕ, ಅಂಗದ ಭೋಗವೆಲ್ಲ ಲಿಂಗಭೋಗವೇ'—ಎಂಬ ನಿರಂತರ ಸಾವಧಾನದ ಪ್ರಾಣವಾನಾದ ಹೃದಯದ ಕಿವಿಯನ್ನು ಸದಾ ತುಂಬಿರಲಿ, ಮತ್ತು' ಇಂಥ ವಿಶ್ವಭಾವ ಲಿಂಗದ ಭೋಗವೆ ಬೃಹದ್‌ಭೋಗ, ಅದೇ ಬ್ರಹ್ಮಸುಖ. 'ಯದಲ್ಪಂ ತತ್ರ ನ ಸುಖ ಮಸ್ತಿ' "—ಎಂದು ಹೇಳುತ್ತ ಹಸುರಿಗೆ ಜಗ್ಗುತ್ತಿರುವ ಪ್ರಾಣಿಗಳನ್ನು ಮತ್ತೆ ಮತ್ತೆ ಎಳೆದು ತಂದು ದಿವ್ಯರಸಸಮುದ್ರದ ಜೀವನಕ್ಕೆ, ಭೋಗಕ್ಕೆ ಹಚ್ಚುವಂತಿದೆ. ಆ ದಿವ್ಯ ಭೋಗದ ಪರಮಾನಂದವೆ ಉಕ್ಕಿ ಹೊರಸೂಸಿ ವಚನವಾಗಿ ರೂಪುಗೊಂಡಿವೆ ಮಾನವ ಕುಲದ ಕಲ್ಯಾಣಕ್ಕೆಂದು.

ಇಂಥ ಶರಣನ ಸ್ವಭಾವ-ಗುಣ-ಧರ್ಮ-ಕರ್ಮವೇನು? ಶರಣರ ಪರಿಯ ಶರಣರೆ ಬಲ್ಲರು. ಹಾವಿನ ಹೆಜ್ಜೆ ಹಾವಿಗೆ ಗೊತ್ತು. ಅದೋ ಇಲ್ಲಿಯೇ. ಈ ಶರಣಸ್ಥಲ ದಲ್ಲಿಯೆ ನಿಂದಿರುವ ಷಣ್ಮುಖಸ್ವಾಮಿಗಳನ್ನು ವಿಚಾರಿಸಿ ಶರಣರ ಪರಿಯನ್ನು:

ಕಾಯದ ಕಳವಳದಲ್ಲಿ ಕಂಗೆಡುವನಲ್ಲ ಶರಣ.
ಜೀವನುಪಾಧಿಕೆಯ ಹೊದ್ದುವನಲ್ಲ ಶರಣ.
ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ.
ಮನದ ಮರವೆಯಲ್ಲಿ ಮಗ್ನನಲ್ಲ ಶರಣ.
ಕರಣಂಗಳ ಕತ್ತಲೆಯಲ್ಲಿ ಸುತ್ತಿ ಬೀಳುವನಲ್ಲ ಶರಣ.
ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ.
ಪರತರ ಲಿಂಗದ ಬೆಳಗಿನೊಳಗೆ ಬೆರೆದು,
ತೆರಹಿಲ್ಲದೆ ಬೆಳಗುವ ಪರಮಗಂಭೀರ ಶರಣನ ನಿಲವಿಂಗೆ
ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.[೧]

ಕಾಯದ ಕಳವಳ ಜೀವನ ಉಪಾಧಿ ಭಾವದ ಭ್ರಮೆ ಮನದ ಮರವೆ ಕರಣಗಳ ಕತ್ತಲೆ ಇಂದ್ರಿಯಗಳ ವಿಕಾರಗಳೆಲ್ಲ ಜರುರಿ ಹೋಗಿ. ಶರಣನ ದಶದಿಕ್ಕೆಲ್ಲ ಪ್ರಸನ್ನವಾಗಿವೆ. ಪರಾತ್ಪರಲಿಂಗದ ಪರಮಶಕ್ತಿಯಾದ ಚಿದ್ಬೆಳಗಿನೊಳಗೆ ಬೆರೆದು ಒಂದಾಗಿ, ಲಿಂಗದ ಅಖಂಡ ಬೆಳಗೆ ತಾನಾಗಿ ಬೆಳಗುವ ಪರಮ ಗಂಭೀರ ಶರಣ. ಈ 'ಗಂಭೀರ', ಆಕಾಶ ಪಾತಾಳವನ್ನು ದಶದಿಗ್ವಲಯವನ್ನು ಉಜ್ಜಳಿಸಿ ಪಾರಾಗಿ ನಿಂದ ಗಂಭೀರ. ಈ ಗಂಭೀರ

೧. ಅಖಂ. ವ. ಪು. ೨೨೧. ವ. ೨.

ದಿಂದ, ಈ ಪರಾತ್ಪರವಾದ ಲಿಂಗದ ಗಂಭೀರದಿಂದ ಶರಣ ನಡೆಯುತ್ತಾನೆ, ನುಡಿಯುತ್ತಾನೆ, ಉಣ್ಣುತ್ತಾನೆ ತಿನ್ನುತ್ತಾನೆ; ಈ ಗಂಭೀರದ ಬೆಳಗಿನಲ್ಲಿಯೆ ಮಲಗುತ್ತಾನೆ, ಏಳುತ್ತಾನೆ; ಅದೇ ಆ ಗಂಭೀರವೆ ಹಾಸಿಗೆ ಅದೇ ಹೊದಿಕೆ. ಲಿಂಗದ ವಶದಲ್ಲಿ ನಡೆವ ಬೆಳಗು ಶರಣ, ಲಿಂಗದ ವಶದಲ್ಲಿ ನುಡಿವ ಬೆಳಗು ಶರಣ. ಲಿಂಗವಶದಲ್ಲಿ ವಿಚಾರಿಸುವ ಆಚರಿಸುವ ಬೆಳಗು ಶರಣ. ಶರಣನ ಭಾವ ಶರಣನ ಮನ ಶರಣನ ಪ್ರಾಣ ಇಂದ್ರಿಯಗಳೆಲ್ಲಾ ಲಿಂಗದ ವಶವಾಗಿ ವರ್ತಿಸುತ್ತವೆಯಲ್ಲದೆ ಅಲ್ಲಿ 'ನಾನು' 'ನನ್ನ ವಶ' ಎಂಬುದಿಲ್ಲ. ಮಾಡುವ ಮಾಟದಲ್ಲಿ ನೋಡುವ ನೋಟದಲ್ಲಿ, ಪ್ರಾಣಿಸುವ ಪ್ರಾಣದಲ್ಲಿ ನೆನೆವ ಮನದಲ್ಲಿ, ವಿಚಾರಿಸುವ ಬುದ್ಧಿಯಲ್ಲಿ ಭ್ರಮಿಸುವ ಭಾವದಲ್ಲಿ—ಹೀಗೆ ಶರಣನ ಯಾವ ಅಂಗವನ್ನು ತೆರೆದು ನೋಡಿದರೂ ಅಲ್ಲಿ 'ನಾನು ತಾನು' ಎಂಬುದರ ಕುರುಹಿಲ್ಲ. 'ತಾವಿಲ್ಲದ ಮಹಿಮರು ಶರಣರು'–ಎಂದು ಶರಣರು ಹೇಳುವ ಮಾತಿನ ಅರ್ಥವಿದೇ. ಅಲ್ಲೆಲ್ಲ ನಾನು ಬರಿದಾಗಿದ್ದರೆ ಅಲ್ಲಿ ಈಗ ವಾಸಮಾಡಿ ವ್ಯವಹರಿಸುತ್ತಿರುವರಾರು?

> ಎನ್ನ ತನುವಿನೊಳಗೆ ತನುರೂಪಾಗಿರ್ದಿರಯ್ಯ ನೀವು,
> ಎನ್ನ ಮನದೊಳಗೆ ಮನರೂಪಾಗಿರ್ದಿರಯ್ಯ ನೀವು.
> ಎನ್ನ ಪ್ರಾಣದೊಳಗೆ ಪ್ರಾಣರೂಪಾಗಿರ್ದಿರಯ್ಯ ನೀವು,
> ಎನ್ನ ಭಾವದೊಳಗೆ ಭಾವರೂಪಾಗಿರ್ದಿರಯ್ಯ ನೀವು.
> ಎನ್ನ ಇಂದ್ರಿಯಂಗಳೊಳಗೆ ಇಂದ್ರಿಯಂಗಳ ರೂಪಾಗಿರ್ದಿರಯ್ಯ ನೀವು.
> ಎನ್ನ ವಿಷಯಂಗಳೊಳಗೆ ವಿಷಯಂಗಳ ರೂಪಾಗಿರ್ದಿರಯ್ಯ ನೀವು.—
> ಎನ್ನ ತನು ಮನ ಪ್ರಾಣ ಭಾವ ಇಂದ್ರಿಯಂಗಳೆಲ್ಲವು ನಿಮ್ಮವಾಗಿ.
> ಇಂತೀ ಎನ್ನೊಳಗೆ ನೀವು ಈ ಪರಿ ಪರಿಪೂರ್ಣವಿರ್ದಿರಾಗಿ,
> ನಾ ನಿಮ್ಮೊಳಗೆ ಚಿನ್ನ ಬಣ್ಣದಂತೆ, ರತ್ನ ದೀಪ್ತಿಯಂತೆ,
> ಜ್ಯೋತಿ ಪ್ರಭೆಯಂತಿರ್ದೆನಯ್ಯ ಅಖಂಡೇಶ್ವರಾ.[೧]

ಅದೋ ಶರಣನಿಗೆ ತನುವಿದೆ, ಆ ತನುವಿಗೊಂದು ರೂಪ, ಆಕಾರವಿದೆ. ಈ ರೂಪ ಈ ಆಕಾರ ಯಾವ ಭಿತ್ತಿಯ ಮೇಲೆ ರೂಪುಗೊಂಡಿದೆ? ಇದರಂತೆ ಮನಸ್ಸು ಪ್ರಾಣ ಕರಣೇಂದ್ರಿಯಗಳು ಯಾವ ಆಸರದ ಮೇಲೆ ನಿಂದು ತಂತಮ್ಮ ಉದ್ಯೋಗದಲ್ಲಿ ತೊಡಗಿವೆ? ಅಖಂಡೇಶ್ವರಲಿಂಗದ ಇರವೆ ಈ ಎಲ್ಲ ರೂಪಕ್ಕೆ ಪ್ರಾಣಾಧಾರ. ನಿಮಗರ್ಪಿತವಾದ ನಿಮ್ಮ ತನುವಿನಲ್ಲಿ ನೀವಿದ್ದೀರಿ; ನಿಮ್ಮಲ್ಲಿ ನಿಷ್ಠವಾದ ಪ್ರಾಣದಲ್ಲಿ ನೀವಿದ್ದೀರಿ. ನಿಮ್ಮಲ್ಲಿ ಮುಳುಗಿದ ಮನ ಭಾವ ಕರಣೇಂದ್ರಿಯಗಳಲ್ಲಿ ನೀವಿದ್ದೀರಿ. ಅಂತು ನಿಮ್ಮ ಮನೆಯಲ್ಲಿ ನೀವಿದ್ದೀರಿ, ನಿಮ್ಮ ಶರೀರದಲ್ಲಿ ನೀವಿದ್ದೀರಿ. ಇಲ್ಲಿದ್ದು ನೀವೆ ವ್ಯವಹರಿಸುತ್ತಿದ್ದೀರಿ. ಪರಿಪೂರ್ಣವಾಗಿ ಇದ್ದು, ಪರಿಪೂರ್ಣವಾಗಿ ವ್ಯವಹರಿಸುತ್ತಿದ್ದೀರಿ. ನಾನು ನಿಮ್ಮ ನಿಜನಿವಾಸ ಅಷ್ಟೇ. ನಾನು ನಿಮ್ಮ ಬಣ್ಣ, ನಿಮ್ಮ ದೀಪ್ತಿ,

---

೧. ಅಖಂ. ವ. ಪ್ರ. ೩೬೪, ವ. ೧೦೧.

ನಿಮ್ಮ ಕಾಂತಿ, ನಿಮ್ಮ ಪ್ರಭೆ. ನೀವು ರತ್ನ ನಾನು ದೀಪ್ತಿ, ನೀವು ಚಂದ್ರ ನಾನು ಚಂದ್ರಿಕೆ.

ಲಿಂಗ ಚಂದ್ರಮ, ಶರಣ ಚಂದ್ರಿಕೆ! ಶರಣನ ಗುಣ ಧರ್ಮ ನೀತಿ ಆಚಾರ ಎಂಥವು? ಚಂದ್ರಿಕೆಯ ಗುಣ ಧರ್ಮ ನೀತಿ ನಡತೆ ಹೇಗೆ ಎಂದು ಪ್ರಶ್ನೆ ಹಾಕಿದರೆ, ಉತ್ತರ ಏನು ಕೊಡಬೇಕು? ಚಂದ್ರಿಕೆಯ ಈ ಪ್ರಶ್ನೆಗೆ ಚಂದ್ರಮನೆ ಉತ್ತರ. ಚಂದ್ರಮನ ಪ್ರಸನ್ನ ಬೆಳಗು, ಚಂದ್ರಮನ ಸುಂದರ ಶೀತಲ, ಚಂದ್ರಮನ ಶಿವಶಾಂತಿ, ಚಂದ್ರಮನ ಮಧುರಾನಂದಗಳು ಚಂದ್ರಿಕೆಯನ್ನು ಸರ್ವಾಂಗಭರಿತವಾಗಿ ಅಪ್ಪಿ ಹೊರಸೂಸಿ ಚರಾ ಚರಕ್ಕೆಲ್ಲ ಶೀತಲಾನಂದವನ್ನು ಹರವುತ್ತವೆ. ಇದೇ ನಿಸರ್ಗ ನಿಯಮ ಲಿಂಗಶರಣನಲ್ಲಿ. ಆತನಲ್ಲಿ ಸತ್ಯ ಜ್ಞಾನ ಶಾಂತಿ ದಾಂತಿ ದಯೆ ದಾಕ್ಷಿಣ್ಯ ಪ್ರೇಮ ಸದಾನಂದ ಅನಾಸಕ್ತಿ ಸರ್ವಾಸಕ್ತಿ ಪರಹಿತ ಪರೋಪಕಾರ ವಿಶ್ವಕಲ್ಯಾಣ ವಿಶ್ವಶೋಭನ—ಮುಂತಾದ ಗುಣ ಧರ್ಮವೆಲ್ಲ ಸಹಜವಾಗಿ ಅಂಕುರಿಸಿ ಪಲ್ಲವಿಸಿ ಬೆಳೆದು, ಲೋಕಕ್ಕೆಲ್ಲ, ಸರ್ವಲೋಕಕ್ಕೆಲ್ಲ ಚರಾಚರಕ್ಕೆಲ್ಲ ಸಂತೃಪ್ತಿಯನ್ನೆ ಹಬ್ಬಿಸುತ್ತವೆ. ಈತನ ಗುಣ ಧರ್ಮ ನೀತಿಗಳೆಲ್ಲ ಲಿಂಗ ದಿಂದ ಪ್ರಾಣರಸವನ್ನು ಪಡೆದು ಸಹಜವಾಗಿ ಸ್ವಯಂಭುವಾಗಿ ಒಡಮೂಡಿದುವೇ. ಕಲಿತ ಗುಣ ಕಲಿತ ಧರ್ಮ ಅಭ್ಯಾಸ ಮಾಡಿದ್ದ ನೀತಿ ಓದಿದ ನಡತೆ ಇವಲ್ಲ. ಅಥವಾ ಸಮಾಜಕ್ಕೆ ಹೆದರಿ, ಧರ್ಮ ದೇವರಿಗೆ ಹೆದರಿ, ಕಾಯದೆ ಕಾನೂನಿಗೆ ಭಯಪಟ್ಟು ಬಾಹ್ಯ ದಿಂದ ಆರೋಪಿತ ಗುಣ ಧರ್ಮಗಳಿವಲ್ಲ. ಮಗುವನ್ನು ಪ್ರೀತಿಸು ಎಂದು ತಾಯಿಗೆ ಕಲಿಸಬೇಕೆ? ಕೋಗಿಲೆಗೆ ಪಂಚಮವನ್ನು ಕೂಗಲಿಕ್ಕೆ ಯಾವ ಸಾಲೆಯಲ್ಲಿ ಹೆಸರು ಹಚ್ಚಿಸ ಬೇಕು? ಗಾಳಿ ಬೀಸುವುದನ್ನು ಕಲಿತುದು ಯಾವ ವಿಶ್ವವಿದ್ಯಾಲಯದಲ್ಲಿ? ಲೋಕದ ಕಣ್ಣಲ್ಲಿ ಎಂದೆಂದಿಗು ಪೂಜೆಗೊಂಡು ಬಂದಿರುವ ನಮ್ಮ ಅಹಿಂಸೆ ಸತ್ಯ ಅಸ್ತೇಯ, ನೀತಿ ನಿಯಮ ಗುಣ ಧರ್ಮ ಆಚಾರ, ಶಮೆ ದಮೆಗಳೆಲ್ಲ ಮಾನವಕುಲದಲ್ಲಿ ಕಾಲ ಕಾಲಕ್ಕೆ ದೇಶ ದೇಶಗಳಲ್ಲಿ ಹುಟ್ಟಿದ 'ಶರಣ' 'ಶಿವಶರಣ' 'ಲಿಂಗಶರಣ,' ದಿವ್ಯದ ಆಶ್ರಯದಲ್ಲಿದ್ದ ದಿವ್ಯಪುರುಷರಲ್ಲಿಯೆ ಅವತರಿಸಿ ಬಂದಿವೆ,—ದಿವ್ಯ ವಿಶ್ವಭಾವ ಲಿಂಗದಿಂದ. ಅವರ ನೀತಿ ಧರ್ಮ ಗುಣ ಕರ್ಮಗಳಿಂದಲೆ ಆಗಮ ಪುರಾಣ ಶಾಸ್ತ್ರ ಸೂತ್ರಗಳಾಗಿವೆ. ಸ್ವಲ್ಪ ಆಳವಾಗಿ ಇಳಿದು ನೋಡಿ,—ಶರಣರು ಮೇಲಿಂದ ಮೇಲೆ ಹೇಳುವ ಈ ಮಾತಿನ ಸತ್ವಾರ್ಥವನ್ನು.

ಶರಣಸ್ಥಲದ ಸೀಮೆಗೆ ಹತ್ತಿರುವುದೆ ಐಕ್ಯಸ್ಥಲ. ನಮ್ಮ ಪ್ರವಾಸದ ಚರಮ ವಿಶ್ರಾಮಸ್ಥಾನ ಇದೇ. ಶರಣ ಸತಿಗೆ ಲಿಂಗ ಪತಿಯಾಗಿ, ಸಮರತಿ ಸಮರಸ ಸಮಸುಖಾ ನಂದವನ್ನು ಅನುಭವಿಸಿ, ಕೊನೆಯಲ್ಲಿ ಲಿಂಗಪತಿಗೆ ಶರಣಸತಿಯೆ ಚಿದಂಗವಾಗಿ ನಿಂದ ಶರಣನ ನಿಲವನ್ನು ನೋಡಿದೆವು. ಆದರೆ ಅಲ್ಲಿ ಒಂದು ಸಂಗತಿ ನಿಮ್ಮ ಮುಂದೆ ಹೇಳ ಬೇಕಿತ್ತು, ಮರೆತೆ. ಕ್ಷಮಿಸಿರಿ. ನನೆ ಹೂವಾಗಿ ಅರಳಿ, ಹೀಚಾಗಿ ತೋರಿ, ಕಾಯಾಗಿ ಬಲಿಮು, ಹಣ್ಣಾಗಿ ರಸ ತುಂಬಿ ತೊಟ್ಟು ಬಿಟ್ಟು ಮರದಿಂದಿಳಿವಂತೆ, ಭಕ್ತಿ ಅಂದರೆ ಭಕ್ತನ ಚರಿತ್ರವೂ ಹೀಗೆಯೆ. ಶ್ರದ್ಧೆ ಅಥವಾ ವಿಶ್ವಾಸ ಭಕ್ತಿ ಏಕನಿಷ್ಠವಾಗಿ, ತನ್ನ ಅರ್ಪಣದಲ್ಲಿ ನಿರಂತರ ಸಾವಧಾನವಾಗಿ, ತನ್ನ ಅಂತರಂಗದ 'ಉರಿಲಿಂಗದೇವ' ಪ್ರತ್ಯಗ್‌ದರ್ಶನದಲ್ಲಿ

ಸ್ವಾನುಭಾವವಾಗಿ – ಹೀಗೆ ಭಕ್ತಿ ಉತ್ತರೋತ್ತರ ಸಾರವಾಗಿ, ಶರಣಸ್ಥಲದಲ್ಲಿ ಆ ಭಕ್ತಿ ಆನಂದವಾಗಿ ನಿಲ್ಲುತ್ತದೆ. ಶರಣಸ್ಥಲದ ಭಕ್ತಿ ಆನಂದಭಕ್ತಿ. ಈ ಭಕ್ತಿಯ ಆರಾಧ್ಯ ಪ್ರಸಾದಲಿಂಗ. ಶರಣ ಸರ್ವಾಂಗದಿಗಂಬರವಾಗಿ, ಭಕ್ತಿ-ರತಿಯಲ್ಲಿ ಮನೆಗೆ ಬಂದ ನಲ್ಲನ ಸಂಗವನ್ನು ಮಾಡಿದರೆ, ಶರಣನ ಸರ್ವಾಂಗವೆಲ್ಲ ಲಿಂಗದೇವನ ದಿವ್ಯಪ್ರಸನ್ನತೆಯಿಂದ, ಆತನ ದಿವ್ಯಪ್ರಸಾದದಿಂದ 'ಸರ್ವತಃ ಸಂಪ್ಲುತ'ವಾಗಿ, ಭಾವಲಿಂಗಕ್ಕೆ ತಾನೇ ಅಂಗ ವಾಗಿ ನಿಲ್ಲುತ್ತದೆ. ಭಾವಲಿಂಗದ ಭೇದವೇ ಪ್ರಸಾದಲಿಂಗ. ಈ ಭಾವಲಿಂಗವೇ ಐಕ್ಯ ಸ್ಥಲದಲ್ಲಿ ಐಕ್ಯನ ಆರಾಧ್ಯಲಿಂಗ ಮಹಾಲಿಂಗವೆಂದು ಹೇಳುತ್ತಾರೆ ಶರಣರು.

ಇರವಿಗೆ ಅಂಗವಾದ ಅರಿವಿನಿಂದ ಶರಣನಾದ. ಅರಿವೇ ಶರಣ, ಇರವೇ ಲಿಂಗ ವೆಂದು ಹೇಳಿದರೂ ಸರಿಯೇ. '......ಆ ಅಱಿವು ನಿಜದಲ್ಲಿ ಸಮರಸಭಾವವನ್ನೈದಿದ ನಿರ್ಭಾವಪದದೊಳು ನಿಂದ' ಭೇದವೇ ಐಕ್ಯಸ್ಥಲವೆಂದು ಸಿದ್ಧವೀರಣ್ಣೊಡೆಯರು ಈ ಸ್ಥಲದ ವಿಶೇಷವನ್ನು ನಿರ್ದೇಶಿಸುತ್ತಾರೆ. ಅಂದರೆ ಚಿದಂಗ ಶರಣ ತನ್ನ ನಿಜದಿರವಾದ, ತನಗೆ ಪರಮಾಧಾರ ಪ್ರಾಣ ಭಾವವಾದ ನಿಜದಲ್ಲಿ, ಮಹಾಘನಭಾವಲಿಂಗದಲ್ಲಿ ಕೂಡಿ ಬೇರಿಲ್ಲದಂತೆ ಬೆರಸಿದರೆ, ಲಿಂಗದ ರಸ ಅಂಗದಲ್ಲಿ ಅಂಗದ ರಸ ಲಿಂಗದಲ್ಲಿ ಹರಿಹರಿದು ಅಂಗಭಾವ ಲಿಂಗಭಾವ ಒಂದಾಗಿ ನಿಂದರೆ, ಒಂದಾಗಿ ನಿಂದ ನಿಲವೇ ನಿರ್ಭಾವಪದ ಅಥವಾ ನಿರ್ಭಾವಸ್ಥಲ. ಅದೇ ಐಕ್ಯಸ್ಥಲ. ಒಡೆಯರ ಈ ಹೇಳಿಕೆಯನ್ನು ವಿವರಿಸಿ ನೋಡಿದರೆ ಲಿಂಗ ಅಂಗ–ಲಿಂಗಪತಿ ಶರಣಸತಿ–ಸಮರಸವಾದರೆ, ಸಮರಸವಾಗಿ ನಿಂದ ಭಾವ ಅಂಗಭಾವ ಅಲ್ಲ, ಲಿಂಗಭಾವ ಅಲ್ಲ. ಅಂತೆಯೆ ಅದು ಭಾವವಿಲ್ಲದ ಭಾವ, ನಿರ್ಭಾವ. ಈ ನಿರ್ಭಾವಪದದಲ್ಲಿ ನಾನೆಂಬುದಿಲ್ಲ, ನೀನು ದೇವನೆಂಬುದಿಲ್ಲ; ಇದಿರು ವಿಶ್ವವೆಂಬುದಿಲ್ಲ. ಹೆಣ್ಣು ಗಂಡಿನ ಸಾಮರಸ್ಯದಲ್ಲಿ 'ಪರವಶ' ಇದೆ, ನಿದ್ರೆ ಇದೆ. ಈ ಪರವಶದ ನಿದ್ರೆ ತಿಳಿದರೆ ಹೆಣ್ಣು ಹೆಣ್ಣಾಗಿ ಏಳುತ್ತದೆ, ಗಂಡು ಗಂಡಾಗಿಯೆ ಉಳಿದಿದೆ. ಹೆಣ್ಣು ಗಂಡಾಗಿಲ್ಲ, ಗಂಡು ಹೆಣ್ಣಾಗಿ ಪರಿವರ್ತನ ಆಗಿಲ್ಲ. ಅಥವಾ ಹೆಣ್ಣು ಗಂಡು ಕೂಡಿ ಬೇರೊಂದು ವಿಚಿತ್ರ ವಿಧವಾದ ಪ್ರಾಣಿಯಾಗಿಲ್ಲ. ಹೆಣ್ಣಿಗೆ ತಾನು ಹೆಣ್ಣು ಎಂಬ ಭಾವ ಮುಂದುವರಿದಿದೆ. ಹಾಗೆಯೆ ಗಂಡಿಗೆ. ಆದರೆ ಶರಣ–ಲಿಂಗಸಾಮರಸ್ಯದಲ್ಲಿ ಮೊದಲು ಹೆಂಡತಿಯೆ ಗಂಡನಿಗೆ ಅಂಗವಾಗಿ, ಆ ಮೇಲೆ ಅಂಗ ಲಿಂಗದಲ್ಲಿ ಸಮರಸವಾಗಿ, ಲಿಂಗ ಅಂಗದಲ್ಲಿ ಸಮರಸವಾಗಿ, ಕೊನೆಗೆ ಏಕರಸಮಯವಾಗಿ ನಿಲ್ಲುತ್ತವೆ. ಆಗ ಹೆಂಡತಿ ಯಾರು? ಗಂಡನೆಲ್ಲಿ?

> ನಲ್ಲನ ಕೂಡುವ ಭರದಲ್ಲಿ ಎನ್ನುವ ಇದಿರುವನೇನೆಂದರಿಯೆ.
> ನಲ್ಲನ ಕೂಡುವಾಗಲು ಎನ್ನುವ ನಲ್ಲನ ಏನೆಂದರಿಯೆ.
> ಉರಿಲಿಂಗದೇವನ ಕೂಡಿದ ಬಳಿಕ ನಾನೋ ತಾನೋ ಏನೆಂದರಿಯೆ ![೧]

ಶರಣ ಚಿತ್‌ಸ್ವರೂಪ. ಈ 'ಚಿತ್ತುವೆಂಬ ಬಿತ್ತು' ವಿಶ್ವವಿಸ್ತಾರವನೊಳಕೊಂಡಿರುವ ವಿಶ್ವ ಬೀಜ. ಶರಣನಿಗೆ ತನ್ನ ಅರಿವಿನ ಅಂಗದಲ್ಲಿಯೆ ಬೆಳೆದ ವಿಶ್ವವೃಕ್ಷದ ಪೂರ್ಣ ಪರಿಚಯ

೧. ಶಿ. ಸಂ. ವ. ಭಾ. ೨, ಪು. ೯೬, ವ. ೪೮.

ವಿದೆ. ತನ್ನ ಪರಿಚಯ ತನಗೆ ಇರಬೇಡವೇ? ತನ್ನ ಚಿದಂಗದಲ್ಲಿ ವಿಶ್ವವನ್ನೆಲ್ಲ ಗರ್ಭೀಕರಿಸಿಕೊಂಡೇ ನಲ್ಲನ ಕೂಡುವ ಭರದಲ್ಲಿದ್ದ ಶರಣನಿಗೆ ಇದಿರೆಂಬುದೆ ಉಳಿದಿಲ್ಲ. ನಾನು ಇದಿರು ಒಂದಾಗಿ ನಲ್ಲನೊಡನೆ ಸಮರಸಸಂಗವ ಮಾಡುವ ಭರದಲ್ಲಿ, ನಾನು ನಲ್ಲೆ, ತಾನು ನಲ್ಲ ಎಂಬ ಸೀಮೆಗಲ್ಲು ಕಿತ್ತು ಹೋಗಿದೆ. ಹಾಗೇಕೆ ಎಂದು ಕೇಳುವಿರಾ? ಹೆಂಡತಿಗೆ ಸಂಶಯ: ತಾನು ಹೆಂಡತಿ ಹೌದೋ ಎಂದು, ಗಂಡನೇ ತಾನಲ್ಲವೇ ಎಂದು. ಚಿನ್ನ ಬಣ್ಣ, ರಸ ರುಚಿ, ರನ್ನ ಕಾಂತಿ, ಚಂದ್ರಮ ಚಂದ್ರಿಕೆ—ಇವರ ಸಂಗವಾದರೆ ಬಣ್ಣ ರುಚಿ ಕಾಂತಿ ಚಂದ್ರಿಕೆಯರು ತಮ್ಮನ್ನು ಚಿನ್ನ ರಸ ರನ್ನ ಚಂದ್ರಮರೆಂದು ಭಾವಿಸಿದರೆ ತಪ್ಪೇನು? ರನ್ನದಲ್ಲಿ ಕಾಂತಿಯಿದೆ. ಕಾಂತಿಯಿಂದ ರನ್ನ ತಾನು ರನ್ನ. ಕಾಂತಿಯನ್ನು ತೆಗೆದರೆ? ಲಿಂಗ ಅಂಗದ ಸಮರಸದಲ್ಲಿ ಒಂದರಲ್ಲೊಂದು ಕೂಡಿ ಅಡಗಿದರೆ. ಆಗ 'ನಾನೋ ತಾನೋ ಏನೆಂದರಿಯೆ'. ಅಂಗಭಾವ ಇಲ್ಲ, ಅದರಂತೆ ಲಿಂಗಭಾವವೂ ನಿಷ್ಪತ್ತಿಯಾಗಿದೆ. ಈ ಅವಸ್ಥೆಯಲ್ಲಿ ಏನೋ ಎಂಬ ಭಾವ ಇದೆ. ಆದರೆ ಅದು ನಾನು ತಾನು, ಶರಣ ಲಿಂಗ ಎಂಬ ಭಾವ ಅಲ್ಲ. ಅದೇ ನಿರ್ಭಾವ ಸ್ಥಲ.

ಈ ನಿರ್ಭಾವದ ನಿಲವಾಗಿ ನಿಂದ ಐಕ್ಯಾನುಭವವನ್ನೇ ಪ್ರಭುದೇವರು ಹೀಗೆ ಹಾಡುತ್ತಾರೆ:

ಭಾವಕ್ಕೆ ಇಂಬಿಲ್ಲ. ಶಬ್ದ ಮಿೂಸಲು ನೋಡಾ!
ನುಡಿಗೆಡೆಯಿಲ್ಲ, ಎಡೆಗೆ ಕಡೆಯಿಲ್ಲ'—ಗೊಹೇಶ್ವರನೆಂಬ ಶಬ್ದ ವೇಧಿಸಲೊಡನೆ.[೧]

ತನಗೆ ಇದಿರಿಟ್ಟು ತೋರುವ ವಿಶ್ವಭೂತಭಾವ ತನ್ನಲ್ಲಿ ಕರಗಿ ಸಮರಸವಾಗಿ,[೨] ವಿಶ್ವಾತ್ಮನಾದ ತಾನು ಲಿಂಗದಲ್ಲಿ ಸಮರಸವಾದರೆ, ಏಕರಸವಾದರೆ, ಇದು ನಾನು ದೇವರು ಎಂಬ ಭಿನ್ನಭಾವಕ್ಕೆ ಇಂಬು ಉಳಿದಿದೆ ಎಲ್ಲಿ? ಹಲವು ಮಕರಂದ ಸೇರಿ ಒಂದು ಮಧುವಾದ ಬಳಿಕ, ಮಲ್ಲಿಗೆಯ ಮಕರಂದ ಮೊಲ್ಲೆಯ ಮಕರಂದ, ಮಾವು ಬೇವು ಕಮಲ ಕಣಗಿಲೆಯ ಮಕರಂದವೆಂಬ ಹಲವು ರಸ ಭಾವಕ್ಕೆ ಆಸ್ಪದವೆಲ್ಲಿ ಇದೆ? ಸರ್ವಮಕರಂದಭಾವದ ಸಮರಸಪದವೇ ಮಧು. ಅಲ್ಲಿ ಎಲ್ಲ ಇದೆ. ಆದರೆ ಒಂದೊಂದರ ಭಾವ ಎಲ್ಲರಲ್ಲಿ ಕೂಡಿ ಒಂದಾಗಿ ನಿಂದಿದೆ. ಯಾವ ಒಂದು ವಿಶಿಷ್ಟಭಾವಕ್ಕೆ 'ನಿರ್ಭಾವ ಪದ'ದಲ್ಲಿ ಇಂಬು ಇಲ್ಲ. ಬೆಂಕಿಯ ಸಂಗ ಮಾಡಿ ಎಲ್ಲ ಕಟ್ಟಿಗೆ ಬೆಂಕಿಯಾದರೆ, ಅದು ಯಾರ ಬೆಂಕಿ?

ವಿಶ್ವವನಪ್ಪಿದ ಶರಣನ ಭಾವ ಮಹಾಘನ ಭಾವಲಿಂಗದಲ್ಲಿ ಬೆಚ್ಚರೆ, ಶರಣ ಬೇರೆ ವಿಶ್ವದ ತೋರಿಕೆ ಬೇರೆ ಲಿಂಗ ಬೇರೆ ಎಂಬುದೇ ಉಳಿದಿಲ್ಲ. ಉಳಿದ ಉಳಿಮೆ ಒಂದು, ಅದು ಭಾವರಹಿತ. ಮತ್ತೆ 'ಏಕರಸ'ವಾಗಿ ನಿಂದಿರುವ ಶರಣನ ಅನುಭವದಲ್ಲಿ ಶಬ್ದ ಮಿೂಸಲು. ಅಂದರೇನು? ಅಂದರೆ ಮಾನವನ ಮನ ಬುದ್ಧಿ ಭಾವ ಮಾತು ಎಂಜಲಿಸದಿರುವ ಶಬ್ದ. ಅದೇ ನಾದಲಿಂಗ, ಶಬ್ದಬ್ರಹ್ಮ, ಪ್ರಣವಜ್ಯೋತಿ. ಇದರ ಮಿೂಸಲು

೧. ಶೂ. ಸಂ. ಪು. ೨೦, ವ. ೭೨.
೨. ನೋಡಿರಿ: 'ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂತ್ ವಿಜಾನತಃ' ಈ. ಉ. ಮಂ. ೭.

ಯಾರೂ ಮುರಿದಿಲ್ಲ. ಬೇರೆಯವರಿಂದ ಮುರಿಸಿಕೊಳ್ಳುವ ಮೊಸಲೂ ಅದಲ್ಲ. ವಿಶ್ವ ಬ್ರಹ್ಮಾಂಡದ ಒಳಹೊರಗೆ ಸದಾ ಸನ್ನಿಹಿತವಾಗಿ ಬೆಳಗುವ ಜಿಜ್ಯೋತಿಯ ಪರಿಪೂರ್ಣ ಗೀತವೇ ಈ ಚಿನ್ನಾದ. ಇದರ ಮೊಸಲುಭಾವ 'ಆತ್ಮವಿದೋ ವಿದುಃ'. ಈ ಮೊಸಲು ಶಬ್ದ ನಿಶ್ಶಬ್ದಕ್ಕೆ ನೈವೇದ್ಯವಾಗಬೇಕೆಂದು ಹಾಕಿದ ಮೊಸಲು. ಯಾವ ಭಾಷೆ ನುಡಿ ಮಾತುಗಳಿಗೆ ಈ ಮೊಸಲುಶಬ್ದವನ್ನು ಬಳಸಿಕೊಂಡು, ಸರ್ವಸಮರಸವಾಗಿ, ಏಕರಸ ವಾಗಿ ಪರಿಪೂರ್ಣವಾಗಿ ನಿಂದ 'ಏಕೋ ಭಾವ'ವನ್ನು ನುಡಿದು ಹೇಳುವ ಬಲ್ಲತನವಿಲ್ಲ. ಶಬ್ದಬ್ರಹ್ಮಸಾಗರದಲ್ಲಿ ಉದಯವಾಗಿ ತೋರಿ ಅಡಗುವ ಮಾತಿನ ವೀಚಿಕೆಗಳಿಗೆ ಸಾಗರವನ್ನು ಹೊರುವ ಸಾಮರ್ಥ್ಯವೆಲ್ಲಿ? ಬಯಲಿಗೆ ಮನೆ ಕಟ್ಟಿಸಿ ಕೊಡುವ ಧೀರ ರಾರು? ಮಹಾವಾರಾಶಿಯಲ್ಲಿ ಬಾವಿಯನ್ನು ತೋಡುವ ಸಾಹಸವೇನು ಪ್ರಯೋಜನ? ನೀರಿಗೆ ನೀರು ಕುಡಿಸುವುದು, ಬೆಂಕಿಗೆ ಕಾವು ಕೊಡುವುದು ವ್ಯರ್ಥಶ್ರಮ. ಬೆಟ್ಟಕ್ಕೆ ಕಲ್ಲು ಹೊರುವುದು, ಭೂಮಿಗೆ ಮಣ್ಣು ಹೊರುವುದು ಮೂರ್ಖತನವಲ್ಲದೆ ಮತ್ತೇನು? ಅಂತೆಯೆ ಲಿಂಗಾಂಗೈಕ್ಯದ ಪರಿಪೂರ್ಣಭಾವವನ್ನು ನುಡಿಗೆ ಒಳಗುಮಾಡಿ ನುಡಿಯ ಬಾರದು. ನುಡಿದರೆ ಅದಕ್ಕದೆ ಕೊರತೆ. 'ಬೊಮ್ಮವನು ಅರಿದಿಹರೆ ಸುಮ್ಮಗಿದ್ದಿರ ಬೇಕು', 'ಸತ್ಯವನು ಅರಿದಿಹರೆ ಸತ್ತ ಹಾಗಿರಬೇಕು,' 'ಶಾಂತೋಽಯಮಾತ್ಮಾ', 'ಯದ್ ವಾಚಾ ಅನಭ್ಯುದಿತಂ ಯೇನ ವಾಗಭ್ಯುದ್ಯತೇ,' 'ಯತೋ ವಾಚೋ ನಿವರ್ತಂತೇ' –ಎಂಬಿಂಥ ಅನುಭವದ ಮಾತನ್ನು ನೀವು ಕೇಳಿರಬಹುದು. ಮುಕ್ತಾಯಕ್ಕ ಪ್ರಭುದೇವ ರಿಗೆ 'ಎನ್ನ ಅಜಗಣ್ಣತಂದೆ ಶಬುದಕ್ಕೆ ಹೇಸಿ ಮುಗುದನಾದನು' ಎಂದು ವಾದಿಸುವ ಮಾತಿನಲ್ಲಿ ಇದೇ ಅರ್ಥವಿದೆ.

ಬಯಲು ಬೆರಗಿನ ಸುಖದ ಸವಿಯ ಬೆರಗಲ್ಲದೆ ಕಾಣೆ, ಕಾಣೆ.
ನುಡಿಗೆಡೆಯ ಕಾಣೆ, ಕಾಣೆ.
ಕುರುಹಳಿದುಳಿದು, ಅರಿವ ನೆರೆಯರಿದು ಬೆರಸಿದೆನೆಂಬ
ಬರುನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರಾ.[1]

ನಾನು ಭಕ್ತ, ಶರಣಸತಿ, ಶಿವಯೋಗಿ ದೇವನಲ್ಲಿ ಯೋಗವಾಗಿ ಏಕವಾದೆ ಎಂದು ಹೇಳಿದರೆ, ಅಥವಾ ಆ ಐಕ್ಯಾವಸ್ಥೆ, ಸ್ಥಲದ ಸ್ವಾನುಭಾವವನ್ನು ಹಾಗೆ ಹೀಗೆ ಎಂದು ವಿವರಿಸಿ ನುಡಿದರೆ, ಇಲ್ಲವೆ ಬ್ರಹ್ಮದ ಕುರುಹು ಇಂತು ಅಂತು ಎಂದು ಲಕ್ಷ್ಯವಿಟ್ಟು ಶಬ್ದಕ್ಕೆ ತಂದರೆ, ಲಿಂಗಾಂಗಗಳ ಏಕತ್ವ ಘಟಿಸಿಲ್ಲವೆಂದೇ ಹೇಳಬೇಕು. ಏಕೆಂದರೆ ಇಲ್ಲಿ ಇದನ್ನೆಲ್ಲ ನುಡಿದು ಹೇಳುವ ನಾನು 'ನೀನಿನಲ್ಲಿ' ಪೂರ್ಣ ಏಕಾರ್ಥವಾಗಿಲ್ಲ. ಇನ್ನೂ ಕಸರು ಉಳಿದಿದೆ, ಬಹಳ ಉಳಿದಿದೆ. ಈ ಕಸರೆಲ್ಲ ನಷ್ಟವಾದರೆ ಲಿಂಗೈಕ್ಯ. ಈ ಐಕ್ಯದ ಪದದಲ್ಲಿ 'ನಾನೂ ಇಲ್ಲ ನೀನೂ ಇಲ್ಲ'. ಇಲ್ಲದ ನಾನು ನುಡಿದು ಹೇಳುವುದೆಂತು? ಅಂತೆಯೆ ನುಡಿಗೆ ಇಂಬು, ಎಡೆ ಇಲ್ಲ ಇಲ್ಲ; 'ಕಾಣೆ, ಕಾಣೆ'.

1. ವ. ಶಾ. ಸಾ. ಭಾ. ೨, ಪು. ೫೬೧, ವ. ೧೧೦.

ನುಡಿಗೆ ಎಡೆ ಇಲ್ಲ. ಆದರೆ ಎಡೆಗೆ ಕಡೆಯೇ ಇಲ್ಲ. ಕಡೆ ಮೊದಲಿಲ್ಲದ ಎಡೆಯೇ ತುಂಬಿದೆ ಎಲ್ಲೆಡೆಯಲ್ಲಿ. ಎಡೆ ಅಂದರೆ ಪೃಥ್ವಿ ಆಕಾಶಕ್ಕೆ, ಶಬ್ದ ಗಂಧಕ್ಕೆ, ವಿಶ್ವಪ್ರಾಣ ವಿಶ್ವ ಭಾವಕ್ಕೆ, ಚಿನ್ನಾದ ಚಿಜ್ಜ್ಯೋತಿ ಚಿತ್-ಚೈತನ್ಯಕ್ಕೆ ಸಚ್ಚಿದಾನಂದ ನಿತ್ಯಪರಿಪೂರ್ಣಕ್ಕೆ ಎಡೆ ಗೊಟ್ಟು ಇನ್ನೂ ಉಳಿದು ಇರುವ ಎಡೆಯೇ ಇದು. ಈ ಎಡೆಯನ್ನೇ 'ಸ್ಥಲ'ವೆಂದು ಕರೆಯಬಹುದು; ಅಖಂಡವಾಗಿ ಬೆಳಗುವ ಬಯಲೆಂದು, ಅಥವಾ ನಿರವಯಲೆಂದು, ಶೂನ್ಯ ನಿಶ್ಶೂನ್ಯವೆಂದು, ನಿಜ ನಿರಾಳ ಸಹಜವೆಂದೂ ಹೇಳಬಹುದು. ಅಂಗ ಲಿಂಗ ಒಂದಾಗಿ ನಿಂದ ಈ ಎಡೆಯೇ 'ಭಾವವಿಲ್ಲದ ಬಯಲು, ಪರವು ತಾನೆ.' ಈ ಅನುಭವ 'ಗೊಹೇಶ್ವರನೆಂಬ ಶಬ್ದ ವೇಧಿಸಲೊಡನೆ' ಆದ ಅನುಭವ. ಇಲ್ಲಿ 'ಗೊಹೇಶ್ವರ' ಎಂಬ ಶಬ್ದಬ್ರಹ್ಮ ಶರಣನ ಅಂತರಂಗ ಬಹಿರಂಗ ಸರ್ವಾಂಗದಲ್ಲಿ ನಾಟಿದೆ,'ಬೇರೂರಿಕೊಂಡು ನಾಟಿದೆ. ಎತ್ತ ನೋಡಿದತ್ತ ಗೊಹೇಶ್ವರ, ಎತ್ತ ಕೇಳಿದತ್ತ ಗೊಹೇಶ್ವರ, ಎತ್ತೆತ್ತ ರುಚಿ ನೋಡಿದರೆ ವಾಸಿಸಿದರೆ ಸೋಂಕಿದರೆ ವಿಚಾರಿಸಿದರೆ ಭಾವಿಸಿದರೆ ಅತ್ತತ್ತ ಗೊಹೇಶ್ವರ. ಬೇರೆ ಭಾವ ಬೇರೆ ಬುದ್ಧಿ ಬೇರೆ ನುಡಿಗೆ ಎಡೆಯಿಲ್ಲದ 'ಏಕಮೇವಾದ್ವಿತೀಯ ಗೊಹೇಶ್ವರ'-ಎಂಬುದೇ ಪ್ರಭುದೇವರ ವಚನದ ಅನುಭವಾರ್ಥ. ನಿರ್ಭಾವ ನಿಶ್ಶಬ್ದವಾದ, ತಾನು ವಿಶ್ವ ಲಿಂಗ ಸಮರತಿಯಿಂದ ಸಮರಸವಾದ ನಿಜಲಿಂಗೈಕ್ಯದ ನಿಲವನ್ನೇ ಮತ್ತೆ ಹಾಡುತ್ತಾರೆ ಪ್ರಭುದೇವರು:

> ನಿರ್ವಿಕಲ್ಪಿತವೆಂಬ ನಿಜದೊಳಗಯ್ಯಾ ! ನಿರಹಂಭಾವದಲ್ಲಿ ನಾನಿದ್ದೆನು.
> ನೋಡಿಹೆನೆಂದರೆ ನೋಡಲಿಲ್ಲ, ಕೇಳಿಹೆನೆಂದರೆ ಕೇಳಲಿಲ್ಲ.
> ಘನನಿರಂಜನದ ಬೆಳಗು ಇಂಬಾದುದನೇನೆಂಬೆ ಗೊಹೇಶ್ವರಾ?[೧]

ಸಂದು ಸಂಶಯ ಸಂಕಲ್ಪ ವಿಕಲ್ಪಗಳು ಈ ಐಕ್ಯಾನುಭೂತಿಯಲ್ಲಿ ಹೇಳ ಹೆಸರಿಲ್ಲದಂತೆ ಸುಟ್ಟು ಹೋಗಿವೆ. ಜೀವ ನಾನು, ಶರಣ ನಾನು ಎಂಬ ಅಹಂಭಾವದ ಅರಿವು ಲಿಂಗಭಾವದಲ್ಲಿ ಸಮರಸವಾಗಿ, ತನ್ನ ನಿಜದೊಳಗೆ ಸರ್ವಾಹಂಭಾವವಳಿದು, ನಿರಹಂಭಾವದಲ್ಲಿ ನಿಂದು, ತನ್ನ ನೋಡಬೇಕೆಂದರೆ ತಾನಿಲ್ಲ, ಲಿಂಗದ ಸ್ವರೂಪವ ನೋಡಬೇಕೆಂದರೆ ಅದೂ ಇಲ್ಲ. ನೋಡಲು ನೋಡುವ ನಾನಿಲ್ಲ, ನೋಡಿಸಿಕೊಳ್ಳುವ ನೀನಿಲ್ಲ. ಹಾಗಾದರೆ ಇರುವು ದಾದರೂ ಏನು?–ಎಂದು ಕೇಳಿದರೆ ಪ್ರಭುದೇವರು ಹೇಳುವುದು ತಮ್ಮ ನಿಜ ಸ್ವರೂಪ ವನ್ನು. ಅದೇ ನಮ್ಮ ಪ್ರಶ್ನೆಗೆ ಉತ್ತರ: ಘನ ನಿರಂಜನದ ಬೆಳಗು ಇಂಬಾದುದು. ಇಪ್ಪತ್ತೈದು ಮೂವತ್ತಾರು ತತ್ತ್ವಗಳ ಯಾವ ಕರಿ ಬಿಳಿ ಬಣ್ಣದ ಲೆಪ್ಪವೂ ಇಲ್ಲದೆ, ನಿರಂಜನ ವಾಗಿ ತೆರಹಿಲ್ಲದೆ ಬೆಳಗುವ ಸ್ವಯಂಜ್ಯೋತಿ ಚಿದಾಕಾಶವಾಗಿ ಎಲ್ಲ ಮೇರೆಗಳೆದು ಹರ ವಿದರೆ, ಅದೇ ಲಿಂಗ ಅಂಗ ಒಂದಾದ ನಿಜದಿರವು. ಈ ಇರವೇ ಲಿಂಗಶರಣ ಅಥವಾ ಶರಣಲಿಂಗ.

ತಾನು ಮತ್ತು ವಿಶ್ವದ ಮರೆಯ ನಿಜದಿರವನ್ನು ಅರಿದು, ಆ ಇರವೇ ತಾನಾಗಿ ಇದ್ದ ನಿಶ್ಚಿಂತ ಪುರುಷ ಈ ಶರಣಲಿಂಗ. ಪ್ರಾಣಕಳೆಯನ್ನು ವಿಶ್ವಪ್ರಾಣಲಿಂಗದಲ್ಲಿ ಯೋಗಿಸಿ,

---

೧. ಶೂ. ಸಂ. ಪು. ೨೦, ವ. ೭೩.

ಮರಣದ ಮೇಲೆ ನಿಂತ ಮಹಾಂತನೀತ. ಮಹಾಘನಲಿಂಗವನ್ನು, ಪರಾತ್ಪರ ವಸ್ತುವನ್ನು ತನ್ನ ಚಿದಂಗದಲ್ಲಿ ಸಮರಸವಾಗಿ ಧರಿಸಿದ ಮಹಿಮನೀತ, ಪರಮಾನಂದದ ಮೂರ್ತಿ ಈತ. ನಿರಾಕಾರವೆ ಸಾಕಾರದಲ್ಲಿ ಭರಿತವಾಗಿ ನಿಂದ ಸಹಜ ನಿರಾಳ ಈ ಮಾನವಲಿಂಗ.

ನಮಗೆ ತಿಳಿದ ಮಟ್ಟಿಗೆ ವಿಶ್ವಕ್ಕೆ ಮಾನವನೆ ತಲೆ. ಮಾನವನ ಮುಖವಾಗಿಯೆ ವಿಶ್ವ ತನ್ನ ಪರಮಗಂಭೀರ ರಹಸ್ಯವನ್ನು, ತನ್ನ ನಿಜಸ್ವರೂಪವನ್ನು ನೋಡಲು ಹವಣಿಸುವಂತಿದೆ. ನೆಲ ನೀರು ಗಾಳಿ ಬೆಂಕಿ ಬಯಲಲ್ಲಿ ತನ್ನ ತಾ ಕಾಣಲರಿಯದೆ, ಮರ ಬಳ್ಳಿ ಪಶು ಪಕ್ಷಿ ಎಂಬ ಹಲವು ವಿಧ ಹಲವು ಕೋಟಿ ರೂಪದ ಮಾರ್ಗವಾಗಿ ತನ್ನ ತಾ ನೋಡದೆ, ಪ್ರಕೃತಿ ತನ್ನ ಮಾನವನಿರ್ಮಾಣದಲ್ಲಿ ಆತ್ಮಸಂಪಾದನೆಯ ಕೆಲಸವನ್ನು ನಡೆಸಿದಂತಿದೆ. ನಿಸರ್ಗದ ಯಾವ ರೂಪ ರಚನೆಯಲ್ಲಿಯೂ ಒಡೆಯದ ನಿಜದರಿವಿನ ಸೆಲೆ ಮಾನವನಲ್ಲಿ ಒಡೆದಿದೆ. ಅಷ್ಟೇ ಅಲ್ಲ, ಪರಿಪೂರ್ಣ ಪರಂಜ್ಯೋತಿಸಾಗರದ ಬ್ರಹ್ಮ ಸೆಲೆಯೆ ಇಲ್ಲಿ, ಮಾನವಪಿಂಡದಲ್ಲಿ ಹತ್ತಿ ವಿಶ್ವದ ಒಳಗುಟ್ಟು ರಟ್ಟಾದಂತಿದೆ, – ಮಾನವನ ನಿಜಾನುಭೂತಿಯ ಮಹಾಪ್ರಯೋಗದಲ್ಲಿ.

ವಿಶ್ವಭೂತ-ಪ್ರಪಂಚ ಜಡನಿದ್ರೆಯಲ್ಲಿ ಚೈತನ್ಯನಿದ್ರೆಯಲ್ಲಿ ಪ್ರಾಣನಿದ್ರೆಯಲ್ಲಿ ಮನೋನಿದ್ರೆಯಲ್ಲಿ ದೀವಿಗೆ ತೆಗೆದು ಮಲಗಿಕೊಂಡರೆ, ಘನನಿರಂಜನದ ಬೆಳಗು ತುಂಬಿ ಇಂಬಾದುದು ಹೇಗೆ ಕಾಣಬೇಕು? ಆದರೆ ವಿಶ್ವಾಂಗದ ಒಂದು ಬಿಂದು, ಒಂದು ಜ್ಞಾನ ಕಳೆ ನಿದ್ದೆ ತಿಳಿದೆದ್ದರೆ, ತನ್ನ ಸರ್ವಾಂಗದಲ್ಲಿ ತುಂಬಿ ಇಂಬಾದ ಘನನಿರಂಜನದ ಬೆಳಗನ್ನು ಕಂಡರೆ, ತನ್ನ ಮೈಯ ಅರಿವೆಲ್ಲ ತನಗಾಗುತ್ತದೆ. ಕಣ್ಣು ತೆರೆದರೆ ನನ್ನ ಮೈ ನನಗೆ ಕಾಣುತ್ತದೆ. ಪ್ರಪಂಚದ ಮೈಯೂ ನನಗೆ ಕಾಣುತ್ತದೆ. ಹಾಗೆಯೆ ಅಂತರ್ಮುಖವಾಗಿ ಅರಿವಿನ ಕಣ್ಣು ತೆರೆದರೆ, ಮಾನವನಿಗೆ ತನ್ನ ವಿಶ್ವಾಂಗದ ಸ್ವರೂಪವೆಲ್ಲ ಗೋಚರವಾಗುತ್ತದೆ. ತನ್ನ ಚಿದಂಗದ ಆವಿರ್ಭಾವವೆ ಈ ವಿಶ್ವಾಂಗ. ಅಖಂಡವಾಗಿ ಬೆಳಗುವ ಚಿದಂಗದಲ್ಲಿಯೆ ವಿಶ್ವಭೂತಜಾತವೆಲ್ಲ ಉದಯವಾಗಿ, ಅಲ್ಲಿಯೆ ಲೀಲೆಯಾಡಿ, ಅಲ್ಲಿಯೆ ಲೀನವಾಗುವ ತನ್ನ ವಿಶ್ವಾಂಗದರ್ಶನ ಕರತಲದ ಅಮಲಕ ಚಿದ್ದ್ರಕ್ಕಿಗೆ. ಲಿಂಗೈಕ್ಯನ ನಿಜದಿರವೆಂದರೆ: ತನ್ನ ಇರವು ವಿಶ್ವದ ಇರವು ಲಿಂಗದ ಇರವು ಚಿದ್ಬೆಳಗಿನಿಂದ ಪ್ರಕಾಶವಾಗಿ, ನಿಜೈಕ್ಯಭಕ್ತಿಯಿಂದ ಎಲ್ಲ ಇರವು ಅರಿವು ಒಂದುಗೂಡಿ ಒಂದಾಗಿ ನಿಂತರೆ, ಆ ನಿಲವೇ ಲಿಂಗೈಕ್ಯನ ನಿಲವು. ತನ್ನಿರವಿನಲ್ಲಿ ವಿಶ್ವದಿರವು ಸಮರಸವಾಗಿ, ತಾನು-ವಿಶ್ವದಿರವೆಲ್ಲ ಲಿಂಗದಿರವಿನಲ್ಲಿ ಸಮರಸವಾಗಿ ನಿಂತರೆ, ಆಗ ಶರಣನ ನಿಲವೇನು? ಆತನ ಇರವೆಂಥದು? ಆತನ ಅರಿವು ಆತನ ಕ್ರಿಯೆ, ಆತನ ಭೋಗ ಭಾಗ್ಯ, ಆತನ ವಿಶ್ವಸಂಪದ್ವಿಲಾಸ ಹೇಗೆ? ಮಗ್ಗೆಯ ಮಾಯಿದೇವರನ್ನು ಕೇಳಿ ಹೇಳುತ್ತಾರೆ, ಅದು ಹೇಗೆ ಏನು ಎಂಬುದನ್ನು :

> ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಿಂ ।
> ಲಿಂಗದಿನೊಲ್ದು ವಿಸ್ತರಿಸಿ ಲಿಂಗಕೆ ಲಿಂಗಮನರ್ಪಿಸುತ್ತುಮಾ ॥

ಲಿಂಗಪದಾರ್ಥಮುಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ ।
ಲಿಂಗನಿಜೈಕ್ಯನಯ್ಯ ಪರಮಪ್ರಭುವೇ ಮಹದೈಪುರೀಶ್ವರಾ ॥೧

ತನ್ನ ನಿಜವಾದ ಲಿಂಗದಲ್ಲಿ ಏಕಾರ್ಥವಾಗಿ, ಲಿಂಗವೆ ತಾನಾಗಿ ಇರುವ ಶರಣ ನೆಲಸಿರುವುದು ವಿಶ್ವಪ್ರಪಂಚದ ಲಯ ಗಮನಸ್ಥಾನವಾದ ಲಿಂಗದಲ್ಲಿ. ಆತನ ಶರೀರ ಧರಿಸಿರುವುದು ಇಷ್ಟಲಿಂಗವನ್ನು; ಆತನ ಪ್ರಾಣದಲ್ಲಿ ಪ್ರಾಣಲಿಂಗ, ಭಾವದಲ್ಲಿ ಭಾವಲಿಂಗ ಸಮರಸವಾಗಿ ಮೂರ್ತಗೊಂಡಿದೆ. ಇಂಥ ಲಿಂಗದ ಪೂಜೆಯನ್ನು ತನ್ನ ನಿಜರೂಪ ಲಿಂಗವೆ ಆಗಿರುವ ಸಾಕಾರಲಿಂಗ ಶರಣ ಲಿಂಗದ ಭಾವದಲ್ಲಿಯೆ ನಿಂದು ಸಾಂಗವಾಗಿ ನೆರವೇರಿಸುತ್ತಾನೆ. ಮತ್ತೆ ಲಿಂಗಕ್ಕೆ ಲಿಂಗದ ಬೆಳಸಾದ ವಿಶ್ವಲಿಂಗದ್ರವ್ಯವನ್ನೆ ಅರ್ಪಿಸಿ, ಆ ಲಿಂಗಪ್ರಸಾದವನ್ನು ತಾನು ಕೈಕೊಂಡು, ಲಿಂಗಾನಂದದಲ್ಲಿಯೆ ಬೆಳಗುತ್ತಾನೆ ಲಿಂಗ ನಿಜೈಕ್ಯನಾಗಿ ಇರುವ ಶರಣ.

ಶರಣನ ಈ ಇರವು ಅರಿವು, ತನ್ನ ತಾನರ್ಚಿಸಿಕೊಂಬುದು, ತನಗೆ ತಾನೆ ಅರ್ಪಿತವಾಗಿ ತನ್ನ ಪ್ರಸಾದವನ್ನೆ ತಾನು ಕೊಂಡು ತನ್ನ ಆನಂದದಲ್ಲಿಯೆ ತಾನು ಬೆಳಗುವುದು ನನಗೆ ನಿಮಗೆ ತೀರ ವಿಚಿತ್ರ. ವಿಶ್ವದಲ್ಲಿ ನಾನೊಂದು ಶಕ್ತಿಯ ಬಿಂದುವಾಗಿ, ಅರಿವಿನ ಬಿಂದುವಾಗಿ ನನಗನ್ಯವಾದ ದೇವರನ್ನು ಪೂಜಿಸುವ ರೂಢಿ ನನಗಿದೆ. ಈ ದೇವರಿಗೆ ಷಡ್ರಸಾನ್ನವನ್ನು ಎಡೆಮಾಡುವುದು, ದೇವರಿಂದ ಬಂದುದನ್ನು 'ಪನಿವಾರ', ಪ್ರಸಾದವೆಂದು ತಿನ್ನುವುದು, ಮತ್ತೆ ನನ್ನ ಸುಖ ದುಃಖದಲ್ಲಿ ನಾನಿರುವುದು ನನಗೆ ಗೊತ್ತಿದೆ. ಆದರೆ ನನ್ನ ಪೂಜೆ ಅರ್ಪಣಾದಿಗಳನ್ನು ನನಗೆ ನಾನೆ ಮಾಡಿಕೊಳ್ಳುವುದು? ಶಾಂತಂ ಪಾಪಂ! ಶರಣನ ಲಿಂಗಪೂಜೆ ನೋಡುವುದೇ ಬೇಡವೆಂದು ನೀವು ಕಣ್ಣು ಮುಚ್ಚುವುದು ಕಿವಿ ಮುಚ್ಚುವುದು ಆಶ್ಚರ್ಯವಲ್ಲ. ಆದರೆ ಇಲ್ಲಿ ಮತ್ತೆ ನೆನೆಸಿಕೊಳ್ಳಿ 'ನ ಅಶಿವಸ್ಯ ಶಿವೋಪಾಸ್ತಿಃ ಘಟತೇ ಜನ್ಮಕೋಟಿಭಿಃ,' 'ನ ಅರುದ್ರಃ ರುದ್ರಮರ್ಚಯೇತ್' ಎಂಬ ಐಕ್ಯಪೂಜೆಯ ಅನುಭವದ ವಚನಗಳನ್ನು. ಮತ್ತು ನಾನು ನಾನಾಗಿರುವುದು, ನಾನು ನಾನೇ ಎಂದು ಅರಿವುದು, ನನ್ನ ಸ್ನಾನ ಗಂಧ ಲೇಪನಾದಿಗಳನ್ನು ನನಗೆ ನಾನು ಮಾಡುವುದು. ನನ್ನ ಊಟ ನಾನು ಮಾಡಿ ನನ್ನ ಸುಖವನ್ನು ನಾನೇ ಅನುಭವಿಸುವುದು, ನನಗೆ ನನ್ನಲ್ಲಿರುವ ನಿಜ. ಸಹಜವಾದ. ನನ್ನಲ್ಲಿ ನಾನು ಐಕ್ಯವಾಗಿರುವ ನನ್ನ ಅಹಂಭಾವದ ಜೀವನ ಅತಿ ಸಹಜ ನನಗೆ. ಇದಕ್ಕಿಂತ ಸಹಜವಾದ ಐಕ್ಯಭಾವ ಜಗತ್ತಿನಲ್ಲಿ ಮತ್ತೆಲ್ಲಿಯೂ ದೊರೆಯಲಿಕ್ಕಿಲ್ಲ. ಆದರೆ ಬೇರೆ ಕಡೆ ನಾವು ಈ ಮೊದಲೇ ನೋಡಿದಂತೆ, ಇದು ಪಲ್ಲಟ ಪೂಜೆ ಅಜ್ಞಾನಭಕ್ತಿ ಅಧೋಮುಖವಾಗಿರುವ ಗಮನ. ಇದೇ ಚಿಚ್ಛಕ್ತಿಯ ದ್ವೈತ ವಿಲಾಸ, ಮಾಯೆಯ ಮಾಟ. ಆದರೆ ಅಹಂಭಾವದ ಆಳದಲ್ಲಿ ಚಿದ್ಬ್ರಹ್ಮಾಂಡವನ್ನೊಳಕೊಂಡಿರುವ ಚಿದ್‌ಭಾಂಡ, ಚಿದಂಗ, ಶರಣ. ಈ ಆಳದ ತನ್ನಲ್ಲಿಯೆ ವಿಶ್ವದ ಉದಯ ವಿಲಾಸ ಅಸ್ತಮಾನ. ಇಂಥ ವಿಶ್ವದೇಹಧಾರಿಯಾದ 'ಶಿವೋಹಂ' ಶರಣ. ಈ ಚಿದಹಂಭಾವವೂ ಲಿಂಗಭಾವದಲ್ಲಿ ಸಮರಸವಾಗಿ ಅಡಗಿದ ಶರಣ ತನ್ನಂತಿರಬೇಕು, ಅಂದರೆ

---

೧. ಶ. ತ್ರಿ., ಪ್ರ. ೧೮೦, ಮ. ಶ. ಪ. ೫೬.

ಲಿಂಗದಂತಿರಬೇಕು. ನಾನು ನನ್ನಲ್ಲಿರುವಂತೆ ಶರಣ ಶಿವಲಿಂಗದಲ್ಲಿರಬೇಕು. ನನ್ನ ದೇಹ ಪ್ರಾಣ ಕರಣಾದಿಗಳಲ್ಲಿ ನಾನು ಏಕವಾಗಿರುವಂತೆ, ಶರಣ ಲಿಂಗದಲ್ಲಿ ಏಕವಾಗಿರಬೇಕು. ಆಗ ಶಿವಾದ್ವೈತಪೂಜೆ ಶಿವಾದ್ವೈತಭಕ್ತಿ ಅರ್ಪಣಾದಿಗಳು ಸಹಜವಾಗಿ ಮೈದೋರುತ್ತವೆ ಶರಣಲಿಂಗದಲ್ಲಿ. 'ತನ್ನ ತಾನರ್ಚಿಸಿ ಪೂಜಿಸಿಕೊಂಬ' ಲಿಂಗಲೀಲಾವಿಲಾಸದ ಮೂಲ ನೆನಹಿನ ಸ್ಪಂದ ಐಕ್ಯಸ್ಥಲದಲ್ಲಿ ಸಮಾಪ್ತವಾಗುತ್ತದೆ.

ಸುಳಿದಾಡುವ ಲಿಂಗ

'All being is one and to be fully is to be all that is. To be the being of all and include all in one's being, to be conscious of the consciousness of all, to be integrated in force with the universal force, to carry all action and experience in oneself and to feel it as one's own action and experience, to feel all selves as one's own self, to feel all delight of being as one's own delight of being is a necessary condition of the integral divine being.'[೧]

Sri Aurobindo.

ಸಕಲ ನಿಃಕಲನಯ್ಯಾ, ನಿಃಕಲ ಸಕಲನಯ್ಯಾ !
ಸಕಲನಾಗಿ ಸಂಸಾರಿಯಲ್ಲ. ನಿಃಕಲನಾಗಿ ವೈರಾಗಿಯಲ್ಲ.
ಸಂಸಾರಿಯಲ್ಲದ ಸಂಗ, ವೈರಾಗಿಯಲ್ಲದ ನಿಸ್ಸಂಗ.
ಇಂತೀ ಉಭಯಸಂಗದಿಂದ ಮಹವನೆಯ್ದಿಪ್ಪನಾಗಿ
ಕೂಡಲಚೆನ್ನಸಂಗಾ, ನಿಮ್ಮ ಶರಣನೆಂತಿರ್ದಡೇನಯ್ಯಾ?[೨]

ಚೆನ್ನಬಸವಣ್ಣನವರು.

ಆತ್ಮನ ನಿಜವನಱಿದು ಪರಮಾತ್ಮಲಿಂಗ ತಾನೆಂದಱಿದ ಶರಣಂಗೆ
ಎಂತಿರ್ದಂತೆ ಪೂಜೆ ನೋಡಾ !
ಶರಣ ಭೋಗಿಸಿದುದೆಲ್ಲಾ ಶಿವಾರ್ಪಿತ; ರುಚಿಸಿದುದೆಲ್ಲಾ ಪ್ರಸಾದ.
ಶರಣನಱಿದುದೆಲ್ಲಾ ಪರಬ್ರಹ್ಮ; ಮಱೆದುದೆಲ್ಲಾ ಪರಮಸುಖ.
ನುಡಿದುದೆಲ್ಲಾ ಶಿವತತ್ತ್ವ.
ಶರಣ ತಾನೆ ಕೂಡಲಚೆನ್ನಸಂಗಮದೇವ ![೩]

ಚೆನ್ನಬಸವಣ್ಣನವರು.

ಮತ್ತೆ ಮುಂದೆ: ಶೂನ್ಯಸಂಪಾದನೆಯ ದಿವ್ಯನಾಯಕನಂತಿದ್ದ ಪ್ರಭುದೇವರ ಸ್ಥಲವನ್ನು ಮುಟ್ಟುವವರೆಗೆ ನಮ್ಮ ಪ್ರವಾಸ ಮುಂದುವರಿಸೋಣವೇ? ಅವರು ನೆಲೆಯಾಗಿ ನಿಂದಿರುವ ಸ್ಥಲವಾವುದು? ಅವರ ಜೀವನ ಅಲ್ಲಿ ಹೇಗೆ ನಡೆದಿದೆ?–ಎಂದು ನೀವು ನನ್ನನ್ನು ಕೇಳಿದರೆ ಮತ್ತೆ ನನ್ನ ಉತ್ತರ ಒಂದೇ: ನನಗೆ ಏನೂ ಗೊತ್ತಿಲ್ಲ.

---

೧. The Life Divine Vol. II, Part II, PP. 1116-1117.
೨. ಲಿಂ. ಲೀ, ಎ. ಚಾ. ಪು. ೪೧೦, ವ. ೧೪.
೩. ಅದೇ ,, ಪು. ೪೧೩, ವ. ೨೦.

ಹಾಗಾದರೆ ಮುಂದೆ ಗತಿ? ದೇವರೇ ಗತಿಯೆ? ಹೌದು, ದೇವರೇ ಗತಿ; ನಮಗಿಲ್ಲಿ ಶೂನ್ಯಸಂಪಾದನೆಕಾರರಾದ ಸಿದ್ಧವೀರದೇವರೇ ಗತಿ. ಪ್ರಭುದೇವರನ್ನು ಅನುಭವಿಸಿ ಕಂಡವರಲ್ಲೊಬ್ಬರು ಈ ದೇವರು. ಒಂದರ್ಥದಲ್ಲಿ, ನಿಜವಾದ ಅರ್ಥದಲ್ಲಿ ಹೇಳುವುದಾದರೆ ದೇವರನ್ನು ಕಂಡವರು, ಕಾಣುವವರು ದೇವರೇ. ಬನ್ನಿ ಸಿದ್ಧವೀರದೇವರ ಕೈಹಿಡಿದು ನಡೆಯೋಣ.

ಶೂನ್ಯಸಂಪಾದನೆಯಲ್ಲಿ ಷಟ್ಸ್ಥಲದ ಸ್ವರೂಪವನ್ನು ದಿಗ್ದರ್ಶನಮಾಡಿ ತೋರುವ ಸಿದ್ಧವೀರದೇವರು 'ಅಲ್ಲಮ ಪ್ರಭುರಾಯನ ಜಂಗಮಸ್ಥಲದ ನಿಲುಕಡೆ'ಯನ್ನು ಹೀಗೆ ನಿರ್ದೇಶಿಸುತ್ತಾರೆ:

> ಇಂತು ಷಡುಸ್ಥಲವು ಷಡಂಗದಲ್ಲಿ ಸಮರಸವನೆಯ್ದಿ, ಸರ್ವಾಚಾರಸಂಪತ್ತು ನಿಃಪತ್ತಿಯಾಗಿ, ಮಹಾಜ್ಞಾನವೆ ತಾನಾಗಿ ನಿಂದ ನಿಜಪದಸ್ಥಲವೆ ಸ್ಥಲವಾಗಿ, ಅಲ್ಲಿ ಅಗಮ್ಯವೆ ಗಮನವಾಗಿ, ಪರವೆಂಬುದೆ ನಾಮವಾಗಿ, ನಿರಾಶಾಭರಿತವೆಂಬ ಜಂಗಮಸ್ಥಲವನಳವಡಿಸಿ, ನಿಶ್ಶಬ್ದವೆಂಬ ವಚನಾನುಭಾವಮಂ ತನ್ನನಾಶ್ರಯಿಸಿದ ಮಹಾನುಭಾವಿಗಳಿಗೆ ನಿರೂಪಿಸಲೆಳಸಿ, ಕಾಯವೆಂಬ ಕಂಥೆಯ ಧರಿಸಿ, ನಿಂದಲ್ಲಿ ನೆಳಲಿಲ್ಲದೆ, ಸುಳಿದರೆ ಹಜ್ಜೆಯಿಲ್ಲದೆ ಸುಳಿವ ಅಲ್ಲಮಪ್ರಭುರಾಯ....[೧]

ಆಚಾರಲಿಂಗ ಮೊದಲು ಮಹಾಲಿಂಗ ಕಡೆಯಾದ ಷಡ್ವಿಧಲಿಂಗ, ಭಕ್ತ ಮೊದಲು ಐಕ್ಯ ಕಡೆಯಾದ ಆರು ತೆರನಾದ ಅಂಗದಲ್ಲಿ ಸಮರಸವಾಗಿ, ಒಂದೇ ರಸವಾಗಿ ನಿಂದಿದೆ. ಲಿಂಗಸಂಗದಿಂದ ಅಂಗವೆಲ್ಲ ಪರಿಪಾಕವಾಗಿ, 'ಶರಣ ತಾನೆ ಕೂಡಲಚೆನ್ನಸಂಗಮದೇವ'ನಾಗಿ ಇದ್ದಾನೆ. ಷಟ್ಸ್ಥಲಮಾರ್ಗದಲ್ಲಿ ಪ್ರಕಾಶವಾಗುವ ಅರಿವು, 'ಲಿಂಗನಿಜೈಕ್ಯ' ಶರಣನ ಒಳಹೊರಗೆ, ಆತನ ಸರ್ವ ಅಂಗವೆ ಆಗಿರುವ ವಿಶ್ವಾಂಗದ ಒಳಗೆ ಹೊರಗೆ, ನಾನು ನೀನು ಅದು ಇದು ಭೂಮಿ ಆಕಾಶ ಅಣು ಮಹತ್ತು ಎಂಬ ಸರ್ವಭಿನ್ನತೆಯು 'ಸಮಸ್ತ ಕತ್ತಲೆಯ ಮುಸಕ'[೨]ವನ್ನು ಕಳೆದು ಎಲ್ಲ ತಾನು, ತಾನು ಎಲ್ಲವಾಗಿ ಬೆಳಗುತ್ತಿದೆ. ವಿಶ್ವಾಸ ಮೊದಲು ಸಮರಸ ಕಡೆಯಾದ ಆರು ಭಕ್ತಿಯ ಹೃದಯರಸದಿಂದ ಪರಿಪೂರ್ಣ ಅರಿವು-ಬೆಳಗು-ಚೈತನ್ಯ ತನ್ನ ನಿಜದಿರವಿನಲ್ಲಿ ಸರ್ವಭದ್ರವಾಗಿ ನೆಲೆಗೊಂಡಿದೆ. ಬೆಳಗು-ಬಯಲಿನ ಈ ಸಮರಸಾನಂದ ಮೇರೆದಪ್ಪಿ ಹರಿಯುತ್ತಿದೆ. ಅಸತ್ತು ಪರಿಪೂರ್ಣ ಸತ್ತನ್ನು, ಮೃತ್ಯು ನಿತ್ಯಾಮೃತವನ್ನು, ತಮಸ್ಸು ಪರಿಪೂರ್ಣ ಪರಂಜ್ಯೋತಿಯನ್ನು ಸೇರಿ ಸರ್ವ 'ಆಪ್ತಕಾಮ'ನಾಗಿದ್ದಾನೆ,—ಖಂಡಿತವಿಲ್ಲದ ದಿವ್ಯಕ್ಕಾಗಿ ಉರಿಯುತ್ತಿದ್ದ ಭಕ್ತಿಮಾನವ. ಲಿಂಗಕ್ಕಾಗಿ ನಡೆದ ಆಚಾರ ಕ್ರಿಯೆ ಪೂಜೆ ಅರ್ಚನೆ ಭಕ್ತಿ ಅರ್ಪಣ ಭೋಗ ಯೋಗವೆಲ್ಲ ಸರ್ವಾಂಗಪಕ್ವವಾಗಿ, ಅಂಗಫಲವೆಲ್ಲ ಲಿಂಗರಸ ತುಂಬಿದ ರಸ ಮಾನವ, ಶರಣ ತಾನು ತಾನಾಗಿ–ಅಂದರೆ ತಾನು ವಿಶ್ವವಾಗಿ ವಿಶ್ವ ತಾನಾಗಿ ತಾನೆ ವಿಶ್ವಾಂತಜ್ಯೋತಿಯಾಗಿ ಆ ಅಖಂಡ ಬೆಳಗೆ ತಾನಾಗಿ, ಎಲ್ಲ ಬೆಳಗಿ ಒಂದೆ ಇರವಾಗಿ, ಒಂದು ಇರವೆ ಎಲ್ಲ ತೋರಿಕೆಯಾಗಿ,—ನಿಂದರೆ ಅದೇ ಲಿಂಗಾಂಗೈಕ್ಯಸ್ಥಲ. ಈ ವಿಶ್ವ

೧. ಶೂ. ಸಂ. ಪು. ೨೧, ಪ್ರ. ೭೫. ೨. ಶೂ. ಸಂ. ಪು. ೩೭೫, ವ. ೪೪.

ಲಿಂಗಾತ್ಮಮೂರ್ತಿಯಾದ ಲಿಂಗೈಕ್ಯ-ಶರಣ ಮರದ ತುದಿಯ ರಸಫಲವಾದರೆ, ಸರ್ವಾಚಾರ ಸರ್ವಪೂಜೆ ಸರ್ವಭಕ್ತಿ-ಜ್ಞಾನ ಸರ್ವಾರ್ಪಣ ಮಾಡಿ ಮಾಡಿ ಸಮಾಪ್ತಿಯಾಗಿ ಲೋಕೋಪಕಾರಾರ್ಥವಾಗಿ ಚಲಿಸುವ ಚರಲಿಂಗ, ಜಂಗಮಲಿಂಗ ತೊಟ್ಟು ಬಿಟ್ಟ ಲಿಂಗರಸಫಲವೆಂದು ಹೇಳಬಹುದು.

ಸಿದ್ಧವೀರದೇವರು ಸೂಚಿಸುವಂತೆ ಮಹಾಜ್ಞಾನವೆ ತಾನಾಗಿ ನಿಂದ ನಿಜಪದಸ್ಥಲವೆ ಜಂಗಮಸ್ಥಲ. ವಚನಕಾರರು ಜಂಗಮ ಎಂದರೆ ಯಾವಾಗಲೂ 'ಸುಜ್ಞಾನ ಜಂಗಮ' ಎಂದು ಹೇಳುತ್ತಾರೆ. ಈ ಮಾತು ಮರೆಯತಕ್ಕ ಮಾತಲ್ಲ. ಸುಜ್ಞಾನ ಸದ್ಭಕ್ತಿಯು ಸಮರಸಸಂಗದಿಂದ ಸ್ವಯಂಭುವಾಗಿ ಮೂಡಿ, ವಿಶ್ವವಿಸ್ತಾರ ವಿಶ್ವಮೂಲಶಕ್ತಿಯಾದ ಚಿದ್ವಿಸ್ತಾರ–ಈ ಎಲ್ಲ ವಿಸ್ತಾರಕ್ಕೆ ಮೂಲಭಿತ್ತಿಯಾಗಿರುವ ಮಹಾಘನಲಿಂಗವೆ ತಾನಾಗಿ ಇದ್ದು ತನ್ನ ತಾನರ್ಚಿಸಿ ಪೂಜಿಸಿಕೊಂಬ, ತನ್ನ ತಾ ನೋಡಿ ಪ್ರೀತಿಸಿಕೊಂಬ, ತನಗೆ ತನ್ನ ಅರ್ಪಿಸಿಕೊಂಬ ಪರಮಕಲಾಲೀಲೆಯ ಸ್ವಯಾನಂದದಲ್ಲಿ ಚರಿಸುವ ಮಾನವಾಕಾರವೇ ನಿಜವಾಗಿದ್ದ ನಿರಾಕಾರಜಂಗಮ ಹೊರಗಿಂದ ನೋಡಿದರೆ ಸಾಕಾರ, ಒಳಗಿಂದ ನೋಡಿದರೆ ನಿರಾಕಾರ. ನಿರಾಕಾರ–ಸಾಕಾರ ಬ್ರಹ್ಮವೇ ಈ ಜಂಗಮಪರಬ್ರಹ್ಮ.

ಮೊದಲು ಹೇಳಿರುವ 'ಸಕಲ ನಿಃಕಲನೆಯ್ಯಾ, ನಿಃಕಲ ಸಕಲನಯ್ಯಾ!...' ಎಂಬ ವಚನವನ್ನು ಕಲ್ಲಮಠದ ಪ್ರಭುದೇವರು ಹೀಗೆ ಅರ್ಥಯಿಸುತ್ತಾರೆ: 'ಶರಣನು ಸಾಕಾರವಾಗಿ ದೃಶ್ಯನಪ್ಪ ಜೀವನಲ್ಲ. ನಿರಾಕಾರನಾಗಿ ಸಾಕಾರವ ನೇತಿಮಾಡಿ ತೋರಿದಿಪ್ಪವನಲ್ಲ. ಶರಣ ಸಕಲನಿಃಕಲವ ಮಾಡಿಕೊಂಡು ತನ್ನ ಶಿವತ್ವದ ಘನಪದವ ಬಿಡದೆ, ತನ್ನ ತಾನರ್ಚಿಸಿಕೊಳ್ಳುತ್ತ ತನ್ನ ಸ್ವಲೀಲೆಯಲಿಪ್ಪ ಸ್ವತಂತ್ರಶಿವನು ತಾನೆ ಶರಣನು...' ಇಂಥ ಸಕಲನಿಃಕಲ ಶಿವಶರಣನ[1] ನಿರಾಕಾರ ಸಾಕಾರತ್ವವನ್ನು ಇನ್ನೂ ಪರಿಶೀಲಿಸಿ ನೋಡಿರಿ ಚೆನ್ನಬಸವಣ್ಣನವರ ಮತ್ತೊಂದು ವಚನದಲ್ಲಿ:

ಶರಣ ಮೂರ್ತನಲ್ಲ, ಅಮೂರ್ತನಲ್ಲ.
ಲಿಂಗದಲ್ಲಿ ಪ್ರಾಣ ಸಂಚಿತ. ಪ್ರಾಣದಲ್ಲಿ ಪ್ರಸಾದ ಸಂಹರಣೆ.
ಪ್ರಸಾದದಲ್ಲಿ ಕಾಯಾಶ್ರಿತನು.
ಲೋಕಲೌಕಿಕ ಪ್ರಕಾರದುದಯನಲ್ಲ–ಕೂಡಲಚೆನ್ನಸಂಗಾ, ನಿಮ್ಮ ಶರಣ.[2]

ಈ ವಚನದ ಟೀಕನ್ನು ಹೀಗೆ ಸಂಗ್ರಹವಾಗಿ ಹೇಳಬೇಕು: 'ಸಾಕಾರವಾಗಿ ಇರುವ ಬದ್ಧ ಜೀವನಲ್ಲ ಶರಣ. ಏನೂ ಇಲ್ಲದ, ನಿರಾಕಾರವಾಗಿ ಇರುವ ಶೂನ್ಯನಲ್ಲ ಶರಣ. ಅಖಂಡ ಚೈತನ್ಯವಾಗಿ ಇರುವ ಆ ಲಿಂಗದ ಅಖಂಡ ಚೈತನ್ಯಾಂಶವೆ ಪ್ರಾಣವಾಗಿ ಉದಯಿಸಿದ

೧. ವಚನಕಾರರು ಶರಣ, ಜಂಗಮ, ಶಿವಯೋಗಿ ಎಂಬ ಪದಗಳನ್ನು ಬಹಳಷ್ಟು ಕಡೆ ಒಂದೇ ಅರ್ಥದಲ್ಲಿ ಬಳಸಿಕೊಂಡಿದ್ದಾರೆ. ಆಯಾ ಸ್ಥಲಕ್ಕನುಗುಣವಾಗಿ ಭಕ್ತ ಶರಣ ಮುಂತಾದ ಪದಗಳು ವಿಶೇಷಾರ್ಥವನ್ನು ಪಡೆಯುತ್ತವೆ.

೨. ಲಿಂ. ಲೀ. ವಿ. ಚಾ. ಪು. ೪೦೫, ವ. ೪.

ಶರಣನ ಪ್ರಾಣವು ತನ್ನ ನಿಜವಪ್ಪ ಲಿಂಗಸ್ವರೂಪವ ಬಿಡದೆ ಧರಿಸಿಕೊಂಡು ದೇಹವ ನಾಶ್ರಯಿಸಿ ತನ್ನ ತಾನರ್ಚಿಸಿಕೊಳುಂತ ಲಿಂಗವೆ ಆಗಿ ಇರುವ ಶರಣ. ಶಿವನ ಸಂಕಲ್ಪ ದಿಂದಾದ ಜಗದ ಉತ್ಪತ್ತಿಯಂತೆ ಅಲ್ಲ ಶರಣನ ಉತ್ಪತ್ತಿ' ಅಖಂಡ ಚೈತನ್ಯದ ಅಖಂಡಿತ ಅಂಶವೆ ಪ್ರಾಣತರಂಗವಾಗಿ ಪರಶಿವಸಾಗರದಲ್ಲಿ ಮೂಡಿ, ಆ ಅಖಂಡಿತ ಅಂಶವೆ ಷಟ್ಸ್ಥಲದ ಆಚರಣೆಯಿಂದ ಅಖಂಡಿತ ಚೈತನ್ಯವೆ ಆಗಿ ಬೆಳೆದು, ತನ್ನ ನಿಜ ಭಾವ ಮಹಾಲಿಂಗವನ್ನೆ ಅಗಲದಂತೆ ಧರಿಸಿಕೊಂಡು, 'ಕಾಯವೆಂಬ ಕಂಥೆಯ' ತೊಟ್ಟು ಅಖಂಡಿತಪೂಜೆಯ ಪರಮಾನಂದದಲ್ಲಿ ಸಂಚರಿಸುವ ಅಖಂಡ ಪರಿಪೂರ್ಣವೆ ಶರಣ. ಮನೆಯನ್ನು ತೊಟ್ಟ ಬಯಲಿನಂತೆ ಶರಣನ ಆಕಾರ. ನಮ್ಮ ನಿಮ್ಮ ಮನೆಯ ಬಯಲಿನ ಖಂಡಗಳಿಗೆ ಗೊತ್ತಿರಲಿಕ್ಕಿಲ್ಲ ತಮ್ಮ ನಿಜವಿಸ್ತಾರ. ಶರಣನ ಚಿದ್ಬಯಲು ಚಿದ್ಬೆಳಗು ಚಿಚ್ಚೈತನ್ಯ ಚಿದಖಂಡ, ಮನೆ ಮಾರು ಪರ್ವತ ಸಮುದ್ರ ನವಖಂಡಪೃಥ್ವಿ ಆಕಾಶ ನಕ್ಷತ್ರ ಮಹಾರಾಶಿಯನ್ನೆಲ್ಲ ತನ್ನ ಅರಿವು ಇರವಿನಲ್ಲೆ ಒಳಕೊಂಡು, ಅತೀತವಾಗಿ ಹಬ್ಬಿ ಹರವಿಕೊಂಡಿದೆ. ಇಂಥ ಚಿದ್ಬಯಲೆ ತಾನಾಗಿ ಕಾಯವನಾಶ್ರಯಿಸಿದ ಶರಣನ ಮಹಾಂತ ನಿಲವಿನ ಬ್ರಹ್ಮಸ್ವರೂಪವೆಂಥದು?

ಮೌನವಾಗಿ ಬನ್ನಿ. ಸಮಾಹಿತಕಾಯ ಸಮಾಹಿತಮನ ಸಮಾಹಿತಭಾವದಲ್ಲಿ ನಿಲ್ಲಿ. ಅದೋ ಗಂಭೀರವಾಗಿ ನೋಡಿ,—ಪ್ರಭುಲಿಂಗದೇವನ ನಿಲುಕಡೆಯನ್ನು:

> ಪರಮಪರತತ್ತ್ವ ಪರಮಾರ್ಥ ಪರಾಪರ ವಾಙ್ಮನಕ್ಕಗೋಚರ ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವಜ್ಞಾನ ಜ್ಞಾನಜ್ಯೋತಿ ಸುಜ್ಞಾನಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಮಹಾಮಹಿಮಂಗೆ ಶಿವಜ್ಞಾನವೆ ಶೃಂಗಾರ, ಮಹಾಬೆಳಗೆ ವಿಭೂತಿ, ಪಂಚಬ್ರಹ್ಮವೆ ದರುಶನ, ಗಗನಸ್ಥಾನವೆ ಕಂಥೆ, ಆಕಾಶವೆ ಕೊಪ್ಪರ, ಅಜಾಂಡ ಬ್ರಹ್ಮಾಂಡವೆ ಕರ್ಣಕುಂಡಲ, ಆದಿಯಾಧಾರವೆ ಕಕ್ಷಪಾಳ, ಅನಾಹತವೆ ಒಡ್ಯಾಣ, ಅದ್ವೈತವೆ ಯೋಗವಟ್ಟಿಗೆ, ಅಗಮ್ಯವೆ ಯೋಗವಾವುಗೆ, ಅಚಲಿತವೆ ಕರ್ಪರ, ಅಪ್ರಮಾಣವೆ ಲಾಕುಳ, ಅವಿಚಾರವೆ ಸುಳುಹು. ಅಕಲ್ಪಿತವೆ ಭಿಕ್ಷ, ಕೊಂಡುದೆ ಗಮನ, ನಿಂದುದೆ ನಿವಾಸ. ನಿಶ್ಚಿಂತ ವೆಂಬ ಆಶ್ರಮದೊಳಗೆ ನಿರಾಕುಳವೆಂಬ ಸಿಂಹಾಸನವನಿಕ್ಕಿ, ಗಗನಗಂಭೀರದ ಬಾವಿಯೊಳಗೆ ಅಗೋಚರದಗ್ಘವಣಿಯ ತಂದು, ಮಹಾಘನ ಪ್ರಾಣಲಿಂಗಕ್ಕೆ ಮಂಗಳಬೆಳಗ ಮಜ್ಜನಕ್ಕೆರೆದು, ಬಿಂದ್ವಾಕಾಶವೆ ಗಂಧ, ಮಹದಾಕಾಶವೆ ಅಕ್ಷತೆ, ಪರಾಪರವೆ ಪತ್ರೆ ಪುಷ್ಪ, ನಿರ್ಮಲವೆ ಲಿಂಗಾರ್ಚನೆ, ಮಹದಾಕಾಶವೆ ಪೂಜೆ, ನಿತ್ಯನಿರಂಜನವೆ ಧೂಪಾರತಿ, ಸಕಲ ಭುವನಾದಿಭುವನಂಗಳೆ ನಯದಾನ, ಆಚಾರವೆ ಅರ್ಪಿತ, ಮಹಾತತ್ತ್ವವೆ ಸೀತಾಳ, ಅಖಂಡಿತವೆ ಅಡಕೆ, ಏಕೋಭಾವವೆ ಎಲೆ, ಶುದ್ಧ ಶಿವಾಚಾರವೆ ಸುಣ್ಣ, ವಿವೇಕವಿಚಾರದಿಂ ತಾಂಬೂಲವಮಂ ಸ್ವೀಕರಿಸಿ, ಮಹಾಲಿಂಗದ ಪರಿಣಾಮವೆ ಪ್ರಸಾದ, ಸಮ್ಯಗ್ ಜ್ಞಾನವೆ ಸಂತೋಷ, ಸಹಜ ನಿರಾಭಾರಿಗಳ ಮೇಳದಿಂ ನಿಸ್ಸೀಮದ ನಿಭ್ರಾಂತಿನ ಸುಸಂಗದಲ್ಲಿ ನಿರಾಸಪಥವೆ ಅನುಕೂಲ, ನಿಶ್ಶಬ್ದವೆ ಅನುಭಾವ, ಅನುಪಮಂದ

ನಿಶ್ಶೂನ್ಯವೆ ವಿಶ್ರಾಮ, ನಿರಾಕಾರವೆ ಗಮನ, ನಿರಂತರ ಪಾತಾಳ ಊರ್ಧ್ವಪವನ ತ್ರಿಭುವನಗಿರಿಯೆಂಬ ಪರ್ವತವನೇಱಿ, ಕಾಯವೆಂಬ ಕದಳಿಯ ಹೊಕ್ಕು ಸುಳಿ ದಾಡುವ ಮಹಾಮಹಿಮಂಗೆ ಇಹಲೋಕವೇನು? ಪರಲೋಕವೇನು? ಅಲ್ಲಿಂದತ್ತ ಅಗಮ್ಯ, ನಿರಾಳ, ಪರಮಜ್ಞಾನಸಿದ್ಧಿ, ಮಹಾಲಿಂಗದ ಬೆಳಗು! ಗೊಹೇಶ್ವರಾ, ನಿಮ್ಮ ನಿಜವನಱಿದ ಮಹಾಮಹಿಮಂಗೆ ನಮೋನಮೋ ಎಂಬೆನು.[೧]

ಸುಜ್ಞಾನ ಸದ್ಭಕ್ತಿಯ ಪ್ರಭೆಯೊಳಗೆ ಗೊಹೇಶ್ವರಲಿಂಗದಲ್ಲಿ ಪ್ರಭುಲಿಂಗ ಮತ್ತು 'ಸರ್ವಂ ಲಿಂಗಮಯಂ ಜಗತ್,' 'ಸರ್ವಂ ಖಲ್ವಿದಂ ಬ್ರಹ್ಮ'ವಾದ ಸರ್ವಬ್ರಹ್ಮಲಿಂಗ ಸಮರಸವಾಗಿ, ಐಕ್ಯೈಕ ರಸಮೂರ್ತಿ, ಸರ್ವಗತ ಸರ್ವಮಯ ಸರ್ವಸನ್ನಿಹಿತ ಸರ್ವಭರಿತ-ಸರ್ವಾತೀತ ಮೂರ್ತಿ, ಅಲ್ಲಮಪ್ರಭುಲಿಂಗನ ಜಂಗಮಮೂರ್ತಿ, ಪ್ರಭುದೇವರ ಶಬ್ದ-ಗಂಭೀರದಿಂದ ಎದ್ದು ಮೂಡಿ ಆಕಾಶದಾಚೆ ಅತ್ತಾಚೆ, ಪಾತಾಳದಿತ್ತೀಚೆ ಇನ್ನೂ ಕೆಳಗೆ, ದಿಗ್ವಳಯದ ಹೊರಹೊರಗೆ, ವಿಶ್ವಬ್ರಹ್ಮಾಂಡದ ಒಳಗೊಳಗೆ ಬಂದು, ಮುಂದೆ ಹಿಂದೆ ಮೇಲೆ ಕೆಳಗೆ ಎಡಬಲವೆನ್ನದೆ ನಿಂತರೆ, ಆ ಮಹಾಂತಮೂರ್ತಿಯನ್ನು ನೋಡ ಬಲ್ಲ ಬಲವಂತರಾರು? ಶಬ್ದಕ್ಕೆ ಶಬ್ದಾರ್ಥವನ್ನು ನಿಘಂಟಿನಲ್ಲಿ ನೋಡಿದರೆ ಆ ಮೂರ್ತಿ ಕಣ್ಣಿಗೆ ಸಿಕ್ಕಂತಾಯ್ತೇ? ಮೇಲಿನ ವಚನದಲ್ಲಿ ಕೆತ್ತಿರುವ ನಿರಾಳಮೂರ್ತಿಯ ನಿಜ ದರ್ಶನ ನಿಜವಾಗಿ, ಪ್ರತ್ಯಕ್ಷವಾಗಿ ಆಗುವುದು 'ಮಹಾಮಹಿಮ'ರಿಗೇ. ಆದರೂ ನಮ್ಮ ನಮ್ಮ ಭಾವ ಬುದ್ಧಿಗಳ ಸ್ಥಲಕ್ಕನುಗುಣವಾಗಿ ಆ ಮೂರ್ತಿಯನ್ನು ಕಾಣಲು ಯತ್ನಿಸುವುದರಲ್ಲಿ ತಪ್ಪೇನಿದೆ?

ಒಂದು ಆಕಾರವಾಗಿ ನಿಂದಿರುವ ಪ್ರಭುರಾಯ. ಈ ರಾಯನ ಆಕಾರವನ್ನು ಓಸರಿಸಿ, ಓರೆಮಾಡಿ ನೋಡಿದರೆ ಅದು ಪರಮಪರತತ್ತ್ವ. ಮತ್ತೆ ಆ ತತ್ತ್ವದ ಪರಮ ಅರ್ಥ ಈ ಸಾಕಾರ ಪ್ರಭುಲಿಂಗ. ಅದೇ ಮತ್ತೆ ಪರವೂ ಹೌದು ಅಪರವೂ ಹೌದು. ಅಂದರೆ ಮೇಲಿನದೂ ಹೌದು ಕೆಳಗಿನದೂ ಹೌದು. ಇಲ್ಲಿ ಹೌದು ಎಂಬ ಶಬ್ದದ ಅಹುದು ಅಪ್ಪುದು ಆಗುವುದು ಎಂಬ ಮೂಲರೂಪವನ್ನು ಗಮನದಲ್ಲಿಟ್ಟುಕೊಂಡರೆ ಬಹಳ ನೆಟ್ಟಗೆ. ಸಚ್ಚಿದಾನಂದ ನಿತ್ಯಪರಿಪೂರ್ಣವಾದ ಪರವಸ್ತುವೂ, ಜಡ ಚೈತನ್ಯ ವೆನಿಸುವ ಪರಮಾಣುವೂ ಹೌದು ಅದೇ ಪ್ರಭುಲಿಂಗ. ಇದು ಹೇಗೆ ಎಂದು ಕೇಳುವಿರಾ? ಪ್ರಭುದೇವರ ಈ ಸ್ವಾನುಭಾವವನ್ನು, ಈ ಸ್ವಯದ ನಿಲವನ್ನು ಶಬ್ದ ಮತ್ತು ಮನಸ್ಸು ಹರಿದು ಹತ್ತಿ ಏರಿ ನೋಡಿ ಮುಟ್ಟಲಾರವು. ಅದು ವಾಙ್ಮನಕ್ಕೆ ಅಗೋಚರ. ಮತ್ತೆ ನಿಸ್ವದ ಮರೆಯಲ್ಲಿ ನಿಗೂಢವಾಗಿ ನಿನಾದಿಸುತ್ತಿರುವ ಶಬ್ದ ಬ್ರಹ್ಮ, ನಾದಬ್ರಹ್ಮವಾದ ಪ್ರಣವಘೋಷದ ಗಂಭೀರ ಶಬ್ದಮಹಾಸಾಗರದ ಆಳವ ನ್ನೆಲ್ಲ ತನ್ನ ಅರಿವಿನಿಂದ ಅಪ್ಪಿರುವ ಮಹಾಮೂರ್ತಿ ಇದೇ ಪ್ರಭುಲಿಂಗ. ವಚನ ಮನ ಮುಟ್ಟದ ಈ ಗಂಭೀರವನ್ನು ಮನ ವಚನದಲ್ಲಿಯೆ ಮೂಡುವ ಅಲಂಕಾರವೆಂತು

೧. ಶೂ. ಸಂ. ಪು. ೨೦-೨೨, ವ. ೭೫.

ಉಪಮಿಸಿ ನುಡಿಯಬಲ್ಲುದು? ವಿಶ್ವಬ್ರಹ್ಮಾಂಡಕ್ಕಿಂತ ಎತ್ತರವಾಗಿ ಇರುವ ಪರಶಿವ, ಪರವಸ್ತು ತಾನೆಂದರಿದ ನಿಜದರಿವಿನ ನಿಜಬೆಳಗಿನೊಳಗೆ, ತಾನು ವಿಶ್ವಲಿಂಗವನ್ನೆಲ್ಲ ತನ್ನೊಳಹೊರಗೆ ಪ್ರಸನ್ನಗೊಳಿಸಿ, 'ಎಲ್ಲ ತಾನು, ತಾನು ಒಂದು' ಎಂದು ಬೆಳಗಿ ತೋರುವ ಪರಮಜ್ಞಾನಜ್ಯೋತಿಯ ದಿವ್ಯಪ್ರಸನ್ನ ಪ್ರಭೆಯೊಳಗೆ ಸುಳಿದು ಆಡುವ ಮಹಾಮಹಿಮ ಪ್ರಭುರಾಯ.

ಸರ್ವನಾಮ ಸರ್ವರೂಪ ಸರ್ವಕ್ರಿಯೆ ಸರ್ವತತ್ತ್ವಗಳ ಸರ್ವಾಕಾರವನ್ನು ಗರ್ಭೀಕರಿಸಿಕೊಂಡು, ತನಗೆ ಯಾವ ಒಂದು ಆಕಾರವೂ ಇಲ್ಲದೆ ನಿಂದಿರುವ ನಿರಾಕಾರಲಿಂಗವೆ ರೂಪುಗೊಂಡು ಸಾಕಾರದೇಹದಲ್ಲಿ ಪ್ರಾಣಿಸಿ, ಭಾವಿಸಿ ಇದ್ದರೆ ಆ ಮಹಾಮಹಿಮೆಗೆ ಇನ್ನಾವ ಕೊರತೆ! ಲಿಂಗಗಂಭೀರ ಲಿಂಗೋನ್ನತನಾದ ಪ್ರಭುದೇವನನ್ನು ಸಿಂಗರಿಸುವುದು ಶಿವಜ್ಞಾನ, ಮಂಗಲಮಯವಾದ ಅರಿವು. ಈ ದೇವನ ಸರ್ವಾಂಗಕ್ಕೆ 'ಎಲ್ಲ ಬೆಳಗಿಗೆ ಮೂಲಬೆಳಗಾದ' ಮಹಾಬೆಳಗಿನ ವಿಭೂತಿಯ ಧಾರಣ. ಈತನ ಮುಖದರ್ಶನದಲ್ಲಿ ಪೃಥಿವ್ಯಾದಿ ಪಂಚಭೂತಗಳನ್ನು ಹೆತ್ತ, ಸದ್ಯೋಜಾತಾದಿ ಪಂಚಬ್ರಹ್ಮ ಒಡೆದು ಕಾಣುತ್ತಿದೆ. ಈತ ತೊಟ್ಟ ಅಂಗಿ ಅಂತರಿಕ್ಷ, ತಲೆಗೆ ಹಾಕಿದ ಟೊಪ್ಪಿಗೆ ನಕ್ಷತ್ರಗಳ ಮುತ್ತುಗೊಂಚಲದ ಮಹದಾಕಾಶ. ಅಜಾತಬ್ರಹ್ಮಾಂಡ, ಜಾತಬ್ರಹ್ಮಾಂಡಗಳೆ ಕರ್ಣಕುಂಡಲ; ಸರ್ವಮೂಲಾಧಾರವಾದ ಚಿದ್‌ಭಾಂಡವೆ ಆತ ಬಗಲಿಗೆ ಹಾಕಿದ ಜೋಳಿಗೆ; ಅನಾಹತ ನಾದ ಆತನ ಉಡುದಾರ; ಎಲ್ಲಿ ನೋಡಿದಲ್ಲಿ ತನ್ನನಲ್ಲದೆ ಅನ್ಯವ ಕಾಣದ ಅದ್ವೈತವೆ ಆತನ ಯೋಗದ ಪಟ್ಟ. ಗಮನಗೆಟ್ಟುದೆ ಪಾದುಕೆ, ಚಲಿಸಲಿಲ್ಲದುದೆ ಕರದ ಭಿಕ್ಷಾಪಾತ್ರೆ. ಯಾವ ಪ್ರಮಾಣದ ಅಳತೆಗೆ ನಿಲುಕದುದೇ ರಾಯನ ಯೋಗದಂಡ. ವಿಚಾರದ ವಿಶ್ರಾಂತಿಯೆ ಈ ಜಂಗಮದ ಸುಳುಹು; ಕಲ್ಪಿತಕ್ಕೊಳಗಲ್ಲದ ನಿರ್ವಿಕಲ್ಪ ಗುಹೇಶ್ವರ,—ಈ ಮೂರ್ತಿ ಬೇಡುವ ಭಿಕ್ಷೆ. ಈ ಭಿಕ್ಷೆ ನೀಡಿದರೆ ಕೈಕೊಂಡುದೆ ಪರ್ಯಟನ. ಈ ಚರಲಿಂಗ ನಿಂದರೆ—ನಿರ್ಮಾಣವಿಲ್ಲದ ನಿಜನಿವಾಸ.

ಪ್ರಭುದೇವರ ಈ ವಿಶ್ವಪೂರ್ಣ ವ್ಯಕ್ತಿತ್ವ ನಮ್ಮಂಥವರ ಭಾವದ ಕಣ್ಣಿಗೆ ಸ್ಪಷ್ಟವಾಗಿ ಕಾಣುವುದಿಲ್ಲ. ದೇವರನ್ನು ಸಿಂಗಾರ ಮಾಡಿದ ಶಿವಜ್ಞಾನ, ದೇವರು ಧರಿಸಿದ ಮಹಾಬೆಳಗಿನ ವಿಭೂತಿ, ಪಂಚಬ್ರಹ್ಮವನ್ನು ಒತ್ತರಿಸುವ ದೇವರ ಮುಖ—ಮುಂತಾದುವು ನಮಗೆ ಹೇಗೆ ಕಾಣಬೇಕು? ದೇವರ ಗಗನದ ಕಂಥೆ ಆಕಾಶದ ಟೊಪ್ಪಿಗೆ ನಮ್ಮ ಕಣ್ಣ ಮುಂದೇ ವಿಸ್ತರಿಸಿಕೊಂಡಿವೆ. ಆದರೆ ಇಂಥ ಟೊಪ್ಪರ, ಈ ಅಂಗಿ ಹಾಕುವ ಆಕಾಶಪುರುಷರನ್ನು ನಾವು ಕಂಡಿಲ್ಲ.

ಸುಜ್ಞಾನಚೈತನ್ಯವಾದ ಜಂಗಮದ ಚಿತ್ರ ಕೆಲಮಟ್ಟಿಗೆ ನಮ್ಮ ನಿಮ್ಮ ದೃಷ್ಟಿಯ ಹವಣಿಗೆ ಬರುವಂತೆ ಆದಯ್ಯನವರು ಬರೆದಿದ್ದಾರೆ ತಮ್ಮ ವಚನದಲ್ಲಿ. ಅದೋ ನೋಡಿ:

ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ.
ಬ್ರಹ್ಮಾಂಡವೆ ಮಕುಟ, ಗಗನವೆ ಮುಖ,
ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕು ಬಾಹುಗಳು,

ಮಹದಾಕಾಶವೆ ಶರೀರ, ತರುಗಳೇ ತನೂರುಹ.
ಶೂನ್ಯವೆ ಕರಸ್ಥಲದ ಲಿಂಗ, ನಕ್ಷತ್ರವೇ ಪುಷ್ಪ, ನಿತ್ಯವೇ ಪೂಜೆ.
ಮೇಘವೆ ಜಡೆ, ಬೆಳುದಿಂಗಳೇ ವಿಭೂತಿ, ಪರ್ವತಂಗಳೆ ರುದ್ರಾಕ್ಷಿ.
ಪಂಚಬ್ರಹ್ಮವೆ ಪಂಚಾಕ್ಷರ,
ತತ್ತ್ವಂಗಳೆ ಜಪಮಾಲೆ.
ಮೇರುವೆ ದಂಡ, ಸಮುದ್ರವೆ ಕಮಂಡಲು.
ಋತುಗಳಾರಾರೆ ಪಟ್ಸ್ಥಲ, ಶೇಷನೆ ಕಟಿಸೂತ್ರ,
ಜಗವೇ ಕಂಥೆ, ಅನಂತನೆ ಕೌಪೀನ,
ತ್ರಿಗುಣ ಒಂದಾದುದೆ ಕರ್ಪರ.
ಚತುರ್ಯುಗವೆ ಗಮನ,
ಮಿಂಚೆ ಅಂಗರುಚಿ, ಸಿಡಿಲೆ ಧ್ವನಿ.
ವೇದಾಗಮವೇ ವಾಕ್ಯ, ಜ್ಞಾನಮುದ್ರೆಯೇ ಉಪದೇಶ.
ಪೃಥ್ವಿಯೇ ಸಿಂಹಾಸನ, ದಿವರಾತ್ರಿಯೆ ಅರಮನೆ,
ಶಿವಜ್ಞಾನವೆ ಐಶ್ವರ್ಯ, ನಿರಾಳವೆ ತೃಪ್ತಿ—
ಇಂತಪ್ಪ ಚೈತನ್ಯಜಂಗಮಕ್ಕೆ ನಾನು ನಮೋ ನಮೋ ಎನುತಿರ್ದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ.[೧]

ಆದಯ್ಯನವರ ವಿಶ್ವಾದ್ಭುತ ಚೈತನ್ಯ ಜಂಗಮಮೂರ್ತಿ ಎಷ್ಟು ದಿವ್ಯ ಭವ್ಯವಾಗಿದೆ![೨] ಇಂಥ ಲೋಕವಿಚಿತ್ರ ಮೂರ್ತಿಯ ಶಬ್ದಚಿತ್ರಗಳನ್ನು ನೋಡಿ, ಸುತ್ತುಮುತ್ತು ನೋಡಿ, ಮೇಲೆ ಕೆಳಗೆ ಇಣಿಕಿ ನೋಡಿ, ಹೃದಯವಿಚಾರವೆಲ್ಲ ಮೌನದಲ್ಲಿ ಮುಳುಗಿ, ಕೈಮುಗಿದು ನಿಂದು, ಹೃದಯದ ಪೂಜೆ, ವಿಚಾರದ ಭಕ್ತಿಯನ್ನು ಸಲ್ಲಿಸಬೇಕಲ್ಲದೆ ಆ ಚಿತ್ರಕ್ಕೆ ವಿವರಣೆಯ ಲೆಪ್ಪವನ್ನು ಹೂಸಿದರೆ ಬೆಳುದಿಂಗಳಿಗೆ ಬಿಳಿ ಬಣ್ಣ ಹಚ್ಚುವ ಹುಚ್ಚೇ.

---

೧. ಆ. ವ. ಪು. ೧-೨, ವ. ೩.
ಇಲ್ಲಿ ಬೇಕಾದರೆ ಜಂಗಮಸ್ಥಲದಪ್ರಭುದೇವರ ನಿಲವನ್ನು ನೋಡಿ:
ಸ್ಥೂಲ ಕಂಥೆ, ಸೂಕ್ಷ್ಮ ಟೊಪ್ಪರ, ಸತ್ಯ ದಂಡ, ಶಾಂತಿ ಭಸಿತ,
ಸುಚಿತ್ತ ಮಣಿ, ತತ್ತ್ವ ಕರ್ಪರ, ವೈರಾಗ್ಯ ಹಾವುಗೆ,
ಮನದೃಢವೇ ಕೌಪೀನ, ಆಚಾರವೇ ಕಂಕಣ,
ಕ್ಷಮೆ ದಮೆಯೇ ಕರ್ಣಕುಂಡಲ,—
ಇಂತಿವವೆರಸಿ ಸುಳಿವನು ಜಗತ್ಪಾವನ ಮಾಡಲೆಂದು.
ಕಲಿದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದವ ಕಂಡು
ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನು.
ಮ. ಮಾ. ವ. ಪು. ೧೫-೧೬, ವ. ೧೯.

೨. ಇದೇ ಸಂದರ್ಭದಲ್ಲಿ ಜಗದ್ಭರಿತನಾಗಿ ವಿಶ್ವಚೈತನ್ಯಾತ್ಮಕನಾಗಿ ವಿಶ್ವಕಲ್ಯಾಣ ಜಗತ್ಪಾವನಾರ್ಥವಾಗಿ ಸುಳಿವ ಜಂಗಮಲಿಂಗದ ಬ್ರಹ್ಮಭವ್ಯವಾದ ವಿಶ್ವಸುಂದರವಾದ ಮಹಾಮೂರ್ತಿಯನ್ನು ನೋಡಿ: (ಮುಂದಿನ ಪುಟದಡಿಯಲ್ಲಿ ನೋಡಿ)

ಮೂರುವರೆ ಮೊಳದ ಮಾನವನಲ್ಲಿ ಏನಿದೆ?—ಎಂದು ನೋಡಹೋದರೆ 'ಏನುಂಟು ಏನಿಲ್ಲ' ಎಂಬ ಆಕಾಶಭ್ರಮೆ ಮಾನವನನ್ನು ದಂಗುಗೊಳಿಸುತ್ತದೆ. ಆದರೆ ಶರಣರು ಕಂಡ ತಾನು-ವಿಶ್ವಲಿಂಗವನ್ನು ನೋಡುವ ಸಾಹಸ ನಾವೂ ಮಾಡಿದರೆ, ಆಕಾಶ-ಭ್ರಮೆಯೇ ಪ್ರಕಾಶಸತ್ಯವಾಗಿ ನಮ್ಮಲ್ಲಿ ಒಡಮೂಡಿ, 'ಆಕಾಶ ಪಾತಾಳ' 'ದೇವ ಜೀವ' 'ದೇವ ಜಗ' 'ಜೀವ ಜಗ'ವೆಲ್ಲ ಒಂದಾಗಿ ನಿಲ್ಲುತ್ತದೆ. ಇದೋ ಹೀಗೆ ಭಾವಿಸಿ, ವಿಚಾರಿಸಿ ನೋಡಿ. ದೇವರು ಮಾನವಾಕಾರವನ್ನು ತೊಟ್ಟು ನಿಂತರೆ ಹೇಗೆ ನಿಲ್ಲುತ್ತಾನೆ? ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣ ಅಖಂಡ, ಪ್ರಭು ವಿಭು ಸ್ವಯಂಭು, ನಿರಂಜನ ನಿರಾಕಾರ ನಿರಾಮಯ ನಿರ್ಲೇಪನಾದ ದೇವ ಮಾನವಚೋಹ ದಲ್ಲಿ ಇದ್ದರೆ ಹೇಗೆ ಇರುತ್ತಾನೆ? ಆ ಮಾನವದೇವನ ಇರವು ಅರಿವು ಆನಂದ, ಆತನ ಮಾಟ ಆತನ ರುಚಿ ನೋಟ ಕೇಳಿಕೆ ಸೋಂಕು, ಆತನ ವಿಚಾರ ಭಾವ ಕಲ್ಪನೆಗಳ ಸ್ವರೂಪವೇನು?

ವಿಶ್ವಪ್ರಪಂಚವೆ ದೇಹವಾಗಿ, ಸರ್ವಾಂಗವೆಲ್ಲ ಕೈ ಕಾಲು ಕಣ್ಣು ಕಿವಿ ಮೂಗು ನಾಲಗೆಯಾಗಿ, ಬುದ್ಧಿ ಮನವೆಲ್ಲ ನಿಜದರಿವಿನ ಬೆಳಗಾಗಿ, ಅಹಂಭಾವವೆಲ್ಲ ಪರಬ್ರಹ್ಮ-ಭಾವವಾಗಿ ನಿಂತರೆ, ಈ ಇರವಿಗೆ ಈ ಅರಿವಿಗೆ ಈ ನಿಲವಿಗೆ ಏನು ಕಾಣುತ್ತದೆ, ಏನು ಕಾಣುವುದಿಲ್ಲ? ಏನು ಕೇಳುತ್ತದೆ, ಏನು ಕೇಳುವುದಿಲ್ಲ? ಏನು ತಿಳಿಯುತ್ತದೆ, ಏನು ತಿಳಿಯುವುದಿಲ್ಲ? ಈ ಇರವು ಎಲ್ಲಿ ನಿಂದಿದೆ, ಎಲ್ಲಿ ನಿಂದಿಲ್ಲ? ಎಲ್ಲ ತಾನೊಂದು, ಏಕಮೇವ ಪರಶಿವಬ್ರಹ್ಮ, ಮಹಾಘನಲಿಂಗ, ಸಕಲ-ನಿಷ್ಕಲ ಲಿಂಗ ಈ ದೇವರು. ಈ ಸಾಕಾರ ನಿರಾಕಾರದ ಅರಿವು ಇರವು ಎಲ್ಲೆಲ್ಲಿ ತಾನೆ ತುಂಬಿದ, ತಾನೆ ತಾನಾದ ವಿಶ್ವ-

---

ಸರ್ವಾತ್ಮಚೈತನ್ಯನಪ್ಪ ಜಂಗಮದ ಪರಿಯ ನೋಡಾ!
ಅಖಂಡ ಬ್ರಹ್ಮದ ಬಯಲೆಲ್ಲಾ ತಾನಾಗಿ,
ಸುಳಿಯಲೆಡೆಯಿಲ್ಲದೆ ನಿಂದು ನಿರ್ಗಮನಿಯಾದಲ್ಲಿ,
ಒಂದಾಸೆಯೊಳಗಿಲ್ಲದ ಅವಿರಳಜ್ಞಾನಿ ಕೋಟಿತೊಂದಕ್ಕೆ ಸುಳಿವವನಲ್ಲ!
ಭಕ್ತಗಮ್ಯನು, ಉಳಿದ ಗಮನದ ತುದಿಮೊದಲಿಲ್ಲದ ತನ್ನ ನಿರ್ಗಮನವಿರವು.
ಚತುರಾಕಾರ ಭೂಮಿಯೇ ಪವಡಿಪ್ಪಮಂಚ, ಆಕಾಶವೇ ಮೇಲುಕಟ್ಟು,
ಚಂದ್ರಸೂರ್ಯರೇ ಉಭಯ ಭಾಗದಲ್ಲಿ ಬೆಳಗುವ ಜ್ಯೋತಿ,
ಪರಿಣಾಮವೇ ತೃಪ್ತಿ, ದಿಕ್ಕುಗಳೇ ವಸನ,
ಸದ್ಗುಣವಾಸನೆಯೇ ಪರಿಮಳ, ನಕ್ಷತ್ರಗಳೇ ಪುಷ್ಪ.
ಶಿವತತ್ತ್ವಕಾಂತಿಯೇ ಆಭರಣ, ತ್ರಿಗುಣಕೂಟವೇ ತಾಂಬೂಲ,
ಜ್ಞಾನಶಕ್ತಿಯೇ ಸಂಗ, ಪ್ರಣವನಾದ ಗೀತ ಕೇಳಿರೆ!
ಇಂತೀ ಅಷ್ಟಭೋಗೈಶ್ವರ್ಯದಲ್ಲಿಪ್ಪ ರಾಜಯೋಗಿ ಚರಲಿಂಗ.
ನಿಶ್ಚಿಂತ, ನಿರ್ವಾಣಿ, ನಿರಂಜನ, ನಿರ್ಮಾಯ, ನಿರ್ವ್ಯಸನಿ ಪರಮಜಂಗಮ.
ಇಂತಲ್ಲದೆ ಕಾಯದಿಚ್ಛೆಗೆ ಸುಳಿದು ಕಳವಳಿಸಿ
ತ್ರಿವಿಧಕ್ಕೆ ಬದ್ಧರಪ್ಪವರೆಲ್ಲಾ ಜಗತ್‌ಪಾವನರಪ್ಪರೆ ಹೇಳಾ ಗುಹೇಶ್ವರಾ?

ಅ. ವ. ಚಂ. ಪು. ೨೫೭-೨೫೮, ವ. ೧೧೭೨.

ಪ್ರಪಂಚ ನಿಷ್ಪ್ರಪಂಚಗಳನ್ನು ನೋಡಬಲ್ಲುದು. ತನ್ನ ಶಕ್ತಿಯಾದ ಚಿಚ್ಛೈತನ್ಯಕ್ಷೇತ್ರದಲ್ಲಿಯೇ ನೆಲ ನೀರು ಗಾಳಿ ಬೆಂಕಿ ಬಯಲು ತರು ಮರ ಪಶು ಪಕ್ಷಿ ಮಾನವ ದಾನವ ದೇವತೆಗಳೆಲ್ಲ ಬೆಳೆದಿವೆ. ನಾಮ ಅನಂತ, ರೂಪ ಅನಂತ, ಕ್ರಿಯೆ ಅನಂತ. ಆದರೆ ಒಂದರ ಕೋಟಿಕಿರಣವೆ ಇದೆಲ್ಲ. ಗಾಳಿ ಬೀಸುತ್ತದೆ, ಲಿಂಗಗಾಳಿ ಬೀಸುತ್ತದೆ; ಸೂರ್ಯ ನಕ್ಷತ್ರ ಚಂದ್ರಮರು ಬೆಳಗುತ್ತಾರೆ, ಸೂರ್ಯ ನಕ್ಷತ್ರ ಚಂದ್ರಮಲಿಂಗ ಬೆಳಗುತ್ತದೆ. ನೆಲ ಲಿಂಗ, ಬಯಲು ಲಿಂಗ, ಅಲ್ಲಿ ಮೂಡಿ ಮುಳುಗುವ ಪರ್ವತ ಸಮುದ್ರಗಳೆಲ್ಲ ಲಿಂಗ. ಅಂದರೆ ತಾನೇ, ನಿಜವಸ್ತು, ಪರವಸ್ತು. ಒಂದೆರಡು ಕಣ್ಣು ಕಿವಿ ನಾಲಗೆ ಮೂಗು ಮನ ಬುದ್ಧಿ ಅಹಂಭಾವಪ್ರಜ್ಞೆಗೆ ನೆಲ ಬೆಂಕಿಯಾಗಿ, ಶಬ್ದ ಗಂಧವಾಗಿ, ಸುಖ ದುಃಖವಾಗಿ, ಮಧುರ ಕಟುವಾಗಿ, ಮೃದು ಕರ್ಕಶವಾಗಿ ತೋರುವ ಅಂತರಂಗ ಬಹಿರಂಗ ಪ್ರಪಂಚವೆಲ್ಲ ವಿವಿಧೈಕರಸವಾದ ಶಬ್ದಲಿಂಗವಾಗಿ ಸ್ಪರ್ಶಲಿಂಗವಾಗಿ ರೂಪಲಿಂಗವಾಗಿ ರುಚಿಲಿಂಗವಾಗಿ ಗಂಧಲಿಂಗವಾಗಿ ವಿಚಾರಲಿಂಗವಾಗಿ ಮನೋಲಿಂಗವಾಗಿ ಭಾವಲಿಂಗವಾಗಿ ತನಗೆ ತನ್ನ ಅನುಭವವಾದರೆ, ಇಂಥ ಸಕಲ-ನಿಃಕಲ ಲಿಂಗದೇವನ ಸ್ವ-ರಸಾನಂದ ಹೇಗಿರಬಹುದು? ಬಹಿರಂತಃಪ್ರಪಂಚವನ್ನು ತುಣುಕು ತುಣುಕಾಗಿ, 'ಖಂಡಿತ'ವಾದ, 'ಭಿನ್ನ'ವಾದ ದೇಹ ಕಾಲು ಕಣ್ಣು ಕಿವಿ ಮನ ಬುದ್ಧಿ ಜೀವ ಭಾವಗಳಿಂದ ಅನುಭವಿಸಿದರೆ ಸುಖದುಃಖಗಳ ತುಣುಕು ತುಣುಕು, ಮಧುರ ಕರ್ಕಶಗಳ ಪಾಚಿ ಪಾಚಿ, ಮೃದು ಕಠಿಣಗಳ ತುಂಡು ತುಂಡು ದೊರೆಯುತ್ತವೆ ವಿಶ್ವಬ್ರಹ್ಮದಿಂದ ಬೇರಾಗಿರುವ 'ಖಂಡಿತ' ಮಾನವನಿಗೆ,—ನಮಗೆ. ಆದರೆ ಜಂಗಮಲಿಂಗದ ಆನಂದ ಸಮಂಸ್ತರಸಪೂರ್ಣ.

'ನಾನು ದೇಹವಲ್ಲ, ನಾನು ಕರಣ ಇಂದ್ರಿಯ ಪ್ರಾಣವಲ್ಲ, ನಾನು ಪೃಥ್ವಿ ಆಕಾಶವಲ್ಲ'—ಎಂದು ಎಲ್ಲವನ್ನು ನೇತಿಮಾಡಿದ ಕಾರಣ ಏನೆಂಬುದು ಜಂಗಮಸ್ಥಲದ ನಿಲುಕಡೆಯಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತದೆ. ದೇಹಾದಿಗಳಲ್ಲಿ ಪೃಥಿವ್ಯಾದಿಗಳಲ್ಲಿ 'ನಾನು' ಗಟ್ಟಿಯಾಗಿ 'ಖಂಡಿತ'ವಾಗಿ, ಎಲ್ಲದರಿಂದ ಅನ್ಯಭಿನ್ನವಾಗಿ ಕುಳಿತರೆ, ಈ ಅಹಂಪ್ರಜ್ಞೆ, ಈ ನಾನು ದೇಹಾದಿಗಳನ್ನು ತೊಳೆಯಬಾರದಂತೆ, ಬಿಚ್ಚಬಾರದಂತೆ, ಬಿಡಿಸಬಾರದಂತೆ, ತೆಗೆದೊಗೆಯಬಾರದಂತೆ ತನಗೆ ಲೆಪ್ಪಿಸಿಕೊಂಡರೆ ನಾನು ನಾನು ಆಗಿಯೆ ಉಳಿಯಬೇಕಲ್ಲದೆ, ನಾನು 'ಎಲ್ಲ ತಾನು ಲಿಂಗ'ವೆಂಬ ವಿಶ್ವಲಿಂಗಪ್ರಜ್ಞೆಯ ನಿರಾಲಂಬದಲ್ಲಿ ನೆಲೆಯೂರಿ, ಲಿಂಗದಲ್ಲಿ ಬೆಳೆದು ವಿಶ್ವಮಯ ವಿಶ್ವಾತೀತನಾದ ಲಿಂಗವಾಗಿ ಇರುವ ಅರಿವ ನೋಡುವ ಕೇಳುವ ಉಣುವ ಉಡುವ ನಡೆವ ನುಡಿವ ಮಲಗುವ ಏಳುವ, ತನ್ನ ಆವಿರ್ಭಾವವಾದ ವಿಶ್ವಲಿಂಗದೊಡನೆ ವ್ಯವಹರಿಸುವ, ತನ್ನ ತಾನು ಅರ್ಚಿಸುವ ಪೂಜಿಸುವ, ತನ್ನ ತನಗೆ ಅರ್ಪಿಸುವ. ತನ್ನ ತಾನು ಭೋಗಿಸುವ, ತನ್ನ ತಾ ಭಜಿಸುವ, ತನ್ನ ತಾ ಮೋಹಿಸಿ ಪ್ರೀತಿಸುವ ಸಂಭವ ಅಸಂಭವ.

'ತಾನು ಲಿಂಗ, ವಿಶ್ವ ಲಿಂಗ. ತಾನು ವಿಶ್ವ, ವಿಶ್ವ ತಾನು, ಒಂದು ಎಲ್ಲ, ಎಲ್ಲ ಒಂದು,'—ಎಂಬ ಏಕಮೇವ ಬ್ರಹ್ಮಪ್ರಜ್ಞೆಯಲ್ಲಿ ಇದ್ದು ಜಂಗಮಲಿಂಗ ಚರಿಸುತ್ತದೆ. ಅಂತೆಯೇ ಇದು ಚರಲಿಂಗ. ಪಾತಾಳದ ಕೆಳಗೆ ಪಾದ, ಹದಿನಾಲ್ಕು ಲೋಕಕ್ಕೆ ತಲೆ

ಯಾದ ಸುವರ್ಲೋಕದಿಂದ ಮೇಲೆ ಈ ಜಂಗಮಲಿಂಗದ ತಲೆ, ಈ ತಲೆಗೆ ಕಿರೀಟ ಅನಂತ ಬ್ರಹ್ಮಾಂಡ. ಬಯಲೇ ಶರೀರ. ಗಗನ ಜಂಗಮದ ಮುಖ, ಸೂರ್ಯ ಚಂದ್ರ ಅಗ್ನಿ ಈ ಮುಖದಲ್ಲಿ ಮೂಡಿದ ಕಣ್ಣು. ದಿಕ್ಕೇ ತೋಳು, ತರು ಮರ ಬಳ್ಳಿ ಹೊದರು ವನ ಕಾನನ ಮಹಾಕಾನನವೆಲ್ಲ ಜಂಗಮಲಿಂಗದ ದೇಹದಲ್ಲಿ ಚಿಗುರಿರುವ ರೋಮರಾಜಿ. ನೀಲ-ಕಾಲ-ಶುಭ್ರಮೇಘಮಹಾರಾಶಿಯೆ ಚರಲಿಂಗದ ಜಡೆ. ಗುಡ್ಡ ದಿನ್ನೆ ಪರ್ವತ ಕುಲಪರ್ವತಗಳೆಲ್ಲ ಈ ಜಂಗಮಲಿಂಗ ತೊಟ್ಟ ರುದ್ರಾಕ್ಷಿ. ಮಹಾಮೇರುವೆ ಕೋಲು, ಸಮುದ್ರಗಳೆಲ್ಲ ಕಮಂಡಲು; ಜಗತ್ತೆಲ್ಲ ಆತ ಹಾಕಿಕೊಂಡ ಅಂಗಿ, ಆದಿಶೇಷ ಆತನ ಕೌಪೀನ. ಮಿಂಚುವುದು ಆತನ ಕಾಯದ ಕಾಂತಿ, ಘುಡುಘುಡಿಸುವ ಸಿಡಿಲು ಆತನ ಕಂಠಧ್ವಾನ. ನಿಷ್ಕಲಲಿಂಗವೆ ಆತನ ಕರದಲ್ಲಿ ಬೆಳಗುವ ಇಷ್ಟಲಿಂಗ, ನಕ್ಷತ್ರಮಂಡಲ ಆ ಲಿಂಗವನ್ನಲಂಕರಿಸಿದ ಪುಷ್ಪಮಂಡಲ. ನಿಮಿಷ ನಿಮಿಷಾರ್ಧ ತಪ್ಪದ ನಿರಂತರ ನಿತ್ಯವೆ ಪೂಜೆ. ನಾಲ್ಕು ಯುಗ ಕಳೆದು ಮತ್ತೆ ಯುಗಾಂತರಕ್ಕೆ ನಡೆದಿರುವುದು ಚೈತನ್ಯಜಂಗಮ ಲಿಂಗದ ನಿರಂತರ ಗಮನ. ವೇದ ಆಗಮ ಉಪನಿಷತ್ತು ಪುರಾಣ ಶಾಸ್ತ್ರದರ್ಶನವೆಲ್ಲ ಇದೇ ಸುಜ್ಞಾನಜಂಗಮ ನುಡಿದ ಮಾತು—ಜ್ಯೋತಿರ್ಲಿಂಗ. ನಿಶ್ಶಬ್ದವಾದ ಜ್ಞಾನಮುದ್ರೆ. ಅದೇ ತತ್ತ್ವೋಪದೇಶ. ಹಗಲು ರಾತ್ರಿ ಹಗಲು ರಾತ್ರಿಯ ಅರಮನೆಯಲ್ಲಿ ಪೃಥಿವಿಯ ಸಿಂಹಾಸನದ ಮೇಲೆ ಮಂಡಿಸಿ, ವಿಶ್ವಪ್ರಪಂಚ ತಾನು ಲಿಂಗವೆಂಬ ಶಿವಜ್ಞಾನದ ಪರಮೈಶ್ವರ್ಯವಂತನಾಗಿ, ಬೇಕು ಬೇಡೆನ್ನದ ನಿರಾಳತೃಪ್ತಿಯಲ್ಲಿ ನಿಂದಿರುವ ಜಂಗಮಲಿಂಗ ! ಲಿಂಗದ ನಿಲವೇ ಸಾಕಾರ ಜಂಗಮದ ನಿಲವು, ಜಂಗಮದ ನಿಲವೇ ನಿರಾಕಾರ ಲಿಂಗದ ನಿಲವು.

ಈ ನಿಲವೇ ಅಲ್ಲಮಪ್ರಭುಲಿಂಗಜಂಗಮದ ಮಹಾನಿಲವು. ಭಿನ್ನ ವಿಭಿನ್ನವೆನಿಸಿ ತೋರುವ 'ಖಂಡಿತ'ವೆಲ್ಲವನ್ನು ನೇತಿಗಳೆದು, ಅಲ್ಲಗಳೆದು, ನಿರಾಕರಿಸಿ ಒಂದು ತಾನೆಲ್ಲವಾದ ವಿಶ್ವಪರಿಪೂರ್ಣ ದೇಹಪ್ರಾಣಭಾವವನ್ನು ತೊಟ್ಟು, ನಿತ್ಯ ಪರಿಪೂರ್ಣ-ದಿರವಾಗಿ ಅರಿವಾಗಿ ಆನಂದವಾಗಿ, ಪರಿಪೂರ್ಣಕ್ಕೆ ಪ್ರಭುವಾಗಿ, ಪರಿಪೂರ್ಣ-ಲಿಂಗವಾಗಿ ನಿಂದ ನಿಲವೇ ಅಲ್ಲಮಪ್ರಭುಲಿಂಗದ ನಿಲವು.[೧] ಇದೋ ಇಲ್ಲಿ

೧. ನೋಡಿರಿ: ಈತನಾರೆಂಬೊಡೆ ಸದಾ ಸಾ ।
ಕ್ಷಾತುವವನಿಜಲಾನಲಾನಿಲ ।
ಭೂತತತ್ತ್ವವಿದೂರ ಪರಮಾನಂದರಸಭರಿತ ॥
ಜಾತನಲ್ಲ ವಿಚಾರಿಸುವೊಡೆಯು ।
ಜಾತನಲ್ಲೆಂದೆನುತಲುಪಮಾ ।
ತೀತನೀ ಶಿಶುವೆಂದ ನಿರಹಂಕಾರ ನಿಜಸತಿಗೆ ॥
ಬಲ್ಲೊಡೀ ಶಿಶುವೇತಜೊಳಗಿಹ ।
ನಲ್ಲ ಹೊರಗ[ಗಿ?]ಹನಲ್ಲ ಭಾವಿಸ ।
ಲಿಲ್ಲದಿರುತಿಹನಲ್ಲವೆನುತಾ ತಂದೆತಾಯಿಗಳು ॥
ಎಲ್ಲ ಜಾಡ್ಯದ ಜಂಜಡಂಗಳ ।
ನಲ್ಲವೆನಿಸುವ ಬಾಲಕಗೆ ಬಳಿ ।
ಕಲ್ಲಮಪ್ರಭುವೆಂದು ಪೆಸರನು ಕೊಟ್ಟರರ್ತಿಯಲಿ ॥

ಪ್ರ. ಲಿಂ. ಲೀ., ಗ. ೬, ಪ. ೨೮-೨೯.

ನೋಡಿ, ಷಣ್ಮುಖಸ್ವಾಮಿಗಳು ಜಂಗಮದ ವಿಶ್ವಪೂರ್ಣ ನಿಲವನ್ನು ಹೀಗೆ ಬಿತ್ತರಿಸುತ್ತಾರೆ:

ಆದಿಯಾಧಾರವಿಲ್ಲದ ಮುನ್ನ, ನಾದಬಿಂದುಕಳೆಗಳಿಲ್ಲದ ಮುನ್ನ,
ಭೇದಾಭೇದಂಗಳಿಂದ ತೋರುವ ಬ್ರಹ್ಮಾಂಡ ಕೋಟಾನುಕೋಟಿಗಳಿಲ್ಲದ ಮುನ್ನ
ಸರ್ವಶೂನ್ಯನಿರಾಕಾರವಾದ ಪರವಸ್ತುವು
ಸಾಕಾರವಿಡಿದು ಸರ್ವಲೋಕಂಗಳ ಪಾವನವ ಮಾಡುವ ಪರಮಜಂಗಮದಲ್ಲಿ
ಹದಿನಾಲ್ಕು ಲೋಕಂಗಳಡಗಿರ್ಪವು ನೋಡಾ.
ಅದೆಂತೆಂದೊಡೆ: ಪಾದತಳದಲ್ಲಿ ಅತಳಲೋಕ, ಪಾದೋರ್ಧ್ವದಲ್ಲಿ ವಿತಳಲೋಕ,
ಜಂಘೆಯಲ್ಲಿ ಸುತಳಲೋಕ, ಜಾನುವಿನಲ್ಲಿ ಮಹಾತಳಲೋಕ,
ಊರುವಿನಲ್ಲಿ ತಳಾತಳಲೋಕ, ಗುಹ್ಯೆಯಲ್ಲಿ ರಸಾತಳಲೋಕ,
ಕಟಿಯಲ್ಲಿ ಪಾತಾಳಲೋಕ, ನಾಭಿಯಲ್ಲಿ ಭೂಲೋಕ,
ಕುಕ್ಷಿಯಲ್ಲಿ ಭುವರ್ಲೋಕ, ಹೃದಯದಲ್ಲಿ ಸ್ವರ್ಗಲೋಕ,
ವಕ್ಷದಲ್ಲಿ ಮಹರ್ಲೋಕ, ಕಂಠದಲ್ಲಿ ಜನರ್ಲೋಕ,
ಲಲಾಟದಲ್ಲಿ ತಪರ್ಲೋಕ, ಮೂರ್ಧ್ನಿಯಲ್ಲಿ ಸತ್ಯಲೋಕ.
ಇಂತೀ ಈರೇಳು ಲೋಕಂಗಳ ತನ್ನೊಳಗಿಂಬಿಟ್ಟುಕೊಂಡು,
ವಿಶ್ವಪರಿಪೂರ್ಣವಾಗಿ, ಭಕ್ತಹಿತಾರ್ಥವಾಗಿ ಮರ್ತ್ಯಲೋಕದಲ್ಲಿ ಸುಳಿವ
ಕರ್ತೃಜಂಗಮದ ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ.[೧]

ಆದಿಯಾಧಾರವನ್ನು ದಾಟಿ, ನಾದ ಬಿಂದು ಕಳೆಗಳು ಮೊಳೆದೋರದ ಮುನ್ನಿನ ಕಾಲಸ್ಥಲಕ್ಕೆ ನಡೆದು, ವಿಶ್ವಬ್ರಹ್ಮಾಂಡಗಳು ಮೂಡದ ಮುನ್ನ ಏನೂ ಏನೂ ಇಲ್ಲದೆ ತಾನೆ ತಾನಾಗಿ ಇರುವ, ನಿರಾಕಾರವಾಗಿ ಇರುವ ಪರವಸ್ತುವೆ ಸರ್ವಲೋಕಹಿತಾರ್ಥವಾಗಿ ಪಾವನಾರ್ಥವಾಗಿ ಕಲ್ಯಾಣಾರ್ಥವಾಗಿ ಸಾಕಾರವನ್ನು ಮರೆಮಾಡಿಕೊಂಡು ಸುಳಿವ ನಿರಾಕಾರ ಪರವಸ್ತುವೇ ಪರಮಜಂಗಮ. ಈ ಜಂಗಮ ಮೇಲೆ ಮೇಲೆ ಒಂದು ಮಾನವಾಕಾರ. ಈ ಆಕಾರ ಒಂದು ಲೋಕ ಒಂದು ಖಂಡ ಒಂದು ದೇಶ ಒಂದು ಎಡೆಯಲ್ಲಿ ನಿಂದಿರುವ ಸಾಕಾರ. ಆದರೆ ಈ ಸಾಕಾರದಲ್ಲಿ ವಾಸವಾಗಿ ಇರುವ ಅರಿವು, 'ತಾನೆ ಪರವಸ್ತು'ವೆಂದು ತನ್ನ ನಿಜದ ನಿರಾಳದಲ್ಲಿ ನಿಂದಿರುವ ಪರವಸ್ತುಪ್ರಜ್ಞೆ. ವಿಶ್ವ ಬ್ರಹ್ಮಾಂಡಗಳನ್ನು, ವಿಶ್ವಭೂತವಸ್ತುಜಾತವನ್ನೆಲ್ಲ ತನ್ನಲ್ಲಿ, ತನ್ನಿಂದ ಹಡೆದು, ತಾನೆ ಹೊತ್ತು ಹೊರೆದು, ಮತ್ತೆ ತನ್ನಲ್ಲಿಯೆ ಮುಳುಗಿಸಿ ಗರ್ಭೀಕರಿಸಿಕೊಂಡು ಇರುವ ಪರವಸ್ತುವಿನಲ್ಲಿ ಲೋಕಾಧಿಲೋಕಗಳೆಲ್ಲ ಮೂಡಿ ಮುಳುಗುತ್ತಿರುವಂತೆ, ಸಾಕಾರವಿಡಿದ ನಿರಾಕಾರ ಪರವಸ್ತು ಜಂಗಮದಲ್ಲಿ ಹದಿನಾಲ್ಕು ಲೋಕ 'ಅಡಗಿರ್ಪವು' ಎಂದು ಹೇಳಿದರೆ, ಕೇವಲ ನಿರಾಕಾರವಾದ ಪರಶಿವಲಿಂಗಕ್ಕೂ, ನಿರಾಕಾರವೆ ಸಾಕಾರವಾದ ಮಹಾಘನ ಜಂಗಮಲಿಂಗಕ್ಕೂ ಇರುವ ಅಭೇದವನ್ನು, ನಿರಾಕಾರ ಸಾಕಾರ ರೂಪದಲ್ಲಿ ನಿಂದಿರುವ ಭೇದವನ್ನು ಹೇಳಿದಂತಾಯ್ತು. ಅಲ್ಲವೇ? ವಿಶ್ವಲೋಕಗಳನ್ನೆಲ್ಲ ತನ್ನ ಪರ

೧. ಅಖಂ ವ. ಪು. ೧೬೧. ವ. ೧೨೪.

ಬ್ರಹ್ಮ, ಪರವಸ್ತುಪ್ರಜ್ಞೆಯಲ್ಲಿ, ಆ ಪ್ರಜ್ಞೆಗೆ ಮೂಲಭಿತ್ತಿಯಾಗಿರುವ ಪರಬ್ರಹ್ಮ ಸದ್ಭಾವದಲ್ಲಿ ಧರಿಸಿಕೊಂಡು, ಇಂಬಿಟ್ಟುಕೊಂಡು 'ವಿಶ್ವಪರಿಪೂರ್ಣವಾಗಿ' ಇರುವಾತನೆ ಪರಮಜಂಗಮ.

ಒಂದರ್ಥದಲ್ಲಿ, ಒಂದು ಮಹಾರ್ಥದಲ್ಲಿ ನಿರಾಕಾರ ಪರವಸ್ತುವಿಗಿಂತ ನಿರಾಕಾರ ಸಾಕಾರವಾದ ಜಂಗಮಪರವಸ್ತು ಮಿಗಿಲು. ಅದು ಹೇಗೆ ಎಂದು ನೀವು ಚಕಿತ ರಾಗುವುದು ಅಸಹಜವಲ್ಲ. ದೇವರಿಗಿಂತ ಮನುಷ್ಯಪ್ರಾಣಿಯೆ ಹೆಚ್ಚೇ? ಯಾವ ಸುಳ್ಳಿನ ಸಂತೆಯಲ್ಲಿ ಈ ಸುದ್ದೀ ಖರೀದಿ ಮಾಡಿದಿರಿ?—ಎಂದು ನೀವು ಕೇಳಬಹುದು. ಅಥವಾ ಇಂಥವರ ಸಂಗವೆ ಹೊಲ್ಲ ಎಂದು ನೀವು ನನ್ನನ್ನು ಇಲ್ಲಿಯೆ ಬಿಟ್ಟು, ನಿಮ್ಮ ಸ್ವಸ್ಥಲಕ್ಕೆ ಗಮಿಸಬಹುದು. ದಯವಿಟ್ಟು ಹಾಗೆ ಮಾತ್ರ ಮಾಡಬೇಡಿ. ಸ್ವಲ್ಪ ಸಮಾಧಾನದಿಂದ ಕಿವಿಗೊಟ್ಟು, ಬುದ್ಧಿಗೊಟ್ಟು ಕೇಳಿ. ನನ್ನ ವಿಚಾರ, ನನ್ನ ಮಾತನ್ನಲ್ಲ; ಶರಣರ ವಿಚಾರ, ಅವರ ಮಾತನ್ನು. ಅಥವಾ ಲಿಂಗಜಂಗಮದ ಸ್ಥಲಭೇದವನ್ನು ತೋರುವ ಒಂದು ಪ್ರತ್ಯಕ್ಷ ಸಂಗತಿಯನ್ನೆ ಇಲ್ಲಿ ನಾವು ಪರೀಕ್ಷಿಸೋಣ.

'ಶೂನ್ಯಸಂಪಾದನೆ'ಯ ಪಂಚಮೋಪದೇಶದಲ್ಲಿ ಬರುವ ಒಂದು ಸಂದರ್ಭ. ಜಂಗಮಮೂರ್ತಿ ಪ್ರಭುದೇವರು ಬಸವಣ್ಣನವರ ಅರಮನೆಯ ಮುಂದೆ ಅಂಗಳದಲ್ಲಿ ಸಿದ್ಧರಾಮದೇವರೊಡನೆ ಬಂದು ನಿಂತಿದ್ದಾರೆ. ಲಿಂಗಾರ್ಚನೆಯ ಪರಮಸುಖದಲ್ಲಿ ಓಲಾಡುತ್ತಿದ್ದ ಬಸವಣ್ಣನವರು ಜಂಗಮದ ಘನವನ್ನು ಚೆನ್ನಾಗಿ ಬಲ್ಲವರಾಗಿದ್ದರೂ ಲಿಂಗಪೂಜೆಯನ್ನು ಬಿಟ್ಟು ಏಳಲೊಲ್ಲದೆ ಪ್ರಭುದೇವರನ್ನು ಕರೆದು ತರಲು ಹಡ-ಪದಪ್ಪಣ್ಣಗಳನ್ನು ಕಳಿಸಿದರೆ ಮುಂದೆ ಏನು ಆಯ್ತು? ಬಸವಣ್ಣನವರದು ಅಗಣಿತ ಅಪರಾಧವಾಯ್ತು. ಏಕೆ? ಇದೋ ಶರಣರ ಕೊನೆಯ ತೀರ್ಮಾನವನ್ನು ಕೇಳಿ:

ಲಿಂಗಾರ್ಚನಂ ನ ಕರ್ತವ್ಯಂ ಕರ್ತವ್ಯಂ ಜಂಗಮಾರ್ಚನಂ
ಲಿಂಗಜಂಗಮಯೋರ್ಮಧ್ಯೇ ಜಂಗಮಸ್ತು ವಿಶಿಷ್ಯತೇ[೧]

ಲಿಂಗಪೂಜೆ ಲಿಂಗಭಕ್ತಿ ಮಾಡುವುದೇಕೆ? 'ಜಂಗಮವೆನ್ನ ಮಠಕ್ಕೆ ಬರಬೇಕೆಂದು. ಆ ಜಂಗಮವೆನ್ನ ಮಠಕ್ಕೆ ಬಂದರೆ, ಲಿಂಗಾರ್ಚನೆಯ ಮಾದು ಜಂಗಮಾರ್ಚನೆಯ ಮಾಡು ವೆನು....'—ಎಂದು ಲಿಂಗಕ್ಕಿಂತ ಜಂಗಮದ ಆಧಿಕ್ಯವನ್ನು ಒಪ್ಪಿಕೊಂಡು, ತಮ್ಮ ತಪ್ಪು ತಿದ್ದಿಕೊಂಡರು ಬಸವಣ್ಣನವರು. ಲಿಂಗ-ಜಂಗಮರಲ್ಲಿ 'ಜಂಗಮಸ್ತು ವಿಶಿಷ್ಯತೇ.'

ಸರ್ವಶೂನ್ಯ ನಿರಾಲಂಬವಾದ ನಿರಾಕಾರ ಪರವಸ್ತು, ನಿಷ್ಕಲ ಪರಶಿವಲಿಂಗ ತನ್ನ ಚಿತ್‌ಶಕ್ತಿಯನೊಳಕೊಂಡು, ಆ ಶಕ್ತಿಯ ವಿಶ್ವವಿಲಾಸವನ್ನು ಸೃಷ್ಟಿಸದೆ ತನ್ನೊಳಗೆ ಇಂಬಿಟ್ಟುಕೊಂಡು, ನಿರಾಕಾರ ಪರಬ್ರಹ್ಮದ ನಿಲವಾಗಿ ಯಾವ ಚಲನೆ ಯಾವ ಸ್ಪಂದ ಯಾವ ಸ್ಫುರಣೆಯೂ ಇಲ್ಲದೆ ತಾನೆ ತಾನಾಗಿ ಇರುವುದು ಸಹಜ ಸುಲಭ. ಆದರೆ ಅಜ್ಞಾನ ಮಾಯೆ ಅಹಂಭಾವ .ದ್ವೈತಭಾವ ಜಡಚೈತನ್ಯಭಾವದಿಂದ ಇಡಿದಿರುವ ಭೌತಪ್ರಪಂಚದಲ್ಲಿ, ಪ್ರಪಂಚದ ನಿರ್ಮಾಣವೆ ಆದ ಮಾನವಾಕಾರದ ಕುಂಭದಲ್ಲಿ

೧. ಶೂ. ಸಂ. ಪು. ೯೭, ವ. ೨೦ ರಲ್ಲಿಯ ಶ್ಲೋಕ.

ನಿಂದು, ತನ್ನ ಮುಂನ್ನಿನ ನಿರಾಕಾರದ ನಿಜವನ್ನು ನಿಮಿಷ ನಿಮಿಷಾರ್ಧ ಅಗಲದೆ, ಅದೇ ನಿರಾಕಾರ ಚಿದಂಬರದಲ್ಲಿ ಮೂಡಿ ಆಡಿ ಮುಳುಗುವ ವಿಶ್ವಾಕಾರದ ನಿಜವನ್ನೂ ನಿರಂತರ ಸಾವಧಾನದಿಂದ ಹೊತ್ತು ನಡೆವುದು ಅತ್ಯಂತ ಕಠಿಣ. ಸಮುದ್ರ ತರಂಗ ಗಳನ್ನು ಹೊತ್ತು ಆಡಿಸಬಹುದು. ಅದು ಅತಿ ಸುಲಭ. ತರಂಗ ಸಮುದ್ರವನ್ನು, ಮತ್ತೆ ಉಳಿದೆಲ್ಲ ತರಂಗಗಳನ್ನು ಧರಿಸಿ ನಡೆದಾಡುವುದು ಅತಿ ದುರ್ಗಮ. ಇಂಥ ದುರ್ಗಮ ದುರ್ಧರ ಸದುಸ್ಸಾಧ್ಯವಾದ ಸಾಹಸ ಮಾಡಿ ಚರಿಸುತ್ತದೆ ಚರಲಿಂಗ. ಶ್ರೀಕೃಷ್ಣ ಬಾಯಿ ತೆರೆದು ಅತ್ತರೆ ಎಲ್ಲ ಲೋಕಗಳು ಕಂಡವೆಂದು ಹೇಳುತ್ತಾರಲ್ಲ ಹಾಗೆ ಇದೆ, ಮತ್ತೂ ಘನವಿಶೇಷವಿದೆ ಈ ಜಂಗಮಸ್ಥಲದ ನಿಲುಕಡೆ. ಈ ಸ್ಥಲದ ಸಾಕಾರ ಮೂರ್ತಿಯಲ್ಲಿ ವಿಶ್ವಾಕಾರ ಮತ್ತೆ ನಿರಾಕಾರ! ಅಂತೆಯೇ ಸಾಕಾರ ವಿಶ್ವಾಕಾರ ನಿರಾಕಾರದ ಪರಮ ಸಮರಸಮೂರ್ತಿಯೆ ಜಂಗಮಲಿಂಗಮೂರ್ತಿ.

ಲಿಂಗಕ್ಕಿಂತ ಜಂಗಮ ಶ್ರೇಷ್ಠ, ದೇವನಿಗಿಂತ ಭಕ್ತ ಅಧಿಕ—ಎಂದು ಹೇಳಲು ಕಾರಣವೇನೆಂಬುದು ದೇವರ ದಾಸಿಮಯ್ಯನ ಈ ವಚನದಲ್ಲಿ ಸ್ಪಷ್ಟವಾಗುತ್ತದೆ, ನೋಡಿ:

ಒಡಲುಗೊಂಡವ ಹಸಿವ. ಒಡಲುಗೊಂಡವ ಹುಸಿವ.
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ.
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ.[೧]

ಹಸಿವು ತೃಷೆ, ಕಾಮ ಕ್ರೋಧ, ರಾಗ ದ್ವೇಷ, ಹುಸಿ ನುಸುಳು, ಸುಖ ದುಃಖ, ಏಳು ಬೀಳು, ತಾಗು ನಿರೋಧ, ಪಾಪ ಪುಣ್ಯ, ಮೇಲು ಕೀಳು, ಬಡತನ ಒಡೆತನ—ಮುಂತಾದ ವಿಷಮ ಪ್ರಪಂಚದ ಸಂಗದಿಂದ ಹುಟ್ಟಿ, ಸಂಸಾರದಲ್ಲಿ ಹಬ್ಬಿರುವ ಒಡಲನ್ನು ಹೊತ್ತು, ಜಗತ್ತಿನಲ್ಲಿ ಬಾಳುವುದೆ ಕಠಿಣ. ರಾಮನಾಥ ಇಂಥ ಒಡಲನ್ನು ಹೊತ್ತು, ಅದರ ಗುಣ ಧರ್ಮಕರ್ಮಕ್ಕೆ ಒಳಗಾಗದೆ, ತಾನು ರಾಮನಾಥನಾಗಿರುವುದು ಆತನಿಗೂ ಕಠಕಷ್ಟ ವಾಗಬಹುದು. ಸಂಸಾರ ಮಾಡುತ್ತ ನಿಸ್ಸಂಸಾರಿಯಾಗಿರುವುದು, ವಿಷಯಸಂಗದೊಳ ಗಿದ್ದು ನಿಸ್ಸಂಗಿಯಾಗಿ ಇರುವುದು, 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ'ಯಾಗಿ ಇರುವುದು ಕಠಿಣ, ಕಠಿಣ. ಭಕ್ತ, ಜಂಗಮ, ಶರಣ–ಈ ಕಷ್ಟ ಕಠಿಣವನ್ನು ಗೆದ್ದು 'ನಿಸ್ಸಂಗಿಯ ಸಂಗ'ವನ್ನು 'ನಿಷ್ಪ್ರಪಂಚಿಯ ಪ್ರಪಂಚ'ವನ್ನು ಸಾಧಿಸಿದ್ದಾನೆ. ಅಂತೆಯೆ 'ನಿನಗೆ ಬಲ್ಲಿದ ನಾನು' ಎಂದು ಮಾನವನ ಅಂತರಂಗ ದೇವನಿಗೆ ನುಡಿದು, ನುಡಿದಂತೆ ನಡೆದಿದೆ.

ಸಾಕಾರ ನಿರಾಕಾರ ಜಂಗಮ, ಸಕಲ ನಿಷ್ಕಲ, ಸಗುಣ ನಿರ್ಗುಣ ಜಂಗಮ. ಜಂಗಮ ದ್ವೈತಪ್ರಪಂಚದಲ್ಲಿ ಜಗದ್ಭರಿತವಾಗಿ ನಿಂದು, ನಿಜ ನಿರಾಳದ ಅದ್ವೈತದಲ್ಲಿ ಬೆಳೆದು, ಅಲ್ಲಿಯೂ ಭರಿತವಾಗಿ ನಿಂದಿರುವ ದ್ವೈತಾದ್ವೈತ ಲಿಂಗಮೂರ್ತಿ; ವಿಶ್ವ-ಚೈತನ್ಯಕ್ಕೆ ಚೈತನ್ಯವಾದ ಅರಿವಿನ ಬೆಳಗಿನಲ್ಲಿ ದ್ವೈತಾದ್ವೈತವಾದ ತನ್ನ ಪರಿಪೂರ್ಣ ಇರವೆ ಆಗಿ, ಇದ್ದು, ಆ ಬೆಳಗನ್ನೆ ನಡೆದು, ಬೆಳಗನ್ನೆ ನುಡಿದು, ಬೆಳಗನ್ನೆ ವಿಚಾರಿಸಿ,

೧. ದೇ. ದಾ. ವ. ಪು. ೫೯, ವ. ೧೨೩.

ಬೆಳಗನ್ನೆ ಆಚರಿಸಿ, ಬೆಳಗನ್ನೆ ಉಂಡುಟ್ಟು, ಅದನ್ನೆ ಕೊಂಡು ಕೊಟ್ಟು, ಅದನ್ನೆ ಹಾಸಿ ಅದನ್ನೆ ಹೊದೆದು, ಅದೇ ಮನೆ ಅದೇ ಊರು ಅದೇ ದೇಶ ಅದೇ ಖಂಡ ಅದೇ ಮಂಡಲ ಅದೇ ವಿಶ್ವಬ್ರಹ್ಮಾಂಡದಲ್ಲಿ ಗಮನವಿಲ್ಲದೆ ಗಮಿಸುತ್ತ, ನೋಡಲಿಲ್ಲದೆ ನೋಡುತ್ತ, ಕೇಳಲಿಲ್ಲದೆ ಕೇಳುತ್ತ, ನುಡಿಯಲಿಲ್ಲದೆ ನುಡಿಯುತ್ತ, ಉಣಲಿಲ್ಲದೆ ಉಣುತ್ತ 'ವಿಗಡಚರಿತ್ರ'ನಾಗಿ ಸುಳಿದಾಡುತ್ತಾನೆ ಜಗದ್ಭರಿತ, ಲಿಂಗಭರಿತ ಜಂಗಮ ಲಿಂಗ. ಇದು ಹೇಗೆ ಎಂದು ನಿಮ್ಮ ಬುದ್ಧಿ ಕೆಂಪೇರಬಹುದು. ಸಮಾಧಾನ. ಕಾಲ ದೇಶ ವಸ್ತುವನ್ನು, ಒಂದು ದೇಹ ಪ್ರಾಣ ಕರಣೇಂದ್ರಿಯವನ್ನು ಬಿಚ್ಚಿ ಕಳೆದು, ನಿತ್ಯ ಪರಿಪೂರ್ಣದಲ್ಲಿ ದಿವ್ಯ ದಿಗಂಬರನಾಗಿ ನಿಂತ ಈ ನಿರಾಳಕ್ಕೆ ತನಗೆ ಅನ್ಯವಾದ, ತನ್ನಿಂದ ಭಿನ್ನವಾದ, ತಾನು ಅಲ್ಲದ ಕಾಲವೆಲ್ಲಿದೆ? ದೇಶವೆಲ್ಲಿದೆ? ವಸ್ತುವೆಲ್ಲಿದೆ? ಪರಿಪೂರ್ಣ ವೆಲ್ಲಿಗೆ ನಡೆಯಬೇಕು? ನಿತ್ಯವೆಲ್ಲಿ ಹಗಲು ರಾತ್ರಿಯಾಗಬೇಕು? ನಿತ್ಯನಿಜತೃಪ್ತಿ ಏನುಂಡು ಏನು ಬದುಕಬೇಕು? 'ಬಯಲು ಬತ್ತಲೆಯಾದರೆ ಏನ ಹೊದಿಸುವಿರೋ?'

ಬಯಲು ಬತ್ತಲೆಯಾದರೆ! ಅತ್ಯಂತ ವಿಸ್ಮಯಕಾರಿಯಾದ ಸಂಗತಿಯಲ್ಲವೇ ಇದು? ಇಂಥ ಲೋಕವಿಚಿತ್ರ ಮೂರ್ತಿಯೆ ಪ್ರಭುದೇವರು. ಪ್ರಭುಲಿಂಗಲೀಲೆ ಯಲ್ಲಿ ಚಾಮರಸ, ಶೂನ್ಯಸಂಪಾದನೆಕಾರರಾದ ಶಿವಗಣಪ್ರಸಾದಿ ಮಹಾದೇವಯ್ಯ, ಗುಮ್ಮಳಾಪುರದ ಸಿದ್ಧಲಿಂಗದೇವರು, ಗೂಳೂರು ಸಿದ್ಧವೀರದೇವರು ಮುಂತಾದ ವರು 'ಬಯಲಿಗ' 'ಬಯಲುದೇಹಿ' 'ನಿರ್ದೇಹಿ' 'ನಿಂದರೆ ನೆಳಲಿಲ್ಲ' 'ನಡೆದರೆ ಹಜ್ಜೆಯಿಲ್ಲ' 'ಕಾರಣಕಾಯದಲಿ ಸುಳಿದ'—ಎಂದು ಮುಂತಾಗಿ ಪ್ರಭುದೇವರ ಮೂರ್ತಿಯಿಂದ ರಕ್ತ ಮಾಂಸ ಎಲು ತೊವಲುಗಳನ್ನೆ ಬಿಚ್ಚಿ, ಪೂರ್ಣದಿಗಂಬರವೆ ಪ್ರಭುದೇವರೆಂದು ತಿಳಿಸುತ್ತಾರೆ. ಈ 'ಪುರಾಣ'ವನ್ನು ನಂಬುವುದು ಹೇಗೆ? ಶರೀರ ಹೊದ್ದಿರುವ ಅಂಗಿ ಟೊಪ್ಪಿಗೆ ಸೀರೆ ಕುಪ್ಪಸ ಕಂಥೆ ಕೌಪೀನವನ್ನು ಕಳೆದು. ಯಾರಾದರೂ ಅಂಬರವಿಲ್ಲದೆ ದಿಗಂಬರವಾಗಿ ನಿಲ್ಲಬಹುದು. ಆದರೆ ಶರೀರ ಪ್ರಾಣ ಇಂದ್ರಿಯಗಳ ಗಂಟು ಬಿಚ್ಚಿ, ಅವನ್ನು ತೆಗೆದಿಟ್ಟು 'ದಿಗಂಬರ'ವಾಗಿ ನಿಲ್ಲಬಲ್ಲವರಾರು? 'ದಿಗಂಬರ' ವೆಂದು ಇಂಥ ನಿಲವನ್ನು ಹೇಳುವುದು ತಪ್ಪೇ. ಏಕೆಂದರೆ ಶರೀರಾದಿಗಳೇ ಇಲ್ಲದಿದ್ದರೆ, ದಶೇಂದ್ರಿಯ ಪಂಚಪ್ರಾಣ ಮನ ಬುದ್ಧಿಗಳೇ ಕಳೆದುಹೋಗಿದ್ದರೆ ದಿಕ್ಕು ದಿಕ್ಕುಗೆಟ್ಟು ಹೋದಂತೆಯೆ. ಅಂಬರ ಅಂದರೆ ಇಲ್ಲಿಯ ಅರ್ಥ ವಸ್ತ್ರ ಎಂದು. ಮತ್ತೊಂದು ಅರ್ಥ ಆಕಾಶ. ಆದರೆ ಪ್ರಭುದೇವರ ನಿಲವು ದಿಕ್ಕು ಅಂಬರವನ್ನು ಒಳಕೊಂಡು ಮೀರಿ ನಿಗುರಿ ನಿಂದ ನಿಲವು. ಅಂತೆಯೆ ಈ ನಿಲವನ್ನು ದಿಗಂಬರವೆಂದು ಹೇಳುವುದ ಕ್ಕಿಂತ 'ಚಿದಂಬರ'ವೆಂದು ಹೇಳುವುದು ಹೆಚ್ಚು ಸಮಂಜಸ.

ಅಲ್ಲಮಪ್ರಭು ಬಯಲಿಗ, ನಿರ್ದೇಹಿ ಎಂಬುದಕ್ಕೆ ಆಧಾರಗಳನ್ನು ಪರ್ಯಾ ಲೋಚಿಸಿ:

1. ....ಕಾಯವೆಂಬ ಕಂಥೆಯ ಧರಿಸಿ, ನಿಂದಲ್ಲಿ ನೆಳಲಿಲ್ಲದೆ. ಸುಳಿವರೆ ಹಜ್ಜೆ ಇಲ್ಲವೆ ಸುಳಿವ ಅಲ್ಲಮಪ್ರಭುರಾಯನ ಜಂಗಮಸ್ಥಲದ ನಿಲುಕಡೆ .....[೧]

೧. ಶೂ. ಸಂ. ಪು. ೨೧, ಪ್ರ. ೭೫.

2. ...ಅಕಾಯವೆ ಕಾಯವಾಗಿ ಬಲದ ಹಸ್ತದೊಳು ವೀಣಾದುಂಡಮಂ ಪಿಡಿದು ..... ತನ್ನೊಳು ತನ್ನ ನಿಜದ ನಿಲವ ನೋಡುತ್ತ, ಇಂತನಂತ ದೇಶಂಗಳೊಳು ಸುಳಿದು .....[೧]
(ಇಲ್ಲಿ ಅಕಾಯವೆ ಎಂಬ ಪದಕ್ಕೆ ಆಕಾಶವೆ ಎಂದು ೩ ಪ್ರತಿಗಳಲ್ಲಿ ಪಾಠಾಂತರ ಏದೆ. ಅಂದರೆ ಪ್ರಭುದೇವರು ಆಕಾಶವೆ ಕಾಯವಾಗಿದ್ದರು ಎಂಬರ್ಥ ಹೊರಡುತ್ತದೆ.)

3. ...ಆತನು ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ, ಕಾಯವಿದ್ದೂ ಕಾಯವಿಲ್ಲ. ....[೨]

4. ಕಾಯಗೊಂಡ ಮಾನವರಂತೆ ಕೈಗೆ ಸಿಲುಕ.
ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ.
ಕಾಂಬಡೆ ಕಂಗಳತೆಯಲ್ಲ; ಕೇಳುವಡೆ ಕಿವಿಗಳತೆಯಲ್ಲ. ....[೩]

5. ಕಂಗೆ ಕಾಬಡೆ ರೂಪಲ್ಲ; ಕೈಗೆ ಸಿಲುಕುವರೆ ದೇಹಿಯಲ್ಲ.
ನಡೆದಡೆ ಗಮನಿಯಲ್ಲ, ನುಡಿದಡೆ ವಾಚಾಳನಲ್ಲ. ....[೪]

6. ಅಂಗದಲಪ್ಪಿದೆನೆಂದರೆ ಸಿಲುಕದು. ಪ್ರಾಣದಲಪ್ಪಿದೆನೆಂದರೆ ಸಿಲುಕದು.
ಭಾವದಲಪ್ಪಿದೆನೆಂದರೆ ಸಿಲುಕದು.
ಸೂಕ್ಷ್ಮತನುವಿನ ಮನದ ಕೊನೆಯ ಮೇಲೆ ಅಪ್ಪಿದೆನೆಂದರೆ ಸಿಲುಕದು.
ಭಾವಾತೀತವಾದ ನಿರಾಕಾರದ ಘನವು ಸುಜ್ಞಾನದ ಮುಖಕ್ಕೆ ಅಸಾಧ್ಯ ನೋಡಾ !
ಗೊಹೇಶ್ವರನ ಶರಣರ ನೀನಾವ ಪರಿಯಲ್ಲಿ ತಡೆದು ನಿಲಿಸುವೆ ಹೇಳಾ ಸಿದ್ಧರಾಮಯ್ಯಾ?[೫]

7. ಶರಣಂಗೆ ಬೇಱೊಂದೇಕಾಂತವೆಂಬ ಸಂದೇಹ ಉಂಟೇ?
ತೆಱಹಿಲ್ಲದ ಘನವನೊಳಕೊಂಡ ಬಳಿಕ, ಬರಲೆಡೆಯುಂಟೆ ನಮ್ಮ ಗೊಹೇಶ್ವರಲಿಂಗಕ್ಕೆ?[೬]

(ಈ ವಚನಗಳಲ್ಲಿ ಪ್ರಭುದೇವರೇ ತಮ್ಮ ನಿಲವನ್ನು ಸಿದ್ಧರಾಮಯ್ಯನಿಗೆ ಸೂಚಿಸಿದ್ದಾರೆ.)

8. ನಿನ್ನಳವಲ್ಲ, ಎನ್ನಳವಲ್ಲ; ಇದಾರಳವಲ್ಲದ ಘನವು ನೋಡಯ್ಯಾ !
ಕಾಬರೆ ಕಂಗಳಿಗೆ ಅಸಾಧ್ಯ, ಮುಟ್ಟುವರೆ ಸೋಂಕಿಗಸಾಧ್ಯ. . , . . .

---

೧. ಶೂ. ಸಂ. ಪು. ೨೩-೨೪, ಪ್ರ. ೧.
೨. ಅದೇ „ ಪು. ೪೪, ಪ್ರ. ೩೧.
೩. ಅದೇ „ ಪು. ೪೬, ವ. ೪೩.
೪. ಶೂ. ಸಂ. ಪು. ೪೬, ವ. ೪೪.
೫. „ „ „ ೪೮, ವ. ೫೨.
೬. „ „ „ ೪೮, ವ. ೫೪.

ನಿಂದರೆ ನೆಳಲಿಲ್ಲ ಸುಳಿದರೆ ಹಜ್ಜೆಯಿಲ್ಲ.
ಪ್ರಭುದೇವರೆಂಬ ಭಾವ ತೋಱುತ್ತದೆ. . . . .[೧]

9. ...ಬಸವರಾಜದೇವರು ದೀರ್ಘದಂಡನಮಸ್ಕಾರಮಂ ಮಾಡುತ್ತಿರಲು ಪ್ರಭುದೇವರ ನಿಜಮೂರ್ತಿ ನಿರಾಕಾರಸ್ಥಲದೊಳು ನಿಂದು ನಮಸ್ಕಾರಾದಿ ಕ್ರೀಗಳಿಗೆ ಅಸಾಧ್ಯವಾಗಿರ್ದುದು.[೨]

10. ಶರಣೆಂದು ಪಾದವ ಹಿಡಿದೆಹೆನೆಂದರೆ ಚರಣದ ನಿಲವು ಕಾಣಬಾರದು.
ಕುಱುಹುವಿಡಿದೆಹೆನೆಂದರೆ ಕೈಗೆ ಸಿಲುಕದು. . . .[೩]

11. ಕಾಲಿಲ್ಲದೆ ನಡೆವನು; ಕೈಯಿಲ್ಲದೆ ಹಿಡಿವನು;
ಕಣ್ಣಿಲ್ಲದೆ ನೋಡುವನು ಸಹಜವಾಗಿ.
ಮೈಯಿಲ್ಲದ ಬಣ್ಣ, ಮಥನವಿಲ್ಲದ ಕೂಟ!
. . . . . ಕುಳ್ಳಿತ್ತೆಡೆಯಲ್ಲಿ ಕುಂಟ, ನಿಂದಿದ್ದೆಡೆಯಲ್ಲಿ ಹೆಳವ.
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು. . . .[೪]

12. ಇಂತು ಪರಶಿವಯೋಗದಲ್ಲಿ ನಿಂದು ನಿರವಯನಾಗಿ, ಅನಂತಕೋಟಿ ಬ್ರಹ್ಮಾಂಡಂಗಳೆಲ್ಲವನೂ ತನ್ನ ಮಹಾಜ್ಞಾನಪ್ರಕಾಶದಲ್ಲಿ ಆಲಿಂಗಿಸಿ, ತೊಳಗಿ ಬೆಳಗಿ ಒಪ್ಪುತ್ತಿರ್ಪ ಪ್ರಭುದೇವರು . . . .[೫]

13. ...ನಿಂದಡೆ ನೆಳಲಿಲ್ಲ, ನಡೆದರೆ ಹಜ್ಜೆಯಿಲ್ಲ.
ಭೂತಳದೊಳಗೆ ಕಂಡುದಿಲ್ಲ ಇಂತಪ್ಪ ಅನಿಯಮದ ಸುಳುಹು.
ಆಹುದಹುದು, ಅರಿದರಿದು ಜಂಗಮಸ್ಥಲ...[೬]

ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡ ಪ್ರಭುದೇವರನ್ನು ಕಂಡು ನುಡಿದರು ಬಸವರಾಜದೇವರು:

14. ...ಅಂತರವಿಲ್ಲದ ಒಳಗು, ಅವಲಂಬವಿಲ್ಲದ ಹೊಱಗು ನೋಡಾ.
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು ಮೂರ್ತಿಗೊಂಡರೆ
ವಿಚಿತ್ರವಾಯಿತ್ತು ಜಗವೆಲ್ಲಾ[೭]!

ನುಡಿದರು ಹಡಪದಪ್ಪಣ್ಣಗಳು:

15. ನೆಲನ ಹೊದ್ದದು, ಆಕಾಶವ ಮುಟ್ಟದು, ಎಡೆಯಲೊಂದು ರೂಪಿಲ್ಲ. . . .
ನಿಜವೆಂಬ ವಿಸ್ತಾರದಲ್ಲಿ ನಿತ್ಯ ನಿರಾ[illegible]ವೆಂಬ ಮಹಾಘನವು ತಾನು ಮೂರ್ತಿ ಗೊಳ್ಳಲು

---

೧. ಶೂ. ಸಂ. ಪು. ೯೪, ವ. ೧೨.
೨. ,, ,, ೯೯, ಪ್ರ. ೨೯.
೩. ,, ,, ೧೦೦, ವ. ೩೨.
೪. ,, ,, ೧೧೧-೧೧೨, ವ. ೮೭.
೫. ಶೂ. ಸಂ. ಪು. ೩೦೬, ಪ್ರ. ೨೬.
೬. ,, ,, ೩೧೩, ವ. ೫೩.
೭. ,, ,, ೩೧೮, ವ. ೩.

ಕಾಯದ ಕಂಗೆ ಕಾಣಬಾರದು; ಮನದ ಮುಂದೆ ಅಳವಡದು;
ಭಾವದ ಬಗೆಗೆ ಪೈದೋಱದು. . . . .[1]

16. ...ಆಕಾಶ ಬಾಯ್ದೆಗೆದಂತೆ ಆರೋಗಣೆಯ ಮಾಡುತ್ತಿದ್ದನು. . . .[2]

17. ...ಅವ ದೆಸೆಯಲ್ಲಿ ತಂದು ನೀಡುತ್ತಿದ್ದರೆ
ಆ ದೆಸೆದೆಸೆಗಳೆಲ್ಲಾ ಬಾಯಾಗಿ ಕೊಳುತಿರ್ದನು.
ಎತ್ತೆತ್ತ ನೋಡಿದಡತ್ತತ್ತ ಮುಖವಗೆಯ ಹೊಯ್ದಂತೆ ತೆಱಹಿಲ್ಲ. . . .[3]

ಮತ್ತೆ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ತೋರುವ ಈ 'ಸಗುಣ ನಿರ್ಗುಣ ಮೂರ್ತಿ'ಯಾದ ಅಲ್ಲಮಪ್ರಭುವಿನ ಆಕಾರವನ್ನು ಪರೀಕ್ಷಿಸಿರಿ:

18. ಶಿವಲಿಂಗಪ್ರಕಾಶವ್ಯೋಮಮೂರುತಿ. . . .
. . . . .ಚಿದ್ರೂಪಶಿಶು. . . . .[4]

19. ಹಾರವಿಸಿ ನಲಿದೆತ್ತೆ ಕಿಂಚಿತು ।
ಭಾರವಿಲ್ಲದೆ ಕೈಗೆ ಸೋಂಕದೆ ।
ಸಾರ ತೇಜಃಪುಂಜ ತನು ಶಿಶು ತನ್ನ ಕೈಯೊಳಗೆ ॥
ಪೂರವಿಸಿಕೊಂಡಿರಲು. . . .[5]

ಅಲ್ಲಮನಲ್ಲಿ ಸುರತಸುಖವನ್ನು ಬೇಡಿ ಬಂದ ಮಾಯೆಯ ಗತಿ ಇದು:

20. ಬಯಲ ಚಪ್ಪಿಱಿವಂತೆ ಚುಂಬನ ।
ಬಯಲನಪ್ಪುವವೊಲು ಸಮಪ್ಪಿಕೆ ।
ಬಯಲನೀಕ್ಷಿಸುವಂತೆ ನೋಟದ ಕೂಟದನುಭವಣೆ ॥
ಬಯಲುಗೊಂಡುವು ಭಾವಿಸಲು ನಿ ।
ರ್ವಯಲಿನಲ್ಲಮಗೋತ ಕಾರಣ ।
ಬಯಲ ಬಿಪ್ಪದ ಬಲೆಗೆ ಬದ್ದಳು ಮಾಯೆ ಸುರತದಲಿ[6] ॥

21. ಮಾಳೆಗೆ ನೆನೆವುದೆ ಗಾಳಿ ಬೀಸಿದ ।
ಡೊಲೆವುದೇ ಬಲುಗಿಚ್ಚಿನುರಿಯಿಂ ।
ದಳಿವುದೇ ನಭವಾ ಪರಿಯ ಬಯಲುಗನು ತಾನಾಗಿ[7] ॥

---

೧. ಶೂ. ಸಂ. ಪು. ೩೧೮, ಪ. ೪.
೨. ,, ,, ೩೩೩, ಪ. ೭.
೩. ,, ,, ೩೩೩, ಪ. ೮.
೪. ಪ್ರ. ಲಿಂ. ಲೀ. ಪು. ೭೫, ಪ. ೨೬.
೫. ಪ್ರ. ಲಿಂ. ಲೀ. ಪು. ೭೫, ಪ. ೨೭.
೬. ,, ,, ೭೧, ಪ. ೪೬.
೭. ,, ,, ೭೨, ಪ. ೪೭.

22. ಅಕಟ ಮರುಳೇ ಅಲ್ಲಮಪ್ರಭು ।
ಸಕಳರಿಗೆ ಸಾಕಾರವಾಗಿಹ ।
ಸುಕರ ನಿರ್ಮಳಮತಿಗೆ ನಿರ್ಗುಣ ರೂಪನಾಗಿಹನು[೧] ॥

23. ಹಿಂಗಿಸುವೆನೆಲ್ಲರ ಮನೋಮಯ ।
ದಂಗದೊಳಹೊಱಗಿಡಿದ ತಮದ ತ ।
ರಂಗಗಳನೆಂದೆನುತ ಕಾರಣಕಾಯದಲಿ ಸುಳಿದ[೨] ॥

ಸಿದ್ಧರಾಮಯ್ಯನ ಶಿಷ್ಯರಾದ ಗುಡ್ಡರು ಅಲ್ಲಮಪ್ರಭುವನ್ನು ಬಂಧಿಸುವ, ಕಲ್ಲುಗುಂಡಿನಿಂದಿಡುವ ವ್ಯರ್ಥ ಶ್ರಮವನ್ನು 24 ಮತ್ತು 25ರಲ್ಲಿ ನೋಡಿರಿ:

24. ಬಿಡದೆ ತೆಕ್ಕೆಯೊಳಲ್ಲಮನ ಬಯ ।
ಲೊಡಲ ಬಂಧಿಸಲೆಂದು ಬಿಗಿಯಲು ।
ಹಿಡಿಹಿಗಿಲ್ಲದೊಡವರು ಬೆಱಗಾಗಿರ್ದರದ ಕಂಡು[೩] ॥

25. ಪಿಂಡಭಾರದ ದೇಹಿಯನು ಮೈ ।
ಗಂಡು ನೋಯಿಸಬಲ್ಲವಲ್ಲದೆ ।
ಖಂಡಿಸುವುದೇ ಬಯಲ ದೇಹಿಯನಾವ ಕೈದುಗಳು[೪] ॥

26. ನಿಂದು ನಿಲ್ಲದೆ ನೆಲಕೆ ನೆಟ್ಟನೆ ।
ಹೊಂದಿ ಹೊಂದದ ರೂಪುರೇಖೆಗೆ ।
ಬಂದು ಬಾರದ ಸಚ್ಚಿದಾನಂದೈಕರಸಮಯನ[೫] ॥

ಮತ್ತೆ ಗೋರಕ್ಷನ ಖಡ್ಗ ಪ್ರಭುವಿನ ಬಯಲ ದೇಹದಲ್ಲಿ ಈಸಾಡಿದ ಪರಿಯನ್ನು ಪರಿಶೀಲಿಸಿ ನೋಡಿ:

27. ಸೊಪ್ಪುಳಾಗದು ಕೈದುವಾನದು ।
ವೊಪ್ಪವಳಿಯದು ಜಂತ್ರಜೋಕೆಗೆ ।
ತಪ್ಪದೋಱದು ಹೊಡೆಯೆ ಹಾಱುವ ಹದ್ದಿನಂದದಲಿ ॥
ನಿಪ್ಪಸರದಸಿ ಬಯಲ ದೇಹಿಯ ।
ನಪ್ಪಲಱಿಯದಿದೇನು ಚೋದ್ಯವೊ ।
ತಪ್ಪದೀತನೆ ಗುರುವೆನುತ ಗೋರಕ್ಷನಿಂತೆಂದ[೬] ॥

ಬಸವಣ್ಣ ರಚಿಸಿದ ಶೂನ್ಯಸಿಂಹಾಸನದ ಮೇಲೆ ಮಂಡಿಸಿದ ಮೂರ್ತಿಯನ್ನು—ಗುಹೇಶ್ವರ, ವಿಶ್ವಬ್ರಹ್ಮಾಂಡದ ಹೃದಯವಲ್ಲಭನೆ ಆದ ಪ್ರಭುಮೂರ್ತಿಯನ್ನು ಪರೀಕ್ಷಿಸಿರಿ:

---

೧. ಪ್ರ. ಲಿಂ. ಲೀ. ಪು. ೮೬, ಪ. ೨೦.
೨. ,, ,, ೧೩೩, ಪ. ೨ (ಉತ್ತರಾರ್ಧ)
೩. ,, ,, ೧೫೫, ಪ. ೧೪ (,,)
೪. ಪ್ರ. ಲಿಂ. ಲೀ. ಪು. ೧೫೫ ಪ. ೧೬.
೫. ,, ,, ೧೮೨ ಪ. ೨.
೬. ,, ,, ೨೩೪, ಪ. ೩೫.

28. ತೊಳಗಿ ಬೆಳಗುವ ಶೂನ್ಯಪೀಠದ ।
ನೆಲೆಯನೆಲ್ಲವ ಮೀಱಿ ಬಯಲಲಿ ।
ನೆಲಸಿ ನಿಂದನಿದೇನು ಮಹಿಮೆಯೊ ಗುರು ಗುಹೇಶ್ವರನ[೧] ॥

ಅಲ್ಲಮ ಪ್ರಭುದೇವರ ಈ ಪರಿಯ ಬಯಲುನಿಲವನ್ನು ಬಣ್ಣಿಸುವ ಹೇಳಿಕೆಗಳನ್ನು ಕನಿಷ್ಠಪಕ್ಷ ನೂರಕ್ಕಾದರೂ ಬಾಯಿಗೂಡಿಸಬಹುದು. ಆದರೆ ನೀವೇನೂ ಮತ್ತೆ ಭಯ ಪಡುವ ಕಾರಣವಿಲ್ಲ,—ಹನುಮಂತನ ಬಾಲದಂತೆ ಬೆಳೆಸುತ್ತ ನಡೆದರೆಂದು. ಬಯಲು ದೇಹ ಎಂದು ಹೇಳುವುದೇ ಬಯಲ ಭ್ರಮೆ. ಇಂಥ ಭ್ರಮೆಯನ್ನು 'ಸಿದ್ಧಾಂತ'ಗೊಳಿಸುವುದಕ್ಕೆ ಪುರಾಣದ ನೂರು ಹುಸಿಗಂಟಗಳನ್ನು ಆಧಾರವಾಗಿಟ್ಟರೆ, ಬರಿಯ ಭ್ರಮೆಯನ್ನು ನೂರರಿಂದಲ್ಲ ಸಾವಿರದಿಂದ ಗುಣಾಕಾರ ಮಾಡಿ ತಲೆಯೊಳಗಿಟ್ಟುಕೊಂಡು, ತಲೆಯನ್ನೆಲ್ಲ ಕೆಡಿಸಿಕೊಂಡಂತೆ. ಇಷ್ಟೂ ತಲೆ......ನಿಮಗೆ?—ಎಂದು ನೀವು ಸಿಡಿಲು ಹೊಡೆಯಬಹುದು. ಇಂಥ ಸಿಡಿಲು ಹೊಯ್ದರೆ ನನ್ನ ಬುದ್ಧಿ ವಿಚಾರ ಅಪ್ರತಿಭವಾಗಿ, ಹತವಾಗಿ ಹೋಗಬಹುದು. ಆದರೆ ಎದೆಯ ಆಳದ 'ಗುಂಗು' ಅಥವಾ ಗುನುಗು ಸಿಡಿಲನ್ನು ಮೀರಿ ಮತ್ತೆ ಗುಸುಗುತ್ತಿದೆ,—ಮಾನವನ ಆಳದಲ್ಲಿ, ಮಾನವನ ಒಳ ಹೊರಗೆ ಏನೋ 'ಪರಮರಹಸ್ಯ' 'ಮಂತ್ರಗೋಪ್ಯ' ಅಡಗಿದೆ ಎಂದು

ಏನೇ ಇರಲಿ, ಈ 'ಪುರಾಣ' ಕಟ್ಟಿಟ್ಟು, ನಾವು ನೋಡುತ್ತಿರುವ ಪ್ರಭುದೇವರ 'ಜಂಗಮಸ್ಥಲ'ವನ್ನು ಬಿಟ್ಟು ಹೊರಬಿದ್ದು, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳೋಣ. ಮತ್ತೆ ವಿಜ್ಞಾನಿಗಳಲ್ಲಿ ಹೋಗಿ 'ವಿಜ್ಞಾನಿಸ್ಥಲ'ದಲ್ಲಿ ನಿಂದು ಅವರನ್ನು ವಿಚಾರಿಸೋಣ, 'ಬಯಲುದೇಹ' ಸಾಧ್ಯವೇ ಎಂದು. ವಿಜ್ಞಾನಿ 'ಮನುಷ್ಯಸ್ಥಲ'ದಲ್ಲಿ ನಿಂತಿದ್ದರೆ, ಒಮ್ಮೆಲೆ ಉತ್ತರ ಕೊಡುತ್ತಾನೆ, ಅಸಾಧ್ಯ, ಅಶಕ್ಯ, ಅಸಂಭವ ಎಂದು. 'ಸ್ವಲ್ಪ ನಿಮ್ಮೊಳಗೇ ವಿಚಾರ ಮಾಡಿ ಹೇಳಿರಿ'—ಎಂದು ಬಿನ್ನವಿಸಿಕೊಂಡರೆ, 'ಮನುಷ್ಯಸ್ಥಲ'ದಿಂದ ಎದ್ದುಹೋಗಿ, ತನ್ನ ನಿಜಸ್ಥಳದಲ್ಲಿ ನಿಂತು ವಿಜ್ಞಾನಿ ವಿಚಾರಮಾಡಿ ನೋಡಿ ಕಂಡು ಏನು ಹೇಳುತ್ತಾನೆ? ದೇಹ ಬಯಲು. ಬಯಲಲ್ಲದೆ ದೇಹ ಮತ್ತೇನು? ಅಣು ಬಯಲುದೇಹಿ, ಪರಮಾಣು ಬಯಲುದೇಹಿ. ಈ ಕಲ್ಲು ಗುಂಡು ಬಂಡೆ ಪರ್ವತ ಭೂಮಿ ಪಾತಾಳ ಸಮುದ್ರ ಅಂತರಿಕ್ಷ ಆಕಾಶ ಚಂದ್ರ ಸೂರ್ಯ ನಕ್ಷತ್ರಕೋಟಿಯೆಲ್ಲ, ಅನಂತ ವಿಶ್ವಗಳೆಲ್ಲ ಬಯಲು ಅಥವಾ ಬಯಲುದೇಹಿಗಳು. ವಿಶ್ವಚೈತನ್ಯ ನಿರ್ಗತಿಯಲ್ಲಿ ನಿಂತರೆ ವಿಶ್ವಲೋಕ ಬಯಲು,—ಗತಿಯಲ್ಲಿ ನಡೆದರೆ ಆ ಬಯಲೇ ವಿಶ್ವಲೋಕ, ವಿಶ್ವಪ್ರಪಂಚ. ಈ ಮೊದಲು ೨ನೆಯ ಅಧ್ಯಾಯದಲ್ಲಿಯೆ ಸರ್ ಆರ್ಥರ್ ಎಡಿಂಗ್ಟನ್ ಅವರು ತಮ್ಮ 'Scientific table'—ವೈಜ್ಞಾನಿಕ ಮೇಜನ್ನು ಕುರಿತು ಹೇಳಿರುವುದನ್ನು ಕೇಳಿದ್ದೇವೆ. ಸ್ವತಃ ವಿಜ್ಞಾನಿಯಲ್ಲವಾದರೂ 'ವಿಜ್ಞಾನದಾರ್ಶನಿಕ'ನೆಂದು ನಾವು ಕರೆಯಬಹುದಾದ ಮಾರಿಸ್ ಮ್ಯಾಟರ್‌ಲಿಂಕ್ ಅವರು ಬಯಲು ಬ್ರಹ್ಮಾಂಡದ ಗಂಭೀರ, ಉನ್ನತಿ, ವಿಸ್ತಾರವನ್ನು ತೋರಿಸುತ್ತಾರೆ,—ಶಾಂತಭಾವದಿಂದ ನೋಡಿ, ಬೇಸರಪಟ್ಟುಕೊಳ್ಳಬೇಡಿ:

೧. ಪ್ರ. ಲಿ. ಲೀ. ಪು. ೨೭೭, ಗತಿ ೨೨, ಪ. ೫೭

To return to our theme: if, in the visible as well as in the invisible universe, all is motion, motion everywhere and everlasting, the reason is that energy, whose expression motion is, has no place wherein to hide, to escape or to pause. The essential law of the universe is that all things within it shall move; and therefore, although its own immobility is equally essential, motion becomes the unique law of its total life.

Have we contradiction here, in conflict with reality? Must our intellect acknowledge defeat? We must remember the limitations of that intellect, the weakness of our poor, word-chopping logic. One thing at least is certain—irrefutable and unchallengeable—that if the totality of these worlds, the unimaginable totality, were suddenly and for one single instant to arrest their movements, in that single instant they would have ceased to exist. In less than the twinkling of an eye there would be nothing. Not death, for something of life still clings to death; there would not even be death; there would be, as some one has said, life without life.

Let the stoppage be but for the thousandth part of a second, the result would be, not collapse, but instantaneous disappearance. The stars would not dissolve into dust; there would be no dust, for in dust there is substance; there would, in a flash, be absolute nothingness. All would become as though it never had been; and time itself would stop. In the place of what was, a void would carve itself, in the emptiness, such as we can not even struggle faintly to imagine.

The ancient religion of India, in the far-distant ages, was alone in its realisation of these vast, unsolvable problems. It held the moving universe and the motionless void to be an illusion that appears and disappears in accord with the endless rhythm of the sleep and the awakening of the Eternal cause. That Eternal cause exhales; worlds are born and multiply; inhales—matter returns to spirit and the worlds vanish, to appear again at the next awakening, in millions of years, and to go back again, millions of years later, at the next approach of slumber; and so for all eternity, without pause and without term.

Has a grander conception ever been found of the incomprehensible, that will remain incomprehensible to the end? And is the trend of science not in this direction?[೧]

ಭೂತಬ್ರಹ್ಮಾಂಡಗಳ ಬ್ರಹ್ಮಗರ್ಭವಾದ ವಿಶ್ವಚೈತನ್ಯ ನಿಮಿಷ ನಿಮಿಷಾರ್ಧ ನಿಷ್ಕಂಪವಾಗಿ, ನಿಶ್ಚಲ ನಿವಾತವಾಗಿ ನಿಂತರೆ ಉಳಿವುದೇನು? ಅಳಿದುದೇನು? ಏನೂ ಉಳಿದಿಲ್ಲ, ಏನೂ ಅಳಿದಿಲ್ಲ. ಆದರೆ ಏನೂ ಏನೂ ಇಲ್ಲ. ಮತ್ತೆ ಈ ಇಲ್ಲವೆ, ಈ ಶೂನ್ಯ, ಈ ಬಯಲನ್ನು ನೋಡಬಲ್ಲ ನಾನೂ ಇಲ್ಲ ನೀವೂ ಇಲ್ಲ. ಈ ಬಯಲು ಬ್ರಹ್ಮಾಂಡದ ಮರಣವಲ್ಲ. ಏಕೆಂದರೆ ಮರಣಕ್ಕೆ ಜನನ ಅಂಟಿಕೊಂಡೆ ನಿಂತಿದೆ. ಅದು ಪ್ರಾಣಕ್ಕೆ ಹೊರತಾದ ಪ್ರಾಣ. ಪ್ರಾಣವಿಲ್ಲದ ಈ ಪ್ರಾಣವನ್ನು ನಿಷ್ಪ್ರಾಣವೆಂದು ಕರೆಯೋಣವೇ? ಇದೇ ತರ್ಕಸರಣಿಯನ್ನು ಮುಂದುವರಿಸಿದರೆ ಈ ಬಯಲು ಬ್ರಹ್ಮಾಂಡದ ಅತ್ಯಂತಾಭಾವವಲ್ಲ. ಏಕೆಂದರೆ ಅಭಾವದ ಬೆನ್ನ ಮೇಲೆಯೆ ಕುಳಿತಿದೆ ವಸ್ತುಸದ್‌ಭಾವ. ಈ ಬಯಲು-ಭಾವ ಭಾವವಿಲ್ಲದ ಭಾವ. ಅದನ್ನೇ ನಿರ್ಭಾವವೆಂದು ಕರೆದರೆ ನಿಮ್ಮ ಆಕ್ಷೇಪವೇನಾದರೂ ಇದೆಯೆ? ಮತ್ತೆ ವಿಶ್ವಚೈತನ್ಯ ನಿಷ್ಕಂಪವಾಗಿ ನಿಂದ ನಿಮಿಷದಲ್ಲಿ ವಿಶ್ವಪುರುಷನ ದೇಹ ಮಾಯವಾಗಿ ಬಿಟ್ಟಿದೆ. ದೇಹವಿಲ್ಲ ಎಂದರೆ ಸರ್ವನಾಶವಾಗಿ ಹೋಗಿದೆ ಎಂದರ್ಥವಲ್ಲ. ದೇಹವಿಲ್ಲದ ದೇಹವಿದೆ. ಈ ಇದ್ದೂ ಇಲ್ಲದ ಅಥವಾ ಇಲ್ಲದೆ ಇದ್ದ ವಿಶ್ವದೇಹವನ್ನು ನಿರ್ದೇಹವೆಂದು ಹೆಸರಿಟ್ಟರೆ ನಿಮ್ಮ ಒಪ್ಪಿಗೆಯೆ? ಮ್ಯಾಟರ್‌ಲಿಂಕ್‌ರು ಹೇಳುವ ಸ್ಪಂದ ಸ್ಫುರಣೆ ಚಲನೆಗೆಟ್ಟ ವಿಶ್ವಚೈತನ್ಯ ನಿರ್ಭಾವ ನಿಷ್ಪ್ರಾಣ ನಿರ್ದೇಹ ಶೂನ್ಯ ನಿಶ್ಶೂನ್ಯ. ಇದೆ-ಇಲ್ಲಗಳ ಕೂಟಸ್ಥವೆ ಈ ಇರವು. ಇಂಥ ಇರವಿನಲ್ಲಿ ಸಮರಸೈಕ್ಯವಾಗಿ ನಿಂದಿರುವ ಚೈತನ್ಯ ವಿಜ್ಞಾನಿಗಳು ತಿಳಿದಂತೆ ಅಜ್ಞಾನಚೈತನ್ಯವಲ್ಲ ಸಜ್ಞಾನಚೈತನ್ಯ. ಜಡಚೈತನ್ಯವಲ್ಲ ಚಿತ್‌ಚೈತನ್ಯ (Consciousness force) ಎಂದರೆ, ಚಿದ್‌ಬಯಲು ಮತ್ತು ಭೌತಬ್ರಹ್ಮಾಂಡಗಳ ನಡುವೆ ಆಗುಳಿಸುತ್ತಿರುವ 'ಭೀಮನ ಕೊಳ್ಳ' ಮುಚ್ಚಿ ಸಮಪಾತಳಿಯಲ್ಲಿ ನಿಲ್ಲುತ್ತವೆ,– ಬಯಲು ಮತ್ತು ಬ್ರಹ್ಮಾಂಡಗಳು. ಆಕಾಶದ ಹರವಾದ ಬಯಲು ಮತ್ತು ಚಿದಾಕಾಶದ ಹರವಾದ ಬಯಲನ್ನು ವಿಂಗಡಿಸಿ ಹೇಳುವುದಕ್ಕಾಗಿಯೆ ಎರಡನೆಯ ಬಯಲನ್ನು ಶೂನ್ಯ ನಿಶ್ಶೂನ್ಯ, ನಿರವಯಲು ಚಿದ್‌ಬಯಲು ಮಹಾಬಯಲು ಎಂದು ಮುಂತಾಗಿ ಕರೆದಿದ್ದಾರೆ, — 'ಶೂನ್ಯಸಮಾಧಿ' 'ನಿರವಯಲಸಮಾಧಿ' 'ನಿಜೈಕ್ಯಸಮಾಧಿ'ಯಲ್ಲಿ ನಿಶ್ಚಲವಾಗಿ ನಿಂದು, ಶೂನ್ಯವನ್ನು ಅನುಭವಿಸಿ, ಶೂನ್ಯವನ್ನು ಸಂಪಾದಿಸಿ, ಸರ್ವಶೂನ್ಯವಾಗಿ ಇರಬಲ್ಲ ಶರಣರು.

ಪಿಂಡಬ್ರಹ್ಮಾಂಡಗಳ ಘಟ್ಟಿಯಲ್ಲಿ ಬಯಲನ್ನು ವಿಜ್ಞಾನಿಗಳು ಕಂಡು ಎಷ್ಟು ವರ್ಷ ಆದವು? ಆ ಮೊದಲು ಯಾರಾದರೂ ಅಂದಿನ ವಿಜ್ಞಾನಿಯ ಬಳಿಗೆ ಹೋಗಿ 'ಘಟ್ಟಿಯೆಂಬುದೆಲ್ಲ ಪೊಳ್ಳೇ' ಎಂದು ಹೇಳಿದ್ದರೆ, ಆ ವಿಜ್ಞಾನಿಯ ಪ್ರತಿಕ್ರಿಯೆ ಏನಾಗಬಹುದಿತ್ತು? ಹಾಗೆಯೇ ಇಂದಿನ ವಿಜ್ಞಾನಿಯ ಮುಂದೆ ಭಾರತೀಯ ದಾರ್ಶನಿ-

೧. The Magic of the Stars. XX chapter pp. 101-103

ಕರು, ಶರಣರು ಒಂದು ಮುಂಡಿಗೆ ಅಥವಾ ಮುಡಿಗೆ ಇಟ್ಟಿದ್ದಾರೆ. ಈ ಮುಡಿಗೆಯನ್ನು ಎತ್ತುವ ಸಾಮರ್ಥ್ಯ ಇಂದಿನ ವಿಜ್ಞಾನಕ್ಕಿಲ್ಲದಿದ್ದರೂ ಅಂಥ ಬ್ರಹ್ಮಸಾಮರ್ಥ್ಯವನ್ನು ಸಂಪಾದಿಸುವ ಸಾಹಸದಲ್ಲಿಯೆ ತೊಡಗಿದೆ ವಿಜ್ಞಾನ ಎಂದು ಗಭೀರವಾಗಿ ನುಡಿದಿದ್ದಾರೆ ಮ್ಯಾಟರ್‌ಲಿಂಕರು.

ಇಷ್ಟೆಲ್ಲ ಹೇಳಿದರೆ ಪ್ರಭುದೇವರು 'ಬಯಲಿಂದೇಹಿ' ಎಂದು ಸಿದ್ಧ ಮಾಡಿದ ಹಾಗಾಯಿತೇ? ಇಲ್ಲಿ ಒಂದು ಮಾತು ನಿಮಗೆ ಅರಿಕೆ ಮಾಡಿಕೊಳ್ಳಬೇಕಾಗಿದೆ. ನಾನು ಸಿದ್ಧಾಂತದ ಗೊಡವೆಗೇ ಹೋಗಿಲ್ಲ. ಆದರೆ ಈ ಅನುಭವ ಅಸಂಭವವಲ್ಲ–ಎಂದಿಷ್ಟೇ ನನ್ನ ಅಭಿಪ್ರಾಯ. ವಿಶ್ವಚೈತನ್ಯ ಮೌನಸಮಾಧಿಯಲ್ಲಿ ನಿಂತರೆ ವಿಶ್ವಪ್ರಪಂಚ ಬಯಲಾಗುವಂತೆ, ಮಾನವನ ಚಿತ್‌ಚೈತನ್ಯ 'ಅಱಿವಱಿತು ಮಱಹು ನಷ್ಟವಾಗಿ' ಮೌನವಾದರೆ, ತನ್ನ ದೇಹ ತನ್ನ ಪ್ರಾಣ ತನ್ನ ಭಾವ ಚಿದ್‌ಬಯಲಾಗಬಾರದೇಕೆ? ಇದೋ ನೋಡಿ, ನಾನು ನನ್ನ ಕೈಯಲ್ಲಿ ಲೆಕ್ಕಣಿಕೆ ಹಿಡಿದುಕೊಂಡು ಬರೆಯುತ್ತಿದ್ದೇನೆ. ೨೧ನೆಯ ಶತಮಾನದ ಅಣುವಿಜ್ಞಾನಿಯೊಬ್ಬ ಕಾಲದ ಹಾದಿಯಲ್ಲಿ ಹಿಂದಕ್ಕೆ ನಡೆದು ೧೩-೭-೧೯೬೧ ಗುರುವಾರ ಮುಂಜಾವು ೧೦-೧೫ ಗಂಟೆಗೆ ನಮ್ಮ ಮನೆಗೆ ಬಂದು, ತನ್ನ ಯಂತ್ರೋಪಕರಣದಿಂದ ನನ್ನ ಲೆಕ್ಕಣಿಕೆಯ ಇಲೆಕ್ಟ್ರಾನುಗಳ ಗತಿಯನ್ನು ನಿಲ್ಲಿಸಿಬಿಟ್ಟರೆ, ಗಟ್ಟಿಯಾಗಿ ಹಿಡಿದಿದ್ದ ಲೆಕ್ಕಣಿಕೆ ನನ್ನ ಮೂರು ಬೆರಳ ಹಿಡಿತದಿಂದ ಪಾರಾಗಿದೆ. ಎಲ್ಲಿ? ಇದ್ದಕ್ಕಿದ್ದಲ್ಲಿ. ಪಾರಾಗಿದೆಯೆ? ಇಲ್ಲ. ಮಾಯವಾಗಿದೆ ಅಂದರೆ ಬಯಲಾಗಿದೆ. ಲೆಕ್ಕಣಿಕೆಯ ಬಣ್ಣ, ಆಕಾರ, ಒಳಗೆ ಮಸಿ ಎಲ್ಲ ಬಯಲಾಗಿದೆ. ನನ್ನ ಬೆರಳು ಬಯಲನ್ನೆ ಹಿಡಿದು ಬಯಲುಮಸಿಯಿಂದ ಏನು ಬರೆಯಬೇಕು? ವಿಜ್ಞಾನಿಯ ಮೇಲೆ ಸಿಟ್ಟಿಗೇಳುವಂತಿಲ್ಲ. ಏಕೆಂಬುದು ನಿಮಗಾಗಲೆ ಹೊಳೆದಿರಬಹುದು! ಸಿಟ್ಟಿಗೆದ್ದರೆ ವಿಜ್ಞಾನಿಯ ಕೈಯಲ್ಲಿ ಲೆಕ್ಕಣಿಕೆಗಾದ ಗತಿಯೇ ನನ್ನ ಗತಿ ಆಗಬಹುದು.

ವಿಜ್ಞಾನಶಾಸ್ತ್ರದ ಬೆಳೆವಣಿಗೆಯಲ್ಲಿ ಇಂಥದೊಂದು ಕಾಲ ಬರಬಹುದು. ಇದು ಅಸಂಭವ, ಅಸಾಧ್ಯ ಎಂದು ಹೇಳಲಿಕ್ಕೆ ಆಗುವುದಿಲ್ಲ. ಹೀಗೆಯೆ ಮಾನವನು ತನ್ನ ಅರಿವಿನ ಬಲದಿಂದ ತನ್ನ ದೇಹ ಪ್ರಾಣ ಭಾವ ಚೈತನ್ಯದ ಗತಿಯನ್ನು ತಡೆದು ನಿಲ್ಲಿಸಿದರೆ, ದೇಹಪ್ರಾಣಾದಿಗಳು ಚಿದ್‌ಬಯಲಾಗಿ ನಿಲ್ಲುವ ಸಂಭವ ಇಲ್ಲವೆಂದು ಹೇಳುವ ಧೈರ್ಯವನ್ನು, ಧಾರ್ಷ್ಟ್ಯವನ್ನು ಹೇಗೆ ಮಾಡಬೇಕು? ಇಲ್ಲಿ ಬೇಕಾದರೆ ಚೆನ್ನಬಸವಣ್ಣನವರ ಮಾತನ್ನು ಕೇಳಿ:

ತನು ಬಯಲು ನಿರವಯದೊಳಡಗಿತ್ತು.
ಮನ ಬಯಲು ನಿರವಯದೊಳಡಗಿತ್ತು.
ಭಾವ ಬಯಲು ನಿರವಯದೊಳಡಗಿತ್ತು.
ಬಯಲು ಬಯಲು ಬೆರಸಿ ಬಯಲೆಯಾಯಿತ್ತು.
ಕೂಡಲಚೆನ್ನಸಂಗಯ್ಯನೆಂಬ ನುಡಿಯಡಗಿತ್ತು.[೧]

---

೧. ಶೂ. ಸಂ. ಪು. ೩೭೭, ವ. ೫೪.

ತನು ಬಯಲು, ಮನ ಬಯಲು, ಭಾವ ಅದೂ ಬಯಲು. ತನು ಮನ ಭಾವರೂಪದ ಘಟ್ಟಗಳು ಕರಗಿ ಬಯಲು ಆಗಿ ನಿಂದ ಅನುಭವ ಚೆನ್ನಬಸವಣ್ಣನವರದು. ತನು ಮನ ಭಾವ 'ನಿರವಯಲ ಸಮಾಧಿ'ಯಲ್ಲಿ ನಿರ್ಗಮನವಾಗಿ, ನಿಷ್ಕಂಪ ನಿಷ್ಪಂದವಾಗಿ ವಿಶ್ರಾಂತಿಗೊಂಡರೆ, ತನು ಬಯಲಾದ, ಮನ ಬಯಲಾದ, ಪ್ರಾಣ ಬಯಲಾದ, ಭಾವ ಬಯಲಾದ ಅನುಭವ ಚೆನ್ನಬಸವಣ್ಣನವರಿಗೆ ಆಗಿರಲಿಲ್ಲವೆಂದು ನೀವು ಹೇಗೆ ಹೇಳುವಿರಿ?[೧] ಏಕೆ ಹೇಳುವಿರಿ? ಮತ್ತೆ ನಿರವಯದಲ್ಲಿ, ನಿರಾಕಾರ ನಿರಂಗದಲ್ಲಿ ತನುಬಯಲು ಮುಂತಾದ ಬಯಲು ಅಡಗಿದ, ಅಡಗಿ ಒಂದಾದ, ಒಂದಾಗಿ ನಾನು-ಕೂಡಲಚೆನ್ನ ಸಂಗಮದೇವ ಎನಲಿಲ್ಲದ ನಿಶ್ಶಬ್ದದ ಅನುಭವವನ್ನು ವಿವರವಾಗಿ ಹೇಳಿದರೆ, 'ಇದು ಸುಳ್ಳು'—ಎಂದು ಹೇಳಲು ಕಾರಣವೇನು? ಮತ್ತೆ ಮುಂದೆ: ಈ ಬಯಲಿಗೆ ತನ್ನ ಅನುಭವ ತನಗಿದೆ, ತನ್ನ ಅರಿವು ತನಗಿದೆ. ಅಂತೆಯೆ ಈ ಬಯಲು ಚಿದ್ಬಯಲು ಎಂದು ಹೇಳುವುದು.

ಭೌತಬ್ರಹ್ಮಾಂಡದ ನಿಶ್ಚಲಸಮಾಧಿಯ ಬಯಲನ್ನು ಮ್ಯಾಟರ್‌ಲಿಂಕರು ಕಲ್ಪನೆಯ ಕಣ್ಣ ಮುಂದೆ ಹಿಡಿದು ತೋರುವಂತೆ, ಪ್ರಭುದೇವರು ಮಾನವ ಪಿಂಡಾಂಡದ ನಿರವಯಲ ಸಮಾಧಿಯ ನಿರಾಳ ಬಯಲನ್ನು ಶಬ್ದದಲ್ಲಿ ಬಣ್ಣಿಸಿ, ಶಬ್ದದ ಬಣ್ಣದಲ್ಲಿ ಅದ್ದಿ ತೋರುತ್ತಾರೆ, ಗಂಭೀರ–ಸಮಾಧಿಯಲ್ಲಿ ನಿಂದು ನೋಡಿ:

ತಾನಿದಿರೆಂಬೆರಡಱಿಯದೆ ಧ್ಯಾನ ನಷ್ಟವಾಗಿ ಜ್ಞಾತೃ
ಜ್ಞಾನ ಜ್ಞೇಯವೆಂಬ ತ್ರಿವಿಧವನಱಿ(ಱ?)ತ ಮಹಿಮಾ ಪಲ್ಲವಿ

ಹೊಱಗೊಳಗೆಂಬೆರಡಱ ಬಗೆಯನ್ನಱಸದೆ
ಎರಡಱ ತೆಱನೆಂಬ ನುಡಿಯ ಮುನ್ನವೆ ತಾನಱಿಯದೆ
ಅಱಿವಿನ ಮೂಲವ ಹಱಿದು ಮಱವೆ ನಷ್ಟವಾದ ಅಱಿವು
ಅಱಿವಿನ ಮಱವೆಯ ಕುಱುಹಳಿದ ನಿಶ್ಚಿಂತಾ ೧

ಉಲುಹಡಗಿದ ಸಮುದ್ರದ ನಿಲವಿನ ಘಾತದಂತೆ
ತಿಳಿವಿನ ಮಹಾಘನ ವಿವೇಕ ಹಱಿಹಂಚಾಗಿ
ಉಳಿದೆನೆಂಬಾ ಉಳುಮೆಯ ಮೂಲವ ಮಱಿದು
ಕಳೆಯ ಬೆಳಗಳಿದು ನಿಜದೊಳು ನಿಂದ ಮಹಿಮಾ ೨

---

೧. ತನು ಮನ ಪ್ರಾಣ ಮುಂತಾದ ರಕ್ತ ಮಾಂಸ ವಾಯು ಅರಿವಿನ ಘಟ್ಟಗಳು ಬಯಲಾಗಿ ನಿಂದರೆ, ಆ ಘಟ್ಟಗಳು, ಪಿಂಡಗಳು ನಷ್ಟವಾದ ಅನುಭವವನ್ನು ಮಡಿವಾಳ ಮಾಚಯ್ಯನವರು ಹೇಳುತ್ತಾರೆ ಕೇಳಿ:

ಮತ್ತಂ, ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ,—ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀನು ನಷ್ಟವಾದೆ. ಕಲಿದೇವರ ದೇವನೆಂಬ ನುಡಿ 'ನಿಶ್ಶಬ್ದಂ ಬ್ರಹ್ಮಮುಚ್ಯತೇ.'

ಶೂ. ಸಂ. ಪು. ೩೭೭, ವ. ೫೬.

ಉರಿ ಕರ್ಪುರವೊಡಗೂಡಿ ಎರಡೂ ಅಳಿದ ಬಳಿಕ
ಮರಳಿ ನೋಡಿಹೆನೆಂದರೆ ಭಸ್ಮವಿಲ್ಲ ನೋಡಾ
ಅಱಿವನಱಿದಿಹೆನೆಂಬ ಅಱಿವಿನ ಮೂಲವ ಧರಿಸಿ
ಧರಿಸಿದ ಜ್ಞಾನಭಸ್ಮವೆಂಬುದಿಲ್ಲದ ಮಹಿಮಾ ೩

ನಿಜದಲ್ಲಿ ನಿರ್ಣಯವಡಗಿ ಗತಿ ಮತಿ ನಷ್ಟವಾಗಿ
ಕಳೆಯೊಳಗಣ ಬೆಳಗು ತಾನೆಂದು ತೋಱುತಲಿರ್ಪ
ತೊಳಗಿ ಬೆಳಗುವ ಚೈತನ್ಯ ತನ್ನಲ್ಲಿ ತಾನೆ ನಿಃ-
ಕಳೆಯಾಗಿ ನಿಜದೊಳು ನಿಶ್ಶೂನ್ಯವಾದ ಮಹಿಮಾ ೪

ತನ್ನೊಳು ತಾನೆಯಾಗಿ ಎನ್ನಲ್ಲಿ ನಾನಱಿದು
ಎನ್ನಲ್ಲಿ ನಾನಱಿದೆನೆಂಬ ಅಱಿವಿಗೆ ತೆಱಹುಗುಡದೆ
ಬಿಮ್ಮು ಬೀಸರವಾಗಿ ಹಮ್ಮು ಶೂನ್ಯವಾಗಿ
ನಿರ್ಮಳ ನಿಜಪದವಾದ ಉಪಮಾತೀತ ಮಹಿಮಾ ೫

ಜ್ಞಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದು
ತಾನಾಗಿರ್ದೆನೆಂಬ ಜ್ಞಾನ ಶೂನ್ಯವಾಗಿ
ತಾನೆ ತನ್ನೊಳು ಮೈಮಱೆದೊಱಗಿದ ನಿರಾಳ
ಜ್ಞಾನಾತೀತಂ ನಿರುಪಮಂ ನಿಶ್ಚಲ ನಿರ್ಭೇದ್ಯಾ ೬

ಶಬ್ದ ನಿಶ್ಶಬ್ದವಾಗಿ ನಿಶ್ಶಬ್ದವನಾಹತವಾಗಿ
ಶಬ್ದ ನಿಶ್ಶಬ್ದವೆಂಬ ಬುದ್ಧಿ ನಿರ್ವಯಲಾಗಿ
ಇದ್ದುದ ಹೋದುದನಱಿಯದೆ ಮೇರೆಗೆಟ್ಟ
ನಿಶ್ಶಬ್ದ ಗಂಭೀರ ಗುಹೇಶ್ವರ ನಿಮ್ಮ ಬಸವಣ್ಣಾ[೧] ೭

ಸಿದ್ಧವೀರದೇವರು ಹೇಳುವಂತೆ, ಪ್ರಭುದೇವರು ಬಸವರಾಜದೇವರಿಗೆ ನಿರೂಪಿಸುವ 'ಲಿಂಗಾಂಗಸಮರಸದ ನಿರ್ವಯಲ ನಿಜಸಮಾಧಿಯ ನಿರ್ಣಯ' ಈ ಪದಗಳಲ್ಲಿ ಹುದುಗಿದೆ. ಈ ನಿರಾಳದ ನಿರ್ಣಯವನ್ನು 'ಅಱುಹಿ ತೋಱಲು ಆ ಬಸವರಾಜ ದೇವರು ಕೃತನಿಶ್ಚಯವನೈದಿದ'ರು.[೨] ಈ ಏಳು ನುಡಿಗಳಲ್ಲಿ ಪ್ರಭುದೇವರ ಪರಮಾನು ಭಾವದ ಚರಮ ಶಿವಸಿದ್ಧಾಂತ ಹೊಳೆವಂತೆ ತೋರುತ್ತದೆ. 'ಶೂನ್ಯಸಂಪಾದನೆ'ಯಲ್ಲಿ

---

೧. ಶೂ. ಸಂ. ಪು. ೩೭೧-೭೨.

೨. ಶೂ. ಸಂ. ಪು. ೩೭೩, ಪ್ರ. ೫.

ನಾವು ಹುಡುಕಿ ನೋಡಿ, ಸಂಪಾದನೆ ಮಾಡಬಹುದಾದ ದಿವ್ಯ ನಿಧಾನದ ರೂಹು ಇಲ್ಲಿ ಬಳ್ಳಿಮಿಂಚಾಗಿ ಝಳಪಿಸುವಂತಿದೆ. ಈ ಪದಗಳ ಸೂತ್ರ ಹಿಡಿದು ಪ್ರಭು ದೇವರ 'ನಿಶ್ಶಬ್ದ ಗಂಭೀರ'ವನ್ನು, 'ತಾನೆ ತನ್ನೊಳು ಮೈಮಱೆದೊಱಗಿದ ನಿರಾಳ'ವಾದ 'ನಿಶ್ಚಲ ನಿರ್ಭೇದ್ಯ'ವನ್ನು, 'ಅಱಿವಿಗೆ ತೆಱಹುಗುಡದ ನಿರ್ಮಳ ನಿಜಪದ'ವನ್ನು, 'ತೊಳಗಿ ಬೆಳಗುವ ಚೈತನ್ಯ ತನ್ನಲ್ಲಿ ತಾನೆ ನಿಃಕಳೆಯಾಗಿ ನಿಜದೊಳು ನಿಶ್ಶೂನ್ಯವಾದ' ಮಹಾಮಹಿಮೆಯ ನಿಲವನ್ನು, ಅರಿವು ಮರವು ಕುರುಹಿನ ತೆರೆಗಳೆದು ಉಲುಹಡಗಿ, ಚಲನೆ ಗತಿಯ ಇನಿಸೊಂದು ಸೋಂಕಿಲ್ಲದೆ ನಿಂದ ನಿರವಯಲ ಅಪಾರವನ್ನು ಪ್ರವೇಶ ಮಾಡಿ ನೋಡಿದರೆ, 'ಬಯಲುದೇಹಿ' ಅಲ್ಲಮಲಿಂಗನೆ 'ಎತ್ತ ನೋಡಿದಡತ್ತತ್ತ' ಕಾಣ ಬಹುದಲ್ಲವೇ? ಆದರೆ ಈ ನಿರಾಳದ ಬಯಲಲ್ಲಿ ಪ್ರವೇಶ ಮಾಡಬಲ್ಲ ಧೀರರೆಲ್ಲಿ?

ಈ ಬಯಲು ಹೇಗಿದೆ? ಅತ್ತಿತ್ತ ಹರಿದು ಆಡುತ್ತಿರುವ ಭಾವ ಚಿತ್ತ ಮನ ಬುದ್ಧಿಯ ಚೈತನ್ಯವನ್ನು ಹತ್ತಿಪ್ಪತ್ತು ನಿಮಿಷವಾದರೂ ಸೇದಿ, ಜಗ್ಗಿ ಹಿಡಿದು ಪ್ರಭು ದೇವರ ಬಯಲಲ್ಲಿ ನಿಲ್ಲಿಸಿದರೆ,—ಅಥವಾ ಸಾವಿರಗರಿಯಾಗಿ ಹಾರಾಡುವ ಮನವನ್ನು ನಿಲ್ಲಿಸಿದರೆ, ನಾವೂ ಈ ಬಯಲ ಸೀಮೆಗೇ ಬಂದು ಮುಟ್ಟಬಹುದು. ಮತ್ತೆ ದೇಹ ಇಂದ್ರಿಯ ಪ್ರಾಣ ಚೈತನ್ಯವನ್ನು, ಅಂದರೆ ದೇಹಚೈತನ್ಯ ಪ್ರಾಣಚೈತನ್ಯ ಇಂದ್ರಿಯ ಚೈತನ್ಯವನ್ನು ಮನ ಬುದ್ಧಿ ಚಿತ್ತ ಭಾವದಲ್ಲಿಯೆ ಎಡೆಮಾಡಿ, ಬಯಲಿಗೆ ನೈವೇದ್ಯ ಮಾಡಿದರೆ, ತನುಬಯಲು ಮನ-ಪ್ರಾಣಬಯಲು ಭಾವ-ಬುದ್ಧಿಯ ಬಯಲು, ಚೆನ್ನ ಬಸವಣ್ಣನವರು ಹೇಳುವಂತೆ 'ಬಯಲು ಬಯಲು ಬೆರಸಿ ಬಯಲೆ' ಆಗುವ ಸಂಭವ ಇಲ್ಲವೆಂದು ಹೇಳುವುದು ಹೇಗೆ? ಅಣುವಿಜ್ಞಾನ ಅಣುವನ್ನು ಒಡೆದು ಬಚ್ಚಬರಿ ಬಯಲನ್ನು ನೋಡುವುದಕ್ಕಿಂತ ಮೊದಲು, ಜಡದಲ್ಲಿ ಚೈತನ್ಯದ ಲೀಲೆಯನ್ನು, ಚೈತನ್ಯವೆ ಜಡವಾಗಿ ಮಲಗಿದ ವಿಭೇದವನ್ನು ಕಾಣುವುದಕ್ಕೆ ಮೊದಲು, ತನುಬಯಲು ಮನಬಯಲು ಮುಂತಾದುವನ್ನು ನಂಬುವುದು ಕುರುಡು ಎನ್ನಬಹುದಿತ್ತು. ಆದರೆ ಈಗ ಈ ಸಂಭವದಲ್ಲಿ ನಂಬುಗೆ ಇಡಲು ಹೆಚ್ಚಿನ ಅಡಚಣೆ ಇದ್ದಂತೆ ತೋರುವುದಿಲ್ಲ.

ಮ್ಯಾಟರ್‌ಲಿಂಕರು ಹೇಳುವಂತೆ, ವಿಶ್ವಚೈತನ್ಯದ ಗತಿ, ಒಟ್ಟಾಗಿ ನಿಂತರೆ ಎಲ್ಲ ಬಯಲಾಗಬಹುದು; ಪ್ರಪಂಚವೆಲ್ಲ ಕರಗಿ ಹುಡಿ (Dust) ಉಳಿಯದಂತೆ, ಮರಣ (Death)ವಲ್ಲದಂತೆ ಬಯಲಾಗಬಹುದು. ಆದರೆ ವಿಶ್ವಚೈತನ್ಯಸಾಗರದ ಒಳಗೆ ಗಟ್ಟಿಯಾಗಿ ರೂಪುಗೊಂಡಿರುವ ದೇಹ ಬಯಲಾಗುವುದು ಹೇಗೆ? ಅದು ಬಯಲಾಗುವ ತತ್ಕಾಲದಲ್ಲಿಯೆ ಆ ಸಾಗರ ಧುಮ್ಮಿಕ್ಕಿ ಮತ್ತೆ ಒಂದಿಲ್ಲೊಂದು ರೂಪದ ಚೈತನ್ಯ ಲೀಲೆಯ ನಡೆಯುತ್ತದೆ—ಎಂದು ನೀವು ಕೇಳಿದರೆ, ನಿಮಗೆ ಉತ್ತರ ಕೊಡುವುದು ಕಷ್ಟ. ಮುಂದಿನ ಶತಮಾನದಲ್ಲಿಯಾಗಲಿ, ಮೂವತ್ತು, ನಾಲ್ವತ್ತನೆಯ ಶತಮಾನದ ಲ್ಲಾಗಲಿ ಈ ಸಂಭವವೇ ಇಲ್ಲವೆಂದರೆ, ಆಗಲಿ ಎಂದೊಪ್ಪುತ್ತೇನೆ. ಆದರೆ ಮತ್ತೊಂದು ವಿಚಾರ ನಿಮ್ಮ ಮುಂದೆ ಇಡುತ್ತೇನೆ.

ಜಡವೆನಿಸಿ ತೋರುವ ವಿಶ್ವಪ್ರಪಂಚದ ಒಳಹೊರಗೆ ತುಂಬಿದೆ ಚೈತನ್ಯ. ಇದು ಪ್ರಾಣಚೈತನ್ಯದ ಸ್ಥೂಲರೂಪ. ಈ ಚೈತನ್ಯದ ಒಳಹೊರಗೆ ಇಡಿದಿದೆ ಅರಿವು. ಈ

ಅರಿವುಚೈತನ್ಯದ ಹೊರಗೆ ಒಳಗೆ ಚಿಜ್ಜ್ಯೋತಿಯ ಬೆಳಗಂ ಹರವಿದೆ, ಸೀಮೆಂ ಸಂಬಂಧ ವಿಲ್ಲದಂತೆ. ಈ ಬೆಳಗೇ ನಿರವಯಲ ಬೆಳಗು. ಶರಣರ, ಅನುಭಾವಿಗಳ ದಿವ್ಯಾನುಭವ ಇದು ಎಂದು ನನ್ನ ತಿಳಿವಳಿಕೆ. ಇದು ನಿಜವಿದ್ದರೆ, ಮಾನವನ ದೇಹಚೈತನ್ಯದ ಪ್ರಜ್ಞೆ (Physical Consciousness) ಪ್ರಾಣಚೈತನ್ಯದ ಪ್ರಜ್ಞೆ (Vital Consciousness) ಚಿತ್‌ಚೈತನ್ಯದ ಪ್ರಜ್ಞೆ ನಿಶ್ಚಲ ನಿಷ್ಪಂದವಾಗಿ ನಿಂದು, ಲಿಂಗಾಂಗಸಾಮರಸ್ಯ ದಲ್ಲಿ, ನಿರವಯಲ ಸಮಾಧಿಯಲ್ಲಿ ನಿರವಯ ಬೆಳಗಾದ ಸ್ವಯಂಜ್ಯೋತಿಯಲ್ಲಿ, ಚಿಜ್ಜ್ಯೋತಿಯಲ್ಲಿ ಒಡಗೂಡಿ, ನಿರವಯಲಲ್ಲಿ ಬೆರಸಿ, ಬೇರಿಲ್ಲದಂತೆ ಒಡವೆರೆದು ಒಂದಾಗಿ ನಿಲ್ಲುತ್ತವೆ. ಈ ನಿಲವನ್ನು ನಿಲ್ಲುವ ಸಮಾಧಿಸಾಮರ್ಥ್ಯ ಅಂತರಂಗ ಬಹಿರಂಗ-ಪ್ರಜ್ಞೆಗೆ ಇದ್ದಾಗಳೆ, ತನ್ನ ತನು ಕಳಚಿದರೂ ಬೆಳಗು–ಬಯಲಾಗಿ ತಾನುಳಿದು, ಮೃತ್ಯು ವನ್ನು ಮೀರಿ ಅಮೃತಸೀಮೆಯಲ್ಲಿ ನಿಂದ ಅರಿವು, ಪ್ರಾಣವಾಯು ಹಾರಿದರೂ ವಿಶ್ವ-ಪ್ರಾಣ ತಾನಾಗಿ, ಮತ್ತೆ ವಿಶ್ವಾತೀತವಾದ ನಿಷ್ಪ್ರಾಣ ತಾನಾಗಿ, ವಿಶ್ವದ ಒಳಹೊರಗೆ ತಾನೆ ಬದುಕಿರುವ ಅರಿವು, ಜೀವಭಾವವಳಿದರೂ ವಿಶ್ವಭಾವ, ಮತ್ತೆ ಭಾವಾತೀತವಾದ ನಿರ್ಭಾವಪದವೇ ಪರಮವಿಶ್ರಾಮಸ್ಥಾನವಾಗಿ, ಅಂಗಭಾವಕ್ಕೆ ಲಿಂಗಭಾವವೆ ಗೂಡಾಗಿ-ರುವ ಅರಿವು ಸ್ವಯಂಭುವಾಗಿ ಮೂಡುತ್ತದೆ ಮಹಾನುಭಾವಿಗಳ ಸತ್ಯಾನುಭಾವದಲ್ಲಿ. ಈ ಸತ್ಯಾನುಭಾವವೆ 'ಇದು ಸತ್ಯ, ಶಿವನಾಣೆ, ಶಿವ ಬಲ್ಲ'–ಎಂದು ಸಾರಿ ಸಾರಿ ನಿರ್ಧಾರ ವಾಗಿ, ನಿಸ್ಸಂದಿಗ್ಧವಾಗಿ, ನಿಶ್ಚಯವಾಗಿ ನುಡಿದಿದೆ.

ಈ ಎರಡನೆಯ ಬಯಲು ಬೆಂದ ನುಲಿಯಂತೆ. ಸುಟ್ಟು ಹೋದ ಹಗ್ಗ ಹಗ್ಗದಂತೆ ತೋರಿದರೂ ಆ ಹಗ್ಗಕ್ಕೆ ಕಟ್ಟುವ, ಕಟ್ಟಿಸಿಕೊಳ್ಳುವ ಶಕ್ತಿ, ಗುಣ ಧರ್ಮ ಕರ್ಮ ಏನೂ ಉಳಿದಿಲ್ಲ. 'ಹಗ್ಗತನ'ವೇ ಕಳಚಿ ಹೋಗಿ, ಏನೂ ಉಳಿಯದಂತೆ 'ತನು'ವೆಲ್ಲ ಬರಿದಾಗಿರುವ ಆ ಹಗ್ಗ, ಆ ನುಲಿ ಇದ್ದು ಇಲ್ಲದಂತೆ. ಅದರಂತೆಯೆ ಜಂಗಮಸ್ಥಲದ ಪ್ರಭುದೇವರ ನಿರ್ದೇಹದ ನಿಲವು ಎಂದು ನೀವು ಹೇಳಿದರೆ, ಅದಕ್ಕೂ ನಾನು ಒಪ್ಪುತ್ತೇನೆ. ಏಕೆಂದರೆ ಇಂಥ ಸದೇಹ ನಿರ್ದೇಹತ್ವ ನಮ್ಮ ಭಾವ ಬುದ್ಧಿಗೆ ಹೆಚ್ಚು 'ಹವಣಿ'ಯಾಗುತ್ತವೆ. ಪ್ರಭುದೇವರ ನಿರ್ದೇಹತ್ವವನ್ನು ಇನ್ನೂ ನಮ್ಮ ಹವಣಿಕೆಯೊಳಗೆ ಬರುವಂತೆ ಚೆನ್ನಬಸವಣ್ಣನವರು ಹೇಳುತ್ತಾರೆ ಕೇಳಿ:

> ಕಾಲಿಲ್ಲವೆಂಬರಯ್ಯಾ ಪ್ರಭುದೇವರ,–ಸಂಸಾರಸೂತಕವ ಮೆಟ್ಟನಾಗಿ.
> ಕೈಯಿಲ್ಲವೆಂಬರಯ್ಯಾ ಪ್ರಭುದೇವರ,–ಪರಧನವ ಕೊಳ್ಳನಾಗಿ.
> ಕಿವಿಯಿಲ್ಲವೆಂಬರಯ್ಯಾ ಪ್ರಭುದೇವರ,–ಅನ್ಯವ ಕೇಳನಾಗಿ.
> ಮೂಗಿಲ್ಲವೆಂಬರಯ್ಯಾ ಪ್ರಭುದೇವರ,–ದುರ್ಗಂಧಕ್ಕೆಳಸನಾಗಿ.
> ಎದೆ ಇಲ್ಲವೆಂಬರಯ್ಯಾ ಪ್ರಭುದೇವರ,–ಪರಸ್ತ್ರೀಯನಪ್ಪನಾಗಿ.
> ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
> ಪ್ರಭುದೇವರ ಒಕ್ಕ ಮಿಕ್ಕ ಪ್ರಸಾದವ ಕೊಂಡು
> ನಾನು ಧನ್ಯನಾದೆನು ಕಾಣಾ ಸಂಗನಬಸವಣ್ಣಾ ![೧]

---

೧. ಶೂ. ಸಂ. ಪು. ೩೦೨, ವ. ೫೧.

ಹಿಂದೆ 'ತನುಬಯಲು ನಿರವಯದೊಳಡಗಿತ್ತು'[೧]—ಎಂದು ತಮ್ಮ ಅನುಭವವನ್ನು ಹೇಳಿದ ಚೆನ್ನಬಸವಣ್ಣನವರೇ ಪ್ರಭುದೇವರ ದೇಹದ ನಿಲವನ್ನು ಹೀಗೆ ನಿರೂಪಿಸಿದ್ದಾರೆ ಎಂಬ ಮಾತು ನಮ್ಮ ಲಕ್ಷದಲ್ಲಿರತಕ್ಕ ಮಾತು. ಪ್ರಕೃತಿಯ ಕುಂಭವಾದ ದೇಹದ ಗುಣ ಧರ್ಮ ಕರ್ಮ ಗಂಧ ವಾಸನೆ, ರಸ ರುಚಿ, ಇಂದ್ರಿಯವಿಕಾರ ವಿಷಯವಿಲಾಸ, ಜೀವಭಾವಕ್ಕೆ ಕಾಲಾಗಿ ನಡೆವುದು ಕೈಯಾಗಿ ಮಾಡುವುದು, ಕಣ್ಣಾಗಿ ನೋಡುವುದು ಕಿವಿಯಾಗಿ ಕೇಳುವುದು–ಇವೆಲ್ಲ ಬರಿದಾಗಿ ಹೋದ ಬಳಿಕ, 'ದೇಹತನ'ವೆಲ್ಲ ನಷ್ಟವಾಗಿ ಬರಿಯ ಕೊಡವಾದ ದೇಹ[೨] ನಡೆದರೆ ಹಜ್ಜೆ ಹೇಗೆ ಬೀಳಬೇಕು? ಅಂಥ ನಿಷ್ಪ್ರಪಂಚ ದೇಹಕ್ಕೆ ನೆಳಲು ಬೀಳುವುದು ಹೇಗೆ? ನಾನು ನೀವು ದೇಹಕುಂಭದಲ್ಲಿ ತುಂಬಿ ಒಳ್ಳೇ 'ಭರ್ತೀ'ಯಾಗಿ ನಡೆಯುತ್ತೇವೆ. ನಮ್ಮ ಕಾಲಿಗೆ ಹೆಜ್ಜೆ ಮೂಡುತ್ತವೆ. ನಮ್ಮ ದೇಹಕ್ಕೆ ನೆಳಲು ಬೀಳುತ್ತದೆ; ಬೀಳಲೇ ಬೇಕು.

ಮೊದಲನೆಯ ಬಯಲು–ಪ್ರಭುದೇವರೇ ನಿರೂಪಿಸುವಂತೆ–'ಉರಿ ಕರ್ಪೂರ ವೊಡಗೂಡಿ ಎರಡೂ ಅಳಿದ ಬಳಿಕ ಮರಳಿ ನೋಡಿಹೆನೆಂದರೆ ಭಸ್ಮವಿಲ್ಲ'ದ ಬಯಲು. ಮ್ಯಾಟರ್‌ಲಿಂಕರು ಹೇಳುವ ನಿರ್ಗಮನದಲ್ಲಿ ಏನೂ ಇಲ್ಲದೆ ತಾನೆ ತಾನಾಗಿರುವ, ಸರ್ವಶೂನ್ಯವಾದ Dust–ಹುಡಿ, ಕಣ ಅಥವಾ Death–ಮರಣ, ವಿನಾಶವೇನೂ ಇಲ್ಲವಾದ ಬಯಲು, ಬಚ್ಚಬರಿ ಬಯಲು, ಪ್ರಭುದೇವರು ಹೇಳುವ 'ಜ್ಞಾನಭಸ್ಮ'ದ ಕುರುಹೂ ನಿರ್ನಾಮವಾಗಿ ನಿಂದಿರುವ ನಿಶ್ಶಬ್ದಗಂಭೀರವಾದ ನಿರವಯಲನ್ನು ಹೋಲುತ್ತದೆ. ಉರಿಯುಂಡ ಕರ್ಪೂರ ಹಿಂದೆ ಬೂದಿ ಉಳಿಯದಂತೆ ಉರಿದು ಹೋಗುತ್ತದೆ. ಕರ್ಪೂರ ತಿನ್ನುವವರೆಗೆ ಉರಿದ ಉರಿ, ಕರ್ಪೂರ ತೀರಿದರೆ,–ಉರಿ ಏನಾಯ್ತು?

---

೧. ಸೋ. ಪು. ೨೬೧.

ಇಲ್ಲಿ ನಿಮಗೆ ಬೇಕಾದರೆ ಶಿವಯೋಗಿ ಶಿವಾಚಾರ್ಯರು 'ನಿರ್ದೇಹಾಗಮಸ್ಥಲ'ದ ವಿಷಯವಾಗಿ ಹೇಳುವ ಒಂದೆರಡು ಮಾತನ್ನು ಕೇಳಿ ನೋಡಿರಿ:

ಕೇವಲೇ ನಿಷ್ಪ್ರಪಂಚೌಘೇ ಗಂಭೀರೇ ಚಿನ್ಮಹೋದಧೌ ।
ನಿಮಗ್ನಮಾನಸೋ ಯೋಗೀ ಕಥಂ ದೇಹಂ ವಿಚಿಂತಯೇತ್ ॥
ಅಪರಿಚ್ಛೇದ್ಯಮಾತ್ಮಾನಂ ಚಿದಂಬರಮಿತಿ ಸ್ಮರನ್ ।
ದೇಹಯೋಗೇಽಪಿ ದೇಹಸ್ಥೈರ್ವಿಕಾರೈರ್ನ ವಿಲಿಪ್ಯತೇ ॥
ಭೇದಬುದ್ಧಿಸ್ಸಮಸ್ತಾನಾಂ ಪರಿಚ್ಛೇದಸ್ಯ ಕಾರಣಂ ।
ಅಭೇದಬುದ್ಧೌ ಜಾತಾಯಾಂ ಪರಿಚ್ಛೇದಸ್ಯ ಕಾ ಕಥಾ ॥
ಶಿವೋಽಹಮಿತಿ ಯಸ್ಯಾಸ್ತಿ ಭಾವನಾ ಸರ್ವಗಾಮಿನೀ ।
ತಸ್ಯ ದೇಹೇನ ಸಂಬಂಧಃ ಕಥಂ ಸ್ಯಾದಮಿತಾತ್ಮನಃ ॥

ಸಿ. ಶಿ. ಪರಿ. ೧೮. ಪು. ೨೮೯-೨೯೦.

೨. ಇಲ್ಲಿ ದೇವರ ದಾಸಿಮಯ್ಯನವರ ಅನುಭವವನ್ನು ವಿವರಿಸಿ ನೋಡಿ:

ಆಡಬಾರದ ಬಯಲು, ಸೂಡಬಾರದ ಬಯಲು,
ಹಿಡಿಯಬಾರದ ಬಯಲು, ಒಡಲಿಲ್ಲದಾ ಬಯಲು ಒಡಲೊಳಡಗಿದ ಭೇದವ
ಲೋಕದ ಜಡಜೀವಿಗಳೆತ್ತ ಬಲ್ಲರೈ ರಾಮನಾಥಾ?

ಲಿಂ. ಲೀ. ಏ. ಬಾ. ಪು. ೬೩, ವ. ೫.

ಎಲ್ಲಿಗೆ ಹೋಯ್ತು? 'ಅಱಿವಿನ ಮಱವೆಯ ಕುಱುಹಳಿದ' ನಿಶ್ಚಿಂತ ನಿರಾಳ ಈ ನಿರವಯಲು.

ಈ ಎರಡೂ ಬಯಲು ಸಮನ್ವಯವಾದ ನಿರಾಕಾರ–ಸಾಕಾರವೆ ಪ್ರಭುದೇವರೆಂದು ಹೇಳಿದರೆ, ಇನ್ನೂ ನಿಮ್ಮ ಆಕ್ಷೇಪವಿದೆಯೇ? ದೇಹವಿದ್ದು ದೇಹವಿಲ್ಲದೆ ನಿರ್ದೇಹಪದದಲ್ಲಿ ನಿಂದು, ಪ್ರಾಣವಿದ್ದು ಪ್ರಾಣವಿಲ್ಲದೆ ನಿಷ್ಪ್ರಾಣಪದದಲ್ಲಿ ನಿತ್ಯನಾಗಿ ನಿಂದು, ಭಾವವಿದ್ದು ಭಾವವಿಲ್ಲದೆ ನಿರ್ಭಾವಪದದಲ್ಲಿ ನಿರಂಜನವಾಗಿ ನಿಂದು, ಪ್ರಪಂಚದಲ್ಲಿದ್ದು ಹಜ್ಜೆಯಿಲ್ಲದೆ ನಡೆದು, ನೆಳಲಿಲ್ಲದೆ ನಿಂದು 'ಕಾರಣಕಾಯ'ದಲ್ಲಿ ಸುಳಿದರು ಪ್ರಭುದೇವರು.[೧] ಈ ಕಾರಣಕಾಯ, ಈ ಬೆಂದ ನುಲಿ ಇಲ್ಲದಿದ್ದರೆ ಸುಳುಹಿಗೆ ಆಧಾರವೆ ಇಲ್ಲ. ಇಂಥ ಸುಳುಹಿಲ್ಲದೆ ಜಗತ್ತು, ಮಾನವ ಮೇಲೆ ಏಳುವಂತಿಲ್ಲ.

ಇತ್ತಲತಿ ಸುಲಭದಲಿ ಕರುಣಿಸಿ ।
ನಿತ್ಯಪದವಿಯನಖಿಳ ಶರಣರಿ ।
ಗಿತ್ತು ತಾ ಪರಿಪೂರ್ಣತೆಯ ನಿರ್ಲೇಪವೃತ್ತಿಯಲಿ ॥
ತತ್ತ್ವಮಸಿ ವಾಕ್ಯಂಗಳಿಂದ ।
ತ್ರತ್ತಲನುಪಮನಾಗಿ ತೊಲಗದೆ ।
ಸತ್ಯಶರಣರ ಸಲಹುತಿರ್ದನು ಗುರು ಗುಹೇಶ್ವರನು[೨] ॥

ಅಲ್ಲಮಪ್ರಭುವಿನಲ್ಲಿ ಸ್ವಯಂಭುವಾದ ಸ್ವಯಂಜ್ಯೋತಿಯ, ವಿಶ್ವತೋಮುಖವಾದ, ಮಹಾಲಿಂಗಜ್ಞಾನಚೈತನ್ಯದ ದಿವ್ಯಪ್ರವಾಹ ಧುಮ್ಮಿಕ್ಕಿ ಹರಿದು, ಭೌತಕಾಯ ವಾಯು-ಪ್ರಾಣ ಜೀವಭಾವವೆಲ್ಲ ಕೊಚ್ಚಿಕೊಂಡು ಹೋಗಿದೆ. ಅಲ್ಲಮಪ್ರಭು ಉಳಿದಿರುವುದು ಕೇವಲ 'ಬೆಂದ ನುಲಿ'ಯಂತೆ ಕಾರಣಕಾಯದಲ್ಲಿ. ಆತನ ಇರವೆಲ್ಲ ಗುಹೇಶ್ವರಲಿಂಗದ

---

೧. ಇಲ್ಲಿ ಚೆನ್ನಬಸವಣ್ಣನವರ ಮಾತನ್ನು ಪರಿಶೀಲಿಸಿರಿ:

1. ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯಾ . . . .

ಲಿಂ. ಲೀ. ಎ. ಚಾ. ಪು. ೧೯೫, ವ. ೯೭.

2. ಸಂಗವಿಡಿದಂತೆ ಸಂಗವಿಡಿದು ನೋಡದಿರಯ್ಯಾ.
ಶರಣ ಸಂಗಸೂತಕಿಯಲ್ಲ ನೋಡಯ್ಯಾ.
ಲಿಂಗಪರೀಕ್ಷಿತ ಸಂಗವಂತನೆಂದೆನ್ನದಿರಯ್ಯಾ.
ಶರಣ ಮನ ಬಂದಂತೆ ಮಾಡುವ.
ಅಱಿಸಿ ಸಕಲಾಗಮಾಚಾರ್ಯನಪ್ಪ ನೋಡಯ್ಯಾ !
ಮಿಂಚಿನ ಗೊಂಚಲದಂತೆ ಮುಂದೆ ರೂಪಾಗಿ ತೋಱುತ್ತಿಪ್ಪುದು !
ಹಿಂದೆ ನೋಡಲು ಬಯಲಾಗಿರುತ್ತಿಪ್ಪುದು !
ಶರಣನೊಡಲುಗೊಂಡಡೆ ಸಾಮಾನ್ಯನೇ?
ಪ್ರಕೃತಿಗುಣಭಿನ್ನಭಾವಿಯಲ್ಲ: ಕೂಡಲ ಚೆನ್ನಸಂಗಾ, ನಿಮ್ಮ ಶರಣನ ಪರಿ ಬೇಱೆ.

ಲಿಂ. ಲೀ. ಎ. ಚಾ. ಪು. ೪೦೮, ವ. ೧೦.

೨. ಪ್ರ. ಲೀ. ಗ. ೨೪, ಪ. ೪೧.

ಇರವೇ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಸರ್ವಂ ಖಲ್ವಿದಂ ಬ್ರಹ್ಮ', 'ಸಚ್ಚಿದಾನಂದ ನಿತ್ಯಪರಿಪೂರ್ಣ' ಮುಂತಾದ ವಾಕ್ಯಗಳು ನುಡಿದು ಹೇಳುವ ಪದವಿಗಿಂತ ಮೀರಿದ ಪದವಿಗೆ ಅತ್ತತ್ತ, ಅತ್ತಾಚೆ 'ಅನುಪಮ'ನಾಗಿ ತೊಲಗ ಬಲ್ಲ ಪ್ರಭುದೇವರು. ಹಾಗೆ ತೊಲಗಿ ನಿರವಯಲಾಗಿ ನಿಂದರೆ, ಮರ್ತ್ಯದ ಮಣಿಹ, 'ಸರ್ವಲೋಕೋಪಕಾರ,' ವಿಶ್ವ ಕಲ್ಯಾಣ, 'ತನ್ನ ತಾನರ್ಚಿಸಿ ಪೂಜಿಸಿಕೊಂಬ' ಲೀಲಾವಿನೋದ ಸಂಪೂರ್ಣವಾಗಲಿಲ್ಲ.

ಜಂಗಮದ ಪೂಜೆ ಜಗದ್‌ಭರಿತ ಪೂಜೆ. ಜಂಗಮದ ಪೂಜೆ ಜಗತ್‌ಕಲ್ಯಾಣ ಪೂಜೆ. ಅಥವಾ ಪೂಜೆಯೆ ಕಲ್ಯಾಣ. ಈ ಜಗತ್‌ಕಲ್ಯಾಣವೆ ಜಂಗಮದ ನಿತ್ಯ ಕಾಯಕ. ಇಂಥ ಕಲ್ಯಾಣ ಕಾಯಕವೆ ದಿವ್ಯಕ್ಕೆ ದಾಸೋಹ. ಜಂಗಮ ಮಾಡುವ ದಾಸೋಹವೇ ದಿವ್ಯಪ್ರಸಾದದ ಅವತಾರ,–ವಿಶ್ವಲೋಕಲೌಕಿಕಕ್ಕೆ. ಮತ್ತೆ ಈ ಪೂಜೆ ಸಹಜ ಪೂಜೆ. ಅಂದರೆ ಇದ್ದ ಇರವೇ ಪೂಜೆ, ಅದೇ ಭಕ್ತಿ, ಅದೇ ಅರ್ಪಣ, ಅದೇ ಕಾಯಕ ದಾಸೋಹ ಪ್ರಸಾದ; ಅದೇ ಸಹಜಲಿಂಗಾನಂದ, ನಿತ್ಯ ಪರಿಪೂರ್ಣಾನಂದ. ಇದು ಹೇಗೆ ಎಂದು ನೀವು ಕೇಳಬಹುದು. ಹೀಗೆ ನೀವು ಕೇಳುವುದು ನಿಮಗೆ ಸಹಜ. ಇದೋ ಇಲ್ಲಿ ನನ್ನ ಕಡೆ ಸ್ವಲ್ಪ ಹೊರಳಿ ನೋಡಿ. ನನ್ನ ಅಥವಾ ನನಗೆ ದೇವರು ನಾನು. ನಮ್ಮ ಮನೆಯೊಳಗೊಂದು ಬೆಕ್ಕಿದೆ. ಆ ಬೆಕ್ಕಿನ ದೇವರು ಬೆಕ್ಕು. ಬೆಕ್ಕಿನ ಕಣ್ಣು ಕಾಲು ಶರೀರ ಪ್ರಾಣವೆಲ್ಲ ಬೆಕ್ಕಿಗೆ ಪೂಜೆಯಾಗುತ್ತಿದೆ. ಬೆಕ್ಕಿನ ವ್ಯವಹಾರವೆಲ್ಲ ಭಕ್ತಿಯಾಗಿ ಸಲ್ಲುತ್ತಿದೆ ತನಗೆ. ಇಲಿ ಹಿಡಿವ ಕಾಯಕ ನಡೆಸಿದೆ ತನಗಾಗಿ. ಇಲಿಗಳನ್ನು ಅರ್ಪಿಸಿಕೊಳ್ಳುತ್ತಿದೆ ತನ್ನ ಹೊಟ್ಟೆಗೆ ಅಥವಾ ತನ್ನ ಪ್ರಾಣಕ್ಕೆ. ತಿಂದು ಇಲಿಯ ರಕ್ತವನ್ನೆ ಪ್ರಸಾದವಾಗಿ ಕೈಕೊಂಡು ಬೆಕ್ಕಿನ ರಕ್ತವಾಗಿ, ತನ್ನ ಶರೀರ ಪ್ರಾಣವಾಗಿ ಪರಿವರ್ತಿಸಿಕೊಳ್ಳುತ್ತಿದೆ. ಹೀಗಿರುವುದು ಅದಕ್ಕೆ ಸಹಜ. ಈ ಇರವೇ ಅದರ ಸಹಜಾನಂದ. ಇಲ್ಲಿ ಲೋಕೋದ್ಧಾರದ ಪ್ರಶ್ನೆಯೇ ಇಲ್ಲ. ಏಕೆಂದರೆ ಬೆಕ್ಕಿಗೆ ತಾನೇ ಸರ್ವಲೋಕಪ್ರಪಂಚ, ತಾನೇ ತನಗೆ ಪರಬ್ರಹ್ಮ. ಬೇರೆ ಪ್ರಪಂಚ ಅದಕ್ಕೆ ತೋರಿದರೂ ಆ ಪ್ರಪಂಚ ತನಗಾಗಿಯೇ ನಿರ್ಮಿತವಾಗಿದೆ. ತಾನಿದ್ದರೆ ಪ್ರಪಂಚ, ತಾನಿಲ್ಲದಿದ್ದರೆ ಎಲ್ಲಿಯ ಪ್ರಪಂಚ? ನನ್ನ ಕಥೆಯೂ ಸರಾಸರಿ ಇಷ್ಟೇ. ಅದಕ್ಕೂ ನನಗೂ ಇರುವ ಭೇದವೆಂದರೆ, ನಾನು ಬುದ್ಧಿಯುಳ್ಳ ದೇವರು, ಅದು ನನ್ನಷ್ಟು ಬುದ್ಧಿಯಿಲ್ಲದ ದೇವರು. ಹಗಲಿರುಳು, ಮನೆಯಲ್ಲಿ ಹೊಲದಲ್ಲಿ ಪೇಟೆಯಲ್ಲಿ ಕಚೇರಿಯಲ್ಲಿ, ಹುಡುಗತನ ಹಿರಿಯತನದಲ್ಲಿ, ವಿದ್ಯಾಬುದ್ಧಿಯಲ್ಲಿ, ಕೈಕಾಲು ಕಣ್ಣಲ್ಲಿ, ಹೆಂಡತಿಮಕ್ಕಳಲ್ಲಿ ಬಂಧುಬಾಂಧವರಲ್ಲಿ, ಪರಿಜನ ಪುರಜನದಲ್ಲಿ, ದೇಶ ರಾಷ್ಟ್ರೋದ್ಧಾರದಲ್ಲಿ, ಕಾವಿಕೋವಣದಲ್ಲಿ ವಸ್ತ್ರಅಲಂಕಾರದಲ್ಲಿ–ಎಲ್ಲೆಲ್ಲಿ ನನ್ನ ದೇವರ ಪೂಜೆ ಅಂದರೆ ನನ್ನ ಪೂಜೆ ನನ್ನ ಭಕ್ತಿ ನನ್ನ ಕಾಯಕ, ನನಗೆ ದಾಸೋಹ, ನನಗೆ ಅರ್ಪಣ, ನನಗೆ ಆನಂದ. ನಾನಿರುವಂತೆ ನಾನಿರುವುದೆ ನನ್ನ ಪೂಜೆ, ನಾನಿರುವ ಮಿತಿಯಲ್ಲಿಯೆ ನನ್ನ ಪೂಜೆ. ಇದೆಂಥ ವಿಗಡಪೂಜೆ ನಿಮ್ಮದು ಎಂದು ನೀವು ಗಾಬರಿಗೊಳ್ಳಬಹುದು! ಗಾಬರಿಯಾಗಲು ಏನೂ ಕಾರಣವಿಲ್ಲ. ಏಕೆಂದರೆ ಬಹುಶಃ ಸ್ವಲ್ಪ ಹೆಚ್ಚು ಕಡಮೆ—ಕ್ಷಮಿಸಿರಿ,—ಇಂಥ ಪೂಜೆಯನ್ನೇ ನೀವು ನಡೆಸಿರಬಹುದು. ಒಬ್ಬರು ಮತ್ತೊಬ್ಬರನ್ನು ನೋಡಿ ಬೆಪ್ಪಾಗುವ ಪೂಜೆಯನ್ನೇ ಸಾಮಾನ್ಯವಾಗಿ

ನಾವೆಲ್ಲ ನಡೆಸಿದ್ದೇವೆ. ಈ ವಿಗಡ ಪೂಜೆ, ಈ ಸಂಸಾರವೃತ್ತವೇ ಮಾನವಕುಲಕ್ಕೆ ಸಹಜ. 'ಅದಕ್ಕದು ಸಹಜ'ವೆಂದೇ ಒಬ್ಬರನ್ನೊಬ್ಬರು ಹೆಚ್ಚು ಆಕ್ಷೇಪಿಸುವುದಿಲ್ಲ. ಬೆಂಕಿ ಬಣವೆಯನ್ನು ಸುಡುತ್ತಿದ್ದರೆ, ಬೆಂಕಿಯನ್ನು ಆಕ್ಷೇಪಿಸುವುದು ತಪ್ಪಲ್ಲವೇ?

ಮಾನವಪೂಜೆ, ಮಾನವಭಕ್ತಿ ಅರ್ಪಣ ಮಾನವಾಕಾರ. ಮಾನವತನ ತುಂಬಿದ ಈ ಪೂಜೆಯನ್ನೇ ನಾನು 'ಪ್ರಪಂಚ' 'ಸಂಸಾರ' 'ಬದುಕು' 'ಬಾಳುವೆ' ಎಂದು ಕರೆವುದು. ಜಂಗಮಪೂಜೆ ಜಂಗಮದ ಭಕ್ತಿ ಅರ್ಪಣ ಆನಂದ ಜಂಗಮಾಕಾರ. ಈ ಪೂಜೆಯನ್ನೇ ನಾವು ಅದ್ವೈತಪೂಜೆ, ಐಕ್ಯಪೂಜೆ, ಸಹಜಪೂಜೆ, ನಿಜಪೂಜೆ ಅಥವಾ ಪೂಜೆ ಮುಗಿದ 'ನಿಷ್ಪೂಜೆ' ಎಂದೂ ಕರೆಯುಬಹುದು. ಆಕಾಶವೆ ಟೊಪ್ಪರವಾಗಿ, ಅಜಾಂಡ ಬ್ರಹ್ಮಾಂಡವೆ ಕರ್ಣಕುಂಡಲವಾಗಿ, ವಿಶ್ವಭರಿತ ವಿಶ್ವಾತೀತವಾಗಿ, ನಿಂದ ನೆಲೆಯೇ ನಿಲಯವಾಗಿ ಇರುವ ಪ್ರಭುದೇವರ ಪೂಜೆಯ ವಿಶ್ವವಿಸ್ತಾರವನ್ನು ನೋಡಿ:

ಅನಾದಿಶರಣಹೃತ್ಕಮಲಮಧ್ಯದ ತೇಜೋಮಯವನೇನೆಂದುಪಮಿಸುವೆನಯ್ಯ?
ಜಲವೇ ಪಾವಶಿಲೆ, ಪೃಥ್ವಿಯೇ ಪಿಂಡಿಗೆ
ಆಕಾಶವೇ ಲಿಂಗ, ಸಪ್ತ ಸಮುದ್ರಂಗಳೇ ಪಂಚಾಮೃತ.
ಮೇಘವೇ ಅಗ್ಗವಣಿಯ ಬಂ(ಬಿಂ?)ದುಗೆ, ಮಳೆಗಾಲವೇ ಮಜ್ಜನ.
ಚಂದ್ರಮನೇ ಸೊಸಲ ಗಂಧ, ನಕ್ಷತ್ರವೇ ಅಕ್ಷತೆ.
ತರುಮರಾದಿಗಳೇ ಪತ್ರಪುಷ್ಪ.
ಒ (ಮೊ?) ಳಗೇ ಪಂಚಮಹಾವಾದ್ಯ.
ಮಾಗಿ ಎಂಬ ಪರಿಯಾಣವ ಬೆಳಗಿ. ಬೇಸಗೆ ಎಂಬ ಓಗರವ ಗಡಣಿಸಿ,
ಸರ್ವ ಪರಿಮಳವೆಂಬ ತುಪ್ಪವನೆರೆದು, ಪರವೆಂಬ ಮೇಲೋಗರವನಿಕ್ಕಿ,
ಬೆಳಗು ಕತ್ತಲೆ ಎಂಬ ಕನ್ನಡಕವ ಕಟ್ಟಿ,
ಇಂತು ಲಿಂಗಾರೋಗಣೆಯ ಮಾಡಿಸಿ, ಸುಜ್ಞಾನದಲ್ಲಿ ಕೈಗ(ಗೆ?)ರೆದು,
ಭಾವವೆಂಬ ವೀಳೆಯವ ಕೊಟ್ಟು, ಆನು ನೀನೆಂಬ ಅನುಲೇಪನಗಂಧವ ಪೂಸಿ,
ವಾಯುವೆಂಬ ವಸ್ತ್ರವನುಡಿಸಿ,
ಎಲೆ, ಗುಹೇಶ್ವರನೆಂಬ ಲಿಂಗವು ಪರಿಪೂರ್ಣವಾಗಿರ್ದ ಬಳಿಕ,
ಮಜ್ಜನಕ್ಕೆರೆವ ಠಾವಾವುದೈ ಸಂಗನಬಸವಣ್ಣಾ? ೧

ಪ್ರಭುದೇವರು ಕಲ್ಯಾಣದಲ್ಲಿ ಬಸವಣ್ಣನವರ—ಸಂಗನ ಬಸವಣ್ಣನವರ—ಮಹಾಮನೆಯಲ್ಲಿದ್ದಾಗ ನಡೆದ ಸನ್ನಿವೇಶವನ್ನು ಬಿತ್ತರಿಸುತ್ತದೆ, ಪ್ರಭುದೇವರ ಈ ವಚನ. ಲಿಂಗಾರ್ಚನೆಯ ವೇಳೆಯಾಯಿತು. ಸ್ನಾನಕ್ಕೆ ದಯಮಾಡಿಸಬೇಕೆಂದು ಬಸವಣ್ಣನವರು ಪ್ರಭುದೇವರನ್ನು ಬಿನ್ನವಿಸಿಕೊಂಡಾಗ. ಪ್ರಭುದೇವರು ತಮ್ಮ 'ಗುಹೇಶ್ವರಲಿಂಗ'ದ ಪೂಜೆ ಅರ್ಪಣಾದಿಗಳು ವಿಶ್ವಪರಿಪೂರ್ಣವಾಗಿ, ಕಾಲಪರಿಪೂರ್ಣವಾಗಿ, ದೇಶಪರಿಪೂರ್ಣವಾಗಿ ತಾನೇ ತಾನೇ ಸಹಜವಾಗಿ, ತೆರವು ಮರವಿಲ್ಲದೆ ಅವಿರಳವಾಗಿ, ಅಖಂಡ

೧. ಪ. ಶಾ. ಸಾ. ಭಾ. ೨, ಪ್ರ. ೫೩೭, ವ. ೫.

ವಾಗಿ ನಡೆದಿರುವಾಗ, ತನ್ನ ಹೃದಯಮಧ್ಯದ–ವಿಶ್ವಪ್ರಪಂಚ ಹೃತ್ಕಮಲ ಮಧ್ಯದ–ತೇಜೋಮಯವೆ ತನ್ನ ನಿರವಯಲದಿರವಾದ, ನಿರಾಳದಿರವಾದ ಗುಹೇಶ್ವರಲಿಂಗದ ಸ್ವಯಂಪರಿಪೂರ್ಣಪೂಜೆಯಲ್ಲಿ ನಿಮಗ್ನವಾಗಿ ಸಮರಸವಾಗಿ ನಿಂದಿರುವಾಗ, ಮತ್ತೆ ಬೇರೆ ಸ್ನಾನ ಯಾರಿಗೆ? ಮಜ್ಜನ ಮಾಡುವ ಠಾವು ಈ ಪರಿಪೂರ್ಣದಿಂದ ಪಾರಾಗಿ ಉಳಿದಿರುವುದಾದರೂ ಎಲ್ಲಿ?

'ಪೂಜೆಯೊಂದು, ನಾಮ ಹಲವು; ಭಕ್ತಿಯೊಂದು, ನಾಮ ಹಲವು; ಅರ್ಪಣವೊಂದು, ನಾಮ ಹಲವು; ಪ್ರಸಾದ ಆನಂದ ಒಂದು, ಸವಿ ವಿಷ ಸುಖ ದುಃಖ ಹಲವು; ನಿತ್ಯ ಪರಿಪೂರ್ಣ ಒಂದು, ಕಾಲ ದೇಶ ಹಲವು.'[೧]–ಹೀಗಿದೆ ವಿಶ್ವವ್ಯವಹಾರದ ನಿಜ ಸ್ಥಿತಿ ಎಂದು ಹೇಳಿದರೆ ನೀವು ಒಪ್ಪಲಿಕ್ಕಿಲ್ಲ. ಆದರೆ ಒಪ್ಪಬೇಕಾಗುತ್ತದೆ, ನೀವು ಒಪ್ಪುತ್ತೀರಿ ಎಂದು ನನ್ನ ಅಂತರಂಗ ಸೂಚನೆದೋರುತ್ತಿದೆ.

ಸಮುದ್ರದ ಮೇಲೆ ಆಡುವ ಒಂದೊಂದು ತರಂಗ ಒಂದೊಂದು ಗತಿ, ಒಂದೊಂದು ರೂಪ, ಒಂದೊಂದು ಲೀಲಾವಿಲಾಸವನ್ನು ಮಾಡುತ್ತಿವೆ. ಈ ವಿಲಾಸವೇ ಅವಕ್ಕೆ ಸಹಜವಿನೋದವೆನಿಸಿರಬಹುದು. ಆದರೆ ಮೇಲೆ ಆಡಿ, ಒಳಗೆ ಮುಳುಗಿ ಒಳ ಹೊರಗೆ ಸಮುದ್ರವೆ ತಾನಾಗಿರುವ, ಮೇಲೆ ಮೈದೋರಿ ವಿನೋದಿಸುತ್ತಿರುವ ತರಂಗ-ಕೋಟಿಯೆಲ್ಲ ತಾನೆಂಬ ಅರಿವಿನಲ್ಲಿರುವ, ಒಂದು ತರಂಗಸಮುದ್ರದ—ಸಮುದ್ರದೊಡನೆ ಸಮರಸವಾಗಿ ಐಕ್ಯವಾಗಿ ನಿಂದಿರುವ ಸಮುದ್ರತರಂಗದ—ಲೀಲೆ ಸಮುದ್ರ ಲೀಲೆಯೆ. ಈ ಲೀಲೆಯ ಸಮುದ್ರವಿಸ್ತಾರವೈಭವ ಅನಂತ ತರಂಗಲೀಲೆಯನ್ನು ಗರ್ಭೀಕರಿಸಿಕೊಂಡು, ಒಂದೇ ಒಂದಾದ ಮಹಾಲೀಲೆಯನ್ನೆ ಸೂಚಿಸುತ್ತದೆ. ಹೀಗಿದೆ ಜಂಗಮಲಿಂಗದ ಮಹಾಪೂಜೆ. ಶರಣರು ವಿಶ್ವಾತೀತ ವಿಸ್ತಾರವಾದ ದಿವ್ಯ ಜೀವನಕ್ಕೆ, ಇಂಥ ಮಹಾಭವ್ಯಜೀವನದ ಕಟ್ಟಡಕ್ಕೆ ಹಾಕಿರುವ ಮೂಲಪೀಠಿಕೆಯನ್ನು ಪರೀಕ್ಷಿಸಿ ನೋಡಿದರೆ, ಜಗದ್ಭರಿತವಾದ ಜಂಗಮಲಿಂಗದ ಅಖಂಡ ಪೂಜಾಮೂರ್ತಿ ಆ ಪೀಠಿಕೆಯ ಮೇಲೆ ಸ್ವಯಂಭುವಾಗಿ ಮೂಡಿ, ವಿಶ್ವಾಕಾರಗೊಂಡು ಪ್ರಜ್ವಲಿಸಿ ನಿಂದು, ತನ್ನ ವಿಶ್ವತೋಹಸ್ತದಿಂದ ತನ್ನ ನಿಜದಿರವಾದ ಪರಂಜ್ಯೋತಿಯನ್ನೆ ಪೂಜಿಸುತ್ತ, ವಿಶ್ವತಃಪಾದದಿಂದ ಅದೇ ಸ್ವಯಂಜ್ಯೋತಿಗೆ ಪ್ರದಕ್ಷಿಣ ಹಾಕುತ್ತ, ವಿಶ್ವತೋಮುಖದಿಂದ ತನ್ನ ಮಹಾಮಂಗಲ ಸೌಂದರ್ಯವನ್ನೆ ಹಾಡಿ ಹರಸುತ್ತ, ವಿಶ್ವತಶ್ಚಕ್ಷುವಿನಿಂದ ತನ್ನ ನಿಜದ ನಿರಾಳವನ್ನೆ ನೋಡುತ್ತ, ವಿಶ್ವತಶ್ಶ್ರವಣದಿಂದ ವಿಶ್ವಧ್ವನಿಯ ವಿಶ್ವಗಾನವನ್ನು ತನಗೆ ತಾ ಕೇಳಿಸುತ್ತ, ವಿಶ್ವತೋನಾಸಿಕದಿಂದ ಪರಿಮಳದ ವಿಶ್ವವಿಲಾಸವನ್ನು

---

೧. ಇಲ್ಲಿ ಪ್ರಭುದೇವರ ಮಾತನ್ನು ಕೇಳಿ:

ಒಂದೇ ಪುಷ್ಪ, ಒಂದೇ ಅಗ್ಘವಣಿ, ಒಂದೇ ಓಗರ, ಒಂದೇ ಪ್ರಸಾದ.
ಒಂದೇ ಮನ, ಒಂದೇ ಲಿಂಗ.
ನಂದಾದೀವಿಗೆ ಕುಂದದ ಬೆಳಗು ಸ್ವತಂತ್ರಪೂಜೆಯೊಂದೆ.
ಅನಾಹತವೆರಡಾಗಿ, ಬಹುಮುಖವಾಗಿ ಕೆಟ್ಟು ಹೋದರು ಗುಹೇಶ್ವರಾ!

ಪ್ರ. ವ. ಪು. ೨೦೪, ವ. ೧೧೦.

ತನಗೆ ತಾನು ಎಡೆಮಾಡಿಕೊಳ್ಳುತ್ತ, ವಿಶ್ವತೋಮುಖವಾದ ವಿಶ್ವಭಾವದ 'ಆತ್ಮರತಿ'ಯ ವಿಶ್ವಮಕರಂದಭಕ್ತಿಯನ್ನು ತನಗೆ ತಾನು ನೈವೇದ್ಯ ಮಾಡಿಕೊಳ್ಳುತ್ತ, ವಿಶ್ವತೋ ಮುಖವಾಗಿ ವಿಚಾರ ನಡೆಸಿರುವ ವಿಶ್ವಬುದ್ಧಿಯ 'ಆತ್ಮವಿಜ್ಞಾನ'ದ ಸುವಿವೇಕ ವಿಲಾಸ ರಸವನ್ನು ತನಗೆ ತಾನು ಕುಡಿಸುತ್ತ, ವಿಶ್ವತೋಮುಖವಾಗಿ ತನ್ನಲ್ಲಿ ಮೂಡುವ ಇರವಿನ ತೆರೆಗಳಲ್ಲಿ—ತೆರೆತೆರೆಯ ಸಂಕೋಚವಿಲಾಸ, ತನ್ನ ತಾ ಮರೆತು ಒಂದೆ ತೆರೆಯಾಗಿ ಆಡುವ ಅಜ್ಞಾನ ಮಾಯೆ ಅಹಂಭಾವದ ಅಲ್ಪವಿಲಾಸಗಳನ್ನು ಲಿಪ್ತಿಸಿಕೊಂಡು ಅಲ್ಲಿಯೆ ಮುಳುಗಿ ಅಲ್ಲಿಯೆ ಮೂಡಿ ಆಡುವ ತೆರೆತೆರೆಯ ಇರವಿನ ಸೀಮೆ ಸಂಬಂಧ ಗಳನ್ನೆಲ್ಲ ಕಿತ್ತೊಗೆದು, 'ತೆರೆಯೆಲ್ಲ ನೀರು' ಎಂಬ ಸರ್ವಾತ್ಮಭಾವದಿಂದ, ವಿಶ್ವಭೂತ ಭಾವಿಯಾಗಿ, ವಿಶ್ವಭಾವವರ್ತಿಯಾಗಿ ವಿಶ್ವಬ್ರಹ್ಮದ ಇರವಿನ ವಿಶ್ವಾನಂದವನ್ನು ತನ್ನಲ್ಲಿ ತಾನು ಅನುಭವಿಸುತ್ತಿರುವ ಇರವು—ಇದೇ ಪೂಜೆ ಇದೇ ಲೀಲೆ ಇದೇ ಲಿಂಗ-ಜಂಗಮ ವಿನೋದ ಎಂದು ಹೇಳಿದರೆ, ವಿಶ್ವಪ್ರಪಂಚದಲ್ಲಿ ಜಂಗಮ ನಡೆಸಿರುವ ಅಖಂಡಪೂಜೆ. ಅವಿರಳಪೂಜೆ, ಸಹಜಪೂಜೆ, ನಿಜಪೂಜೆ, ಅದ್ವೈತಪೂಜೆ, ಐಕ್ಯಪೂಜೆ ಮಸು ಮಸುಕಾದರೂ ಆಗಲಿ, ನಮ್ಮ ಸದುಹೃದಯದ ಕಣ್ಣಮುಂದೆ ಆಕಾರಗೊಳ್ಳಬಹುದೆಂದು ನಾನು ಭಾವಿಸುತ್ತೇನೆ. ಈ ಮೈಲುದ್ದ ಮಾತು ಕೇಳಿ ಕಿವಿಯನ್ನೆಂದೂ ತೆರೆಯಲೆ ಬಾರದೆಂಬ ವಿಚಾರದಲ್ಲಿದ್ದೀರಿ ನೀವು. ದಯವಿಟ್ಟು ಹಾಗೆ ಮಾತ್ರ ಮಾಡಬೇಡಿ.

ಜಡಭೂತಭಾವ ಜಡಚೈತನ್ಯಭಾವ ಪ್ರಾಣಚೈತನ್ಯಭಾವ ಬುದ್ಧಿಚೈತನ್ಯ ಆತ್ಮಚೈತನ್ಯಭಾವದಲ್ಲಿ ವಾಸಮಾಡಿಕೊಂಡು ಇರುವ ವಿಶ್ವಪ್ರಪಂಚದ ತರಂಗಗಳು ತಮ್ಮ ಮೂಲಾಧಾರವನ್ನು, ಮೂಲವಸ್ತು ಸಮುದ್ರವನ್ನು ಮರೆದು ತಂತಮ್ಮ ಇರವಿನ ಅರಿವಿನ ಆನಂದದ ಸ್ವಸ್ಥಾನದಲ್ಲಿ ಜೀವನಲೀಲೆಯನ್ನು, ಜಡಚೈತನ್ಯ ವಿಭ್ರಮ ವಿಲಾಸವನ್ನು, ವಿಗಡಪೂಜೆಯನ್ನು ನಡೆಸಬಹುದು. ತನಗೆ ತಾನೇ ಪರಬ್ರಹ್ಮ, ತನಗೆ ತಾ ಮಾಡುತ್ತಿರುವುದೆ ನಿತ್ಯಪೂಜೆಯೆಂದು ತರಂಗಭಾವ ಭ್ರಮಿಸುತ್ತಿರಬಹುದು. ತನ್ನ ಅರಿವಿನ ಹಂತದಲ್ಲಿ ತನ್ನನ್ನು ತಾ ನೋಡಿ, ಕಂಡಷ್ಟು ತನ್ನಿರವೆಂದು ಬಗೆದು, ತನ್ನ ಚೈತನ್ಯಶಕ್ತಿಗೆ ಸಾಧ್ಯವಿದ್ದಷ್ಟು ದುಡಿದು. ಪ್ರಪಂಚವನ್ನು ಗಳಿಸಿ, ತನ್ನಿರವಿಗೆ ತಾನರ್ಪಿಸಿ ಸುಖದುಃಖವಾಗಿ ಇರಬಹುದು,—ತನ್ನ ಸುಸೂಕ್ಷ್ಮ ಸರ್ವಾಂಗವನ್ನರಿಯದ, ತನ್ನ ಸರ್ವಾಂಗವನ್ನು ಇರಲೊಲ್ಲದ, ಕತ್ತಲೆಯಲ್ಲಿ ಬದ್ಧವಾದ ಭಾವ ಭಾವ ತರಂಗ. ಆದರೆ ಚಿದ್‌ಬೆಳಗು ಚಿಚ್ಚೈತನ್ಯವೆ ತನ್ನ ಸ್ವಭಾವಶಕ್ತಿಯಾಗಿರುವ ಜಂಗಮಲಿಂಗಸಮುದ್ರ ತನ್ನಲ್ಲಿ ಮೂಡಿ ತನ್ನ ಮೇಲೆ ಆಡಿ ತನ್ನಲ್ಲಿ ಮಲಗಿ ಏಳುತ್ತಿರುವ ತನ್ನ ಕೂಸುತೆರೆ ಗಳನ್ನು ಮರೆದು ಇರುವುದೆಂತು? ಮರೆದು ಊಟ ಉಪಚಾರ ನಡೆಸುವುದೆಂತು? ಸಮುದ್ರ ತರಂಗಗಳನ್ನೆಲ್ಲ ಜೀವಿಸುತ್ತಿರುವುದು ತರಂಗಗಳಿಗೆ ತಿಳಿಯಬಾರದಾದರೂ ಸಮುದ್ರಕ್ಕೆ ಗೊತ್ತು ತನ್ನ ಸಮುದ್ರಜೀವನ, ಸಮುದ್ರಲೀಲೆ, ಸಮುದ್ರಪೂಜೆ, ಸಮುದ್ರ ಅರ್ಪಣ ಸಮುದ್ರ ಆನಂದ. ಜಂಗಮದ ಪೂಜೆ ಈ ತರಂಗಾಂತರಂಗದ ಸಮುದ್ರಪೂಜೆ. ತನ್ನ ಚಿಜ್ಜ್ಯೋತಿಪ್ರಕಾಶದಲ್ಲಿ ವಿಶ್ವಜೀವಜಾಲವೆಲ್ಲ ತಾನೆ ಎಂದು ನೋಡಿ, ಎಲ್ಲ ತನ್ನನ್ನು ಪೂಜಿಸುತ್ತಿರುವ ಜಗದ್‌ಭರಿತ ಜಂಗಮಕ್ಕೆ ಹೊರ

ತಾದ ಪೂಜೆಯೊಂದಿಲ್ಲ, ಬೇರೊಂದು ವ್ಯವಹಾರವಿಲ್ಲ. ವಿಶ್ವವ್ಯವಹಾರ ತನ್ನ ತಾನರ್ಚಿಸಿ ಪೂಜಿಸಿಕೊಳ್ಳುವ ಜಂಗಮಲಿಂಗದ ಲಿಂಗಪೂಜೆ. ಅನಂತ ವಿಶ್ವತರಂಗ, ತನ್ನ ಸರ್ವಾಂಗದಲ್ಲಿ ಮಯವಾಗಿ ಅಂತರ್ಗತವಾಗಿ ಭರಿತವಾಗಿ. ತನ್ನ ಹೃದಯ ಬ್ರಹ್ಮ ವಾರಾಶಿಯಾಗಿ ಸುಜ್ಞಾನಚೈತನ್ಯವಾದ ಜಂಗಮಲಿಂಗ ನಡೆಸಿರುವ ನಿತ್ಯ ನಿರಂತರಪೂಜೆ ಅಖಂಡ ಪರಿಪೂರ್ಣಪೂಜೆ, ಅವಿರಳ ಅದ್ವೈತ ನಿಜೈಕ್ಯ ಪೂಜೆ, ಸಹಜ ಸಮರಸಾನಂದ ಪೂಜೆ. ಸುಜ್ಞಾನಜ್ಯೋತಿಯಲ್ಲಿ ಕರ್ಪುರದಂತೆ ಕರಗಿ ಬೆಳಗಾಗಿ ಹೊಳೆವ ಲಿಂಗೈಕ್ಯ ಭಕ್ತಿಪೂಜೆಗೆ ತಾನು ಮರೆಯಾಗಿ, ಹೊರಗಾಗಿ ತನ್ನ ವ್ಯವಹಾರಪೂಜೆಯಲ್ಲಿ, ಪ್ರಾಕೃತಪೂಜೆಯಲ್ಲಿ, ದ್ವೈತ ಜಡ ಮೋಹ ಅಜ್ಞಾನ ಮಾಯಾಪೂಜೆಯಲ್ಲಿ ಮಗ್ನ ವಾಗಿ ಇರಬಹುದು. ನಿಜಪೂಜೆಯನ್ನೆ ಹದಗೆಡಿಸಿ ಲಿಂಗಾರ್ಥವನ್ನೆ ತನ್ನ, ಸಂಸಾರಾರ್ಥಕ್ಕೆ ಬಳಸಿಕೊಂಡು ಲಿಂಗದಿಂದ ಸಿಡಿದು ಬಾಳುತ್ತಿರಬಹುದು, ಒಂದು ಅಲ್ಪ ಜೀವನದ, ಒಂದು ಸಣ್ಣ ಚೈತನ್ಯದ, ಒಂದು ಕಣ ಬುದ್ಧಿಯ ಒಂದು ಲಿಂಗಭ್ರಷ್ಟಭಾವದ ಒಂದು ಜಡದ ವ್ಯವಹಾರಲೀಲೆಯಲ್ಲಿ. ಈ ಲೀಲೆ, ಈ ವ್ಯವಹಾರ, ಈ ಸಂಸಾರ, ಈ ನಿಸರ್ಗಚಕ್ರ ನಡೆಯಲಿ, ತಿರುಗಲಿ. ತೂಗುವವರೆಗೆ ತೂಗಲಿ ಈ ಅಜ್ಞಾನದ ತೊಟ್ಟಿಲು. ತೊಟ್ಟಿಲ ಕೂಸಿಗೆ ತೂಗಿಸಿಕೊಳ್ಳುವುದೆ ಬೇಕಾದಂತಿದೆ. ತೂಗಿ ತೂಗಿ ತನ್ನ ಮೆಟ್ಟಿಗೆ ನಿಲ್ಲುವ ತೊಟ್ಟಿಲಂತೆ ವಿಶ್ವವ್ಯವಹಾರ ವಿಲಾಸ ನಡೆಯಲೆ ಬೇಕು. ಈ ವಿಲಾಸವನ್ನೆ ಒಂದು ಕೈಯಿಂದ ನಡೆಸುವ ಶಕ್ತಿ ಮತ್ತೊಂದು ಕೈಯಿಂದ, ಭಕ್ತಿಯ ಶಕ್ತಿ ಯಿಂದ ಆ ವಿಲಾಸವನ್ನು ಮೆಟ್ಟಿಗೆ ಕೂಡಿಸಿ ಆಡಿಸುವ ಹವಣಿಕೆಯಲ್ಲಿದೆ. ಈ ಎರಡನೆಯ ಭಕ್ತಿಶಕ್ತಿಯೆ ಜಂಗಮಲಿಂಗದ ಪರಿಪೂರ್ಣಪೂಜೆ. ಈ ಪೂಜೆ ವಿಶ್ವ ಹೃದಯದಲ್ಲಿ ಅನಾದಿ ಅನಂತವಾಗಿ ನಡೆದಿದೆ, ನಡೆದಿದೆ. ಈ ಲಿಂಗಪೂಜೆಯೆ ನಿಖಿಲ ಪ್ರಪಂಚದ ಬ್ರಹ್ಮೋದ್ದೇಶ. ಈ ಪರಮೋದ್ದೇಶವೆ, ಶರಣರು ಹೇಳುವಂತೆ ನಿಷ್ಕಲ ಲಿಂಗದ ಬಯಲು ಮೊಳಗಿ ಬ್ರಹ್ಮಾಂಡದ ಮಳೆ ಸೃಜಿಸಿದೆ. ಮಳೆಗೆ ಗೊತ್ತಿರಲಿಕ್ಕಿಲ್ಲ ತಾನು ನಿಷ್ಕಲಲಿಂಗದ ಬಯಲಿನಲ್ಲಿ ಹುಟ್ಟಿ ಗಟ್ಟಿಗೊಂಡು ವಿಶ್ವಪ್ರಪಂಚವೆಂಬ ಸಂಸಾರ ವೃಷ್ಟಿಯಾಗಿ ಸುರಿಯುತ್ತಿರುವೆನೆಂದು, ತನ್ನ ಹೃದಯವೆ ಮಹಾಘನಲಿಂಗದ ಸ್ವಯಂ ಪೂಜಾವೃಷ್ಟಿಯೆಂದು. ಹೀಗೆ ತನ್ನ ತಾನರಿಯದ ಪೂಜೆಯೆ ಪ್ರಪಂಚದ ಕರ್ಮ ವೃಷ್ಟಿ. ಈ ಪ್ರಪಂಚವೃಷ್ಟಿಯ ಹೃದಯದಲ್ಲಿಯೆ ದಿವ್ಯಪೂಜೆಯನ್ನು ಮಳೆಗರೆಯು ತ್ತಿರುವುದೆ ಜಂಗಮಲಿಂಗ. 'ಚಿಂತಿತಾರ್ಥವನಖಿಳಭಕ್ತರ ತಿಂತಿಣಿಗೆ ಕೊಡುತಲ್ಲಮ ಪ್ರಭು ಸಂತಸದಲಿರುತಿರ್ದನೆಲ್ಲರ ಹೃದಯಕಮಲದಲಿ.'[1] ಇಲ್ಲಿ ನಿಮಗೆ ಭಗವದ್ಗೀತೆಯ 'ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ'—ಎಂಬ ಮಾತು ನೆನಪಿಗೆ ಬರ ಬಹುದು. ಎಲ್ಲ ಭೂತಪ್ರಪಂಚದ ಮರೆಯ ಹೃದ್ದೇಶದಲ್ಲಿ ಒಳಹೊರಗೆ ಮೇಲೆ ಕೆಳಗೆನ್ನದೆ ಸಂಭ್ರಮಿಸಿ ತುಂಬಿರುವ ಗುಹೇಶ್ವರಲಿಂಗವೇ ಜಂಗಮಸ್ಥಲದಲ್ಲಿ ನಿಂದ ಜಂಗಮಲಿಂಗ. ಭೂತಪ್ರಪಂಚದ ವಿಶ್ವವ್ಯವಹಾರದ ಮರೆಯ ಹೃದಯದಲ್ಲಿ ಈ

೧. ಪ್ರ. ಲಿಂ. ಲೀ. ಗ. ೨೫. ವ. ೨೦ (ಉತ್ತರಾರ್ಧ).

ಜಂಗಮಲಿಂಗದ ಚಿತ್‌ಪರಿಪೂರ್ಣ ಸಮುದ್ರಪೂಜೆ ಅವಿರತವಾಗಿ ಅವಿರಳವಾಗಿ ಅಖಂಡ ವಾಗಿ ನಡೆದಿದೆ. ಈ ಪೂಜೆಯೆ ಅಜ್ಞಾನಶಕ್ತಿಯ ಪ್ರಪಂಚಕ್ಷೇತ್ರದಲ್ಲಿ ಸುಜ್ಞಾನ ಸದ್ಭಕ್ತಿಯನ್ನು ಬಿತ್ತಿ, ದಿವ್ಯಪ್ರಸಾದವನ್ನು ಮಳೆಗರೆದು, ಶಕ್ತಿಯ ಪ್ರಪಂಚವನ್ನು ಭಕ್ತಿಯ ಬೆಳಸಿನಿಂದ ಬೆಳಗಿ, ಮಣ್ಣುಗೂಡಿ ಮಣ್ಣಾದ ಅರಿವು ಇರವನ್ನು ದಿವ್ಯಕ್ಕೆತ್ತಿ ದಿವ್ಯವಾಗಿಸಿ ದಿವ್ಯದಲ್ಲಿರಿಸುವ ದಿವ್ಯಕಲ್ಯಾಣಪೂಜೆ. ಮಹಾತ್ಮರ, ಮಹನೀಯರ ಪೂಜೆ ಧ್ಯಾನ ಯೋಗ ತಪಸ್ಸು ಲೋಕಕ್ಕೆ ಕಲ್ಯಾಣಕಾರಿ ಎಂದು ನಮ್ಮ ನಂಬಿಗೆ. ಈ ನಂಬಿಗೆಯಲ್ಲಿ ಮಾನವಹೃದಯಕ್ಕೆ ಅರ್ಥವಿದೆ. ನನ್ನ ನಿಮ್ಮ ಭಕ್ತಿ ಪೂಜೆಯೆ ಇರಲಿ, ದೊಡ್ಡವರ ಧ್ಯಾನ ಸಮಾಧಿಯೆ ಇರಲಿ, ಈ ಪೂಜಾಭಾವ ಮಾನವಹೃದಯ ದಲ್ಲಿ ಹುಟ್ಟಿತೇಕೆ? ಸಕಾಮವಾಗಿ ನಿಷ್ಕಾಮವಾಗಿ ಬೆಳೆದು, ಅದ್ವೈತವಾಗಿ ಸಹಜವಾಗಿ ಮುಗಿಲು ಮುಟ್ಟಿ, ತಾನೆ ಪರಿಪೂರ್ಣ ಲಿಂಗಜಂಗಮವಾಗಿ, ವಿಶ್ವಪ್ರಪಂಚದ ಹೃದಯ ದಲ್ಲಿ ಚರಲಿಂಗವಾಗಿ, ವಿಶ್ವಪ್ರಪಂಚವನ್ನೆ ಸ್ವಯಂಲಿಂಗಕ್ಕೆ ಪೂಜಿಸಿ ಅರ್ಪಿಸಿ ವಿಶ್ವ ಪ್ರಸಾದವನ್ನು ಸ್ವೀಕರಿಸಿ, ಇದ್ದ ಇರವೆ ಪೂಜೆಯಾಗಿರುವ ಜಂಗಮಲಿಂಗದವರೆಗೆ 'ಅತ್ಯ ತಿಷ್ಠದ್ದಶಾಂಗುಲ'ವಾಗಿ ಹಬ್ಬಿದೆ ಏಕೆ ಈ ಪೂಜಾಭಾವ, ಭಕ್ತಿಭಾವ, ಅರ್ಪಣಭಾವ?

ಸ್ವಯಂಪೂಜೆಯೆ ವಿಶ್ವಸೃಷ್ಟಿಯ ಮೂಲೋದ್ದೇಶವಾಗಿದ್ದರೆ ಅಣು ರೇಣು ತೃಣ ಕಾಷ್ಠದಲ್ಲಿ, ಮರ ಬಳ್ಳಿ ಇರುವೆ ಆನೆಯಲ್ಲಿ, ದೇವ ದಾನವ ಮಾನವರಲ್ಲಿ ಈ ಅಂತಃಪೂಜೆಯ ಪ್ರವೃತ್ತಿ ಮೇಲೆ ತೇಲುವ ಹಲವು ಪ್ರವೃತ್ತಿಗಳ ಹೃದಯದಲ್ಲಿ ಹುದುಗಿರಲೆ ಬೇಕು. ವಿಶ್ವರೂಪ 'ಏಕಮೇವಾದ್ವಿತೀಯ'ದ ಅನಂತ ಆವಿರ್ಭಾವವಾಗಿದ್ದರೆ, ವಿಶ್ವಚೈತನ್ಯ ಕ್ರಿಯೆ, ಅದೇ 'ಏಕಮೇವಾದ್ವೈತ'ದ 'ಏಕಮೇವಾದ್ವಿತೀಯ'ವಾದ ಸ್ವಯಂಜ್ಞಾನ ಪೂಜಾಕ್ರಿಯೆ. ಈ ಕ್ರಿಯೆಯನ್ನು ಅರಳಿಸುತ್ತ ನಡೆದಿದೆ, ದಿವ್ಯೋನ್ಮುಖವಾದ ವಿಶ್ವ ಹೃದಯದಂತಿರುವ ಮಾನವನ ಹೃದಯಾಂತರಂಗ. ಇಂಥ ಅಂತರಂಗವೆ ಎಂದು ಹೇಳ ಬಹುದಾದ ಶಂಕರಾಚಾರ್ಯರ ಹೃದಯ 'ಯದ್‌ಯತ್ ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ'—ಎಂದು ಹಾಡಿದರೆ ವಿಶ್ವಪ್ರಪಂಚದ ಗತಿ ಮತಿ ಚೈತನ್ಯ ಕರ್ಮ ವೆಲ್ಲ 'ಗುಹೇಶ್ವರಲಿಂಗ'ದ ಲಿಂಗಪೂಜೆ ಎಂದು ಹಾಡುತ್ತಿದೆ,—ಎಲ್ಲೆಲ್ಲಿ ಪೂಜೆಯನ್ನೆ ಕಂಡು ಎಲ್ಲ ತಾನಾಗಿ ಪೂಜೆಯನ್ನು ಪೂಜಿಸಿದ ಜಗದ್‌ಭರಿತಲಿಂಗ ಜಂಗಮಲಿಂಗ, ಶರಣ ಲಿಂಗ. ಇಂಥ ದಿವ್ಯಾನುಭಾವವನ್ನು ನೀವು ಒಪ್ಪಬೇಕು, ಅವರು ಇವರು ಒಪ್ಪಬೇಕು, ಎಲ್ಲರೂ ಒಪ್ಪಬೇಕು; ಒಪ್ಪದಿದ್ದರೆ ಈ ಸ್ವಯಂಭಾವಾನುಭೂತಿಯ ಗತಿಯೇನು ಎಂಬ ಸಂಕಲ್ಪ ವಿಕಲ್ಪದ ಹಂಗು ಇಟ್ಟುಕೊಂಡಿಲ್ಲ ಶರಣರು.

ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿರೋ.
ಎಲ್ಲರೂ ಅಲ್ಲವೆಂಬುದು ಪ್ರಮಾಣವಲ್ಲ ಕಾಣಿರೋ.
ಅದೇನು ಕಾರಣವೆಂದರೆ, ಶಿವಶರಣರ ಹೃದಯದ ಅಂತಸ್ಥವನರಿಯರಾಗಿ.
ಎನ್ನ ಅಹುದೆಂಬುದನೂ ಎನ್ನ ಅಲ್ಲ ಎಂಬುದನೂ
ಎನ್ನ ಮನೋಮೂರ್ತಿ ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೆ, ನೀನೆ ಬಲ್ಲೆ.[೧]

೧. ಸಿ. ವ. ಪು. ೧೧೪, ವ. ೩೪.

ಹೃದಯದ ಅಂತಸ್+ಸ್ಥ ಹೃದಯಕ್ಕೆ ಗೊತ್ತು; ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ ಬಲ್ಲ. ಹೃದಯಕ್ಕೆ ಹೃದಯವೆ ಪ್ರಮಾಣವಲ್ಲದೆ ಬೇರೆ ಪ್ರಮಾಣವೆಲ್ಲಿದೆ?

ಪ್ರಭುದೇವರು ಜಂಗಮಸ್ಥಲದಲ್ಲಿ ನಿಂದು, 'ಗಗನಸ್ಥಾನವೆ ಕಂಥೆ, ಆಕಾಶವೆ ಕೊಪ್ಪರ'ವಾಗಿ ನಿಂದು ನಡೆಸಿರುವ 'ಮಹಾಘನ ಪ್ರಾಣಲಿಂಗಪೂಜೆ'ಯನ್ನು ನೋಡುವ ಇಚ್ಛೆ ನಿಮಗಿದ್ದರೆ ಸಿದ್ಧವೀರದೇವರು 'ಪ್ರಭುದೇವರ ಜಂಗಮಸ್ಥಲದ ನಿಲುಕಡೆ'ಯನ್ನು ನಿರ್ದೇಶಿಸಲೆಂದು ಕೊಟ್ಟಿರುವ ಪ್ರಭುದೇವರ ವಚನವನ್ನೇ[೧] ಮತ್ತೊಮ್ಮೆ ಪ್ರವೇಶಮಾಡಿ ನೋಡಬೇಕು. ಇದೋ ಇಲ್ಲಿ ಬನ್ನಿ, ಪ್ರಭುದೇವರ ಆಶ್ರಮವಿದೆ. ಕಲ್ಲು ಕಂಭ ಹುಲ್ಲು ಹೊದರಿನ ಮಠ, ಗುಡಿಲು ಅಲ್ಲ. ಈ ಆಶ್ರಮ ಯಾವ ಚಿಂತೆಯ ಸುಳಿವು ಇಲ್ಲದ, ನೆಳಲಿಲ್ಲದ, ನಿರಾಳವಾದ ನಿಶ್ಚಿಂತವೇ ಈ ಜಂಗಮದ ಪೂಜಾಮಂದಿರ.[೨] ಈ ಜಂಗಮ ಮಂಡಿಸಿದೆ, ಯಾವ ಸಂಭ್ರಮ ವಿಭ್ರಮದ ಚಲನೆಯಿಲ್ಲದ ನಿರಾಕುಲ ಪೀಠದಮೇಲೆ. ವಿಶ್ವಾಂತರ್ಗತವಾಗಿ, ವಿಶ್ವಪ್ರಪಂಚದ ಹೃದಯ ಪ್ರಾಣವಾಗಿ, ವಿಶ್ವಗುಹೇಶ್ವರಲಿಂಗವಾಗಿ ಇರುವ ಮಹಾಘನ ಪ್ರಾಣಲಿಂಗದ ಪೂಜೆಗೆಂದು ಪ್ರಭುದೇವರು 'ಗಗನ ಗಂಭೀರದ ಬಾವಿ'[೩]ಯ

---

೧. ಶೂ. ಸಂ. ಪು. ೨೧, ವ. ೭೫

೨. ಪ್ರಭುದೇವರ 'ನಿಶ್ಚಿಂತ'ವೆಂಬ ಪೂಜಾಶ್ರಮದ ಮತ್ತೊಂದು ಮಾಟವನ್ನು ನೋಡಿ:
ಉಂಡರೇನೋ ಉಣದಿರ್ದರೇನೋ? ಸೋಂಕಿತವೇನೋ ಅಸೋಂಕಿತವೇನೋ?
ಹುಟ್ಟುವದಿಲ್ಲಾಗಿ ಹೊಂದುವದಿಲ್ಲ. ಸತ್ತು ಬದುಕಿ ನಿಶ್ಚಿಂತವಾಯಿತ್ತು ಗುಹೇಶ್ವರ !
ಪ್ರ. ವ. ಪು. ೨೭೪, ವ. ೨೬೫.

ಶರಣ ಉಂಡರೆ ಉಣದಿದ್ದರೆ, ವಿಷಯವನ್ನು ಮುಟ್ಟಿದರೆ ಮುಟ್ಟದಿದ್ದರೆ ಏನೂ ಚಿಂತೆಯಿಲ್ಲ; ಯಾವ ತಪ್ಪೂ ಇಲ್ಲ, ಒಪ್ಪೂ ಇಲ್ಲ. ಜನನಕ್ಕೆ ಮರಣ ಬೆಂಬತ್ತಿದೆ. ಯಾವುದು ಹುಟ್ಟಿಲ್ಲ ಅದು ಸಾವುದೆಂತು? ಹುಟ್ಟಿದೆ ಹೊಂದುವೆನೆಂಬ ಚಿಂತೆ ಶರಣನಿಗೆ ಇಲ್ಲ. ಹುಟ್ಟು ಸಾವಿನ ಸೋಂಕಿಲ್ಲದ ಶರಣಲಿಂಗ ಮಾನವನಲ್ಲಿ ಒಡೆದು ಮೂಡಿದರೆ, ಹುಟ್ಟಿದ ಮಾನವ-ದೇಹ ಸತ್ತುಹೋದ; ಹುಟ್ಟದ ಸ್ವಯಂಭು ಶರಣಲಿಂಗ ಪ್ರಕಾಶವಾಗಿ ಬದುಕಿ, ನಿಶ್ಚಿಂತದ ಇರವಾಗಿ ಇದ್ದ ಗುಹೇಶ್ವರ ಅಂದರೆ ಶರಣಲಿಂಗ. ಇಲ್ಲಿ 'ಸತ್ತು ಬದುಕಿ . . .' ಅಂದರೆ ಸತ್, ಇರವು ಮರವೆಯ ಮರೆಯನ್ನು ಭೇದಿಸಿ ತಾನೆ ಬದುಕಿ 'ನಿಶ್ಚಿಂತನಿವಾಸಿ' ಯಾಯಿತು ಎಂದೂ ಅರ್ಥಮಾಡಿಕೊಳ್ಳಬಹುದು.

೩. ಇಲ್ಲಿ ಪ್ರಭುದೇವರ ಬೇರೆ ವಚನ ನೋಡಿರಿ:

1. 'ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣೆ . . . .'
ಟೀ. ಆತ್ಮಾಕಾಶವೆಂಬ ಬಿಂದಿಗೆಯೊಳಗೆ ಚಿದಾಕಾಶವೆಂಬ ನಿರ್ಮಲ ಪರಮಾಮೃತವ ತುಂಬಿದನು. ಆ ಅಗ್ಗವಣಿಯನು ಮಹಾಜ್ಞಾನಲಿಂಗಕ್ಕೆ ಮಜ್ಜನಕ್ಕೆರೆದು . . .
ಪ್ರ. ವ. ಪು. ೨೦೨, ವ. ೧೦೫ ಮತ್ತು ಟೀಕು.

2. 'ಗಗನದ ಮೇಲೊಂದು ಸರೋವರ . . .'
ಟೀ. ಬಾಹ್ಯಾಭ್ಯಂತರದೊಳಗೆ ಪರಿಪೂರ್ಣಲಿಂಗ ವೇಧಿಸಿಕೊಂಡಿದ್ದು ಸರ್ವಾಂಗವು ಪರಮಾಮೃತವಾಗಿಪ್ಪುದನರಿಯದೆ, ಗಗನವೆಂಬ ಬ್ರಹ್ಮರಂಧ್ರದೊಳಗಿಪ್ಪ ಅಮೃತವನು ರೇಚಕವೆಂಬ ಹಸ್ತದಲ್ಲಿ ಒಡಿದು ಪ್ರಾಣಲಿಂಗಕ್ಕೆ ಮಜ್ಜನಕ್ಕೆರೆದು . . .
ಪ್ರ. ವ. ಪು. ೨೦೫, ವ. ೧೧೨ ಮತ್ತು ಟೀಕು.

(i) ರಲ್ಲಿ 'ಗಗನ'ವೆಂದರೆ ಆತ್ಮಾಕಾಶವೆಂದು (ii) ರಲ್ಲಿ 'ಗಗನ'ವೆಂದರೆ ಬ್ರಹ್ಮರಂಧ್ರವೆಂದು ಅರ್ಥಯಿಸಿದ್ದಾರೆ ಮಹಾಲಿಂಗದೇವರು.

ಒಳಗಿಂದ ಅಗೋಚರವಾದ ಅಗ್ಗವಣಿಯನ್ನು ಜಗ್ಗಿತಂದು, ಮಂಗಳ ಬೆಳಗೆ ಆಗಿರುವ ಈ ಚಿದಾಕಾಶದ ಚಿದಮೃತದ ಚಿದ್‌ಬೆಳಗನ್ನೆ ಲಿಂಗಕ್ಕೆ ಮಜ್ಜನ ಮಾಡುತ್ತಿದ್ದಾರೆ ಜಂಗಮದೇವರು. ಈ ದೇವರು ಲಿಂಗದೇವರಿಗೆ ಶ್ರೀಗಂಧವನ್ನು ತೀಡಬೇಕು, ಅಕ್ಷತೆ ಯನ್ನು ಆರೋಪಿಸಬೇಕು. ಆದರೆ ಮರದ ಗಂಧ ಮಹಾಲಿಂಗಕ್ಕೆ ಲೆಪ್ಪವಾಗುವು ದೆಂತು? ನೆಲದ ಕಾಳು ಮಹಾಲಿಂಗದ ಮಸ್ತಕದಲ್ಲಿ ಹೇಗೆ ಇಡಬೇಕು? ವಿಶ್ವಹೃದಯ ವಾದ ಈ ಮಹಾಘನಕ್ಕೆ 'ಬಿಂದ್ವಾಕಾಶವನ್ನೆ' ತೀಡಬೇಕು, ಮಹದಾಕಾಶವನ್ನೆ ಅಕ್ಷತೆ ಇಡಬೇಕು. ಹೀಗೆಂದರೇನು ಎಂದು ಗಾಬರಿಯಾಗಬೇಡಿ. ಬಿಂದು ಮತ್ತು ಮಹತ್ ಆಕಾಶಗಳಲ್ಲವೇ ಈ ಗಾಬರಿಗೆ ಕಾರಣ? ಬಲ್ಲವರನ್ನು ಕೇಳೋಣ. ಈ ಆಕಾಶಗಳನ್ನು ನೋಡಿ ಬಲ್ಲ ಮಹಾತ್ಮರಿದ್ದಾರೆ. ಮಹಾಘನ ಪ್ರಾಣಲಿಂಗಕ್ಕೆ ಪ್ರಭುದೇವರು ತೀಡುವ ಬಿಂದ್ವಾಕಾಶದ ಗಂಧವನ್ನು ಶಿವಯೋಗಿ ಶಿವಾಚಾರ್ಯರು ತೋರಿಸುತ್ತಾರೆ, ಇದೋ ನೋಡಿ:

> ಯಥಾಕಾಶೋ ವಿಭುರ್ಜ್ಞೇಯಃ ಸರ್ವಪ್ರಾಣ್ಯುಪರಿ ಸ್ಥಿತಃ ।
> ತಥಾತ್ಮೇತ್ಯುಪಮಾನಾರ್ಥಂ ಬಿಂದ್ವಾಕಾಶಸ್ಥಳಂ ವಿದುಃ ॥೧

ಎಲ್ಲಾ ಪ್ರಾಣಿಗಳಲ್ಲಿ ಇರುವ ಅರಿವಿನ ಬಿಂದುವಿಗೆ ತಾನು ಅರಿವಿನ ಬಯಲು ಎಂಬ ಪರಿಪೂರ್ಣಪ್ರಜ್ಞೆ ಒಡಮೂಡಿ, ಆ ಚಿದಾಕಾಶವೆ ತಾನಾಗಿ ಇದ್ದುದೆ ಬಿಂದ್ವಾಕಾಶ. ಬಿಂದು ನಿಜವಾಗಿ ಪರಿಪೂರ್ಣ, ತರಂಗ ನಿಜವಾಗಿ ಸಮುದ್ರ, ಅಣು ಆಳದಲ್ಲಿ ಆಕಾಶ ಎಂಬ ಅರಿವಿನ ಬಿಂದ್ವಾಕಾಶದ ಗಂಧವನ್ನೆ ಪ್ರಭುದೇವರು ತಮ್ಮ ಪ್ರಾಣಲಿಂಗಕ್ಕೆ ಲೇಪನ ಮಾಡುತ್ತಿದ್ದಾರೆ. ಮತ್ತೆ ಅದೇ ಆಚಾರ್ಯರು ಮಹದಾಕಾಶದ ಅಕ್ಷತೆಗಳನ್ನು 'ಮಹಾಕಾಶಸ್ಥಲ'ದ ಶ್ಲೋಕಗಳಲ್ಲಿ ರೂಪಿಸಿಕೊಡುತ್ತಾರೆ ನೋಡಿ:

> ತರಂಗಾದಿ ಯಥಾ ಸಿಂಧೋಸ್ಸ್ವರೂಪಾನ್ನಾತಿರಿಚ್ಯತೇ ।
> ತಥಾ ಶಿವಾತ್ ಚಿದಾಕಾಶಾದ್ ವಿಶ್ವಮೇತನ್ನ ಭಿದ್ಯತೇ ॥
> ಯಥಾ ಪುಷ್ಪಪಲಾಶಾದಿ ವೃಕ್ಷರೂಪಾನ್ನ ಭಿದ್ಯತೇ ।
> ತಥಾ ಶಿವಾತ್ ಪರಾಕಾಶಾತ್ ಜಗತೋ ನಾಸ್ತಿ ಭಿನ್ನತಾ ॥
> ಯಥಾ ಜ್ಯೋತೀಂಷಿ ಭಾಸಂತೇ ಭೂತಾಕಾಶೇ ಪೃಥಕ್ ಪೃಥಕ್ ।
> ತಥಾ ಭಾಂತಿ ಪರಾಕಾಶೇ ಬ್ರಹ್ಮಾಂಡಾನಿ ವಿಶೇಷತಃ ॥
> ನಿರಸ್ತೋಪಾಧಿಸಂಬಂಧಂ ನಿರ್ಮಲಂ ಸಂವಿದಾತ್ಮಕಂ ।
> ಪರಾಕಾಶಂ ಜಗಚ್ಚಿತ್ರವಿಲಾಸಾಲಂಬಭಿತ್ತಿಕಂ೨ ॥

ಎಂಥ ಹರವು, ಎಂಥ ಅರಿವು, ಎಂಥ ಇರವು ಈ ಮಹಾಕಾಶ! ಈ ಮಹಾಚಿದಾಕಾಶದ ಗರ್ಭದಿಂದ ಮೂಡಿ ಅದೇ ಗರ್ಭದಲ್ಲಿ ಆಡುವ ತರಂಗಕೋಟಿಯೇ ವಿಶ್ವಭೂತ ಪ್ರಪಂಚ. ತರಂಗವಿಲಾಸವೆ ವಿಶ್ವ, ಈ ವಿಶ್ವವಿಲಾಸವನ್ನು ಗರ್ಭೀಕರಿಸಿಕೊಂಡಿರುವ

---

೧. ಸಿ. ಶಿ. ಪರಿ. ೧೯. ಬಿಂದ್ವಾಕಾಶಸ್ಥಲಂ ೮, ಶ್ಲೋ. ೧.
೨. „ „ ಮಹಾಕಾಶಸ್ಥಲಂ ೯, ಶ್ಲೋ. ೨೨-೨೫.

ಸಮುದ್ರವಿಲಾಸವೆ ಚಿದಾಕಾಶದ ಚಿದ್ವಿಲಾಸ. ತರಂಗದ ಬಿಂದು–ಬಿಂದು–ವಿಲಾಸಗಳೆಲ್ಲ ತಾನು, ತನ್ನೊಳಗೆ ತೋರಿ ಇರವು ಅರಿವಿನ ಅನಂತಲೀಲೆಯನ್ನು ಬೀರಿ, ಪರಮಾಕಾಶವಾದ ತನ್ನ ಅನಾದ್ಯನಂತ ವೈಭವವನ್ನು ತಂತಮ್ಮ ನಾಮ ರೂಪ ಕ್ರಿಯೆಯಲ್ಲಿ, ತಂತಮ್ಮ ಪಿಂಡ ದೇಹ ನಾಲಗೆ ಭಾಷೆ ಭಾವ ಕಂಠದಲ್ಲಿ ಹಾಡಿ, ತಂತಮ್ಮ ಕೈಕಾಲು ಕಣ್ಣುಹುಬ್ಬಿನಲ್ಲಿ ಕುಣಿದು, ತಂತಮ್ಮ ಆತ್ಮರತಿಯಿಂದ ಅರ್ಚಿಸಿ ಪೂಜಿಸಿ ಆ ಆಕಾಶ ವಾರಾಶಿಯಲ್ಲಿಯೆ ಲೀಯವಾಗಿ ಮತ್ತೊಂದು, ಬೇರೊಂದು ಬಿಂದು ಭೂತವಿಶ್ವಬ್ರಹ್ಮಾಂಡವಾಗಿ ಮತ್ತೆ ಮೂಡುತ್ತಿವೆ ತನ್ನ ಬಯಲಿನ ಹರವಿನೊಳಗೆ–ಎಂಬ ಬಿಂದುಬ್ರಹ್ಮಾಂಡದ ಅರಿವು ಚಿದಾಕಾಶಕ್ಕಿರುವುದು ಮಹಾಕಾಶಸ್ಥಲ. ತನ್ನಲ್ಲಿ ಮೂಡುವ ಎಲೆ ಹೂ ಹೀಚು ಕಾಯಿ ಶಾಖೆ ಉಪಶಾಖೆ ಹಣ್ಣು ರಸ ಬೀಜವೆಲ್ಲ ತಾನೆಂಬರಿವು ಮರಕ್ಕೆ ಇರುವುದು ಸಹಜ. ಮಹಾಚಿದಾಕಾಶವೆಂಬ ಮರ ಜಗತ್‌ಪ್ರಪಂಚವೆಂಬ ಎಲೆ ಕಾಯಿ ತನ್ನವೆಂದು ಧರಿಸಿರುವುದೆ ಮಹದಾಕಾಶಸ್ಥಲ. ನಮ್ಮ ಆಕಾಶದಲ್ಲಿ ಅನಂತ ನಕ್ಷತ್ರ ಬೆಳೆದಿರುವಂತೆ ಪರಮಾಕಾಶವೆನಿಸುವ ಚಿದಾಕಾಶದಲ್ಲಿ ನಮ್ಮ ಆಕಾಶ ನಮ್ಮ ಪ್ರಕಾಶಗಳೆಲ್ಲ, ನಮಗೆ ತೋರುವ, ತೋರದ ಬ್ರಹ್ಮಾಂಡಗಳೆಲ್ಲ ಹುಟ್ಟಿ ಬೆಳೆದು ನಿಂತಿವೆ. ಈ ಪರಮಾಕಾಶ ಈ ಅನಂತ ಬ್ರಹ್ಮಾಂಡಶಿಶುಗಳನ್ನೆತ್ತಿಕೊಂಡು ಲಾಲಿಸಿ ಪಾಲಿಸುತ್ತಿರುವುದೆ ಮಹದಾಕಾಶಸ್ಥಲ. ಜಗಚ್ಚಿತ್ರವಿಲಾಸ, ವಿಶ್ವಬ್ರಹ್ಮಾಂಡವೈಭವವಿಲಾಸ ಈ ಬಯಲು ಭಿತ್ತಿಯ ಮೇಲೆಯೆ ಚಿತ್ತಾರವಾಗಿದೆ. ಅರಿವಿನ ಬಯಲು ಜಗಚ್ಚಿತ್ರವನ್ನು ತನ್ನಲ್ಲಿ ತಾನು ಮೂಡಿಸಿಕೊಂಡು ತನ್ನ ತಾನು ಹೊತ್ತುಕೊಂಡು ಇದ್ದು, ತಾನು ಮರೆಯಾಗಿ ಜಗತ್ತಿಗೆ ಜಗತ್‌ಚಿತ್ರವನ್ನು ಹಿಡಿದಿರುವ ಬೆಡಗು ಬಿನ್ನಾಣದ ಚಿದಾಕಾಶಸ್ಥಲವೇ ಮಹಾಕಾಶವೆಂಬ ಅಕ್ಷತೆ,—ಪ್ರಭುದೇವರು ತಮ್ಮ ಮಹಾಘನ ಪ್ರಾಣಲಿಂಗಕ್ಕೆ ಧರಿಸುವ ಅಕ್ಷತೆ. ಇಂಥ ಅಕ್ಷತೆಯ ಪೂಜೆಯನ್ನು ಯಾವ ದೇವರ ಮನೆ ಯಾವ ದೇವರ ಗುಡಿ ಹಿಡಿಸಬಹುದು? ಇಂಥ ಲಿಂಗಪೂಜೆಯನ್ನು ಲಿಂಗವೆ ಪೂಜಿಸಬೇಕಲ್ಲದೆ ಅನ್ಯಭಿನ್ನಕ್ಕೆ ಅಸಾಧ್ಯವೇ.

ಮತ್ತೆ ಈ ದಿವ್ಯಪೂಜೆಯ ವಿಲಾಸವನ್ನು ನೋಡಿರಿ. ಪರಕ್ಕೆ ಪರವಾದ ಪರತತ್ತ್ವ, ಈ ತತ್ತ್ವದ ಗರ್ಭದಲ್ಲಿ ಮೂಡಿರುವ ಅಪರತತ್ತ್ವಪ್ರಪಂಚವೆ ಪತ್ರಿಪುಷ್ಪವಾಗಿ ಸಿಂಗರಿಸುತ್ತವೆ ಮಹಾಘನ ಪ್ರಾಣಲಿಂಗವನ್ನು. ಜೀವಾತ್ಮನಿಗೆ ಹತ್ತಿ ಮಲಿನಗೊಳಿಸಿರುವ ಅಣುಮಲ ಮಾಯಾಮಲ ಕರ್ಮಮಲವೆಲ್ಲ ತೊಳೆದು ಹೋದ ಆತ್ಮ ನೈರ್ಮಲ್ಯವೆ ಅಷ್ಟವಿಧಾರ್ಚನೆ. ವಿಶ್ವಚಿತ್ರಕ್ಕೆ ಭಿತ್ತಿಯಾಗಿರುವ ಚಿದಾಕಾಶದಲ್ಲಿ ವ್ಯಾಪಿಸಿರುವ ಚಿನ್ಮಹಾಪ್ರಕಾಶವೆ ಪ್ರಾಣಲಿಂಗಕ್ಕೆ ಅವಿರಳವಾಗಿ, ನಿರಂತರವಾಗಿ ಸಲ್ಲುತ್ತಿರುವ ಪ್ರಕಾಶ ಪೂಜೆ. ನಿರಂಜನಭಾವವೆ ಧೂಪಾರತಿ. ವಿಶ್ವಭುವನ ಬ್ರಹ್ಮಾಂಡಗಳೆ ಪ್ರಾಣಲಿಂಗಕ್ಕೆ ನೈವೇದ್ಯವಾಗುವ ಪದಾರ್ಥ. ಲಿಂಗಕ್ಕೆ ನೈವೇದ್ಯಮಾಡುವುದು ಆಚಾರ, ಅರ್ಪಿತವಾಗಿ ಪ್ರಾಣಲಿಂಗದೇವ ಕುಡಿವ ಶೀತಲಜಲವೇ ಮಹಾತತ್ತ್ವ. ತನಗಿದಿರಿಟ್ಟುತೋರುವ ವಿಶ್ವ, ನೋಡುವ ತಾನು, ಈ ತಾನು ಮತ್ತು ವಿಶ್ವವನ್ನು ಹಡೆದು ಹೊಟ್ಟೆಯಲ್ಲಿಟ್ಟುಕೊಂಡಿರುವ ಮಹಾಘನ ಪ್ರಾಣಲಿಂಗದ ಇರವಿನಲ್ಲಿ ಎಳ್ಳುಕೊನೆ ಮುಳ್ಳುಮೊನೆಯ

ಷ್ವಾದರೂ ಸಂದು ಬಿರುಕು ಅನ್ಯ ಭಿನ್ನ ಖಂಡಿತವೆಂಬುದು ಎಲ್ಲಿ ನೋಡಿದರೂ ಹೇಗೆ ನೋಡಿದರೂ ಯಾವಾಗ ನೋಡಿದರೂ ಏನೂ ಏನೂ ಇಲ್ಲದೆ, ಒಂದರಲ್ಲಿ ಉದಯ ವಾಗಿ ಒಂದರಿಂದ ಜೀವಿಸಿ, ಅಲ್ಲಿಯೆ ತೇಲಿ ಮುಳುಗುತ್ತಿರುವ 'ಎಲ್ಲ ಒಂದು' ಎಂಬ ಸರ್ವಸಮರಸೈಕ್ಯವಾದ ಅಖಂಡಿತ ಏಕೋಭಾವ ಮಹಾಲಿಂಗ ಹಾಕುವ ಅಡಕೆ ಎಲೆ. ಸುಣ್ಣ ಬೇಕು ತಾಂಬೂಲಕ್ಕೆ. ಎಲ್ಲ ಸೋಸಿ ಹಸನಾದ ವಿಶ್ವಶಿವಭಾವದಲ್ಲಿ ಆಚರಿಸುವ ದಿವ್ಯಮಂಗಲ ಶಿವಾಚಾರವೆ ಸುಣ್ಣ. ಸತ್ತು ಅಸತ್ತಿನ ವಿವೇಚಿಸುವ ಸದ್‌ವಿಚಾರದಿಂದ ಅಖಂಡ ಏಕೋಭಾವಾಚರಣೆಯ ತಾಂಬೂಲವನ್ನು ಸಮರ್ಪಿಸಿ ತನ್ನ ಮಹಾಲಿಂಗದ ಸಂತೃಪ್ತಿ ಸುಖವೆ ತನಗೆ ಪ್ರಸಾದವಾಗಿ, ತಾನೆ ತನ್ನ ಮಹಾಪ್ರಾಣಲಿಂಗವಾಗಿ ನಿಂದ ಸಮ್ಯಗ್‌ಜ್ಞಾನ ಸ್ವಯಂತೋಷವಾಗಿ ಉಕ್ಕಿ ಹೊರಸೂಸಿ, ದೇಹೇಂದ್ರಿಯ ಕರಣಾದಿ ಗಳ ಅಜ್ಞಾನ ಅಹಂಭಾವ ಮಾಯೆ ಮೋಹಾದಿಗಳ ಅಲ್ಪಶಕ್ತಿ ಅಲ್ಪಜ್ಞಾನ ಅಲ್ಪಭಾವದ 'ಅಲ್ಪ'ಗಳ ಮಹಾಭಾರವನ್ನು ಕಳೆದಿಳುಹಿ ಆಕಾಶದಂತೆ ಸಹಜವಾಗಿ ನಿರಾಭಾರವಾಗಿ[೧]— ತಾನು ಅನ್ಯರಿಗೆ ಭಾರವಲ್ಲ, ಅನ್ಯರು ತನಗೆ ಭಾರವಲ್ಲ ಮತ್ತೆ ತನಗೆ ತಾನು ಭಾರವಲ್ಲ; ಅಥವಾ ಬಯಲಿಗೆ ಭಾರವೆಲ್ಲಿ?—ನಿಂದ ಸಹಜ ನಿರಾಭಾರಿಗಳೊಡನೆ ಮೇಳವಾಗಿ ಎಲ್ಲ ಸೀಮೆಯ ದಾಟಿ ಎಲ್ಲ ಭ್ರಾಂತಿಯ ಮೀರಿ ಅವರ ಸತ್‌ಸಂಗದಲ್ಲಿದ್ದು, ಆಶೆಯ ಪಥ ತನ್ನ ಗಮ್ಯಕ್ಕೆ ಪ್ರತಿಕೂಲ, ನಿರಾಶೆಯೆ ತನ್ನ ನಿರಾಳ ಸ್ಥಳಕ್ಕೆ ಅನುಕೂಲ ಮಾರ್ಗವೆಂದು ನಡೆದು, ಬುದ್ಧಿಭಾವದ ನಾಲಗೆಯ ನುಡಿಗೆ ಎಡೆಯಿಲ್ಲದ ನಿಶ್ಶಬ್ದವೆ ಅನುಭವಗೋಷ್ಠಿ ಯಾಗಿ, ಉಪಮೆ ಉಪಮಿಸಲರಿಯದ ನಿರವಯಲೆ ವಿಶ್ರಾಮಸ್ಥಾನವಾಗಿ, ಜಗದ ಗಮನವೆಲ್ಲ ನಿರಾಕಾರವಾದ ತನ್ನ ಗಮನವೆ ಆಗಿ, ಪಂಚಭೂತಪಿಂಡವಾದ ಸ್ಥೂಲ ತನುವೇ ಪಾತಾಳ, ಮಹದಹಂಕಾರಗಳ ಪಿಂಡವಾದ ಜೀವಾತ್ಮನೇ ಊರ್ಧ್ವ, ದಶೇಂದ್ರಿಯ ಪಂಚಪ್ರಾಣ ಮನಬುದ್ಧಿಯಿಂದ ಕೂಡಿದ ಸೂಕ್ಷ್ಮತನುವೇ ಪವನ— ಇವರ ಸಂಯೋಗವೇ ತ್ರಿಭುವನ, ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯ. ಈ ತ್ರಿಭುವನಕ್ಕೆ ಗಿರಿಯೇ ಶಿರಸ್ಸು, ಅದೇ ಶ್ರೀಶೈಲ ಪರ್ವತ.[೨] ಈ ಪರ್ವತವನ್ನೇರಿ

---

೧. ನೋಡಿರಿ:

'. . . ನೀವು ತೊಲಗಿ ನಿರಾಭಾರಿಯಾಗಿ ಪ್ರಸಾದಲಿಂಗಪ್ರಾಣಿಯಾಗಿಪ್ಪಿರಿ ನೀವು . . .'

ಶೂ. ಸಂ. ಪು. ೮೦, ವ. ೨೭.

(ನಾನು – ಅಹಂಭಾವ – ಅದಕ್ಕೆ ಸಂಬಂಧವಾದ ಎಲ್ಲ ಭಾರ ತೊಲಗಿ ಹೋಗಿದೆ).

೨. ಇಲ್ಲಿ ನೋಡಿರಿ:

1. 'ಶಿರವೇ ಶ್ರೀಗಿರಿ ಕರ್ಣವದುವೆ ಗೋಕರ್ಣವು.'

ಕೈ. ಕ. ಯೋ. ಪ್ರ. ಸ್ಥ. ಪು. ೮೫, ಪದ ೪.

2. ಶಿರವೇ ಶ್ರೀಗಿರಿ ಗುರುಸಿದ್ಧೇಶ್ವರ । ನಿರವು ಬ್ರಹ್ಮರಂಧ್ರದ ಗುಡಿಯು
ಮೆರೆವ ಜ್ಯೋತಿ-ಪ್ರಭೆಯೆ ಮಲ್ಲೇ- । ಶ್ವರನೆಂದೆಂಬುವ ಭಾವವ ಮರೆದು

ಕೈ. ಕ. ಯೋ. ಪ್ರ. ಸ್ಥಲ ಪು. ೮೫.

3. ಸಿರಿಶೈಲವೆಂದರೆ ಬ್ರಹ್ಮರಂಧ್ರಸ್ಥಾನ . . .

ಪ್ರ. ವ. ಪು. ೧೧೩, ವ. ೫೫೮ ಟೀಕು.

ಬ್ರಹ್ಮರಂಧ್ರಸ್ಥಾನದಲ್ಲಿರುವ 'ನೂರು ಕೋಟಿ ಚಂದ್ರಸೂರ್ಯರ ಪ್ರಕಾಶವುಳ್ಳ ನಿಷ್ಕಲ ಲಿಂಗ'[೧]ದಲ್ಲಿ ಸಮರಸವಾಗಿ ನಿಂದು, ಕಾಯವೆಂಬ ಕದಳಿಯ ಬನವನ್ನು ಹೊಕ್ಕು ಸುಳಿದಾಡುವ ಮಹಾಮಹಿಮ ಪ್ರಭುಲಿಂಗಜಂಗಮದ ಸುಳಿವನ್ನು ಸೂಕ್ಷ್ಮವಾಗಿ ಅವಲೋಕಿಸಿರಿ.

ಕದಳಿ ಎಂದರೆ ಬಾಳೆ ಇದು ನಿಮಗೆ ಗೊತ್ತು. ಶ್ರೀಶೈಲಪರ್ವತದ ಬಾಳೆಯ ಬನ ಅದೂ ನಿಮಗೆ ಗೊತ್ತು. ಈ ಕದಳಿಯ ಬನ ಅತಿ ಘೋರ, ಅತ್ಯಂತ ಭಯಂಕರ. ಕದಳಿಯ ರುದ್ರಭೀಕರದಲ್ಲಿ ಹೊಗುವುದು ಕಷ್ಟ. ಹೊಕ್ಕು ಹೊಲಬುಗೆಡದೆ ಅಲ್ಲಿ ಸುಳಿದಾಡುವುದು ಕರಕಷ್ಟ. ಈ ಕರಕಷ್ಟವನ್ನು ಸಾಧಿಸಿದಲ್ಲದೆ ಪರ್ವತ ಮಲ್ಲಯ್ಯನ ದರ್ಶನ ಸಮಾಗಮ ಸಂಗಮ ಸಮರಸಸಂಯೋಗವಿಲ್ಲ. ಪ್ರಭುದೇವರು ಹೇಳುವುದು ಇದೇ ಕದಳಿಯ ಬನವನ್ನು, ಹೌದು. ಆದರೆ ಈ ಕದಳಿಗಿಂತ ಪ್ರಳಯಭಯಂಕರ ಮಾನವನ ಕಾಯವೆಂಬ ಕದಳಿ. ಪರ್ವತದ ಕದಳಿಯನ್ನು ಹೊಕ್ಕು ಪಾರಾಗಬಹುದು ಸಾಹಸ ಮಾಡಿ. ಆದರೆ ಕಾಯವೆಂಬ ಕದಳಿಯನ್ನು ಹೊಕ್ಕು ಈ ಅರಣ್ಯಘೋರವನ್ನು ಎದುರಿಸಿ, ಥಳಿಥಳಿಲೆಂದು ದಾಂಗುಡಿಯಿಡುವ ಕಾಡುಕಿಚ್ಚು, ಹುಲಿ ಸಿಂಹ ಕರಡಿ ಕಾಡುಮಿಕ ಕಾಡಾನೆ ಕಾಡುಕೋಣ ಕಾಲಸರ್ಪ ಕರಾಳಭೂತ ರಾಕ್ಷಸ, ಬೆಂಕಿಯ ಮಳೆ ವಿಷದ ಹೊಗೆ ಅಲಗಿನ ಮಂಜು ಕತ್ತಿಯ ಬಿಸಿಲು ಪಾತಾಳದ ಕತ್ತಲೆ ಕೆಂಡದ ಹಗಲು— ಇನ್ನೆಷ್ಟೋ ಘೋರದ ಯಮನಿಳಯುವಾಗಿರುವ ಕಾಯವೆಂಬ ಕದಳಿಯನ್ನು ಹೊಕ್ಕು ಸುಳಿದಾಡಿ, ಕದಳಿಯನ್ನು ಗೆದ್ದು ಮರಣವನ್ನು ಮೀರಿ, ಕತ್ತಲೆಯನ್ನು ಗೆದ್ದು ಬೆಳಗಿನ ನಾಡಿಗೆ ನಡೆದು, ಕಾಯದ ಅಲ್ಪವನ್ನು ಕಳೆದು ಪರಮಭೂಮದಲ್ಲಿ ನಿಂದು ನಿರಾಳವಾಗಿ ಇರುವುದು, ಕದಳಿಯ ಹಣ್ಣು ತಿಂದು ಅಲ್ಲಿಯೆ ಸಿಕ್ಕು ಹೊದಕುಳಿಗೊಳ್ಳುವ ಕಾಯ ಜೀವಿಗಳ ಹವಣಲ್ಲ. ಕದಳಿಯನ್ನು ಗೆದ್ದು ಬದುಕಿದ ಮಹಾದೇವಿಯಕ್ಕನನ್ನು ಕೇಳಿ, ಹೇಳುತ್ತಾಳೆ ಅದರ ಕತೆಯನ್ನು:

ಕದಳಿಯೆಂಬುದು ತನು. ಕದಳಿಯೆಂಬುದು ಮನ.
ಕದಳಿಯೆಂಬುದು ವಿಷಯಂಗಳು. ಕದಳಿಯೆಂಬುದು ಭವಘೋರಾರಣ್ಯ.
ಕದಳಿಯೆಂಬುದ ಗೆದ್ದು ತವೆ ಬದುಕಿ ಬಂದು,
ಕದಳಿಯ ಬನದಲ್ಲಿ ಭವಹರನ ಕಂಡೆನು.
ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದರೆ
ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು.[೨]

---

೧. ಪ. ಮಂ. ಪು. ೧೮-೧೯, ಪ. ೧೦ರ ಎರಡೂ ಟೀಕು ನೋಡಿರಿ.

೨. ಶೂ. ಸಂ. ಪು. ೨೯೮, ವ. ೮೯.
ಈ ಸಂದರ್ಭದಲ್ಲಿ ಹಡಪದಪ್ಪಣ್ಣಗಳ ಪುಣ್ಯಾಂಗನೆ ಲಿಂಗಮ್ಮನವರ ವಚನವನ್ನೂ ಪರಾ ಮರ್ಶಿಸಿ ನೋಡಿರಿ:

(ಮುಂದಿನ ಪುಟ ನೋಡಿ)

ಭವಮರಣದ ಘೋರಭವ ಅತ್ಯಂತಘೋರ ಮರಣಾರಣ್ಯವೆ ಕಾಯವೆಂಬ ಕದಳಿ: ಆದರೆ ಇದೇ ಕದಳಿಯಲ್ಲಿ ಹೊಕ್ಕು ಹೊಲಬಿಗನಾಗಿ ನಡೆದರೆ ಇಲ್ಲಿಯೆ ಭವಹರ, ಮರಣಹರ ಮಲ್ಲಿಕಾರ್ಜುನ ಇದ್ದಾನೆ. ಕಾಯವೆಂಬ ಕದಳಿಯನ್ನು ಹೊಗಲೆಬೇಕು,– ಹೃದಯಕಮಲದ ಚೆನ್ನನ ದಿವ್ಯಾಲಿಂಗನವನ್ನು ಪಡೆದು ದಿವ್ಯವಾಗಿ ಇರಬಯಸುವವರು.

ಮತ್ತೆ ನೋಡಿ ತನು ಮನ ವಿಷಯ ಭವಮರಣವನ್ನು ಗೆಲ್ಲಲು ಪ್ರಭುದೇವರು ತಮ್ಮ ಕದಳಿಯಲ್ಲಿ ನಡೆಸಿರುವ ದಿವ್ಯ ಪ್ರಯೋಗವನ್ನು:

ಕದಳಿಯ ಬನವ ಹೊಕ್ಕು ಹೊಲಬು ತಿಳಿಯದನ್ನಕ್ಕ,
ಬಯಲ ಗಾಳಿಯ ಹಿಡಿದು ಗಟ್ಟಿಮಾಡದನ್ನಕ್ಕ,
ಬರಿದೆ ಬಹುದೆ ಶಿವಜ್ಞಾನ, ಷಡುವರ್ಣವಳಿಯದನ್ನಕ್ಕ?
ಬರಿದೆ ಬಹುದೆ ಅಷ್ಟಮದವಳಿಯದನ್ನಕ್ಕ?
ಮದಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ;
ಗುಹೇಶ್ವರಲಿಂಗವು ಕಲ್ಪಿತದೊಳಗಲ್ಲ.[೧]

ತನುವಿಕಾರ ಇಲ್ಲ. ಪ್ರಾಣವಾಯುವಿನ ವಿಕಾರ ವಿಶ್ರಾಂತವಾಗಿದೆ. ಮನದ ಗಾಳಿಯ ವಿಕಾರ ನಿರ್ವಿಕಾರವಾಗಿ ನಿಂದಿದೆ. ಮನದ ವಿಕಾರ ಮೌನವಾದರೆ, ವಿಷಯವಿಕಾರ ಹೇಳ ಹೆಸರಿಲ್ಲದಂತೆ ಮಾಯವಾಗಿ ಹೋಗಿದೆ. ಕಲ್ಪಿತಕ್ಕೆ ಸಿಕ್ಕದ ವಿಶ್ವಗುಹೆಯ ಗುಹೇಶ್ವರಲಿಂಗ ಪ್ರಭುದೇವರ ಕದಳಿಯ ಬನವನ್ನು ಪ್ರಜ್ವಲಗೊಳಿಸಿ, ವಿಷಯದ ಕಾಡನ್ನು ಸುಟ್ಟು ವಿಶ್ವವಿಸ್ತಾರವಾದ ಲಿಂಗದ ನಾಡನ್ನು ನಿರ್ಮಿಸಿದ್ದಾನೆ. ಪ್ರಭುದೇವರ ಈ ಪ್ರಯೋಗ ಪ್ರಾಣಲಿಂಗಿಸ್ಥಲದಲ್ಲಿ ನಡೆದ ಅನುಭವ. ಜಂಗಮಸ್ಥಲದ ಪ್ರಭುದೇವರು ಇನ್ನೂ ಮಿಗಿಲಾದ ಪ್ರಯೋಗಗಳನ್ನು ಮಾಡಿನೋಡಿದ್ದಾರೆ ತಮ್ಮ ಅನುಭಾವಶಾಲೆಯಲ್ಲಿ. ಮತ್ತೆ ಬೇಕಾದರೆ ನೋಡಿ ಕಾಯಶಾಲೆಯಲ್ಲಿ ಪ್ರಭುದೇವರು ಮಾಡುತ್ತಿರುವ ದಿವ್ಯಯೋಗವೆಂಬ ಪ್ರಯೋಗವನ್ನು:

ಕಾಯವೆಂಬ ಕದಳಿಯ ಹೊಕ್ಕು, ಜೀವಪರಮರ ನೆಲೆಯನರಿದು,
ರಸ ರುಧಿರ ಮಾಂಸ ಮಜ್ಜೆ ಮಿದುಳು ಅಸ್ಥಿ ಶುಕ್ಲ –
ಈ ಸಪ್ತಧಾತುಗಳ ಸಂಚವ ತಿಳಿದು,
ಮತ್ತೆ ಮನ ಪವನ ಬಿಂದುವನೊಡಗೂಡಿ,
ಉತ್ತರಕ್ಕೇರಿ ನೋಡಲು ಬಟ್ಟಬಯಲಾಗಿದ್ದಿತ್ತು.
ಆ ಬಯಲಲ್ಲಿಯೆ ನಿಂದು ನಿರಾಳದೊಡಗೂಡಿ, ಮಹಾಬೆಳಗನೆ ಕೂಡಿ,
ನಾ ನಿಜಮುಕ್ತಳಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಲಿಂ. ವ. ಪು. ೨೯, ವಚನ ೯೭.

೧. ಪ್ರ. ವ. ಪು. ೯೧, ವ. ೧. ಈ ವಚನದ ಟೀಕನ್ನೂ ನೋಡಿರಿ:

ಕಾಯವಿಕಾರವೆಂಬ ಕದಳಿಯ ಹೊಕ್ಕು, ಹೊಲಬು ತಿಳಿದು, ವಾಯುವಿಕಾರವನುಳಿದು, ಷಡುವರ್ಣವ ಕೆಡಿಸಿ, ಅಷ್ಟಮದವ ನಷ್ಟವ ಮಾಡಿ, ಮದಮತ್ಸರವ ಪರಿತ್ಯಜಿಸಿ, ಆವ ವಿಕಾರದಲು ಹೊದಕುಳಿಗೊಳ್ಳದೆ ಲಿಂಗಪ್ರಾಣವೆ ಕೃತನಿಶ್ಚಯವಾಗಿಪ್ಪುದೆ ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.

ಉರಿಯ ಬೊಂಬೆಯ ಮಾಡಿ, ಸಿರಿಯ ಸೀರೆಯನುಡಿಸಿ ।
ಪರಿಪರಿಯ ಕೇರಿಕೇರಿಯಲಿ ಸುಳಿಸಿ ॥
ಉರಿಯ ಬೊಂಬೆಯ ನೆರೆದು ಸಿರಿಯ ಸೀರೆಯ ಸೆಳೆದು ।
ಪರಮ ಪರಿಣಾಮದೊಳಗೋಲಾಡಿದೆ ॥ ೧

ಅರಲುಗೊಂಬೆಯನ್ನು ಯಾರಾಗಲಿ ಮಾಡಬಹುದು. ಉರಿಯ ಬೊಂಬೆಯನ್ನು ಮಾಡಬಲ್ಲ ಅಗ್ನಿಕಲಾವಿದರನ್ನು ನಾನು ನೋಡಿಲ್ಲ. ಉರಿಯನ್ನೇ ಅರಲಿನಂತೆ ಹಿಸುಕಿ ಜ್ವಾಲಾಪುತ್ಥಳಿಯನ್ನು ರೂಪುಗೊಳಿಸುವುದು ಹೇಗೆ? ಇಂಥ ಜಾಣರನ್ನು ನೀವೂ ಕಂಡಿರಲಿಕ್ಕಿಲ್ಲ. ಮತ್ತೆ ಮೇಲೆ ಉರಿಗೆ ಸೀರೆಯನ್ನು ಉಡಿಸಿ ಬೀದಿಯಲ್ಲಿ ಆ ಬೊಂಬೆಯನ್ನು ಅಡ್ಡಾಡಿಸುವುದು. ಮತ್ತೆ ಉರಿಬೊಂಬೆಯ ಸಂಯೋಗ ಮಾಡಿ, ಸೀರೆಯನ್ನು ಸೆಳೆದು ಹಾಕಿ ಪರಮಾನಂದದಲ್ಲಿ ಪರಿಣಾಮಿಸಬಲ್ಲ ಜ್ಯೋತಿರ್ವಿಜ್ಞಾನಿಗಳನ್ನು ನಾನು ಕಂಡಿಲ್ಲ, ಕೇಳಿಲ್ಲ. ಇದು ನಮಗೆ ಅತಿಮಾನವ ಸಂಗತಿ. ಆದರೆ ಇದಕ್ಕಿಂತ ನೂರು ಸಾವಿರ ಮಿಗಿಲಾದ ಅದ್ಭುತಸತ್ಯವನ್ನು ರೂಹುಗೊಳಿಸಿ ತೋರಿದ್ದಾರೆ ಪ್ರಭುದೇವರು ತಮ್ಮ ಉರಿಯ ಪದ್ಯದಲ್ಲಿ. ಪದ್ಯದ ಉರಿ ನನ್ನ ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ಇಂಥ ಉರಿಯನ್ನು ಕಂಡುಂಡ ಕಲ್ಲುಮಠದ ಪ್ರಭುದೇವರು ಈ ಪದ್ಯಕ್ಕೆ ಬರೆದ ಟೀಕನ್ನು ನಾವು ಅವರ ಅನುಭಾವದೃಷ್ಟಿಯ ಸಹಾಯದಿಂದ ನೋಡಿದರೆ, ಕಾಯದೊಳಗೆ ಉರಿಯುತ್ತಿರುವ ಲಿಂಗದುರಿಯ ಮರ್ಮ ವೇದ್ಯವಾಗಬಹುದು. ಅದೋ ನೋಡಿ, ದಿವ್ಯ ಉಜ್ವಲಿಸಿ ತೋರುತ್ತಿದೆ:

ಅಖಂಡ ಚಿಜ್ಜ್ಯೋತಿರ್ಲಿಂಗವನ್ನು ಭಾವ ಮನ ದೃಷ್ಟಿಗೆ ಪ್ರತ್ಯಕ್ಷವಂ ಮಾಡಿ, ಗುರುವು ಕರಸ್ಥಲಕ್ಕೆ ಇಷ್ಟಲಿಂಗವಾಗಿ ಕೊಟ್ಟುದೇ ಉರಿಯನ್ನು ಬೊಂಬೆಯ ಮಾಡಿದ್ದು. ಈ ಲಿಂಗಕ್ಕೆ ಭಕ್ತಿಯುಕ್ತವಾದ ಜ್ಞಾನಾಂಬರವನ್ನು ಉಡಿಸಿ, ಆತ್ಮನು ಇಂದ್ರಿಯಮುಖಗಳಲ್ಲಿ ಲಿಂಗವನ್ನು ಮುಂದೆ ಮಾಡಿಕೊಂಡು, ಲಿಂಗವನ್ನು ನೋಡಿಸುತ್ತ, ಲಿಂಗಮಂ ಕೇಳಿಸುತ್ತ, ಲಿಂಗಮಂ ರುಚಿಸುತ್ತ–ಹೀಗೆ ಸರ್ವೇಂದ್ರಿಯ ಸುಖಂಗಳನ್ನೂ ಲಿಂಗಕರ್ಪಿಸುತ್ತ ಲಿಂಗಪ್ರಸಾದಿಯಾಗಿದ್ದು, ಶರಣ ಸತಿ ಲಿಂಗ ಪತಿ ಎಂಬ ಭಾವದಿಂದ ಅಂಗಭೋಗಗಳೆಲ್ಲಾ ಲಿಂಗಭೋಗವಾಗಿ, ಮಾಡುವ ಮಾಡಿಸಿಕೊಳ್ಳುವ, ಅರಿವ ಅರುಹಿಸಿಕೊಳ್ಳುವ ಎರಡು ವಸ್ತುವೂ ಒಂದೇ ಲಿಂಗವೆಂದು ಮಹಾಜ್ಞಾನದಿಂದ ಅರಿದು, ಎರಡೆಂಬುದನ್ನು ಅಳಿದು, ಭಿನ್ನ ಜ್ಞಾನ-ಕ್ರಿಯೆಗಳೇನೂ ಇಲ್ಲವೆಂದೆನಿಸಿ, ಅಭಿನ್ನ ಜ್ಞಾನದಿಂದ ಲಿಂಗದಲ್ಲಿ ಭಿನ್ನವಳಿದು, ನೋಡಿದುದೆಲ್ಲಾ ಮುಟ್ಟಿದುದೆಲ್ಲಾ ತನ್ನ ತಾನೇ ಲಿಂಗಾರ್ಪಿತವಾಗುತ್ತ, ಅರ್ಪಿಸುವೆನು ಎಂಬ ಸಂಕಲ್ಪ, ಅರ್ಪಿಸುವದಿಲ್ಲವೆಂಬ ವಿಕಲ್ಪ– ಈ ಸಂಶಯದ ಅವಕಾಶವನ್ನು ನಷ್ಟವ ಮಾಡಿ, ಭವದುಃಖಕ್ಕೆ ಹೊರಗಾಗಿ ಲಿಂಗಸ್ಥಲವಾದ ಪರಿಣಾಮಸ್ಥಲವಲ್ಲಿ ಪರಮಹರುಷಿತನಾಗಿದ್ದೆನು.

೧. ಪ. ಮು. ಪು. ೧೨. ಪ. ೬.

ಕಾಯದ ಕದಳಿಯಲ್ಲಿ ಉರಿವ ಲಿಂಗದ ಬೆಳಗು, ಬೆಳಗು. ಈ ಉರಿಯು ಬೆಳಗು ಹಿಡಿದು ಕದಳಿಯ ಬನದಲ್ಲಿ ಬೀದಿವರಿದು ಸುಳಿದಾಡಿ, ಕರ್ಪುರದ ಹೆಣ್ಣು ಉರಿಯ ಪುರುಷನನ್ನು ನೆರೆವಂತೆ ಕದಳಿಯ ಬನದಲ್ಲಿ ಶರಣ ಲಿಂಗದ ಸಮರತಿ ಸಂಯೋಗವಾದರೆ ಕರ್ಪುರವಿಲ್ಲ; ಲಿಂಗ ಒಂದೇ ಒಂದಾಗಿ ಉರಿಯುತ್ತಿದೆ. ಕದಳಿಯ ಬನವೆಲ್ಲ ಮಲ್ಲಯ್ಯನ ಮಹಾ ಮನೆಯಾಗಿದೆ.

ಕದಳಿಯ ಬನದಲ್ಲಿ ಉರಿಯೊಡನೆ ಸುಳಿದು ಆಡಿ ಉರಿಯೆ ಆಗಿರುವ, ಉರಿಲಿಂಗ ದೇವನೆ ಆಗಿರುವ ಮಹಾಮಹಿಮನಿಗೆ ಇಹಲೋಕವೆಂದಿಲ್ಲ, ಪರಲೋಕವೆಂದಿಲ್ಲ, ಅಜ್ಞಾನ ಅಹಂಭಾವ ಮಾಯೆ ಮೋಹಕ್ಕೆ ಅರಮನೆಯಾಗಿರುವ ರಕ್ತಮಾಂಸದ ಮುದ್ದೆ ನನಗೆ ನಿಮಗೆ—ಮನ್ನಿಸಿರಿ ನನ್ನಂತೆ ನೀವು ಎಂಬ ನನ್ನ ಧಾರ್ಷ್ಟ್ಯವನ್ನು—ಈ ಲೋಕ ಆ ಲೋಕ, ಈ ದೇಶ ಆ ದೇಶ, ಈ ಕಾಲ ಆ ಕಾಲ, ಪುಣ್ಯ ಪಾಪ ಸ್ವರ್ಗ ನರಕ. ಆದರೆ ವಿಶ್ವ ಲೋಕ ಪ್ರಪಂಚವನ್ನೆ ಹಡೆದು ಒಡಲೊಳಗೆ ಇಂಬಿಟ್ಟುಕೊಂಡು ಇರುವ ಉರಿಲಿಂಗಕ್ಕೆ, 'ಲೀಯತೇ ಗಮ್ಯತೇ ಯತ್ರ ಜಗದೇತತ್ ಚರಾಚರಂ' 'ಯಸ್ಮಾದ್ ವಿಶ್ವಮುದೇತಿ ಯತ್ರ ರಮತೇ ಯಸ್ಮಿನ್ ಪುನರ್ಲೀಯತೇ' 'ಜನ್ಮಾದಿ ಅಸ್ಯ ಯತಃ'—ಎಂದು ಲಿಂಗ ವಿದರು ಹೇಳುವ ವಿಶ್ವಲೋಕವನ್ನು ಮೀರಿ, 'ಹತ್ತು ಅಂಗುಲ' ಮೇಲೆ ನಿಂತಿರುವ ಚೈತನ್ಯ ಜ್ಯೋತಿರ್ಲಿಂಗಕ್ಕೆ ಇಹ ಪರ ಎಲ್ಲಿದೆ? ತನ್ನಲ್ಲಿಯೆ ಇದೆ. ಇಂಥ ಲಿಂಗ ದಲ್ಲಿ ಬೆರೆದು, 'ಎರಡೆಂಬುದನ್ನು ಅಳಿದು' ನಿಂದ ಮಹಾಮಹಿಮನಿಗೆ ಆ ಲೋಕ, ಈ ಲೋಕ? ಉರಿಲಿಂಗವೆ ಆಗಿ ವಿಶ್ವಕಾಯದ ಕದಳಿಯಲ್ಲಿ ಸುಳಿದಾಡಬಲ್ಲ ಮಹಾಂತ ನಿಗೆ ಇಹಪರ ಕರಗಿ ಒಂದಾಗಿ ನಿಂತಿವೆ. 'ಇಹಲೋಕ ಪರಲೋಕ ತಾನಿದ್ದಲ್ಲಿ. ಗಗನ ಮೇರುಮಂದಿರ ತಾನಿದ್ದಲ್ಲಿ. ಸಕಲ ಭುವನ ತಾನಿದ್ದಲ್ಲಿ. ಸತ್ಯ ನಿತ್ಯ ನಿರಂಜನ ಶಿವತತ್ತ್ವ ತಾನಿದ್ದಲ್ಲಿ. ಉತ್ತರೋತ್ತರ ಚತುರ್ವಳಯ ತಾನಿದ್ದಲ್ಲಿ. ಚಂದ್ರಸೂರ್ಯ ತಾರಾಮಂಡಲ ತಾನಿದ್ದಲ್ಲಿ. ಅಂತರ ಮಹದಂತರ ತಾನಿದ್ದಲ್ಲಿ. ಸ್ವತಂತ್ರ ಗುಹೇಶ್ವರಲಿಂಗ ತಾನಿದ್ದಲ್ಲಿ'.[೧] ಎಂಬ ಪ್ರಭುಲಿಂಗ ದೇವರ ಮಾತನ್ನು ಮತ್ತೊಮ್ಮೆ ಇಲ್ಲಿ ನೆನಪಿಗೆ ತಂದುಕೊಂಡರೆ, ಮತ್ತೆ ನಾವು ಈ ವಿಷಯವಾಗಿ ತಲೆ ತುರಿಸಿಕೊಳ್ಳುವ ಆವಶ್ಯಕತೆಯೇ ಉಳಿವುದಿಲ್ಲ.

ಇಹಪರದ ಹಂಗಿಲ್ಲದ ಪ್ರಭುದೇವ ಅಲ್ಲಿಂದತ್ತ ಮುಂದೆ ನಡೆದು 'ಅಗಮ್ಯ, ನಿರಾಳ, ಪರಮಜ್ಞಾನಸಿದ್ಧಿ, ಮಹಾಲಿಂಗದ ಬೆಳಗು' ತನ್ನ ನಿಜವೇ ಎಂದು ಅರಿದು, ಈ ಮಹಾಲಿಂಗದ ಮಹಾಬೆಳಗೆ ತಾನಾಗಿ ನಿಂದ ನಿಲುಕಡೆಯೆ ಪ್ರಭುದೇವರ ಜಂಗಮ ಸ್ಥಲದ ನಿಲುಕಡೆಯೆಂದು ಸಿದ್ಧವೀರದೇವರು ನಮಗೆ ತೋರಿಸುತ್ತಾರೆ.

ಇಲ್ಲಿಗೆ ಪೂಜೆಯ ಪುರಾಣ ಮುಗಿಯಿತೇ ಎಂದು ನಿಮ್ಮ ಆಕಳಿಕೆ ಕೇಳುತ್ತಿದೆ. ಅಡ್ಡಿ ಇಲ್ಲ, ಸ್ವಲ್ಪ ಒರಗಿಕೊಳ್ಳಿರಿ. ಶರೀರಕ್ಕೆ ವಿಶ್ರಾಂತಿ ಬೇಕು. ಮನ ಬುದ್ಧಿ ಭಾವ ಹೃದಯಕ್ಕೂ ವಿಶ್ರಾಂತಿ ಬೇಕು. ನನಗೂ ವಿರಾಮ ಬೇಕಾಗಿದೆ. ವಿರಾಮದ ಭಿತ್ತಿಯ ಮೇಲೆಯೆ ಚೈತನ್ಯವಿಹಾರ, ವ್ಯವಹಾರ ಚೆನ್ನಾಗಿ ಮೂಡಿ ನಡೆಯುತ್ತವೆ.

---

೧. ಪ್ರ. ವ. ಪು. ೧೭೫, ವ. ೬೦.

ವಿಶ್ರಾಂತಿ, ವಿರಾಮ, ನಿದ್ರೆ ಗಾಢನಿದ್ರೆ ! ಇಲ್ಲಿಯ ಅನುಭವವೇನು? ಇಲ್ಲಿ ಶರೀರ ವಿದ್ದು ಶರೀರವಿಲ್ಲ; ಮನವಿದ್ದು ಮನ ಇಲ್ಲ; ಭಾವ ಬುದ್ಧಿ ಅವೂ ಇದ್ದು ಇಲ್ಲದಂತೆ. ಉಸಿರಾಡಿಸುವ ಪ್ರಾಣವಿಕಾರ ಪಚನಕ್ರಿಯೆ ರಕ್ತನಿರ್ಮಾಣ ಅಭಿಸರಣ ಮುಂತಾದ ವಿಕಾರ ನಿದ್ರೆಯಲ್ಲಿ ನಡೆದರೂ ಅದರ ಅರಿವಿಲ್ಲ, ನಿದ್ರೆ ಮಾಡಿದ ನನಗೆ ನಿಮಗೆ. ಅಲ್ಲಿ ಅರಿವಿದ್ದರೂ ನಿದ್ರೆ ತಿಳಿದೆದ್ದ ಅರಿವಿಗೆ ಅಂದರೆ ಜಾಗ್ರುದವಸ್ಥೆಯ ಪ್ರಜ್ಞೆಗೆ ನಿದ್ರಾವಸ್ಥೆಯಲ್ಲಿದ್ದ ಪ್ರಜ್ಞೆಯ ನೆನಪಿಲ್ಲ. ನಿದ್ರೆ ಮತ್ತು ಎಚ್ಚರದ ಪ್ರಜ್ಞೆಗಳ ನಡುವೆ ಅಭೇದ್ಯವಾದ ಕೋಟೆ ಅಡ್ಡವಾಗಿ ನಿಂತಿರುವುದು ನಿಸರ್ಗದ ನಿರ್ಮಾಣ. ಅಲ್ಲಲ್ಲಿ ಎಚ್ಚರವಿರುವ ಅರಿವಿಗೆ ಅಲ್ಲಲ್ಲಿಯ ಪ್ರಪಂಚವೆ ಪರಮಸತ್ಯ. ನಿದ್ದೆಗೆ ನಿದ್ದೆ, ಕನಸಿಗೆ ಕನಸು, ಜಾಗರಕ್ಕೆ ಜಾಗರ ಸತ್ಯ. ಅದರಂತೆ ಆನೆಯ ಅರಿವಿಗೆ ತಾನೆ ಸತ್ಯ, ತನಗೆ ತೋರುವಂತೆ ತೋರುವ ಪ್ರಪಂಚವೆ ಸತ್ಯ. ಇರುವೆಗೆ ಇರುವೆ, ಮನುಷ್ಯಪ್ರಾಣಿಗೆ ಮನುಷ್ಯ ಸತ್ಯ. ಈ ಎಲ್ಲ ಅರಿವಿನ ಪದರುಗಳಿಗೆ ಪ್ರಕೃತಿಯ ಉಪಾಧಿ ಹೊಂದಿಕೊಂಡಿದೆ. ಆನೆಯ ಅರಿವಿಗೆ ಆನೆ ಹತ್ತಿದೆ; ಒಂಟೆಯ ಅರಿವಿಗೆ ಒಂಟೆಯ ಬಣ್ಣ; ಮಾನವನ ಅರಿವಿಗೆ ಮಾನವ್ಯದ ಲೆಪ್ಪ. ಅರಿವಿಗೆ ಅಂಟಿದ ಈ ಲೆಪ್ಪವನ್ನು ಒರಸುವ ಸಾಮರ್ಥ್ಯ ಮಾನವನಲ್ಲಿ ಉಂಟು. ಅವಸ್ಥೆ ಗುಣ ಧಾತು ಷಡ್‌ವರ್ಗ ಮುಂತಾದ ವಿಕಾರವೆಲ್ಲ ನಿರ್ವಿಕಾರವಾಗಿ, ಮಾನವ್ಯದ ಮಾಲಿನ್ಯವೆಲ್ಲ ಕಡೆಗಾದರೆ, ಮಾನವನ ಮಬ್ಬುಗತ್ತಲೆಯ ಅರಿವು ಉರಿಯಾಗಿ, ದೇಹ ಕರಣ ಇಂದ್ರಿಯಗಳನ್ನೆಲ್ಲ ಬೆಳಗಿ, ಈ ಉರಿಯ ನಾಲಗೆ ಆಕಾಶದೊಳಹೊರಗೆ ತುಂಬಿ ಸೂಸುತ್ತಿರುವ ಉರಿಲಿಂಗದಲ್ಲಿ ಸಮರಸವಾದರೆ ವಿಶ್ವಬ್ರಹ್ಮಾಂಡದ ಒಳಹೊರಗೆ ತಾನೆ ಬೆಳಗಾಗಿ, ತಾನೆ ವಿಶ್ವಬ್ರಹ್ಮಾಂಡ ಕಾಯನಾಗಿ ನಿಂದ ನಿಲವೇ 'ಅಗಮ್ಯ ಅಗೋಚರ'ವಾದ ಮಹಾಲಿಂಗದ ಕರಾಳ ಬೆಳಗು. ಒಂದು ಕಾಯ ಕರಣ ಇಂದ್ರಿಯ ಪ್ರಕೃತಿಯ ವಿಕಾರದ ಲೆಪ್ಪವನ್ನು ನಿರ್ಮೂಲವಾಗಿ ಕಿತ್ತುಹಾಕಿದ ಈ ಅರಿವು ವಿಶ್ವಬ್ರಹ್ಮಾಂಡದ ಒಳಹೊರಗೆ ತೊಳಗಿ ಬೆಳಗಿದರೂ ಯಾವ ಲೆಪ್ಪ ಅಂಟು ವಿಕಾರ ಉಪಾಧಿಯಿಲ್ಲದೆ ನಿರ್ಮಳವಾಗಿ ನಿರಾಳವಾಗಿ ನಿಂದಿದೆ. ಕಾಯವಿಕಾರ ಅಥವಾ ಕಾಯ ಇರುವ ವರೆಗೆ ಲಿಂಗಪೂಜೆ ನಡೆಯಬೇಕು ಎಂದು ಶರಣರು ಹೇಳುವಂತೆ ಈ ವಿಶ್ವಬ್ರಹ್ಮಾಂಡಕಾಯವಿರುವವರೆಗೆ ಮಹಾಬೆಳಗಾದ ಜಂಗಮಲಿಂಗದ ಸ್ವಯಂಪೂಜೆ ನಡೆಯಲೆ ಬೇಕು. ಶರಣರ ದಿವ್ಯದರ್ಶನದಂತೆ ಊರ್ಧ್ವಮುಖವಿರಲಿ, ಅಧೋಮುಖವಿರಲಿ, ವಿಶ್ವಸೃಷ್ಟಿಯ ಮಹಾಮೂಲ ಉದ್ದೇಶ ಸ್ವಯಂಪೂಜೆ, ಸ್ವಯಂ ಭಕ್ತಿ, ನಿಜಾರ್ಪಣ. ಕೊನೆಗೆ ಸ್ವಯಂ ಪ್ರಸನ್ನಭಾವ, ಸ್ವಯಂಭಾವ.

ಈ ಮಹಾಬೆಳಗು—ಜಂಗಮಲಿಂಗ ತನ್ನ ತಾನರ್ಚಿಸಿ ಪೂಜಿಸಿಕೊಳ್ಳುವ ದಿವ್ಯ ಕ್ರಮವನ್ನು ನೋಡದೆ ಹೋದರೆ 'ಅಡುವ ವರೆಗೆ ಕುಳಿತು ಆರುವ ವರೆಗೆ ಕೂಡಲಿಲ್ಲ' ಎಂಬಂತೆ ನಮ್ಮ ಗತಿ. ಮತಿ ಆದೀತು. ಪೂಜೆಗೆಂದು ಪಡೆದ ಸೃಷ್ಟಿಯಲ್ಲಿ ಪೂಜೆ ನಡೆಸಿರುವ ದಿವ್ಯಾಂತರಾಳವನ್ನು ನೋಡಿದರೆ. ನಿಜವಾಗಿ ನೋಡಬೇಕಾದುದನ್ನು ನೋಡಿದಂತಾಯ್ತು.

ಉರಿಯ ಪೂಜೆ, ಆ ಮೇಲೆ ಮಹಾಬೆಳಗಿನ ಪೂಜೆ. ಈ ಮಹಾಬೆಳಗು[1] ಶರಣನಲ್ಲದೆ ಬೇರಲ್ಲ, ಜಂಗಮವಲ್ಲದೆ ಬೇರಲ್ಲ. ಮಹಾಲಿಂಗದ ಬೆಳಗು -ತಾನಲ್ಲದೆ

೧. '. . . ಬೆಳಗಿನೊಳಗಣ ಬೆಳಗು ಮಹಾಬೆಳಗು ಕೂಡಲಚೆನ್ನಸಂಗಾ. ನಿಮ್ಮ ಶರಣ.'

ಬೇರಲ್ಲ. ಶರಣ, ಜಂಗಮ, ಲಿಂಗದ ಬೆಳಗು, ಲಿಂಗ ಅಂದರೆ ಒಂದೇ ಅರ್ಥ, ಅಂದರೆ ಒಂದೇ ವಸ್ತು. ದೀಪ, ದೀಪದ ಪ್ರಭೆ, ರತ್ನ, ರತ್ನದ ಕಾಂತಿಯಂತೆ ಲಿಂಗ ಮತ್ತು ಲಿಂಗದ ಬೆಳಗಿನ ಇರವು. ಕಾಂತಿಯನ್ನು ತೆಗೆದರೆ ರತ್ನವಿಲ್ಲ; ರತ್ನವಿಲ್ಲದ ರತ್ನಕಾಂತಿಯಿಲ್ಲ. ರತ್ನದಿಂದ ಹೊಮ್ಮುವ ಕಾಂತಿಯಂತೆ ಮಹಾಲಿಂಗದಿಂದ ಹರಿವ ಮಹಾಕಾಂತಿ ಶರಣ, ಜಂಗಮ.[೧] ಬೇಕಾದರೆ ಲಿಂಗಶರಣ, ಲಿಂಗಜಂಗಮ ಎಂದು ನೀವು ಕರೆದರೆ ಅಥವಾ ಶರಣಲಿಂಗ ಜಂಗಮಲಿಂಗವೆಂದು ಹೆಸರಿಟ್ಟರೆ ಅದಕ್ಕೆ ನನ್ನ ಆಕ್ಷೇಪವಿಲ್ಲ. ಹೀಗೆಯೇ ಹೇಳುತ್ತಾರೆ ನಿಜಶರಣರ ಲಿಂಗಾಂತರಾಳವನ್ನು ಕಂಡ ಶರಣರು.

ಈ ಮಹಾಬೆಳಗಿನ ಪೂಜೆಯನ್ನು, ತನಗೆ ತಾನೆ, ತನ್ನಿಂದ ತಾನೆ ನಡೆದಿರುವ ಅಥವಾ ನಡೆಸಿರುವ ಪೂಜೆಯನ್ನು ಹಿಂದೆ ಕೊಟ್ಟ 'ಅನಾದಿ ಶರಣಹೃತ್ಕಮಲ ಮಧ್ಯದ ತೇಜೋಮಯವನೇನೆಂದುಪಮಿಸುವೆನಯ್ಯ . . . ' ಎಂಬ ಪ್ರಭುದೇವರ ವಚನದಲ್ಲಿ ಪ್ರವೇಶ ಮಾಡಿ ನೋಡಿದರೆ, ವಿಶ್ವಾಂತರಾಳದ ಮಹಾಬೆಳಗು ತನ್ನ ನಿರಾಳ-ದಿರವಾದ ನಿರವಯಲನ್ನು, ತನ್ನಲ್ಲಿಯೆ ಮೂಡಿ ಆಡುತ್ತಿರುವ ವಿಶ್ವಭೂತಪದಾರ್ಥದಿಂದ ಹೇಗೆ ಪೂಜಿಸುತ್ತಿದೆ ಅಥವಾ ಹೇಗೆ ಪೂಜಿಸಿಕೊಳ್ಳುತ್ತ ನಡೆದಿದೆ ಎಂಬುದು ಕೆಲಮಟ್ಟಿಗಾದರೂ ನಮ್ಮಂಥವರಿಗೆ ವೇದ್ಯವಾಗಬಹುದು. ವಿಶ್ವಹೃದಯಕಮಲ ಮಧ್ಯದ ತೇಜೋಮಯವೆ ತಾನಾಗಿ ನಿಂದಿರುವ ಶರಣ ನಿನ್ನೆ ಹುಟ್ಟಿ ಇಂದು ಬದುಕಿ ನಾಳೆ ಸಾವ ಜನನಮರಣದ ಪುತ್ತಳಿಯಲ್ಲ. ದೇಹದ ಉಪಾಧಿ ದೇಹದ ಆಧಾರ, ಪ್ರಾಣದ ಉಪಾಧಿ ಪ್ರಾಣದ ಅವಲಂಬ, ಭಾವದ ಹಂಗು ಭಾವದ ಆಸರ ಹಿಡಿದು ನಿಂತ ಭೂತಪ್ರಪಂಚಮೂರ್ತಿ ಹುಟ್ಟುತ್ತದೆ, ಹೊಂದುತ್ತದೆ. ಇಂಥ ದೇಹ, ಇಂಥ ಪ್ರಾಣ, ಇಂಥ ಭಾವದ ಆಸರದಲ್ಲಿ 'ನಾನು ಇದ್ದೇನೆ' ಎಂಬ ಅರಿವು ಎಚ್ಚರವಾಗಿ ಇದ್ದರೆ, 'ನಾನು ಇದ್ದೇನೆ, ಸತ್ತಿಲ್ಲ' ಎಂಬ ತಿಳಿವಳಿಕೆ ಸರ್ವಸಾಮಾನ್ಯರಿಗೆ. ಈ ಆಸರ ತಪ್ಪಿದರೆ 'ನಾನು ಸಾಯುತ್ತೇನೆ' ಎಂಬ ಹೆದರಿಕೆ ಎಲ್ಲ ಜೀವಾತ್ಮರಿಗೆ. ಈ ಇರವು ಸಾವು ದೇಹಪ್ರಾಣಾದಿಗಳಿಗಿಂತ ಹೆಚ್ಚಾಗಿ ಅರಿವಿನ ಮೇಲೆ ನಿಜವಾಗಿ ಭಾರ

---

೧. ಲಿಂಗಜಂಗಮದ ವಿಷಯವಾಗಿ ಹಾಡುವ ಕಾಡಸಿದ್ಧೇಶ್ವರನ ಮಾತನ್ನು ಈ ಸಂದರ್ಭದಲ್ಲಿ ಲಕ್ಷ್ಯಗೊಟ್ಟು ಕೇಳಿರಿ:

ಲಿಂಗ ಜಂಗಮ ಒಂದೆಂದರಿಯದೆ ಲಿಂಗ ಜಂಗಮ(ವ?) ಭಿನ್ನವಿಟ್ಟು ಅರ್ಚಿಸುವರು.
ಅದೆಂತೆಂದಡೆ: ಆ ದೇಹಕ್ಕೆ ಪ್ರಾಣಕ್ಕೆ ಭೇದ ಉಂಟೇ?
ಬೀಜ ವೃಕ್ಷಕ್ಕೆ ಭೇದ ಉಂಟೇ? ಜ್ಯೋತಿ ಪ್ರಭೆಗೆ ಭೇದ ಉಂಟೇ?
ಹಾಗೆ ಲಿಂಗ ಜಂಗಮಕ್ಕೆ ಭೇದವಿಲ್ಲ.
ಅದೇನು ಕಾರಣವೆಂದಡೆ: ಲಿಂಗವೇ ಅಂಗ ಜಂಗಮವೇ ಪ್ರಾಣ.
ಲಿಂಗವೇ ಬೀಜ ಜಂಗಮವೇ ವೃಕ್ಷ. ಲಿಂಗವೇ ಜ್ಯೋತಿ ಜಂಗಮವೇ ಪ್ರಕಾಶ.
ಇಂತೀ ನಿರ್ಣಯವ ತಿಳಿದರೆ ಪ್ರಾಣಲಿಂಗಿ,
ತಿಳಿಯದಿದ್ದರೆ ಜಡಲಿಂಗಿಗಳೆಂದನಯ್ಯಾ ನಿಮ್ಮ ಶರಣ,
ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

ಕಾ. ಸಿ. ವ. ಪು. ೯೦, ವ. ೧೭.

ಹಾಕಿಕೊಂಡು ನಿಂತಿರುವ ಸಂಗತಿ ನಮಗಿನಿಮಗೆ ಒಮ್ಮೆಲೆ ಹೊಳೆವುದಿಲ್ಲ, ತಿಳಿವುದಿಲ್ಲ. ಹಿಂದೆ ಬೇರೆ ಕಡೆ ನಾವು ನೋಡಿದಂತೆ, ಮಾನವಸ್ಥಲದ ಎಲ್ಲ ಅರಿವು ದೇಹಾದಿಗಳಿಂದ ಮುಕ್ತವಾಗಿ, ವಿಶ್ವದೇಹ ವಿಶ್ವಪ್ರಾಣ ವಿಶ್ವಭಾವವನ್ನು ಹೆತ್ತು ಹೆರುತ್ತ ಹೊರೆಯು ತ್ತಿರುವ ವಿಶ್ವಾತೀತ ಚಿಚ್ಚೈತನ್ಯಜ್ಯೋತಿಯ ಮಹಾಕಾಶದಲ್ಲಿ ಏಕವಾಗಿ ನಿಂತರೆ, ತಾನಿದ್ದ ದೇಹ ಪ್ರಾಣ ಭಾವ ಬಾಳಲಿ ಬೀಳಲಿ ತಾನು ಮಾತ್ರ ಬಾಳುಬೀಳಿಗೆ ಗುರಿಯಲ್ಲದ ಅನಾದಿ ಅನಂತವಾಗಿ, ಆದ್ಯಂತ ರಹಿತವಾದ 'ಅನಾದಿ ಶರಣ'ನಾಗಿ ನಿಂತಿದೆ. ಇದೇ ನಿತ್ಯಪರಿಪೂರ್ಣ ಚಿದಾತ್ಮಕವಾಗಿರುವ ಮಹಾಬೆಳಗು, ಮಹಾಚೈತನ್ಯ. ಈ ಮಹಾ- ಬೆಳಗು 'ನಾನು ಇದ್ದೇನೆ'ಗೆ ವಿಶ್ವವೆಲ್ಲ ತಾನಾಗಿ ಇರುವ, ವಿಶ್ವವೆಲ್ಲ ತನಗೆ ಪೂಜೆ ಯಾಗುತ್ತಿರುವ, ವಿಶ್ವವೆಲ್ಲ ತನಗೆ ಅರ್ಪಣವಾಗಿ ತನಗೆ ತಾನು ಪ್ರಸಾದವಾಗಿ ತನಗೆ ತಾನೇ ಆನಂದವಾಗಿ ಪೂಜೆ—ಪೂಜೆ ಎಂದರೆ ಭಕ್ತಿ ಅರ್ಪಣ ಮುಂತಾದ ವಿಶ್ವಕ್ರಿಯಾ ವೈಭವ, ಭಾವ ಪ್ರಾಣ ವೈಭವವನ್ನೆಲ್ಲ ಒಳಕೊಂಡು ಮೇಲುಮುಖವಾಗಿ ಹರಿವ ಅರಿವಿನ ಚೈತನ್ಯಕ್ರಿಯೆಯೆಂದು ನಾವಿಲ್ಲಿ ಇಟ್ಟುಕೊಂಡಿದ್ದೇವೆ,—ನಡೆದಿರುವ, ನಿತ್ಯಪರಿಪೂರ್ಣ ವಾಗಿ ಅಖಂಡವಾಗಿ ನಡೆದಿರುವ ಸ್ವಯಂಪೂಜಾಪ್ರಜ್ಞೆ ಅಥವಾ ಸ್ವಯಂಲೀಲಾಪ್ರಜ್ಞೆ ಇರುವುದು ಸ್ವಭಾವಸಹಜ.

'ಜ್ಞಾನಜ್ಯೋತಿಯ ಪ್ರಭೆ ತಾನಾಗಿ' ನಿಂದ, ವಿಶ್ವಾಂತರಾಳದ ಹೃದಯವಾದ ತನ್ನ ಹೃದಯಕಮಲದಲ್ಲಿ ತೊಳಗಿ ಬೆಳಗುವ ಅಖಂಡ ತೇಜೋಮಯವೆ ತಾನಾಗಿ ನಿಂದ 'ಮಹಾಬೆಳಗು' ತನ್ನ ತಾ ಪೂಜಿಸಿಕೊಳ್ಳುವ ವಿಧಾನ ಒಂದು, ಪ್ರಭುದೇವರು ಹೇಳುವಂತೆ ಹೀಗಿದೆ: ಜಲ, ಲಿಂಗ–ಜಂಗಮದ, ಮಹಾಬೆಳಗಿನ ಪಾದಶಿಲೆ. ಈ ಪಾದಶಿಲೆ ಪಾದಶಾಲೆ, ಪಾಸಲೆ, ಮಜ್ಜನಶಾಲೆಯಾಗಿರಬೇಕೆಂದು ನನಗೆ ತೋರುತ್ತದೆ. ಈ ಮಹಾಬೆಳಗು-ಲಿಂಗಜಂಗಮದ ಪೀಠಿಕೆಯೆ ಪೃಥಿವಿ. ಆಕಾಶ ಅಂದರೆ ಚಿದಾಕಾಶವೆ ಮಹಾಬೆಳಗಿನ ಅರಿವಿನ ಕರಸ್ಥಲದಲ್ಲಿ ಪ್ರತಿಷ್ಠಾಪಿತವಾಗಿರುವ ಸರ್ವಶೂನ್ಯ ನಿರಾಲಂಬ ನಿಃಕಳ ಲಿಂಗ. ಸಪ್ತ ಸಮುದ್ರಗಳ ಲೀಲಾವಿಲಾಸ ಈ ಲಿಂಗಕ್ಕೆ ಎರೆವ ಪಂಚಾಮೃತ ಅಭಿಷೇಕ. ಕಲ್ಪಕಲ್ಪಾಂತರದಿಂದ ಅನಂತ ಕಲ್ಪದ ವರೆಗೆ ಆಕಾಶದಲ್ಲಿ ವಿವಿಧ ಚಿತ್ರವಾಗಿ ಮೈಗೊಂಡು ನಿಲ್ಲುವ ಮೇಘಮಾಲೆ ಲಿಂಗ ಅಭಿಷೇಕ ಮಾಡಿಕೊಳ್ಳುವ ನೀರಿನ ಬಿಂದಿಗೆ. ಈ ಬಿಂದಿಗೆಮಳೆಗಾಲ ಲಿಂಗಕ್ಕೆ ಮಜ್ಜನ. ಚಂದ್ರಮ ಅದೇ ಆಕಾಶದ ಹಣೆಯಲ್ಲಿ ಗಂಧದ ತಿಲಕ. ನಕ್ಷತ್ರಗಳ ಅಕ್ಷತೆಯ ಪೂಜೆ. ಮರ ಗಿಡು ಬಳ್ಳಿ ಕಂಟಿಯೆಲ್ಲ ಪತ್ರಿ ಪುಷ್ಪದ ಪೂಜೆ. ಗುಡುಗು ಲಿಂಗಕ್ಕೆ ವಾದ್ಯದ ಪೂಜೆ. ಧಾನ್ಯವೆಲ್ಲ ಮಾಗುವ ಮಾಘ- ಮಾಗಿ ಅದೇ ಆಕಾಶಲಿಂಗ ಉಣ್ಣುವ ತಳಿಗೆ. ಒಕ್ಕಲಾದ ಬೇಸಗೆಯ ಸುಗ್ಗಿ ಅದೇ ಲಿಂಗ ಜಂಗಮದ ಊಟದ ಪೂಜೆ. ಮಧುಮಾಸದ ಶ್ರೀಮಂತ ಪರಿಮಳ ಆ ದಿವ್ಯ ಪ್ರಕಾಶಕ್ಕೆ ತುಪ್ಪದ ಪೂಜೆ. ಮತ್ತೆ ಪರಾತ್ಪರವಾದ ಪರಬ್ರಹ್ಮ ಪರಶಿವವೆ ಆ ಮಹಾ ಬೆಳಗು–ಜಂಗಮಕ್ಕೆ ಮೇಲೂಟ. ಹಾಸುಹೊಕ್ಕಾಗಿ ನೆಯ್ದುಕೊಂಡಿರುವ ಬೆಳಗು ಕತ್ತಲೆ, ಯಾವ ಕಣ್ಣು ತಾಗಬಾರದೆಂದು ಮರೆಮಾಡುವ ಜವನಿಕೆ, ಅದೇ ಜವನಿಕೆಯ ಪೂಜೆ. ಮಹಾಬೆಳಗು. ಲಿಂಗಜಂಗಮ ಹೀಗೆ ಲಿಂಗದ ಬೆಳಸಾದ ವಿಶ್ವಪ್ರಪಂಚ

ಪದಾರ್ಥವನ್ನು ಲಿಂಗಕ್ಕೆ ಪೂಜೆ ಮಾಡಿ, ಅಧೋಮುಖವಾಗಿ ಇಳಿಯುತ್ತಿರುವ ಶಕ್ತಿಯ ಪ್ರಪಂಚಪದಾರ್ಥವನ್ನು ತನ್ನ ಭಕ್ತಿಯ ಶಕ್ತಿಯಿಂದ ಮಹಾಲಿಂಗಕ್ಕೆ ನೈವೇದ್ಯ ಮಾಡಿ, ಊಟ ಮಾಡಿಸಿ ತನ್ನ ನಿಜದಿರವಿನ ಅರಿವಿನಲ್ಲಿ ಕೈತೊಳೆದು, ಅಸತ್ತಿನ ಸೀಮೆ ದಾಟಿ ಸತ್ತಿನ ಸೀಮೆಯಲ್ಲಿ ನಿಂದಿರುವ ಸದ್ಭಾವವನ್ನು ಲಿಂಗಕ್ಕೆ ತಾಂಬೂಲಗೊಟ್ಟು, ಆಕಾಶ ಲಿಂಗಕ್ಕೆ ವಾಯುವನ್ನು ಉಡಿಸಿ ನಿಲ್ಲಿಸಿದರೆ, ಈ ಆಕಾಶಲಿಂಗ ನಿಲ್ಲದ ಠಾವು ಎಲ್ಲಿದೆ? ಇಲ್ಲಿ ಆಕಾಶವೆಂದರೆ ನಮ್ಮ ಆಕಾಶವೆಂದು ಕಂಡರೂ ತಪ್ಪಿಲ್ಲ. ಈ ಆಕಾಶದಲ್ಲಿ ಮೂಡಿರುವ ನಕ್ಷತ್ರ ಮೇಘ ಸಮುದ್ರ ಮುಂತಾದುವೆಲ್ಲ ತಮಗೆ ತಾವು, ತಮ್ಮ ನಿಜ ವಿಸ್ತಾರವಾದ ಆಕಾಶಲಿಂಗಕ್ಕೆ ತಾವು ಪೂಜೆಯಾಗಿ ಅರ್ಪಣವಾಗಿ ತಮ್ಮ 'ನಿಜ ವನೆಯ್ದುವ' ಭಕ್ತಿಯಾಗಿ ವಿಲಾಸಿಸುತ್ತವೆ ಎಂದು ವಿಶ್ವವಿಲಾಸವನ್ನು ನೀವು ವಿವರವಾಗಿ ನೋಡಿ ಹೇಳಿದರೂ ತಪ್ಪಿಲ್ಲ. ಹೀಗೆ ಭೌತಾಕಾಶದಲ್ಲಿ ನಡೆದಿರುವ ವಿಶ್ವಚೈತನ್ಯ ಕ್ರಿಯೆ ಯೆಲ್ಲ,—ಜಡವಿರಲಿ, ಚೈತನ್ಯಮಯವಾಗಿರಲಿ, ಪ್ರಾಣ ಮನ ಬುದ್ಧಿ ಭಾವದಿಂದ ಪ್ರೇರಿತವಾಗಿ ತತ್ತನ್ಮಯವಾಗಿ ಹರಿವ ಕ್ರಿಯಾಪ್ರಪಂಚವಿರಲಿ—ವಿಶ್ವಬ್ರಹ್ಮದ ಸ್ವಯಂ ಪೂಜೆಯಾಗಿ, ಸ್ವಯಂಭಕ್ತಿ ಅರ್ಪಣ ಕ್ರಿಯೆಯಾಗಿ, ಸ್ವಯಂ 'ದಾಸೋಹ'ವಾಗಿ ಕಂಡು, ವಿಶ್ವಪೂಜೆ ಲಿಂಗಕ್ಕೆ ಲಿಂಗ ನಡೆಸಿದ ಲಿಂಗಪೂಜೆಯೆಂದು, 'ವಿಶ್ವಪುರುಷ' ಜೀವನದ ಗುಹಾರಹಸ್ಯಲೀಲೆ ಇದೆಂದು ಹೇಳುತ್ತಾರೆ ಶರಣರು. ವಿಶ್ವಪ್ರಪಂಚವನ್ನು ನಿಜದ ನಿರಾಳಕ್ಕೆ ನಿವೇದಿಸುತ್ತಿರುವ ಪರಿಪೂರ್ಣ—ಕಾಲ ದೇಶ ವಸ್ತುವಿನಲ್ಲಿ–ಮಹಾ ಬೆಳಗೇ ಜಂಗಮಸ್ಥಲದಲ್ಲಿ ನಿಂದ ನಿರಾಳಲಿಂಗದ ನಿಲುಕಡೆ ಎಂದೂ ಹೇಳುತ್ತಾರೆ ಶರಣರು.

ನಾನು ಬರೆಯುತ್ತಿರುವಂತೆ ಮಳೆಯಾಗುತ್ತಿದೆ. ಗುಬ್ಬಿ ಕಾಗೆ ಮುಂತಾದ ಹಕ್ಕಿಗಳು ದನಿಗರೆಯುತ್ತಿವೆ. ಮಳೆಗಾಲದ ಗಾಳಿ ತಂಪುಗರೆಯುತ್ತಿದೆ. ಆಕಾಶವೆಲ್ಲ ಮೇಘಜಾಲದ ವಿಭ್ರಮ, ನೆಲವೆಲ್ಲ ರಾಡಿ ರಜ್ಜು. ಹಗಲು ಹತ್ತು ಗಂಟೆಯ ಸೂರ್ಯ ಮೇಘಪಟಲದ ಮರೆಯಲ್ಲಿ ಕುಳಿತು ತನ್ನಿರವನ್ನು ಯಾರಿಗೂ ಬೀರದೆ ಜಗಕ್ಕೆ ಬೆಳಕು ಚೆಲ್ಲುತ್ತಾನೆ, ಒಮ್ಮೊಮ್ಮೆ ಚಿಮುಕಿಸುತ್ತಾನೆ. ನೀವು ನನ್ನ ಬದಿ ಇಲ್ಲದಿದ್ದರೂ ಇಲ್ಲದ ನಿಮ್ಮೊಡನೆ ಮೌನದ ಮೇಲೆ ಹಜ್ಜೆಯಿಲ್ಲದೆ ಮಾತಾಡುತ್ತ, ತಲೆಯ ವಿಚಾರವನ್ನು ಮಸಿಯಲ್ಲಿ ತುಂಬಿ ಕಾಗದದ ಮೇಲೆ ಇಡುತ್ತ ನಡೆದಿದ್ದೇನೆ ನಾನು. ಇದೇನು 'ಅಕಾಲಚಿತ್ರ' ಎಂದು ನೀವು ನಗಬಹುದು. ಲಿಂಗಜಂಗಮದ ಪೂಜೆಯ ವಿಷಯ ಬಿಟ್ಟು ಮಳೆಗಾಳಿಯ ತಂಪು ತಲೆಗೇರಿ '. . . ನಡೆದಿದ್ದೇನೆ–ನಾನು'–ಎಂದು ಹೇಳುತ್ತ ಆಕಾಶದಿಂದ ಒಮ್ಮೆಲೆ ಭೂಮಿಗೆ ಜಿಗಿದುಬಿಟ್ಟಿರಲ್ಲಾ ಎಂದು ನೀವು ಕೇಳಬಹುದು. ನೀವು ನನಗೆ ಹೀಗೆ ಎಚ್ಚರಕೊಡುವಲ್ಲಿ ಒಂದು ಮಹೋಪಕಾರ ಮಾಡಿದಿರಿ. ನೀವು ಮಾಡಿದ ಉಪಕಾರ ನಿಮಗೆ ಗೊತ್ತಾಗಲಿಕ್ಕಿಲ್ಲ. ಆದರೆ ನನಗೆ?

ನೆಲದ ಮಾನವ ನಾನು. ನನ್ನ ಕಣ್ಣಿಗೆ ಕಾಣುವ, ನನ್ನ ಕಿವಿಗೆ ಕೇಳುವ, ನನ್ನ ಮೈಗೆ ತಾಗುವ ಜಗತ್ತನ್ನು ಮತ್ತು ನನ್ನ ತಲೆಯೊಳಗೆ ಕಣ್ಣು ಕಿವಿಗೆ ಗೋಚರವಲ್ಲದಂತೆ ಮೂಡಿ ಕೈಯಲ್ಲಿ ಹರಿದು ಕಾಗದದ ಮೇಲೆ ನಿರ್ಜೀವ ನೀಲಚಿಹ್ನಗಳಾಗಿ ಬಿಳಿಯ

ಕಾಗದದ ಮೇಲೆ ನಡೆಯುತ್ತಿರುವ ಸದ್ಯದ ನನ್ನ ಜಗತ್ತನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಇದರಲ್ಲಿ ನನಗೆ ಆಶ್ಚರ್ಯವಿಲ್ಲ. ವಿಷಯಾಂತರವೆಂದು ನೀವು ಸಿಟ್ಟಾಗಿರಬಹುದು. ಹೌದು, ನಿಮ್ಮ ಮಾತು ನಿಜ. ಆದರೆ ನೆಲದ ನಾನು ಎಚ್ಚರವಾಗಿ, ಅರಿವು ಅರಿವ ಬೆಳಗು, ಬೆಳಗುವ ಆಕಾಶವಾಗಿ ಆಕಾಶಸ್ಥಲದಲ್ಲಿ ನಿಂದು ಬರೆವ ನಾನು–ಜಗತ್ತು, ಈ ಜಗತ್ತಿಗೆ ಹೊರತಾಗಿರುವ ಲೋಕಜಗತ್ತನ್ನು ನೋಡಿದರೆ ಮತ್ತೆ ಕಾಣುವುದೇನು? ಅರಿವಿನ ನೆಲದ ಮಟ್ಟದಲ್ಲಿ, ಅಜ್ಞಾನ, ಖಂಡಿತ ದೃಷ್ಟಿಯಲ್ಲಿ ಕಾಗೆ ಬೇರೆ ಗುಬ್ಬಿ ಬೇರೆ, ಮಳೆ ಗಾಳಿ ಚಳಿ, ನಾನು ನೀವು, ರಾಡಿ ರಜ್ಜು ಆಕಾಶ ಗುಡುಗು ಮಿಂಚು, ನನ್ನ ತಲೆ ತಲೆಯ ವಿಚಾರ ಮಸಿ ಕಾಗದ—ಎಲ್ಲ ಬೇರೆ ಬೇರೆ ಬೇರೆ. ನನ್ನ ತಲೆಯಲ್ಲಿ ಮೂಡುವ ವಿಚಾರಕ್ಕೆ ಆಕಾಶದಲ್ಲಿ ಥಳಿಳೆಂದು ಹೊಳೆವ ಮಿಂಚಿಗೆ, ಆಕಾಶದ ನೀಲಕ್ಕೆ ನನ್ನ ಲೆಕ್ಕಣಿಕೆಯ ಮಸಿಯ ನೀಲಕ್ಕೆ ಏನು ಸಂಬಂಧ? ಎಲ್ಲಿಯ ಹತ್ತುಗಡೆ?

ನೆಲದ ಪ್ರಜ್ಞೆಯ ಮಾನವಪ್ರಾಣಿ ತನ್ನೊಳಗೆ ತಿಳಿದು ನೋಡಿದರೆ, ತನ್ನೊಳಗೆ ಇಳಿದು ಅದೇ ಮಾರ್ಗವಾಗಿ ವಿಶ್ವಭೂತಪ್ರಪಂಚದಲ್ಲಿ ಇಳಿದು ನೋಡಿದರೆ, 'ಅಹಂ ಬ್ರಹ್ಮಾಸ್ಮಿ' 'ಅಯಮಾತ್ಮಾ ಬ್ರಹ್ಮ'ವನ್ನು, ತನ್ನ ಅರಿವಿನಿಂದ ತಾನು ತನ್ನನ್ನು, ತನ್ನ ನಿಜದಿರವಾದ ಬ್ರಹ್ಮವಿಸ್ತಾರವನ್ನು ಕಾಣುತ್ತಾನೆ, 'ಪಶ್ಯತಿ'. ಈ ತನ್ನ ನಿಜವಿಸ್ತಾರದಲ್ಲಿಯೆ ವಿಶ್ವಪ್ರಪಂಚ ಅಂಕುರ ಪಲ್ಲವ ಶಾಖೆ ಪುಷ್ಪ ಫಲಗಳನ್ನು ಲೆಕ್ಕಗೆಟ್ಟು ಹೊತ್ತು ಬೆಳೆದು ನಿಂತಿರುವುದನ್ನು, 'ಪಶ್ಯತಿ,' ಅರಿವಿನ ಕಣ್ಣಲ್ಲಿ ಪ್ರತ್ಯಕ್ಷವಾಗಿ ನೋಡುತ್ತಾನೆ. 'ತನಗೆ ತಾನು ಅನ್ಯವಲ್ಲ' 'ಸರ್ವಂ ಖಲು ಇದಂ ಬ್ರಹ್ಮ' 'ಸರ್ವಂ ಲಿಂಗಮಯಂ ಜಗತ್' 'ಸರ್ವಂ ಚಿಜ್ಜ್ಯೋತಿಃ' ಎಂದು ತಾನೇ ಎಲ್ಲೆಲ್ಲಿ ಹಬ್ಬಿ ಹರವಿರುವುದನ್ನು ಕಾಣುತ್ತಾನೆ. ನೆಲದ ಪ್ರಜ್ಞೆಗೆ ಮಳೆ ಆಕಾಶ, ಕಲ್ಲು ವಿಚಾರ, ಹೂವು ತೆರೆ, ಪರ್ವತ ಪ್ರೇಮ–ಬೇರೆಬೇರೆಯಾಗಿ ಒಂದಕ್ಕೊಂದು ಸಂಬಂಧವಿಲ್ಲದ ಸಂಗತಿಗಳಾಗಿ ತೋರಿದರೆ ನೆಲದ ಮರೆಯ 'ನಿಧಾನಪ್ರಜ್ಞೆ'ಗೆ 'ಸ್ವಯಂಪ್ರಜ್ಞೆ'ಗೆ 'ಸ್ವಯಂಜ್ಯೋತಿಃಪ್ರಜ್ಞೆ'ಗೆ 'ಎಲ್ಲ ತಾನು' ಕಾಣುತ್ತದೆ; 'ತಾನು ಎಲ್ಲ' ಪ್ರತ್ಯಗ್ಗೋಚರವಾಗುತ್ತದೆ. ಸ್ವಾನುಭಾವಗಮ್ಯವಾದ ಈ ಗೋಚರ, ನನ್ನ ಕಣ್ಣಿಗೆ ನೀವು ಗೋಚರ. ನಿಮ್ಮ ಕಣ್ಣಿಗೆ ನಾನು ಗೋಚರ ಎಂದು ಹೇಳುವ 'ದ್ರಾವಿಡಪ್ರಾಣಾಯಾಮ' ಗೋಚರವಲ್ಲ. 'ನಾನು ಇದ್ದೇನೆ' ಎಂದು ನೋಡಲಿಕ್ಕೆ ಕಣ್ಣು ಕಿವಿ ಮನ ಬುದ್ಧಿ ದೀವಿಗೆ ಚಂದ್ರಸೂರ್ಯರು ಬೇಕಿಲ್ಲ. ಚಿನ್ನದಲ್ಲಿ ಬಣ್ಣ ಸ್ವಯಂಸಿದ್ಧವಾಗಿ ಇರುವಂತೆ ಇರವಿನಲ್ಲಿ ಅರಿವು ಸದಾ ಸನ್ನಿಹಿತವಾಗಿದೆ. ಈ ಇರವಿನ ಅರಿವೇ ತನಗೆ ಮೋಹರವಾಗಿ ಮುತ್ತಿರುವ ದೇಹ ಪ್ರಾಣ ಮನ ಬುದ್ಧಿ, ನೆಲ ನೀರು ಗಾಳಿ ಬೆಂಕಿ ಬಯಲುಗಳನ್ನೆಲ್ಲ ಓರೆಮಾಡಿ, 'ಬ್ರಹ್ಮ ತಾನು ಎಲ್ಲ'ವನ್ನು ಕಂಡು, 'ತಾನು ಬ್ರಹ್ಮ' 'ಬ್ರಹ್ಮವಾದ ತಾನು ಎಲ್ಲ' ಎಂದು ಸಾರಿ ಹೇಳಿದೆ. ಈ 'ಸರ್ವಂ ಖಲ್ವಿದಂ ಬ್ರಹ್ಮ' 'ಅಯಮಾತ್ಮಾ ಬ್ರಹ್ಮ'–ಎಂಬ ಅನುಭವ ನಮಗಿಲ್ಲದಿದ್ದರೂ ಈ ಅನುಭವ ಪರಮ ಸತ್ಯಾನುಭವವೆಂದು ನಾವೆಲ್ಲ ಒಪ್ಪುತ್ತ ಬಂದಿದ್ದೇವೆ. ದೇಶವಿದೇಶಗಳಲ್ಲಿ ಇಂಥ ಬ್ರಹ್ಮಾನುಭವ ಅಲ್ಲಲ್ಲಿ ಮೂಡಿ ತೋರಿದೆ. ಭಾರತೀಯರ ಈ ದಿವ್ಯಾನುಭವ ಸಾಕಷ್ಟು ಪ್ರಚಲಿತವಾಗಿದೆ, ಪ್ರಚಾರವಾಗಿದೆ. ಆದರೆ

ಪರಬ್ರಹ್ಮದಲ್ಲಿ ಪ್ರಪಂಚದ ಸೃಷ್ಟಿಯಾಮದು ಪೂಜೆಯ ಉದ್ದೇಶವಾಗಿ, ಭಕ್ತಿಯ ಉದ್ದೇಶವಾಗಿ ಎಂಬ ಅನುಭವವಿಚಾರ, 'ಭಕ್ತಿಯೇ ಪಂಚಮ ಪುರುಷಾರ್ಥ'ವೆಂಬ ವಿಚಾರ, ಶರಣರ ವಿಶ್ವಜೀವನದ ಪರಮಧ್ಯೇಯದ 'ಉದ್ದೇಶ' ವಿಚಾರ ತತ್ತ್ವಜಿಜ್ಞಾಸುಗಳ ಗಮನವನ್ನು ಸಾಕಷ್ಟು ಸೆಳೆದಂತೆ ತೋರುವುದಿಲ್ಲ.

ವಿಶ್ವಸೃಷ್ಟಿಯ ಮೂಲ ಉದ್ದೇಶ, ಚರಮ ಉದ್ದೇಶ, ಪರಮ ಉದ್ದೇಶ ಪೂಜೆ. ವಿಶ್ವಭೂತಪ್ರಪಂಚದ ಹಲವು ನಾಮ ಹಲವು ರೂಪ ಹಲವು ಕ್ರಿಯಾವ್ಯಾಪಾರದಲ್ಲಿ ಮೇಲೆ ಮೇಲೆ ಜಡ, ಜಡಚೈತನ್ಯ, ಪ್ರಾಣಚೈತನ್ಯ ಭಾವಚೈತನ್ಯಗಳು ಅನಿರ್ದಿಷ್ಟ ಸಂಸಾರದ 'ವೃಥಾವಿಲಾಸ'ವನ್ನು ವ್ಯವಹರಿಸುತ್ತಿದ್ದರೂ ಈ ವಿಶ್ವಪ್ರಪಂಚಪುರುಷನ ಅನಂತ ಕರ್ಮವ್ಯವಹಾರದ ಮರೆಯಲ್ಲಿ ಒಳಹೊರಗೆ ಲಿಂಗ ತನ್ನನ್ನು ಅಂದರೆ ಲಿಂಗವನ್ನು ಪೂಜಿಸುತ್ತಿರುವ ದಿವ್ಯಪೂಜಾಸೌಂದರ್ಯವನ್ನು ಕಂಡಿದ್ದಾರೆ, ಉಂಡಿದ್ದಾರೆ ಶರಣರು. ಮತ್ತೆ ತಾವೇ ಲಿಂಗವಾಗಿ ಲಿಂಗಪೂಜೆ ಮಾಡಿ, ವಿಶ್ವಬ್ರಹ್ಮಾಂಡ ಜೀವನದ ಪರಮರಹಸ್ಯ 'ಲಿಂಗಪೂಜೆ' ಎಂದು ಹೇಳುತ್ತಾರೆ ಶರಣರು. ಪೂಜೆಗಾಗಿ ಪ್ರಾರಂಭವಾದ ಪ್ರಕೃತಿಯ ಶಕ್ತಿವಿಲಾಸ, ಅನಂತ ಸೃಷ್ಟಿಯ ವಿಕಾರವಿಲಾಸ ಲಿಂಗಪೂಜೆಯ ಮಹಾಮೂಲವನ್ನು ಹೊರಗೆ ಮರೆತು ವಿಲಾಸವಾಡಿದರೂ ಒಳಗೆ ಪೂಜೆ ನಡೆಯದ ನಿಮಿಷವೆ ಇಲ್ಲ; ಒಳಗೆ ಪೂಜೆ ಮಾಡದ ಅಣುರೇಣುವಿಲ್ಲ; ಈ ವಿಶ್ವಪರಿಪೂರ್ಣವಾದ 'ಭರಿತಪೂಜೆ'ಯಲ್ಲಿ ಎಳ್ಳುಮೊನೆಯಷ್ಟು ವಿರಳವಿಲ್ಲ. ಈ ವಿಶ್ವಭರಿತ ಪೂಜೆಯನ್ನು ಪೂಜಿಸುವಾತನೆ ಲಿಂಗಜಂಗಮ. ಮಹಾಲಿಂಗದ ಮಹಾಬೆಳಗಾಗಿ ಜಗದ್‌ಭರಿತವಾಗಿ ಇರುವ ಜಂಗಮಲಿಂಗ ತನ್ನ ಬರಿಯರಿವಿನ ಕರಸ್ಥಲದಲ್ಲಿ ನಿಷ್ಕಲ ಲಿಂಗವನ್ನು, ಇರವಿನ ಬಯಲನ್ನು, ನಿರವಯಲ ಲಿಂಗವನ್ನು ಧರಿಸಿ, ಅಧೋಮುಖವಾಗಿ ಪ್ರವರ್ತಿಸುತ್ತಿರುವ ವಿಶ್ವಭೂತ ದ್ರವ್ಯದಿಂದ ಪೂಜಿಸುವ ಅರ್ಚಿಸುವ ಅರ್ಪಿಸುವ ಆನಂದಿಸುವ ಪೂಜೆಯನ್ನು ಅವಿರಳವಾಗಿ ನಿತ್ಯನಿರಂತರವಾಗಿ ಅಖಂಡ ಪರಿಪೂರ್ಣವಾಗಿ ನಡೆಸಿದ್ದಾನೆ. ನೆಲವೆಲ್ಲ ಆಕಾಶವಾಗುವವರೆಗೆ ಈ ಪೂಜೆ ನಡೆಯಲೆ ಬೇಕು; ಆಕಾಶವೆಲ್ಲ ನೆಲವಾಗುವ ವರೆಗೆ ನಡೆಯಲೆ ಬೇಕು ಈ ಲಿಂಗಪೂಜೆ. ಹೀಗಲ್ಲದಿದ್ದರೆ, ಈ ಪೂಜೆ—ವಿಶ್ವಭರಿತ ಲಿಂಗಪೂಜೆ—ನಿಮಿಷ ಕಾಲ ನಿಂತರೆ ಶರಣರ ಮಹಾಮೂಲ ಪರಮಗಂಭೀರ ಸ್ವಾನುಭಾವ, ಅವರ ಷಟ್ಸ್ಥಲಮಾರ್ಗದ ಸುಜ್ಞಾನ ಸದ್ಭಕ್ತಿ, ಅವರ ಅರಿವು ಅರಿವಿನ ಆಚರಣೆ, ಅವರ ಕಾಯಕ ದಾಸೋಹ, ಒಟ್ಟಾರೆ ಅವರ ದಿವ್ಯಜೀವನ ದರ್ಶನವೆಲ್ಲ ಅರ್ಥವಿಲ್ಲದೆ ಆಧಾರವಿಲ್ಲದೆ ನಿದ್ದೆಯ ನೆಳಲಲ್ಲಿ ಬಯಲುಗನಸಾಗಿ ನಿಲ್ಲಬೇಕಾಗುತ್ತದೆ.

ಒಂದು ಎರಡಾದ ಉದ್ದೇಶ ಲಿಂಗಪೂಜೆ. ಎರಡು ಎರಡಾಗಿ ವರ್ತಿಸಿದರೆ ಪ್ರಾಕೃತಪೂಜೆ; ಎರಡು ಒಂದಾಗಿ ಎರಡರಲ್ಲಿ ವರ್ತಿಸಿದರೆ ಲಿಂಗಪೂಜೆ. ವಿಶ್ವಸೃಷ್ಟಿಯ ಈ ಕಾರಣಬೀಜ ಸೃಷ್ಟಿಕಾರ್ಯದ ವಿಸ್ತಾರವೃಕ್ಷವನ್ನೆಲ್ಲ ವ್ಯಾಪಿಸಿರಲೆಬೇಕು. ಮಾವಿನ ಬೀಜದ ಸತ್ತ್ವಗುಣ ಧರ್ಮ ರಸ ರುಚಿ ಪರಿಮಳ ಮಾವಿನ ಮರದ ಬೇರು ಬೊಡ್ಡೆ ಶಾಖೆ ಎಲೆ ಹೂ ಕಾಯಿ ಹಣ್ಣಿನ ಅಂಗ ಅಂಗದಲ್ಲಿ ತುಂಬಿರುವಂತೆ

ಲಿಂಗದೇವನ ಮೂಲ ಉದ್ದೇಶ ದೇವನ ಅಂಗವೃಕ್ಷವಾದ ವಿಶ್ವವಿಸ್ತಾರವನ್ನೆಲ್ಲ ವ್ಯಾಪಿಸಿ ಕೊಂಡಿರಲೆ ಬೇಕು.[೧]

ನನ್ನ ನಿಮ್ಮ ಜೀವನೋದ್ದೇಶ ನಮಗೆ ತಿಳಿಯದಿರಬಹುದು; ತಿಳಿದರೂ ಮರೆತು ಹೋಗಬಹುದು, ಪೂರೈಸದಿರಬಹುದು, ಪೂರೈಸುವ ಸಾಮರ್ಥ್ಯವಿಲ್ಲದಿರಬಹುದು, ಸಲಕರಣೆ ಇಲ್ಲದಿರಬಹುದು. ಆದರೆ ದೇವನ ದಿವ್ಯೋದ್ದೇಶ? ಮರೆವ ದೇವ ದೇವನಲ್ಲ. ಅಶಕ್ತ ದೇವ ದೇವನಲ್ಲ, ಉಪಕರಣವಿಲ್ಲದ ದೇವ ಸ್ವಯಂಪೂರ್ಣನಲ್ಲ. ನಮ್ಮಂತೆ ನಮ್ಮ ದೇವರಲ್ಲ; ದೇವರು ದೇವರಲ್ಲದೆ, ಪೂಜೆಯನ್ನು ಇರಲೊಲ್ಲದ ನಾವಲ್ಲ. ವಿಶ್ವವೆ ದೇಗುಲ—ದೇವರ ಮನೆ, ಭೂತಪ್ರಪಂಚವೆ ಪೂಜೋಪಕರಣ, ಚಿದ್ಬ್ರಹ್ಮಾಂಡವೆ ಕಾಯವಾಗಿರುವ ಸುಜ್ಞಾನ ಜಂಗಮಲಿಂಗವೆ ಪೂಜೆಗಾರ. ಪ್ರಪಂಚಕ್ರಿಯಾಕಲಾಪ ವನ್ನು ಲಿಂಗದೆಡೆಗೆ ಕೊಂಡೊಯ್ವ ಆತನ ದಿವ್ಯಶಕ್ತಿಯೆ ಲಿಂಗಭಕ್ತಿ, ಈ ಭಕ್ತಿಯನ್ನು ಅರ್ಪಿಸಿಕೊಂಡು ಪ್ರಸನ್ನ ಪ್ರಸಾದವಾಗಿ ಆನಂದಿಸುತ್ತಿರುವುದೆ ನಿಃಕಲಲಿಂಗ. ಈ ಬಯಲುಲಿಂಗದ ಮಹಾಬೆಳಗು ಪರಮ ಚೈತನ್ಯವೆ ಜಂಗಮವೆಂಬ ಮಾತು ಮತ್ತೆ ಹೇಳುವ ಕಾರಣವಿಲ್ಲ.

ಗಾಳಿ ಬೀಸುತ್ತದೆ, ಮಳೆ ಬೀಳುತ್ತದೆ, ಬಿಸಿಲು ಸುರಿಯುತ್ತದೆ, ಭೂಮಿ ಬೆಳೆಯು ತ್ತದೆ, ಸೂರ್ಯಚಂದ್ರ ನಕ್ಷತ್ರಗಣ ಹೊಳೆಯುತ್ತವೆ, ನಾನು ಬರೆಯುತ್ತೇನೆ, ನೀವು

---

೧. ಇಲ್ಲಿ ಕೇಳಿ:

ಅಖಂಡಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದೊಡೆ:
ಸದ್ಯೋಜಾತ ಮುಖದಿಂದಾದ ಪೃಥ್ವಿ,
ಪತ್ರಿ ಪುಷ್ಪ ಲಿಂಗಕ್ಕೆ ಬೇಕೆಂದು ಅನಂತ ಪತ್ರಿಪುಷ್ಪಗಳಿಂದ ಅರ್ಚಿಸುತ್ತಿಹುದು.
ವಾಮದೇವಮುಖದಿಂದಾದಪ್ಪು, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂದು
ಸಪ್ತ ಸಮುದ್ರ ದಶಗಂಗೆಗಳ ಕುಂಭವ ಮಾಡಿ,
ಕೆರೆಬಾವಿಗಳ ಪಂಚಪಾತ್ರೆಯ ಮಾಡಿ ಮಜ್ಜನ ನೀಡಿಸುತ್ತಿಹುದು.
ಅಘೋರಮುಖದಿಂದಾದಗ್ನಿ, ಲಿಂಗಕ್ಕೆ ಧೂಪ ದೀಪ ಆರತಿಗಳಾಗಬೇಕೆಂದು
ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು.
ತತ್ಪುರುಷ ಮುಖದಿಂದಾದ ವಾಯು, ಲಿಂಗಕ್ಕೆ ಜಪವ ಮಾಡಿಸುತ್ತಿಹುದು.
ಈಶಾನ ಮುಖದಿಂದಾದ ಆಕಾಶ.
ಲಿಂಗಕ್ಕೆ ಭೇರಿ ಮೊದಲಾದ ನಾದಂಗಳ ಬಾರಿಸುತ್ತಿಹುದು.
ಗೋಪ್ಯಮುಖದಿಂದಾದ ಆತ್ಮನು ಲಿಂಗಕ್ಕೆ ಸಿಂಹಾಸನವಾಗಿರ್ಪುದು.
ಮನ ಚಕ್ಷುವಿನಿಂದಾದ ಚಂದ್ರಸೂರ್ಯರು ದೀವಿಗೆಗಳಾಗಿಹರು.
ಇಂತಪ್ಪ ಘನವಸ್ತುವು ಎರಡಾಗಿ
ತನ್ನ ವಿನೋದಕ್ಕೆ ಅರ್ಚಿಸಿ ಕೊಂಬಾತನು ತಾನೇ; ಅರ್ಪಿಸುವಾತನು ತಾನೇ.
ಇಂತಪ್ಪ ಘನವಸ್ತುವು ಎನ್ನ ಕರಸ್ಥಲದೊಳಗೆ ಚುಳುಕಾಗಿ ನಿಂದ ನಿಲವ
ಎನ್ನೊಳರುಹಿದಾತ ನಮ್ಮ ಶಾಂತ ಕೂಡಲ ಸಂಗಮದೇವ.

ಗಣ. ವೀರ. ವ. ಪು. ೮೯, ವ. ೧೪.

ಮಲಗಿದ್ದೀರಿ, ಅವರ ವ್ಯಾಪಾರ ಅಧಿಕಾರ, ಇವರ ಒಕ್ಕಲತನ ಉದ್ಯೋಗ ನಡೆದಿವೆ. ಹಕ್ಕಿ ಹಾಡುತ್ತಿವೆ, ಹೊಳೆ ಹರಿಯುತ್ತಿವೆ, ಹಡಗು ವಿಮಾನ ಗಾಡಿಗಳು ನೆಲ ನೀರು ಗಾಳಿಯ ಮೇಲೆ ನಡೆಯುತ್ತಿವೆ; ಪುಷ್ಪದಲ್ಲಿ ಪರಿಮಳ ಹಣ್ಣಿನಲ್ಲಿ ರಸ ರತ್ನದಲ್ಲಿ ಕಾಂತಿ ಚಿಮ್ಮುತ್ತಿವೆ; ತಲೆಯಲ್ಲಿ ವಿಚಾರ, ಎದೆಯಲ್ಲಿ ರಾಗ ದ್ವೇಷ ಹೊಮ್ಮುತ್ತಿವೆ; ಕಣ್ಣಲ್ಲಿ ನೋಟ ಕೈಯಲ್ಲಿ ಮಾಟ ಎದ್ದು ಹರಿದಾಡುತ್ತಿವೆ. ಅನಂತನಾಮವಾಗಿ ಅನಂತರೂಪದಲ್ಲಿ ಅನಂತವಾಗಿ ಚೇತನಿಸುತ್ತಿರುವ ಕ್ರಿಯಾಪ್ರಪಂಚ ಮೂಡಿತ್ತೆಲ್ಲಿ? ಆಡಿತ್ತೆಲ್ಲಿ? ಮುಳುಗಿತ್ತೆಲ್ಲಿ? ಮೂಡಿದ ಕಾರಣವೇನು? ಆಡಿದ ಕಾರಣವೇನು? ಮುಳುಗಿದ ಕಾರಣವೇನು? ಕಡ್ಡಿ ಅಲುಗಲಿ ಗುಡ್ಡ ಚಲಿಸಲಿ, ವಿಚಾರ ಏಳಲಿ, ಚಂದ್ರ ಮೂಡಲಿ, ಹಕ್ಕಿ ಹಾರಲಿ, ವಿಮಾನ ಉಡ್ಡಾಣ ಮಾಡಲಿ—ವಿಶ್ವದಲ್ಲಿ ತೋರುತ್ತಿರುವ ಯಾವುದೇ ಕ್ರಿಯಾರೂಪವನ್ನು ಹೆಸರಿಟ್ಟು ಹೇಳಿರಿ, ಅದೆಲ್ಲ ವಿಶ್ವಚೈತನ್ಯದ ಕೋಟಿ ಮುಖವೇ. ಈ ಕೋಟಿ ರೂಪವೆಲ್ಲ ನಾವು ನೀವು ಹಿಂದೆ ನೋಡಿರುವಂತೆ ಚಿಚ್ಚೈತನ್ಯಸಾಗರದ ತರಂಗ ವೀಚಿಕೆ ಬುದ್ಬುದ ಶೀಕರಗಳೆ. ಈ ಸಾಗರ ಶಿವನ ಸಾಗರ, ದಿವ್ಯದ ಶಕ್ತಿಸಮುದ್ರ. ಗಾಳಿ ಬೀಸುತ್ತದೆ–ಗಾಳಿಯ ತರಂಗ, ವಿಚಾರ ಏಳುತ್ತದೆ–ವಿಚಾರ ತರಂಗ, ಹಕ್ಕಿ ಹಾಡುತ್ತದೆ–ಧ್ವನಿಯ ತರಂಗ, ಭಾವತರಂಗ ಜಲತರಂಗ ಪ್ರಭಾತರಂಗ ಪ್ರಾಣತರಂಗ–ಈ ಎಲ್ಲ ತರಂಗ ದಿವ್ಯಶಕ್ತಿಸಮುದ್ರದ ಒಳಗಿಂದ ಮೂಡಿ ಮೇಲೆ ಆಡಿ ಮತ್ತೆ ಒಳಗೆ ಅಡಗಿದರೆ ವಿಶ್ವಪ್ರಪಂಚದ ಕ್ರಿಯಾಕಲಾಪವನ್ನು ಏನೆಂದು ಕರೆಯಬೇಕು?

ವಿಶ್ವದ ಗಭೀರ ಅಂತರಂಗವನ್ನು ನೋಡದ, ನೋಡಲೊಲ್ಲದ ನಾವು ವಿಶ್ವ ಪ್ರಪಂಚದ ವರ್ತನೆಯನ್ನು, ತೋರಿ ಕೆಡುವ ಜನನ ಮರಣದ ಸಂಸಾರಸಾಗರವೆಂದು ಕರೆಯುತ್ತೇವೆ. ಇದು ನಮ್ಮ ತಪ್ಪಲ್ಲ. ಕಣ್ಣು ಕಾಣದೆ ಆನೆಯನ್ನು ಮೊರವೆಂದು ಕಂಬವೆಂದು ಒನಕೆಯೆಂದು ಕರೆದರೆ ತಪ್ಪೇನು? ಅದು ದೃಷ್ಟಿದೋಷ. ಕಣ್ಣಿದ್ದವರು ಆನೆಯನ್ನು ಕಂಡು ಆನೆ ಆನೆಯೆಂದು ಹೇಳಿದರೆ, ಕಾಣದವರು ಆ ಮಾತನ್ನು ಅಲ್ಲಗಳೆದರೆ ಅದು ತಪ್ಪು. ಮಹಾಲಿಂಗದ ಮಹಾಬೆಳಗು ಅರಿವು ತುಂಬಿದ ಪರಿಪೂರ್ಣ ಚೈತನ್ಯ ಸಾಗರವಾಗಿರುವ ಲಿಂಗ-ಜಂಗಮ, ತನ್ನಲ್ಲಿ ಮೂಡಿ ವಿಲಾಸಮಾಡಿ ತನ್ನಲ್ಲಿಯೆ ಲಯವಾಗುತ್ತಿರುವ ಪ್ರಪಂಚದ ವಿಶ್ವಮುಖ ಪ್ರವರ್ತನೆಯನ್ನು, ತನ್ನಲ್ಲಿ ನಿರಂತರ ನಡೆದಿರುವ ತನ್ನ ಕ್ರಿಯಾಪ್ರಪಂಚವನ್ನು ತನ್ನ ಪೂಜೆ, ಲಿಂಗಪೂಜೆ, ಲಿಂಗಜಂಗಮದ ಪೂಜೆ, ವಿಶ್ವಾಂತರಂಗ ಬಹಿರಂಗದಲ್ಲಿ ನಿಮಿಷದ ಬಿಡುವಿಲ್ಲದೆ, ಕಣದ ಎಡೆಯಿಲ್ಲದೆ ನಡೆದಿರುವ ಲಿಂಗಗಂಭೀರ ಸಹಜಪೂಜೆಯೆಂದು, 'ಆನೆಯನ್ನು ಆನೆ' ಎಂದು ಹೇಳಿದರೆ ತನ್ನನ್ನು ತಾನು ಹೇಳುತ್ತಾನೆ. ಹೀಗೆ ತನ್ನ ಪೂಜೆಯ ಅನುಭವ ಹೇಳುವುದು ಜಂಗಮ ಲಿಂಗಕ್ಕೆ ಸ್ವಾಭಾವಿಕ. ಆ ಪೂಜೆಯನ್ನು ಕಾಣಲರಿಯದ ನಾವು ವಿಶ್ವಲಿಂಗಪೂಜೆಯ ಅನುಭವವನ್ನು ಅಲ್ಲಗಳೆವುದು ತಪ್ಪು; ಇಂಥ ಅನುಭವ ನಮಗೆ ಇಲ್ಲಾ ಎಂದು ಹೇಳಿದರೆ ತಪ್ಪಲ್ಲ. ಇಂಥ ಸ್ವಯಂಭಕ್ತಿ ಸ್ವಯಂಪೂಜೆ ಸ್ವಯಂಸಮರ್ಪಣ ಸ್ವಯಂ ಪ್ರಸಾದ ಸ್ವಯಂಸುಖ, ಸ್ವಯಂಲೀಲೆ ಸ್ವಯಂವಿನೋದದ ಪರಮ ಗಂಭೀರದರ್ಶನವೆ ವಿಶ್ವಪ್ರಪಂಚದ ಸೃಷ್ಟಿ ಸ್ಥಿತಿ ಲಯಕ್ಕೆ ಪೂಜೆಯೆ ಮಹಾಮೂಲ, ಪೂಜೆಯೆ

ಪರಮ ಫಲವೆಂದು, ವಿಶ್ವಬ್ರಹ್ಮಾಂಡಗಳನ್ನೆಲ್ಲ ಪೂಜಾಮಂದಿರವೆಂದು ಕಣ್ಣಾರೆ ಕಂಡಿದೆ, ಮನವಾರೆ ನೆನೆದು ಕಂಡಿದೆ. ಭಾವವಾರೆ ಭಾವಿಸಿದೆ. ಆ ದರ್ಶನವೆ ಭಕ್ತಿಭರಿತವಾಗಿ ಮರಣಕ್ಕೆ ಹೊರಗಾಗಿ ಜೀವಿಸಿದೆ, ಕತ್ತಲೆಗೆ ಹೊರಗಾಗಿ ಪ್ರಜ್ವಲಿಸಿದೆ, ಸುಖದುಃಖಕ್ಕೆ ಹೊರಗಾಗಿ ನಿರಾಳದ ಮಹಾಂತನಿಲವಾಗಿ ಜಗದ್ಭರಿತ ಜಂಗಮಲಿಂಗವಾಗಿ ನಿಂದಿದೆ. ಈ ನಿಲವಿಗೆ ಗಾಳಿ ಪೂಜೆ ನೆಲ ಪೂಜೆ, ಪರ್ವತ ಪೂಜೆ, ಸಮುದ್ರ ಆಕಾಶಗಳು ಪೂಜೆ, ಕಾವ್ಯಕಲೆ ಪೂಜೆ, ವಿಜ್ಞಾನ ಪೂಜೆ, ವಿಚಾರ ಆಚಾರ ಪೂಜೆ, ವಿಮಾನ ಹಡಗು ಪೂಜೆ, ನಿದ್ರೆ ಪೂಜೆ ಎಚ್ಚರ ಪೂಜೆ, ಕಾಗೆ ಪೂಜೆ ಕೋಗಿಲೆ ಪೂಜೆ, ಮಾವು ಪೂಜೆ ಬೇವು ಪೂಜೆ—ಎಲ್ಲ ಎಲ್ಲ ಪೂಜೆ ಈ ನಿಲವನ್ನು ಸಿಂಗಾರವಾಗಿ ಪೂಜಿಸುತ್ತಿವೆ; ಎಲ್ಲ ಎಲ್ಲ ರಾಗ ರತಿ ಪ್ರೀತಿ ಪ್ರೇಮ ವಾತ್ಸಲ್ಯ ಮೋಹ ಸರ್ವರಮಣೀಯವಾಗಿ ಲಿಂಗ ಭಕ್ತಿಯಾಗುವ ಭರದಲ್ಲಿವೆ. ಹಾಗಾದರೆ ದಾರಿದ್ರ್ಯ ದ್ವೇಷ ವೈಷಮ್ಯ ಅಸೂಯೆ ಅನ್ಯಾಯ ಸ್ವಾರ್ಥ ಅಜ್ಞಾನ ಮಾಯೆ ವಂಚನೆ ಕಪಟ ಕುಟಿಲ ಕುಹಕಗಳು? ರೋಗ ರುಜಿನ ಭೂಕಂಪ ಜ್ವಾಲಾಮುಖಿ ಜಲಪೂರ ಜಲಪ್ರಳಯ ಹುಲಿ ಸಿಂಹ ಕಾಡಾನೆ ಕಾಡುಕೋಣ ಸಿಡಿಲು ಗುಡುಗು ವಿಷವಾಯು ಬಾಂಬು ಯುದ್ಧ ಪ್ಲೇಗು ಕೊಲೆ ಸುಲಿಗೆ ಸಿಲುಬೆ ಹೆಮ್ಲಾಕ್—ಇಂಥ ಪಾಪರಾಶಿಯ ಅರ್ಥವೇನು? ಇದನ್ನೂ ಪೂಜೆ ಎಂದೆ ಕರೆದರೆ ಅರ್ಥಕ್ಕೆ ಅನರ್ಥ ಮಾಡಿದಂತೆ! ಕತ್ತಲೆಗೆ ಬೆಳಗು ಎಂದು ಅರ್ಥ ಹೇಳಿದರೆ, ಬೆಂಕಿಗೆ ಬೆಳುದಿಂಗಳು ಎಂದು ಕರೆದರೆ, ಸಮುದ್ರ ಪರ್ವತ ಎಂದು ತೋರಿಸಿದರೆ. ನರಕ ಸ್ವರ್ಗವೆ ಎಂದು ಅರ್ಥಯಿಸಿದರೆ ಬಂಡೆಗಲ್ಲೂ ಒಪ್ಪಲಿಕ್ಕಿಲ್ಲ...ಹೀಗೆ ಮುಂತಾಗಿ ನೀವು ಆಕ್ಷೇಪಿಸುವುದು ಅತ್ಯಂತ ಯೋಗ್ಯ. ಉರಿಯ ಹೊಂಡದಲ್ಲಿ ಎರಡು ತಾಸು ಈಸಾಡಿ ಬಂದೆ ಎಂದು ಹೇಳಿದರೆ, ಹೀಗೆ ಹೇಳುವ ಮಾತನ್ನು ನಂಬಿದರೆ ನಂಬುವರ ತಲೆ ತಲೆಯಲ್ಲ. ಹೌದು. ನಿಮ್ಮ ಆಕ್ಷೇಪ ಸತ್ಯಪೂರ್ಣ. ಆದರೆ ನನ್ನ ಬಿನ್ನಹ ಇಷ್ಟೇ: ಈ ಪಾಪರಾಶಿಯನ್ನು ಬಿಡಿಸಿ ಬಿಡಿಸಿ ನೋಡಬೇಕು, ಇನ್ನೂ ನೋಡಬೇಕು. ಇನ್ನೂ ಒಳಗೆ ಒಳಗೆಲ್ಲ ಬಿಚ್ಚಿ ಬಿಚ್ಚಿ ನೋಡಬೇಕು. ಭೂಕಂಪ ಜ್ವಾಲಾಮುಖಿ ಜಲಪ್ರಳಯ ಗುಡುಗು ಸಿಡಿಲು ಹುಲಿ ಸಿಂಹಗಳಿಂದ ಹೊರಡುವ ಕೇಡಿನ ಖಣಿಯ ಒಳಗೆ ಹೋಗಿ. ಅವು ಜಗತ್ತಿಗೆ ಕೇಡಿನ ರಾಶಿಯನ್ನು ಒಟ್ಟುತ್ತಿರುವುದೇಕೆ ಎಂದು ಅಂತಃಪರೀಕ್ಷೆ ಮಾಡುವ ಶಕ್ತಿ ಮಾನವನಿಗಿನ್ನೂ ಬಂದಂತೆ ತೋರುವುದಿಲ್ಲ. ಬೇರೆ ಕಡೆ ನೋಡಿದಂತೆ ಈ ಅಧಃಪ್ರಪಂಚಕ್ಕೆ ಪಾಪ ಪುಣ್ಯ, ನ್ಯಾಯ ಅನ್ಯಾಯದ ಅರಿವು. ವಿಚಾರ ಇದ್ದಂತೆ ತೋರುವುದಿಲ್ಲ. ಆದರೆ ಮಾನವನಿಂದ ಹೊರಹೊರಟು. ತನಗೆ ಭಿನ್ನವೆಂದಿರುವ ಅನ್ಯರನ್ನು ಅಥವಾ ಅನ್ಯವನ್ನು, ಮತ್ತೆ ತಿರುಗಿ ತನ್ನನ್ನೆ ಸುಟ್ಟು ಸೂರೆಯಾಡಿ. ಕೊಂದು ಕೂಗುತ್ತಿರುವ ಪಾಪದ ಪರಂಪರೆಯನ್ನು ಅಂತಃಪರೀಕ್ಷಿಸಿ ನೋಡುವ ಶಕ್ತಿ ಮಾನವನಿಗಿದೆ. ತಿಳಿಯದೆ ನಡೆದಿದೆ ಪಾಪದ ಪಲ್ಲಟ ಪೂಜೆ. ಸ್ವಾರ್ಥದ ಪ್ರಬಲ ಪ್ರೇರಣೆಯಿಂದ ಬೆಳೆಯುತ್ತ ಬಂದಿದೆ ಪಾಪದ ಹೊಲ. ಮರವೆಯ ಪಂಜರವಾದ 'ನಾನಿ' ನಲ್ಲಿ ಸಿಕ್ಕ, ಒಂದು ದೇಹ ಪ್ರಾಣ ಮನ ಭಾವದ ಸೆರೆಗತ್ತಲೆಯಲ್ಲಿ ನಾನು ನಾನೆ ಆಗಿರುವ ಅಹಂಪ್ರಜ್ಞೆಯ ಅಭೇದ್ಯಕೋಟೆಯ ಒಳಹೊರಗೆ ಪರಿದಾಡುತ್ತಿವೆ ಪಾಪದ ಕರಾಳ

ಗಳು. ಆದರೆ ಎಂಥ ಮಹಾಪಾಪಿಯ ಹೃದಯ ಬುದ್ಧಿಯೆ ಇರಲಿ, ಅವರ ಮೇಲೆ ಮುತ್ತಿ ಮುಸುಕಿರುವ ಉದ್ವೇಗ ಆವೇಶ ಕಳವಳ ಸಂಭ್ರಮಗಳನ್ನು ಎತ್ತಿ ತೆಗೆದು ಒಳಗೆ ನೋಡಿದರೆ ಅಲ್ಲಿ ಏನಿದೆ? ಪಾಪದ ಪೂಜೆ, ಪಾಪದಲ್ಲಿ ಭಕ್ತಿ ನಡೆದಿದೆಯೆ? ಪಾಪವನ್ನೆ ಹೃದಯಪೀಠದಲ್ಲಿರಿಸಿ ಆರಾಧಿಸುತ್ತಿದ್ದಾನೆಯೇ ಆ ಮಹಾಪಾಪಿ? ಅಂತ ರಂಗದ ಪೀಠದಲ್ಲಿ ಪಾಪವನ್ನೆ ದೇವನೆಂದು ಪ್ರತಿಷ್ಠಾಪಿಸಿ ಪೂಜಿಸಿಲ್ಲ, ಎಚ್ಚತ್ತ ಬಳಿಕ ಮಾನವ. ಅಧೋಮುಖವಾಗಿ ಹರಿವ ಪ್ರಕೃತಿಗೆ ವಶವಾಗಿ ತಾನು ಮಾಡುವ ಸರ್ವ ಕರ್ಮವ್ಯವಹಾರ 'ಪಾತಕ' ಎಂದು ತನಗೆ ತಾನೇ ಸಾರಿ ಹೇಳಿ, ತನ್ನನ್ನು ತಾನೆ ಎಚ್ಚರಿಸಿ ಕೊಳ್ಳುತ್ತ ಬಂದಿದ್ದಾನೆ, ಅಜ್ಞಾನ ಮಾಯೆ ಮೋಹದ ಸೆಳವಿನಲ್ಲಿ ಸಿಕ್ಕು ಪಾಪದ ಪಾತಾಳಕ್ಕೆ ಇಳಿದು ಬೀಳುತ್ತಿದ್ದ ಪಾತಕಿ ಮಾನವ. ಪಾಪಿಗೂ ಸಾವು ಬೇಡ, ದುಃಖ ಬೇಡ; ನಿಜವಾಗಿ ನೋಡಿದರೆ ಪಾಪ ಮಾಡುವುದೂ ಬೇಡ. ಪಾಪಿಹೃದಯದ ಗಂಭೀರದಲ್ಲಿ ಮರಣ ಮುಟ್ಟದ ಇರವಿನ ಪೂಜೆ, ದುಃಖ ಸೋಂಕದ ನಿತ್ಯಸುಖದ ಪೂಜೆ, ಮರವೆ ಮುತ್ತದ ಅರಿವಿನ ಪೂಜೆ, ಕೊರತೆ ಕುಂದಿಸದ ಪರಿಪೂರ್ಣದ ಪೂಜೆ ನಡೆದಿದೆ. ಮೇಲೆ ಮೇಲೆ ಸ್ವಾರ್ಥ ಸಂಸಾರ ಪ್ರಪಂಚದ ಪೂಜೆ ಸರ್ವಸಂಭ್ರಮ ದಿಂದ, ಅನ್ಯಾಯ ಕಪಟ ಮೋಸ ವಂಚನೆ ದರ್ಪ ಅಧಿಕಾರ ಮುಂತಾದ ಸಾವಿರ ಪೂಜಾಸಾಮಗ್ರಿಯಿಂದ ಒಳ್ಳೆ 'ಭರಭರಾಟೆ'ಯಲ್ಲಿ ನಡೆದಿದ್ದರೂ. ಈ ವಿಪರ್ಯಾಸ್ತ ವಾದ ಅಧಃಪೂಜೆಯ ಒಳಗೊಳಗೆ ಅಖಂಡ ನಿತ್ಯ ಪರಿಪೂರ್ಣವಾದ ಸತ್ಯ ಶಿವ ಸುಂದರವಾದ ನಿರಾಳದಿರವಿನ ಊರ್ಧ್ವಪೂಜೆ, ಮಾನವನ ಮರೆಯಲ್ಲಿ ಮಸುಕಾಗಿ, ಕಾಣಬಾರದಂತೆ ಕೇಳಬಾರದಂತೆ ತಿಳಿಯಬಾರದಂತೆ ಸದ್ದಿಲ್ಲದೆ, ಯಾವ ಸುದ್ದಿಯಿಲ್ಲದೆ ಸತ್ಯ ನ್ಯಾಯ ದಯೆ ದಾಕ್ಷಿಣ್ಯ ಪ್ರೇಮ ಆದರ ವಿನಯ ಗೌರವ ಸಮತೆ ಸೈರಣೆ ಮುಂತಾದ ಪಾವನ ಪರಂಪರೆಯ ಪುಣ್ಯಸಾಮಗ್ರಿಯಿಂದ 'ಶಿಶು ಕಂಡ ಕನಸಿನಂತೆ' ನಡೆದಿದೆ, ನಡೆದಿದೆ. ಇದಕ್ಕೆ ಸಾಕ್ಷಿ ಯಾರು? ಸಾಕ್ಷಿ ಯಾರು? ನಾನು ಸಾಕ್ಷಿ, ನನ್ನ ಹೃದಯ ಸಾಕ್ಷಿ. ಈ ಸಾಕ್ಷಿಯನ್ನು ನಿಮ್ಮ ಹೃದಯವೂ ನುಡಿಯಬಹುದೆಂದು ನನ್ನ ಪೂರ್ಣ ವಿಶ್ವಾಸ. ಪಾಪ ಪುಣ್ಯವನ್ನು, ಕಂಡು ಉಂಡಿರುವ ಹೃದಯಕ್ಕೆ ಪಾಪ ಬೇಕೋ ಪುಣ್ಯ ಬೇಕೋ? ಎಂದು ಕಟ್ಟಕಡೆಯ ಪ್ರಶ್ನೆ ಕೇಳಿದರೆ, ವಿಶ್ವಪ್ರಪಂಚವೆಲ್ಲ ಸರ್ವಪಾಪಮಯವಾದರೆ ಹೇಗೆ? ಸರ್ವಾಂಗ ಪುಣ್ಯಮಯವಾದರೆ ಹೇಗೆ? ಎಂದು ಕೇಳಿದರೆ, ನಿನ್ನ ಸ್ವಭಾವ ಸ್ವಧರ್ಮಕ್ಕೆ ಯಾವುದು ಒಗ್ಗುತ್ತದೆ? ಎಂದು ಕೇಳಿದರೆ, ಪ್ರಶ್ನೆಯನ್ನು ಪೂರ್ಣ ಪರೀಕ್ಷಿಸಿ ತಿಳಿದು ನೋಡಬಲ್ಲ ಮಾನವಕೋಟಿಯ ಕೋಟಿಹೃದಯ ಏನೆಂದುತ್ತರಿಸ ಬಹುದು?

ಮತ್ತೆ, ವೇದ ಆಗಮ ಉಪನಿಷತ್ತು ಗೀತೆ ಪುರಾಣ ಪುಣ್ಯಕಥೆ ಧರ್ಮಶಾಸ್ತ್ರ ನೀತಿಶಾಸ್ತ್ರ ಅಧ್ಯಾತ್ಮಶಾಸ್ತ್ರ ವೈದ್ಯಶಾಸ್ತ್ರ ಬಾಯಿಬಲ್ ಕುರಾಣ ಗುಡಿಗುಂಡಾರ ಧರ್ಮಶಾಸನ ಸ್ತೂಪಗಳು ಮೊದಲು ಹುಟ್ಟಿದುವೆಲ್ಲಿಂದ? ಮಾನವಹೃದಯದ ಗಭೀರ ಗರ್ಭದಿಂದಲೆ. ಇವಲ್ಲದೆ ಮಾನವನ ಸಾಹಿತ್ಯ ಕಲೆ ಸಂಘ ಸಂಸ್ಥೆ ಸರಕಾರ ಸಮಾಜದ ರೀತಿ ನೀತಿಗಳನ್ನು, ಉಳಿದೆಲ್ಲ ಆವರಣವನ್ನು ನೋಡಿದರೆ, ಅನ್ಯಾಯ ತಪ್ಪು ದ್ವೇಷ

ಸ್ವಾರ್ಥದಿಂದ ಪಲಕೆಲವು ಪ್ರೇರಣೆಗೊಂಡು ನಡೆದಿದ್ದರೂ, ಅವೆಲ್ಲ ಕಡೆಯ ಪಕ್ಷ ಸತ್ಯದ ಹೆಸರಿನಲ್ಲಿ, ಪ್ರೇಮ ಸಹಾಯ ಸಹಕಾರದ ಹೆಸರಿನಲ್ಲಿ, ಉದ್ಧಾರ ಅಭ್ಯುದಯ ಸರ್ವಕಲ್ಯಾಣದ ಹೆಸರಿನಲ್ಲಿ ಜೀವಿಸುತ್ತಿವೆ. ರಾಮ ರಾವಣರಲ್ಲಿ ರಾಮನನ್ನೇಕೆ ಮನ್ನಿಸಿದ್ದೇವೆ? ಪಾಂಡವರು ಕೌರವರಲ್ಲಿ ಪಾಂಡವರನ್ನು ಏಕೆ ಆರಾಧಿಸುತ್ತೇವೆ? ನಾನು ದುಷ್ಟ ನೀವು ಶಿಷ್ಟರೆಂಬ ಭೇದವಿಲ್ಲದೆ ಎಲ್ಲರೂ, ಎಲ್ಲರ ಹೃದಯಧರ್ಮವೂ ರಾಮ ಧರ್ಮರನ್ನು ಮೆಚ್ಚಿದೆಯಲ್ಲದೆ ರಾವಣ ದುರ್ಯೋಧನರನ್ನಲ್ಲ. ಹೃದಯದ ಆಳ ಸ್ವಭಾವ ಸ್ವಧರ್ಮ ಅನಾದಿ ಕಾಲದಿಂದ ದೇಶ ಕುಲ ಜಾತಿ ವರ್ಣಭೇದವಿಲ್ಲದೆ 'ಶಿವ'ವನ್ನೆ ಪೂಜಿಸುತ್ತ ಬಂದಿದೆ.

ಎಲ್ಲ ಭೂತಪ್ರಪಂಚದ ನಾಮ ರೂಪ ಕ್ರಿಯೆಯ ಜವನಿಕೆಯನ್ನು ಓಸರಿಸಿ, ಶಿವ ಜ್ಞಾನದೃಷ್ಟಿಯಲ್ಲಿ ಒಳಗೆ ತಿಳಿದು ನೋಡಿದರೆ 'ದೇವನೊಬ್ಬ, ನಾಮ ಹಲವು' ಕಾಣು ವಂತೆ, 'ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದು'... ಪ್ರತ್ಯಗ್ಗೋಚರವಾಗುವಂತೆ, ವಿಶ್ವ ವಿಧವಾದ ಕರ್ಮಪ್ರಪಂಚದಲ್ಲಿ ಶಿವದ ಪೂಜೆ, ದಿವ್ಯದ ಪೂಜೆ ಬಲ್ಲವರಿಗೆ ಕಂಡಿದೆ. ಎಲ್ಲ ನಾಮ, ಒಬ್ಬ ದೇವನಿಗೆ ಕೊಟ್ಟ ಅನಂತನಾಮವಾಗಿದ್ದರೆ, ಅಣು ರೇಣು ಆಕಾಶ ಅರಿವು, ತಾರಾಗಣ ವಾಯುವಲಯ ಪರ್ವತ ಸಮುದ್ರ ಬಳ್ಳಿ ಗಿಡ ಮರ ಹುಲಿ ಸಿಂಹ ಸರ್ಪ ಮುಂಗುಲಿ ಗೋರಿಲ್ಲಾ ಚಿಂಪ್ಯಾಂಝೀ ಮನುಷ್ಯ ಪ್ರಾಣಿಗಳೆಲ್ಲ 'ಸರ್ವಂ ಖಲ್ವಿದಂ ಬ್ರಹ್ಮ'ವೆ ಆಗಿದ್ದರೆ, ಈ ಅನಂತರೂಪದ ದ್ವೈತಬ್ರಹ್ಮದಲ್ಲಿ ನಡೆದಿರುವ ಎಲ್ಲ ಎಲ್ಲ ಕ್ರಿಯಾವ್ಯಾಪಾರ ಒಂದೇ ಒಂದಾದ ಬ್ರಹ್ಮಸೂತ್ರದಲ್ಲಿ ಅನಂತಗತಿಯ ನಿಜಾರ್ಥವನ್ನು ಪಡೆಯುತ್ತದೆ. ಅಣುವೇ ದೇವಾಲಯ, ಒಳಗೆ ದೇವಪೂಜೆ. ಕಣವೇ ದೇಗುಲ, ಒಳಗೆ ನೋಡಿದರೆ ದೇವಪೂಜೆ. ತರುಲತೆಯಲ್ಲಿ ಪತ್ರಿ ಪುಷ್ಪ ಪೂಜೆ, ಪ್ರಾಣಿಕೋಟಿಯಲ್ಲಿ ಪ್ರಾಣಚೈತನ್ಯ ನಡೆಸಿರುವ ದಿವ್ಯಪೂಜೆ. ನಕ್ಷತ್ರಗಳ ಬೆಳಗಿನ ಪೂಜೆ, ಪರ್ವತ ಪೂಜೆ; ನದಿ ನದಗಳ ಹರಿವ ಪೂಜೆ, ಭೂಮಿಗೆ ಬೆಳೆವ ಪೂಜೆ. ಹೀಗೆಯೇ ನೋಡುತ್ತ ನೋಡುತ್ತ ನಡೆವರೆ ವಿಶ್ವಜೀವನ ದೇವನಿಗೆ ನಡೆ ದಿರುವ, ದೇವನೆ ನಡೆಸಿರುವ ವಿಶ್ವಮಯ ಪೂಜೆ. ಮಾನವ ಜೀವನ? ಅ-ಜ್ಞಾನದ ಕತ್ತಲೆಯಲ್ಲಿ ಎಲ್ಲೆಲ್ಲಿ ನಡೆದಿರುವಂತೆ, ಇಲ್ಲಿಯೂ ಜೀವಬ್ರಹ್ಮದ ಸಂಸಾರ ಪೂಜೆ— ಪಲ್ಲಟಪೂಜೆ ಸಾಂಗವಾಗಿ ನಡೆದಿದ್ದರೂ ಈ ಪಲ್ಲಟಪೂಜೆಯ ಹಂಬಲವೆಲ್ಲ ನಿಜ ಪೂಜೆಯ ಹಂಬಲವೇ.

ನಾನು ಈಗ ಬರೆಯುತ್ತಿದ್ದೇನೆ. ಬರೆವುದು ಪೂಜೆಯೆಂದು ನನಗೆ ಗೊತ್ತಿಲ್ಲ. ನೀವು ಓದುವುದು ಅಥವಾ ಕೇಳುವುದು ಅದೂ ಶಿವಪೂಜೆ. ಇದು ನಿಮಗೂ ಕಂಡಿರ ಲಿಕ್ಕಿಲ್ಲ. ಕಾಲು ನಡೆದರೆ ನಡೆಯೆಲ್ಲ ಪೂಜೆ. ನಾಲಗೆ ನುಡಿದರೆ ನುಡಿಯೆಲ್ಲ ಪೂಜೆ. ಕೈ ಮಾಡುವ ಮಾಟವೆಲ್ಲ ಪೂಜೆ. ಕಣ್ಣು ನೋಡುವ ನೋಟ ಪೂಜೆ, ಎದೆ ಭಾವಿಸುವ ಭಾವನೆಗಳೆಲ್ಲ ಪೂಜೆ. ತಲೆಯಿಂದ ಹೊರಡುವ ವಿಚಾರವೆಲ್ಲ ವಿಚಾರಪೂಜೆ. ಎಲ್ಲೆಲ್ಲಿ ಒಳಗೊಳಗೆ ನಿರಂತರ ನಡೆದಿರುವ ವಿಶ್ವಗಂಭೀರ ಪೂಜೆ ನನಗೆ ನಿಮಗೆ ತಿಳಿವಂತೆ ನಡೆದಿಲ್ಲ. ಕಾಣಬರುವಂತೆ ನಡೆದಿಲ್ಲ. ಆದರೆ ಪರಮಾತ್ಮನ ಪರಮೋದ್ದೇಶವನ್ನು

ತಾನೆ ಪರಮಾತ್ಮನೆಂದು ತಿಳಿದು ಪರಮಾತ್ಮಲಿಂಗವೆ ತಾನಾಗಿ ನಿಂದಿರುವ ಜಂಗಮ ಲಿಂಗ ವಿಶ್ವಭರಿತನಾಗಿ ಈ ಪೂಜೆ ನಡೆಸಿದ್ದಾನೆ. ಜಂಗಮಲಿಂಗದ ವಿಶ್ವಭರಿತ ಪೂಜೆಯೆ ಅಧೋಮುಖವಾದ ಜಗತ್ಪ್ರಪಂಚವನ್ನು ಊರ್ಧ್ವಮುಖವಾಗಿ ಮಾಡುವ ವಿಶ್ವಕಲ್ಯಾಣಪೂಜೆಯಲ್ಲಿ ನಿರತವಾಗಿದೆ. ಈ ಜಂಗಮಲಿಂಗವೆ ಅನಾದಿ ಶರಣ. ಅಂತೆಯೆ ಶರಣನ ಪೂಜೆ ಅನಾದಿ, ಅನಂತ. ಪ್ರಭುದೇವರು ಮಾನವಾ ಕಾರವಾಗಿ ಮೂರ್ತಿಗೊಳ್ಳುವ ಮುನ್ನ, ಆ ಮೂರ್ತಿ ಬಯಲಾದ ಬಳಿಕ ವಿಶ್ವಪ್ರಪಂಚದ ಹೃದಯಕಮಲದಲ್ಲಿ ಸತ್ಯದ ಪೂಜೆ ಶಿವದ ಪೂಜೆ ಸುಂದರದ ಪೂಜೆ ಜ್ಞಾನ ಆನಂದದ ಪೂಜೆ, ಕಾಲಮಾನ ದೇಶಮಾನ ಕುಲಧರ್ಮ ವರ್ಣಾಶ್ರಮ ಜನಾಂಗ ಮಾನಗಳನ್ನು ಮೀರಿ, ನೆಲ ನೀರು ಬೆಂಕಿ ಗಾಳಿ ಬಯಲೆನ್ನದೆ ನಡೆದಿದೆ. ಈ ಪೂಜೆ ಯನ್ನು ನಿಲ್ಲಿಸುವ ಶಕ್ತಿ ಮಾನವನ ಬುದ್ಧಿ ಮಾನವನ ವಿಜ್ಞಾನ ಮಾನವನ ವಿಚಾರ ದಲ್ಲಿ ಇದೆ ಎಂದು ನೀವು ಹೇಳಬಹುದು. ಆದರೆ ಒಂದು ಮಾತು, ಎಂದೂ ಮರೆ ಯದ ಮಾತು: ಬುದ್ಧಿಯ ಕೂಸಾದ ವಿಜ್ಞಾನದ ಹೃದಯಗಂಭೀರವೂ ಅದೇ ಶಿವಪೂಜೆಯಲ್ಲಿ ನಿರತವಾಗಿದೆ. ಧರ್ಮತತ್ತ್ವ ಅನುಭವ ವಿಜ್ಞಾನ ಶಾಸ್ತ್ರಗಳಲ್ಲಿ ವಿರೋಧ ವಿಷಮ ವೈರ ದ್ವೇಷ ಮೇಲೆ ಮೇಲೆ ತರಂಗತರಂಗವಾಗಿ ಮೂಡಿದರೂ 'ಸತ್ಯಂ ಜ್ಞಾನಂ ಅನಂತಂ' 'ಸತ್ಯಂ ಶಿವಂ ಸುಂದರಂ' 'ಸಚ್ಚಿದಾನಂದ ನಿತ್ಯ ಪರಿಪೂರ್ಣ'ದ 'Truth Beauty and Goodness'. 'ಸತ್ತು ಜ್ಯೋತಿ ಅಮೃತ'ಗಳ ವಿಶ್ವ ಸಮುದ್ರಾಂತರಂಗದ ನಿತ್ಯಾರಾಧನೆಯ ಹಿಡಿತದಿಂದ, ದೇವ ದಾನವ ಮಾನವರಿರಲಿ ಗಿಡು ಮರ ಬಳ್ಳಿ ಹುಲಿ ಕರಡಿ ಸಿಂಹ ಶಾರ್ದೂಲವಿರಲಿ, ಭೂತಬ್ರಹ್ಮಾಂಡವಿರಲಿ ಮತ್ತಾವ ಬ್ರಹ್ಮಾಂಡವೆ ಇರಲಿ, ಯಾರೂ ಏನೂ ಎಂದೂ ಎಲ್ಲಿಯೂ ನಿಜವಾಗಿ ಜಾರುವಂತಿಲ್ಲ. ವಿಶ್ವಚೈತನ್ಯದ ಮುಷ್ಟಿಯಿಂದ ಪಾರಾಗಿ ಒಂದು ಕಡ್ಡಿ ಕೊಂಕಲಿಲ್ಲ.

ಜಗದ್ಭರಿತವಾಗಿ ಒಳಹೊರಗೆ ಪರಿಪೂರ್ಣ ಪರಂಜ್ಯೋತಿಯಾಗಿ ಬೆಳಗಿ ತನ್ನ ತಾ ಪೂಜಿಸಿಕೊಳ್ಳುತ್ತ, ಜಗತ್ಪಾವನ, ಜಗದ್ಹಿತ, ಸರ್ವಲೋಕಕಲ್ಯಾಣದಲ್ಲಿ ನಿರತ ವಾಗಿ ಚರಿಸುವ ಜಂಗಮಲಿಂಗದ ಸುಳುಹಿನ ಸೂಕ್ಷ್ಮವನ್ನು ನೋಡುವುದು ನಮ್ಮ ಕೊನೆಯ ಕೆಲಸ. ಪ್ರಭುದೇವರೇ ತಮ್ಮ ಗೊಹೇಶ್ವರನ ಸುಳುಹಿನ ಸೊಬಗನ್ನು, ಸೊಗಸನ್ನು ನಿರೂಪಿಸುತ್ತಾರೆ ಕೇಳಿ:

ಕಂಡುದೆಲ್ಲವು ಪಾವನ. ಕೇಳಿತ್ತೆಲ್ಲ ಪರಮಬೋಧೆ.
ಮುಟ್ಟಿತ್ತೆಲ್ಲವು ಪರುಷದ ಸೋಂಕು. ಒಡನೆ ನುಡಿದವರೆಲ್ಲರು ಸದ್ಯೋನ್ಮುಕ್ತರು.
ಸುಳಿದ ಸುಳುಹೆಲ್ಲ ಜಗತ್ಪಾವನ. ಮೆಟ್ಟಿದ ಧರೆಯೆಲ್ಲವು ಅವಿಮುಕ್ತಿಕ್ಷೇತ್ರ.
ಸೋಂಕಿದ ಜಲವೆಲ್ಲವು ಪುಣ್ಯತೀರ್ಥಂಗಳು.
ಶರಣೆಂದು ಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು.
ಗೊಹೇಶ್ವರಾ, ನಿಮ್ಮ ಸುಳುಹಿನ ಸೊಗಸನುಪಮಿಸಬಾರದು ![1]

---

೧. ಶೂ. ಸಂ. ಪು. ೨೨, ವ. ೭೮.

ಪ್ರಭುದೇವರು ಸರ್ವಶೂನ್ಯ ನಿರಾಲಂಬವಾದ ನಿಃಕಳಬ್ರಹ್ಮವನ್ನು ಸಂಪಾದಿಸಿ, ಜಂಗಮಲಿಂಗವಾಗಿ 'ರವಿಯ ಬೆಳಸ ಬಳಸದೆ' ಲಿಂಗದ ಬೆಳಸಾದ ವಿಶ್ವವನ್ನೆ ಲಿಂಗಕ್ಕೆ ಅರ್ಚಿಸಿ ಅರ್ಪಿಸುತ್ತ, ಸರ್ವಲೋಕಕಲ್ಯಾಣವನ್ನೆ ಕರೆಯುತ್ತ, ತಂಗಾಳಿ ತೀಡುವಂತೆ ಬೆಳುದಿಂಗಳು ಚೆಲ್ಲುವಂತೆ, ದಿವ್ಯಜ್ಞಾನ ಸೌಂದರ್ಯ ನೆಳಲಿಲ್ಲದೆ ಸುಳಿವಂತೆ, ನಿಜಭಕ್ತಿಯ ನಿರ್ಮಾಯಪೂಜೆ ಹೆಜ್ಜೆಯಿಲ್ಲದೆ ಹರಿವಂತೆ ಚರಿಸಿದ ಚರಿತವನ್ನೆ ಚಾಮರಸ 'ಪ್ರಭುಲಿಂಗಲೀಲೆ' ಎಂದು ಹೆಸರಿಟ್ಟು ಒಂದು ದಿವ್ಯ ಕಾವ್ಯವನ್ನೆ ಕನ್ನಡದಲ್ಲಿ ಹಾಡಿದ್ದಾನೆ. ಇಂಥ ಲಿಂಗಲೀಲೆಯೇ ನಿಜಶರಣರ ದಿವ್ಯ ಜೀವನಚರಿತವೆಂಬ ಸೂಚನೆಯನ್ನು 'ಲಿಂಗಲೀಲಾವಿಲಾಸಚಾರಿತ್ರ' ಎಂಬ ತಮ್ಮ ಗ್ರಂಥದ ಹೆಸರಿನಿಂದ ಕೊಟ್ಟಂತಿದೆ ಕಲ್ಲಮಠದ ಪ್ರಭುದೇವರು.

ಚರಾಚರ ಪ್ರಪಂಚದಲ್ಲಿ ಚರಿಸುವ ಚರಲಿಂಗದ, 'ಪರಮಾರ್ಥ'ದಿಂದ ಗಮಿಸುವ ಜಂಗಮಲಿಂಗದ ಸುಳುಹು 'ನಿಮ್ಮ ಸುಳುಹು'–ಗೊಹೇಶ್ವರ ಲಿಂಗದ ಸುಳುಹು. ಈ 'ನಿಮ್ಮ ಸುಳುಹಿನ ಸೊಗಸು', ಅಂತಿಂತೆಂದು ಉಪಮಿಸುವ ಉಪಮೆ ರೂಪಕ ಉತ್ಪ್ರೇಕ್ಷೆ ಅತಿಶಯೋಕ್ತಿ ಮುಂತಾದ ಅಲಂಕಾರಗಳ ಕೈಗೆ ಸಿಲುಕುವ ಸೊಗಸಲ್ಲ. ಮತ್ತೆ ಶಬ್ದದ ಬಣ್ಣದಲ್ಲಿ ಇಂಥ ಸೊಗಸನ್ನು ಚಿತ್ರಿಸಿ ಲೋಕದ ಕಿವಿಯ ಮುಂದಿಟ್ಟರೆ ಆ ಕಿವಿಗೆ ಅದರರ್ಥವಾದರೂ ಏನು? ಸೂರ್ಯನನ್ನು ಕಂಡರೆ ಕಂಡುದೆಲ್ಲ ಬಿಸಿಲು, ಚಂದ್ರಮನನ್ನು ಕಂಡರೆ ಕಂಡುದೆಲ್ಲ ತಂಪು, ವೀಣೆ ಹಾಡಿದರೆ ಕಿವಿಯೆಲ್ಲ ಸವಿ, ಮಧುಮಾಸ ಮೂಡಿದರೆ ಬನವೆಲ್ಲ ಸಿರಿ,—ಇಂಥ ಸಂಗತಿ ಸಾಮಾನ್ಯವಾಗಿ ನಮ್ಮ ಅನುಭವ. ಆದರೆ ಮಾನವ-ಲಿಂಗ ಪಾವನದ ಬಿಸಿಲಾಗಿ ಜಗದಗಲ ಬೀಳುವುದು, ವಿಶ್ವದ ಪರಮ ರಹಸ್ಯವಾದ ಸತ್ಯಜ್ಞಾನವನ್ನೆ ತುಂಬಿ ಮಾತೆಂಬ ಜ್ಯೋತಿರ್ಲಿಂಗವಾಗಿ ಲೋಕಕ್ಕೆಲ್ಲ ಮಳೆಗರೆವುದು, ಮಣ್ಣನ್ನು ಮುಟ್ಟಿ ಪರಿಶುಭ್ರವಾದ 'ದ್ಯಾವಾಪೃಥಿವಿ'ಯನ್ನು ಮಾಡುತ್ತಿರುವುದು, ತನ್ನೊಡನೆ ನುಡಿದವರ ಹಂಜರವನ್ನು ಬಿಡಿಸಿ ಬಿಡುಗಡೆ ಮಾಡಿ, ದಿವ್ಯದ ವಿಸ್ತಾರದಲ್ಲಿ ಇರಿಸಿ ಬದುಕಿಸುವುದು, ನಿಂದ ನೆಲವನ್ನು ಪುಣ್ಯಕ್ಷೇತ್ರವೆನಿಸಿ ಮಿಂದ ಜಲವನ್ನು ಪವಿತ್ರ ತೀರ್ಥವನ್ನಾಗಿ ಪರಿವರ್ತಿಸುತ್ತಿರುವುದು ಯಾರಿಗೆ ಗೊತ್ತು?

ಲೋಕಲೌಕಿಕದಲ್ಲಿ ಲಿಂಗವನ್ನು ಹರಹುತ್ತ ಪ್ರಭುಲಿಂಗಜಂಗಮ ಸುಳಿದಾಡುವ ಸುಳುಹಿನ ಸೊಗಸನ್ನು ಪ್ರಭುದೇವರು ನುಡಿಯಲ್ಲಿಯೆ ರೂಹಿಸಿ ನುಡಿಯುತ್ತಿದ್ದಾರೆ,– ಹೃದಯವನ್ನು ಕಿವಿಯಲ್ಲಿರಿಸಿ ಕೇಳಿ:

1. ಜಗವೆಲ್ಲವನೂರ ಮಾಡಿ ಊರೆಲ್ಲವ ಮನೆಯ ಮಾಡಿ.
ಹೋಗದೆಸೆಯಿಲ್ಲದ ಸುಳುಹು ನೋಡಾ.
ಸುಳುಹಿನ ಭೇದವನಱಿಯದ ಕಾರಣ,
ದೇವಲೋಕ ಮರ್ತ್ಯಲೋಕವೆಲ್ಲಾ ಭ್ರಮೆಗೊಂಡಿತ್ತಲ್ಲಾ.[೧]

---

೧. ಶೂ. ಸಂ. ಪು. ೩೯, ಪದ ೨.

2. ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹ ಸುಳಿಯದೆ,
ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು.
ಸುಳಿದಡೆ (ನಿಂದಡೆ?) ನೆಟ್ಟನೆ ಭಕ್ತನಾಗಿ ನಿಲಬೇಕು.
ಸುಳಿದು ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ
ಉಭಯಭ್ರಷ್ಟರನೇನೆಂಬೆ ಗುಹೇಶ್ವರಾ? [೧]

3. ಸಂಸಾರಸಂಗವ ಭೇದಿಸಿ ನೋಡುವರೆ ದೂರವೆ? ಕಪಟ ಕನ್ನಡವೆ?
ರವಿಯ ತಪ್ಪಿಸಿ ಸುಳಿವ ಗುಹೇಶ್ವರನೆಂದರಿದ ಶರಣ ಸಂಸಾರಿಯೇ? [೨]

ಈ ಸುಳುಹಿನ ಭೇದವನ್ನು ತಿಳಿದ ಬೇರೆ ಶರಣರ ಮಾತನ್ನೂ ಮೌನವಾಗಿ ಕೇಳಿ:

4. ಪಂಚವಿಂಶತಿ ತತ್ತ್ವಾಶ್ರಯವೆಂಬ ಪಟ್ಟಣದೊಳಗೆ
ಆರು ಬಣ್ಣದ ಪಕ್ಷಿ ಮೂರು ಗೂಡ ಮಾಡಿಕೊಂಡು
ನಾಲ್ಕರಾಹಾರವ ಕೊಂಬುದ ಕಂಡೆನಯ್ಯಾ.
ಐದರ ನೀರ ಕುಡಿದು ಪರಿಣಾಮಿಸುತಿದೆ ನೋಡಾ.
ಏಳರ ಮೊಲೆಯನುಂಡು ಎಂಟರಾಭರಣವ ತೊಟ್ಟಿದೆ ನೋಡಾ.
ಹತ್ತರ ಬೆಂಬಳಿವಿಡಿದು ಒಂಬತ್ತು ಬಾಗಿಲೊಳಗೆ ನಡೆದಾಡುವುದ
ಕಂಡೆನಯ್ಯಾ.
ಕೊಂಬುಕೊಂಬಿನ ಇಂಬಿನಲ್ಲಿ ಸುಳಿದಾಡುತಿದೆ ನೋಡಾ ಅಯ್ಯಾ.
ಆ ಸುಳುಹಿನ ಸೂಕ್ಷ್ಮವ ತಿಳಿದು,
ತನ್ನ ಸುಳುಹನು ಅರಿವ ಹಿರಿಯರನಾರನೂ ಕಾಣೆನಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ. [೩]

5. ಆವಾವ ಭಾಷಾಂಗವ ತೊಟ್ಟರೂ ಆ ಭಾಷಾಂಗಕ್ಕೆ ತಕ್ಕ ಗತಿಯ
ಭಾಷೆಯಿರಬೇಕು.
ಶಿವಲಾಂಛನಧಾರಿಯಾದರೆ, ಆ ಲಾಂಛನಕ್ಕೆ ತಕ್ಕ ನಡೆನುಡಿಯಿರಬೇಕು.
ಅದೆಂತೆಂದೊಡೆ:
ಕಾಯದ ಕಳವಳವ ಗೆಲಿದು, ಮಾಯಾಪ್ರಪಂಚ ಮಿಥ್ಯವೆಂದು ಅರಿದು,
ಕ್ಷಮೆ ದಮೆ ಶಾಂತಿ ದಯೆ ಜ್ಞಾನ ವೈರಾಗ್ಯ ಮುಂತಾಗಿ
ಸುಳಿಯಬೇಕು,—ಲಿಂಗಮೌನಿಯಾಗಿ.
ಇದಲ್ಲದೆ ಉಳಿದ ಉದ್ದೇಶದ ಸುಳುಹೆಲ್ಲಾ ಬಿರುಗಾಳಿಯ ಸುಳುಹಯ್ಯಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. [೪]

---

೧. ಪ್ರ. ವ, ಪು. ೧೬೭, ವ. ೨೯.
೨. ಪ್ರ. ವ. ಪು. ೧೭೦, ವ. ೩೭.
೩. ಸಿ. ವ. ಪು. ೧೧೧-೧೧೨, ವ. ೩೩೬.
೪. ನಿ. ಸ್ವ. ಸಿ. ವ. ಪು. ೮೯, ವ. ೩೩೪.

6. ಅನಂತಕೋಟಿ ಬ್ರಹ್ಮಾಂಡಂಗಳನೊಳಕೊಂಡ ಮಹಾಘನಲಿಂಗದಲ್ಲಿ
ತನ್ನ ಅಂಗ ಮನ ಪ್ರಾಣೇಂದ್ರಿಯಂಗಳ ವಿಷಯ ಕರಣಂಗಳ ಹೂಳಿ,
ತಾನಿಲ್ಲದೆ ನಡೆವುತ್ತೆ, ತಾನಿಲ್ಲದೆ ನುಡಿವುತ್ತೆ,
ತಾನಿಲ್ಲದೆ ಹಿಡಿವುತ್ತೆ, ತಾನಿಲ್ಲದೆ ಬಿಡುತ್ತೆ,
ತಾನಿಲ್ಲದೆ ನೋಡುತ್ತೆ, ತಾನಿಲ್ಲದೆ ಆಡುತ್ತೆ,
ಬಯಲ ಬೊಂಬೆಯಂತೆ ಸುಳಿವ ಮಹಾಶರಣರ ತೋರಿ
ಬದುಕಿಸಯ್ಯ ಎನ್ನ, ಅಖಂಡೇಶ್ವರಾ.[೧]

ಜಂಗಮಲಿಂಗ ಸುಳಿಯಬೇಕು, ಸುಳಿಯಬಾರದು. ಜಗತ್ತೇ ತನ್ನ ಊರು, ಈ ಊರೇ ತನ್ನ ಮನೆ. ದಿಕ್ಕುದೆಸೆಯೆಲ್ಲ ಈ ಮನೆಯೊಳಗೆ, ಆಕಾಶ ಪಾತಾಳ ಈ ಮನೆಯೊಳಗೆ. ಈ ಮನೆಗೆ ಹೊರಗಾದ ಎಡೆಯೇ ಇಲ್ಲ. ಇದ್ದರೆ ಎಡೆಗೆ ಕಡೆಯಿಲ್ಲದ ತಾನೇ 'ಅನಂತಕೋಟಿ ಬ್ರಹ್ಮಾಂಡಗಳನೊಳಕೊಂಡ ಮಹಾಘನಲಿಂಗ.' ಹೊರಗೆಲ್ಲ ಒಳಗಾದರೆ ಹೋಗಬೇಕೆಲ್ಲಿಗೆ? ಒಳಗೆ ತಿಳಿದು ನೋಡಿದರೆ ನನ್ನ ಮನೆ ನಿಮ್ಮ ಮನೆ, ಅವರ ಇವರ ಮನೆ ಎಲ್ಲರ ಮನೆ ಇದೇ. ಆದರೆ ನಮ್ಮ ನಿಮ್ಮ ಅರಿವಿನ ಕಣ್ಣಿಗೆ ಮರವೆಯ ಮಬ್ಬಿನಲ್ಲಿ ಹೂಳಿ ಹೋದಂತಿರುವ ನಮ್ಮ ಮನೆ ನಮಗೇ ಕಾಣುವಂತಿಲ್ಲ. ಮನೆಯಷ್ಟೇ ಅಲ್ಲ, ನಿಜವಾಗಿ ಮನೆಯಲ್ಲಿ ವಾಸವಾಗಿರುವ ನಾನೂ ನನಗೆ ಮಬ್ಬೇ. ಕತ್ತಲೆಯ ಅನುಭವ ನನಗಿದೆ, ನಿಮಗಿದೆ. ಕತ್ತಲೆ ಘನವಾದರೆ ಬಾಹ್ಯಪ್ರಪಂಚ ಕಣ್ಣಿಗೆ ಕಾಣುವುದಿಲ್ಲ. ನನ್ನ ಕಲ್ಲುಗಚ್ಚಿನ ಮನೆ ನನ್ನದಾದರೂ ನನಗೆ ಕಾಣುವುದಿಲ್ಲ. ಹೆಂಡಿರುಮಕ್ಕಳು ಅಣ್ಣತಮ್ಮಂದಿರು ನನ್ನವರು ನಿಜ. ಆದರೆ ಅವರೂ ನನಗೆ ಕಾಣುವುದಿಲ್ಲ. ಅದೂ ಹೋಗಲಿ, ನನ್ನ ದೇಹ ಅಂದರೆ ನಾನು ನನಗೆ ಕಾಣಬಾರದೇ? ತನಗೆ ತಾನು ತೋರದಂತೆ ತನ್ನನ್ನು ತನಗೆ ಮುಚ್ಚಿ ಮರೆಮಾಡುವುದೇ ಕತ್ತಲೆಯ ವಿಶ್ವ-ವಿಚಿತ್ರ.

ವಿಶ್ವವಿಸ್ತಾರವೆ ತನ್ನ ಮನೆಯಾಗಿದ್ದರೂ ಜೀವಾತ್ಮನೆಂಬ ಹಕ್ಕಿ, ಪ್ರಪಂಚವೆಂಬ ಪಟ್ಟಣದಲ್ಲಿ ಸ್ಥೂಲ ಸೂಕ್ಷ್ಮ ಕಾರಣ ತನುವೆಂಬ ಗೂಡನಿಕ್ಕಿ, ಕರಣ ಇಂದ್ರಿಯ ಮುಖದಲ್ಲಿ ಬರುವ ವಿಷಯಸುಖದ ಅನ್ನಪಾನಮಾಡಿ. ಏಳು ವ್ಯಸನ ಎಂಟು ಮದ ತಲೆಗೇರಿ, ಪ್ರಾಣಾಪಾನಾದಿ ಹತ್ತು ವಾಯುವಿನ ಬೆನ್ನು ಹಿಡಿದು, ಕಣ್ಣು ಮೂಗು ಮುಂತಾದ ಬಾಗಿಲದಲ್ಲಿ ಹೊರಗೊಳಗೆ ಸುಳಿದಾಡುತ್ತಿದೆ ಭ್ರಮೆಗೊಂಡು. ಈ ಸುಳುಹು ಕತ್ತಲೆಯ ಭ್ರಮಣೆ. ಆದರೆ ಲಿಂಗೋದಯ ಪ್ರಜ್ವಲಿಸಿ, ಪ್ರಜ್ವಲಿಸುವ ಮಹಾಘನಲಿಂಗವೆ ತಾನಾಗಿ ನಿಂದ ಪ್ರಭುದೇವರ ಸುಳುಹು ವಿಶ್ವೇಲೋಕದ ಪರಮ ಗಂಭೀರವಾದ ನಿರಾಳಲಿಂಗದ ಸುಳುಹು. ಅಲ್ಲಮಪ್ರಭುವಿನ ಮೂರ್ತಿ ಕಣ್ಣಿಗೆ ಕಾಣುತ್ತಿದೆ, ಬಳ್ಳಿಗಾವೆಯಿಂದ ಬನವಾಸಿಗೆ. ಸೊಲ್ಲಾಪುರದಿಂದ ಕಲ್ಯಾಣಕ್ಕೆ, ಕಲ್ಯಾಣದಿಂದ ಎಲ್ಲ ಕಡೆಗೆ ಅಡ್ಡಾಡಿದ ಮೂರ್ತಿಗೆ 'ಹೋಗದೆಸೆಯಿಲ್ಲ' ಎಂದು ಹೇಳುವುದು

೧. ಅಖಂ. ವ. ಪು. ೨೬೪, ವ. ೧೦೦.

ಹೇಗೆ ಎಂದು ನೀವು ಕೇಳಬಹುದು. ನಿಮ್ಮ ಮಾತು ನಿಜ. ಆದರೆ ಪ್ರಭು 'ಬಯಲ ಬೊಂಬೆ,' ಶರಣರಲ್ಲಿ ಶರಣ ಮಹಾಶರಣ. ಆತನ ಸಂಚಾರ ಬಯಲ ಮರೀಚಿಯ ಸಂಚಾರ.

ನಿರವಯಲ ಪದದಲ್ಲಿ ನಿಂದು ಹೊರಗೊಳಗೆ ಅಖಂಡಿತವಾದ ಚಿದ್‌ಬೆಳಗೆ ತಾನಾಗಿ, ಭೌತದೇಹದಲ್ಲಿ ವಾಸವಾಗಿರುವ ಪ್ರಭುವಿನ ಸಾಕಾರ ಮೂರ್ತಿಯಲ್ಲಿ 'ತಾನಿಲ್ಲ' ಅಂದರೆ ಅಲ್ಲಮಪ್ರಭುವಿಲ್ಲ. ತಾನಿಲ್ಲದ ನಡೆ, ತಾನಿಲ್ಲದ ನುಡಿ, ತಾನಿಲ್ಲದ ನೋಟ ತಾನಿಲ್ಲದ ಊಟ ಉಪಚಾರ ಪೂಜೆ ಭಕ್ತಿ ಅರ್ಪಣ ಪ್ರಸಾದ ಆಚಾರ ವಿಚಾರ ಅನುಭವ ಆನಂದ ಸುಳುಹು ಗೋಷ್ಠಿ ಮಾತುಕಥೆ; ಒಟ್ಟಾರೆ ಆತನ ಇರವೇ ತಾನಿಲ್ಲದ ಇರವು. ಹಾಗಾದರೆ ಈ ಕ್ರಿಯೆ ನಡೆವುದು ಹೇಗೆ? ನಡೆಸುವವರಾರು? ಎಂದು ನಿಮ್ಮ ಪ್ರಶ್ನೆ. ಅಲ್ಲವೇ? ಹಿಂದೊಮ್ಮೆ ನಾವು ನೋಡಿರುವಂತೆ ಇಲ್ಲಿಯ ಇರವು ಮಹಾಘನಲಿಂಗದಿರವು, ಇಲ್ಲಿಯ ಕ್ರಿಯೆ ಅದೇ ಲಿಂಗದ ಕ್ರಿಯೆ; ಇಲ್ಲಿಯ ಸುಳುಹೆಲ್ಲ ಆ ಲಿಂಗವೆ ಜಂಗಮಮೂರ್ತಿಯಾಗಿ ಸುಳಿವ ಸುಳುಹು. ಅಂತೆಯೆ ಇಂಥ ಸುಳುಹೆಲ್ಲ ವಿಶ್ವಸೃಷ್ಟಿಯ ಪರಮೋದ್ದೇಶವಾದ ಲಿಂಗಪೂಜೆಯೆ.

'ರವಿಯ ಬೆಳಗಿ'ನಲ್ಲಿ, ಅಹಂಭಾವದ ಸಂಕೋಚ ಪ್ರಜ್ಞೆಯಲ್ಲಿ 'ರವಿಯ ಬೆಳಸಿ' ಗಾಗಿ, ಸಂಸಾರಸಂಗಕ್ಕಾಗಿ ಸುಳಿದರೆ ಬಿರುಗಾಳಿ ಬೀಸಿದಂತೆ. ಈ ಬೀಸುವ ಬಿರುಗಾಳಿಯಿಂದಲೇ ಮನೆಯ ಒಳಗೆ 'ವಿದ್ಯಾಮುಖದ ಜ್ಯೋತಿ' ನಂದಿದೆ; ಹೊರಗೆ ಲೋಕ ಸುಖ ಶಾಂತಿ ಶೋಭನ ಕಲ್ಯಾಣ ಶಿವಮಯಜ್ಞಾನ ಶಿವಮಯಪ್ರೇಮ ಶಿವಮಯವಾದ ಸರ್ವಜಗತ್ತು ಎಲ್ಲರ ಗಾಳಿಯ ಹೊಯ್ಲಿಗೆ ಅಲ್ಲೋಲ ಕಲ್ಲೋಲವಾಗಿ, ಕೊಂಬೆರೆಂಬೆ ಮುರಿದು ಬೇರು ಹರಿದು ಬೀಳುವಂತಿವೆ. ನನ್ನ ಬಿರುಗಾಳಿ ನಿಮ್ಮನ್ನು ನಿಮ್ಮ ಬಿರುಗಾಳಿ ನನ್ನನ್ನು ಬೇರು ಬೆರಸಿ ಕಿತ್ತುಹಾಕಲು ಬೀಸುತ್ತಿದೆ, ಬೀಸುತ್ತಿದೆ. ಒಂದೇ ಸವನೆ ಎಲ್ಲ ಎಲ್ಲರು ಬಿರುಗಾಳಿಯಾಗಿ ಜಗದ ಮೈಯೊಳಗೆಲ್ಲ ಮಯವಾಗಿರುವ 'ಶಿವ'ವನ್ನು ಸಡಿಲಿಸಲು ಯತ್ನಿಸುವಂತಿದ್ದರೆ ಎಲ್ಲ ಎಲ್ಲರಲ್ಲಿಯೂ 'ತಂಗಾಳಿ ಪರಿಮಳದೊಡಗೂಡಿ' ಸುಳಿವ ಲಿಂಗದ ಸುಳುಹು, ಲಿಂಗಜಂಗಮದ 'ಜಗತ್‌ಕಲ್ಯಾಣ'ದ ಸುಳುಹು, ವಿಶ್ವಪಾವನದ ಪೂಜೆ ಎಂದೆಂದಿಗೂ ಮಾನವಹೃದಯದಲ್ಲಿ ಸುಳಿಯುತ್ತ ಬಂದಿದೆ, ಇಂದೂ ಸುಳಿಯುತ್ತಿದೆ, ಮುಂದೂ ಸುಳಿಯುತ್ತದೆ. ಮಾನವಹೃದಯದಲ್ಲಿ ಒಳಗೊಳಗೆ ಸುಳಿವ ಈ ಜಂಗಮಲಿಂಗವಿಲ್ಲದಿದ್ದರೆ ಜಗತ್ತು ಹೇಗೆ ಬದುಕೀತು? [೧]

ಶ್ರೀಕೃಷ್ಣ ಯೇಸು ಕ್ರಿಸ್ತ ಗೌತಮ ಬುದ್ಧ ಮಹಮ್ಮದ ಪೈಗಂಬರ ವೇದವ್ಯಾಸ ಶಂಕರಾಚಾರ್ಯ ರಾಮಾನುಜಾಚಾರ್ಯ ಮಧ್ವಾಚಾರ್ಯ ರಾಮಕೃಷ್ಣಪರಮಹಂಸ ಸ್ವಾಮಿ ವಿವೇಕಾನಂದ ಶ್ರೀ ಅರವಿಂದ ಘೋಷ ಮಹಾತ್ಮಾಗಾಂಧಿ ರವೀಂದ್ರನಾಥ

---

೧. ಇಲ್ಲಿ ಅರವಿಂದರ ಮಾತು ಕೇಳಿ:

'. . . .The inner Divinity is the eternal Avatar in man; The human manifestation is its sign and development in the external world.'

Essays on the Gita, p. 18.

ಠಾಕೂರ ಮತ್ತೆ ಯಾವ ದೇಶ ಯಾವ ಭಾಷೆ ಯಾವ ಕುಲ ಜಾತಿ ವರ್ಣದವರಿರಲಿ—ಇಷ್ಟೇ ಏಕೆ, ನಾನೇ ಆಗಲಿ ನೀವೇ ಆಗಲಿ ಮತ್ತಾರೇ ಇರಲಿ, ವಿಜ್ಞಾನಿಯೇ ಇರಲಿ ಕಲಾಭಿಜ್ಞನೆ ಇರಲಿ, ಸತ್ಯ ಜ್ಞಾನ ಅನಂತವನ್ನು, ಕ್ಷಮೆ ದಮೆ ಶಾಂತಿಯನ್ನು ಶಿವ ಸೌಂದರ್ಯದಲ್ಲಿ ಭಕ್ತಿ ನಿಷ್ಠೆ ಯೋಗವನ್ನು, ಸತ್‌ಕ್ರಿಯೆ ಸದಾಚಾರ ಸುವಿಚಾರ ಮಂಗಲಮನ ಪಾವನಭಾವನೆಯನ್ನು, ಆತ್ಮಕಲ್ಯಾಣ ಸರ್ವಕಲ್ಯಾಣ ವಿಶ್ವಕಲ್ಯಾಣವನ್ನು,—ಇವೆಲ್ಲವನ್ನು ಒಳಕೊಂಡು ಇವರ ಶಿವಸಹಸ್ರಕಿರಣವನ್ನೆ ವಿಶ್ವಮಾನವ ಹೃದಯದೊಳಗಿಂದೆ ಸೆಲೆಯೊಡೆದು ಪುಟನೆಗೆಯುತ್ತಿರುವ ದಿವ್ಯಶಿವವನ್ನು ಶಿವಲಿಂಗವನ್ನು ವಿಶ್ವೇ ಹೃದಯವಲ್ಲಿ ಬಿತ್ತುವಲ್ಲಿ ಮಳೆಗರೆವಲ್ಲಿ ನೀರೆರೆವಲ್ಲಿ ಎಡೆಹೊಡೆವಲ್ಲಿ ಕಸತೆಗೆವಲ್ಲಿ ಬೆಳೆಸುವಲ್ಲಿ, ಬೆಳೆದ ಬೆಳಸನ್ನು ಎಲ್ಲೆಡೆಗೆ ಸಮತೆ ಸಮಾಧಾನದಿಂದ ಹಂಚಿ ಹರಡುವಲ್ಲಿ, ಯಾವ ಹೃದಯದ ಅಂಶ ಯಾವ ರೇಣುಶಕ್ತಿ ಯಾವ ಕಣಭಕ್ತಿ ಒಲಿದು ತನ್ನನ್ನು ಸವೆಸುತ್ತಿದೆಯೋ ಅದೆಲ್ಲ 'ಜಂಗಮಶಿವ'ವೆಂದೆ ನನ್ನ ಮತ. ಹೀಗೆ ಹೇಳಿದರೆ ನಿಮ್ಮ ಮುಖದಲ್ಲಿ ಚಕಿತ ತರಂಗಗೊಳ್ಳುವಂತಿದೆ. ನಾನು ಜಂಗಮಲಿಂಗ, ನೀವು ಜಂಗಮ ಲಿಂಗ, ಅವರು ಶಿವಜಂಗಮ ಇವರು ಶಿವಮಾನವ ಎಂದು ಹೇಳಿದರೆ ಯಾರು ಬೆಗಡು ಗೊಳ್ಳಲಿಕ್ಕಿಲ್ಲ! ನಿಜ, ನೀವೆನ್ನುವುದು. ಆದರೆ ಆ ಲಿಂಗದ ಅಂಶ ಕಾಂತಿ ಶಕ್ತಿ ಸತ್ತ್ವ ಶೈವವಿಲಾಸ ದಿವ್ಯ ಸೌಂದರ್ಯಕಳೆ ಎಲ್ಲ ಮಾನವಹೃದಯದಲ್ಲಿ ನಿಗೂಢವಾಗಿ ಸುಳಿಯದೆ ಇದ್ದರೆ ಸತ್ಯ ಜ್ಞಾನ ಭಕ್ತಿ ಶಾಂತಿ ಮುಂತಾದುವು ಹುಟ್ಟುತ್ತಲೆ ಇರಲಿಲ್ಲ. ಹೇಗೆ ಹೇಗೋ ಹುಟ್ಟಿದರೂ ಬದುಕುತ್ತಲೆ ಇರಲಿಲ್ಲ. ಮತ್ತು ಮಾನವನಲ್ಲಿ ಸುಳಿದಾಡುತ್ತಿರುವ ಈ ಜಂಗಮಲಿಂಗ ಜಡವೆಂದು ತೋರುವ ವಿಶ್ವಭೂತದಲ್ಲಿ ಇರದಿದ್ದರೆ, ಅದು ಮಾನವನಲ್ಲಿ ಮೂಡುತ್ತಿತ್ತಾದರೂ ಹೇಗೆ? ಮತ್ತೆ ಎಳ್ಳುಕಾಳು ಮುಳ್ಳುಮೊನೆಯಷ್ಟೆ ಇರಲಿ, ಸತ್ಯ ಜ್ಞಾನ ಭಕ್ತಿ ವಿರಕ್ತಿ ಅನಂತ ಆನಂದ ಕ್ಷಮೆ ದಮೆ ದಯೆ ದಾಕ್ಷಿಣ್ಯ ಪರಾರ್ಥ ಪರಹಿತ ವಿಶ್ವಪ್ರೇಮ ವಿಶ್ವಕಲ್ಯಾಣ ಮುಂತಾದ ಪಾವನಗುಣ ಧರ್ಮ ನೀತಿ ಶೀಲವೆಲ್ಲ ಮಾನವಹೃದಯದಲ್ಲಿ ಹೊಮ್ಮುತ್ತಿರುವ ದಿವ್ಯಲಿಂಗದ ಶಿವಪರಿಮಳವೇ. ಈ ಪರಿಮಳವೇ ಮರೆಯ ಮಂದಾರಲಿಂಗದ ಕುರುಹುದೋರುತ್ತದೆ. ದಿವ್ಯೋನ್ಮುಖವಾದ ಮಾನವಹೃದಯ ಮರ್ತ್ಯಲೋಕದಲ್ಲಿ ಬೆಳೆಯುತ್ತಿರುವ ದೇವಲೋಕ ಇದೇ.

ಅನಿಮಿಷ ನೋಟ

ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ, ಅಗಿದು ಕಳೆದೆನಯ್ಯಾ ಭ್ರಾಂತಿನ ಬೇರ. ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ. ಅಖಂಡ ಮಂಡಲವೆಂಬ ಬಾವಿ, ಪವನವೇ ಬಾಟಾಳ, ಸುಷುಮ್ನನಾಳದಿಂದ ಉದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ, ಆವಾಗಳು ಈ ತೋಟದಲ್ಲಿ ಜಾಗರ ವಿದ್ದು ಸಸಿಯ ಸಲಹಿದೆನು ಕಾಣಾ ಗೊಹೇಶ್ವರಾ.[೧]

ಪ್ರಭುದೇವರು.

ಜ್ಯೋತಿಯೊಳಗಿರ್ಪ ಕರ್ಪುರಕ್ಕೆ, ಅಪ್ಪುವಿನೊಳಗಿಪ್ಪ ಉಪ್ಪಿಂಗೆ, ಶ್ರೀಗುರುವಿನೊಳಗಿಪ್ಪ ಶಿಷ್ಯಂಗೆ ಬೇಜಿ ಬೇಜಿ ಕ್ರಿಯಾವರ್ತನೆಯುಂಟೆ ಗೊಹೇಶ್ವರಾ?[೨]

ಪ್ರಭುದೇವರು.

...But when the Divine Consciousness and Power, taking upon itself the human form and the human mode of action, possesses it not only by powers and magnitudes, by degrees and outward faces of itself but out of its eternal self-knowledge, when the unborn knows itself and acts in the frame of the mental being and the appearance of birth, that is the height of the conditioned manifestation; it is the full and conscious descent of the Godhead, it is the Avatara.[೩]

Sri Aurobindo.

ಇನ್ನು ಮೇಲೆ ಪ್ರಭುದೇವರು ಮೊದಲು ತಾವು ಅನಿಮಿಷದೇವರಿಂದ ಗುರು ಕಾರುಣ್ಯ ಜ್ಞಾನಲಿಂಗೋಪದೇಶವನ್ನು ಹಡೆದುಕೊಂಡು, ದಿವ್ಯಾಪೇಕ್ಷೆಯಿಂದ ಶಿವ ಪಥದಲ್ಲಿ ನಡೆಯುತ್ತಿದ್ದ ಶಿವಶರಣರ ಆಚಾರವಿಚಾರದಲ್ಲಿ, ಗುಣ ಶೀಲ ಸ್ವಭಾವ ಸ್ವಧರ್ಮದಲ್ಲಿ, ದೇಹ ಕರಣ ಇಂದ್ರಿಯದಲ್ಲಿ, ಶಿವಜ್ಞಾನ ಶಿವಭಕ್ತಿ ಶಿವಾನುಭವದಲ್ಲಿ ಅವಶೇಷವಾಗಿ ಉಳಿದಿದ್ದ ಸುಸೂಕ್ಷ್ಮ ಅವಲೋಹವನ್ನು ಬಿನ್ನಾಣದಿಂದ ಬಿಡಿಸಿ ಕಳೆದು, ಅವರನ್ನು ಸಚ್ಚಿದಾನಂದ ನಿತ್ಯಪರಿಪೂರ್ಣವಾದ ದಿವ್ಯದಲ್ಲಿ ನೆಲೆಗೊಳಿಸಿದ

೧. ಶೂ. ಸಂ. ಪು. ೧೦, ವ. ೨೯. ೨. ಶೂ. ಸಂ. ಪು. ೧೪, ವ. ೪೦.

೩. Essays on the Gita. p. 17.

ರೀತಿಯನ್ನು ನೋಡುತ್ತ, ಪ್ರಭುದೇವರ ಬೆಂಬಳಿಯಲ್ಲಿ ಸಾಗುವುದು ನಾವು ಅವಶ್ಯವಾಗಿ ಕೈಕೊಳ್ಳಬೇಕಾದ ಮಹಾಪ್ರವಾಸ. ಆದರೆ ಪ್ರಭುದೇವರ ಬೆಂಬತ್ತಿ ನಡೆವ ದಿವ್ಯಸಾಮರ್ಥ್ಯ ನಮಗಿಲ್ಲ. ಜಂಗಮಲಿಂಗ, ಜಂಗಮಲಿಂಗದ ಲಿಂಗಗಂಭೀರ ಗಮನ, ಸುಳುಹಿನ ಸೂಕ್ಷ್ಮ ನಮ್ಮ ಕಣ್ಣು ನಮ್ಮ ಮನಕ್ಕೆ ಗೋಚರವಲ್ಲ. ವಿಶ್ವಪ್ರಪಂಚವೆ—ತನ್ನ ವಿಶ್ವನಾಮ ವಿಶ್ವರೂಪ ವಿಶ್ವಕ್ರಿಯೆ—ತನಗೆ ಅಂಗವಾಗಿ, ಕಾಲ ದೇಶ ವಸ್ತುವಿನಲ್ಲಿ 'ಎತ್ತೆತ್ತ ನೋಡಿದಡತ್ತತ್ತ' ಕಾಣದಂತೆ ಕಂಡು, ಸುಳಿಯದಂತೆ ಸುಳಿದು, ಇಲ್ಲದಂತೆ ಇರುವ ಪರಿಪೂರ್ಣ ಪರಂಜ್ಯೋತಿ ಗೊಹೇಶ್ವರಲಿಂಗವೆ ತಾನಾಗಿ ನಿಂದು ನಡೆದಾಡುವ ಪ್ರಭುಲಿಂಗದ 'ವಿಗಡ ಚಾರಿತ್ರ'ವನ್ನು ನಮ್ಮ ಮಟ್ಟಿನಲ್ಲಾದರೂ ನೋಡಿ ತಿಳಿಯಬೇಕೆಂದಿದ್ದರೆ, 'ಪ್ರಭುದೇವರ ಶೂನ್ಯಸಂಪಾದನೆ'ಕಾರರಾದ ಸಿದ್ಧವೀರದೇವರೇ ನಮಗೆ ಶರಣು. ಈ ದೇವರ ಕೈಹಿಡಿದು ಪ್ರಭುದೇವರ ಬೆನ್ನುಹತ್ತೋಣವೇ? ಈ ಪ್ರವಾಸ ಸುದುರ್ಗಮ. ಆದರೇನು? ದಿವ್ಯಸುಂದರ, ಪರಮಪಾವನ, ಮಹಾಮಂಗಲ.

ಸಿದ್ಧವೀರದೇವರು ಶೂನ್ಯಸಂಪಾದನೆಯ ಪ್ರಾರಂಭಭಾಗದಲ್ಲಿಯೆ ಹೇಳುವಂತೆ ಪ್ರಭುದೇವರು ಹರಿಹರದೇವ ಮತ್ತು ಶಿವಗಣಪ್ರಸಾದಿ ಮಹಾದೇವಯ್ಯಗಳು ಚಿತ್ರಿಸುವಂತೆ[೧] ಶಾಪದಿಂದ ಭೂಮಿಗೆ ಬಂದವರಲ್ಲ ಅಥವಾ ಬಿದ್ದವರಲ್ಲ. ಆದರೆ ನಿಃಕಲ ಪರಶಿವಲಿಂಗದ ಪ್ರತ್ಯಕ್ಷ ಅವತಾರವೆ ಅಲ್ಲಮಪ್ರಭುದೇವರು. ಪ್ರಭುದೇವ ಬಸವಣ್ಣ ಚೆನ್ನಬಸವಣ್ಣನವರು ಆ ಲಿಂಗದ ಅವತಾರವೆ. ಇದೋ ಇಲ್ಲಿ ಕೇಳಿ ಸಿದ್ಧವೀರದೇವರ ಖಂಡಿತ ಅಭಿಪ್ರಾಯವನ್ನು:

> '....ಆ ನಿಃಕಲ ಪರಶಿವನ ಸಚ್ಚಿದಾನಂದ ಸ್ವರೂಪವೆನಿಸಿದ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರೇ ಗುರು ಲಿಂಗ ಜಂಗಮ ಸ್ವರೂಪವಾಗಿ ಸಕಲ ಜಗತ್‌ಪಾವನವಾಗಿ ಮರ್ತ್ಯಕ್ಕೆ ಅವತರಿಸಿದರು. ಇಂತೀ ಗುರು ಲಿಂಗ ಜಂಗಮ

---

೧. ಅಲ್ಲಮ ಪ್ರಭುದೇವರು ಶಾಪದಿಂದ ಮರ್ತ್ಯಕ್ಕೆ ಬಂದರೆಂದು ಹೇಳುವವರು:
1. ಹರಿಹರದೇವ: ಪ್ರಭುದೇವರ ರಗಳೆ.
2. ಕುಮಾರ ಬಂಕನಾಥದೇವರು: ಪ್ರಭುದೇವರ ಟೀಕಿನ ವಚನಗಳು. (ಪ್ರಭುದೇವರ ಹಿಂದಸಂಭವವಾದ ಗದ್ಯದಲ್ಲಿ ಶಾಪದ ವೃತ್ತಾಂತ ಡಾ. ಹಳಕಟ್ಟಿಯವರು ಪ್ರಕಾಶಮಾಡಿದ ಪ್ರತಿಯಲ್ಲಿದೆ. ಆದರೆ ಈ ಗದ್ಯಭಾಗ ಎಲ್ಲ ಪ್ರತಿಗಳಲ್ಲಿ ಇಲ್ಲವಂತೆ. ನಮ್ಮಲ್ಲಿರುವ ಪ್ರತಿಯಲ್ಲಿಯೂ ಈ ಭಾಗವಿಲ್ಲ.)
3. ಶಿವಗಣಪ್ರಸಾದಿ ಮಹಾದೇವಯ್ಯಗಳು: ಪ್ರಭುದೇವರ ಶೂನ್ಯಸಂಪಾದನೆ.
4. ಕೆಂಚವೀರಣ್ಣೊಡೆಯ ಕಲ್ಲೇಶ್ವರದೇವ ಮುಂತಾದವರು ಕೂಡಿ ಬರೆದ ಶೂನ್ಯಸಂಪಾದನೆ.

ಈ ಸಂದರ್ಭದಲ್ಲಿ ಪ್ರಭುಲಿಂಗಲೀಲೆಯ ಸಂಗ್ರಹದ ಪೀಠಿಕೆಯ 'VI ಅಲ್ಲಮನ ಚರಿತ್ರೆಯಲ್ಲಿ ನಡೆದಿರುವ ಮಾರ್ಪಾಟು' ಎಂಬ ಭಾಗವನ್ನು ಅವಲೋಕಿಸಿರಿ.

ಪುಟ XXXVII–XLIV

> ಮೂಜಿು ಆ ನಿಃಕಲ ಪರಶಿವಲಿಂಗ ತಾನೆ. ಆ ಪರಶಿವಲಿಂಗವು ಜಗಹಿತಾರ್ಥವಾಗಿ ಮೂಜಿಾಗಿ ಮರ್ತ್ಯಕ್ಕೆ ಅವತರಿಸಿದರೆ, ಇದೇನು ಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸಿ, ಶಾಪದಿಂದ ಬಂದರೆಂದು ಆವನಾನೊಬ್ಬ ನುಡಿವುತ್ತಿದ್ದಾನು ಅವನು ಇಪ್ಪತ್ತೆಂಟುಕೋಟಿ ನರಕದಲ್ಲಿ ರವಿ ಶಶಿವುಳ್ಳನ್ನಬರ ನರಕವನನುಭವಿಸುತ್ತಿರ್ಪನು ....'[1]

ಹೀಗೆ ಹೇಳಿ ತಮ್ಮ ಹೇಳಿಕೆಗೆ ಪ್ರಭುದೇವರ ಮತ್ತು ಚೆನ್ನಬಸವಣ್ಣನವರ 'ಸ್ವಯ ವಚನವೆ' ಸಾಕ್ಷಿಯೆಂದು ಕೆಳಗೆ ಕೊಟ್ಟ ವಚನವನ್ನು ಮೂಲಾಧಾರವನ್ನಾಗಿ ಇರಿಸಿದ್ದಾರೆ:[2]

> ಕೃತಯುಗದಲ್ಲಿ ಜಗಹಿತಾರ್ಥವಾಗಿ ಬಂದು ದೇವಾಂಗನೆಂಬ ಗಣೇಶ್ವರನಾಗಿ ಆರಾಧಿಸುವಲ್ಲಿ, ಭಕ್ತಿಕಾರಣ ಸ್ಥೂಲಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ತ್ರೇತಾಯುಗದಲ್ಲಿ ಜಗಹಿತಾರ್ಥವಾಗಿ ಘಂಟಾಕರ್ಣನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ, ಭಕ್ತಿಕಾರಣ ಶೂನ್ಯಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ದ್ವಾಪಾರದಲ್ಲಿ ಜಗಹಿತಾರ್ಥವಾಗಿ ವೃಷಭನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ, ಭಕ್ತಿಕಾರಣ ಅನುಮಿಷನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ಕಲಿಯುಗದಲ್ಲಿ ಜಗಹಿತಾರ್ಥವಾಗಿ ಬಸವನೆಂಬ ಗಣೇಶ್ವರನಾಗಿ ಬಂದು ಗುರು ಲಿಂಗ ಜಂಗಮ ಪಾದೋದಕ ಪ್ರಸಾದದ ಹಾದಿಯ ನೆಲ್ಲರಿಗೆ ತೋಜಿ ಆರಾಧಿಸುವಲ್ಲಿ, ಭಕ್ತಿಕಾರಣ ಪ್ರಭುವೆಂಬ ಜಂಗಮವಾಗಿ ಲಿಂಗಾರ್ಚನೆಯ ಮಾಡಬಂದ. ಇಂತೀ ಪರಶಿವಲಿಂಗವು ತನ್ನ ಲೀಲಾವಿನೋದಕ್ಕೆ ದೇವ ಭಕ್ತನೆಂಬ ಉಭಯನಾಮ ಧರಿಸಿದ ಕ್ರಿಯಾಂಗವನಜಿಯದೆ ಶಾಪದಿಂದ ಬಂದರೆಂದು ಸಂಕಲ್ಪಿಸಿ ನುಡಿವವರಿಗೆ ನಾಯಕನರಕ ತಪ್ಪದು.[3]

ಈ ವಚನ ನಿಜವಾಗಿ ಚೆನ್ನಬಸವಣ್ಣನವರದೆ ಇದ್ದರೆ, ಅವರ ನಂತರ ಬಂದ ಹರಿಹರದೇವನ ಪ್ರಭುದೇವರ ರಗಳೆಯಲ್ಲಿ ಚಿತ್ರಿತವಾಗಿರುವ ಶಾಪದ ಪ್ರಸಂಗಕ್ಕೆ, ಕಾಮಲತೆಯೊಡನೆ ತನ್ನ ಪೂರ್ವಾಶ್ರಮದಲ್ಲಿ ಪ್ರಭುದೇವರು ನಡೆಸಿದ ಸಂಸಾರಜೀವನಕ್ಕೆ ಆಧಾರದ ಪ್ರಶ್ನೆಯೇ ಉಳಿವುದಿಲ್ಲ. ಸಮಕಾಲೀನರಾಗಿ ಒಡನಾಡಿಗಳಾಗಿದ್ದ

---

೧. ಶೂ. ಸಂ. ಪು. ೪, ಗದ್ಯ.

೨. ಇಲ್ಲಿ ಸಿದ್ಧವೀರದೇವರು ಚೆನ್ನಬಸವಣ್ಣನವರ ಒಂದೇ ವಚನವನ್ನು ಸಾಕ್ಷಿ ಕೊಟ್ಟಿದ್ದಾರೆ. ಪ್ರಭುದೇವರ ವಚನವನ್ನು ಕೊಟ್ಟಿಲ್ಲ.

೩. ಶೂ. ಸಂ. ಪು. ೫ (ಈ ಪ್ರತಿಯಲ್ಲಿ ಈ ವಚನದ ಕೊನೆಗೆ 'ಕೂಡಲಸಂಗಮದೇವ' ಎಂಬ ಬಸವಣ್ಣನವರ ವಚನಗಳ ಮುದ್ರಿಕೆ ಇದೆ. ಆದರೆ ಇದು ಚೆನ್ನಬಸವಣ್ಣನವರ ವಚನವೆ ಎಂಬುದು ಇದೇ ಗ್ರಂಥದ ೩೦೨-೩೦೩ನೆಯ ಪುಟದಲ್ಲಿ ಬರುವ ೫೨ನೆಯ ವಚನದಿಂದ ತಾನೇ ಸ್ಪಷ್ಟವಾಗುತ್ತದೆ.)

ಪ್ರಭುದೇವರನ್ನು ಕುರಿತು ಮಾತಾಡುವ ಅಧಿಕಾರವಾಣಿ ಚೆನ್ನಬಸವಣ್ಣನವರಿಗಿದ್ದಂತೆ ಹರಿಹರದೇವನಿಗೆ ಹೇಗೆ ಬಂದೀತು? ಮತ್ತೆ, ಸ್ವಲ್ಪ ಹಿಂದೆ ಮುಂದೆ ೧೨ನೆಯ ಶತಮಾನದ ಹರಿಹರದೇವನಿಗೇ ಈ ಅಧಿಕಾರವಿಲ್ಲದಿದ್ದರೆ ೧೫ನೆಯ ಶತಮಾನದ ಕುಮಾರ ಬಂಕನಾಥ ಮತ್ತು ಶಿವಗಣಪ್ರಸಾದಿ ಮಹಾದೇವಯ್ಯಗಳ 'ಶಾಪ ಮತ್ತು ಕಾಮಲತೆ'ಯರ ಕಥೆ ಕಟ್ಟುಕಥೆಯಾಗಿ ನಿಲ್ಲುತ್ತವೆ; ಸತ್ಯದ ಆಸರವಿಲ್ಲದೆ, ಅನಧಿಕೃತವಾಗಿ ಕವಿಕಲ್ಪನೆಯ ಸೀಮೆಯಲ್ಲಿ ಉಳಿಯುತ್ತವೆ. ಆದರೆ ಮೇಲೆ ಕೊಟ್ಟ ವಚನ ಚೆನ್ನಬಸವಣ್ಣನವರದೇ ಎಂಬುದನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಇನ್ನೂ ತಳ ಸೋಸಿ ಪರಾಮರ್ಶಿಸಿ ನೋಡಬೇಕು.

ಪ್ರಭುದೇವರು ಶಾಪಹತರಾಗಿ ಭೂಮಿಗೆ ಬಂದವರಲ್ಲ ಅಥವಾ ಭೂಮಿಯಲ್ಲಿ ಭೌತಿಕದೇಹದ ಮಾನವಚೋಹವನ್ನು ತೊಟ್ಟು, 'ಚೋಹವೆ ತಾನು' ಎಂಬ ಮರವೆಯ ಕೈಯಲ್ಲಿ ಸಿಕ್ಕಿ, ಕಾಮಲತೆಯನ್ನು ಮೋಹಿಸಿ ಮಾಯಾಮೋಹದ ಜಂಜಡದಲ್ಲಿ ಬಿದ್ದು, ಕಾಮಲತೆ ಸತ್ತು ಹೋದ ಮೇಲೆ ಬುದ್ಧಿ ಬಂದು ಎಚ್ಚತ್ತು ನೋಡಿ, ತನ್ನ ತಾ ತಿಳಿದು ತನ್ನ ನಿಜಸಿದ್ಧಿಯನ್ನು ಪಡೆದ ಮಾನವಮೂರ್ತಿಯಲ್ಲ. ಸಿದ್ಧವೀರದೇವರ ಮತದಂತೆ ಪ್ರಭು 'ನಿರ್ಮಾಯ' 'ನಿರಂಜನ' 'ಮಾಯಾಕೋಲಾಹಳ.' ಯಾರಾದರು ಪ್ರಭುವನ್ನು ಮಾಯಾಸಕ್ತ, ಮಾಯಾವಶಗತನೆಂದು ನುಡಿದರೆ ಅವರಿಗೆ 'ಗುರು ಲಿಂಗ ಜಂಗಮದ್ರೋಹ ತಪ್ಪದು.' ಏಕೆ? ಸಿದ್ಧವೀರದೇವರು ಶಾಪದ ಪ್ರಸಂಗವನ್ನು, ಕಾಮಲತೆಯೊಡನೆ ಅಲ್ಲಮ ನಡೆಸಿದ ಸಂಸಾರ ಪ್ರಸಂಗವನ್ನು ಖಂಡಿತವಾಗಿ ನಿರಾಕರಿಸುವಂತೆ, ಆ ಶಾಪ ಮತ್ತು ಭವಸಂಸಾರಕ್ಕೆ ಮೂಲಕಾರಣವಾದ ಅಲ್ಲಮಪ್ರಭುವಿನ ಮಾಯಾಸಕ್ತಿ, ಮಾಯಾವಶವರ್ತಿತ್ವವನ್ನೆ ಖಂಡಿಸುತ್ತಾರೆ. ಅದರ ಸಮರ್ಥನೆಗೆ ಪ್ರಭುದೇವರ 'ಸ್ವಯವಚನ'ವನ್ನೆ ಸಾಕ್ಷಿಕೊಟ್ಟಿದ್ದಾರೆ:

> ಬ್ರಹ್ಮವಿಷ್ಣುಗಳ ಮಾಯೆ ತೊತ್ತಳದುಳಿವಂದು,
> ದೇವದಾನವರ ಮಾಯೆ ಅಗಿದಗಿದು ತಿಂಬಂದು,
> ರುದ್ರಗಣ ಪ್ರಮಥಗಣಂಗಳೆಂಬವರ ಮಾಯೆ ಮರುಳ್‌ಮಾಡಿ ಕಾಡುವಂದು,
> ನೊಸಲ ಕಣ್ಣು ಪಂಚಮುಖ ದಶಭುಜದವರಿಗೆ ಮಾಯೆ ಅರ್ಧಾಂಗಿಯಾದಂದು,
> ಅಷ್ಟಾಶೀತಿಸಹಸ್ರ ಋಷಿಯರುಗಳ ಮಾಯೆ ತಪೋಮದದಲ್ಲಿ ಕೆಡಹುವಂದು,
> ನಾನು ಮಾಯಾಕೋಲಾಹಳನಾಗಿರ್ದೆ ಕಾಣಾ ಗೊಹೇಶ್ವರಾ.[೧]

ಬ್ರಹ್ಮ ವಿಷ್ಣುಗಳು ದೇವ ದಾನವರು ರುದ್ರಗಣ ಪ್ರಮಥಗಣಂಗಳು ಮನು ಮುನಿ ಋಷಿಯರುಗಳು ಪಂಚಮುಖ ದಶಭುಜ ಹಣೆಗಣ್ಣ ಹರ ಮುಂತಾದವರು ಮಾಯೆಯ

---

೧. ಶೂ. ಸಂ. ಪು. ೭, ವ. ೫.
ಇದೇ ವಚನ ಪ್ರಭುಲಿಂಗಲೀಲೆಯ ೭ನೆಯ ಗತಿಯ ಪ್ರಾರಂಭದಲ್ಲಿ ಬರುವ ೩ನೆಯ ವಚನವಾಗಿದೆ.

ನೋ: ಪ್ರ. ಲಿಂ. ಲೀ. ಪು. ೮೧, ವ. ೩.

ತಕ್ಕೆಯಲ್ಲಿ ಸಿಕ್ಕವರೇ. ಇದು ಸಹಜ. ಮಾಯೆಯ ಆಧಾರದ ಮೇಲೆಯೆ ವಿಶ್ವ-ಮೂರ್ತಿ-ಪ್ರಪಂಚದ ಕಟ್ಟಡ ನಿಂತಿದೆ. ಆಧಾರ ತಪ್ಪಿದರೆ? ಅಖಂಡ ಪರಿಪೂರ್ಣವಾಗಿರುವ ಚಿದ್‌ಬೆಳಗಿನ ಬಯಲಲ್ಲಿ ಬ್ರಹ್ಮ ತಾನೊಬ್ಬ ಬೇರಾಗಿ, ವಿಷ್ಣುವೆಂದು ವಿಷ್ಣುರೂಪಾಗಿ, ಪಂಚಮುಖದ ಪರಮೇಶ್ವರ ದಶಭುಜಗಳನ್ನು ತೊಟ್ಟು ಖಂಡಿತವಾದ ರೂಪುದೋರುವ, ಲೀಲೆಯಾಡುವ ಸಂಭವವೆಲ್ಲಿ? ಎಂದೇ ಇರಲಿ, ಎಲ್ಲಿಯೇ ಇರಲಿ, ನಾಮ ರೂಪ ಕ್ರಿಯಾಕಲಾಪವೆಲ್ಲ ಮಾಯಾಶಕ್ತಿಯ ಜಾಲಪ್ರಭಾವದಲ್ಲಿ ಮೂಡಿ ಆಡಿ ಮುಳುಗುವ ಖಂಡಿತ ಲೀಲೆಯೇ.[೧]

'ಇಂತು ಸರ್ವವು ನಿನ್ನ ಮಾಯೆ.' ಇಲ್ಲಿ 'ನಿನ್ನ ಮಾಯೆ' ಅಂದರೆ ನಿನ್ನ ವಶವರ್ತಿಯಾಗಿರುವ ಮಾಯೆ ಎಂದರ್ಥ. ನಿನಗೆ ಅಧೀನವಾಗಿ, ನಿನ್ನ ಪ್ರಭುತ್ವದಲ್ಲಿ ಲೀಲೆಯಾಡುವ ನಿನ್ನ ಮಾಯೆ ಎಂದರ್ಥ. ಅಲ್ಲವೇ? ಎಲ್ಲ ಎಲ್ಲರು, ಎಲ್ಲ ಎಲ್ಲವು ಮಾಯಾಸಕ್ತವಾಗಿ ಮಾಯಾವಶಗತವಾಗಿ ಮಾಯೆ ಕುಣಿಸಿದಂತೆ ಕುಣಿದರೂ ಮಾಯೆಯನ್ನು ಕುಣಿಸುವ 'ನೀನು,' ಮಾಯಾತೀತವಾದ 'ನೀನು.' ಮಾಯೆಯ ಅಂಜನ, ಮಾಯೆಯ ಲೇಪ ಒಂದಿನಿಸಿಲ್ಲದ ನಿರ್ಮಾಯ ನಿರಂಜನ ನಿರ್ಲೇಪ 'ನೀನು.' ಈ ನಿರ್ಮಾಯ 'ನೀನು' ಯಾರು? ಗುಹೇಶ್ವರ. 'ಗುಹೇಶ್ವರ'ನೆಂಬುದೂ ಹೆಸರಿನ ಹಂಗಿನಲ್ಲಿರಬಹುದು. ಹೆಸರಡಗಿದ ಗುಹೇಶ್ವರ ನೀನು. ಅದೇ 'ನಿರ್ಮಾಯ', ಅದೇ 'ಅಲ್ಲಮ', ಅದೇ 'ಪ್ರಭು.'

ಈ ನಿರ್ಮಾಯವಾದ ಅಲ್ಲಮಪ್ರಭು ಅನಾದಿ ಗಣೇಶ್ವರ, ಅನಾದಿ ಶರಣತತ್ತ್ವ. ಅದೇ 'ಏಕಮೇವಾದ್ವಿತೀಯ'ದೊಡನೆ ಅವಿನಾಭಾವವಾಗಿ ಒಂದಾಗಿರುವ ಅನಾದಿ ಚಿಚ್ಛಕ್ತಿ. ಇಂಥ ಅನಾದಿ ಗಣೇಶ್ವರತ್ವಕ್ಕೆ ಮಾಯೆಯ ಅಂಜನ ಲೆಪ್ಪಿಸಲಿಲ್ಲ. ಹರಿಹರದೇವ ಶಿವಗಣಪ್ರಸಾದಿ ಮಹಾದೇವಯ್ಯಗಳು ಹೇಳುವ ಅಲ್ಲಮಪ್ರಭು ರುದ್ರಗಣ

---

೧. ಕೆಳಗಣ ವಚನಗಳನ್ನು ಇಲ್ಲಿ ಮತ್ತೊಮ್ಮೆ ನೆನೆಸಿಕೊಳ್ಳಿ:

ಬ್ರಹ್ಮ ಘನವೆಂಬೆನೆ? ಬ್ರಹ್ಮನ ನುಂಗಿತ್ತು ಮಾಯೆ.
ವಿಷ್ಣು ಘನವೆಂಬೆನೆ? ವಿಷ್ಣುವ ನುಂಗಿತ್ತು ಮಾಯೆ.
ರುದ್ರ ಘನವೆಂಬೆನೆ? ರುದ್ರನ ನುಂಗಿತ್ತು ಮಾಯೆ.
ತಾ ಘನವೆಂಬೆನೆ? ತನ್ನ ನುಂಗಿತ್ತು ಮಾಯೆ.
ಇಂತು ಸರ್ವವು ನಿನ್ನ ಮಾಯೆ
ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ?

ಪ್ರ. ವ. ಪು. ೧೮, ವ. ೨೨.

ದೈವರನ್ನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ.
ಹರಹರಾ ! ಮಾಯೆ ಇದ್ದೆಡೆಯ ನೋಡಾ. ಶಿವಶಿವಾ ! ಮಾಯೆ ಇದ್ದೆಡೆಯ ನೋಡಾ.
ಎರಡೆಂಬತ್ತುಕೋಟಿ ಪ್ರಮಥಗಣಂಗಳು, ಅಂಗಾಲ ಕಣ್ಣುಳ್ಳವರು,
ಮೈಯೆಲ್ಲಾ ಕಣ್ಣುಳ್ಳವರು, ನಂದಿವಾಹನ ರುದ್ರರು,
— ಇವರೆಲ್ಲರು ಮಾಯೆಯ ಕಾಲುಗಾಹಿನ ಸರಮಾಲೆ ಕಾಣಾ ಗುಹೇಶ್ವರಾ.

ಪ್ರ. ವ. ಪು. ೧೯; ವ. ೨೩.

ಪ್ರಮಥಗಣಕೋಟಿಯ ಆದಿಗಣೇಶ್ವರ. ಈ ರುದ್ರ ಪ್ರಮಥಗಣ ಕೋಟಿಯೆಲ್ಲಾ 'ಮಾಯೆಯ ಕಾಲುಗಾಪಿನ ಸರಮಾಲೆ.' ಆದರೆ ಇಂಥ ರುದ್ರಪದವಿ ಗಣಪದವಿಗಳು, ಶಾಪಗೀಪದ ಪ್ರಸಂಗಗಳು ಶರಣನ ನಿಜದರ್ಶನಕ್ಕೆ ಹೊರತೆಂಬುದು ನಾವು ಎಂದಿಗೂ ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕ ಸಂಗತಿ. ಹರಿಹರ ಮಹಾದೇವಯ್ಯಗಳ ಅಲ್ಲಮಪ್ರಭು ಕಾರಣ ಪುರುಷ, ಅವತಾರ ಹೌದು. ಶಾಪಹತವಾಗಿ ಭೂಮಿಗೆ ಅವತರಿಸಿ ಶಾಪದ ಫಲ ವನ್ನುಂಡು, ವಿಮೋಚನ ಹೊಂದಿ, ಜಗದುದ್ಧಾರ ಮಾಡಿದ ಕೈಲಾಸದ ಅವತಾರ ಅದು. ಆದರೆ ಚಾಮರಸ ಗುಮ್ಮಳಾಪುರದ ಸಿದ್ಧಲಿಂಗದೇವರು ಮತ್ತು ಗೂಳೂರ ಸಿದ್ಧವೀರಣ್ಣೊಡೆಯರ ಅಲ್ಲಮಪ್ರಭು ಕೈಲಾಸದ ಅವತಾರವಲ್ಲ, ಮಾಯಾಮೋಹಿತ ವಾದ ಅವತಾರವಲ್ಲ, ಶಾಪಹತವಾಗಿ ಭೂಮಿಗಿಳಿದ ಅವತಾರವಲ್ಲ, ಶಾಪದ ಫಲವಾದ ಕಾಮಲತೆಯೊಡನೆ ಸಂಸಾರಸುಖವನ್ನುಂಡು, ಆಕೆ ಸತ್ತ ಮೇಲೆ ತನ್ನ ತಾನೆಚ್ಚತ್ತು ಮರ್ತ್ಯದಲ್ಲಿ ತನ್ನ ಋಣಹವನ್ನು ತೀರಿಸಿ ಮತ್ತೆ ಕೈಲಾಸದ ಪ್ರಮಥಗಣಪದವಿಯಲ್ಲಿ ನಿಂದ ಕೈಲಾಸಮೂರ್ತಿಯಲ್ಲ. ಅದು ನಿರಂಜನದ ಅವತಾರ. ನಿರ್ಲೇಪ ಮೂರ್ತಿ, ನಿರ್ಮಾಯ ಆಕಾರ, 'ಸಗುಣ ನಿರ್ಗುಣಭರಿತ.' ಈ ಅವತಾರ ಕೇವಲ ಭಕ್ತಿಕಾರಣ, ಜಗತ್‌ಕಲ್ಯಾಣಕಾರಣ, ಜಗದುದ್ಧಾರ ಕಾರಣ. ಕೈಲಾಸದಿಂದ ಅವತಾರ ಜಗತ್ತನ್ನು ಕೈಲಾಸಕ್ಕೆ ಎತ್ತಬಲ್ಲರೆ, ಚಿದ್‌ಬೆಳಗು ಚಿದ್‌ಬಯಲಿನ ಅವತಾರ ಲೋಕವನ್ನು ಬೆಳಗುವ ಚಿದ್‌ಬಯಲಿನ ಸೀಮೆಗೆ ಉದ್ಧರಿಸಬಹುದು. ಶರಣರ ಗುರಿ ಈ ಬಯಲು; ಸ್ವರ್ಗ ಕೈಲಾಸ ವೈಕುಂಠವಲ್ಲ. ಈ ಕೈಲಾಸ ಶೈವಸಿದ್ಧಾಂತದ ಸಿದ್ಧಿ; ವೀರಶೈವದ ಅಥವಾ ಶರಣಮಾರ್ಗದ ಚರಮಸಿದ್ಧಿಯಲ್ಲ. ಶಾಪ, ಕೈಲಾಸ ಶೈವ ಸಂಪ್ರದಾಯದ ಪುರಾಣ. ಈ ಪುರಾಣ ಶರಣನ ಅನುಭವ ಒಪ್ಪತಕ್ಕ ಮಾತೇ ಅಲ್ಲ.

ಕೈಲಾಸ ಗಣಪದವಿ ಶಾಪಗಳ ಪ್ರಸಂಗ ಶರಣರಿಗೆ, ನಮ್ಮ ಬುದ್ಧಿಗೆ ಒಪ್ಪಿಗೆಯಾಗ ದಿದ್ದರೂ ಕಾಮಲತೆಯ ಪ್ರಸಂಗವನ್ನು ನಾವು ಒಪ್ಪಬಾರದೆಂದು ನಮ್ಮ ಮತವಲ್ಲ. ಒಪ್ಪಬಹುದು ಅಥವಾ ಬಿಡಬಹುದು. ಆದರೆ ಉಪಲಬ್ಧವಿರುವ ಪ್ರಭುದೇವರ ವಚನಗಳ ಧೋರಣೆಯನ್ನು ಸಮಗ್ರವಾಗಿ ಪರಿಶೀಲಿಸಿದರೆ. ಕಾಮಲತೆಯ ಪ್ರಸಂಗಕ್ಕೆ ಆಧಾರ ಒಂದು ಕೂದಲಿನಷ್ಟು. ಇದೋ ಇಲ್ಲಿದೆ ಅವರ ಒಂದು ವಚನ:

ಇವಳ ನೋಟವೆನ್ನ ಮರ್ತ್ಯಕ್ಕೆ ತಂದುದಯ್ಯಾ.
ಅವಳ ಕೂಟದ ಸವಿಯುಂಡಗಿಸಿ ಕಾಡಿತ್ತಯ್ಯಾ.
ಇವಳ ಬೇಟ ಬೇರು ಹರಿದಲ್ಲಿ ತ್ರಿಪುರ ಹಾಳಾಯಿತ್ತ ಕಂಡೆ.
ಉರಿಯು ಮೇಲೆ ಉರಿಯೆಜಗಿದರೆ ತಂಪು ಮೂಡಿತ್ತ ಕಂಡೆನು.
ಕರಿಯು ಬೇಡನ ಕಸ್ತುರಿಯು ಮೃಗ ನುಂಗಿದರೆ
ಹಿರಿಯು ಹೆಂಡತಿ ಓಲಿಗೆಳೆದುದ ಕಂಡೆನು.

> ಕಾರಿರುಳ ಕೋಟೆಯ ಕಾಳಗವ ಗೆಲಿದು
> ಹೊಳೆದ ನಿಧಾನವ ಕಂಡೆನು ಕಾಣಾ ಗೊಗೇಶ್ವರಾ.[೧]

ಪ್ರಭುದೇವರ ಎಲ್ಲ ವಚನಗಳಲ್ಲಿ ಇಂಥ ಎರಡು ಮೂರು ಅಥವಾ ನಾಲ್ಕೈದು ವಚನಗಳನ್ನು ಬಿಟ್ಟರೆ, ಪ್ರಭುದೇವರ ಮಾಯಾಸಂಸಾರದ ಕುರುಹೇ ಇಲ್ಲ. ಉಳಿದೆಲ್ಲ ವಚನಗಳು ಅವರ 'ನಿಶ್ಚಿಂತ ನಿರಾಳ ಗುಹೇಶ್ವರ'ತ್ವದ ನಿರಾಳ ನಿಲವನ್ನೇ ಉದ್ಘೋಷಿಸುವಂತಿವೆ. ಹೀಗಿದ್ದರೂ ಕಾಮಲತೆಯೊಡನೆ ಸಂಸಾರ ನಡೆಸಿರಲೆ ಬೇಕು ಪ್ರಭುದೇವರು ಎಂದು ನೀವು ವಾದಿಸಿ, ಸಾಧಿಸಿದರೆ ಅದಕ್ಕೆ ನನ್ನ ಆಕ್ಷೇಪವೆ ಇಲ್ಲ.

ಆದರೂ ಪ್ರಭುಲಿಂಗಲೀಲೆಯ ೬ನೆಯ ಗತಿಯಾದ 'ಪ್ರಭು ಮಾಯೆಗೆ ಸಿಕ್ಕದೆ ಹೋದ ಗತಿ'ಯ ಪ್ರಾರಂಭದಲ್ಲಿ ಬರುವ ಪ್ರಭುದೇವರ ಎರಡು ವಚನಗಳನ್ನು ಸಾವಧಾನವಾಗಿ ಪರೀಕ್ಷಿಸಿ ನೋಡಿ:

> ಭಾವಗೆಟ್ಟನು, ಭವಗೆಟ್ಟನು. ಒಡಹುಟ್ಟಿದರೈವರ ಕೈಬಿಟ್ಟನು.
> ಭಂಡನು ಲಜ್ಜಭಂಡನು ! ಕಂಡರೆ ನುಡಿಸದಿರಾ ಮಾಯಾದೇವಿ.
> ಅರುವೆಯನುಟ್ಟನು, (ಅರುವೆಯ ಸುಟ್ಟನು?) ನೆರೆ ಮರುಳಾದನು.
> ಹುಟ್ಟ ಮುರಿದನು, ಮಡಕೆಯನೊಡೆದನು.
> ಆದಿ ಪುರಾತನು, ಅಚಲ ಲಿಂಗೈಕ್ಯನು.
> ಗುಹೇಶ್ವರನಲ್ಲಯ್ಯಂಗೆ ಮೂಗಿಲ್ಲ ಮಗಳೇ.[೨]

ಈ ವಚನ ಹೇಳುವಂತೆ ಪ್ರಭುದೇವ ನಿರ್ಭಾವ, ಭವರಹಿತ, ನಿಷ್ಪ್ರಪಂಚ, ನಿರ್ಮಾಯ. ಸಾವ ಹುಟ್ಟುವ ದಂದುಗವನ್ನು ಮುರಿದು ದೇಹಭಾವವನ್ನು ಒಡೆಹಾಕಿದಾತ. ಜ್ಞಾನ ನಿಷ್ಪತ್ತಿಯಾಗಿ ಲಿಂಗದಲ್ಲಿ ಪರವಶವನೈದಿ ಸನಾತನ ಪುರುಷನೆನಿಸುವ ಪ್ರಭುವಾತ. ಬಿಚ್ಚಿ ಬೇರಾಗದಂತೆ ಮಹಾಲಿಂಗದಲ್ಲಿ ಒಂದಾಗಿ ನಿಂದಿರುವ ಗುಹೇಶ್ವರಲ್ಲಯ್ಯನಿಗೆ ಅಥವಾ

---

೧. ಶಿ. ಪ್ರ. ಮ. ಶೂ. ಸಂ. ಪು. ೬, ವ. ೩೧ [ತಾಡೋಲೆಯ ಪ್ರತಿ]

ಇದೇ ಸಂದರ್ಭದಲ್ಲಿ ಇನ್ನೆರಡು ವಚನಗಳನ್ನು ಅವಲೋಕಿಸಿರಿ:

1. ಮಾಯೆಯ ಬಲೆಯಲ್ಲಿ ಸಿಲುಕಿದ ಮರುಳ ನಾನೆಂದಱಿದ ಪರಿಯ ನೋಡಾ.
   ಲಿಂಗವೆಂದಱಿದ ಪರಿಯ ನೋಡಾ.
   ತನ್ನ ವಿನೋದಕ್ಕೆ ಬಂದ ನಿಶ್ಚಿಂತ ನಿರಾಳ ಗುಹೇಶ್ವರನೆಂದಱಿದ ಪರಿಯ ನೋಡಾ.
   ಪ್ರ. ವ. ಪು. ೧೦, ವ. ೧೧.
2. ಕರ್ಮದ ಗಡಣ ಹಿಂಗಿದವಿಂದು. ಪಾಪದ ಬಲೆ ಬಳಸಿಹೋದವು.
   ಒಲ್ಲೆನೊಲ್ಲೆನೀ ಸಂಸಾರದಲ್ಲಿ ನೊಂದೆ ಬೆಂದೆನಾಗಿ
   ಮಾಯದ ತಲೆಯ ಮೆಟ್ಟಿಹೋದೆನು.
   ಇನ್ನು ಮರಳಿ ಬಾರೆನು ಗುಹೇಶ್ವರ ನಿಮ್ಮಾಣೆ.
   ಶಿ. ಪ್ರ. ಮ. ಶೂ. ಸಂ. ಪು. ೪, ವ. ೧೨.

೨. ಪ್ರ. ಲೀ. ಗ. ೭, ಪು. ೮೧, ವ. ೨.

ಅಲ್ಲಮ್ಮಗುಹೇಶ್ವರನಿಗೆ ವಿಷಯವಾಸನೆಯಿಂದ ಕ್ಷುಬ್ಧವಾಗಿ ಸುಖದುಃಖವನ್ನು ಮೂಸಿ ನೋಡುವ ಮೂಗೇ ಇಲ್ಲ. ಇಲ್ಲದ ಮೂಗಿನಲ್ಲಿ ವಿಷಯಸುಖದ ಸುಳಿವಿಲ್ಲ. ಹೆಣ್ಣಿನ ವಾಸನೆ ಮಧುರ, ಸುಂದರ,–ನನಗೆ ನಿಮಗೆ. ಮಣ್ಣಿನ ಪರಿಮಳ ಹೊನ್ನಿನ ಸುಗಂಧ ಮನಮೋಹಕ, ಮನೋಹರ ನಮಗೆ. ಈ ವಾಸನೆಯನ್ನು ಅರಿತು ಕುರು ಹಿಡುವ ಮನಸ್ಸಿಗೆ ಮೂಗೇ ಇಲ್ಲದಿದ್ದರೆ? ಕಾಮವಾಸನೆ ಇದ್ದರೆ ಕಾಮಲತೆಯ ಅಥವಾ ಮತ್ತಾವ ಲತೆಯ ಬಯಕೆ, ಸಂಗ, ಸುಖ, ಸಂಸಾರ. ಹುರಿದ ಬೀಜಕ್ಕೆ ಎಲೆ ಹೂ ಹಣ್ಣು ಕಾಯಿಯ ಮಾತೆಲ್ಲಿ?

ಮತ್ತೆ ಇನ್ನೊಂದು ವಚನ:

ಕರೆಯದೆ ಬಂದುದ, ಹೇಳದೆ ಹೋದುದನಾರು ಬಲ್ಲರು?
ಅಂದಂದಿಗೆ ಬಂದ ಪ್ರಾಣಿಗಳಾರು ಅರಿಯರಲ್ಲ!
ಬಂದಬಂದವರೆಲ್ಲ ಮಿಂದುಂಡು ಹೋದರು.
ಗುಹೇಶ್ವರಲ್ಲಯ್ಯನುಣ್ಣದೆ ಹೋದುದನಾರು ಅರಿಯರಲ್ಲ.[೧]

ಭೂಮಿಯ ಮೇಲೆ ನಾನು ಹುಟ್ಟಿದೆ, ನೀವೂ ಹುಟ್ಟಿದಿರಿ, ಅವರಿವರೆಲ್ಲ ಹುಟ್ಟಿದರು. ಹುಟ್ಟೆಂದು ಹೇಳಿ ಕರೆದವರಾರು? ಕರೆಯಲಿಲ್ಲ, ಕಳಿಸಲಿಲ್ಲ. ಹೋಗುವಾಗ ಹೇಳಿ ಹೋಗಲಿಲ್ಲ. ಬಂದೆನೇಕೆ? ಹೋಗುವುದೇಕೆ? ಹೋಗಬೇಕೆಲ್ಲಿಗೆ? ಅಲ್ಲಿಗೆ ಹೋದವರ ಕೆಲಸವೇನು? ಎಂಬ ಪ್ರಶ್ನೆ ಬಂದು ಬಂದು ಹೋಗುಹೋಗುತ್ತಿರುವ ನಿಮಿಷ ನಿಮಿಷದ ಪ್ರಾಣದ ಮಂಕುಗಳಿಗೆ ಸ್ಪಷ್ಟವಾಗಿ ಹೊಳೆದಿಲ್ಲ. ಪ್ರಶ್ನೆ ಹೊಳೆದರೂ, ಅದು ಪ್ರಾಣಪ್ರಶ್ನೆಯಾಗಿದ್ದರೂ ಯಾವ ಪ್ರಾಣಿಯೂ ಅದಕ್ಕೆ ತಕ್ಕ ಲಕ್ಷ ಕೊಟ್ಟಿಲ್ಲ. ಬಂದು, ಹೋಗುವವರೆಗೆ 'ಮಿಂದುಂಡು' ಹೋಗುವ ಸಂಭ್ರಮ! ಹುಟ್ಟುಸಾವಿನ ನಡುವೆ ಸಿಕ್ಕಿರುವ ಈ 'ಶೂಲದ ಮೇಲಣ ವಿಭೋಗ'ವನ್ನು, ಈ ಪ್ರಾಣಸುಖಸಂಭ್ರಮವನ್ನು ಏಕೆ ಬಿಡಬೇಕು? 'ಹೊತ್ತು ಹೋಗದ ಮುನ್ನ ಪೂಜಿಸು' ನಮ್ಮ ಸಂಭ್ರಮಣ ಸಂಸಾರ ಸುಖವನ್ನು. ನಾಳೆಯ ಮಾತು ನಾಳೆಗೆ ಗೊತ್ತು.

ಬಂದ ಬಟ್ಟೆಯನರಿಯದೆ, ಹೊಂದುವ ಠಾವ ಲೆಕ್ಕಿಸದೆ ನಾವೆಲ್ಲ 'ಜೀವಪ್ರಾಣಿ' ವಿಷಯಸುಖದ ಸ್ವಾದು ಪಿಪ್ಪಲವನ್ನು 'ಅತ್ತಿ.' ಆದರೆ ಗುಹೇಶ್ವರಲ್ಲಯ್ಯ, ಪರಮ ಹಂಸ, ಪರಮಾತ್ಮ, ಪ್ರಭುಲಿಂಗ ಉಣ್ಣದೆ ಹೋದ. 'ಅನಶ್ನನ್ನನ್ಯೋ ಅಭಿಚಾಕಶೀತಿ.' ಅಂದರೆ ಗುಹೇಶ್ವರಲ್ಲಯ್ಯ ಮಾಯಾಭ್ರಮಿತನಾಗಿ ಹುಟ್ಟು ಹೊಂದಿನ ನಡುವೆ ಸಿಕ್ಕು, ಅಲ್ಲಿಯೇ ಅಷ್ಟರಲ್ಲಿಯೇ ಕುಳಿತು ವಾಮನಸಂಸಾರವನ್ನು ಭೋಗಿಸಿದ ವಾಮನ ಮೂರ್ತಿಯಲ್ಲ. 'ನಾನೆಂಬಹಂಕಾರದಲ್ಲಿ ನಾನುಂಡೆನಾದರೆ ಎನಗದೇ ಭಂಗ....'[೨] ಎಂದು ದೇಹ ಪ್ರಾಣ ಕರಣಾದಿಗಳ ಪಂಜರದ 'ನಾನು' ವಿಷಯವ್ಯಾಮೋಹದಲ್ಲಿ ಮಿಂದು ವಿಷಯಸುಖವನ್ನುಂಡು ಭಂಗಕ್ಕೊಳಗಾಗುತ್ತದೆ, ಕತ್ತಲೆಯ ಗರ್ತದಲ್ಲಿ

---

೧. ಪ್ರ. ಶೀ. ಗ. ೭. ಪು. ೮೧, ವ. ೧.   ೨. ಶೂ. ಸಂ. ಪು. ೩೮೩, ವ. ೫೫.

ಮುಳುಗುತ್ತದೆ. ಆದರೆ ಮಾಯಾಪಂಜರದ ಬಂಧನವಿಲ್ಲದ ಗುಹೇಶ್ವರಲ್ಲಯ್ಯ ಹಸಿದು ಹೆಣ್ಣಾನ್ನಾಗಲಿ, ಮಣ್ಣುಹೊನ್ನನ್ನಾಗಲಿ, ಶಬ್ದಸ್ಪರ್ಶಾದಿಗಳನ್ನಾಗಲಿ ಉಣ್ಣಲಿಲ್ಲ. ಈ ಅಲ್ಲಯ್ಯನ ದೇಹ ಪ್ರಾಣ ಇಂದ್ರಿಯ ಕರಣ ವಿಷಯಕ್ಕಾಗಿ ಎಂದೂ ಹಸಿಯಲಿಲ್ಲ, ವಿಷಯವನ್ನೆಂದೂ ಉಣಲಿಲ್ಲ ಎಂಬುದೇ ಚಾಮರಸ ಸಿದ್ಧವೀರದೇವರು ಮುಂತಾದವರ ಅಚಲ ಮತ.

ಅವತಾರದ ಉದ್ದೇಶ ಉದ್ಧಾರ. ದಿವ್ಯ ನೆಲಕ್ಕಿಳಿದು ನೆಲವನ್ನು ದಿವ್ಯಕ್ಕೆತ್ತುವುದೆ ದಿವ್ಯಾವತಾರದ ದಿವ್ಯೋದ್ದೇಶ. ಈ ಅವತಾರ ನೆಲಕ್ಕೆ ತಕ್ಕ ಚೋಹವನ್ನು, 'ಕ್ರಿಯಾಂಗ' ವನ್ನು ಧರಿಸುವುದೆ 'ಸಗುಣನಿರ್ಗುಣಭರಿತ' ಮೂರ್ತಿ. ಇಂಥ ಮೂರ್ತಿಯ ನೆಲದ ಮಾಯಾಮೋಹದಲ್ಲಿ ಕಂಗೆಟ್ಟು ಕಳವಳಿಸುವದೆಂದರೆ ಮಹಾಜಲಸಾಗರ ನೀರಡಿಸಿ ಬಾವಿಯನ್ನು ತೋಡುವ ದಂದುಗದಲ್ಲಿ ಬಿದ್ದಂತೆ. 'ಬಯಲು ಗಟ್ಟಿಗೊಂಡರೆ ಸಚರಾಚರವೆಲ್ಲಿ ಹೊಗಲಿ?'

ಚಾಮರಸ, ಗೂಳೂರ ಸಿದ್ಧವೀರಣ್ಣನವರು ಕಂಡ ಅಲ್ಲಮಪ್ರಭುದೇವರ ದಿವ್ಯಾವತಾರ ದರ್ಶನ ಇದು.

ದಿವ್ಯದಿಂದ ಅವತರಿಸಿದ ಈ ನಿರಂಜನ, ನಿರ್ಮಾಯಜಂಗಮ, ಅನಿಮಿಷಯ್ಯನೆ ತನ್ನ ಸದ್ಗುರುವೆಂದು ವಾಸನೆಹಿಡಿದು ಆತನ ಕಡೆ ನಡೆದಿದ್ದಾನೆ. ಮುಂದೆಯೆ ಒಂದು ತೋಟ. ಕಣ್ಣಿಗೆ ಬಣ್ಣದ ಹಬ್ಬ. ಮೂಗಿಗೆ ಪರಿಮಳದ ಜಾತ್ರೆ. ಬಗೆಗೆ ಶಿವಶಾಂತಿಯ ಶೀತಲ ನಿಲಯ.[೧] ತೋಟದಲ್ಲಿ ಕೃಷಿಮಾಡುತ್ತಿದ್ದಾನೆ ಗೊಗ್ಗಯ್ಯನೆಂಬ ಶಿವಭಕ್ತ. ಗುದ್ದಲಿಹಿಡಿದು ನಟ್ಟುಕಡಿಯುತ್ತಿದ್ದಾನೆ. ಕೃಷಿಕಾಯಕದಿಂದ ಬಂದ ಹಣವನ್ನು ಗುರು ಲಿಂಗಜಂಗಮಕ್ಕೆ ಸವೆಸಿ, ಒಕ್ಕುಮಿಕ್ಕುದನ್ನು ಉಂಡುಟ್ಟು ಸುಖವಾಗಿರುವುದೆ ಭಕ್ತಿಮಾರ್ಗ, ಜೀವನದ ಪರಮಾರ್ಥವಾದ ಲಿಂಗಕ್ಕೆ ತನ್ನನ್ನು ಕರೆದೊಯ್ದು ಮುಟ್ಟಿಸುವ 'ಲಿಂಗಮಾರ್ಗ'ವೆಂದು ದೃಢವಾಗಿ ನಂಬಿದ ಗುರುಲಿಂಗಜಂಗಮದಾಸೋಹಿಯಾತ. ಗೊಗ್ಗಯ್ಯನಲ್ಲಿ ಭಕ್ತಿಯಿದೆ, ದಾಸೋಹಂಭಾವವಿದೆ. ಆದರೆ ಈ ಭಕ್ತಿಭಾವ ಸುಜ್ಞಾನ ಜ್ಯೋತಿಯ ಪ್ರಭೆಯಿಂದ ಪ್ರದೀಪ್ತವಾಗಿಲ್ಲ. ಅದನ್ನು ನೋಡಿ ಪ್ರಭುದೇವರಿಗೆ ಆಶ್ಚರ್ಯ, ಮರುಕ!

---

೧. ಚಾಮರಸನು ತೋರುವ ಈ ಸನ್ನಿವೇಶವನ್ನು ನೋಡಿ:

ಸುಳಿದು ಸುಖದಲಿ ತನ್ನ ಲೀಲೆಯ ।
ಬೆಳೆಸಬೇಕೆಂದೊಂದು ವೇಷದ ।
ಹೊಳಹಿನಲಿ ಬರುತಿರಲು ಕಟ್ಟಿದಿರಿನಲಿ ಚೆಲುವಾಗಿ ॥
ತಳಿತ ಕೆಂದಾವರೆಯ ನೆಯ್ದಿಲು ।
ಗೊಳನ ನಾನಾಪರಿಯ ಪೂಗಿಡು ।
ಗಳ ಲತಾಮಂಟಪದ ತೋಟವ ಕಂಡನಲ್ಲಮನು ॥

ಪ್ರ. ಲೀ. ಗ. ೧೧, ಪು. ೧೩೩, ಪ. ೩.

ಸಿಕ್ಕಿತಲ್ಲಾ ಲೋಕವೀಪರಿ
ಕಕ್ಕುಲಿಸಿಯೊಡಲಾಸೆಗಜಿಸಿವನು
ಲೆಕ್ಕಿಸದೆಯಕಟೆನುತಲಲ್ಲಮ ತನ್ನೊಳಿಂತೆಂದ[1]

ಈ ಭಕ್ತಯ್ಯನ ಹೃದಯಕ್ಷೇತ್ರ ಸುಜ್ಞಾನಬೀಜವನ್ನು ಧರಿಸಲು ತಕ್ಕ ಗರ್ಭವಾಗಿದೆ. 'ತೋಟಿಗನ ಬುದ್ಧಿಗೆ ತಿಳಿವ ತೀಡುವೆ'ನೆಂದು ಗೊಗ್ಗಯ್ಯನಿದ್ದೆಡೆಗೆ ಬಂದು 'ಶರಣಾರ್ಥಿ' ಎಂದರೆ ಆ ಭಕ್ತನೂ ಪ್ರತಿ ಶರಣುಮಾಡಿ ಬಂದಾತನಲ್ಲಮಪ್ರಭುವೆಂದು ತಿಳಿದ. ತಾನು ತೋಟಿಗ ಕಾಯಕದ ಗೊಗ್ಗಯ್ಯನೆಂದೂ ಹೇಳಿದ.

ತಿಳಿದು ನಾನಾ ಪರಿಗಳಿಂದಲಿ
ಗಳಿಸಿದರ್ಥವ ಲಿಂಗಜಂಗಮ
ಗಳಿಗೆ ನೀಡುತಲೊಕ್ಕು ಮಿಕ್ಕುದನುಂಡು ಸುಖಿಯಹುದು
ಇಳೆಯೊಳಿದು ಶಿವಭಕ್ತಿ . . . .[2]

ನಾನಾ ಪ್ರಕಾರದ ಉದ್ಯೋಗದಲ್ಲಿ ಕರ್ಮಕೌಶಲವನ್ನು ಬೀರಿ ಮೈಮುರಿದು ದುಡಿಯಬೇಕು. ದುಡಿತದ ದುಡ್ಡನ್ನು ಗುರುಲಿಂಗಜಂಗಮಕ್ಕೆ ಸಲ್ಲಿಸಬೇಕು. 'ತೇನ ತ್ಯಕ್ತೇನ ಭುಂಜೀಥಾಃ'–ಅವರುಂಡುಟ್ಟು ಬಿಟ್ಟುದನ್ನು ಭುಂಜಿಸಬೇಕು – ಇದೇ ಜೀವನದ ಸುಖ, ಇದೇ ಶಿವಭಕ್ತಿಯ ಹೃದಯ, ಇದೇ ಕಾಯಕದ ಮರ್ಮ. ಮತ್ತೇನು? ಎಂಬುದು ಗೊಗ್ಗಯ್ಯನ ಜೀವನದ ಮಥಿತ ಮತ.

ಗೊಗ್ಗಯ್ಯನ ದಾಸೋಹದ ಭಕ್ತಿಗೆ ಸುಜ್ಞಾನಜ್ಯೋತಿಯನ್ನು ಮುಟ್ಟಿಸಿದರೆ ಅದು ಸುಜ್ಞಾನ-ಸದ್‌ಭಕ್ತಿಯೆನಿಸುವ, ಪಂಚಮ ಪುರುಷಾರ್ಥವೆನಿಸುವ ಶಿವಾದ್ವೈತ ಭಕ್ತಿಯಾಗಿ ಬೆಳಗಬಲ್ಲುದೆಂದು ಪ್ರಭುವಿನ ಮನವರಿಕೆ. ಈ ಜ್ಯೋತಿಯ ಬೀಜವನ್ನು

---

೧. ಪ್ರ. ಲಿಂ. ಲೀ. ಗ. ೧೧, ಪು. ೧೩೪, ಪ. ೫ [ಉತ್ತರಾರ್ಧ]

ಇಲ್ಲಿ ಪ್ರಭುದೇವರ ಮತ್ತೊಂದು ವಚನವನ್ನು ಅವಗಾಹಿಸಿರಿ:

ತೋಟವ ಬಿತ್ತಿದರೆಮ್ಮವರು, ಕಾಹ ಕೊಟ್ಟರು ಜವನವರು.
ನಿತ್ಯವಲ್ಲದ ಸಂಸಾರ ವೃಥಾ ಹೋಯಿತ್ತಲ್ಲಾ !
ಗುಹೇಶ್ವರಸಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು, ಅಟ್ಟುಣ್ಣಲಿಲ್ಲ.
ಪ್ರ. ವ. ಪು. ೩೨, ವ. ೪೪.

೨. ಪ್ರ. ಲಿಂ. ಲೀ. ಗ. ೧೧, ಪು. ೧೩೫, ಪ. ೯.

ಈ ಪದ್ಯದ ಉಳಿದ ಮುಂದಿನ ಭಾಗವನ್ನು 'ಬಜಿಸಿದೆಗೆ । ತೊಳಲಿಯುಜಿಸಲಿದೇನು ಕಾರಣ । ವೆಲೆ ಮರುಳೆ ಭಕ್ತಯ್ಯ ನೀ ಕೇಳೆಂದನಲ್ಲಮಗೆ ॥' ಹೀಗೆ ಕೆಳಗೆ ಕೊಟ್ಟಿರುವ ಪಾಠಾಂತರವನ್ನಿಟ್ಟುಕೊಂಡು ಓದುವುದೆ ಸರಿಯೆಂದು ನಮ್ಮ ಮತ. ಇದು ಸರಿಯೆಂಬುದು ಇದೇ ಗತಿಯಲ್ಲಿ ಬರುವ ೧೫ನೆಯ ಪದ್ಯವನ್ನು ನೋಡಿದರೆ ಕಾಣಬಹುದು. ಇಲ್ಲಿ ಗೊಗ್ಗಯ್ಯ ತನ್ನ 'ಶಿವಭಕ್ತಿ'ಯ ಮತದ ಸಾಧುತ್ವವನ್ನು ಹೇಳುವನಲ್ಲದೆ ಅಲ್ಲಮಪ್ರಭು ಶಿವಭಕ್ತರಿದ್ದಲ್ಲಿಗೆ ಹೋಗಿ ಭಕ್ತಿಭಿಕ್ಷೆಯನ್ನು ಬೇಡುವ, ಭಕ್ತಿಯನ್ನು ತೊಳಲಿ ಹುಡುಕಿ ಬೇಡುವ 'ಜಂಗಮ ಕಾಯಕ' ಹೊಲ್ಲವೆಂದು ಹೇಳಿದಂತಿದೆ.

ಬಿತ್ತಲು ಗೊಗ್ಗಯ್ಯನ ಹೃದಯ ಹದವಾಗಿದೆ ಎಂದು ಕಂಡು ತಿಳಿದ ಪ್ರಭು ಆ ಭಕ್ತಯ್ಯ ನಿಗೆ ತಮ್ಮ ಅನುಭವದ ಅಂತರಂಗವನ್ನು ಹೀಗೆ ಹೇಳುತ್ತಾರೆ:

ನೋಡು ಗೊಗ್ಗಯ್ಯಾ, ನಾನೂ ಹಗಲೆನ್ನದೆ ಇರುಳೆನ್ನದೆ ಎಚ್ಚರವಿದ್ದು ತೋಟದ ಕೃಷಿ ನಡೆಸಿದ್ದೇನೆ. ಭಕ್ತಿಭಿಕ್ಷೆಗೆಂದು ಭಕ್ತರ ಮನೆಮನೆಗೆ ಊರೂರಿಗೆ ಸಂಚರಿಸುತ್ತಿದ್ದರೂ ನನ್ನ ತೋಟ ನನ್ನೊಡನೆಯೆ ನಡೆದಿದೆ. ಆ ತೋಟವನ್ನು ಹೊತ್ತುಕೊಂಡೆ ನಾನು ನಡೆದಾಡುವಂತಿದೆ. ಇದೋ ಇಲ್ಲಿ ನೋಡು ಗುದ್ದಲಿ. ಉಕ್ಕಲ್ಲ, ಕಬ್ಬಿಣ ಅಲ್ಲ. ತೋಟದ ಪಾತಾಳಕ್ಕಿಳಿದು ಬೇರುಬಿಟ್ಟಿರುವ ನಟ್ಟನ್ನು ಬೇರುವೆರಸಿ ಅಗಿದು ಹಾಕುತ್ತಿರುವ ಈ ಗುದ್ದಲಿಯ ಹದನ ಎಂಥದು! ಗುಡ್ಡದಂಥ ಹೆಂಟೆ ಹೆಂಟೆ. ಇವನ್ನೆಲ್ಲ ಒಡೆದು ಪುಡಿ ಪುಡಿಮಾಡಿ, ತೋಟದ ಗಭೀರವನ್ನೇ ಬಗಿದು, ಅದೋ ಅಲ್ಲಿ, ಒಳಗಿನ ಒಳಗೆ ಬಿತ್ತಿದ್ದೇನೆ ನೋಡು. ಬೀಜ ಸಣ್ಣದಲ್ಲ, ಬ್ರಹ್ಮಬೀಜ. ಈ ಬಿತ್ತಿಗೆಗೆ ಹಾಸುವ ನೀರು, ನೀರಿನ ಬಾವಿ, ಬಾವಿಯ ರಾಟಳ ಹೇಗಿವೆ, ನಿಮಿಷ ನಿಮಿಷಾರ್ಧದ ಎಡೆಬಿಡುವಿಲ್ಲದೆ ಹೇಗೆ ಕೆಲಸ ನಡೆಸಿವೆ, ಇದೋ ಇಲ್ಲಿಯೆ ನೋಡು ನನ್ನ ತೋಟದಲ್ಲಿ. ಹೊರಗಿನ ಪಿತ್ತು ಕತ್ತೆ ಬಂದು ಒಳಗೆ ಹೊಕ್ಕು ನಾಟಿಗೆಯನ್ನು ನಾಶಮಾಡಬಾರದೆಂದು ಹಾಕಿರುವ ಮುಳ್ಳಿಲ್ಲದ ಬೇಲಿಯನ್ನು ನೋಡು. ಉದಯಾಸ್ತಮಾನವೆನ್ನದೆ ತೋಟವನ್ನು ಕಾಯುತ್ತಿರುವ ನಾನು ಮಲಗಲಿಲ್ಲ, ಏಳಲಿಲ್ಲ. ಸಸಿಯನ್ನು ಸಲಹುವ ಭರದಲ್ಲಿ ಎಚ್ಚರ, ಎಚ್ಚರ. ನಿದ್ದೆ ಕನಸು ಜಾಗರವಿಲ್ಲದ ನಾಲ್ಕನೆಯ ಜಾಗರ! ಇದೋ ಇಲ್ಲಿ ನೋಡು ನನ್ನ ತೋಟದ ಕೃಷಿಕಾಯಕವನ್ನು:

> ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ,
> ಅಗಿದು ಕಳೆದೆನಯ್ಯ ಭ್ರಾಂತಿನ ಬೇರ.
> ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ.
> ಅಖಂಡಮಂಡಲವೆಂಬ ಬಾವಿ, ಪವನವೇ ರಾಟಾಳ,
> ಸುಷುಮ್ನನಾಳದಿಂದ ಉದಕವ ತಿದ್ದಿ,
> ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
> ಆವಾಗಳು ಈ ತೋಟದಲ್ಲಿ ಜಾಗರವಿದ್ದು
> ಸಸಿಯ ಸಲಹಿದೆನು ಕಾಣಾ ಗೊಹೇಶ್ವರಾ.[೧]

---

೧. ಶೂ. ಸಂ. ಪು. ೧೧, ವ. ೨೯ [ಈ ವಚನ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಪು. ೩೫೩-೪ ಉದ್ಧೃತವಾಗಿದೆ.]

ಪ್ರಭುದೇವರ ಈ ತೋಟದ ಕೃಷಿಗೆ ಒಕ್ಕಲಿಗರ ಮುದ್ದಣ್ಣಗಳ ಹೊಲದ ಕೃಷಿಯನ್ನು ಹೋಲಿಸಿ ನೋಡಿ:

> ಭಕ್ತಿಯೆಂಬ ಪೃಥ್ವಿಯಲ್ಲಿ, ಗುರೂಪದೇಶವೆಂಬ ನೇಗಿಲೆಯ ಪಿಡಿದು,
> ಅಂತಃಕರಣಚತುಷ್ಟಯವೆಂಬ ಪಶುವಂ ಕಟ್ಟಿ, ಓಂಕಾರನಾದವೆಂಬ ಸೆಳೆಗೋಲ ಪಿಡಿದು,
> ಉತ್ತರಕ್ರಿಯೆಯೆಂಬ ಸಾಲನೆತ್ತಿ, ದುಷ್ಕರ್ಮವೆಂಬ ಕಂಟಕದ ಗುಲ್ಮವಂ ಕಡಿದು,
> ಅರಿವೆಂಬ ರವಿಯ ಕಿರಣದಿಂದೊಣಗಿಸಿ, ಆವಂ ಕೊ[ಕೂ?]ಡಲೊಟ್ಟಿ,
> ಜ್ಞಾನಾಗ್ನಿಯೆಂಬಗ್ನಿಯಿಂದ ಸುಟ್ಟುರುಹಿ ಆ ಹೊಲನಂ ಹಸನಮಾಡಿ
> ಬಿತ್ತುವ ಪರಿ ಇನ್ನಾವುದಯ್ಯಾ ಎಂದೊಡೆ:

(ಮುಂದಿನ ಪುಟ ನೋಡಿ)

ಲೋಕಾರ್ಥವನ್ನು ಪರಮಾರ್ಥಗೊಳಿಸುವ ಪ್ರಭುದೇವರ ಕೃಷಿ. ಮಾನವನ ತನುವೇ ತೋಟ, ಮನವೇ ಗುದ್ದಲಿ. ಮಾನವಶೀಮೆಯ ದೇಹ ಪ್ರಾಣ ಕರಣೇಂದ್ರಿಯಗಳಲ್ಲಿ

ನಾದ ಬಿಂದು ಕಳೆಗಳೆಂಬ ಮಳೆಗಾಲದ ಹದಹಿದೆಯನರಿದು.
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳ ನಟ್ಟು,
ಈಡಾ ಪಿಂಗಳ ಸುಷುಮ್ನ ನಾಳವೆಂಬ ಕೋವಿಗಳ ಜೋಡಿಸಿ.
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಲವಂ ಬಲಿದು.
ಕುಂಡಲೀಸರ್ಪನೆಂಬ ಹಗ್ಗವಂ ಸೇದಿಗಟ್ಟಿ. ಹಂಸನೆಂಬ ಎತ್ತಂ ಹೂಡಿ,
ಪ್ರಣವವೆಂಬ ಬೀಜವ ಪಶ್ಚಿಮಮುಖಕ್ಕೆ ಬಿತ್ತಿ,
ಸರ್ವಶಾಂತಿ-ನಿರ್ಮಲವೆಂಬ ಮೇಘವ [ಪ್ರ?] ಸುರಿಯಲ್ಕೆ
ನಿಷ್ಕಲ ಬ್ರಹ್ಮವೆಂಬ ಸಸಿ ಪುಟ್ಟಿತ್ತು.
ಆ ಸಸಿಯ ಮುಟ್ಟುವ ಸರ್ವವರ್ಣದ ಸದೆಯಂ ಕಳೆದು.
ಅಷ್ಟಾವರಣದ ಅಲಬಂ ಕಿತ್ತು. ದಶವಾಯುವೆಂಬ ಕಸವಂ ತೆಗೆದು,
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ,
ಚತುರ್ವಿಧವೆಂಬ ಮಂಚಿಕೆಯ ಮೆಟ್ಟಿ, ಬಾಲಚಂದ್ರನೆಂಬ ಕವಣೆಯಂ ಪಿಡಿದು,
ಪ್ರಪಂಚವೆಂಬ ಹಕ್ಕಿಯಂ ಸೋವಿ, ಆ ಬತ್ತ ಬಲಿದು ನಿಂದಿರಲು
ಕೊಯ್ದುಂಬುವ ಪರಿ ಇನ್ನಾವುದಯ್ಯಾ ಎಂದರೆ:
ಇಷ್ಟವೆಂಬ ಕುಡುಗೋಲಿಂಗೆ ಪ್ರಣವ [ಪ್ರಾಣ?]ವೆಂಬ ಹಿಡಿಯ ತೊಡಿಸಿ,
ಭಾವವೆಂಬ ಹಸ್ತದಿಂದ ಪಿಡಿದು, ಜನನದ ನೆಲವಂ ಕೊಯ್ದು,
ಮರಣದ ಸಿವುಡಂ ಕಟ್ಟಿ, ಆಕಾಶವೆಂಬ ಬಣವೆಯನೊಟ್ಟಿ,
ಉನ್ಮನಿ ಎಂಬ ತೆನೆಯನರಿದು, ಮನೋರಥವೆಂಬ ಬಂಡಿಯಲ್ಲಿ ಹೇರಿ,
ಮುಕ್ತಿಯೆಂಬ ಕೋಟಾರಕ್ಕೆ ತಂದು, ಅಷ್ಟಾಂಗಯೋಗವೆಂಬ ಜೀವದನದಿಂದೊಕ್ಕಿ,
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟಂ ತೂರಿ,
ಪುಣ್ಯದ ಬೀಜಮಂ ಕಳೆದು, ಷಡೂರ್ಮಿಗಳೆಂಬ ಬೇಗಾರಮಂ ಕಳೆದು,
ಅಂಗಜಾಲನ ಕಣ್ಣ ಮುಚ್ಚಿ, ಚಿತ್ರಗುಪ್ತರೆಂಬ ಕರಣಿಕರ ಸಂಪುಟಕ್ಕೆ ಬರಿಸದೆ,
ಯಮರಾಜನೆಂಬ ಅರಸಿಗೆ ಕೋರನಿಕ್ಕದೆ
'ಸುಖಂ ಕರೋತಿ ಶಂಕರಃ' 'ಶಂ ಕರೋತಿ' ಎಂಬ ಸುಯಿಧಾನವನುಂಡು
ಸುಖಿಯಾಗಿಪ್ಪ ಒಕ್ಕಲುಮಗನ ತೋರಿಸಿ ಬದುಕಿಸಯ್ಯ
ಕಾಮ ಭೀಮ ಜೀವದನದೊಡೆಯ ಪ್ರಭುವೇ ನಿಮ್ಮ ಧರ್ಮ, ನಿಮ್ಮ ಧರ್ಮ.

ಕೃಷಿಜ್ಞಾನಪ್ರದೀಪಿಕೆ, ಪು. ೨೯೪-೨೯೫.

ಇದೇ ಮುದ್ದಣ್ಣಗಳ ಇನ್ನೂ ಒಂದು ವಚನ ನೋಡಿ:

ಅಂಗವೆಂಬ ಭೂಮಿಯಾಗಿ, ಲಿಂಗವೆಂಬ ಬೆಳೆಯಾಗಿ,
ವಿಶ್ವಾಸವೆಂಬ ಬಿತ್ತ [ಬತ್ತ?] ಬಲಿದು ಉಂಡು ಸುಖಿಯಾಗಿರಬೇಕೆಂದ
ಕಾಮಭೀಮ ಜೀವದನದೊಡೆಯ.

ಕೃಷಿಜ್ಞಾನ ಪ್ರದೀಪಿಕೆ, ಪು. ೩೫೫.

ಇನ್ನೂ ಬೇಕಿದ್ದರೆ 'ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ......' [ಬ. ವ. ಪು. ೧೩೭] ಎಂಬ ಬಸವಣ್ಣನವರ ವಚನವನ್ನೂ 'ಶರೀರವೆಂದೆಂಬುವ ಹೊಲನ ಹಸನಮಾಡಿ । ಪರತತ್ತ್ವ ಬೆಳೆಯನೆ ಬೆಳೆದುಣ್ಣಿರೋ' [ಕೈವಲ್ಯ ಕಲ್ಪವಲ್ಲರಿ ಪು. ೭೭] ಎಂಬ ಸರ್ಪಭೂಷಣ ಶಿವಯೋಗಿಗಳ ಪದವನ್ನೂ ನೋಡಿರಿ.

ನಿಮಗ್ನವಾಗಿ, ಅಲ್ಪನಾಗಿ ಅಜ್ಞಾನಿಯಾಗಿ, ಅನೀಶನಾಗಿ ಮಾನವ ಚೌಕಟ್ಟಿನಲ್ಲಿ ಬದ್ಧವಾಗಿರುವ ಜೀವಭಾವದ ಭ್ರಾಂತಿಯ ಕರಿಕೆಯ ಬೇರು ಅರಿವಿನ ಮೈಯ ರೋಮರೋಮದ ರಸಾತಳಕ್ಕೆ ಇಳಿದಿದೆ. ಈ ಭಾವಭ್ರಾಂತಿಯೇ 'ಸೂಕ್ಷ್ಮಾತ್ ಸೂಕ್ಷ್ಮತರ'ವಾದ ಸತ್ಯಜ್ಞಾನದ, ಆತ್ಮಜ್ಞಾನದ ಬ್ರಹ್ಮಕ್ಷೇತ್ರವನ್ನು ಬಹಿರ್ಮುಖವಾದ ವಿಷಯಾಸಕ್ತಿಯ ಜಿಗುಟಿನಿಂದ ಗಟ್ಟಿಕಲ್ಲು ಮಾಡಿದೆ. ಈ ಭ್ರಾಂತಿಯನ್ನು ಅಗಿದು ಕಳೆಯಬಲ್ಲ ಗುದ್ದಲಿ ಒಂದೇ ಒಂದು. ಅದು ಮನ. ದಿವ್ಯೋನ್ಮುಖವಾದ ನಿತ್ಯಾನಿತ್ಯ ವಿವೇಕಬುದ್ಧಿ. ಅನಿತ್ಯ ಸಂಸಾರವನ್ನು ಒಡೆದು ನಿತ್ಯಕ್ಕೆ ಹದಮಾಡುವುದು ಇದೇ ಮನ, ಇದೇ ಬುದ್ಧಿ. ಹೀಗೆ ಹಸನಮಾಡಿ ಹದಗೊಳಿಸಿದ ತನುವಿನ ತೋಟದಲ್ಲಿ ಏನು ಬಿತ್ತಬೇಕು? 'ಹಸನಾಗಿ ಹರಗಿ ಕಸವ ಬಿತ್ತುವದೆ?' ಶಶಿಕಿರಣ ಬೆಳೆವಲ್ಲಿ ವಿಷಕಂಟಕ ಬೀಜಗಳನ್ನು ಊರಬೇಕೆ? ಸೂರ್ಯಚಂದ್ರ ನಕ್ಷತ್ರಕೋಟಿಯ 'ಪೀಕ'ನ್ನು ತೆಗೆಯಬಲ್ಲ ಆಕಾಶದಲ್ಲಿ ಗುಲಗಂಜಿ ಮಿಂಚುಹುಳಗಳನ್ನು ಬಿತ್ತಿದರೆ ಹೇಗೆ? ಕ್ಷೇತ್ರದ ಸತ್ತ್ವಾತಿಶಯಕ್ಕೆ ತಕ್ಕ ಬೀಜ ಬಿತ್ತಬೇಕು. ಸಚ್ಚಿದಾನಂದ ನಿತ್ಯಪರಿಪೂರ್ಣವೆನಿಸುವ ಪರಬ್ರಹ್ಮ ಪಲ್ಲವಿಸಿ ಫಲಿಸಬಲ್ಲ ತನುವಿನ ತೋಟದಲ್ಲಿ ಪರಬ್ರಹ್ಮದ ಬೀಜವನ್ನೆ ಬಿತ್ತಬೇಕು, ಬೆಳೆಯಬೇಕು. ತೋಟವನ್ನು ವಿವರಿಸಿ ನೋಡಿದರೆ 'ನೆಲದ ಮರೆಯ ನಿಧಾನ'ದಂತೆ, ಮೇಘದಲ್ಲಿ ಹೊಳೆದು ತೋರದೆ ಅಲ್ಲಿಯೆ ಅವಿತಿರುವ ಮಿಂಚಿನಂತೆ ತೋಟದ ಅಂತರಾಳದಲ್ಲಿಯೆ 'ಬ್ರಹ್ಮಬೀಜ' ಯಾರಿಗೂ 'ತೋರಲಿಲ್ಲಾಗಿ ಬೀರಲಿಲ್ಲ' 'ಗೊಹೇಶ್ವರ ನಿಂದ ನಿಲವನನುಭವಸುಖಿ ಬಲ್ಲ.' ನಾವು ಬೇರೊಂದು ಕಡೆ ನೋಡಿದ 'ಸಾಸಿರ ದಳದ ಚಿತ್‌ಕಳೆ'ಯೇ ಈ ಚಿದ್‌ಬ್ರಹ್ಮಬೀಜ. 'ಗುರುವೆಂಬ ಬೀಜ'[೧] 'ಗುರುವರನುಪದೇಶವೆಂಬ ಬೀಜ'[೨] 'ಪ್ರಣವವೆಂಬ ಬೀಜ'.[೩] ಇದೇ ನಿತ್ಯಪರಿಪೂರ್ಣವಾದ, ತೆರಹಿಲ್ಲದೆ ಇರುವ ಇರವಿನ ಬೀಜ, ಅರಿವಿನ ಬೀಜ, ಸುಖದುಃಖಗಳ ಸೋಂಕಿಲ್ಲದ ಸ್ವಯಂಭು ಆನಂದದ ಬೀಜ, ಸ್ವಯಂಜ್ಯೋತಿಯ ಬೀಜ, ಸ್ವಯಂನಾದದ ಬೀಜ. ಇದೇ ಬೆಳಗಿನ ಬೀಜವಾದ ಮಹಾಬೆಳಗಿನ ಬೀಜ, ಇದೇ ಬಯಲಿಗೆ ಎಡೆಗೊಟ್ಟಿರುವ ನಿರವಯಲ ಬೀಜ. 'ಸರ್ವಭೂತಾನಾಂ ಹೃದ್ದೇಶ'ದ ಈಶ್ವರಬೀಜ ಇದೇ. 'ಗೂಢೋऽಯಮಾತ್ಮಾ ನ ಪ್ರಕಾಶತೇ' ಇದೇ. ವಿಶ್ವಭುವನಭವನಾಂತರಂಗದ ಚಿಜ್ಜ್ಯೋತಿ ಇದೇ ಬೀಜ. ಇದನ್ನೇ ನೀವು ಸುಜ್ಞಾನ ಸದ್ಭಕ್ತಿಯ ಬೀಜ, ನಿತ್ಯದ ಬೀಜ, ಪರಿಪೂರ್ಣದ ಬೀಜವೆಂದು ಕರೆದರೂ ಕರೆಯಬಹುದು.

ಇನ್ನು ಈ ಬ್ರಹ್ಮಬೀಜಕ್ಕೆ ನೀರು ಬೇಕು. ಎಂಥ ನೀರು? ಬೀಜಕ್ಕೆ ತಕ್ಕ ನೀರು. 'ಅಖಂಡ ಮಂಡಲ'ವೆಂಬ ಬಾವಿಯ ನೀರು. ಅಂದರೇನು ಎಂದು ನಿಮ್ಮ ಪ್ರಶ್ನೆಯೆ? ಇದು ನಿಮ್ಮಂತೆ ನನಗೂ ಪ್ರಶ್ನೆಯೆ. ಆದರೆ ಪಾರಮಾರ್ಥಕೃಷಿಯನ್ನು ಬಲ್ಲವರಿಂದ ಬಗೆಹರಿಯಬಹುದು ಈ ಪ್ರಶ್ನೆ. ಒಕ್ಕಲಿಗ ಮುದ್ದಣ್ಣಗಳ 'ಕುಂಭದ ಮಳೆ ಹೋಯಿತ್ತು

---

೧. ಬಸವಣ್ಣನವರು: ಭಕ್ತಿಯೆಂಬ ಪೃಥ್ವಿಯ ಮೇಲೆ......
೨. ಸರ್ಪಭೂಷಣ ಶಿವಯೋಗಿಗಳು: ಶರಿರವೆಂದೆಂಬುವ......
೩. ಒಕ್ಕಲ ಮುದ್ದಣ್ಣಗಳು: ಭಕ್ತಿಯೆಂಬ ಪೃಥ್ವಿಯಲ್ಲಿ......
ಹಿಂದೆ ಈಗಳೆ ನೋಡಿರುವ ವಚನ.

(ಹೊಯ್ದಿತ್ತು?)...' ಎಂಬ ಮಾತಿಗೆ ಸಿಂಗಳದ ಸಿದ್ಧಬಸವರಾಜದೇವರು ಹೀಗೆ ಟೀಕು ಬರೆಯುತ್ತಾರೆ: 'ದೇಹ ಸಂಬಂಧಿಯಾಗಿರ್ದ ಆತ್ಮಂಗೆ ಶಿವಸಂಸ್ಕಾರದಿಂದ ಸುಜ್ಞಾನೋದಯವಾಗಲು, ಚಿದಾಕಾಶದಲ್ಲಿ ಸದ್ವಿವೇಕಸ್ವರೂಪವಾದ ಪರಮಾನಂದ ಜಲವು ಸರ್ವಾಂಗದಲ್ಲಿ ವೃಷ್ಟಿಯಾಗಿ ಕರೆಯಿತ್ತು'. ಮತ್ತೆ ಅದೇ ವಚನದಲ್ಲಿ ಬರುವ 'ಒಂದೆ ಮರ ಹುಟ್ಟಿತ್ತು' ಎಂಬುದನ್ನು ಹೀಗೆ ಅರ್ಥಯಿಸಿದ್ದಾರೆ: 'ಆ ಶರಣನ ಸುಜ್ಞಾನ ದೃಷ್ಟಿಯ ಮುಂದೆ ಅಖಂಡ ಪರಿಪೂರ್ಣವಾದ ಪರಬ್ರಹ್ಮ ವೃಕ್ಷ ತೋರಿತ್ತು.'[೧] ಈ ಟೀಕನ್ನು ಪರಾಮರ್ಶಿಸಿ ನೋಡಿದರೆ ಮಾನವನ ಮಾತು ಮನದ ಹವಣಲ್ಲದ ಅಖಂಡ ಪರಿಪೂರ್ಣವಾದ ಇರವಿನ ಬಚ್ಚಬರಿಯ ಅರಿವಿನ ಬಯಲೇ ಚಿದಾಕಾಶ. ಅದೇ ಅಖಂಡ ಮಂಡಲವೆಂಬ ಬಾವಿ.[೨] ಈ ಬಾವಿಯ ಜಲವೆಂದರೆ ಪರಮಾನಂದ ಜಲ. ಈ ಜಲದಿಂದಲೇ ಬ್ರಹ್ಮಬೀಜ ಅಂಕುರಿಸಿ ಪಲ್ಲವಿಸಿ ಅಖಂಡ ಪರಿಪೂರ್ಣವಾದ ಪರಬ್ರಹ್ಮವೃಕ್ಷ 'ಅತ್ಯತಿಷ್ಠದ್ದಶಾಂಗುಲ'ವಾಗಿ ಹಬ್ಬಬಲ್ಲುದು. ಆದರೆ ಅಖಂಡ ಮಂಡಲವಾದ ಈ ಚಿದಾಕಾಶದಿಂದ ಚಿಜ್ಜಲವನ್ನು ಎತ್ತಿ ತಂದು ಬ್ರಹ್ಮಬೀಜಕ್ಕೆ ಎರೆವ ಪರಿ ಎಂತು? ಪವನವೇ ರಾಟಾಳ, ಸುಷುಮ್ನ ನಾಳವೇ ಜಲದ ಹರಿ! ಈ ಹರಿಯಿಂದ ಬೀಜಕ್ಕೆ ನೀರನ್ನು ತಿದ್ದುವುದು! ಇದು ಹೇಗೆ? ಬ್ರಹ್ಮತೋಟಿಗನಿಗೇ ಗೊತ್ತು, ಮಡಿಗೆ ನೀರು ಹಾಯಿಸುವ ಈ ಕ್ರಮ. ಪ್ರಭುದೇವರನ್ನೇ ಕೇಳೋಣಲ್ಲವೆ? ಅದೋ ಕೇಳಿ ಅತ್ಯಂತ ಸಾವಧಾನದಿಂದ:

> ಗಗನಮಂಡಲದ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ
> ಎನುತ್ತಿದ್ದಿತ್ತು ಒಂದು ಬಿಂದು.
> ಅಮೃತದ ವಾರಿಯ ದಣಿಯುಂಡ ತೃಪ್ತಿಯಿಂದ,
> ಗುಹೇಶ್ವರ, ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು.[೩]

ಎಂಥ ಸಾವಧಾನದಿಂದ ಕೇಳಿದರೂ ಮಾನವಸೀಮೆಯ ಬುದ್ಧಿಗೆ ವಚನದ ಅರ್ಥ ಹೊಳೆವುದಿಲ್ಲ. ಇದಕ್ಕೆ ಮಹಾಲಿಂಗದೇವರ ಟೀಕು ಹೀಗಿದೆ: ಗಗನಮಂಡಲವೆಂದರೆ ಬ್ರಹ್ಮರಂಧ್ರಕ್ಕರ್ಥ. ಆ ಬ್ರಹ್ಮರಂಧ್ರಕ್ಕೆ ಸುಷುಮ್ನನಾಳ ಶಿವಯೋಗಮಾರ್ಗವಾಗಿರ್ಪ ಕಾರಣ

---

೧. ಬಿ. ವ. ಪು. ೨೭೯.

೨. ನೋಡಿರಿ: 1. '......ಆಕಾಶದೊಳಗೊಂದು ರಸದ ಬಾವಿ......
ಪ್ರ. ವ. ಪು. ೯೫, ವ. ೧೪.

2. ರಸದ ಬಾವಿಯ ತುಂಬಕಬಾರದು,—ಕತ್ತರಿವಾಣಿಯ ದಾಂಟದವಂಗಲ್ಲದೆ.
ಪರುಷವಿದೆ, ಕಬ್ಬುನವಿದೆ ಸಾಧಿಸಬಲ್ಲೆನೆಂಬವಂಗೆ.
ಸಿರಿಶೈಲದುದಕವ ಧರಿಸಲುಬಾರದು. ಗುಹೇಶ್ವರಾ,—ನಿಮ್ಮ ಶರಣಂಗಲ್ಲದೆ.
ಪ್ರ. ವ, ಪು. ೧೧೩, ವ. ೫೫

3. ಗಗನವೇ ಗುಂಡಿಗೆ ಆಕಾಶವೆ ಅಗ್ಗವಣಿ......
ಪ್ರ. ವ. ಪು. ೨೦೨, ವ. ೬೦೫

ಈ ವಚನಗಳ ಟೀಕನ್ನೂ ಸೂಕ್ಷ್ಮವಾಗಿ ಪರಿಶೀಲಿಸಿರಿ.

೩. ಅ. ವ. ಚಂ. ಪು. ೫೭, ವ. ೨೪೭.

ಆ ಮಾರ್ಗದೊಳು ಶಿವೋಹಂ ಶಿವೋಹಂ ಎನುತ್ತ ಅಲ್ಲಿ ಶಿವಯೋಗಾಮೃತ ಬಂದು ನೆಲೆಯಾಗಿರ್ಪ ಕಾರಣ ಗಗನಮಂಡಲದ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಎನುತ್ತಿರ್ದಿತ್ತು ಒಂದು ಬಿಂದುವೆಂಬ ಶಬ್ದಾರ್ಥ. ಆ ಪರಮಾಮೃತವ ದಣಿಯುಂಡ ಶಿವಯೋಗಿ ಪರಶಿವತತ್ತ್ವದಲ್ಲಿ ವಿಶ್ರಾಂತಿಯನೆಯ್ದಿದನು......[೧]

ಇಲ್ಲಿ ಮುಖ್ಯವಾಗಿ ನೋಡತಕ್ಕ ಸಂಗತಿಯೆಂದರೆ ಬ್ರಹ್ಮರಂಧ್ರದ ಶಿವಬೀಜಕ್ಕೆ, ಬ್ರಹ್ಮಬೀಜಕ್ಕೆ ಸುಷುಮ್ನನಾಳವೇ ಶಿವ-ಯೋಗಮಾರ್ಗ. ನೀರನ್ನು ಎತ್ತಿ ತರುವ ಯಂತ್ರವೇ ಪವನ ಅಂದರೆ ಪ್ರಾಣವಾಯು. ಅದೇ ಗಡಗಡಿ.

1. ...ಅಂತಪ್ಪ ಪ್ರಾಣವಾಯು ಶಿವಯೋಗಸಾಧನದಿಂ ಸುಷುಮ್ನನಾಳದಲ್ಲಿ ಬ್ರಹ್ಮರಂಧ್ರವನೆಯ್ದಿ ಅಲ್ಲಿರ್ಪ ಶಿವಾಮೃತವನು ಸುವಿವೇಕವೆಂಬ ಮುಖದ್ವಾರದೊಳು ತುಂಬಿಕೊಂಡಿರುತ್ತಿರಲು......[೨]

2. ...ಆ ಜೀವನ ನಿಲವ ತಿಳಿದು ಈಡೆ ಪಿಂಗಳವೆಂಬ ಉತ್ತರ ದಕ್ಷಿಣ ನಾಳದಲ್ಲಿ ಬೀಸುವ ವಾಯುವ ನಿಲಿಸಿ, ಪಶ್ಚಿಮನಾಳವೆಂಬ ಸುಷುಮ್ನೆಯಲ್ಲಿ ಪ್ರಾಣವಾಯುವನೆಯ್ದಿಸಿ ಅಲ್ಲಿ ಸಹಸ್ರದಳ ಕಮಲದೊಳು ತುಂಬಿ ತುಳುಕುವ ಅಮೃತವ ದಣಿಯುಂಡು ತೊಳಗಿ ಬೆಳಗುತ್ತಿರ್ಪ ಪರಂಜ್ಯೋತಿಯ ಶಿವಶರಣ ಬಲ್ಲನಲ್ಲದೆ ಮಿಕ್ಕಿನ ಅಜ್ಞಾನಿಗಳರಿಯರೆಂಬುದೀಗ ದಕ್ಷಿಣದ್ವಾರದಿಂ-ದುತ್ತರ ದ್ವಾರಕ್ಕೆ ಬಂದು ಪಶ್ಚಿಮವಾಯುವ ಕೊನೆಯ ಮೊನೆಯ ಮೇಲೆ ಬೆಳಗುವ ಪರಂಜ್ಯೋತಿಯು ನಿಮ್ಮ ಶರಣ ಬಲ್ಲನಲ್ಲದೆ ಲೋಕದ ಅಜ್ಞಾನಿಗಳೆತ್ತ ಬಲ್ಲರೆಂಬ ಶಬ್ದಾರ್ಥ.[೩]

3. ಆರು ಚಕ್ರದೊಳಾರು ತೆರದೊಳೊಪ್ಪುವ ಕಂಜವಾರನಿಂಬುಗೊಂಡು ।
ತೋರುವ ಮನವಸುಗಳೊಡನೆ ಕೂಡಿ ಜಾರದೊಂದೆಡೆಗೆ ॥
ಮೀರಿ ಮೂಲಾಗ್ನಿವೆರಸಿ ನಡುನಾಡಿಯೊಳೇರಿ ಚಿಜ್ಜ್ಯೋತಿಯ ।
ಬೇರಾಗದೊಂದಿರೆ ಸ್ಪರ್ಶಯೋಗವಿದೆಂದು ಸಾರಿ ಪೇಳುವರು ॥[೪]

4. ಆಧಾರ ಸ್ವಾಧಿಷ್ಠಾನ ಮಣಿಪೂರಕ ಸ್ಥಾನವನರಿಯರು.
ಅಪ್ಪದಳ ಕಮಳದಲ್ಲಿ ಸೂಕ್ಷ್ಮನಾಳವೆಯ್ದೊಡೆ (ವೆಯ್ದಿದ್ದೊಡೆ?)
ಇನ್ನೇನನರಿವರಾರೋ?
ಬೇರೆ ಮತ್ತೆ ಅರಿಯಲುಂಟೆ ಹೇಳಾ?
ಸಹಸ್ರದಳಕಮಲ ಬ್ರಹ್ಮರಂಧ್ರದಲ್ಲಿಯ ಗುರುವನರಿದು ಒಳಗೆ ವೇಧಿಸಿ
ಅಲ್ಲಿಪ್ಪ ಅಮೃತಸ್ವರವರಿದು ಓರಿದುಕೊಂಬುದರಿದು ಗುಹೇಶ್ವರಾ.

ಟೀ. ಷಡುಚಕ್ರ, ವರ್ಣ, ದಳ ಅಕ್ಷರ, ಅಧಿದೇವತೆಯನರಿದು ಹೃದಯಕಮಲ ಸೂಕ್ಷ್ಮನಾಳ ಮೂಲವನು ಬ್ರಹ್ಮರಂಧ್ರದ ಸಹಸ್ರಕಮಲದೊಳಗೆ ವೇಧಿಸಿ.

---

೧. ಪ್ರ. ವ. ಪು. ೧೨೪, ವ. ೭೪, ಟೀಕು.
೨. ಪ್ರ. ವ. ಪು. ೧೮೮, ವ. ೬೫ರ ಟೀಕು.
೩. ಅದೇ ಪು. ೧೩೪, ವ. ೯೪ರ ಟೀಕು.
೪. ವೇ. ಗ್ರಂ. ಪು. ೬೫, ಪ. ೩೭, ನುಡಿ ೨.

ಅಲ್ಲಿಪ್ಪ ಅಮೃತಸ್ವರವ ಗ್ರಹಿಸಿದಡೆ ಅದೇ ಪ್ರಾಣ-ಲಿಂಗ ಸಂಬಂಧವೆಂಬುದೀ ವಚನಾರ್ಥ.[೧]

5. ...ಉನ್ಮನಿಜ್ಯೋತಿ ಬ್ರಹ್ಮರಂಧ್ರದ ಮೇಲೆ ಇಪ್ಪ ಸಹಸ್ರದಳಪದ್ಮದ ಅಮೃತ ಬಿಂದುವಿನೊಳಗೆ ಪ್ರಣವಸ್ವರೂಪವಾಗಿಪ್ಪ ಲಿಂಗದಲ್ಲಿ ಒಡಗೂಡಬಲ್ಲಡೆ ಅದೇ ಪ್ರಾಣ ಲಿಂಗ ಸಂಬಂಧವೆಂಬುದೀ ವಚನಾರ್ಥ.[೨]

6. ...ಉನ್ಮನಿಜ್ಯೋತಿ ಬ್ರಹ್ಮರಂಧ್ರದ ಮೇಲೆ ಸಹಸ್ರದಳಪದ್ಮ.
ಅಲ್ಲಿ ಅಮೃತವಿಹುದು.
ಅಲ್ಲಿ ಓಂಕಾರ ಸ್ವರೂಪವಾಗಿ ಗುಹೇಶ್ವರಲಿಂಗವು ಸದಾ ಸನ್ನಿಹಿತನು.[೩]

7. ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ......

ಟೀ. ಕಾಯವೆಂಬ ಸೆಜ್ಜೆಯೊಳಗಿಪ್ಪ ಪ್ರಾಣಲಿಂಗಕ್ಕೆ ಬ್ರಹ್ಮರಂಧ್ರದ ಅಮೃತ ಗಂಗೋದಕವೆ ಮಜ್ಜನ......[೪]

ಸುಷುಮ್ನನಾಳವೇ ಬ್ರಹ್ಮನಾಡಿ ಅಥವಾ ಬ್ರಹ್ಮಕ್ಕೆ ಹರಿನಾಳಿಗೆ. ಅದೇ ಸೂಕ್ಷ್ಮನಾಳ, ಜೀವ ಶಿವರ ಯೋಗಕ್ಕೆ ಮಾರ್ಗ. ಈ ಮಾರ್ಗದಿಂದ ಪ್ರಾಣವಾಯು, ಈ ವಾಯುವಿನೊಡನೆ ಹರಿದಾಡುವ ಮನವನ್ನು ಸಹಸ್ರದಳ ಕಮಲದೊಳಗೆ ವೇಧಿಸಿದರೆ ಅಲ್ಲಿಯೇ 'ಆ ಬ್ರಹ್ಮರಂಧ್ರದ ಸಹಸ್ರದಳಕಮಲದಲ್ಲಿ—ಪ್ರಾಣಲಿಂಗಪ್ರತಿಷ್ಠೆಯನು ಕಾಣಬಹುದು',[೫] '...ಸಹಸ್ರದಳಕಮಲದಲ್ಲಿ ಗುಹೇಶ್ವರನೆಂಬ ಲಿಂಗವು.'[೬] ಅಲ್ಲಿಯೇ ತನುವೆಂಬ ತೋಟದ ಪ್ರಾಣಪವನ ರಾಟಾಳಕ್ಕೆ ಚಿದಾನಂದ ಕೂಪಕ್ಕೆ ಬ್ರಹ್ಮನಾಳದ ಕಾಲುವೆಗೆ ತೋಟದ ಮೇಲಂಭಾಗಕ್ಕಿರುವ ಬ್ರಹ್ಮರಂಧ್ರದ ಬ್ರಹ್ಮಬೀಜಕ್ಕೆ ಅನ್ಯೋನ್ಯ ಸಂಬಂಧ. ಇದೇ ಪ್ರಾಣ ಮತ್ತು ಲಿಂಗದ ಸಂಬಂಧ, ಪ್ರಾಣಕ್ಕೆ ಲಿಂಗಕ್ಕೆ ಬ್ರಹ್ಮಗಂಟು.

ಚಿದಾನಂದಜಲದಿಂದ ಬ್ರಹ್ಮರಂಧ್ರದ ಚಿತ್‌ಕಳೆ, ಬ್ರಹ್ಮಬೀಜ ಮೊಳಕೆಯೊಡೆದು ಸಸಿಯಾಗಿ ಪಲ್ಲವಿಸಹತ್ತಿದರೆ 'ಬಸವಗಳೈವರ' ಹಾವಳಿ. ಶಬ್ದಸ್ಪರ್ಶ ಮುಂತಾದ ಐದು ವಿಷಯಗಳ ಸಂಗದಿಂದ ಕಿವಿ ತೊವಲು ಮೊದಲಾದ ಐದಿಂದ್ರಿಯಗಳು ಮನವನ್ನು ವಿಷಯವಿಕಾರಕ್ಕೆ ಒಳಗುಮಾಡಿದರೆ ಲಿಂಗದ ಸಸಿ ಕಳೆಗೆಟ್ಟುಹೋಗುವ ಸಂಭವ. ಪ್ರಾಣ ವಾಯುವಿನೊಡನೆ ಲಿಂಗದತ್ತ ಮೇಲುಮುಖವಾಗಿ ಹರಿವ ಮನ ಇಂದ್ರಿಯ ಮುಖ

---

೧. ಪ್ರ. ವ. ಪು. ೯೬, ವ. ೧೬ ಮತ್ತು ಟೀಕು.

೨. ಪ್ರ. ವ. ಪು. ೯೬, ವ. ೧೫ರ ಟೀಕು.

೩. ಅದೇ, ಪು. ೯೫-೯೬, ವ. ೧೫

ಈ ವಚನದಲ್ಲಿ ಪ್ರಭುದೇವರು ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂಬ ಆರು ಚಕ್ರಗಳ ಸ್ಥಾನ, ಮಹಾಭೂತ, ಕೋಣೆ, ಪದ್ಮ, ದಳ, ಅಕ್ಷರ, ವರ್ಣ, ಅಧಿದೇವತೆಗಳನ್ನು ವಿವರವಾಗಿ ಹೇಳಿದ ಮೇಲೆ ಸಹಸ್ರದಳ ಪದ್ಮದ ಬ್ರಹ್ಮಚಕ್ರದ ವಿವರವನ್ನು ಮೇಲೆ ಕೊಟ್ಟಂತೆ ಹೇಳಿದ್ದಾರೆ.

೪. ಅದೇ, ಪು. ೯೯; ವ. ೨೫ ಮತ್ತು ಟೀಕು.

೫. ಅದೇ, ಪು. ೯೯, ವ. ೨೬ರ ಟೀಕು.

೬. „ „ ವ. ೨೬.

ವಾಗಿ ವಿಷಯದತ್ತ ಹರಿದರೆ ಮತ್ತೆ ಭ್ರಾಂತಿಯ ಬೇರು ಚಿಗುರೇರಿ, ಸಂಸಾರದ ಹೆಂಟೆ ಮತ್ತೆ ಬಲಿದು ಘನವಾಗುತ್ತವೆ. ಶಿವಯೋಗ ಸರಿದು ಸಂಸಾರಯೋಗ ಮುಂದಾಗುತ್ತದೆ. ಲಿಂಗದ ಸಸಿ ಹಸಗೆಟ್ಟು ಅಂಗದ ಸಸಿ ಪಲ್ಲವಿಸಿ ಪಸರಿಸಹತ್ತುತ್ತದೆ. ಹೀಗಾಗಬಾರದೆಂಬ ಮುಂಜಾಗ್ರತೆಯಿಂದಲೇ ತನುವಿನ ತೋಟಕ್ಕೆ ಬೇಲಿಹಾಕಬೇಕು. ವಿಷಯಗಳು ಇಂದ್ರಿಯಮುಖದಲ್ಲಿ ನುಗ್ಗಿ, ವಿಷಯಗಳನ್ನು ಕಚ್ಚಿದ ಇಂದ್ರಿಯಗಳು ಮನದಲ್ಲಿ ನುಸುಳದಿರಲು ಸಮತೆ ಮತ್ತು ಸೈರಣೆಯ ಎರಡು ಸುತ್ತು ಬೇಲಿ. ಬಿರುಬಿಸಿಲು ಬೆಳುದಿಂಗಳು, ಸುರಸೌಂದರ್ಯ ಆಸುರಕುರೂಪ, ಮಧುಗಾನ ಗೊಗ್ಗರಧ್ವಾನ, ಜೇವು ಬೆಲ್ಲ, ಸುಗಂಧ ದುರ್ಗಂಧ—ಎಂಬಿಂಥ ವಿಷಯಗಳು ಬಂದು ಇಂದ್ರಿಯಗಳನ್ನಪ್ಪಳಿಸಿದರ ಸೈರಣೆಯ ಬೇಲಿ ಅವನ್ನೆಲ್ಲ ತಡೆಗಟ್ಟಿ ನಿಲ್ಲಿಸುತ್ತದೆ. ಚಿತ್ರಹಿಂಸೆ ಬಂದರೆ ಸೈರಣೆ, ವಿನಯಾಲಂಕೃತವಾದ ವಂದನೆ ಬಂದರೆ ಸೈರಣೆ. ಅದಕ್ಕೆ ಸಂಕೋಚವಿಲ್ಲ, ಇದಕ್ಕೆ ವಿಕಾಸವಿಲ್ಲ. ಹೊರಗೆ ಸೈರಣೆಯ ಬೇಲಿ ಬಲಿದರೆ ಒಳಗೆ ಸಮತೆಯ ಬೇಲಿ ಬಲವಾಗಿ ಬಿಗಿದಿದೆ. 'ಸುಖ ದುಃಖ, ಪಾಪ ಪುಣ್ಯ, ಲಾಭ ಹಾನಿ, ಜಯ ಅಪಜಯ, ಮಾನ ಅಪಮಾನ—ಇವೇನೇ ಇರಲಿ, ಮನದ ಮುಂದೆ ಬಂದು ಒಳಗೆ ನುಗ್ಗಬೇಕೆಂದರೆ ಇವಕ್ಕೂ ಸಮತೆಯ ಜೇಲಿ. ಈ ಸಮತೆ ಈ ಸೈರಣೆ ಇಲ್ಲದಿದ್ದರೆ ಜೀವಾತ್ಮ ಪರಮಾತ್ಮರಿಗೆ ಶಿವಯೋಗವಿಲ್ಲ, ಪ್ರಾಣಕ್ಕೆ ಲಿಂಗಕ್ಕೆ ಸಂ-ಬಂಧವಿಲ್ಲ. ಹೀಗಾದರೆ ಸಸಿಗೆ ಕರಿಕೆಯೇ ಗತಿ, ತೋಟಕ್ಕೆ ಪಡಭೂಮಿಯೆ ವಿಧಿ.

ಬೇಲಿಯನ್ನು ಬಲಿದರೆ ತೋಟ ಸುರಕ್ಷಿತವಾಗಿ, ಸಸಿ ತಾನೇ ಪಲ್ಲವಿಸಿ ಫಲಿಸುವುದೆಂಬ ಭರವಸೆ ಇಲ್ಲ. ಬಸವಗಳ ಕಾಟ ತಪ್ಪಿದರೆ ಕಳ್ಳರ ಕಾಕರ ಉಪದ್ರವವಾಗಬಹುದು. ಮಾಯೆ ಅಜ್ಞಾನ ಅಹಂಭಾವಗಳಿವೆ, ಬುದ್ಧಿ ಹೃದಯವನ್ನು ಕಲಕುವ ಬೇರೆ ಬೇರೆ ಮತ ತತ್ತ್ವ ಮಾರ್ಗದರ್ಶನಗಳಿವೆ. ಪರಬ್ರಹ್ಮ ಸಸಿ ಚಿಗುರೊತ್ತಿ ಹೊಗರೇರಿ ವಿಶ್ವತೋಮುಖವಾಗಿ ಪಸರಿಸಲು ಯಾವ ನಿಮಿಷ ಯಾವ ಅಂತರಾಯ ತಲೆದೋರಬಹುದೆಂಬ ನಿಶ್ಚಯವಿಲ್ಲ. ಅದಕ್ಕೇ ಆವಾಗಳೂ ಈ ತೋಟದಲ್ಲಿ ಜಾಗರವಿದ್ದು ಸಸಿಯನ್ನು ಸಲಹಬೇಕು.[೧]

ಗೊಗ್ಗಯ್ಯನನ್ನು ಬೋಧಿಸಿ ತಿಳುಹಿದ ಪ್ರಭುದೇವರ ವಿಚಾರಸಾರವಿಷ್ಟೇ: ಗುರು ಲಿಂಗ ಜಂಗಮ ದಾಸೋಹ ನಿಮಿತ್ತ, ದೇಹ ಮನ ಭಾವ ಬುದ್ಧಿ ಧಾರಣ ನಿಮಿತ್ತ, ಹೆಂಡಿರು ಮಕ್ಕಳು ನಿಮಿತ್ತ ಸತ್ಯಶುದ್ಧವಾದ ಎಲ್ಲ ಕಾಯಕ ಮಾಡಬೇಕು. ಆದರೆ ಬಹಿರಂಗದ ಕಾಯಕದಲ್ಲಿ ಕರ್ಮಜ್ಞಾನೇಂದ್ರಿಯ ಪ್ರಾಣಚೈತನ್ಯಗಳು ನಿರತವಾದರೆ ಅಂತರಂಗದಲ್ಲಿ ಬೇರೊಂದು 'ಕಾಯಕ' ನಡೆಯಬಾರದು. ಬಹಿರಂಗದ ಕ್ರಿಯಾತ್ಮಕ ಕಾಯಕ

---

೧. 'ತನುವ ತೋಟವ ಮಾಡಿ....' ಎಂಬ ವಚನವನ್ನು ಹೀಗೆ ಅರ್ಥಯಿಸಿದರೆ 'ಅದು ತಪ್ಪು, ಇದು ಅಲ್ಲ'–ಎಂದು ನೀವು 'ತಕರಾರು' ಮಾಡಬಹುದು. ನೀವು ತಪ್ಪನ್ನು ತೋರಿಸಿ. ತಿದ್ದಿ ವಚನದ ಭಾವಗಾಂಭೀರ್ಯವನ್ನು ಹೆಚ್ಚಿಸಿದರೆ ಅದು ನಿಮ್ಮ ಸದ್‌ಬುದ್ಧಿಯಿಂದ ಹರಿವ ಉಪಕಾರವೆಂದೇ ನಾನು ಭಾವಿಸುತ್ತೇನೆ. ಸಂ.

ದಲ್ಲಿ ಅಂತರಂಗದ ಸಮ್ಯಗ್‌ಜ್ಞಾನ ಪ್ರಾಣರಸವಾಗಿ ಹರಿಯಬೇಕು. ಅದರಂತೆ ಲೋಕಾ-ರ್ಥವಾದ ಬಹಿರಂಗ ಕಾಯಕ ಸ್ವಾಂತರಂಗದ ನಿಜಾನುಭಾವ ಕಾಯಕಕ್ಕೆ ಪ್ರಾಣ-ದೇಹ ಸಂಬಂಧವಾಗಿ ವರ್ತಿಸಬೇಕು. ಹೊರಗೆ ಗೊಗ್ಗಯ್ಯ ತೋಟಮಾಡಿದರೆ ಅದೇ ಗೊಗ್ಗಯ್ಯನ ಒಳಗೆ ಪ್ರಭುವಿನ ತೋಟದ ಕೃಷಿ ನಡೆಯಬೇಕು. ಅಂದರೆ ಗೊಗ್ಗಯ್ಯ-ಪ್ರಭು ತೋಟಮಾಡಿದರೆ 'ದ್ಯಾವಾಪೃಥಿವಿ'ಗಳು ಸಮರಸವಾದ ಐಕ್ಯಫಲ ಬ್ರಹ್ಮವೃಕ್ಷ ದಲ್ಲಿ ಬ್ರಹ್ಮಾಕಾರವಾಗಿ ಫಲಿಸುತ್ತದೆ.

ಗೊಗ್ಗಯ್ಯ ಕಾಯ, ಪ್ರಭು ಪ್ರಾಣವಾಗಿ ಜೀವನದ ಕಾಯಕ ನಡೆವುದೇ 'ಕಾಯ ಕ'ದ ಸತ್ಯಾರ್ಥ; ಇದೇ ಜೀವನದ ಪರಮಾರ್ಥ. ತನ್ನ ತನುವಿನ ತೋಟದಲ್ಲಿ ಪ್ರಾಣ ಲಿಂಗವಾದ ಪ್ರಭುವನ್ನು ಬೆಳೆಯಬೇಕು ಎಂದು ಗೊಗ್ಗಯ್ಯನ ಅಂತರಂಗ ಹೊಳೆಯಿತು; ಪ್ರಭು ಮುಂದೆ ಸಾಗಿದ.

ಪ್ರಭುವಿನ ಬೆಂಬಳಿವಿಡಿದು ನಾವೂ ಮುಂದೆ ಸಾಗೋಣಲ್ಲವೇ? ದಿವ್ಯಪರಿಮಳದ ಸೂಚನೆದೋರಿದ ತನ್ನ ಮಂದಾರ ಗುರು ಇಲ್ಲಿ ಇರಲೇಬೇಕೆಂದು 'ಮೂಲಜ್ಞಾನ'ದಿಂದ ತಿಳಿದ ಪ್ರಭುದೇವರು, ಇದೋ, ಇಲ್ಲಿಯೇ ಸಮೀಪದಲ್ಲಿ 'ಮಣ್ಣ ಮಟಿಯ ದೇಗುಲ'ದ ಗರ್ಭಗುಹೆಯೊಳಗೆ ಪ್ರವೇಶಮಾಡುತ್ತಿದ್ದಾರೆ. ಪ್ರವೇಶಮಾಡುವ ಮುನ್ನ ಸಿದ್ಧವೀರ-ಣ್ಣೊಡೆಯರ ಕಣ್ಣಿನ ಮುಖವಾಗಿ ಪ್ರಭುವಿನ ಮೂರ್ತಿಯನ್ನು ಇನ್ನೊಮ್ಮೆ ಇಣುಕಿ ನೋಡಿ:

> ತಾವು ನವಮಾಸಂ ತೀವಿದ ಗರ್ಭಿಣಿಯಂತೆ ಶಿವತತ್ತ್ವವಿದ್ಯೆಯೊಳಗೆ ಸಂಪೂರ್ಣ ಮಾಗಿ ಎಡೆಗೊಂಡು, ಗುರುಹಸ್ತ ಬಂದು ಸೋಂಕದ ಮುನ್ನವೆ ಶಿಖಿಕರ್ಪೂರ ದಂತಾದಪುದೆಂಬ ಭಾವವಿದಿರಿಂಗೆ ಸೂಚಿಸುತ್ತಮಿರೆ, ಗುರುವಿಂದ ಮುನ್ನವೆ ಶಿಷ್ಯನು ಗುರುವೆಂಬ ಶಿವಾದ್ವೈತವಾಕ್ಯ ಸತ್ಯಮಾದಂತೆ, ಅಂತರಂಗದೊಳು ಗುರು ಭಾವ ತಲೆದೋಱುತ್ತಿರ್ಪ ಅಲ್ಲಮ ಪ್ರಭುದೇವರು......[೧]

ಒಂಬತ್ತು ತಿಂಗಳ ಬಸಿರೆ ಪ್ರಭುದೇವರು. ಒಳಗೆ ಶಿವಜ್ಞಾನ ಸಂಪೂರ್ಣ ತುಂಬಿ ಪರ ಬ್ರಹ್ಮದ ಶಿಶುವನ್ನು, ಪ್ರಾಣಲಿಂಗವಾದ ತೇಜೋಮೂರ್ತಿಯನ್ನು ಹೆರುವ ಸಂಭ್ರಮ ದಲ್ಲಿದೆ. ಬೆಂಕಿ ಬಂದು ಮುಟ್ಟುವ ಮೊದಲೆ ಕಟ್ಟಿಗೆಯ ಒಣಗು ಉರಿಯೇಳುವದೇನೋ ಎಂಬಂತೆ ಗುರುದೇವನ ಪರುಷಹಸ್ತ ಬಂದು ಮಸ್ತಕವನ್ನು ಸೋಂಕಿ, ಒಳಗೆ ವೇಧಿಸಿ 'ಭಾವ ಹೃದಯ ನೇತ್ರ'ದಿಂದ ಇಷ್ಟಲಿಂಗವನ್ನು ಹಡೆಸಿಕೊಂಡು ಕರಸ್ಥಲಕ್ಕೆ ಕರುಣಿಸು ವದಕ್ಕಿಂತ ಮೊದಲೆ ಪ್ರಭುದೇವರ ಅಂತರಂಗದ ಪ್ರಾಣಲಿಂಗ ಹೊರಜಿದ್ದು ಕರದಖಂಡ ತೇಜವಾಗಿ ಬಹಿರಂಗಕ್ಕೆ ಕ್ರಿಯಾಲಿಂಗವಾಗಿ ಮೂಡುವದೇನೋ ಎನ್ನುವಷ್ಟು ಗರ್ಭ ಬೆಳೆ ದಿದೆ. ಹಡೆಸಿಕೊಳ್ಳಲು ದಾಯಿ ಬೇಕು, ನಿಜ. ಆದರೆ ದಾಯಿಯಿಲ್ಲದೆ ಪ್ರಸವ, ಸುಖ ಪ್ರಸವವಾಗಲಾರದೇ? ಆಗದೆ ಏನು? ಕೂಸನ್ನು ಹೊರದೆಗೆವ ದಾಯಿ ಹೊರಗಿದ್ದಂತೆ

---

೧. ಶೂ. ಸಂ. ಪು. ೧೧, ವ. ೩೦.

ಒಳಗಿಂದ ಹೊರಹಾಕುವ ದಾಯಿ ಒಳಗಿದ್ದಾಳೆ. ಅಲ್ಲವೇ? ಇಬ್ಬರ ನಾಮ ರೂಪ ಬೇರೆ, ಅಷ್ಟೇ. ಗುರುಕಾರುಣ್ಯ ಹಡೆಯಲು ಹೊರಗೆ ಗುರುಮೂರ್ತಿ ಬೇಕು. ಆದರೆ ಅಂತರಂಗದಲ್ಲಿಯೇ ಈ ಬೋಧಾಮೂರ್ತಿ ಇಲ್ಲವೆಂದು ಹೇಳುವವರಾರು? ಅಂತರಂಗ–ಗುರು ಇಲ್ಲದಿದ್ದರೆ ಹೊರಗೆ ಕೋಟಿ ಗುರುಗಳಿದ್ದರೂ ಶಿಷ್ಯನಲ್ಲಿ ಒಂದು ಕಣ ವಿದ್ಯೆಯು ಸಂಭವವೂ ಇಲ್ಲ. ಶಿಷ್ಯನಲ್ಲಿ ಸದಾ ಸನ್ನಿಹಿತವಾಗಿ ಗುರು 'ಐದಾನೆ ಇಲ್ಲದಂತೆ'. ವಿದ್ಯಾಶಿಷ್ಯ ವಿದ್ಯಾಗುರುವಿನ ಅಂಶವೇ. ಮತ್ತು ವಿದ್ಯಾಗುರು ವಿದ್ಯಾಶಿಷ್ಯನ ವಂಶವೇ. ಅಂತು ಶಿಷ್ಯನ ಒಳಗೆ ಗುರು 'ಐದಾನೆ'. ಸಾಮಾನ್ಯ ಶಿಷ್ಯಕುಲಕೋಟಿಗೆ ಅಂತರಂಗ ಗುರುವಿನ ಅರಿವಿಲ್ಲ. ಅರಿವಿದ್ದರೂ ನಿಚ್ಚಳವಾಗಿ ಇಲ್ಲ. ಆದರೆ 'ಮುಟ್ಟಿದರೆ ಕೆಟ್ಟೇನು' ಎಂಬ ಅವಸ್ಥೆಯಲ್ಲಿದ್ದ ಪ್ರಭುದೇವರು, ಶಿಷ್ಯತ್ವದ ಶಿಖರಮೂರ್ತಿ. ಅಂತರಂಗದ ಸ್ವಯಂಗುರುಮೂರ್ತಿ ಶಿವತತ್ತ್ವವಿದ್ಯೆಯನ್ನು ಚಿದಾಕಾಶಕ್ಕೆ 'ಭರ್ತಿ'ಯಾಗಿ ತುಂಬಿದ್ದಾನೆ. ಹೊರಗೆ ಅನಿಮಿಷಯ್ಯನಾಗಿ ತೋರಲಿರುವ ಪ್ರಭುದೇವನ ಗುರು ಅಂತರಂಗದ ಗುರುತತ್ತ್ವವಾಗಿ ಮೊದಲಿನಿಂದಲೆ ಪ್ರಭುವನ್ನು ಬೋಧಿಸುತ್ತ ರೂಪಿಸುತ್ತ ಬಂದಿದೆ. ಈ ಅಂತರಂಗಬೋಧಾಕ್ರಿಯೆಯಲ್ಲಿ ಶಿಷ್ಯನಿಗೆ ಶಿಷ್ಯನೆ ಗುರು. ಹೀಗೆ ಗುರು ಶಿಷ್ಯ ಭಾವವನ್ನು ಒಳಗೆ ಉಜ್ಜಿ ನೋಡಿದರೆ ಅದು ಅ-ದ್ವೈತವಲ್ಲದೆ ನಿಜಾಂತರಂಗದಲ್ಲಿ ದ್ವೈತವಿಲ್ಲ. ಮಾನವನ ಹೃದಯ ಕ್ಷೇತ್ರದಲ್ಲಿ ಶಿಷ್ಯಭಾವ ತಲೆದೋರಿದ ನಿಮಿಷವೆ ಗುರುಭಾವ ಅದೇ ನಿಮಿಷ ಮೊಗವೆತ್ತಿದೆ. ಬಿಸಿಲು ನೆಳಲು, ಚಿನ್ನ ಬಣ್ಣ–ಇವರಲ್ಲಿ ಯಾವುದು ಮುಂದು? ಯಾವುದು ಹಿಂದು? ಇದೇ 'ಶಿವಾದ್ವೈತವಾಕ್ಯ'ದ ಮರ್ಮವಲ್ಲವೇ? ಅಂತರಂಗದಲ್ಲಿ ಈ ಶಿವಜ್ಞಾನ ಕೃಷಿಯನ್ನು ನಡೆಸಿದ ಗುರುದೇವ,–ಇದೋ ಈ ಸಮಾಧಿಯಲ್ಲಿ ನಿಂದಿರುವ ಅನಿಮಿಷಯ್ಯನೇ ಎಂದು 'ಮೂಲಜ್ಞಾನದೃಷ್ಟಿ' ನೋಡಿ ನುಡಿಯುತ್ತಿದೆ ಪ್ರಭುದೇವನ ಹೃದಯದ ಕಿವಿಯಲ್ಲಿ. ಪ್ರಭುವಿನ ಗುರು ಅನಿಮಿಷಯ್ಯನೆಂಬುದಕ್ಕೆ ಅಂತಃಕರಣ ಪ್ರವೃತ್ತಿಯೆ ಪ್ರಮಾಣವೆಂದು ಹೇಳುವದಕ್ಕಿಂತ ಅಂತರ್ಜ್ಞಾನದೃಷ್ಟಿಯೆ ಸತ್ಯಪ್ರಮಾಣವೆಂದು ಹೇಳಬೇಕು.

ಪ್ರಭುದೇವ ಸಮಾಧಿಯ ಒಳಗೆ ಹೊಕ್ಕು ಕಂಡುದೇನು? ಒಂದು ದಿವ್ಯ ಮಾನವ ದೀಪ್ತಿ. 'ಮಣ್ಣ ಮಱೆಯ ದೇಗುಲದೊಳಗೊಂದು ಮಾಣಿಕ್ಯ......' ಥಳಥಳಿಸುತ್ತಿದೆ ! ಒಳಗೆ ಬೆಳಗಿದ ಕಾಂತಿ ಮಿಗೆವರಿದು ಹೊರಗೆ ಉರಿಯುತ್ತಿದೆ. ಒಳಗೆ ಹೊರಗೆ ಎಂಬ ಸಂದು ಬಿರುಕು ಕಂಡುಬರುವುದಿಲ್ಲ. ಈ ಸಾಕಾರ ಜ್ಯೋತಿಃಪುಂಜ ರಕ್ತಮಾಂಸ ಎಲು ತೊಗಲಿನಲ್ಲಿ ಪ್ರಕೃತಿ ಕಡೆದ ಕಾಯವಲ್ಲ; ಪ್ರಾಣಮನದಿಂದ ಮಾಡಿದ ಮೂರ್ತಿಯಲ್ಲ. ಪುಣ್ಯದ ಪುಂಜ, ಮುಕ್ತಿಯ ಮುದ್ದೆ ಅಲ್ಲ. ಎಂದೋ ಒಮ್ಮೆ ಕಾಲದ ಅನಾದ್ಯನಂತ ಪ್ರವಾಹದಲ್ಲಿ ಮೇಲೆ ಮೂಡಿರುವ ಬೊಬ್ಬುಳಿಕೆಯಲ್ಲ. ಇಂಥ ಪ್ರವಾಹದಲ್ಲಿ ಮೂರ್ತಿಗೊಂಡು ಪ್ರಳಯದ ಸೊತ್ತಾಗಿರುವ ಶಿವಶಕ್ತಿಯರ, ಬ್ರಹ್ಮಬ್ರಹ್ಮಾಣಿಯರ ಗರ್ಭದಿಂದೊಗೆದ ಕೂಸು ಅಲ್ಲ. ದೀಪ್ತಿಗೆ ಕಾಯವಿದೆ, ಆಕಾರವಿದೆ, ತೇಜಸ್ಸಿದೆ. ಆದರೆ ಕಾಣಬರುವ ಕಾಯವನ್ನು ಭೇದಿಸಿ, ಪಾರಾಗಿ ವಿಶ್ವಕಾಯವಾಗಿ ಕಣ್ಣಿನ ಕೈಗೆ ನಿಲುಕದಂತಿದೆ. ಈ ಕಾಯದ ಕಾಂತಿ ವಿಶ್ವಾತೀತವಾಗಿ, ನೋಡುವ ಕಣ್ಣಿಗೆ ತಾನೆ

ಬೆಳಗನ್ನು ನೀಡುತ್ತ ಒಳಗೆ ಹೊರಗೆ ನಿಂತಿದೆ. ಆದರೆ ಅದರ ನಿಲವು 'ಕಂಗಳೊಳಗಣ ಕತ್ತಲೆ!'[೧]

ಅದೋ ಮನವೆಲ್ಲ ಮೌನವಾಗಿ ಕೇಳಿ ಪ್ರಭುದೇವರು ಆ ದಿವ್ಯ ದೀಪ್ತಿಯನ್ನು ಕುರಿತು ಏನೋ ನುಡಿಯುತ್ತಿದ್ದಾರೆ:

ಸ್ಫಟಿಕದ ಘಟದಂತೆ ಒಳಹೊಱಗಿಲ್ಲ ನೋಡಾ!
ವಿಗಡ ಚರಿತ್ರಕ್ಕೆ ಬೆಱಗಾದೆನು.
ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು.
ಹೊದ್ದುವರೆ ಸಮೀಪ, ಹತ್ತೆ ಸಾರುವರತ್ತತ್ತ ತೋಱುತ್ತಿದೆ.
ಆಕಾರವ ನಿರಾಕಾರ ನುಂಗಿ, ಬಯಲ ಸಮಾಧಿಯಲ್ಲಿ ಸಿಲ್ಕಿತ್ತು ನೋಡಾ!
ದರುಶನದಿಂದಮೃತಾಹಾರವಾಯಿತ್ತು. ಬೆರಸಿದಡಿನ್ನೆಂತೊ ಗೊಹೇಶ್ವರಾ!![೨]

ಅನಿಮಿಷಯ್ಯನ ಕಾಯ ಸ್ಫಟಿಕದ ಕೊಡ; ಒಳಹೊರಗೆ ಬೆಳಗುವ ಮಹಾಘನಜ್ಯೋತಿರ್ಲಿಂಗವನ್ನು ಧರಿಸಿರುವ ಸ್ವಚ್ಛಪಾರದರ್ಶಿ. ಅನಿಮಿಷಯ್ಯನ ಅರಿವು ಮಾನವ್ಯದ ತಾಮಸಗತ್ತಲೆಯನ್ನೆಲ್ಲ ಝಾಡಿಸಿ 'ಅಣೋರಣೀಯಾನ್ ಮಹತೋ ಮಹೀಯಾನ್' ಆಗಿ, 'ಯಜ್ಜ್ಯೋತಿಷಾಂ ಜ್ಯೋತಿಃ' ಆಗಿದೆ. ಈ ಮಹಾಬೆಳಗಿನ ಪ್ರತಾಪದಿಂದ ಆತನ ಮಾನವಘಟದ ಪ್ರಕೃತಿಯ ಗುಣಧರ್ಮಕರ್ಮವೆಲ್ಲ ಸುಟ್ಟು ನಿರ್ಮಲವಾಗಿ ನಿಂತಿದೆ. ಘಟದ ಒಳಗೆ ದೀಪ, ಒಳಹೊರಗೆ ಪ್ರಕಾಶ. ಈ ದೀಪ ಈ ಘಟ ಈ ಪ್ರಕಾಶ ನನಗೆ ನಿಮಗೆ ಕಾಣುವಂತೆ ಇಲ್ಲ. ಹೀಗೇಕೆ ಎಂದು ನೀವು ಕೇಳಬಹುದು. ಇದೇ ಶರಣನ ವಿಗಡ ಚರಿತ್ರ! ಈ ವಿಗಡಚರಿತ್ರ ಮತ್ತು 'ಗೊಹೇಶ್ವರನೈದಾನೆ ಇಲ್ಲದಂತೆ'—ಈ ಗೊಹೇಶ್ವರನ ಈ ಬೆಡಗು ಬಿನ್ನಾಣ ಒಂದೇ. ಪ್ರಭು ಕಂಡ ಅನಿಮಿಷದೇವ ನಮಗೆ ಕಂಡರೆ ನಾವು ಗೊಹೇಶ್ವರನನ್ನು ಕಂಡಂತೆಯೆ. 'ಶರಣ ಎಂತಿರ್ದಂತೆ ಪರಬ್ರಹ್ಮ' ಎಂಬ ಮಾತು

೧. ನೋಡಿರಿ:

ಯಚ್ಚಕ್ಷುಷಾ ನ ಪಶ್ಯತಿ
ಯೇನ ಚಕ್ಷೂಂಷಿ ಪಶ್ಯತಿ
ತದೇವ ಬ್ರಹ್ಮ ತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥

ಕೇನ, ಪ್ರಥಮಖಂಡ, ಮಂತ್ರ ೬

೨. ಶೂ. ಸಂ. ಪು. ೧೨, ವ. ೩೪.

ಈ ವಚನದೊಡನೆ ಕೆಳಗೆ ಕೊಟ್ಟ ಆದಯ್ಯನ ವಚನ ಹೆಚ್ಚು ಕಡಮೆ ಸರಿಸಮನಾಗಿರುವಂತಿದೆ: ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ ಒಳಹೊರಗೆ ನೋಡುವರೆ ಕಾಣಬರುತ್ತಿದೆ. ನುಡಿಸುವಂತಹದಲ್ಲ. ಸಾರೆ ಇದ್ದಿಹುದು. ಮುಟ್ಟುವರೆ ಕೈಗೆ ಸಿಲುಕದು. ಶಾಸ್ತ್ರಸಂಬಂಧದ ಕಲಿಕೆಯೊಳಗಲ್ಲ. ವ್ಯಕ್ತಾವ್ಯಕ್ತವನೊಳಕೊಂಡು ಬಯಲ ಸಮಾಧಿಯಲ್ಲಿ ಸಿಲುಕಿತ್ತು,—ಸೌರಾಷ್ಟ್ರಸೋಮೇಶ್ವರಲಿಂಗವೆ ತಾನಾಗಿ.

ಆ. ವ. ಪು. ೫೦, ವ. ೧೪೮.

ನಿಮಗೆ ನೆನಪಿದೆಯಲ್ಲವೇ? ಮತ್ತೆ, 'ನೋಡುವರೆ ಸಮೀಪ......' ಮುಂತಾದ ಪ್ರಭುವಿನ ಅನುಭವವೆಲ್ಲ ಬ್ರಹ್ಮವನ್ನು ಕಂಡು ಅನುಭವಿಸಿದವರ ಮಂತ್ರವಾಕ್ಯವೇ. ಈಶಾವಾಸ್ಯೋಪನಿಷತ್ತಿನ 'ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ॥ ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ' ಎಂಬ ೫ನೆಯ ಮಂತ್ರವನ್ನು ಪರಿಶೀಲಿಸಿ ನೋಡಿದರೆ ಅನಿಮಿಷಯ್ಯ ನಿಜಸ್ಥಲದಲ್ಲಿ ನಿಂದ ಪರಮಾತ್ಮನೇ, ಪರಬ್ರಹ್ಮವೇ. ಆದರೆ ಪರಬ್ರಹ್ಮಕ್ಕೂ ಅನಿಮಿಷಯ್ಯನಿಗೂ ಇರುವ ಭೇದ ಇಷ್ಟೇ: ಅದು ನಿರಾಕಾರ ಇದು ಸಾಕಾರ–ನಿರಾಕಾರ ಅಥವಾ ಸಕಲ ನಿಷ್ಕಲ ಇಲ್ಲವೆ ಸಗುಣ ನಿರ್ಗುಣ. ತನ್ನ ಯಾವುದೇ ಆಕಾರದ ಅರಿವು ನಷ್ಟವಾಗಿ ಈ ಸಾಕಾರ–ನಿರಾಕಾರ ಮೂರ್ತಿ ನಿಂದ ನಿಲವೇ ಬಯಲ ಸಮಾಧಿ ಅಥವಾ ನಿಜಸಮಾಧಿ.

ಈ ನಿಜ ಸಮಾಧಿಯಲ್ಲಿ ಮೂರುತಿಗೊಂಡಿರುವ ಅನಿಮಿಷಯ್ಯನನ್ನು ಕಣ್ಣಾರೆ ಕಾಣುವ ತವಕ ನಿಮಗಿದೆ, ನನಗಿದೆ. ಇದೋ ಇಲ್ಲಿ ಬನ್ನಿ ಪ್ರಭು–ಸಿದ್ಧವೀರದೇವರ ಬೆಂಬಳಿಯಲ್ಲಿ. ಸ್ವಸ್ಥವಾಗಿ ಪದ್ಮಾಸನಹಾಕಿ ಕರಸ್ಥಲದಲ್ಲಿ ಇಷ್ಟಲಿಂಗ ಹಿಡಿದುಕೊಂಡಿದೆ ಸಮಾಧಿಯ ಮೂರ್ತಿ. ಅಂತಃಕರಣಚತುಷ್ಟಯವೆಲ್ಲ ಆ ಲಿಂಗವನ್ನು ಬಿಚ್ಚಿ ಬೇರಾಗದಂತೆ ಅಪ್ಪಿವೆ,—ಹರಿವ ನದಿಗಳು ಸಾಗರವನಪ್ಪಿದಂತೆ. ಅಂತೆಯೆ ಮನ ಬುದ್ಧಿ ಚಿತ್ತ ಅಹಂಕಾರಗಳ 'ಕರಣತ್ವ' ನಿಷ್ಪತ್ತಿಯಾಗಿ 'ನಿಃಕರಣವನ್ನೈದಿ'ವೆ. ಭಾವ—ಜೀವಭಾವವಿರಲಿ ಶಿವಭಾವವಿರಲಿ ಶಿವಜೀವೈಕ್ಯಭಾವವಿರಲಿ—ಎಲ್ಲ ಅಂಟು ಒಣಗಿ ನಿರ್ಭಾವಪದದಲ್ಲಿ ನಿಂದಿದೆ. ಕರಸ್ಥಲದ 'ಅಮೃತಲಿಂಗ,' ಇಷ್ಟಬ್ರಹ್ಮದಲ್ಲಿ ನಟ್ಟ ನೋಟ ಎವೆಹಳಚದೆ ನಿಬ್ಬೆರಗನ್ನು ಸೂಸುತ್ತಿದೆ. ತಾನು ಎಂಬ ವಿಶ್ವಪ್ರಕೃತಿಯ ತಾಮಸತರಂಗ ತೆರೆಗಳೆದು ಶಾಂತಿಯಾಗಿ ಲಿಂಗಸಾಗರದಲ್ಲಿ ವಿಲೀನವಾಗಿದೆ. ತನಗಿದಿರಿಟ್ಟು ತೋರುವ 'ನೀನು', 'ನಾನು' ಇದ್ದರೆ ಇದಿರಾಗಿ ನಿಲ್ಲುವ 'ನೀನು' ತನಗೆ ತಾನೆ ಕಳಚಿಹೋಗಿದೆ. ನಾನು ನೀನಿಗೆ ಮೂಲಾಧಾರವಾದ ಅರಿವು—ಅದು ಮೊದಲೇ ನಿರ್ಮೂಲವಾಗಿದೆ. ಅಂತೆಯೆ 'ಅಹಂ ತ್ವಮಿತಿ ಶಬ್ದ ವಿಭೇದವಂಡಂಗಿ' ಎಲ್ಲ ಎಲ್ಲ 'ಸ್ವಯಂ' ಆಗಿ ನಿಂತಿದೆ. ದೇಹವನ್ನು ದೇಹರೂಪದಲ್ಲಿ ನಿಲ್ಲಿಸಿ ನಡೆಸಿರುವ ಚೈತನ್ಯ, ಪ್ರಾಣವನ್ನು ಪ್ರಾಣದ ರೂಪಿನಲ್ಲಿ ಚೇತನಿಸಲು ಹಚ್ಚಿರುವ ಪ್ರಾಣಚೈತನ್ಯ, ಕಣ್ಣಿಗೆ ಕಾಣಲಿಕ್ಕೆ ಕಿವಿಗೆ ಕೇಳಲಿಕ್ಕೆ ಮನಕ್ಕೆ ನೆನೆವಂತೆ ಬುದ್ಧಿಗೆ ವಿಚಾರಿಸುವಂತೆ, ಮಾಯೆಗೆ ಮಾಯಾಶಕ್ತಿಯನ್ನು, ಅಜ್ಞಾನಕ್ಕೆ ತನ್ನ ತಾ ತಿಳಿಯದೆ ಅರೆಗತ್ತಲೆಯಲ್ಲಿ ಸರ್ವಭದ್ರವಾಗಿ ಕುಳ್ಳಿರುವ ಸಾಮರ್ಥ್ಯವನ್ನು, ಅಖಂಡವಾಗಿರುವ ವಿಶ್ವವನ್ನು ಖಂಡಮಾಡಿ ತಾನೊಂದು ಬೇರೆ ತುಣುಕಾಗಿ ನಿಂತಿರುವ ನಾನಿಗೆ ಅಹಂಕರಿಸುವ ಸಾಮರ್ಥ್ಯವನ್ನು ಒದಗಿಸುತ್ತಿರುವ ಸರ್ವಚೈತನ್ಯ 'ಮನೋಲಯಸ್ಥಾನದೊಳು' ಐದಿದೆ. ಇಲ್ಲಿ ಮನೋಲಯಸ್ಥಾನವೆಂದರೇನು? ಎಲ್ಲಿದೆ? ಎಂಬುದು ನಿಮ್ಮ ಪ್ರಶ್ನೆಯಲ್ಲವೇ? ಭಾರತೀಯ ಮನಃಸ್ವಭಾವಜ್ಞರ ಮತದಂತೆ ಮನದ ಗಮನಸ್ಥಾನ ಅಂದರೆ ಮನವೆಲ್ಲಿಂದ ಹೊರಹೊರಟಿದೆಯೋ ಅದೇ ಅದಕ್ಕೆ ಲಯಸ್ಥಾನ. ಮೂಡಿದಲ್ಲಿ ಮುಳುಗಬೇಕು, ತೋರಿದಲ್ಲಿ ಅಡಗಬೇಕು–ಇದೇ ವಿಶ್ವನಿಯಮ, ಬ್ರಹ್ಮಶಾಸನ ವಿಶ್ವಬ್ರಹ್ಮಾಂಡಕೋಟಿಗೆ. ಹೀಗಿದ್ದರೆ ಮನವೆಲ್ಲಿ ಮೂಡಿತು? ಅದರ ಮೂಲವೇನು? ಮನ ಮೂಡಿದ

ಮೂಲ, ಮನದೊಡನೆ ಮನವೆ ಆಗಿ ಆಡುತ್ತಿರುವ ನನಗೆ ಗೊತ್ತಿಲ್ಲ. ಮನದ ತೆರೆಯ ಮೇಲೆ ತೇಲುತ್ತಿರುವ ಮಾನವಪ್ರಾಣಿಗೆ ಮನದ ಮರ್ಮ ಗೊತ್ತಿಲ್ಲ. ಆದರೆ ಮರ್ಮಜ್ಞರಿದ್ದಾರೆ, ಮನದ ಬೇರು ಬಲ್ಲವರಿದ್ದಾರೆ. ದೂರ ಹೋಗಿ ಹುಡುಕಲೇಕೆ? ಇದೋ ಇಲ್ಲಿಯೇ ಪ್ರಭುವನ್ನು ಕೇಳಿ, ಹೀಗೆ ಹೇಳುತ್ತಾರೆ:

ಎಲೆ ಮನವೆ, ನೀ ನಿನ್ನ ನಿಜವ ತಿಳಿವಡೆ ಆ ನಿನ್ನ ನಿಜವ ಹೇಳಿಹೆ ಕೇಳು.
ಅದು ಕೇವಲ ಜ್ಯೋತಿ, ಅದು ವರ್ಣಾತೀತ.
ನೀನದನರಿಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು.
ಅದೀಗ ನಿನ್ನ ಪರಿಪೂರ್ಣತ್ವದ ನೆಲೆ.
ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ
ಅದೇ ನಿನ್ನ ಸಮ್ಯಗ್‌ಜ್ಞಾನದ ತೋರಿಕೆ.
ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ
ನೀ ನಮ್ಮ ಗೊಹೇಶ್ವರ ಲಿಂಗದ ಶ್ರೀಚರಣವನರಿಸಿಕೊಂಡು
ನಿಶ್ಚಿಂತನಾಗೆಲೆ ಮನವೆ.[೧]

ಮನದ ಮೂಲ ನಿಜಸ್ಥಲ ಷಡುವರ್ಣವಿರಹಿತವಾದ ಕೇವಲಜ್ಯೋತಿ. ಮಾನವನ ಮಾನವ-ಮನ-ಬುದ್ಧಿ ಈ ಕೇವಲಜ್ಯೋತಿಯನ್ನು ಕಂಡು ಅಪರೋಕ್ಷವಾಗಿ ಅನುಭವಿಸಿದರೆ, ಸರ್ವಾಂಗಚೈತನ್ಯ ಈ ಪರಿಪೂರ್ಣತ್ವದ ನೆಲೆಯಲ್ಲಿ ನಿರ್ಗಮನಿಯಾಗಿ ಸಂಯೋಗವಾದರೆ, ಯುಗಯುಗಾಂತರದಿಂದ ಮಾನವಕುಲ ಹುಡುಕುತ್ತ ಬಂದಿರುವ 'ನಿಶ್ಚಯ' 'ನಿಸ್ಸಂಶಯ' 'ನಿಶ್ಚಿಂತೆ' ಮುಂದೆ ಬಂದು ನಿಶ್ಚಲವಾಗಿ ನಿಲ್ಲುತ್ತವೆ. ಮತ್ತೆ ಮುಂದೆ ಮುಂದೆ ನಡೆದರೆ 'ಗೊಹೇಶ್ವರಲಿಂಗದ ಶ್ರೀಚರಣ'.

ಹಿಂದೆ ನಾವು ನೋಡಿದಂತೆ ಪ್ರಭುದೇವರು ತಮ್ಮ ಪ್ರಾಣವಾಯುಮನಗಳನ್ನು 'ಸುಷುಮ್ನನಾಳ'ದಿಂದ ತಿದ್ದಿ 'ಬ್ರಹ್ಮಬೀಜ' ಅಥವಾ ಬ್ರಹ್ಮರಂಧ್ರದ ಚಿಜ್ಜ್ಯೋತಿಯಲ್ಲಿಗೆ ಕಳಿಸುತ್ತಿದ್ದಾರೆ. ಈ ಚಿಜ್ಜ್ಯೋತಿ, ಈ ಕೇವಲಜ್ಯೋತಿಯೇ ಮನದ ಮಹಾಮೂಲ; ಇದೇ ಮನೋಲಯಸ್ಥಾನ. ಆದರೆ ಅನಿಮಿಷಯ್ಯನ ಮನ ಮುಂತಾದ ಎಲ್ಲ ಚೈತನ್ಯ ಆತನ ಕರಸ್ಥಲದ 'ಅಮೃತಲಿಂಗ'ದಲ್ಲಿ ಸಂಪೂರ್ಣವಾಗಿ ಗಮಿಸಿ ನಿರ್ಗಮನವಾಗಿ ನಿಂದಿದೆ.[೨] ಕರಸ್ಥಲದ ಇಷ್ಟಲಿಂಗ ಇದೂ 'ಕರದಖಂಡ ತೇಜವೇ'. ಭಾವದಿಂದ ಪ್ರಾಣಸ್ಥಲಕ್ಕೆ ಪ್ರಾಣದಿಂದ ನೇತ್ರಸ್ಥಲಕ್ಕೆ ನೇತ್ರದಿಂದ ಕರಸ್ಥಲಕ್ಕೆ ಇಳಿದು ಬಂದ ಚಿದಖಂಡ

---

೧. ಲಿಂ. ಲೀ. ವಿ. ಚಾ. ಪು. ೮೧, .ವ. ೫.

೨. ನೋಡಿರಿ:

ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ
ವಿನ್ಯಸ್ಯ ತಲ್ಲೀನಮನಃಪ್ರಚಾರಃ
ಲಿಂ. ಲೀ. ವಿ. ಚಾ. ಪು. ೧೧೧, ಶ್ಲೋ. ೧೯.

ಜ್ಯೋತಿಯೇ ಈ ಇಷ್ಟಲಿಂಗ. ಇಲ್ಲಿಯೆ ಭಾವಲಿಂಗ ಪ್ರಾಣಲಿಂಗ ಮತ್ತು ಇಷ್ಟಲಿಂಗ ಸಂಗಮವಾಗಿ, ಒಂದಾಗಿ ನಿಂತಿದೆ. ಅನಿಮಿಷಯ್ಯನ ಸರ್ವಾಂಗಚೈತನ್ಯ ಇಲ್ಲಿಯೆ ಸಂಮಿಲನವಾಗಿ, ಅಂಗ ಅಂದರೆ ಅನಿಮಿಷಯ್ಯ ಮತ್ತು ಲಿಂಗವೆಂಬ ಎರಡಳಿದು ಏಕಾರ್ಥವಾಗಿ, ಏಕಾರ್ಥದ ಕುರುಹೂ ಕುರುಹುಗೆಟ್ಟಿದೆ. ಅನಿಮಿಷಯ್ಯನ ತನು ರಸಸಮಾಪ್ತಿಯ ಕೊನೆಯ ಅಧ್ಯಾಯಕ್ಕೆ ಬಂದಿದೆ.

ಸರ್ವಶೂನ್ಯ ನಿರಾಲಂಬವಾದ ಅನಿಮಿಷಯ್ಯನ ಈ ಇರವೇ ನಿಜಸಮಾಧಿ. ಇದೇ ನಿರವಯಲ ಸಮಾಧಿ, ಇದೇ ಲಿಂಗಾಂಗ ಸಾಮರಸ್ಯ. ಇಂಥ ಇರವು ಒಂದು ರೋಗವಲ್ಲ, 'ಅನಾಮಯ'. ದಿವ್ಯಯೋಗ, ಸಮಾಧಿ ಒಂದು ಪ್ರಕಾರದ ಮಾನಸರೋಗ, 'ಆಧಿ' ಯೆಂದು ಅದನ್ನು ಕಸಗೂಡಿಸಿಬಿಡುವ ಮನಃಶಾಸ್ತ್ರಜ್ಞರೂ ಇದ್ದಾರೆ. ಹೀಗಿದ್ದರೆ ಭಕ್ತಿ ಪೂಜೆ ದೇವರು ಜ್ಞಾನ ನೀತಿ ದರ್ಶನಗಳೆಲ್ಲ ಮಾನವಕುಲಕ್ಕೆ 'ಬುನಾದಿ'ಯಿಂದ ಅಂಟಿಕೊಂಡು ಬಂದಿರುವ ಮಹಾರೋಗವೆಂದೇ ಹೇಳಬೇಕಾಗುತ್ತದೆ. ಮತ್ತೆ ಈ ನಿಜ ಸಮಾಧಿಯು ಮೀರಿದ ಇರವು ಮೃಗಮರೀಚಿಕೆ ಅಭ್ರಚ್ಛಾಯೆ ರಜ್ಜುಸರ್ಪ ಅಲ್ಲ, 'ಅನಾಭಾಸ'. ಇಷ್ಟೇ ಅಲ್ಲ. 'ನಿಜ ಸಹಜ ಸಮಾಧಿ ಗೊಹೇಶ್ವರ'. ನಿರವಯಲ ಸಮಾಧಿಯ ನಿಜಾವಸ್ಥೆಯೇ ಹೆಸರಿಲ್ಲದ ಗೊಹೇಶ್ವರನ ನಿಜ ಅವಸ್ಥೆ, ಸಹಜ ಅವಸ್ಥೆ. ದೇವರು ಎಲ್ಲಿ ಇದ್ದಾನೆ, ಹೇಗಿದ್ದಾನೆ ಎಂಬ ಕುಟಿಲ ಸಮಸ್ಯೆ ಅನಿಮಿಷಯ್ಯನನ್ನು ಒಳಹೊರಗೆ ಭೇದಿಸಿ ನೋಡಿದರೆ, ಬಹುಮಟ್ಟಿಗೆ ಸಡಿಲಾಗಿ ಸರಳವಾಗಿ 'ಇನ್ನೇನು ಬಿಚ್ಚಿ ಬಿಡಿ' ಎಂದು ಕರೆ ವಂತಾಗುತ್ತದೆ. ಆದರೆ ಭಾವಕ್ಕೆ ಅ-ಗಮ್ಯ, ಇಂದ್ರಿಯಗಳ ಸಂಚಾರಕ್ಕೆ ಅ-ಗೋಚರನಾದ ಅನಿಮಿಷಯ್ಯ ನಮನಿಮಗೆ ಕಾಣಬೇಕಲ್ಲ? ಜ್ಞಾನನೇತ್ರ ಮುಸುಕುದೆಗೆಬು, ಬ್ರಹ್ಮರಂಧ್ರದ ಕೈಲಾಸದ್ವಾರ ತೆರೆದು ಒಳಹೊಕ್ಕಿರುವ ಪ್ರಭು ಕಣ್ಣಿಲ್ಲದೆ ಕಣ್ಣಾರೆ ಕಾಣಬಲ್ಲ, ತನ್ನ ಅನಿಮಿಷತಂದೆಯ ನಿರಾಳ ಸುರಾಳವನ್ನು. ಇದೋ ಪ್ರಭುವಿನ ಮಾತು ಕೇಳಿ: '......ಎನ್ನ ಅಱುವಿನ ಹರಿವ ಕಂಡೆನಯ್ಯಾ ! ಎನ್ನ ಒಳಹೊಱಗೆ ಸರ್ವಾಂಗ ಪರಮ ಪ್ರಕಾಶದೊಳು ಬೆಳಗುವ ಜ್ಯೋತಿಯ ಕಂಡೆ ನೋಡಾ ! ಕುಱುಹಳಿದ ಕರಸ್ಥಲದ ನಿಬ್ಬೆಱಗಿನ ನೋಟದ ಎನ್ನ ಪರಮಗುರುವ ಕಂಡು ಬದುಕಿದೆ ಕಾಣಾ ಗೊಹೇಶ್ವರಾ.'[೧] ಪ್ರಭುದೇವನ ಸರ್ವಾಂಗದ ಪರಮಪ್ರಕಾಶ ಚಿಮ್ಮಿ ಹೊಮ್ಮುತ್ತಿರುವುದು ಅನಿಮಿಷಪರಂಜ್ಯೋತಿಯಿಂದ. ಜ್ಯೋತಿ ಗುರು ಪ್ರಕಾಶ ಶಿಷ್ಯನಾದರೆ. ಪುಷ್ಪ ಗುರು ಪರಿಮಳ ಶಿಷ್ಯನಾದರೆ. ನಾದ ಗುರು ಮಧುರ ಶಿಷ್ಯನಾದರೆ. ರತ್ನ ಗುರು ಕಾಂತಿ ಶಿಷ್ಯನಾದರೆ. ಗುರು ಶಿಷ್ಯರ ಸಮರತಿ. ಸಮರಸಕ್ಕೆ ಇನ್ನೇನು ಕಾಲ ಬೇಕು?

ಕಾಣಬಾರದ ಸದ್ಗುರು ಕಣ್ಣಿಗೆ ಗೋಚರವಾಗಿದ್ದಾನೆ. ಅನಂತ ಪುಣ್ಯದ ಬಲ. ಶಿಷ್ಯನ ಹೃದಯದಲ್ಲಿ ಮೊದಲೇ ಸೂಚನೆದೋರಿ ಅಜ್ಜೊತ್ತಿದ ಪರಮಭಾಗ್ಯ ಮುಂದೆ ಮೂರ್ತಿಮಯವಾಗಿ ಸ್ವಸ್ಥ ಪದ್ಮಾಸನದಲ್ಲಿ ಕುಳಿತಿದೆ. ಮನದ ನಿರ್ಣಯ ಮಿಡಿಯುತ್ತಿದೆ: 'ಈತನೆ ಗುರು ನಾನೆ ಶಿಷ್ಯ'ನೆಂದು. 'ಕಂಡುದನೆ ಕಂಡು ಗುರುಪಾದವ ಹಿಡಿವಲ್ಲಿ.

೧. ಶೂ. ಸಂ. ಪು. ೧೨. ವ. ೩೧.

ಕಾಣದುದ ಕಾಣಬಹುದು,'[೧] 'ಅತೀತವಾದ ಪರವಸ್ತು'ವನರಿಯಬಹುದು. ಆದರೆ 'ಗುರುವಿನ ಪರಿ ವಿಪರೀತ!' 'ಈ ಶ್ರೀಗುರುವಿನ ಕೈಯಲ್ಲಿ ಉಪದೇಶವ ಪಡೆದಹೆನೆಂದರೆ ಈ ಮಹಾತ್ಮನು ತಾನಿದಿರೆಂಬುದನಱಿಯನು. ನಿಶ್ಶಬ್ದ ವೇಧಿಸಿ ಮುಗ್ಧನಾಗಿ ರ್ದಹನಾಗಿ ಇದಿರಿಟ್ಟು ಉಪದೇಶವ ಮಾಡುವನಲ್ಲ......' ಮುಂದೆ ಶಿಷ್ಯನ ಗತಿ? ನಡೆನುಡಿಗೆಟ್ಟ ಗುರುವಿನ ಕೈಯಲ್ಲಿ ಗುರುಕಾರುಣ್ಯ ಪಡೆವುದೆಂತು? ಅನಿಮಿಷಯ್ಯನ ಶಬ್ದ ಮುಗ್ಧ, ಕ್ರಿಯೆ ಮುಗ್ಧ, ಭಾವ ನಿರ್ಭಾವ, ಕರಣ ನಿಃಕರಣ. ಆದರೂ 'ಮೂಗರ ಮೂಗರ ಪ್ರಸಂಗ!' ಮೂಕ ಮೂಕರಲ್ಲಿ ಸಂಭಾಷಣೆ, ಸಂವಾದ ನಡೆವ ಸಂಭವವಿದೆಯೇ? ಹೆಳವ ಹೆಳವನನ್ನು ಹೊತ್ತುಕೊಂಡು ಎಷ್ಟು ಹಾದಿ ನಡೆಯಬಹುದು? ನಿಮ್ಮ ಈ ಪ್ರಶ್ನೆಗಳಿಗೆ ಉತ್ತರಕೊಡುವ ಕಾರಣವೇ ಇಲ್ಲ. ಇಂಥವೆಲ್ಲ 'ಅಸಂಭವ'ವೆಂದು ನಾವು ನೀವು ಒಮ್ಮೆಲೆ ಒಪ್ಪಿಬಿಡುತ್ತೇವೆ. ಆದರೆ ಅನಿಮಿಷಯ್ಯನ ಭಾವ ಪ್ರಾಣ ಕರಣ ಇಂದ್ರಿಯ ಮಾತು ಕೃತಿಯಲ್ಲೆಲ್ಲ ನಿಶ್ಶಬ್ದ ನಾಟಿ ಹೊರಗೆಲ್ಲ ಮುಗ್ಧವಾಗಿದ್ದರೂ ಈ ನಿಶ್ಶಬ್ದಮೂರ್ತಿಯ ಸನ್ನಿಧಿಯಲ್ಲಿರುವ ಪ್ರಭುವಿನ ಅಂತರಂಗದಲ್ಲಿ ಗುರುವಿನ ಪರಿಮಳ, ಅರಿವಿನ 'ಸ್ವಯಂವಾಸನೆ' ತರಂಗಿಸುತ್ತಿದೆ. ಇದಕ್ಕೆ ಕಾರಣವೇನು?

ಇದೋ ಇಲ್ಲಿ ನೋಡಿ, ಕಾಲದೇಶದ ಆದ್ಯಂತವನರಿಯದ ಅಥವಾ ಆದ್ಯಂತವನತಿಗಳೆದ ಪ್ರಭುದೇವರ ಚಿದ್‌ಗಂಭೀರ ಹೃದಯದಿಂದ ಮೇಲೇಳುತ್ತಿರುವ ನಿಜಗುರು ಶಿಷ್ಯ ಸಂಬಂಧದ ಪರಿಮಳತರಂಗಗಳನ್ನು:

ಆದಿಯಿಂದತ್ತತ್ತಲೆನಗೆ ನೀನೆ ಗುರುವಯ್ಯಾ.
ಅನಾದಿಯಿಂದತ್ತತ್ತಲೆನಗೆ ನೀನೆ ಗುರುವಯ್ಯಾ.
ಎರಡು ನಾಮ ಹುಟ್ಟದ ಮುನ್ನ ನಿಮಗೆ ನಾನು ಶಿಷ್ಯನಯ್ಯಾ.
ಎನ್ನ ಭಾವಕಾಯದೊಳಗೆ ಭ್ರಮೆಯ ಕಳೆದು,
ಎನ್ನ ಜ್ಞಾನಕಾಯದೊಳಗೆ ಮಱಹ ಕಳೆದು,
ಎನ್ನೊಳಗೆ ತಿಳಿವಿನ ಬಗೆಯ ತೋಱುತ್ತ,
ಹೊಱಗೆ ನುಡಿಯದಂತಿರ್ದಡೆ ಬಿಡೆನು ನೋಡಾ ನಿಮ್ಮ ಶ್ರೀಚರಣವ...[೨]

ಗಾಳಿಯ ಸುಳುಹಿಲ್ಲ, ಆದರೆ ಅಂತರಂಗ ತರಂಗಗೊಳ್ಳುತ್ತಿದೆ. ಇದು ವಿಚಿತ್ರ. 'ಅಸಿಯ ಮದ ಬೆಡಗು' ಅಲ್ಲವೇ? ಸಾಮಾನ್ಯವಾಗಿ ನಿಸರ್ಗಕ್ಕೆ ನಿಯಮ ರೀತಿ ನೀತಿ ಕ್ರಮ

---

೧. ಹೋಲಿಸಿರಿ:

ದೃಷ್ಟ ಗುರುವಿನಂಘ್ರಿವಿಡಿದು
ದೃಷ್ಟು [ಷ್ಟಿ?] ಭಾವದಗೋಚರದ
ಷಟ್‌ತ್ರಿಂಶತ್ ಪ್ರಭಾಪಟಲ ತತ್ವ ಘನತೆಯ ॥
ಮುಟ್ಟಿಸಿ ಪರವಸ್ತುವಿಷಯ
ಕಾಷ್ಠನಾಗಿ ತನ್ನ ಮನದ-
ಭೀಷ್ಟಲಿಂಗ ಸೋಂಕಿ ಲಿಂಗವಹನು ಗುರುವಹ ॥

ಪ. ಪ. ಸ್ಥ. ಪು. ೫೬೪, ಪ. ೪.

೨. ಶೂ. ಸಂ. ಪು. ೧೩ ಪ. ೩೯

ಉಂಟು. ಗುರು ಶಿಷ್ಯ ಸಂಬಂಧದಲ್ಲಿಯೂ ಕೆಲ ನಿಯಮ ರೂಢಿ ಸಂಪ್ರದಾಯಗಳುಂಟು. ಈ ನಿಯಮ, ಈ ಸಂಪ್ರದಾಯ ತಪ್ಪಿದರೆ ಎಲ್ಲ ವ್ಯವಹಾರ ಕಟ್ಟು ಎಂದು ನಮ್ಮ ವ್ಯವಹಾರಸಿದ್ಧಾಂತ. ಇಂಥ ಸಿದ್ಧಾಂತಕ್ಕೆ 'ಅಪವಾದ'ಗಳಿವೆಯೆಂಬುದೂ ನಮ್ಮ ಅನುಭವದ ಸಂಗತಿ. ನಿಯಮೋಲ್ಲಂಘನೆ ಮಾಡಿ ಈ 'ಅಪವಾದ'ಗಳು ಏಕೆ ತಲೆದೋರುತ್ತವೆ, ಹೇಗೆ ತಲೆದೋರುತ್ತವೆ ಎಂಬುದನ್ನು ನಾವು ಇಂದಿನಂತೆ ದುರ್ಲಕ್ಷಿಸಿಬಿಡದೆ ಅವನ್ನೂ ಪರೀಕ್ಷೆಗೆ ಒಳಗುಮಾಡುವ ಕಾಲ ಬಂದಿದೆ. 'ಮೂಗರ ಮೂಗರ ಪ್ರಸಂಗ' ಎಂದು ಪ್ರಭು ಹೇಳಿದರೆ, ಶ್ರೀಗುರುವು ಶಿಷ್ಯನಲ್ಲಿ ಹರಿವ ಕ್ರಮುವನ್ನು ಮುಕ್ತಾಯಕ್ಕ 'ಮೂಗನ ಕಯ್ಯಲ್ಲಿ ಕಾವ್ಯವ ಕೇಳಿದಂತಿರಬೇಕು'[೧] ಎಂದು ಹೇಳುತ್ತಾಳೆ. ಗುರು ನುಡಿದು ಉಪದೇಶ ಮಾಡಬಹುದು, ನುಡಿಯದೆ ಉಪದೇಶ ಮಾಡಬಹುದು. ಗುರುವಿನ ಹಸ್ತ ಶಿಷ್ಯನ ಮಸ್ತಕವನ್ನು ಮುಟ್ಟಿ ಲಿಂಗದೀಪವನ್ನು ಮುಡಿಸಬಹುದು, ಮುಟ್ಟದೆಯೂ ಮುಡಿಸಬಹುದು. ಒಂದು ಕ್ರಮ, ನಿಯಮ, ಮತ್ತೊಂದು ಅಕ್ರಮ, ಅನಿಯಮ. 'Heard melodies are sweet'–ಇದು ನಿಯಮ, 'Unheard melodies are sweeter'–ಇದು ಅನಿಯಮ. ಮಸಿಯಲ್ಲಿ ಮೂಡುವ ಅಕ್ಷರ ಕ್ರಮ. ಆದರೆ ಮಸಿಯಿಲ್ಲದೆ ಮೂಡುವ ಅಕ್ಷರ ಅಂದರೆ ನಮ್ಮ ವಿಚಾರ ಸಂಪ್ರದಾಯಕ್ಕೆ ಎಡಚಲ್ಲವೇ? ನಿಯಮ, ಸಂಪ್ರದಾಯದ ಇಂಥ ಸಾವಿರ ಎಡಚುಗಳೆಲ್ಲ ನಿಜಸ್ಥಿತಿಯ ಅನುಭವದಲ್ಲಿ ಹೇಗೆ ಕೊಚ್ಚಿಕೊಂಡು ಹೋಗಿವೆ ನೋಡಿ:

ಹೂವಿಲ್ಲದ ಕಂಪು ಹೊನ್ನಿಲ್ಲದ ಬಣ್ಣ
ಕಳೆಯಿಲ್ಲದ ಚಂದ್ರನ ಪರಿಯಂತೆ
ಪರಶಿವಯೋಗ ನೋಡಾ ಪಲ್ಲವಿ
ಕಾಲಿಲ್ಲದ ನಡೆ ಕಣ್ಣಿಲ್ಲದ ನೋಟ
ಹಾಲಿಲ್ಲದ ತುಪ್ಪದ ಪರಿಯ ನೋಡಾ
ನಾಲಿಗಿಲ್ಲದ ರುಚಿ ಕಿವಿಯಲಿ ಕೇಳದೆ
ಹೇಳುವ ಪರಶಿವಯೋಗಾ ೧
ಹರಳಿಲ್ಲದ ಗೆಜ್ಜೆ ಹುರುಳಿಲ್ಲದ ಹಯನು
ಕಬ್ಬುನವುಂಡ ನೀರಿನ ಪರಿಯ ನೋಡಾ
ಹುರಿದು ಬಿತ್ತಿದ ಬೀಜದ ನಾಟಿಯ
ಪರಿಯಂತೆ ಪರಶಿವಯೋಗಾ ೨
ತನುಗುಣಗಳನಳಿಯದ ಸಮಾಧಿ
ಮನವಳಿದು ನೆರೆವ ಸುಖಿ ನಿಮ್ಮ
ನೆರೆಯಲರಿದು ನಿಜಗುಣಯೋಗಾ
ಅನುಪಮ ಸುಖಿ ಸಿದ್ಧರಾಮೇಶ ತಂದೆ ೩[೨]

೧. ಶೂ. ಸಂ. ಪು. ೨೪, ವ. ೨. ೨. ಏ. ಶ. ಸ್ಥ. ಪು. ೧೬೩-೪, ಪದ.

'ಕಾಣಬಾರದ ಗುರು'—ಪ್ರಭುವಿನ ಕಣ್ಣಿಗೆ ಕಾಣಬಂದಂತೆ,—'ಸರ್ವಶೂನ್ಯ'ವಾದ ನಿರವಯಲ ಮೂರುತಿ. ಈ ಮೂರ್ತಿ, ತಾನೆಂಬ ಪ್ರಜ್ಞೆಯ ಸೀಮೆಯನ್ನು ದಾಟಿ 'ನಿಜ ಸಮಾಧಿ'ಯಲ್ಲಿ, ನಿಜದ ನಿಲವಿನಲ್ಲಿ ನಿಂತುಬಿಟ್ಟಿದೆ. ಸೀಮೆಗೆಟ್ಟ ಇಂಥ ಗುರು ಶಿಷ್ಯನಿಗೆ ವೇಧಾದೀಕ್ಷೆ ಮಂತ್ರ-ಕ್ರಿಯಾದೀಕ್ಷೆಯನ್ನು, ಗುರುಕಾರುಣ್ಯ ಗುರೂಪದೇಶವನ್ನು ಹೇಗೆ ತಾನೇ ಮಾಡಬಲ್ಲ? ಬಿಚ್ಚಿ ಹೇಳಬೇಕೆಂದರೆ ಇಂಥ ಗುರು ಗುರುವೂ ಅಲ್ಲ, ಇಂಥ ಗುರುವಿನಿಂದ ಸಂಪ್ರದಾಯ ಪದ್ಧತಿಯ ದೀಕ್ಷೆ ಅನುಗ್ರಹ ಕಾರುಣ್ಯ ಉಪದೇಶ ನಡೆವ ಸಾಧ್ಯತೆಯೇ ಇಲ್ಲ. ಇಂಥ ಉಪದೇಶ ನಡೆಯದಿದ್ದರೆ ಮತ್ತೆ ಬೇರೆ, ಅಸಾಂಪ್ರದಾಯಿಕವಾದ, ಸಾಮಾನ್ಯದ ಗಡಿಯಾಚೆ ಇರುವ 'ಅಪವಾದ' ದೀಕ್ಷೆ, 'ಅನಿಯಮ'ದ ಉಪದೇಶ ನಡೆಯಲಾರದು, ನಡೆಯಬಾರದು ಎಂದು ಮಾನವಸ್ಥಲದ ಬುದ್ಧಿಭಾವಕ್ಕೆ ಹಟವೇಕೆ ಬೇಕು?

ಅನಿಮಿಷಯ್ಯನಿಂದ ಪ್ರಭುವಿಗೆ ಹರಿವ ಜ್ಞಾನೋಪದೇಶ ನಿಶ್ಶಬ್ದ ಉಪದೇಶ. 'ಕಿವಿಯಲಿ ಕೇಳದೆ ಹೇಳುವ' ಉಪದೇಶ. ಅದು 'ಹರಳಿಲ್ಲದ ಗೆಜ್ಜೆ'ಯ ಉಲುಹು. 'ಹೊನ್ನಿಲ್ಲದ ಬಣ್ಣ'ದ ತೇಜ, 'ಹೂವಿಲ್ಲದ ಕಂಪಿ'ನ ಮಧುಮಾಧುರ್ಯ. ಗುರು ನಾನು, ಗುರೂಪದೇಶ ಮಾಡುವಾತ ನಾನು ಎಂಬ ಅನಿಮಿಷಯ್ಯ ಉಪದೇಶವಲ್ಲಿ ಇಲ್ಲವೆ ಇಲ್ಲ. ಇದೇ ಹೂವಿಲ್ಲದ ಕಂಪು, ಹೊನ್ನಿಲ್ಲದ ಬಣ್ಣ. ಇಂಥ ಕಂಪು ಮೂಗು ಮುಟ್ಟಿ ಕೊಳ್ಳಬಲ್ಲ ಕಂಪಲ್ಲ. ಇಂಥ ಬಣ್ಣ ಕಣ್ಣಿಗೆ ಗೋಚರವಾಗಬಲ್ಲ ಬಣ್ಣವಲ್ಲ. ಶಬ್ದವಿಲ್ಲದೆ ನುಡಿದರೆ ಕಿವಿಯಿಲ್ಲದೆ ಕೇಳಬೇಕು. ಹೂವಿಲ್ಲದೆ ಕಂಪನ್ನು ಮೂಗಿಲ್ಲದೆ ಮೂಸಿ ನೋಡಬೇಕು. ಇದೇ 'ಮೂಗಮೂಗರ ಪ್ರಸಂಗ.' ಅನಿಮಿಷ ಪ್ರಭುದೇವರ ಇಂಥ ದೀಕ್ಷಾ 'ಪ್ರಸಂಗ'ವನ್ನೂ ನಾವೂ ಕೇಳೋಣವೇ?

ಕಾಣಬಾರದ ಗುರುವು ಕಣ್ಗೆ ಗೋಚರವಾದರೆ ಹೇಳಲಿಲ್ಲದ ಬಿನ್ನಪ.
ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ, ಹೂಸಲಿಲ್ಲದ ವಿಭೂತಿಯ ಪಟ್ಟ.
ಕೇಳಲಿಲ್ಲದ ಕರ್ಣಮಂತ್ರ. ತುಂಬಿ ತುಳುಕದ ಕಳಶಾಭಿಷೇಕ,
ಆಗಮವಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ,
ಸಂಗವಿಲ್ಲದ ಸಂಬಂಧ ಸಯವಪ್ಪ ಅನುಗ್ರಹವ
ಅನುಗೊಂಬಂತೆ ಮಾಡಾ ಗೊಹೇಶ್ವರಾ.[೧]

ಶಾಸ್ತ್ರ ಆಗಮ ವಿಧಿಕ್ರಮಗಳ ಸಂತೆಯಿಲ್ಲದೆ ಅನಿಮಿಷಯ್ಯನ ಬಯಲ ಸಮಾಧಿಯಿಂದ ತನಗೆ ತಾನೆ ಹರಿವ ಅನುಗ್ರಹ ಇದು. ಬೆಳುದಿಂಗಳನ್ನು ನೀಡೆಂದು ಚಂದ್ರನಿಗೆ ಲೋಕದ ಬಿನ್ನಹ ಬೇಕಿಲ್ಲ. ಅದು ತನ್ನ ತಾನೆ ಬೀರುತ್ತದೆ. ಆದರೆ ಇಂಥ ಅನುಗ್ರಹ ತಾನಾಗಿ ಹರಿದರೆ, ಅದನ್ನು ಸ್ವೀಕರಿಸುವ ಸಾಮರ್ಥ್ಯ, ಹದ-ಬೆದೆ ಶಿಷ್ಯನಲ್ಲಿರಬೇಕಲ್ಲವೇ? ಕಾದ ಕಬ್ಬಿನ ನೀರು ಕುಡಿದಂತೆ ಹಸಿ ಕಬ್ಬಿನ ಹೇಗೆ ಕುಡಿದೀತು?

ಈ ದೀಕ್ಷಾಪ್ರಸಂಗವನ್ನು ಕೇಳುತ್ತ, ನೋಡುತ್ತ ಹೋದರೆ 'ಅನಿಯಮದ ಬೆಡಗಿ'ನ ಅರ್ಥ ಇನ್ನೂ ಹೆಚ್ಚು ಮನವರಿಕೆಯಾಗುತ್ತದೆ. ಜ್ಞಾನದೀಕ್ಷೆ 'ಮೂಗ

೧. ಶೂ. ಸಂ. ಪು. ೧೨. ವ. ೩೭.

ಮೂಗರ ಪ್ರಸಂಗ'ದಂತೆ ನಡೆಯಬಹುದು. ಆದರೆ ಕ್ರಿಯಾದೀಕ್ಷೆ? '......ಆ ಶಿಷ್ಯನ ಪಶ್ಚಿಮದೇಶದಲ್ಲಿ ಬೆಳಗುತ್ತಿರ್ದ ನಿತ್ಯನಿರಂಜನ ಪರವುಕಳೆಯುನ್ನು ಧ್ಯಾನಿಸಿ ಭಾವ ಸ್ಥಲಕ್ಕೆ ತಂದು, ಆ ಭಾವಸ್ಥಲದಿಂದ ಮನಸ್ಥಲಕ್ಕೆ ತಂದು, ಆ ಮನಸ್ಥಲದಿಂದ ದೃಷ್ಟಿಸ್ಥಲಕ್ಕೆ ತಂದು, ಆ ದೃಷ್ಟಿಸ್ಥಲದಿಂದ ಕರಸ್ಥಲಕ್ಕೆ ತಂದು, ಆ ಕರಸ್ಥಲದಿಂದ ಸಾಕಾರಮೂರ್ತಿ ಯಲ್ಲಿ ಮೂರ್ತಿಗೊಳಿಸಿ...'[೧] ಕೊಡಬಲ್ಲ ಕ್ರಿಯಾಮೂರ್ತಿ ಅನಿಮಿಷಯ್ಯನಲ್ಲಿ ಇಲ್ಲ. ಗುರುದೀಕ್ಷೆ ಸರ್ವಾಂಗಪೂರ್ಣವಾಗಬೇಕಾದರೆ ಪಶ್ಚಿಮದ ಪರವುಕಳೆ ಸಾಕಾರವಾಗಿ, ಕರಸ್ಥಲದಲ್ಲಿ ಪ್ರತ್ಯಕ್ಷವಾಗಿ, ಇಷ್ಟಲಿಂಗ ಅಥವಾ ಕ್ರಿಯಾಲಿಂಗವಾಗಿ ಬೆಳಗಲೆ ಬೇಕು. ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಪ್ರಭುದೇವರ ವಿಚಾರವೇನು? ಇದೋ ಅವರ ವಿಚಾರದ ಸರಣಿ ಇಂತಿದೆ:

1. ಒಂದೆಂಬೆನೆ? ಎರಡಾಗಿದೆ. ಎರಡೆಂಬೆನೆ? ಒಂದಾಗಿದೆ.[೨]
2. ಗುರುಶಿಷ್ಯರೆಂಬ ಭಾವಕ್ಕೆ ಭೇದ ಉಂಟೇ?[೩]
3. ಅಗಲಲಿಲ್ಲದ ಕೂಟಕ್ಕೆ ಬಿಚ್ಚಿ ಬೇರಾಗದ ಉಪದೇಶ.[೪]
4. ಇದು ತನ್ನಿಂದ ತಾನಪ್ಪುದಲ್ಲದೆ ಭಿನ್ನದಲುಂಟೇ?[೫]
5. ಜ್ಯೋತಿಯೊಳಗಿರ್ಪ ಕರ್ಪುರಕ್ಕೆ, ಅಪ್ಪುವಿನೊಳಗಿಪ್ಪ ಉಪ್ಪಿಂಗೆ,
   ಶ್ರೀಗುರುವಿನೊಳಗಿಪ್ಪ ಶಿಷ್ಯಂಗೆ
   ಬೇಱೆ ಬೇಱೆ ಕ್ರಿಯಾವರ್ತನೆಯುಂಟೆ?[೬]

ಆದ್ದರಿಂದ ಅವರ ನಿರ್ಣಯ: '......ಮಾಡಿದಡೆ ಅಂತು ಮಹಾಪ್ರಸಾದವೆಂದು ಕೈ-ಕೊಂಬೆ, ಮಾಡದಿರ್ದಡೆ ನೀವೆ ನಾನಾಗಿ ಮಹಾಪ್ರಸಾದವೆಂದು ಕೈಕೊಂಬೆನು.'[೭]

ಈ ನಿರ್ಣಯದಲ್ಲಿ ನಿಂತ ಪ್ರಭುದೇವರು '......ತಮ್ಮ ಅಂತರಂಗದ ಬೋಧಾ ಮೂರ್ತಿಯನು ಆ ಶ್ರೀಗುರುವೆಂದಱಿದು ನಿಶ್ಚೈಸಿ, ಅನುಮಿಷದೇವರ ಶ್ರೀಪಾದಕ್ಕೆ ಶರಣೆಂದು. ಆ ಕರಸ್ಥಲದ ಲಿಂಗವ ತಾನೆ ಅವಗ್ರಹಿಸಿಕೊಳಲು,......'[೮] ಇದು ಮತ್ತಷ್ಟು ಅನಿಯಮದ ಬೆಡಗು ! ನಿಯಮಾನುಸಾರವಾಗಿ ನಡೆವ ದೀಕ್ಷೆಯಲ್ಲಿ ಸದ್ಗುರು ಸಚ್ಛಿಷ್ಯನ ಕರಸ್ಥಲಕ್ಕೆ 'ಕಂಗಳಾಲಯದ ಚಿಜ್ಜ್ಯೋತಿ'ಯನ್ನು ಸಾಕಾರವಾದ 'ವೃತ್ತ, ಕಟಿ, ವರ್ತುಲ, ಗೋಮುಖ, ನಾಳ, ಗೋಳಕ'[೯]ದಿಂದ ಕೂಡಿದ ಇಷ್ಟಲಿಂಗದಲ್ಲಿ ಆಯತಗೊಳಿಸಿ ಕರುಣಿಸ ಬೇಕು. ಇಂಥ ಇಷ್ಟಲಿಂಗ ಗುರುವಿನ ಕರಸ್ಥಲದ ಸ್ವೀಯ ಲಿಂಗವಲ್ಲ. ಅಂದರೆ ತನ್ನದೇ ಆದ ಕ್ರಿಯಾಲಿಂಗ ಅಥವಾ ಇಷ್ಟಲಿಂಗವನ್ನು ಶಿಷ್ಯನಿಗೆ ಕೊಡುವದಿಲ್ಲ ಗುರು. ಆದರೆ

---

೧. ವ. ಶಾ. ಸಾ. ಭಾ. ೩ [ಪೂರ್ವಾರ್ಧ] ಪು. ೧೨೪.
೨. ಶೂ. ಸಂ. ಪು. ೧೩, ವ. ೩೬.
೩. ಶೂ. ಸಂ. ಪು. ೧೩, ವ. ೩೬.
೪. ಅದೇ ಪು. ೧೩. ವ. ೩೬.
೫. ಅದೇ ಪು. ೧೩, ವ. ೩೫.
೬. ಅದೇ ಪು. ೧೪, ವ. ೪೦.
೭. ಅದೇ ಪು. ೧೩, ವ. ೩೯
೮. ಅದೇ ಪು. ೧೪, ಪ್ರ. ೪೧.
೯. ವ. ಶಾ. ಸಾ. ಭಾ. ೩ [ಪೂರ್ವಾರ್ಧ] ಪು. ೧೨೪.

ಅನಿಮಿಷ ಪ್ರಭುದೇವರ ಗುರುಶಿಷ್ಯಸಂಬಂಧದಲ್ಲಿ ಗುರುವಿನ ಕರಸ್ಥಲದ ಲಿಂಗವನ್ನು ತನ್ನ ಕರಸ್ಥಲಕ್ಕೆ ತಾನೆ ಅವಗ್ರಹಿಸಿಕೊಳ್ಳುತ್ತಾನೆ ಶಿಷ್ಯ ಪ್ರಭುದೇವರು. ಇದು ದೀಕ್ಷಾ ನಿಯಮಕ್ಕೆ ತೀರ ವಿರೋಧ, ಅತ್ಯಂತ ಅನಿಯಮ. ಆದರೇನು? ಗುರುಶಿಷ್ಯಭಾವದಲ್ಲಿ ಭಿನ್ನವನ್ನು, ಸಂದುಬಿರುಕನ್ನು ಕಾಣುವ ಕಣ್ಣು ಮನ ಭಾವದ 'ಬಿರುಕುದೋಷ'ವಲ್ಲದೆ ದೋಷರಹಿತ ದೃಷ್ಟಿಗೆ ದಿವ್ಯಾನುಗ್ರಹ ನೀಡುವ ಬೋಧಾಗುರು ಪಡೆವ ಬೋಧ್ಯ ಶಿಷ್ಯ–ಇಬ್ಬರೂ ಒಂದು ಈ ಕೊಡುಕೊಳ್ಳುವ ಗಂಭೀರಸಂಬಂಧದಲ್ಲಿ. ಸ್ವಲ್ಪ ಆಳಕ್ಕೆ ಇಣುಕಿದರೆ ಈ ಮಾತು ಸಾಮಾನ್ಯ ಗುರು ಶಿಷ್ಯ ಸಂಬಂಧದಲ್ಲಿಯೂ ತೋರಬಹುದು. ಗುರು ಮತ್ತು ಶಿಷ್ಯ ಪರಮಾರ್ಥತಃ ಭಿನ್ನಭಾವಗಳೆ ಆಗಿದ್ದರೆ, ಗುರು ಬೋಧರೂಪನಾಗಿ ಶಿಷ್ಯನಲ್ಲಿ ಹರಿದು ಗುರು ಶಿಷ್ಯನಾಗುವದು ಹೇಗೆ? ಮತ್ತು ಗುರುವನ್ನು ತನ್ನೊಳಗೆ ಬರಮಾಡಿಕೊಂಡು ಶಿಷ್ಯ ಗುರುವಾಗುವದು ಹೇಗೆ? ಗುರು ಶಿಷ್ಯನಲ್ಲಿ ತುಂಬಿ, ಶಿಷ್ಯ ಗುರುವಿನಲ್ಲಿ ತುಂಬಿದರೆ ಗುರು-ಶಿಷ್ಯ ಸಂಬಂಧ ಸಾರ್ಥಕ, ಪೂರ್ಣಾರ್ಥಕ.[೧]

ಗುರು-ಶಿಷ್ಯ ಸಂಬಂಧ 'ಭ್ರಮರ ಕೀಟಕ ನ್ಯಾಯದಂತೆ', ಬೀಜಾಂಕುರ ನ್ಯಾಯದಂತೆ. ಗುರು ಭ್ರಮರ. ಶಿಷ್ಯ ಕೀಟಕ; ಗುರು ಬೀಜ, ಶಿಷ್ಯ ಅಂಕುರ. ಕೀಡಿ ಕುಂಡಲಿಗನನ್ನು ನೆನೆನೆನೆದು, ಕೀಡಿ ಕುಂಡಲಿಗನಾಯ್ತು. ಗುರುಬೀಜ ಶಿಷ್ಯಕ್ಷೇತ್ರದಲ್ಲಿ ಮೊಳೆತು, ಗುರು-ವೃಕ್ಷ ಪಲ್ಲವಿಸಿತು. ವೃಕ್ಷದಲ್ಲಿ ಬೀಜವಿದೆ, ಅಂತೆಯೆ ಕ್ಷೇತ್ರವೂ ವೃಕ್ಷಕ್ಕೆ ವೃಕ್ಷವಾಗಲು ತನ್ನನ್ನು ಸಮರ್ಪಣಮಾಡಿದೆ. ಕೀಡಿ ಕುಂಡಲಿಗನಾದುದು ನಿಜ. ಆದರೆ ಈ ಕುಂಡಲಿಗ ಕೀಡಿಯನ್ನಲ್ಲ. ಕೀಡಿತನವನ್ನೆಲ್ಲ ನುಂಗಿಯೆ ಕುಂಡಲಿಗನಾಗಿ ನಿಂತಿರುವುದು ಅಷ್ಟೇ ಸತ್ಯ. ಭ್ರಮರ ಕೀಟ, ಬೀಜ ವೃಕ್ಷ–ಇವರ ಸ್ವ-ಭಾವ, ಸ್ವ-ಧರ್ಮ ಒಂದೇ. ರೂಪಾಂತರದಲ್ಲಿ ಎರಡು ಅಷ್ಟೇ. 'ಗುರುಶಿಷ್ಯ ಸಂಬಂಧವನರಿಸಲೆಂದು ಹೋದರೆ, ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ......'[೨] ಇಂಥ ಗುರು ಶಿಷ್ಯ ಸಂಬಂಧದ ಗಭೀರ ಏಕೋಭಾವವನ್ನು ಅರಿತುಕೊಂಡೇ ಅನಿಮಿಷಯ್ಯನ ಕೈಯ ಲಿಂಗವನ್ನು ತಾನೆ ತನ್ನ ಕರಸ್ಥಲಕ್ಕೆ ಬರಮಾಡಿಕೊಂಡ ಪ್ರಭುದೇವರು. ಇದರ ಪರಿಣಾಮವೇನಾಯ್ತು?

'......ಆ ಗುರುಮೂರ್ತಿ ನಿರವಯಲನೆಯ್ದಲು, ಅಸ್ಥಿಚರ್ಮಂಗಳು ನೆಲಕ್ಕೆ ಉದುರಲು......'[೩]–ಗುರುಮೂರ್ತಿ ನಿರವಯಲನೆಯ್ದಿದನೆಂದರೆ 'ಗುರುಸ್ಥಲದ ನಿಲವು ಪರಸ್ಥಲವಲಡಗಿ'[೪]ತು ಎಂದರ್ಥ; ಅಥವಾ 'ಅನುಮಿಷದೇವರು ನಿಜವನೈದಿ'[೫]ದರು

---

೧. ಇಲ್ಲಿ ಚೆನ್ನಬಸವಣ್ಣನವರ ಮಾತನ್ನು ಕೇಳಿ:

ಗುರುವಿಂಬ ಪ್ರತಿಭಾವವಿಲ್ಲದ ಶಿಷ್ಯ. ಶಿಷ್ಯನೆಂಬ ಪ್ರತಿಭಾವವಿಲ್ಲದ ಗುರು.–
ಏನೆಂಬೆನೇನೆಂಬೆ! ಎರಡಿಲ್ಲದ ಘನವ ಏನೆಂಬೆನೇನೆಂಬೆ!!
ಉಭಯುವಳಿದೊಂದಾದುದ ಏನೆಂಬೆನೇನೆಂಬೆ!!!
ಕೂಡಲಚೆನ್ನಸಂಗನಲ್ಲಿ ಗುರು ಶಿಷ್ಯ ಸಂಬಂಧವಪೂರ್ವ.

ವ. ಶಾ. ಸಾ. ಭಾ. ೩ [ಪೂರ್ವಾರ್ಧ] ಪು. ೧೨೯. ವ. ೧೧೬.

೨. ಶೂ. ಸಂ. ಪು. ೧೬, ವ. ೪೯.

೩. ಶೂ. ಸಂ. ಪು. ೧೪, ಪ್ರ. ೪೧.

೪. ಅದೇ ಪು. ೧೪. ವ. ೪೧.

೫. ಅದೇ ಪು. ೧೪. ಪ್ರ. ೪೨.

ಎಂದರ್ಥ. ನಿರವಯಲೆಂದರೆ ಪರಸ್ಥಲ. ಇಲ್ಲಿಂದ ಮುಂದೆ ಮೇರೆ, ಅಧಿಕ, ಅತಿಶಯ, ಘನವೆಂಬುದೇನೂ ಇಲ್ಲ. ಇಲ್ಲ ಉಂಟೆಂಬ ಶಬ್ದಕ್ಕೆ ಇಂಬಿಲ್ಲ. ಹೆಸರು ದೆಸೆಯಿಲ್ಲದ ಈ ಪರಸ್ಥಲವೆಂದರೆ ನಿಜಸ್ಥಲ, ನಿಜ, ಸ್ವಯಂ–ಇಲ್ಲವೆ ವಚನಕಾರರು ಹೇಳುವಂತೆ–ಸ್ವಯ, ಸಯ. ಇದೇ ಮಹಾಮಂಗಲ, ಸ್ವಾನುಭಾವದ ದಿವ್ಯಪ್ರಕಾಶ ಜೀವನಕ್ಕೆ. ನಿಜವೆ ತಾನಾಗಿ ನಿಂದ ಅನಿಮಿಷಯ್ಯನ ಎಲುವಿನ ಹಂದರ, ತೊವಲಿನ ಚೀಲ ನೆಲಕ್ಕೆ ಉದುರಿದವು! ಮೈಯೆಲ್ಲ ತನಿರಸ ತುಂಬಿ ಬಿರುಕುಬಿಟ್ಟ ಹಣ್ಣು ಇನ್ನೂ ಗಿಡಕ್ಕೆ ಅಂಟಿಕೊಂಡಿರಬೇಕು? ಇದೆಲ್ಲಿಯ ಸಂಗತಿ? ಎಂಥ ಮಾತು! ತೊಟ್ಟು ಬಿಟ್ಟು ಕಳಚಿ ಬೀಳಲೇಬೇಕು. ಅನಿಮಿಷಯ್ಯ 'ನಿಷ್ಪತ್ತಿಯೆಂಬ ಹಣ್ಣು'. ತುಂಬಿದ ಹಣ್ಣಿಗೆ ಅಂಟು ಇಲ್ಲ, ಹಡೆದ ಗಿಡಕ್ಕೆ ಹಿಡಿವ ಶಕ್ತಿ ಇಲ್ಲ. ಉದುರಿದ ಅಸ್ಥಿ ಚರ್ಮದೊಡನೆ ಅನಿಮಿಷನೆಂಬ ಕುರುಹು ಅದೂ ಉದುರಿ ಹೋಯಿತು,–ಬೆಂದ ನುಲಿ, ಸುಟ್ಟ ಸರವಿ ಮುಟ್ಟಿದರೆ ಆಕಾರಗೆಟ್ಟು ಹೋಗುವಂತೆ.

ತನ್ನ ಪರಮಗುರು ಅನಿಮಿಷದೇವನ ಮಾನುಷಾಕಾರ ಕಳಚಿ ಬಿದ್ದುದಕ್ಕೆ ಪ್ರಭುವಿನ ಮನದಲ್ಲಿ ಸಂಚಲತರಂಗ. ಹೃದಯದಲ್ಲಿ ಕ್ಷೋಭೆ ಚಿಂತೆ, ಸಂತಾಪ ಅನುತಾಪ. ತನ್ನ ಅಕೃತ್ಯದಿಂದ ಗುರುವಳಿದನಲ್ಲಾ! ಎಂಬ ಕಳವಳ. ಮತ್ತೆ ಮತ್ತೆ ತನ್ನ ಕೃತಿಯ ಬಗ್ಗೆ ವಿಚಾರ, ತಪ್ಪೋ ಸರಿಯೋ ಎಂದು. ಬುದ್ಧಿಗೆ ನಿರ್ಣಯವಿಲ್ಲ, ಹೃದಯಕ್ಕೆ ನೆಮ್ಮದಿ ಇಲ್ಲ. ಗುರುವನ್ನು ಕೊಂದು ಲಿಂಗವ ಕೊಂಡೆನೇ? ಅಸ್ಥಿ ಚರ್ಮ ನೆಲಕ್ಕುರುಳಿ ಬಿದ್ದರೆ ಅದರೊಡನೆ ಗುರುವಿನ ಪ್ರಾಣಚೈತನ್ಯ ಮಣ್ಣಿನ ಪಾಲಾಯಿತೇ? ಮಾಯೆ, ಮುಸುಕು! ಮಾಯಾಸೂತ್ರದ ಕೈಗೊಂಬೆ ಮನ. ಗುರು ಸತ್ತುಹೋದನೆಂಬುದೆ ಮನದ ಕದಡಿಗೆ ಕಾರಣ. ಈ ಕಾರಣದಲ್ಲಿ ತಥ್ಯವಿದೆಯೇ? ಅಥವಾ ಅದು ಮಿಥ್ಯಾ ಕಾರಣವೆ? ತನ್ನಲ್ಲಿ ಸಂಚಲದ ಹುಯಿಲನ್ನೆಬ್ಬಿಸಿದ ಗುರುವಿನ ಮರಣ ಮರಣವಲ್ಲದಿದ್ದರೆ? ಬೀಜ ಮೊಳೆವಲ್ಲಿ ಹೊದಿಕೆ ಕಳಚಿದರೆ, ಬೀಜ ಸತ್ತು ಹೋಯಿತೇ? ಅಥವಾ ಅಂಕುರದಲ್ಲಿ ಮತ್ತೆ ವಿಸ್ತಾರವಾಗಿ ಬದುಕಿತೆ? ಮರಣದ ಮರ್ಮ ಮನಕ್ಕೆ ಮರೆಯಾಗಿರುವುದು ಅರಿವಿನ ಅಜ್ಞಾನ. 'ಕಂಗಳೊಳಗಣ ಕತ್ತಲೆ'. ನಮನಿಮಗೆ ಈ ಕತ್ತಲೆ ಕವಿದಿದ್ದರೆ 'ಅದಕ್ಕದು ಸಹಜ.' ಆದರೆ ನಿರ್ಮಾಯನಾದ ಪ್ರಭುವಿನ ಮನದ ಮುಂದೆ ಮಾಯೆಯ ನೆಳಲು! ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ! ಸ್ವಯಂಪ್ರಭೆಯು ಅಖಂಡಿತ ಮಂಡಲದ ಸ್ವಯಂಜ್ಯೋತಿ, ಸಚ್ಚಿದ್‌ಜ್ಯೋತಿಯಲ್ಲಿ ಕತ್ತಲೆಯ ತೆರೆ ಮಾಲಿಗೊಂಡರೆ?

ಇದೋ ಇಲ್ಲಿ ಇಂಥ ತೆರೆಯನ್ನು ಓಸರಿಸುತ್ತಿರುವ ಪ್ರಭುದೇವರ ರೀತಿಯನ್ನು ಪರಾಮರ್ಶಿಸಿ ನೋಡಿ:

> ಅಹಾ ಮನವೇ, ಮಱೆದೆಯಲ್ಲಾ ನಿನ್ನ ಪೂರ್ವಾಪರವ!
> ಘನ ಮನದೊಳಡಗಿ, ಆ ಮನ ಲಿಂಗದೊಳಡಗಿ.
> ಆ ಲಿಂಗವೆನ್ನ ಕರಸ್ಥಲಕ್ಕೆ ಬಂದ ಬಳಿಕ,
> ಅಳಿಯಿತ್ತು ಆಗಲಿತ್ತು ಎಂಬ ಭಾವಭ್ರಾಂತಿ ಇದೇನೋ?
> ಜನನವಿಲ್ಲದ ಘನಕ್ಕೆ ಮರಣವುಂಟೇ?

ತೆಱಹಿಲ್ಲದ ನಿಜವು ತನ್ನಲ್ಲಿ ತಾನು ವೇದ್ಯವಾಗಿಪ್ಪುದಲ್ಲದೆ
ಇದಿರಿಟ್ಟು ತೋಱದೆಂಬ ಅಜ್ಞಾನವಿದೇನೊ?
ಜನನವಿಲ್ಲದ ನೀ ನಾನೆಂಬುದು ಮಾದು ತಾನೆಯಾಗಿ ಸಾಧ್ಯವಾಯಿತ್ತು.
ಇದನೇನೆಂಬೆ ಗೊಹೇಶ್ವರಾ ![1]

ಮನದ ಪೂರ್ವಾಪರ ಮನಕ್ಕೇ ತೆರೆಮರೆಯಾಗಿದೆ. ತನ್ನ ಹಿಂದು ತನ್ನ ಮುಂದು ತನಗೆ ಕಾಣದ, ತನ್ನ ಅವಿಚ್ಛಿನ್ನವಾದ ತಾನು ತನಗೆ ಕಾಣದ ಮನ ಹಿಂದೆ ಮುಂದೆ ನೋಡದೆ, ಹಿಂದ ಮುಂದ ವಿಚಾರಿಸದೆ 'ಅನಿಮಿಷಯ್ಯ ಅಳಿದು ಹೋದ, ಅಗಲಿ ಬಿಟ್ಟ' ಎಂದು ಭಾವಿಸುವುದು ಭಾವಭ್ರಾಂತಿ. ಇಂಥ ಆಗಂತುಕ ಭ್ರಾಂತಿಯನ್ನು ಸಂತವಿರಿಸಿ ತಿಳಿದು ನೋಡಿದರೆ, ನಿಜಸ್ಥಿತಿ ತನಗೆ ತಾನೆ ವೇದ್ಯವಾಗುತ್ತದೆ. '......ಆ ಗುರುವಿನ ಚೈತನ್ಯ ಲಿಂಗದಲ್ಲಿ ಅಡಗಿತ್ತು; ಆ ಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು. ಅದು ಕಾರಣ ಈ ಶ್ರೀಗುರು ವೆನ್ನ ಕರಸ್ಥಲದಲ್ಲಿ ಮನಸ್ಥಲದಲ್ಲಿ ಸಂಪೂರ್ಣವಾಗಿ ನೆಲೆಗೊಂಡನಲ್ಲದೆ ಅನ್ಯಭಾವ ವಿಷಯದಿಂದ ಅಳಿದುದಿಲ್ಲ...'[2] ಅನಿಮಿಷಯ್ಯ ಸಂಚ ತಪ್ಪಿ ನೆಲಕ್ಕುದುರಿದ ಅಸ್ಥಿ ಚರ್ಮವಲ್ಲ. ನಿಜಸ್ಥಿತಿಯೆಂದರೆ ಆತ ನಿರಾಳ ಚೈತನ್ಯ, ಚೈತನ್ಯ ಘನ; ಮನದಲ್ಲಿ ವೇಧಿಸಿ ಮನವನೊಳಕೊಂಡ ಮಹಾಘನ; ಕರಸ್ಥಲದಲ್ಲಿ ಉಚ್ಚಿ ಪಾರಾಗಿ ಮೇರೆಗಳೆದು ಬೆಳಗುವ ಅಖಂಡ ತೇಜೋಘನ. ಗುರುಘನ ಪ್ರಭುವಿನ ಕರಸ್ಥಲಕ್ಕೆ ಲಿಂಗವಾಗಿ ಅವತರಿಸಿದುದು ಶಿಷ್ಯನ 'ಪಶ್ಚಿಮ ದೇಶ'ದಿಂದಲೇ. ಇಲ್ಲಿಗೆ ಇಳಿದು ಬಂದ ಗುರು ಬೇರೆ, ಲಿಂಗ ಬೇರೆ ಅಲ್ಲ. ಗುರುವೇ ಲಿಂಗ, ಲಿಂಗವೆ ಗುರು. ಅಂತೆಯೆ ಗುರು ಗುರುಲಿಂಗ. ಇದೇ 'ಘನಕ್ಕೆ ಘನ ವಾದ ಘನವಸ್ತು'. ಇದು ತಾನೆ ಗುರು-ಲಿಂಗವಾಗಿ, ಜಂಗಮ-ಪ್ರಸಾದವಾಗಿ, ಮನಕ್ಕೆ ಮಂತ್ರವಾಗಿ ತನುವಿಗೆ ಯಂತ್ರವಾಗಿ ಬುದ್ಧಿಗೆ ಸಕಲ ವಿದ್ಯಾಸ್ವರೂಪವಾಗಿ. ಮತ್ತೆ ಈ ಎಲ್ಲವನೊಳಕೊಂಡು ಕರಸ್ಥಲದಲ್ಲಿ ಕ್ರಿಯಾಲಿಂಗವಾಗಿ ಮೂರ್ತಿಗೊಂಡು ನಿರ್ವಿಕಾರ ವಾಗಿ ನಿಂದಿದೆ.[3] ಆದ್ದರಿಂದ ಗುರು ಸಾಯಲಿಲ್ಲ. ಇರುವುದು ಸತ್ತುದು ಹೇಗೆ? ಸಾವುದು ಹೇಗೆ? ಜನಿತದಲ್ಲಿ ಹುಟ್ಟಿದರೆ ಮರಣದಲ್ಲಿ ಸಾಯಬೇಕು. ಜಾತಕ್ಕೆ ಮೃತ್ಯು ಧ್ರುವ— ಇದು ದಿಟ, ದಿಟ. ಆದರೆ ಅಜಾತಕ್ಕೆ? 'ಜನನವಿಲ್ಲದ ಘನಕ್ಕೆ ಮರಣವುಂಟೇ'?[4] ಅಸ್ಥಿ ಚರ್ಮ ಉದುರಿದರೆ ಅನಿಮಿಷಯ್ಯ–ಗುರು–ಗುರುಲಿಂಗ ನೆಲದ ಪಾಲಾಯಿತೇ? ಇಲ್ಲ. ಹಾಗಾದರೆ ಎಲ್ಲಿದೆ? ಇದೋ ಇಲ್ಲಿಯೆ ನೋಡಿ. ದಿವ್ಯಚೈತನ್ಯವಾಗಿ ಇರುವ ಶಿಷ್ಯಲಿಂಗ ದಲ್ಲಿ ಪ್ರಾಣಿಸುತ್ತಿರುವ ಅನಿಮಿಷಯ್ಯನನ್ನು : '......ತೆಱಹಿಲ್ಲದ ನಿಜವು ತನ್ನಲ್ಲಿ ತಾನು ವೇದ್ಯವಾಗಿಪ್ಪುದಲ್ಲದೆ, ಇದಿರಿಟ್ಟು ತೋಱದೆಂಬ ಅಜ್ಞಾನವಿದೇನೊ?' 'ಇದೋ ಇಲ್ಲಿಯೆ ನೋಡಿ.......' ಎಂದು ನಾನು ನಿಮ್ಮನ್ನು ಬಿನ್ನವಿಸಿಕೊಂಡುದು ಒಂದು ರೀತಿ ಯಿಂದ ತಪ್ಪು. ಮನ ಬುದ್ಧಿ ಅರಿವು ಕಣ್ಣು ಕಿವಿ ನಾಲಗೆ ತೊವಲಿಗೆ ಇದಿರಾಗಿ ತಟ್ಟಿದರೆ ಇದಿರಾಗಿ ಮುಟ್ಟಿದರೆ ಇದಿರಿಟ್ಟು ತೋರಿದರೆ ನೀವಾಗಲಿ ನಾನಾಗಲಿ ನೋಡಬಲ್ಲೆವು.

---

೧. ಶೂ. ಸಂ. ಪು. ೧೫, ವ. ೪೩.
೨. ಶೂ. ಸಂ. ಪು. ೧೪-೧೫, ಪ್ರ. ೪೩.
೩. ಅದೇ ಪು. ೧೫, ವ. ೪೪ ನೋಡಿರಿ.
೪. ಅದೇ ಪು. ೧೫, ವ. ೪೩.

ಆದರೆ ಮನ ಬುದ್ಧಿ ಅರಿವು ಕಣ್ಣು ತೊವಲಿಗೆಲ್ಲ, ಮತ್ತೆ ಉಳಿದೆಲ್ಲ ಎಲ್ಲಕ್ಕೆ ಪ್ರಾಣಚೈತನ್ಯವಾಗಿರುವ, ಪ್ರಾಣಲಿಂಗವಾಗಿರುವ[೧] 'ತೆಱಹಿಲ್ಲದ ನಿಜವು',–ತನ್ನಲ್ಲಿಯೆ ಇಲ್ಲದ ತೆರಹನ್ನು ಉಂಟುಮಾಡಿಕೊಂಡು, ತನಗೆ ತಾನೆ ದೂರವಾಗಿ ಎರವಾಗಿ, ತನಗೆ ತಾನೆ ಇದಿರಿಟ್ಟು, ಬೇರೆ ಬೇರಾಗಿ ನೋಡುತ್ತಿರುವ 'ನಾನು ನೀನು' ಎಂಬ ಬಿರುಕಲ ಪ್ರಜ್ಞೆಗಳಿಗೆ ಸಂದು ಬಿರುಕಿಲ್ಲದ ಅಖಂಡ ಪರಿಪೂರ್ಣ ನಿಜವು ಕಾಣುವುದೆಂತು? ತೆರೆಗೆ ತೆರೆ ಕಾಣುತ್ತವೆ, ತೆರೆಯಿಂದ ಖಂಡಿತವಾಗದ ಅಖಂಡ ಸಮುದ್ರ ಕಂಡರೂ ಕಾಣುವದಿಲ್ಲ. ನೀ ನಾನೆಂಬ ಬಿರುಕು ಮಾದರೆ, ತಾನೆಂಬ ತೆರಹಿಲ್ಲದ ನಿಜಲಿಂಗ ತನಗೆ ತಾನೆ ವೇದ್ಯ, ತನಗೆ ತಾನೆ ಸಾಧ್ಯ.

ಜನನವಿಲ್ಲದ ಘನಲಿಂಗ, ಮರಣವಿಲ್ಲದ ಅಮೃತಲಿಂಗ ಅನಿಮಿಷ. ವರ್ತಮಾನಕ್ಕೆ ಕಂದೆರೆದು ಭೂತಭವಿಷ್ಯಕ್ಕೆ ಕಣ್ಣೆವೆ ಮುಚ್ಚುವ ನಿಮಿಷಜೀವಿಯಲ್ಲ ಅನಿಮಿಷಯ್ಯ. ಕಾಲದ ಮಿತಿಯಲ್ಲಿ ಮೂಡಿ ಕಾಲನ ಮಿತಿಯಲ್ಲಿ ಮುಳುಗುವ ಮೂರ್ತಿಯಲ್ಲ ಆತ. ತ್ರಿಕಾಲಾಬಾಧಿತವಾಗಿ ನಿತ್ಯ ನಿತ್ಯ ಬದುಕಿ ಬೆಳಗುತ್ತಿರುವ ಈ ಅನಿಮಿಷ ಪ್ರಭುದೇವರಲ್ಲಿ ಸ್ವಯಂಭು ಲಿಂಗವಾಗಿ ಒಡಮೂಡುತ್ತದೆ, ಸ್ವಯಂವೇದ್ಯವಾಗಿ ಕಂಡುಬರುತ್ತದೆ ಎಂದು ಸಿದ್ಧವೀರದೇವರು ಹೀಗೆ ವಿವರಿಸುತ್ತ–'ಇಂತು ಪ್ರಭುದೇವರು ಅಂತಪ್ಪ ಶ್ರೀಗುರು ಮೂರ್ತಿಯನೆ ತಮ್ಮ ಹೃದಯಕಮಲ ಮಧ್ಯದಲ್ಲಿ ಪ್ರಾಣಲಿಂಗವೆಂದಱಿದು ಕಂಡು, ಮನಪುಷ್ಪದಿಂ' ಪೂಜಿಸುವ ಪರಿಯನ್ನು ಪ್ರಭುದೇವರ ವಚನದಿಂದಲೆ ಬಿತ್ತರಿಸುತ್ತಾರೆ.

ಕಸ್ತುರಿಯ ಮೃಗ ಬಂದು ಸುಳಿಯಿತ್ತಯ್ಯಾ.
ಸಕಲ ವಿಸ್ತಾರದ ರೂಪು ಬಂದು ಮುಂದೆ ನಿಂದಿತ್ತಯ್ಯಾ.
ಆವ ಗ್ರಹ ಬಂದು ಸೋಂಕಿತ್ತೆಂದಱಿಯೆನು.
ಹೃದಯಕಮಲ ಮಧ್ಯದಲ್ಲಿ ಶ್ರೀಗುರುವನಱಿದು ಕಂಡು ಪೂಜಿಸಿ
ಗುರು ವಿಖ್ಯಾತನೆಂಬುದನಱಿದೆ ನೋಡಾ!
ಗೊಹೇಶ್ವರಲಿಂಗದಲ್ಲಿ ಹಿಂದಣ ಹುಟ್ಟಱಿತು ಹೋದುದ ಕಂಡೆನು.[೨]

ಈ ವಚನದ ಅರ್ಥ, ಅನುಭವ ನನಗೆ ತಿಳಿದಿಲ್ಲ. ಯಾವ 'ನನಗೂ' ಅದು ಗೊತ್ತಾಗಲಿಕ್ಕಿಲ್ಲ. ಅದನ್ನು ಕಂಡು ಬಲ್ಲ ಕಲ್ಲಮಠದ ಪ್ರಭುದೇವರು ಅದರ ಗಂಭೀರವನ್ನು ಶಬ್ದ-ಕ್ಕೆತ್ತಿ ಹೀಗೆ ಪ್ರಕಟಪಡಿಸುತ್ತಾರೆ: 'ಅಂತರಂಗದಲ್ಲಿ ಸ್ವಾನುಭಾವ ಉದಯವಾಗಿ ಲಿಂಗ ನಿಜದ ಸದ್ವಾಸನೆದೋಱಲು, ಆ ಸದ್ವಾಸನೆ ಅಂತರಂಗ ಬಹಿರಂಗದಲ್ಲಿ ದರ್ಪಣ-ಪ್ರತಿಬಿಂಬ ನ್ಯಾಯದಂತೆ ಪರಶಿವ ಮೂರ್ತಿಯಾಗಿ ನೆಲೆಗೊಂಡಿತ್ತು. ಆ ಲಿಂಗಸೋಂಕಿನ ಸಂಬಂಧದಿಂದ ಅನ್ಯವನಱಿಯ ತೆಱಹಿಲ್ಲದಿರ್ದನು. ಆ ಲಿಂಗ ಸರ್ವಾಂಗವನವಗ್ರಹಿ

---

೧. 'ಲಿಂಗ' ಎಂದರೆ, ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತದ್ ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ ॥
ಶಿ. ಸೂ. ಅಧಿ. ೩, ಶ್ಲೋ. ೩

ಎಂಬ ಮಾತು ನಮ್ಮ ಗಮನಕ್ಕೆ ಅರ್ಹ. ಈ ಶ್ಲೋಕ ಸ್ಕಾಂದ ಪುರಾಣದಲ್ಲಿದೆ ಎಂದು ಉಬಿ-ಲಿಂಗಪದ್ಧತಿಯ ವಚನ [ಗ. ಭಾ. ರ. ಪು. ೨೨೩, ವ. ೩] ತಿಳಿಸುತ್ತದೆ.

೨. ಶೂ. ಸಂ. ಪು. ೧೫-೧೬, ವ. ೪೬.

ಸಿತ್ತು. ಅಂತಪ್ಪ ಲಿಂಗದ ನಿಲವ ತೋಱಿದ ಜ್ಞಾನಗುರು ತನ್ನಂತರಂಗದಲ್ಲಿ ಅವಿರಳನಾಗಿರ್ದುದನಱಿದು, ತಾನೆಂಬ ಆತ್ಮಾಂಗವ ಗುರುಪಾದಕ್ಕೆ ಸಮರ್ಪಿಸಿ, ಗುರುಸ್ವರೂಪೆಯಾಗಿ ತ್ರೈಲೋಕದಲ್ಲಿ ಕೀರ್ತಿವಡೆದನು. ಇಂತಾದ ಕಾರಣ ಭವಪಾಶ ಹಱಿಯಿತ್ತು.[೧]

ನಿತ್ಯಪರಿಪೂರ್ಣದ ಅಖಂಡ ಪರಿಮಳವನ್ನು ಬೀರುವ ಸಚ್ಚಿದಾನಂದ ಸ್ವರೂಪದ ಲಿಂಗನಿಜವೇ ಕಸ್ತುರಿಯ ಮೃಗ. ಈ ಪರಿಮಳ ಒಳಹೊರಗೆ ಇಡಿದಿದೆ. ವಿಶ್ವವಿಸ್ತಾರದ ರೂಪು ಲಿಂಗಬೀಜದಿಂದ ಹೊಮ್ಮಿ ಹರವಿಕೊಂಡಿರುವ ಹಲವು ಬಣ್ಣವಾಗಿ ಒಳಹೊರಗೆ ಎವೆಯಿಕ್ಕದ ಕಣ್ಣಿಗೆ ಪ್ರತ್ಯಗ್ಗೋಚರವಾಗಿ ಮುಂದೆ ನಿಂದಿದೆ. ತಾನು-ಇದಿರೆಂದು ಹಲವು ಬಣ್ಣದಲ್ಲಿ ಮಗ್ನವಾಗಿ ಮಯವಾಗಿರುವ ಬಣ್ಣದ ಅರಿವನ್ನು ತನ್ನ ಗಂಭೀರವಾದ ಲಿಂಗ ಪರಿಮಳ ವ್ಯಾಪಿಸಿ, ಅರಿವಿನ ಬಣ್ಣವೆ ಭ್ರಮಣಗೊಂಡು ಬಣ್ಣಕೆಟ್ಟು ನಾನಿಲ್ಲ ನೀನಿಲ್ಲದ ಲಿಂಗನಿಜದ ನಿರಾಳ ಬೆಳಗು ಅಖಂಡ ಅಱಿವಾಗಿ ಉರಿದರೆ, ಉರಿಹಚ್ಚಿದ ಗುರು. ಹೃದಯ ಕಮಲದಲ್ಲಿ ಉರಿ-ಹಚ್ಚಿಸಿಕೊಂಡ ಶಿಷ್ಯ, ಉರಿಲಿಂಗ.–ಈ ಮೂರೆಲ್ಲ ಗುರುಪರಂಜ್ಯೋತಿ, ಅನಿಮಿಷಮೂರ್ತಿಯೆ ಎಂದು, ಕಂಡು ನೋಡಿ ನಿಶ್ಚಯಿಸಿದ ಪ್ರಭುದೇವ, ಭಾವದ ಭ್ರಾಂತಿ ಸರಿದು ಈ ನಿರ್ಣಯಗೀತವನ್ನು ಹಾಡಿದ:

> ಎನ್ನ ಮನದ ಕೊನೆಯ ಮೇಲೆ ಅಂಗವಿಲ್ಲದ ರೂಪನ ಕಂಡು ನಾನು ಬೆಱಗಾದೆ !
> ಅಂತರಂಗದ ಆತ್ಮನೊಳಗೆ ಅನುಮಿಷ ನಿಜೈಕ್ಯ
> ಗೊಹೇಶ್ವರಲ್ಲಯ್ಯನ ಕಂಡು ಬೆಱಗಾದೆನು ![೨]

ಅಂತರಂಗದ ತನ್ನ ಒಳಗೆ ಬೆಳಗಿರುವ ನಿಜವೆಲ್ಲ ಅನಿಮಿಷ ಗುರು. ಗುರುವಿನಲ್ಲಿಯೆ ಐಕ್ಯ ಗೊಹೇಶ್ವರಲಿಂಗ, ಅದೇ ಅಲ್ಲಯ್ಯ ! ಗುರುಲಿಂಗ ಒಂದಾಗಿ ಅದೇ ತಾನಾಗಿರುವ ಶಿಷ್ಯನಿಗೆ ಬ್ರಹ್ಮ ಬೆಱಗು. 'ಗುರು ಶಿಷ್ಯ ಸಂಬಂಧವನಱಸಲೆಂದು ಹೋದರೆ, ತಾನೆ ಗುರುವಾದ; ತಾನೆ ಶಿಷ್ಯನಾದ; ತಾನೆ ಲಿಂಗವಾದ......'[೩] ತಾನೆ ಗುರು ತಾನೆ ಶಿಷ್ಯ ತಾನೆ ಲಿಂಗ–ಎಂಬ ಸಾಮರಸ್ಯದ ಮಾತು 'ಅನುಮಿಷ ನಿಜೈಕ್ಯ ಗೊಹೇಶ್ವರಲ್ಲಯ್ಯನ' ಕಂಡ ಅಲ್ಲಯ್ಯನ ಸ್ವ-ಅನುಭಾವವೆ.

> '......ಗೊಹೇಶ್ವರನೆಂಬ ಲಿಂಗ ನಿರಾಕಾರಬಯಲು: ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ......'[೪] ಕೇಳುವದೇನು?

ಬೇತುಗಳ್ಳನಿಗೆ ಕಳವು ದೊರಕಿದರೆ, ಬಡವನೆಡಹಿದ ಕಲ್ಲು ಪರುಷದ ಕಲ್ಲಾದರೆ, ಹುಟ್ಟು ಗುರುಡನಿಗೆ ದೃಷ್ಟಿ ಮೂಡಿದರೆ, ಮರಮರದ ಚಿಗುರೆಲೆಯನ್ನು ತಿಂದು ನಾಲಗೆ ರುಚಿ ಎಂದೂ ನೀಗದ ಕೋಗಿಲೆಗೆ ಮಾಮರದ ಚೆಂದಳಿರು ಸಿಕ್ಕರೆ ಹೇಳುವದೇನು? ಕೇಳುವದೇನು? ಕಾಣಬಾರದ ನಿರಾಕಾರ ಕಣ್ಣಮುಂದೆ ಸಾಕಾರವಾಗಿ ಕರಸ್ಥಲದಲ್ಲಿ ಮೂರ್ತಿಗೊಂಡರೆ ಕಾಣದುದೆಲ್ಲ ಕಂಡಿತು, ಕಾಣ ಬಯಸಿದುದೆಲ್ಲ ಕಂಡಿತು; ಕೇಳಬಾರದುದೆಲ್ಲ

೧. ಲಿಂ. ಲೀ. ವಿ. ಚಾ. ಪು. ೧೨೧, ವ. ೧೮, ಟೀ.
ಇಲ್ಲಿ ವಚನಭಾಗವನ್ನು ತೆಗೆದು ಟೀಕನ್ನಷ್ಟೆ ಕೊಟ್ಟಿದೆ.
೨. ಶೂ. ಸಂ. ಪು. ೧೬, ವ. ೪೭. ೩. ಶೂ. ಸಂ. ಪು. ೧೬, ವ. ೪೯.
೪. ಅದೇ ಪು. ೧೭. ವ. ೫೩.

ಕೇಳಿತು, ಕೇಳ ಬಯಸಿದುದೆಲ್ಲ ಕೇಳಿತಂ; ಲಿಂಗ ಪರಿಮಳ ಸೋಂಕಿ ಮೂಗಿನ ನಾನಾ ಬಯಕೆ ಇಂದು ಸಂಪೂರ್ತಿಯಾಯ್ತು; ಲಿಂಗದ ಸರ್ವಾಂಗಾಲಿಂಗನ ತೊಗಲಿನ-ತ್ವಕ್ಕಿನ ಸಂಪೂರ್ಣ ಅರ್ಥವನ್ನು ಬಿಚ್ಚಿ ತೋರಿಸಿತು. ಮನದ ಹಲವು ಹರಿದಾಟ, ಬುದ್ಧಿಯ ಕೋಟಿ ತರ್ಕ, ಜೀವ ಭಾವದ ಏನೋ ಯಾವೋ ಹುಚ್ಚುಹುಡಿ ಹಂಬಲ, ನೆಲದ ಬಾಳುವೆಯ ಯಾವುದೋ ಎತ್ತಲೋ ಕೂಗು, ಸಾವಿನ ದವಡೆಯಲ್ಲಿ ಸಿಕ್ಕಿದ್ದು ಎಲ್ಲಿಯೂ ಕಂಡುಬಾರದ ಅಮೃತಕ್ಕೆ ಹುಯಿಲಿಡುವುದು, ದುಃಖ ಸುಖದ ತಿರುಗುಣಿಯಲ್ಲಿ ತಿರ್ರನೆ ತಿರುಗುತ್ತ ಭಾವಬತ್ತಲೆಯಾದ ನಿರ್ಭಾವ ಸಮಾಧಿಯ ನಿತ್ಯಾನಂದವನ್ನು ಮೊರೆಯಿಟ್ಟು ಕರೆವ ಎದೆಯ ನಾದ,–ಇಂತಿವೇನೇನೋ '......ಹಲವು ದೆಸೆಯ ಬಯಕೆ ತಾರ್ಕಣೆ ಗಂಡಂತೆ ಗೊಹೇಶ್ವರ ಲಿಂಗವು ತನುವ ತನ್ನತ್ತಲೊಯಿದಾ !'[೧] ಗೊಹೇಶ್ವರ ಲಿಂಗ ತನ್ನ ತನುವನ್ನು ತನ್ನತ್ತ ಕೊಂಡೊಯ್ದರೆ, ನನ್ನ ತನು 'ಲಿಂಗ ತನು'ವಾದರೆ ಸರ್ವಕಾಮು ಸ್ವಯಂ ಸಮಾಪ್ತ.

ಅಲ್ಲಯ್ಯನ ತನು 'ಕಿಚ್ಚಿನಲ್ಲಿ ಬಯ್ಚಿಟ್ಟ ಕೋಲಿನಂತೆ' ಲಿಂಗದಲ್ಲಿ ಕ್ರಮೇಣ ಪ್ರವೇಶವಾಗಿ ಲಿಂಗಾಂಗವಾಗುತ್ತಿದೆ. ಲಿಂಗದ ನೆನಹಿನಲ್ಲಿ ಮನ ಮಗ್ನವಾಗಿ ಚಂಚಲ ಚಲಿಸಲಾರದೆ ಸಿಲುಕಿಬಿಟ್ಟಿದೆ. ಕರಸ್ಥಲದ ಇಷ್ಟಲಿಂಗದಲ್ಲಿ ನಟ್ಟ ನೋಟ ಪ್ರಾಣಚೈತನ್ಯವನುಂಡು ಬೆಳಗುತ್ತಿದೆ. ಆತ್ಮನ ಹಸಿವು ಲಿಂಗವನಸ್ಸುಂಡು ಹಿಂಗಿಹೋಗಿದೆ. ಎಲ್ಲ ಅಡಗಿ, ಏನೂ ಇಲ್ಲದ ಮಹಾಘನಶೂನ್ಯದೊಳಗೆ ಗೊಹೇಶ್ವರ ನಿರಾಳವಾಗಿ ನಿಂದ.

---

೧. ಸೂ. ಸಂ. ಪು. ೧೬. ವ. ೫೧.

೧೦

ಕೂಡಲಿಲ್ಲ ಅಗಲಲಿಲ್ಲ

ಜಲದ ಚಿತ್ತಾರದ ಕೊರಳಿನಲ್ಲಿ ದಾರವಿಲ್ಲದ ಮುತ್ತಿನ ಸರವ ನೋಡಾ !
ಚಿತ್ತಾರವಳಿಯದೆ, ಮುತ್ತು ಉಳಿಯದೆ ನಿಂದ ನಿಲವಿನ ಪರಿಯ ನೋಡಾ !
ಗಮನವಿಲ್ಲದ ಗಂಭೀರ, ಶಬ್ದವಿಲ್ಲದ ಸಾರಾಯ
ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು ಸರಿಯೆಂಬೆನು?[೧]

ಮುಕ್ತಾಯಕ್ಕ.

ಆಕಾರ ನಿರಾಕಾರವೆಂಬೆರಡೂ ಸ್ವ-ರೂಪಂಗಳು.
ಒಂದಾಹ್ವಾನ, ಒಂದು ವಿಸರ್ಜನ.
ಒಂದು ವ್ಯಾಕುಳ, ಒಂದು ನಿರಾಕುಳ.
ಈ ಉಭಯ ಕುಳರಹಿತ,–ಗೊಹೇಶ್ವರಾ, ನಿಮ್ಮ ಶರಣ[೨].

ಪ್ರಭುದೇವರು.

ಅಱಿವಿನ ಹೃದಯ ಕಂದೆಱೆಯಬೇಕೆಂದು
ಗುರುವೆಂದು ಕಲ್ಪಿಸಿಕೊಂಬರಲ್ಲದೆ,
ಗುರುವೆಂದೆನಲುಂಟೆ ಶಿಷ್ಯಂಗೆ?
ಶಿಷ್ಯನೆಂದೆನಲುಂಟೆ ಗುರುವಿಂಗೆ?
ಗಮನಾಗಮನ ನಾಸ್ತಿಯಾದ ಲಿಂಗಕ್ಕೆ
ಅಂಗವೆಲ್ಲಿಯದು ಹೇಳಾ ಗೊಹೇಶ್ವರಾ? [೩]

ಪ್ರಭುದೇವರು.

ಮತ್ತೆ ಮುಂದೆ ನಡೆಯೋಣ ಪ್ರಭುವಿನೊಡನೆ? ಅಥವಾ ಇಲ್ಲಿ ಬನ್ನಿ ಮುಕ್ತಾಯಕ್ಕನ ಬಳಿ. ಮುಕ್ತಾಯಕ್ಕ ಯಾರು? ಆಕೆಯಿದ್ದ ಕಾಲ, ಊರು ಯಾವುದು? ಲಗ್ನವಾಗಿತ್ತೇ? ಮಕ್ಕಳೆಷ್ಟು ಜನ? ಹೊಲಮನೆ ಆಸ್ತಿಪಾಸ್ತಿ ಹೇಗೆ? ದಾಂಪತ್ಯ ಜೀವನ? ಬಂಧು ಬಳಗ?—ಎಂದು ಕೇಳುತ್ತ ಇನ್ನೇಸೋ ಪ್ರಶ್ನೆಗಳನ್ನು ಮಳೆಗರೆಯಬಹುದು ನೀವು, 'ಮುಕ್ತಾಯಕ್ಕ' ಎಂದೊಡನೆ ನಾನು. ಹೀಗೆ ನೀವು ಪ್ರಶ್ನೆ ಹಾಕುವುದು ಇಂದಿನ ಕಾಲಕ್ಕೆ ಸಹಜ. ಇದು 'ಇತಿಹಾಸ'ದ ಪ್ರಭಾವ; ಇತಿಹಾಸ ಸಂಶೋಧನೆಯ ಪ್ರಭಾವ.

---

೧. ಲಿಂ. ಲೀ. ವಿ. ಚಾ. ಪು. ೩೮೪, ವ. ೪೬
೨. ಏ. ಶ. ಸ್ಥ. ಪು. ೭೫೮, ವ. ೨. [ತಾಡೋಲೆಯ ಪ್ರತಿ]
೩. ಅದೇ ಪು. ೭೫೮, ವ. ೩. ,,

ಐತಿಹಾಸಿಕತೆಯ ಕಲ್ಪನೆ ಸಾಕಷ್ಟಿಲ್ಲದ ಭರತಖಂಡದಲ್ಲಿ ಇಂಥ ಪ್ರಶ್ನೆಗಳ ಅಂದರೆ ಇತಿಹಾಸ ಸಂಶೋಧನೆಯ ಆವಶ್ಯಕತೆ ಹೇಳತೀರದಷ್ಟಿದೆ. ಆದರೆ ನಿಮ್ಮ ಪ್ರಶ್ನೆಗೆ ಇಲ್ಲಿ ಉತ್ತರ ಕೊಡುವ ಸಾಹಸ ನಾನು ಮಾಡುವುದಿಲ್ಲ. ದಯವಿಟ್ಟು ಇದನ್ನು 'ಅಸಮರ್ಥತೆ' ಯೆಂದು ಎಣಿಸಬೇಡಿ. ಈ ಸಾಹಸ ಮಾಡದಿರಲು ಮುಖ್ಯ ಕಾರಣವೆಂದರೆ ಇಲ್ಲಿ ನಮಗೆ ಮುಖ್ಯ ಕರ್ತವ್ಯ ಮುಕ್ತಾಯಕ್ಕನ ಅಂತರಂಗಜೀವನದ ದಿವ್ಯ ಸತ್ತ್ವಸಾರವನ್ನು ಅಂತ-ರೀಕ್ಷಿಸಿ ಕಾಣುವುದು. ಬಹಿರಂಗ ಜೀವನದ ಬಹಿಃಪರೀಕ್ಷೆಯನ್ನು ಸದ್ಯ ಬದಿಗಿರಿಸಿದರೆ ನೀವು ಸಿಟ್ಟಾಗಬೇಡಿ. ಅವಧಾನವಿರಲಿ. ಸಿದ್ಧವೀರದೇವರ ಬೆಂಬಳಿಯಲ್ಲಿಯೆ ನಿಂದು ನೋಡಿ ಮುಕ್ತಾಯಕ್ಕನ ಆತ್ಮವೃತ್ತವನ್ನು: '......ಅತ್ತ ಕೈಲಾಸದಲ್ಲಿ ಸಮಸ್ತ ಪ್ರಮಥ ಗಣಂಗಳೊಳಗೊರ್ವ ಗಣಾಧೀಶ್ವರನು ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ, ಅಜಗಣ್ಣ ನೆಂಬಭಿಧಾನದಿಂ ಗುಪ್ತಭಕ್ತಿಯಿಂದಿರ್ದು ತಮ್ಮ ನಿರವಯ ಪದದೊಳು ನಿಜವನ್ನೈದಲು, ಅಲ್ಲಿ ಮುಕ್ತಾಯಕ್ಕಗಳು ಅಜಗಣ್ಣನನಗಲ್ದ ವಿಯೋಗಾವಸ್ಥೆಯಿಂ ಪ್ರಲಾಪಿಸುತ್ತಿರಲು ......'[೧] ಮುಕ್ತಾಯಕ್ಕ ಅಜಗಣ್ಣನ ತಂಗಿ.[೨] ಅಜಗಣ್ಣ ಲೋಕಕಲ್ಯಾಣಕ್ಕೆಂದು ಕೈಲಾಸ ದಿಂದ ಮರ್ತ್ಯಕ್ಕಿಳಿದ ಒಬ್ಬ ಪ್ರಮಥ ಗಣಾಧೀಶ್ವರ. ಲೋಕಕ್ಕೆ ತನ್ನ ನಿಜಭಕ್ತಿಯನ್ನು ಎಳ್ಳಷ್ಟು ಪ್ರಕಟಮಾಡದೆ ಗೋಪ್ಯವಾಗಿಟ್ಟುಕೊಂಡು 'ಗುಪ್ತ ಶಿವಾನುಭಾವನೆ'[೩]ಯಲ್ಲಿ ರಲು ತನ್ನ ಭಕ್ತಿ ಪ್ರಕಟವಾದುದೇ ಕಾರಣವಾಗಿ[೪] 'ನಿರವಯ ಪದದೊಳು ನಿಜವ'ನ್ನೈದಿ ದನು. ಅಣ್ಣನ ಆಕಸ್ಮಿಕ ಮರಣದಿಂದ ಎದೆಯೊಡೆದಂತಾಗಿ ಮುಕ್ತಾಯಕ್ಕ ಪ್ರಲಾಪ ಮಾಡುತ್ತಿದ್ದಾಳೆ. ಇಲ್ಲಿ ಕೈಲಾಸ, ಅಜಗಣ್ಣನ ಗಣಾಧೀಶ್ವರತ್ವ, ಅವತಾರಗಳು ನಮ್ಮ

---

೧. ಶೂ. ಸಂ. ಪು. ೨೪, ಪ್ರ. ೧.

೨. ಗು. ಚಾ. ಪು. ೨೩೮, ಸಂ. ೧೨, ಪ. ೫೪.

೩. ಪ್ರ. ಲೀ. ಪು. ೧೪೬, ಪ. ೧೦.

೪. 1. ಅಜಗಣನು ಗುಪ್ತಮಾಹೇಶನಾಗಿರುತಿರಲು
ಭಜಿಸಳಾತನ ಮಡದಿ ಭಕ್ತನಲ್ಲೆಂದೆನುತ
ಸುಜನನೊಂದಿನ ದಾರವಂದಮಂ ಹೊಯ್ದೋಂನಮಶ್ಶಿವಾಯೆಂದೆನುತಿರೆ ।
ತ್ರಿಜಗವಱಿಯಲ್ ಮಹಾಭಕ್ತನೆನುತಾ ಸುದತಿ-
ನಿಜವಱಿದೆನೆನಲವರು ಭಕ್ತಿಬಯಲಾಯ್ತೆನುತ
ತ್ಯಜಿಸಿ ದೇಹವ ಮುಕ್ತಿವಡೆದಜಗಣನ ವಿಮಲ ಚರಣಾಂಬುಜಕ್ಕೆ ಶರಣು ॥

ಶಿ. ಚಿಂ. ಪು. ೩೭೬ ಸಂ. ೩೭. ಪ. ೧೭೧.

2. ಅಜಗಣ್ಣನೆಂದೆಂಬ ಗುಪ್ತಭಕ್ತಗೆ ನಾವು
ನಿಜದೋರಿ ಮುತ್ತುರಕೆ ಕರೆಯಲೊಲ್ಲದೆಯೊಂದು
ಭುಜಗಂ ಫಣಾಮಣಿಯ ತೋರದಡಕದೊಳಿರಲು ಕಂಡು ಶಿವಭಕ್ತನಾಗಿ ।
ನಿಜಲಿಂಗಮಂ ತೋರಬಾರದೆಂದಡಗಿಸಲ್
ತ್ಯಜಿಸಿ ಮಾತಾಪಿತರು ಸತಿಯುದಾಸಿನದೊಳಿಪ
ಸುಜನನೆಂದಗಲಿ ಕಾಲಿಂ ನೂಂಕಲುಂಬವಂ ಸತ್ಕ್ರಿಯಾಮಂತೆಯೆಂದು ॥

(ಮುಂದಿನ ಪುಟ ನೋಡಿ)

ಬುದ್ಧಿಗೆ ಹೊಳೆಯುದ, ತಿಳಿಯುದ ಮಾತಾಗಿರಬಹುದು. ಅವನ್ನು ಆಚೆಗೆ ಸರಿಸಿ ಈ ಸನ್ನಿವೇಶವನ್ನು ನೋಡಿದರೂ ಅತ್ಯಂತ ಕರುಣಾಜನಕವಾಗಿದೆ ಈ ದೃಶ್ಯ.

ಈ ದೃಶ್ಯವನ್ನು ನಾವಷ್ಟೇ ಪರಾಮರ್ಶಿಸಿ ನೋಡುತ್ತಿಲ್ಲ. ನಮ್ಮ ಬದಿಯಲ್ಲಿಯೆ ನಿಂದು ಅದನ್ನು ಗಂಭೀರವಾಗಿ ಪರ್ಯಾಲೋಚಿಸುತ್ತಿದ್ದಾರೆ ಅಲ್ಲಮಪ್ರಭುದೇವರು. ಇವರು ಇಲ್ಲಿಗೆ ಹೇಗೆ ಬಂದರು? ಅದೊಂದು ಪರಮಸ್ವಾರಸ್ಯವೇ.

ಅನಿಮಿಷಯ್ಯನಿಂದ ನಿರಾಳದ ಅನುಗ್ರಹವನ್ನು ಪಡೆದ ಪ್ರಭುದೇವ ತನ್ನ ಗುರುವಿನಂತೆ 'ನಿಶ್ಶಬ್ದ ವೇಧಿಸಿ ಮುಗ್ಧ'ನಾಗದೆ, 'ನಿಜಸಮಾಧಿ'ಯಲ್ಲಿ ಮುಳುಗಿ ಹೋಗದೆ, 'ಸಗುಣ ನಿರ್ಗುಣ ಭರಿತನಾಗಿ' ಸುಳುಹಿನ ಸೊಗಸನ್ನು ಅನುಭವಿಸುತ್ತ ಜಂಗಮಲಿಂಗವಾಗಿ ಅಲ್ಲಲ್ಲಿಗೆ ಗಮಿಸುತ್ತಿದ್ದಾನೆ. ಗುರುವಿನಂತೆ ತಾನೇಕೆ ನಿರ್ಗುಣಮೂರ್ತಿಯಾಗಿ, ತನು ಮನ ಭಾವದ ಎಲ್ಲ ಕುರುಹಡಗಿ ನಿಲ್ಲಲಿಲ್ಲ?

ವರಲಿಂಗಭಜನೆ ಪಂಚಾಕ್ಷರೀಜಪಮಿವಂ
ಪರರ್ಗೆ ಕಾಣಿಸಲೀಸದಿರೆ ದ್ವಾರದಾರು ನಿ
ಬ್ಬರದಿ ತಾಗಲ್ ಓಂನಮಶ್ಶಿವಾಯಾ ಎಂದುವುಚ್ಚರಿಸಲದನು ಕೇಳಿ ।
ಪರಮ ಸದ್ಭಕ್ತಿಯಿಂ ವಂದಿಸುಪಚರಿಸೆ ಸತಿ-
ಯರಿದು ಬೀಸರವಾದುದೆಂದು ಪರಣಂಗಳೆದು
ಚಿರಸಮಾಧಿಯೊಳು ಬಯಲಾದನೀ ಸೋಮೇಶನಂತಧಿಕನೆಂದನೀಶಂ ॥

ಗು. ಚಾ. ಪು. ೨೩೭-೨೩೮, ಸಂ. ೧೨, ಪ. ೫೦-೫೧.

3. ಆಡಕವೆನಿಪಾ ಮಹಾಗ್ರಾಮ ರಾಜಿಪುದದರೊಳು ॥
ಅಜಗಣ್ಣನೆಂಬ ಮಹಜ್ಞಾನಿಯಿಹ ಲೌಕಿಕದ
ಗಜಬಜೆಯ ಬಿಟ್ಟು ಶಿವಮಂತ್ರದೊಳು ಮನಲಯಿಸಿ
ಕುಜನರಾತನ ಸ್ಥಿತಿಯನರಿಯದಾತಂಗೆ ಹುಚ್ಚೆಂದಿಹರು ಮತ್ತೊಂದಿನಂ ।
ಅಜನ ಕಂಧರನ ಧ್ಯಾನದೊಳಿಹನ ಕರೆದೊಯ್ದು
ಭುಜದಮೇಲಂ ಗೋದಿಯಂ ಕಟ್ಟಿ ಹೊರಿಸಲದ
ನಿಜಶಕ್ತಿಯಿಂ ಪೊತ್ತು ಮನೆಯ ಮುಂದಿಕ್ಕಿಯೊಳಪೋಗುತಿರಲುವುತ್ತರಸದಾ ॥
ಹಲಗೆ ತಲೆಯಿಂ ತಾಗೆ ಪರವಶದೊಳಾತನತಿ
ಸಲವೇರಿ ಓಂ ನಮ ಶಿವಾಯೆಂದು ಎಳ್ಚತ್ತು
ಕೆಲಬಲದರರಿತರುರುಹಾಸ್ಯಪ್ರಕಟತೆಯಾಯ್ತೆಂದು ಮನ ಮಂತ್ರದೊಳಗೆ ।
ಗೆಲವಿನಿಂ ಬಯಲಾಗಲಿವನ ಒಡಹುಟ್ಟಿದಳು
ಲಲನಾಶಿರೋರತ್ನ ಮುಕ್ತೆ ಮೊಸರೂರೊಳುಂ
ಸುಲಭದೊಳಗಿರ್ದು ಈ ವಾರ್ತೆಯಂ ಕೇಳಿ ದುಃಖದೊಳುಮಾ ಪುರಕೆ ಬಂದು ॥
ಕಡು ಕಿನ್ನದೊಳು ಹಸಿವುತೃಷೆ ನಿದ್ರೆಗಳ ಬಿಟ್ಟು
ಪೊಡಲೆಲ್ಲ ಒಣಗಿ ಪ್ರಳಾಪಿಸುತ್ತಿರೆಯರಿದು
ಮೃಡಸನ್ನಿಭ ಪ್ರಭುವೆಂದವನೀಯುಕಗೆ ಮೋಕ್ಷಮಾರ್ಗವ ತೋರ್ಪೆನೆಂದು ಮುದದಿಂ ॥

ಪ್ರ. ಪು. ಪು. ೨೧೮. ೨೧೯ ಸಂ. ೭, ಪ. ೧೩೫-೧೩೮.

ನಿಮ್ಮ ನೋಡುವ ಸುಖವುಳ್ಳನ್ನಕ್ಕರ ಬೆರಸಲೆಲ್ಲಿಯದಯ್ಯಾ?
ನಿಮ್ಮ ಬೆರಸುವ ತವಕವುಳ್ಳನ್ನಕ್ಕರ ನೋಟ ಹಿಂಗದು.
ನೋಡಿ ಕೂಡಿ ಸೈವೆಱಗಾದ ಸುಖವನೇನೆಂದುಪಮಿಸುವೆನಯ್ಯಾ
ಗೊಹೇಶ್ವರಾ?[೧]

ನೋಡುವ ಸುಖವಿದೆ, ನುಡಿಸುವ ಲಲ್ಲೆಯಿದೆ. ಸೋಂಕುವ ಸೊಗಸಿದೆ, ಸರ್ವಾಂಗ ಲಿಂಗಾಲಿಂಗನದ ವಿಭ್ರಮವಿಲಾಸವಿದೆ, ಪರಮಕಾಷ್ಠೆಯಿದೆ. ಇಂಥ ಅನಂತಲೀಲಾ ವೈಭವವನ್ನು ಬಿಟ್ಟುಕೊಟ್ಟು ಒಮ್ಮೆಲೆ ಬೆರೆದು ಒಂದುಗೂಡಲೇಕೆ? ಒಂದು ಎರಡು, ನಾನು ನೀನು ಏನೂ ಎನಲಿಲ್ಲದ ಬಯಲ ಸಮಾಧಿಯಲ್ಲಿ ನಿರವಯವಾಗಿರಲೇಕೆ? ದ್ವೈತದ ಭೂಮಿಯಿದ್ದರೆ ಅದ್ವೈತದ ಆಕಾಶ ಚೆಂದ. ಚೈತನ್ಯದ ವಿಲಾಸವಿದ್ದರೆ ಶಾಂತಿಯ ಶಾಶ್ವತ ಚೆಂದ.

ಮತ್ತೆ ಈ 'ಜಂಗಮ' ಲಿಂಗದ ಗಮನಕ್ಕೆ ಕಾರಣವೇನು? ಅಂದರೆ ಪ್ರಭುದೇವ ಮರ್ತ್ಯದಲ್ಲಿ ಪೂರೈಸಬೇಕಾದ ಮಣಿಹವೇನು? ಈ ಮಣಿಹವನ್ನು ಪೂರೈಸುತ್ತಿರುವ ಪ್ರಭುವಿನ ರೀತಿ ನೀತಿಯೇನು? ಸಿದ್ಧವೀರದೇವರ ಮಾತು ಕೇಳಿ, ಅಂದರೆ ಇದೆಲ್ಲ ತಾನ ಮುಸುಕು ತೆಗೆದು ಶೋಭನ ಸೌಂದರ್ಯವಾಗಿ ಮುಂದೆ ನಿಲ್ಲುತ್ತದೆ:

> ಅದೆಂತೆಂದೊಡಾ ಪ್ರಭುದೇವರು ಮರ್ತ್ಯಲೋಕವನೆಯ್ದೆ ಪಾವನವ ಮಾಡುತ್ತ, ಸತ್ಯ ಸದಾಚಾರವಂತರಪ್ಪ ಶಿವಲಿಂಗೈಕ್ಯರಂ ತನ್ನಂತೆ ಮಾಡುತ್ತ, ಶ್ರೀವೀರಶೈವಾ ಚಾರದ ಘನವಂ ಕರತಳಾಮಳಕವಾಗಿ ಸಮಸ್ತರೊಳು ತೊಳಗಿ ಬೆಳಗಿ ತೋಱುತ್ತ. ಶಿವಾದ್ವೈತ ತತ್ತ್ವಭೇದಂಗಳನು ಶಿವಸುಖಿಗಳೊಳು ಕೃಪೆಯಿಂ ನಿರೂಪಿಸುತ್ತ. ಸ್ವಾನುಭಾವಗಮ್ಯರೊಳು ಸಮ್ಮೇಳಂಗೆಯ್ಯುತ್ತ, ಸಮ್ಯಕ್ ಶರಣರೊಳು ಸಮರಸ ಮಂ ಕೈಗೂಡುತ್ತ, ಪರಸ್ಥಲದ ಲಿಂಗಮಂ ಕರಸ್ಥಲದೊಳು ಸ್ಥಿತಿಟ್ಟು, ಪಿರಿದು ನೋಟವೆ ಪ್ರಾಣವಾಗಿ, ಭಾವವೆ ನಿಬ್ಬೆಱಗಿನ ನಿಲವಾಗಿ, ಜ್ಞಾನವೆ ಸರ್ವಾಂಗಲಿಂಗ ವಾಗಿ, ಮನವೆ ಕರಸ್ಥಲದೊಳು ಲಯವಾಗಿ, ಅಕಾಯವೆ ಕಾಯವಾಗಿ, ಬಲದ ಹಸ್ತದೊಳು ವೀಣಾದಂಡಮಂ ಪಿಡಿದು, ಪರಮಾನಂದ ರಸ ಒಸರಲು ಪಾಡುವ ಸ್ವರವೆ ನಾದಬ್ರಹ್ಮದೊಳು ತರಹರಮಾಗಿ, ದಿವ್ಯವಚನಾಮೃತಂಗಳಂ ಪಾಡುತ್ತ, ಲೋಕದ ಲಜ್ಜಾಭಿಮಾನಂಗಳನಱಿಯದೆ ದಿಗಂಬರವೇಷದಿಂ ಇತರೇತರಂಗಳಂ ಮಱೆದು, ತನ್ನೊಳು ತನ್ನ ನಿಜದ ನಿಲವ ನೋಡುತ್ತ, ಇಂತನಂತ ದೇಶಂಗ- ಳೊಳು ಸುಳಿದು ದೇಶಾಂತರಮಂ ನಟಿಸಿ ತೋಱುತ್ತ ಬರುತ್ತಿರಲು...[೨]

ಮರ್ತ್ಯಕ್ಕೆ ದಿವ್ಯ ಪಾವನದ ಮಳೆಗರೆಯುತ್ತ ದೇಶಾಂತರವನ್ನು ಮಾಡುತ್ತಿರುವ ಪ್ರಭು- ದೇವರ ಮಂಗಲಮಯ ಚಿತ್ರಕಾಂತಿಗೆ ಮತ್ತೆ ನಮ್ಮ ವಿವರಣೆ ಅನುವಾದ ವ್ಯಾಖ್ಯಾನ ವಿಮರ್ಶೆಗಳನ್ನು ಉಡಿಸಿ ತೊಡಿಸುವುದು ಬೇಡ. ಬೆಳುದಿಂಗಳಿಗೆ ಅಂಗಿ ಟೊಪ್ಪಿಗೆ ಹಾಕಿ. ಹಾರ ಕೇಯೂರಗಳನ್ನು ಅಲಂಕರಿಸುವುದು ಹುಚ್ಚು ವಿಚಾರವ.

---

೧. ಶೂ. ಸಂ. ಪು. ೧೭, ವ. ೫೫. ೨. ಶೂ. ಸಂ. ಪು. ೨೩-೨೪, ಪ್ರ. ೧.

ಅಜಗಣ್ಣನಗಲಿ ಹೋದ. ತನಗಿನ್ನಾರು ಗತಿ?—ಎಂದು ಮುಕ್ತಾಯಕ್ಕನ ಎದೆ ಕಂಬನಿಗರೆಯುತ್ತಿದೆ. ಪ್ರಭುದೇವ, ಇದೋ ಇಲ್ಲಿಯೆ ನಿಂತು ಅಕ್ಕನ ರೋದನವನ್ನು ಮೌನವಾಗಿ ಕೇಳುತ್ತಿದ್ದಾನೆ. ಮುಕ್ತಾಯಕ್ಕನ ಪ್ರಲಾಪ ಲೋಕಕ್ಕೆ ವಿಚಿತ್ರ, ಲೌಕಿಕ ವಿಲಕ್ಷಣ! ಆಕೆ ಹಾಡಿ ಹಾಡಿಕೊಂಡು ಅಳುವ ಧಾಟಿ ಸಾಮಾನ್ಯ ಕಿವಿ ಎಂದೂ ಕೇಳದ ಧಾಟಿ. ಅಕ್ಕನ ನಿಸ್ಸಂಸಾರ ರಾಗ, ಅಲೌಕಿಕ ತಾಳ, ದಿವ್ಯದ ಧಾಟಿ, 'ಸುಳಿವ ಬೆಳಗ'ನ್ನು ತನ್ನೆಡೆಗೆ ಜಗ್ಗಿ ಹಿಡಿದು ನಿಲ್ಲಿಸಿದೆ. ಎದೆಯಳಲು ಹೊಮ್ಮಿ ಹೊರಗೆ ಹೀಗೆ ಹಾಡುತ್ತಿದೆ:

> ಅಱಿವನನಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು.
> ಅಱಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು.
> ನಾನೆಂತು ಬದುಕುವೆನಣ್ಣಾ! ಕತ್ತಲೆ ಬೆಳಗ ಕಾಬ ಸಂದೇಹಿ ನಾನೊಬ್ಬಳು.
> ಎನ್ನ ಕಣ್ಣಕಟ್ಟಿ ಕನ್ನಡಿಯ ತೋಱಿತ್ತೊ ಅಜಗಣ್ಣಾ. ನಿನ್ನ ಯೋಗ![1]
>
> ಸ್ಫಟಿಕ ಪ್ರಜ್ವಲ ಜ್ಯೋತಿ ಘಟದೊಳಗೆ ತೋಱುತ್ತಿರೆ,
> ದಿಟಪುಟವನತಿಗಳೆದು ಸಟೆಯ ಬಳಸುವರೆ?
> ಅಂತರಂಗದ ಶುದ್ಧಿಯು ಬಹಿರಂಗಕ್ಕೆ ತಂದು
> ಸಂತೈಸಲಱಿಯದೆ ಮರುಳಾದಿರಣ್ಣಾ.
> ಜಂತ್ರದ ಕೀಲಕೂಟದ ಸಂಚದ ಭೇದವು ತಪ್ಪಿ.
> ಮಂತ್ರ ಭಿನ್ನವಾಗಿ ನುಡಿವರೆ ಅಜಗಣ್ಣಾ?[2]

ಅರಿವಿನ ಜನ್ಮಕ್ಕೆ ಬಂದ ಮಾನವಕುಲ. ಬೆಲೆಯಿಲ್ಲದ ಜೀವರತ್ನ. ಭಾವರತ್ನ 'ಅರಿವು' ಎಂಬ ಅರಿವಿಲ್ಲ ಈ ಕುಲಕೋಟಿಗೆ. ವಿಶ್ವತರಂಗ ಕೋಟಿಗೆ ಅರಿವಿನಲ್ಲಲ್ಲದೆ ಅಸ್ತಿತ್ವವಿಲ್ಲ ಎಂಬ ಕಲ್ಪನೆಯಿಲ್ಲ ಈ ಕೋಟಿಗೆ. ಇರವು ಇದ್ದರೂ ಅರಿವು ಅದನರಿಯದಿದ್ದರೆ ಇದ್ದ ಇರವೆಲ್ಲ ಇಲ್ಲದಂತೆಯೆ. ಮತ್ತೆ ಈ ಇರವು ಅರಿವನುಳಿದು ಎಂದೂ ಇಲ್ಲ. ಆದರೆ ಈ ಇರವಿನ ನಿತ್ಯ ಸಂಗಾತಿಯಾದ 'ಅಱಿವು ಉಳಿಯಲಱಿಯದೆ ಕೆಟ್ಟಿತ್ತು ಲೋಕವೆಲ್ಲವು.' ಅರಿವನ್ನು, ಜ್ಞಾನರತ್ನ ಸ್ವಯಂಕಾಂತಿಯನ್ನು ಪರಮಾಲಂಕಾರವೆಂದು ದೇಹ ಪ್ರಾಣ ಇಂದ್ರಿಯ ಕರಣ ಭಾವದಲ್ಲಿ ಸರ್ವಾಂಗಾಲಿಂಗನವಾಗಿ ಧರಿಸದೆ ಅಂಥ ಕಾಂತಿಯನ್ನು ದವಡೆಯಲ್ಲಿಕ್ಕಿ ಕಡಿದು ಜಗಿದು 'ಮಂಗನ ಕೈಗೆ ಕೊಟ್ಟ ಮಾಣಿಕ'ದಂತೆ ಅರಿವನ್ನು ಈಡಾಡುತ್ತಿದೆ ಮಾನವಲೋಕ. ಲೋಕದ ಈ ಆಟ ಮನದ ಮಾಯಾಜಾಲ. '...ಮನ ವಿಡಿದೆನಾಗಿ ಅಱಿವು ಉಳಿಯದೆ ಕೆಟ್ಟೆನು......'[3] ಮನದ ಕುರುಡಿಗೆ ಅರಿವಿನ ಕಾಂತಿ ಕಾಳಕತ್ತಲೆ. ಈ 'ಕತ್ತಲೆ ಕವಿಯಿತ್ತು ಮೂಱು ಲೋಕದೊಳಗೆ.' ಕತ್ತಲೆಯ ಕುಲಕ್ಕೆ 'ಮರ್ತ್ಯಲೋಕ'ವಲ್ಲದೆ ಸ್ವಯಂಜ್ಯೋತಿಯ ಸ್ವರಾಜ್ಯವಿಲ್ಲ. ಇಂಥ ಸಾವಿನ ಸೀಮೆಯಲ್ಲಿ ಬದುಕುವುದೆಂತು? ಬದುಕುವೆನೆಂತು? ಅಜಗಣ್ಣನ ಯೋಗ. ಬಹಿರ್ಮುಖಿ

---

೧. ಶೂ. ಸಂ. ಪು. ೨೪. ವ. ೧.
೨. ಶೂ. ಸಂ. ಪು. ೨೪, ವ. ೬.
೩. ಅದೇ ಪು. ೨೮. ವ. ೧೭.

ವಾದ ಮನ ಇಂದ್ರಿಯದ ಹೊರಗಂಡಿಯನ್ನು ಮುಚ್ಚಿ ನಿಜಸ್ವರೂಪಕ್ಕೆ ಸ್ವಯಂ ಜ್ಞಾನವೆಂಬ ಕಾಂತಿದರ್ಪಣವನ್ನು ಹಿಡಿದಿತ್ತು. ಅಂತೆಯೇ ಒಳಗೆ ನೋಡಿದರೆ ಬೆಳಗು, ಹೊರಗೆ ನೋಡಿದರೆ ಕತ್ತಲೆ! ಒಳಗಿಂದ ನೋಡಿದರೆ ಒಂದು, ಹೊರಗಂಡಿಯಿಂದ ಇಣುಕಿದರೆ ಹಲವು! ಅಜಗಣ್ಣ ಸತ್ತುಹೋದ. ಅಜಗಣ್ಣನ ಯೋಗದ ಶಿವಯೋಗಸಂಭವ ಇನ್ನೆಲ್ಲಿ?

ಹಾವು ತನ್ನ ಹೆಡೆಯಲ್ಲಿ ರತ್ನವನ್ನು ಗೋಪ್ಯವಾಗಿರಿಸಿಕೊಂಡಿರುವಂತೆ ಇತ್ತು ಅಜಗಣ್ಣನ ಲಿಂಗಪೂಜೆ ಮಂತ್ರ ಜ್ಞಾನ ಧ್ಯಾನ ಭಕ್ತಿಯೋಗ. ಹೊರಗೆ ಭವಿ ಒಳಗೆ ಭಕ್ತ; ಹೊರಗೆ ಘಟ ಒಳಗೆ ಜ್ಯೋತಿ. ಅಜಗಣ್ಣ ಹೊರಗೆ ಲೋಕದ ಮರುಳು, ಒಳಗೆ ಲಿಂಗದ ತಿರುಳು, ಶಿವಯೋಗಿ ಶಿವಶರಣ. ಈ ಅಂತರ್ಜ್ಯೋತಿ ಅಣ್ಣ ಬಲ್ಲ, ಮತ್ತು ಅದರ ಹೊಳಪು ತಂಗಿಗೆ ಗೊತ್ತು. ಅಜಗಣ್ಣ ತಂಗಿಗೆ ಯೋಗವನ್ನು ನುಡಿದು ಎಂದೂ ಉಪದೇಶ ಮಾಡಲಿಲ್ಲ. ಮುಕ್ತಾಯಕ್ಕ ಎಂದೂ ಕಿವಿದೆರೆದು ಕೇಳಿ ಕಿವಿಯಲ್ಲಿ ಉಪದೇಶ ಪಡೆದವಳಲ್ಲ! ಅಣ್ಣ ನುಡಿಯ ಅಂಧಕ, ತಂಗಿ ಕಿವಿಯ ಅಂಧಕ. ಅಣ್ಣನ ಉಪದೇಶ ಮೂಗ ಹಾಡಿದ ಮಹಾಕಾವ್ಯ, ತಂಗಿ ಕಂಡುಕೊಂಡುದು ಅಂತರ್ಘೋಷದ ಮಹಾಧ್ವನಿ. ಇಲ್ಲಿ ನಿಮಗೆ ಅನಿಮಿಷ-ಅಲ್ಲಯ್ಯನ ನೆನಪು ಆಗುತ್ತದೆಯಲ್ಲವೇ? ದರ್ಪಣದೊಳಗೆ ಮೂಡಿದ ಸೂರ್ಯನ ಪ್ರತಿಬಿಂಬ, ದರ್ಪಣವಿಲ್ಲದೆ ಮತ್ತೆ ತನ್ನಲ್ಲಿಯೆ ಅಡಗಿದ ಪ್ರತಿಬಿಂಬ[೧]—ಈ ಪಡಿನೆಳಲನ್ನು ಹಿಡಿವರೆ ತೊಗಲಿನ ಕೈಯಿಂದಲ್ಲ. ಲೋಕದ ಕೈ ಮುಟ್ಟಬಾರದ ಈ ಪಡಿಬಿಂಬ ಮುಕ್ತಾಯಕ್ಕನ ಅರಿವಿನ ಹಸ್ತಕ್ಕೆ ನಿಲುಕಿತ್ತು. ಆದರೆ ಶಿವಮಂತ್ರವನ್ನು ಪ್ರಕಟವಾಗಿ ಉಚ್ಚರಿಸಿ ಅಜಗಣ್ಣನ ಮಂತ್ರಸ್ವರೂಪ ಭಿನ್ನವಾಯ್ತು. ಆ ಸ್ವರೂಪದೊಡನೆ ಆತನ ಮಂತ್ರಕರಂಡಕವಾದ ಘಟವೂ ಒಡೆದುಹೋಯ್ತು. ಇನ್ನೇನು ತನಗಾರು ಗತಿ? ಮೃತ್ತಿಕೆಯ ಘಟ ತನ್ನೊಳಗೆ ದೀಪವನ್ನು ಮುಚ್ಚಿಟ್ಟುಕೊಳ್ಳಬಹುದು. ಆದರೆ ಅಂತರ್ದೀಪ್ತಿಯ ನಿತ್ಯಪ್ರಭೆಯಿಂದ, ಸತತ ಪ್ರಭಾವದಿಂದ ಮೃತ್ತಿಕೆಯ ಘಟ ಸ್ಫಟಿಕವಾದರೆ? ದಿವ್ಯದೀಪ್ತಿ ಸ್ಫಟಿಕದ ಮೈಯನ್ನು ಭೇದಿಸಿ ಉಚ್ಚಳಿಸುವಂತೆ 'ಮಿಗೆವರಿದಂತಾದೆ'ಯೋ ಅಜಗಣ್ಣಾ! 'ಆಜೂಢಗೆಟ್ಟೆಯೊ' ಅಜಗಣ್ಣಾ! ಜಂತ್ರದ ಕೀಲಕೂಟದ ಸಂಚದ ಭೇದವು ತಪ್ಪಿ, ಮಂತ್ರ ಭಿನ್ನವಾಗಿ ನುಡಿವರೆ ಅಜಗಣ್ಣಾ? ಅಂತರಂಗದ ಶುದ್ಧಿ ಇಲ್ಲವೆ ಸುದ್ದಿ ದಿಟಪುಟ, ಸತ್ಯ, ನಿಶ್ಚಯ. ಬಹಿರಂಗದ ಬಳಕೆ, ಮಂತ್ರ ಭಿನ್ನವಾಗಿ ಹೊರಗೆ ಸಿಡಿದುದು, ಒಳಗೆ ಪ್ರವೇಶಮಾಡುವಾಗ ಅಜಗಣ್ಣನ ತಲೆಗೆ ಬಾಗಿಲ ಪಟ್ಟಿ ತಾಗಿ ಆತನ 'ಮಂತ್ರಗೋಪ್ಯ' ಓಂ ನಮಃ ಶಿವಾಯ ಎಂದು ಬಾಯಿಂದ ಒಡೆ

---

೧. 'ದರ್ಪಣದೊಳಗಣ ಪ್ರತಿಬಿಂಬ'ವನ್ನು ಕುರಿತು ಪ್ರಭುದೇವರ ವಚನವನ್ನು ನೋಡಿರಿ:

ಎನ್ನಲ್ಲಿ ನಾನು ನಿಜವಾಗಿ ನಿಂದು ನಿಮ್ಮನರಿದಿಹೆನೆಂದರೆ
ಅದು ನಿಮ್ಮ ಮತಕ್ಕೆ ಬಪ್ಪುದೇ?
ಎನ್ನ ನಾನು ಮರೆದು ನಿಮ್ಮನರಿದಡೆ
ಅದು ನಿಮ್ಮ ದೋಷವೆಂಬೆ. [ರೂಪೆಂಬೆ. ಟೀಕು]
ಎನ್ನ ನಿನ್ನೊಳು ಮರೆದರೆ
ಕನ್ನಡಿಯೊಳಗಣ ಪ್ರತಿಬಿಂಬದಂತೆ ಭಿನ್ನವಿಲ್ಲದೆ ಇದ್ದೆನು ಕಾಣಾ ಗುಹೇಶ್ವರಾ.

ಪ್ರ. ವ. ಪು. ೨೦೭, ವ. ೧೧೭.

ನುಡಿದುದು ಶಿವಯೋಗಿಗೆ ಸಲ್ಲ. ಆದರೂ ಆ ಸಲ್ಲದ ಘಟನೆ ಸಂಭವಿಸಿತಾದರೂ ಹೇಗೆ? 'ಅಂತರಂಗದ ಶುದ್ಧಿಯ ಬಹಿರಂಗಕ್ಕೆ ತಂದು ಸಂತೈಸಲಱಿಯದೆ ಮರುಳಾದಿರಣ್ಣಾ'.

'ಮಾಣಿಕ್ಯದ ದೀಪ್ತಿ'ಯಂತಿರುವ ಮುಕ್ತಾಯಕ್ಕನ ನಾಲ್ಕು ಮಾತಿನಲ್ಲಿ ಮಹಾ ಜ್ಞಾನ ಮಿಂಚುತ್ತಿದೆ. ಕಣ್ಣು ಕುಕ್ಕಿಸುವ ಈ ಮಿಂಚಿನ ಬೆಳಗು ಸುಳಿವ ಬೆಳಗು, ಸುಳಿವ ಬಯಲಾದ ಪ್ರಭುವನ್ನು ನಿಬ್ಬೆರಗಿನಲ್ಲಿ ನಿಲ್ಲಿಸುತ್ತದೆ. ಸತ್ಯ ಸದಾಚಾರವಂತರು ಶಿವ ಲಿಂಗೈಕ್ಯರು, ಶಿವಸುಖಿಗಳು ಸ್ವಾನುಭಾವಗಮ್ಯರು ಸಮ್ಯಕ್ ಶರಣರಿದ್ದೆಡೆಗೇ ಚರಿಸುತ್ತಿದ್ದ 'ಗೊಹೇಶ್ವರಲ್ಲಯ್ಯ'ನಿಗೆ ಸ್ಪಷ್ಟವಾಗಿ ಹೊಳೆಯಿತು ಮುಕ್ತಾಯಕ್ಕನ 'ವಿಕಳಾವಸ್ಥೆ'. ಪರವಸ್ತುವಿನಲ್ಲಿ ನೆರೆವ ಭರಭರಾಟಿ, ವಿ-ಯೋಗ ವಿ-ರಹ ಅಂತೆಯೆ ವಿ-ಕಳವಾದ ಅವಸ್ಥೆಯಿಂದ ಕೊಸರಿಕೊಂಡು ಆ ವಸ್ತುವಿನಲ್ಲಿ ಸಂಯೋಗ, ಸಹಿತ, ಸಕಳಕ್ಕಾಗಿ ಒಳ್ಳೆ ರಭಸದಿಂದ ಜಗ್ಗುತ್ತ ಮುಂದೆ ಮುಂದೆ ನುಗ್ಗುತ್ತಿದೆ. ಆದರೆ ಅಕ್ಕನ ವಿಕಳಾವಸ್ಥೆಯಲ್ಲಿ, ನೆರೆವ ಭರದಲ್ಲಿ ಇನ್ನೂ ಏನೋ ಕೊರತೆಯಿದೆ. ಈ ಕೊರತೆ ಹಿಂಗದೆ ನೆರತೆಯು–ಸಂಪೂರ್ಣ ಸಂಯೋಗ, ಸಂಗಮ, ಸಮರಸದ ಸಂಭವವಿಲ್ಲ. ಅಕ್ಕನಿಗೆ ಈ ರಹಸ್ಯ ಹೊಳೆದಿಲ್ಲ. ಅದುಃಹೇಗೆ ಎಂದು ಕೇಳುವಿರಾ?

'ಇಂತು ತನ್ನ ಅಱುವಿನ ಮುಂದೆ ಇದಿರಿಟ್ಟು ತೋಱುವ ಪರವಸ್ತುವಿನಲ್ಲಿ ವಿಕಳಾ-ವಸ್ಥೆಯನ್ನೈದಿ ನೆರೆವ ಭರದಿಂದಿರ್ಪ ಮುಕ್ತಾಯಕ್ಕಗಳನು......'[೧] ಪ್ರಭುದೇವರು ನುಡಿಸಿ ನೋಡುವ ಮಾತಿನ ರೀತಿಯನ್ನು ನೋಡಿ, ಅದೇ ಎತ್ತಿ ತೋರುತ್ತದೆ, ತನ್ನ ತನಗೆ ಇದಿರಿಟ್ಟು ಕೂಡಬೇಕೆನ್ನುವ ವಿಕಳಾವಸ್ಥೆಯ ವೈಕಲ್ಯವನ್ನು.

ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು
ಕಂಗಳ ಮುತ್ತು ಪವಣಿಸುವಾಕೆ ನೀನಾರು ಹೇಳಾ?
ಸಂದ ಸಂಪಗೆಯರಳ ತುಂಬಿ ಬಂದುಂಬ ಭೇದವನಱಿಯದೆ
ಹಂಬಲಿಸುವ ಪರಿತಾಪವೇನು ಹೇಳಾ?
ಒಂದೆಂಬೆನೆ? ಎರಡಾಗಿದೆ. ಎರಡೆಂಬೆನೆ? ಒಂದಾಗಿದೆ.
ಅಱಿವಿನೊಳಗಣ ಮಱಹಿದೇನು ಹೇಳಾ?
ದುಃಖವಿಲ್ಲದ ಅಕ್ಕೆ, ಅಕ್ಕೆ ಇಲ್ಲದ ಅನುತಾಪ
ನಮ್ಮ ಗೊಹೇಶ್ವರಲಿಂಗದಲ್ಲಿ ತೋಱುತ್ತಿದೆ.
ನೀನಾರೆಂದು ಹೇಳಾ ಎಲೆ ಅವ್ವಾ?

ಪ್ರಭುದೇವರು ಮುಕ್ತಾಯಕ್ಕನಿಗೆ ಕೇಳುವ ಈ ಪ್ರಶ್ನೆಯಲ್ಲಿ ಲೋಕಾರ್ಥ ಮತ್ತು ಪರಮಾರ್ಥ ಹೆಣೆದುಕೊಂಡಿವೆ.–ಪುಷ್ಪದಲ್ಲಿ ಪರಿಮಳ ನೆಯ್ದಿರುವಂತೆ. ನೀನಾರು? ನಿನ್ನ ಹೆಸರೇನು? ಕಂಬನಿಗರೆವ ಕಾರಣವೇನು? ಎಂದು ಮುಂತಾಗಿ ಲೋಕ ಲೋಕಕ್ಕೆ ಕೇಳುವ ಸಾಮಾನ್ಯ ಪ್ರಶ್ನೆ. ಈ ಮಾತಿನಲ್ಲಿ ತರಂಗಗೊಳ್ಳುವ ಧ್ವನಿಪ್ರಶ್ನೆ ಮತ್ತೆ ಬೇರೆ.

---

೧. ಶೂ. ಸಂ. ಮ. ೨೪, ಪ್ರ. ೫.

'ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು...'[೧]—ಅಂದರೇನು? ಇದರ ಬೆಡಗಿನ ಅರ್ಥವನ್ನು ವಚನದ ಹಿಂದಿನ ಗದ್ಯಭಾಗದಲ್ಲಿ ಮೊದಲೇ ಬಿಚ್ಚಿ ತೋರಿಸಿದ್ದಾರೆ ಸಿದ್ಧವೀರದೇವರು. ಅಕ್ಕನ ಅರಿವಿನ ಮುಂದೆ ಇದಿರಿಟ್ಟು ತೋರುವ ಪರವಸ್ತುವೇ 'ಅರಳ್ದ ತಲೆ'.[೨] ತಲೆ ಎಂದರೆ ದ್ವೈತಬುದ್ಧಿಯ ಭಿನ್ನಜ್ಞಾನ. ಕರತಲದ ಆಮಲಕದಂತೆ ಅಕ್ಕ ಧರಿಸಿರುವ ಈ ಅರಿವು ಅರಳಿ ಹೂವಾಗಿ ಪರವಸ್ತುವಿನ ಪರಿಮಳವನ್ನು ಸರ್ವವ್ಯಾಪಿಯಾಗಿ ಸೂಸುತ್ತಿದೆ. ಈ ಮಾತು ನಿಜ. ಆದರೆ ಈ ಹೂವನ್ನು ನೋಡುತ್ತಿರುವ ಕಂಗಳು, ಅರಿವಿನ ಕಂಗಳು, ಜ್ಞಾನದೃಷ್ಟಿ–ಅದು ಏನು? ಅರಿವ ಅರಿವುಗಣ್ಣು, ಅರುಹಿಸಿಕೊಳ್ಳುವ ಪರವಸ್ತುವೆಂಬ ಅರಿವುಹೂವು—ಇವು ದೃಷ್ಟಿ–ದೃಶ್ಯ, ತಾನು–ಇದಿರು ಒಂದೇ ಅರಿವಿನ ಅಖಂಡಿತ ಖಂಡಗಳೇ. ಈ ಒಂದು ಒಂದೆಂದರೆ ಎರಡಾಗಿದೆ–ಕಣ್ಣು ಹೂವಾಗಿದೆ. ಈ ಎರಡು ಎರಡು ಎಂದು ಬೇರಿರಿಸಹೋದರೆ ಒಂದಾಗಿದೆ—ಒಂದೆ ವಸ್ತುವಾಗಿದೆ ಒಂದೆ ಅರಿವಾಗಿದೆ, ಚಿದಖಂಡ ರೂಪವಾಗಿದೆ. ಹಿಗಿದ್ದು ಜ್ಞಾನದೃಷ್ಟಿಯಲ್ಲಿ ಪರವಸ್ತುವನ್ನು ಇದಿರಿಟ್ಟು ನೋಡಿ 'ಮುತ್ತು ಪವಣಿಸು'ವುದು ಮುಕ್ತಿಯನ್ನು ಹಡೆವೆನೆಂಬುದು 'ಅಱಿವಿನೊಳಗಣ ಮಱಹು'. ಇದೇ ಜ್ಞಾನದೃಷ್ಟಿಯ ಅಜ್ಞಾನದರ್ಶನ.

ಮತ್ತೆ ವ್ಯರ್ಥಕ್ಕೆ ಅತ್ತರೆ ಬಂತೇನು? ಲೋಕಕ್ಕೆ ದುಃಖ, ರೋದನ, ಅನುತಾಪ—ಇದು ಲೋಕಧರ್ಮ. ಆದರೆ ಗೊಹೇಶ್ವರಲಿಂಗದಲ್ಲಿದ್ದು, ಲಿಂಗಲೋಕದಲ್ಲಿದ್ದು ಸಂತಾಪ ಅನುತಾಪಕ್ಕೆ ಎಡೆ ಎಲ್ಲಿದೆ? ನೀನಾರು? ಸತ್ತ ಅಜಗಣ್ಣನಾರು? ಕಣ್ಣು ಮುಚ್ಚಿ ಕಂಡ ಕನ್ನಡಿಯ ಯೋಗ ಎಂಥದು? 'ಸಂದ ಸಂಪಗೆಯರಳ ತುಂಬಿ ಬಂದುಂಬ ಭೇದ'ವನ್ನು ಅಜಗಣ್ಣನ ಯೋಗ ನಿನಗೆ ತೋರಿಸಲಿಲ್ಲವೇ? ಭ್ರಮರ ಸಂಪಗೆಯ ಹೂವಿಗೆರಗಿ ಕಂಪುಕುಡಿದು ಪರವಶವಾದ ಭೇದ—ಅದು ಯೋಗ, ನಿಜಯೋಗ, ಪೂರ್ಣಯೋಗ,[೩] ಒಂದು ಎರಡರ ಸಂಧಿಯಲ್ಲಿ ನಿಂದು ಬೆಳಗು ಕತ್ತಲೆಯೆಂಬ ಸಂದೇಹದಲ್ಲಿರುವ 'ನೀನು ಯಾರು' ಎಲೆ ತಾಯೆ?

---

೧. ಶಿವಮಂತ್ರ ಬೀಸರವಾಯ್ತೆಂದು ದೇಹಬಿಟ್ಟ ಅಜಗಣ್ಣನ ತಲೆಯನ್ನು ಮುಕ್ತಾಯಕ್ಕ ಕೈಯಲ್ಲಿ ಇಟ್ಟುಕೊಂಡು ಕಂಬನಿಗರೆಯುತ್ತಿದ್ದಳೆ?—ಎಂಬ ಪ್ರಶ್ನೆ ವಿಚಾರಾರ್ಹ.

೨. ತಲೆ ಎಂದರೆ ಜ್ಞಾನ, ಭಿನ್ನಜ್ಞಾನ, ಪರಿಪೂರ್ಣ, ಅನಂತ ಅಖಂಡವಾಗಿರುವ ಸತ್ಯಜ್ಞಾನ ಸ್ವರೂಪವಾದ ಪರವಸ್ತುವನ್ನು ತನ್ನಿಂದ ಅನ್ಯವೆಂದು, ಭಿನ್ನವೆಂದು ತನಗೆ ಇದಿರಿಟ್ಟು ನೋಡುವ ತತ್ತ್ವಜ್ಞಾನಿಯ ಖಂಡಿತವಾದ ಅರಿವು. ಬೆಡಗಿನ ವಚನಗಳನ್ನು ನೋದಿದರೆ ಈ ಮಾತು ತಾನೇ ವೇದ್ಯವಾಗುತ್ತದೆ.

೩. ಇಲ್ಲಿ ಷಣ್ಮುಖ ಸ್ವಾಮಿಗಳ ಮಾತನ್ನು ಹೋಲಿಸಿ ನೋಡಿ:

. . . .

. . . .

ಇಂತೀ ನಾನಾ ತೆರದಿಂದಾಗುವ ನಿಮ್ಮ ಓಲಗದ ಒಡ್ಡವಣೆಯ ಕಂಡು
ಹೋದುದ ಬಂದುದನರಿಯದೆ,
ಸಂಪಿಗೆಯ ಪುಷ್ಪಕ್ಕೆರಗಿದ ಭ್ರುಮರನಂತೆ
ನಿಮ್ಮೊಳಗೆ ಪರವಶವಾಗಿರ್ದೆನಯ್ಯಾ ಅಖಂಡೇಶ್ವರಾ.

ಅಖಂ. ವ. ಪು. ೧೭೧-೨, ವ. ೪೭.

'ನೀನಾರು?'—ಎಂಬ ಪ್ರಶ್ನೆಯಲ್ಲಿ, ಪ್ರಶ್ನೆ ಕೇಳುವ ವ್ಯಕ್ತಿಯಲ್ಲಿ, ಆತನ ಮಾತಿನ ರೀತಿಯಲ್ಲಿ ದೀಪಿಸುವ ದಿವ್ಯಾರ್ಥದ ಪದರನ್ನು ಕಾಣುತ್ತಾಳೆ ಮುಕ್ತಾಯಕ್ಕ. ಯಾರು ನಾನು? ನಾನು ಅಜಗಣ್ಣನ ತಂಗಿ. ಯಾರು ಅಜಗಣ್ಣ? ಮುಕ್ತಾಯಕ್ಕ—ನನ್ನ ಅಣ್ಣ. ಪ್ರಶ್ನೆಗೆ ಇಷ್ಟೇ ಉತ್ತರವಲ್ಲ. ಅದು ಇನ್ನೇನೋ ಮಹತ್ತರ ಉತ್ತರವನ್ನು ಬಯಸುತ್ತಿದೆ. ಆಕಾಶದ ಅಗಲ ಎಷ್ಟು ಎಂದು ಕೇಳಿದರೆ ತೋಳನ್ನು ತೆರೆದು ನಿಮುರಿ ನಿಂತರೆ ಉತ್ತರ ಮುಗಿಯಲಿಲ್ಲ. ಇದನ್ನು ಸ್ಪಷ್ಟವಾಗಿ ಕಂಡು ಮುಕ್ತಾಯಕ್ಕ ಪ್ರಶ್ನೆಯ ಧಾಟಿಯಲ್ಲಿಯೆ ಉತ್ತರ ಕೊಡುತ್ತಾಳೆ ಕೇಳಿ:

ಆರೆಂದು ಕುಱುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ; ಭಾವದೊಳಗೆ ಭ್ರಮೆಯಿಲ್ಲ.
ಕರೆದು ಬೆಸಗೊಂಬರೆ ಕುಱುಹಿಲ್ಲ.
ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು ದುರ್ಬುದ್ಧಿಯಾದವಳನೇನೆಂಬೆನಣ್ಣಾ !
ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣತಂದೆಯ ಬೆನ್ನ ಬಳಿಯವಳಾನಯ್ಯಾ.[೧]

ತಂದೆಗೆ ಹುಟ್ಟಿ ತಾಯಿಯ ಗರ್ಭದಿಂದೊಗೆದರೆ ಕಾಯ ಉಂಟು, ಜೀವವುಂಟು, ಭಾವವುಂಟು. ಕಾಯ ಜೀವ ಭಾವವಿದ್ದರೆ ಗುಣಧರ್ಮ ಕರ್ಮ ಉಂಟು. ನಾಮರೂಪಕ್ರಿಯೆ ಉಂಟು. ಇಂಥ ಜನಿತದಲ್ಲಿ ಬಂದ ಮಾನವಮೂರ್ತಿಗೆ ಕುರುಹು ಇದೆ ಮತ್ತು ಅದಕ್ಕೆ ಅನ್ವರ್ಥಕವಾದ ರೂಢವಾದ ಇಲ್ಲವೆ ತಂದೆ-ತಾಯಿ ಕೊಟ್ಟು ಅಂಕಿತವಾದ ಒಂದು ಹೆಸರಿದೆ. ಗುಣ ಧರ್ಮ ರೂಪ ಲಕ್ಷಣ ಸುಜ್ಞೆಯುಳ್ಳ ಈ ಮೂರ್ತಿಗೆ ಕಾಯ ಅಥವಾ ದೇಹ ನಾನು, ನನ್ನದು, ಕಾಯದ ಗಾತ್ರ ನನ್ನ ಗಾತ್ರ, ದೇಹದ ಗುಣ ಧರ್ಮ ಕರ್ಮ ನನ್ನವು, ಅಷ್ಟೇ ಏಕೆ ಅವೇ ನಾನು, ಕೈಕಾಲು ತಲೆ ಮೂಗು ನನ್ನ ಕುಳುಹು, ನಾನು. ಅಂಕಿತವಾದ ಹೆಸರು ನನ್ನದು, ಅಂದರೆ ಮುಕ್ತಾಯಕ್ಕ ನಾನು. ಹೀಗೆ ಕಾಯದ ಸೀಮೆಯಲ್ಲಿ, ಕಾಯಕ್ಕೆ ಸೀಮಿತವಾಗಿ ಇರಿಸಿರುವ ಮಾಯೆ, ಮಾಯಾಶಕ್ತಿ ಕಾಯದಲ್ಲಿ ಉಳಿದಿಲ್ಲ. ದೇಹಪ್ರಾಣದಲ್ಲಿ ಗಟ್ಟಿಯಾಗಿ ಬೇರೂರಿಕೊಂಡು ದೇಹಪ್ರಾಣಾದಿಗಳ ಗುಣಧರ್ಮಕ್ಕೆ ಒಳಗಾಗಿ ಅವು ಸೆಳೆದತ್ತ ತೊಳಲಿ ಬಳಲುವ ಭಾವದ ಭ್ರಾಂತಿ ಭಾವದಲ್ಲಿ ಉಳಿದಿಲ್ಲ. ನನ್ನನ್ನು ನಿಜವಾಗಿ ಆಳವಾಗಿ ನೋಡಿದರೆ ದೇಹದ ಪ್ರಾಣದ ಭಾವದ ಯಾವ ಕುರುಹು, 'ಗುರುತು ಕೂನು' ಆಕಾರ ಲಕ್ಷಣ ಚಿಹ್ನ ಇಲ್ಲ. ಕುರುಹಿದ್ದರೆ ಹೆಸರು, ಇಲ್ಲದೆ ಏನು ಹೆಸರು? ಹೆಸರಿಲ್ಲದ ನಾನು ಯಾರು? ತಂದೆ ಇಲ್ಲ, ತಾಯಿ ಇಲ್ಲ. ಅನಾದಿ ಪರಶಿವ ಶಕ್ತಿ, ಚಿತ್‌ಶಕ್ತಿಯಿಂದ 'ಅನಾದಿ'ಯಾಗಿ ಇರುವ ಅರಿವು 'ದುರ್ಬುದ್ಧಿ'ಯಾಗಿ ಕೆಟ್ಟು ಇನ್ನೂ 'ನಾನು' ಆಗಿ, ಕತ್ತಲೆ ಬೆಳಗಿನ ಸಂಧಿಯಲ್ಲಿ ಸಿಕ್ಕುಬಿದ್ದಿದೆ. ಅಣ್ಣ ಅಜಗಣ್ಣನಿದ್ದರೆ ಈ ಹಾಡು ಆಗುತ್ತಿರಲಿಲ್ಲ. ಕತ್ತಲೆಯ ಮಾತೇ ಉಳಿಯುತ್ತಿದ್ದಿಲ್ಲ. ಅದೇಕೆ ಎಂದು ಕೇಳುವಿರಾ? ಅಜಗಣ್ಣ ಲೋಕಲೌಕಿಕದ ಅಣ್ಣಂದಿರಂತಲ್ಲ. ಆತ 'ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ'. ಈ ಜ್ಯೋತಿ, ಏಕಮೇವಾದ್ವಿತೀಯವಾದ ಈ ಪರಂಜ್ಯೋತಿ ತಲೆ

೧. ಶೂ. ಸಂ. ಪು. ೨೫. ವ. ೬.

ಇಲ್ಲದೆ, ವೃತ್ತಿಜ್ಞಾನ ಭಿನ್ನಜ್ಞಾನ ತಾನು ತನಗಿದಿರು ಎಂಬ ದ್ವೈತಭಾವ ಭಿನ್ನಭಾವ ವಿಲ್ಲದೆ ಬೆಳಗುತ್ತಿತ್ತು. ಈ ಜ್ಯೋತಿಗೆ ಅಲ್ಲಿ ಇಲ್ಲಿ ಎಡ ಬಲ ಮೇಲೆ ಕೆಳಗೆ ಹತ್ತು ದಿಕ್ಕು ಹದಿನಾಲ್ಕು ಭುವನ ಎಂದು ಒಂದೆಡೆ ನೆಲಸಿಕೊಂಡು ನಿಂತಿರುವ ನೆಲೆ ಎಂಬುದು 'ನಿರ್ನೆಲೆ'ಯಾಗಿ ಬೆಳಗುತ್ತಿತ್ತು. ಹೀಗೆ ಬೆಳಗುವ ಜ್ಯೋತಿಯ ಬೆನ್ನ ಬಳಿಯವಳು ನಾನು. ಆದರೂ ಸೂರ್ಯನ ಅರಮನೆಯಲ್ಲಿದ್ದು ಜ್ಯೋತಿಯನ್ನು ಹುಡುಕುವ ಲೆಕ್ಕ ನನ್ನದಾಗಿದೆ. ಬೆಳಗುವ ಜ್ಯೋತಿ ಕಣ್ಮರೆಯಾಯ್ತು. ಅಜಗಣ್ಣನಿದ್ದರೆ......

ಮುಕ್ತಾಯಕ್ಕನ ಮಾತು ತಾನಾರೆಂಬ ಆಕೆಯ ಕುರುಹನ್ನು ಹೇಳಿತು. ಅಲ್ಲದೆ ಸಿದ್ಧವೀರದೇವರು ತಿಳಿಸುವಂತೆ ಪ್ರಭುವಿಗೆ 'ಅಜಗಣ್ಣದೇವರ ನಿಜವ'ನರುಹಿತು. 'ಕಾಣದುದ ಕಂಡೆ...' ಎಂದು ಮುಂತಾಗಿ ಪ್ರಭುದೇವರು ಹಾಡುವ ವಚನ ಅಜಗಣ್ಣ ನೆಂದರೆ ದೇವರು, ಕಾಣಲು ಬಾರದ ಕೇಳಲಿಕ್ಕೆ ಬಾರದ ಮುಟ್ಟಬಾರದ ಅಸಾಧ್ಯ ಅಜಗಣ್ಣ ಎಂದು ಭಿತ್ತಿಯಿಲ್ಲದ ದಿವ್ಯಚಿತ್ರವನ್ನು ರಾಗಿಸುತ್ತದೆ. ಈ ಅಸಾಧ್ಯವನ್ನು ಸಾಧಿಸಿ ಕಂಡು ಕೇಳಿ ಮುಟ್ಟಿ 'ಶರಣೆಂದು ಬದುಕಿದೆನು' ಎಂದು ಅಜಗಣ್ಣನ ನಿಜದ ನಿಲವಿಗೆ ಪ್ರಭುದೇವ ಮಣಿದು ಆನಂದವಾದ.

'ನೀನಾರು'–ಎಂದು ತನ್ನ ಕುರುಹು ಕೇಳಿದ ವ್ಯಕ್ತಿ ಅಣ್ಣನ ನಿಜಸ್ಥಿತಿಯನ್ನು ಗುರುತಿಸಬಲ್ಲ, ಆತನ ಗಂಭೀರವನ್ನು ಪ್ರಮಾಣಿಸಬಲ್ಲ. ತನ್ನಿದಿರು ನಿಂತಿರುವ ಮೂರ್ತಿ ಅಪೂರ್ವವಾಗಿ ಅಸಾಮಾನ್ಯವಾಗಿ ತೋರುತ್ತದೆ ಮುಕ್ತಾಯಿಗೆ. ಈತನಾರು? ಜಂಗಮ ಲಿಂಗವೆ ದೇಹ, ಆ ಲಿಂಗವೆ ಪ್ರಾಣವಾಗಿರುವ ಶರಣರನ್ನು ತನ್ನೊಳಗೆ ಕೊಂಡು ಒಂದಾ ಗಿರುವ 'ಚಿದ್‌ಘನದೊಳಗೆ ಅವಿರಳೈಕ್ಯವಾದ ಎನ್ನ ಅಜಗಣ್ಣ ತಂದೆಯನಱಿದು ಶರ-ಣೆಂಬಾತ ನೀನಾರು ಹೇಳಯ್ಯಾ?'

ಪ್ರಭುದೇವರ ಪ್ರಶ್ನೆಯ ಪ್ರತಿಧ್ವನಿ ಅಕ್ಕಗಳ ಈ ಪ್ರಶ್ನೆ. ಅಷ್ಟೇ ಗಡುಚಾಗಿದೆ. ಅಜಗಣ್ಣತಂದೆಯ ಘನಗಂಭೀರವನ್ನು ಕಂಡು ಆ ಗಂಭೀರಕ್ಕೆ ಶರಣೆಂದು ಘನಗಂಭೀರ ವಾಗಿ ಬದುಕಿ ಇರುವ ನೀನಾರು? ಪ್ರಶ್ನೆ ಗಡುಚು ಕಠಿಣ, ತೊಡಕು ತೋರಿದರೆ ಯಾವಾಗ? ಯಾರಿಗೆ? ಬುದ್ಧಿ ಭಾವ ಅನುಭವದ ಕೊರತೆ ಇದ್ದಾಗ, ಮರವೆಯ ಮೋಹರದಲ್ಲಿ ಕಂಗಾಣದೆ ಕೈಯಾಡಿಸುತ್ತಿರುವ ಅಲ್ಪರಿಗೆ. ಪ್ರಭುದೇವರ ವಿಷಯದಲ್ಲಿ ಈ ಪ್ರಶ್ನೆ 'ಕದ ತಿಂದವರಿಗೆ ಹಪ್ಪಳ ಏನು ಈಡು?' ಹೀನೋಪಮೆ ಇದು. ಅಡ್ಡಿಯಿಲ್ಲ. 'ಗಗನಸ್ಥಾನವೆ ಕಂಥೆ'ಯಾಗಿ, 'ಆಕಾಶವೆ ಕೊಪ್ಪರ'ವಾಗಿ, 'ಮಹಾಜ್ಞಾನವೆ ತಾನಾಗಿ ನಿಂದ ನಿಜಪದ ಸ್ಥಲವೆ ಸ್ಥಲವಾಗಿ' 'ಸುಜ್ಞಾನಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಮಹಾಮಹಿಮ'[೧] ಅಲ್ಲಮಪ್ರಭುವಿಗೆ ಗಡುಚು ಕಠಿಣ ಅಂದರೇನು? ಸ್ವಾನುಭಾವದ ಅನಾದಿ 'ನಾನು' ಚಿದ್ ಗಂಭೀರದ ಮಹಾಪೂರವಾಗಿ ಪ್ರಶಾಂತಲಲಿತವಾಗಿ ಪ್ರಭುವಿನ ಬ್ರಹ್ಮಗೀತದೊಳಗಿಂದೆ ಹರಿವ ಭವ್ಯ ನಾನಿನ ನಿಜಸ್ವರೂಪವನ್ನು ಸಾವಧಾನವಾಗಿ ಪರ್ಯಾಲೋಕಿಸಿ:

ಶರಣು ಶರಣಾರ್ಥಿ ಎಲೆ ತಾಯೆ.
ಧರೆಯಾಕಾಶ ಮನೆಗಟ್ಟದಂದು,

೧. ಶೂ. ಸಂ. ಪು. ೨೧, ವ. ೭೫.

ಹರಿವನಿಲ ಅಗ್ನಿ ಜಲ ಮೊಳೆದೋಱದಂದು ಹುಟ್ಟಿದಳೆಮ್ಮವ್ವೆ.
ಅದಕ್ಕೆ ಮುನ್ನವೆ ಹುಟ್ಟವೆ ಬೆಳೆದನೆಮ್ಮಯ್ಯ.
ಈ ಇಬ್ಬರ ಬಸುಱಲ್ಲಿ ಬಂದೆ ನಾನು.
ಎಮ್ಮ ತಂಗಿಯರೈವರು ಮೊಱಗೆಟ್ಟು ಹೆಂಡಿರಾದರೆನಗೆ.
ಕಾಮಬಾಣ ತಾಗದೆ ಅವರ ಸಂಗವ ಮಾಡಿದೆನು.
ನಾ ನಿಮ್ಮ ಭಾವನಲ್ಲಯ್ಯನು; ನೀನೆನಗೆ ನಗೆವೆಣ್ಣು.
ನಮ್ಮ ಗೊಹೇಶ್ವರನ ಕೈವಿಡಿದು ಪರಮಸುಖಿಯಾಗಿ
ಕಳವಳ ಕಂದೆಱವಿಯೇನು ಹೇಳಾ?[೧]

ಭೂಮಿಯೆ ನೆಲಗಟ್ಟು, ಆಕಾಶವೆ ಮಾಳಿಗೆ, ಹತ್ತು ದಿಕ್ಕಿನ ಗೋಡೆಯಿಂದ ವಿಶ್ವ ಬ್ರಹ್ಮಾಂಡದ ಮಹಾಮನೆ ಇನ್ನೂ ಕಟ್ಟಿರಲಿಲ್ಲ. ಗಾಳಿ ಬೆಂಕಿ ನೀರು ಇಲ್ಲಿ ಇನ್ನೂ ಮೊಳಕೆ ಯೊಡೆದಿರಲಿಲ್ಲ. ಆಗ ಹುಟ್ಟಿದಳು ನಮ್ಮ ತಾಯಿ, ಆದಿಶಕ್ತಿ, ಪರಾಶಕ್ತಿ ಎನಿಸಿಕೊಳ್ಳುವ ಚಿತ್‌ಶಕ್ತಿ. ಈ ಜಗದಂಬಿಕೆ, 'ಮದಂಬಿಕೆ' ಹುಟ್ಟದ ಮುನ್ನವೆ ತಂದೆ-ತಾಯಿಯಿಲ್ಲದೆ ತನಗೆ ತಾನೆ ಸ್ವಯಂಭುವಾಗಿ ಮೂಡಿ ಮೂರ್ತಿಗೊಂಡ ನಮ್ಮ ತಂದೆ, ನಿಷ್ಕಲ ಪರಶಿವ ಲಿಂಗ. ಈ ಶಿವಶಕ್ತಿಯರ ಸಂಪುಟದ ಗರ್ಭದಿಂದೊಗೆದೆ ನಾನು ಅಂದರೆ ತಾನು ಅಥವಾ ಆತ್ಮ ಅಥವಾ ಶರಣ.[೨] ಈ ನನ್ನ ತರುವಾಯ ಹುಟ್ಟಿದ ತಂಗಿಯರು ನೆಲ ನೀರು ಬೆಂಕಿ ಗಾಳಿ ಬಯಲೆಯರು. ಈ ಐವರ ಕೂಡ ಕಾಮವಿಲ್ಲದೆ ಪ್ರಪಂಚಮಾಡಿದ ಅಲ್ಲಯ್ಯ

---

೧. ಶೂ. ಸಂ. ಪು. ೨೫-೨೬ ವ. ೯.

೨. ಇಲ್ಲಿ ನೋಡಿರಿ:

1. ಶಿವಶಕ್ತಿಸಂಪುಟವೆಂಬುದೆಂತು ಹೇಳಿರಣ್ಣಾ !
ಶಿವನೆ ಚೈತನ್ಯಾತ್ಮಕನು. ಶಕ್ತಿಯೆ ಚಿತ್ತು.
ಇಂತೀ ಚೈತನ್ಯಾತ್ಮಕನೆ ಚಿತ್‌ಸ್ವರೂಪನಾದ,
ಆತನೆ ಶರಣ ಗೊಹೇಶ್ವರಾ[ರ?].

ಲಿಂ. ಲೀ. ವಿ. ಚಾ. ಪು. ೩೧, ವ ೩.

2. ಏನೆಂದೆನಲಿಲ್ಲದ ಮಹಾಘನವು
ತನ್ನ ಲೀಲೆಯಿಂದ ತಾನೇ ಸ್ವಯಂಭುಲಿಂಗವಾಯಿತ್ತು.
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ.
ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ.
ಆತ್ಮನಿಂದಾದುದು ಆಕಾಶ. ಆಕಾಶದಿಂದಾದುದು ವಾಯು.
ವಾಯುವಿನಿಂದಾದುದು ಅಗ್ನಿ. ಅಗ್ನಿಯಿಂದಾದುದು ಅಪ್ಪು.
ಅಪ್ಪುವಿನಿಂದಾದುದು ಪೃಥ್ವಿ. ಪೃಥ್ವಿಯಿಂದಾದುದು ಸಕಲ ಜೀವವೆಲ್ಲಾ.
ಇವೆಲ್ಲಾ ನಿಮ್ಮ ನೆನಹು ಮಾತ್ರದಿಂದಾದುವು ಚಿಮ್ಮಲಿಗೆಯ ಚೆನ್ನರಾಮಾ.

ಲಿಂ. ಲೀ. ವಿ. ಚಾ. ಪು. ೩೮, ವ. ೧೩.

ನಾನು.[೧] ಏನೂ ಅಲ್ಲದ, ಯಾವ ಕುರುಹೂ ಹೆಸರೂ ಅಲ್ಲದ ಅಲ್ಲಯ್ಯ ನಾನು ನಿನ್ನ ಭಾವ, ನಿನ್ನ ನಿಜಭಾವ, ನಿಜಸ್ವರೂಪ, ನಿಜದಿರವು. ನೀನು ನನಗೆ ನಗೆವೆಣ್ಣು, ಲೀಲಾ ವಿಲಾಸಿನಿ, ದಿವ್ಯಲೀಲೆ. 'ಗೊಹೇಶ್ವರ'ನ ಕೈಹಿಡಿದು ಪರಮಾನಂದವಾಗಿರಬೇಕಾದ ನಿನ್ನ ಮನದಲ್ಲಿ ಕಳವಳ ತಲೆದೋರಿದ ಪರಿ ಏನು?

ಪ್ರಭುದೇವರ ಮಾತು ಮುಕ್ತಾಯಕ್ಕನ ಕಿವಿಯನ್ನು ಬೇಟಗೊಳಿಸುತ್ತದೆ. ಆಕೆಯ ಅಂತರಂಗ ಬಯಸುವ ದಿವ್ಯಸುಖ ಮೂರ್ತಿಗೊಂಡು ಕಣ್ಣಮುಂದೆ ಕಟ್ಟಿದಂತಾಗುತ್ತದೆ. ಮಾತಾಡುವ ಮೂರ್ತಿಯಲ್ಲಿ ಅಜಗಣ್ಣನ ಹೊಳಹು, ನಿಜಶರಣನ ಹೋಲಿಕೆ ಇದೆ. ದರ್ಶನದ ಸುಖ ಉಪಮೆಯಾಚೆ ನಿಂದಿದೆ. ಅಣ್ಣನ ಮರಣ ತಂದೊಡ್ಡಿದ ವಿಯೋಗ ದುಃಖ ಮಾದು ಎಲ್ಲ ನೆಟ್ಟಗಾಗುವ ಲಕ್ಷಣ ಸನ್ನಿಹಿತವಾಗಿದೆ. 'ಮುದವಳಿದು ಮುಹವ ನೊಡಗೂಡಿದ ಎನ್ನ ಅಜಗಣ್ಣನಗಲಿದ ದುಃಖ ನಿಮ್ಮ ಸಂಗದಲ್ಲಿ ಸಯವಾಯಿತ್ತು ಕಾಣಾ ಪ್ರಭುವೆ'.

ಅಜಗಣ್ಣ ಅಳಿದ, ಅಗಲಿದ, ಅದೇ ತನ್ನ ದುಃಖಕ್ಕೆ ಕಾರಣ ಎಂಬ ಅಕ್ಕನ ಮಾತು ಸತ್ಯಾರ್ಥವಲ್ಲ, ತಥ್ಯ ಸಂಗತಿಯಲ್ಲ. ಪ್ರಭುದೇವ ನೋಡುವಂತೆ, ತಂಗಿಗೆ ಅಣ್ಣನ ನಿತ್ಯಾ ಮೃತದ ನಿಲವು ಕಾಣಲಿಲ್ಲ. 'ಒಡಲಿಲ್ಲದಾತಂಗೆ ಎಡೆಯಲೊಂದು ಅಳಿವುಂಟೆಂದು ನುಡಿದು ಹೇಳುವ ಮಾತು ಭ್ರಾಂತು ನೋಡಾ !' ವಿಶ್ವಹೃದಯದ ಒಳಗು ತಾನು, ವಿಶ್ವ ರೂಪದ ಹೊರಗು ತಾನು. ಅಜಗಣ್ಣ ಈ ತನ್ನ ಗಂಭೀರ ನಿಜದಲ್ಲಿ ತದ್ಗತವಾಗಿ, ತಲ್ಲೀಯ ವಾಗಿ, ಸಮರಸವಾಗಿ ಏಕೈಕವಾಗಿ ನಿಂದ ಮಹಿಮ. ತೆರಹಿಲ್ಲದ ಅರಿವಿನ ಬೆಳಗು–ಬಯ ಲಾದ ಅಜಗಣ್ಣನ ಅರಿವು ಒಣಗಿ ಹೋದ ಅರಿವು. ನಾನೆಂಬ ಅರಿವಿಗೆ ಇದಿರಾಗಿ, ಬೇರಾಗಿ ನೀನು ಅವನು ಅದು ಇದು ನಿಂತಿದ್ದರೆ ಅರಿವಿಗೆ ಅರಿವ ಕೆಲಸ ನಡೆಸಲು ಅವಕಾಶವಿದೆ. ಆದರೆ ಏನೆಲ್ಲ ತಾನಾಗಿ, ಪರಿಪೂರ್ಣವಾಗಿ ನಿಂತ ಅರಿವಿಗೆ ಉಳಿದಿರುವ ಕೆಲಸವೇನು? ಕೆಲಸಕ್ಕೆ ಅವಕಾಶವೆಲ್ಲಿ? ವಿಶ್ವಬ್ರಹ್ಮಾಂಡಗಳಿಗೆ ಅವಕಾಶಕೊಡುವ ಆಕಾಶಕ್ಕೆ ಅವಕಾಶದ ಪ್ರಶ್ನೆಯೆ ಇಲ್ಲ. ಅದು ಹರಿದಾಡಿ ಅವಕಾಶ ಕಲ್ಪಿಸಿಕೊಳ್ಳುವ ಪ್ರಶ್ನೆಯೆ ಇಲ್ಲ. ಆಕಾಶಕ್ಕೆ ಮತ್ತೆ ಬೇರೆ ಅವಕಾಶವಿಲ್ಲ; ಅವಕಾಶಕ್ಕೆ ಮತ್ತೆ ಬೇರೆ ಆಕಾಶವಿಲ್ಲ. ಹೀಗೆ, ಅರಿದೆ ಮರೆದೆ ನೆಂಬುದಕ್ಕೆ ತೆರಹೇ ಇಲ್ಲದ ಬಯಲು–ಅಜಗಣ್ಣ ಒಡಲನ್ನು ತೊಟ್ಟುಕೊಂಡಂತೆ ನಿನಗೆ

---

೧. '....ಎಮ್ಮ ತಂಗಿಯರೈವರು ಮೊಱೆಗೆಟ್ಟು ಹೆಂಡಿರಾದರೆನಗೆ. ಕಾಮಬಾಣ ತಾಗದೆ ಅವರ ಸಂಗವ ಮಾಡಿದೆನು....' ಇದಕ್ಕೆ ಸರಿಸಮನಾದ ವಿಚಾರ ಭೋಗಣ್ಣನವರ ವಚನದಲ್ಲಿ ಬಂದಿದೆ ನೋಡಿ:

'....ಮೊರೆಗೆಟ್ಟು ಒಡಹುಟ್ಟಿದರೈವರ ಹಾದರ ಮಾಡಿ....'

ಇದಕ್ಕೆ ಸಿಂಗಳದ ಸಿದ್ಧಬಸವರಾಜದೇವರ ಟೀಕು ಹೀಗಿದೆ:

'....ಇಂತೀ ಪರಮಜ್ಞಾನಾರೂಢನಾದ ಶರಣನು ತನ್ನ ಸಹಜನ್ಮಿಗಳಾದ ಪಂಚಶಕ್ತಿಯರ ಉಭಯಭಾವದ ನೀತಿಯಳಿದು ಕೈವಿಡಿದು ಪರಮ ಶಿವರತಿಸಂಯೋಗಾನುಭಾವದಿಂದಿರಲು ....'

ಬೆ. ವ. ಪು. ೩೭೩-೩೭೪, ವ. ೯.

ತೋರಿದುದು ನಿಜ. ಆದರೆ ಒಡಲು-ಅಜಗಣ್ಣ ನಿಜ-ಅಜಗಣ್ಣನಲ್ಲ. ಒಡಲು ಕಳಚಿದರೆ ನಿಜಅಜಗಣ್ಣ ಅಳಿಯಲಿಲ್ಲ. ಗಡಿಗೆ ಒಡೆಯಬಹುದು. ಆದರೆ ಗಡಿಗೆಯ ಒಳಹೊರಗೆ ತುಂಬಿರುವ ಬಯಲು ಒಡೆಯಬಲ್ಲುದೇ? ಅದನ್ನು ಒಡೆಯಬಲ್ಲ ಸಮರ್ಥರಾದರೂ ಯಾರು? ಗಡಿಗೆ ಹುಟ್ಟಿತು ಬಾಳಿತು ಒಡೆಯಿತು, ನಿಜ. ಬಯಲು ಹುಟ್ಟಲಿಲ್ಲ ಬಾಳ ಲಿಲ್ಲ ಒಡೆದು ಹೋಗಲಿಲ್ಲ. ಎಂದೂ ಒಡೆಯದ ಅಜಗಣ್ಣನಿಗೆ ನೀನು ಅಳುವ ರೀತಿ ವಿಚಿತ್ರ ಅಜ್ಞಾನ !

ಪ್ರಭುದೇವರ ಮಾತು ಅಜಗಣ್ಣನ ಆಕಾಶ-ಪ್ರಕಾಶಮೂರ್ತಿಯನ್ನು ಮುಕ್ತಾಯಕ್ಕನ ಮುಂದೆ ತಂದು ನಿಲ್ಲಿಸುತ್ತದೆ. ಅಕ್ಕನ ದುಃಖ ಒಡ್ಡು ಒಡೆದ ಮಹಾಪೂರವಾಗುತ್ತದೆ. ಎಂಥ ಅಣ್ಣ ! ಏನು ಮೂರ್ತಿ ! ಯಾವ ನಿಲವು ! ಅಣ್ಣನ ಮಹಾಘನಗಂಭೀರವನ್ನು ಕಣ್ಣಾರೆ ಕಂಡೆ ನಾನು. ಪ್ರಭುವೇ, ಆತನನ್ನು ನೀನು ಪ್ರತ್ಯಕ್ಷ ಕಂಡವನಲ್ಲ. ಇಕೋ, ಇಲ್ಲಿ ನೋಡು ಆತನಿದ್ದ ಇರವನ್ನು:

> ಅಜಗಣ್ಣನು ಪರಮಯೋಗೀಶ್ವರನು, ಸುಜ್ಞಾನ ಪರಿಪೂರ್ಣನು; ಅಂತರಂಗದಲ್ಲಿ ಅವಿರಳಲಿಂಗೈಕ್ಯನು, ಬಹಿರಂಗ ವ್ಯವಹಾರ ದೂರಸ್ಥನು; ಸರ್ವಕರಣ ನಿರ್ಮುಕ್ತನು, ಸರ್ವಾಂಗರಹಿತನು; ನಿತ್ಯ ನಿಜತತ್ತ್ವದಲ್ಲಿ ಮನೋವೇದ್ಯನು, ಸಚ್ಚಿದಾನಂದ ರಸಾರ್ಣವನು; ಸದ್ಯೋನ್ಮುಕ್ತನು, ಸರ್ವಕ್ರಿಯಾತೀತನು; ನಿಶ್ಶಬ್ದ ಗಂಭೀರನು, ನಿರುಪಮಚರಿತ್ರನು; ನಿಸ್ಸಂಸಾರನು, ಸಕಲತತ್ತ್ವಶಿರೋರತ್ನನು; ಶರೀರವಿಡಿದು ಸಂಗರಹಿತನು, ಇಂದ್ರಿಯಂಗಳುವಿಡಿದು ನಿಷ್ಕಾಮನು; ಗಮನವಿಡಿದು ಅಗಮ್ಯನು, ವಿವೇಕವಿಡಿದು ನಿರ್ವಿಚಾರನು; ಅಱಿವುವಿಡಿದು ತ್ರಿಪುಟಿರಹಿತನು; ಘನದಲ್ಲಿ ಗಂಭೀರನು, ನೆನಹಿನಲ್ಲಿ ನಿಸ್ಸಂಚಲನು; ನುಡಿಯಲ್ಲಿ ಪರವಶನು, ಗತಿಯಲ್ಲಿ ಇಹಪರವೆಂಬೆರಡೂ ಹೊದ್ದದ ನಿರಾಶಾಭರಿತನು; ಸ್ಥಿತಿಯಲ್ಲಿ ನಿಸ್ಸ್ಥಿತನು, ಇರವಿನಲ್ಲಿ ಪರಶಿವನು.[೧]

ಇಂತಪ್ಪ ಮಹಾಮಹಿಮ ನಮ್ಮ ಅಜಗಣ್ಣ ತಂದೆ.

ಇರವಿನಲ್ಲಿ ಪರಶಿವ ಅಜಗಣ್ಣ ! ಅಕ್ಕನ ಹೃದಯದಲ್ಲಿ ಅಜ್ಯೋತ್ತಿ ನಿಂತಿರುವ ಈ 'ನಿಶ್ಶಬ್ದಗಂಭೀರ'ನನ್ನು ಅಕ್ಕ ನುಡಿಯ ಬಣ್ಣದಲ್ಲಿ ನುಡಿದು ಬಣ್ಣಿಸಲಿಲ್ಲ. ಹೃದಯದ ಮೂರ್ತಿಯನ್ನು ಈ ಬಣ್ಣದಲ್ಲಿ ಬರೆದು ತೋರಿದ ಸಿದ್ಧವೀರದೇವ. ಅಂದರೆ ಮುಕ್ತಾಯಕ್ಕನ ಹೃದಯ, ಸಿದ್ಧವೀರಣ್ಣನ ಶಬ್ದ.

ಇದೋ ಇಲ್ಲಿ ನೋಡಿ, ಅಕ್ಕನ ಹೃದಯ ಶಬ್ದರೂಪವನ್ನು ತೊಟ್ಟು, ತರ್ಕಬುದ್ಧಿಯನ್ನು ದಂಗುಗೊಳಿಸಿ ಮುಂದೆ ಬಂದು ನಿಲ್ಲುತ್ತದೆ:

> ಅಂಬರದಲಾಡುವ ತುಂಬಿಯ ಬಿಂಬವ,
> ಕಂಬನಿಯೊಳಗಣ ರತ್ನದ ಬಯಕೆಯನಾದ್ಯಂತವನೇನೆಂಬೆನಯ್ಯಾ?
> ವೇದ ಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಸಲಱಿಯವು.
> ನಾದವಲ್ಲ, ಸುನಾದದ ನಿಲವಲ್ಲ.

೧. ಶೂ. ಸಂ. ಪು. ೨೬-೨೭ ಪ್ರ. ೧೨.

ಭೇದಿಸುವರೆ ಅಗಮ್ಯ ನೋಡಾ!
ಸೊಲ್ಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು?
ಎಂತು ಮಚ್ಚಿವೆನಯ್ಯಾ ಎನ್ನ ಅಜಗಣ್ಣತಂದೆಯನು?[1]

ಅಜಗಣ್ಣ 'ಅಂಬರದಲಾಡುವ ತುಂಬಿಯು ಬಿಂಬ,' 'ಕಂಬನಿಯೊಳಗಣ ರತ್ನದ ಬಯಕೆ'ಯು ಅನಾದ್ಯನಂತ! 'ಅಂಬರ'ವೆಂದರೆ ಚಿದಂಬರ, ಚಿದಾಕಾಶ, ಆತ್ಮಾಕಾಶವೆಂಬುದು ನಿಮಗೆ ಗೊತ್ತಿರಬಹುದು. 'ತುಂಬಿ' ಎಂದರೆ 'ಪರಿಪೂರ್ಣವಾಗಿಪ್ಪ ಲಿಂಗಕ್ಕೆ ಹೆಸರು'[2]. ಎಲ್ಲೆಲ್ಲಿ ತುಂಬಿ, ಭರಿತವಾಗಿ, ಪರಿಪೂರ್ಣವಾಗಿ ಇರುವುದೆ ತುಂಬಿ. 'ಕಂಬನಿ' ಎಂದರೇನು? ಕಣ್ಣೀರು, ಕಣ್ಣಹನಿ ಎಂಬುದು ಎಲ್ಲರಿಗೆ ಗೊತ್ತು. ಆದರೆ ರತ್ನದ, ಸ್ವಯಂಕಾಂತಿಯುಳ್ಳ ಆತ್ಮಜ್ಞಾನರತ್ನದ ಬಯಕೆಯನ್ನು ಅಂದರೆ ನಿಧಿನಿಧಾನವನ್ನು 'ಅನಾದ್ಯಂತ'ವಾಗಿ ತನ್ನೊಳಗೆ ಬಯ್ತು ಇಟ್ಟುಕೊಂಡಿರುವ 'ಕಂಬನಿ' ಎಂದರೇನು? ಕಣ್ಣು ಎಂದರೆ ಚಿದ್ದೃಕ್ಕು, ಜ್ಞಾನದ ನೇತ್ರ ಎಂಬುದು ಬೆಡಗಿನ ವಚನಗಳಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ ಅರ್ಥ. ಕಂಬನಿಯೆಂದರೆ ಈ ಜ್ಞಾನನೇತ್ರದಲ್ಲಿ ಗೋಚರವಾಗುವ ಚಿದ್ಬಿಂದು[3] ಎಂದು ಅರ್ಥಯಿಸಬಹುದಲ್ಲವೇ? ಈ ಬಿಂದುವಿನಲ್ಲಿ ಹುದುಗಿರುವ ಅಪಾರ ನಿಧಾನವೇ ಮಹಾಜ್ಞಾನರತ್ನವಾರಾಶಿ. ಇಂಥ ಪರಿಪೂರ್ಣವಾರಾಶಿ ಅಜಗಣ್ಣ 'ದಶವಿಧ'ನಾದವಲ್ಲ, ಚಿತ್ಪ್ರಣವದ ಘೋಷವಲ್ಲ[4]. ವೇದಶಾಸ್ತ್ರಾದಿಗಳ ಹೊಗಳಿಕೆಗೆ

---

೧. ಶೂ. ಸಂ. ಪು. ೨೭, ವ. ೧೨.

೨. ಲಿಂ. ಲೀ. ವಿ. ಚಾ. ಪು. ೩೮೯, ವ. ೫೬, ಟೀ.

೩. ಈ ವಿಷಯದಲ್ಲಿ ಷಣ್ಮುಖಸ್ವಾಮಿಗಳ ಅನುಭವವನ್ನು ಕೇಳಿ:
ಸದ್ಗುರು ಪ್ರಸಾದದಿಂದೊಗೆದ ತಾರಕಬ್ರಹ್ಮದ ಆಖ್ಯಾನವೆಂತೆನೆ:
ಆ ತಾರಕಬ್ರಹ್ಮವು ನಾದವೆಂದು ಕಲೆಯೆಂದು ಬಿಂದುವೆಂದು ಮೂರು ಪ್ರಕಾರವಪ್ಪುದು.
ಅವರೊಳಗೆ ಆ ಕಲೆಯು ಕಮಲತಂತುವಿನಂತೆ ಪರಮಸೂಕ್ಷ್ಮವಾಗಿ,
ಪರಿಹಂಚಿಲ್ಲದೆ ಬ್ರಹ್ಮರಂಧ್ರಸ್ಥಾನದಲ್ಲಿ ದಿವ್ಯಪ್ರಕಾಶದಿಂದಿಹುದು.
ಮತ್ತಾ ಕಲೆಯು ಬಲಿದು ಅಂಗುಷ್ಠಮಾತ್ರವಾದ ದೀಪಜ್ವಾಲೆಯಾಕಾರದಿಂ
ಭ್ರೂಮಧ್ಯಸ್ಥಾನದಲ್ಲಿ ಕಾಣಿಸಲು, ಅದೆ ನಾದವೆನಿಸುವುದು.
ಬಳಿಕಾ ನಾದವೇ ಬಲಿದು ಚಂದ್ರಸೂರ್ಯರ ಪ್ರಭಾಮಂಡಲಗಳನೊಳಗೊಂಡು
ನೇತ್ರಮಧ್ಯದೊಳಿರಲು, ಅದೇ ಬಿಂದುವೆನಿಸುವುದಯ್ಯಾ ಅಖಂಡೇಶ್ವರಾ.
ಅಖಂ. ವ. ಪು. ೧೮೫, ವ. ೬೬.

೪. ಇಲ್ಲಿ ನೋಡಿ:
ಶುದ್ಧಪದ್ಮಾಸನದಲ್ಲಿ ಕುಳ್ಳಿರ್ದು, ಊರ್ಧ್ವಲೋಚನನಾಗಿ,
ಉಳಿವ ಕರಣಂಗಳನೆಲ್ಲ ಉನ್ಮನಿಯ ಸ್ಥಾನದಲ್ಲಡಗಿಸಿ,
ಮನವನೊಮ್ಮನವ ಮಾಡಿ, ಅನಾಹತಕರ್ಣದಲ್ಲಿ ಲಾಲಿಸಲು,
ಸಹಸ್ರದಳ ಕಮಲದ ಮಧ್ಯದಲ್ಲಿ
ಉದ್ಘೋಷಿಸುತ್ತಿರ್ಪುದು ಸುನಾದಬ್ರಹ್ಮವು.
ಅಂತಪ್ಪ ಸುನಾದಬ್ರಹ್ಮದಲ್ಲಿ ಮನವಡಗಿ ಮೈಮರೆದಿಪ್ಪಾತನೆ
ಘನಲಿಂಗಯೋಗಿಯಯ್ಯಾ ಅಖಂಡೇಶ್ವರಾ. ಅಖಂ. ವ. ಪು. ೧೬೭, ವ. ೩೫.

ನಿಲುಕದ ಈ ನಿಲವು ಮಾನವನ ಬುದ್ಧಿ ಭಾವ ಇಂದ್ರಿಯಗಳಿಗೆ ಅ-ಭೇದ್ಯ. ಇಷ್ಟೆ ಅಲ್ಲ. ಅವು ಇಂಥ ನಿಲವುಗೋಟೆಯುವರೆಗೆ ಗಮಿಸಲೂ ಆರವು. 'ಸ್ಥಿತಿಯಲ್ಲಿ ನಿಸ್‌ಸ್ಥಿತ'ವಾದ ಈ ನಿಲವು ನಾದ-ಸುನಾದ ಸೋಂಕದ ನಿಶ್ಶಬ್ದಗಂಭೀರ. ಸೊಲ್ಲು ಇಲ್ಲದ, 'ಶಬ್ದವಿಲ್ಲದ ಸಾರಾಯ' ಅಜಗಣ್ಣ. ತನುನಷ್ಟ, ಮನನಷ್ಟ, ಪ್ರಾಣಭಾವ ನಷ್ಟವಾಗಿ ಏನೂ ಇಲ್ಲದೆ ತಾನೆ ತಾನಾಗಿ ನಿಂದ ಸರ್ವಶೂನ್ಯಘನ, ಸೊಮ್ಮಿಲ್ಲದ ಘನ ಅಜಗಣ್ಣತಂದೆ. ಇಂಥ ಘನವ ಅಗಲಿ, ಇಂಥ ಘನವ ಮರೆದು ಬದುಕುವುದೆಂತು? ಅಗಲಿ ಇರುವುದೆಂತು? ಮರೆದು ಜೀವಿಸುವುದೆಂತು ಪ್ರಭುವೇ?

ಮುಕ್ತಾಯಕ್ಕ ಅಣ್ಣನ ಬರಿ ದೇಹ ಪ್ರಾಣ ಕರಣ ಜೀವ ಭಾವಗಳು ಸತ್ತುಹೋದು ದಕ್ಕೆ ಅಳುತ್ತಿಲ್ಲ, ಆದರೆ ಆತನ ಮುಖವಾಗಿ 'ಸೊಲ್ಲಿಲ್ಲದ ಸೊಮ್ಮಿಲ್ಲದ' ಆತನ ಮಹಾ ಘನವನ್ನು ಕಂಡು, ಆ ಘನದಲ್ಲಿ ತಾನೂ ಕೂಡಿ ಒಂದಾಗಿ ಆ ಮಹಾಘನವೇ ತಾನಾಗ ಬೇಕೆಂದಿರುವಾಗ ಕಂಡ ಘನ ಕಾಣದಂತಾಯ್ತು, ಬೆರೆಯಲೆಂದಿರ್ದ ಇರವಿನ ಪರಶಿವ ಅಗಲಿ ಹೋಯ್ತು ಎಂಬ ವಿಕಳಾವಸ್ಥೆಯಲ್ಲಿ ಆಕೆ ಹಂಬಲಿಸುತ್ತಿರುವುದನ್ನು ಆಕೆಯ 'ವಿಕಳ' ಹೃದಯವೇ ಹಾಡಿ ನುಡಿದು ಹೇಳಿತು ಅಲ್ಲಮಪ್ರಭುವಿಗೆ.[೧] ಅಕ್ಕನ ಹಂಬಲ ವಿಶ್ರಾಂತರಂಗದಲ್ಲಿ ಗಂಭೀರಗಾಮಿಯಾಗಿರುವ ಪರಿಪೂರ್ಣಕ್ಕೆ ಹಂಬಲ, ಅರಿವಿನ ಕಣ್ಣ ಹಿಂದೆ ಮರೆಯಾಗಿ ಥಳಥಳಿಸುತ್ತಿರುವ ಸ್ವಯಂಜ್ಞಾನದ ಅನಾದ್ಯನಂತಕ್ಕೆ ಹಂಬಲ, ನಿಶ್ಶಬ್ದವಾದ ನಿಶ್ಶೂನ್ಯ ಘನಕ್ಕೆ ಹಂಬಲಿಸುವ ಅಕ್ಕನ ಹಂಬಲ ಅಲ್ಲಮನ ಮುಂದೆ ನಿಂತು ಆಲ್ಪರಿಯಿತು. ಪ್ರಭುವಿಗೆ ಪರಮಾಶ್ಚರ್ಯ ! :

ಕಂಡೆನೆಂಬುದು ಕಂಗೆ ಮಱವೆ;
ಕಾಣೆನೆಂಬುದು ಮನದ ಮಱವೆ.
ಕೂಡಿದೆನೆಂಬುದು ಅಱಿವಿನ ಮಱವೆ;
ಅಗಲಿದೆನೆಂಬುದು ಮಱಹಿನ ಮಱವೆ.
ಇಂತು ಕಂಡೆ ಕಾಣೆ, ಕೂಡಿದೆನಗಲಿದೆನೆಂಬ
ಭ್ರಾಂತಿಸೂತಕವ ತಿಳಿದು ನೋಡಲು,
ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ ಎಲೆ ತಾಯೆ.[೨]

---

೧. ಪ್ರಭುಲಿಂಗಲೀಲೆಯುಲ್ಲಿ ಮುಕ್ತಾಯಕ್ಕ ತನ್ನ ಅಂತರಾಳದ ವಿಯೋಗದುಃಖವನ್ನು ಪ್ರಭುವಿಗೆ ಹೀಗೆ ಬಿನ್ನವಿಸಿಕೊಳ್ಳುತ್ತಾಳೆ:

ಏನ ಮಾಡುವೆನಯ್ಯ ಎನ್ನ ನಿ ।
ಧಾನವಪ್ಪಜಗಣ್ಣತಂದೆಯು ।
ನಾನದೆಂತಗಲುವೆನು ನನಗಿದನನಿತ ಸೂಚಿಸದೆ ॥
ತಾನು ಹೋದೊಡೆ ಬಳಿಕಲೆನಗಿ ।
ನ್ನೇನು ಗತಿಯೆಂದೆನುತ ಕಡುದು ।
ಮ್ಮಾನವೆಲ್ಲವ ನುಡಿದಳಾ ಮುಕ್ತಾಯಿಯಲ್ಲಮಂಗೆ ॥

ಪು. ೧೪೫, ಗತಿ ೧೨, ಪ. ೬.

೨. ಶೂ. ಸಂ. ಪು. ೨೭, ವ. ೧೩.

ಎಲೆ ತಾಯೆ ಮುಕ್ತಾಯಕ್ಕಾ, ಆಗ ಕಂಡೆ ಈಗ ಕಾಣೆ, ಆಗ ಕೂಡಿದೆ ಈಗ ಅಗಲಿದೆ ನೆಂಬುದು ಮರವೆ, ಭ್ರಾಂತಿ. ಇದೇ ಕಣ್ಣ ಸೂತಕ, ಮನದ ಸೂತಕ, ಅರಿವು ಮರವೆಯ ಸೂತಕ. ಕಂಡೆ ಕಾಣೆನೆಂಬುದೇನು? ಕಂಡೆ ಕಾಣೆನೆಂಬರಾರು? ಏನ ಕೂಡಿ ಏನ ಅಗಲಿದೆ? ಕೂಡಿದ ಅಗಲಿದ ನೀನಾರು? ಮುಕ್ತಾಯಕ್ಕ ನೀನು ಅಜಗಣ್ಣ–ಘನವ ಕಂಡಿದ್ದೆ ಈಗ ಕಾಣ ಲಿಲ್ಲ, ಕೂಡಿದ್ದೆ ಈಗ ಅಗಲಿ ಹೋಯ್ತು ಎಂದು ನಿನ್ನ ಆಳಾಪವಲ್ಲವೇ? ನೀನೇ ಹಾಡು ವಂತೆ ಅಜಗಣ್ಣ 'ಇರವಿನಲ್ಲಿ ಪರಶಿವ' ಪರಶಿವಲಿಂಗ, ಅದೇ ನಮ್ಮ ಗೊಹೇಶ್ವರಲಿಂಗ. ಈ ಲಿಂಗವನಗಲಿ ಇರಲು, ಈ ನಿತ್ಯಪರಿಪೂರ್ಣ ಮಹಾಘನದಿಂದ ಭಿನ್ನವಾಗಿ, ನಡುವೆ ಎಡೆ ಬಿಡುವುಮಾಡಿಕೊಂಡು ನೀನು ಬೇರೆ ಅದು ಬೇರೆಯಾಗಿ ನಿಂದು ನೋಡಲು, ಪರಿದು ಕೂಡಲು ಅವಕಾಶವಿದ್ದರೆ ನಿನ್ನ 'ಕಂಡೆ ಕಾಣೆ'ಗೆ 'ಕೂಡಿದೆನಗಲಿದೆ'ಗೆ ಅರ್ಥ ಬರಬಹುದು. ಆದರೆ ಅಕ್ಕಾ, 'ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ'. 'ಮುಳ್ಳೊಳಿ ತೆಱಹಿ ಲ್ಲದ' ಮಹಾಘನವನಗಲಿ ಇರುವ, ಬೇರಾಗಿ ನಿಲ್ಲುವ ಗರುವರಾರು?[೧] ನಿನ್ನ ಕಣ್ಣು ನಿನ್ನ ಮನ ನಿನ್ನ ಅರಿವು ಮರವೆ–ಇವೂ ಲಿಂಗದ ಸೂತ್ರವನ್ನು ಬಿಟ್ಟಿಲ್ಲ. ಕಣ್ಣು ತನ್ನ ಕಣ್ಣನ್ನು ಮರೆದು ಮಾತಾಡುತ್ತಿದೆ, ಕಂಡೆನೆಂದು. ಮನ ತನಗೆ ಮರೆಯಾದ ಮೂಲಘನವನ್ನು ಮರವೆಯಿಂದ ಮರೆದು ಹೇಳುತ್ತಿದೆ, ತನ್ನ ತಾ ಕಾಣೆನೆಂದು. ಇರವು–ಲಿಂಗವನಗಲಿ ಎಂದೂ ಇರಲಾರದ ಅರಿವೇ ಅರಿವುಗೆಟ್ಟು ನುಡಿಯುತ್ತಿದೆ, ಲಿಂಗವ ಕೂಡಿದೆನೆಂದು. ಮರವೆಯ ಮಾತಂತೂ ಸರಿಯೇ. ಕತ್ತಲೆ ಕತ್ತಲೆಯ ಹಾಡಿದರೆ ಆಶ್ಚರ್ಯಕ್ಕೆ ಕಾರಣ

---

೧. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಮೈತ್ರೇಯಿಗೆ ತೋರುವ ದ್ವೈತ ಮತ್ತು ಅದ್ವೈತ ದೃಷ್ಟಿಯ 'ಭೂಮಿ ಆಕಾಶ'ದ ಅಂತರವನ್ನು ನಿದಿಧ್ಯಾಸ ಮಾಡಿ ನೋಡಿ:

ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ,
ತದಿತರ ಇತರಂ ಜಿಘ್ರತಿ, ತದಿತರ ಇತರಂ ರಸಯತೇ,
ತದಿತರ ಇತರಮಭಿವದತಿ, ತದಿತರ ಇತರಂ ಶೃಣೋತಿ,
ತದಿತರ ಇತರಂ ಮನುತೇ, ತದಿತರ ಇತರಂ ಸ್ಪೃಶತಿ,
ತದಿತರ ಇತರಂ ವಿಜಾನಾತಿ;
ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್
ತತ್ ಕೇನ ಕಂ ಪಶ್ಯೇತ್, ಕೇನ ಕಂ ಜಿಘ್ರೇತ್,
ಕೇನ ಕಂ ರಸಯೇತ್, ತತ್ ಕೇನ ಕಂ ಅಭಿವದೇತ್,
ಕೇನ ಕಂ ಶೃಣುಯಾತ್, ತತ್ ಕೇನ ಕಂ ಮನ್ವೀತ,
ತತ್ ಕೇನ ಕಂ ಸ್ಪೃಶೇತ್, ತತ್ ಕೇನ ಕಂ ವಿಜಾನೀಯಾತ್,
ಯೇನೇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್,
ಸ ಏಷ ನೇತಿ ನೇತ್ಯಾತ್ಮಾ ಅಗೃಹ್ಯಃ ನ ಹಿ ಗೃಹ್ಯತೇ
ಅಶೀರ್ಯಃ ನ ಹಿ ಶೀರ್ಯತೇ, ಅಸಂಗಃ ನ ಹಿ ಸಜ್ಜತೇ,
ಸಿತೋ ನ ವ್ಯಥತೇ, ನ ರಿಷ್ಯತಿ,
ವಿಜ್ಞಾತಾರಮರೇ ಕೇನ ವಿಜಾನೀಯಾತ್? . . . . . .

ಪು. ೧೦೫, ಮಂತ್ರ ೧೫. ಬ್ರಾಹ್ಮಣ ೫, ಅಧ್ಯಾಯ ೪.

ವಿಲ್ಲ. ಭಿನ್ನದೃಷ್ಟಿ ಭಿನ್ನಬುದ್ಧಿ ಭಿನ್ನಭಾವ ಭಿನ್ನಜ್ಞಾನದಲ್ಲಿ ವರ್ತಿಸುವ ಸಾಮಾನ್ಯ ಮನುಷ್ಯರು, ಅದ್ವೈತದೃಷ್ಟಿ ಅಭಿನ್ನಭಾವ ಐಕ್ಯಜ್ಞಾನ 'ನಿಜ ಸಹಜ ಸಮಾಧಿ'ಯ ಸ್ವಾನುಭಾವದಲ್ಲಿ ನಿಲ್ಲುವ ಸ್ವಸಾಮರ್ಥ್ಯವಿಲ್ಲದ ಸಾಧಕರು ಆರಾಧಕರು ಕಂಡೆ ಕಾಣೆ, ಕೇಳಿದೆ ಕೇಳಲಿಲ್ಲ, ಕೂಡಿದೆ ಅಗಲಿದೆನೆಂದು ತಂತಮ್ಮ ಸ್ಥಲದ ವ್ಯವಹಾರದಲ್ಲಿ ನುಡಿದರೆ ಅದು ತಪ್ಪಲ್ಲ. ಅದು ಅವರವರಿಗೆ ಸಹಜ. ಆದರೆ ನೀನು, ಅಜಗಣ್ಣನ ದಿವ್ಯಕಾರುಣ್ಯದ ತಂಗಿ ಹೀಗೆ 'ಭಿನ್ನ'ವಾಗಿ ನುಡಿವುದೆಂದರೇನು? ಇನ್ನೂ ದ್ವೈತದ ಭ್ರಾಂತಿಯಲ್ಲಿ, ಭಿನ್ನ ಬುದ್ಧಿ ಭಿನ್ನಭಾವದ ಭ್ರಮೆಯಲ್ಲಿ, ಸಂಕಲ್ಪ ವಿಕಲ್ಪದ ತಿರುಗುಣಿಯಲ್ಲಿ ಸಿಕ್ಕು ಗತಿಗೆಟ್ಟು ತಿರುಗುತ್ತಿರುವ ಭಿನ್ನ ಮನದ ಭ್ರಮಣದಲ್ಲಿ, ಕಲಕಾದ ಕಣ್ಣು ಕಿವಿಯ ಭಿನ್ನರಂಧ್ರದಲ್ಲಿ ನೋಡಿ ಹೀಗೆ ಸೂತಕದ ಮಾತನ್ನು ನೀನು ಬಳಸಿದರೆ ಹೇಗೆ? ಇದು ಭ್ರಾಂತಿ, ಇದೇ ದಿವ್ಯವನ್ನು ಮೆತ್ತಿ ಅದನ್ನೇ ಹೊಲೆಗೊಳಿಸಿದಂತಿರುವ ಮಾನವ್ಯದ ಸೂತಕ. ಈ ಸೂತಕ ತಿಳಿದರೆ, ತಿಳಿದು ನೋಡಿದರೆ 'ಗೊಹೇಶ್ವರಲಿಂಗ', ಅಜಗಣ್ಣಲಿಂಗವನ್ನು ನೀನು ಮಂಕ್ವಾಯಕ್ಕ ಕೂಡಲಿಲ್ಲ. ಏಕೆಂದರೆ ನೀನು ಅಗಲಿದೆ ಎಂದು? ಅಗಲಿದೆ ಎಲ್ಲಿ?[೧]

ಪ್ರಭುವಿನ ಮಾತು ಅಕ್ಕನಿಗೆ ಕೇಳಿಬರುತ್ತಿದೆ. ಆದರೂ ಅಣ್ಣನನ್ನು ಕೂಡಿ ಅಗಲಿದ ದುಃಖದ ಭರಭಾರ ಇನ್ನೂ ಪೂರ್ಣ ಕಡಿಮೆಯಾಗಿಲ್ಲ. ಶಿವದಲ್ಲಿ ಯೋಗವಾಗಿದ್ದ ಅಣ್ಣನ ಶಿವಮೂರ್ತಿ ಅಕ್ಕನ ಕಣ್ಣ ಮುಂದೆ ಬಣ್ಣದೋರುತ್ತಿದೆ. ಶಿವಯೋಗಿ ಅಜಗಣ್ಣನ ಯೋಗ ತಂಗಿಯನ್ನು ಬೆರಗಿನ ಬಯಲಲ್ಲಿ ನೂಕಿ ದಿಕ್ಕುದೆಸೆಯನ್ನೆ ಬದಲಾಯಿಸಿದೆ! ಅಲ್ಲಮಪ್ರಭುವಿಗೆ ಆಕೆ ಕೊಟ್ಟ ಉತ್ತರವನ್ನು ಕೇಳಿ, ಅಂದರೆ ತಾನೇ ವೇದ್ಯವಾಗುತ್ತದೆ ಈ ಬೆರಗಿನ ನಿಗೂಢ ಗುಂಭ.

ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋಱುವ ಪರಿಯ ನೋಡಾ!
ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದನು.
ಈ ಅಜಗಣ್ಣನ ಯೋಗಕ್ಕೆ ಬೆಱಗಾದೆನು!
ಈ ಅಱಿವಂತುಟೆಲ್ಲವನೊಳಗಿಟ್ಟುಕೊಂಡನು,
ಶಿವಗಣ ಸಂಚ ಶಿವಯೋಗಿ ಅಜಗಣ್ಣದೇವನು.[೨]
ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ,
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ.
ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ,

---

೧. ಇಲ್ಲಿ ಪ್ರಭುದೇವರ ಮತ್ತೊಂದು ವಚನವನ್ನು ಪರಾಮರ್ಶಿಸಿರಿ:
ನೋಡುವುದ ನೋಡಲಱಿಯದೆ ಕೆಟ್ಟಿತೀ ಜಗವೆಲ್ಲಾ!
ನೋಡುವುದ ನೋಡಬಲ್ಲರೆ, ಕೂಡಲಿಲ್ಲ ಅಗಲಲಿಲ್ಲ.
ನಿಮ್ಮ ನೋಟದ ಕೂಟದ ಅಗಲದ ಸುಖವನು—
ಗೊಹೇಶ್ವರಾ, ನಿಮ್ಮ ಶರಣರೆ ಬಲ್ಲರು.
ಲಿಂ. ಲೀ. ವಿ. ಚಾ. ಪು. ೩೨೫, ವ. ೧೧.

೨. ಶೂ. ಸಂ. ಪು. ೨೭ ವ. ೧೪.

ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆಱಗಾದೆನಯ್ಯಾ,
ಎನ್ನ ಅಜಗಣ್ಣನ ಯೋಗಕ್ಕೆ ![೧]

ಕಣ್ಣ ಮೊದಲು ಎಲ್ಲಿದೆ? ಅಲ್ಲಿ ಕುಳ್ಳಿರುವರಾರು? ಅಥವಾ ಏನು? ಅಲ್ಲಿ ತೋರಿ ಬರುವ ಬಣ್ಣವಿಲ್ಲದ ಬಣ್ಣವಾವುದು? ಅಜಗಣ್ಣನ ಈ ದಿವ್ಯಯೋಗದ ಮುಸುಕನ್ನು ತೆಗೆದು ನಮ್ಮ ಕಣ್ಣಿಂದ ಕಾಣುವುದು ಸಾಧ್ಯದ ಸೀಮೆಯೊಳಗಲ್ಲ. ಅದೇಕೆ ಎಂದು ನೀವು ಕೇಳಿದರೆ ನಿಮಗೆ ಉತ್ತರಕೊಡುವ ಸಾಮರ್ಥ್ಯ ನನಗಿಲ್ಲ. ಇಲ್ಲಿ ಷಣ್ಮುಖಸ್ವಾಮಿಗಳ ಅನುಭವದ ಮಾತು ನಿಮ್ಮ ಪ್ರಶ್ನೆಗೆ ಉತ್ತರವಾಗಬಹುದು:

.........ನೇತ್ರಂಗಳ ತುದಿಯ ಸೂಕ್ಷ್ಮರಂಧ್ರವನುಳ್ಳ
ಕೃಷ್ಣತಾರಾಮಂಡಲದ ಮಧ್ಯದಲ್ಲಿ,
ಶುದ್ಧಚಿತ್ತದಿಂದೆ ನಿಶ್ಚಲಮಾದ ಪರಮಾತ್ಮಜ್ಯೋತಿಸ್ವರೂಪಮಪ್ಪ
ದಿವ್ಯಲಿಂಗಮಂ ಕಾಣ್ಬುದೇ
ಶಾಂಭವೀಮುದ್ರೆಯೆಂದೆನಿಸುವುದಯ್ಯಾ ಅಖಂಡೇಶ್ವರಾ.[೨]

ಇದೇ ಕಣ್ಣಿನ ಮೊದಲಲ್ಲಿ ಕುಳ್ಳಿರ್ದ ದಿವ್ಯಲಿಂಗ. ಇದೇ ಕಣ್ಣಿನ ಕಣ್ಣು ಶಿವಲಿಂಗ. ಇದೇ 'ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ'ರುವ ಒಂದು ಬಣ್ಣದ ಲಿಂಗ.[೩] ಎಲ್ಲ ಬಣ್ಣಕ್ಕೆ ಬಣ್ಣಕೊಟ್ಟು ತನಗೊಂದು ಬಣ್ಣವಿಲ್ಲದೆ ಒಳಗಣ್ಣಿಗೆ ಕಾಣಬರುವ ಜ್ಯೋತಿರ್ಲಿಂಗ. ಈ ದಿವ್ಯ ಜ್ಯೋತಿರ್ಮಯವಾದ ರೂಪವೆ ಸ್ವರೂಪವಾಗಿ ಅಕ್ಕನ ಕಣ್ಣ ಮಂಟಪದಲ್ಲಿ ಕುಳಿತು ಸುಳಿದಾಡಿದ ಅಜಗಣ್ಣ. ಅಜಗಣ್ಣ ದೇಹವನ್ನು ತೊಟ್ಟಿದ್ದ, ಮನವನ್ನು ಉಟ್ಟಿದ್ದ, ಪ್ರಾಣ ಕರಣಾದಿಗಳನ್ನು ಹೊದೆದಿದ್ದ. ಎಲ್ಲ ನಿಜ. ಆದರೆ ದೇಹದ ಬಣ್ಣ, ಮನ ಪ್ರಾಣ ಕರಣಾದಿ

---

೧. ಶೂ. ಸಂ. ಪು. ೨೭. ವ. ೧೫.

೨. ಅಖಂ. ವ. ಪು. ೧೭೪, ವ. ೭೩.

ಇಲ್ಲಿ ಪ್ರಭುದೇವರ ಒಂದು ಅನುಭವದ ಮಾತು ಕೇಳಿ:

ಅಱಸಿ ಅಱಸಿ ಹಾಹಾ ಎನುತಿದ್ದೆನು.
ಬೆದಕಿ ಬೆದಕಿ ಬೆದಬೆದ ಬೇವುತ್ತಿದ್ದೆನು.
ಗೊಹೇಶ್ವರ. ಕಣ್ಣ ಮೊದಲಲ್ಲಿದ್ದವನ ಕಾಣೆನು.

ಅ. ವ. ಚಂ. ಪು. ೧೭೬, ವ. ೭೮೬.

೩. 'ಏನೂ ಏನೂ ಇಲ್ಲದ ಬಯಲೊಳಗೊಂದು ಬಗೆಗೊಳಗಾಗವ ಬಣ್ಣ ತಲೆದೋಱಿತ್ತು....'

ಲಿಂ. ಲೀ. ವಿ. ಚಾ. ಪು. ೧೪, ವ. ೧.

'ಬಗೆಗೊಳಗಾಗದ ಬಣ್ಣ' ಎಂದರೆ ಸರ್ವಶೂನ್ಯವಾದ ನಿಷ್ಕಲ ನಿರವಯ ಪರಬ್ರಹ್ಮದ ಸ್ವಯಂಪ್ರಕಾಶವೆಂದು, ಅಖಂಡತೇಜವೆಂದು, ಕಲ್ಲಮಠದ ಪ್ರಭುದೇವರು ಅರ್ಥಯಿಸುತ್ತಾರೆ.

(ಮೇಲಿನ ವಚನದ ಟೀಕು ನೋಡಿರಿ.)

ಗಳ ಬಣ್ಣ ಶಿವಯೋಗಿ ಅಜಗಣ್ಣನ ನಿರಂಜನಶುಭ್ರಕ್ಕೆ ಲೇಪ್ಪವಾಗಲಿಲ್ಲ. ದೇಹಾದಿಗಳಲ್ಲಿ ತಾನು ಯೋಗವಾಗಿ ದೇಹಾದಿಗಳ ಬಣ್ಣ ಅರಿವಿಗೆ ಲೇಪ್ಪವಾಗಿದ್ದರೆ, ಮಾನವಬಣ್ಣದ ಮೂರ್ತಿಯಾಗಿ ಅರಿವು ಅಡ್ಡಾಡುತ್ತದೆ. ಆದರೆ ದಿವ್ಯ ಶಿವದಲ್ಲಿ ಯೋಗವಾದ ಅರಿವು ದೇಹಾದಿಗಳ ಬಣ್ಣಬಣ್ಣವನ್ನು ತೊಳೆದು ಕಳೆದು, ನಿರಹಂಕಾರ ನಿರ್ಮಮ ನಿರ್ಮನ ನಿರ್ದೇಹವಾಗಿ, ನಿರ್ಲೇಪ ನಿರಂಜನವಾಗಿ ನಿಲ್ಲುತ್ತದೆ. ಇಂಥ ಅಜಗಣ್ಣನ ನಿರಂಜನ ಮೂರ್ತಿ ಅಕ್ಕನ ಅಂತರ್ದೃಷ್ಟಿಯಲ್ಲಿ ನಿಂದು ನಡೆದಾಡಿತು. ಅಕ್ಕನ ಅಂತರಾಳದಲ್ಲಿ ನಿಂದು ಸುಳಿದಾಡಿದ ಈ ನಿರಂಜನ ಹೊರಗೆ ಲೋಕಕ್ಕೆ ಅಜಗಣ್ಣ. ಆದರೆ ಒಳಗೆ, ಈ ಸಿಪ್ಪೆಯ ಮರೆಯಲ್ಲಿ ಶಿವಗಣದ, ದಿವ್ಯಕಲ್ಯಾಣದ ಶರಣಗಣಂಗಳ ಪರಮರಹಸ್ಯವಾದ ಶಿವಯೋಗಿ ಅಜಗಣ್ಣದೇವ! ಈ ಸಂಚ 'ತೋಱಲಿಲ್ಲಾಗಿ ಬೀಱಲಿಲ್ಲಾರಿಗೆಯುಂ.' ಆದರೆ ಅಣ್ಣನ ದೇಹದ ಮರೆಯ ದೇವ ಅಕ್ಕನ ಕಣ್ಣ ಪ್ರತ್ಯಕ್ಷ ಅನುಭವ. ಲೋಕಕ್ಕೆ ಓಸರಿಸಬಾರದ ಈ ಮರೆ ಸರಿದುದು ಹೇಗೆ? ಅಣ್ಣನ ಶಿವಯೋಗದ ರಹಸ್ಯಮೂರ್ತಿ ಅಕ್ಕ ಕಂಡುದು ಎಂತು?–ಎಂದು ನೀವು ಕೇಳಿದರೆ 'ಎನ್ನ ಅಜಗಣ್ಣನ ಯೋಗ'ವೆ ಅಜಗಣ್ಣನ ಅಭೇದ್ಯವನ್ನು ಭೇದಿಸಿದ ಶಕ್ತಿ ಎಂದು ಅದಕ್ಕೆ ಉತ್ತರ. ಇಲ್ಲಿ ಮುಕ್ತಾಯಕ್ಕನ 'ಎನ್ನ ಅಜಗಣ್ಣನ ಯೋಗ'ವೆಂಬ ಮಾತಿಗೆ ಸರಳವಾದ ಸ್ವಾಭಾವಿಕವಾದ ಅರ್ಥ, ನನ್ನ ಅಣ್ಣ ಅಜಗಣ್ಣ, ಆತನ ಯೋಗಕ್ಕೆ ನಾನು ಬೆರಗಾದೆ ಎಂದು. ಈ ಅರ್ಥವಿಲ್ಲಿದೆ. ಆದರೆ 'ನೀರ ಬೊಂಬೆಗೆ......' ಎಂಬ ಅಕ್ಕನ ಈ ಬೆಡಗಿನ ವಚನದಲ್ಲಿ 'ಎನ್ನ ಅಜಗಣ್ಣನ ಯೋಗ'ದ ಸರಳಾರ್ಥದ ಪದರಿನ ಕೆಳಗೆ 'ಎನ್ನ ಮತ್ತು ಅಜಗಣ್ಣನ ಯೋಗ' ಅಂದರೆ ಅಕ್ಕ ಶಿವಯೋಗಿಯಾಗಿದ್ದ ಅಣ್ಣನಲ್ಲಿ ಯೋಗವಾಗಿ, ಅಕ್ಕನ ವ್ಯಕ್ತಿತ್ವ ಅಣ್ಣನ ನಿರಂಜನ ಮೂರ್ತಿಯಲ್ಲಿ ಕೂಡಿ. ಅದಕ್ಕೆ ಶ್ರುತಿಗೂಡಿದ್ದಳೆಂದು ಬೆಡಗಿನ ಅರ್ಥ ಧ್ವನಿಮಾಡುವಂತೆ ತೋರುತ್ತದೆ. 'ಶೂನ್ಯಸಂಪಾದನೆ'ಯನ್ನು ಓದುತ್ತ ನಡೆದಂತೆ ಗುರು-ಶಿಷ್ಯ ಸಾಮರಸ್ಯ. ದೇವ-ಭಕ್ತ ಸಾಮರಸ್ಯ ಮುಂತಾದ ಎರಡೊಂದಾದ ಸಾಮರಸ್ಯಗಳನ್ನು ತಿಳಿದಿರಬೇಕಾದಂತೆ ಭಿನ್ನವ್ಯಕ್ತಿಗಳಾಗಿ ತೋರುವ ಶರಣ-ಶರಣರಲ್ಲಿಯೂ ಈ ಸಾಮರಸ್ಯದ ಸಂಗಮವನ್ನು ನೋಡುತ್ತಿರಬೇಕು. ಈ ಶರಣ-ಶರಣ ಸಾಮರಸ್ಯದ ಅರಿವು ನಮಗಿರದಿದ್ದರೆ 'ಶೂನ್ಯಸಂಪಾದನೆ'ಯ ರಹಸ್ಯಾರ್ಥದ ಕೀಲಿ ಬಿಚ್ಚುವುದಿಲ್ಲ. ಈ ಮಾತನ್ನು ನಮ್ಮಲ್ಲಿ ಎಷ್ಟು ಸಾರೆ ಎಚ್ಚರಿಸಿಕೊಂಡರೂ ತಪ್ಪೇನಿಲ್ಲ.

ದಿವ್ಯದಲ್ಲಿ ಯೋಗವಾಗಿ ಇದ್ದ ಅಣ್ಣ; ಅಣ್ಣನಲ್ಲಿ ಯೋಗವಾಗಿ ಶ್ರುತಿಗೂಡಿ ನಿಂದಿದ್ದ ತಂಗಿ. ಈ ತಂಗಿ ಅಣ್ಣನ ಶಿವಯೋಗಶಾಲೆಯಲ್ಲಿ ಕಂಡುದೇನು? ಅದೊಂದು ವಿಶ್ವವಿಲಕ್ಷಣ ಪ್ರಯೋಗ! ನೀರಿನ ಗೊಂಬೆಗೆ ಸಿರಾಳದ ಗೆಜ್ಜೆಯನ್ನು ಕಟ್ಟಿದ ಅಜಗಣ್ಣ. ಈ ಸಿರಾಳದ ಗೆಜ್ಜೆಯ ಗೊಂಬೆಯನ್ನು ಬಯಲಿನ ಗೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿದ್ದ ನೀರಮುತ್ತೈಯನ್ನು. ಮತ್ತೆ ಕರ್ಪೂರದ ಗೊಂಬೆಯನ್ನು ಉರಿಯ ಸಿಂಹಾಸನದ ಮೇಲೆ ಕುಳ್ಳಿರಿಸಿದ ಅಜಗಣ್ಣ. ಇದರ ಪರಿಣಾಮವೇನೆಂದರೆ ಉರಿಯ ಆಸನ ಕರಗಿಹೋಯಿತು. ಕರ್ಪೂರದ ಮುತ್ತೈದೆ ಉರಿಗೆ ಕರಗದೆ ಉಳಿಯಿತು. ಅಕ್ಕನ ಕಣ್ಣಲ್ಲಿ ಬೆರಗು ಮೂಡಿ ಶಿವಯೋಗಿಯ ಈ ಕಮ್ಮಟವನ್ನು ಕಣ್ಣಾರೆ ಕಂಡಳು. ಈ ಕಮ್ಮಟದ

ನಡೆದ ವಿಲಕ್ಷಣಕ್ಕೆ, ವಿಕಟ ಕಾರ್ಯಕಲಾಪಕ್ಕೆ ನೀವೂ ಗರಹೊಡೆದವರಂತೆ ನಿಂತು 'ಇದೇನು ಹುಚ್ಚು?' ಎಂದು ಕೇಳಿದರೆ ನಾನೇನು ಹೇಳಬಲ್ಲೆ? ಬಲ್ಲವರು ಹೇಳುತ್ತಾರೆ ಇದು 'ಹುಚ್ಚುಬಿಡಿಸುವ ಹುಚ್ಚು' ಎಂದು. ನಿತ್ಯಾನಂದವಾದ ಪರಿಪೂರ್ಣ ಘನವಾದ ಅರಿವಿನ ಇರವಾದ ನಿರಾಳ ತನಗೆ ತಾನು 'ಚೋಟು ಮಾನವ' ಕ್ಷಣಬಿಂದುವೆಂದು ಹುಚ್ಚು ಹಿಡಿದಿದೆ. ಅನ್ಯರು ಹುಚ್ಚು ಹಿಡಿಸಿದ್ದರೆ ಅನ್ಯರು ಅದನ್ನು ಬಿಡಿಸಬಹುದಿತ್ತು. ಆದರೆ ಈ ಹುಚ್ಚು ತನ್ನ ಕೃತಕ, ತನ್ನ 'ಮಾಟ'. ಜಾತಿ ಲಿಂಗ ಜಡಚೇತನವೇನೇ ಇರಲಿ ಅವರವರಿಗೆ ಅವು ಅವಕ್ಕೆ ತಾನು ತಾನು ಎಂಬ ಹುಚ್ಚು ಈ ಮಾಟ. ಜಗಜ್ಜನ್ಮಭೂಮಿಯಾದ ಲಿಂಗದ ಮೇಲೆ ಮೂಡಿ ತೋರುವ ಅಂದರೆ ಲೋಕಿಸುವ ಲೋಕದಾಟ ಈ ಹುಚ್ಚುಮಾಟ. ಲೋಕದಾಟ ಲಿಂಗದಾಟವೆಂದರೂ ಸರಿಯೇ. ಏಕೆಂದರೆ ಆಡಿ ಆಡಿಸುವ ಶಕ್ತಿ ಲಿಂಗಶಕ್ತಿ. ತನಗೆ ತಾ ಮಾಡಿಕೊಂಡ 'ಮಾಟ'ವನ್ನು ತನ್ನೊಳಗೆ ತಾನು ಪರಿಹರಿಸಿ ತನ್ನ ತಾನಾಗಿ ನಿಲ್ಲುತ್ತದೆ ಇರವು–ನಿರಾಳ. ಇದೇ ಶಿವಯೋಗ ಅಥವಾ ಸ್ವ-ಯೋಗ.

ಶಿವಯೋಗದ ಈ ಕಮ್ಮಟದಲ್ಲಿ ಅಜಗಣ್ಣ ನಡೆಸಿರುವುದೇನು? ಮೊದಲು ನೀರ ಬೊಂಬೆಗೆ ನಿರಾಳದ ಗೆಜ್ಜೆಯನ್ನು ಕಟ್ಟುವುದು. ಈ ನೀರಬೊಂಬೆ ಜಲಬಿಂದುಸ್ವರೂಪ ವಾದ ದೇಹ. ಇದೇ 'ನೀರಲಾದ ನಿರ್ಮಿತ'. ಹಿಂದೆ ನೋಡಿದ ಮುಕ್ತಾಯಕ್ಕನ ವಚನ ದಲ್ಲಿ ಬರುವ 'ಜಲದ ಚಿತ್ತಾರ' ಇದೇ. 'ಜಲದ ಚಿತ್ತಾರವೆಂದರೆ ಜಲಸ್ವರೂಪವಾದ ದೇಹ' ಎಂದು ಅರ್ಥಯಿಸುತ್ತಾರೆ ಕಲ್ಲಮಠದ ಪ್ರಭುದೇವರು. ಈ ದೇಹೋಹಂಭಾವ ರೂಪದ ಮಾನವ ಬೊಂಬೆಗೆ ಅಜಗಣ್ಣ ಅಳವಡಿಸುವ ಗೆಜ್ಜೆ 'ನಿರಾಳದ ಗೆಜ್ಜೆ.' ಪ್ರಭು ಅನಿಮಿಷಯ್ಯನಿಂದ ಜ್ಞಾನೋಪದೇಶವನ್ನು ಪಡೆದ ಪ್ರಸಂಗದಲ್ಲಿ ನಾವು ನೋಡಿದ 'ಪರ-ಶಿವಯೋಗ' 'ಸಮಾಧಿ'ಯಲ್ಲಿ ಕೇಳಿಬರುವ 'ಹರಳಿಲ್ಲದ ಗೆಜ್ಜೆ' ಈ ನಿರಾಳದ ಗೆಜ್ಜೆ. ನಿರಾಳದ ಉಲುಹು ನಿಶ್ಶಬ್ದ ಇದೆ. ಆದರೆ ನಿಶ್ಶಬ್ದಶಬ್ದದ ಈ ಗೆಜ್ಜೆಯಲ್ಲಿ ತನುಗುಣಾದಿ ಗಳೊಡನೆ ಚಂಚಲಿಸುವ ಮನದ ಹರಳಿಲ್ಲ. ಗೆಜ್ಜೆಯಲ್ಲಿ ಈ ಹರಳಿದ್ದರೆ ನಿರಾಳದ ನಾದ 'ಸುರಾಳ'ದ ಶಬ್ದಪ್ರಪಂಚವಾಗಿ ನಮ್ಮ ನಿಮ್ಮ ಕಿವಿ ತಿನಬಲ್ಲ ಗೋಚರಾಹಾರವಾಗು ತ್ತದೆ. ಲೋಕಪ್ರಪಂಚವಲ್ಲಿ ನಮ್ಮ ಕಿವಿಗೆ ಕಂಡುಬರುವ ಈ ಸುರಾಳಶಬ್ದ, ಶಬ್ದದ ನಿಜ ಗಂಭೀರವನ್ನೆಲ್ಲ ಮುಗಿಸಿಬಿಟ್ಟಿಲ್ಲ. ನಮ್ಮ ಕಿವಿ ಕೇಳುವ ಅನಂತವಿಧ ಶಬ್ದಕ್ಕೆ ಶಬ್ದಪ್ರಪಂಚ ಮುಗಿಯಿತು, ಅದರ ಆಳದ ತಳ ಹತ್ತಿಹೋಯ್ತು ಎಂದು ನಮ್ಮ ಕಿವಿಯ ಮತ. ಆದರೆ ಈ ಸಿದ್ಧಾಂತವನ್ನು ಶಿವಯೋಗಿ ಒಪ್ಪಿಲ್ಲ. ಏಕೆ? ಕಿವಿಯ ಸುರಾಳಶಬ್ದದ ರೂಪದಾಚೆ 'ನಾದಬ್ರಹ್ಮ'ದ ನಿಶ್ಶಬ್ದ ವಿಲಾಸವನ್ನು ಕಿವಿಯ ಬಾಗಿಲ ಮುಚ್ಚಿ ಕೇಳಿ ಅಥವಾ ಕಂಡು, 'ಶಬ್ದ'ದ ಸೀಮೆಯ ಕಲ್ಲನ್ನು ಕಿತ್ತೊಗೆದು ಕಿವಿಯ ಮತದ ಅಲ್ಪತೆಯನ್ನು ಸಾರಿಹೇಳಿ ದ್ದಾನೆ ಶಿವಯೋಗಿ. ನಿಶ್ಶಬ್ದಗಂಭೀರವೇ ಅಜಗಣ್ಣನ ನಿರಾಳದ ಗೆಜ್ಜೆ. ಈ ನಿರಾಳ ಗಂಭೀರವನ್ನು ತನ್ನ ದೇಹಭಾವಕ್ಕೆ ಕಟ್ಟಿ, 'ಬಯಲ ಬೊಂಬೆ'ಯ ಕೈಗೆ ಕೊಟ್ಟ ಈ ದೇಹದ ಬೊಂಬೆಯನ್ನು. ಈ 'ಬಯಲ ಬೊಂಬೆ'ಯನ್ನು ಕಾಣಬೇಕಿದ್ದರೆ ಅಲ್ಲಮಪ್ರಭುದೇವರ ಅನುಭವದ ಬಳಿ ಬನ್ನಿ. ಅವರು ಹೇಳುವ ಮಾತು ಕೇಳಿ:

ಏನೂ ಏನೂ ಇಲ್ಲದ ಬಯಲೊಳಗೊಂದು
ಬಗೆಗೊಳಗಾಗದ ಬಣ್ಣ ತಲೆದೋಱಿತ್ತು.
ಆ ಬಣ್ಣವನಾ ಬಯಲು ಶೃಂಗರಿಸಲು
ಬಯಲು ಸ್ವರೂಪುಗೊಂಡಿತ್ತು.
ಅಂತಪ್ಪ ಸ್ವರೂಪಿನ ಬೆಡಗು ತಾನೆ
ನಮ್ಮ ಗೊಹೇಶ್ವರಲಿಂಗದ ಪ್ರಥಮ ಭಿತ್ತಿ.[೧]

ಸರ್ವ ತತ್ತ್ವಶೂನ್ಯವಾಗಿದ್ದ ನಿಷ್ಕಲ, ನಿರವಯ ಪರಬ್ರಹ್ಮದ ಸ್ವಯಂಪ್ರಕಾಶವಾದ ಚಿದ್ ಬೆಳಗನ್ನೆ 'ಅತ್ಯುತ್ಕೃಷ್ಟವಾಗಿ ಅಲಂಕರಿಸಿಕೊಂಡು' ನಿಂದ ಅಖಂಡ ತೇಜೋಮೂರ್ತಿಯಾದ ಮಹಾಲಿಂಗ ಅಜಗಣ್ಣನ 'ಬಯಲ ಬೊಂಬೆ'ಯ ಚಿದ್ ಬೆಳಗಿನ 'ಬಗೆಗೊಳಗಾಗದ ಬಣ್ಣದ್ದೇ'. ಈ ಚಿದ್‌ಬೆಳಗಿನ ಬಯಲ ಬೊಂಬೆಯು ಕೈಯಲ್ಲಿ ಅಜಗಣ್ಣ 'ತಾನೊಂದು ದೇಹ ತಾನೊಂದು ಪ್ರಾಣ ಕರಣ ಇಂದ್ರಿಯ, ತಾನೊಂದು ಬುದ್ಧಿ ತಾನೊಂದು ಮನುಷ್ಯಜಾತಿಯ ನಾನು' ಎಂಬ ನೆಲದ ಬಣ್ಣದ ನೀರ ಬೊಂಬೆಯನ್ನು 'ನಿರಾಳದ ಗೆಜ್ಜೆಯ ಕಟ್ಟಿ' ಕೊಟ್ಟು ಅದನ್ನು ಮುದ್ದಾಡಿಸುತ್ತಿದ್ದ. ಚಿದ್‌ಬಯಲಾದ ಚಿದ್‌ಬೆಳಗಿನ ಕೈಯಲ್ಲಿ ಜೀವಭಾವದ ಪರಿಕರವನ್ನೆಲ್ಲ ಸಮರ್ಪಿಸಿ ದೇಹ ಪ್ರಾಣಾದಿಗಳನ್ನು ಮೋಹನವಾಗಿ ಮುದ್ದಿಸಿ, ಮಾನವ್ಯಕ್ಕೆ ಹೊಸತಾದ, ವಿಲಕ್ಷಣವಾದ ನವ್ಯ ದಿವ್ಯ ವಿಲಾಸದಲ್ಲಿ ಲೀಲೆಯಾಡಿದ ಅಜಗಣ್ಣ. ಸರ್ವಾಂಗಗಳನ್ನು ಲಿಂಗಕ್ಕರ್ಪಿಸಿ, ಲಿಂಗ ಸರ್ವಾಂಗವನ್ನಪ್ಪಿ ಲಿಂಗದ ಬದುಕ ಬಾಳಿ, ಲಿಂಗದ 'ಸವಿಸುಖ'ವನ್ನು ಉಂಡು ಉಟ್ಟು ಎದ್ದು ಮಲಗಿ, ಹೊಲಮನೆಯ ಕೆಲಸವನ್ನೆಲ್ಲ 'ಜೀವಭಾವ' ಮೌನವಾಗಿ 'ದೇವಭಾವ' ಮಾತಾಡಿ ಮುದ್ದಾಗಿ ಮಾಡಿ, ಲಿಂಗದಿಂದ ಮುದ್ದುಕೊಟ್ಟು ಮುದ್ದು ಬದುಕನ್ನು ಬೆಳಗಿ ಆಡಿದ ಅಜಗಣ್ಣ.

ಲೋಕಲೌಕಿಕದಲ್ಲಿ ಕಾಣಬಾರದ ಮತ್ತೂ ಒಂದು ಪ್ರಯೋಗವನ್ನು ಮಾಡಿ ತೋರಿದ ಅಜಗಣ್ಣ ತನ್ನ ಶಿವಯೋಗಶಾಲೆಯಿಂದ. ಉರಿಯ ಆಸನದ ಮೇಲೆ ಕಪ್ಪುರದ ಗೊಂಬೆಯನ್ನು ನೆಲೆಗೊಳಿಸಿದ. ಉರಿಯೇ ಕರಗಿ ಕಪ್ಪುರ ಕರಗದೆ ಉಳಿಯಿತು! ಇದು ಹೇಗೆ? ಉರಿಯೇ ಉರಿಲಿಂಗ, ಅಖಂಡ ಚಿದ್‌ಬೆಳಗಿನ ಮಹಾಜ್ಯೋತಿರ್ಲಿಂಗ. 'ಮೊರೆವ ನಾದವ ಕೇಳಿ, ಉರಿವ ಜ್ಯೋತಿಯ ನೋಡಿ......'[೨] ಎಂದು ಮುಂತಾಗಿ ಹೇಳುವ ಮಹಾದೇವಿಯಕ್ಕನ ಶಿವಯೋಗಾನುಭವದ ಉರಿವ ಜ್ಯೋತಿಯೇ ಅಜಗಣ್ಣನ ಅಗ್ನಿಯ ಸಿಂಹಾಸನ. ಮೊದಲು ನೀರ ಬೊಂಬೆಯಾಗಿದ್ದ ಮಾನವಬೋಹ ಬಯಲ ಬೊಂಬೆಯ ಕೈಯಲ್ಲಿ ಸಿಕ್ಕು ಕರ್ಪುರದ ಪುತ್ಥಳಿಯಾಗಿದೆ. ಅಜಗಣ್ಣನ ದೇಹ ಲಿಂಗವಾಸನೆಯ ನವ್ಯ ಪರಿಮಳವನ್ನು ಸೂಸುತ್ತಿದೆ. ನೀರ ಹಸಿ ಕಾಂತಿಯು ಸಂಗದಿಂದ

೧. ಲಿಂ. ಲೀ. ವಿ. ಚಾ. ಪ್ರ. ೧೪, ವ. ೧.

ಈ ಅನುಭವದ ಪೂರ್ಣವಿವರಣೆಯನ್ನು ಟೀಕಿನಲ್ಲಿ ನೋಡಿರಿ.

೨. ಯೋ. ತ್ರಿ. ಪ್ರ. ೧೫, ಪ. ೧೯.

ಮುತ್ತಾಗಿ ಹೊಳೆವಂತೆ ಅಜಗಣ್ಣನ ಅಂಗ ಲಿಂಗಕಾಂತಿಯ ಸಂಗದಿಂದ ಲಿಂಗಾಂಗವಾಗಿ ಪರಿಮಳಿಸುತ್ತಿದೆ. ಈ ಪರಿಮಳದ ಲಿಂಗಗಂಧವಾಸನೆ ಅಕ್ಕನ ಲಿಂಗ ನೀಳವಾದ, ಲಿಂಗ-ದುದ್ವಕ್ಕಿಳಿದ ಮೂಗಿಗೆ ಘಮಘಮಿಸುತ್ತಿತ್ತು. ಆದರೆ ಮುಂದೆ ಒಂದು ದಿನ ಅಣ್ಣನ ಮಂತ್ರಶಬ್ದದ ಮೊಸಲು ಮುರಿದು ನುಡಿಯಲ್ಲಿ ಪ್ರಕಟವಾಗಿ ಬೀಸರವಾಯ್ತು. ತನ್ನ ದಿವ್ಯಲಿಂಗದಲ್ಲಿ ಯೋಗಿಸಿದ ಅಣ್ಣನ ಪರಿಮಳಪುತ್ಥಳಿ, ಕರಗಿ ಬಯಲಾದ ಉರಿಯಿಲ್ಲದೆ, ತಾನೂ ಉರಿದು ಕರಗದೆ ಉಳಿಯಿತು ! ಮುಂದೇನು? ಅಣ್ಣನ ಬೆಳಗು ಬಯಲಾಯ್ತು, ಅಣ್ಣನ ದೇಹಮಾತ್ರ ರೂಪದಲ್ಲಿ ಗಟ್ಟಿಯಾಗಿ ಉಳಿದಿದೆ.[೧] ಉರಿಯಲ್ಲಿ ಸಿಕ್ಕ ದೇಹ ಉರಿಗೆ ಕರಗಿ ಉರಿಯೊಡನೆ ಬಯಲಾಗಲಿಲ್ಲವೇಕೆ? ಇದೇ ಅಕ್ಕನ ಬೆರಗು ! ಇದೇ ಅಣ್ಣನ ಯೋಗದ ಬೆಡಗು ![೨]

---

೧. ಇಲ್ಲಿ ಬಬ್ಬಿಬಾಚಯ್ಯನವರ ಇದೇ ರೀತಿಯ ಬೆಡಗಿನ ವಚನವನ್ನು ಮತ್ತು ಅದರ ಟೀಕನ್ನು ಪರಾಮರ್ಶಿಸಿ, ಹೋಲಿಸಿ ನೋಡಿ:

ಉರಿಯ ಮೊನೆಯ ಮೇಲೆ ಅರಗಿನ ಬೊಂಬೆ ತಿರುಗಾಡುತ್ತದೆ.
ಉರಿ ಕರಗಿ ಬೊಂಬೆ ಉಳಿಯಿತ್ತು—
ಏಣಾಂಕಧರ ಸೋಮೇಶ್ವರಲಿಂಗವನಿದಿರಿಗಿಟ್ಟುಕೊಂಡು.

ಟೀ. ಜ್ಞಾನಾಗ್ನಿಪ್ರಕಾಶದ ಅಗ್ರದಲ್ಲಿ ಶರಣನ ಜ್ಞಾನಾಗ್ನಿ ಪ್ರಕಾಶವನೊಳಕೊಂಡು ನಿರ್ಭಾವ ಸ್ವರೂಪವಾದ ಪರಬ್ರಹ್ಮವು ಸಂಬಂಧವಾಗಿಹುದು. ಆ ಶರಣನ ಚಿದಗ್ನಿಪ್ರಕಾಶವು ಪರಬ್ರಹ್ಮವಲ್ಲಿ ವಿಶ್ರಾಂತಿಯನೈದಲು ಆ ಪರಬ್ರಹ್ಮ ಒಂದೇ ಉಳಿಯಿತ್ತು. ಶರಣನ ಸಮ್ಯಗ್‌ಜ್ಞಾನಪ್ರಕಾಶವನೊಳಕೊಂಡಿರ್ಪ ಪರಬ್ರಹ್ಮವೆ ಕರಸ್ಥಲವಲ್ಲಿ ಇಷ್ಟಲಿಂಗವಾಗಿ ಮೂರ್ತಿಗೊಂಡು, ಸತ್ಕ್ರಿಯೋಪಚಾರಂಗಳ ಕೈಕೊಳ್ಳುತ್ತಿಹುದು (ಸಂಗ್ರಹಿಸಿದೆ).

ಬೆ. ವ. ಪು. ೬೧, ವ. ೧.

೨. ಅಜಗಣ್ಣನ ಯೋಗವಿಲಾಸವನ್ನು ಕುರಿತಿರುವ ಒಂದೆರಡು ವಚನಗಳನ್ನು ಅವಲೋಕಿಸಿರಿ:

1. ವಾಯುವನುಟ್ಟನೇಕವ್ವಾ ಅಗ್ನಿಗೆ ಆಧಾರವಾಗಿ?
ಆಕಾಶವ ಹೊದೆದ. ವೈರಾಗ್ಯದಿಂದ ಬಂದು ಅರಣ್ಯವ ಹೊಕ್ಕ.
ಕದಳಿಯ ಹೊಕ್ಕನೆಂದು ಕುಥಾಕುಳಿಗೊಳುತ್ತಿದೆ. (?)
ಹದುಳವೇಕವ್ವಾ? ಎಮ್ಮ ಸೋದರಕ್ಕೆ ಬಾಳಿಲ್ಲ.
ಬಾಣಸ ಕೂರಲಗಾಗಿ ಅವನಾಳಿಗೊಂಬ ಶಿವಯೋಗಿ.
ಅದಕ್ಕೇಳಿಗೆಯಾಗಿ ಹೊಕ್ಕನವ್ವಾ ನಮ್ಮ ಅಜಗಣ್ಣತಂದೆ.

ಏ. ಶ. ಸ್ಥ. ಪು. ೪೨೨. ವ. ೪. (ತಾಡೋಲೆಯ ಪ್ರತಿ)

2. ಉಟ್ಟುದ ತೊರೆದಂಗೆ ಊರೇನು? ಕಾಡೇನು?
ನಷ್ಟಸಂತಾನಕ್ಕೆ ಕುಲವೇನು? ಛಲವೇನು?
ಹುಟ್ಟುಗೆಟ್ಟವಂಗೆ ಪುಣ್ಯವೇನು? ಪಾಪವೇನು?
ಅದು ಕೆಟ್ಟುದು ಕೆಟ್ಟುದು.
ತನ್ನ ತಾನರಿಯದೆ ಬಟ್ಟಬಯಲಲ್ಲಿ ಬಿದ್ದ ಅಜಗಣ್ಣತಂದೆ.

ಲಿಂ. ಲೀ. ವಿ. ಚಾ. ೩೮೫, ವ. ೪೮.

ಮುಕ್ತಾಯಕ್ಕ ಕಂಡ ಅಜಗಣ್ಣನ ಶಿವಯೋಗಸಂಪತ್ತಿಯ ಮಹಾಬೆಡಗನ್ನು ಸಿದ್ಧವೀರದೇವರು ಸಲೀಲವಾಗಿ ಬಿಚ್ಚಿ ತೋರುವುದು ಹೀಗೆ:

'ಇಂತು ದೇಹವಿದ್ದೂ ದೇಹವಿಲ್ಲದೆ, ತನ್ನಜೀವುದೋಜಿದೆ,
ತಾನೆಂಬ ಸ್ವರೂಪವನು ಶಿವತತ್ತ್ವ ಸ್ವರೂಪದಲ್ಲಿ ನಿರ್ವಹಿಸಿ
ತನ್ನ ತಪ್ಪಿಸಿಕೊಂಡು ಹೋದ.........'[೧]

ಅಕ್ಕನ ಈ ವಿಚಾರ ಪ್ರಭುವಿಗೆ ಸಮ್ಮತವಲ್ಲ. ಅಜಗಣ್ಣ ಅಳಿವ ಅಗಲಿದ. ಶಿವತತ್ತ್ವವಾಗಿ ಉಳಿದ ಆದರೆ ತಂಗಿಯನ್ನು ತಪ್ಪಿಸಿಕೊಂಡು ಹೋಗಿ ಉಳಿದ-ಎಂಬಿಂಥ ವಿಚಾರ, ಮಾತು ಆತನ ನಿರಾಳದ ನಿಲವನ್ನು ಕಂಡು ಕೊಂಡು ಬಂದ ವಿಚಾರವಲ್ಲ, ಮಾತಲ್ಲ. ಏಕೆಂದರೆ ಕೇಳು ಅಕ್ಕಾ. ಬುದ್ಧಿಗೆ ಗಮಿಸಲಾಗದ, ಶಬ್ದ ಸೋಂಕಲಾರದ ಅಜಗಣ್ಣನ ಮೀಸಲ ಇರವನ್ನು:

ಅಳಿವನಲ್ಲ, ಉಳಿವನಲ್ಲ.
ಘನಕ್ಕೆ ಗಮನನಲ್ಲ. ಮನಕ್ಕೆ ಸಾಧ್ಯನಲ್ಲ.
ತನ್ನ ತಪ್ಪಿಸಿ ಇದಿರನೊಪ್ಪಿಸಿದೆನೆಂಬ ಭಿನ್ನಭಾವಿಯಲ್ಲ.
ಗೊಹೇಶ್ವರನ ಶರಣ ಅಜಗಣ್ಣನ ಅಂತಿಂತೆನಬಾರದು ಕೇಳಾ ತಾಯೆ.[೨]

ಶರಣ ಅಜಗಣ್ಣನನ್ನು 'ಅಂತಿಂತೆನಬಾರದು'. ನೀರಬೊಂಬೆ ಬಯಲ ಬೊಂಬೆ, ಅಗ್ನಿಯ ಆಸನ ಕರ್ಪುರದ ಪುತ್ಥಳಿ. ಬಣ್ಣದೋರಿದ. ಬಣ್ಣವನುಟ್ಟು ಸುಳಿದ. ಕರಗಿದ ಉಳಿದ-ಎಂದು ಅಜಗಣ್ಣನ ನಿರಾಲಂಬದ ನಿಲವನ್ನು ಶಿವಯೋಗದ ಸದ್‌ಘನ ಚಿದ್‌ಘನ ಆನಂದ ಘನ ತಾನಾಗುತ್ತಿರುವ ದಿವ್ಯ ಚಿತ್ರಾನುಭವದಮೇಲೆ ನಿಲಿಸಲಾಗದು. ಮನದ ವಿಚಾರ ಪೀಠದ ಮೇಲೆ ಕುಳ್ಳಿರಿಸಲಾಗದು ಆ ನಿರಾಲಂಬವನ್ನು. ಅಂತು ಇಂತು ಎಂಬ ಯೋಗದ ಅನುಭವ ಬುದ್ಧಿಯ ವಿಚಾರವಿಡಿದು ನಡೆವ ನುಡಿಗಡಣದ ನೆಲದ ಮೇಲೆ ಅಲಂಬಿಸ ಲಾಗದು ನಿರಾಲಂಬ ಶರಣನನ್ನು. ಅಳಿದ ಉಳಿದ, ತಪ್ಪಿಸಿಕೊಂಡ ಒಪ್ಪಿಸಿಹೋದ ! ನನ್ನ ಗುರುಮೂರ್ತಿ ಅನಿಮಿಷಲಿಂಗ 'ಅಕ್ಷಿ ಚರ್ಮಂಗಳು ಸಂಚ ತಪ್ಪಿ ನೆಲಕ್ಕೆ ಉದುರಲು 'ನನ್ನ ಮನಸ್ಸೂ ಸಂಚಲವಾಯ್ತು, ಅನುತಾಪಪಟ್ಟೆ. 'ಗುರುಸ್ಥಲದ ನಿಲವು ಪರಸ್ಥಲದಲಡ ಗಿದರೆ' ಭಾವ ಬಳಲಿತು. ಆದರೆ ಭಾವದ ಬೇರನ್ನು ಅಗಿದು, ಭಾವದ ಭ್ರಾಂತಿಯನ್ನು ಕಳೆದು ನೋಡಿದೆ. ಜನನದ ಒಳಗೆ ನೋಡಿದೆ, ಮರಣದ ಒಳಗೆ ನೋಡಿದೆ. ಜನನ ಮರಣದ ಮರೆಯಲ್ಲಿ ಅಳಿವು ಉಳಿವಿನ ಮುಸುಕು ಹಾಕಿಕೊಂಡು ಇರುವ ಇರುವ ಇರುವ, ಇರುವೆನೆಂಬ ಅರಿವೂ ಸೋಂಕದೆ ಇರುವ, ಏನೂ ಏನೂ ಇಲ್ಲದ ಬಚ್ಚಬರಿ ಯನ್ನು ಕಂಡೆ. ಕಂಡೆನೆಂಬ ಕಂಗೆ ವಶವಲ್ಲದ ಬರಿಯನ್ನು ಕಂಡೆ. ಆಗ ನುಡಿದೆ 'ತೆಜಹಿಲ್ಲದ ನಿಜವು ತನ್ನಲ್ಲಿ ತಾನು ವೇದ್ಯವಾಗಿಪ್ಪುದಲ್ಲದೆ ಇದಿರಿಟ್ಟು ತೋಜಿದೆಂಬ ಅಜ್ಞಾನ ವಿದೇನೊ? ಎಂದು. ಈ ಅಜ್ಞಾನವನ್ನು ನೀನೂ ನುಡಿಯುತ್ತಿರುವೆ. ಆದರೆ ಗೊಹೇಶ್ವ

---

೧. ಶೂ. ಸಂ. ಪು. ೨೭, ಪ್ರ. ೧೬. ೨. ಶೂ. ಸಂ. ಪು. ೨೭, ವ. ೧೬.

ರನ ಶರಣ ಅಜಗಣ್ಣ ತನ್ನಿಂದನ್ಯ ಭಿನ್ನವಾದ ಇದಿರಿಂದ, ತನಗೆ ಇದಿರಾಗಿಟ್ಟಿರುವ ನಿನ್ನಿಂದ ತಪ್ಪಿಸಿಕೊಂಡು, ಇದಿರಿಟ್ಟು ನಿನಗೆ ತೋರಿದ ತನ್ನ ಇದಿರನ್ನು ನಿನಗೆ ಒಪ್ಪಿಸಿಹೋದನೆಂದರೆ ಅಜಗಣ್ಣ ಶರಣ ತಾನು–ಇದಿರು, ತಾನು–ನೀನು ಎಂಬ ಭಿನ್ನಭಾವಿಯಲ್ಲ. ಅ-ಖಂಡವಾದ ಪರಿತಃಪೂರ್ಣವಾದ ಪರಬ್ರಹ್ಮಭಾವದಲ್ಲಿ ಬಿರುಕುಬಿಟ್ಟರೆ, ಸಂದು ತಲೆದೋರಿದರೆ ತನಗೆ ಇದಿರುಂಟು, ಇದಿರಿಗೆ ತಾನುಂಟು. ಬಿರುಕಲಾಗಿ ಖಂಡವಾದ ಭಾವ ಶರಣನಲ್ಲ, ಅದು ಅಜಗಣ್ಣನಲ್ಲ. ಖಂಡಿತವಲ್ಲದ ಶರಣನನ್ನು ಖಂಡಿತಗೊಳಿಸಿ ಅನುಭವಿಸುವುದು, ತುಣುಕು ತುಣುಕು ಮಾಡಿ ವಿಚಾರಿಸುವುದು, ಶಬ್ದದ ನುಡಿಯಿಂದ ಕಡಿಖಂಡ ಮಾಡಿ ಕೊರೆಯುವುದು ಅ-ಜ್ಞಾನವಲ್ಲದೆ ಸಮ್ಯಗ್‌ಜ್ಞಾನವಲ್ಲ.

ಪ್ರಭುವಿನ ಮಾತು ಸತ್ಯಜ್ಞಾನವೆ ಇರಬಹುದು, ಇರಬಹುದು. ಆದರೆ ಅಜಗಣ್ಣ ನನ್ನ ಮತಿಗೆ ಮರವೆಯನೊಡ್ಡಿ ಹೋದನಲ್ಲಾ ಎಂಬ ಚಿಂತೆ ಮುಕ್ತಾಯಕ್ಕನಿಗೆ. 'ಕತ್ತಲೆ ಬೆಳಗ ಕಾಂಬ ಸಂದೇಹಿ' ನಾನು 'ಎನ್ನ ಕಾಣದೆ ಭಿನ್ನಜ್ಞಾನಿ'ಯಾದೆನಲ್ಲಾ ಎಂದು ನಿಗಿನಿಗಿಸುವ ಬೆಂಕಿ ಅಕ್ಕನ ಎದೆಯಲ್ಲಿ! ಈ ಬೆಂಕಿ ಅಕ್ಕನ ನುಡಿಯಲ್ಲಿ ಹೀಗೆ ಉರಿಯುತ್ತದೆ:

ತನುವಿಡಿದನಾಗಿ ಅನುವನಱಿಯದೆ ಕೆಟ್ಟೆನು.
ಮನವಿಡಿದೆನಾಗಿ ಅಱಿವು ಉಳಿಯದೆ ಕೆಟ್ಟೆನು.
ಭಾವದ ಬಯಕೆ ಹಿಂಗದಾಗಿ ವಿಯೋಗಿಯಾಗಿ ಕೆಟ್ಟೆನು.
ಅಱಿವ ನುಡಿದು ಮಱಹಿಗೊಳಗಾದೆನು.
ಎನ್ನ ಕಾಣದೆ ಭಿನ್ನಜ್ಞಾನಿಯಾದೆನು.
ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ,
ಎನ್ನ ಮತಿಗೆ ಮಱವೆಯ ಮಾಡಿ ಹೋದನು.[೧]

ಮುಕ್ತಾಯಕ್ಕನ ಹೃದಯದ ಜ್ವಾಲೆ ಮಾತುಗೊಂಡ ನುಡಿಯಿಂದ ಅಲ್ಲಮಪ್ರಭುವಿಗೆ ವೇದ್ಯವಾಗುತ್ತದೆ. ತನು ತಾನು ತನ್ನದೆಂದು, ಏನೂ ಅಲ್ಲದ ತನುಗೆ ಅಂಟಿಕೊಂಡು 'ಅನುವನಱಿಯದೆ,' ತನ್ನ ನಿಜಸ್ಥಲ ತನಗೆ ಮರೆಯಾಯ್ತು. ಮನೆಹಿಡಿದುಕೊಂಡು ಕುಳಿತಿರುವ ಬಯಲಿಗೆ ಮನೆಯನ್ನು ಮೀರಿ ಹರವಿ ಹಬ್ಬಿರುವ ನಿಜಸ್ಥಲವಾದ ಅನಂತ ಆಕಾಶರಾಶಿ ಕಾಣುವುದು ಹೇಗೆ? 'ಮುಗಿಲಗಲ ಮಿಗೆಯಗಲ'ವಾದ ಅರಿವಿಗೆ ಮನವನ್ನು ಹಚ್ಚಿಕೊಂಡು ಮನದ ಬಣ್ಣದ ಮನುಷ್ಯ ತಾನೆಂದು ತಿಳಿದು, ಕತ್ತಲೆಯ ಕಿರಣವಾಗಿ ಅರಿವು ಕೆಟ್ಟುಹೋಯ್ತು. ಜೀವಭಾವದ ಬಯಕೆ ಹಿಂಗಿಲ್ಲ, ಜೀವಭಾವದ ರುಚಿ ಬಿಟ್ಟಿಲ್ಲ. ಇನ್ನೂ ಈ ಭಾವವನ್ನು ಭೋಗಿಸುವೆನೆಂಬ ಭಾವದ ಗಸಿ. ಗುಸುಟು ತೊಳೆದು ಹೋಗದೆ ಭಾವದ ನಿಜಸ್ಥಲದಿಂದ, ಅದರ ಮೂಲಸ್ಥಲದಿಂದ ದೂರವಾಗಿ ತನ್ನ ನಿಜದಲ್ಲಿ ತಾನಾಗಿ ಇರುವ ಯೋಗ ಇಲ್ಲವಾಯ್ತು. ಈ ಶಿವಯೋಗವಿಲ್ಲದ ವಿಯೋಗ ಎಂಥ ದುಃಖ! ಎಷ್ಟು ಹಾನಿ! ಇಂಥ ನಿಜಯೋಗ ವಿಯೋಗವಾದ, ವಿಘಟಿತವಾದ ವ್ಯಥೆಯಲ್ಲಿ ಮುಳುಗಿದ್ದರೂ ಶಿವಜ್ಞಾನವನ್ನು ಬಹಿರಂಗಕ್ಕೆ ಉಚ್ಚರಿಸಿ ಅರಿವು ಮರವೆಯ

---

೧. ಶೂ. ಸಂ. ಪು. ೨೮, ವ. ೧೭.

ಮಂಕು ಆವರಿಸಿತು. ಇದರ ಫಲಿತವೇನು? ನನಗೆ ನನ್ನ ನಿಜ ಮರೆಯಾಯ್ತು. ನನಗೆ ನಾನೇ ಕಾಣದಾದೆ. ಅರಿವಿನ ಕಣ್ಣು, ಸ್ವಯಂಜ್ಞಾನದ ತಲೆ ಇನ್ನೆಷ್ಟು ಕೆಡಬೇಕು? ಘನಕ್ಕೆ ಘನವಾದ ಮಹಾಘನಲಿಂಗಕ್ಕೆ ನೈವೇದ್ಯವಾಗಿ ಹೋದ ಘನಮಹಿಮ ಅಜಗಣ್ಣ ಇಂಥ ಮರೆಯ ತಂದಿಟ್ಟ ನನ್ನ ಪಾಲಿಗೆ! ಇನ್ನೇನು?

ಅಂತೂ ಮುಕ್ತಾಯಕ್ಕನಿಗೆ 'ತನ್ನ ಅಱಿವಿನ ಮುಂದೆ ಇದಿರಿಟ್ಟು ತೋಱುವ ಪರವಸ್ತುವಿನಲ್ಲಿ' ನೆರೆವೆನೆಂಬ ವಿಕಳಭಾವ ಭಿನ್ನಭಾವ, ಭಿನ್ನಜ್ಞಾನವೆಂದು ಮೆಲ್ಲಮೆಲ್ಲಗೆ ಹೊಳಹುದೋರುತ್ತದೆ. ವಿಕಳಾವಸ್ಥೆಯಲ್ಲಿದ್ದ ಅಕ್ಕನನ್ನು ಮೆಲ್ಲಮೆಲ್ಲಗೆ ಎಬ್ಬಿಸುತ್ತ ಸಕಳಾವಸ್ಥೆಯ ಸಹಜ ಪರಿಪೂರ್ಣದೆಡೆಗೆ ಕರೆದೊಯ್ಯುತ್ತಿದ್ದಾನೆ ಅಲ್ಲಮದೇವ. ಈ ದೇವ ಅಕ್ಕನನ್ನು ಕರೆದುಕೊಂಡು ಹೋಗುತ್ತಿರುವ ಹಾದಿ ಇಕ್ಕಟ್ಟೆಂದರೆ ತೀರ ಇಕ್ಕಟ್ಟು, ಸುಗಮ ವಿಸ್ತಾರವೆಂದರೆ ಅತ್ಯಂತ ಸುಗಮ, ವಿಶ್ವದತ್ತಾಚೆ ವಿಸ್ತಾರ. ಇದೋ ಇಲ್ಲಿ ಕೇಳಿ ನೋಡಿ. ಮುಕ್ತಾಯಕ್ಕನ ವಿಚಾರಸರಣಿಯನ್ನು ತಿದ್ದುತ್ತಿರುವ ಪ್ರಭುವಿನ ಮಾತಿನ ರೀತಿಯನ್ನು:

ತನು ಉಂಟೆಂದರೆ ಪಾಶಬದ್ಧ; ಮನ ಉಂಟೆಂದರೆ ಭವಕ್ಕೆ ಬೀಜ.
ಅಱಿವ ನುಡಿದು ಕೆಟ್ಟೆನೆಂದರೆ ಅಜ್ಞಾನ;
ಭಾವದಲ್ಲಿ ಸಿಲುಕಿದೆನೆಂಬ ಮಾತು ಬಯಲ ಭ್ರಮೆ ನೋಡಾ!
ಒಮ್ಮೆ ಕಂಡೆನೊಮ್ಮೆ ಕಾಣೆ, ಒಮ್ಮೆ ಕೂಡಿದೆನೊಮ್ಮೆಯಗಲಿದೆನೆಂದರೆ
ಕರ್ಮ ಬೆಂಬತ್ತಿ ಬಿಡದು.
ನಿನ್ನೊಳಗೆ ನಿನ್ನ ತಿಳಿದು ನೋಡಲು ಭಿನ್ನ ಉಂಟೇ?
ಗೊಹೇಶ್ವರಲಿಂಗವನಱಿವರೆ, ನೀನೆಂದೆ ತಿಳಿದು ನೋಡಾ ಮರುಳೆ!

ಎಲೆ ಮರುಳು ತಾಯೇ, ಎಂಥ ಮಾತು ನಿನ್ನವು! ತನುವಿಡಿದು ಕೆಟ್ಟೆ, ಮನವಿಡಿದು ಕೆಟ್ಟೆ, ವಿಯೋಗಿಯಾಗಿ ಕೆಟ್ಟೆ, ನುಡಿದು ಮರವೆಯೊಳಗಾದೆ, ಭಿನ್ನಜ್ಞಾನಿಯಾದೆ, ಮತಿಗೆ ಮರವೆಯ ಒಡ್ಡು ಹಾಕಿದ ಅಜಗಣ್ಣ! ನಿನ್ನೊಳಗೆ ನಿನ್ನ ತಿಳಿದುನೋಡು ತಾಯೆ. ನೀನು ನಿನಗೆ ಕಾಣದಂತೆ ಮರವೆಯ ಮರೆಯೊಡ್ಡು ಹಾಕಿದಾತ ಅಜಗಣ್ಣನಲ್ಲ. ತನು ವೊಂದುಂಟು ನನಗೆ, ಈ ತನುವ ಧರಿಸಿಕೊಂಡಿರುವೆ ನಾನು ಎಂದು ತನುವಿನ ಒಡ್ಡು ಕಟ್ಟಿಕೊಂಡೆ ನಿನಗೆ ನೀನೆ. ಮನ ಉಂಟೆಂದು ನಿನಗೆ ನೀನೆ ಅಡ್ಡಗೋಡೆ ಕಟ್ಟಿಕೊಂಡೆ. ನಾನೊಂದು ಭಾವವೆಂದು, ನನಗೆ ಭಾವದ ಬಯಕೆ ಉಂಟೆಂದು ಬಯಲ ಕೋಟೆಯ ನಿರ್ಮಿಸಿಕೊಂಡೆ ನಿನಗೆ ನೀನೆ. ಕಂಡೆ ಕಾಣೆ ಕೂಡಿದೆ ಅಗಲಿದೆನೆಂದು, ಮತ್ತೆ ಕಾಣಬೇಕು ಮತ್ತೆ ಕೂಡಬೇಕು, ಅಗಲದಂತೆ ಕೂಡಬೇಕು ಅಡಗದಂತೆ ಕಾಣಬೇಕು ಎಂದು ಅರ್ಥ ವಿಲ್ಲದೆ ಶ್ರಮಿಸುವ ಕರ್ಮದ ಕೋಟೆಯ ಹುಟ್ಟಿಸಿಕೊಂಡೆ, ಯಾರು? ನೀನು. ನಿನಗೆ ನೀನೆ ಮರೆ ಹಾಕಿಕೊಂಡು ಅಣ್ಣನನ್ನು ದೂರುವುದೇಕೆ? 'ನೀನಾರೆಂದು ಹೇಳಾ ಎಲೆ ಅವ್ವಾ?'

ತನು ಉಂಟು, ತನುವ ಹಿಡಿದುಕೊಂಡು ಕೆಟ್ಟೆ. ತನುವ ಬಿಚ್ಚಿ ಬೇರೆ ಮಾಡಿರಿಸಿ ದರೆ 'ಅನು'ವನರಿಯಬಹುದು, ಎಂದು ನಿನ್ನ ವಿಚಾರ. ಉಂಟು ಎಂಬುದೆ ಪಾಶ–

ಹಿಡಿದುಕೊಂಡೆ ಎಂಬುದೆ ಆ ಪಾಶದಿಂದ ನಿನ್ನ ನೀ ಬಂಧಿಸಿಕೊಳ್ಳುವ ರೀತಿ. ಇದೇ ನಿನ್ನನ್ನು ಹುಟ್ಟಿಸಿದ ಪಾಶ, ಮತ್ತೆ ನಿನ್ನನ್ನು ಹುಟ್ಟಿಸುವ ಭವಪಾಶ. ಈ ಹಗ್ಗದ ಬಳ್ಳಿಗೆ ಬೀಜ ನಿನಗೆ ತನು ಉಂಟು ಎಂದು ಹೇಳುವ ಮನ. ತನ್ನ ಅನುವನ್ನು ತನ್ನ ಅರಿವನ್ನು ಕೆಡಿಸುವ ತನು ಮನವನ್ನು ಬಿಚ್ಚಿ ಬತ್ತಲೆಯಾದರೆ ಎಲ್ಲ ಸರಿಹೋಗುವುದು ಎಂದು ನಿನ್ನ ಮತ. ಆದರೆ ತನುವನ್ನು ಬಿಚ್ಚಿ ಎಲ್ಲಿ ಇಡುವೆ? ಮನವನ್ನು ಕಳೆದು ನಿಲ್ಲುವೆ ಎಲ್ಲಿ? ಮತ್ತೊಮ್ಮೆ ಹೇಳುತ್ತೇನೆ—ಗೊಹೇಶ್ವರಲಿಂಗವನು ಅಗಲಿ ಇರಲು ನಿಲ್ಲಲು ಇಡಲು ಎಡೆ ಇಲ್ಲವೆಂದು. ನಿನ್ನೊಳಗೆ ಇಳಿದು ನೋಡು ತಾಯೆ; ಒಳಗೆ ಇಳಿದು ನಿನ್ನ ತಿಳಿದು ನೋಡು ತಾಯೆ. ಇನ್ನೂ ಮುಂದಕ್ಕೆ ಬಂದು ನೋಡು ತಾಯೇ. ಕಾಣಬಾರದುದು ಕಾಣುತ್ತದೆ, ಕೇಳಬಾರದುದು ಕೇಳುತ್ತದೆ. ಬುದ್ಧಿಗೆ ಬಾರದುದು ತಿಳಿಯಬರುತ್ತದೆ, ಭಾವಾತೀತ ವಾದುದು ಸ್ವಯಂವೇದ್ಯವಾಗುತ್ತದೆ. ಇಲ್ಲಿ ಒಳಗೆ ನಿಂದು ನೋಡು. ಲಿಂಗವಲ್ಲದ ತನುವೊಂದಿದೆಯೆ? ಲಿಂಗವಲ್ಲದ ಮನವೊಂದುಂಟೇ ನಿನಗೆ? ಲಿಂಗವಲ್ಲದ ಭಿನ್ನವಸ್ತು ಬೇರಿಟ್ಟು ಇಲ್ಲಿ ಇಲ್ಲ. ಲಿಂಗವಲ್ಲದ ನೀನೂ ಇಲ್ಲಿಲ್ಲ, ನೀನಲ್ಲದ ಲಿಂಗವೂ ಇಲ್ಲಿಲ್ಲ. ಈ 'ಗೊಹೇಶ್ವರಲಿಂಗವನಱಿವರೆ ನೀನೆಂದೆ ತಿಳಿದು ನೋಡಾ'. ಅರಿವ ನುಡಿದು ಅದೇಕೆ ಕೆಟ್ಟೆ? ಲಿಂಗದಿಂದ ಭಿನ್ನವಾಗಿದ್ದು ಲಿಂಗವ ಭಿನ್ನವಿಟ್ಟು, ಇದಿರಿಟ್ಟು ತಾನೆಂಬ ಅರಿವು ನುಡಿದರೆ ಅರಿವು ಮರವೆಗೊಳಗಾಯ್ತು, ಮರವೆಯು ಮಾತು ಅಜ್ಞಾನವಾಯ್ತು. ಇಂಥ ಅಜ್ಞಾನ ಬಾಯ್ದೆಗೆದು ಶಬ್ದ ಮಾಡಿದರೆ ನೀನು ಕೆಟ್ಟೆ. ಇದು ನಿಜ. ಆದರೆ, ತಾಯೆ, ತಾನೆಂಬರಿವು ಮತ್ತು ಲಿಂಗವೆಂಬ ಅರಿವು ಕೂಡಿದ ಸಂಗಮದಲ್ಲಿ ಸಂಗಮಲಿಂಗ ಸಮ ರಸವ ನುಡಿದರೆ ನೀನು ಕೆಟ್ಟುದು ಹೇಗೆ? ಕೆಡಬಲ್ಲ ನೀನೇ ಇಲ್ಲವಾದ ಮೇಲೆ ಕೆಡುವವ ರಾರು? 'ನಿನ್ನೊಳಗೆ ನಿನ್ನ ತಿಳಿದು ನೋಡಲು,' 'ಭಾವದಲ್ಲಿ ಸಿಲುಕಿದೆ' 'ಭಾವದ ಬಯಕೆ ಹಿಂಗದು' ಎಂಬ ಮಾತಿಗೆ ಅರ್ಥವೇನು ಅಕ್ಕಾ? ಒಳಗೆ ನೋಡಿದರೆ ಎಲ್ಲ ಭಾವ ಒಂದು ಭಾವ. ಒಂದು ಭಾವ ಲಿಂಗಭಾವ, ಎಲ್ಲ ಬಯಕೆ ಲಿಂಗದ ಬಯಕೆ. ಇಲ್ಲಿ 'ವಿಯೋಗಿ'ಯಾಗಿ ಕೆಟ್ಟೆನೆಂಬುದು ಬಯಲು ಭ್ರಾಂತಿ. ಲಿಂಗವನಗಲಿ, ವಿಯೋಗ ವಾಗಿರಲು ಕಾಲದಲ್ಲಿ ನಿಮಿಷ-ನಿಮಿಷಾಂಶದ ಎಡೆಯಿಲ್ಲ, ದೇಶದಲ್ಲಿ ಮುಳ್ಳುಮೊನೆಯ ಕೊನೆಗೆ ಇಂಬಿಲ್ಲ. ಇಲ್ಲಿಗಿಳಿದು ತಿಳಿದು ನೋಡಿದರೆ, ಕಂಡೆ ಕಾಣೆ ಯೋಗಿಯಾದೆ ವಿಯೋಗಿಯಾದೆನೆಂಬ ಮಾತು ತನ್ನ ತಾ ಮಾಡಿದ ಕರ್ಮ ಎಂಬ ಮಿಥ್ಯಾಕರ್ಮದ ಕುಟಿಲ ತಾನೆ ತೋರುತ್ತದೆ. 'ಪರತತ್ತ್ವವೆಂಬುದು ಬೇಱಿಲ್ಲ, ನೀನೆಂದು ತಿಳಿದು ನೋಡು.........' ತಾಯೆ.

ಹೌದು ಪ್ರಭು, ನೀನು ಹೇಳುವ ಮಾತಿನಲ್ಲಿ ನಿಜವಿರಬಹುದು. ಆದರೆ,
ಹಿಡಿದಾಚಾರವ ಬಿಡದನ್ನಕ್ಕರ, ಎನ್ನ ಅಱಿವು ಮಱೆಯದನ್ನಕ್ಕರ,
ಎನ್ನ ಮನವ ಸುಡದನ್ನಕ್ಕರ, ಎನ್ನ ಬೆಡಗಿನ ಗುರುವ ತೋಱೆಯದನ್ನಕ್ಕರ,
ಸುಸುರವೆಂತಪ್ಪುದೊ ಹೇಳಾ?
ಹೋಹ ಬಟ್ಟೆಯನಱಿಯದನ್ನಕ್ಕರ
ತಾನಾಗಬಾರದು ಕಾಣಾ,–ಎನ್ನ ಅಜಗಣ್ಣತಂದೆಯಂತೆ.

ನನ್ನ ಹಡೆದ ಗುರುತಂದೆ ಅಜಗಣ್ಣ ತನ್ನ ತಾನಾದ. ತನ್ನ ನಿಜಕ್ಕೆ ಹೋಗುವ ಬಟ್ಟೆಯ ನರಿದ, ಅಂತೆಯೆ ತನ್ನ ತಾನಾದ. ನನ್ನ ಬಟ್ಟೆ ನನಗೆ ಇನ್ನೂ ದುಸ್ಸರವಾಗಿದೆ. ಅದೇಕೆ? 'ಲಿಂಗದಲ್ಲಿ ಇದಿರಿಟ್ಟು ಮಾಡುವ ಸೂತಕ' ಇನ್ನೂ ಹಿಂಗಿಲ್ಲ. ನಾನು ಲಿಂಗಕ್ಕೆ ಆಚರಿಸುವೆನೆಂಬ ಭಿನ್ನಾಚಾರ ನನಗೆ ಅಂಟಿಕೊಂಡಿದ್ದರೆ ಲಿಂಗದ ನಿರಾಲಂಬ ಮಾರ್ಗ ಸುಖಗಮನವಲ್ಲ. ನಾನು ಲಿಂಗವನರಿದೆ ಎಂಬ ಅರಿವಿನ ಬಿರುಕು ಮಾಯದಿದ್ದರೆ, ಬಚ್ಚಬರಿಯರಿವಿನಲ್ಲಿ ನಾನು ಅರಿದವನೆಂಬ ಕುರುಹು ನಿಷ್ಪತ್ತಿಯಾಗದಿದ್ದರೆ ಬಚ್ಚಬಯಲ ಹಾದಿ ಹೇಗೆ ಸುಗಮವಾದೀತು? ಮತ್ತೆ ಮನದ ಹೌದು ಅಲ್ಲ, ಸಂಕಲ್ಪ ವಿಕಲ್ಪ. ಈ ಆದೀತು ಆಗದು ಎಂಬ ಮನಸ್ಸಿನ 'ಮನತನ' ಸುಡದೆ ಹಾದಿ ಹೇಗೆ ಸಾಗೀತು? ಹಾದಿಹಿಡಿದು ನಡೆವಾಗ 'ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋಱುವ' ಬೆಡಗಿನ ಗುರುಮೂರ್ತಿ, ಶಿವಯೋಗಿ ಅಜಗಣ್ಣನ ಕಾಟ! ಈ ಗುರುವೆಂಬ ಕುರುಹು ಅಡಗದಿದ್ದರೆ ನಿಜಸ್ಥಲ ಹೇಗೆ ನಿಲುಕೀತು?

'ಹೋಹ ಬಟ್ಟೆಯನಱಿಯದನ್ನಕ್ಕರ ತಾನಾಗಬಾರದು?'

ಅದೇಕೆ? ಇದೆಂಥ ಮಾತು ತಾಯೇ! '......ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನಱಿಯಬಲ್ಲರೆ, ಗೊಹೇಶ್ವರನೆಂಬ ಲಿಂಗ ದೂರವಿಲ್ಲ ಕೇಳಾ ಮರುಳೆ.'[೧] ಲಿಂಗವಿಲ್ಲದ ತನು ಲಿಂಗವಲ್ಲದ ತನು, ಲಿಂಗವಿಲ್ಲದ ಮನ ಲಿಂಗವಲ್ಲದ ಮನ, ಇಂಥ ತನು ಮನ ಅಥವಾ 'ದೇಹೇಂದ್ರಿಯಮನಃಪ್ರಾಣಾದಿ'ಗಳ ಮುಖವಾಗಿ ಲಿಂಗವ ಮುಟ್ಟುವೆನೆಂದು ಆಚಾರವ ಹಿಡಿದು ನಡೆವೆನೆಂದರೆ, ಅರಿದೆನೆಂಬ ಅರಿವ ಮರೆವೆನೆಂದರೆ, ಮನವ ಸುಡುವೆ ಗುರುವ ಬಿಡುವೆನೆಂದರೆ–ಇದೆಲ್ಲ ಭಾವದ ಶಂಕೆ, ಭಾವವೇರಿದ ನೆಳಲುಗುದುರೆ ತಾಯೆ! 'ಇಲ್ಲದ ಶಂಕೆಯನುಂಟೆಂದು ಭಾವಿಸಿದರೆ ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿರ್ಪುದು.' ಪರಮಾರ್ಥವಾಗಿ ಚರಮಸತ್ಯವಾಗಿ ನಿಲ್ಲದ ತರಂಗಮಾಲೆಯ ತಗ್ಗು–ಎತ್ತರದಂತಿರುವ ಇಲ್ಲ–ಉಂಟುಗಳು, ತನುವಿನಲ್ಲಿ ಕುಳಿತು ವಾಯುವಿನಲ್ಲಿ ಪ್ರಾಣಿಸಿ ಜೀವಭಾವದಲ್ಲಿ ಬದುಕಿದಂತಿರುವ ಜೀವಾತ್ಮಭಾವದ ಶಂಕಾನಿರ್ಮಾಣಗಳು, ಮಾಯಾ ಪ್ರಕೃತಿಯ ಛಾಯಾವಿಲಾಸಗಳು. ಕೇಳು ತಾಯೇ,

ಇಲ್ಲವೆಯ ಮೇಲೊಂದು ಉಂಟೆಂಬ ಪ್ರತಿಭಾವ
ಅಲ್ಲಿ ಇಲ್ಲಿ ಎನ್ನದೆ ತಾನೇ ನಿಂದುದು ನೋಡಾ!
ತನ್ನಲ್ಲಿಯ ಪ್ರಕೃತಿಯ ತಾನೇ ಹಿಂಗಿಸಲು
ಅಲ್ಲಿಯೇ ಸುಜ್ಞಾನ ಉದಯಿಸಿತ್ತು.
ಎಲ್ಲಾ ಎಡೆಯಲ್ಲಿಯೂ ನಿಂದ ನಿಜಪದವ,–
ಗುಹೇಶ್ವರಾ, ನಿಮ್ಮ ಶರಣ ಬಲ್ಲ.[೨]

ಇಲ್ಲಾ ಎಂಬಲ್ಲಿ ಉಂಟು ಎಂಬುದಿದೆ, ಉಂಟು ಎಂಬಲ್ಲಿ ಇಲ್ಲಾ ಎಂಬ 'ನಾಸ್ತಿ'ಯ ನೆಳಲಿದೆ. ಈ ಇಲ್ಲ–ಉಂಟುಗಳನ್ನು ಮೀರಿ ನಿಂದ ನಿಜಪದದಲ್ಲಿ ತೋರಿ ಅಡಗುವ ಉಂಟು–ಇಲ್ಲಗಳು ತನ್ನಲ್ಲಿಯೆ ಮೂಡಿ ತನ್ನಲ್ಲಿಯೆ ಮುಳುಗುವ ತನ್ನ 'ಪ್ರ-ಕೃತಿ'ಯೆ.

೧. ಶೂ. ಸಂ. ಪು. ೨೮-೨೯, ವ. ೨೦. ೨. ಪ್ರ. ವ. ಪು. ೧೮೪-೧೮೫, ವ. ೬೮.

ಈ ತನ್ನ ತಾ ಮಾಡಿದ ಮಹಾಮಾಟ, ಪ್ರಕೃತಿ,–ತನು ಮನ ಭಾವ ಇಂದ್ರಿಯ ಆಚಾರ ವಿಚಾರ–ಮತ್ತೆ ತನ್ನಲ್ಲಿಯೆ ತದ್‌ಗತವಾಗಿ ತಲ್ಲೀಯವಾದರೆ ಅಲ್ಲಿಯೆ ಪ್ರಜ್ವಲಿಸಿತ್ತು ಸಮ್ಯಗ್‌ಜ್ಞಾನ. ಇಲ್ಲ-ಉಂಟುಗಳ, ಅಲ್ಲ–ಅಹುದುಗಳ ದಂದುಗವಿಲ್ಲದೆ, ಎಡೆಬಿಡು ವಿಲ್ಲದೆ ಎಲ್ಲೆಲ್ಲಿಯು ನಿಂದಿತ್ತು ನಿಜಪದ, ಎಲ್ಲ ಸ್ವ-ಸ್ಥವಾದ ನಿಜಸ್ಥಲ. ಈ ಸ್ಥಲ ದೂರ ಇಲ್ಲ. ನಿನಗೆ ನೀನು ದೂರವಲ್ಲ. ಮನದ ಒಳಗೆ ಹೊಕ್ಕು ನೋಡು, ನಿನ್ನ ಗಂಭೀರ ನಿನಗೆ ಗೋಚರವಾಗುತ್ತದೆ. ನಿನ್ನ ನಿಜದ ಗಂಭೀರವೇ ಲಿಂಗದ ಅನು. ಮತ್ತೆ ಕೈಯಲ್ಲಿ ಇಷ್ಟ ಲಿಂಗದ ಪೂಜೆ, ಮನದಲ್ಲಿ ಪ್ರಾಣಲಿಂಗದ ಪ್ರಾಣಪೂಜೆ, ಭಾವದಲ್ಲಿ ಭಾವಪೂಜೆ–ಈ ಎಲ್ಲ ಅಂತರಂಗ ಬಹಿರಂಗದ ಕ್ರಿಯಾಕಲಾಪದಿಂದ ಮೈದೆಗೆದು ತನ್ನ ಅನುವನ್ನು ತೋರುವ ಕ್ರಿಯಾಗಮ್ಯ ಲಿಂಗ ಇದೆ. ಆದರೆ ಇನ್ನೂ ಮುಂದೆ ನಡೆ ತಾಯೆ, ಪೂಜೆ ಭಕ್ತಿ ಆಚಾರ ಆವರಣ ಅರ್ಪಣ ಸ್ವೀಕಾರ ಮುಂತಾದ ಎಲ್ಲ ಕ್ರಿಯೆಗಳ ಉಲುಹಡಗಿದ ನಿಷ್ಕ್ರಿಯಾಗಮ್ಯವಾದ ನಿಃಕ್ರಿಯಲಿಂಗವೂ ಇದೆ. ಇಲ್ಲಿ ಯಾವುದೇ ಜಲದ ಮಜ್ಜನವಿಲ್ಲ, ಮರದ ಗಂಧವಿಲ್ಲ, ಗಂಟೆಯ ನಾದವಿಲ್ಲ, ಅಕ್ಷತೆಯ ಆರೋಪಣ ಇಲ್ಲ; ಇಲ್ಲಿ ಧೂಪದ ಹೊಗೆ ಬೇಡ, ದೀಪದ ಬೆಳಗು ಬೇಡ, ಮಂತ್ರದ ಮಾತಿಲ್ಲ, ಭಾವಕ್ಕೆ ಅಂತಿಂತೆಂದು ಭಾವಿಸುವ ಭಾವನೆಯ ಕ್ರಿಯಾದಂದುಗವಿಲ್ಲ. ನಿಃಕ್ರಿಯಲಿಂಗಕ್ಕೆ ಕ್ರಿಯಾಚರಣೆಯ ನೊಡ್ಡಿದರೆ ತನಗೂ ಲಿಂಗಕ್ಕೂ ಸಂದು ಉಳಿಯುತ್ತದೆ ತಾಯೇ. ಈ ಸಂದು ಮಾಯದ ವರೆಗೆ 'ನಿಃಕ್ರಿಯಲಿಂಗಕ್ಕೆ ಕ್ರಿಯಾಂತಲ್ಲದೆ ಆಗದೆಂಬರ ಸಂದು ಸಂಶಯ ಮುಂದುಗೆಡಿಸು ತ್ತಿರ್ಪುದು ಕೇಳಾ.' ಈ ಸಂದಿನ ಸಂಶಯವನ್ನು ಬಿಟ್ಟು ಹೊಂದಿಸಿಕೊಂಡು ಮುಂದೆ ನಡೆ ತಾಯೇ. ನಿಃಕ್ರಿಯ ಗೊಹೇಶ್ವರಲಿಂಗ ದೂರವಿಲ್ಲ. ಇದೋ, ಬೇಕಿದ್ದರೆ ನೋಡು ನಾನು ಲಿಂಗಕ್ಕೆ ನಡೆದ ಬೆಡಗನ್ನು:

ಚಿತ್ತದ ಸ್ನೇಹವ ಸ(ಮ?)ಜ್ಜನಕರ್ಪಿತವ ಮಾಡೆ,
ನೆಟ್ಟಿರ್ದ ಬೆಟ್ಟಕ್ಕೆ ತಾಗು ತಡೆಯುಂಟೆ ಎಲೆ ಮರುಳೆ?
ಆತುರದಲ್ಲಿ ಕಳವಳಿಸಿ, ವ್ಯಾಕುಲದಲ್ಲಿ ದಾವರಿಸುತಿಪ್ಪುದೀ ಮನವು.
ಆ ಮನವು ಬೆನ್ನುದೋರದ ಘನಕ್ಕೆ ಬೆಂಬತ್ತಿ ಬಿಡದಿರಬಲ್ಲಡೆ
ತನ್‌ಮೂರ್ತಿ ತನ್ನಲ್ಲಿ ಗುಹೇಶ್ವರಲಿಂಗವು.[೧]

ಎಂದೂ ಎಲ್ಲಿಯೂ ಬೆನ್ನುದೋರದ ಘನಕ್ಕೆ ನಿನ್ನ ಮನವೇ ಬೆನ್ನುಮಾಡಿಕೊಂಡು ನಡೆದರೆ, ತನ್ನಲ್ಲಿಯ ತನ್ಮೂರ್ತಿ ತಾನೇನು ಮಾಡೀತು? ಊರೊಳಗಿದ್ದು ಹಲವು ಪಯಣವ ಬೆಳೆಸಿದರೆ ಬಳಲುವರಾರು? ತಾನಿದ್ದ ತನ್ನೂರು ತನಗೆ ದೂರವೆಲ್ಲಿ? ಸಮೀಪ ವಾದರೂ ಎಲ್ಲಿ? ದೂರವೆಲ್ಲ ಸಮೀಪವಾದರೆ, ಸಮೀಪವೆಲ್ಲ ನಿಸ್ಸಮೀಪವಾದರೆ ಮತ್ತೆ ಮುಂದೇನು?

ಪ್ರಭುದೇವಾ, ನಿನ್ನ ಮಾತಿನಲ್ಲಿ ನಿಜವಿರಬಹುದು. ಆದರೆ '......ಎನ್ನ ಅಜಗಣ್ಣ ನಿಕ್ಕಿದ ದಸರಿದೊಡಕಿಂಗೆ ಬೆಱಗಾದೆನು'! ತನುವಿನ ಒಳಗೆ ತನುವಿನ ತನುವಾಗಿ ಲಿಂಗ

---

೧. ವ. ಶಾ. ಸಾ. ಭಾ. ೨, ಪು. ೪೫೫, ವ. ೩.

ವಿದೆ, ಮನದ ಒಳಗಡೆ ಮನದ ಸಂಚಾರಕ್ಕೆ ತಾನೆ ಪ್ರೇರಕನಾಗಿ ಲಿಂಗವಿದೆ, ಪ್ರಾಣ ಚೈತನ್ಯದ ನೆಲವನ್ನು ಅಗಿದು ನೋಡಿದರೆ ಚೈತನ್ಯವನ್ನು ಪ್ರಾಣಿಸುವಂತೆ ಮಾಡುವ ಪ್ರಾಣಲಿಂಗವಿದೆ, ಇದರಂತೆ ಕಣ್ಣಿನೊಳಗೆ ಕಣ್ಣಿದೆ, ಕಿವಿಯೊಳಗೆ ಕಿವಿಯಿದೆ, ಕಾಲಿನ ಮರೆಯಲ್ಲಿ ನಡೆವ ಕಾಲಿದೆ, ಕೈಯ ಹಿಂದೆ ಕುಳಿತು ಮಾಡುವ ಕೈಯಿದೆ, ಜೀವನ ಮರೆಯಲ್ಲಿ ದೇವ ತುಂಬಿ ತುಳುಕುತಿದ್ದಾನೆ, ವಿಶ್ವಬ್ರಹ್ಮಾಂಡವೆಂಬ ಮೇಘಮಂದಿರದ ಗರ್ಭಗುಡಿಯಲ್ಲಿ ಎಡೆದೆರಹಿಲ್ಲದ ಹಗಲಿರುಳನ್ನು ಮೀರಿ ಮಿಂಚುವ ಉರಿಲಿಂಗವಿದೆ–ಎಂದೇನೇನೋ ನುಡಿದು ಹೇಳಿದರೆ ಕೇಳಿದವರಿಗೆ ಕಾಣಬೇಕೇನು? ತಿಳಿಯಬೇಕೇನು? ವಿಶ್ವ ಪ್ರಪಂಚದ 'ಲೋಕ'ದ ಸೀಮೆಯೊಳಗೆ ದಿಗ್‌ದಿಗಂತದಲ್ಲೆಲ್ಲ ನಡೆದಾಡಬಲ್ಲ ಮನ ನೀವು ಹೇಳುವ 'ಒಳಗುಲಿಂಗ'ದಲ್ಲಿಗೆ ನಡೆದು ಅದರ ಉರಿಯನ್ನು ಮುಟ್ಟಲಾರದು. 'ಹೊರಗುಲಿಂಗ'ವನ್ನು ಕಣ್ಣು ಮುಟ್ಟಬೇಕೆಂದರೆ, ಇಷ್ಟಲಿಂಗ ದೃಷ್ಟಲಿಂಗವಾಗಬೇಕೆಂದರೆ ಆ ಲಿಂಗದಲ್ಲಿ ನಟ್ಟ ನೋಟದ ಕಣ್ಣ ಪೂಜೆ ಬೇಕು. ಈ ಒಳಹೊರಗು ಲಿಂಗದ ಸಾಕಾರ ಸಾಕಾರ-ನಿರಾಕಾರವನ್ನು ಮೀರಿ ನಿಂದ ನಿರಾಕಾರಲಿಂಗ ತನು ಮನ ಪ್ರಾಣಾದಿಗಳ ಯಾವುದೇ ಸಂಭ್ರಮವಿಕಾರಕ್ಕೆ ನಿಲುಕುವುದಲ್ಲ. ನಿಲುಕದ ಈ ನಿರಾಕಾರವನ್ನು 'ಮನದೊಳಗೆ ಅನುಗೊಳಿಸಿ' ತೋರುವ ನಿರಾಕಾರಸಾಮರ್ಥ್ಯ ಅಜಗಣ್ಣನಲ್ಲಿತ್ತು. ಕಣ್ಣು ಕಟ್ಟಿ ಕನ್ನಡಿಯ ತೋರಿ, ಕತ್ತಲೆ ಬೆಳಗಿನ ನಡುನೀರಲ್ಲಿ ಕೈಬಿಟ್ಟು ಹೋದ ಅಜಗಣ್ಣ. ಕತ್ತಲೆ ಬೆಳಗಿನ ಈ 'ಹೃದಯಗ್ರಂಥಿ'ಯನ್ನು ಬಿಚ್ಚಬಲ್ಲ ಗುರುವರೆಲ್ಲಿ ಪ್ರಭುವೇ?

ಅಕ್ಕಾ, ನಿನ್ನ ಸಮಸ್ಯೆ ವಿಚಿತ್ರ! ಹೃದಯಗ್ರಂಥಿಯನ್ನು ಬಿಚ್ಚಿ 'ಮನದೊಳಗೆ ಘನವನನುಗೊಳಿಸಿ' ತೋರಬಲ್ಲವರಿಲ್ಲಾ? ಕೈದುಕೊಡಬಹುದು ಅದರೆ ಕಲಿತನವ ಕೊಟ್ಟವರುಂಟೆ ತಾಯೇ? ಹಡೆದ ಆಯುಧವನ್ನು ಹಿಡಿದು ಕಾಡುವುದು ತನ್ನ ನಿಜ ಶೌರ್ಯ, ನಿಜಧೈರ್ಯ, ನಿಜವೀರ್ಯ ತಾಯೇ,

> ತೆಱಹಿಲ್ಲದ ಘನವು ಕುಱುಹಿಂಗೆ ಬಾರದ ಮುನ್ನ,
> ತೋಱಿದವರಾರು ಹೇಳಾ ಮಹಾಲಿಂಗೈಕ್ಯವನು?
> ಆಱೂಢಿಯ ಕೂಟದಲ್ಲಿ ನಾನಾರನೂ ಸಾಕ್ಷಿಯ ಕಾಣೆ.
> ಬೇಱಿಮಾಡಿ ನುಡಿಯಬಹುದೆ ಪ್ರಾಣಲಿಂಗವನು?
> ಅಱಿವು ಸ್ವಯವಾಗಿ ಮಱಹು ನಷ್ಟವಾದರೆ,
> ಗೊಹೇಶ್ವರನೆಂಬ ಲಿಂಗವು ತಾನೆ ನೋಡಾ[೧].

ಮನದೊಳಗೆ ಅನುಗೊಳ್ಳಬೇಕೆಂದಿರುವ ಘನ ಎಳ್ಳುಕೊನೆ ಮುಳ್ಳುಮೊನೆಗೆ ಇಂಬಿಲ್ಲದ, ತನ್ನಿಂದ ಬೇರಾದ ತಾನಲ್ಲದ ಯಾವ ಯಾವ ವಸ್ತುವಿಗೂ ಎಲ್ಲಿಯೂ ಎಂದೂ ತೆರಹೇ ಇಲ್ಲದ ಏಕಮೇವಾದ್ವಿತೀಯವಾದ ಮಹಾಘನ. ಈ ಅವಿರಳ ಮಹಾಘನವಾದ ನಿರಾಕಾರವನ್ನು ಗುರುದೇವ 'ಪಶ್ಚಿಮದೇಶ'ದಿಂದಿಳುಹಿ ಶಿಷ್ಯನ ಕರಸ್ಥಲಕ್ಕೆ ಕುರುಹಿಟ್ಟು ಸಾಕಾರ 'ಲಿಂಗ'ವಾಗಿ ಬಿಜಯಂಗೈಸಿಕೊಟ್ಟುದು ನಿಜ. ಆದರೆ ನಿರಾಕಾರವಾದ ನಿರವ

೧. ಶೂ. ಸಂ. ಪು. ೫, ವ. ೨೨.

ಯಲು, ನಿರ್ಲಕ್ಷಣವಾದ ಮಹಾಲಿಂಗವು ಕುರುಹಿಗೊಳಗಾಗದ ಮುನ್ನ ಈ ಲಿಂಗ ತಾನು ಎಂಬ ಏಕೋಭಾವ ಶಿಷ್ಯನಲ್ಲಿ ಹೊಳಹುದೋರಿದುದು ಹೇಗೆ? ಇಲ್ಲಿ ಗುರೂಪದೇಶದ ಮುನ್ನ 'ಮಹಾಲಿಂಗೈಕ್ಯ'ದ ಮಿಂಚುಗರೆದವರಾರು? 'ಇಂತು ಗುರೂಪದೇಶದಿಂದ ಮುನ್ನವೆ ಸಂಸಾರಾವಸ್ಥೆಯ ತೊಲಗಿಸಿ, ತನಗೆ ತಾನೆ ಲಿಂಗದಲ್ಲಿ ಲೀಯವಾಗಬೇಕೆಂಬ ಬುದ್ಧಿ ಹುಟ್ಟಿದ ಬಳಿಕ ಬಂದು ಗುರೂಪಾವಸ್ತೆಯಂ ಮಾಡಿದ ಶಿಷ್ಯನು......'[೧]—ಈ ಶಿಷ್ಯನಲ್ಲಿ ಗುರುವೆಲ್ಲಿ ಕುಳಿತಿದ್ದ? ತನ್ನಲ್ಲಿ ತನಗೆ ತಾನೆ ಹುಟ್ಟಿದ ಬುದ್ಧಿ, ತನಗೆ ತನ್ನನ್ನು ಲಿಂಗವೆಂದು ಕನ್ನಡಿ ಹಿಡಿದು ತೋರಿದ ಬುದ್ಧಿ ಮಹಾಲಿಂಗದೇವರು ಹೇಳುವಂತೆ 'ಸ್ವಯಂಭೂಜ್ಞಾನ'.[೨] ಈ ಜ್ಞಾನೋದಯವಾಗಿ ಸದ್ಗುರುವಿನೆಡೆಗೆ ಬಂದರೆ ಮಹಾ ಲಿಂಗವನ್ನು ಶಿಷ್ಯನ 'ಭಾವ ಹೃದಯ ನೇತ್ರದಿಂದ' ಇಳುಹಿ ಕರಸ್ಥಲಕ್ಕೆ ಸಾಕಾರ ಇಷ್ಟಲಿಂಗ ವನ್ನಾಗಿ ಕುರುಹುಗೊಳಿಸಿ ಬಹಿರಂಗಕ್ಕೆ ಲಿಂಗವನ್ನು ಕಟ್ಟಿದ. ಗುರು ತೋರಿದ ಈ ಕುರುಹನ್ನು ಹಿಡಿದು ಮಹಾಲಿಂಗದ ಮಾರ್ಗದಲ್ಲಿ ತಾನೆ ನಡೆದು ತಾನೆ 'ಅಜೂಧಿಯ ಕೂಟ'ದಲ್ಲಿ ಎಲ್ಲ ತತ್ತ್ವಗಳ ಲಯಗಮನಸ್ಥಾನವಾಗಿ ತತ್ತ್ವಗಳಾಚೆ, ಮೇಲೆ ಮೀರಿ ನಿಂದ ನಿಂದಿರುವ ಸ್ವಯಂಭೂಮಹಾಲಿಂಗದಲ್ಲಿ, ತನ್ನ ಸಹಜ, ನಿಜ, 'ಸ್ವಯ'ದಲ್ಲಿ ಒಂದಾಗಿ ತಾನೆ ನಿಲ್ಲಬೇಕಲ್ಲದೆ ತನ್ನಿಂದನ್ಯನಾದ ಒಬ್ಬ ಗುರು, ಒಬ್ಬ ಅಜಗಣ್ಣ ತನ್ನನ್ನು ಎತ್ತಿ ಕೊಂಡು, ಹೊತ್ತುಕೊಂಡು ಮಹಾಲಿಂಗಕ್ಕೆ ತನ್ನನ್ನು ಕರೆದೊಯ್ಯಬೇಕು ಎಂದು ಅನ್ಯ, ಭಿನ್ನ ಸಹಾಯವನ್ನು ನೆಮ್ಮಿ ಕೂಡುವುದು ಹುಚ್ಚಿನ ತುದಿ. ತನ್ನೊಳಗೆ ತಾನೆ ಮೂಡಿ ತನ್ನೊಳಗೆ ತಾನೆ ಕೂಡಿದಲ್ಲಿ ಈ ಕೂಟವನ್ನು ಕಂಡು ಯಾರೂ 'ಸಾಕ್ಷಿ' ಹೇಳುವರಿಲ್ಲ. ತೋರುವ ಗುರುವಿಲ್ಲ, ಕೂಟವನ್ನು ಕಂಡ ಶಿಷ್ಯನೇ ಇಲ್ಲ. ಕೂಟವಾದ ಮಹಾಲಿಂಗ? ಅದೂ ಇಲ್ಲ. ತಾನಿದ್ದರೆ ಲಿಂಗ; ಲಿಂಗಾಂಗ ಸಮರಸವಾಗಿ, ಏಕರಸವಾಗಿ, ತಾನೆಂಬ ರಸ ಲಿಂಗರಸವಾಗಿ ನಿಂದರೆ ಎಲ್ಲಿಯ ಲಿಂಗ? ಎಲ್ಲಿಯ ತಾನು? ಎಲ್ಲಿಯ ರಸ? ಎಲ್ಲಿಯ

೧. ಶೂ. ಸಂ. ಪು. ೨೯, ಪ್ರ. ೨೩.

೨. ಈ ವಚನವನ್ನು ಅರ್ಥಯಿಸುವ ಮಹಾಲಿಂಗದೇವರ ಅನುಭವಾರ್ಥದ ಸಾರವನ್ನು ನೋಡಿ: ಮಹಾಘನಲಿಂಗವನು ಶ್ರೀಗುರು ಕುರುಹಿಂಗೆ ತಂದು ಕರಸ್ಥಲಕ್ಕೆ ಕೊಡದ ಮುನ್ನವೆ ಆ ಶಿಷ್ಯಂಗೆ ಜ್ಞಾನೋದಯವಾಗಿ, ಸಂಸಾರ ಭವಪಾಶ ಛೇದನವ ತಾನೆ ಮಾಡಿಕೊಂಡು, ಬಳಿಕಂ ಬಂದು ಶ್ರೀಗುರೂಪದೇಶವ ಪಡೆದ ಕಾರಣ ಅದು ಸ್ವಯಂಭೂಜ್ಞಾನ. ಆ ಸ್ವಯಂಭೂಜ್ಞಾನವುಳ್ಳ ಶಿಷ್ಯನ ಮರ್ಮವನು ಆ ಶಿಷ್ಯನಲ್ಲದೆ ಮತ್ತೆ ಆರು ತೋರುವರಿಲ್ಲ. ಇದು ಕಾರಣ ಲಿಂಗಶರಣ ತನ್ನಲ್ಲಿ ತಾನೆ ತನ್ನನರಿದು ಮಹಾಲಿಂಗೈಕ್ಯವನೆಯ್ದು ಬೇಕಲ್ಲದೆ ಮತ್ತೆ ಆರು ತೋರಿದರೂ ಆಗದು. ಇಂತಾದ ಕಾರಣ ತಾನೆ ಲಿಂಗ ತಾನೆ ಶರಣನಾಗಿ ಇದ್ದ ಭೇದವನರಿಯದೆ ತನ್ನಿಂದ ಲಿಂಗವ ಭಿನ್ನವ ಮಾಡಿ ನುಡಿಯಲಾಗದು. ಇಂತಪ್ಪ ಸ್ವಯಂಭೂಜ್ಞಾನವೆ ತಾನಾಗಿ, ಅಜ್ಞಾನನಿವೃತ್ತಿಯಾಗಿ ಮಹಾಲಿಂಗದಲ್ಲಿ ಐಕ್ಯವಾದ ಶರಣನು ಉಪಮಾತೀತನಾಗಿದ್ದನು. (ಸಂಗ್ರಹಿಸಿದೆ)

ಪ್ರ. ವ. ಪು. ೩೨೮, ವ. ८८, ಟೀಕು.

ಇಲ್ಲಿ ಈ ವಚನದ ಕೊನೆಯ ವಾಕ್ಯ 'ಅರಿವು ಸಮವಾಗಿ, ಮರಹು ನಷ್ಟವಾದಲ್ಲಿ—ಗುಹೇಶ್ವರ, ನಿಮ್ಮ ಶರಣನುಪಮಾತೀತನು' ಎಂದಿದೆ.

ಕೂಟ? ಸ್ವಯಂಭೂಜ್ಞಾನ ಸ್ವಯಂಭುವಾಗಿ, ಸ್ವಯಂಭು ತಾನೆಂಬ ಅರಿವಿನ ಕುರುಹೂ ಒಣಗಿದರೆ[೧] ಮರಹಿನ ಮಾತೇ ಇಲ್ಲ. ಎಲ್ಲ 'ಬರೇ ಬೆಳಗು,' ಎಲ್ಲ 'ಬರೇ ಬಯಲು'. ಗೊಹೇಶ್ವರಲಿಂಗ ತಾನೇ; ಏನೂ ಏನೂ ಇಲ್ಲದ ತಾನೇ.

ಆದರೆ ಕೇಳು ಪ್ರಭುದೇವಾ: 'ತನ್ನಲ್ಲಿ ತಾನು ಸನ್ನಿಹಿತವಾದಹೆನೆಂದರೆ ಗುರುವಿಲ್ಲದೆ ಆಗದು, ಗುರುವಿಲ್ಲದೆ ಆಱೂಢಿಯ ಕೂಟ ಸಮನಿಸದು'. ಸದ್ಗುರುವಿನ ಸನ್ನಿಧಿಗೆ ಬಾರದ ಮುನ್ನ ಶಿಷ್ಯನಲ್ಲಿ ಜ್ಞಾನೋದಯವಾಯಿತು, ನಿಜ. ತನ್ನ ನಿಜಸ್ವರೂಪವಾದ ಲಿಂಗದ ಹೊಳಹು ಶಿಷ್ಯನಲ್ಲಿ ಒಡಮೂಡಿತು, ನಿಜ. ಆದರೆ ಈ ಸಮ್ಯಗ್ಜ್ಞಾನ ಶಿಷ್ಯನ ಅಂತರಾಳವನ್ನು ಒಡೆದು, ಭೇದಿಸಿ ಮೂಡುವಂತೆ ಮಾಡಿದ ಕಾರಣಶಕ್ತಿಯಾವುದು? '......ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದರೆ ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೇ?' ಪೂಜೆಯ ಈ ಕ್ರಿಯಾಲಿಂಗವನ್ನು ಕೈಗೆ ತಂದುಕೊಟ್ಟಾತ ಗುರು. ಹಿಂದಿನ ಶಿವಸಂಸ್ಕಾರ ಬಲದಿಂದ ಇಂದು ಜ್ಞಾನ, 'ಸ್ವಯಂಭುಜ್ಞಾನ,' 'ಲಿಂಗದಲ್ಲಿ ಲೀಯವಾಗಬೇಕೆಂಬ ಬುದ್ಧಿ' ಹುಟ್ಟಿದರೆ ಲಿಂಗ, ಲಿಂಗಪೂಜೆ, ಲಿಂಗಜ್ಞಾನ ಮೂಲಕಾರಣಶಕ್ತಿಯಾದ ಗುರುತಂದೆಯನ್ನು ಮರೆದುಬಿಡುವುದೇ? ಗುರುವಿಲ್ಲದೆ ಲಿಂಗವಿಲ್ಲ, ಲಿಂಗವಿಲ್ಲದೆ ಪೂಜೆಯಿಲ್ಲ, ಪೂಜೆಯ ಬಲವಿಲ್ಲದೆ ಜ್ಞಾನದ ಉದಯವಿಲ್ಲ. ಗುರು ಬೇಕು; ಲಿಂಗವನ್ನು ಕುರುಹಿಟ್ಟು ತೋರಿ, ಲಿಂಗಮಾರ್ಗದ ಲಿಂಗಾಂಗ ಸಕೀಲವನ್ನು ಬಿಚ್ಚಿ ತೋರಿಕೊಡುವ ಗುರುವಚನಬೇಕು. ಗುರುವಿನ ಪರಮಪ್ರಮಾಣ ವಚನವಿಲ್ಲದೆ ತನ್ನಲ್ಲಿ ಸನ್ನಿಹಿತವಾಗಿರುವ ಲಿಂಗದ ದಿವ್ಯನಿಧಿ, ಜಂಗಮದ ನೆಳಲಿಲ್ಲದೆ ನಿಲ್ಲುವ ಹಜ್ಜೆಯಿಲ್ಲದೆ ನಡೆವ ಮರ್ಮ, ಪಂಚಭೂತದ ಕತ್ತಲೆ ಹರಿದು ವಿಶ್ವಪ್ರಪಂಚವೆಲ್ಲ ಪ್ರಸನ್ನಲಿಂಗವಾದ ಪ್ರಸಾದದ ಕೀಲ, ಮತ್ತೆ ತನ್ನೊಳಗೆ ತಾನು ಅವಿತುಕೊಂಡು ತನಗೆ ತಾನು ಮರೆಗತ್ತಲೆಯಾಗಿ ಒಳಗೆಲ್ಲ ಬಯಲಾಗಿ ಬೆಳಗುತ್ತಿರುವ ತನ್ನ ನಿಜಲಿಂಗದ ದಿವ್ಯಗೋಪ್ಯ ಅರಿವಿನ ಹಿಡಿತದಲ್ಲಿ ಸಿಕ್ಕಬಲ್ಲುದೇ?[೨] ಪ್ರಭುದೇವಾ, 'ಎನ್ನ

---

೧. ಇಲ್ಲಿ ಕಲ್ಲಮಠದ ಪ್ರಭುದೇವರ ವಿಚಾರವನ್ನು ನೋಡಿ:

'...ಅಂತು ಶರಣ ತಾನೆ ಲಿಂಗವಾಗಿ ತನ್ನನಱಿದು, ತಾನೆ ಲಿಂಗವೆಂಬ ಮಹದಹಂಕಾರದ ಅಱಿವಿನ ಉಲುಹನು ನಿರಹಂಕಾರ ಕ್ರೀಯಿಂದಳಿದು ನಿಶ್ಶಬ್ದವಾಗಿ ನಿಂದುದೆ ಲಿಂಗೈಕ್ಯ ... ಅಂತು ತಾನೆಂಬುದನಳಿದು ಶರಣ ಲಿಂಗವೆಯಾದಲ್ಲಿ ಭಾವ ನಿರ್ಭಾವವಾಯಿತ್ತು, ಅಱಿವು ಹುಟ್ಟುಗೆಟ್ಟು ಹೋಯಿತ್ತು ...'

ಲಿಂ. ಲೀ. ವಿ. ಚಾ. ಪು. ೩೯೪, ವ. ೬೭, ಟೀಕು.

ಇದನ್ನೆ ಅಲ್ಲಮಪ್ರಭು, 'ಗೋಹೇಶ್ವನೆಂಬ ಅಱಿವು ಸಿನೆ ಬಂಜೆಯಾಯಿತ್ತಲ್ಲಾ!' ಎಂದು ಮೇಲೆ ಕೊಟ್ಟ ಟೀಕಿನ ವಚನದಲ್ಲಿ ಸಸಾರವಾಗಿ ಹೇಳಿರುವುದು.

೨. ಇಲ್ಲಿ ಶಿವಯೋಗಿ ಶಿವಾಚಾರ್ಯರ ಮಾತು ಕೇಳಿ:

ನ ಬುಧ್ಯತಿ ಗುರೋರ್ವಾಕ್ಯಂ ವಿನಾ ಶಿಷ್ಯಸ್ಯ ಮಾನಸಂ ।
ತೇಜೋ ವಿನಾ ಸಹಸ್ರಾಂಶೋಃ ಕಥಂ ಸ್ಫುರತಿ ಪಂಕಜಂ ॥

ಸಿ. ಶಿ. ಪು. ೨೬೪, ಪರಿ. ೧೭, ಶ್ಲೋ. ೬೧.

ಆಜಗಣ್ಣಗುರುವಿನ ಚಿತ್ತಪ್ಪದ ನುಡಿಯಲ್ಲಿವೆ ಮಹಾಲಿಂಗದ ಅನಂತಕ್ಕೆ ಏರುವು ದೇತು? ಅನಂತದಲ್ಲಿ ಅನಂತವಾಗಿ ಇರುವುದೇತು?

ಶ್ರೀಗುರುವಿನ ಪರಮಕಾರುಣ್ಯ ತುಂಬಿ ಗುರುವಚನದಲ್ಲಿ ತುಳುಕಿ ಶಿಷ್ಯನಲ್ಲಿ ಹರಿಯುತಿದ್ದರೆ ಅಜೋಧಿಯ ಕೋಟಿ 'ತನ್ನಿಂದ ತಾನಾಗದು' ಎಂಬುದು ನಿನ್ನ ವಿಚಾರ ವಲ್ಲವೇ ಅಕ್ಕಾ? ಗುರುವಾರು? ಶಿಷ್ಯನಾರು? ಗುರುವಿನಿಂದ ಶಿಷ್ಯ ಎಷ್ಟು ದೂರದಲ್ಲಿ ದ್ದಾನೆ? ಅಥವಾ ಎಷ್ಟು ಸಮೀಪದಲ್ಲಿ ಕುಳಿತಿದ್ದಾನೆ? ಶಿಷ್ಯನಿಂದ ಗುರುವಿರುವುದು ಎಷ್ಟು ಗಾವುದ? ತಾಯೇ. ಗುರುಶಿಷ್ಯರ ಸಂಬಂಧವನ್ನು ನಾನೂ ನಿನ್ನಂತೆ ಒಮ್ಮೆ ಹುಡುಕಿ ನೋಡಿದೆ; ತೊಳಲಿ ಬಳಲಿದೆ. ಆದರೆ ಕಂಡ ವಿಚಿತ್ರವೇನು?

ಗುರುಶಿಷ್ಯಸಂಬಂಧವನರಿಯಲೆಂದು ಹೋದರೆ

ತಾನೇ ಗುರುವಾದ. ತಾನೇ ಶಿಷ್ಯನಾದ. ತಾನೇ ಲಿಂಗವಾದ ಗುಹೇಶ್ವರ[1]. ಗುರುವಿಗೂ ತನಗೂ ಇರುವ ಮೂಲಸಂಬಂಧವನ್ನು ತಿಳಿಯಲೆಂದು ಗುರುವಿನ ಬೆಂಬತ್ತಿದ ಶಿಷ್ಯ, ಗುರು ತನಗೆ ಅನ್ಯನಲ್ಲ. ತನ್ನಿಂದ ಭಿನ್ನವಾದವನಲ್ಲ ಎಂಬ ಅನುಭವ ಉರಿದು ತೋರಿತು[2]. ಮರದಲ್ಲಿ ಮಂದಾಗ್ನಿ ಉರಿದರೆ ಮರದ ಗತಿ ಬೆಂಕಿಯಲ್ಲವೆ? ಹೊರಗೆ ಗುರುರೂಪದಲ್ಲಿ ತೋರುವ ಗುರು 'ಬೆಂಕಿ' ಒಳಗೆ ಮಂದವಾಗಿ ಉರಿವ ಮಂದಾಗ್ನಿಯೆ. ಶಿಷ್ಯನಲ್ಲಿ ಅಡಗಿರುವ ತನ್ನನ್ನು ಪಟುಮಾಡುವ ಬಹಿರಂಗದ ಗುರುರೂಪ ಮರದ ಮರೆಯ ಜಾತಿಯ ಬೆಂಕಿಯೇ. ಮರ ಬೇರೆ ಮಂದಾಗ್ನಿ ಬೇರೆಯೇ ಅಕ್ಕಾ? ಮಂದಾಗ್ನಿ ಬೇರೆ, ದೀಪಿಸುವ ಅಗ್ನಿ ಬೇರೆಯೆ ತಾಯೆ? ಇಲ್ಲಿಗೆ ಮುಗಿಯಲಿಲ್ಲ ಗುರುಶಿಷ್ಯ ಸಂಬಂಧ. ನೀನು ಹೇಳುವ, ನೀನು ಹರಿಹೋಗಿ ಕೂಡಲೆಂದಿರುವ 'ಅಜೋಧಿಯ ಕೋಟಿ'ದ ಲಿಂಗ ಗುರುಶಿಷ್ಯರಿಗೆ ಹೊರತಾದ ಗುಹೇಶ್ವರನಲ್ಲ. ಗುಹೇಶ್ವರಲಿಂಗದ ಜಾತಿ ಗುರುಶಿಷ್ಯ ಜಾತಿಯೇ. ಈ ಮೂಲ ಒಂದು ಎರಡಾದುದು. ಎರಡಾಗಿ ತೋರುವುದು ಒಂದರ ವಿನೋದ, ಲೀಲೆ; ತನ್ನ ತಾನರ್ಚಿಸಿ ತನ್ನ ತಾ ಪೂಜಿಸಿ ತನ್ನ ತಾ ಸೇವಿಸಿಕೊಂಬ ಲೀಲಾ ವಿನೋದ. ಈ ನಿಜಲೀಲೆ, ಈ ಗುರುಮರ್ಮ ಶಿಷ್ಯನಿಗೆ ಮೊದಲು ತೋರದಿರಲು ಕಾರಣ 'ಕರ್ಮದ ಕೌಟಿಲ್ಯ,' 'ಕರ್ಮದ ಕನ್ನಡ'. ಗುರುವಿಗೂ ಗುಹೇಶ್ವರಲಿಂಗಕ್ಕೂ ಮತ್ತು ತನಗೂ ನಡುವೆ ಅಡ್ಡಲಾಗಿ ಕಟ್ಟಿರುವ ಈ ಜವನಿಕೆಯನ್ನು ಮೊದಲು ತನ್ನ ಬಲ ದಿಂದ ತಾನೇ ಓರೆಮಾಡಿ ಗುರು-ಲಿಂಗವನ್ನು ಕಂಡ ಶಿಷ್ಯ. ಈ ಗುರು-ಲಿಂಗ ತಾನೇ ಎಂದು ಕಂಡ ಶಿಷ್ಯ. ಇಂಥ ಶಿಷ್ಯನಿಗೆ ಗುರು ಬೇರಲ್ಲ, ಲಿಂಗ ಬೇರಲ್ಲ. 'ಆದಿ ಅನಾದಿ

---

೧. ವ. ಶಾ. ಸಾ. ಭಾ. ೩, ಪ್ರ. ೧೨೮, ವ. ೧೧೪.

೨. ಚೆನ್ನಬಸವಣ್ಣನವರ ಮಾತು ಕೇಳಿ:

ಗುರುಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ?
ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು.
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಮರೀಚಿಕಾಜಲದಂತಿರಬೇಕು.

ವ. ಶಾ. ಸಾ. ಭಾ. ೩, ಪ್ರ. ೧೨೮, ವ. ೧೧೬.

ಯಿಂದತ್ತತ್ತ ಮುನ್ನಲಾದ ಪರತತ್ತ್ವಮಂ ತಿಳಿದು ನೋಡಲು, ನೀನೆ ಸ್ವಯಂಜ್ಯೋತಿ ಪ್ರಕಾಶನೆಂದಱಿಯಲು, ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕಮಪ್ಪ ಗುರು ಉಂಟೇ?' ನಿನ್ನ ಅಜಗಣ್ಣಗುರು ನಿನ್ನೊಳಗೆಯೆ ಬೋಧಾಮೂರ್ತಿಯಾಗಿ, ಗುರುಲಿಂಗವಾಗಿ, 'ಸ್ವಯಂಜ್ಯೋತಿ ಪ್ರಕಾಶ'ವಾದ ನಿನ್ನತ್ತಲೆ ನಿನ್ನನ್ನು 'ಉಪ-ದೇಶಿಸಿ'ಕೊಂಡೊಯ್ಯು ತ್ತಿದ್ದಾನೆ ತಾಯೇ. ಈ ಕೊಂಡೊಯ್ವ ಗುರು 'ಅಂತರಂಗದ ಬೋಧಾಮೂರ್ತಿ' ನಿನಗೆ ನೀನೆ. ಈ ನೀನೆ 'ಗೊಹೇಶ್ವರಲಿಂಗವು ತಾನೆ' ಎಂಬುದನ್ನು ತಿಳಿದುನೋಡಂ ತಾಯೇ. 'ಅನಾದಿಯಲ್ಲಿ ನೀನೆ ಪರಶಿವನಾಗಿಪ್ಪಲ್ಲಿ ನಿನಗಾರೂ ಗುರುವಿಲ್ಲ. ಮಧ್ಯದಲ್ಲಿ ಕರ್ಮ ವೆಂಬ ಕನ್ನಡವ ಕಟ್ಟಿದಲ್ಲಿಯೂ ನಿನ್ನ ಜ್ಞಾನೋದಯದಿಂದವೆ ನಿನ್ನ ನೀ ತಿಳಿದೆಯಲ್ಲದೆ ಅನ್ಯರ ಕೈಯಲ್ಲಿ ಆಗದು. ಅದುಕಾರಣ ನೀನೆ ಪರತತ್ತ್ವ ತಿಳಿದು ನೋಡು'[೧].

ಅಣ್ಣಾ, ತನ್ನ ತಾ ತಿಳಿದು ನೋಡುವುದು ಅನ್ಯರ ಕೈಯಲ್ಲಿ ಆಗದು. ಮುಂದೆ ನಿಂತಿ ರುವ ಗುಡ್ಡ ಪರ್ವತ, ಆಕಾಶ ನಕ್ಷತ್ರರಾಶಿಯನ್ನು ನೋಡಬೇಕೆಂದರೆ ನನ್ನ ಕಣ್ಣಬಾಗಿಲ ತೆಗೆದು ನಾನು ಕಾಣಬೇಕು. ನನ್ನ ಕಣ್ಣಿನ ಕದ ಹಾಕಿದ್ದು ನಿನ್ನ ಕಣ್ಣು ನೋಡಿದರೆ ನನಗೆ ಕಾಣಬಲ್ಲುವೇ ಗುಡ್ಡ ಪರ್ವತ? ಇದು ಗುಡ್ಡ ಇದು ಪರ್ವತವೆಂದು ಕುರುಹಿಟ್ಟು ತೋರಬಲ್ಲ ಗುರು,–ಶಿಷ್ಯ ತನ್ನ ಕಣ್ಣುತೆರೆದು ನೋಡುತ್ತಿದ್ದರೆ. ಪರ್ವತವನ್ನು ಪರ್ವತ ವಾಗಿ ನೋಡಬಲ್ಲ ಸಾಮರ್ಥ್ಯ ಗುರುವಿನ ಕಣ್ಣಲ್ಲಿದ್ದಂತೆ ಶಿಷ್ಯನ ಕಣ್ಣಲ್ಲಿಯೂ ಇದೆ. ಈ ಸಾಮರ್ಥ್ಯ ಒಂದೇ ಬಗೆ. ಅಲ್ಲವಾದರೆ ಗುರುವಿನ ಪರ್ವತವೆ ಬೇರೆ, ಶಿಷ್ಯನ ಪರ್ವತವೆ ಬೇರೆ ಆಗಬಹುದು. ಆಱೂಢಿಯ ಕೂಟದ ಮಹಾಘನ ಲಿಂಗವನ್ನು ಅಜಗಣ್ಣ ಕುರು ಹಿಟ್ಟು ತೋರಿದ. ನಾನು ನಿನ್ನ ಅರಿವಿನ ಕಣ್ಣಿಂದ ಕಂಡೆ. ಆದರೆ ಬೆಳಗು ಕತ್ತಲೆಯ ಸಂಧ್ಯಾಕಾಲದಲ್ಲಿ ಕಂಡೆ. ಈ ಪರ್ವತಲಿಂಗಕ್ಕೆ ಹರಿದು ಹತ್ತುವೆನೆಂದರೆ ಇನ್ನೂ ಹಾದಿ ಸುಗಮವಾಗಿಲ್ಲ. ಹೊರಗಿನ ಅಜಗಣ್ಣ ನನಗೆ ಹೊರತಾಗಿದ್ದರೂ ಒಳಗೆ ಅಜಗಣ್ಣಗುರು 'ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋಱುವ ಪರಿಯ ನೋಡಾ!' ಒಳಗೆ ಸನ್ನೆ ದೋರುವ ಈ ಅಜಗಣ್ಣ, ನನ್ನ ಅರಿವನ್ನು ತನ್ನ ಅರಿವಿನ ತುದಿಗೊಯ್ಯುತ್ತಿರುವ ಈ ಅಜಗಣ್ಣ, ಕಾಯದ ಸಂಚ ತಪ್ಪಿ ಹೆಸರು ದೆಸೆಯಿಲ್ಲದ ಈ ಅಂತರಂಗದ ದೇಶಿಕ, ಅಂತ ರಂಗ ಗುರುವಲ್ಲದೆ ಮತ್ತೇನು?

ತನ್ನ ತಾನಱಿದವಂಗೆ ಅಱಿವೆ ಗುರು.
ಅಱಿವಱಿತು ಮಱಿಹು ನಷ್ಟವಾದಲ್ಲಿ, ದೃಷ್ಟ ನಷ್ಟವೆ ಗುರು.
ದೃಷ್ಟ ನಷ್ಟ ಈ ಗುರು ತಾನಾದಲ್ಲಿ ಮುಟ್ಟಿ ತೋಱಿದವರಿಲ್ಲದಡೇನು?
ಸಹಜವ ನೆಲೆಗೊಳಿಸುವ ನಿರ್ಣಯ ನಿಃಪತಿಯೆ ಗುರು ನೋಡಾ.
ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ.[೨]

ತನ್ನಲ್ಲಿಗೆ ತನ್ನ ಕರೆದೊಯ್ವ ವಿಶ್ವೇಮುಖವಾದ ಗುಹಾಂತರಾಳ ಮಾರ್ಗವನ್ನು ಬೆಳಗಿ ತೋರುವ ಚಿದ್‌ಬೆಳಗು ಅದೇ ತನ್ನತ್ತ ನಡೆದ ತನ್ನ ಗುರು. ಈ ಅಂತರಾಳದ ಮಾರ್ಗ

೧. ಶೂ. ಸಂ. ಪು. ೩೦, ಪ್ರ. ೨೫. ೨. ಶೂ. ಸಂ. ಪು. ೩೦, ವ. ೨೫.

ವನ್ನು ನಿರ್ದೇಶಿಸುವ ದೇಶಿಕ, 'ಗುರುಬೆಳಗು' ತನ್ನೊಳಗೆ ಮೂಡಿದ ಸ್ವಯಂ-ಜ್ಯೋತಿಯೇ. ಈ ಬೆಳಗು ತನ್ನದು ಬೆಳಗು, ತಾನು ಬೆಳಗು ಎಂಬ ಅರಿವು ತಾನು ಮತ್ತು ಬೆಳಗಿನಲ್ಲಿ ಬಿರುಕಿಲ್ಲದೆ ಅಖಂಡ ಏಕಾರ್ಥವಾಗಿ ನಿಂತು ದ್ವೈತದ ಅಜ್ಞಾನವೆಲ್ಲ ನಿವೃತ್ತಿಯಾಗಿ ಹೋದರೆ ಈ 'ಏಕಮಯ'ವಾಗಿ ನಿಂದ ನಿಲವೇ ಗುರು. ಈ ನಿಲವನ್ನು ಮುಟ್ಟಿ ತೋರಿಸುವವರಾರೂ ಇಲ್ಲಿಲ್ಲ, ನಿಜ. ಆದರೆ ವಾದ ತರ್ಕ ವೇದ ಶಾಸ್ತ್ರ ಬೋಧ್ಯ ಬೋಧಕರೆಂಬ ಶಬ್ದದ ಸುಳಿವಡಗಿ ಸ್ವಯಂಭುನಿರ್ಣಯ ಸರ್ವಾಂಗ ಪಕ್ವವಾಗಿ ಸಹಜ ಏಕಮಯ ನೆಲೆಯಾಗಿ ನಿಂತರೆ, ಈ ಸ್ವಾನುಭಾವದ ನಿರ್ಣಯ ಸಂಪೂರ್ತಿಯೆ ಗುರು. ಈ ಗುರುತತ್ತ್ವ ತಾನೇ ಹೌದು. ಆದರೂ ಗೋಪ್ಯ ಗುರುವಿನ ಕೈಹಿಡಿದುಕೊಂಡೇ ಸಹಜದಿರವ ಇರಬೇಕು. ಇದೇ ಇರವಿನಲ್ಲಿ ಇದ್ದ ಅಜಗಣ್ಣತಂದೆ. ತಾನು ಗುರುವಾಗಿದ್ದರೂ ತನ್ನಲ್ಲಿ ಅಡಗಿ ಸಮರಸವಾಗಿರುವ ಶಿಷ್ಯತ್ವದ ಎಚ್ಚರ ತನಗಿರಬೇಕು. ಬೆಂಕಿಯ ಸಂಗದಿಂದ ಕಟ್ಟಿಗೆ ಬೆಂಕಿಯಾದರೇನು? ಬೆಂಕಿ ಕಟ್ಟಿಗೆಯನ್ನೆ ಉಂಡು ಉರಿಯುತ್ತದೆ. ಕಟ್ಟಿಗೆ ಬೆಂಕಿಯ ಬೆಂಬಳಿಯಲ್ಲಿಯೆ ಬೆಂಕಿಯಾಗಿ ಉರಿಯುತ್ತದೆ.

ತಾಯೇ 'ಸಹಜ ಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರು ಉಂಟೇ?' ಭಕ್ತಿ ಜ್ಞಾನ ಯೋಗ ಕ್ರಿಯೆ ಆಚಾರದ ನಿಯಮ ಹಿಡಿದು ನಡೆವ ಮಾರ್ಗಸ್ಥಲದಲ್ಲಿ ಗುರು-ಶಿಷ್ಯ ಸಂಬಂಧ ಸಹಜ. ಆದರೆ, ಅಕ್ಕಾ, ಈ ನಿಯಮವೆಲ್ಲ ನಿಷ್ಪತ್ತಿಯಾಗಿ, ತೊಟ್ಟುಬಿಟ್ಟು ಕಳಚಿಬಿದ್ದ ಬಳಿಕ ಗುರುವೆಲ್ಲಿ? ಶಿಷ್ಯನೆಲ್ಲಿ? ಇಲ್ಲದ ಗುರುಶಿಷ್ಯರಿಗೆ ಸಂಬಂಧವೆಲ್ಲಿ?[1] ತಾಯೇ, ಎಲ್ಲ ಸಂಬಂಧ ಕಡಿದುಹೋಗಿ ತಾನು ತಾನೆಯಾಗಿ ನಿಂದ ಮೀರಿದ ಸ್ಥಲದಲ್ಲಿ ಗುರುಶಿಷ್ಯರೆಂಬ ಯಾವ ನಾಮ ಯಾವ ಸೀಮೆ ಯಾವ ಸಂಬಂಧ ಉಳಿದಿಲ್ಲ. 'ಗೊಹೇಶ್ವರ ಲಿಂಗದಲ್ಲಿ, ಪರವೆಂದಲ್ಲಿ ಗುರು ಉಂಟಲ್ಲದೆ, ಸ್ವಯವೆಂದಲ್ಲಿ ನುಡಿಯಲಿಲ್ಲ' ತಾಯೇ.[2]

---

೧. ಇಲ್ಲಿ ಪ್ರಭುದೇವರ ಅನುಭವದ ಮಾತನ್ನು ಕೇಳಿ:

ಪಾದವಿಲ್ಲದ ಗುರುವಿಂಗೆ ತಲೆ ಇಲ್ಲದ ಶಿಷ್ಯನು.
ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು.
ಈ ಗುರುಶಿಷ್ಯರಿಬ್ಬರು ಸತ್ತ ಸಾವ
ನಿಮ್ಮಲ್ಲಿ ಅರಸುವೆ ಗುಹೇಶ್ವರಾ.

ವ. ಶಾ. ಸಾ. ಭಾ. ೨, ಪು. ೪೯೧, ವ. ೧.

೨. ಇಲ್ಲಿ ಸ್ವತಂತ್ರಸಿದ್ಧಲಿಂಗೇಶ್ವರನ ಅನುಭವ ಕೇಳಿ:

ಗುರುವ ತಲೆಯಲ್ಲಿ ಹೊತ್ತು ನಡೆವ ಶಿಷ್ಯನಲ್ಲಿ ಗುರುವಡಗಿ,
ಶಿಷ್ಯ ಗುರುವಾದ ಪರಿಯ ಬಲ್ಲವರಾರಯ್ಯ?
ಗುರುವಿನ ಗುರುತ್ವ ಶಿಷ್ಯಂಗಾಯಿತ್ತು,
ಶಿಷ್ಯನ ಶಿಷ್ಯತ್ವ ಎಲ್ಲಿ ಹೋಯಿತ್ತೆಂದರಿಯಬಾರದು.
ಗುರುವಿಲ್ಲದ ಶಿಷ್ಯಂಗೆ ಪರವಿಲ್ಲ.
ಪರವಿಲ್ಲದ ಶಿಷ್ಯ ಸ್ವಯವಾದನೆಂಬುದ
ನಿಮ್ಮ ಶರಣರ ಅನುಭಾವದಲ್ಲಿ ಕಂಡೆನು ಕಾಣಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

ಪ. ಶಾ. ಸಾ. ಭಾ. ೩, ಪು. ೧೨೭, ವ. ೧೦೮.

ತನಗೆ ಇದಿರಿಟ್ಟು, ತನ್ನ ಮೇಲೊಂದು ಪರವಸ್ತುವೆಂಬುದಿದ್ದರೆ ಗುರು ಉಂಟು. ಆದರೆ ಸ್ವಯಮೇವ ಗೊಹೇಶ್ವರಲಿಂಗವಾಗಿದ್ದರೆ ಗುರುವೆಲ್ಲಿ ಉಳಿದ? ಶಿಷ್ಯನೆಲ್ಲಿ ಅಡಗಿದ? ಶಿಷ್ಯ ಗುರುವಿನಲ್ಲಿ ಅಡಗಿ, ಗುರು ಶಿಷ್ಯನಲ್ಲಿ ಅಡಗಿ ಗುರು-ಶಿಷ್ಯ ಲಿಂಗವೆಯಾದ ಸ್ವಯಂ ಲಿಂಗವಾಗಿ ನಿಲ್ಲಬೇಕು ತಾಯಿ. ಇನ್ನೂ ಮುಂದಕ್ಕೆ, ಇನ್ನೂ ಮೇಲಕ್ಕೆ ನಡೆ ತಾಯಿ. ನನ್ನ ನಾನರಿವೆ, ನಾನೆ ಪರವಸ್ತುವೆಂಬ ಚಿದಹಂಭಾವದ ಮಂಜುಲ ಮರವೆಯನ್ನು ಮರೆವೆ ಎಂಬ ಬೆಳುದಿಂಗಳಿಗಿಂತ ತೆಳುವಾದ ಜವನಿಕೆಯನ್ನು ಓಸರಿಸಿ ಮೇಲಕ್ಕೆ ಎಚ್ಚರಾಗು ತಾಯಿ. ಸಾಕಾರಲಿಂಗದ ಸೀಮೆಯನ್ನು ದಾಟಿ ನಿರಾಕಾರದ ಗಡಿಗೆ ಬಂದು ಪತ್ತಿದರೆ ಸಾಲದು ತಾಯಿ. ಇನ್ನೂ ಎಚ್ಚತ್ತು ನೋಡು. ಗುರುವಿನಲ್ಲಿ ಗುರು ಇಲ್ಲಾ, ಶಿಷ್ಯನಲ್ಲಿ ಶಿಷ್ಯನಿಲ್ಲಾ. ಈ ಸೇವ್ಯಸೇವಕಭಾವ, ಬೋಧಕಬೋಧ್ಯಭಾವ, ಗುರುಶಿಷ್ಯ ಭಾವ ಗೊಹೇಶ್ವರಲಿಂಗ ತಾನೆಯಾದ ನಿಜಸ್ಥಲದಲ್ಲಿ ಸ್ವಯಂಲಿಂಗವಾಗಿ ನಿಲ್ಲು ತಾಯಿ. 'ತಾನು ಲಿಂಗವಾದಹೆನೆಂಬನ್ನಕ್ಕರ ಗುರುವುಂಟಲ್ಲದೆ, ತಾನು ತಾನೆಯಾದ ಬಳಿಕ ಗುರು ತಾನೇಕೆ?'[೧]

ಮುಕ್ತಾಯಕ್ಕನ ಅನುಭಾವದೃಷ್ಟಿಗೆ ಪ್ರಭುವಿನ 'ತಾನು ತಾನೆಯಾದ ಬಳಿಕ ಗುರು ತಾನೇಕೆ?'–ಎಂಬ ಮಾತು ವಿಚಿತ್ರ ವಿರೋಧ! ಸಲಕ್ಷಣ ಧಾರ್ಷ್ಟ್ಯ! ! ತಾನು ತಾನೆಯಾಗಿದ್ದಾನೆಯೆ ಪ್ರಭುದೇವ? ಆಗಿ ಇದ್ದರೆ ಸ್ವಯುವಾದ ಸ್ಥಲದಿಂದ ಶಬ್ದಸಂದಣಿ ಹೊಮ್ಮುವುದು ಹೇಗೆ? ಇದಿರಿಗೆ ನುಡಿದು ಉಪದೇಶಿಸುವ ಹಂಬಲವೇಕೆ? ಅಜಗಣ್ಣ ತುಂಬ ತುಂಬಿ ಅರಿವಾಗಿದ್ದ. ಅರಿವು ಮರೆದ ಇರವಿನಲ್ಲಿ ಪರವಶನಾಗಿದ್ದ. ತುಂಬಿದ ಈ ಅರಿವಿನಿಂದ ಶಬ್ದವೆಂದೂ ತುಳುಕಲಿಲ್ಲ. ಅಣು ಆಕಾಶದಲ್ಲಿ ಅಖಂಡವಾಗಿ ತುಂಬಿ ಇರುವ ಪರಶಿವ ಎಲ್ಲೆಲ್ಲಿಯೂ ತುಟಿ ಬಿಚ್ಚಿ ನುಡಿಯದೆ 'ಗುಮ್ಮ'ನಾಗಿರುವಂತೆ, ಅಜಗಣ್ಣ ಶಬ್ದದ ಮೀಸಲು ಮುರಿದು ಎಂದೂ ನನಗೆ ಇದಿರಾಗಿ ಉಪದೇಶ ಮಾಡಲಿಲ್ಲ. ಅಜಗಣ್ಣನ ಶಬ್ದ ನಿಶ್ಶಬ್ದ. ಆದರೆ ಪ್ರಭುವಿನ ರೀತಿ ವಿಪರೀತ. ಅದ್ವೈತದ ಅನುಭವ ದ್ವೈತಶಬ್ದವಾಗಿ ಇದಿರಿಗೆ ಸಿಡಿದರೆ ಅದೆಂಥ ಅದ್ವೈತ? ಅಜಗಣ್ಣನ ಅದ್ವೈತವಿಲಾಸದ ಪರಶಿವಮುಗ್ಧ ಸೌಂದರ್ಯವನ್ನು ಕಂಡ ಮುಕ್ತಾಯಕ್ಕನಿಗೆ ಅಲ್ಲಮಪ್ರಭುವಿನ ಅದ್ವೈತವಚನ ವಾಗ್ದ್ವೈತವಾಗಿ ತೋರುತ್ತದೆ. ನಡೆಯಲ್ಲಿ ಸಲ್ಲದೆ ನುಡಿಯಲ್ಲಿ ಸಲ್ಲುವನೆಂಬ ಪ್ರಭುವಿನ ವಿಚಾರಕ್ಕೆ ಮನವೊಪ್ಪದ ಮುಕ್ತಾಯಕ್ಕನ ಹೃದಯ ಮುಂದಿನ ಗೀತವನ್ನು ಹಿಡಿಯುತ್ತದೆ:

> ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು
> ಶಿಶು ಕಂಡ ಕನಸಿನಂತಿರಬೇಕಲ್ಲದೆ.
> ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?
> ಅಱಿವಱಿತು, ಮಱಹು ನಷ್ಟವಾಗಿ ಗುರುವ ತೋಱಿದೆನೆಂಬವರು
> ಇದಿರಿಂಗೆ ಕರುಳ ಕಲೆಯನಱುಹುವ ಪರಿಯೆಂತು ಹೇಳಾ?

---

೧. ಶೂ. ಸಂ. ಪು. ೬೧, ಪ್ರ. ೨೨

ಮನದ ಕೊನೆಯ ಮೊನೆಯ ಮೇಲಣ
ಅಱಿವಿನ ಕಣ್ಣ ಮುಂದೆ ಸ್ವಯಂಪ್ರಕಾಶ ತೋಱುತ್ತಿರ್ದಡೆ ತಾನಾಗಬಲ್ಲನೇ?
ನಱಿಯಱಿತು ಮಱಿಯಬಲ್ಲರೆ
ಎನ್ನ ಅಜಗಣ್ಣನಂತೆ ಶಬ್ದ ಮುಗ್ಧವಾಗಿರಬೇಕಲ್ಲದೆ,
ಶಬ್ದಸಂದಣಿಯ ಮಾತು ಸಯವಲ್ಲ ನೋಡಾ ಪ್ರಭುವೆ.[೧]

ಅಣ್ಣಾ, ಎರಡಳಿದು ಒಂದಾದ ಅದ್ವೈತ ಅನುಭವ ಶಿಶು ಕಂಡ ಕನಸು. ಕೂಸು ಕನಸು ಕಾಣುತ್ತದೆ. ಆದರೆ ಕಂಡ ಕನಸನ್ನು ಇದಿರಿಗೆ ಹೇಳಬೇಕೆಂದರೆ ಅದಕ್ಕೆ ಇನ್ನೂ ಬಾಯಿ ಬಂದಿಲ್ಲ. ಅದ್ವೈತ ತಾನಾಗಿ ನೆಲಸಿ ನಿಂದ ಲಿಂಗದ ಕೂಸು ಸ್ವಯಾನುಭವದ ನಿಜ ನಿರಾಳ ಕಂಡು ಉಂಡು ಲಿಂಗದಿರವನಿದ್ದರೂ ಈ ಕೂಸಿಗೆ ಎಂದಿಗೂ ಬಾಯಿಬರುವ ಸಾಧ್ಯತೆಯೇ ಇಲ್ಲ. ಇದಿರಿಗೆ ತನ್ನ ನಿರಾಳದ ಅನುಭವವನ್ನು ನುಡಿಯಲ್ಲಿ ನುಡಿದು ಹೇಳಬೇಕೆಂಬ ತವಕ ಈ ಪರಬ್ರಹ್ಮದ ಕೂಸಿಗೆ ಮೊದಲೇ ಇಲ್ಲ. ಇಂಥ ಕೂಸೇ ನಮ್ಮ ಅಜಗಣ್ಣ. ನನಗೆ ನುಡಿದು ಹೇಳುತ್ತಿರುವ ನಿನ್ನ ಅನುಭವ ಅಖಂಡ ಅನುಭವ ಅಲ್ಲ. ಅದು ಒಡೆದ ಅನುಭವ, ಮಹಾಲಿಂಗೈಕ್ಯದಿಂದ ಭಿನ್ನವಾದ ಅನುಭವ. ನಿನ್ನ ನೀನರಿದು, ನಿನ್ನ ನೀ ತಿಳಿದು ನೋಡಿ, ಕಂಡು 'ಗೊಹೇಶ್ವರಲಿಂಗವು ತಾನೆ'ಯಾಗಿದ್ದೆನೆಂಬರಿವು ಒಣಗಿಹೋಗಿದ್ದರೆ, ನಾನೆಂಬ ಕತ್ತಲೆಯೆಲ್ಲ ಹರಿದುಹೋಗಿದ್ದರೆ, ಅದ್ವೈತವಾದ ನಿನ್ನಲ್ಲಿ ಗುರುಶಿಷ್ಯರಿಬ್ಬರು ಸತ್ತಿದ್ದರೆ, ಬತ್ತಿದ್ದ ಕೆರೆಯಲ್ಲಿ ತರಂಗವಿಲಾಸವೆದ್ದು ನನಗೆ ತೋರುತ್ತಿರುವ ಬಗೆ ಹೇಗೆ? ನನ್ನ 'ಕರುಳ ಕಲೆ'ಯನ್ನು, ನನ್ನ ಅಂತರಾಳದ ದ್ವೈತದ ಕಪ್ಪುಕಲೆಯನ್ನು ತಿದ್ದಿ ತೀಡುವೆನೆಂದು ನಿನ್ನ ಅದ್ವೈತ ದ್ವೈತವನ್ನು ಹಂಬಲಿಸುತ್ತಿರುವುದು ಹೇಗೆ? ನಿನ್ನ ಮನದ ತುತ್ತತುದಿಯಲ್ಲಿ ಅಥವಾ ಮೊತ್ತಮೊದಲಲ್ಲಿ ಅವಿತುಕೊಂಡಿದ್ದ ಸ್ವಯಂಪ್ರಕಾಶ, ನೀನು ಹೇಳುವ 'ಸ್ವಯಂಜ್ಯೋತಿ ಪ್ರಕಾಶ' ಅರಳಿ ಹೂವಾಗಿ ಪ್ರಜ್ವಲಿಸಿ ತೋರುತ್ತಿರಬಹುದು ನಿನ್ನ ಅರಿವಿನ ಕಣ್ಣಲ್ಲಿ. ಈ ಪ್ರಕಾಶ ನಿನ್ನನ್ನು 'ಅಲ್ಲಯ್ಯ ನಾನು ಲಿಂಗ ತಾನಾದೆ' ನೆಂಬ ನಿನ್ನ ಆಳದ ತೋರಿಕೆಯನ್ನು ತೋರುತ್ತಿರಬಹುದು ಅಣ್ಣಾ. ಈ ಬಳಗು ಕಂಡರೆ ಇನ್ನೂ ತಾನು ತಾನಾಗಲಿಲ್ಲಣ್ಣಾ. ತಾನು ತಾನಾಗಿದ್ದ ಅಜಗಣ್ಣ ನಿಜದ ಗಂಭೀರದಲ್ಲಿ ನಿಂದು ಶಬ್ದವನ್ನೆಂದೂ ನುಸಲಿಲ್ಲ. ಲಿಂಗಗಂಭೀರ ಶರಣ ನಿಶ್ಶಬ್ದಗಂಭೀರ.

---

೧. ಶೂ. ಸಂ. ಪು. ೩೧, ವ. ೨೭.

ಇದೇ ವಿಚಾರವನ್ನು ಚಾಮರಸನ ಮುಕ್ತಾಯಕ್ಕ ಪ್ರಭುವಿನ ಮುಂದೆ ಇಡುವ ರೀತಿ ಹೀಗೆ:

ಪರಮ ತತ್ವವ ನುಡಿದು ಹೇಳುವ ।
ಗುರುವೆ ನಿನಗಿನ್ನೂ ವಿಚಾರಿಸೆ ।
ವರಮನೋವಾಕ್ಕಾಯ ಕರ್ಮಗಳಿರಲು ನೀವೆಮಗೆ ॥
ಹಿರಿದು ಬಲ್ಲವಿಕೆಯಲಿ ವಾಕ್ಯ ।
ತುರಿಯವನು ರಚಿಸಿದೊಡೆ ನಂಬುಗೆ ।
ದೊರಕುವುದೆ ನಮಗೆಂದಳಾ ಮುಕ್ತಾಯಿಯಲ್ಲಮಗೆ ॥

ಪ್ರ. ಲಿಂ. ಲೀ. ಪು. ೧೪೭, ಗ. ೧೨. ಪ. ೧೭.

ಅಕ್ಕಾ, ನೀನು ಕೇಳುತ್ತಿರುವ ಮಾತು ಏನು? ಎಲ್ಲಿಂದ ಬಂದವು? ಹೇಗೆ ಬಂದವು? ನುಡಿವ ಮಾತಿನಲ್ಲಿ 'ನಾನು, ಅಲ್ಲಯ್ಯ' ತುಂಬಿದ್ದರೆ ಅಥವಾ 'ಅಲ್ಲಯ್ಯ ನಾನು ಪರತತ್ತ್ವ ಸ್ವರೂಪ' ಎಂಬ ಶಿವೋಹಂಭಾವ, 'ಅಹಂ ಬ್ರಹ್ಮಾಸ್ಮಿ'ಭಾವದ ವಾಸನೆ ಸೂಸುತ್ತಿದ್ದರೆ ನಾನು ನುಡಿವ ಮಾತಿಗೆ ಮಾನವಭಾಷೆಯ ಮಾತು ಎಂದು ನೀನು ಕರೆಯಬಹುದು. ಆದರೆ ಯಾವುದೇ ಬಗೆಯ ನಾನು, ಕಂಡ ಸ್ವಯಂಜ್ಯೋತಿಯಲ್ಲಿ ಉರಿಯುಂಡ ಕರ್ಪೂರದಂತೆ ಕರಗಿದ್ದರೆ, ಈ ಸ್ವಯಂಜ್ಯೋತಿಯ ಕರಡಗೆಯಾದ ಶರಣನ ಶರೀರದ ಗುಣಧರ್ಮಕರ್ಮವಳಿದ ಅಶರೀರದಲ್ಲಿ ತಾಲು ಓಷ್ಠಗಳು ಒಂದುಗೂಡಿ ಸ್ವರವನ್ನೆಬ್ಬಿಸಿ[1] ಸ್ವಾನುಭಾವದ ಮಾತಾಗಿ ರೂಪುಗೊಂಡರೆ ಮಾತು ಮಾತು ಹೌದು; ಆದರೆ ಉರಿಯ ಮಾತು, ಸ್ವಯಂಜ್ಯೋತಿಯ ಮಾತು. ಈ ಮಾತು ಜ್ಯೋತಿಯನ್ನಗಲಿ ಭಿನ್ನವಾದ ವಾಗದ್ವೈತದ ಒಣಗಿದ ಆಡಂಬರವಲ್ಲ. ಅಕ್ಕಾ, ನೀನು ಹೇಳುವಂತೆ ಕೂಸಿಗೆ ಕನಸು ಬಿದ್ದರೆ ಆ ಕನಸು ಮಾತಿನಲ್ಲಿ ಮೊಳಕೆಯೊಡೆವುದಿಲ್ಲ. ಆದರೆ ತಾಯೇ, ಕೂಸಿನ ಕನಸು ನಗೆಯಲ್ಲಿ ಮುಗುಳೇರಬಹುದಲ್ಲವೆ? ಭಯ ಕಂಪನ ರೋದನದಲ್ಲಿ ಚಿಗುರೊತ್ತಬಹುದಲ್ಲವೇ? ಕೂಸಿನ ಈ ಭಾಷೆಗೆ ಸಂಧಿ ಸಮಾಸದ ಕಟ್ಟಿಲ್ಲ, ಉದಾತ್ತ ಸ್ವರಿತದ ನಿಯಮವಿಲ್ಲ. ತರ್ಕ ಛಂದಗಳ ತೊಡಕಿಲ್ಲ, ತಾನು ಇದಿರು ಎಂಬ ಉಪಾಧಿಯಿಲ್ಲ, 'ನೆಱೆಯಱಿತು ಮಱೆಯಬಲ್ಲರೆ' ಶಬ್ದ ಮುಗ್ಧವಾಗಿರಬೇಕು, 'ಶಬ್ದಸಂದಣಿಯ ಮಾತು ಸಯವಲ್ಲ'—ಎಂದು ನಿನ್ನ ವಿಚಾರ. ಅದಕ್ಕೆ ಅಜಗಣ್ಣ ನೀನು ಕಂಡ ಪ್ರತ್ಯಕ್ಷ ಉದಾಹರಣೆ. ಆದರೆ ಮರುಳು ಅಕ್ಕಾ, ತಾನು ತಾನಾದ ಶರಣನ ಶಬ್ದ ಮುಗ್ಧವಾಗಿರಬಹುದು. ಇದರಿಂದ ಶಬ್ದಮುಗ್ಧನಾಗಿದ್ದರೇ ಶರಣ. ಇಲ್ಲವಾದರೆ ಶರಣನಲ್ಲ ಎಂಬ ವಿಚಾರ ಕೂಡದು. ಬಹುದು ಬಾರದು, ಬೇಕು ಬೇಡ ಎಂಬ ವಿಧಿ ನಿಷೇಧಗಳ ಬಂಧನದಲ್ಲಿ ಸಿಕ್ಕಿದ್ದರೆ ಶರಣ ಸ್ವತಂತ್ರನಲ್ಲ. ಸ್ವತಂತ್ರನಲ್ಲದ ಶರಣ ಶರಣನಲ್ಲ. ಆದರೆ ಶರಣ ನುಡಿದರೆ ಮೈಲಿಗೆಯಾಗಬಾರದು. ನಾನಿಲ್ಲದೆ ಲಿಂಗವಿದ್ದು ನುಡಿದರೆ ಮೈಲಿಗೆ ಎಲ್ಲಿ ಬಂತು? ಮೈಲಿಗೆ ಮನುಷ್ಯನಿಗೆ. ಮನುಷ್ಯನ ಭಾಷೆ

---

೧. 1. 'ಸ್ವರವೆಂಬುದು ಪರತತ್ತ್ವ' ಎಂಬ ಪ್ರಭುದೇವರ ಮಾತನ್ನು '. . . ಸರದ ಸಮತೆಯ ಪರಿಣಾಮವ ನೋಡಾ! ಗುಹೇಶ್ವರನೆಂಬುದು ಅದೇ ಕಂಡಾ.' ಎಂಬ ಅವರ ಮತ್ತೊಂದು ಮಾತಿನೊಡನೆ ಹೋಲಿಸಿರಿ. (ಇದರ ವಿವರಣೆ ಹೀಗಿದೆ: ನುಡಿದ[ಯ?] ಕುರುಹಿಗೆ ತಂದರೆ ಆ ವಸ್ತು ನಿಶ್ಶಬ್ದಬ್ರಹ್ಮವೆನಿಸಿಪ್ಪುದಾಗಿ ನುಡಿಗೆ ಸಿಕ್ಕದು.)

ವ. ಶಾ. ಸಾ. ಭಾ. ೨, ಪು. ೫೪೩, ವ. ೧.

2. ಇಲ್ಲಿ ಸಿದ್ಧರಾಮಯ್ಯನ ವಚನವನ್ನು ನೋಡಿ:
ಅಯ್ಯಾ, ನಿಮ್ಮ ಸರ ಉಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು.
ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು.
. . . .

ಶೂ. ಸಂ. ಪು. ೬೮, ವ. ೧೩೩.

3. ಕಾಲೇ ಕಂಬಗಳೆನ್ನ ದೇಹವೇ ದೇಗುಲವಾಯಿತ್ತಯ್ಯಾ. . . .
ಸರವೆ ಲಿಂಗಕ್ಕೆ ಸಿಂಹಾಸನವಾಗಿ ಇರ್ದುದು. . . .

ಪ್ರ. ವ. ಪು. ೯೮, ವ. ೨೨.

ವ್ಯವಹಾರಕ್ಕೆ. ಲಿಂಗಕ್ಕೆ ಮೈಲಿಗೆ ಬಂದ ಸುದ್ದಿಯನ್ನು ಎಂದಾದರೂ ಕೇಳಿದೆಯಾ ತಾಯೇ? ನುಡಿಯದೆ ನಿಶ್ಶಬ್ದ ಶರಣ, ನುಡಿದು ನಿಶ್ಶಬ್ದ ಶರಣ. ನುಡಿಯಲಿ ಬಿಡಲಿ, ಸೂತಕದ ಮಾತು ಶರಣನಿದ್ದಲ್ಲಿ ಸುಳಿವಂತಿಲ್ಲ. 'ಮಾತೆಂಬುದು ಜ್ಯೋತಿರ್ಲಿಂಗ'[೧]

ಪ್ರಭುವಿನ ಮಾತು ಅಕ್ಕನಿಗೆ ಒಪ್ಪಿಗೆಯಾಗದ ಮಾತು. ಅನುಭಾವದ ಹಾದಿ ಹಿಡಿದು ನಡೆದು ನಡೆದು ಕಡೆಮುಟ್ಟಿಸುವ ನಡೆಯ ರಹಸ್ಯವನ್ನು ಕಂಡವರು, ಬಲ್ಲೆವೆಂಬ ಬಲ್ಲವಿಕೆಯಲ್ಲಿ ನುಡಿದು ನುಡಿದು ಇದಿರಿಗೆ ಬೀರುತ್ತ ಹೋಗಬಹುದೆ? ಸಂಗಾನುಭಾವದ ವರ್ತನೆ ಇಲ್ಲದ ಪತಿವ್ರತೆ. ಆಕೆಯ ಬಹಿರಂತರಂಗ ಪತಿಗೆ ಗೊತ್ತು, ಸತಿಗೆ ಗೊತ್ತು. ಆಕೆಯ ನಿತ್ಯ ನವ್ಯಪ್ರೇಮ, ಹಾವ ಭಾವ ವಿಲಾಸ ಗಂಡನಿಗೆ ಮೀಸಲು. ಹೊರಗೆ ಹೆರವರು ಕಂಡರೆ, ಮೀಸಲು ಮುರಿದುಹೋಯ್ತು. ಅದೇ ಪಾತಿವ್ರತ್ಯಭಂಗ. ಅದರಂತೆ ಲಿಂಗಾನುಭಾವದ ವರ್ತನೆ. ನಡೆಯಲ್ಲಿ ಕಂಡ ಸ್ವ-ಸ್ಥಲದ ಅನುಭೂತಿ ನುಡಿಯಲ್ಲಿ ಉಕ್ಕಿ ಹೋದರೆ ನಡೆಯ ದಿವಾಳಿ. ಮತ್ತೆ ಬುದ್ಧಿಯ ಮಥನ, ಮಾತಿನ ಮಥನದಿಂದ ಹುಟ್ಟಿದ ಅರಿವಿನ ವಿಚಾರ, ನುಡಿಯ ಮಾಲೆ ಸ್ವಯಂಬ್ರಹ್ಮವಾದ ಅಥವಾ 'ಸ್ವರವೆಂಬುದೆ ಪರ ತತ್ತ್ವ'ವಾದ ಬಗೆ ಹೇಗೆ? 'ಇದಿರ ಗೆಲಬೇಕೆಂದು ನುಡಿದುಕೊಂಡರೇನು?' ಅರಿವು ಮರವೆಯೆಲ್ಲ ನಷ್ಟವಾಗಿ, ಬಚ್ಚಬರಿಯ ಲಿಂಗರಸ ತುಂಬಿ 'ಏಕರಸಮಯ'ವಾಗಿದ್ದರೆ ನುಡಿಯ ಹಂಗು ಬಿಡಲಿಲ್ಲವೇಕೆ? ನಿಃಪತಿಯ ನಿಲವು, ಅಖಂಡ ಪರಿಪೂರ್ಣದ ನಿಲವು ತನಗೆ ತಾನೆ ಸಾಕ್ಷಿ ನುಡಿಯಬೇಕು. ಇದಿರಿಗೆ ನುಡಿದು ಅನ್ಯರ ಸಾಕ್ಷಿಯಿಂದ ಬದುಕುವ ಅನುಭವ ಅದೆಂಥ ಅದ್ವೈತ! ಅಜಗಣ್ಣತಂದೆ ಎಂದಾದರೂ ನುಡಿಯ ಕೈಯಲ್ಲಿ ಸ್ವಾನುಭವವನ್ನು ಕೊಟ್ಟನೆ? ಎನ್ನ ತಂದೆ ಅಜಗಣ್ಣ ಶಬುದಕ್ಕೆ ಹೇಸಿಕೊಂಡು ಮುಗುದನಾಗಿದ್ದ. ನುಡಿಯೆಂದರೆ ಏನೋ ಲಿಂಗವಲ್ಲದ ವಾಸನೆ ಆತನ ಲಿಂಗದ ಮೂಗಿಗೆ! ಇಂಥ ನುಡಿಯನ್ನು ಮಂಥನಮಾಡಿ ಅದ್ವೈತಾನುಭವವನ್ನು ಹಡೆದುಕೊಡುವೆನೆಂದರೆ, 'ನಿನ್ನ ಬಲವಂತಿಕೆ ನಿನ್ನದೇ'. ಮಥನಜ್ಞಾನ ಎಂದಾದರೂ ಸಹಜಜ್ಞಾನವಾಗಬಹುದೇ? ಮುಕ್ತಾಯಕ್ಕನ ತರ್ಕದ ಈ ತೀಕ್ಷ್ಣತೆ ಪ್ರಭುವಿನ ಮಾತನ್ನೆಲ್ಲ ಕಡಿಖಂಡ ಮಾಡುವಂತಿದೆ. ಎಂಥ ಹರಿತ!

ಮುಕ್ತಾಯಕ್ಕನ ಮಾತು ಅಲ್ಲಮಪ್ರಭುವಿನ 'ಆಱೂಢಿಯ ಕೂಟ'ದ ಅನುಭಾವವನ್ನು ಒರೆದೊರೆದು ನೋಡುವಂತಿದೆ; ಕೊರೆಕೊರೆದು ತೆಗೆದು, ಪದರು ಪದರಾಗಿ ಬಿಚ್ಚಿ

---

೧. 'ಭಕ್ತನ ಮುಖದಲ್ಲಿ ಲಿಂಗವ ಕಾಣಬಹುದು . .'—ಎಂಬ ಬಸವಣ್ಣನವರ ವಚನಕ್ಕೆ ಕಲ್ಲಮಠದ ಪ್ರಭುದೇವರು ಬರೆದ ಟೀಕನ್ನು ಇಲ್ಲಿ ಪರಿಶೀಲಿಸಿ:

> ತೆಱಹು ಮಱಹುಗಳಿಲ್ಲದೆ ಅಖಂಡ ಜ್ಞಾನದೃಕ್ಕುಳ್ಳ ಲಿಂಗವು ಭಕ್ತನ ಸರ್ವಾಂಗದಲ್ಲಿ ಪರಿಪೂರ್ಣನಾಗಿಪ್ಪನು. ಅಂತು ಭಕ್ತನು ಸರ್ವಾಂಗಲಿಂಗಮಯುವಾಗಿಪ್ಪನಾಗಿ ಆ ಸದ್ಭಕ್ತನು ತಾನನುಭವಿಸುತ್ತಿರ್ದ ಲಿಂಗಾನುಭಾವ ವರ್ತನೆಯ ನುಡಿಯಲು ಆ ನುಡಿದ ವಚನಂಗಳೆಲ್ಲಾ ಲಿಂಗದ ಸಮ್ಯಗ್‌ಜ್ಞಾನಪ್ರಕಾಶ. ಅಂತಪ್ಪ ಸಮ್ಯಗ್‌ಜ್ಞಾನ ಪ್ರಕಾಶವೆಲ್ಲಾ ಲಿಂಗವೆ. . . .

ಲಿಂ. ಲೀ. ವಿ. ಚಾ. ಪು. ೨೦೦, ವ. ೧೦೪, ಟೀಕು.

ನೋಡುವಂತಿದೆ. ಪ್ರಭುವಿನ ಪರೀಕ್ಷೆಯ ಕಾಲ! ಈ ಪರೀಕ್ಷೆಯನ್ನು ನಡೆಸುವಂತಿರುವ ಮುಕ್ತಾಯಕ್ಕನಿಗೆ ಇದರಲ್ಲಿಯೆ 'ಆತ್ಮಲಾಭ'. ಪರೀಕ್ಷೆ ಮುಂದುವರಿದಂತೆ ಅಲ್ಲಮನ ಲಿಂಗತೇಜ ತನ್ನೊಳಗೊಳಗಿನ ಉತ್ತರೋತ್ತರ ಪ್ರಜ್ವಲತೆಯನ್ನು ಬೀರುತ್ತ ನಡೆಯುತ್ತದೆ. ಈ ಅನುಭವದ ಹಂತ ಹಂತ ಅಕ್ಕನಿಗೆ ಗೊತ್ತು. ಅಂತೆಯೆ ಪ್ರಶ್ನೆಗೆ ಉತ್ತರ ಬರುವಷ್ಟರಲ್ಲಿಯೆ, ಅದೇ ಉತ್ತರದಲ್ಲಿ ಕುಡಿವರಿಯುತ್ತದೆ ಅಕ್ಕನ ಮುಂದಿನ ಪ್ರಶ್ನೆ. ಅಜಗಣ್ಣನ ನಿಃಪತಿ, ಸಹಜಜ್ಞಾನ ನಿನಗಿದ್ದರೆ ನೀನೇಕೆ ಸುಮ್ಮನೆ ಇರುವುದಿಲ್ಲ? ನಿಶ್ಶಬ್ದವಾದ ನಿರಾಳದಿರವನ್ನು ನೀನೇಕೆ ಇರುವುದಿಲ್ಲ?

ತಾಯೇ,
ತನ್ನ ತಾನಱಿದಡೆ ನುಡಿಯೆಲ್ಲಾ ತತ್ತ್ವ ನೋಡಾ!
ತನ್ನ ತಾ ಮಱೆದಡೆ ನುಡಿಯೆಲ್ಲಾ ಮಾಯೆ ನೋಡಾ!
ಅಱಿದು ಮಱೆದ ಶಿವಯೋಗಿಯ ಶಬುದವೆಲ್ಲಾ
ಉಪದೇಶವಲ್ಲದೆ ಭಿನ್ನ ಉಂಟೇ?
ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ,
ಎನ್ನ ಮನದೊಳಗೆ ಕಂದುಕಲೆಯೆಂಬುದಿಲ್ಲ ನೋಡಾ.
ನಮ್ಮ ಗೊಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ
ಬಾಯ್ದೆಗೆದೆನಲ್ಲದೆ ಭಿನ್ನ ಉಂಟೆ ಹೇಳಾ ಮರುಳೆ?[೧]

ತನ್ನ ಲಿಂಗಗಂಭೀರ ನಿಜವನ್ನು ತನ್ನ ಅರಿವಿನ ಕಣ್ಣಿಂದ ಕಂಡು ಆ ಗಂಭೀರದಿಂದ ಮಾತು ಹೊಮ್ಮಿದರೆ, ಅದೇ ಮಾತಿನಲ್ಲಿ ಮೂರ್ತಿಗೊಂಡ ಗಂಭೀರ, ಅದೇ ಲಿಂಗತತ್ತ್ವ. ತನ್ನ ಗಂಭೀರವನ್ನು ಕಾಣದೆ ತೇಲುವ ತೆರೆಯನ್ನು ಮಾತಾಡಿದರೆ ಅದೇ 'ಬಹಿರಂಗದ ಸುದ್ದಿ', ಮಾಯೆ. ಬೆಳಗಿನ ಬಾಯಲ್ಲಿ ಕತ್ತಲೆಯ ಮಾತಿಲ್ಲ, ಕತ್ತಲೆಯ ನಾಲಗೆಯಲ್ಲಿ ಬೆಳಗಿನ ಸುಳಿವಿಲ್ಲ. ತಾಯೆ, ಶಿವ-ಯೋಗಿ, ಗಂಭೀರಯೋಗಿ ತನ್ನ ತಾ ತಿಳಿದು ನೋಡಿದ; ಅಗಲದ ಕೂಟವ ಕೂಡಿದ. ಕೂಡಿ ಅಲ್ಲಿಯೆ ಮಹಾಲಿಂಗಗಂಭೀರದಲ್ಲಿ ಮರೆದೊರಗಿದ. 'ಪರವಶ'ದ ಇಲ್ಲಿಂದ ಮಾತು ಮೂಡಿದರೆ, ತಿಳಿಯಬಲ್ಲವರಿಗೆ ತಾನು ಲಿಂಗವಾಗಿದ್ದ ತನ್ನ ಗಂಭೀರದ ಜಾಡುಹಿಡಿದು ತೋರಿಸುವ ಉಪ-ದೇಶ. ಈ ಉಪದೇಶ ನಿನಗೆ ನಾನು ಭಿನ್ನವಾಗಿ ಮಾಡುವ ಉಪದೇಶ ಅಲ್ಲ. ನಮ್ಮ ಗೊಹೇಶ್ವರಲಿಂಗಕ್ಕೆ ನೀನು ಕರುಣದ ಶಿಶು. ಶಿಶುವಿನಲ್ಲಿ ಮನದ ಕಳವಳ, ಕರುಳ ಕಲೆ ತಲೆದೋರಿದ್ದರೆ ಗೊಹೇಶ್ವರಲಿಂಗಕ್ಕೆ ನೋವಲ್ಲವೆ? ಲಿಂಗ ನುಡಿದು ನಿನ್ನ ಮನವನ್ನು ಉಜ್ಜಿ ಕಲೆಯನ್ನು ಕಳೆಯಲೆಂದಿದ್ದರೆ, ಕಾರುಣ್ಯವನ್ನೆ ನನ್ನ ಮನದ ಕಂದುಕಲೆಯೆಂದು ಭಾವಿಸುವುದು ಸರಿಯೆ ತಾಯೆ? ಲಿಂಗದ ಶಿಶುವಿಗೆ ಮತ್ತು 'ನಮ್ಮ ಗೊಹೇಶ್ವರಲಿಂಗಕ್ಕೆ' ಭಿನ್ನ ಉಂಟೇನವ್ವಾ? ತನ್ನಿಂದ ಅನ್ಯವಾಗಿ, ಭಿನ್ನವಾಗಿ ಇದ್ದವರಲ್ಲಿ ಬಾಯಿ ತೆಗೆದು ನುಡಿವನೆ ನಮ್ಮ ಗೊಹೇಶ್ವರಲಿಂಗ?

---

೧. ಶೂ. ಸಂ. ಪು. ೩೨. ವ. ೩೦.

ಅಣ್ಣಾ, ಕಂದುಕಲೆಯಿದ್ದರೆ ಅದನ್ನು ತೊಳೆದು ಕಳೆದು, ಹತ್ತಿರ ಕರೆದು ಕುಳ್ಳಿರಿಸಿಕೊಂಡು ನಿಜದ ಮಾರ್ಗವನ್ನು ನಿರ್ದೇಶಿಸಬೇಕು. ಆದರೆ ಇಂಥ ಉಪದೇಶ ಶಬ್ದದ ಮೇಲೆಯೆ ನಡೆಯಬೇಕೆಂಬ ನಿಯಮವಿದೆಯೆ? ಉಪದೇಶಕ್ಕೆ ನುಡಿಯ ಹಂಗು ಇದ್ದರೆ ಅದು ಉಪಾಧಿಯ ಉಪದೇಶ, ಸಹಜ ಉಪದೇಶವಲ್ಲ. ನಮ್ಮ ಅಜಗಣ್ಣತಂದೆ ಶಬ್ದವಿಲ್ಲದೆ ಗುರೂಪದೇಶ ಮಾಡಿದ. ಆದರೆ ನಿನ್ನ ಉಪದೇಶ ಶಬ್ದವಿಲ್ಲದಿದ್ದರೆ ಕಾಲುಮುರಿದ ಹೆಳವನೇ. ಮತ್ತೆ ನನ್ನೊಡನೆ ಅನುಭಾವ ಮಾಡಬೇಕೆಂಬ ವಿಚಾರ ನಿನ್ನದು. ಆದರೆ ಅಣ್ಣಾ, ಒಡಲಿಗೆ ಹಂಗಿಗನಾಗಿ ಸುಳಿದಾಡುತ್ತಿರುವ ನಿನಗೆ ಲಿಂಗದ ಸುಳುಹಿನ ಸೂಕ್ಷ್ಮ ತಿಳಿದಿದೆಯೆ? ನಮ್ಮ ಅಜಗಣ್ಣನ ಶಬ್ದ ಮುಗ್ಧ ಅದರಂತೆ ಶರೀರ ಮುಗ್ಧ. ಲಿಂಗಾನುಭಾವಿಗಳು ಸುಳಿಯಬೇಕು ಅಣ್ಣಾ, ಆದರೆ ಒಡಲ ಉಪಾಧಿಯಿಲ್ಲದೆ ಸುಳಿಯಬೇಕು. ಹೀಗೆ ಲಿಂಗದ ಸುಳಿವ ಸುಳಿದರೆ ಲಿಂಗಶಿಶುಗಳಾದ ಶರಣರೊಡನೆ ಅನುಭಾವದ ಗೋಷ್ಠಿ. ಒಡಲು ಹೊತ್ತುಕೊಂಡು ಲಿಂಗದ ಅನುಭಾವ ತಾನೆಲ್ಲಿಯದಣ್ಣಾ? ಅನುಭಾವ ಇದಿರಿಗೆ ತಾನು ಹೇಳುವ ಮಾತಲ್ಲ. ಇದಿರು ತಾನಾಗಿದ್ದರೆ ಆ ತನ್ನೊಡನೆ ತನ್ನ ಅನುಭಾವದ ಪ್ರಸಂಗ. ಅನ್ಯರಲ್ಲಿ ಅನುಭಾವ ಹರಿವುದು ಹೇಗೆ? ನಮ್ಮ ಅಜಗಣ್ಣತಂದೆ ಅನುಭವ ಮಾಡಿ ನಿಜದರಿವನ್ನು ತೋರಿದ ರೀತಿ ವಿಚಿತ್ರ, ಅಲೌಕಿಕ ! ನಾನು ಇಲ್ಲಿ ನಿಂತು ನಿಮಗೆ ಅದನ್ನು ತೋರುವುದು ಲೋಕದ ನಿಯಮ. ನಾನು ಅಲ್ಲಿ ಇಲ್ಲಿ ಇರದೆ ನಿಮಗೆ ನಾನು ಏನನ್ನು ತೋರಬಲ್ಲೆ? ಆದರೆ ಅಜಗಣ್ಣ? 'ಅಱಿವ ತೋಱಬಲ್ಲರೆ ತನ್ನನಱುಹದೆ ಅಱುಹುವನು.'[೧]

ತಾಯೀ, 'ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದ'. ಅದು ಹೇಗೆ ಎಂದು ಕೇಳುವೆಯಾ? ಲಿಂಗದ ಬಿಸಿಲಿಗೆ ಹರವಿದ ಶರಣನ ಅಂಗದ ಹಸಿಯೆಲ್ಲಾ, ಗುಣಧರ್ಮ ಕರ್ಮವೆಲ್ಲಾ ಒಣಗಿಹೋಗಿದೆ. ಅಂಗದ ಹಸಿ ಪ್ರಕೃತಿಯಿದ್ದರೆ ಶರೀರ ನಡೆಯ ಬಲ್ಲುದು. ಈ ಹಸಿಯಿಲ್ಲದೆ ನಡೆದರೆ ಅದು ಲಿಂಗದ ಗಮನ, ಅದೇ ನಿರ್ಗಮನ. ಹೀಗೆ ನಿರ್ಗಮನಿಯಾಗಿ ನಡೆದರೆ ಹೆಜ್ಜೆಯ ಗುರುತಿಲ್ಲ. ತನ್ನಲ್ಲಿ ತಾನು ವಿಶ್ರಾಂತಗ್ರಾಮಿಯಾಗಿ ವಿಶ್ವಭರಿತವಾಗಿ ಕಾಲದೇಶದಲ್ಲಿ ತೆರಹಿಲ್ಲದೆ ನಡೆದಾಡುತ್ತಿರುವ 'ನಮ್ಮ ಗೊಹೇಶ್ವರ ಲಿಂಗಕ್ಕೆ' ಮೂಡಿದ ಹೆಜ್ಜೆಯನ್ನು ಕಂಡವರಾರು? ಹೆಜ್ಜೆಯಿಟ್ಟು ನಡೆವುದು ಲೋಕ; ಹೆಜ್ಜೆಯಿಲ್ಲದೆ ನಡೆಯುವುದು ಲಿಂಗ. ಅದರಂತೆ ಪ್ರಾಣನ, ಜೀವಾತ್ಮನ ಹಸಿಪ್ರಕೃತಿ ಪ್ರಪಂಚವೆಲ್ಲ ಅರಿವಿನ ಬೆಳಗಾಗ್ನಿಯಲ್ಲಿ ಸುಟ್ಟುಹೋದ ಬಳಿಕ ನಿಷ್ಪ್ರಾಣನಲ್ಲಿ ಶಬ್ದ ಸಂದಣಿ ಹಿಡಿವುದೆಂತು? ಪ್ರಾಣ ಸುಟ್ಟು ಪ್ರಾಣಲಿಂಗವಾಗಿ ಶಬ್ದವ ನುಡಿದರೆ ಆ ಶಬ್ದ ಹಸಿಯ ಶಬ್ದವಲ್ಲ, ಲಿಂಗದ ನಿಶ್ಶಬ್ದ. ಈ ಶಬ್ದಕ್ಕೂ ಹೆಜ್ಜೆಯಿಲ್ಲ. ಹೆಜ್ಜೆಮೂಡದೆ ನುಡಿದರೆ ಸೂತಕದ ಲೇಪವೆಲ್ಲಿ? ಒಡಲು ಪ್ರಾಣಲಿಂಗದಲ್ಲಿ ಒಣಗಿದ್ದರೆ ನಡೆನುಡಿಯ ಕುರುಹು ಎಲ್ಲಿದೆ ಶರಣನಿಗೆ? ಚಿನ್ನಕ್ಕೆ ಬಣ್ಣವಿದ್ದರೆ ಚಿನ್ನದ ಗುರುತು, ಬಣ್ಣವಿಲ್ಲದ ಚಿನ್ನ ಚಿನ್ನವಲ್ಲ.

೧. ಶೂ. ಸಂ. ಪ್ರ. ೩೨, ವ. ೩೧. ('ಅಱಿವನು' ಎಂಬ ಪಾಠ ಸಿದ್ಧವೀರದೇವರ ಶೂನ್ಯಸಂಪಾದನೆಯಲ್ಲಿದೆ. 'ಅಱುಹುವನು' ಎಂಬ ಪಾಠಾಂತರವು ಶಿವಗಣಪ್ರಸಾದಿ ಮಹಾದೇವಯ್ಯಗಳದು. ಈ ಪಾಠಾಂತರವೇ ಇಲ್ಲಿ ಹೆಚ್ಚು ಯುಕ್ತವೆನಿಸುತ್ತದೆ.)

ಹೀಗೆ ಲಿಂಗಶರಣನ ಒಡಲು ಪ್ರಾಣ, ಹೀಗೆ ಆತನ ನಡೆನುಡಿ. 'ಗೊಹೇಶ್ವರನ ಶರಣಂಗೆ ಕುಱುಹಿಲ್ಲ ಕೇಳಾ ಎಲೆ ಅವ್ವಾ'.

ನಿನ್ನ ಅರಿವೇತರದಣ್ಣಾ? ಕೈಯಲ್ಲಿ ಕುರುಹು, ಬಾಯಲ್ಲಿ ಬೊಬ್ಬೆ, ಕಾಲಲ್ಲಿ ದೇಶಾಂತರ. ಇದೆಂಥ ಅರಿವಣ್ಣಾ !

ಕಯ್ಯದು ಕುಱುಹು, ಬಾಯದು ಬೊಬ್ಬೆ,
ಉಲಿಯದಿರೊ ಭಾವಾ, ಉಲಿಯದಿರೊ ಭಾವಾ !
ವಾರಿಕಲ್ಲ ಕೊಡನಲ್ಲಿ ಮುತ್ತು ಮಾಣಿಕ್ಯವ ತುಂಬಿ
ಎತ್ತುವರಿಲ್ಲದೆ ಸಖಿಯನಱಸುತ್ತಿರ್ಪೆ.
ಮನದ ತನುವಿನಲ್ಲಿ, ಆ ತನುವಿನ ಮನದಲ್ಲಿ ತನಗೆ ತಾನೆತ್ತಿಕೊಂಡರೆ
ಮನ ಮೇರೆದಪ್ಪಿ ಕರಗಿ ಉಕ್ಕಿತ್ತು ನಮ್ಮ ಅಜಗಣ್ಣನ ಯೋಗಾ ![೧]

ಅರಿವನ್ನು ಶಬ್ದದಲ್ಲಿ ನುಡಿದು ಏಕೆ ಉಲುಹು ಮಾಡುವೆಯಣ್ಣಾ? ಅದೇಕೆ ಬೊಬ್ಬಿರಿವೆ? ಯಾವ ಕುರುಹಿಲ್ಲದೆ ನಿರುಪಾಧಿಕವಾಗಿ ನಿಂದ ಅರಿವಲ್ಲಣ್ಣಾ ನಿನ್ನದು. 'ಜಲಬಿಂದು ಸ್ವರೂಪ'ವಾದ ನಿನ್ನ ಶರೀರವೆಂಬ ಕೊಡದಲ್ಲಿ ಜ್ಞಾನವೆಂಬ ನವ್ಯರತ್ನ ಮುಕ್ತಿಯೆಂಬ ಹೊಸಹೊಸ ತನಿಗಾಂತಿಯ ಮುತ್ತನ್ನು ತುಂಬಿಕೊಂಡಿರುವೆ, ನಿಜ. ಆದರೆ ಈ ಮುತ್ತು ಮಾಣಿಕ್ಯದ ಕೊಡವನ್ನು ನಿನಗೆ ನೀನೇ ಎತ್ತಿಕೊಳ್ಳುವ ಶಕ್ತಿ ಸಾಲದೆ, ಹೊರಿಸಬಲ್ಲ ಗೆಳೆಯರನ್ನು ಹುಡುಕುತ್ತಿರುವೆ. ಅಸಹಾಯಶೂರನಲ್ಲ ನೀನು, ಏಕೈಕ ವೀರ ಧೀರನಲ್ಲ ನೀನು. ಇದೋ ಇಲ್ಲಿ ನೋಡು ನಮ್ಮ ಅಜಗಣ್ಣನ ಯೋಗದ ಮಹಾಮಹಿಮೆಯನ್ನು. ಮನವೇ ತನುವಾಗಿದ್ದ ನಮ್ಮ ಅಣ್ಣ. ಈ ಮನ-ತನುವಿನ ಮನದಲ್ಲಿ ಅಂದರೆ ಮನಕ್ಕೆ ಮನವಾದ ಮೂಲಮನದಲ್ಲಿ, ಮನಸ್ಸಿಗೆ ಮನತನವನ್ನು ದಯಪಾಲಿಸಿರುವ ಮನೋಲಯ ಸ್ಥಾನವಾದ 'ಉನ್ಮನ'ದಲ್ಲಿ ಸಹಜಜ್ಞಾನಮುಕ್ತಿಯನ್ನು ತನಗೆ ತಾನೆ ಎತ್ತಿಕೊಂಡು ನಿಂತರೆ ಆತನ ಮನದ ಮೇರೆಗಳೆಲ್ಲ ಕಿತ್ತುಹೋಗಿ, ಮುತ್ತು ಮಾಣಿಕ್ಯದ ನವೀನ ದಿವ್ಯಕಾಂತಿಗೆ ತಡೆಯದೆ ಉರಿಗೊಡ್ಡಿದ ಅರಗಿನಂತೆ ಮನವೆಲ್ಲ ಕರಗಿತು. ಆ ಕಾಂತಿಯ ಪ್ರಖರಕ್ಕೆ ಕರಗಿದ ಮನವೆಲ್ಲ ಉಕ್ಕಿಹೋಯ್ತು. ಮನವಳಿದು ಮನವಿಲ್ಲದ ಅರಿವು ನಮ್ಮ ಅಜಗಣ್ಣನ ಯೋಗ. ಮನವಿದ್ದರೆ ಒಡಲ ಕುರುಹು, ಪ್ರಾಣನ ಕುರುಹು, ಶಬ್ದದ ಕುರುಹು. ಮನವಿಲ್ಲದೆ ನಿಂದ ನಿಲವಿಗೆ ಎಲ್ಲಿಯ ಕುರುಹು? ಕುರುಹುಗೆಟ್ಟ ಅರಿವು ತನ್ನಲ್ಲಿ ತಾನು 'ಮರೆದೊರಗಿದ' 'ಪರವಶ'ವಾದ ನಿಜದರಿವು ಅದೇ ನಿಜ ನಿರಾಳ. ಆದರೆ ನಿನ್ನ ಅರಿವಿಗಾದರೋ ಸಖಿಯರು ಬೇಕು. ಬಾಯಿಗೆ ಶಬ್ದ ಬೇಕು, ಕೈಗೆ ಇಷ್ಟಲಿಂಗ ಬೇಕು, ಕಾಲಲ್ಲಿ ನಡೆದಾಡುವ ಒಡಲುಪಾಧಿ ಬೇಕು. ಅಣ್ಣಾ, ನೀನು ನಡೆನಡೆದು ನುಡಿ ನುಡಿದು ತನುವಿನ ಶಬ್ದಮಾಡುತ್ತ, ಮನದ ಶಬ್ದಮಾಡುತ್ತ ಭಾವದ ಶಬ್ದ ಬೊಬ್ಬಿರಿಯುತ್ತ ನಡೆದರೆ, ಈ ಹಂಗು ಈ ಕುರುಹಿನಲ್ಲಿ ಸಿಕ್ಕ ನಿರಾಳದ ಗತಿಯೇನಣ್ಣಾ?

---

೧. ಶೂ. ಸಂ. ಪು. ೩೭, ವ. ೩೩.

ಅಣ್ಣಾ, ಮತ್ತೆ ಹೇಳುವೆ ನೀನು: ಅರಿದೆನೆಂಬ ಅರಿವು ನಷ್ಟವಾಗಿದೆ, ಮರೆದೆನೆಂಬ ಮರಹು ನಷ್ಟವಾಗಿದೆ, ಭಾವದ ಭ್ರಾಂತಿ ಭ್ರಮಣಗೆಟ್ಟು ನಿರ್ಭ್ರಾಂತಿಯಾಗಿದೆ, ಕೈಯಲ್ಲಿ ಕುರುಹಿದ್ದರೂ ಕುರುಹೆಂಬ ಭಾವ ಅದೂ ನಿರ್ಭ್ರಾಂತಿಯಾಗಿದೆ; ತಾನೆಂಬ ಅಲ್ಲಮಪ್ರಭು ವಳಿದು ತಾನೆಂಬ ಗೊಹೇಶ್ವರಲಿಂಗ ಉಳಿದು ಪ್ರಭುಲಿಂಗವಾದ ನಿಜದ ಶರಣನ ಅಂತ ರಂಗದಲ್ಲಿ ಅರಿವಿನ ಕುರುಹಿಲ್ಲ; ಕಾಯಗೊಂಡಿರುವ ನನ್ನ ಕಣ್ಣಿಗೆ ನಿನ್ನ ನಿಜದ ನಿಲವು ಸಂದೇಹವಾಗಿ ತೋರುತ್ತಿದೆ; ಕಾಯದ ಕಣ್ಣಿನಲ್ಲಿ ನೋಡದೆ ಅರಿವಿನ ಕಣ್ಣು ತೆರೆದು ನೋಡಿದರೆ ನಿನ್ನ ನಿಲವು ನಿಜದ ನಿಲವೆಂಬುದು ನಿಸ್ಸಂದೇಹವಾಗಿ ನಿಲ್ಲುತ್ತದೆ ಎಂದು. ಆದರೆ ಅಣ್ಣಾ, ನಿನ್ನನ್ನು ಬಿಚ್ಚಿ ವಿವರಿಸಿ ನೋಡಿದರೆ ನಿನ್ನ ಇಲ್ಲಗಳನ್ನು ಉಂಟುಗಳ ನೆಳಲು ಬೆಂಬತ್ತಿಲ್ಲವೇ? 'ಅಂಗದಲ್ಲಿ ಲಿಂಗ ಲೀಯವಾಯಿತ್ತೆಂದರೆ,' ಅಂಗದಲ್ಲಿ ಲಿಂಗ ಲೀಯ ವಾಯಿತ್ತು ಎಂದು ಹೇಳುವ ಅಂಗ ಅಲ್ಲಿಯೆ ಧ್ವನಿಮಾಡುತ್ತಿದೆ. ಸಂಗ,–ಅಂಗಸಂಗ ವಿರಲಿ ಅನಂಗಸಂಗವಿರಲಿ–ಅದೇ ಅಲ್ಲಿಯೆ ವಿಷಯ ಸೋಂಕಿದ ಸೂತಕವಿದೆ. 'ನಾನು ನಾನು, ನನ್ನ ನಿಜ ಮೂಲವಾದ ನಾನು ಆದೆ,' ಎಂದೆನ್ನುವ ಮೊದಲೇ ನಾನಿನ ಮೊಳಕೆ ನೀನು ಬಲವಾಗುತ್ತದೆ. ಇಲ್ಲ ಉಂಟು, ಆದೆ ಅಳಿದೆನೆಂಬ ಗಭೀರಗರ್ತದಲ್ಲಿ ಎರಡಾಗಿ ಎಳತಟಗೊಳ್ಳುತ್ತಿದ್ದರೆ ಅರಿದು ಮರೆದ ಶಿವಯೋಗಿ ನೀನೆಂತಣ್ಣ? 'ಅಱಿವು ನಷ್ಟವಾಗಿ ಮಱಹು ಲಯವಾಗಿಪ್ಪರೆ, ಎನ್ನ ಅಜಗಣ್ಣತಂದೆಯಲ್ಲದೆ ಮತ್ತಾರನು ಕಾಣೆ'.

ತಾಯೆ,

ಅಂಗ ಅನಂಗವೆಂಬೆರಡೂ ಅಳಿದು, ನಿಜದಲ್ಲಿ ನಿಂದ
ಲಿಂಗೈಕ್ಯನ ಅಂಗದಲುಳ್ಳ ಕ್ರೀಗಳೆಲ್ಲವೂ ಲಿಂಗಕ್ರೀಗಳು ನೋಡಾ.
ಮನೋಲಯವಾಗಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವೂ
ಜ್ಞಾನನಷ್ಟ ಶಬ್ದ ನೋಡಾ.
ತನ್ನಲ್ಲಿ ತಾನು ತದ್ಗತವಾಗಿಪ್ಪ ಶಿವಯೋಗಿಗೆ
ಭಿನ್ನವಿಲ್ಲ ನೋಡಾ, ಗೊಹೇಶ್ವರ ಸಾಕ್ಷಿಯಾಗಿ.[೧]

ಪ್ರಕೃತಿಯ ಸಂಗದಲ್ಲಿ ಆದ ಆತ್ಮ ಕರಣ ಇಂದ್ರಿಯ ಶರೀರಮಯವಾದ ಅಂಗ, ಇವರೆಲ್ಲರ ಪ್ರಾಕೃತಭಾವ ಸುಟ್ಟುಹೋದ ಅನಂಗ–ಈ ಎರಡೂ ಅಳಿದರೆ ಅಂಗಸಂಗ ಅನಂಗಸಂಗ ವೆಂದೇನು? ಎಲ್ಲ ಸಂಗವಳಿದು ನಿಸ್ಸಂಗದ ನಿಜದಲ್ಲಿ ಲಿಂಗ ತಾನು ಒಂದಾಗಿ ನಿಂದರೆ ಅದೇ ಲಿಂಗಶರಣ, ಲಿಂಗೈಕ್ಯ. ಈ ಶರಣಲಿಂಗದ ನಿಸ್ಸಂಗಸಂಗದ ಅಂಗದಲ್ಲಿ ಕ್ರಿಯೆ ಹೊಮ್ಮಿದರೆ ಈ ಕ್ರಿಯೆ ಲಿಂಗಚೈತನ್ಯದ ಲಿಂಗಕ್ರಿಯೆ. ನಾನು, ಅಂಗ, ಮನುಷ್ಯನೆಂದಿರುವ ಜೀವಾತ್ಮನ ಮಾನವಜಾತಿಯ ಪ್ರಾಣನ ಚೈತನ್ಯ, ಭಾವ ಬುದ್ಧಿ ಕಣ್ಣು ಮೂಗು ಕೈಕಾಲುಗಳಲ್ಲಿ ಚೇತನಿಸಿ ಕ್ರಿಯಾ ಪ್ರಪಂಚವನ್ನು ಹರವಿದರೆ ಅದು ಅಂಗಕ್ರಿಯೆ. ಆದರೆ ಅಂಗದ ಹಸಿ ಪ್ರಕೃತಿಯಾದ ನಾನು ಮನುಷ್ಯ ಜೀವಾತ್ಮನೆಲ್ಲ ಲಿಂಗದಗ್ಧವಾಗಿ, ಲಿಂಗ ತಾನು ಸುಟ್ಟು ಲಿಂಗಾಂಗಗೊಳಿಸಿದ ಅಂಗದಲ್ಲಿ ಚೇತನಿಸಿ ನಡೆದು ನುಡಿದರೆ ಕಂಡು ಕೇಳಿದರೆ ಪ್ರಾಣಿಸಿ

೧. ಶೂ. ಸಂ. ಪು. ೩೩, ವ. ೩೬.

ಭಾವಿಸಿದರೆ ಈ ಕ್ರಿಯಾಸೃಷ್ಟಿ ಯಾರದು ತಾಯೆ? ಲಿಂಗ ಚೇತನಿಸಿ ಮಾಡಿದರೆ ಲಿಂಗಾಂಗದಲ್ಲಿ ಬೆಳೆವ ಕ್ರಿಯೆಯೆಲ್ಲ ಲಿಂಗಕ್ರಿಯೆ. ಮನವೆಲ್ಲ ಲಿಂಗದಲ್ಲಿ ವಿಲೀನವಾಗಿ ನಿಜಲಿಂಗೈಕ್ಯದಿಂದ ಅನುಭಾವ ಶಬ್ದದಲ್ಲಿ ಉದಯವಾದರೆ, ಆ ಅನುಭಾವವೆಲ್ಲ ಮಥನಜ್ಞಾನದ ಮಾತೇ ಇಲ್ಲದ ಜ್ಯೋತಿರ್ಲಿಂಗದ ಮಾತು. ಅದು 'ಜ್ಞಾನನಷ್ಟಶಬ್ದ'. ತಾನು ತನ್ನಲ್ಲಿಗೆ ಗಮಿಸಿ 'ತನ್ನಲ್ಲಿ ತಾನು ತದ್‌ಗತ'ವಾಗಿ, ಶಿವದಲ್ಲಿ ಯೋಗವಾಗಿ ಶಿವೈಕರಸವಾಗಿ ಇರುವ ಇರುವ ಇರುವ, ಅಲ್ಲಿ ಇಲ್ಲಿ ಎಲ್ಲಿ, ಅದು ಇದು ಎಲ್ಲದು ಆಗಿ ಅಂದು ಇಂದು ಎಂದೂ ಇರುವ, ಇವರಾಚೆ ಇರುವ ಶಿವಯೋಗಿಯ ನಿತ್ಯಾಖಂಡ ಪರಿಪೂರ್ಣ ಇರವಿನಲ್ಲಿ 'ಭಿನ್ನ'ದ ಬಿರುಕಿಲ್ಲ ತಾಯೆ. ಈ ಮಾತಿಗೆ ಸಾಕ್ಷಿ ಯಾರು? ಇದ್ದ ಇರವೆ ಸಾಕ್ಷಿ. ಗವಿಯೊಡೆಯ ಪರಿಪೂರ್ಣವೆ ಸಾಕ್ಷಿ.

ಅಣ್ಣಾ, ಮತ್ತೆ ಮತ್ತೆ ಮಾತಿನ ಉಲುಹು, ಮತ್ತೆ ಮತ್ತೆ ಮತಿಯ ಉಲುಹು, ಮತ್ತೆ ಮತ್ತೆ 'ಅಹಂ ಬ್ರಹ್ಮ'ದ ಉಲುಹು !

ಸಿಡಿಲು ಹೊಯಿದ ಬಾವಿಗೆ ಸೋಪಾನವೇಕೋ?
ನೆಱೆಯಱಿದ ಬಳಿಕ ಮತ್ತೆ ಮತಿ ಹುಟ್ಟಲುಂಟೇ?
ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೋ?
ತನ್ನಲ್ಲಿ ತಾನು ತದ್ಗತವಾದ ಬಳಿಕ ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ
ನೋಡಾ, ಎನ್ನ ಅಜಗಣ್ಣತಂದೆಗೆ.[೧]

ಸಿಡಿಲು ಹೊಡೆದು ಬಾವಿ ಸುಟ್ಟು ಸುರಿಹೋಗಿದ್ದ ಬಳಿಕ ಅಲ್ಲಿ ಇಳಿದು ಹತ್ತಲು ಸೋಪಾನವಿಲ್ಲ. ಸೋಪಾನ ಉಳಿದಿದ್ದರೂ ಪ್ರಯೋಜನವಿಲ್ಲ. ಅಲ್ಲಿ ಬಾವಿಯಿಲ್ಲ, ಬಾವಿಯಲ್ಲಿ ನೀರಿಲ್ಲ. ಮನೆಯ ಸೊಡರು ಮನೆಗತ್ತಲೆಯನ್ನೆಲ್ಲ ನುಂಗಿ ಬೆಳಗೇ ಬೆಳಗಾಗಿದ್ದರೆ ಆ ಮನೆಯಲ್ಲಿ ಕತ್ತಲೆಯ ಹೆಸರೇ ಇಲ್ಲ. ಸ್ವಯಂಜ್ಞಾನ ಪರಿಪೂರ್ಣವಾಗಿ ತುಂಬಿದ ಶಿವಯೋಗಿಯ ಮಹಾಮನೆಯನ್ನು ಬೊಮ್ಮ ಪರಬೊಮ್ಮವಾದೆನೆಂಬ ಬುದ್ಧಿ ಕತ್ತಲಿಸಲಿಲ್ಲ. ಆ ಸೋಪಾನದ ಕುರುಹಿದ್ದರೆ ಸಿಡಿಲು ಪೂರ್ಣ ಹೊಯಿದಿಲ್ಲ ಬಾವಿಯನ್ನು. ಕತ್ತಲೆಯ ಕುರುಹಿದ್ದರೆ ಆ ಬೆಳಗು ಬೆಳಗಿನ ಜಾತಿಯೆ ಅಲ್ಲ. ಅಹಂಬ್ರಹ್ಮಪ್ರಜ್ಞೆಯ ಗುರುತು ಅರಿವಿನಲ್ಲಿ ಉಳಿದಿದ್ದರೆ, ತನ್ನಲ್ಲಿ ತಾನು ಪೂರ್ಣ ತದ್ಗತವಾಗಿಲ್ಲ. ಏನೇನೂ ಉಳಿಯದಂತೆ ಅರಿವಿನ 'ಸಿಡ್ಲು' ಹೊಡೆದ ಅಜಗಣ್ಣನನ್ನು ನೋಡು ಪ್ರಭು. ಮಹಾಬೆಳಗು ಹೊಯ್ದು ಎಳ್ಳಿನಷ್ಟು ಕತ್ತಲೆಯಿಲ್ಲದ ಬಚ್ಚಬರಿಯ ಬೆಳಗನ್ನು ನೋಡು ! ಇಲ್ಲಿ ಮತಿಯ ಮಾತಿಲ್ಲ, ಮಾತಿನ ಮಥನವಿಲ್ಲ. ಎಲ್ಲ ಬೆಳಗು, ಎಲ್ಲ ಬಯಲು ! ಇದು ನಿಜಸ್ಥಲದ ನಿಲವು. ಈ ಬೆಳಗು–ಬಯಲಿಗೆ ಬುದ್ಧಿ ಇಲ್ಲ, ಹಮ್ಮಿಲ್ಲ.

ತಾಯೇ, ಇಲ್ಲಿ ನೋಡು ಅದೇ ನಿಜಪದದ ನಿಲವು:
ನುಡಿಯಿಂದ ನಡೆಗೆಟ್ಟಿತ್ತು; ನಡೆಯಿಂದ ನುಡಿಗೆಟ್ಟಿತ್ತು.

---

೧. ಶೂ. ಸಂ. ಪು. ೩೩-೩೪ ವ. ೩೭

ಭಾವದ ಗುಸುಟು ಅದು ತಾನೆ ನಾಚಿ ಮಾದುದು ನೋಡಾ !
ಗೊಹೇಶ್ವರನೆಂಬ ಅಱಿವು ಸಿನೆ ಬಂಜೆಯಾದುದಲ್ಲಾ ![1]

ಅಕ್ಕಾ, ಈ ಮೊದಲೇ ನೋಡಿದಂತೆ ನಿಜಲಿಂಗ ತಾನಾದ ಶರಣನ ಮನ ಲೀಯವಾಗಿದೆ ಅದೇ ಲಿಂಗದಲ್ಲಿ. ಮನವಿಲ್ಲದ ಶರಣನ ಅನುಭಾವ ಜ್ಞಾನನಷ್ಟಶಬ್ದ. ಈ ಶಬ್ದ ವೇಧಿಸಿ, ಈ ಅನುಭಾವ ನಡೆಯೊಳಗೆಲ್ಲ ನಾಟಿ ಹಬ್ಬಿ ಅಂಗದ ಭಿನ್ನಕ್ರಿಯಾಚಾರವರ್ತನೆ ಲಿಂಗದ ಲಿಂಗೈಕ್ಯ ಕ್ರಿಯಾಚಾರವರ್ತನೆ ಇಲ್ಲವಾಗಿ ಹೋಯ್ತು. 'ನಾನೂ ಇಲ್ಲ, ನೀನೂ ಇಲ್ಲ'[2]ದ ಶರಣನ ನಡೆಯೆಲ್ಲ ಕೆಟ್ಟು ಬಯಲು-ನಡೆಯಾಯ್ತು. 'ತಾನೆ ಲಿಂಗವೆಂಬ ಮಹದಹಂಕಾರದ ಅಱಿವಿನ ಉಲುಹನು ನಿರಹಂಕಾರ ಕ್ರೀಯಿಂದಳಿದು' ಅರಿವಿನ ಉಲುಹು ಕೆಟ್ಟು 'ನಾನೂ ಇಲ್ಲ, ನೀನೂ ಇಲ್ಲ'ದ ನುಡಿ ಬಯಲು-ನುಡಿಯಾಯ್ತು. ತಾಯೆ, ನಾನೆಂಬ ಭಾವ ನೀನೆಂಬ ಭಾವ, ನಾನು ನೀನಾದೆನೆಂಬ ಏಕಭಾವ! ನಾನು ನೀನಾಗದೆ ಎಂದು ಇದ್ದೆ? ನೀನು ನಾನಾಗದೆ ನನ್ನ ಬಿಟ್ಟು ನೀನೆಲ್ಲಿದ್ದೆ? ಮರವೆಯ ಜವನಿಕೆ ಅಡ್ಡಬಿದ್ದು ನಾನೆಂದು ನೀನೆಂದು ಭಿನ್ನಭಾವ. ಜವನಿಕೆ ಓರೆಯಾದರೆ ನಾನು ನೀನು ಎಂಬ ಐಕ್ಯಭಾವ, ಮತ್ತೆ ಮುಂದೆ ನಿಜದಲ್ಲಿ ನಿಂದರೆ ಭಿನ್ನವಾಗಿದ್ದೆ ಮತ್ತೆ ಏಕವಾದೆನೆಂಬ ಭಾವದ ಗುಸುಟು 'ಗಸಿ' ನಾಚಿಕೆಗೊಂಡು ಬಿಟ್ಟುಹೋಯ್ತು. ನಿಜಪದದ ನಿಲವು ಎಂದೂ ಎರಡಾಗಿಲ್ಲ, ಮತ್ತೆ ಒಂದಾಗಬೇಕಿಲ್ಲ. ಈ ಎರಡು ಒಂದರ ಭಾವ 'ನಿಜ ಸಹಜ'ವನ್ನು ಕಂಡು, 'ನೋಡಬಲ್ಲರೆ ಕೂಡಲಿಲ್ಲ ಅಗಲಲಿಲ್ಲ'ವೆಂಬುದನ್ನು ನೋಡಿ ತಾನೆ ಸರಿದು ಬಯಲಾಯ್ತು. ಗೊಹೇಶ್ವರನೆಂಬ ಅರಿವು, ಐಕ್ಯಜ್ಞಾನ ಅದೂ ಹುಟ್ಟು ಬಂಜೆಯಾಗಿ, ಭಾವ ಬುದ್ಧಿ ನಡೆ

---

೧. ಶೂ. ಸಂ. ಪು. ೩೪, ವ. ೩೮.

ಕಲ್ಲಮಠದ ಪ್ರಭುದೇವರು ಅರ್ಥಯಿಸಿದ ಈ ವಚನದ ಸಾರವಿಂತಿದೆ:

ಶರಣ ತಾನೆಲ್ಲಾ ಲಿಂಗವೆಂದು ತನ್ನ ಸಮ್ಯಗ್‌ಜ್ಞಾನಾನುಭಾವವರ್ತನೆಯಿಂದಲಱಿದು ಭಿನ್ನ ಕ್ರಿಯಾಚಾರವನಳಿದ ಶರಣ. ಅಂತು ಶರಣ ತಾನೆ ಲಿಂಗವಾಗಿ ತನ್ನನಱಿದು ತಾನೆ ಲಿಂಗವೆಂಬ ಮಹದಹಂಕಾರದ ಅಱಿವಿನ ಉಲುಹನು ನಿರಹಂಕಾರ ಕ್ರೀಯಿಂದಳಿದು ನಿಶ್ಶಬ್ದವಾಗಿ ನಿಂದುದೆ ಲಿಂಗೈಕ್ಯ. ಅಂತು ತಾನೆಂಬುದನಳಿದು ಶರಣ ಲಿಂಗವೆಯಾದಲ್ಲಿ ಭಾವ ನಿರ್ಭಾವವಾಯಿತ್ತು, ಅಱಿವು ಹುಟ್ಟುಗೆಟ್ಟು ಹೋಯಿತ್ತು. (ಸಂಗ್ರಹಿಸಿದೆ.)

ಲಿಂ. ಲೀ. ವಿ. ಚಾ. ಪು. ೩೩೪, ವ. ೬೭ ಟೀಕು.

ಇದೇ ವಚನವನ್ನು ಮಹಾಲಿಂಗದೇವರು ಅರ್ಥಯಿಸುವುದು ಹೀಗೆ:

ತನ್ನಲ್ಲಿ ತಾನು ನಿಜವನರಿದ ಶರಣನು ತಾ ನುಡಿದ ನುಡಿಗೆ ನಾಚಿ ನಿರ್ಗಮನಿಯಾಗಿ, ಆ ನಿರ್ಗಮನಿಯಾದಲ್ಲಿ ಶಬ್ದ ಮುಗ್ಧವಾಗಿರಲು ಭಾವವಳಿದು ನಿರ್ಭಾವವಾಯಿತ್ತು. ಇಂತು ನಿರ್ಭಾವಿಯಾದ ಲಿಂಗೈಕ್ಯನು ಪರಿಪೂರ್ಣ ತತ್ವದಲ್ಲಿ ಪರಮಸುಖಾನಂದಮಯವಾಗಿ ಮತ್ತೇನು ಅರಿಯತೆರಹಿಲ್ಲ. (ಸಂಗ್ರಹಿಸಿದೆ.)

ಪ್ರ. ವ. ಪು. ೩೩೧, ವ. ೮೬ ಟೀಕು.

೨. ನಾಮ ಅನಾಮವೆಂದು ನೀನು ನಾಮಕ್ಕೆ ಒಳಲುವೆ......
ಚಿಕ್ಕಯ್ಯಪ್ರಿಯ ಸಿದ್ಧಲಿಂಗ, ನಾನೂ ಇಲ್ಲ, ನೀನೂ ಇಲ್ಲ.

ವ. ಶಾ. ಸಾ. ಭಾ. ೨, ಪು. ೫೫೬, ವ. ೨.

ನುಡಿಯನ್ನು ಹಡೆಯದೆ ಹೋಯ್ತು.[೧] ಹೀಗೆ ಅರಿವಿನ ಕುರುಹಿಲ್ಲ, ಭಾವಬುದ್ಧಿಯ ಕುರುಹಿಲ್ಲ, ನಡೆನುಡಿಯ ಕುರುಹಿಲ್ಲ. ಕುರುಹುಗೆಟ್ಟ ಬರಿಯ ಬಯಲು ನಡೆದರೆ ಹೆಜ್ಜೆಯಿಲ್ಲ, ನಿಂದರೆ ನೆಳಲಿಲ್ಲ. ನುಡಿದರೆ ಸೂತಕವಿಲ್ಲ. ಭಾವಿಸಿದರೆ ಭಾವ ನಿರ್ಭಾವದ ಹೆಜ್ಜೆಯಿಲ್ಲ, ಭಾವದ ಗುಸುಟಿಲ್ಲ. ಅರಿದರೆ ಅರಿವಿಗೆ ಹೆಜ್ಜೆಯಿಲ್ಲ, ಪ್ರತಿಯಿಲ್ಲ, ಗೊಹೇಶ್ವರನಿಲ್ಲ. ದೇವ ಭಕ್ತ ಏಕ ಸಮರಸವೆಂಬ ಯಾವ ಹೆಸರು ಯಾವ ಕುರುಹು ಇಲ್ಲದ ಶರಣನ ನಡೆ ನುಡಿ ಭಾವ ಜ್ಞಾನ ನಡೆದರೆ ನುಡಿದರೆ ಭಾವಿಸಿದರೆ ವಿಚಾರಿಸಿದರೆ ಯಾವ ತಪ್ಪಿಲ್ಲ ತಾಯೇ. ಅಜಗಣ್ಣ ನುಡಿಯಲಿಲ್ಲ, ನಡೆಯಲಿಲ್ಲ, ಭಾವಿಸಲಿಲ್ಲ, ವಿಚಾರಿಸಲಿಲ್ಲ, ಅರಿವು ಇರವಿನಲ್ಲಿ ಇವರ ಹೆಜ್ಜೆ ಮೂಡಿ ಕೊರತೆಯಾಗುವುದೆಂದು. ಇದು ನಿನ್ನ ತಿಳಿವಳಿಕೆ. ಆದರೆ ಶರಣ ಶಬ್ದಶೀಲನಲ್ಲ, ನಿಶ್ಶಬ್ದಶೀಲನಲ್ಲ. ಆತ ಸ್ವತಂತ್ರಶೀಲ.[೨] ಇದೋ ಮತ್ತೆ ಕೇಳು ತಾಯೆ ಸ್ವತಂತ್ರಮಹಿಮನ ಶೀಲವನ್ನು:

ದೃಷ್ಟಕ್ಕೆ ದೃಷ್ಟ ಮುಂದೆ ಇಲ್ಲ, ಇಲ್ಲ.
ಮಾಡಿದಡೇನಹುದೋ? ಮಾಡದಿರ್ದಡೇನಹುದೋ?

---

೧. ಇಲ್ಲಿ 'ಜ್ಞಾನಶೂನ್ಯಸ್ಥಲ'ಕ್ಕೆ ಮಹಾಲಿಂಗದೇವರು ತಮ್ಮ ಏಕೋತ್ತರಶತಸ್ಥಲದಲ್ಲಿ ಬರೆದಿರುವ 'ಪೀಠಿಕೆ'ಯನ್ನು ನೋಡಿ:

'ಇಂತು ಭಾವ ನಿರ್ಭಾವವೆಂಬೆರಡು ನಷ್ಟವಾದ ಲಿಂಗವು ಮಹದೈಕ್ಯನ ಮೂಲಜ್ಞಾನವನಾಲಿಂಗಿಸಿ ಜ್ಞಾನವೇ ತಾನಾಗಿ ಆ ಜ್ಞಾನವು ನಿಜದಲ್ಲಿ ನಿಂದು ಶೂನ್ಯವಾದ ಭೇದವೇತಿರ್ದುದೆಂದೊಡೆ ಮುಂದೆ ಜ್ಞಾನಶೂನ್ಯ ಸ್ಥಲವಾದುದು.'

ವ. ಶಾ. ಸಾ. ಭಾ. ೨, ಪು. ೫೫೫.

ಇಲ್ಲಿ ಬೇಕಿದ್ದರೆ ಪ್ರಭುದೇವರ ಮತ್ತೊಂದು ವಚನವನ್ನು ನೋಡಿ:

ಅರಿದರಿದು ಅರಿವು ಬಂಜೆಯಾಯಿತ್ತು.
ಮರೆಮರೆದು ಮರಹು ಬಂಜೆಯಾಯಿತ್ತು.
ಗುಹೇಶ್ವರನೆಂಬ ಶಬ್ದ ಸಿನೆ ಬಂಜೆಯಾಯಿತ್ತು.

ಪ್ರ. ವ. ಪು. ೨೯೯, ವ. ೨೦.

೨. ಇಲ್ಲಿ ಚೆನ್ನಬಸವಣ್ಣನವರ ವಿಚಾರವನ್ನು ಕೇಳಿ:

ಸಂಗವಿಡಿದಂತೆ ಸಂಗವಿಡಿದು ನೋಡದಿರಯ್ಯಾ!
ಶರಣ ಸಂಗಸೂತಕಿಯಲ್ಲ ನೋಡಯ್ಯಾ!
ಲಿಂಗಪರೀಕ್ಷಿತ.ಸಂಗವಂತನೆನ್ನದಿರಯ್ಯಾ!
ಶರಣ ಮನಬಂದಂತೆ ಮಾಡುವ.
ಅಜಿಸಿ ಸಕಲಾಗಮಾಚಾರ್ಯನಪ್ಪ ನೋಡಯ್ಯಾ!
ಮಿಂಚಿನ ಗೊಂಚಲದಂತೆ ಮುಂದೆ ರೂಪಾಗಿ ತೋಱುತ್ತಿಪ್ಪುದು!
ಹಿಂದೆ ನೋಡಲು ಬಯಲಾಗಿರುತ್ತಿಪ್ಪುದು!
ಶರಣನೊಡಲುಗೊಂಡಡೆ ಸಾಮಾನ್ಯನೇ?
ಪ್ರಕೃತಿಗುಣ ಭಿನ್ನಭಾವಿಯಲ್ಲ.
ಕೂಡಲಚೆನ್ನಸಂಗಾ, ನಿಮ್ಮ ಶರಣನ ಪರಿ ಬೇಱೆ.

ಲಿಂ. ಲೀ. ವಿ. ಚಾ. ಪು. ೪೦೮, ವ. ೧೦.

ಗೊಹೇಶ್ವರನೆಂಬ ಅಱುಹಿನ ಕುಱುಹು ಮುಂದೆ ಇಲ್ಲ, ಇಲ್ಲ.
ಮಾಡಿದಡೇನಹುದೋ? ಮಾಡದಿರ್ದಡೇನಹುದೋ?[೧]

ನಡೆದರೇನು? ನಡೆಯದಿದ್ದರೇನು? ನುಡಿದರೇನು? ನುಡಿಯದಿದ್ದರೇನು? ಭಾವಿಸಿ ವಿಚಾರಿಸಿದರೇನು? ಸುಮ್ಮನೆ ಎಲ್ಲ ಎಲ್ಲ ನಿಶ್ಶಬ್ದವಾಗಿದ್ದರೇನು? ಮುಂದೆ ನಡೆ ನುಡಿಯು, ಭಾವ ಬುದ್ಧಿಯು 'ಮಿಂಚಿನ ಗೊಂಚಲು'. 'ಹಿಂದೆ ನೋಡಲು ಬಯಲಾಗಿರುತ್ತಿಪ್ಪುದು'. ಶರಣನ ಪರಿ ಹೊಸತು.

ಅಜಗಣ್ಣ ನಿಶ್ಶಬ್ದ ಶರಣನಾಗಿದ್ದರೆ ಅಲ್ಲಮಪ್ರಭು ಸ್ವತಂತ್ರಶರಣನೆಂಬ ಮಾತು ಪೂರ್ಣ ಮನವರಿಕೆಯಾಯ್ತು ಮುಕ್ತಾಯಕ್ಕನಿಗೆ. ಮನದ ಸಂದೇಹ ಎಲ್ಲ ಕಳಚಿದವು. ಪ್ರಭುವಿನ ಸ್ವಾನುಭಾವಪರೀಕ್ಷೆ ಮುಕ್ತಾಯವಾಯ್ತು. ಆತನ ನಿಜಪದದ ನಿಲವಿನ ಮಹಾಮಹಿಮೆಗೆ ಶರಣು ಶರಣೆಂದು ಶರಣಾಗತಳಾದಳು ಮುಕ್ತಾಯಕ್ಕ.

ಅಹುದಹುದು, ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.
ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ,
ಉರಿಯೊಳಡಗಿದ ಕರ್ಪುರದಂತೆ, ಬಯಲನಪ್ಪಿದ ವಾಯುವಿನಂತೆ
ಇಪ್ಪ ನಿಲವ ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ?
ಅಱಿವಡೆ ಮತಿಯಿಲ್ಲ, ನೆನೆವರೆ ಮನವಿಲ್ಲ.
ಎನ್ನ ಅಜಗಣ್ಣತಂದೆಯನೊಳಕೊಂಡಿಪ್ಪ
ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು.[೨]

ಶಿವಶರಣರ ಮಹಿಮೆ! ಯಾರು ಕಾಣಬಹುದು? ಶಿವಶರಣರ 'ಗೊಹೇಶ್ವರ'ನಿಲವು ಮಾತಿಗೆ ಸಿಲುಕಬಹುದೇ? ಕಾದ ಕಬ್ಬಿಣ ಕುಡಿದ ನೀರಿನ ಗುರುತನ್ನು, ಕರಿ ಬಿಸಿಲು ಅಂದರೆ ನೆಳಲು ಆರಿಸಿ ತನ್ನೊಳಗಿಂಬಿಟ್ಟುಕೊಂಡ ಅರಿಷಿಣವನ್ನು, ಉರಿಗೆ ಆಹುತಿಯಾಗಿ ಉರಿಯಾಗಿ ನಿಂದಿರುವ ಕರ್ಪುರದ ನಿಲವನ್ನು, ಬಯಲನೊಡಗೂಡಿ ನಿಂದಿರುವ ಗಾಳಿಯ ಮೈಯನ್ನು ಯಾರು ಕಂಡು, ಶಬ್ದದಲ್ಲಿ ಮೂರ್ತಗೊಳಿಸಿ ಕುರುಹಿಟ್ಟು ತೋರಬಹುದು? ನಿರಾಳ ಕುಡಿದ ನೀರು ಶರಣ; ನಿಜ ಉಂಡ ಅರಿಷಿಣ ಶರಣ; ಉರಿಲಿಂಗ ತಿಂದ ಕರ್ಪುರ, ಬಚ್ಚಬರಿ ಬಯಲು ಒಳಕೊಂಡ ಗಾಳಿ ಶರಣ. 'ಸಿಡಿಲು ಹೊಯಿದ ಬಾವಿಗೆ ಸೋಪಾನ ವೇಕೋ? ನೆಱೆಯಱಿದ ಬಳಿಕ ಮತ್ತೆ ಮತಿ ಹುಟ್ಟಲುಂಟೇ?' ಎಂದು ನಾನು ವಾದ ಮಾಡಿದೆ. ಅದು ತಪ್ಪು, ತಪ್ಪು. ಕರ್ಪುರಕ್ಕೆ ಉರಿಯ ಮತಿಯಲ್ಲದೆ ಮತ್ತೆ ಬೇರೆ ಮತಿ ಎಲ್ಲಿದೆ ಅದಕ್ಕೆ? ಉರಿಯ ಮನವಲ್ಲದೆ ಬೇರೊಂದ ತಾನು ನೆನೆವೆನೆಂದರೆ ಉರಿಯ ಕರ್ಪುರಕ್ಕೆ ಬೇರೊಂದು ಮನವೆಲ್ಲಿದೆ? ಉರಿಯ ಮನ, ಉರಿಯ ಮತಿ,—ಇದು ಮನವಲ್ಲ ಇದು ಮತಿಯಲ್ಲ. ಬಯಲನಪ್ಪಿದ ಗಾಳಿ ಬಯಲ ಹಾದಿಯಲ್ಲಿ ನಡೆದರೆ ಹೆಜ್ಜೆ ಮೂಡಲಿಲ್ಲ. ಶರಣನ ಮನ ನಡೆದರೆ ಈ ರೀತಿ. ಪ್ರಭುವೇ, 'ಅಱಿವು ನಷ್ಟವಾಗಿ ಮಱಹು ಲಯ

೧. ಲಿಂ. ಲೀ. ವಿ. ಚಾ. ಪು. ೩೯೯, ವ. ೭೬.

೨. ಶೂ. ಸಂ. ಪು. ೩೪, ವ. ೩೯.

ವಾಗಿಪ್ಪರೆ, ಎನ್ನ ಅಜಗಣ್ಣತಂದೆಯಲ್ಲದೆ ಮತ್ತಾರನು ಕಾಣೆ',–ಎಂದು ನಾನು ನಿನ್ನಲ್ಲಿ ಹೇಳಿದ ಮಾತು ಸತ್ಯ, ಮಹಾಸತ್ಯ. ಹೀಗೆ ನಾನು ನಿರ್ಣಯ ನುಡಿವಾಗ ನೀನು, ನಿನ್ನ ನಿಲವು, ನಿನ್ನ ಮಹಿಮೆ, ನಿನ್ನ ಹೊಸತೊಂದಿರವಿನ ಭೇದ ನನಗೆ ಕಾಣಲಿಲ್ಲ, ನನಗೆ ತಿಳಿಯ ಲಿಲ್ಲ. ಆದರೆ ಅಣ್ಣಾ, ನಿನ್ನ ನಿಲವು ನಮ್ಮಣ್ಣನ ನಿಲವೇ. ನಿನ್ನ ಮಹಿಮೆ ಅಣ್ಣನ ಮಹಿ ಮೆಯೇ, ಇಷ್ಟೇ ಇಲ್ಲ. ನಿನ್ನ ಸ್ವತಂತ್ರ ಮಹಿಮೆ 'ಎನ್ನ ಅಜಗಣ್ಣತಂದೆಯನೊಳ ಕೊಂಡಿಪ್ಪ' ಮಹಿಮೆ. ಅಣ್ಣಾ, ಈ 'ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು'.

ಮುಕ್ತಾಯಕ್ಕನ ವಿನಿರ್ಮುಕ್ತಹೃದಯ 'ನಿರವಯಲ ಸಮಾಧಿ'ಗೆ 'ಶೂನ್ಯಸಂಪಾ ದನೆ'ಗೆ 'ನಿರಾಳದ ನಿಲವಿ'ಗೆ ಹದಬೆದೆಯಾಗಿರುವುದು ಪ್ರಭುವಿಗೆ ಸ್ಪಷ್ಟ ಕಂಡುಬಂತು. ಕೂಡಲೆ ತನ್ನ ನಿರವಯಲನ್ನು ಮುಕ್ತಾಯಕ್ಕನಲ್ಲಿ ಬಿತ್ತುವ ಬಿನ್ನಾಣವನ್ನು ಕೇಳಿ ನೋಡಿ:

ಮುಕ್ತಿಗೆ ಮುಖವಾಗಿ, ಯುಕ್ತಿಗೆ ಹೊಱಗಾಗಿ,
ಅಱಿವಿಂಗೆ ಅಱಿವಾಗಿಪ್ಪ ಭೇದ ಕಾಣಬಂದಿತ್ತು ನೋಡಾ !
ಅಱಿವಱಿತು ಮಱಿಹು ನಷ್ಟವಾಗಿಪ್ಪುದು;
ನಿನ್ನಲ್ಲಿ ಸನ್ನಹಿತವಾಗಿಪ್ಪುದು.
ಗೊಹೇಶ್ವರನ ಶರಣ ಅಜಗಣ್ಣನ ನಿಲವು
ಬಯಲ ಬೆರಸಿದ ಮರೀಚಿಯಂತಾಯಿತ್ತು;
ಬೆರಸಿ ನೋಡಾ ಬೇಱಿಲ್ಲದೆ.[೧]

ನಡೆ ತಾಯೇ, ಮುಂದಕ್ಕೆ ನಡೆ. ಇದೇ ನೋಡು 'ಗೊಹೇಶ್ವರನ ಶರಣ ಅಜಗಣ್ಣನ ನಿಲವು.' ಈ ನಿಲವು, ಶರಣ ಅಜಗಣ್ಣನ ನಿಲವು ನಿನಗೆ ಹೊರತಲ್ಲ, ನಿನಗೆ ಹೊರಗಲ್ಲ ತಾಯೆ. 'ನಿನ್ನಲ್ಲಿ ಸನ್ನಹಿತವಾಗಿಪ್ಪುದು.' ನಿನ್ನಲ್ಲಿ ನೀನು ಇಳಿದು ನೋಡು ತಾಯೆ. ನಿನ್ನಲ್ಲಿಯೆ ನಿಜನಿರಾಳ ಹೂಳಿಕೊಂಡಿದ್ದು ನಿನ್ನ ಬರವಿಗೆ 'ಸದಾಸಿದ್ಧ'ವಾಗಿ, ಸನ್ನದ್ಧವಾಗಿ ನಿಂತಿದೆ. ಮುಕ್ತಿಯಾಚೆ, ಮುಕ್ತಿಯ ಕಡೆ ಮುಖವಾಗಿ ನಿಂತಿದೆ ಈ ನಿಲವು. ಆಗಮ ಯುಕ್ತಿ ತರ್ಕ ಶಾಸ್ತ್ರ ವಿಚಾರ ವಾದ ಸಂದೇಹ ಸಂಭವದ ಸೀಮೆಯ ದಾಟಿ ಮೇಲುಗಡೆ ಈ ನಿರಾಳದ ನಿಸ್ಸೀಮೆ. ಮಾನವಜಾತಿಯ ಅರಿವು ದೇವಕೋಟಿಯ ಅರಿವು ದಾನವ

೧. ಶೂ. ಸಂ. ಪು. ೩೪, ವ. ೪೦.

ಈ ವಚನವನ್ನು ಪ್ರಭುಲಿಂಗಲೀಲೆಯಲ್ಲಿ ೧೨ನೆಯ ಗತಿಯಾದ ಮುಕ್ತಾಯಕ್ಕನ ಗತಿಯ ಪ್ರಾರಂಭ ವಚನದೊಡನೆ ಹೋಲಿಸಿ ಇಲ್ಲಿ ತೋರುವ ಪಾಠಾಂತರವನ್ನು ಪರಿಶೀಲಿಸಿರಿ:

ಮುಕ್ತಿಗೆ ಮುಖವಾಗಿ ಯುಕ್ತಿಗೆ ಹೊಱಗಾಗಿ
ಅಱಿವಿಂಗೆ ಅಱಿವಾಗಿಪ್ಪ ಭೇದ ಎನಗೆ ಕಾಣಬಂದಿತ್ತು, ನೋಡಾ.
ನಿನ್ನೊಳಗಾನೊರದು ನೋಡಿದಡೆ, ಒರೆಯಿಲ್ಲದ ಚಿನ್ನದ ಪರಿಮಳ
ಎನ್ನ ಮನವನಾವರಿಸಿ ಪಥಮಸುಖದ ಪರಿಣಾಮವನೊಳಕೊಂಡಿತ್ತು, ನೋಡಾ.
ಈ ಕುರುಹಿನ ಮೊಳೆಯ ಬರಿಯ ಬಯಲಲಿ ನಿಲಿಸಿ ನಿಲವ ನೀಡಿ ಕೂಡಾ,—
ನಮ್ಮ ಗುಹೇಶ್ವರನ ಶರಣ ಅಜಗಣ್ಣನೊಳಗೆ ನೀನು ನಿರಾಳಸಂಗಿಯಾಗಿ.

ಪು. ೧೪೩, ವ. ೧.

ಕುಲದ ಅರಿವು ಕಿನ್ನರ ಕಿಂಪುರುಷ ಯಕ್ಷ ಗಂಧರ್ವಗಣದರಿವು ಹರಿ ಹರ ಬ್ರಹ್ಮ ಈಶ್ವರ ಸದಾಶಿವರ ಅರಿವು ಆನೆಯಾಗಿರುವ ಆನೆ ಬಣ್ಣದ ಅರಿವು ಇರುವೆ ತಾನೆಂದಿರುವ ಇರುವೆಯಾಕಾರದರಿವು ಸಿಂಹ ಶಾರ್ದೂಲಾಕೃತಿಯ ಅರಿವು, ಮಾವು ಬೇವು ಜಾಲಿ ಮಲ್ಲಿಗೆಯ ಸಸ್ಯಗುಣದರಿವು ನದಿ ಪರ್ವತ ಭೂಮಿ ಆಕಾಶದ ಜಡಜಾತಿಯರಿವು–ಇಂತೆಲ್ಲ ಉಳಿದೆಲ್ಲ ಎಲ್ಲ ಅರಿವುಗಳಿಗೆ ಮೂಲ ಮಹಾತಾಯಿಯಾಗಿ ಇರುವ ಅರಿವಿನ ರೀತಿ ಇದೋ ಇಲ್ಲಿಯೆ 'ಕಾಣಬಂದಿತ್ತು ನೋಡಾ'! ಮತ್ತೆ ಒಳಗೆ ಒಳಗೆ ಮುಂದೆ ಮುಂದೆ ನಡೆ ತಾಯೆ. ಅರಿವುಗಳಿಗೆಲ್ಲ ಮೂಲ ಬೇರಾಗಿರುವ ಅರಿವಿಗೆ ತಾನು ಅರಿವು ಎಂಬ ಅರಿವು ಉಳಿದಿಲ್ಲ. ಅರಿವು ತನ್ನನ್ನು ತಾನು ಮರೆತಂತಿದೆ ಇಲ್ಲಿ.[೧] ಎಲ್ಲ ಮರಹು ನಷ್ಟವಾಗಿ ನಿರ್ನಾಮವಾಗಿ ನಿಂತಿದೆ ಈ ನಿಲವು. ಇದೇ ಅಜಗಣ್ಣನ ನಿಶ್ಶಬ್ದದ ನಿಲವು. ಬಯಲು ಬಿಸಿಲಿಗೆ ಹುಟ್ಟಿದ ಮರೀಚಿಕೆಯ ಜಲ ಬಿಸಿಲಿಲ್ಲದ ಬಯಲಲ್ಲಿ ಬೆರಸಿದಂತೆ 'ಅಱಿವು ನಷ್ಟವಾಗಿ ಮಱಹು ಲಯವಾಗಿ' ಅಜಗಣ್ಣ ಬಯಲಲ್ಲಿ ಬೆರಸಿ ಬಯಲಾಗಿ ನಿಂತ. ತಾಯೇ, ನೀನೂ ಬೆರಸಿ ನೋಡು. ಆದರೆ ಬೇರಿಲ್ಲದೆ ಬೆರಸಿ ನೋಡು. ನೀನು ಬೇರೆ ಅದು ಬೇರೆ ಆಗಿದ್ದರೆ, ಬೆರಸುವ ಬಿನ್ನಾಣ ತಪ್ಪಿಹೋಯ್ತು ತಾಯೆ.

ಇಲ್ಲಿ ನಿರವಯಲ ಸಮಾಧಿ ಎಂದರೆ ಮಹಾಲಿಂಗೈಕ್ಯವೆಂಬ ಮಾತನ್ನು ಸಿದ್ಧವೀರ ದೇವರು ಸ್ಪಷ್ಟಪಡಿಸುತ್ತಾರೆ. ಪ್ರಭುದೇವರು ನಿರೂಪಿಸಿದ ಮಹಾಲಿಂಗೈಕ್ಯದ ಉಪದೇಶವನ್ನು ಮುಕ್ತಾಯಕ್ಕ ತನ್ನ 'ಮನೋಲಯಸ್ಥಾನದೊಳು ಧರಿಸಿ, ನಿತ್ಯ ನಿರವಯಲ ಸಮಾಧಿಯೊಳು ನಿಜವನೆಯ್ದುವ' ಮಹಾಶಿವರಾತ್ರಿಯ ಪ್ರಸ್ತಾವದಲ್ಲಿ ಉರಿಯ ಬಾಯ ತುತ್ತಾದ ಮುಕ್ತಾಯಕ್ಕ ಕರ್ಪುರದ ಕೊನೆಯ ಹಾಡನ್ನು ಹಾಡುತ್ತಾಳೆ:

> ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ
> ಅಱಿಯಲಿಲ್ಲ, ಮಱೆಯಲಿಲ್ಲ; ಕೂಡಲಿಲ್ಲ, ಅಗಲಲಿಲ್ಲ.

---

೧. ಇಲ್ಲಿ ಪ್ರಭುದೇವರ ಮತ್ತೊಂದು ಅನುಭಾವದ ಮಾತು ಕೇಳಿ:

> ನರರು ಸುರರು ಕಿನ್ನರರು ಮೊದಲಾದವರೆಲ್ಲರೂ
> ಪಿಂಡವೆಂಬ ಭಾಂಡದಲ್ಲಿಯೆ ಅಡಗಿಹರಾಗಿ, ನಾನವರ ರೂಹಿಸಬಲ್ಲೆನೇ ಅಯ್ಯಾ?
> ದೇವಗಣ ರುದ್ರಗಣ ಪ್ರಮಥಗಣ ಮೊದಲಾದವರೆಲ್ಲರೂ
> ಬ್ರಹ್ಮಾಂಡವೆಂಬ ಭಾಂಡದಲ್ಲಿಯೆ ಅಡಗಿಹರಾಗಿ, ನಾನವರ ಭಾವಿಸಬಲ್ಲೆನೆ ಅಯ್ಯಾ?
> ಸತ್ಯರು ನಿತ್ಯರು ಮುಕ್ತರು ಮಹಾಮಹಿಮರೆಲ್ಲರೂ
> ಚಿದ್‌ಬ್ರಹ್ಮಾಂಡವೆಂಬ ಭಾಂಡದಲ್ಲಿಯೆ ಅಡಗಿಹರಾಗಿ, ನಾನವರನಱಿದು ಬಲ್ಲೆನೆ ಅಯ್ಯಾ?
> ಇಂತೀ ತ್ರಿಭಾಂಡದಲ್ಲೊಳಕೊಂಡು, ಅಖಂಡಿತ ಘನಪರಿಪೂರ್ಣವಪ್ಪ ಭಾಂಡವೆ
> ತನ್ನಿರವೆಂಬಂದದ ನಿಜಲಿಂಗೈಕ್ಯನ ಉಪಮಿಸಲಿಲ್ಲ;
> ಉಪಮಿಸಲಿಲ್ಲಾಗಿ ರೂಹಿಸಲಿಲ್ಲ; ರೂಹಿಸಲಿಲ್ಲಾಗಿ ಭಾವಿಸಲಿಲ್ಲ:
> ಭಾವಿಸಲಿಲ್ಲಾಗಿ ಅಱಿಯಲಿಲ್ಲ.
> ಅಱಿಯಲಿಲ್ಲದಱಿವೆ ತಾನಾಗಿ ಗೊಹೇಶ್ವರನೆಂಬುದು ಬೇಱಿಲ್ಲ.

ಏ. ಶ. ಸ್ಥ. ಪು. ೭೬೫-೬. ವ. ೨. (ತಾಡೋಲೆಯ ಹಸ್ತಪ್ರತಿ)

ಮನವೇರೆದಪ್ಪಿ ನಿರವಯಲಾದ ಸುಖವ
ಶ್ಯೂನ್ಯನಿಶೂನ್ಯವೆಂದು ನುಡಿಯಲುಂಟೆ?
ಶಬ್ದಮುಗ್ಧವಾಗಿ ಎನ್ನ ಅಜಗಣ್ಣತಂದೆಯ ಬೆರಸಿದ ಬಳಿಕ
ಉರಿಯುಂಡ ಕರ್ಪೂರದಂತಾದೆನಯ್ಯಾ ![೧]

ಅಯ್ಯಾ, 'ಸಂಗದೊಳಗೆ ಶರಣರ ಸಂಗವೆ ಚೆಲುವು.' ನಿಮ್ಮ ಈ ಮಂತ್ರುಮಾತು ಎಂಥ ಚೆಲುವು ತಂದೇ ! ಮತ್ತೆ ಘನದ ಸಂಗದಲ್ಲಿದ್ದ ಘನಮಹಿಮರ ಸಂಗ ಕರಚೆಲುವು ತಂದೇ. ನಿಮ್ಮ ಸಂಗದಿಂದ ತಾನಾದ ಘನಕ್ಕೆ ತನ್ನ ಮಹಾಘನ ವೇದ್ಯವಾಯಿತ್ತು. ಮಹಾಘನ ಲಿಂಗದಲ್ಲಿ ಲಿಂಗಕ್ಕೆ ಅಂಗವಾದ ತಾನು ಅರ್ಪಿತವಾಯಿತ್ತು. ಅಲ್ಲಿಯೆ, ತನ್ನಲ್ಲಿಯೆ ತಾನು ಒಂದಾಯಿತ್ತು. ಘನಕ್ಕೆ ಘನ ನೈವೇದ್ಯವಾದ ಬಳಿಕ ಮನದ ಮಾತೇಕೆ? ಮನದ ಮನೆತನವೆಲ್ಲ ಕೆಟ್ಟು ಮನಸ್ಸಿನ ವ್ಯವಹಾರ ಪ್ರಪಂಚವೆಲ್ಲ ಬರಿಯಾಗಿ ಹೋಯ್ತು. 'ಮನ ಮೇರೆದಪ್ಪಿ ಕರಗಿ ಉಕ್ಕಿತ್ತು ನಮ್ಮ ಅಜಗಣ್ಣನ ಯೋಗಾ!'–ಎಂದು ನಾನು ಕಂಡು ಹೇಳಿದ ಯೋಗ ನನ್ನಲ್ಲಿಯೆ ಕಂಡುಬಂತು ಪ್ರಭೂ. ತನ್ನ ಮೇರೆದಪ್ಪಿ ಕರಗಿ ಉಕ್ಕಿ ಮನವೆಲ್ಲಿಗೆ ಹೋಯ್ತು? ನಿರವಯಲ ನಿಜಸುಖಕ್ಕೆ. ಈ ಸುಖದ ಸುಗ್ಗಿ ಲಿಂಗ ಬೆಳೆದ ಲಿಂಗದ ಸುಗ್ಗಿ. ಈ ನಿರವಯಲ ಮಹಾರಾಶಿ ಶೂನ್ಯವಲ್ಲ, ನಿಶ್ಶೂನ್ಯವಲ್ಲ. ಯಾವ ಕೊಳಗವೂ ಈ ಬಯಲು ರಾಶಿಯನ್ನು ಅಳೆಯಲಿಲ್ಲ. ಶಬ್ದ ಅರ್ಥ ಹೃದಯ ಭಾವ ಬುದ್ಧಿ ವಿಚಾರ–ಇಂಥ ಯಾವುಯಾವೋ ಕೊಳಗಗಳಳೆದು ವೇದ ಶಾಸ್ತ್ರ ಕಾವ್ಯ ಪುರಾಣಗಳನ್ನು ತುಂಬಿ, ದ್ವೈತ ಅದ್ವೈತವೆಂದು ಶೂನ್ಯ ನಿಶ್ಶೂನ್ಯವೆಂದು ಹೊರಗೆ ಒಳಗೆ ಮೇಲೆ ಕೆಳಗೆಂದು ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣ ಅಖಂಡವೆಂದು ತಮ್ಮ ಅಳತೆಯನ್ನು ನಿರವಯಲ ಹೆಸರೆಂದು ಹೇಳುತ್ತವೆ. ಆದರೆ ಅಯ್ಯಾ, ಹೆಸರಿಲ್ಲ ಬಯಲಿಗೆ. ಕೊಳಗದ ಬಯಲು ಕೊಳಗದ ಹಂಗುಬಿಟ್ಟು ನಿಂತರೆ—ಬಯಲಿಗೆ ಬಯಲು ವೇದ್ಯವಾಯಿತ್ತು, ಘನಕ್ಕೆ ನಿಜ ಘನದ ಸಹಜಯೋಗವಾಯಿತ್ತು. ನಿಜದರಿವನ್ನು ಅರಿಯಲು ಮತ್ತೆ ಬೇರೆ ಅರಿವಿಲ್ಲ. ನಿಜದರಿವಿನಲ್ಲಿ ಮರವೆಯ ಮಾತೇ ಇಲ್ಲ. ಇಲ್ಲಿಂದ ಅಗಲಿ ನಾನಿದ್ದೆ ಎಂಬುದು ಮರವೆ ಗತ್ತಲೆಯಲ್ಲಿ ನೋಡಿ ನುಡಿದ ಮಾತು. ಅರಿವು ಕಂದೆರವಿಯಾದರೆ ನಿರವಯಲ ನಿಜದಿಂದ ನಾನೆಂದೂ ಅಗಲಲಿಲ್ಲ. ಇಷ್ಟೇ ಏಕೆ? ಈ ನಿರಾಳದ ನಿಜದಲ್ಲಿ ನಾನೇ ಇಲ್ಲ. ನಾನು ಇಲ್ಲದಿದ್ದರೆ ನೀನು ಎಲ್ಲಿ? ಇಲ್ಲದ ನಾನು ನೀನಿನ ಕೂಟವೆಲ್ಲಿ? ಈ ಎರಡಿಲ್ಲದ ಕೂಟ ಮಾತು ಮಾತೆಲ್ಲ ಮೌನವಾದ ಕೂಟ. ಎಲ್ಲಿಯಾದರೂ ಶಬ್ದ ಸುಳಿದರೆ ಕೂಟಕ್ಕೆ ಭಂಗ. ಮೇರೆದಪ್ಪಿ ನಿರವಯಲಾದ ಮನದ ಉಲುಹಿಲ್ಲ. ನಿರಾಳವಾದ ನಿರ್ಭಾವದಲ್ಲಿ ಭಾವಿಸುವ ಉಲುಹಿಲ್ಲ. ಅರಿಯಲಿಲ್ಲದ ಅರಿವಿನಲ್ಲಿ ವಿಚಾರದ ಉಲುಹಿಲ್ಲ. ಅಂತರಂಗದ ಸದ್ದಡಗಿದ ಕಣ್ಣಲ್ಲಿ ರೂಪದ ಸದ್ದಿಲ್ಲ; ಕಿವಿಯಲ್ಲಿ ಶಬ್ದದ ಎಡೆಯಾಟವಿಲ್ಲ; ಗಂಧವನ್ನು ಮೂಸಿ ನೋಡುವ ವಾಸನೆಯ ಹೆಜ್ಜೆ ಮೂಗಿನಲ್ಲಿಲ್ಲ; ರುಚಿಸಿ ನೋಡುವ ರಸದ ಹೆಜ್ಜೆಯ ಸಪ್ಪಳ ನಾಲಗೆಯಲ್ಲಿಲ್ಲ; ಸೋಂಕಿ ಸುಖಿಸುವ ತೊವಲಲ್ಲಿ ಸ್ಪರ್ಶದ ನಿನಾದವಿಲ್ಲ. ಅರಿವ ಇಂದ್ರಿಯ

೧. ಶೂ. ಸಂ. ಪು. ೩೪-೩೫, ವ. ೪೧.

ಗಳೆ ತಣ್ಣಗೆ ಕುಳಿತರೆ ಕೈಕಾಲುಗಳ ಗತಿಯೇನು? ಗತಿ ಎಲ್ಲಿಗೆ? ಅವೆಲ್ಲ ಕ್ರಿಯಾಮುಗ್ಧ ಅಂದರೆ ಶಬ್ದಮುಗ್ಧ. ಎಲ್ಲ ಶಬ್ದ ಮುಗ್ಧವಾಗಿ 'ಅಂತರಂಗದಲ್ಲಿ ಅವಿರಳ ಲಿಂಗೈಕ್ಯ' 'ಸ್ಥಿತಿಯಲ್ಲಿ ನಿಸ್ಸ್ಥಿತ' 'ಇರವಿನಲ್ಲಿ ಪರಶಿವ'ನಾದ ಅಜಗಣ್ಣತಂದೆಯನ್ನು ಬೆರಸಿದ ಬಳಿಕ, ನನ್ನ ದಿವ್ಯಮೂಲವನ್ನು ಕೂಡದೆ ಕೂಡಿದ ಬಳಿಕ, 'ತನ್ನಲ್ಲಿ ತಾನಾದ ಘನ, ತನ್ನಲ್ಲಿ ತಾನಾದ ಬಯಲು' ಆದ ಬಳಿಕ ನನ್ನ ಗತಿಯೇನು? ಉರಿಯುಂಡ ಕರ್ಪುರದ ಗತಿಯೇನು? ಮತಿಯೇನು?

ಇಲ್ಲಿಗೆ ಮುಕ್ತಾಯಕ್ಕ ಮುಗಿದಳು. ಪ್ರಭು ಮುಂದೆ ಹೊರಟ. ಹೊರಡುವ ಮುನ್ನ ಅಕ್ಕನ ನಿರವಯಲ ಸಮಾಧಿಯನ್ನು ಕಂಡು ಈ ನಿಬ್ಬೆರಗಿನ ಗೀತವನ್ನು ಹಾಡಿದನೇನೋ !

ಹೊಸಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು.
ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು.
ವಾಯುವಿನ ಸಂಚದ ಪರಿಮಳದ ನಿಲವಿನಂತೆ
ಲಿಂಗೈಕ್ಯನ ಸಂಬಂಧವಿದು ಗುಹೇಶ್ವರಾ ![೧]

೧. ಪ್ರ. ವ. ಪು. ೨೯೯, ವ. ೧೯

೧೧

ಒಳಗೆ ಯೋಗ–ಹೊರಗೆ ಯೋಗ

ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ !
ಅಂಗಸಂಗಿಗಳೆಲ್ಲಾ ಮಹಾಘನವನರಿಯದೆ ಹೋದರೋ !
ಹುಸಿಯನೆ ಕೊಯ್ದು, ಹುಸಿಯನೆ ಪೂಜಿಸಿ
ಗಸಣಿಗೊಳಗಾದರು ಗುಹೇಶ್ವರಾ ! ![೧]

ಪ್ರಭುದೇವರು.

ತಾನೇ ನಿರ್ಮಲತೀರ್ಥಮುತ್ತಮಮಹಾಕ್ಷೇತ್ರಂ ಪರಂ ದೈವತಂ
ಜ್ಞಾನ ಧ್ಯಾನ ಸಮಾಧಿ ಮಂತ್ರ ಜಪ ಪೂಜಾ ಹೋಮ ನೇಮಾದ್ಯನು
ಷ್ಠಾನಂ ಸಿದ್ಧಿಯುಮೈಹಿಕಂ ಸುಖದಮಪ್ಪಾಮುಷ್ಮಿಕಂ ಸರ್ವಮುಂ
ನೀನಾನೆಂಬೆರಡಿಲ್ಲದಿರ್ಪ ಶಿವಯೋಗೀಂದ್ರಂ ಶಿವಾವಲ್ಲಭಾ[೨].

ಮಗ್ಗೆಯ ಮಾಯಿದೇವರು.

ವಾರಣಾಸಿ ಅವಿಮುಕ್ತ ಇಲ್ಲಿ ಇದ್ದಾನೆ.
ಹಿಮದ ಕೇದಾರ ವಿರೂಪಾಕ್ಷ ಇಲ್ಲಿ ಇದ್ದಾನೆ.
ಗೋಕರ್ಣ ಸೇತುರಾಮೇಶ್ವರ ಇಲ್ಲಿ ಇದ್ದಾನೆ.
ಶ್ರೀಶೈಲ ಮಲ್ಲಿನಾಥ ಇಲ್ಲಿ ಇದ್ದಾನೆ.
ಸಕಲಲೋಕ ಪುಣ್ಯಕ್ಷೇತ್ರ ಇಲ್ಲಿಯೇ ಇದ್ದಾವೆ.
ಸಕಲಲಿಂಗ ಉಳಿಯುಮೇಶ್ವರನಿಲ್ಲಿಯೇ ಇದ್ದಾನೆ.[೩]

ಚಿಕ್ಕಣ್ಣ (ನಿಜಲಿಂಗ ಚಿಕ್ಕಯ್ಯ)

ಮುಕ್ತಾಯಕ್ಕನ ವಿಕಳಾವಸ್ಥೆಯ ಪ್ರಳಾಪವನ್ನು ತಿಳುಹಿ, ಅಕ್ಕನಲ್ಲಿ ಮಹಾನುಭಾವವನ್ನು ಎಚ್ಚರಿಸಿ ತೋರಿ, ಅಲ್ಲಿಯೆ ಸನ್ನಿಹಿತವಾಗಿರುವ 'ಅಜಗಣ್ಣದೇವರ' ನಿರಾಳದ ನಿಲವನ್ನು ಒಳಹೊರಗೆನ್ನದೆ ಮುಕ್ತಾಯಕ್ಕನ ಸರ್ವಾಂಗದಲ್ಲಿ 'ಪ್ರತಿಷ್ಠಿಸಿ ತೋಱಿ', ನಿರವಯಲಾದ ಅಣ್ಣನ ನಿಜಸ್ಥಲದಲ್ಲಿ ತಂಗಿಯನ್ನು ನಿಲಿಸಿ ಸೊನ್ನಲಿಗೆಯ ಪುರಕ್ಕೆ ಬರುತ್ತಾನೆ ಪ್ರಭುದೇವ. ಅಲ್ಲಿಗೆ ಪ್ರಭುದೇವ ನಮ್ಮನ್ನೂ ಕರೆವಂತಿದೆ. ಶತಮಾನ ಸಹಸ್ರಮಾನಗಳಿಂದ ಮಾನವಜೀವನದಲ್ಲಿ ಹರಿದುಬಂದ ದ್ವೈತಭಾವದ ಕರ್ಮಪೂಜೆಯ ಹೃದಯವನ್ನು ಬಿಚ್ಚಿತೋರಿಸಿ, ಹೊರಗನೆ ಕೊಯ್ದು ಹೊರಗನೆ ಪೂಜಿಸುವ, 'ಹುಸಿಯನೆ

---

೧. ಪ್ರ. ವ. ಪು. ೧೧೬, ವ. ೬೧.
೨. ಶ. ತ್ರ. ಪು. ೮೮, ಪ. ೨೨.
೩. ವ. ಶಾ. ಸಾ. ಭಾ. ೧, ಪು. ೨೯೬, ವ. ೧೫.

ಕೊಯ್ದು ಹುಸಿಯನೆ ಪೂಜಿಸುವ' ಗಸಣಿಯಿಂದ ಮಾನವಕುಲಕೋಟಿಯ ಮನವನ್ನು ಮುಕ್ತಗೊಳಿಸಿ, ವಿಶ್ವಾಂತರಾಳದಲ್ಲಿ ಅವಿರತ ನಡೆದಿರುವ 'ಲಿಂಗಪೂಜೆ'ಯ ಅಂತರ್ಮಾರ್ಗವನ್ನು ತೋರಿಕೊಡುವ ಹವಣಿಕೆಯಲ್ಲಿದ್ದಾರೆ ಪ್ರಭುದೇವರು. ವಿಶ್ವಜೀವನದ ರಹಸ್ಯಪೂಜೆಗೆ ನಾವಿಲ್ಲಿ ಅಂತರ್ಮಾರ್ಗವನ್ನು, ನಿಜ ಸಹಜಮಾರ್ಗವನ್ನು ಕಾಣುವ ಸಂಭವವಿದ್ದರೆ ಪ್ರಭುದೇವರ ಬೆಂಬಳಿಯಲ್ಲಿ ನಾವೇಕೆ ಸೊನ್ನಲಿಗೆಗೆ ಹರಿಯಬಾರದು? ಯಾವಾಗಳೂ ಮನದಲ್ಲಿಯೆ ಕುಳಿತು ಕೆಡುವುದಕ್ಕಿಂತ, ಹಿರಿಯರು ಕಟ್ಟಿಸಿದ ಮನೆ ಎಂದು ಸಂಪ್ರದಾಯದ ಸೀಮೆಯಲ್ಲಿಯೆ ಎಡೆಯಾಡುವುದಕ್ಕಿಂತ ಬಲ್ಲವರೊಡನೆ ಬೆಳಗುವ ಬಯಲಲ್ಲಿ ಅಡ್ಡಾಡುವುದು ಲೇಸಲ್ಲವೇ? ಮನೆಗಿಂತ ಬಯಲು ಎಂದಿಗೂ ಲೇಸು. ಪ್ರಭುಲಿಂಗದೇವನ ಬೆನ್ನುಹತ್ತಿ ನಾವೂ ನಡೆಯೋಣಲ್ಲವೇ? ನಮ್ಮ ಹಾದಿ ಮಂಗಲವಾಗಲಿ.

೧೨ನೆಯ ಶತಮಾನದಲ್ಲಿ ಮೊದಲು ಸಣ್ಣಹಳ್ಳಿಯಾಗಿದ್ದ ಸೊನ್ನಲಿಗೆ ಶಿವಯೋಗಿ ಸಿದ್ಧರಾಮನಿಂದ ಮಹಾಪುಣ್ಯಕ್ಷೇತ್ರವಾಗಿದೆ. 'ಕೈಲಾಸದಿಂದ ಶ್ರೀಪರಮೇಶ್ವರನ ಶುದ್ಧ ಸಾತ್ವಿಕವು ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ'ದ ಶಿವನೇ ಸಿದ್ಧರಾಮನೆಂಬ ಪೂರ್ಣ ನಂಬುಗೆ ಎಲ್ಲರ ಹೃದಯದಲ್ಲಿ. ಜನದ ಹಿತಾರ್ಥವಾಗಿ ಶಿವಯೋಗಿ ಸಿದ್ಧರಾಮಯ್ಯ ಗುಡಿ ಗೋಪುರ ಕೆರೆ ಅರವಟ್ಟಿಗೆ ಅರವೆ ಅನ್ನಛತ್ರಗಳನ್ನು ಕಟ್ಟಿಸುವ ಕಳಕಳದಲ್ಲಿ ಮನ ಮಗ್ನವಾಗಿ ಇದ್ದಾನೆ. ಪ್ರಭುದೇವರು ಅಲ್ಲಿಗೆ ಬಂದಾಗ ತೋರುವ ಸೊನ್ನಲಿಗೆಯನ್ನು ಕಾವ್ಯದಲ್ಲಿ ಬಣ್ಣವಿಟ್ಟು ಚಾಮರಸ ರೂಹಿಸುವ ರೀತಿ ಇದು:

ಪಿಂಡದೊಳು ಪಿರಿದೆನಿಪ ನಾಡೀ ।
ಮಂಡಲಂಗಳ ತಾನೆ ಸಾಧಿಸಿ ।
ಕಂಡಪಿಂಡಜ್ಞಾನದಿಕ್ಕೆಯು ಪರಿಯನಿದಿರಿಟ್ಟು ॥
ಮಂಡಲಿಸಿ ಕಲುಮರಸಲೊಡ್ಡಣೆ ।
ಗೊಂಡು ಮಾಡಿಸಿ ಹೆಸರುವಡೆದು ।
ದ್ದಂಡ ರೀತಿಯ ಸಿದ್ಧರಾಮನ ಪುರಕೆ ಪ್ರಭು ಬಂದ ॥

ಹಲವು ದೆಸೆಯಲಿ ಚಿತ್ರಪತ್ರದ ।
ಚೆಲುವನಾಗಿರೆ ಪರಿಪರಿಯ ದೇ ।
ಗುಲವ ಮಾಡಿಸುತಿಪ್ಪ ಗುಡ್ಡಗಳೆಕ್ಕೆವಿಂಡುಗಳ ॥
ನೆಲನ ಬೆಸಲಾದಂತೆ ಪಿಗೆ ಮ ।
ಣ್ಣೆಲಸದೊಡ್ಡರು ಬಂಡಿಕಾಜಿರು ।
ಕಲುಕುಟಿಗರಿದ್ದೆಡೆಯ ಸೊನ್ನಲಿ ಪುರಕೆ ಪ್ರಭು ಬಂದ ॥ ೧

ಒಡ್ಡರು ಗುಡ್ಡರು ಎಕ್ಕಪಿಂಡುಗಳು ಕಲ್ಲುಕುಟಿಗರು ಮುಂತಾದ ಕರ್ಮ ಕುಶಲರು ಕಾರ್ಮಿಕರು ಕೆರೆ ದೇಗುಲಗಳನ್ನು ಕಟ್ಟುವ ಭರದಲ್ಲಿದ್ದಾರೆ. ಅವರಿಗೆ ಸಹಾಯಮಾಡ

೧. ಪ್ರ. ಲಿಂ. ಲೀ. ಪು. ೧೫೮, ಗ. ೧೩, ಪ. ೬-೭.

ಲೆಂದು ಅಥವಾ ಕಟ್ಟಡದ ಕೆಲಸ ಕಟ್ಟುವ ಕುಸುರಿಯನ್ನು ನೋಡಲೆಂದು ಸೊನ್ನಲಿಗೆ ಪುರದ ಮತ್ತು ನೆರೆಹೊರೆಯ ಹಳ್ಳಿಯ ಜನ ಪೌಜುಗಟ್ಟಿಕೊಂಡು ನೆರೆದಿದೆ. ತಂಡತಂಡ ವಾಗಿ ಗುಂಪುಗುಂಪಾಗಿ ನೆರೆದಿರುವ ಜನದ ನೆರವಿಯನ್ನು ಕಂಡು ಬೆಬ್ಬನೆ ಬೆರಗಾಗುತ್ತಾನೆ ಪ್ರಭುದೇವ. ಮತ್ತೆ ಪುರದ ಕಡೆ ಹೊರಳಿ ನೋಡಿದರೆ ಅಲ್ಲಿಯೂ ಜನಜಾತ್ರೆಯ ಕೊಡು ಕೊಳ್ಳಿಯ ಕಳಕಳ ಪ್ರವಾಹ. ಎಲ್ಲಿ ಕೇಳಿದರೆ ಶಬ್ದ ಶಬ್ದ, ಎಲ್ಲಿ ನೋಡಿದರೆ ಸಂತೆ ಸಂತೆ, ಗದ್ದಲ ಗೊಂದಲ, ಪರಿಪರಿಯ ಭಂಡವ್ಯವಹಾರ !

ಪುರದೊಳಗೆ ಹೊಕ್ಕೊಡನೆ ಈ ಸಂತೆಯ ವ್ಯವಹಾರದ ತಮಂಧವಿಲಾಸವನ್ನು ಪರೀಕ್ಷಿಸಿ ನೋಡಿ ದೇವನ ಹೃದಯದ ಸಿಡಿಮಿಡಿ ನಾಲಗೆಯಲ್ಲಿ ನುಡಿಯುತ್ತದೆ:

ಧರೆಯ ಮೇಲೊಂದೂ ಪಿರಿದಪ್ಪ ಸಂತೆಯ ನೆರವಿಗೆ ಬಂದವರನೇನೆಂಬೆನು?
ಪರಿಪರಿಯ ಭಂಡದ ವ್ಯವಹಾರದೊಳಗೆ ಕೊಡಲಿಲ್ಲ, ಕೊಳಲಿಲ್ಲ.
ವೃಥಾವಿಳಾಸವಿದೇನೋ?
ಅರೆಮರುಳೆಂಬ ಶಿವನು ನೆಱೆಮರುಳೆಂಬ ಜಗವ
ಹುಟ್ಟಿಸಿದ ಪರಿಯ ಕಂಡು ಬೆಱಗಾದೆ ಗೊಹೇಶ್ವರಾ ![೧]

ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೇ?
ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ
ಬೇಱೆ ಮತ್ತೊಂದೆಡೆಯುಂಟೇ?
ಗೊಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆಱಗಾದೆನು.[೨]

ನೆಲದ ಮೇಲೆ ನೆರೆದ ಜನದ ಸಂತೆ! ನೆಲದ ಮೇಲೆಲ್ಲ ನಡೆದ ದೊಡ್ಡ ಸಂತೆ. ಲೆಕ್ಕಗೆಟ್ಟ ವ್ಯವಹಾರ. ಸಂತೆಯಲ್ಲಿ ಮಾರಲಿಟ್ಟ ಸಾಮಾನು, ಪಸಾರ ಹಲವು ಪರಿ. ಕೊಳ್ಳುವರ ಸಂಖ್ಯೆ ವಿಪರೀತ. ಆದರೆ ಈ ವ್ಯವಹಾರದಲ್ಲಿ ಕೊಡುತ್ತಿರುವುದೇನು? ಕೊಳ್ಳುತ್ತಿರುವು ದೇನು? ಕೊಳ್ಳುವುದು ಹೊನ್ನು ಹೆಣ್ಣು ಮಣ್ಣು, ಪಂಚೇಂದ್ರಿಯ ವಿಷಯ ಭೋಗಭಾಗ್ಯ ವಿಲಾಸ, ವಾರ್ತೆ ಕೀರ್ತಿ ಪುಣ್ಯ ಪಾಪ ಸ್ವರ್ಗ ನರಕ—ಎಲ್ಲ ಭವಮರಣಚಕ್ರಕ್ಕಾಹಾರ ವಾಗುತ್ತಿರುವ ಪ್ರಪಂಚ ಸಾಮಗ್ರಿ. ಈ ಭಂಡವನ್ನು ಪಡೆಯಲು ಪಡಿಯಾಗಿ ಕೊಡು ತ್ತಿರುವುದೇನು? ತನ್ನ ಕೈ ಕಾಲು ತನ್ನ ಕಿವಿ ಕಣ್ಣು ತನ್ನ ಮನ ಬುದ್ಧಿ ಭಾವ ತನ್ನ ಆಯುಷ್ಯ ಭವಿಷ್ಯ ತನ್ನ ಶಕ್ತಿ ಸಾಮರ್ಥ್ಯ ಪ್ರಯತ್ನ ತನ್ನ ಸರ್ವಾಂಗ ತನ್ನ ಸರ್ವಾತ್ಮವನ್ನು. ಇದೇ ತನುವೆಂಬ ಭಾಂಡ ಅಥವಾ ಭಂಡದಲ್ಲಿ ನಡೆದಿರುವ ಭಂಡದ ಅಂದರೆ ಸಂತೆಯ ಸಾಮಾ ನಿನ ವ್ಯವಹಾರ ! ವಿಚಿತ್ರ ವಿಳಾಸ ! ಗೊತ್ತುಗುರಿಯಿಲ್ಲದೆ ವ್ಯರ್ಥಕ್ಕೆ ನಡೆದ ಸಂಸಾರ ಸಂತೆಯ ಕುರುಡು ವಿಳಾಸ ! ಹೆಳವ ವಿಳಾಸ ! ಮಾನವನಾಗಿ ಹುಟ್ಟಿದ ಮೇಲೆ, ಅರಿವಿನ ಜನ್ಮಕ್ಕೆ ಬಂದ ಮೇಲೆ ಇನ್ನುಳಿದ ಪಶುಪ್ರಾಣಿಗಳ ಮಾದರಿಯಲ್ಲಿಯೆ ಸಂತೆಯ ವ್ಯವಹಾರ

೧. ಶೂ. ಸಂ. ಪು. ೩೬-೩೭ ವ. ೧. ೨. ಶೂ. ಸಂ. ಪು. ೩೭, ವ. ೨.

ದಲ್ಲಿ ಮುಳುಗಿ ತೇಲಿ, ತೇಲಿ ಮುಳುಗಿ ನೀರು ಕುಡಿದು ನೀರಲ್ಲಿ ಸತ್ತು, ನೀರೊಗೆದರೆ ಮೇಲಕ್ಕೆದ್ದು ಹೆಣನಾಗಿ ತೇಲುವುದೆ? ಹುಟ್ಟಿ ಸಾವ ಸಂಸಾರಶರಧಿಯಲ್ಲಿ ನಡೆದಿರುವ ಈ ಸಂತೆಯ ಮಂದೆಗೆ ಈ ಭವಸಮುದ್ರವೆ ಏಕೈಕ ಸದ್ಗತಿಯೆ? ನೀರಿನಿಂದ ಎತ್ತಿ ಬೇರೆ ತೆಗೆದಿಟ್ಟರೆ ಮೀನು ಮೊಸಳೆ ತಿಮಿ ತಿಮಿಂಗಿಲುಗಳೆಲ್ಲ ಸತ್ತುಹೋಗುವಂತೆ ಸಂತೆಯ ಸಮಾಧಿಯಲ್ಲಿದ್ದ ಮಾನವಕೋಟಿಯನ್ನು "ವೃಥಾವಿಳಾಸ'ದಿಂದ ಮೇಲಕ್ಕೆಬ್ಬಿಸಿ ಹೊರಗೆ ಬಯಲಿಗೆತ್ತಿದರೆ ಈ ಕುಲಕೋಟಿ ಚಡಪಡಿಸಿ ಒದ್ದಾಡಿ ಸತ್ತುಹೋಗುವಂತಿದೆ. ನಿಜವಾದ ಕೊಡುಕೊಳ್ಳಿಯ ಸಂಚ ತಿಳಿಯದೆ ಸಂಜೆಗೆ ಸಂತೆ ಹರಿದುಹೋಗುತ್ತಿದೆಯಲ್ಲಾ! 'ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ!' 'ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ!' ಮುಂಜಾವು ಹುಟ್ಟಿ ಸಂಜೆಗೆ ಸಾವ ಈ ಜಗವನ್ನು ಹಡೆದ ದೇವರು ಅರೆ ಹುಚ್ಚು, ಹುಟ್ಟಿದ ಕೂಸು ಪೂರ ಹುಚ್ಚು! ಈ ಅರೆಮರುಳು ಶಿವ ನೆರೆಮರುಳು ಜಗ, ಈ ಜಗದ ನೆಲದ ಮೇಲೆ ನೆರೆದ ಸಂತೆ, ಸಂತೆಯ ವ್ಯರ್ಥವ್ಯವಹಾರ—ಎಲ್ಲ ನಿಮ್ಮ ಲೀಲೆ ಗೊಹೇಶ್ವರಾ! ನೀವೆ ಅರೆಮರುಳು ನೆರೆಮರುಳಾಗಿ, ಜಗದ್ರೂಪವಾಗಿ ಜಗನ್ಮಯವಾಗಿ ಆಡಿ ನೀವೆ ನೋಡುತ್ತ ಜಗದ್ಭರಿತವಾಗಿ ಸುಮ್ಮನೆ ಕುಳಿತಿರುವುದು ನಿಮ್ಮ ಲೀಲಾ ವಿಲಾಸದ ಬೆಡಗು ಗೊಹೇಶ್ವರಾ!

'ಇಂತು ಪುರಜನಂಗಳಂ ವಿಡಂಬಿಸುತ್ತ ಮುಂಧೆ ಬರಲು, ಮುಂದೆ ಲಕ್ಷದ ಮೇಲೆ ತೊಂಬತ್ತಾಱು ಸಾವಿರ ಶಿವಾಲಯಂಗಳಂ ಮಾಡುತ್ತಿರ್ಪವರಂ'[೧] ನೋಡುತ್ತಾನೆ ಪ್ರಭು. ಗುಡಿ ಕಟ್ಟಿಸುವುದು! ಗುಡಿ ಕಟ್ಟುವುದು! ಯಾರಿಗೆ ಗುಡಿ? ಲಿಂಗಕ್ಕೆ ಕಲ್ಲುಗುಡಿಯೆ? ಗುಡಿಯೊಳಗೆ ಪ್ರತಿಷ್ಠಿತವಾಗಿ ಲಿಂಗದ ಹಾಡು ಕಲ್ಲಿಗೆ ಬಂತೇ? ವಿಧಿಯ ವಿಚಿತ್ರ!

> ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ,
> ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೊ?
> ಲಿಂಗಪ್ರತಿಷ್ಠೆ ಮಾಡಿದವರಿಗೆ ನಾಯಕನರಕ ಗೊಹೇಶ್ವರಾ.

ಮತ್ತೆ ಲಕ್ಷದ ಮೇಲೆ ತೊಂಬತ್ತಾರುಸಾವಿರ ಶಿವಾಲಯ ಕಟ್ಟುವ ಸಂಕಲ್ಪ! 'ಲೀಯತೇ ಗಮ್ಯತೇ ಯಸ್ಮಾತ್ ಜಗದೇತತ್ ಚರಾಚರಂ' ಈ ಲಿಂಗಕ್ಕೆ, ತನ್ನಲ್ಲಿ ಅನಂತ ಬ್ರಹ್ಮಾಂಡಗಳು ತೆರೆಗೊಂಡು ಎದ್ದು, ತೆರೆಗಳೆದು ಮುಳುಗುವ ಮಹಾಂತ ನಿರಾಕಾರ ಲಿಂಗದೇವನಿಗೆ ಅಗಲ ಉದ್ದ ಎತ್ತರದ ಕಲ್ಲುಮನೆಯೆ? ದೇವರನ್ನು ಕಲ್ಲಿಗಿಳಿಸಿ ಮನೆ ಕಟ್ಟಿಕೊಡುವೆನೆಂದರೆ ಎಂಥ ಮಹಾಪಾಪ! ಮನೆ ಬಿದ್ದು, ದೇವರು ಸತ್ತರೆ? ಸಾವ ಭಯದಿಂದ ಓಡಿಹೋದರೆ? ಮರುಳಿನ ಒಳದಿರುಳು ಈ ಕಲ್ಲುದೇವರು, ಈ ಕಲ್ಲು ಗುಡಿ.

> ದೇಹವೆ ದೇಗುಲವಾಗಿರಲು, ಬೇಱೆ ಮತ್ತೆ ದೇವಾಲಯವೇಕಯ್ಯಾ?
> ಪ್ರಾಣವೆ ಲಿಂಗವಾಗಿರಲು, ಬೇಱೆ ಮತ್ತೆ ಲಿಂಗವೇಕಯ್ಯಾ?

---

೧. ಶೂ. ಸಂ. ಪು. ೩೭, ಪ್ರ. ೩.

ಹೇಳಲಿಲ್ಲ, ಕೇಳಲಿಲ್ಲ.[೧]

ಗೊಹೇಶ್ವರಾ, ನೀನು ಕಲ್ಲಾದರೆ ನಾನೇನಪ್ಪೆನಯ್ಯ? ೨
ಹಿರಿಯರಿಲ್ಲದ ಮನೆ ಗುರುವಿಲ್ಲದ ಮಠ ಆಗಿಬಿಟ್ಟಿದೆ ಸೊನ್ನಲಿಗೆ! ಹೇಳುವರಿಲ್ಲ, ಕೇಳುವರಿಲ್ಲ. ದೇವರಿಗೆ ಬೇರೆ ಕಲ್ಲಿನ ಮನೆ ಬೇಕೆ? ಕಲುಕುಟಿಗನ ಉಳಿಗೆ ಹುಟ್ಟಿದ ಕಲ್ಲು ಲಿಂಗವೇ? ಪ್ರಾಣವೆ ಲಿಂಗ, ದೇಹವೆ ದೇಗುಲವೆಂದು ತಿಳಿಹೇಳುವ ಬುದ್ಧಿವಂತರು ಒಬ್ಬರೂ ಇಲ್ಲವೆ ಈ ಊರೊಳಗೆ? ದೇವರು ಕಲ್ಲಾದರೆ ಭಕ್ತರು ಏನು? ಮತ್ತೆ ಇಲ್ಲಿಗೆ ಮುಗಿದಿಲ್ಲ ಈ ಕಗ್ಗಲ್ಲ ಭಕ್ತಿ. ಈ ಕಡೆ ಕೆರೆ ಕಟ್ಟಿಸುವ ನೀರಿನ ಹುಚ್ಚೂ ತುಂಬುತ್ತಿದೆ. ಮತ್ತೆ ಅನ್ನದಾನಮಾಡಿ ಪುಣ್ಯಪಡೆವೆನೆಂಬ ನಿರ್ಬುದ್ಧಿ! ಕೆರೆ ದೇಗುಲ ಕಟ್ಟಿಸಿದರೆ ಅನ್ನ ಛತ್ರ ಅರವಟ್ಟಿಗೆ ಇಟ್ಟರೆ 'ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ ಶಿವನ ನಿಜವು ಸಾಧ್ಯ ವಾಗದು'. ಸ್ವರ್ಗ-ನರಕ ನಿಜಶರಣರ ನಿಜಭಕ್ತರ ಮಾರ್ಗ ಅಲ್ಲ. ಅರಿವಿನ ಜಾತಿ ನಿಜವ ಸಾಧಿಸಬೇಕು. ಈ ನಿಜ, ಸತ್ತ ಮೇಲೆ ಸ್ವರ್ಗ ನರಕ ಕೈಲಾಸ ವೈಕುಂಠದಲ್ಲಿ ದೊರೆವ ವಸ್ತು ವಲ್ಲ. ಹರಿ ಹರ ಬ್ರಹ್ಮಾದಿಗಳ ಅರಮನೆಯಲ್ಲಿ ತುಂಬಿಟ್ಟ ವಸ್ತುವಲ್ಲ ಈ ನಿಜವಸ್ತು. ಕಲ್ಲುಮನೆಯ ಕಲ್ಲುದೇವರನ್ನು ಭಜಿಸಿ ಪೂಜಿಸಿದರೆ ಈ ಸ್ಥಾವರಪೂಜೆ ಮತ್ತೇನಾ ದರೂ ಫಲಬಿಡಬಹುದು. ಆದರೆ ನಿಜಫಲ ಬಿಡುವ ಗಿಡುವಲ್ಲ ಈ ಭಿನ್ನಪೂಜೆ, ಈ ಭಿನ್ನ ಮಾಟ. ಮಾನವನ ದೇಹ ಪ್ರಾಣದಲ್ಲಿ ನಿಜವಸ್ತು ಅಖಂಡಿತ ನಿತ್ಯಸತ್ಯವಾಗಿ, ಚಿದಾ ನಂದರಸಪರಿಪೂರ್ಣವಾಗಿ ಫಲಿಸುವುದು. ತನ್ನ ದೇಹ-ದೇಗುಲವನ್ನು ತನ್ನ ಪ್ರಾಣ ಲಿಂಗವನ್ನು ಕಡೆಗಣಿಸಿ, ಕಲ್ಲು ನೀರಿಗೆ ಶರಣು ಹೊಕ್ಕರೆ ಯಾರು ಏನು ಹೇಳಬಹುದು?

ನೀವು ಕಟ್ಟುವ ಕೆರೆ ಎಂಥ ಕೆರೆ! ಮಣ್ಣಿನ ಒಡ್ಡು. ಕಲ್ಲಿನ ಕಟ್ಟೆ, ಮಳೆಯ ನೀರಿನ ಕೆರೆ. ಮಳೆಗಾಲಕ್ಕೆ ತುಂಬಿ ಬೇಸಗೆಗೆ ಬತ್ತುವ ಕೆರೆ. ಆದರೆ ಇಲ್ಲಿ—ಪ್ರಾಣಲಿಂಗದ ದೇಗುಲ ದಲ್ಲಿ—ಪರಿಪೂರ್ಣ ಶಾಶ್ವತವಾಗಿ ತುಂಬಿ, ಇರವಿನಲ್ಲಿ ನೆರೆಯರಿವು ತುಂಬಿ ಪರಮಾನಂದ ವಾಗಿ ಇರುವ ಜೀವಂತ ಕೆರೆಯನ್ನು ನೋಡಿ. ಶರೀರದ ಒಡ್ಡು ದೇವನಿರ್ಮಿತವಾದ ಕೆರೆ ಯೊಂಡೆ. ಚಲಿಸದಂತೆ ಕಟ್ಟಿದ ಮನದ ಕಟ್ಟೆ. ಕೆರೆ ತುಂಬಿದೆ ಪರಮಾನಂದದ ದಿವ್ಯಜಲ ದಿಂದ. ಈ ನೀರು ಕುಡಿದರೆ ಹುಟ್ಟಲಿಲ್ಲ ಸಾಯಲಿಲ್ಲ. ಪುಣ್ಯವಿಲ್ಲ ಪಾಪವಿಲ್ಲ, ಸ್ವರ್ಗ ವೈಕುಂಠದ ಮಾತು ಮುನ್ನವೆ ಇಲ್ಲ. ದಿವ್ಯಾಮೃತದ ಕೆರೆ ಇದು. ನೀರು ತುಂಬಿ ಮೇಲಕ್ಕೆ ತರಲು ಸೋಪಾನದ ಪಂಕ್ತಿ ಇದೆ. ಸದಾಚಾರ ಭೃತ್ಯಾಚಾರ ಶಿವಾಚಾರ ಲಿಂಗಾಚಾರದ ಸೋಪಾನ ಅರಿವಿನ ಆಧಾರದ ಮೇಲೆ ನಿಂತು ಸಾಲುಗೊಂಡಿವೆ ಇಲ್ಲಿ. ಇದು ಆಚಂದ್ರಾರ್ಕದಾಚೆ ಸ್ಥಿರವಾದ ಕೆರೆ.

---

೧. ಪ್ರಭುದೇವರ ಮತ್ತೊಂದು ವಚನವನ್ನಿಲ್ಲಿ ನೋಡಿರಿ:

ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ.
ಹೂವಿಲ್ಲದ ಪರಿಮಳದ ಪೂಜೆ,
ಹೃದಯಕಮಲದಲ್ಲಿ ಶಿವ ಶಿವ ಎಂಬ ಶಬ್ದ.
ಇದು ಅದ್ವೈತ ಕಾಣಾ ಗುಹೇಶ್ವರಾ.

ಪ್ರ. ವ. ಪು. ೯೯. ವ. ೨೫.

೨. ಶೂ. ಸಂ. ಪು. ೩೭. ವ. ೪.

ನಿಮ್ಮ ಕೆರೆ ದೇಗುಲಗಳನ್ನು ಕಟ್ಟಿಸುವಾತ ಸಿದ್ಧರಾಮಯ್ಯನೇ?
ಒಳಗ ತೊಳೆದು ಜಲವ ತುಂಬಲಱಿಯದ ಅರೆಮರುಳನೇನಾದ ಹೇಳಿರೆ?
ಜಲದ ಸಂಗವ ತೊಳೆಯಲಱಿಯದೆ, ಜಲವ ಬಯಸುವನೆಂತಿರ್ದಹ ಹೇಳಿರೆ?
ನೆಲನ ಶೋಧಿಸಿ ನೆಲೆಯನಱಿಯದೆ
ಕೆಱೆಯ ಕಟ್ಟಿಸುವ ಒಡ್ಡ ರಾಮಯ್ಯನ ಇರವೆಂತು ಹೇಳಿರೆ?
ನಮ್ಮ ಗೊಹೇಶ್ವರನ ನಿಲವನಱಿಯದ
ಮರುಳು ಸಿದ್ಧರಾಮನೆಂತಿರ್ದಹ ಹೇಳಿರೆ?[೧]

ಅಂತರಂಗವನ್ನು ಸ್ವಚ್ಛವಾಗಿ ತೊಳೆದು ಲಿಂಗಾನಂದಜಲವನ್ನು ತುಂಬುವ ಪರಿಕ್ರಮವನರಿಯದೆ, ಒಡ್ಡಿನ ಕೆರೆಯಲ್ಲಿ ಮೇಘದ ಜಲವನ್ನು ತುಂಬಿದನೆ ನಿಮ್ಮ ಅರೆಮರುಳು ಸಿದ್ಧರಾಮ? 'ನೀರಲಾದ ನಿರ್ಮಿತ' ದೇಹದ ಸಂಗವನ್ನು ತೊಳೆದು ಕಳೆಯದೆ, ದೇಹ ಪ್ರಾಣಾದಿಗಳು ನಡೆದಂತೆ ನಡೆವ, ಹೋದತ್ತ ಹರಿದಾಡುವ ನಿಮ್ಮ ಸಿದ್ಧ 'ಜಲ'ದ ಬಯಕೆಯಲ್ಲಿ ಬಾಯಾರಿದನಲ್ಲಾ! ಮಣ್ಣು ಸೋಸಿ ತಿಳಿನೀರು ತುಂಬಿದ ನಿಮ್ಮ ಒಡ್ಡ. ಅದರೆ ನೆಲದ ನೆಲೆ ಹತ್ತದೆ ಹೋಯ್ತಲ್ಲಾ! ಈ ನೆಲೆಯಲ್ಲಿ ನಿಂದ ನಮ್ಮ ಗೊಹೇಶ್ವರನ ನಿಲವ ಕಾಣದೆ ಲೋಕದ ಹುಚ್ಚು ಹಿಡಿದು ಕೆರೆ ದೇಗುಲಧಲ್ಲಿ ಮುಳುಗಿರುವ ನಿಮ್ಮ 'ಒಡ್ಡ ರಾಮಯ್ಯನಿರ್ದಹನೇ?' 'ಒಡ್ಡ ರಾಮಯ್ಯನೇನಾಗಿರ್ದಹನಂ?' ಎಂದು ಕೆರೆಕಟ್ಟಿಸುತ್ತಿದ್ದ ಗುಡ್ಡರನ್ನು ಕೇಳಿದ ಪ್ರಭುದೇವ.

ಪ್ರಭುವಿನ ಪ್ರಶ್ನೆ ಕಾದ ಕಬ್ಬುಣದ ಸಲಾಕೆಯಂತೆ ಗುಡ್ಡರ ಕಿವಿಯಲ್ಲಿ ಹೊಕ್ಕು ಸಿದ್ಧನ ಶಿಷ್ಯರ ಹೃದಯವನ್ನು ಸುಡುಸುಡನೆ ಸುಟ್ಟು ಈ ಕಡೆ ಪಾರಾಯ್ತು.

ಭೂವಳಯದೊಳಗುಳ್ಳ ಸರ್ವಜೀವಾಳಿಗಳ
ಪಾವನಂ ಮಾಡಲೆಂದನುಗೆಯ್ದು ಶಿವಸಿದ್ಧ
ಜಾವಳನೆ ದೇವಕುಲಕರ್ತ ಮರ್ತ್ಯದೊಳುದಿಸಿದನಂ...[೨]

ಹಸಿಯದುಣ್ಣದ ಬೆಮರದೆವೆಯಿಕ್ಕದಾಗುಳಿಸ
ದುಸಿರಿಕ್ಕದನುಗೆಡದ ವಿಣ್ಮೂತ್ರಮಂ ವಿಸ
ರ್ಜಿಸದ ಕಾಮಿಸದ ಕೋಪಿಸದ ಕರ್ಮದ್ವಯಂ ರೂಪಿಸದ ನಿರ್ಮಾಯನು ॥
ನೊಸಲ ಕಣ್ ನಿಜ ಮಂಕುಟ ಸಹಜ ಕುಂಡಲವೆಸೆವ
ರಸೆಯ ಶಂಕರನೆನಿಪ ಸಿದ್ಧರಾಮಯ್ಯನಂ...[೩]

ಗುಡ್ಡರು ಯಾರು? ಈ ದೇಶಾಂತರಿ ಬಂದು ನಿಂದಿರುವ ಸೊನ್ನಲಿಗೆ ಎಂದರೇನು? ಗುರು ಸಿದ್ಧರಾಮನ ಇರವೇನು?

---

೧. ಶೂ. ಸಂ. ಪು. ೩೮, ವ. ೮. ೨. ಸಿ. ಚಾ. ಪು. ೧. ಸಂ. ೧, ಸೂಚನೆ ಪದ್ಯ.
೩. ಸಿ. ಚಾ. ಪು. ೨, ಸಂ. ೧, ವ. ೩.

ಧರೆಗೆ ಸೊನ್ನಲಿಗೆಪುರ ಕೈಲಾಸವಾ ಜಗದ
ಗುರು ಸಿದ್ಧರಾಮನೀಶ್ವರನಲ್ಲಿ ಮೆಱೆವ ಗು
ಡ್ಡರು ಗಣೇಶ್ವರರು......[೧]

ಈ ಗುಡ್ಡರಿಗೆ 'ಜಗದ ಗುರು,' 'ದೇವಕುಲಕರ್ತ,' 'ರಸೆಯ ಶಂಕರ'ನೆನಿಸುವ ತಮ್ಮ ಪರಮ ಗುರುಮೂರ್ತಿಯನ್ನು ಕುರಿತು ಈ ಗೊತ್ತಿಲ್ಲದ ಹೊಸಬನ ಅಪಪ್ರಶ್ನೆ. ಗುಡ್ಡರು ಉರಿದರು. 'ಅವರೆಲ್ಲರು ಗುರುನಿಂದೆಯ ಕೇಳಿ ಸುಮ್ಮನಿರಬಾರದೆಂದು ಕಲ್ಲು ಗುಂಡು ಬಡಿಗೆಗಳಿಂದಿಟ್ಟು' ಆತನನ್ನು ನೋಯಿಸಿದರು. ಗುಡ್ಡರು ಕಲ್ಲು ಗುಂಡು ಬಡಿಗೆಗಳಿಂದ ಅಲ್ಲಮನನ್ನು ಹೊಡೆದುದು ನಿಜ. ಆದರೆ ಹೊಡೆತ ಬಿದ್ದುದು ಹೊಡೆದ ಗುಡ್ಡರಿಗೇ! ಇದು ಲೋಕಕ್ಕೆ ವಿಚಿತ್ರ, ಲೌಕಿಕಾನುಭವಕ್ಕೆ ವಿಪರೀತ! ನಮ್ಮ ಹಿಂದಿನ ಹಿರಿಯರು ನಂಬಿ ಪ್ರತ್ಯಕ್ಷ ಕಂಡೆವೆಂದು ಕೊಂಡಾಡಿದ 'ಅದ್ಭುತ', 'ಪವಾಡ' ಇಂಥವೇ. ಇದರ ಸತ್ಯಾಸತ್ಯತೆಯ ವಿವೇಚನೆಯನ್ನು ಸದ್ಯ ಬದಿಗಿರಿಸಿ ಗುಡ್ಡರಿಗಾದ ಘಾಯಗಳನ್ನು ನೋಡೋಣ. ಗೂಳೂರು ಸಿದ್ಧವೀರದೇವರು ಗುಮ್ಮಳಾಪುರದ ಸಿದ್ಧಲಿಂಗದೇವರು ಮುಂತಾದ ಶೂನ್ಯ ಸಂಪಾದನೆಕಾರರು, ಚಾಮರಸ ಮುಂತಾದ ಶರಣಕವಿಗಳು, ಶರಣರು ತಿಳಿದಂತೆ, ಹೇಳುವಂತೆ 'ಬಯಲೊಡಲುಗ' ಪ್ರಭುದೇವ. ಬಯಲನ್ನು ಕಲ್ಲು ಗುಂಡು ಬಡಿಗೆ ಬಡಿವುದೆಂತು?

ಮತ್ತೆ ಲೋಕದ ಧರ್ಮ ಲೋಕದ ನ್ಯಾಯ ಬೇರೆ, ದೇವರ ಧರ್ಮ ದೇವರ ನ್ಯಾಯ ಬೇರೆ. ತಪ್ಪಿದಲ್ಲಿ ತಪ್ಪಿದ್ದಲ್ಲಿ ನೋವು ತಾಗುವುದು ಸತ್ಯಧರ್ಮ, ದೇವರ ನ್ಯಾಯ. ಇದೇ ಲೋಕಕ್ಕೆ ಶಿವಂ-ಕರಿ ಶಂ-ಕರಿ. ಆದರೆ ಲೋಕದ ಧರ್ಮ, ನ್ಯಾಯವಿರುದ್ಧ ಚಿತ್ರ, ವಿಪರೀತ ಚರಿತ್ರ!

ಪ್ರಭುದೇವರ ಸುಜ್ಞಾನದೃಷ್ಟಿಯಲ್ಲಿ ಸತ್ಯಕ್ಕೆ ಸಾವಿಲ್ಲ ನೋವಿಲ್ಲ, ಮಿಥ್ಯಕ್ಕೆ ನೆಮ್ಮದಿ ಇಲ್ಲ ಉಳಿವಿಲ್ಲ. ಗುಡ್ಡರು ಏನು ಮಾಡಿದರು? ಸಹಜವ ನುಡಿದರೆ ಸಿಟ್ಟಿಗೆದ್ದರು, ಹೊಡೆದರು ಬಡಿದರು. ಆದರೆ 'ಶಿವಶರಣರಿಗೆ ಮಾಡಿದ ಸುಖದುಃಖಂಗಳು ಶಿವನ ತಾಗುವುವು'. 'ನಮ್ಮ ಗೊಹೇಶ್ವರಲಿಂಗವು ಜಗದೊಳಗೆ ಪರಿಪೂರ್ಣವಾದ ಕಾರಣ ಶರಣರ ನೋವು ಮರಳಿ ಪಾತಕರ ತಾಗಿ'ತು. ಶಿವಶರಣರ ತನು ಶಿವನ ತನು, ಲಿಂಗತನು, ಲಿಂಗದ ಅಂಗ, ನಿರಂಗ.[೨] 'ಅಶರೀರಂ ವಾವ ಸಂತಂ ಸುಖದುಃಖೇ ನ ಸ್ಪೃಶತಃ' ಏಕೆ? ಅಂಗದ ನೋವು ಪ್ರಾಣಲಿಂಗಕ್ಕಾಯ್ತು, ಲಿಂಗಕ್ಕಾದ ನೋವು ತಪ್ಪಿದ್ದಲ್ಲಿ ತಾಗಿತು. ಲಿಂಗದೇಹಿಯಾಗಿ, ತನ್ನ ದೇಹದಲ್ಲಿ ನಿರ್ದೇಹಿಯಾಗಿದ್ದ 'ಒಡಲಿಲ್ಲದಾತ

---

೧. ಸಿ. ಚಾ. ಮ. ೩. ಸಂ. ೧, ಪ. ೮.

೨. ಇಲ್ಲಿ ಪ್ರಭುದೇವರ ಅನುಭವದ ಮಾತು ಕೇಳಿ:

ದೇಹಗುಣಗಳಳಿದು ಲಿಂಗದೇಹಿಯಾದ ಶರಣನು ।
ಬಹಿರಂಗದ ಬಳಕೆ ಮಾಯಾಮೋಹವನ್ನು ಜಱಿದನು ॥

ಶೂ. ಸಂ. ಪು. ೨೭೫, ಪದ—ಪಲ್ಲವಿ.

ನನ್ನು ತನುಕರಣಾದಿಗಳ ಗುಣಧರ್ಮದವರ ಕೋಪ ತಾಪ ಹೊಡೆತ ಬಡಿತ ಮುಟ್ಟಲಿಲ್ಲ. 'ಗೊಹೇಶ್ವರಾ, ಕೆಂಡವನೊಱಲೆ ಮುಟ್ಟಬಲ್ಲುದೇ?'

ಸಿದ್ಧನ ಗುಡ್ಡರಿಗೆ ಗುರುಹಿರಿಯರ ಗುರುತಿಲ್ಲ. ದೇವರ ಭಕ್ತರ ಕೂನಿಲ್ಲ; ಲಿಂಗವೆಂದರೇನು, ಜಂಗಮದ ಜಗಚ್ಚರಿತ ನಿಲವೇನು ಎಂಬುದರ ಅರಿವಿಲ್ಲ ಕುರುಹಿಲ್ಲ. ಬಂದವರ ಬರವೇಕೆ? ಮುಂದೆ ನಿಂದವರ ನಿಜ ನಿಲವೇನು? ಎಂಬ ಪರಿವೆಯಿಲ್ಲ ಈ ಗುಡ್ಡ ಭಕ್ತರಿಗೆ. 'ಕೆಱೆಕಟ್ಟಿಸುವನ ಕಂಡು ಒಡ್ಡ ರಾಮಯ್ಯನೆಂದರೆ ಲಿಂಗತನುವ ನೋಯಿಸುವರೆ? ಇಂಥ ಅಜ್ಞಾನಿಗಳಿಗೆ ಗುರೂಪದೇಶ ಮಾಡಿದ ಸಿದ್ಧರಾಮಯ್ಯ. 'ಭೃತ್ಯನ ಅಪರಾಧ, ಸ್ವಾಮಿಗೆ ದಂಡ,' ಎಂಬ ನಾಣ್ನುಡಿ ತಪ್ಪುವುದೇ? ಈ ಶಿಷ್ಯರು ಮಾಡಿದ ಪಾಪ ಗುರುವಿಗೆ ಉಪಹತಿಮಾಡದೆ ಬಿಡುವುದೆ?

> ಜಗದ ಜನವ ಓಡಿದುಕೊಂಡು ಬಂದು, ಉಪದೇಶವ ಮಾಡಿದ ಗುರುವಿಂಗೆ
> ಆ ಉಪದೇಶ ಕೊಟ್ಟು, ಕೊಂಡ ಮಾಱಿಂಗೆ ಹೋಹುದಲ್ಲದೆ
> ಅಲ್ಲಿ ನಿಜವಳವಡುವುದೇ?
> ತೆಱನನಱಿಯದ ಸಂಸಾರಿಜೀವಿಗಳು ಮಾಡಿದ ದೋಷ ತಮ್ಮ ನುಂಗಿ,
> ಆ ಗುರುವಿಂಗೆ ಉಪಹತಿಯ ಮಾಡುವುದು ನೋಡಾ!
> ಗೊಹೇಶ್ವರಾ, ತಾನಿಟ್ಟ ಬೇತಾಳ ತನ್ನನೆ ತಿಂದರೆ
> ಬೇಕು ಬೇಡೆನಲುಂಟೆ?[೧]

ಎಂಥ ಜನ! ಎಂಥ ಗುರು! ಎಂಥ ಗುರೂಪದೇಶ!! ಸದ್ಗುರುಸ್ವಾಮಿ ಲಿಂಗಕ್ಕೆ ಹದವಾದ, ಲಿಂಗಭಕ್ತಿಯಿಂದ ಬೆದೆಯಾದ ಸಚ್ಛಿಷ್ಯನಿಗೆ ಗುರುದೀಕ್ಷೆಕೊಟ್ಟು, ಲಿಂಗೋಪದೇಶ ಮಾಡಿದರೆ ಅಲ್ಲಿ ಅಂಕುರಿಸಿ ಪಲ್ಲವಿಸಬಹುದು ಲಿಂಗದ ನಿಜ. ತನು ಮನ ಭಾವ ಕೈಕಾಲು ಕಣ್ಣು ಕಿವಿಯಲ್ಲಿ ಲಿಂಗದ ಬಳ್ಳಿ ಹಬ್ಬಿ ಹರವಿಕೊಂಡರೆ ಗುಡ್ಡರ ಗೊಡ್ಡು ಉಳಿಯುತ್ತಿತ್ತೇ? ಇಂಥ ಗುಡ್ಡರನ್ನು ಸಾಕಿದ ಸಿದ್ಧರಾಮ! ಗುಡ್ಡರ ನಡತೆ ಗುರುವಿಗೆ ಭಂಗ.[೨]

---

೧. ಶೂ. ಸಂ. ಪು. ೩೯, ವ. ೧೨.

೨. ಸಿದ್ಧರಾಮನ ಕೆರೆ ದೇಗುಲ ಗುಡ್ಡರು ಎಕ್ಕೆವಿಂಡುಗಳು ಮುಂತಾದ ಸಕಲ ಸಂಭ್ರಮವನ್ನು ಕಂಡು ಪ್ರಭುದೇವರ ಹೃದಯದಲ್ಲಿ ಸುಳಿದಾಡಿದ ವಿಚಾರಗಳನ್ನು ಚಾಮರಸ ಹೀಗೆ ವರ್ಣದಲ್ಲಿ ಇಡುತ್ತಾನೆ:

> ನೂಲ ಸಂಕಲೆಗಡಿದು ಕನಕದ ।
> ಕೋಳವನು ಕಾಲಿಂಗೆ ಕೀಲಿಪ ।
> ಕಾಳುಮತಿಯವನಂತೆ ಸತಿಸುತಕೂಟ ಭಯವೆಂದು ॥
> ಬಾಳಕೆಯನತಿಗಳೆದು ಮರಳಿಯು ।
> ಗೋಳುಮಂಡೆಯ ಕೀರ್ತಿಗೋಸುಗ ।
> ಕೋಳುಹೋದನೆ ರಾಮನೆನುತಲ್ಲಮನು ಬೆಱಗಾದ ॥ (ಮುಂದಿನ ಪುಟ ನೋಡಿ)

ಗುಡ್ಡರು ಕಂಗೆಟ್ಟು ದಿಕ್ಕು ತಿಳಿಯದೆ ಗೋಳಿಡುತ್ತ ಓಡಿಬಂದು ಗುರುವಿಗೆ ಮೊರೆಯಿಟ್ಟು ತಮಗಾದ ಬವಣೆಯನ್ನು ತೋಡಿಕೊಂಡರು ಗುರುಮೂರ್ತಿಯಲ್ಲಿ: 'ದೇವಾ, ಆವನೊರ್ವ ಇಂದ್ರಜಾಲಕನು ನಿಮ್ಮನು ಬಾಯಿಗೆ ಬಂದಂತೆ ನಿಂದಿಸುತ್ತಿರಲು, ನಾವೆಲ್ಲರು ಗುರುನಿಂದೆಯ ಕೇಳಿ ಸುಮ್ಮನೆ ಇರಬಾರದೆಂದು ಕಲ್ಲು ಗುಂಡುಗಳನಿಟ್ಟು ನೋಯಿಸಲು, ಆತನ ತಾಗಿದಂಥ ಗಾಯಗಳೆಲ್ಲವು ನಮ್ಮನೆ ತಾಗಿ, ದೆಸೆದೆಸೆಯಿಂದೆಲ್ಲರು ನೊಂದು ಘಾಸಿಯಾದೆವು'. ಗುಡ್ಡರ ಗೋಳು ಸಿದ್ಧರಾಮನ ಹೃದಯಕ್ಕೆ ಬರೆಕೊಟ್ಟಂತಾಯ್ತು. ಪ್ರಭುದೇವರ ಬಂದ ಬರವು ನಿಂದ ನಿಲವು ಹೊಳೆಯಲಿಲ್ಲ ಸಿದ್ಧರಾಮನ ಕರುಳಿಗೆ. ಹಿಂದು ಮುಂದು ವಿಚಾರಿಸಿನೋಡದೆ 'ಕ್ರೋಧಕ್ಕೆ ಮನವನೆಡೆಗೊಟ್ಟ'.

'ಎಮ್ಮ ಶಿವಶರಣರ ನೋವು ಎನ್ನ ನೋವು ನೋಡಾ'! ಎಂಬ ಶಿವಾನುಕಂಪೆ ಸಿದ್ಧರಾಮಯ್ಯನಿಗೆ. ತಾಯಿ ತನಗಾದ ನೋವನ್ನು ಸಹಿಸಿಕೊಳ್ಳಬಹುದು. ಆದರೆ ಕೂಸು ನೊಂದು ಘಾಸಿಯಾದರೆ? ಸಿದ್ಧನ ಸಿಟ್ಟು ಅಂಗಾಲಲ್ಲಿ ಹೊತ್ತಿ ತಲೆತನಕ ಉರಿಯಿತು. ಯಾರಾದರೇನು? ತನ್ನ ಶಿವಸೋದರರಾದ ಗುಡ್ಡರನ್ನು ಘಾಯಗೊಳಿಸಿ ಘಾತಿಸಬೇಕೇ? 'ಬ್ರಹ್ಮನಿರಲಿ ವಿಷ್ಣುವಿರಲಿ, ಅವರನ್ನು ಸುಟ್ಟುರುಹುವೆ'–ಎಂಬ ವಿಚಾರ ಕಿಡಿಗುಟ್ಟದರೆ ಸಿದ್ಧರಾಮನ ನೊಸಲ ಕಣ್ಣಿನ ಕೀಲಿ ಕಳಚಿ ಎವೆ ತೆರೆಯಿತು.

> ಎಕ್ಕೆವಿಂಡುಗಳೆಂಬವರು ಮುಕ್ಕಣ್ಣಾ, ನಿಮ್ಮ ಗಣಂಗಳು
> ಬತ್ತಿದ ಕೆಱೆಗೆ ಬಾಯಬಿಟ್ಟಂತೆ ಮೊಱೆಯಿಟ್ಟು ಬರಲು,
> ಹೊತ್ತಿದ ಅಂಗಾಲ ಕಿಚ್ಚು ನೆತ್ತಿಯ ಮುಟ್ಟಿದರೆ.
> ಚೆಕ್ಕನೆ ಕಪಿಲಸಿದ್ಧಮಲ್ಲಿನಾಥ ನೊಸಲ ಕಣ್ಣ ತೆಗೆದನು.[೧]

ಸಿದ್ಧರಾಮ ಕ್ರೋಧಕ್ಕೆ ತನ್ನನ್ನು ಎಡೆಗೊಟ್ಟುದು ನಿಜ. ಇದಕ್ಕೆ ಕಾರಣ ಶರಣರ ನೋವು ಅಲ್ಲಿ ವಾಸವಾಗಿರುವ ಶಿವನಿಗೆ ಘಾಯ. ಕಪಿಲಸಿದ್ಧಮಲ್ಲಿನಾಥನ ಘಾಯವನ್ನು ಸಿದ್ಧ ಸಹಿಸಬೇಕೆಂತು? ಹಣೆಗಣ್ಣು ತೆಗೆದ, ಘಾಯಗೊಳಿಸಿದವರಾರೇ ಇರಲಿ ಅವರನ್ನು ಉರುಹಲೆಂದು. ಆದರೆ ಈ ಹಣೆಗಣ್ಣು ಸಿದ್ಧನ ಹಣೆಯಲ್ಲಿ ಮೂರನೆಯ ಅಗ್ನಿನೇತ್ರವಾಗಿ ತನ್ನೊಡನೆ ಹುಟ್ಟಿದ್ದರೂ ಅದು ತನ್ನ ಕಣ್ಣೆಂಬ ಅಹಂಭಾವವಿಲ್ಲ ಸಿದ್ಧನಿಗೆ. ಕಣ್ಣು ಕಪಿಲಸಿದ್ಧಮಲ್ಲಿಕಾರ್ಜುನನ ಕಣ್ಣು. ಸಿಟ್ಟಿಗೆದ್ದು ಹಣೆಗಣ್ಣು ತೆರೆದಾತ ಅದೇ ಮಲ್ಲಿ

> ಚಿಕ್ಕ ಸಂಸಾರವನು ಸಡಿಲಿಸಿ ।
> ಹೊಕ್ಕನಲ್ಲಾ ಹಿರಿಯ ಸಂಸಾ ।
> ರಕ್ಕಕಟ ವಿಖ್ಯಾತಿ ಪೂಜಾಲಾಭದಿಚ್ಛೆಯಲಿ ॥
> ಸಿಕ್ಕಿಬಿದ್ದನು ಸಿದ್ಧರಾಮನು ।
> ಮಿಕ್ಕ ಭವಭಾರಿಗಳನಾದೊಡೆ ।
> ಮುಕ್ಕದೇ ವಿಧಿಯೆನುತಲಲ್ಲಮ ನೋಡಿ ಬೆಱಗಾದ ॥

ಪ್ರ. ಲಿಂ. ಗ. ೧೩, ಪು. ೧೫೩, ಪ. ೫-೬.

೧. ಶೂ. ಸಂ. ಪು. ೩೯, ವ. ೧೪.

ಕಾರ್ಜುನ. ಈ ಮುಕ್ಕಣ್ಣ, ಮಲ್ಲಿಕಾರ್ಜುನ ನೊಸಲ ಕಣ್ಣಿಗೆ ಅಪ್ಪಣೆಕೊಟ್ಟರೆ ನಕ್ಕೆ ಎದುರಾಗಿ ನಿಲ್ಲಬಲ್ಲ ಗರುವರಾರು?

ತನ್ನ ನೊಸಲ ಕಣ್ಣಿಂದ ಧೀಂಕಿಡುವ ಮಹಾಜ್ವಾಲೆಯನ್ನು ತಾನೇ ನೋಡಿ, 'ಶಿವ ಸಿದ್ಧಕುಲಕಮಲರವಿ'[೧] ಸಿದ್ಧರಾಮ ಆ ಬೆಂಕಿಯನ್ನು ವಚನದಲ್ಲಿ ಹೀಗೆ ನುಡಿಯು ತ್ತಾನೆ:

ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾನವು.
ನಿಮ್ಮ ತೇಜವನಾರೂ ನೋಡಲಮ್ಮರಯ್ಯಾ !
ನಿಮ್ಮ ತೇಜವನೊಬ್ಬರಿಗೆಯೂ ಉಪಮಿಸಬಾರದು.
ನೀವು ಮುನಿದು ನೊಸಲ ಕಣ್ಣ ತೆಗೆದರೆ
ಅದಕ್ಕೆ ಇದಿರಪ್ಪರಿನ್ನಾರು ಹೇಳಯ್ಯಾ?
ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ತೇಜ ಮೂರು ಲೋಕವ ನುಂಗಿದರೆ,
ನಾನು ನೋಡಿ ಕಣ್ಣ ಮುಚ್ಚುತಿರ್ದೆನು ![೨]

ಕಣ್ಣನ್ನು ಆನಿಕೆ ಇಟ್ಟು ಕಣ್ಣಮೇಲೆ ಇಡುವ ಮೂರ್ತಪ್ರಪಂಚ ಇದಲ್ಲ. ಮಹಾಜ್ವಾಲೆಯ ತೇಜ ನೋಡಲುಬಾರದು, ನುಡಿದು ಉಪಮಿಸಲು ಬಾರದು. ಇದಕ್ಕೆ ಪ್ರತಿಯಾಗಿ ನಿಲ್ಲುವ ತೇಜ ಮತ್ತೊಂದಿಲ್ಲ. ಮೂರು ಲೋಕವನ್ನು ನುಂಗಿ ಮೀರಿ ಉರಿವ ತೇಜ ಇದು. ಅಂದರೇನು ಎಂಬ ಮಹಾಸಮಸ್ಯೆ ನಮಗೆ. ಕಾಮನನ್ನು ಸುಟ್ಟ ಶಿವನ ಉರಿ ಗಣ್ಣು ಇಲ್ಲಿ ನಿಮ್ಮ ನೆನಪಿಗೆ ಬರುತ್ತದೆ, ಅಲ್ಲವೇ? ಆದರೆ ಪುರಾಣದ ಆ ಉರಿಗಣ್ಣಿನ ಜ್ವಾಲೆಗಿಂತ ಸಿದ್ಧರಾಮ ಹೇಳುವ ತೇಜ ಹೆಚ್ಚು ಸೂಕ್ಷ್ಮ, ಹೆಚ್ಚು ಒಳಗೊಳಗೆ ಅನು ಭಾವಿಗಳ ಹೃದಯಾಂತರಂಗದಲ್ಲಿ 'ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ಕಂಡು ...' ಎಂದು ಮಹಾದೇವಿಯಕ್ಕ ಮುಂತಾದ ಶರಣರೆಲ್ಲ ಹೇಳುವ 'ಜ್ಞಾನಜ್ಯೋತಿ' ಯನ್ನು ಹೋಲುವಂತಿದೆ. ಈ ಮಾತಿನ ಅರ್ಥವನ್ನು ಮುಂದೆ ಬರಲಿರುವ ಪ್ರಭು- ದೇವರ 'ನಿಮ್ಮ ತೇಜವ ನೋಡಲೆಂದು' ಎಂಬ ವಚನದಲ್ಲಿ ಮನಗಾಣಬಹುದು. ಇದು ಪುರಾಣಗಳ 'ಕಂಥೆಯ' ಉರಿ ಅಲ್ಲ, ಯೋಗದ ಉರಿ.

'ಸಿದ್ಧರಾಮಯ್ಯದೇವರ ನೊಸಲ ಕಣ್ಣಿನ ಮಹಾಜ್ವಾಲೆಯ ಧಾಳಿ ಬ್ರಹ್ಮಾಂಡ ಮಂಡಲಮಂ ಮುಸುಕುತ' 'ಭೂಮಿಯಾಕಾಶಮಂ ತುಡುಕುತ' ಬರುವುದನ್ನು ಕಾಣು ತ್ತಾನೆ ಪ್ರಭು. ಈ ಮಹಾಜ್ವಾಲೆ ತನ್ನೆಡೆಗೆ ಧಾವಿಸುತ್ತಿದೆ. ಆದರೆ 'ಗೊಹೇಶ್ವರಾ, ನಿಮ್ಮ ಮಾಯದ ಹೊಡೆಗಿಚ್ಚಿಗೆ ನಾನು ಗುಜಿಯಲ್ಲ ಕೇಳಾ.' ಇದು ಶಿವಶರಣರ ಮನದಲ್ಲಿ ಎದ್ದ ಕೋಪದ ಉರಿ. ಶಿವಯೋಗಿಗಳಾದ ಶರಣರ ಹೃದಯದಲ್ಲಿ ಮುನಿಸು ಮೊಳಕೆಯೊಡೆದರೆ ಹೃದಾಕಾಶದ ಶಿವಶೀತಲಜ್ಯೋತಿ ತಪ್ತರುದ್ರ ತೇಜವಾಯ್ತು.

೧. ಸಿ. ಚಾ. ಪು. ೩. ಸಂ. ೧, ಪ. ೯. ೨. ಶೂ. ಸಂ. ಪು. ೪೦, ವ. ೧೬.

ಶರಣರ ಮನದ ಈ ರಾಜಸತೇಜ ಸುಡುವುದು ಯಾರನ್ನು? ಇದಕ್ಕೆ ಗುರಿ ಯಾರು? ನಿಂದಕರೆ ಗುರಿ, ತಪ್ಪುಕರೆ ಗುರಿ. ಕಾಡುಬೆಂಕಿ ಕಾಡನ್ನು ಸುಡುತ್ತದೆ, ನೀರ ಬೆಂಕಿಗೆ ಸಮುದ್ರ ಗುರಿ, ಪ್ರಳಯಾಗ್ನಿಗೆ ಪ್ರಪಂಚವೆ ಗುರಿ. ಈ ರಾಜಸತೇಜಕ್ಕೆ, 'ಮಾಯೆಯ ಹೊಡೆಗಿಚ್ಚಿಂಗೆ' ನಿರ್ಮಾಯ ಅಲ್ಲಮಲಿಂಗ ಸುಡುವ ಬಗೆ ಹೇಗೆ? ಅಡವಿ ಸಮುದ್ರ ಒಡಲು ಲೋಕಮಾಯೆ ಇದ್ದರೆ ಕಿಚ್ಚಿದ್ದು ಸುಡಬಹುದು. ಈ ತೇಜ ಈ ಉರಿ ಶಿವಯೋಗಿ ಸಿದ್ಧರಾಮನ ಉರಿ ಹೌದು. ಸಿದ್ಧರಾಮನ ಈ ಸಾಹಸ ಅಪಾತ್ರಸಾಹಸ! ಯಾರನ್ನು ಸುಡಬೇಕು, ಯಾರನ್ನು ಸುಡಲಿಲ್ಲ ಎಂಬ ವಿವೇಕ ಸಿದ್ಧನಿಗಿಲ್ಲ. 'ಗೊಹೇಶ್ವರನ ವಿರಹದುರಿಯೊಳಗೆ ಬೆಂದವರ ಮರಳಿ ಸುಟ್ಟೆಹೆನೆಂಬ ಸಿದ್ಧರಾಮಯ್ಯ ಮರುಳು ನೋಡಾ.' ದೇಹದ ನಿಸರ್ಗಗುಣಧರ್ಮವನ್ನು, ಮಾಯೆಯ ಸೊಕ್ಕನ್ನು, ಕಾಮಕ್ರೋಧ ಲೋಭ ಮೋಹಗಳನ್ನು – ಈ ಸಂಸಾರರಸದ ಕೂಪವಾದ ಅಂಗವನ್ನು ಲಿಂಗಕ್ಕೆ ಆಹುತಿಕೊಟ್ಟು, ಲಿಂಗಕ್ಕೆ ನೈವೇದ್ಯಮಾಡಿ ಲಿಂಗದಲ್ಲಿ ಲೀಯಗೊಳಿಸಿ ಭಿನ್ನದೃಷ್ಟಿಯ ಬೇರೆಬೇರಾದ ತುಣುತುಣುಕಾದ ಶಬ್ದ ಮುಂತಾದ ರೂಪ ರೂಪಗಳ ಕಡಿಖಂಡ ಬೆಳಗುಗಳಳಿದು, ಉರಿಉರಿಗಳನ್ನು ಹುರಿದಿಕ್ಕುವ ಲಿಂಗದುರಿಯೊಳಗೆ ಸುಟ್ಟು ಬೆಂದು ಹೋದವರನ್ನು ಹಣೆಗಣ್ಣಿನ ಕೋಪದುರಿ ಸುಡಬಲ್ಲುದೇ? ಮತ್ತೆ

> ತಾಪತ್ರಯದಲ್ಲಿ ಬೆಂದ ಒಡಲ ಹಿಡಿದು ತಂದು
> ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟವನ,
> ಜ್ಞಾನವೆಂಬ ಕಾಯವ ಹಿಡಿದು ನಿಶ್ಶೂನ್ಯವೆಂಬ ತೇಜದಲ್ಲಿ ಸುಟ್ಟವನ.
> ನಿಶ್ಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ,
> ಲೋಕದ ಸ್ಥಿತಿಗತಿಯ ಮಱೆದು ನಿರ್ವಾಣದಲ್ಲಿ ನಿಂದವನ,
> ಗೊಹೇಶ್ವರಲಿಂಗದಲ್ಲಿ ತನ್ನ ಮಱೆದ ಅಲ್ಲಯ್ಯನ,
> ಕೋಪದ ಕಿಚ್ಚಿನಲ್ಲಿ ಸುಟ್ಟಿಹೆನೆಂಬ ಸಿದ್ಧರಾಮಯ್ಯನನೇನೆಂಬೆನು?[೧]

ಉಳ್ಳಯ್ಯಗಳನ್ನು ಕಿಚ್ಚು ಸುಡಬಹುದು, ಸುಡಬಹದು. ಉಳ್ಳುದೆಲ್ಲವನ್ನು ಸುಟ್ಟು ಬೂದಿ ಮಾಡಿ, ಈ ಬೂದಿಯನ್ನು ಬಡಿದುಕೊಂಡು ಸರ್ವಶೂನ್ಯವಾದ ನಿರ್ವಾಣಪದದಲ್ಲಿ ನಿರವಯಲಾಗಿ 'ಇರುವ ಅಲ್ಲಯ್ಯ'ನನ್ನು ಯಾವ ಕೋಪಾಗ್ನಿ ಯಾವ ಕಾಲಾಗ್ನಿ ಕಲ್ಪಾಗ್ನಿ, ಯಾವ ಪ್ರಳಯಾಗ್ನಿ ಮಹಾಪ್ರಳಯಾಗ್ನಿ ಸುಡಬಲ್ಲುವು? ಸೂರ್ಯನನ್ನು ಸುಡುವೆನೆಂದು ಬೆಂಕಿಯ ಹುಳು ಆಕಾಶಕ್ಕೆ ಜಿಗಿವ ಸಾಹಸ! 'ಸಿದ್ಧರಾಮಯ್ಯನನೇನೆಂಬೆನು?' ಎನ್ನಲು ಶಬ್ದ ಇಲ್ಲ. ಸಿದ್ಧರಾಮಯ್ಯನ ಗರ್ವದುರಿ 'ಗೊಹೇಶ್ವರಾ, ನೀ ಮುನಿದು ನೊಸಲ ಕಣ್ಣ ತೆಗೆದರೆ, ಎನ್ನಂಗಾಲೊಳಡಗಿತ್ತಯ್ಯಾ ನಿಮ್ಮ ಕೋಪ.'

ಸಿದ್ಧರಾಮ ಶಿವಯೋಗಿ, ಶಿವಸ್ವರೂಪ ಎಂಬ ಅರಿವಿದೆ ಪ್ರಭುವಿಗೆ. ಆದರೆ ಈ ಸಾಕಾರ ಶಿವರೂಪಕ್ಕೂ ನಿರಾಕಾರ ನಿರವಯಲಿಗೂ ಎಂಥ ಅಂತರ! ಈ ನಿರವಯಲು ಅಲ್ಲಯ್ಯನ ನಿರಾಳದೃಷ್ಟಿಯಲ್ಲಿ ಶಿವ ಕಾಮನನ್ನು ಸುಟ್ಟ ಕಾಮದಹನಲೀಲೆ ತ್ರಿಪುರವನ್ನು

---

೧. ಶೂ. ಸಂ. ಪು. ೪೧, ವ. ೧೯.

ಸುಟ್ಟ ತ್ರಿಪುರಹರಲೀಲೆ ಕಾಲನನ್ನು ಕೊಂದ ಕಾಲಕಾಲಲೀಲೆ 'ಅರೆಮರುಳೆಂಬ ಶಿವ'ನ ನೆಚ್ಚಿಮರುಳು ಲೀಲೆ. ತನ್ನ ಶಕ್ತಿಯು ಕೂಸಾದ ಜಗತ್ತಿನ ಕಾಲ ಕಾಮ ಪುರಗಳನ್ನು ತನಗೆ ಭಿನ್ನವಿಟ್ಟು ನೋಡಿ ಸುಟ್ಟುರುಹಿದರೆ 'ನಾಚಿತ್ತೆನ್ನ ಮನವು' 'ಹೇಸಿತ್ತೆನ್ನ ಮನವು.'

ಏನೂ ಇಲ್ಲ ಏನೂ ಇಲ್ಲದ, ಏನೂ ಅಲ್ಲ ಏನೂ ಅಲ್ಲದ ಇಲ್ಲಯ್ಯನ ಅಥವಾ ಅಲ್ಲಯ್ಯನ ನಿರವಯಲ ನಿರಾಳಕ್ಕೆ ಎಲ್ಲ ಬಯಲಿನ ಕಲೆ ಗೊತ್ತು, ಎಲ್ಲ ಬೆಳಗುಗಳ ಕಲೆ ಗೊತ್ತು; ಬಿಸಿಲು ಗಾಳಿ ನೆಲ ನೀರಿನ ಕಲೆಯ ಸೆಲೆಯೊಡೆವ ಬಿನ್ನಾಣ ಗೊತ್ತು. ಜಗವಾಗುವ ಶಕ್ತಿ ತನ್ನಲ್ಲಿ, ಜಗವಾಗದೆ ಇರುವ ಯುಕ್ತಿ ತನ್ನಲ್ಲಿ. 'ಜಗವಾಗಬಲ್ಲ, ಜಗವಾಗದಿರಲೂ ಬಲ್ಲ.' ಬಯಲಿಗೆ ಬ್ರಹ್ಮಾಂಡದ ಲೇಪ ಇಲ್ಲ, ಅಂಜನ ಇಲ್ಲ. ಅಂತೆಯೆ ಎಲ್ಲವನ್ನು ಒಳಕೊಂಡಿದ್ದರೂ ಯಾವ ಬಣ್ಣವನ್ನು ಹಚ್ಚಿಕೊಂಡಿಲ್ಲ ಬಯಲು. ಈ ಬಯಲು ಪ್ರಭುದೇವರು 'ಸಿದ್ಧರಾಮಯ್ಯದೇವರ ಶಕ್ತಿಯ ನೋಡಬೇಕೆಂದು ತಾವು ತಮ್ಮ ಅಂಗಾಲೊಳಗೆ ಉರಿಗಣ್ಣ ತೆಗೆದಿಹೆವೆಂದು ಉದ್ಯೋಗಿಸಿ,' 'ಗೊಹೇಶ್ವರನ ಶರಣರು ಉಪಮಾತೀತರು,' 'ಅಘಟಿತ ಘಟಿತರಿಗೆ' ಮತ್ತೆ ಮೇಲೆ ಅಘಟಿತರುಂಟೆಂದು ಹೇಳಿ ಅಂಗಾಲ ಕಣ್ಣ ತೆರೆದರು. 'ಗೊಹೇಶ್ವರಾ, ನಿಮ್ಮ ಶರಣಂಗೆ ಅಂಗಾಲ ಕಣ್ಣು ಮೂಡಿದರೆ ಬಹ್ಮನಲ್ಲ ಈಶ್ವರನಲ್ಲ ಸದಾಶಿವನಲ್ಲ, ಆತ 'ನಿರುಪಮಮಹಿಮ ಅಲ್ಲಯ್ಯ ನೋಡೆನು,' ಎಂದು ತಮ್ಮ ಗೊಹೇಶ್ವರಲಿಂಗವನ್ನು ಹಾಡಿಕೊಂಡರು. 'ಇಂತು ಅಂಗಾಲೊಳಗೆ ಮೂಡಿದ ಕಂಗಳ ತೇಜವ ನೋಡಿ ಪ್ರಭುದೇವರು ಹಾಡುವ ಸ್ವಯಂ ಜ್ಯೋತಿರ್ಲಿಂಗದ ಗೀತವನ್ನು ಕಿವಿತುಂಬ ಕೇಳಿ:

> ನಿಮ್ಮ ತೇಜವ ನೋಡಲೆಂದು ಹೆಜಿಸಾರಿ ನೋಡುತ್ತಿರಲು,
> ಶತಕೋಟಿ ಸೂರ್ಯರು ಮೂಡಿದಂತಿರ್ದುದಯ್ಯಾ!
> ಮಿಂಚಿನ ಬಳ್ಳಿಯ ಸಂಚವ ಕಂಡೆ!
> ಎನಗಿದು ಸೋಜಿಗವಾಯಿತ್ತು!
> ಗೊಹೇಶ್ವರಾ, ನೀನು ಜ್ಯೋತಿರ್ಲಿಂಗವಾದರೆ
> ಉಪಮಿಸಿ ನೋಡಬಲ್ಲವರಿಲ್ಲಯ್ಯಾ.[೧]

ನಿಮ್ಮ ತೇಜ ಅಂದರೆ ಜ್ಯೋತಿರ್ಲಿಂಗದ ತೇಜ.[೨] ಪ್ರಭುಲಿಂಗ ತನ್ನ ನಿರವಯಲ

---

೧. ಶೂ. ಸಂ. ಪು. ೮೨. ವ. ೨೩.

೨. ಈ ಜ್ಯೋತಿರ್ಲಿಂಗದ ಸ್ವರೂಪವನ್ನು ನೋಡಲು ಬೇಕಿದ್ದರೆ ಇಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರನ ಬಳಿ ಬನ್ನಿ:

> ಅಂತರಂಗದಲ್ಲಿ ಬೆಳಗುವ ಜ್ಯೋತಿರ್ಲಿಂಗವು
> ಸರ್ವಜ್ಯೋತಿಸ್ಸುಗಳಿಗೆ ಪರಮಾಶ್ರಯ ತಾನಾಗಿ,
> ಒಳಹೊರಗೆ ತೆರಪಿಲ್ಲದೆ ವ್ಯಾಪಿಸಿ,
> ಮನದ ನೆನಹಿನ ವಿಶ್ರಾಮಕ್ಕೆ ಸ್ಥಾನವಾದ
> ಜ್ಯೋತಿರ್ಲಿಂಗವ ನೆನೆದು ಸುಖಿಯಾದೆ,—
> ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ.

ಸ್ವ. ಸಿ. ವ. ಪು. ೭೫. ವ. ೨೮೮.

ಸ್ಥಲದಿಂದ ಸ್ವಲ್ಪ ಹಿಂದೆ ಸರಿದು ಓರೆಯಾಗಿ ನೋಡಿದರೆ ಶತಕೋಟಿ ಸೂರ್ಯರು ಒಮ್ಮೆಲೆ ಮೂಡಿದಂತೆ ನಿರವಯಲಲ್ಲಿ ಥಳಥಳಿಸಿ ಬೆಳಗುತ್ತಿದೆ. ಇದೇ ಮಿಂಚಿನ ಬಳ್ಳಿಯ 'ಮಿರುಗುವ ಬೆಳಗಿನ ಬಳಗದ' ರಹಸ್ಯಮೂಲ. ಇದು ಯೋಗದ ಮಹಾ ಬೆಳಗು ಎಂಬುದನ್ನು, ಪ್ರಭುದೇವರ 'ಪರಮಯೋಗ'ದ 'ಮಂತ್ರಗೋಪ್ಯ'ದ ಒಂದು ಪದ್ಯ ಈ ಬೆಳಗಿನ ಗೋಪ್ಯವನ್ನು ಉಪದೇಶಿಸುತ್ತದೆ:

> ಶತಪತ್ರ ಶತಲಿಪಿಯು ಶತಸಹಸ್ರದ ದಳವು ।
> ಶತಕೋಟಿ ಸೋಮಸೂರ್ಯಪ್ರಕಾಶ ॥
> ಶತಪತ್ರವನು ಮೆಟ್ಟಿ ಹತಮಾಡಿ ಗತಿಗೆಡಿಸಿ ।
> ಅತಿಶಯದ ಮಣಿಮಂಟಪದೊಳು ನಿಂದೆ ॥ ೧

ಈ ಬೆಳಗಿನ ಮಂತ್ರಗೋಪ್ಯ ವಿಶದವಾಗಿ ತಿಸಿಯಬೇಕಿದ್ದರೆ ಕಲ್ಲಮಠದ ಪ್ರಭುದೇವರ ಟೀಕೆಯನ್ನು ನೋಡುವುದು ಅತ್ಯವಶ್ಯ. ಸಮಸ್ತ ದೇಹಿಗಳ ಮಸ್ತಕದಲ್ಲಿ ಸಾವಿರ ದಳದ ಕಮಲ. 'ಅಲ್ಲಿ ಕೋಟಿ ಚಂದ್ರ ಸೂರ್ಯಪ್ರಕಾಶವನುಳ್ಳ ಚಿತ್‌ಪ್ರಭಾಕಳೆಯು ಇರುತ್ತದೆ. ಪಿಂಡಾಂಡ ಬ್ರಹಾಂಡಗಳನ್ನು ಒಳಗೊಂಡಿರುವ ಈ ಅಖಂಡ ಚಿತ್‌ಪ್ರಭಾ ಬೆಳಗೇ ಶರಣನ ಸರ್ವಾಂಗದಲ್ಲಿ ತುಂಬಿ ದಳಕಳೆಗಳ ಬೆಡಗನಡಗಿಸಿ ಮೆಟ್ಟಿ ನಿಂದು ತಾನೇ ತೋರುತ್ತದೆ.'--ಆದರೆ ಪ್ರಭುದೇವರೇ ಹೇಳುವಂತೆ:

> ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರರೆಂಬ ಸಂದಣಿ
> ತಲೆದೋಱದ ಮುನ್ನ ಅಲ್ಲಿಂದತ್ತ ಬಯಲೆ ಸ್ವರೂಪವಾಯಿತ್ತು.
> ಆ ಸ್ವರೂಪದ ಘನತೆಯನುಪಮಿಸಬಾರದು.
> ನೋಡಬಾರದ ಬೆಳಗು, ಕೂಡಬಾರದ ಮೂರ್ತಿ !
> ಅಖಂಡ ಅಪ್ರತಿಮ ನಮ್ಮ ಗೊಹೇಶ್ವರಲಿಂಗದ ಬೆಳಗಿನ ಮೂಲವ
> ಲಿಂಗಸಂಗಿಗಳಲ್ಲದೆ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರೋ? ೨

ಲಿಂಗದಲ್ಲಿ ಯೋಗವಾಗಿ ಲಿಂಗಸಂಗದಲ್ಲಿರುವ ಲಿಂಗಸಂಗಿ ತನ್ನ ನಿರಾಳದ ಬಯಲಲ್ಲಿ ಸ್ವಯಂಭುವಾಗಿರುವ ಈ ಸ್ವಯಂಜ್ಯೋತಿರ್ಲಿಂಗದ ಶತಕೋಟಿ ಪ್ರಕಾಶವನ್ನು ನೋಡಿ ಬಲ್ಲ, ಕೂಡಿ ಬಲ್ಲ, ಆಗಿ ಬಲ್ಲ, ಇದ್ದು ಬಲ್ಲ. ಆದರೆ ಕಾಯವಿಕಾರ ಪ್ರಾಣವಿಕಾರ ಮನೋವಿಕಾರ ಬುದ್ಧಿವಿಕಾರ ವಿಚಾರವಿಕಾರ ಭಾವದ ಭ್ರಾಂತಿವಿಕಾರ ತಾವು ಹರಿದತ್ತ ಹರಿದು ಬೀಸಿದತ್ತ ಬೀಸಿದರೆ, 'ವಿದ್ಯಾಮುಖದ ಜ್ಯೋತಿ ನಂದಿತ್ತು.' ಅಂಗದ ವಿಕಾರದಲ್ಲಿ ನಾನೆಲ್ಲ ವಿಕಾರಿಸುತ್ತ ಬೀಸಿ ಬೀಸಿ ಬೇಸರವಾಗುತ್ತ ನಡೆದರೆ ಈ ನಾನು–ವಿಕಾರಕ್ಕೆ ವಿಕಾರವಿಲ್ಲದ ನಿರ್ವಿಕಾರ ನಿರಾಕಾರ ನಿರ್ಮಳ ನಿರಂಜನ ಜ್ಯೋತಿ, ಅಖಂಡ ಪರಿಪೂರ್ಣ ಸಾಗರ ಕಾಣುವ ಬಗೆ ಹೇಗೆ?

---

೧. ಪ. ಮಂ. ಪು. ೧೮. ಪ. ೧೦.
೨. ಲಿಂ. ಲೀ. ವಿ. ಚಾ. ಪು. ೧೯, ವ. ೧೨.

ಸಿದ್ಧರಾಮಯ್ಯದೇವರು ಹೇಳುವ 'ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾನವು...' ಎಂಬ ವಚನ ಈ ದೇವರ ಅನುಭವದ ಅಂತರಂಗವನ್ನೆ ಬೆಳಗುತ್ತದೆ. ಆದರೆ ಸಿದ್ಧರಾಮ ಮತ್ತು ಪ್ರಭುದೇವರ ಯೋಗಾನುಭವದಲ್ಲಿ, ಯೋಗದ ಮೆಟ್ಟಲುಗಳಲ್ಲಿ ಅಂತರವಿದೆಯೆಂಬ ಮಾತು ಸುಸ್ಪಷ್ಟ. ಅಂತರವಿದ್ದರೂ ಇಬ್ಬರ ಹೃದಯತೇಜ ಒಂದೇ ಜಾತಿ, ಒಂದೇ ಕುಲ, ಒಂದೇ ಧರ್ಮ.

ತಮ್ಮ ಗೊಹೇಶ್ವರಲಿಂಗದ ಅಖಂಡ ತೇಜೋರಾಶಿಯನ್ನು ತಾವೇ ಸೋಡಿ ಬೆರಗಾಗಿ, ಶಿವನ ಅಥವಾ ಶಿವಸಿದ್ಧನ ಪ್ರತಾಪ 'ಅಸಮಾಕ್ಷಲಿಂಗವ ತಮ್ಮ ವಶಕ್ಕೆ' ತಂದ ಶರಣರ ಮುಂದೆ ಏತರದೆಂದು, 'ಗೊಹೇಶ್ವರಾ, ನಿಮ್ಮ ಅಱಿವಿನ ಬೆಳಗು ಬಿಸಿಯಾದರೆ ಸಿದ್ಧರಾಮಯ್ಯದೇವರೆಂಬ ಶಿವಯೋಗಿಯ ಹೃದಯವೆ ಗುಱಿ' ಎಂದು ಸಂಕಲ್ಪಿಸಿ ಜ್ಯೋತಿರ್ಲಿಂಗದ ಬಿಸಿಯಾದ ಬೆಳಗನ್ನು ಸಿದ್ಧನೆಡೆಗೆ ಕಳಿಸುತ್ತಾರೆ ಪ್ರಭುದೇವರು. ಒಮ್ಮೆಲೆ ಮೂಡಿದ ಶತಕೋಟಿ ಸೂರ್ಯರ ಅಬ್ಬಬಿಸಿಲು ದೌಡುಮಾಡಿ ನಡೆವ ಪ್ರತಪ್ತಾರ್ಭಟವನ್ನು ಸಿದ್ಧವೀರದೇವರು ಸಿಡಿಲುಮರಿಯಂತಿರುವ ಶಬ್ದಗಳಲ್ಲಿ ಹೀಗೆ ಮಾಲೆಗಟ್ಟಿದ್ದಾರೆ:

> 'ಇಂತು ತೇಜೋಮಯವಾಗಿ ಅಷ್ಟದಿಕ್ಕುಗಳನಾಲಿಂಗಿಸುತ್ತ, ಧರೆಯಾಕಾಶವನಾಗುಳಿಸಿ ನುಂಗುತ್ತ, ಸಚರಾಚರಂಗಳನುಃಪೆಂದು ಊದುತ್ತ, ಸಪ್ತಸಮುದ್ರಂಗಳನಾಪೋಷಣಂಗೊಳ್ಳುತ್ತ, ಭುಗಿಭುಗಿಲೆಂಬ ಮ್ಹಹಾರಭಸಕ್ಕೆ ಬ್ರಹ್ಮಾಂಡಕಟಾಹಂ ಬಿರಿವುತ್ತ, ಚತುರ್ದಶಭುವನವೆಲ್ಲಂ ಪ್ರಳಯಕಾಲ ತುಂಬದ ಮುನ್ನವೆ ಮಹಾಪ್ರಳಯ ಬಂದಿತ್ತೆಂದು ಜಗ್ಗನೆ ಜರಿವುತ್ತ, ಹರಿ ವಿರಿಂಚಿ ಮೊದಲಾದ ಸಮಸ್ತ ದೇವರ್ಕಳೆಲ್ಲರು ಶಿವಧೋ ಎಂದು ಕೈಲಾಸದತ್ತಲೋಡುತ್ತಮಿರಲು, ಅನಂತ ಮುಖವಾಗಿ ಬಪ್ಪ ತೇಜೋರಾಶಿಯಂ'

ಕಂಡರು ಸಿದ್ಧರಾಮತಂದೆಗಳು. ಆದರೆ ಉಳಿದವರಿಗೂ ಈ ಮಹಾತೇಜೋರಾಶಿ ಕಂಡಿತೇ? ಅಂಗಾಲಲ್ಲಿ ಕಣ್ಣು ಮೂಡಿ ಕೆಂಡದ ಮಳೆಗರೆಯಿತೇ? ಬ್ರಹ್ಮಾಂಡಗಳೆಲ್ಲ ಅಂದೇ ಏಕೆ ಸುಟ್ಟುಹೋಗಲಿಲ್ಲ? ಎಂಬಿಂಥ ಪ್ರಶ್ನೆಗಳನ್ನು ನಮ್ಮ ಬುದ್ಧಿಗಳು ಗುಡುಗುವುದು ನಿಜ. ಪ್ರಶ್ನೆಗಳಿಗೆ ಸಮರ್ಪಕ ಉತ್ತರವಿಲ್ಲದಿದ್ದರೆ ಬುದ್ಧಿಗಳ ಗುಡುಗಾಟ ಇನ್ನೂ ಭೀಕರವಾಗುವುದು ನಿಜ. ಇಂಥ ವಿಚಾರ-ಬುದ್ಧಿಯ ಕೂಡ ಕುಸ್ತಿಹಿಡಿವ ಬುದ್ಧಿ 'ಪುರಾಣ'ವಾಗಬಹುದು. ಆದರೆ ಪುರಾಣಬುದ್ಧಿ ಅಂಧಶಾಸ್ತ್ರ; ಪ್ರತ್ಯಕ್ಷ ಪ್ರಯೋಗಕ್ಷಮವಾದ ಪ್ರಮಾಣಜ್ಞಾನವಲ್ಲ. ಹಾಗಿದ್ದರೆ ಮುಂದೆ?

ವಿಶ್ವದ ಹೊರಮೈಯಲ್ಲಿ ನಮಗೆ ಗೋಚರವಾಗುವ ಬೆಂಕಿ ಬೆಳಗು ಹಲವು ತೆರ. ಸೂರ್ಯನ ಬಿಸಿಲು–ಬೆಳಗು, ನಕ್ಷತ್ರ ಚಂದ್ರಮರ ತಂಪು–ಬೆಳಗು, ಮುತ್ತು ರತ್ನ ವಜ್ರ ವೈಡೂರ್ಯದ ಬಣ್ಣಬೆಳಗು, ಎಣ್ಣೆ ಕಟ್ಟಿಗೆ ವಿದ್ಯುತ್ತಿನ ಬೆಳಗು, ಬೆಳ್ಳಿ ಬಂಗಾರ ತಾಮ್ರದ ಬೆಳಗು – ಹೀಗೆ ಬೆಳಗು ಅನೇಕ ವಿಧ. ಇಲ್ಲಿ ಕೆಲವರಲ್ಲಿ ಸುಡುವ ಗುಣ ವಿರಬಹುದು. ಇಂದ್ರಿಯಗೋಚರವಾಗಬಲ್ಲ ಈ ಬಹಿಃಪ್ರಕಾಶಗಳಂತೆ ಅಂತರ್ವಿಶ್ವ

ಪ್ರಪಂಚದ ಮತ್ತೆ ಅಂತರ್ಮಾನವ ಪ್ರಪಂಚದಲ್ಲಿ ಯಾವ ಯಾವ ವರ್ಣ ಯಾವ ಯಾವ ಜಾತಿಯ ಬೆಳಗುಗಳಿವೆಯೋ ಯಾರಿಗೆ ಗೊತ್ತು? ಇಂದ್ರಿಯಾತೀತವಾಗಿದ್ದರೂ ವಿಜ್ಞಾನಬುದ್ಧಿ ಪ್ರಯೋಗತಂತ್ರದಿಂದ ಅಪ್ರತ್ಯಕ್ಷವಾಗಿ ಹಿಡಿದು ತರುವ ಬೆಳಗುಗಳಿರ ಬಹುದು. ಆದರೆ ನಿಶ್ಯಬ್ದಮನದ ಮೇಲೆ, ನಿರ್ವಿಕಾರವಾದ ಕಾಯದ ಮೇಲೆ, ವಾಯುವಿಕಾರ ಅತಿಗಳೆದ ಪ್ರಾಣದ ಮೇಲೆ,–ನಾನೆಂಬ ಅಹಂಭಾವ ತೆರೆಗಳೆದ ನಿರ್ಭಾವದ ಮೇಲುಪ್ಪರಿಗೆಯಲ್ಲಿ ಯಾವ ಯಾವ ಬೆಳಗು ಹೊಳೆಯುತ್ತಿವೆಯೋ ನಮಗೇನು ಗೊತ್ತು? ವಿಚಾರವಿಕಾರದಲ್ಲಿ ಬೀಸುವ ಬುದ್ಧಿಗೇನು ಗೊತ್ತು? ಭೌತತಂತ್ರದ ಪ್ರಯೋಗಶಾಲೆಯ ವಿದ್ಯಾರ್ಥಿಗಳಾದ ವಿಜ್ಞಾನಿಗಳಿಗೇನು ಗೊತ್ತು? ಶಿವಯೋಗ ಶಾಲೆಯ 'ಶತಕೋಟಿ ಸೂರ್ಯಪ್ರಕಾಶ' ಶಿವಯೋಗವಿದ್ಯಾರ್ಥಿ ಬಲ್ಲ, ಶಿವಜ್ಞಾನಿ ಬಲ್ಲ. ಈ ಬೆಳಗು ಬಿಸಿಯಾಗಿ ಉರಿದ ರೀತಿ ಸಿದ್ಧರಾಮನ ಗುಡ್ಡರು ಒಡ್ಡರು ಎಕ್ಕೆ ವಿಂಡುಗಳು ಅದರಂತೆ ಇನ್ನುಳಿದ 'ಲೋಕದ ಮಾನವ'ರಿಗೆ ಗೊತ್ತಾಗಿರಲಿಕ್ಕಿಲ್ಲ. ಗೊತ್ತಾದರೂ ಅಂಗಾಲ ಕಣ್ಣಿನ ಬಿಸಿಯ ಅನುಭವ ಅವರವರ ಭಾವಸ್ಥಲಕ್ಕೆ ತಕ್ಕಂತೆ ತೋರಿರ ಬಹುದು. ಬೆಳುದಿಂಗಳು ಬಿದ್ದರೆ ಮಹಾಕವಿಯ ಅನುಭವವೇನು? ಸಾಮಾನ್ಯ ಕವಿಯ ಪ್ರತಿಕ್ರಿಯೆಯೇನು? ಮಾನವ ಜಾತಿಯ ಎದೆಯ ಅಂಗಳದಲ್ಲಿ ಆ ತಿಂಗಳ ಬೆಳಗು ಹರವಿಕೊಳ್ಳುವುದೆಂತು? ಪಶು ಪಕ್ಷಿ ತರು ಲತೆ ನದಿ ಪರ್ವತ ನೆಲ ಗಾಳಿಗಳ ಒಳಗೆ ಆ ಬೆಳಗು ಯಾವ ಯಾವ ಅನುಭವವನ್ನು ಎಬ್ಬಿಸುತ್ತದೆ? ಅವರವರ ಎದೆಯ ಎಚ್ಚರದಂತೆ ಅವರವರ ಲೋಕಾನುಭವ, ಅವರವರ ಅಂತರ್ಲೋಕಾನುಭವ.

ಪ್ರಭುದೇವರು ಅಟ್ಟಿದ ಮಹಾತೇಜೋರಾಶಿ ಗುರಿಯನ್ನು ನೇರವಾಗಿ ಮುಟ್ಟಿದೆ. ಸಿದ್ಧರಾಮಯ್ಯನ ಹೃದಯವನ್ನು ತಾಗಿದ ತೇಜೋರಾಶಿಯನ್ನು ತನ್ನ ಹೃದಯದ ಕಣ್ಣಿಂದ ಕಂಡು 'ಇದೆಲ್ಲಿಯ ಮಹಾಜ್ವಾಲೆಯೆಂದು ತಿಳಿದು ನೋಡಿ, ಈತನು ಶಿವನಲಾ' ಎಂದು ಕಣ್ಣಿನ ಮೇರೆಯಾಚೆ ಇದ್ದ ಅಲ್ಲಮಪ್ರಭುವಿನ ನಿಂದ ನಿಲವನ್ನು, ಇದ್ದ ಇರವನ್ನು ಶಿವಸಿದ್ಧನ ಕರುಳು ಕಂಡುಹಿಡಿಯಿತು, ಪ್ರತ್ಯಕ್ಷ ಪರಶಿವಮೂರ್ತಿಯೆಂದು ಗುರುತಿಸಿತು. ಹಣೆಗಣ್ಣು ಹಮ್ಮು ನೆಲಕ್ಕಿಳಿಯಿತು. ಶಿವಮೂರ್ತಿಯಲ್ಲಿ ಸೆಣಸಿದ ಅನುತಾಪ ಕೆಂಡಕ್ಕೇರಿತು.

ಸಿದ್ಧರಾಮನ ಈ ಹೃದಯಾವಸ್ಥೆಯನ್ನು ಆತನ ಅನುಭವದ ವಚನಗಳೆ ಭೋರ್ಗರೆದು ಹಾಡುತ್ತಿವೆ.. ಅದರಲ್ಲಿ ಒಂದು ಹಾಡು ಕೇಳಿ:

ಯುಗಜುಗ ಮಡಿವಂದು
ಧಿಗಿಲುಭುಗಿಲೆಂದು ಮುಸುಕಿದ ಮಹಾಜ್ವಾಲೆ ಇದೇನೋ?
ಇಂದೆನ್ನ ಕಂಗೆ ಗೋಚರವಾಯಿತ್ತೆಲೆ ಅಯ್ಯಾ !
ನೀವೆಂದಱಿಯೆನಯ್ಯಾ !
ನಾನೆನ್ನ ಕಾಯದ ಕಳವಳದಲ್ಲಿದ್ದೆಸಲ್ಲದೆ
ನೀವೆಂಬ ಬಗೆದೋಱದೆ ಕೆಟ್ಟೆನೆಲೆ ಅಯ್ಯಾ !

ಆಳ್ದನೊಡನೆ ಆಳು ಮುನಿದರೆ
ಆರು ಕೆಡುವರು ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ?[1]

ಕಾಯದ ಕಳವಳದಲ್ಲಿ. ಅಂಗವಿಕಾರದಲ್ಲಿ ವಿಕಾರಿಸುತ್ತಿದ್ದರೆ ನಿರ್ವಿಕಾರದ ನಿಲವಾದ 'ಕಪಿಲಸಿದ್ಧಮಲ್ಲಿಕಾರ್ಜುನ' ಮುಂದೆ 'ಬೆನ್ನುದೋಱದೆ' ನಿಂತಿದ್ದರೂ 'ನೀವೆಂಬ ಬಗೆ' ತೋರುವುದಿಲ್ಲ ವಿಕಾರವಾಸಿಗಳಿಗೆ. 'ಲಿಂಗಪ್ರಭೆ'ಯ ಮಹಾಮನೆಯೊಳಗೆ ಗೋಡೆ ಮಾಳಿಗೆ ನೆಲ ಕತ್ತಲೆಗಳನ್ನು ಮೀರಿ 'ಸರ್ವನಿರ್ವಾಸಿತ'ವಾಗಿ ಸರ್ವನಿವಾಸವಾಗಿರುವ ಲಿಂಗಶರಣರೆತ್ತ, ಅಹಂಕಾರದ ಪಂಜರದೊಳಗಿರುವ 'ನಾನು' ಎತ್ತ? ಅರಿವಿಗೆ ಅಗಮ್ಯವಾದ ಸ್ವಯಂಭು ಮಹಾಘನವನ್ನು ಅರಿವಿನ ಉಲುಹಿಲ್ಲದೆ ಅರಿದು ಸಾಧಿಸಿ ಘನವಿಜಯವನ್ನು ಸಂಪಾದಿಸಿದ ಘನಮಹಿಮ ಶರಣರ ಮಹಾಘನತೇಜದ ಪ್ರಚಂಡ ಪ್ರತಾಪ ಎತ್ತ? ಇನ್ನೂ ಕಾಯದ ಕಳವಳ ಹಿಂಗದೆ ಯೋಗ ಶಿವಯೋಗವೆಂಬ ಸಂಭ್ರಮದ ಮದದಲ್ಲಿ ಬೀಗುತ್ತಿರುವ ಹಣೆಗಣ್ಣಿನ ಉರಿಯೆತ್ತ? ಅನಂತ ಹಣೆಗಣ್ಣುಗಳನ್ನು ಹಡೆಯಬಲ್ಲ ಲಿಂಗಪ್ರಭೆಯ ಶರಣರನ್ನು ಯಾವ ಉರಿ ಏನು ಮಾಡಬಲ್ಲುದು? ಅಂದು ಇಂದು ಮುಂದಿನ ಬಿರುಗಾಳಿಯೆಲ್ಲ ಒಟ್ಟಾಗಿ ಬಿರ್ರನೆ ಬೀಸಿದರೆ ಬಯಲು ಅಲುಗಾಡೀತೇ? ಗಾಳಿಯು ಹೊಯ್ದು ಆಕಾಶದ ಮೈಯಲ್ಲಿ ಮೂಡಲಿಲ್ಲ. ವಿಳಯಾಗ್ನಿ ವಿಶ್ವವನ್ನೆ ಸುಡಬಹುದು. ಆದರೆ ಬಯಲನ್ನು ಸುಡಬಲ್ಲ ಬೆಂಕಿ ಎಲ್ಲಿದೆ? ಎಲ್ಲ ಬೆಳಗುಗಳನ್ನು ಹೆತ್ತು ಹೊತ್ತಿರುವ 'ಲಿಂಗಪ್ರಭೆ'ಯನ್ನು ಅದಾವ ಹಣೆಗಣ್ಣು ಸುಟ್ಟೀತು?

ಸಿದ್ಧನ ನೊಸಲ ಕಣ್ಣಿನ ಕಿಚ್ಚು ಉಡುಗಿದಂತೆ ಆತನ ಹೃದಯ ಹಿಂಡಿ ಹಿಪ್ಪೆಯಾಗುತ್ತಿದೆ. 'ಕಾಲವೇಕೆ ಬಾರದಯ್ಯಾ ಇಂದಿನ ಅವಸ್ಥೆಗೆ?' ಎಂದು ಮುಂತಾಗಿ ಒಳ್ಳಿಕ್ಕಿ ಒರಲುತ್ತದೆ. ಮನದ ಅನುತಾಪ ಸಂತಾಪ ಕೆಲಮಟ್ಟಿಗೆ ಇಳಿದ ಬಳಿಕ ತನ್ನ ಹಿಂದಿನ ಕತೆ ಮುಂದೆ ನಿಲ್ಲುತ್ತದೆ. ಸಣ್ಣವನಿದ್ದಾಗ ಯಾರಿಗೂ ತಿಳಿಸದೆ ಸೊನ್ನಲಿಗೆಯನ್ನು ಬಿಟ್ಟು ಶ್ರೀಶೈಲಪರ್ವತಕ್ಕೆ ಹೋಗಿ ಮಲ್ಲಿಕಾರ್ಜುನನನ್ನು ಕಾಣಬೇಕೆಂದು ಹಗಲು ರಾತ್ರಿಯೆನ್ನದೆ ಕೊಳ್ಳ ಕಮರಿಯೆನ್ನದೆ ಆಲ್ಪರಿದು ಹುಡುಕಿ ಸತ್ತರೆ ಮಲ್ಲಿಕಾರ್ಜುನ ಮೈದೋರಿ ಬಂದು ಮೈದೆಡವಿದ ರುದ್ರುಶಿವಕಥೆ ಎದ್ದು ಬರುತ್ತದೆ. ಕರಕರ ಕಾಡಿದ ದೇವ ಒಲಿದು ಬಂದ ಶ್ರೀಶೈಲದೃಶ್ಯ ಎಂಥ ಅದ್ಭುತ ಶಿವ!

ಅಟ್ಟಡವಿಯೊಳಗೆ ಇರುಳು ಹಗಲೆನ್ನದೆ
ನಾನು ಅಪ್ಪಾ ಅಯ್ಯಾ ಎಂದು ಅಱಸುತ್ತ ಹೋದರೆ,
ನಾನಿದ್ದೇನೆ ಬಾ ಮಗನೆ ಎಂದು ಕರೆದೆನ್ನ ಕಂಬನಿಯ ತೊಡೆದು,
ತನ್ನ ನಿಜವ ತೋಱದ ದೇವನ ಪಾದವಿಂದೆನ್ನಲ್ಲಿಗೆ ನಡೆದು ಬಂದರೆ,
ನಾನಱಯದೆ ಮರುಳುಗೊಂಡೆನೆಂದು ಎನ್ನ ಮನದೊಳಗೆಚ್ಚಱ ಮಾಡಿದ.
ಆತನನಱಸಿಕೊಂಡು ಬಂದೆನ್ನ ಹೃದಯದಲ್ಲಿ
ಇಂಬಿಟ್ಟುಕೊಂಬೆನೆನ್ನ ಕಪಿಲಸಿದ್ಧಮಲ್ಲಿಕಾರ್ಜುನನಾ.[2]

೧. ಶೂ. ಸಂ. ಪು. ೪೨, ವ. ೨೫.   ೨. ಶೂ. ಸಂ. ಪು. ೪೩, ವ. ೨೯.

ಶ್ರೀಶೈಲ ಪರ್ವತದ ಅಟ್ಟಡವಿಯಲ್ಲಿ ಹಲವು ಹಂಬಲಿಸಿ ತೊಳಲಿ ಬಳಲಿದರೆ ತನ್ನ ನಿಜ ಸ್ವರೂಪವನ್ನು ತೋರಿದ ಕಪಿಲಸಿದ್ಧ ಇಂದು ತಾನೆ ಸೊನ್ನಲಿಗೆಗೆ ನಡೆದು ಬಂದರೆ ಸಿದ್ಧರಾಮ ಗುರುತುಹಿಡಿಯದೆ ಹೋದ. ಯಾವ ಮಾಯೆ! ಎಂಥ ಮರವೆ! ಪ್ರಭುಲಿಂಗದ ಬೆಳಗು ಬಿಸಿಲಾಗಿ ತಾಗಿದರೆ 'ಹಣೆಗಣ್ಣ'ನ ಮರವೆಯಲ್ಲಿ ಮೈಮರೆದೊರಗಿದ್ದ ಸಿದ್ಧ ಹಣೆಗಣ್ಣಿಗೆ ನಾಚಿ ಅರಿವಿನ ಕಣ್ಣನ್ನು ಉಜ್ಜಿಕೊಂಡು ಎದ್ದ. ಎದ್ದು ನೋಡಿದರೆ ಮಲ್ಲಿಕಾರ್ಜುನನೆ ಬಂದಿದ್ದಾನೆ ಎಂಬ ಅರಿವು ಹೃದಯದಲ್ಲಿ ನಿಚ್ಚಳವಾಗಿ ಹೊಳಹು ದೋರಿತು. ಹೃದಯದ ದೇವ ಹೊರಗಿಂದ ಸುಳಿದು ಬಂದರೆ ಆತನನ್ನು ಇದಿರುಗೊಂಡು ಮತ್ತೆ ಹೃದಯವನ್ನೆಲ್ಲ ಇಂಬುಮಾಡಿ ಇಟ್ಟುಕೊಳ್ಳುವೆನೆಂದು ಹೊರಟ ಸಿದ್ಧರಾಮಯ್ಯ.

ತಮ್ಮ ಗುರುಮೂರ್ತಿಯ ಕಾರ್ಯ ಕೈಗೂಡುವ ಬಗೆ ಹೇಗೆ ಎಂಬ ಸಂಕೋಚ ಗುಡ್ಡರಿಗೆ. ಇದಕ್ಕೆ ಕಾರಣ ಬಂದ 'ಇಂದ್ರಜಾಲಕ'ನ ವಿಗಡಸ್ವರೂಪ, ವಿಗಡಚರಿತ್ರ. 'ದೇವಾ, ಆತನು ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ, ಕಾಯವಿದ್ದೂ ಕಾಯವಿಲ್ಲ. ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹಿ ತಪ್ಪಿರಿ?'[೧] ಗುಡ್ಡರ ಈ ಸಮಸ್ಯೆ ಗುಡ್ಡರಿಗೆ ಅಭೇದ್ಯ, ಗುರುವಿಗಲ್ಲ. ತಾನೂ ಕಾಯವನ್ನು ಕಳೆದು ಅಕಾಯನಾಗಿ ನಿಂತರೆ? ಆತ ಬಿಟ್ಟುದನ್ನು ಬಿಟ್ಟರೆ? ಕಾಯಕ್ಕೆ ನೆಳಲುಂಟು, ಕಾಯ ಸುಳಿದರೆ ಹೆಜ್ಜೆಯುಂಟು. ಆದರೆ ಅಕಾಯಕ್ಕೆ? ಆತನಾಗಿರುವ ಗತಿಯೆ ತಾನಾಗಿದ್ದರೆ? ಮದಹಸ್ತಿಯನ್ನು ಮದಹಸ್ತಿಯೆ ಆಗಿ ಹಿಡಿದರೆ? ಆತನ ಬೆಂಬಳಿಯಲ್ಲಿಯೇ ಹೆಜ್ಜೆಯಿಲ್ಲದೆ ನಡೆದರೆ? 'ಎನ್ನ ಪ್ರಾಣವನವನ ಮೇಲೆ ಇಕ್ಕಿ ನೆರೆವೆ ಕಪಿಲಸಿದ್ಧಮಲ್ಲಿಕಾರ್ಜುನನಾ.' ನಿಷ್ಪ್ರಾಣವಾಗಿ ಅಕಾಯವಾಗಿ

ಪರಿದು ಹತ್ತುವೆನವನ; ಹತ್ತಿ ಮನವ ಮುಟ್ಟಿ ಹಿಡಿವೆನವನ.
ಮಹಾಪ್ರಚಂಡ ಮನದಿಂದ ಕಪಿಲಸಿದ್ಧಮಲ್ಲಿಕಾರ್ಜುನನ ಹಿಡಿವೆನು.[೨]

ಇಂಥ ಮನೋಧೈರ್ಯ ಶಿವಸಿದ್ಧನದು. ಮತ್ತೆ ಆತನ–ಪ್ರಭುದೇವರ–'ಕೋಪಾರೂಢಿಯಿಂದೊಗೆದ ಅಂಗಾಲ ಕಣ್ಣಿನ ಮಹಾಜ್ವಾಲೆಯ'ನ್ನು 'ಅಘನ ಪಾದಕ್ಕೆ ಎನ್ನ ನೊಸಲ ತಂಪು ತಂದು ತಳಿವೆ.' ಅದನ್ನು ಉಪಶಮಿಸುವೆ. ಪಾದದ ಮೇಲೆ ಹಣೆ ಬಿದ್ದುರುಳಿದರೆ, ಸರ್ವಾಂಗ ಪಾದಕ್ಕೆ ಮಣಿದರೆ ಸಿಟ್ಟು ಇಳಿಯದ ದೇವನಾರು? ಶರಣೆಂದರೆ ತಿಳಿಯಲೊಲ್ಲದ ಮುನಿಸೆಂಥದು? ಹೀಗೆ ಶಿಷ್ಯರೊಡನೆ ಪ್ರಸಂಗಿಸುತ್ತ ನೊಸಲ ತಂಪಿನಲ್ಲಿ ಅಮೃತವನ್ನು ತುಂಬಿಕೊಂಡು ಪ್ರಭುವಿನೆಡೆಗೆ ಧಾವಿಸಿ ಬರುತ್ತಾನೆ,– ಸಂತಾಪ ಅನುತಾಪದಿಂದ ನೊಂದು ಬೆಂದು ಪಾಕವಾದ ಶರಣರಾಮ.

---

೧. ಶೂ. ಸಂ. ಪು. ೪೪, ಪ್ರ. ೩೧.
ಶೂನ್ಯಸಂಪಾದನೆಯ ತುಂಬೆಲ್ಲ ಪ್ರಭುದೇವ 'ಬಯಲೊಡಲುಗ' 'ಬಯಲುದೇಹಿ' ಎಂದೇ ಚಿತ್ರಿಸಲ್ಪಟ್ಟಿದ್ದಾನೆ. ಬಯಲು ಭಿತ್ತಿಯ ಚಿತ್ತಾರವೇ ಈ ನಿರಾಕಾರ ಸಾಕಾರ.

೨. ಶೂ. ಸಂ. ಪು. ೪೪, ವ. ೩೩.

ಪ್ರಭುಲಿಂಗದೇವರ ಶ್ರೀಮೂರ್ತಿಯ ದಿವ್ಯದರ್ಶನ! 'ನೋಡಲಿಲ್ಲದ ಶೃಂಗಾರ' ಈ ಮಹಾದರ್ಶನ! ಕಂಡ ಕಣ್ಣು ನೋಡುವ ಸಾಮರ್ಥ್ಯವಿಲ್ಲದೆ ಬೆಚ್ಚಿ ಬೀಳುವ ಅಖಂಡ ತೇಜೋರಾಶಿ. 'ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿ ಯಾನವು. . . ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ತೇಜ ಮೂಱು ಲೋಕವ ನುಂಗಿದರೆ ನಾನು ನೋಡಿ ಕಣ್ಣ ಮುಚ್ಚುತಿರ್ದೆನು,'[೧] ಎಂದು ಸಿದ್ಧರಾಮ ಕಂಡು ಹೇಳಿದ ತೇಜೋ ಮೂರ್ತಿಯೆ ಈ ಶ್ರೀಮೂರ್ತಿ. 'ನೀನು ಶತಕೋಟಿ ಸೂರ್ಯಪ್ರಕಾಶಕ್ಕತೀತನು,'[೨] ಎಂದು ಅತೀತ ಪ್ರಕಾಶದ ಪ್ರಖರಕ್ಕೆ ಕಣ್ಣುಮುಚ್ಚಿ, ಸಿದ್ಧರಾಮನ ಹೃದಯ ಆನಂದಭರ ದಲ್ಲಿ ಉಕ್ಕಿ ಹಾಡುತ್ತದೆ:

> ಅಱಲುಗೊಂಡ ಕೆಱೆಗೆ ತೊಱೆ ಬಂದು ಹಾಯಿದಂತೆ,
> ಎಲೆ ಅಯ್ಯಾ, ನಿಮ್ಮ ಕಂಡು ಕಂಗಳು ಕಡೆಗೋಡಿವರಿದವಯ್ಯಾ !
> ಎನ್ನ ಮನಕ್ಕೆ ಮನ ವೇದ್ಯವಾದರೆ ಕೈಮಱೆದೆನೆಲೆ ಹಾ !
> ಅಯ್ಯಾ, ಕಪಿಲಸಿದ್ಧಮಲ್ಲಿನಾಥನ ಕಂಡ ಸುಖವು ಆರಿಗೆಯೂ ಇಲ್ಲ.[೩]

ಬತ್ತುವ ಕೆರೆಗೆ ಹೊಳೆಯೆ ಹರಿದು ಬಂದರೆ ತಂಪು ಆನಂದವೆ ಹರಿದು ಬಂದಂತಲ್ಲವೇ? ಕೆರೆಭಾವಿಯಲ್ಲಿ ಬತ್ತುತ್ತಿದ್ದ ಸಿದ್ಧನಲ್ಲಿಗೆ ಪ್ರಭುದೇವ ದಯಮಾಡಿಸಿದರೆ ಸಿದ್ಧರಾಮ ತುಂಬಿ ಕಣ್ಣಲ್ಲಿ ತುಳುಕಿದ. ಒಳಗೊಳಗೆ ಕರುಳು 'ತೊಱೆ' ಹಾಯ್ದು ಬರುತ್ತಿದೆ, ಬಂದಿದೆ ಎಂದು ನಿಶ್ಶಬ್ದದಲ್ಲಿ ನುಡಿದರೂ 'ಅಹಂಕಾರಪಂಜರ'ದಲ್ಲಿ ಭದ್ರವಾಗಿ ಮಲಗಿದ ಬುದ್ಧಿಗೆ ಆ ನುಡಿ ಅರ್ಥವಾಗದೆ ಹೋಯ್ತು. 'ಕೈಮಱೆದೆನೆಲೆ ಹಾ!' ಆದರೆ ಮಗು ಕೈತಪ್ಪಿ ದರೂ ತಾಯಿ ಬಿಡುವಳೇ? ಬೀಳುವ ಭಯದಿಂದ ಪಾರಾಗಿ ತಾಯ ಮಡಿಲಲ್ಲಿದ್ದ ಶಿಶುವಿನ ಸುಖ ಸುಖಕ್ಕೆ ಗೊತ್ತು.

ಪ್ರಭುದೇವರ ಶ್ರೀಪಾದಕ್ಕೆ ಹಣೆ ಹಚ್ಚಿ ನಮಸ್ಕಾರ ಮಾಡಿದ ಸಿದ್ಧರಾಮ. ನಮಸ್ಕಾರ ಮಾಡುವ ಸಿದ್ಧರಾಮನ ನಾನು ಓರೆಯಾಗಿ ಮರೆಯಾಯ್ತು. 'ತನ್ನುವ ಮಱೆದು' ಪ್ರಭುದೇವರ ಸ್ತೋತ್ರಮಾಡಿದ,—ಹಮ್ಮಿನ ಪಂಜರದಿಂದ ಹೊರಬಿದ್ದ ರಾಮ:

> ನಿಮ್ಮ ನಿಜದಂತುವನಾರು ಬಲ್ಲರಯ್ಯಾ?
> ಚತುರ್ದಶ ಭುವನಂಗಳೆಲ್ಲವು ನಿಮ್ಮ ಕರಸ್ಥಲದೊಳಡಗಿಪ್ಪವಯ್ಯಾ !
> ನಿಮಗೆಣೆಯಪ್ಪ ದೇವರುಂಟೇ ಕಪಿಲಸಿದ್ಧಮಲ್ಲಿಕಾರ್ಜುನಾ?

ಪ್ರಭುದೇವಾ, ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ನಿಜಗಂಭೀರದ ನೆಲೆಯನ್ನು ಕಂಡವ ರಾರು? ತುದಿಮೊದಲಿಲ್ಲದ ಅಪಾರವನ್ನು ಈಸಿ, ದಂಡೆಯಿಲ್ಲದ ದೇವರನ್ನು

---

೧. ಶೂ. ಸಂ. ಪು. ೪೦, ವ. ೧೬. ೨. ಶೂ. ಸಂ. ಪು. ೪೫, ವ. ೩೬.
೩. ಅದೇ ಪು. ೪೪. ವ. ೩೫.

ಮುಟ್ಟಿದ ಮಹಿಮರಾರು? ಅನಂತ ಭುವನ ಬ್ರಹ್ಮಾಂಡಗಳು ನೊರೆ ತೆರೆಯೆದ್ದು ನಿಮ್ಮ ಕರಸ್ಥಲದಲ್ಲಿಯೆ ಮುಳುಗಿ ಮಾಯವಾಗುವುವೆಂದರೆ ಯಾವ ದೇವರು ನಿಮಗೆ ಸರಿಸಮ? ಆ ಹೆಸರು ಈ ಹೆಸರು, ಆ ರೂಪ ಈ ರೂಪದ ದೇವರು ದೇವರೇ? ಹೆಸರಿಟ್ಟು ಕೊಂಡ ದೇವರೆಲ್ಲ ಹೇಳ ಹೆಸರಿಲ್ಲದೆ ಹೋದವು. ರೂಪತೊಟ್ಟ ದೇವರೆಲ್ಲ 'ಪ್ರಳಯ' ಕ್ಕೊಳಗಾದರು. ಎಲ್ಲ ದೇವರು ನಿಮಗೆ ಕೈಮುಗಿದರು. ನಿಮ್ಮ 'ನಿಜದಂತುವ' ಕಾಣಲೆಂದು ಹವಣಿಸಿದರು. ಆದರೆ ದೇವಾ, ಹರಿ ಬ್ರಹ್ಮಾದಿಗಳು. ಯತಿಗಳು ವ್ರತಿಗಳು, ದೇವಾನುದೇವತೆಗಳು ಮನುಮುನಿಗಳಿಗೆ ನಿಮ್ಮ ತಲೆಯು ಎತ್ತರ, ಹತ್ತಿ ಹತ್ತಿದಂತೆ ಮತ್ತೆ ಮತ್ತೆ ಎತ್ತರವಾಯ್ತು; ನಿಮ್ಮ ಕಾಲ ತಳ. ಇಳಿ ಇಳಿದು ಇಣಿಕಿದಂತೆ ಇನ್ನೂ ಇನ್ನೂ ಕೆಳಗಿಳಿಯಿತು; ನಿಮ್ಮ ಒಳಗೆ ಮುಳುಗಿ ನೋಡುವೆವೆಂದರೆ. ಯಮನಿಯಮದ ಯತಿವ್ರತಿಗಳಿಗೆ ಯಮ ನಿಯಮ ವ್ರತ ಉಪವಾಸಗಳೆ ಕಂಡವಲ್ಲದೆ ನೀವು. ನಿಮ್ಮ ನಿಜಾಂತರಂಗ ಕಾಣಲಿಲ್ಲ. ನೂರುಕೋಟಿ ಸೂರ್ಯರು ಸಾವಿರಕೋಟಿ ಚಂದ್ರಮರು ಕೋಟಿಕೋಟಿ ನಕ್ಷತ್ರಕರು ಹಿಂಡುಗಟ್ಟಿಕೊಂಡು ಬಂದು ಗುಂಪಾಗಿ ಬೇಗ ನಿಮ್ಮ ಬೆಳಗ ಕಂಡು ಹಿಡಿದಿಹೆವೆಂದರೆ. 'ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲಂಜಿಯರು.' ಖಂಡಿತವಲ್ಲದ, ಅಖಂಡಪರಿಪೂರ್ಣವಾದ, ಎಲ್ಲ ಕೋಟಿಯ ಬೆಳಗುಗಳಿಗೆಲ್ಲ ಮೂಲ ಮಹಾಬೆಳಗಾದ, ಅರಿವಾಗಿ ಉರಿವ ಚಿದ್‌ಬೆಳಗನ್ನು ಸೂರ್ಯಚಂದ್ರಮರು ಕಾಣುವುದೆಂತು?

ಹೃದಯವರಳಿ. ಹೃದಯಗರ್ಭದಿಂದ ಹೊಗರೇರಿ ಹೊಮ್ಮಿದ ಸ್ತೋತ್ರ ಹಮ್ಮಳಿದ ಸಿದ್ಧನನ್ನು ಹಾಡಿನಲ್ಲಿ ಬೀರುತ್ತದೆ. ಸಿದ್ಧನಿಗೂ ಈ ಧ್ಯಾನ ಈ ಸ್ತೋತ್ರ ಎಲ್ಲಿಂದ ಮೂಡಿ ಬರುತ್ತಿದೆ ಎಂಬ ಅರಿವೂ ಜಾಗ್ರತವಾಗಿದೆ. 'ನಿಮ್ಮ ನೆನೆವವ ನಾನಲ್ಲ ಕಂಡಯ್ಯಾ.' ಹಾಗಾದರೆ ಹೊಗಳುವರಾರು? ಹೊಗಳಿಸಿಕೊಂಬವರಾರು? ನೆನೆವವರಾರು? ನೆನಹಿಸಿಕೊಂಬವರಾರು? 'ನೆನೆಸುವೆ, ಮಜಿಸುವೆ' ನೀನು ಅಂದರೆ ಪ್ರಭುದೇವ. ಅಂದರೆ ಕಪಿಲಸಿದ್ಧಮಲ್ಲಿಕಾರ್ಜುನ. ಲಿಂಗಕ್ಕೆಯೆ ಲಿಂಗದ ನೆನಹಲ್ಲದೆ ಅಂಗದ ಮಾನವನಿದ್ರೆಯಲ್ಲಿ ಮಲಗಿರುವ ಮನುಷ್ಯನಿಗೆ ಲಿಂಗದ ನೆನಪು ಹಾರಿ ಹೋಗಿದೆ ಅಥವಾ ಹಾರಿಹೋದಂತಿದೆ. ದೇವನ ಕಲ್ಪನೆ. ದೇವನ ಭಾವನೆ. ದೇವನ ಪೂಜೆ ಭಕ್ತಿ ಧ್ಯಾನ ಜ್ಞಾನ ಸ್ತೋತ್ರ ವಂದನ ಮುಂತಾದುವು ಅಭಾಸ ಅಭ್ಯಾಸ ಅನುಕರಣವಲ್ಲದೆ ಮೂಲ ಘಟ್ಟಿಯಾಗಿ ಮೊಳಕೆಯೊಡೆವುದು ಮಾನವಹೃದಯದ ಗರ್ಭಗುಡಿಯಿಂದಲೆ. ವೇದಾಗಮ. ಕಾವ್ಯಸ್ತೋತ್ರ, ಮಂತ್ರಸ್ತೋತ್ರಗಳ ಮೂಲ ಉಗಮ ಈ ಗುಡಿಯ ದಿವ್ಯಸನಾತನವೇ. ವೇದ ಆಗಮಾದಿಗಳು ದೇವಮುಖದಿಂದ ಬಂದವೆಂಬುದರ ಅರ್ಥ ಇದೇ. ಮನುಷ್ಯಗ್ರಂಥ ಮನುಷ್ಯನಿಗೇ ಮುಗಿದಿಲ್ಲ. ಈ ಪುಸ್ತಕಕ್ಕೆ ದ್ವಿತೀಯ ಸಂಪುಟವಿದೆ. ಮನುಷ್ಯ-ಅಧ್ಯಾಯ ಮುಂದುವರಿದು ಅಥವಾ ಒಳಗುವರಿದು ದಿವ್ಯ ಅಧ್ಯಾಯ ಪ್ರಾರಂಭವಾಗುತ್ತದೆ. ಮುಂದೆ. ಅತ್ತಾಚೆ ಓದುತ್ತ ತಿಳಿಯುತ್ತ ನಡೆದರೆ, ಮಾನವನಿಗೆ ಅಂತಃಪ್ರಭುದೇವ. ಪ್ರಭುಲಿಂಗ ಅಥವಾ ನಾಮ ಸೀಮೆಯಿಲ್ಲದ ಅನಾದಿ ಅನಂತ ಎರಡನೆಯ ಸಂಪುಟವೆಂಬ ಎಚ್ಚರ ಏಳುತ್ತದೆ. ಈ ಎಚ್ಚರದಲ್ಲಿ

ಎದ್ದರೆ ಲಿಂಗವು ಕಾಣಬರುವುದು, ಧ್ಯಾನಿಸಬರುವುದು, ಸ್ತೋತ್ರಮಾಡಲು ಬರುವುದು. ಈ ಎಚ್ಚರವಿಲ್ಲದ ಮಾನವನನಿದ್ರೆಯ ಸ್ತೋತ್ರ ಕತ್ತಲೆಯ ಸೀಮೆಯ ಕನವರಿಕೆ. ಪದ ಪದ್ಯ ಮಂತ್ರ ಧ್ಯಾನ ನಾಲಗೆಯ ನಿದ್ರೆಯಲ್ಲಿ ನುಡಿವ ಅಪಲಾಪ. ದೇವನನ್ನು ನೆನೆವ ಶಕ್ತಿ ದೇವನದು, ನೆನೆವ ಚೈತನ್ಯ ದೇವನದು. ಈ ಚೈತನ್ಯವೆದ್ದು ನಾಲಗೆಯನ್ನೆಬ್ಬಿಸಿ ನುಡಿದರೆ ಅದೇ ಮಂತ್ರ, ಅದೇ ಸ್ತೋತ್ರ. ನೆನೆವಂತೆ ಮಾಡುವ ಶಕ್ತಿ ದೇವನದಾದರೆ ಮರೆವಂತೆ ಮಾಡುವ ಶಕ್ತಿಯೂ ಅದೇ ಶಕ್ತಿ. ಒಂದು ಊರ್ಧ್ವಗಾಮಿನಿ ಮತ್ತೊಂದು ಅಧೋಮುಖಿ. 'ಎನ್ನ ಗುಣದೋಷ ನಿಮ್ಮದು,' ಎಂದು ಸಿದ್ಧರಾಮ ಹೇಳುವ ಮಾತಿನ ಅರ್ಥ ಇದೇ. ಅದರಂತೆ 'ನಿಮ್ಮಿಂದ ನಿಮ್ಮ ನೆನೆವೆ' ಎಂದು ಹೇಳುವ ಶಿವಸಿದ್ಧನ ನುಡಿ ಮಂತ್ರ ಸತ್ಯ. 'ನಾನು ನಿಮ್ಮ ನೆನೆವೆ, ಅಥವಾ ನನ್ನಿಂದ ನಿಮ್ಮ ನೆನೆವೆ' ಎಂಬ ಧರ್ಮನಿದ್ರೆ ತಿಳಿದೆದ್ದು 'ನಿಮ್ಮಿಂದ ನಿಮ್ಮ ನೆನೆವೆ, ನಿಮ್ಮಿಂದ ನಿಮ್ಮ ಪೂಜಿಸುವೆ'–ಎಂಬ ಗಂಭೀರ ಅನಂತಕ್ಕೆ ಎಚ್ಚತ್ತರೆ 'ಸನಾತನ ಧರ್ಮ'ದ ದಿವ್ಯ ರಸರುಚಿ ಮಾನವನ ನಾಲಗೆಗೆ ಹತ್ತುತ್ತದೆ. ಆಗ 'ಕಲ್ಪಿಸಿಕೊಂಡು ಹುಟ್ಟಿಸಿದ ಮಾತಲ್ಲ ನಿಜಧರ್ಮ' ಎಂಬ ಮಾತು ತಾನೆ ಹೊಳೆಯಬಹುದು.

ಈ ಧರ್ಮಸ್ತೋತ್ರದ ಮರ್ಮವನ್ನು ಇನ್ನೂ ಹೀಗೆ ಬಿಚ್ಚಿ ವಿವರಿಸಿ ತೋರುತ್ತಾನೆ ಶಿವಸಿದ್ಧರಾಮ:

ಸ್ತೋತ್ರವೆಂಬವು ನೀ ಮಾಡಲಾದವು ಕಂಡಯ್ಯಾ !
ಮೂರ್ತಿ ಎಂಬುದು ನೀನು ನೆನೆದಡಾದುದು ಕಂಡಯ್ಯಾ !
ಆ ಮೂರ್ತಿ ಎಂಬುದು ನಿನ್ನ ಸ್ವಭಾವ ಕಂಡಯ್ಯಾ !
ಎನ್ನ ಹೃದಯಕಮಲದೊಳಗೆ ಹುಟ್ಟುವ ಸ್ಮರಣೆ ನಿನ್ನ ಗತಿ ನೋಡಯ್ಯಾ !
ಕಪಿಲಸಿದ್ಧ ಮಲ್ಲಿನಾಥಯ್ಯಾ, ನೀನು ಸ್ತೋತ್ರಪ್ರಿಯನಲ್ಲದಿದ್ದರೆ,
ಬಾಣ ಮಯೂರ ಹಲಾಯುಧಂಗೆ ಒಲಿದೆ ಎಂತು ಹೇಳಯ್ಯಾ?[೧]

ಸತ್ಯಧರ್ಮದ ಸನಾತನಧರ್ಮದ ಗಭೀರಮರ್ಮವನ್ನು ಪ್ರಕಾಶಕ್ಕೆ ತರುವ ಸಿದ್ಧರಾಮಯ್ಯನ ಹೃದಯಾಂತರಂಗದ ಈ ವಿವರಣೆ, ವಿಶ್ವೀ ಧರ್ಮಗಳ ಪ್ರಾಣಾಂಗವಾದ ದೇವರ ಮೂರ್ತಿ ಸ್ತೋತ್ರ ಧ್ಯಾನ ಸ್ಮರಣೆಗಳ ಈ ಸುಸೂಕ್ಷ್ಮ ರಹಸ್ಯ. ಅಲ್ಲಮ ಪ್ರಭುವಿನ 'ಗೊಹೇಶ್ವರನ ನಿಲವು ಬಜಿಸಿಯ ಸ್ತೋತ್ರಕ್ಕೆ ಸಿಕ್ಕದು ಕಾಣಾ ಸಿದ್ಧರಾಮಯ್ಯ', 'ಗೊಹೇಶ್ವರನ ನಿಲವು ಮಾತಿನ ಮಾತಿಗೆ ಸಿಲುಕುವುದೆ?' ಎಂಬ ವಿಚಾರಕ್ಕೆ ಉತ್ತರ. 'ಗೊಹೇಶ್ವರನ ನಿಲವು' ಕೈಗೆ ಸಿಲುಕದು, ಕೈಗೆ ನಿಲುಕದು. ಅನಂತ ಕಾಲದಿಂದ ಹರಿದು ಹರಿದು ಮಾನವನ ಮನವೇ ಮುಟ್ಟಲಾರದ ನಿಲವನ್ನು ಕೈ ಕಾಲು. ಕಣ್ಣು ಕಿವಿ, ನಾಲಗೆ ನಾಲಗೆಯ ನುಡಿ ಮಂತ್ರ ಸ್ತೋತ್ರ ಎಂತು ಮುಟ್ಟಬಲ್ಲುವು? ಮಂತ್ರ ಸ್ತೋತ್ರ ಕಣ್ಣು ಕಿವಿ ಮನ ಬುದ್ಧಿ 'ಕಲ್ಪಿತ'ವನ್ನು ಕಂಡು ದೇವನೆಂದು ಮಹಾದೇವನೆಂದು. ಹರಿ ಹರ ಬ್ರಹ್ಮ ಈಶ್ವರ ಸದಾಶಿವ ಮುಂತಾದ ಹಲವು ಹೆಸರು ಹಲವು ರೂಪದ ಮೂರ್ತಿ

೧. ಶೂ. ಸಂ. ಪು. ೪೬, ವ. ೪೫.

ಗಳನ್ನು, ಅವರ ಮಹಿಮಾನವನ್ನು ತಂತಮ್ಮ ಮಾನದಂಡದಿಂದ ಅಳೆದಿರಬಹುದು, ಅದೇ ದೇವರ ಅಳತೆಯೆಂದು ತಿಳಿದಿರಬಹುದು. ಆದರೆ ಕಣ್ಣು ಕಿವಿ ಧ್ಯಾನ ಸ್ತೋತ್ರಗಳು 'ಅತೀತ'ವಾದ, ಅತ್ರತ್ರವಾದ ನಿಲವನ್ನು ಎಷ್ಟು ದೂರ ಮಾರುಹಾಕಿ ಅಳೆದಾವು! ಅಳೆವ ಕೋಲಿನ ಒಳಗೆಯೆ ಕುಳಿತು ಕುಲುಕುಲಿಸುವ 'ತದಂತರಸ್ಯ ಸರ್ವಸ್ಯ'ವನ್ನು 'ತದು ಸರ್ವಸ್ಯಾಸ್ಯ ಬಾಹ್ಯತಃ'ವನ್ನು ಅಳೆಯಬಲ್ಲ ದಿವ್ಯಧೀರರಾರು? ಅದಕ್ಕೆ ನಿಲುಕಿ ಧ್ಯಾನ ದಲ್ಲಿ ಮುಟ್ಟಿ ಹಿಡಿದು, ಸ್ತೋತ್ರದಲ್ಲಿ ಕಟ್ಟಿ ಹಾಡಬಲ್ಲ ಕಾವ್ಯವೀರರಾರು? ಕಣ್ಣಿನ ಅಳತೆಯಲ್ಲಿ 'ನೋಡಲಿಲ್ಲದ ಶೃಂಗಾರ'ವನ್ನು ರೂಪಿಸಬಲ್ಲ ರೂಪಕರಾರು? ನಡೆದು ನಡೆಯದ, ನುಡಿದು ನುಡಿಯದ 'ವಿಗಡ' ಚರಿತ್ರನನ್ನು ಯಾವ ಚಿತ್ರಕ ಚಿತ್ರಿಸಬಹುದು?

ಅಲ್ಲಯ್ಯನ ಇವೇ ಮುಂತಾದ ಪ್ರಶ್ನೆಗಳಿಗೇ ಸಿದ್ಧರಾಮನ ಉತ್ತರ: ಮಾನವ ಹೃದಯದಲ್ಲಿ ಕುಳಿತಿದ್ದು ನಿನ್ನ ನೀನೇ ನೆನೆದರೆ, ಆ ನೆನಹೇ ಗಟ್ಟಿಗೊಂಡು ಮೂರ್ತಿ ಯಾದೆ; ನಿನ್ನ ಮೂರ್ತಿಯ ಮಹಾವೈಭವವನ್ನು ನೀನೆ ಕೊಂಡಾಡಿ ಕೊನರಿದರೆ ಮಂತ್ರ ಸ್ತೋತ್ರ ಪದ ಪದ್ಯಗಳಾದವು; ನಿನ್ನ ವೈಭವವನ್ನು ಸ್ಮರಿಸುವ, ನಿನ್ನ 'ಮಹಿಮಾನ'ವನ್ನು ಚಿಂತಿಸುವ ಚಿಂತನೆ ಸ್ಮರಣೆಯು ಚೈತನ್ಯವಿಹಾರ ಮಾನವಹೃದಯಾಂತರಂಗದಲ್ಲಿ ನಡೆ ದಾಡುವ ನಿಮ್ಮ ಗತಿಯೇ. 'ನಿಮ್ಮಿಂದ ನಿಮ್ಮ ನೆನೆವೆ.' ಮೂರ್ತಿ ಧ್ಯಾನ ಸ್ತೋತ್ರವೆಲ್ಲ ವ್ಯರ್ಥಕ್ಕೆ ಹುಟ್ಟಿದವೇ? ಮನುಷ್ಯಪ್ರಾಣಿಯ ಎದೆಯ ಗವಿಯಲ್ಲಿ ಅನಾದಿಕಾಲದಿಂದ ಈ ಹೊಳ್ಳು ಹುಚ್ಚು ತಾಂಡವವಾಡುತ್ತ ಬಂದಿದೆಯೆ? ಬಾಣ ಮಯೂರ ಏಕೆ ಹಾಡಿ ದರು? ಅವರಿಗೆ ಹೇಗೆ ಒಲಿದೆ? ಏಕೆ ಒಲಿದೆ?

ಸಿದ್ಧರಾಮಾ, ಮಾತಿನ ಬಣ್ಣ 'ಗೊಹೇಶ್ವರನ ನಿಲವಿ'ನ ಬಣ್ಣದ ರೀತಿಯಲ್ಲ. ಮಾತು ರೂಹಿಸುವ ಹಲವು ಬಣ್ಣವನ್ನು ಹಡೆದು ತನಗಾವ ಬಣ್ಣವೂ ಇಲ್ಲದ ನಿರ್ವರ್ಣ ನಿಲವನ್ನು, ನಿರಾಳವಾದ ನಿಶ್ಶಬ್ದ ಬ್ರಹ್ಮವನ್ನು, ಬಣ್ಣವಿಟ್ಟು ನುಡಿವ ಪದ ಪದ್ಯ ಮಂತ್ರ ಸ್ತೋತ್ರಾದಿ ಗಳು ಹೇಗೆ ಹಿಡಿಯಬಲ್ಲವು? ಬಾಣ ಮಯೂರ ಹಲಾಯುಧನಿರಲಿ, ಮತ್ತಾವ ಸ್ತೋತ್ರ ಪದ ಪದ್ಯಕಾರನೆ ಇರಲಿ, ಇವರೆಲ್ಲರ ಮಾತಿನ ಬಣ್ಣ ಒಂದಿಲ್ಲೊಂದು 'ಮೂರ್ತಿ'ಯನ್ನು ಬಣ್ಣಿಸಿತು. ಆದರೆ ಮೂರ್ತಿ 'ಕಲ್ಪಿತ,' ಪ್ರಳಯಕ್ಕೊಳಗು. ಭಾವದಲ್ಲಿ ಭಾವಿತವಾಗಿ ಮಾತಿನಲ್ಲಿ ಮೂರುತಿಗೊಂಡು ಪ್ರಳಯದ ಬಾಧೆಗೆ ಒಳಗಾಗಿ 'ಹುಟ್ಟಿ ಸಾವ' ಯಾವ ದೇವಮೂರ್ತಿಯೆ ಇರಲಿ ಆ ದೇವ ದೇವರೇ? ಆತ ಗೊಹೇಶ್ವರನ ನಿಲವೇ? ವೇದ ಶಾಸ್ತ್ರ ಆಗಮ ಪುರಾಣ ಕಾವ್ಯವೆಲ್ಲ ಮಾತು, 'ವಚನ ರಚನೆ.' ಅವೂ ಅನುಭವದ ಮಾತು ನಿಜ. ಆದರೆ ಈ ಅನುಭವದಾಚೆ ಇನ್ನೂ ಅನುಭವವಿದೆ ಸಿದ್ಧರಾಮಾ.

ಪ್ರಭುವಿನ ಈ ವಿಚಾರ ಸಿದ್ಧರಾಮಯ್ಯನಿಗೆ ಒಪ್ಪಿಗೆ. ಆದರೆ ವೇದ ಶಾಸ್ತ್ರ ತರ್ಕ ಜ್ಞಾನಗಳಿಗೆ 'ವಚನ ರಚನೆ'ಗೆ ನಿಲುಕದ 'ನೀನು', 'ಗೊಹೇಶ್ವರನ ನಿಲವು' 'ಭಕ್ತಿ ಪ್ರಿಯ'ನಲ್ಲವೇ? ವೇದ ನಾದಕ್ಕೆ ಸ್ತೋತ್ರ ಪದ್ಯಕ್ಕೆ ನಿಲುಕದ ನಿಲವು ಆ ಪದ್ಯದಲ್ಲಿ ಹೊಮ್ಮುವ ಹೃದಯರಸ. ಭಕ್ತಿ ನಿನಗೆ ಪ್ರಾಣರುಚಿಯಲ್ಲವೇ? ಈ ರಸವೇ ದನಿ ಮಾಡಿ ಹಾಡಿದರೆ ನೀನು ಒಲಿಯದಿರುವುದು ಹೇಗೆ?—ಎಂಬ ಸಿದ್ಧರಾಮನ ಪ್ರಶ್ನೆಗಳು ಪ್ರಭುವಿನಿಂದ ಭಕ್ತಿಯ ಗಂಭೀರವನ್ನು ಎತ್ತಿ ತೋರಿಸುವಂತೆ ಮಾಡುತ್ತವೆ:

ಭಕ್ತಿಯುಕ್ತಿಯನಾರು ಬಲ್ಲರು?
ಬಲ್ಲವರನಾರನೂ ಕಾಣೆ.
ತನ್ನ ಮಱೆದು ಇದಿರ ಹಱಿದು ಇರಬಲ್ಲರೆ ಆತ ಭಕ್ತ;
ಆ ಭಕ್ತಂಗೆ ಶಿವನೊಲಿವ.
ನುಡಿಯಲ್ಲಿ ಭಕ್ತಿಯನಾಡಿ ನಡೆಯಿಲ್ಲದಿದ್ದರೆ ಕಡೆ ಮುಟ್ಟ;
ಶಿವನೊಲಿವುದು ಹುಸಿ.
ಮಱೆದು ಕೋಪದುರಿಯನುಗುಳಿ, ಅಱಿದು ಬಂದೆಱಗಿದೆನೆಂಬ ನುಡಿಗೆ
ಒಲಿವನೆ ನಮ್ಮ ಗೊಹೇಶ್ವರಲಿಂಗವು?[೧]

ನುಡಿಯಲ್ಲಿ ನುಡಿವ ಭಕ್ತಿಗೆ ನಡೆಯಲ್ಲಿ ನಡೆವ ಸಾಮರ್ಥ್ಯವಿಲ್ಲದಿದ್ದರೆ ಅದೆಂಥ ಭಕ್ತಿ ಸಿದ್ಧರಾಮಾ! ನುಡಿ ನಡೆಯಲ್ಲಿ ತುಂಬಿ ನಡೆದರೆ, ನಡೆ ನುಡಿಯಲ್ಲಿ ತುಂಬಿ ನಡೆದರೆ ಅದು ಭಕ್ತಿ ಅದು ಯುಕ್ತಿ ರಾಮಾ. ವೇದಾಗಮ ಪುರಾಣಗಳ ಸಂಪ್ರದಾಯಭಕ್ತಿಗೆ 'ತನ್ನ ಮಱೆದು ಇದಿರ ಹಱಿದಿರಬೇಕೆಂಬ ಭಕ್ತಿಯ ಯುಕ್ತಿ ಇನ್ನೂ ಹೊಳೆದಿಲ್ಲ ಸಿದ್ಧಾ. ಭಕ್ತಿಯ ಸಹಜಮಾಟದಲ್ಲಿ ಮಾಡುವ ಭಕ್ತನಿಲ್ಲ, ಇದಿರಿಟ್ಟು ಮಾಡಿಸಿಕೊಳ್ಳುವ ದೇವ ನಿಲ್ಲ. ಈ ಸಹಜಭಕ್ತಿಯಲ್ಲಿ ತಾನು ದೇವರೆಂಬ ಕೃತಕ ಭಿನ್ನವಿಲ್ಲ, ಕಲ್ಪಿತಭಾವವಿಲ್ಲ. ತಾನು ತನಗಿದಿರು ಈ ಉಭಯವಳಿದ ಐಕ್ಯಭಕ್ತಿಯಲ್ಲಿ ಒಮ್ಮೆ ಮರೆದೆ ಮತ್ತೆ ಅರಿದೆನೆಂಬ ಕತ್ತಲೆ ಬೆಳುದಿಂಗಳಿಲ್ಲ. 'ಮಱೆದು ಕೋಪದುರಿಯನುಗುಳಿ, ಅಱಿದು ಬಂದೆಱಗಿದೆ ನೆಂಬ ನುಡಿಗೆ ಒಲಿವನೆ ನಮ್ಮ ಗೊಹೇಶ್ವರಲಿಂಗವು?

ತನ್ನ ಅರಿವು ಮರವೆ, ಸಹಜಭಕ್ತಿಯ ನೆಲೆಯನರಿಯದೆ ಒಚ್ಚಿ ಶುದ್ಧ ಒಚ್ಚಿ ತಾಮಸವಾದ ತನ್ನ ಕಲಬೆರಕೆಯ ಭಕ್ತಿ, ತನ್ನ ಹಣೆಗಣ್ಣಿಂದ ಉರಿಯುಗುಳಿದ ತನ್ನ ಕೋಪ, ಪ್ರಭುವಿನ ಜ್ಞಾನದ ತೇಜದ ಮುಂದೆ ಪ್ರತಿಹತವಾಗಿ ಮಂಕಾಗಿ ಬಂದು ನಿಂದ ವಿನಯ—ಇವೆಲ್ಲ ತನ್ನಲ್ಲಿ ಮೂಡಿ ತನ್ನ ಸಣ್ಣತನವನ್ನು ಬೀರಿದವೆಂಬ ಮಾತನ್ನು ಸಿದ್ಧರಾಮ ಒಪ್ಪಿಕೊಳ್ಳುತ್ತಾನೆ. ಆದರೆ 'ಅವಶ'ವಾಗಿ ತನ್ನಲ್ಲಿ ತೋರಿದ ಅವಗುಣವನ್ನು ಒಳಗೆ ಕುಳಿತು ಚೋದಿಸಿದ 'ಹೃದಿಸ್ಥಿತ' ಮೂರ್ತಿಯಾರು? 'ಎನಗೆ ಬೇಱೆ ಸ್ವತಂತ್ರ ಉಂಟೇ ಕಪಿಲಸಿದ್ಧಮಲ್ಲಿನಾಥಾ?' ಸಟೆ ನಿಮ್ಮ ತಂತ್ರ, ದಿಟ ನಿಮ್ಮ ತಂತ್ರ; ಅರಿವು ಮರವೆ ನಿಮ್ಮ ಸ್ವ-ತಂತ್ರ, ಕೋಪ ವಿನಯ ಯಂತ್ರವಾಹಕ, ಹೃದಯಸಾರಥಿ ಕಪಿಲಸಿದ್ಧ ಮಲ್ಲಿನಾಥನ ಅಂದರೆ ಪ್ರಭುದೇವನ ತಂತ್ರ. 'ತೇನ ವಿನಾ', ನಿಮ್ಮ ತಂತ್ರವಿಲ್ಲದೆ ಹೊರಗೆ ಒಂದು ಕಡ್ಡಿ ಕೊಂಕಲಿಲ್ಲ, ಒಳಗೆ ಒಂದು ನಸು ಹುಟ್ಟಲಿಲ್ಲ.

ತನ್ನ ಅರಿವು ಮರವೆಯ ಅವಗುಣ, ಕುಂದುಕೊರತೆ ನಿಮ್ಮ 'ಸ್ವತಂತ್ರ'ವೆಂದು ಹೇಳಿದ ಸಿದ್ಧರಾಮನ ಮಾತು ತತ್ತ್ವದೃಷ್ಟಿಯಿಂದ ಒಪ್ಪತಕ್ಕುವೇ. ಆದರೆ ತಾನು ಅವಶ, ಅಸ್ವತಂತ್ರ, ಎಲ್ಲ ದೇವವಶ ದೈವಾಧೀನ, ದೈವತಂತ್ರವೆಂದರೆ ಗುಣ ಅವಗುಣ, ನೀತಿ ಅನೀತಿ, ಪಾಪ ಪುಣ್ಯ, ನ್ಯಾಯ ಅನ್ಯಾಯ, ಸತ್ಯಾಸತ್ಯ, ಧರ್ಮಾಧರ್ಮಕ್ಕೆ ಉಳಿವ ಅರ್ಥ

೧. ಶೂ. ಸಂ. ಪು. ೪೭, ವ. ೪೮.

ವೇನು? ದೈವತಂತ್ರದ ಈ ವಾದಸರಣಿಯ ಮುಖ್ಯದೋಷ 'ನಾನು ಮಾಡಿ ನಿನ್ನ ಮೇಲೆ ಹೊರಿಸುವುದು'. ಹೀಗೆ ಹೊರಿಸಿ ಜಾರುವ ಜಾಣತನವನ್ನು ಪ್ರಭುದೇವ ನೋಡಬಲ್ಲ. 'ಭಾವದ ಬಗೆಗೆ ಬಣ್ಣವಿಟ್ಟುಕೊಂಡರೆ, ನಿರ್ಭಾವಿಕಂಗೆ ಅದು ಸಹಜ ವಹುದೆ?' ದ್ವೈತದ ಬಳಕೆಯಲ್ಲಿ ತಪ್ಪುಮಾಡಿ ಆ ತಪ್ಪಿಗೆ ಅದ್ವೈತದ ಬಣ್ಣಕೊಟ್ಟು ನುಂಪಾಗಿ ನುಡಿದರೆ ಅದು ಅದ್ವೈತದ ಹೊಲ್ಲಬಳಕೆಯಲ್ಲದೆ ನಿರ್ಭಾವಸ್ಥಲದಲ್ಲಿ ನಿಂದ ನಿರ್ಭಾವಿಕನಿಗೆ (ಶರಣನಿಗೆ) ಆ ಬಣ್ಣ ಸಹಜವಾದೀತೇ? ಸಿದ್ಧರಾಮಾ. '......ಬಂದ ಶರಣರ ನಿಲವನಜಿದು, ಸಂದು ಸಂಶಯವಳಿದು ನಂಬದಿದ್ದರೆ. ಹಿಂದುಮುಂದಾಗಿ ಹೋಹನು ಕಾಣಾ ನಮ್ಮ ಗೊಹೇಶ್ವರಲಿಂಗವು.'[1] ಹೀಗೆ ನುಡಿದು ಪ್ರಭುದೇವರು ಹೊರಳಿ ನಡೆವರೆ ಸಿದ್ಧರಾಮ ಪ್ರಭುವಿಗೆ ಅಡ್ಡಬಿದ್ದು ಬಿನ್ನಯಿಸುತ್ತಾನೆ: ಹಿಡಿದು 'ಅಂಗವಲಪ್ಪಿ' ತಡೆಯಲು ಯತ್ನಿಸುತ್ತಾನೆ. ಆದರೆ ಪ್ರಭುದೇವ ಹೆಪ್ಪುಮಾಯು. 'ಬಯಲೊಡಲುಗ,' 'ಸಗುಣ ನಿರ್ಗುಣಭರಿತ.' ೮ನೆಯ ಅಧ್ಯಾಯದಲ್ಲಿ ನಾವು ನೋಡಿದ ಅಲ್ಲಮಪ್ರಭುವಿನ ನಿಲವನ್ನು ನಾವಿಲ್ಲಿ ನೆನೆಸಿಕೊಳ್ಳಬೇಕು. 'ನಿಂದರೆ ನೆಳಲಿಲ್ಲ. ನಡೆದರೆ ಹಜ್ಜೆಯಿಲ್ಲದ' ಬಯಲುದೇಹಿಯನ್ನು ದೇಹ ಪ್ರಾಣ ಭಾವ ಅಪ್ಪಲಾರವು. ಇಷ್ಟೇ ಅಲ್ಲ; '......ಭಾವಾತೀತವಾದ ನಿರಾಕಾರದ ಘನವು ಸುಜ್ಞಾನದ ಮುಟ್ಟಿಕ್ಕೆ ಅಸಾಧ್ಯ ನೋಡಾ! ಗೊಹೇಶ್ವರನ ಶರಣರ ನೀನಾವ ಪರಿಯಲ್ಲಿ ತಡೆದು ನಿಲಿಸುವೆ ಹೇಳಾ ಸಿದ್ಧರಾಮಯ್ಯಾ?'[2]

ಬಯಲನ್ನು ಬಂಧಿಸುವ ಪ್ರಯತ್ನ ವ್ಯರ್ಥವೆಂಬ ಮಾತು ಮನವರಿಕೆಯಾಯಿತು ಸಿದ್ಧನಿಗೆ. ಪ್ರಯತ್ನ ಮೀರಿದ ಮೇಲೆ ಸಿದ್ಧರಾಮನಿಗೆ ಉಳಿದ ಉಪಾಯ ಒಂದೇ ಒಂದು. ಅದು ಕಪಿಲಸಿದ್ಧಮಲ್ಲಿನಾಥನ ಅಂದರೆ ನಿರಾಕಾರಮೂರ್ತಿಯಾದ ಪ್ರಭುದೇವರ 'ಶಿವಕಾರುಣ್ಯ.' 'ಕರುಣದಿಂ ಬಾರಾ ಎನ್ನ ದೇವರ ದೇವಾ.' ಎಂದು ಎಲ್ಲ ಪ್ರಯತ್ನದ 'ಅಹಂಶಕ್ತಿ'ಯನ್ನೆಲ್ಲ ಅರ್ಪಣಮಾಡಿ ಸಿದ್ಧರಾಮ 'ತಮ್ಮ ಮಠಕ್ಕೆ ಬಿಜಯಂಗೈವುದು' ಎಂದು ಬೇಡಿಕೊಂಡರೆ ಪ್ರಭುದೇವರ ಉತ್ತರವಿದು:

ಗತಿಗೆಟ್ಟು. ಧೃತಿಗೆಟ್ಟು. ಮತಿಗೆಟ್ಟವ ನಾನಯ್ಯ.
ನಡೆವರೆ ಶಕ್ತಿಯಿಲ್ಲ; ನುಡಿವರೆ ಜಿಹ್ವೆಯಿಲ್ಲ.
ಇದಿರಲೊಬ್ಬರ ಉಪಚಾರ ಸೇರದು ನೋಡಾ ಎಮಗೆ.
ಬಂದ ಬರವನಜಿದು. ನಿಂದ ನಿಲವನಜಿದು ಕೂಡಬಲ್ಲಡೆ.
ಶರಣಂಗೆ ಬೇಜೊಂದೇಕಾಂತವೆಂಬ ಸಂದೇಹ ಉಂಟೇ?
ತೆಜಹಿಲ್ಲದ ಘನವನೊಳಕೊಂಡ ಬಳಿಕ.
ಬರಲೆಡೆಯುಂಟೆ ನಮ್ಮ ಗೊಹೇಶ್ವರಲಿಂಗಕ್ಕೆ?[3]

೧. ಶೂ. ಸಂ. ಪು. ೯೭. ವ. ೫೦. ೨. ಶೂ. ಸಂ. ಪು. ೯೮. ವ. ೫೨.
೩. ಅದೇ ಪು. ೯೮. ವ. ೫೪.

ಪ್ರಭುದೇವರ ಈ ಮಾತಿನೊಳಗೆ ದೇವರ ಎಂಥ ಮಹಾಂತ ನಿಲವು ಸಿಂದು ಶಬ್ದ ಮಾಡುತ್ತಿದೆ! ಮಠಕ್ಕೆ ಬರಲು ಎಡೆಯುಂಟೇ? ತೆರಹಿಲ್ಲದ ಘನದಲ್ಲಿ, ಪರಿಪೂರ್ಣ ಅಖಂಡ ಘನವಾದ ಗೊಹೇಶ್ವರಲಿಂಗದಲ್ಲಿ ಮಠಕಟ್ಟಲು 'ಖಾಲಿ ಜಾಗೆ' ನಿನಗೆಲ್ಲಿ ದೊರೆಯಿತು ಸಿದ್ಧರಾಮಾ? ಅಲ್ಲಿಗೆ ಬರಲು ಅಲ್ಲಮ-ನಾನು ಎಲ್ಲಿ ಎಡೆಗಟ್ಟಿಕೊಂಡು ನಿಂತಿದೆ ಸಿದ್ಧಣ್ಣಾ? ಅಲ್ಲಮ-ನಾನಿಗೆ ಗತಿ ಇಲ್ಲ ಗಮಿಸುವ ಶಕ್ತಿಯಿಲ್ಲ ಮತ್ತೆ ಹೋಗ ಬೇಕು ಬರಬೇಕು ಎಂಬ ಮತಿ ಕೆಟ್ಟುಹೋಗಿಬಿಟ್ಟಿದೆ. ಅಲ್ಲಮ–ನಾನೆಲ್ಲ ಸತ್ತ್ವಶೂನ್ಯ ವಾದ ನಡೆಯಲ್ಲಿ ಕಾಲಿಲ್ಲ, ನುಡಿಯಲ್ಲಿ ನಾನಿನ ನಾಲಗೆಯಿಲ್ಲ. ಇಂಥ ಸ್ಥಿತಿಯಲ್ಲಿದ್ದ 'ಗೊಹೇಶ್ವರಲಿಂಗ'ಕ್ಕೆ ಇದಿರು, ಉಪಚಾರದ ಮಾತೇಕೆ ರಾಮಾ? ಬಂದವರಾರು, ಬಂದರೇಕೆ, ಬಂದವರೆಂಥವರು? ಅಲ್ಲಮನಿಲ್ಲದ 'ಗೊಹೇಶ್ವರಲಿಂಗ' ಮುಂದೆ ಬಂದು ನಿಂತರೆ, ನೋಡಬಲ್ಲ ಶರಣನಿಗೆ ಭಕ್ತಿಯ ಮಾಡಬೇಕಾದರೆ ಏಕಾಂತ ಲೋಕಾಂತದ ಸಂಶಯದ ಭಿನ್ನ ಭಾವವೇಕೆ? 'ಇದ್ದ ಠಾವಿನಲ್ಲಿದ್ದು ಭಕ್ತಿಯ ಮಾಡಿ ಪರಿಣಾಮಿಸ' ಬೇಕು ಸಿದ್ಧರಾಮಾ.

ಪ್ರಭುಲಿಂಗನ ಈ ಮಾತಿಗೆ ಸಿದ್ಧರಾಮ ಕೊಡುವ ಉತ್ತರ 'ಜಂಗಮಲಿಂಗ'ದ ಮರ್ಮಸ್ಥಲವನ್ನು ಮುಟ್ಟಿ ತೋರುತ್ತದೆ. ತೆರಹಿಲ್ಲದ ನಿರಾಕಾರ ಘನ ಸಾಕಾರಕ್ಕೆ ಬಂದು ಲೋಕದಲ್ಲಿ ಸಂಚಾರ ಕೈಕೊಂಡ ಕಾರಣವೇನು? ಕುರುಹಿಲ್ಲದ ಪರವಸ್ತು ಕುರುಹಿಗೆ ಬಂದು 'ಸಗುಣ ನಿರ್ಗುಣ ಭರಿತ'ವಾಗಿ ನಿರಾಕಾರ ಸಾಕಾರವಾಗಿ, ಬಯ ಲೊಡಲೇ ಇರಲಿ ಅಂಥ ಒಡಲುಗೊಂಡು ದೇಶಾಂತರಿಯಾಗಿ ನಡೆದಾಡುತ್ತಿರುವ ಉದ್ದೇಶವೇನು?

ತೆಱಹಿಲ್ಲದ ಘನವು ಕುಱುಹಿಂಗೆ ಬಂದ ಕಾರಣವೇನು ಹೇಳಾ, ಎಲೆ ಅಯ್ಯಾ?
ಭಕ್ತಿಕಾರಣ ಇಚ್ಛೆಗೆ ಬಂದ ಬಳಿಕ ಉಪಚಾರಕ್ಕೆ ತೆಱಹುಂಟೇ?
ಕಪಿಲಸಿದ್ಧಮಲ್ಲಿನಾಥಾ, ಬಿಜಯಮಾಡಾ ಕರುಣೆಗಳರಸಾ.[೧]

ಕೆಳಮುಖವಾಗಿ ಹರಿಯುತ್ತಿರುವ ಶಕ್ತಿಯ ಸಂಸಾರವಿಲಾಸದಲ್ಲಿ ಮೇಲುಗಡೆ ಶಿವಮುಖ ವಾಗಿ ಇದಿರೇರಿ ಈಸುತ್ತಿರುವ ಭಕ್ತಿಯ ಮುಕ್ತಿವಿಲಾಸವನ್ನು ಹಡೆದು ಎಡೆಬಿಡುವಿಲ್ಲದೆ ದಿವ್ಯಕ್ಕೆ ಎಡೆಮಾಡುವ ತವಕದಲ್ಲಿರುವ ಭಕ್ತ, ಭಕ್ತನ ಈ ಶಿವಭಕ್ತಿಯನ್ನು ಉಂಡು ಸಂತೃಪ್ತಿಯಾಗುವ ತವಕದಲ್ಲಿರುವ ಜಂಗಮ. ಜಂಗಮವಿಲ್ಲದೆ ಭಕ್ತನಿಗೆ ಪ್ರಾಣವಿಲ್ಲದ ಬಡತನ, ಭಕ್ತನಿಲ್ಲದ ಜಂಗಮಕ್ಕೆ ದೇಹದ ಬಡಕು. ಭಕ್ತನ ಕಾರಣವಾಗಿ, ಭಕ್ತಿಯ ಇಚ್ಛೆ ಯಿಂದೆ ಒಡಲುಗೊಂಡು ಸುಳಿಯುತ್ತಿದ್ದ ಬಳಿಕ ಭಕ್ತ ಕರೆದಲ್ಲಿಗೆ ನಡೆಯಬಾರದೇಕೆ ಜಂಗಮ? ಇಲ್ಲಿಯೂ ಆದರಾತಿಥ್ಯ ಉಪಚಾರದ ಹಂಗು ಬೇಕೆ? ಗಾಳಿ ಅಡ್ಡಾಡಿದಲ್ಲಿ ಅಡ್ಡಾಡಲು ಪರಿಮಳಕ್ಕೆ ಔತಣದ ಉಪಚಾರ ನಡೆಯಬೇಕೆ? ಬೆಳುದಿಂಗಳು ಬಂದರೆ ಸ್ವಾಗತದ ಸಂಭ್ರಮ, ನಗಾರಿ ಬಾರಿಸಬೇಕೆ? 'ಬಿಜಯಮಾಡಾ ಕರುಣೆಗಳರಸಾ.'

---

೧. ಶೂ. ಸಂ. ಪು. ೪೯, ವ. ೫೫.

ಸಿದ್ಧರಾಮಾ, ನೀ ಹೇಳುವ ಮಾತು ನಿಜ. ಭಕ್ತ ಜಂಗಮದ ಸಂಬಂಧ, ಭೃತ್ಯ ಕರ್ತನ ಸಂಬಂಧ ಉಪಚಾರದಾಚೆಯ ಸಂಬಂಧ, ಅದೇ ಶಿವಸಂಬಂಧ, ಸಹಜ ಸಂಬಂಧ. ಇಲ್ಲಿ ಕರೆಯಲಿಲ್ಲ, ಕಾಲು ಹಿಡಿಸಿಕೊಳ್ಳಲಿಲ್ಲ. ಆದರೆ ರಾಮಾ, 'ಭಕ್ತನಿದ್ದ ಠಾವಿಂಗೆ ಕರ್ತ ಬಂದರೆ, ಅತ್ತಿತ್ತ ಹರಿಯದೆ ನಂಬಬೇಕು ನೋಡಾ!' ಇದು ಭೃತ್ಯನ ಕರ್ತವ್ಯ ಭಕ್ತಿ. ನೀನಿದ್ದಲ್ಲಿಗೆ ನಮ್ಮ ಗೊಹೇಶ್ವರಲಿಂಗ ಬಂದರೆ, ಕರ್ತನೆಂಬ ಕೂನು ಹತ್ತದೆ 'ಕರ್ತನ ಕಂಡು ಭೃತ್ಯನುರಿಯುಗುಳಿದೆ.' ನಂಬಲರಿಯದೆ ಅತ್ತ ಇತ್ತ ಹರಿದಾಡಿದೆ ಹೃದಯದಲ್ಲಿ. ಬೆಳುದಿಂಗಳು ನಡೆದು ಮನೆಗೆ ಬಂದರೆ ಗುರುತು ಹಿಡಿಯದೆ ಬಡಿಗೆಯಿಂದ ಹೊಯ್ದುವರುಂಟೇ? ಎಲ್ಲಿಯ ಕರ್ತ, ಏನು ಭೃತ್ಯ, ಎಂಥ ಸಂಬಂಧ! 'ಗೊಹೇಶ್ವರಲಿಂಗದ ಶರಣನಾರೆಂಬುದ ನೀನೆತ್ತ ಬಲ್ಲೆ ಹೋಗಾ ಮರುಳು ಸಿದ್ಧರಾಮಾ!'

ಈಗಾಗಳೆ ತನ್ನನೊಲ್ಲದೆ ಹಿಂದು ಮುಂದಾಗಿದ್ದ ಪ್ರಭುದೇವನ ಮಾತು ಕೂರಸಿಯಾಗಿ ಸಿದ್ಧರಾಮನ ಹೃದಯವನ್ನು ಭೇದಿಸಿತು; 'ಅತ್ಯಂತ ಭೀತಿ' ಆವರಿಸಿತು. ದೇವನ ಮಾತಿಗೆ ನಾನೇಕೆ ಪ್ರತಿನುಡಿದೆನೆಂಬ ಪಶ್ಚಾತ್ತಾಪ ಅಂಕುರಿಸಿ ಪಲ್ಲವಿಸಿತು.

ದೇವಾ, ನನ್ನ ಅಂತರಂಗವನ್ನು ಒತ್ತಿ ಹಿಸುಕಿ ಪರೀಕ್ಷಿಸಿ ನೋಡುವಿರಿ. ಅಲ್ಲೇನಿದೆ? ಬಾಗಿಲಿಗೆ ಬಂದ ಮಹಾಭಾಗ್ಯವನ್ನು ಕಂಡು ಕಾಣದ ಕುರುಡಿದೆ; ನಂಬಿ ನಂಬದ ತಾಮಸವಿದೆ; ಕರ್ತ ಬಂದಿದ್ದರೂ ಹಮ್ಮಿನ ಕಿಚ್ಚು ಎದೆಯನ್ನು ಕಲ್ಲುಮಾಡಿದೆ. 'ನುಡಿ ಇಲ್ಲದ-ಭವ ನೀನು ನುಡಿಗಲಿತೆನೆಂದರೆ, ನಿಮ್ಮನೊಡಂಬಡಿಸಲಾನು ಸಮರ್ಥನೇ?' ವಿಚಾರಲಿಂಗವಾಗಿರುವ ನಿನ್ನ ಮುಂದೆ ಅಹಂಭಾವದ ತಲೆಯ ಅಲ್ಪನ ವಿಚಾರವೇನು? ಕಳೆದುಕೊಂಡು ಹುಡುಕುವ ನಾನು ಮರುಳಲ್ಲದೆ ಮತ್ತೇನು? ಕೊಲ್ಲು, ಕಾಯಿ, ನಿಮ್ಮ ಧರ್ಮ. ಹಾಲಲದ್ದು ನೀರಲದ್ದು ನಿಮ್ಮ ಧರ್ಮ. 'ಎನ್ನ ಕರಕರ ಕಾಡದಿರು ತಂದೆ! ನಿನ್ನ ಕಾಟವನ್ನ ಪ್ರಾಣದೋಟ.' ಕರಗಿ ನೀರಾದ ಸಿದ್ಧರಾಮ 'ಬಿಕ್ಕುತ್ತ ಬೆದಱುತ್ತ ಕಾಲ ಮೇಲೆ ಬಿದ್ದರೆ, ಕಂಗಳ ಉದಕ ಮಜ್ಜನಕ್ಕೆಱೆದಂತಾಯಿತ್ತು. ಅಂತಿರ್ದರೆ ಕಂಡು ನೆಗಹಿದನು ನಮ್ಮ ಗೊಹೇಶ್ವರಲಿಂಗವು.'[೧]

ಕಿಂಕುರ್ವಾಣಭಕ್ತಿಯಿಂದ ಭಕ್ತ ಕರಗಿದರೆ ದೇವ ಕರಗಿ ಅನುಗ್ರಹವಾಗುತ್ತಾನೆ. ಇದೇ ಭಕ್ತಿಯ ಪ್ರಾಣಸೂತ್ರ. ಸಿದ್ಧರಾಮನ ಭಕ್ತಿಯಲ್ಲಿ ಕಿಂಕುರ್ವಾಣದಾಚೆ ಇನ್ನೂ ಆಳವಿದೆ. ಪ್ರಭುವಿಗೆ ಕೇಳುವ ರಾಮನ ಮಾತಿನಲ್ಲಿ ಆ ಗಂಭೀರದ ನಿರ್ಘೋಷ ನಿನಾದವಿದೆ. 'ಎನ್ನ ತನು ಕರಗಿ, ಮನ ಕೊರಗಿದ ದುಃಖವಿದಾರದಯ್ಯಾ? ಅಯ್ಯಾ ಅಯ್ಯಾ ಎಂದು ಅಳುವ ಅಕ್ಕೆ ಇದಾರದಯ್ಯಾ? ಮಱೆಹೆಂಬ ಕೂರಸಿಗೆ ಗುಱಿಮಾಡಿದವರಾರಯ್ಯಾ?......'[೨] ಈ ಪ್ರಶ್ನೆಗಳಲ್ಲಿಯೆ ಉತ್ತರವಿದೆ. ಆ ಉತ್ತರದಲ್ಲಿಯೆ ಶಿವಾದ್ವೈತಭಕ್ತಿಯ ಸೌಂದರ್ಯವಿದೆ. ನನ್ನ ತನು ಕರಗಿತು, ನನ್ನ ಮನ ಕೊರಗಿತು, ದುಃಖದ ಭರದಲ್ಲಿ ಅತ್ತುಬಿಟ್ಟೆ. ಇದೆಲ್ಲಕ್ಕೆ ಕಾರಣ ಮರಹು. ಆದರೆ ನಿನ್ನನ್ನು ಮರೆವಂತೆ ಮಾಡಿದ ಶಕ್ತಿ ಯಾರದು? ನೀನು ಮರೆಸದಿದ್ದರೆ, ನಿನ್ನನ್ನು ಮರೆವ ಶಕ್ತಿ ನನ್ನಲ್ಲಿ

---

೧. ಶೂ. ಸಂ. ಪು. ೫೦, ವ. ೬೦. ೨. ಶೂ. ಸಂ. ಪು. ೫೮, ವ. ೬೧.

ಇದೆಯೆ? ನಾನು ಅತ್ತೆ; ಆದರೆ ನನ್ನಲ್ಲಿ ನೀನು ಅಳಲಿಲ್ಲವೇ? ನಾನು ಕರಗಿ ಕೊರಗಿದರೆ ನೀನು ಉಬ್ಬಿ ಹೆಚ್ಚಾದೆಯಾ? ಭಕ್ತ ನೊಂದರೆ ದೇವ ನೋವ, 'ಭಕ್ತಕಾಯ ಮಮ ಕಾಯ' 'ಎನ್ನ' ಹಾನಿ ವೃದ್ಧಿ 'ನಿಮ್ಮ' ಹಾನಿ 'ನಿಮ್ಮ' ವೃದ್ಧಿ ಎಂಬ ಪ್ರಾಣಸಂಬಂಧ ದೇವಭಕ್ತ ಸಂಬಂಧ.

ರಾಮನ ಭಕ್ತಿಯ ಭರಕ್ಕೆ ದೇವನ ಮುನಿಸು ಬಿಸಿಲಿಗೊಡ್ಡಿದ ಮಂಜಿನ ಗತಿ ಆಯ್ತು. ಶಿವಯೋಗಿ ಸಿದ್ಧನ ಭಕ್ತಿ ದ್ವೈತದ ಮೇರೆದಪ್ಪಿದರೆ ಜಂಗಮದೇವನ ಪ್ರಸಾದ ಹೃದಯ ಉಕ್ಕಿ ಉಕ್ಕಿ ಹರಿಯಿತು ಸಿದ್ಧನ ಮೇಲೆ. ಹೃದಯ ತುಂಬಿ ಬಾಯಿ ತುಂಬಿ ಸಿದ್ಧರಾಮನನ್ನು ಹಾಡುತ್ತಾನೆ ಪ್ರಭುದೇವ:

ಸಿದ್ಧರಾಮಾ 'ಹೊಙಗಾಡಿ ಬಂದೆ' ಎಂದು ಸುಮ್ಮನಿದ್ದೆ; ಮನ ಮನ ಒಂದಾಗಿ ಮಾತಾಡಲಿಲ್ಲ. ಒಳಗನ್ನು ದುರ್ಲಕ್ಷಿಸಿ, ನಮ್ಮ ಗೊಹೇಶ್ವರಲಿಂಗವನ್ನು ನಿರ್ಲಕ್ಷಿಸಿ ಗುಡಿ ಗುಂಡಾರದಲ್ಲಿ ಆಡಿದೆ, ಕೆರೆ ಬಾವಿಯಲ್ಲಿ ಆಡಿದೆ, ಅನ್ನಛತ್ರ ಅರವಟಿಗೆಯಲ್ಲಿ ಆಡಿದೆ. ನೀನು ಹೊರಗೆ ನಮ್ಮ ಗೊಹೇಶ್ವರಲಿಂಗ ಒಳಗೆ, ಮಗು ಹೊರಗೆ ತಾಯಿ ಒಳಗೆ ಇದ್ದರೆ ಮಾತುಕತೆ ಸರಸವಾತ್ಸಲ್ಯ ಹೇಗೆ ನಡೆಯಬೇಕು ರಾಮಾ? ನೀನು ಸಾಮಾನ್ಯನಲ್ಲ, ಅಸಾಮಾನ್ಯಯೋಗಿ. 'ಪರಮಯೋಗಿ. ಶುದ್ಧ ಸಾತ್ತ್ವಿಕಯೋಗಿ, ಸಚ್ಚಿದಾನಂದಯೋಗಿ, ನಿತ್ಯ ಪರಿಪೂರ್ಣಯೋಗಿ. . . . .ಸರ್ವೇಂದ್ರಿಯಸುಖನಿರ್ಮೂಲ ಯೋಗಿ. ಸಂಸಾರವನದಾವಾನಲ ಯೋಗಿ,......ಮಾಯಾಮದಮಥನ ಯೋಗಿ, ಸಗುಣಯೋಗಿ,......ನಿರ್ಗುಣಯೋಗಿ. ನಿರಂಜನ ಯೋಗಿ ...... ಸುಜ್ಞಾನಪ್ರಭಾಮಯ ಯೋಗಿ, ಮಹಾಜ್ಞಾನೈಕ್ಯ ಚೈತನ್ಯಯೋಗಿ.......ನಿರವಯ ನಿರ್ಲೇಪ ನಿಃಪಾಪ ಯೋಗಿ, ಇಹಲೋಕ ಪರಲೋಕ ಗತಿರಹಿತ ಯೋಗಿ'—ಸಿದ್ಧರಾಮನ ಶಿವಯೋಗದ ಇಪ್ಪತ್ತೆಂಟು ಶಿವಸೌಂದರ್ಯವನ್ನು ಮನವಾರೆ ಕೊಂಡಾಡಿ ಕೊನೆಯೇರುತ್ತಾನೆ ಪ್ರಭುದೇವ. ತಾಯಿಯ ಮಧುರ ಮೋಹ. ರಸವಾತ್ಸಲ್ಯ ಮಗುವನ್ನು ಕಂಡರೆ ಮಡುಗಟ್ಟಿ ನಿಲ್ಲುತ್ತದೆ ಹೇಗೆ? 'ಕಂದಾ. ತಂದೇ, ಬಂಗಾರಾ. ನನ್ನ ಮುದ್ದೂ......' ಎಂದು ಶಬ್ದದಲ್ಲಿ ತೆರೆಗಟ್ಟಿಕೊಂಡು ಆನಂದದ ಅಪಾರಪಾರವನ್ನು ಅಪ್ಪಳಿಸುವುದು ಹೇಗೆ? ಶಬ್ದ ಸಾಲದೆ, ಸಿದ್ಧರಾಮಯ್ಯದೇವರನ್ನು ತನ್ನ ನಿಡುದೋಳಿನಿಂದ ಬಿಗಿಯಪ್ಪಿಕೊಳ್ಳುತ್ತಾನೆ ಪ್ರಭುದೇವ.

ನಿಮ್ಮಲ್ಲಿ ಸನ್ನಹಿತನಾಗಿ. ನಿಜವನಱಿತು ಬೆರಸಿದ ಶಿವಯೋಗಿಯ ಕಂಡರೆ,
ಎನ್ನ ಮನವಗಲಲಾಱದಯ್ಯಾ !
ಎನ್ನ ತನುವಪ್ಪದಿರಲಾಱದಯ್ಯಾ !
ಎನ್ನ ಶಬುದ ಹೊಗಳದಲ್ಲದೆ ಸೈರಿಸಲಾಱದಯ್ಯಾ !
ಗೊಹೇಶ್ವರಾ. ನಿಮ್ಮ ಶರಣ ಶಿವಯೋಗಿ ಸಿದ್ಧರಾಮಯ್ಯನನಪ್ಪಿ
ಸೊಪ್ಪಳಿದು ನಮೋ ನಮೋ ಎನುತಿರ್ದೆನು ![೧]

೧. ಶೂ. ಸಂ. ಪು. ೫೦-೫೧, ವ. ೬೨.

ಪ್ರಭುವಿನ ಈ ರಸಗೀತ ದಿವ್ಯದ ಜೋಗುಳ. ಈ ವಾತ್ಸಲ್ಯದ ತರಂಗಮಾಲೆಯಲ್ಲಿ ಪ್ರಭುವಿನ ಹೃದಯ ಯಾವ ವಿಶಾಲ ಎಂಬುದು ತಾನೇ ಹರವಿಕೊಂಡಿದೆ. ಹಣೆಗಣ್ಣಿಗೆ ಅಂಗಾಲುಗಣ್ಣವರುಂಟು, 'ಅಘಟಿತ ಘಟಿತರಿಗೆ ಅಘಟಿತರುಂಟು……' ಎಂಬ ಸೊಪ್ಪು ಗೊಹೇಶ್ವರನ ಶರಣ, ಶಿವಯೋಗಿ ಸಿದ್ಧರಾಮನನ್ನಪ್ಪಿದಾಗ ಎಳ್ಳು ಕಾಳಷ್ಟುಳಿದಿಲ್ಲ ಪ್ರಭುದೇವನಲ್ಲಿ. ಸಿದ್ಧರಾಮಯ್ಯನಿಗೆ 'ನಮೋ ನಮೋ ಎನುತಿರ್ದೆನು.' ಮತ್ತೇನು?

ಇನ್ನೂ ಮತ್ತೆ ಇದೆ. ಶಿವಯೋಗಿ ಸಿದ್ಧರಾಮಯ್ಯನ ಇರವೇನು? ಅರಿವೇನು? ಆಚಾರವೇನು? ಆತನ ನಿಲವೇನು? ಸಿದ್ಧರಾಮ ಗೊಹೇಶ್ವರನ ಶರಣ. ಆತನ ಕಾಯದಲ್ಲಿ ಮನ ಬುದ್ಧಿ ಮುಂತಾದ ಅಂತಃಕರಣ ಚತುಷ್ಟಯದ ಗುಣ ಧರ್ಮ ಉಳಿದಿಲ್ಲ. ಆತನ ಪ್ರಾಣದಲ್ಲಿ, ಜೀವಾತ್ಮಚೈತನ್ಯದಲ್ಲಿ ಜೀವಭಾವದ ಕಸರಿಲ್ಲ. ಆತನಿದ್ದ ಶಿವಭಾವದಲ್ಲಿ ಜೀವಭಾವದತ್ತ ಭ್ರಮಿಸಿ, ಅತ್ತಿಂದಿತ್ತ ಇತ್ತಿಂದತ್ತ ಎಡೆಯಾಡುವ ಭ್ರಮಣವಿಲ್ಲ. ಅಂತಃಕರಣ ಜ್ಞಾನೇಂದ್ರಿಯದ್ವಾರದಲ್ಲಿ, ಅಥವಾ ಕಣ್ಣು ಕಿವಿ ಮೂಗು ಬಾಯಿ ಗುದ ಗುಹ್ಯವೆಂಬ ಪ್ರಾಕೃತ ನವದ್ವಾರದಲ್ಲಿ ಸಿದ್ಧನ ಸುಳಿದಾಟವಿಲ್ಲ. ಬ್ರಹ್ಮರಂಧ್ರಸ್ಥಾನದ ಸಹಸ್ರದಳ ಕಮಲದಲ್ಲಿ ಜೀವಪರಮಯೋಗವನ್ನು ಸಾಧಿಸಿ ನಾನು ನೀನೆಂಬ ಅರಿವು ಬೆಂಕಿಯುಂಡ ಕಟ್ಟಿಗೆಯಂತೆ ಅದ್ವೈತ ಶೈವಜ್ಯೋತಿಯಲ್ಲಿ 'ತಲ್ಲೀಯ'ವಾಗಿದೆ.

ಯೋಗ, ಶಿವಯೋಗದ ಹೊಲಬನಾರು ಬಲ್ಲರು ಸಿದ್ಧಾ? ಹೃದಯಕಮಲದಲ್ಲಿ ದಳದಿಂದ ದಳಕ್ಕೆ ತರಹರವಿಲ್ಲದೆ ಹರಿದಾಡುವ ಜೀವಹಂಸನ ಗತಿ ನಿಲ್ಲದೆ,[೧] ಆಧಾರ ಮುಂತಾದ ಆರು ಚಕ್ರದ ದಳಕುಳದೇವತೆ ಅಲ್ಲಿ ಅನುಭವಕ್ಕೆ ಬರುವ ಅಕಾರಾದಿ ೫೨ ಅಕ್ಷರದ ಲಿಪಿಯ ನೋಡದೆ[೨], ಮತ್ತೆ ಮೇಲುಪ್ಪರಿಗೆ ಎನಿಸುವ ಬ್ರಹ್ಮರಂಧ್ರದ ಮಣಿ

೧. ಚೆನ್ನಬಸವಣ್ಣನವರ ಕೆಳಗಿನ ವಚನ ನೋಡಿರಿ:

ಇಂದ್ರದಳ ಅಗ್ನಿದಳ ಯಮದಳ ನೈಋತ್ಯದಳ ವರುಣದಳ
ವಾಯುವ್ಯದಳ ಕುಬೇರದಳ ಈಶಾನ್ಯದಳ—ಇವಕ್ಕೆ ವಿವರ:
ಇಂದ್ರದಳವೇಱಲು ಗುಣಿಯಾಗಿಹ. ಅಗ್ನಿದಳವೇಱಲು ಹಸಿವ.
ಯಮದಳವೇಱಲು ದುರಿತ ಚೇಷ್ಟಿತನಾಗಿಹ. ನೈಋತ್ಯದಳವೇಱಲು ಕೋಪಿಸುತಿಹ.
ವರುಣದಳವೇಱಲು ನಿದ್ರೆಗೆಯ್ವ. ವಾಯುವ್ಯದಳವೇಱಲು ಸಂಚಲನಾಗಿಹ.
ಕುಬೇರದಳವೇಱಲು ಧರ್ಮಬುದ್ಧಿಯಾಗಿಹ.
ಈಶಾನ್ಯದಳವೇಱಲು ವಿಷಯಾತುರನಾಗಿಹ.
ಮಧ್ಯಸ್ಥಾನಕ್ಕೆ ಬಂದಲ್ಲಿ ಸದ್ಭಾವಿಯಾಗಿ ಮೋಕ್ಷವ ಬಯಸುತ್ತಿಹ.
ಇಂತೀ ಅಷ್ಟದಳದಲ್ಲಿ ತಿರುಗುವ ಹಂಸನ ನೆಲೆಗೆಡಿಸಿ ಸದ್ಭಾವಿಯಾಗಿರಬಲ್ಲ
—ಕೂಡಲಚೆನ್ನಸಂಗಾ, ನಿಮ್ಮಶರಣ.

ಏ. ಶ. ಸ್ಥ. ಮ. ೫೬೦ (ಕೈಬರೆಹದ ಪ್ರತಿ)

೨. ಕೆಳಗಿನ ನುಡಿಯೊಡನೆ ಹೋಲಿಸಿರಿ:

ಷಡುವರ್ಗವೆಂಬಿವನು ಸಮನಿಸದಿರಾ ನೀನು
ಷಡುವಳಿಯದೈವತ್ತಕ್ಷರವ ತಿಳಿಯಾ ।
ಚೌಪತ್ರ ಷಡುಪತ್ರ ದಶಪತ್ರ ದ್ವಾದಶಂ
ಷೋಡಶಂ ಊರ್ಧ್ವದಲಿ ಉಭಯ ಕಂಡಾ ॥ ಏ. ಶ. ಸ್ಥ. ಮ. ೫೬೭ (ಕೈಬರೆಹದ ಪ್ರತಿ)

ಮೂಡದೊಳಗೆ ನೆಲಸದೆ, ಸೋಹಂ ಎಂಬ, ಬ್ರಹ್ಮ ನಾನಾದೆನೆಂಬ ಭಾವದ ಸುಳಿವೂ ಅಡಗಿ 'ಮನನಷ್ಟ'ವಾಗದೆ ಶಿವನಲ್ಲಿ ಯೋಗವೆಲ್ಲಿಯದು ಸಿದ್ಧರಾಮಾ? ಇವನ್ನೆಲ್ಲ ಸಂಪಾದಿಸಿದ ನೀನೇ ಶಿವಯೋಗಿ, ಶಿವಶರಣ. ನೀನೇ ಸ್ವತಂತ್ರಧೀರ. ನಿನ್ನನ್ನು ಕಂಡು 'ಎನ್ನ ಭವಂ ನಾಸ್ತಿಯಾಯಿತ್ತು'.

ಸಿದ್ಧರಾಮನನ್ನು ಕುರಿತ ಈ ಮಾತು 'ಶಿವಯೋಗ, ಪರಮಯೋಗ'ದ ತಳಬುಡ ಅಂತುಪಾರವನ್ನು, ಅದರ ಮಂತ್ರಗೋಪ್ಯವನ್ನು ಬಲ್ಲ ಪರಮಯೋಗೀಶ್ವರ ಪ್ರಭು-ಲಿಂಗನ ಬಾಯಿಂದ ಬಂದ ಮಾತು. ಈ ಮಾತಿನ ಬೆಲೆಯೇನು? ಶಿವಯೋಗಿ ಸಿದ್ಧರಾಮನ ನಿಲವೇನು? ಪ್ರಭು ಹೀಗೆ ಹೇಳಿದರೂ ಸಿದ್ಧನ ವಿನಮ್ರವಿನಯ,–ಇದು ವಿನಯವೂ ಅಲ್ಲ–'ಎನಗೆ ಬೇರೆ ಸ್ವತಂತ್ರವಿಲ್ಲ', 'ನಿನ್ನ ಇಚ್ಛಾಮಾತ್ರದಲ್ಲಿ ನಾನಿಪ್ಪೆನು' ಎಂಬ ಯಂತ್ರವಾಹಕನ ಇಚ್ಛೆಯಲ್ಲಿರುವ ಯಂತ್ರಭಾವ, ಶಿವಾದ್ವೈತಭಕ್ತಿಯ ಸಮೀಪಕ್ಕೆ ನಡೆದಿರುವ ಲಿಂಗಾರ್ಪಿತ ಭಕ್ತಿಭಾವ ಇದ್ದ ಒಗರನ್ನೂ ಕಳೆದು ಕಾಂತಿಯೇರುತ್ತವೆ. ಸಿದ್ಧರಾಮನ ಶಿವಯೋಗ ಶಿವಜ್ಞಾನ ಶಿವಭಕ್ತಿಯ ವ್ಯಕ್ತಿತ್ವವನ್ನು ಪರೆಪರೆಯಾಗಿ ಬಿಚ್ಚಿ ನೋಡುತ್ತ ಪ್ರಭು ನುಡಿಯುತ್ತಾನೆ ಶಿವಯೋಗಿ ಶರಣನ ಲೋಕೋತ್ತರ ಶೃಂಗಾರ ಸೌಂದರ್ಯವನ್ನು: 'ಇದಿರಿಂಗೆ ಇಚ್ಛೆಯರಿಯದಿಪ್ಪರು. ಒಳಗೆ ನೋಡಿದರೆ ಬಟ್ಟ ಬಯಲಲ್ಲಿಪ್ಪರು. ಗುಹೇಶ್ವರನ ಶರಣರು ತಾವಿಲ್ಲದ ಮಹಿಮರು.'[೧] 'ಗುಹೇಶ್ವರನ ಶರಣರು ದೇಹವಿಲ್ಲದ ನಿರ್ದೇಹಿಗಳು.'[೨]

ತಾಯಿಯ 'ಮಾವು' ಪ್ರಭುದೇವನ ಮಾತು. ಈವರೆಗೆ ಬೆಳೆದ ಮಗುವನ್ನು, ಇನ್ನೂ ಬಟ್ಟಬಯಲಾಗಿ, 'ತಾವಿಲ್ಲದ' ಮಹಿಮನಾಗಿ, ದೇಹವಿಲ್ಲದ ನಿರ್ದೇಹಿಯಾಗಿ ಮುಂದೆ ಬೆಳೆಯಬಲ್ಲ ಮಗುವನ್ನು ಇಂದೇ ಕಂಡುಕೊಂಡು ಕೊನೆಯುತ್ತಾನೆ ಪ್ರಭುತಂದೆ. ಸಿದ್ಧರಾಮನಿಗೆ ಈ ಮಾತು ಒಪ್ಪಿಗೆ ಇಲ್ಲ. ಏಕೆ?

> ಮಾತುಳ್ಳನ್ನಕ್ಕರ ದೇಹ ಹಿಂಗದು. ನೆನಹುಳ್ಳನ್ನಕ್ಕರ ಪ್ರಾಣಸೂತಕ ಬಿಡದು.
> ಕಾಯ ಜೀವದ ಹೊಲಿಗೆಯ ಸಂದ ಬಿಚ್ಚಲರಿಯೆನು.
> ಆನು ನಿರ್ದೇಹಿ ಎಂದರೆ ನಗರೇ ನಿಮ್ಮ ಪ್ರಮಥರು?
> ಎನ್ನ ಅಂತರಂಗದಲುಳ್ಳ ಅವಗುಣವ ಹಿಂಗಿಸಿ
> ನಿನ್ನಂತೆ ಮಾಡಿದಡಾನುಳಿವೆನಲ್ಲದೆ ಬೇರೆ ಗತಿಯ ಕಾಣೆ ನೋಡಾ.
> ಅಯ್ಯಾ ಕಪಿಲಸಿದ್ಧಮಲ್ಲಿನಾಥಾ, ಹಿಂದೆ ಇಲ್ಲದದೇನು ಮುಂದೆಂತಪ್ಪುದು?[೩]

ದೇಹದಲ್ಲಿ ಮಾತಿನ ಸೂತಕ. ಪ್ರಾಣದಲ್ಲಿ ಅಂದರೆ ಮನದಲ್ಲಿ ನೆನಹಿನ ಸೂತಕ ಇನ್ನೂ ಕಳೆದುಹೋಗಿಲ್ಲ. ಆತ್ಮ ಅನಾತ್ಮಕ್ಕೆ ಹಾಕಿದ ಹೊಲಿಗೆ 'ಹೃದಯಗ್ರಂಥಿ'ಯನ್ನು ಇನ್ನೂ ಬಿಚ್ಚುವ ಸಾಮರ್ಥ್ಯ ತನ್ನಲ್ಲಿ ಬಂದಿಲ್ಲ. ಹೀಗಿರಲು ತಾನು 'ನಿರ್ದೇಹಿ' ಎಂದು ಕೊಂಡರೆ ನೋಡಿದವರು ನಗದಿರುವರೇ? ಪ್ರಭುವೇ, ದೇಹದಲ್ಲಿ ಪ್ರಾಣ ಕರಣಗಳಲ್ಲಿ

---

೧. ಶೂ. ಸಂ. ಪು. ೫೧-೫೨, ವ. ೬೭.
೨. ಶೂ. ಸಂ. ಪು. ೫೨, ವ. ೬೯.
೩. ಅದೇ ಪು. ೫೩, ವ. ೭೦.

ಮೆತ್ತಿರುವ ಅವಗುಣವನ್ನು, ದೇಹ ಜೀವ ಭಾವದ ಮೈಲಿಗೆಯನ್ನು, ದಿವ್ಯಶಿವಕ್ಕೆ ಅಂಟಿರುವ ಮಾನವ್ಯದ ಮಲಿನವನ್ನು ಕಿತ್ತು ತೆಗೆದು ನಿನ್ನಂತೆ ನಿರ್ಗುಣ ನಿಸ್ಸೂತಕ ನಿರ್ಮಲನನ್ನಾಗಿ ಮಾಡು ತಂದೇ ಎಂದು ತನ್ನ ಪ್ರಾಣವನೊಡ್ಡಿ ಸಿದ್ಧರಾಮ ಬೇಡಿಕೊಂಡರೆ ಅಲ್ಲಮನ ಹೃದಯ 'ತಥಾಸ್ತು' ಎನ್ನುತ್ತದೆ. 'ಆ ಸಿದ್ಧರಾಮಯ್ಯದೇವರ ಕೈವಿಡಿದುಕೊಂಡು ಏಕಾಂತ ಸಮಾಧಿಸ್ಥಾನಕ್ಕೆ ಬಿಜಯಂಗೆಯ್ಯು'ತ್ತಾರೆ ಪ್ರಭುದೇವರು. ಸಿದ್ಧ-ರಾಮಯ್ಯನ ಅರಿವು ಆತನ ಆಚಾರದಲ್ಲಿ ಪ್ರಾಣಲಿಂಗವಾಗಿ, ಆತನ ಆಚಾರ 'ಲಿಂಗವಂತ'ವಾಗಿ ಜೀವಂತವಾಗಿ ನಡೆದು ಆಡ್ಡಾಡುತ್ತಿರುವುದನ್ನು ಪ್ರಭು ಕಂಡ. 'ಆನು ನಿರ್ದೇಹಿ ಎಂದರೆ ನಗರೇ ನಿಮ್ಮ ಪ್ರಮಥರು?' ಎಂದು ಕೇಳಿದ ಮಾತಿನಲ್ಲಿ ಶಿವಯೋಗಿ ಸಿದ್ಧನ ನೂರಕ್ಕೆ ನೂರು ಪ್ರಾಮಾಣಿಕತನ ಸ್ಪಷ್ಟವಾಗಿ ಹೊಳೆದು ತೋರಿತು. ಯಾವ ಮುಚ್ಚುಮರೆಯಿಲ್ಲದೆ ಹಮ್ಮು ಬಿಮ್ಮು ಇಲ್ಲದೆ ಹೃದಯ ಹೊರಗೆ ಬಂದರೆ ಅದನ್ನು ಮೆಚ್ಚಿ ಅಪ್ಪಿಕೊಳ್ಳದ ಹೃದಯವಿದ್ದರೆ ಅದು ಹೃದಯವಲ್ಲ. ರಾಮನ ಶುದ್ಧ ಸಾತ್ವಿಕಕ್ಕೆ ತಲೆದೂಗಿ, ಅದಕ್ಕೆ ವಶವಾಗಿ ಅಧೀನವಾಗಿ ಸಿದ್ಧನ ಮಠಕ್ಕೆ ನಡೆಯುತ್ತಾನೆ ಪ್ರಭುದೇವ.

ಈ ದೇವನ ನಿಲವು ಎಂಥದೋ ಸಿದ್ಧರಾಮಯ್ಯನಿಗೆ ತಿಳಿಯದು. 'ಅಂಗವಳಿದು ನಿಂದವನೆಂದು ನಾನಜಿಯೆ. ಘನಲಿಂಗದಲ್ಲಿ ಸಲೆ ಸಂದವನೆಂದು ನಾನಜಿಯೆ'. ಈ ನಿಲವು ಈ ಇರವು ತನಗೆ ತೋರದೆ ಇದ್ದರೇನು? ಅದರ ಸುಳುಹು ಒಂದು ಮಾನವಘಟದ ಸುಳುಹಲ್ಲ. ಮಾನವಲೋಕದಲ್ಲಿ ಘಟಿಸಿದ ಘಟಿತ ಸುಳುಹಲ್ಲ. ಅದು ಅಘಟಿತ. ಈ ಅ-ಘಟಿತ ವಸ್ತುಸಂಗತಿಯಾಗಿ ಘಟಿಸಿದರೆ ಶಿವಯೋಗಿ ರಾಮನ ಹೃದಯಾನಂದ ಎಷ್ಟು ಆಕಾಶ ! ನಲ್ಲ ಒಲಿದು ಕಾಡಿದ, ಒಲಿಸಿ ಕಾಡಿದ. ಕಾಡಿಸಿಕೊಂಡ ನಲ್ಲೆ 'ಕರುಣ ಹರಣವ' ತೋರಿ ಹೃದಯಕ್ಕೆ ಬರಿಸಿಕೊಂಡರೆ, 'ನಲ್ಲನೊಲಿದು ಬಂದರೆ' ಆನಂದವಾದ ನಲ್ಲೆಗೆ ದಿಕ್ಕು ಆಕಾಶಗಳೆಲ್ಲಿವೆ?

ಸರ್ವಲೋಕಹಿತಾರ್ಥವಾಗಿ ಜಂಗಮದೇವ ಸುಳಿಯುತ್ತ ಮನೆಗೆ ಬಂದರೆ, ಭಕ್ತ ದೇವನನ್ನು ಸ್ವಾಗತಿಸುವ ರೀತಿ ಯಾವದು? ಆತಿಥ್ಯವನ್ನು ಮಾಡುವ ಹದನಾವುದು? ಶರಣರಲ್ಲಿ ಒಂದು ವಿಶೇಷವಿದೆ, ಸ್ವಾಗತ ಆತಿಥ್ಯದ ಪದ್ಧತಿಯಲ್ಲಿ. ಮೊದಲು ಜಂಗಮ ದೇವನ ಪಾದಾರ್ಚನೆ, ಬಳಿಕ ದೇವನಿಗೆ ಮಾಡಿದ ಬೋನವನ್ನು ಎಡೆಮಾಡಿ, ಆತನಿಂದ ಬಂದ ಪ್ರಸಾದವನ್ನು ತಾನು ಉಣ್ಣುವುದು. ಪ್ರಭುದೇವರು ಮಠಕ್ಕೆ ಬಂದರೆ ಸಿದ್ಧ-ರಾಮಯ್ಯ ಪಾದಾರ್ಚನೆಮಾಡಿ ಪ್ರಸಾದಕೊಳ್ಳುವ ಕ್ರಮವನ್ನು ನೋಡಿ:

> ಅಯ್ಯಾ ಅಯ್ಯಾ, ನೀವು ಬಾರದಿರ್ದಡೆ ಅಂತು ಹಂಬಲಿಸುತ್ತಿದ್ದೆ.
> ನೀನೆನ್ನ ಹಂಬಲ ಕೇಳಿ ಕರುಣದಿಂದ ಭೋರನೆ ಬಂದರೆ,
> ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು,
> ಕಂಬಳಿಯ ಪೀಠವನೊಲ್ಲದೆ ಹೃದಯಪೀಠವನಿಕ್ಕಿ,
> ಮೇಲುಪ್ಪರಿಗೆಯ ಒಜಿತೆಯ ತಂದು ಪಾದಾರ್ಚನೆಯ ಮಾಡಿ,
> ಎರಡೆಸಳು ಕಮಲವನೆರಡು ಪಾದಕ್ಕೆ ಪೂಜಿಸಿ,

ಕಂಗಳ ತಿರುಳ ತೆಗೆದು ಆರತಿಯನೆತ್ತಿ,
ಉಸುರ ನುಂಗಿದ ಧೂಪವ ಪರಿಮಳವ ಬೀಸಿ,
ನೆತ್ತಿಯ ಪರಿಯಾಣದೊಳಿಟ್ಟು ಬೋನವ ಗಡಣಿಸಿದರೆ,
ಸಯದಾನ ಸವೆಯದೆ ಆರೋಗಣೆಯ ಮಾಡಿ,
ಉಂಡ ಬಾಯ ತೊಳೆದರೆ ಸಂದೇಹವಾದುದೆಂದು
ಮೇಲುಸೆಱಗಿನೊಳು ತೊಡೆದುಕೊಂಡು,
ಬಾಯ ಮುಚ್ಚಳವ ತೆಗೆಯದೆ ತ್ರಿಕರಣವೆಂಬ ತಾಂಬೂಲವನವಧರಿಸಿದ;
ಭಾವದ ಕನ್ನಡವ ಹಱಿದು ಹಾಯ್ಕಿದ.
ಆತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ.
ಆತನ ಪ್ರಸಾದಕ್ಕೆನ್ನ ಸೆಱಗ ಹಾಸಿ ಆರೋಗಿಸಿ ಸುಖಿಯಾದೆನು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣ ಪ್ರಭುದೇವರ
ಕರುಣವೆನಗೆ ಸಾಧ್ಯವಾದ ಪರಿಯನೇನೆಂದುಪಮಿಸುವೆನು ![೧]

ಜಂಗಮದ ಪಾದತೊಳೆದ ನೀರು ಪಾದೋದಕ; ಜಂಗಮಕ್ಕೆ ಅರ್ಪಿತವಾದುದು ಪ್ರಸಾದ. ಇದು ನಿಮಗೆ ಗೊತ್ತಿರಬಹುದು. ಈ ಅರ್ಚನೆ ಅರ್ಪಣೆ ಹೊರಗೆ ನಡೆವ ಕ್ರಮವನ್ನು ಭಕ್ತನು ಜಂಗಮವನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿ ಪಾದಪೂಜೆಮಾಡಿ ಆತನ ಕರುಣ ಪಾದೋದಕ ಕರುಣಪ್ರಸಾದವನ್ನು ಕೊಳ್ಳುವ ಸಮಯದಲ್ಲಿ ನೋಡಬಹುದು. ಹೊರಗೆ ನಡೆವ ಈ ಕ್ರಿಯೆ ಒಳಗೆ ನಡೆಯದೆ ಹೋದರೆ ಪಾದೋದಕ ಪ್ರಸಾದಕ್ಕೆ ಅರ್ಥವೆ ಇಲ್ಲ. ಹೊರಗೆ ಹೆಂಪು ಒಳಗೆ ಜೊಳ್ಳು—ಪ್ರಯೋಜನವೇನು? ಮಾತಿನಲ್ಲಿ ಉತ್ತುಂಗ ಪರ್ವತ ಹೃದಯದಲ್ಲಿ 'ಭೀಮನ ಕೊಳ್ಳ'—ಏನು ಉಪಯೋಗ? ಹೊರಗಿನಿಂದ ಹೊರಗೆ ಬೆರಗುಗೊಳಿಸಬಹುದು. ಮೋಸಗೊಳಿಸಬಹುದು. ಒಳಗಿನಿಂದ ಒಳಗನ್ನು ವಂಚಿಸಬಲ್ಲ ಪೂಜೆ ಎಲ್ಲಿದೆ? ಅಥವಾ ಜೀವನವೇ ಎಲ್ಲಿದೆ? ಸಿದ್ಧರಾಮಯ್ಯನ ಪೂಜೆ ಅರ್ಪಣವನ್ನು ಕೆಲಕಾಲ ಗಭೀರದಲ್ಲಿ ನಿಂದು ಆತನ ಒಳಗೆ ನಡೆದಿರುವ ಕ್ರಿಯೆಯನ್ನು ನೋಡಿದರೆ ಅಲ್ಲಿ ಕಸಗೂಡಿಸುವ ಸಾರಣೆ ಕಾರಣೆಯೇನು, ಅಲ್ಲಿಯ ಹೃದಯ ಸಿಂಹಾಸನ ವೇನು, ಮೇಲುಪ್ಪರಿಗೆಯ ಒರತೆಯಿಂದ ತುಂಬಿ ತಂದು ಪ್ರಭುವಿನ ಪಾದಪ್ರಕ್ಷಾಲನ ವನ್ನು ಮಾಡುವ ನೀರೇನು, ಅಲ್ಲಿ ಪಾದಪೂಜೆಗೆ ಸಲ್ಲುತ್ತಿರುವ ಪುಷ್ಪ ಪತ್ರಿಧೂಪ ದೀಪಾರತಿಯೇನು, ಅಲ್ಲಿ ಗಡಣಿಸುವ ಬೋನ ಉಣ್ಣುವ ಬಾಯಿ ಏನು, ತ್ರಿಕರಣದ ತಾಂಬೂಲವನ್ನು ಕೊಂಡು ಭಕ್ತ-ಜಂಗಮವೆಂಬ ಭಿನ್ನಭಾವದ ಜವನಿಕೆಯನ್ನು ಹರಿದು ಬೀಸಾಡಿ. ಭಕ್ತಜಂಗಮದ ಸಮರಸವೇನು, ಈ ಸಾಮರಸ್ಯದಲ್ಲಿ ಪಡೆವ ಕರುಣೋದಕ ಕರುಣಪ್ರಸಾದವೇನು–ಏನೇನು ನಡೆದಿದೆ ಇಲ್ಲಿ ಭಕ್ತ-ಜಂಗಮದ ಒಳಗೊಳಗೆ! ಇಲ್ಲಿ ಒಳಗೆ ಸಪ್ತ ಕುಲಪರ್ವತ, ಹೊರಗೆ ಕಾಣುವುದು ಒಂದು ದಿನ್ನೆಯ ಗಾತ್ರದ ಕ್ರಿಯೆ

೧. ಶೂ. ಸಂ. ಪು. ೫೩-೫೪, ವ. ೭೪.

ಮಾತ್ರ. ಇಲ್ಲಿಯ ಕ್ರಿಯೆ ಒಳಗಿಂದ ಹೊಮ್ಮಿ ಹೊರಗೆ ಹರಿಯುತ್ತಿದೆ; ಹೊರಗಿಂದ ಒಳಗೆ ನುಗ್ಗಿ ಗುಪ್ತಗಾಮಿನಿಯಾಗುತ್ತದೆ. ಇಂಥ ಪೂಜೆಯನ್ನು ನೋಡಿದರೆ ಪೂಜೆಯ ಅಂತರಂಗ ಅಪಾರ ಅದ್ಭುತ, ಬಹಿರಂಗ ಆಯಾ ಧರ್ಮದ ಕಟ್ಟುಪಾಡಿನ ಪೂಜಾವಿಧಿ. ಮಾನವನ ಬಹಿರಂತಸ್ಸಾಮ್ರಾಜ್ಯವನ್ನು ಹೊರಗೊಳಗೆಂಬ ಸೀಮೆಯನ್ನು ಕಿತ್ತುಹಾಕಿ ಹೊರಗೊಳಗೆ ನಡೆದಿರುವ ಪೂಜೆಯನ್ನು, ಶಿವಾಂಶಿಕನಾದ ಮಾನವಜೀವನ ಶಿವ ಪೂಜೆಯನ್ನು, ಶಿವಜೀವೈಕ್ಯದತ್ತ ಸಾಗಿರುವ ಯೋಗಪೂಜೆಯನ್ನು ಇನ್ನೂ ವಿವರವಾಗಿ ನೋಡಬೇಕಿದ್ದರೆ ಶರಣರು ಹೇಳುವ ನೂರೊಂದು ಸ್ಥಲದಲ್ಲಿ ಬರುವ 'ಜ್ಞಾನ ಪಾದೋದಕ ಸ್ಥಲ'ವನ್ನು ಅವಲೋಕಿಸಬಹುದು.

ಮತ್ತೊಂದು ಪದ್ಧತಿ ಮತ್ತು ಸಂಪ್ರದಾಯ ಶರಣರಲ್ಲಿ. ಅರ್ಚನೆ ಅರ್ಪಣವಾದ ಮೇಲೆ ಅನುಭವ ಮಾಡುವುದು. ಜೀವನದ ಸಹಸ್ರಮುಖಿ ಸಮಸ್ಯೆಗಳನ್ನು ಕುರಿತು ವಾದಿಸುವುದು ಚರ್ಚಿಸುವುದು ವಿಚಾರಿಸುವುದು ಯೋಗ ಜ್ಞಾನ ಕ್ರಿಯೆ ಭಕ್ತಿಯ ಮಾರ್ಗದಲ್ಲಿ ತಮತಮಗಾದ ಅನುಭವವನ್ನು ಹೇಳಿ ತಪ್ಪನ್ನು ತೆಗೆದೊಗೆದು ಒಪ್ಪನ್ನೆಲ್ಲ ಸಮನ್ವಯಗೊಳಿಸುವುದು. ಇದನ್ನೇ 'ಅನುಭವಗೋಷ್ಠಿ' ಎಂದು ಹೇಳುವುದು. ಈ ಧಾಟಿಯಲ್ಲಿಯೆ ನಡೆಯುತ್ತದೆ ಪ್ರಭುದೇವ ಸಿದ್ಧರಾಮಯ್ಯನ ಅನುಭವಗೋಷ್ಠಿ. ಶಿವಯೋಗಿ ಸಿದ್ಧ ಮೊದಲುಮಾಡುತ್ತಾನೆ 'ಕೃಪೆಯಿಂದಲೆನ್ನ ಬೋಧಿಸಿ' ಎಂದು:

ಆದಿಯಿಂದ ನಿಮ್ಮಿಂದಲಾದೆನಯ್ಯಾ !
ಅನಾದಿಯಲ್ಲಿ ನಿಮ್ಮಲ್ಲಿ ತದುಗತನಾಗಿದ್ದೆನಯ್ಯಾ !
ನಿಮ್ಮ ಹಸ್ತ ಮುಟ್ಟಿದಲ್ಲಿ, ನಿಮ್ಮನೆನ್ನ ಮನದೊಳಗಿಟ್ಟುಕೊಂಡೆನಯ್ಯಾ !
ಕಾಯವೆಂಬ ಕಪಟವನೊಡ್ಡಿ ನಿನ್ನ ಮಱೆಸಿಕೊಂಡಿದ್ದರೆ.
ನಿನ್ನ ಬೆಂಬಳಿಯ ಸಂದು ನಿಮ್ಮ ಕಂಡೆನಯ್ಯಾ !
ಕಪಿಲಸಿದ್ಧಮಲ್ಲಿನಾಥಯ್ಯಾ,
ಎನ್ನ ಅಂತರಂಗವ ಸುದ್ಧವ ಮಾಡಿ ತಿಳುಹಾ ನಿಮ್ಮ ಧರ್ಮ.[೧]

ಆದಿಯ ಸೋಂಕು ಸಂಬಂಧವಿಲ್ಲದೆ, ಭೂತ ವರ್ತಮಾನ ಭವಿಷ್ಯವನ್ನು ಮೀರಿ, 'ಕಾಲ ಕಾಲ'ವಾಗಿ 'ಕಾಲಹರ'ವಾಗಿರುವ ಅನಾದಿಯಲ್ಲಿ ನಿಮ್ಮೊಳಗೆ ನಾನು 'ತದುಗತ'ವಾಗಿ

---

೧. ಶೂ. ಸಂ. ಪು. ೫೪, ವ. ೭೫

ಈ ವಚನದಲ್ಲಿ ಸಿದ್ಧರಾಮಯ್ಯ ತನ್ನ ಬಾಲ್ಯ ಜೀವನದ ಪೂರ್ವ ವೃತ್ತಾಂತವನ್ನು ನೆನೆ-ಕೊಂಡಂತಿದೆ. ನವಣೆಯ ಹೊಲದಲ್ಲಿ ಒಬ್ಬ ಜಂಗಮಮೂರ್ತಿ ಬಂದು ಮಾಯವಾದನು. ತಾನು ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ಸಾಕ್ಷಾತ್ಕಾರ ಮಾಡಿಕೊಂಡುದು ಈ ವಚನದಲ್ಲೇನೋ ಹೊಳೆವಂತಿದೆ. ಇದೇ ಗ್ರಂಥದ ೪೬ನೆಯ ಪುಟದಲ್ಲಿರುವ 'ಅಟ್ಟಡವಿಯೊಳಗೆ ......' ಎಂಬ ವಚನದಲ್ಲಿ ಸಿದ್ಧರಾಮ ತನ್ನ ಬಾಲ್ಯದ ಪ್ರಸಂಗವನ್ನು ನೆನೆಸಿಕೊಂಡಿರುವುದನ್ನಿಲ್ಲಿ ಗಮನಿಸಿರಿ.

ಇದ್ದೆ. ನಿಮ್ಮೊಳಗಿದ್ದ ನಾನು ಕಾಲದ ಆದಿಯಿಂದ ನಿಮ್ಮಿಂದ ನಾನಾದೆ—ಅಂದರೆ ನಿಮ್ಮೊಳಗೆ ಇದ್ದು ನಿಮ್ಮಿಂದ ಆದೆನೆಂಬ ಸಮ್ಯಗ್‌ಜ್ಞಾನ ಶಿವಯೋಗಿ ಸಿದ್ಧರಾಮನಿಗಿದೆ.[1] ಶ್ರೀಗುರು ಕಪಿಲಸಿದ್ಧನ ಹಸ್ತ ನನ್ನನ್ನು ಮುಟ್ಟಿದ ಬಳಿಕ ನಿಮ್ಮನ್ನು, ಕಪಿಲಸಿದ್ಧ ಪ್ರಭುವನ್ನು ಮನದೊಳಗೆ ಮನೆಕಟ್ಟಿಸಿ ಇಟ್ಟುಕೊಂಡೆ. ಮನದೊಳಗೆ ಮನೆಮಾಡಿಕೊಂಡು ಇದ್ದರೂ ನನ್ನ ನಿನ್ನ ನಡುವೆ ಕಾಯ ಅಡ್ಡಗೋಡೆಯಾಗಿ, ನನಗೆ ನೀನು ಮರೆಯಾದೆ. ಅಂದರೆ ಒಮ್ಮೆ ಹತ್ತಿದ ನಿನ್ನ ರುಚಿ ಮನದಲ್ಲಿ ಕಳೆಯೇರಿ, ಶಿವಯೋಗದಿಚ್ಛೆಯಲ್ಲಿ ನಿನ್ನ ಬೆನ್ನುಬಿಡದೆ ನಡೆದು ನಡೆದು ನಿಮ್ಮ ಕಂಡೆ! ಕಂಡರೇನು? ತನುವಿನ ಅವಲೋಹ ಇನ್ನೂ ಉಳಿದು ನಿಮ್ಮ ಧರ್ಮದವ ನಾನಾಗಿಲ್ಲ. ಈ ಅವಲೋಹವನ್ನು ಕಳೆವ ಸಾಮರ್ಥ್ಯ ನಿಮ್ಮದು. ನಿಮ್ಮ ಒರೆಗೆ ಸಲ್ಲುವಂತೆ ನನ್ನನ್ನು ಶುದ್ಧಗೊಳಿಸುವುದು ನಿಮ್ಮ ಧರ್ಮ.

ಸಿದ್ಧರಾಮಯ್ಯನ ಈ ಬಿನ್ನಪದಿಂದ ಮುಂದುವರಿವ ಈ 'ಸಿದ್ಧರಾಮಯ್ಯಗಳ ಸಂಪಾದನೆ'ಯಲ್ಲಿ ಪ್ರಭುದೇವರು ಸಿದ್ಧನ ಶಿವಯೋಗಾನುಭವದಲ್ಲಿ ಹುದುಗಿಕೊಂಡಿದ್ದು ಆತನ ಕಣ್ಣಿಂದ ನುಸುಳಿಕೊಂಡಿರುವ ಸೂಕ್ಷ್ಮ ತಪ್ಪುಗಳನ್ನು, ಕುಂದು ಕೊರತೆಗಳನ್ನು ದಿವ್ಯಕ್ಕೆ ಅಂಟಿರುವ ಮಾನವ್ಯದ ಅವಗುಣ ಅವಲೋಹವನ್ನು ಹೇಗೆ ಬಿನ್ನಾಣದಿಂದ ತಿದ್ದಿ ಬಿಡಿಸುತ್ತಾರೆಂಬುದು ಮೈತುಂಬ ಕಣ್ಣಾಗಿ ನೋಡಿದರೆ ಅದೊಂದು ರಸಪ್ರಸಂಗ.

ಸಿದ್ಧರಾಮಯ್ಯನ ಬಿನ್ನಹ ತನ್ನಿಂದ ಅನ್ಯ-ಭಿನ್ನರಾದವರಲ್ಲಿ ಮಾಡಿಕೊಳ್ಳಲು ತಕ್ಕ ಬಿನ್ನಹವಲ್ಲ. ಗುಹೇಶ್ವರಲಿಂಗದ ನಿಲವನ್ನು ಅನ್ಯರಿಗೆ ತಿಳಿಸಿ ಹೇಳುವುದು ತಿಳಿಸಿಕೊಡುವುದು ಅಸಾಧ್ಯ. ಅನ್ಯರಿಂದ ಹೇಳಿಸಿಕೊಂಡು ಲಿಂಗದ ನಿಲವನ್ನು ಕಂಡುಕೊಳ್ಳುವುದು ಅದೂ ಅಸಾಧ್ಯ. ಅಸಾಧ್ಯವಾದ ಬಿನ್ನಹವನ್ನು ಯಾರು ಮನ್ನಿಸಬಹುದು? ಹೇಗೆ ಪೂರೈಸಬಹುದು?

ಆದಿಯಲ್ಲಿ ಗುರುಬೀಜವಾದ ಪಿಂಡಕ್ಕೆ
ಅನಾದಿಯೆಂಬುದನೊಬ್ಬರು ತಿಳಿಯಲುಂಟೆ?
ಆದಿ ಕಾಯ, ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ,
ತನ್ನೊಳಗೆ ತಾನೆ ತಿಳಿದು ನೋಡಲು,

---

೧. ಇಲ್ಲಿ ಪ್ರಭುದೇವರ ವಚನದ ಒಂದು ತುಂಡನ್ನು ಮತ್ತು ಅದರ ಟೀಕನ್ನೂ ನೋಡಿ:

ವ: ಆದಿಯ ಮುಟ್ಟಿ ಬಂದ ಶರಣಂಗೆ ಬಂಧನವಿಲ್ಲಯ್ಯಾ. ಜನ್ಮಕೋಟಿ ಕ್ರೂರಕರ್ಮವ ಮಾಡಿದವಂಗೆ.........

ಟೀ: ದೇಹಸಂಬಂಧವಾದ ಮಹಿಮೆಯಿಂದ ಪುಣ್ಯ ಪಾಪಂಗಳ ಮಾಡಿ. ಜನನ ಮರಣಕ್ಕೆ ಬರುತಿರ್ದ ಜೀವಂಗೆ ಶಿವಜ್ಞಾನೋದಯವಾಗಿ ತಾನು ಶಿವಾಂಶಿಕನೆಂಬ ತನ್ನ ಆದಿಯ ತಿಳಿದ ಸಮ್ಯಗ್‌ಜ್ಞಾನವಿಡಿದು. ಗುರುಕರಕಮಲದಿಂದುದಯಿಸಿ ಬಂದಾತಂಗೆ ಭವಬಂಧನವಿಲ್ಲ......

ಶಿ. ಶೂ. ಸಿ. ಟೀ. ಸಂ. ೧೩೮. ಪು. ೭೪.

ಕೋಹಂ ಎಂಬುದು ತಾನೆ ಸತ್ಯ ನೋಡಾ !
ಗೊಹೇಶ್ವರಲಿಂಗದ ನಿಲವು ಹೇಳಿ ಕಂಡಿಹೆನೆಂದರೆ
ಅಸಾಧ್ಯ ಕಾಣಾ ಸಿದ್ಧರಾಮಯ್ಯಾ.[೧]

ಸಿದ್ಧಾ, ಪ್ರಕೃತಿಯ ಬೀಜದಿಂದೊಗೆದ ಪಿಂಡ ಅಜ್ಞಾನಪಿಂಡ, ಕಾಯ-ಜೀವ ಅನಿತ್ಯ-ನಿತ್ಯ ಜಡ-ಅಜಡ ಬೆಸುಗೆಯಾದ ಮಾನವಪಿಂಡ. ಆದರೆ ಶ್ರೀಗುರುಲಿಂಗದ ಬೀಜ ಶುದ್ಧ ಮಾನವಪಿಂಡದಲ್ಲಿ ಹುಟ್ಟಿದರೆ ಅದೇ ಗುರುಪಿಂಡ, ಜ್ಞಾನಪಿಂಡ. ಈ ಪಿಂಡಕ್ಕೆ ನೀನು ಸ್ವಯಂಜ್ಞಾನ, ನೀನು ಅನಾದಿ, ಕಾಯದೊಡನೆ ಹುಟ್ಟಿ ಕಾಯದೊಡನೆ ಅಳಿದವನಲ್ಲ ನೀನು,–ಎಂದು ಮುಂತಾಗಿ ಯಾರು, ಹೇಗೆ ತಿಳುಹಬೇಕು? ಬೆಂಕಿಗೆ ಯಾರು ಬೆಂಕಿ ಹಚ್ಚಬೇಕು? ಬೆಳಗಿಗೆ ಹೇಗೆ ದೀವಿಗೆ ಹಚ್ಚಬೇಕು? ಬಯಲನ್ನು ಕರೆದು ಯಾರು, ಎಲ್ಲಿ ಕುಳ್ಳಿರಿಸಬೇಕು? ಕಾಯದ ಜೀವದ ಬೆಸುಗೆಯನ್ನು ಬಿಚ್ಚಿ, ತನ್ನ ಒಳಗೆ ಇರುವ 'ಸ್ವಯಂ' ತನ್ನನ್ನು, ಒಳಗಿರುವ 'ಸ್ವಯಂ' ತನ್ನಿಂದಲೆ ತಿಳಿದು ನೋಡಿದರೆ ಕಾಣಬರುವುದೇನು ಸಿದ್ಧಾ? 'ಕೋಹಂ' ನಾನಾರು? ಯಾರು, ಯಾರು ನಾನು?–ಎಂದು ಒಳಗಿಂದ ಪ್ರಶ್ನೆ ಕೇಳಿದ ಪ್ರಶ್ನೆಕಾರ ನಿತ್ಯಸ್ವರೂಪನಾದ ತಾನೇ ಸಿದ್ಧರಾಮಾ. 'ಅನಾದಿ'ಯಿಂದ ಹೊಮ್ಮುವ ಈ 'ಕೋಹಂ' ಪ್ರಶ್ನೆ ಪ್ರಕೃತಿಯ ಬೀಜದ 'ಅಜ್ಞಾನ ಪಿಂಡ'ದಲ್ಲಿ ವಿಕಾರವಾಗಿ ಅನಾದಿಯಾದ ತನ್ನನ್ನೆ ಮರೆದು, ಯಾರು ನಾನು ಎಲ್ಲಿಯವ ನಾನು ಎಂದು ಮಂದಿಯನ್ನು ಕೇಳುತ್ತ ನಡೆದಿದೆ. ಮಂದಿಯಿಂದ, ಅನ್ಯರಿಂದ ಪರಿಹಾರವನ್ನು ಬಯಸುತ್ತಿದೆ. ಸ್ವಯಂ ಪರಿಹಾರವಾರಾಶಿಯೆ ಪ್ರಶ್ನೆಯಾಗಿ ಮೊಳೆತರೆ, ಏಕಮೇವ ಅದ್ವಿತೀಯ

---

೧. ಶೂ. ಸಂ. ಪು. ೫೪, ವ. ೭೬.

ಈ ವಚನದ ಹೆಚ್ಚಿನ ತಿಳಿವಳಿಕೆಗೆ ಮಹಾದೇವಿಯಕ್ಕನ ವಚನಭಾಗ ನೋಡಿ:
ಆದಿಯನಾದಿಯ ನಿತ್ಯಾನಿತ್ಯವ ತಿಳಿಯಲರಿಯದೆ
ವಾಯಕ್ಕೆ ಪರಬ್ರಹ್ಮವ ನುಡಿವ ವಾಯುಪ್ರಾಣಿಗಳೆತ್ತ ಬಲ್ಲರೋ?
ಆ ಪರಬ್ರಹ್ಮದ ನಿಜದ ನಿಲವದೆಂತೆಂದೊಡೆ:
ಆದಿಯೇ ದೇಹ. ಅನಾದಿಯೇ ನಿರ್ದೇಹ. ಆದಿಯೇ ಸಕಲ. ಅನಾದಿಯೇ ನಿಷ್ಕಲ.
ಆದಿಯೇ ಜಡ. ಅನಾದಿಯೇ ಅಜಡ. ಆದಿಗೆ ಒಡಲುಂಟು. ಅನಾದಿಗೆ ಒಡಲಿಲ್ಲ.
ಆದಿಯೇ ಕಾಯ, ಅನಾದಿಯೇ ಪ್ರಾಣ.
ಈ ಎರಡರ ಯೋಗವ ಭೇದಿಸಿ ತನ್ನಿಂ ತಾನೆ ತಿಳಿದು ನೋಡಲು.
ಆದಿ ಸಂಬಂಧವಪ್ಪ ಭೂತಂಗಳು ನಾನಲ್ಲ.
ದಶವಿಧೇಂದ್ರಿಯಂಗಳು ನಾನಲ್ಲ............
ಇಂತಿವಾದಿಯಾಗಿ ತೋರುವ ತೋರಿಕೆಯೇನೂ ನಾನಲ್ಲ. ನನ್ನವಲ್ಲ.
ಎಲ್ಲವೂ ನನ್ನಾಧೀನವಾಗಿಪ್ಪುವು. ನಾನವರಾಧೀನವಲ್ಲ.
ನಾನು ತುರಿಯ ತುರಿಯಾತೀತವಪ್ಪ
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆ ತನ್ನಿರವೆಂದು ತಿಳಿಯೆ.
ಆ ತಿಳಿದ ಮಾತ್ರದಲ್ಲಿಯೇ ಅನಿತ್ಯದ ಬೆಸುಗೆ ಬಿಟ್ಟು
ನಿರಾಳದಲ್ಲಿ ನಿರವಯವನೈದಲರಿಯದೆ............

ಶಿ. ಲಿ. ವಿ. ಚಾ. ಪು. ೩.

ವಾದ ಪರಿಹಾರ ಸತ್ಯ ತಾನೇ ತನ್ನ ಬಗೆಗೆ 'ಸವಾಲು' ಹಾಕಿದರೆ ಪರಿಹಾರವನ್ನು ಇಲ್ಲದ ಎಲ್ಲಿಂದ, ಇಲ್ಲದ ಯಾರು ತರಬೇಕು ಶಿವಯೋಗೀ?[೧] '......ಆದಿಕಾಯ, ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ, ತನ್ನೊಳಗೆ ತಾನೆ ತಿಳಿದು ನೋಡಲು. ಕೋಹಂ ಎಂಬುದು ತಾನೆ ಸತ್ಯ ನೋಡಾ !......'[೨]

ಸಾಧ್ಯ ಅಸಾಧ್ಯ ಯಾರಿಗೆ? ಬಲವಂತರಿಗೆ 'ಬಲಹೀನ'ರಿಗೆ. ಪರಮಸಿದ್ಧಿಯೇ ಸಾಕಾರವಾಗಿ ಸುಳಿಯುತ್ತಿರುವ 'ಜಂಗಮಲಿಂಗ'ಕ್ಕೆ ಸಾಧ್ಯ ಅಸಾಧ್ಯದ ಪ್ರಶ್ನೆ ಉಳಿವುದೆಲ್ಲಿ? ಬಣ್ಣಬಣ್ಣದ ಹೂವಿನ ಪರಿಮಳಕ್ಕೆ ಕೆಂಪು ಕಪ್ಪಿನ ಸಮಸ್ಯೆ ಎಲ್ಲಿದೆ? ಆನಂದಕ್ಕೆ ಸುಖ ದುಃಖದ ತೊಡಕು ಎಲ್ಲಿದೆ? ಕಪಿಲಸಿದ್ಧಮಲ್ಲಿನಾಥಯ್ಯಾ, ನೀನೆನ್ನ ಮನವ ತಿಳಿವಡೆ[೩] ಅಸಾಧ್ಯ ಉಂಟೇ? ದೇವರ ದೇವಾ?

ಸಿದ್ಧಾ, ನಿನ್ನ ಪ್ರಶ್ನೆ ಇದು: ನಾನಾರು ಎಂದು ತನ್ನೊಳಗೆ ತಾನು ತಿಳಿದು ನೋಡಿದರೆ ಅರಿವಿನ ಬೆಳಗು ಕಾಣುವುದೆಂತು? ಒಂದುವೇಳೆ ಕಂಡರೆ, ಕಂಡ ಬೆಳಗನ್ನು ಪ್ರಕೃತಿಯ ಕಾಯದಲ್ಲಿ ಅನುಗೊಳಿಸಿ ಇರಿಸಿಕೊಳ್ಳುವುದೆಂತು? ಆದರೆ

ಅಱಿಯೆನೆಂಬುದು ಅಜ್ಞಾನ ನೋಡಾ.
ಅಱಿಯದ ಅಜ್ಞಾನವನತಿಗಳೆದು,
ಜ್ಞಾನವ ಕಾಣೆನೆಂಬುದು ವಿಪರೀತಭಾವ ನೋಡಾ.
ಎಲ್ಲವನು ತೋಱುವ ಘನವನೆಲ್ಲಿಯೂ ಕಾಣಬಾರದು.
ಕಾಣಬಾರದ ನಿಜವ ತೋಱಬಾರದು.
ತೋಱಬಾರದ ಮಹವ ತಿಳಿಯ (ತಿಳುಹ?) ಬಹುದೆ?
ಗೊಹೇಶ್ವರಲಿಂಗದಲ್ಲಿ ಬಯಕೆಯುಳ್ಳನ್ನಕ್ಕರ ತವಕವೆಡೆಗೊಂಡಿಪ್ಪ ಕಾರಣ
ತಿಳುಹಲಿಲ್ಲವೆಂಬುವ ನಿನ್ನ ನೀ ತಿಳಿದು ನೋಡಾ ಸಿದ್ಧರಾಮಯ್ಯಾ.[೪]

ಯಾರು ನಾನು? ನನ್ನ ಸ್ವಯಂರೂಪ ಎಂಥದು? ಅಥವಾ ನನ್ನ ನಿಜವೇನು? ಎಂದು ತನ್ನ ನಿಜವನರಿಯದೆ ಕೇಳಿ, ತಿಳಿಯದೆ ಮತ್ತೆ ಪ್ರಶ್ನೆಯ ಕತ್ತಲೆಯಲ್ಲಿಯೆ ಉಳಿದು 'ಅಱಿಯೆನೆಂಬುದು ಅಜ್ಞಾನ'. ಮತ್ತೆ ಅರಿವಿನ ಪರಿಪೂರ್ಣವೆ ಮರವೆಯ ತುಣುಕಾಗಿ 'ಕೋಹಂ' ಎಂದು ತನ್ನ ನಿಜವ ತಾ ಪ್ರಶ್ನಿಸಿಕೊಂಡರೆ ಆ ಪ್ರಶ್ನೆಯೇ ಕತ್ತಲೆ, ಅದೇ ಅಜ್ಞಾನ. ಇಂಥ ಕತ್ತಲೆಯನ್ನು ದಾಟಿ ಕಳೆದು, ಇನ್ನೂ ಅರಿವಿನ ಬೆಳಗು ಕಾಣಬರಲೊಲ್ಲದು ಎಂದರೆ ಅದು ಭಾವದ ತಿರುವುಮುರುವು. ಬೆಳಕಿನಲ್ಲಿ ಆ ಬೆಳಕಿನಿಂದ ಎಲ್ಲ

೧. ಈ ಸಂದರ್ಭದಲ್ಲಿ ಪ್ರಭು ಮತ್ತು ಮುಕ್ತಾಯಕ್ಕಗಳಲ್ಲಿ ನಡೆದ ಸಂಭಾಷಣೆಯನ್ನು ನಾವು ನೆನೆಸಿಕೊಳ್ಳಬೇಕು.

೨. ಶೂ. ಸಂ. ಪು. ೫೪, ವ. ೭೬.

೩. ಈ 'ತಿಳಿವಡೆ' ತಿಳಿಯುವಡೆ ಎಂಬರ್ಥದಲ್ಲಿಯೇ ಇರಬೇಕು. 'ತಿಳಿಪಿವಡೆ' ಎಂಬ ಪಾಠಾಂತರವೇ ಈ ಸಂದರ್ಭದಲ್ಲಿ ತಕ್ಕ ಅರ್ಥಕೊಡುತ್ತದೆ.

೪. ಶೂ. ಸಂ. ಪು. ೫೫, ವ. ೭೮.

ವನ್ನು ಕಂಡು, ಬೆಳಕೇ ಕಾಣಲೊಲ್ಲದು ಎಂದು ತಲೆ ತಿರುಗಿ ಮಾತಾಡಿದರೆ ಭಾವದ ವೈಪರೀತ್ಯವಲ್ಲವೆ ಸಿದ್ಧಾ? ನಾನು ನೀನು, ಅರಿದೆ ಮರೆದೆ, ಕಂಡೆ ಕಾಣೆ, ತಿಳಿಸು ತಿಳಿವೆ—ಇವನ್ನೆಲ್ಲ ನಿನ್ನೊಳಗೆ ಬೆಳಕುಮಾಡಿ ತೋರುವ 'ಮೀರಿದ ಘನ'ದ ಪರಿಪೂರ್ಣ ಮಹಾಘಟ್ಟಿ ಎಲ್ಲವನ್ನು ತೋರಲು ತಾನೆ ಕಾರಣವಾಗಿದ್ದರೂ ತಾನು ಮಾತ್ರ 'ಎಲ್ಲಿಯೂ ಕಾಣಬಾರದು'. ಎಲ್ಲಕ್ಕೂ ಜಾಗೆಮಾಡಿಕೊಡುವ ಬಯಲು ತನಗೆ ಜಾಗೆಯಿಲ್ಲದೆ ಕುಳಿತಿದೆ–ಇದು ವಿಗಡಚರಿತ್ರವಲ್ಲವೆ ರಾಮಾ? ಎಲ್ಲವನ್ನು ಕಾಣಿಸಿಕೊಡುವುದನ್ನು ಮತ್ತೆ ಬೇರೆ ಯಾರು ಕಾಣಿಸಿಕೊಡಬೇಕು ರಾಮಾ? ಬೆಳಕನ್ನು ತೋರಿಸಲು ಮತ್ತೆ ಬೇರೆ ಬೆಳಕೆಲ್ಲಿದೆ ಸಿದ್ಧಾ? ಈ 'ಮಹ'ವನ್ನು, ಇಂಥ ವಿಗಡ ಬೆಳಗನ್ನು ಯಾರು ತಿಳಿಯಬಹುದು? ಯಾರು ತಿಳುಹಿಕೊಡಬಹುದು? ತಿಳಿವಲ್ಲಿ ತಿಳುಹುವಲ್ಲಿ ಅದೇ ಬೆಳಗು ಬೆಳಗುತ್ತಿದೆ ರಾಮಾ. ಇದೂ ಅಲ್ಲದೆ. ಸಿದ್ಧರಾಮಾ. ನಿನ್ನಲ್ಲಿ ತಿಳಿವೆನೆಂಬ ಬಯಕೆಯಿದೆ. ಬಯಕೆಯಲ್ಲಿ ತವಕವಿದೆ. ಈ ಹಂಬಲ ಈ ಕುತೂಹಲ, ಕಳವಳದ ಅಲೆ ಅಲೆಯೆದ್ದು ಮಹವನ್ನು ಮುಸುಕಿದರೆ. ಈ ಕದಡನ್ನು ತಿದ್ದಿ ಅದನ್ನು ತಿಳಿಗೊಳಿಸುವುದಕ್ಕೆ, ತಿಳುಹುವುದಕ್ಕೆ ಬೇರೆಯವರು ಬೇಕೆ? ಬೇರೆಯವರು ನಿನ್ನನ್ನು ತಿಳಿಸಬಲ್ಲರೆ? 'ನಿನ್ನ ನೀ ತಿಳಿದು ನೋಡಾ ಸಿದ್ಧರಾಮಯ್ಯಾ'.

ಮತ್ತೆ ಸಿದ್ಧಾ, 'ತವಕದ ಕೂಟ ನಿಮ್ಮಲ್ಲಿ ತಮಗತವಾದೆನು,' ಎಂದು ಹೇಳುವೆ. ತಾನೊಲಿದ, ತಾನು ಕೂರ್ಪ ವಸ್ತುವನ್ನು ಬಯಸಿ ಆ ವಸ್ತುವಿನಲ್ಲಿ ಕೂಡುವೆನೆಂದು ತವಕಿಸಿ ಹಂಬಲಿಸಿ ಆತುರಪಟ್ಟು ಅಲ್ಲಿ ಕೂಡಿ 'ತಮಗತವಾದೆ' 'ಪರವಶವಾದೆ'ನೆಂದು ಹೇಳುವೆ. ಆದರೆ 'ಬಯಕೆ ಎಂಬುದು ದೂರದ ಕೂಟ.' ಕೂಡಿದ ಬಳಿಕ 'ಬಯಸೆನೆಂಬುದು ಕೂಟದ ಸಂದು'. ಎರಡರಲ್ಲಿ ಒಂದು ಲಿಂಗದಲ್ಲಿ ಕೂಡಲಿರುವ ಕೂಟ. ಮತ್ತೊಂದು ಕೂಡಿ ಮರೆದೊರಗಿದನೆಂಬ ಮರ್ಳಿನ ಕೂಟ. ಇಲ್ಲಿ 'ಕೂಟ'ದ ಕುರುಹು ಇನ್ನೂ ನಿಷ್ಪತ್ತಿಯಾಗಿಲ್ಲ. ಇದೇ 'ಕಪಟದ ಕನ್ನಡ'. ಇಂಥ ಬಯಕೆಯ ಕೂಟದ ಸೂಕ್ಷ್ಮಜಾಲ, ಭಾವ ನೆಯ್ದ ಕಾಂಡಪಟ. ಲಿಂಗಾಂಗದ ನಡುವೆ ಭಾವ ಕಾಣದಷ್ಟು, ಇಲ್ಲ ಎನಿಸುವಂತೆ ಇಳಿಬಿದ್ದಿದ್ದರೆ ಲಿಂಗೈಕ್ಯದ ಮಾತೇಕೆ ಸಿದ್ಧರಾಮಾ? ಲಿಂಗಾಂಗದ ಸಾಮರಸ್ಯದ ಸುದ್ದಿಯೇಕೆ?

ಪ್ರಭುವಿನ ಈ ಮಾತಿಗೆ ಸಿದ್ಧರಾಮದೇವನ ಉತ್ತರವೆಂದರೆ 'ಎನಗೆ ಬೇರೆ ಸ್ವತಂತ್ರ ಉಂಟೇ?' ಎಂಬ ಧಾಟಿಯದು. ನಾನು ಕೂರ್ಪೆ ಇದರರ್ಥ ನೀನು ಕೂರ್ಪೆ: ನಾನು ಬಯಸುವೆ ಇದರ ತಿರುಳು ಬಯಸುವಾತ ನೀನು. ನನ್ನ ಅರಿವು ಮರವೆ ಅಂದರೆ ನಿನ್ನ ಅರಿವು ಮರವೆ. ಯಾವುದೇ ಕಡೆಯಲ್ಲಿ ನಾನು–ಸಿದ್ಧರಾಮ–ನಡೆದಾಡುವ. ಕೈ ಕಾಲು ಕಣ್ಣು ಕಿವಿ ಮನ ಬುದ್ಧಿ ಭಾವದಲ್ಲಿ ನಡೆದಾಡುವ. ಬಯಕೆಯ ಅಂದರೆ ಹೊಳೆಟ್ಟ ನಿಧಾನ ಚೈತನ್ಯ ನೀನೇ. ನಾನು ಅಂದರೆ ನನ್ನೊಳಗೆ ನೀನು ಎಂದು ಸಿದ್ಧರಾಮನ ಅರ್ಥ.

ಸಿದ್ಧರಾಮನ ಬಯಕೆಯ ನಿಧಾನ ಜಂಗಮ ಪ್ರಭುವಾಗಿದ್ದರೆ ಈ ಜಂಗಮ ಚೈತನ್ಯ ಗುಡಿಗುಂಡಾರಗಳನ್ನು ಕಟ್ಟಿತು ಹೇಗೆ? ನಮುನ್ಯವಲ್ಲಿ ಒರತೆಯನ್ನು ತೋಡುತ್ತಿರುವ

ಘರಾಟಿಯೇನು? ಗಾಳಿಯು ಕೈಯಲ್ಲಿ ಬೀಸಣಿಗೆ ಏಕೆ? ಬೆಂಕಿ ಚಳಿಗಾಲಕ್ಕೆಂದು ಮನೆ ಕಟ್ಟಿಕೊಳ್ಳ ಬೇಕೆ?

ಬಯಸುವ ಬಯಕೆ ನೀನಾದ ಪರಿ ಎಂತು ಹೇಳಾ?
ಅಱಿಸುವ ಅಱಿಕೆ ನೀನಾದ ಪರಿ ಎಂತು ಹೇಳಾ?
ಕಾಯವೆ ಲಿಂಗ, ಪ್ರಾಣವೆ ಶರಣನಾದ ಶರಣಂಗೆ
ಬೇಱೆ ದೇವಾಲಯವ ಮಾಡಿಸಲೇಕೆ ಹೇಳಾ?
ಗೊಹೇಶ್ವರಲಿಂಗವು ಸಾಧ್ಯವಾಯಿತ್ತೆಂಬುವ ಮಾತಿನಲ್ಲಿ ಕಂಡೆವಲ್ಲದೆ
ಕಾರ್ಯದಲ್ಲಿ ಕಾಣಲಿಲ್ಲ ನೋಡಾ ಸಿದ್ಧರಾಮಯ್ಯಾ.[೧]

ಲಿಂಗ ಅಂಗ ಸಮರಸವಾಗಿ, ನಿನ್ನ ಕಾಯ ಲಿಂಗವಾಗಿ ಮತ್ತೆ ನಿನ್ನ ಕಾಯಲಿಂಗದೊಳಗೆ ಗೊಹೇಶ್ವರನ ಶರಣ ಪ್ರಾಣಲಿಂಗವಾಗಿದ್ದರೆ, ಸಿದ್ಧಾ. ಬೇರೆ ದೇವಾಲಯ ಕಟ್ಟಿಸಿ ಅಲ್ಲಿ ಲಿಂಗಪ್ರತಿಷ್ಠೆ ಮಾಡುವ ದಂದುಗದಲ್ಲಿ ನೀನೇಕೆ ಬಿದ್ದೆ? ಮಾತಿನ ಲಿಂಗ ಕಾರ್ಯಲಿಂಗವಲ್ಲ ಸಿದ್ಧರಾಮಾ.

ಪ್ರಭುದೇವರ ಈ ಮಾತಿಗೆ ಸಿದ್ಧರಾಮನ ಉತ್ತರವನ್ನು ೭ನೆಯ ಅಧ್ಯಾಯದಲ್ಲಿ ನೋಡಬಹುದು. ತಾನು ಕೆರೆ ದೇಗುಲಗಳನ್ನು ಕಟ್ಟುತ್ತಿರುವುದು 'ನೀವು ಕೊಟ್ಟ ನಿರೂಪ'. ಇದು ಮಲ್ಲಿನಾಥನ ಇಚ್ಛೆ. ಆಣತಿ. ಅಪ್ಪಣೆ. ಆ ಇಚ್ಛೆಗೆ ತನ್ನ ಸರ್ವಶಕ್ತಿಯನ್ನು ಮಣಿಸಿ ಪೂಜಿಸಿ ಅರ್ಪಿಸುವುದೇ ತನ್ನ 'ಮರ್ತ್ಯಲೋಕದ ಮಣಿಹ'. ಇದು ನಿಮ್ಮ ನಿರೂಪ ಅಲ್ಲವಾದರೆ. ನನ್ನ ಕತ್ತಲೆಯಲ್ಲಿ ನಿಮ್ಮ ಆದೇಶ ಕತ್ತಲೆ ಹಚ್ಚಿಕೊಂಡು ನನಗೆ ಕಂಡಿದ್ದರೆ ಅದನ್ನು ಕತ್ತಲೆಯಿಂದ ಬಿಡಿಸುವುದು ನಿಮ್ಮ ಧರ್ಮ. 'ಇನ್ನು ಮುಂದೆ ಸ್ವಯವಪ್ಪಂತೆ ನಡೆಸಾ ಕಪಿಲಸಿದ್ಧಮಲ್ಲಿನಾಥಯ್ಯಾ.' 'ನಿಮ್ಮಲ್ಲಿ ನಿಜವಳವಡುವಂತೆ ಮಾಡಾ......'

ಜಂಗಮ ಮಲ್ಲಿನಾಥನಿಂದ ದಿವ್ಯದ ನಿರೂಪ. ನಿಜರೂಪ ಇದು:
ಕೆಱೆ ದೇಗುಲಂಗಳೆಲ್ಲವು ಹಿಂದಣ ಅಡಿವಜ್ಜೆಗೆ ರೂಪು.
ಕರ್ಮಕಾಂಡ ಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು.
ಹಿಂದಣ ಮುಂದಣ ಸಂದನಳಿದು.
ಗೊಹೇಶ್ವರಲಿಂಗದಲ್ಲಿ ಸಲೆ ಸಂದಿರಬೇಕು ಸಿದ್ಧರಾಮಯ್ಯಾ.[೨]

ಕೆರೆ ದೇಗುಲ ಅನ್ನಛತ್ರ ಅರವಟಿಗೆ ಹಿಂದೆ ಧರ್ಮ ನಮಗೆ ಹೇಳಿದ ಪುಣ್ಯ ಮಾರ್ಗ. ಸ್ವರ್ಗಕ್ಕೆ ಕರೆದೊಯ್ಯುವ ಕರ್ಮಮಾರ್ಗ. ಸ್ವರ್ಗದಾಚೆಯನ್ನು ಕಾಣಲರಿಯದ ಧರ್ಮ. ಮುನ್ನಿಂದ ಕರ್ಮಮಾರ್ಗವನ್ನುಳಿದ ಬೇರೆ ಮಾರ್ಗವನ್ನು ಕಟ್ಟಲರಿಯದ ಧರ್ಮ ಹಿಂದೆ ಇತ್ತು. ಯಜ್ಞ ಯಾಗ ಜಪ ತಪಗಳಂತೆ ಎಲ್ಲರು ಅದನ್ನೆ ಬಳಿಬಳಸಿ ಮಾರ್ಗವನ್ನು ಸರಳಮಾಡಿದರು 'ಸತ್ತು ಸ್ವರ್ಗ ಕಾಣಲಿಕ್ಕೆ'. ಅದರಂತೆ ಯಾವ ನಿಯಮಾದಿ

೧. ಶೂ. ಸಂ. ಪು. ೫೭. ವ. ೬೩. ೨. ಶೂ. ಸಂ. ಪು. ೫೭, ವ. ೮೬.

ಯೋಗ. ಯೋಗಸಮಾಧಿಯನ್ನು ದಾಟಿ 'ನಿಜ ಸಹಜ ಸಮಾಧಿ'ಯನ್ನು, ನಿಜ ಸಮಾಧಿಯನ್ನು, ನಿಜನಿರಾಳವನ್ನು ಸಾಧಿಸದ ಯೋಗ, ಹುಟ್ಟು ಸಾವಿನ ಗಡಿಯಾಚೆ ಮೀರಿಹೋಗುವ ಸಾಹಸ ಮಾಡಲಿಲ್ಲ. ಇದ್ದ ಇರವು ಸಹಜಯೋಗ ಎಂಬ ಸತ್ಯ ಯೋಗದ ನಿರಾಳದ ನಿಲವು ಹಿಂದಿನ ಯೋಗಪರಂಪರೆಗೆ ಸಿಕ್ಕಲಿಲ್ಲ. ಹಿಂದಿನ ಪದ್ಧತಿ ಮತ್ತು ಮುಂದಿನ ಬಂಧನವನ್ನು ಕಡಿದುಹಾಕಿ 'ಗೊಹೇಶ್ವರಲಿಂಗದಲ್ಲಿ ಸಲೆ ಸಂದಿರಬೇಕು ಸಿದ್ಧರಾಮಯ್ಯಾ.' ಹಿಂದಿನದು ಕರ್ಮಕಾಂಡ. ಕರ್ಮಯೋಗ.

ಕಾಯ ಕರ್ಮವನ್ನು ಮಾಡದಿದ್ದರೆ. ಕಾಯಚೈತನ್ಯವನ್ನು ಕೆರೆ ದೇಗುಲ ಮುಂತಾದ ಸತ್‌ಕರ್ಮ ಸತ್ಕಾರ್ಯಕ್ಕೆ ವಿನಿಯೋಗಿಸದಿದ್ದರೆ, ಕಾಯದ ಕ್ಷೇತ್ರದಲ್ಲಿ ಜಪ ತಪ ಧ್ಯಾನ ಧಾರಣ ನೇಮ ನಿತ್ಯಗಳನ್ನು ಚಿತ್ತಿ ಪುಣ್ಯ ಪವಿತ್ರ ಪಾವನ ಶುದ್ಧಿ ಶಿವ ಮಂಗಲಗಳನ್ನು ಬೆಳೆಯದಿದ್ದರೆ, ಕಾಯಕ್ಕೆ ಕರ್ಮವನ್ನು ಯೋಗಿಸಿ ಕಾಯಸಿದ್ಧಿಯನ್ನು ಪಡೆಯದಿದ್ದರೆ 'ನಿರ್ಮಲ' ಸುಚಿತ್ತವನರಿವ ಪರಿ ಇನ್ನೆಂತು?–ಎಂದು ಕರ್ಮಯೋಗಿ 'ಶಿವಸಿದ್ಧ'ನ ಪ್ರಶ್ನೆ. ಕರ್ಮಯೋಗದಿಂದ ಕಾಯ ಪಾಕವಾದರೆ, ಶುದ್ಧ ಶಿವಕರ್ಮ ಚೈತನ್ಯಪಟುವಾಗಿ ಈ ದೀಪ್ತಚೈತನ್ಯದಿಂದ ಭಾವವನ್ನು ಪಕ್ವಗೊಳಿಸಿದರೆ ಭಾವಶುದ್ಧಿಯಲ್ಲಿ. ನಿರ್ಮಲ ಸುಚಿತ್ತದಲ್ಲಿ ಮೂರ್ತಗೊಂಡಿರುವ ಮಲ್ಲಿನಾಥನನ್ನು ಅರಿಯಲು ಬರುವುದಿಲ್ಲವೇ? ಕರ್ಮದಲ್ಲಿ ಮಲ್ಲಿನಾಥ ಮೂಡದೆ ಜ್ಞಾನದಲ್ಲಿ 'ಯೋಗಿನಾಥ' ಉದಯವಾಗುವುದೆಂತು?–ಎಂಬುದು ಸಿದ್ಧನ ಸಮಸ್ಯೆ.

ಸಿದ್ಧಾ, ನಿನ್ನ ಮಾತು ನಿಜ. ಕರ್ಮ ಮಾಡಬೇಕು. ಮಾಡಬೇಕು. ಸಾಧನೆ ಇಲ್ಲದೆ ಸಿದ್ಧಿ ಇಲ್ಲ. ಇಲ್ಲ. ಆದರೆ ಸಿದ್ಧಾ. ಸಾಧನೆ ಸಿದ್ಧಿ ಅಲ್ಲ. ಹಾದಿ ಊರು ಅಲ್ಲ. ಹಾದಿಯೇ ಊರೆಂದು ಅಲ್ಲಿಯೆ ಎಡೆಯಾಡುವ ಸಂಭ್ರಮ ನಡೆವರೆ? ಕರ್ಮವೆ ಜೀವನದ ಪರಮ ಪ್ರಾಣವೆಂದು ಅಲ್ಲಿಯೆ ಮಗ್ನವಾಗಿ ಕರ್ಮವನ್ನೆ ಪ್ರಾಣಿಸಿದರೆ? ಸಾಧನೆಯಲ್ಲಿಯೆ ಸತ್ತರೆ? ಕರ್ಮದ 'ಜಾಡ್ಯ'ದಲ್ಲಿ, ಜಂಜಡದಲ್ಲಿ ಬಿದ್ದು 'ವಸ್ತುವನರಿಯ'ದೆ, 'ಲಿಂಗ ತಾನಾಗ'ದೆ,

> ರಾಗವಡಗಿ, ತಾಮಸ ನಿಂದು,
> ಅಹಂಕಾರದ ಗಿರಿಯುಡುಗಿ, ಮಾತಿನ ಬಣಬೆಯ ಮೆದೆಯ ಸುಟ್ಟು.
> ಕಾಯ ಕರ್ಮದಲ್ಲಿ ಸವೆಯುತ್ತ. ಜೀವ ಸಕಲಸಂಸಾರದಲ್ಲಿ ನೋಯುತ್ತ.
> ಮತ್ತೆ ಭಾವಶುದ್ಧ ಉಂಟೇ ಗೊಹೇಶ್ವರ ಲಿಂಗಕ್ಕೆ?[೧]

ರಾಗ ತಾಮಸ ಅಹಂಕಾರ 'ಅಹಂ ಕರೋಮಿ' ಎಂಬ ಅಹಂಭಾವದ ಮಾತನ್ನೆಲ್ಲ ಸುಟ್ಟು ಕರ್ಮವಮಾಡುತ್ತಿದ್ದರೂ ಕಾಯ ಸವೆದುಹೋಯಿತು, ಮಾಡಿಮಾಡಿ; ಜೀವ ನೊಂದು ಹೋದ ಈ 'ಸಕಲ'ದ ಸಂಸಾರದಲ್ಲಿ ತಿರುಗಿ ತಿರುಗಿ. ಜೀವವಂತ ಕಾಯದ ಈ ಪರಿ-ಭ್ರಮಣದಲ್ಲಿ ಭಾವದ ಶುದ್ಧವೆಲ್ಲಿ? ಭಾವದ ನಿಜಸ್ವಭಾವವೆಲ್ಲಿ? ಕಾಯ ಕರಣ ಇಂದ್ರಿಯಗಳು ನಾನು ಎಂಬ ಅರಿವನ್ನು, ನನ್ನದೆಂಬ ಉಟ್ಟುಕೊಂಡಿರುವ ಅರಿವನ್ನು

---

೧. ಶಿ. ಸಂ. ಸಾ. ೫೯. ವ. ೯೨.

ಬತ್ತಲೆಮಾಡಿ, ಮತ್ತೆ ತಾನು ಶಿವಾತ್ಮನೆಂಬ ಅರಿವನ್ನೂ ಕರಿಕುಗೊಳಿಸಿ ಮರೆಯುತ್ತ. 'ತುಷವ ನೀಗಿದ ತಂಡುಲದಂತೆ, ಕಾಯದ ದೆಸೆ ಶುದ್ಧವಾಗಿರಬೇಕು ಗೊಹೇಶ್ವರ ಲಿಂಗವನಱಿವುದಕ್ಕೆ ಸಿದ್ಧರಾಮಯ್ಯಾ.' ಕಾಯದಲ್ಲಿ ಕಾಯದಿಂದ ಮಾಡುವ ಕರ್ಮ ನಿರ್ಮಳವಾಗಿ, ಅರಿವು ಕರಿಗೊಂಡರೆ ಆಗ ಕಾಯ ಲಿಂಗವಿಸ್ತಾರಕ್ಕೆ ಶುದ್ಧವಾದ ನೆಲೆಯಾಗುತ್ತದೆ. ತವುಡು ತೆಗೆಯದೆ ಅಕ್ಕಿಯ ಅನ್ನ ಆಗಬಹುದೇ? ನೀನು ಮಾಡುತ್ತಿರುವ ಕರ್ಮಯೋಗ ಚಿನ್ನವನ್ನು ಒರೆದು ನೋಡುವಂತಿರುವ ಕರ್ಮ, ಹೂವನ್ನು ಮುಡಿದು ಕೊಳ್ಳುವಂತಿರುವ ಸಾಮಾನ್ಯ ಸಂಪ್ರದಾಯದ ಸುಕರಯೋಗ. ಆದರೆ ನಾನು ಹೇಳುವ ಯೋಗ ಚಿನ್ನವನ್ನು ಬಿಚ್ಚಿ ಬಣ್ಣವನ್ನು ತಿಕ್ಕಿ ನೋಡಬಲ್ಲ ಯೋಗ, ಹೂವನ್ನು ಕಳೆದು ಪರಿಮಳವನ್ನು ಮುಡಿದುಕೊಳ್ಳಬಲ್ಲ ಯೋಗ. ಕ್ರಿಯಾಶುದ್ಧಿಯಿಂದ ಬರುವ ಭಾವ ಶುದ್ಧಿಗೆ ನಿಲುಕದ ಯೋಗ ಈ ಲಿಂಗಯೋಗ. ಲಿಂಗಕ್ರಿಯೆ, ಲಿಂಗಜ್ಞಾನ, ಲಿಂಗಭಾವ.

ನಿನ್ನ ಮಾತೇ ನಿನ್ನನ್ನು ನಿರಾಕರಿಸುತ್ತಿದೆ ಪ್ರಭೂ. ನನ್ನ ಕಾಯ ಕರ್ಮಮಾಡಿ ಸವೆಯುತ್ತಿರಬಹುದು, ನನ್ನ ಜೀವ 'ಒರಿಯ ಸಂಸಾರ'ದಲ್ಲಿ ಸಿಕ್ಕು ನೋಯುತ್ತಿರ ಬಹುದು, ಆದರೆ ನಿನ್ನ ಗತಿಯಾದರೂ ಏನು?

ನುಡಿದಿಹೆನೆಂಬ ಉಲುಹಿನ ಗಳಹೆಯ ತೋಟಿ ಬಿಡದು.
ಉತ್ತಮ ಮಧ್ಯಮ ಕನಿಷ್ಠವೆಂಬ,
ತಿರುಗಿ ಕಂಡಿಹೆನೆಂಬ ಕಾಲಿನ ಎಡೆಯಾಟ ಬಿಡದು.
ಎನಗೆ ಗರ್ವ ಮೊದಲಾದಲ್ಲಿ ನಿಮಗೆ ಗರ್ವ ವೆಗ್ಗಳವಾಯಿತ್ತು.
ಉಭಯದ ತೋಟಿಯ ನಾನಿನ್ನಾರಿಗೆ ಹೇಳುವೆ ಕಪಿಲಸಿದ್ಧಮಲ್ಲಿಕಾರ್ಜುನಾ?[1]

ಸಿದ್ಧರಾಮನ ಈ ಮಾತನ್ನು ಕೇಳಿದೊಡನೆ 'ನೆಱೆಯಱಿತು ಮಱೆಯ ಬಲ್ಲರೆ ಎನ್ನ ಅಜಗಣ್ಣನಂತೆ ಶಬ್ದಮುಗ್ಧವಾಗಿರಬೇಕು', 'ನುಡಿಯ ಹಂಗಿನ್ನೂ ನಿಮಗೆ ಹಿಂಗದು. ನಡೆಯನೆಂತು ಪರರಿಗೆ ಹೇಳುವಿರಿ? ಒಡಲ ಹಂಗಿನ ಸುಳುಹು ಬಿಡದು; ಎನ್ನೊಡನೆ ಮತ್ತೇತಱನುಭಾವವಣ್ಣಾ? ತಾನಾದಲ್ಲದೆ ಇದಿರಿಂಗೆ ಹೇಳಬಹುದೇ?......'–ಎಂದು ಮುಂತಾಗಿ ಪ್ರಭುವನ್ನೂ ತಿದ್ದಿ ತಿಳಿಗೊಳಿಸಲು ಪ್ರತಿಭಟಿಸಿದ ಮುಕ್ತಾಯಕ್ಕನ ಮಾತು ಇನ್ನೂ ನಿಮ್ಮ ಕಿವಿಯಲ್ಲಿ ಅಂತರ್ಧ್ವನಿಸುತ್ತಿರಬಹುದಲ್ಲವೇ?[2] ಅಕ್ಕನ ನಿಜಾನುಭವದ 'ತಾನಾದಲ್ಲದೆ ಇದಿರಿಂಗೆ ಹೇಳಬಹುದೇ?' ಎಂಬ ಮಾತಿನಲ್ಲಿ ಸಿದ್ಧರಾಮನ ಈ ಪ್ರಶ್ನೆಗೆ ಪ್ರಭುದೇವರು ನೀಡುವ ಉತ್ತರದ ಕೀಲವೂ ಇದೆ. ಅನುಭಾವ ಇದಿರು ಬದಿರು ಕೂತು ಮಾಡುವ ಕಿವಿಯ ಹುಗ್ಗಿಯಲ್ಲ. ಗುರು ಶಿಷ್ಯರ ಸಾಮರಸ್ಯದಲ್ಲಿ ನಿಜೋಪದೇಶ ಪರಿ

೧. ಶೂ. ಸಂ. ಪು. ೫೮, ವ. ೯೩.

೨. ಈ ಸಮಾನ ಸಂದರ್ಭವನ್ನು ಪರೀಕ್ಷಿಸಿದರೆ ಶಿವಯೋಗಿ ಸಿದ್ಧರಾಮನ ಅನುಭವ ಮತ್ತು ಆತನ ವ್ಯಕ್ತಿತ್ವಕ್ಕಿಂತ ಅಜಗಣ್ಣನ ತಂಗಿ ಮುಕ್ತಾಯಕ್ಕನ ಅನುಭವ ಮತ್ತು ವ್ಯಕ್ತಿತ್ವ ಹೆಚ್ಚು ಎತ್ತರವಾದ ಸ್ಥಲದಲ್ಲಿ, ಗೊಹೇಶ್ವರಲಿಂಗಕ್ಕೆ ಅತಿ ಸಮೀಪವಾದ ಸ್ಥಲದಲ್ಲಿ ನಿಂತಿವೆ ಎಂಬುದು ತನ್ನ ತಾನೆ ವೇದ್ಯವಾಗುತ್ತದೆ.

ವಂತೆ ಅನುಭಾವಮಾಡುವ ಶರಣಶರಣರಲ್ಲಿ ಸಾಮರಸ್ಯವಿಲ್ಲದ ಭಿನ್ನಭಾವದವರಲ್ಲಿ ನಿಜಾನುಭಾವ ಹರಿವಂತಿಲ್ಲ.

ಕ್ಷೀರಕ್ಕೆ ತವರಾಜವ ಹೊಯಿದಲ್ಲಿ ಬೇಱೆ ಲೇಸು ಕಷ್ಟವನಱಿಸುವರೆ?
ಅಂಗಕ್ಕೆ ತಿಮಿರವಾದಲ್ಲಿ ಅಂಗುಲವುಟ್ಟಿ ತಿಮಿರದ ಅಂಗವ ಕೆಡಿಸಿವರೆ
ಅಂಗಕ್ಕೆ ಮಿಥ್ಯ ಉಂಟೆ?
ಎನ್ನ ಅಂಗವು ತಾನಾದ ಕಾರಣ
ನೀನೆಂಬ ನಾಮ ಬೇಱಿಲ್ಲ.–ಗೊಹೇಶ್ವರಲಿಂಗವು ನೀನಾದ ಕಾರಣ.[೧]

ರಾಮಾ, ನನ್ನಿಂದ ನೀನು ಬೇಱೆ ಎಂಬ ಭಿನ್ನಬುದ್ಧಿ, ಭಿನ್ನಭಾವ ನಿನಗೆ. ಈ ನೀನು ನಾನು ಸಮುದ್ರದ ಮೇಲೆ ತೋರುವ ತರಂಗದ ಬೆಳಸು. ಸಮುದ್ರ ಒಂದು, ಮೂಡುವ ತೆರೆ ಹಲವು. ಭೂಮಿ ಒಂದು ವೃಕ್ಷ ಹಲವು. ನಿನ್ನ ಕರ ಚರಣ ನನ್ನ ಕರ ಚರಣ ಬೇರೆ. ಆದರೆ ಎಲ್ಲಾ ಕರಚರಣ ಗೊಹೇಶ್ವರಲಿಂಗದ ಕರ ಚರಣ. ನಾನು ನೀನೆಲ್ಲ ಹೃದಿಸ್ಥಿತ ಗೊಹೇಶ್ವರಲಿಂಗದ ಅಂಗ. ಈ ಒಂದು ಅಂಗದಲ್ಲಿ ಒಂದೆಡೆ ತಿಮಿರ, ಹೊಲಸು, ಮದಡು, ತಾಮಸ ಇದ್ದರೆ ಎದ್ದರೆ, ಅದೇ ಅಂಗದ ಕರಾಂಗುಲಿಯಿಂದ ತಿಮಿರದ ಕಶ್ಮಲಾಂಶವನ್ನು ಕಿತ್ತು ತೆಗೆದುಹಾಕಿದರೆ ತಪ್ಪೇನು? ನಿನ್ನ ಹೃದಯದ ಕಶ್ಮಲ ಗೊಹೇಶ್ವರಲಿಂಗಕ್ಕೆ ಅಂಗ ವಾದ ಶರಣ ಅಲ್ಲಯ್ಯನ ಅಂಗದಲ್ಲಿ ತೋರಿದ ಕಶ್ಮಲ. ಅದನ್ನು ತೆಗೆದರೆ, ನುಡಿನು ತೆಗೆದರೆ, ಉಲಿದು ಕಿತ್ತರೆ. ತಿರುಗಿ ಕಂಡು ಬೀಸಾಡಿದರೆ 'ಗಲಭೆಯ ತೋಟಿ' 'ಕಾಲಿನ ಎಡೆಯಾಟ' 'ಗರ್ವ ಪೆಗ್ಗಳ' ಎಲ್ಲಿದೆ ರಾಮಾ? ತನ್ನ ತಿನಿಸನ್ನು ತಾನು ಕೆರೆದು ಕಳೆದರೆ ಇಲ್ಲಿ ಎಲ್ಲಿದೆ ಗಲಭೆ? '......ಗೊಹೇಶ್ವರಲಿಂಗದಲ್ಲಿ ನಾ ನೀನೆಂಬ ಭಾವವಿಲ್ಲ ಸಿದ್ಧರಾಮಯ್ಯಾ.'

ಹೀಗಿದ್ದರೆ ಮತ್ತೆ ಮುಂದೆ ಸಮಸ್ಯೆ ಒಡ್ಡಿಕೊಂಡು ನಿಲ್ಲುತ್ತದೆ ಸಿದ್ಧರಾಮನಿಗೆ. 'ನಿನ್ನ ಒಳಗು ನಾನಾದಡೆ ತಾಮಸದ ರಾಗ ವಿರಾಗವಾಗದು' 'ಇಂತು ನಿನ್ನೊಳಗು ನಾನಾದಡೆ ಲಿಂಗದಲ್ಲಿ ಏಕತ್ವ ಘಟಿಸದು.' ಏಕೆ? 'ಕಪಿಲಸಿದ್ಧಮಲ್ಲಿಕಾರ್ಜುನಲಿಂಗ ವೆಂಬ ಪುರುಷರತಿ ಕೂಟಸ್ಥವಿಲ್ಲ', ಹೀಗೇಕೆ? ಇದೇನು?

ಸಿದ್ಧಾ, ಕಣ್ಣಲ್ಲಿ ಜ್ಯೋತಿರ್ಲಿಂಗ, ಬ್ರಹ್ಮರಂಧ್ರದಲ್ಲಿ ಯೋಗದ ಅಮೃತಲಿಂಗ, ಮತ್ತೆ ಕೈಯಲ್ಲಿ ಪ್ರತಿಷ್ಠೆಮಾಡಿದ ಗುಡಿಯ ಲಿಂಗ–ಇಲ್ಲಿ ಅಲ್ಲಿ, ಒಳಗೆ ಹೊರಗೆ ಪ್ರತಿಷ್ಠೆ ಗೊಂಡಿರುವ ಮೂರು ಲಿಂಗದ ಸಂದು ಬಿರುಕು ಮಾಯದೆ ಮುಚ್ಚದೆ 'ತಾನು ಲಿಂಗ ಲಿಂಗ ತಾನು ಸಮರಸವಾಗಿ ಒಂದಾದ 'ಏಕತ್ವದ' ಮಾತೇಕೆ? ಎರಡು ಮೂರು, ಆರು ಹನ್ನೆರಡು ಲಿಂಗ ಅಲ್ಲ. ಲಿಂಗಕ್ಕೆ ಹೊರಗಾಗಿ ತಾನು ಇಲ್ಲ, ಏನೂ ಇಲ್ಲ. 'ಏಕಂ ಹಿ ಸತ್'. ಇಲ್ಲದ ಸಂದನ್ನು ಉಂಟುಮಾಡುವ ಭಿನ್ನಬುದ್ಧಿಗೆ ಏನೆನ್ನಬೇಕು? ಮತ್ತೇನು ನೀ ಹೇಳುವುದು? ಕರ್ಮಮಾಡಿ ಕಾಯದ ಕಪಿಯನ್ನು ಕಳೆದು, ಪಕ್ವವಾದ ಮನದಲ್ಲಿ ಆತ್ಮಜ್ಞಾನವನ್ನು ತುಂಬಿ, ಕಾಯ ಮನ ಆತ್ಮ ನಿರ್ಮಲವಾಗಿ ತಿಳಿದು ಪ್ರಸನ್ನಭಾವ

೧. ಶೂ. ಸಂ. ಪು. ೫೮. ವ. ೧೪೪.

ತೋರಿದಲ್ಲದೆ, 'ತ್ರಿವಿಧಭಾವ ಶುದ್ಧವಾಗಿಯಲ್ಲದೆ ಮೇಲ ಕಾಣಲಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ'—ಎಂದಲ್ಲವೆ? ಇದೆಂಥ ಹುಚ್ಚುಮಾತು ಸಿದ್ಧಾ! 'ಉಂಟು ಇಲ್ಲಾ ಎಂಬ ಸಂದೇಹ ನಿಂದಲ್ಲಿ ಗೊಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯಾ'. ಭಾವ ಶುದ್ಧಿಯ ಮೇಲೆ ಆ ಶುದ್ಧಿಯ ಕೆಳಗೆ ಲಿಂಗ ಉಂಟು ಲಿಂಗವಿಲ್ಲಾ ಎಂಬ ಸಂದಿನ ಭಾವ ಕಬ್ಬಿನ ಗಳ ಇದ್ದಂತೆ. ಕೆಳಗೆ ಸವಿ ಮೇಲೆ ಸೋಗೆ ಇಕ್ಷುದಂಡ. ಹೀಗಲ್ಲ ರಾಮಾ, ಲಿಂಗ ರಸದ ದಂಡ. ಕೆಳಗೆ ಮೇಲೆ, ಒಳಗೆ ಹೊರಗೆ–ಎಲ್ಲಿ ಕಡಿದರು ಸಮರಸ ತುಂಬಿ ಎಲ್ಲ ಮಯವಾಗಿರುವ, ರಸವಲ್ಲದೆ ಮತ್ತೇನೂ ಇಲ್ಲದ ಏನೂ ಅಲ್ಲದ ನಿರಾಳ ದಂಡ ಇದು ರಾಮಾ! ಮೇಲೆ ಕೆಳಗೆ ಉಂಟು ಇಲ್ಲ ಎಂಬ ಸಂದೇಹ ಈ 'ರಸಘುಟಿಯ'ವನ್ನು, ಈ 'ಕಡೆಯಾಣಿ'ಯನ್ನು ಕಬ್ಬಿಗೆ ತಂದಿಟ್ಟಿದೆ, ಪರುಷಪಾಷಾಣದ ಒರೆಗಲ್ಲ ಮೇಲೆ ಒರೆದು ನೋಡುವ ಸಾಹಸಕ್ಕೊಳಗು ಮಾಡಿದೆ. ಈ ನಿನ್ನ ಸಂದೇಹ ಲಿಂಗಕ್ಕೇ ಗುಡಿ ದೇಗುಲ ಕಟ್ಟಿ ಲಿಂಗವನ್ನು ಮೇಲೆ ಕೆಳಗೆ ಮಾಡಿದೆ, ಸಿದ್ಧಣ್ಣಾ. ಲಿಂಗ ಕಲ್ಲ ಗುಡಿಯಲ್ಲಿ ಸವಿ, ಕಾಯದ ಮನೆಯಲ್ಲಿ ಸೋಗೆ ಎಂದು ತಿಳಿದು ಗುಡ್ಡರಿಗೆ ಗುರುವಾದೆ ನೀನು. '...ಹೇಳಲಿಲ್ಲ, ಕೇಳಲಿಲ್ಲ. ಗೊಹೇಶ್ವರಾ, ನೀನು ಕಲ್ಲಾದರೆ ನಾನೇನಪ್ಪೆನಯ್ಯಾ?'[೧]

ತಾನು ನಡೆಸಿರುವ ಕರ್ಮಯೋಗದ 'ತಿಮಿರ' 'ತಾಮಸ' ತಿಳಿಯಿತು ಸಿದ್ಧ-ರಾಮನಿಗೆ. ನನ್ನ ಕತ್ತಲೆಯಲ್ಲಿ ನಿನ್ನನ್ನು ಸ್ವಚ್ಛವಾಗಿ ಕಾಣದೆ, ನಾನು ಮಾಡುತ್ತ ನೀನು ಮಾಡಿಸಿದೆ ಎಂದು ನಿನಗೆ ಅಪವಾದ ಕೊಟ್ಟೆ:

ನಾನೇನ ಮಾಡುವುದೆಲ್ಲವನೂ ನೀವೆಂದೆ ಇದ್ದೆನಯ್ಯಾ.
ನಾನೇನ ಮಾಡುವುದೆಲ್ಲವನೂ ನೀನೆಯಲ್ಲವೆಂದರೆ
ಅದು ಮಾಣಲಿ, ನಿಮ್ಮಾಣತಿ.
ಕಾಣಬಾರದ ಘನವ ಕಾಯದಲ್ಲಿ ಧರಿಸಿ,
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ,
ತೋಱಬಾರದ ಕುಱುಹ ಎನ್ನಱಿವಿನಲ್ಲಿರಿಸಿ,
ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲಸಿದ್ಧಮಲ್ಲಿನಾಥಯ್ಯಾ.[೨]

ಸಿದ್ಧರಾಮಾ, 'ಗೊಹೇಶ್ವರಲಿಂಗವು ಕಲ್ಪಿತವಲ್ಲ ನೋಡಯ್ಯಾ!' ಇಕೋ ಇದು ಬಿಲ್ಲು, ಅದು ಬಾಣ, ಹೀಗೆ ಜೋಡಿಸು, ಅಕೋ ಅಲ್ಲಿ ಗುರಿ, ಹೀಗೆ ಬಿಡು ಹಾಗೆ ಹೊಡೆ–ಎಂದು ತೋರಿಸಿಕೊಟ್ಟು ತಿಳಿಸಿ ಹೇಳುವ ಶರಸಂಧಾನದಂತೆ 'ಕಲ್ಪಿತ'ವಲ್ಲ ಲಿಂಗ. ಮುಳ್ಳೂರ ತೆರಹಿಲ್ಲದೆ ಎಲ್ಲೆಲ್ಲಿ ಸಂಭ್ರಮಿಸಿ ತುಂಬಿರುವ ಲಿಂಗದಲ್ಲಿ ಬಿಲ್ಲೋಜ ಚಟ್ಟಿ ಬಿಲ್ಲು ಬಾಣ ಹೆದೆ ಗುರಿ ಇಲ್ಲ. ಮತ್ತೆ ಸಿದ್ಧಾ,

---

೧. ಶೂ. ಸಂ. ಪು ೩೭, ವ. ೪.

೨. ಶೂ. ಸಂ. ಪು. ೫೯, ವ. ೧೦೦

ಇಲ್ಲಿ ಮತ್ತೆ ಪುಟ ೭೫ರಲ್ಲಿರುವ ೮೫ನೆಯ ವಚನವನ್ನು ನೆನೆಸಿಕೊಳ್ಳಬಹುದು.

ಅಭ್ಯಾಸದ ಮಾತಲ್ಲ. ಶ್ರೋತ್ರದ ಸುಖವಲ್ಲ.
ಶಾಸ್ತ್ರದ ಅನುಭವದ ಮಾತಲ್ಲ.
ಒಳಗಣ ಮಾತಲ್ಲ; ಹೊಱಗಣ ಮಾತಲ್ಲ.
ಇದಱಿಂಗವನಱಿಯದೆ ಅನುಭವವ ಮಾಡಿ ಫಲವೇನಯ್ಯಾ?
ಗೊಹೇಶ್ವರಲಿಂಗವು ಉಪಮಾತೀತ ನೋಡಾ ಸಿದ್ಧರಾಮಯ್ಯಾ ![1]

ಪ್ರಭುದೇವರ ಈ ಮಾತು ಅನುಭವ ಅಂದರೆ ಏನೇನಲ್ಲ ಎಂಬುದನ್ನು ಹೇಳಿ, ಏನಿರಬಹುದು ಎಂಬುದನ್ನು ಮಿಂಚುವಂತಿದೆ. ಈ ಮಾತು ಶ್ರೋತವ್ಯ, ಮಂತವ್ಯ, ನಿದಿಧ್ಯಾಸಿತವ್ಯ. ತೋರಿಸದೆ ತೋರಿದರೆ, ನುಡಿಯದೆ ಹೇಳಿದರೆ ಅದು ಅನುಭವ, ಅದು ಬೋಧೆ ಎಂಬ ಮಾತು ಹೊಳೆಯುತ್ತಿಲ್ಲವೆ ಇಲ್ಲಿ? ಅನುಭವಮಾಡುವಲ್ಲಿ 'ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು,'[2] 'ಮೂಗನ ಕಯ್ಯಲ್ಲಿ ಕಾವ್ಯವ ಕೇಳಿದಂತಿರಬೇಕು,'[2] 'ದರ್ಪಣದೊಳಗಣ ಪ್ರತಿಬಿಂಬದಂತೆ' ಹಿಡಿವರಿಗೆ ಅಳವಲ್ಲದಿರಬೇಕು,[2] 'ಕೂರ್ಮನ ಶಿಶುವಿನ ಸ್ನೇಹದಂತಿರಬೇಕು.'[2] ಇದೇ ನಿಶ್ಶಬ್ದ ಅನುಭವ.

ನಿಶ್ಶಬ್ದವಾದ ನಿಜಾನುಭವ ಶಬ್ದದಲ್ಲಿ, ಶಬ್ದವಾಗಿ ಮೂರ್ತಿಗೊಂಡರೆ ಅದೂ ತಪ್ಪಲ್ಲ. ಇದು 'ಕ್ಷೀರಕ್ಕೆ ತವರಾಜವ' ಹೊಯ್ದಂತೆ, ಮಾವಿನ ಮರದಲ್ಲಿ ದ್ರಾಕ್ಷೆಯ ಗೊಂಚಲು ಬಿಟ್ಟಂತೆ. ಮಾತು ಮಾಣಿಕ್ಯದ ದೀಪ್ತಿ, 'ಮಾತೆಂಬುದು ಜ್ಯೋತಿರ್ಲಿಂಗ...' ನಿಮ್ಮ ನಿಜವ ಹೇಳದಿರ್ದಡೆ ಎಂತುಳಿವೆನಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯಾ?'[3] '...... ಶಿವಯೋಗದ ಲೇಸಿನ ಠಾವ ತೋಱು ಕಪಿಲಸಿದ್ಧಮಲ್ಲಿಕಾರ್ಜುನಾ'[4]—ಎಂದು ಸಿದ್ಧ-ರಾಮ ಬಿನ್ನವಿಸಿಕೊಂಡರೆ 'ಕಾಯದ ಜೀವದ ಸಂದು ಭೇದವ ವಿವರಿಸಿ' ಸಿದ್ಧನನ್ನು ನಿಜದ ನೆಲೆಗೆ ಒಯ್ದು ನಿರಾಳಕ್ಕೆ ಎಚ್ಚರಿಸುತ್ತಾರೆ ಪ್ರಭುದೇವರು. ಜೀವಕ್ಕೆ ನೆಯ್ದುಕೊಂಡಿರುವ ಕಾಯ, ಅತ್ಮಕ್ಕೆ, ನಿಜಭಾವಕ್ಕೆ ಹೊಲಿದುಕೊಂಡಿರುವ ಜೀವ—ಇವನ್ನು ಬಿಚ್ಚಿ 'ನಿನ್ನೊಳಗೆ ತಿಳಿದು ನೋಡ'ಲು ಬೋಧಿಸುವ ರೀತಿ ಹೀಗೆ:

ದೇಹಭಾವವಳಿದಲ್ಲದೆ ಜೀವಭಾವವಳಿಯದು.
ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು.
ಭಕ್ತಿಭಾವವಳವಟ್ಟಲ್ಲದೆ ಅಱಿವು ತಲೆದೋಱದು.
ಅಱಿವು ತಲೆದೋಱಿದಲ್ಲದೆ ಕುಱುಹು ನಷ್ಟವಾಗದು.
ಕುಱುಹು ನಷ್ಟವಾದಲ್ಲದೆ ಮಾಯೆ ಹಿಂಗದು.
ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ ತಿಳಿಯಬಲ್ಲರೆ
ಗೊಹೇಶ್ವರಲಿಂಗದಱಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ.[5]

---

೧. ಶೂ. ಸಂ. ಪು. ೬೦. ವ. ೧೦೩.
೨. ಶೂ. ಸಂ. ಪು. ೨೪. ವ. ೨.
೩. ಅದೇ ಪು. ೬೦, ವ. ೧೦೪.
೪. ಅದೇ ಪು. ೬೧, ವ. ೧೦೫
೫. ಅದೇ ಪು. ೬೧, ವ. ೧೦೬

ನಿತ್ಯಕ್ಕೆ ನೆಯ್ದಿರುವ ಅನಿತ್ಯ, ಅನಾದಿಗೆ ಗಂಟುಬಿದ್ದಿರುವ ಆದಿ, ಪರಿಪೂರ್ಣಕ್ಕೆ ಬೆಸೆದು ಕೊಂಡಿರುವ ಅಪೂರ್ಣ, ಸತ್ತು ಚಿತ್ತು ಆನಂದವನ್ನು ಹೊಕ್ಕಲ್ಲಿ ಹೊಕ್ಕು ನಿಂದಲ್ಲಿ ನೆಳಲಾಗಿ ಬೆಂಬತ್ತಿರುವ ಅಸತ್ತು ಜಡ ಸಂಖ ದುಃಖ! 'ಆದಿಯೇ ದೇಹ, ಅನಾದಿಯೇ ನಿರ್ದೇಹ. ಆದಿಯೇ ಸಕಲ, ಅನಾದಿಯೇ ನಿಷ್ಕಲ. ಆದಿಯೇ ಜಡ, ಅನಾದಿಯೇ ಅಜಡ. ಆದಿಗೆ ಒಡಲುಂಟು, ಅನಾದಿಗೆ ಒಡಲಿಲ್ಲ. ಆದಿಯೇ ಕಾಯ, ಅನಾದಿಯೇ ಪ್ರಾಣ. ಈ ಎರಡೞ ಯೋಗವ ಭೇದಿಸಿ ತನ್ನಿಂ ತಾನೆ ತಿಳಿದು ನೋಡಲು......'[೧] ಪ್ರಭುದೇವರು ಹೇಳುವಂತೆ 'ಗೊಹೇಶ್ವರ ಲಿಂಗದಱಿವು ಸಾಧ್ಯವಪ್ಪುದು.' ಆತ್ಮ ಅನಾತ್ಮದ ಈ ಯೋಗವನ್ನು ಭೇದಿಸಿ, ಈ ಹೊಲಿಗೆಯನ್ನು ಬಿಚ್ಚಿ ಬೇರೆ ಮಾಡಬೇಕು. ತಾನು ದೇಹವೆಂಬ ದೇಹಭಾವ ಬಿಚ್ಚಬೇಕು. ಇದನ್ನು ಬಿಚ್ಚಿ ಬೇರೆ ಮಾಡಿದರೆ ಮತ್ತೆ ಜೀವಭಾವದ ನೆಯ್ಗೆ ಆತ್ಮಕ್ಕೆ. ಈ ಭಾವವನ್ನು ಉಚ್ಚಿ ಕಳೆದರೆ 'ನಿಜವನೆಯ್ದುವ' ಭಕ್ತಿ ಭಾವ ಮೈದೋರುತ್ತದೆ ತನ್ನಲ್ಲಿ. ಈ ಭಾವಪ್ರಸಾದದಲ್ಲಿ ತಾನು ಶಿವನೆಂಬ ಶಿವಭಾವ, ಶಿವಾನುಭಾವ, ಶಿವಜ್ಞಾನ ತಾನೆ ಪ್ರಕಾಶವಾಗುತ್ತದೆ. ಈ ಪ್ರಸನ್ನ ಶಿವಜ್ಞಾನಪ್ರಕಾಶ ದಲ್ಲಿ ಕಾಯ ಜೀವದ ಕುರುಹು, ನಾನು ನೀನಿನ ಹಜ್ಜೆ, ನಾನು ಜಗವೆಂಬ ಭಿನ್ನಭಾವದ ನೆಳಲು, ಇನ್ನೇನೋ ಕುರುಹು ಲಕ್ಷಣಗಳೆಲ್ಲ ತಂತಾವೆ ನಷ್ಟವಾಗುತ್ತವೆ. ಕುರುಹು ಸತ್ತರೆ ಮಾಯೆಗೆ ಉಳಿಗಾಲವಿಲ್ಲ. ಹೀಗೆ 'ಕಾಯದ ಜೀವದ ಸಂದು ಭೇದವಳಿದು ನೋಡಬಲ್ಲರೆ ನಿಜವು ಸಾಧ್ಯವಹುದು.'[೨]

ಹಾಲು ನೀರಿನ ಹೊಲಿಗೆಯನ್ನು ಸಿದ್ಧರಾಮ ಹೇಳುವಂತೆ ಹಂಸೆ ಬಿಚ್ಚಬಲ್ಲುದು. ಬೆಂಕಿಯೂ ಈ ಸಂದನ್ನು ಬಿಚ್ಚಬಲ್ಲುದು. ಹಂಸೆ ಬಿಚ್ಚುವ ಕ್ರಮ ಬೇರೆ, ಬೆಂಕಿಯ ರೀತಿ ಬೇರೆ. ಹಾಲಿನಿಂದ ನೀರನ್ನು ಬಿಚ್ಚಿ ಬೇರಿರಿಸುತ್ತದೆ ಹಂಸೆ; ನೀರನ್ನು ಸುಟ್ಟು ಕಳೆದು ಹಾಲನ್ನು ಬಿಚ್ಚಿಡುತ್ತದೆ ಬೆಂಕಿ. ದೇಹ ಜೀವದ ಸಂದನ್ನು ಹಂಸೆಯಂತೆ ಬಿಚ್ಚುತ್ತಾನೆ ಭಕ್ತ, ಶರಣ; ಬೆಂಕಿಯಂತೆ ದೇಹ ಜೀವವನ್ನು ಸುಟ್ಟು ಸೊರಗಿಸಿ ಆತ್ಮನನ್ನು ಬೇರೆ ಗೊಳಿಸುತ್ತಾನೆ ಜೀವನಸಂನ್ಯಾಸಿ. ಬಿಚ್ಚಿರಿಸುವಲ್ಲಿ ಶರಣನ ಉದ್ದೇಶ ಪೂಜೆಯಿದೆ, ಭಕ್ತಿ ಯಿದೆ, ಅರ್ಪಣ ಪ್ರಸಾದವಿದೆ. 'ಕೂಡಲಸಂಗನನೊಲಿಸಲು ಬಂದ ಪ್ರಸಾದಕಾಯವ ಕೆಡಿಸಲಾಗದು,' ಪ್ರಸಾದ ಜೀವವ ಕೆಡಿಸಲಾಗದು. ಅನಾದಿಯಿಂದ ಆದಿಯನ್ನು ಬಿಚ್ಚಿ

---

೧. ಶೂ. ಪರಾಮರ್ಶೆ ನೋಡು ಪು. ೪೧೪, ಅಡಿ ಟಿಪ್ಪಣಿ.

೨. ಶೂ. ಸಂ. ಪು. ೬೧, ಪ್ರ. ೧೦೭.

ಇದರ ವಿವರವನ್ನು ಮತ್ತಷ್ಟು ಸ್ಪಷ್ಟವಾಗಿ ನೋಡಿ ಚೆನ್ನಬಸವಣ್ಣನವರ ಈ ವಚನದಲ್ಲಿ:
ಪೂಜಿಸುವನ್ನಕ್ಕರ ಫಲದಾಯಕ ಕಂಡಯ್ಯಾ.
ಸಹಜಸಂಬಂಧದಱಿವು ಹುಟ್ಟದನ್ನಕ್ಕರ ಎರಡೆನಿಸುವುದು.
ಗಮನ ನಿರ್ಗಮನಸವಾಗಿ ಆಶೆ ಆಮಿಷವಳಿವುದನ್ನಕ್ಕರ ಲಿಂಗದ ಪೂಜೆ ಎಲ್ಲಿಹುದೋ?
ಘಟದೊಳಗೆ ದಿಟವಾಗಿರ್ದ ಪಂಚಭೂತದ ಹಂಗಳಿದಲ್ಲದೆ
ನಮ್ಮ ಕೂಡಲಚೆನ್ನಸಂಗಯ್ಯನ ಮುಟ್ಟಬಾರದು.

ವ. ಸಾ. ಸಂ. ಪು. ೧೫೪, ವ. ೮೩

ಆದಿ ಅನಾದಿಯಲ್ಲಿ ಅರ್ಪಿತವಾಗಬೇಕು. ನಿತ್ಯದಿಂದ ಅನಿತ್ಯದ ಬೆಸುಗೆಯನ್ನು ಬಿಡಿಸಿ, ಅನಿತ್ಯ ನಿತ್ಯಕ್ಕೆ ಪೂಜೆಯಾಗಬೇಕು. ಕಾಯ ಜೀವದ ಮನ ಬುದ್ಧಿಯ ನೆಯ್ಗೆಯನ್ನು ಬಿನ್ನಾಣದಿಂದ ಬಿಚ್ಚಿ ಇದ್ದಕ್ಕಿದ್ದಂತೆ ಇರಿಸಿ ಮತ್ತೆ ಲಿಂಗ–ಸಂಸ್ಕೃತವಾದ, ಶಿವದೀಕ್ಷೆಯಾದ ಅದನ್ನೆ ಲಿಂಗಕ್ಕೆ ಪೂಜೆಮಾಡಬೇಕು, ಲಿಂಗಕ್ಕೆ ಅರ್ಪಿಸಬೇಕು. ಚಿನ್ನದಿಂದ ಬಣ್ಣದ ನೆಯ್ಗೆಯನ್ನು ಬಿಡಿಸುವ ಅಸಾಧ್ಯ ಸಾಧನ ಕಾಯಜೀವದ ಹೊಲಿಗೆಯನ್ನು ಬಿಚ್ಚುವ ಈ ವಿಗಡ ಬಿನ್ನಾಣ.

ಸಿದ್ಧರಾಮನಿಗೆ ಈ ಪೊಲಿಗೆಯನ್ನು ಕಾಯ ಜೀವ ಹರಿಯದೆ ಬಿಚ್ಚುವ ಕ್ರಮವನ್ನು ಪ್ರಭುದೇವರು ಹೀಗೆ ಹೇಳುತ್ತಾರೆ: ಸಿದ್ಧಾ, ಕಾಯ ಹರಿಯದಂತೆ ಕಳವಳವನ್ನು ಬಿಚ್ಚಬೇಕು. ಕಳವಳವಿಲ್ಲದ ಕಾಯ ಲಿಂಗಕಾಯವಾಗುತ್ತದೆ. ಪಂಚಭೂತಶರೀರದ ಗುಣಧರ್ಮ ಕಳವಳ. ಭೂತಾತ್ಮನಾದ ಮಾನವ ಶಿವಪ್ರಜ್ಞೆಯಲ್ಲಿ ಎಚ್ಚತ್ತರೆ, ಎಚ್ಚತ್ತು ಕಾಯದ ಕಳವಳವನ್ನು ನೋಡಿದರೆ ಕಾಣುವುದಿಲ್ಲ ನೋಡು ರಾಮಾ. ಪಂಚಭೂತ ಘಟದ ಸಂಗ ನಿಸ್ಸಂಗವಾದ ಶಿವಶಾಂತ ಘಟದಲ್ಲಿ ಪ್ರಶಾಂತವಲ್ಲದೆ ಕಳವಳವಿಲ್ಲ. ಅದರಂತೆ ಜೀವದ ದುಷ್ಕೃತ, ಜೀವಭಾವದ ಪ್ರಪಂಚವ್ಯವಹಾರ ಜೀವಭಾವ ಲಿಪ್ತವಾದ ಅಂಗಜೀವಿಗೆ ಉಂಟು. ಆದರೆ ಶಿವಪ್ರಜ್ಞೆಯಲ್ಲಿ ಭೂತಜೀವದ ವ್ಯವಹಾರ, 'ದುಷ್ಕೃತ' ದೂರವಾಗಿ ಬಿಟ್ಟಿದೆ–ಬೆಳಗಿಗೆ ಕತ್ತಲೆ ದೂರವಾಗುವಂತೆ. ಮತ್ತೆ ಈ ಕಾಯಜೀವಕ್ಕೆ ಪಂಚಭೂತ ಸಂಗದಿಂದ ಬಂದ ಸೂತಕ, ಹತ್ತಿದ ಹೊಲಸು. ಅದ ಮ್ಯಲಿಗೆ ಮನಸ್ಸಿನ 'ಮನತನ' ನಿರ್ಮಲವಾದರೆ ತಾನೆ ಸ್ವಚ್ಛವಾಗಿ ಶುಭ್ರವಾಗಿ ಮಡಿಯಾಗುತ್ತದೆ. ಮತ್ತೆ ಮುಂದೆ 'ಗೊಹೇಶ್ವರಲಿಂಗವನರಿಯಬೇಕಾದರೆ' ಕಾಯ ಜೀವ ಮನ ಮಡಿಯಾದ 'ನಿನ್ನೊಳಗೆ ತಿಳಿದು ನೋಡಾ.' ಏನು ಸಿದ್ಧಾ, ಯೋಗಾನುಷ್ಠಾನದಿಂದ 'ಮನದ ರಜದ ಮಣ್ಣ' ಕಳೆದೆನೆಂದು ಹೇಳುವೆಯಾ? ನಿನ್ನದೆಂಥ ಯೋಗ ಅಣ್ಣಾ!

ಮನವ ತೊಳೆದು ನಿರ್ಮಲವ ಮಾಡಿಹೆನೆಂಬ ಯೋಗವೆಂತುಟೊ?
ಮನವ ಹಿಡಿದು ತಡೆದಿಹೆನೆಂಬವರ ಮರುಳಾಗಿ ಕಾಡಿತ್ತು ನೋಡಾ ಮನವು.
ಮನವಿಕಲ್ಪಜ್ಞಾನದಿಂದಱಿದು
ಅದ ಶುದ್ಧವ ಮಾಡಿಹೆನೆಂಬುದು ತಾನೆ ಮನ ನೋಡಾ!
ನಮ್ಮ ಗೊಹೇಶ್ವರಲಿಂಗದನುವನಱಿದಿಹೆನೆಂಬವರು
ಮನವಿಲ್ಲದಿರಬೇಕು ನೋಡಾ ಸಿದ್ಧರಾಮಯ್ಯಾ.[೧]

೧. ಶೂ. ಸಂ. ಪು. ೬೨, ವ. ೧೧೦.

ಈ ಸಂದರ್ಭದಲ್ಲಿ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಪ್ರಭುದೇವರು ಮನೋಲಯವನ್ನು ಕುರಿತು ಬಸವಣ್ಣನವರಿಗೆ ಹೇಳುವ ಮಾತನ್ನು ಕೇಳಿ:

ಮನವ ಬಹಿರಂಗದಲಿ ಚರಿಸುವ ।
ಮನುಜನವನಜ್ಞಾನಿ ಮತ್ತಾ ।
ಮನವನಂತರ್ಮುಖದಲಾಚರಿಸಿದೊಡೆ ಸರ್ವಜ್ಞ ॥

(ಮುಂದಿನ ಪುಟ ನೋಡಿ)

ಮನದ ಸಂಕಲ್ಪ ಮನದ ವಿಕಲ್ಪವಳಿದು 'ನಿಮ್ಮ ವಿಚಾರವೆ ಅಂತರಂಗದೊಳಗೆ ತುಂಬಿತ್ತಾಗಿ. ಎನ್ನ ಮನದ ಮುಂದೆಲ್ಲ ನೀನೆಯಾಗಿರ್ದೆಯಯ್ಯ ಕಪಿಲಸಿದ್ಧಮಲ್ಲಿನಾಥಾ' –ಎಂಬ ಸಿದ್ಧರಾಮನ ವಿಚಾರಕ್ಕೆ ಪ್ರಭುವಿನ ಉತ್ತರವೆಂದರೆ ಮನದ ಸಂಕಲ್ಪವಿಕಲ್ಪದ ಮನೋಜಾಲದಲ್ಲಿ ಹಿಡಿದಿಹೆನೆಂದು ಮನ ಹವಣಿಸಿದರೆ ಈ ಜಾಲದಲ್ಲಿ ಲಿಂಗದ ಆಜೀವ, ಲಿಂಗದ ನಿಜ, ಲಿಂಗದ ಅನು ಸಿಲುಕಬಾರದಂತೆ, ವಿಚಾರ ಬುದ್ಧಿ ನೆಯ್ದ ತರ್ಕಶಾಸ್ತ್ರ ಮತ ದರ್ಶನದ ದಸರಿಜಾಲದಲ್ಲಿಯೂ ಸಿಲುಕಲಾರದು 'ಗೊಹೇಶ್ವರಲಿಂಗ'. ವಿಚಾರಜಾಲವನ್ನು ಬೀಸುವ ತತ್ತ್ವವಿಚಾರಿಗಳು ತಮ್ಮ ನೆಯ್ದ ಬಲೆಯಲ್ಲಿ ತಾವೆ ಸಿಕ್ಕಿಬಿದ್ದರು. 'ತೆರಣಿಯ ಹುಳು ತನ್ನ ನೂಲು ಸುತ್ತಿ ತಾನೆ ಸಾವ ತೆರನಂತೆ' ತಮ್ಮ ವಿಚಾರವೆ ತಮಗೆ ಮೃತ್ಯುವಾಯ್ತು ಈ ವಿಚಾರಿಗಳಿಗೆ. 'ತನ್ನ ತಿಳಿದು ನೋಡಿಹೆನೆಂಬವರ ವಿಚಾರ ವೆಂಬ ಬಲೆಯಲ್ಲಿ ಕೆಡಪಿದನು.' ಹೀಗೇಕೆ ಎಂದು ನೀವು ಕೇಳಿದರೆ ಮನ ಬುದ್ಧಿ, ಬುದ್ಧಿಪದದ ಬುದ್ಧಿಯ ಹೋಲಿಕೆಯ ವಿಚಾರದ ಸಂತಾನವೆಲ್ಲ ಪಂಚಭೂತ ಸಂಗದಲ್ಲಿದ್ದ ಮಾನವನ. ಪ್ರಕೃತಿಯ ಘಟದಲ್ಲಿ ಮೂಡಿದ ಮನಸ್ಸ್ಥಲದರಿವಿನ ತರಂಗಕೋಟಿ. 'ಪಂಚಭೂತದ ಹಂಗಳಿದಲ್ಲದೆ ನಮ್ಮ ಕೂಡಲಚೆನ್ನಸಂಗಯ್ಯನ ಮುಟ್ಟಬಾರದು.' ವಿಚಾರಮಾಡದೆ ಕೆಟ್ಟರು ಅಜ್ಞಾನಿಗಳು, ಅಲ್ಪಜ್ಞಾನಿಗಳು; ವಿಚಾರ ಮಾಡಿ ಮಾಡಿ ಕೆಟ್ಟರು ಬುದ್ಧಿಜ್ಞಾನಿಗಳು. ಮನ 'ನಿರ್ಮಲ'ವಾಗಿ ಅಂದರೆ ಮನ 'ನಿರ್ಮನ'ವಾಗಿ, ವಿಚಾರದ ಗಮನ ನಿರ್ಗಮನವಾಗಿ ನಿಂದರೆ ನಿಜಗಂಭೀರ, ಸಹಜ ನಿರಾಲಂಬ, ಕಾಯ ಜೀವ ಮನ ಬುದ್ಧಿ ವಿಚಾರದ ಹಂಗಿಲ್ಲದೆ ನಿರುಪಾಧಿಕವಾಗಿ 'ಇರುವ' ನಿತ್ಯ ನಿರಾಳ ತಾನೆ ತಾನೆ 'ಅರಿವಿರುತ್ತದೆ,' 'ನಿತ್ಯಾನಂದವಿರುತ್ತದೆ,' 'ಬೆಳಗು ಬಯಲಿರುತ್ತದೆ,' ಎಲ್ಲ ಶಬ್ದದಾಚೆ ಯಾವ ಕುರುಹಿಲ್ಲದೆ ತೆರಹಿಲ್ಲದೆ ಇರುತ್ತದೆ.

ಪ್ರಭುದೇವನ ಈ ಸರಣಿಗೆ ಸಿದ್ಧರಾಮ ತನ್ನ ಯೋಗಸ್ಥಲದಲ್ಲಿ ನಡೆದಾಡುತ್ತಿರುವ ವಿಚಾರದ ಸ್ವರೂಪವನ್ನು ನಿವೇದಿಸುತ್ತಾನೆ. ಅಂತಃಕರಣ ಚತುಷ್ಟಯ ಮತ್ತೆ ಜ್ಞಾನೇಂದ್ರಿಯಗಳಲ್ಲಿ ರೂಪುಗೊಂಡು ಸುಳಿವ ವಿವೇಕಬುದ್ಧಿಯ ವಿಚಾರದ ಸುಳಿವನ್ನು ಅಡಗಿಸಿ ಸುಷುಮ್ನೆಯೆಂಬ ಬ್ರಹ್ಮನಾಳವನ್ನು ಶುದ್ಧಮಾಡಿ, ಅನಾಹತಚಕ್ರದ ಹೃದಯಕಮಲ

ಮನವು ಮನದಲಿ ನಿಂದು ನಿರ್ವಾ ।
ಣನೆಯಲಿರೆ ಸುಜ್ಞಾನಿಯಂತಾ ।
ಮನವನಳಿದರೆ ನಿತ್ಯನೈ ಬಸವಣ್ಣ ಕೇಳೆಂದ ॥

ಗ. ೨೪, ಪ. ೧೦.

ಮನವನಳಿದಿಹೆನೆಂಬುದದು ಮನ ।
ಮನವ ನಿಲಿಸಿಹೆನೆಂಬುದದು ಮನ ।
ಮನವನಳಿದಿಹೆನೆಂಬುದದು ಮನವಾವ ರೀತಿಯಲಿ ॥
ಮನವು ತಾ ಹೆಜ್ಜೆ (ಬ?) ಸಾರಿ ಬಹುಯೋ ।
ಜನೆಗಳನು ರಂಜಿಸುವುದಂತಾ ।
ಮನವನೆಲ್ಲವನಳಿದನಾದರೆ ನಿತ್ಯನಹನೆಂದ ॥

ಗ. ೨೪, ಪ. ೧೬.

ದಲ್ಲಿ ಕೆಳಮುಖವಾಗಿರುವ ಎಂಟು ದಳಗಳನ್ನು ಊರ್ಧ್ವಮುಖಮಾಡಿ ದಳದಿಂದ ದಳಕ್ಕೆ ಹರಿದಾಡುವ ಜೀವಹಂಸನನ್ನು ಕಮಲದ ಕರ್ಣಿಕೆಯಲ್ಲಿ ನಿಲಿಸಿ,[1] ಐವತ್ತೆರಡು ಅಕ್ಷರದ ಲಿಪಿಯನ್ನು ನೋಡಿ, ಈ ಅಕ್ಷರವನ್ನೆಲ್ಲ ಓಂಕಾರ ಪ್ರಣವದಲ್ಲಿ ನಿಲಿಸಿ,'......ಸುಷುಮ್ನದ ಬಟ್ಟೆಯ ತುದಿಯನಡರಿ ಸಾವಿರ ದಳದ ಮಂಟಪದಲ್ಲಿ ನಿಮ್ಮ ನೆಲೆಗೊಂಡಿಪ್ಪೆ ನೋಡಾ ಕಪಿಲಸಿದ್ಧ ಮಲ್ಲಿನಾಥಯ್ಯಾ'[2]

---

೧. ಇಲ್ಲಿ ಸರ್ಪಭೂಷಣ ಶಿವಯೋಗಿಗಳ ಮಾತು ಕೇಳಿ:

ತಲೆವಾಗಿ ಬೆಳೆದಿರುವ—ಪಂಕೇಜದ
ದಳದೆ ತಿರುಗುತಿರುವ
ಕಳಹಂಸ ಶಿಶುವಿನ—ಸುಳುಹನು ತಡೆದು ತ-
ನ್ನಳಿನದ ಕರ್ಣಿಕೆಯೊಳು ನಿಂತು ನಲಿಯೆಂದು

ಕೈ. ಕ. ಪು. ೯೬. ಪ. ೧.

೨. ಶೂ. ಸಂ. ಪು. ೬೩, ವ. ೧೧೫.

ಈ ಸಂದರ್ಭದಲ್ಲಿ ಸರ್ಪಭೂಷಣ ಶಿವಯೋಗಿಗಳ ಯೋಗಮಾರ್ಗದ ಅನುಭವ ಕೇಳಿ:

ಎಂತು ಮುಕುತಿಯು ಪಡೆವೆ ಎ ಮಂದಮನವೆ
ಸ್ವಾಂತರಂಗದೊಳಡಗಿ ಸುಳುಹುದೋರದ ನಿಜವ-
ನಿಂತಿದೆಂದರಿದು ಪರಿಣಾಮಿಸದೆ ಬರಿದೆ   ಪಲ್ಲವಿ

ಭೇದಿಸುತೆ ಬ್ರಹ್ಮನಾಡಿಯ ಗರ್ಭವನು ನಾಲ್ಕು
ಹಾದಿಗಳ ನಡುವಣಾಗ್ನೇಯ ಮಂಟಪದ
ವೇದಿಕೆಯನಡರಿ ದಶವಿಧದಿ ಘೋಷಿಪ ಪ್ರಣವ
ನಾದವೊಂದೊಂದ ಕಿವಿಯಾರೆ ಕೇಳದಲೆ   ೧

ಆಲಿಗಳ ಮಿಡುಕಲೀಯದೆ ಮನವ ಮಾರುತನೊಳು
ಮೇಳೈಸಿ ನಾಸಿಕಾಗ್ರದ ನಭೋಂಗಣದ
ಬಾಲರವಿ ಕನಕ ವಿದ್ರುಮದೊಲುರಿಯುವ ಬಿಂದು
ಜಾಲದುನ್ನತಿಯ ಕಣ್ಣಾರೆ ಕಾಣದಲೆ   ೨

ಒಳಗೆ ಕರಣಗಳ ಬೆಳಗಿಂದ್ರಿಯಂಗಳ ಮುಚಿದಿ
ತುಳುಕಿ ಜಗವನು ಪಾರ್ವಣೇಂದು ಕೌಮುದಿಯು
ಬೆಳಗಿನೊಳು ಮುಳುಗುತುಜ್ಜ್ವಲಿಪ ಗುರುಸಿದ್ಧನ
ಕಳೆಯ ಪರಿಪೂರ್ಣಭಾವದಿ ಭಾವಿಸದಲೆ   ೩

ಕೈ. ಕ. ಪು. ೯೨. ಪದ ೧೨.

ಇಲ್ಲಿ ಇನ್ನೂ ಒಂದು ಷಣ್ಮುಖಸ್ವಾಮಿಗಳ 'ಸಾವಿರ ದಳದ ಮಂಟಪ'ದ ಅನುಭವವನ್ನು ಕೇಳಿ

ಸಹಸ್ರದಳ ಕಮಲಮಧ್ಯದಲ್ಲಿ ಪಂಚಪತ್ರ.
ಆ ಪಂಚಪತ್ರದ ಮಧ್ಯದಲ್ಲಿ ಮಂಡಲತ್ರಯ.
ಆ ಮಂಡಲತ್ರಯ ಮಧ್ಯದಲ್ಲಿ ಪ್ರಣವಪೀಠದ ಮೇಲೆ
ಮುಹೂರ್ತಗೊಂಡು ಬೆಳಗುವ ನಿಮ್ಮ ದಿವ್ಯಮೂರ್ತಿಯ ಕಂಡು
ಪರಿಣತನಾದೆನಯ್ಯಾ ಅಖಂಡೇಶ್ವರಾ.

ಅಖಂ. ವ. ಪು. ೧೭೫. ವ. ೫೧.

ಸಿದ್ಧರಾಮಾ, ನೀನು ಅನುಸಂಧಾನಮಾಡಿರುವ ಯೋಗ ಭಿನ್ನಯೋಗ. 'ಗೊಹೇಶ್ವರನೆಂಬ ಲಿಂಗವು ಷಡುಚಕ್ರದ ಮೇಲಿಲ್ಲ......'[೧] 'ಪರಬ್ರಹ್ಮವೆಂಬುದನು ಬ್ರಹ್ಮರಂಧ್ರದಲ್ಲಿ ನೆಲೆಗೊಳಿಸಿದನೆಂಬುದು ಕಲ್ಪಿತವಲ್ಲದೆ ನಿರ್ವಿಕಲ್ಪಿತವಲ್ಲ ......'[೨] ಆಧಾರ ಮುಂತಾದ ಆರು ಚಕ್ರಗಳಲ್ಲಿ ಮತ್ತೆ ಮೇಲೆ ಬ್ರಹ್ಮರಂಧ್ರದಲ್ಲಿ ನಿತ್ಯ ಪರಿಪೂರ್ಣ ಲಿಂಗವನ್ನು ಕಂಡೆ. ಅನುಭವಿಸಿದೆ. ಅಲ್ಲಿಯೆ ಪ್ರತಿಷ್ಠೆಗೊಳಿಸಿದನೆಂಬುದು,–ಸಿದ್ಧಾ, ನಿನ್ನ ಯೋಗಕಲ್ಪಿತ. ಗೊಹೇಶ್ವರಲಿಂಗ ಬುದ್ಧಿಯ ಕಲ್ಪಿತದೊಳಗಲ್ಲ, ಭಾವದ ಕಲ್ಪಿತದೊಳಗಲ್ಲ. ಯೋಗದ ಕಲ್ಪಿತವನ್ನು ಮೀರಿ. ಜ್ಞಾನದ ಕಲ್ಪಿತದಾಚೆ. ಹೃದಯಕಮಲಕರ್ಣಿಕೆಯಲ್ಲಿ ನಿಜವನ್ನು ನೆಲೆಗೊಳಿಸಿದೆ. ಬ್ರಹ್ಮರಂಧ್ರವನ್ನು ಭೇದಿಸಿ ದಿವ್ಯ ಅಮೃತವನುಂಡೆ, 'ಸಾವಿರ ದಳದ ಮಂಟಪ'ದಲ್ಲಿ ಪ್ರತಿಷ್ಠಿಸಿದೆ—ಎಂದು ಹೇಳುವ ನಿನ್ನ ಯೋಗಾನುಸಂಧಾನದ ಅನುಭವ ಇನ್ನೂ ಕಾಯಿ ಅನುಭವ: ಯೋಗಾಚರಣೆಯ ಮಥನದಲ್ಲಿ ಹುಟ್ಟುವ 'ಕಲ್ಪಿತ' ಅನುಭವ. 'ಅತ್ಯತಿಷ್ಠತ್ ದಶಾಂಗುಲ'ವಾಗಿ ಎಲ್ಲವನ್ನು ಒಳಕೊಂಡು ಎಲ್ಲವನ್ನು ಮೀರಿ ಇರುವ ಅತೀತವನ್ನು ಅಲ್ಲಿ ಇಲ್ಲಿ, ಮೇಲೆ ಕೆಳಗೆ ಒಳಗೆ ಹೊರಗೆ ಎಂಬ ಎಡೆಗಳಲ್ಲಿ ನೀನು ಕಂಡು ಅಲ್ಲಿ ಇರಿಸಿಕೊಂಡೆನೆಂಬುದು ಅದೊಂದು

---

೧. ಶೂ. ಸಂ. ಪು. ೬೨, ವ. ೧೧೪.

ಇಲ್ಲಿ ಪ್ರಭುಲಿಂಗಲೀಲೆಯ ಪ್ರಭುವಿನ ಮಾತು ಕೇಳಿ:

ಆರು ಭೂತದಲಾರು ಚಕ್ರಗ ।
ಳೀರುಹವು ಪರಿವಿಡಿಯಲಿವರೊಳು ।
ಮೀರಿದಜ ಹರಿ ರುದ್ರನೀಶ ಶಿವಾತ್ಮ ತತ್ವಗಳು ॥
ತೋರುವವು ನೆಲೆವಿಡಿದು ನಲಿಯಲು ।
ಹೇರಿ ಸಾಧಿಸಿಯುಂತವೆಲ್ಲವ ।
ಸಾರಿ ದಾಂಟುವನವನೆ ಭಕ್ತನು ಬಸವ ಕೇಳೆಂದ ॥

ಪ್ರ. ಲಿಂ. ಲೀ. ಗತಿ ೧೮, ಪ. ೨೫

ಮತ್ತು ಮೇಲಿನ ೧೧೪ನೆಯ ವಚನದೊಡನೆ ಇದೇ ಗ್ರಂಥದ ೫೧ನೆಯ ಪುಟದ ೬೪ನೆಯ 'ಯೋಗ ಶಿವಯೋಗವೆಂದೆಂಬರು. ಯೋಗದ ಹೊಲಬನಾರು ಬಲ್ಲರಯ್ಯಾ?......ಐವತ್ತೆರಡಕ್ಷರದ ಲಿಪಿಯ ನೋಡಿ ನೋಡಿ. ಆರು ನೆಲೆಯ ಮೇಲಿಪ್ಪ ಮಣಿಮಾಡದೊಳಗೆ ಇರಬಲ್ಲರೆ. ಅದು ಯೋಗ......'–ಎಂಬ ಪ್ರಭುದೇವರ ವಚನವನ್ನು ಹೋಲಿಸಿ ನೋಡಿ. ಈ ಎರಡು ವಚನಗಳಲ್ಲಿ. ಇದರಂತೆ ಬೇರೆ ಕಡೆಗೆ ತೋರುವ ಮಾತುಗಳಲ್ಲಿ ತೋರಿಬರುವ ಪರಸ್ಪರ ಅನನ್ವಯ. ವಿರೋಧ. ಯೋಗ ಜ್ಞಾನ ಭಕ್ತಿ ಕ್ರಿಯಾಮಾರ್ಗದಲ್ಲಿ ಸ್ಥೂಲದಿಂದ ಸೂಕ್ಷ್ಮಕ್ಕೆ ಮುಂದೆ ಮುಂದೆ ನಡೆದಿರುವ. ನಡೆಯಬೇಕಾದ ಉತ್ತರೋತ್ತರ ಅನುಭವಗಳನ್ನು ಪ್ರಕಟಗೊಳಿಸುವ ವಿಸಂಗತವಲ್ಲದ ವಿರೋಧ. ಪ್ರಸ್ತುತ ವಚನಗಳನ್ನು ಪರಿಶೀಲಿಸಿದರೆ ಚಕ್ರ ಕಮಲ ದಳ ಕುಳ ವರ್ಣ ಅಧಿದೇವತೆಗಳ ಭಿನ್ನಯೋಗದಲ್ಲಿಯೆ ಉಳಿದಿರುವುದು. ಮುಂದೆ ನಡೆವ ಮಾರ್ಗ ಇನ್ನೂ ಇನ್ನೂ ಇದೆ ಎಂಬುದೆ ಮೇಲೆ ತೋರುವ ವಿರೋಧ, ಅಸಂಗತಗಳ ಅರ್ಥ.

೨. ಶೂ. ಸಂ. ಪು. ೬೪, ವ. ೧೧೨.

ಯೋಗಭ್ರಮೆಯೇ. 'ಸ್ಥಾನಮಾನವೆಂಬ ಮಾತಿಂಗೆ ದೂರವಾದ ಘನವ ಬ್ರಹ್ಮರಂಧ್ರ ದಲ್ಲಿ ಕಂಡೆನೆಂದರೆ ಕಾಣಬಹುದೆ?'

ಪ್ರಭು ದೇವನ ಈ ಮಾತಿಗೆ ಉತ್ತರವಾಗಿ ಶಿವಯೋಗಿ ಸಿದ್ಧ ಮತ್ತೆ ತನ್ನ ಮುಂದು ಮುಂದಿನ ಶಿವಾನುಭಾವವನ್ನು ದೇವನ ಮುಂದೆ ಬಿಚ್ಚಿ ಇಡುತ್ತಾನೆ:

ನಾ ನಿನ್ನ ರೂಪ ವಿಚಾರಿಸುವವನಲ್ಲ ಕೇಳಾ !
ನಿನ್ನ ಧ್ಯಾನದಲ್ಲಿ ಇಪ್ಪಾತನಲ್ಲ ಕೇಳಾ !
ಅತ್ಯತಿಷ್ಠದ್ದಶಾಂಗುಲದಲ್ಲಿ ನಿಮ್ಮ ನಿಲಿಸಿ, ನಾನೊಂದೆಡೆಯಲ್ಲಿ ಇಪ್ಪಾತನಲ್ಲ ನೋಡಾ !
ಓಂಕಾರವೆಂಬ ಪೀಠಕ್ಕೆ ನಾನಾಗಿ, ನಿಶ್ಶಬ್ದವೆಂಬ ಲಿಂಗವ ನೆಲೆಗೊಳಿಸಿ,
ಬೆರಸಿ ಬೇಱಿಲ್ಲದೆ ಇಪ್ಪೆಡೆಯ ನೋಡಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ—ನೀನು ಪ್ರಣವರೂಪಾಗಿ.[೧]

ವಿಚಾರಿಸುವ ನಾನು ವಿಚಾರಿಸಿಕೊಳ್ಳುವ ನೀನು, ಧ್ಯಾನಿಸುವ ನಾನು ಧ್ಯಾನಮೂರ್ತಿ ನೀನು—ಎಂಬ ಭಿನ್ನಭಾವ ಇಲ್ಲ. ಅತೀತವಾದ ಪರವಸ್ತುವನ್ನು, ನಿನ್ನನ್ನು ಒಂದೆಡೆ ಇರಿಸಿ ಬೇರೊಂದೆಡೆಯ ಕಲ್ಪಿಸಿಕೊಂಡು ಇರುವ 'ನಾನು' ಇಲ್ಲ. ನೀವೇ ನಿಶ್ಶಬ್ದ ಲಿಂಗ ನಾನೇ ಆ ಲಿಂಗಕ್ಕೆ ಪ್ರಣವ ಪೀಠಿಕೆಯಾಗಿ ನಿಮ್ಮೊಡನೆ ಬೆರಸಿ ಒಂದಾಗಿರುವ ಅದ್ವೈತ ಅನುಭವದಲ್ಲಿದ್ದೇನೆ ಪ್ರಭು. ಇದು ಭಿನ್ನಯೋಗವೇ? ಎಂಬ ಸಿದ್ಧರಾಮನ ಯೋಗದ, ಅನುಭವದ ಮಟ್ಟವೇನು ಎಂಬುದನ್ನು ನಿರೂಪಿಸುತ್ತಾನೆ ಪ್ರಭುದೇವ. ಬಿಂದು ಪೀಠ, ಮೇಲೆ ಮೂರ್ತಗೊಂಡಿರುವ ನಿಶ್ಶಬ್ದ ನಾದ, ಪೀಠ ನೀನು, ನಾದ ಲಿಂಗವಾದರೆ ಇದೇ ಭಿನ್ನಲಿಂಗ. ಪೀಠ ಮತ್ತು ಲಿಂಗದ ಬಿರುಕಲ್ಲವೇ ಇದು? ನಾನು ನೀನಿನಲ್ಲಿ ಇನ್ನೂ ಸಂದು ಉಳಿದಿಲ್ಲವೆ ಇಲ್ಲಿ? ಮತ್ತೆ ದಿವ್ಯಕಳಾ ಚೈತನ್ಯವೆಂಬ ಯೋಗ ಸಮಾಧಿಯ ಪೂಜೆ ಮುಗಿದರೆ, ಸಮಾಧಿಯಿಂದ ಹೊರಗೆ ಬಂದರೆ ಲಿಂಗ ಒಂದೆಸೆಯಾಯ್ತು, ನೀನು ಮತ್ತೊಂದು ದೆಸೆಯಾದೆ. ಅಲ್ಲದೆ ಮಹಾಘನಲಿಂಗೈಕ್ಯ ನಾದಾನುಸಂಧಾನ ನಾದಸಾಕ್ಷಾತ್ಕಾರ ಬಿಂದುಸಾಕ್ಷಾತ್ಕಾರ ಕಳಾಸಾಕ್ಷಾತ್ಕಾರದ ಆಚೆ ಇನ್ನೂ ಮೇಲುಗಡೆ ಇನ್ನೂ ಕೆಳಗಡೆ ಇನ್ನೂ ವಿಶ್ವಾತೀತ ವಿಸ್ತಾರದ ಕಡೆ ಕಡೆಯಿಲ್ಲದೆ ಹಬ್ಬಿ ಹರವಿದೆ ಸಿದ್ಧಾ. ಅದು ನಾದಕ್ಕೆ ನಿಲುಕಿಲ್ಲ, ಬಿಂದುವಿಗೆ ಬಂದಿಲ್ಲ, ಕಲೆಗೆ ಒಳಗಾಗಿಲ್ಲ. ಅಲ್ಲಿ ಇಲ್ಲಿ ಎಂಬ ಮಾತು ಇಲ್ಲಿ ಇಲ್ಲ ಶಿವಯೋಗೀ. ಚಲಿಸದ ನಿರಾಳ ಪ್ರಣವಸ್ವರೂಪವೆಂದು ಅದರ ಹೆಸರು ಓಂಕಾರ ಪ್ರಣವ, ನಿಶ್ಶಬ್ದ ಪ್ರಣವವೆಂದು ಹೆಸರು ಇಲ್ಲ ಸಿದ್ಧಾ. ಹೆಸರು ದೆಸೆಗೆಟ್ಟ 'ಗೊಹೇಶ್ವರನ ನಿಲವಿ'ಗೆ ಏನೆಂದು ಹೆಸರಿಡಬೇಕು? ಹೇಗೆಂದು ರೂಪಿಸಬೇಕು? 'ಇಲ್ಲ' ಅದರ ಹೆಸರು, 'ಅಲ್ಲ' ಅದರ ರೂಪ. ಅಂದರೆ ಮಹಾಘನಲಿಂಗ ಪರಾತ್ಪರ ಪರ ಬ್ರಹ್ಮ ನಿಶ್ಶಬ್ದ. ನಾಮ ರೂಪ ಕ್ರಿಯೆಯಡಗಿದ 'ಶೂನ್ಯ' ಉಲುಹಡಗಿದ ವೃಕ್ಷ, ತೆರೆ ಗಳೆದ ಮಹಾಲಿಂಗಸಮುದ್ರ.

---

೧. ಶೂ. ಸಂ. ಪು. ೬೪, ವ. ೧೧೨.

ಬಿಂದುವೆ ಪೀಠ ನಾದವೆ ಲಿಂಗವೆಂಬಲ್ಲಿ ತನ್ನ ಗರ್ಭಿತಾರ್ಥವೇನೆಂಬುದನ್ನು ಸಿದ್ಧರಾಮ ಸ್ಪಷ್ಟಪಡಿಸುತ್ತಾನೆ. 'ಶಾಂಭವಿಯ ಕೋಣೆಯಲ್ಲಿ ಲಕ್ಷವಿಟ್ಟಾಕ್ಷಣದಿ' ಕಾಣಬರುವ ಬಿಂದುವಿನ ಪ್ರಭೆ 'ಜಲಬಿಂದು'ವೆನಿಸುವ ತನ್ನ ಕಾಯ, ತನ್ನ ಅಂಗವನ್ನೆಲ್ಲ ತುಂಬಿದರೆ ಈ ಪ್ರಕಾಶಾಂಗ, ಈ ಪ್ರಕಾಶಬಿಂದುವೆ ಪೀಠ, ಈ ಪ್ರಕಾಶಪೀಠವೆ ತಾನಾಗಿ, ನಿಶ್ಶಬ್ದನಾದವೆ ಲಿಂಗವಾದರೆ, ಈ ಬಿಂದು ನಾದಗಳ ಅನುಸಂಧಾನ, ಸಾಕ್ಷಾತ್ಕಾರ ಅವೇ 'ತಾನು—ಮಲ್ಲಿನಾಥ'ನೆಂಬ ಅನುಭವವಾದರೆ, ಈ ಅನುಭವ ಅಂಗ ಮತ್ತು ಲಿಂಗ ಪೀಠಿಕೆ ಮೂರ್ತಿಯಂತೆ ಸಂಬಂಧವಾದ ಅಂಗಲಿಂಗದ ಏಕತ್ವವಲ್ಲವೇ? ಜಲಬಿಂದು ವಾದ ಕಾಯ ಲಿಂಗತೇಜೋಬಿಂದುವಾದರೆ, ವಾಯುವಿನ ಗತಿಯಲ್ಲಿ ನಡೆವ ಪ್ರಾಕೃತ ಪ್ರಾಣ ಲಿಂಗದ ಅನಾಹತನಾದವಾದರೆ ಕಾಯಕ್ಕೆ ಪ್ರಕೃತಿಯ ಘಟವಾಗಿದ್ದ ಪೂರ್ವಾ ಶ್ರಯದ ಸೂತಕವಿಲ್ಲ, ಪ್ರಾಣಕ್ಕೆ ವಾಯು ಗುಣಧರ್ಮದ ಮೈಲಿಗೆಯಿಲ್ಲ. ಅಂತೆಯೆ 'ಪ್ರಾಣಲಿಂಗ'ದ ನಾದದಲ್ಲಿ ಗಾಳಿಯ ಶಬ್ದದ, ತಾಲು ಓಷ್ಠ ಸಂಪುಟವಾಗಿ ಹೊರಡುವ ಸ್ವರದ ಭೌತಸೂತಕವಿಲ್ಲ. ಮತ್ತೆ ನಾದಬಿಂದುವಿನ ಜಾಲದಲ್ಲಿಯೆ ಕೂಡದೆ, ಷಡುಚಕ್ರ ಕಮಲದಲ್ಲಿಯೆ ನಿಲ್ಲದೆ ಶಿವಾನುಭವದ ಮಾರ್ಗದಲ್ಲಿ ಇನ್ನೂ ಮುಂದೆ ತಾನು ಕ್ರಮಿಸಿರುವ ಉತ್ತರೋತ್ತರವನ್ನು '......ನಾದ ಬಿಂದುವಿನ ಒಡ್ಡ ತೋಱಿ ಮನಮಗ್ನವಾದ ನಿಲವ ಕಪಿಲಸಿದ್ಧಮಲ್ಲಿಕಾರ್ಜುನಾ, ನೀನೆ ಬಲ್ಲೆ,'[೧] 'ನಾದಬಿಂದುಕಳಾತೀತವಾದ ಮಹಾಘನ ದೊಳಗೆ ಮನ ಮಗ್ನವಾಗಿ ನಾನಿದ್ದೆ'[೨] ಎಂದು ಪ್ರಭುವಿನಲ್ಲಿ ಶಿವಯೋಗಿ ಸಿದ್ಧ ಅರಿಕೆ ಮಾಡಿಕೊಳ್ಳುತ್ತಾನೆ. 'ನಾದ ಬಿಂದುವಿನ ಒಡ್ಡ ತೋಱಿ' ಎಂಬ ಸಿದ್ಧನ ಮಾತಿನಲ್ಲಿ ನಾದಬಿಂದುಕಳೆಗಳು ಜೀವ ಪರಮರ ಯೋಗದಲ್ಲಿ ತೋರುವ ದಿವ್ಯದ ಮುಂಗುರುಹು ಗಳು,—ದಿವ್ಯದ ಸ್ವಯಂಗಮನವನ್ನು ಮುಂಗೋಳಿಯಂತೆ ನಾದಿಸುವ, ದಿವ್ಯಪ್ರಭಾತದ ಹೊಂಗೆಂಪನ್ನು ಬಣ್ಣಿಸುವ, ಒಳಹೊರಗೆ ಬೆಳಗುವ ಲಿಂಗಕಳೆಯೆ ತಾನಾಗಿರುವ ತನ್ನ 'ಸ್ವಯಂಪ್ರಕಾಶ' ಚೈತನ್ಯವನ್ನು ಅನುಭವದಲ್ಲಿ ದಿಟವೆನಿಸಿ ತರಂಗಿಸುವ ದಿವ್ಯರಚನೆ ಇವು ಎಂಬುದು ಸಿದ್ಧರಾಮನಿಗೆ ಗೊತ್ತು. ನಾದಬಿಂದು ಕಳೆಗಳನ್ನು ದಾಟಿ, ಮುಂದೆ ಮಹಾ ಘನದಲ್ಲಿ ತನ್ನ ಮನ ಮುಳುಗಿ 'ಮನಮಗ್ನಯೋಗ'ದ ಸಿದ್ಧಿ ತನಗಾಗಿರುವುದನ್ನು ಸಿದ್ಧರಾಮ ಪ್ರಭುವಿನಲ್ಲಿ ಬಿನ್ನವಿಸುತ್ತಾನೆ.

ಸಿದ್ಧರಾಮಾ, ನಿನಗೆಂದು, ನಿನಗೆಂತು ಮನಮಗ್ನಯೋಗದ ಸಿದ್ಧಿಯಾಯ್ತು? :
ಅಱಿವನಱಿದು, ಮಱಹ ಮಱೆದು,
ಸಂಕಲ್ಪ ಸಂಶಯವಳಿದ ನಿಲವನಱಿದ ಪರಿ ಎಂತು ಹೇಳಾ?
ಅಱಿದೆನೆಂದರೆ ಜ್ಞಾನಕ್ಕೆ ದೂರ. ಮಱೆದೆನೆಂದರೆ ಮನಕ್ಕೆ ದೂರ.
ಅಱಿದು ಮಱೆದೆನೆಂದರೆ ಉಪಮೆಗೆ ದೂರ.
ನಿರ್ಭಾವದ ಹೊಲಿಗೆಯಲ್ಲಿ ಭಾವಸಂಕಲ್ಪ ಬಿಡದು.

---

೧. ಶೂ. ಸಂ. ಪು. ೬೪, ವ. ೧೯೯.
೨. ಅದೇ " " ಗ. ೧೨೦.

ನಮ್ಮ ಗೊಹೇಶ್ವರಲಿಂಗದಲ್ಲಿ ಮನಮಗ್ನಯೋಗ
ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯಾ?[೧]

ಪ್ರಭುವಿನ ಈ ಮಾತಿನಿಂದ ಮನಮಗ್ನಯೋಗವೆಂದರೆ, 'ಮನ ಮಗ್ನವಾದ ನಿಲವು' ಅಂದರೆ ಅರಿವನ್ನು ಅರಿದು, ಮರವೆಯನ್ನು ಮರೆದು ಸಂಕಲ್ಪ ಸಂಶಯಗಳೆಲ್ಲ ನಿರ್ಮೂಲ ವಾದ ನಿಲವು ಎಂಬ ಅರ್ಥ ಸ್ಪಷ್ಟವಾಗುತ್ತದೆ. ಅರಿವು ಮರವೆಗೆ ಬೀಜ ಮನ; ಸಂಕಲ್ಪ ವಿಕಲ್ಪ, ಸಂಶಯ ನಿಶ್ಚಯಗಳ ಜನ್ಮಭೂಮಿ ಮನ. ಮನ ಬುದ್ಧಿಯ ಮಗ್ಗದ ಮೇಲೆ ನೆಯ್ದ ಜಾಲವೇ ವಿವೇಕ, ವಿಚಾರ, ಜ್ಞಾನ. ಇಂಥ ಮನಕ್ಕೆ ಇಂಥ ಜ್ಞಾನಕ್ಕೆ ಮತ್ತೆ 'ಅರಿವನ್ನು ಅರಿದು ಅರಿದೆನೆಂಬುದನ್ನು ಮರೆದೆ'ನೆಂಬ ನುಡಿಯ ಉಪಮೆಗೆ ಅತೀತವಾದ, ದೂರವಾದ, ಇಲ್ಲಿಯೂ 'ಅತ್ಯತಿಷ್ಠದ್ದಶಾಂಗುಲ'ವಾದ 'ಗೊಹೇಶ್ವರಲಿಂಗ'ದಲ್ಲಿ ನಿನ್ನ ಮನ ಮುಳುಗಿರುವುದು ಹೇಗೆ? ಲಿಂಗಮಗ್ನವಾಗಿ ಅಲ್ಲಿಯೆ ತಲ್ಲೀಯವಾಗಿರುವು ದೆಂತು? ದೂರದ ಲಿಂಗದಲ್ಲಿ ಮನವನ್ನು ಯೋಗಿಸಿದೆನೆಂಬುದು ಭಾವದ 'ಗುಸುಟು', ಮನದ ಸಂಕಲ್ಪ; ಮಹಾಘನದಲ್ಲಿ ಮನ ಮಗ್ನವಾದರೆ ಈ ಗುಸುಟು, ಈ ಸಂಕಲ್ಪ ಮಗ್ನವಾದ ಮನದ ಮೇಲೆ ಮೂಡಿತು ಹೇಗೆ? ಮನ ಮಗ್ನವಾಗಿದ್ದರೆ ಭಾವ ನಿರ್ಭಾವ ವಾಗಿರಬೇಕು. ಆದರೆ ನಿನ್ನ 'ನಿರ್ಭಾವದ ಹೊಲಿಗೆಯಲ್ಲಿ ಭಾವಸಂಕಲ್ಪ ಬಿಡದು'. ಸಿದ್ಧಾ, ನೀನು ಮತ್ತೆ ಹೇಳುವುದೇನು? 'ಎನ್ನ ಮನ ಮತ್ತೊಂದಕ್ಕೆ ಇಂಬಿಲ್ಲ'ವೆಂದು. ನನ್ನ ಮನ ನಿನ್ನಲ್ಲಿ, ಮಲ್ಲಿನಾಥನಲ್ಲಿ, ಮಹಾಘನಲಿಂಗದಲ್ಲಿ ಮುಳುಗಿ. ನನ್ನ ಮನ ಲಿಂಗದ ಮನವಾಯ್ತು. ಲಿಂಗಮಗ್ನವಾದ ನನ್ನ ಮನದಲ್ಲಿ ಲಿಂಗದ ನೆನಹು ಮೂಡಿದರೆ ಲಿಂಗದ ಮನದಲ್ಲಿ ನನ್ನ ನೆನಹು ಮೂಡಿದಂತೆಯೆ ಎಂದು. ನಮ್ಮಿಬ್ಬರಿಗೆ ಮನ ಎರಡು ಅಲ್ಲ, ಒಂದು ಎಂದು. ಸಂಕಲ್ಪ ಸಂಶಯ ವಿಷಯ ವ್ಯಾಮೋಹ ಪ್ರಪಂಚ ಸಂಸಾರದಿಂದ ಲಿಂಗದ ಮನ ಮುಕ್ತವಾಗಿರುವಂತೆ ಅಲ್ಲಿಯೆ ಲೀಯವಾಗಿರುವ ನನ್ನ ಮನವೂ ಮುಕ್ತ ವಾಗಿದೆ ಎಂದು. ಆದರೆ ನಾನು ಹಿಂದೊಮ್ಮೆ ಹೇಳಿದಂತೆ ಮನವಿಲ್ಲದಿರಬೇಕು ಸಿದ್ಧರಾಮಾ.[೨]

ಮನ ಉಂಟೆ ಮರುಳೆ ಶಿವಯೋಗಿಗೆ?
ಮತ್ತೊಮ್ಮೆ ಮನಮಗ್ನ ಉಂಟೆ ಶಿವಯೋಗಿಗೆ?
ಇಲ್ಲದ ಮನವನುಂಟೆಂದು ನುಡಿದು,
ಅಡಗಿಸಿದೆನೆಂಬ ಮಾತು ಮನವ ನೆಲೆಮಾಡಿ ತೋಜುತ್ತದೆ.
ಗೊಹೇಶ್ವರನಸಜೀವ ಶರಣಂಗೆ ತೋಜಲಿಲ್ಲ ಅಡಗಲಿಲ್ಲ ಕೇಳಾ.[೩]

ಸಿದ್ಧರಾಮಯ್ಯಾ. ಇನ್ನೂ ಒಳಗೆ ಇಳಿದು ನಿನ್ನ ನೀ ತಿಳಿದು ನೋಡು ತಂದೇ. ಎಲ್ಲಿಂದ ಮನ ಮೂಡಿತು. ಆಕಾಶದಲ್ಲಿ ಗಾಳಿಯಂತೆ ಅರಿವಿನಲ್ಲಿ ಮೂಡಿ ಆಡುವ ಮನವನ್ನು ನೀನು ಎಲ್ಲಿ ಅಡಗಿಸಿದೆ ಅಲ್ಲಿಂದೊಳಗೆ ನಡೆ ಸಿದ್ಧಾ. ಅಲ್ಲಿ ನೋಡು ಮನ ಎಂಬುದಿದೆಯು?

---

೧. ಶೂ. ಸಂ. ಪು. ೬೪. ವ. ೧೨೦.
೨. ಶೂ. ಸಂ. ಪು. ೬೨, ವ. ೧೧೦. ಸೋಪಿರ್.
೩. ಅದೇ ಪು. ೬೫, ವ. ೧೨೨.

ಮನವಿಲ್ಲದ ಈ ನಿರ್ಮನ ಸ್ಥಲದಲ್ಲಿ ಮನ ಮತ್ತು ಮಗ್ನದ ಮಾತೆಲ್ಲಿ? ಪರಶಿವಯೋಗಿ ಅಜಗಣ್ಣನ ತಂಗಿ ಮುಕ್ತಾಯಕ್ಕನಿಗೆ 'ದೇಹೇಂದ್ರಿಯಮನಃಪ್ರಾಣಾದಿ'ಗಳ ಸಮಸ್ಯೆ ಹೀಗೆಯೇ ತೊಡಕು ಬಿದ್ದಾಗ ನಾನು ಹೇಳಿದೆ: '......ಇಲ್ಲದ ತನುವನುಂಟೆಂಬನ್ನಕ್ಕರ ಅದೇ ಮಾಯೆಯಾಗಿ ಕಾಡುತ್ತಿರ್ಪುದು......'[೧] ಎಂದು; 'ತನು ಉಂಟೆಂದರೆ ಪಾಶ ಬದ್ಧ; ಮನ ಉಂಟೆಂದರೆ ಭವಕ್ಕೆ ಬೀಜ......'[೨] ಎಂದು. ಇಲ್ಲದುದನ್ನು ಉಂಟುಮಾಡಿ ಕೊಂಡು, ಉಂಟಾದುದನ್ನು ಅಡಗಿಸಿಬಿಟ್ಟೆ ಎಂದು ಹೇಳಿದರೆ, ಇಲ್ಲ ಉಂಟು ಎಂದೆನಿಸಿ ಕೊಳ್ಳುವ ವಸ್ತುವನ್ನು ನೆಲೆಗೊಳಿಸಿ, ಗಟ್ಟಿಮಾಡಿ ಇಟ್ಟುಕೊಂಡಂತಾಯ್ತು. ಪರ-ಮಾರ್ಥತಃ ಇಲ್ಲದ ಭೂತ ಮನ. ಮಾಯಾಪ್ರಕೃತಿಯಲ್ಲಿ ಮೂಡಿದ ಅರಿವಿನ ವಿಕಾರ ಮನ. ವಿಕಾರ ತೆರೆಗೊಂಡರೆ ಮನ, ವಿಕಾರ ತೆರೆಗಳೆದರೆ ಬರಿಯರಿವು. ಈ ಅರಿವಿನ ಬಯಲಲ್ಲಿ ನಿಂದು ನೋಡು ಶಿವಯೋಗೀ, ಇಲ್ಲಿ ಮನ ಇಲ್ಲ. 'ಗೊಹೇಶ್ವರನನಱಿದ ಶರಣಂಗೆ ತೋಱಲಿಲ್ಲ ಅಡಗಲಿಲ್ಲ ಕೇಳಾ.' ದೃಷ್ಟಿಯ ದೋಷದಲ್ಲಿ ತೋರಿ ಸಮ್ಯಕ್ತ್ವ ದಲ್ಲಿ ಅಡಗಿದರೆ ಪರಮಾರ್ಥವಾಗಿ 'ಇರುವ' ಅಧಿಕಾರ ಮನಕ್ಕೆಲ್ಲಿದೆ? ಮತ್ತೆ ರಾಮಾ, ಮನಮಗ್ನಯೋಗ, ಮನವಿಲ್ಲದ ಬಚ್ಚಬರಿಯ ಬ್ರಹ್ಮ—ಇವೆರಡರಲ್ಲಿ ಒಂದರ ಕೊರತೆ ಯೇನು? ಮತ್ತೊಂದರ ಹೆಚ್ಚು ಏನು? ಮನಮಗ್ನವೆಂದರೆ ಬಚ್ಚಬರಿಯೆಂದೇ ಅರ್ಥ ವಲ್ಲವೇ?—ಎಂದು ನಿನ್ನ ಯೋಗವಿಚಾರ. ಮಾತು ಎರಡು, ತಾತ್ಪರ್ಯ ಒಂದೇ ಎಂದು ನಿನ್ನ ಅಭಿಪ್ರಾಯ. ಆದರೆ,

> ಮನಮಗ್ನವೆಂತಿರ್ಪುದು ಅಂತೆ ಇರಬೇಕಲ್ಲದೆ
> ಮತ್ತೊಂದು ಮನವೆಂಬುದುಂಟೆ ಹೇಳಾ?
> ಅಱಿದು ಮಱೆದುದ. ಅಱಿದು ನುಡಿದು, ಮಱೆದೆನೆಂಬ ಜ್ಞಾನ ಉಂಟೆ?
> ಗೊಹೇಶ್ವರಲಿಂಗವು ನೆಱೆಯಱಿದೆನೆಂಬಲ್ಲಿ
> ಮನವ ಮಱೆಮಾಡಿ ಕಾಡುವನು.[೩]

ಸಿದ್ಧರಾಮಾ, ನಿದ್ದೆಮಾಡುತ್ತಿದ್ದೇನೆ ಎಂದು ನುಡಿದು ಹೇಳುವ ನಿದ್ದೆ ಇದೆಯೆ? ಮಹಾ ಘನದಲ್ಲಿ ಮನ ಮುಳುಗಿದ್ದರೆ ಮುಳುಗಿದಂತೆ ಮುಳುಗಿರಬೇಕು, ಮುಳುಗಿ ಎದ್ದು ಮುಳುಗಿದಂತಾಗಬಾರದು. ಗೊಹೇಶ್ವರಲಿಂಗದಲ್ಲಿ ಮುಳುಗಿದ್ದು 'ನೆಱೆಯಱಿದೆ' ಎಂದು ಎದ್ದು ಕೂಗಿದರೆ. ಅದು ಮನವಲ್ಲದೆ ಮತ್ತೇನು? ಯೋಗ ಚಿತ್ತವೃತ್ತಿ ನಿರೋಧ ಹೌದು. ಮತ್ತೆ ಮುಂದೆ. ಯೋಗ ಚಿತ್ತಮಗ್ನ ಹೌದು. ಆದರೆ ಇನ್ನೂ ಮುಂದೆ ಯೋಗ ಚಿತ್ತನಿವೃತ್ತಿ. ಚಿತ್ತನಾಸ್ತಿ ಹೌದು. ಹೀಗೆ ಚಿತ್ತ ನಾಸ್ತಿಯಾಗಿದ್ದರೆ, ಅರಿದು ಮರೆದಿದ್ದರೆ. ಪೂರ್ಣವಾಗಿ ತಿಳಿದೆನೆಂಬ ಮನದ ಕಿರಣ ಅರಿದು ಮರೆದಿರುವ ನಿವೃತ್ತಿಯ ಗಭೀರವನ್ನು ಭೇದಿಸಿ ಮೇಲೆ ಹೊಳೆಯಿತು ಹೇಗೆ? ಹೀಗೆ ಅರಿದು ಮರೆ ದುದು ಎದ್ದು ಎದ್ದು ಮಾತಾಡಹತ್ತಿದರೆ 'ಏಗಡ' ಗೊಹೇಶ್ವರ ಕಾಡದೆ ಬಿಡುವುದಿಲ್ಲ.

---

೧. ಶಿ.ಎ. ಸಂ. ಪು. ೨೮-೨೯. ವ. ೨೦. ೨. ಶಿ.ಎ. ಸಂ. ಪು. ೨೮. ವ. ೧೮.
೩. ಅದೇ ಪುಟ ೬೫. ವ. ೧೭೩.

ಎದ್ದು ಹೇಳುವ ಮನವನ್ನೇ ಮುಸುಕು ಹಾಕಿಕೊಂಡು ತನ್ನ ಮರೆಸಿಕೊಂಡು ಕರಕರ ಕಾಡುತ್ತಾನೆ ಬಯಲುಲಿಂಗ. ಬ್ರಹ್ಮವನರಿದೆ, ಬ್ರಹ್ಮವಾದೆ ಎಂಬಲ್ಲಿ ಲಿಂಗಕ್ಕೂ ಮತ್ತು ಜ್ಞಾನ ಅನುಭವಕ್ಕೂ ಅಡ್ಡಲಾಗಿ ಇರುವ ಮನದ ಜವನಿಕೆಯ ಜಾಲ ಎಷ್ಟು ಸೂಕ್ಷ್ಮ ಶಿವಯೋಗಿ ಸಿದ್ಧಾ ! ಅದು ಇದ್ದು ಇಲ್ಲದಷ್ಟು; ಶಿವಯೋಗಿ ಶಿವಜ್ಞಾನಿ ಶಿವಾನುಭಾವಿಯ ಕಣ್ಣಿಗೂ ಕಾಣದಷ್ಟು.

'ಗೊಹೇಶ್ವರಲಿಂಗವು ನೆಱೆಯಱಿದೆನೆಂಬಲ್ಲಿ ಮನವ ಮಱೆಮಾಡಿ ಕಾಡುವನು',—ಎಂಬ ಪ್ರಭುದೇವನ 'ಮಹಾವಾಕ್ಯ'ದ ಹೃದಯ ಸಿದ್ಧರಾಮನಿಗೆ ಹೊಳೆಯುತ್ತದೆ. ಇಷ್ಟೇ ಅಲ್ಲ. ಅರಿದೆನೆಂಬ ಅರಿದು ಮರೆದೆನೆಂಬ ಮನ ನಿಜಾನುಭಾವಕ್ಕೆ ಕಣ್ಣಡ, ಇಂಥ ಅಡ್ಡ ಜವನಿಕೆ ನಡುವೆ ಬಿದ್ದಿರುವಾಗ ಅರಿದೆನೆಂದು ಅರಿದು ಮರೆದೆನೆಂದು ನಾಲಗೆ ನುಡಿದರೆ ಇಂಥ ನುಡಿಗಡಣವೂ ತನ್ನನ್ನು ನಿಜಾನುಭವದಿಂದ ಮರೆಸಿಡುವ ಮರೆಮೋಸದ ಕಣ್ಣಡ—ಎಂಬ ಸೂಕ್ಷ್ಮ ಶಿವಯೋಗಿ ರಾಮನಿಗೆ ವೇದ್ಯವಾಗುತ್ತದೆ. ಪ್ರಭುದೇವ ಇದರ ಮರ್ಮವನ್ನು ಎತ್ತಿಹಿಡಿದು ತೋರಿಸುವ ಮುನ್ನವೆ ತನ್ನ ಶಿವಜ್ಞಾನ ಶಿವಯೋಗ ಸಾಧನೆಯಲ್ಲಿ ಸಿದ್ಧರಾಮ ಅದನ್ನು ಮನಗಂಡು ಗುರುತಿಸಿರಬಹುದು. ಈ ಮರ್ಮವನ್ನು ಆತ ಮನಗಂಡಿದ್ದನೆಂಬುದಕ್ಕೆ ಸ್ಪಷ್ಟಸಾಕ್ಷಿ ನುಡಿವಂತಿದೆ ಶಿವಯೋಗಿಯ ಮುಂದಿನ ವಚನ:

> ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ
> ಅಂಗದಂತೆ ಲಿಂಗೈಕ್ಯ, ಲಿಂಗದಂತೆ ಅಂಗೈಕ್ಯ.
> ಮನವೆ ಲಿಂಗ, ಲಿಂಗವೆ ಮನವಾದ ಬಳಿಕ
> ಮಾತು ಮಾತುಗಳೆಲ್ಲಾ ಹೊಳ್ಳಾದ ಕಾರಣ ಮಾತೆ ಲಿಂಗೈಕ್ಯ. ಲಿಂಗೈಕ್ಯವೆ ಸ್ವರ.
> ಶಬ್ದ ಸಂದಣೆಗಿನ್ನು ತೆಱಹುಂಟೆ?
> ಕಪಿಲಸಿದ್ಧಮಲ್ಲಿನಾಥಾ, ಇನ್ನು ನಿಮ್ಮ ದೇವರೆಂದಱಿಸಲುಂಟೋ ಇಲ್ಲವೋ
> ಎಂಬುದನು ತಿಳುಹಿಕೊಡಾ, ಎಲೆ ಅಯ್ಯಾ.[೧]

ಕಟ್ಟಿಗೆ ಬೆಂಕಿಗೇರಿ, ಬೆಂಕಿ ಕಟ್ಟಿಗೆಗಿಳಿದು, ಒಂದೊಂದರ ಸತ್ವಕಳೆಯನ್ನು ಮತ್ತೊಂದು ಸುಟ್ಟುಕೊಂಡು ಉಂಡರೆ ಕಟ್ಟಿಗೆ ಬೆಂಕಿಯಾಯ್ತು, ಬೆಂಕಿ ಕಟ್ಟಿಗೆಯಾಯ್ತು. ಹೀಗೆಯೆ ಲಿಂಗದಿಂದ ಅಂಗದ ಪ್ರಕೃತಿ ಸುಟ್ಟು, ಸುಡುವಲ್ಲಿಯೆ ಅಂಗದಿಂದ ಲಿಂಗಕ್ಕೆ ಕಳೆಯೇರಿವರೆ

---

೧. ಶೂ. ಸಂ. ಪು. ೬೬, ವ. ೧೨೫.

ಈ ಸಂದರ್ಭದಲ್ಲಿ ಪ್ರಭುದೇವರು ಹಿಂದೆ ಮುಕ್ತಾಯಕ್ಕನಿಗೆ ಹೇಳಿದ ಮಾತನ್ನು ನೆನೆಸಿಕೊಳ್ಳಿ:

> ಅಂಗದ ಕಳೆ ಲಿಂಗದಲ್ಲಿ ಅಱತ ಬಳಿಕ,
> ಅಂಗವೆಂಬ ಶಂಕೆಯಿಲ್ಲ ನೋಡಾ ಶರಣಂಗೆ.
> ಪ್ರಾಣನ ಕಳೆ ಅಱುಪಿನಲ್ಲಿ ಅಡಿತ ಬಳಿಕ ಶಬ್ದಸಂದಣಿಗೆ ಹಂಗಿಲ್ಲ ನೋಡಾ.
> ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದ.
> ಗೊಹೇಶ್ವರನ ಶರಣಂಗೆ ಕುಱುಹಿಲ್ಲ ಕೇಳಾ ಎಲೆ ಅವ್ವಾ.

ಶೂ. ಸಂ. ಪು. ೩೨, ವ. ೩೨.

ಅಂಗವಿದ್ದಂತೆ, ಅಂಗ ನಡೆದಂತೆ ನುಡಿದಂತೆ ನೆನೆದಂತೆ ಭಾವಿಸಿದಂತೆ, ಅಲ್ಲಲ್ಲಿಯೆ ಲಿಂಗೈಕ್ಯ ವಿದೆ. ಮತ್ತೆ ಲಿಂಗದಂತೆ, ಲಿಂಗವಿದ್ದಂತೆ ಅಲ್ಲಿಯೆ ಅರ್ಪಿತವಾದ ಅಂಗ ಲಿಂಗದಲ್ಲಿ ಒಂದಾಗಿಯೆ ಇದೆ, ನಡೆದು ನುಡಿದಿದೆ, ನೆನೆದು ಭಾವಿಸಿದೆ. ಮತ್ತೆ ಮನವೆಲ್ಲ ಸುಟ್ಟು ಲಿಂಗವಾಗಿ ಸುಡುವ ಲಿಂಗವೆ ಲಿಂಗದಗ್ಧಮನದಲ್ಲಿ ಚೇತನಿಸಿ ಮನವಾಗಿ ಸಂಚಲಿಸಿದರೆ, ಆಗ ಹೊರಡುವ ಮಾತು 'ಶಬ್ದಸಂದಣಿ'ಯ ಮಾತಲ್ಲ. ಆ ಮಾತು ಮನ ಲಿಂಗ ಒಂದಾಗಿ ನುಡಿವ ಮಾತು. ಇಂಥ ಮಾತು ಮೂರ್ತರೂಪವಾಗುವ ಸ್ವರ ಅದೂ ಐಕ್ಯದ ಸ್ವರವೇ. ಈ ಮಾತು ಇಂಥ ಸ್ವರದಲ್ಲಿ 'ಪೂರ್ವಾಶ್ರಯ' ನಷ್ಟವಾಗಿದೆ. ಹಿಂದೆ ಮುಕ್ತಾಯಕ್ಕನಿಗೆ ಪ್ರಭುದೇವ '......ಮನೋಲಯವಾಗಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವೂ ಜ್ಞಾನ ನಷ್ಟ ಶಬ್ದ ನೋಡಾ......'[೧] ಎಂದು ಹೇಳಿದ ಮಾತಿನ ಪ್ರತಿಯೇ '......ಮನವೆ ಲಿಂಗ, ಲಿಂಗವೆ ಮನವಾದ ಬಳಿಕ ಮಾತು ಮಾತುಗಳೆಲ್ಲಾ ಹೊಳ್ಳಾದ ಕಾರಣ......' ಎಂದು ಮುಂತಾಗಿ ಹೇಳುವ ಸಿದ್ಧರಾಮನ ಮಾತು. ಈ ಮಾತು ಶಬ್ದಸಂದಣಿಯಲ್ಲ, ಲಿಂಗದ ಮಾತು ಎಂಬುದೇ ಆತನ ಅರ್ಥ.

ಮನಸ್ಸು ಲಿಂಗದಲ್ಲಿ ಲಯವಾಗಿ, ಅಂಗದಲ್ಲಿ ಲಿಂಗ ಲಿಂಗದಲ್ಲಿ ಅಂಗ ಲಯವಾಗಿ, ಲಿಂಗೈಕ್ಯ ನುಡಿದರೆ ನಡೆದರೆ ಇಲ್ಲಿಗೆ ಮುಗಿಯಿತೇ ಪರತತ್ತ್ವದ ಅರಿವಿನ ಚರಮ ಅಧ್ಯಾಯ? ಮತ್ತೆ ಇನ್ನೂ '......ನಿಮ್ಮ ದೇವರೆಂದು ಅಱಸಲುಂಟೋ ಇಲ್ಲವೋ...' ಇದೇ ನಿಮ್ಮ ಗೊಹೇಶ್ವರಲಿಂಗದ ನಿರಾಳದ ನಿಲವೋ, ಇನ್ನೂ ಒಳಗೆ ಇನ್ನೂ ಮುಂದೆ ನಿಮ್ಮನ್ನು ಹುಡುಕಿ ಅಲ್ಲಿಗೆ ನಿಲುಕಬೇಕೋ?—ಎಂದು ಸಿದ್ಧರಾಮನ ದಿವ್ಯ ಸಮಸ್ಯೆ. ಇದಕ್ಕೆ ಭವ್ಯ ಪರಿಹಾರ ಗಂಭೀರಲೀಲೆಯಿಂದ ಮಾತಿನಲ್ಲಿ ಹರಿದುಬರುತ್ತಿದೆ ಪ್ರಭುಲಿಂಗದ ಮುಖದಿಂದ:

ಕರ್ಪುರದ ಗಿರಿಯನುರಿ ಹಿಡಿದ ಬಳಿಕ ಇದ್ದಿಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?
ಕೆಂಡದ ಗಿರಿಯ ಅರಗಿನ ಬಾಣದಲೆಚ್ಚರೆ
ಮರಳಿ ಬಾಣವನಱಸಲುಂಟೆ?
ಗೊಹೇಶ್ವರಲಿಂಗವನಱದ ಬಳಿಕ
ದೇವರೆಂದು ಅಱಸಲುಂಟೆ ಸಿದ್ಧರಾಮಯ್ಯಾ?[೨]

---

೧. ಶೂ. ಸಂ. ಪು. ೩೩. ವ. ೩೬.

೨. ಅದೇ ಪು. ೬೬. ವ. ೧೨೬.
ಸ್ವಲ್ಪ ಬದಲಾವಣೆ ಹೊಂದಿದ ಈ ವಚನಕ್ಕೆ ಮಹಾಲಿಂಗದೇವರು ಬರೆದ ಟೀಕನ್ನು ಬೇಕಾದರೆ ನೋಡಿ:
ಲಿಂಗದಲ್ಲಿ ಮನೋಲಯವಾಗಿ, ಸರ್ವಾಂಗವು ಅಳಿದು ನಿರ್ವಯಲಾದ ಶರಣಂಗೆ ಕಾಯವಿಲ್ಲ, ಪ್ರಾಣವಿಲ್ಲ, ಮನವಿಲ್ಲ, ಭಾವವಿಲ್ಲ. ಏನೂ ಇಲ್ಲ. ಆವ ಪ್ರಯೋಗಕ್ಕು ಬಾಹಾತನಲ್ಲವಾಗಿ, ಉಪಮಾತೀತನಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.
ಪ್ರ. ವ. ಪು. ೩೭೮-೯, ವ. ೭೮.

ಎಲ್ಲಿಯ ದೇವರು ಸಿದ್ಧರಾಮಾ, ಗೊಹೇಶ್ವರಲಿಂಗವನಱಿದ ಬಳಿಕ? ದೇವರನ್ನು ಹುಡುಕುವ ನೀನು ಎಲ್ಲಿ ಉಳಿದಿರುವೆ ರಾಮಾ? ಲಿಂಗಕ್ಕೆ ಸಿದ್ಧವಾದ ಅಂಗ 'ಕರ್ಪುರದ ಗಿರಿ', ಲಿಂಗ ತಾನೆ ಕೆಂಡದ ಗಿರಿ, ಉರಿಯ ಗಿರಿ. ಉರಿ ಕಟ್ಟಿಗೆಯನ್ನು ಹಿಡಿದರೆ ಇದ್ದಲಿ ಉಳಿಯಬಹುದು. ಆದರೆ ಕರ್ಪುರದ ಪರ್ವತಕ್ಕೆ ಉರಿಹತ್ತಿ ಉರಿದರೆ ಇದ್ದಲಿಯಿಲ್ಲ. ಬೂದಿಯಿಲ್ಲ. ಜ್ಯೋತಿರ್ಲಿಂಗದ ಉರಿಹತ್ತಿ ಲಿಂಗಯೋಗವಾದ ಅಂಗ, ಶರಣ, ಭಕ್ತ ಉರಿದರೆ ದೇವರನ್ನು ಹುಡುಕಬೇಕೆಂಬ ಮನದ ಇದ್ದಲಿ, ಭಾವದ ಇದ್ದಲಿ ಎಲ್ಲಿ ಉಳಿಯಿತು ಸಿದ್ಧಾ? ಹುಡುಕಿ ನೋಡುವ ಕಣ್ಣಿನ ಇದ್ದಲಿ, ನಡೆದು ಹುಡುಕುವ ಕಾಲಿನ ಇದ್ದಲಿಯನ್ನು ಎಲ್ಲಿ ಎಂದು ಯಾರು ಕಂಡರು ಸಿದ್ಧಾ? ಸರ್ವಾಂಗ ದಗ್ಧ, ನಿರ್ದಗ್ಧವಾದ ಬಳಿಕ ಉಳಿದುದು ನಿಶ್ಶೇಷ. ಅರಗಿನ ಬಾಣದಂತಿದ್ದ ಅಂಗವನ್ನು ಕೆಂಡದ ಗಿರಿಲಿಂಗಕ್ಕೆ ಗುರಿಯಿಟ್ಟು ಹೊಡೆದು ಕೆಂಡದ ಗರ್ಭದಿಂದ ಬಾಣವನ್ನು ಮತ್ತೆ ಹೊರತೆಗೆವೆನೆಂಬುದು ಹುಚ್ಚಿನ ಪರ್ವತವಲ್ಲದೆ ಮತ್ತೇನು ಸಿದ್ಧಾ? ಲಿಂಗಾಂಗ ಒಂದಾದ ಬಳಿಕ ಅರಸುವ ಭಕ್ತನಿಲ್ಲ, ಅರಸಿಕೊಳ್ಳಲು ದೇವರಿಲ್ಲ. ಈ ಒಂದಾದ, ಸರ್ವಲಿಂಗಸುಂದರವಾದ, ನೆನೆದರೆ ಭಾವಿಸಿದರೆ ಮಾಸುವ 'ಮಂಜಿನ ಶಿವಾಲಯ'ಕ್ಕೆ ಮತ್ತೆ ಬೇರೆ ಯೋಗದುರಿಯ 'ಬಿಸಿಲ ಕಳಸ'ವನ್ನು ಇಡಬೇಕೆ ಸಿದ್ಧರಾಮಾ? ಇದ್ದಂತೆ ಇದ್ದುದನ್ನು ಮತ್ತೆ ಹುಡುಕುವೆ, ಬೇರೆ ಮಾಡುವೆನೆಂದು ಹೊರಟರೆ ಇಲ್ಲಿಯೆ ಹುದುಗಿದೆ ಮಹಾಮಾಯೆ ಸಿದ್ಧಾ.

ಸಿದ್ಧರಾಮ ತನ್ನ ಅನುಭವಸಮಸ್ಯೆಯನ್ನು ಪ್ರಭುವಿನ ಮುಂದಿಡುತ್ತಾನೆ. ಕರ್ಪುರದ ಗಿರಿಯನ್ನು ಉರಿ ನುಂಗಿದಂತೆ ನಿನ್ನಲ್ಲಿ ಮಗ್ನವಾದ ಮನವನ್ನು ನೀನೆ ನುಂಗಿದ ಕಾರಣ, ಕರ್ಪುರ ಉರಿಯಾಗಿ, ಉರಿ ಕರ್ಪುರವಾಗಿ ಕರ್ಪುರಾಂಗದ ಒಳಹೊರಗೆಲ್ಲ ಒಳ ಹೊರಗೆನ್ನದೆ ಉರಿಯೆ ಉರಿಯಾಗಿರುವಂತೆ ನಾನು ನೀನಾಗಿ ಉರಿಯುತ್ತಿರಲು, ನೀನು ನಾನು ಒಂದಾಗಿ ಉರಿಯುತ್ತಿರಲು ನಿನ್ನನ್ನು ಇದಿರಿಟ್ಟು ಬೇರೆ ದೇವರೆಂದು ಭಾವಿಸಲು ನನಗೆ ಬೇರೊಂದು ಭಾವ ಇಲ್ಲ, ಮನ ಉಳಿದಿಲ್ಲ. ಆದರೆ ಪ್ರಭುದೇವಾ, 'ಇನ್ನು ನಿಮ್ಮ ದೇವರೆಂದು ಅಱಿಸಲುಂಟೋ ಇಲ್ಲವೋ?' ಎಂದು ಕೇಳುವ ನನ್ನ ಪ್ರಶ್ನೆಯ ಆಶಯ— 'ನಿಮ್ಮೊಳಗೆ ಅಡಗಿದ ನುಡಿಯನೊಳಕೊಂಡ ಅಱಿವು ಅಱಿವಱಿದು ಮಱೆದ ಪರಿ ಎಂತಯ್ಯಾ?' ಇದು. '......ಮಾತೆ ಲಿಂಗೈಕ್ಯ, ಲಿಂಗೈಕ್ಯವೆ ಸ್ವರ,' 'ಮನವೆ ಲಿಂಗ, ಲಿಂಗವೆ ಮನ'—ಹೀಗೆ ಮಾತು ಮನವನ್ನು ಒಳಕೊಂಡು ತಾನು ಸರ್ವಾಂಗಲಿಂಗವಾದ ಅರಿವಿನ ಅನುಭವದಾಚೆಗಡೆ ಈ ಅರಿವೂ ತನ್ನ ತಾ ಮರೆದಿರುವ, 'ನಿನ್ನ ನೀನರಿಯದೆ ಇರುವ' ಲಿಂಗಸೀಮೆಯಿದೆಯೇ ಎಂಬುದು ನನ್ನ ಸಮಸ್ಯೆ.

ಸಿದ್ಧರಾಮನ ಶಿವಯೋಗ: ಶಿವಾನುಭವದ ಹೃದಯ 'ಸರ್ವಶೂನ್ಯ ಸಮಾಧಿ'ಗೆ, 'ಶೂನ್ಯಸಂಪಾದನೆ'ಗೆ ಒಳ್ಳೇ ಹದವಾಗಿದೆ ಎಂದು ಸಂಪೂರ್ಣ ಮನಗಂಡು ಪ್ರಭು ಆಗಳೆ ಅಲ್ಲಿ ಬಿತ್ತುತ್ತಾನೆ ಸರ್ವಶೂನ್ಯ ನಿರಾಲಂಬದ ಮಹಾಬೀಜವನ್ನು. ಇದೋ ಈ ಬೀಜದ ಅನುಭವ ಪ್ರಭುವಿನ ಬೀಜಮಾತಿನಲ್ಲಿ ಹೀಗೆ ಅವತರಿಸಿದೆ:

ಅಱಿದೆನೆಂಬುದು ತಾ ಬಯಲು.
ಅಱಿಯೆನೆಂಬುದು ತಾ ಬಯಲು.

ಮಱೆದೆನೆಂಬುದು ತಾ ಬಯಲು.
ಅಱುಹಿನ ಕುಱುಹಿನ ಮಱಹಿನೊಳಗೆ
ಗೊಹೇಶ್ವರನೆಂಬುದು ತಾ ಬಯಲು.[೧]

ಸಿದ್ಧಾ, ಇನ್ನೂ ಒಳಗಡೆ ಇನ್ನೂ ಆಚೆಕಡೆ, ಮಾತು ಮನ ಕುರುಹು ಅರಿವು ಮರಹನ್ನೆಲ್ಲ ಒಳಕೊಂಡು ಅಲ್ಲಿಂದತ್ತತ್ತ ಮೀರಿ ಮೆರೆವ, ಮೀರಿ ಇರುವ ಇರವಿದೆ ನೋಡು. ಇದೇ ಬಚ್ಚಬರಿಯ ಇರವು, ತನ್ನ ತಾನರಿಯದೆ ತನ್ನ ತಾ ಮರೆಯದೆ ಇರುವ ಬಚ್ಚಬರಿಯ ಅರಿವು. ನಾನು ನೀನು, ಜೀವ ಜಗ, ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣ ಅಖಂಡ ಎಂಬ ಎಲ್ಲ ಎಲ್ಲ ಚಿಹ್ನ ಗುರುತು ಕೂನುಗಳ ಕುರುಹು ನಿರ್ನಾಮವಾಗಿ, ಗೊಹೇಶ್ವರ ಮಲ್ಲಿನಾಥ ಮುಂತಾದ ಹೆಸರು ದೆಸೆಯೆಲ್ಲ ಹೇಳ ಹೆಸರಿಲ್ಲದೆ ಕರಗಿ ಬಯಲಾಗಿರುವ ಬಚ್ಚ ಬರಿಯ ಬಯಲಿದು ಸಿದ್ಧಾ. ನಾನು ನಿಜವನರಿದೆ ಅರಿಯೆ, ಅರಿದೆನೆಂಬುದ ಮರೆದೆ–ಎಂಬ ಈ ಎಲ್ಲ ಬಚ್ಚ ಆಗಿ, ಬರಿಯಾಗಿ ತನ್ನ ತಾನೆ ತುಂಬಿ ಇರುವ ಬಯಲೊಂದೆ ಸಿದ್ಧಾ. ಶೂನ್ಯ ನಿಶ್ಶೂನ್ಯವೆನಲಿಲ್ಲದ ಈ ಪರಿಪೂರ್ಣ ಮಹಾಘನಕ್ಕೆ, ಹೆಸರಿಲ್ಲದ ಈ ನಿರಾಳಕ್ಕೆ ಹೆಸರಿಡಬಲ್ಲ ಗರುವರಾರು ರಾಮಾ?

ಗೂಳೂರ ಸಿದ್ಧವೀರದೇವರು ತಿಳಿಸುವಂತೆ ಸ್ವಾನುಭಾವೋಪದೇಶದ ಮಹಾವಾಕ್ಯ ಪ್ರಭುದೇವರ ಈ 'ಬಯಲು' ವಚನ. ಈ ಮಾತನ್ನು ಕೇಳಿ ಅದನ್ನು ಸರ್ವಾಂಗದಲ್ಲಿ ಧರಿಸಿಕೊಂಡ 'ಸಿದ್ಧರಾಮಯ್ಯದೇವರು ಪ್ರಸನ್ನತ್ವಮಂ ಪಡೆ'ದರು. ಯಾವ ಮೋಡ ಯಾವ ಗಾಳಿ ಯಾವ ಕತ್ತಲೆ ಯಾವ ನಕ್ಷತ್ರ ಯಾವ ಚಂದ್ರ ಸೂರ್ಯ ಯಾವ ಗ್ರಹ ಯಾವ ಉಳ್ಕೆ ಇಲ್ಲದ ಬಕ್ಕಬಯಲಂತೆ ಪ್ರಸನ್ನವಾದ ಸಿದ್ಧರಾಮ. ತನ್ನ ಅಂತರ್ಹೃದಯದ ಹಂಬಲ ಪ್ರಭು ತೋರಿದ ಬಯಲನ್ನು ಕಂಡು, 'ಹಾಂ ಇಲ್ಲಿದೆ ನನ್ನ ವಿಶ್ರಾಂತಿ ತೃಪ್ತಿ' ಎಂದುಕೊಂಡು ಸರ್ವಸಂತೃಪ್ತವಾಯ್ತು.

ಮತ್ತೆ ಮುಂದೆ 'ಮರೀಚಿಯು ಬಯಲೊಳಕೊಂಬಂತೆ ಎನ್ನನೆಂದೊಳಕೊಂಬೆ?' 'ಪರಬ್ರಹ್ಮದೊಳು ನಿರ್ಯಾಣವೆಂದಪ್ಪುದು?'—ಎಂದು ತನ್ನ ಜೀವನದ ಅವಸಾನವನ್ನು ತನ್ನ ಅಂತಿಮ ಕಾಲವನ್ನು ಸಿದ್ಧರಾಮ ಕೇಳಿದರೆ, ಅಲ್ಲಮಪ್ರಭು ಮಾನವಜೀವನದ ನಿವ್ಯ ಉದ್ದೇಶವನ್ನೆ ಸಾರುವಂತೆ ಹೀಗೆ ಹೇಳುತ್ತಾನೆ:

ತೆಱಹಿಲ್ಲದ ಘನವ ಮನ ಒಳಕೊಂಡು,
ತಲೆಯಿಲ್ಲದ ಮನವ ಘನ ಒಳಕೊಂಡು,

---

೧. ಶೂ. ಸಂ. ಪು. ೬೬. ವ. ೧೨೮.
ಈ ವಚನಕ್ಕೆ ಕಲ್ಲಮಠದ ಪ್ರಭುದೇವರು ಬರೆದಿರುವ ಟೀಕನ್ನು ಪರಿಶೀಲಿಸಿ ನೋಡಿ:
ಬಯಲೆಂದಡೆ ಮಹಾಘನಲಿಂಗವು. ಅಂತಪ್ಪ ಮಹಾಘನಲಿಂಗವೇ ಶರಣನಾದನಾಗಿ, ಆ ಶರಣನ ಅಱಿವು ಮಱಹು ಕುಱುಹುಗಳೆಲ್ಲವೂ ಬಚ್ಚಬಱಿಯ ಲಿಂಗವೆಯಾಗಿದ್ದಿತ್ತು. ಅಂತು ದೇಹವೆಂಬ ಗುಹೆಗೆ ಈಶ್ವರನೆನಿಸಿಕೊಂಡು ಮಹಾಘನಲಿಂಗವು ತನ್ನ ತಾನರ್ಚಿಸಿಕೊಳುತ್ತ ತನ್ನ ಸ್ವಲೀಲೆಯಿಂದ ಶರಣರೂಪಾಗಿ ಚರಿಸುತ್ತಿಹನು.........
ಲಿಂ. ಲೀ. ವಿ. ಚಾ. ಪು. ೪೧೪. ವ. ೨೩.

ತನಗೆ ತಾ ತರಹರವಾದ ಬಳಿಕ ಮರಳಿ ಇನ್ನು ಇಂಬುಗೊಡಲುಂಟೆ?
ಗೊಹೇಶ್ವರನ ಲೀಲೆ ಮಾಬನ್ನಕ್ಕರ
ಉರಿಯೊಳಗಣ ಕರ್ಪುರದಂತಿರಬೇಕು ಕಾಣಾ ಸಿದ್ಧರಾಮಯ್ಯಾ.[೧]

ಪ್ರಭುದೇವರು ಹಿಂದೆ ಹೇಳಿದ 'ಬಯಲು' ವಚನದ ಅರ್ಥ ಈ ವಚನದೊಳಗಿಂದ ಪ್ರಸ್ಫುಟವಾಗಿ ಹೊಳೆದು ಸುಸ್ಪಷ್ಟವಾಗುತ್ತದೆ. ಎಲ್ಲ ಕುರುಹಳಿದು ಏನೊಂದಕ್ಕೂ ತೆರಹಿಲ್ಲದಿರುವ ಮಹಾಘನ, ಸಂಕಲ್ಪ ವಿಕಲ್ಪ ಸಂದೇಹ ನಿಶ್ಚಯ ನಾನು ನೀನು ಅದು ಇದುಗಳಿಗೆ ಮೂಲಬೀಜವಾಗಿರುವ ತಲೆಯ ಮದುಳಿನ ಉಪಾಧಿಯೆ ಇಲ್ಲದ, ಮಾನವನ ತಲೆಯ ಅಥವಾ ಯಾವುದೆ ತಲೆಯ ಬಣ್ಣವನ್ನು ಲೆಪ್ಪಿಸಿಕೊಂಡು ಬೀಸರ ವಾಗಿ ಸೂಸುತ್ತಿರುವ 'ತಲೆಯ ಮನ'ದ ಗುಣ ಧರ್ಮ ಕರ್ಮವೆಲ್ಲ ನಿಶ್ಶೇಷ ದಗ್ಧವಾಗಿ ಮಹಾಘನದ ಸಮರಸಾಲಿಂಗನಕ್ಕೆ 'ತೊಟ್ಟು ಬಿಟ್ಟು ಕಳಚಿ ಬಿದ್ದ' ಹಣ್ಣಿನಂತೆ ನಿಷ್ಪತ್ತಿಯ ಸಿದ್ಧತೆಯಲ್ಲಿರುವ ಮನ, 'ತಲೆಯಿಲ್ಲದ ಮನ'–ಇವು ಒಂದನ್ನೊಂದು ಅಪ್ಪಿ ಒಂದ ನ್ನೊಂದು ಒಳಕೊಳ್ಳುವ ಸಮರಸ ಸಂಭ್ರಮ 'ತನಗೆ ತಾ ತರಹರ'ವಾಗಿ ಸಮಾಹಿತ ವಾಗಿ ಉಲುಹಿಲ್ಲದ ವೃಕ್ಷದಂತೆ ತೆರೆಗಳೆದ ಸಮುದ್ರದಂತೆ ನಿಶ್ಶಬ್ದ ಗಂಭೀರವಾಗಿ ನಿಂದ ನಿಲವೇ 'ಬಯಲು'. ಇಂಥ ಬಯಲಾಗಿ ನಿಂದ ನಿಲವೇ ಅಥವಾ ಇದ್ದ ಇರವೇ ಸರ್ವ ಶೂನ್ಯಸಮಾಧಿ ಅಥವಾ ನಿರವಯಲ ಸಮಾಧಿ. 'ತನಗೆ ತಾ ತರಹರ'ವಾಗಿರುವ ಈ ನಿರಾಳದ ಬಯಲಿಗೆ ಮತ್ತೆ ಬೇರೆ ಇಂಬು ಎಲ್ಲಿದೆ? ಬಯಲು ಬತ್ತಲೆಯಾದರೆ ವಸ್ತ್ರ ವನ್ನು ಹೊದಿಸುವರಾರು? ಅದು ಎಂಥ ವಸ್ತ್ರ? ಇದೇ ಬಯಲು ಬಿತ್ತಿ ಬೆಳೆದ ದೇಹ ಪ್ರಾಣ ಕರಣ ಇಂದ್ರಿಯಗಳ ದೇಹಿ, ಮಾನವ ಅದೇ ಬಯಲಿನ ಬೆಳಗಾದ ಜಗದಲ್ಲಿ ಇರ ಬೇಕು. ಮಾನವನ ಮರೆಯ ಬಯಲಿನ ಲೀಲೆ ಆಯಾ ದೇಹ ಪ್ರಾಣಾದಿಗಳಲ್ಲಿ ಪೂರ್ತಿ ಯಾಗುವವರೆಗೆ ಇರಬೇಕು. ಜೀವನದ ಪೂಜೆ ಪೂರೈಸುವವರೆಗೆ ಇರಬೇಕು. 'ಉರಿ ಯೊಳಗಣ ಕರ್ಪುರದಂತೆ' ಉರಿಯ ಪೂಜೆ ಮಾಡುತ್ತ ಉರಿಗೆ ಅರ್ಪಿತವಾಗುತ್ತ ಎಲ್ಲ ಕರಗಿ ಎಲ್ಲ ಉರಿಯಾಗುವವರೆಗೆ ಇರಬೇಕು. ಜೀವನಪೂಜೆಯನ್ನು ಮುಕ್ತಾಯಕ್ಕೆ ಮುಟ್ಟಿಸುತ್ತ ಇರಬೇಕು ಮಾನವಲಿಂಗ, ಮಾನವಶಿವ.

ತನ್ನಲ್ಲಿ ಮಲ್ಲಿನಾಥಲಿಂಗದ ಮಣಿಹ ಪೂರಿತವಾಗುವವರೆಗೆ ಲಿಂಗಾರ್ಪಿತವಾಗಿ ಉರಿಯುತ್ತಿರಬೇಕು ಎಂಬ ಪ್ರಭುಲಿಂಗದ ಮಾತು ಅವಸಾನಕ್ಕೆ ತಾನಾಗಿ ಹಾತೊರೆವ ಕಾರಣವಿಲ್ಲ ಎಂಬುದನ್ನು ಸೂಚಿಸಿ, ಜೀವನದ ಮರ್ಮವನ್ನು ಸಾರಿ ಪೇಳಿತು ಸಿದ್ಧರಾಮ ನಿಗೆ ಮತ್ತೆ ಮಾನವರಾಮನಿಗೆ. ರಾಮನಿಗೆ ಆನಂದವಾಯ್ತು. ತನ್ನ ಮೂಢತನಕ್ಕೂ ಆನಂದವಾಯ್ತು. ಕೆರೆದೇಗುಲದ ಮರವೆಯಲ್ಲಿ ನಾನು ಮಲಗಿದ್ದರೆ ದೇವ ಬಂದು ಎಚ್ಚರಿಸಿದ. ಕೆರೆದೇಗುಲದ ಕರ್ಮವೆ ಈ ದೇವನನ್ನು, 'ತಮದ ಅದ್ರಿಗೆ ದಿನಮಣಿ' ಯನ್ನು ಮೂಡಿಸಿದಂತಾಯ್ತು. 'ಎಡಹುವ ಕಲ್ಲ ತೆಗೆವ ಮಣ್ಣಿಯಲ್ಲಿ ನಿಧಾನವ ಕಂಡಂತೆ' ಆಯ್ತು. 'ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಭ್ರಾಂತು ಸ್ವಯವಾಯಿತ್ತು, ಪ್ರಭು-

೧. ಶೂ. ಸಂ. ಪು. ೬೭, ವ. ೧೩೦. ೨. ಶೂ. ಸಂ. ಪು. ೬೬, ವ. ೧೨೮.

ದೇವರ ಕಾರುಣ್ಯದಿಂದ'—ಹೀಗೆಂದ ಸಿದ್ಧರಾಮನ ಮಾತು ಆತನ ಯೋಗ ಲಿಂಗಾಂಗ ಸಾಮರಸ್ಯದ ಸಮಾಧಿಗೆ ಪಾಕಗೊಳ್ಳುತ್ತಿದೆ ಎಂಬುದನ್ನು ಪ್ರಭುವಿಗೆ ಸೂಚನೆದೋರಿತು. ಸಿದ್ಧನಲ್ಲಿಗೆ ತಾನು ಬಂದುದು ಸಫಲವಾಯ್ತೆಂದು ಆನಂದವೇರಿದ ಅಲ್ಲಮಪ್ರಭು. ಸಿದ್ಧನಿರವನ್ನು ಕಂಡು ಉಕ್ಕಿ ಹಾಡಿದ:

ನಿರ್ವಿಕಲ್ಪಿತದ ಅದ್ವೈತವ ನೋಡಿರೆ !
ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೆ !
ಚಂದ್ರ ಸೂರ್ಯರು ಭೂಲೋಕದೊಳಂದಾರುವ ಕಾಣೆ.
ಜ್ಯೋತಿ ಇಲ್ಲದ ಬೆಳಗಿನ ಪ್ರಭೆಯೊ !
ಗೊಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯದೇವರ ಮಹಾಘನವನೇನೆಂಬೆನು ![೧]

ಕೆರೆ ದೇಗುಲ ಅನ್ನಛತ್ರ ಅರವಟಿಗೆಯ ಕರ್ಮಕಾಂಡದಲ್ಲಿ ಮುಳುಗಿದ್ದ ಕರ್ಮಯೋಗಿ ಸಿದ್ಧರಾಮ ಪ್ರಭುದೇವನೊಡನೆ ಅನುಭವಪ್ರಸಂಗಮಾಡಿ ಮಹಾನುಭಾವಪ್ರಸಾದವನ್ನು ಪಡೆದು, ದ್ವೈತಭಾವ ದ್ವೈತಪ್ರಪಂಚವಡಗಿದ ನಿರ್ವಿಕಲ್ಪಿತ ಅದ್ವೈತದೆಡೆಗೆ ನಡೆವ ನಿಜಪಥವನ್ನು ಸುಗಮಮಾಡಿಕೊಂಡ. ಹೊಳೆವ ಬೆಳಗುಗಳಿಗೆಲ್ಲ ಬೆಳಗು ನೀಡಿ ತಾನು ಹೊಳೆಯದೆ ಅಡಗಿ ಬೆಳಗುತ್ತಿರುವ, ಆಕಾಶದ ಮಾಡದಲ್ಲಿ ಇಟ್ಟಿರುವ ಯಾವ ಚಂದ್ರ ಸೂರ್ಯ ನಕ್ಷತ್ರಕೋಟಿಯ ದೀವಿಗೆಗಳಿಂದ, ಜ್ಯೋತಿಗಳಿಂದ ಹೊಮ್ಮುವ ಚಂದ್ರಪ್ರಭೆ ಸೂರ್ಯಪ್ರಕಾಶ ಕೋಟಿ ನಕ್ಷತ್ರಜ್ಯೋತಿಗಳ ಬೆಳಗಿನಂತಲ್ಲದೆ 'ಜ್ಯೋತಿ ಇಲ್ಲದ ಬೆಳಗಿನ ಪ್ರಭೆ' ಸ್ವಯಂಜ್ಯೋತಿ ಪರಂಜ್ಯೋತಿಯಾಗಿ ಪ್ರಜ್ವಲಿಸುತ್ತಿರುವ ಮಹಾಬೆಳಗಿನ ಸತ್ಯೋಜ್ವಲ ನಿತ್ಯಪರಿಪೂರ್ಣವಾದ ವಿಶ್ವತೋ ದಿಕ್ಕಿನ ಅತೀತ ಪಥದಲ್ಲಿ ಮೃತ್ಯುವನ್ನು ಮೆಟ್ಟಿ ಹರಿವ ಅಮೃತದ ಪಥದಲ್ಲಿ ನಡೆಯಲು ಅನುಭವಸಿದ್ಧನಾಗಿರುವ ಸಿದ್ಧರಾಮನನ್ನು ಕಂಡು ಪ್ರಭುವಿಗೆ ಇನ್ನೇನು ಸಿದ್ಧರಾಮ ತನ್ನ ನಿಜದ ನಿರಾಳಕ್ಕೆ ನಿಲುಕಬಲ್ಲ ಎಂಬ ಪೂರ್ಣವಿಶ್ವಾಸ. ಈಗಾಗಲೆ ಸಿದ್ಧರಾಮ ನಡೆದು 'ಮಹಾಘನ'ವಾಗುತ್ತಿರುವ ಸಡಗರವನ್ನು ಪ್ರಭುದೇವರು 'ಗೊಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯದೇವರ ಮಹಾಘನವನೇನೆಂಬೆನು !' ಎಂಬ ಶಬ್ದದಲ್ಲಿ ಮಿಡಿದು ನುಡಿಸಿದರು. ಪ್ರಭುಲಿಂಗದಿಂದ ಮುಟ್ಟಿ ಬಂದ ಈ ನುಡಿಯಲ್ಲಿ ಸಿದ್ಧರಾಮಯ್ಯದೇವರು, ಅವರ ಮಹಾಘನ ಇಂಚರಿಸುತ್ತಿರಬಹುದು. ಕೇಳುವ ಕಿವಿ ನನಗಿಲ್ಲ. ನಿಮಗಿದೆಯೇ?

ಇನ್ನು ಮುಂದೆ ಸಿದ್ಧರಾಮ ಪ್ರಭುದೇವರ ಸಂದರ್ಶನದಲ್ಲಿ, ಅನುಭಾವಗೋಷ್ಠಿಯಲ್ಲಿ ಹೊಸತೊಂದು ಅಧ್ಯಾಯ ಪ್ರಾರಂಭವಾಗುತ್ತದೆ. ಅದೇ 'ಕರಸ್ಥಲ'ದ ಅಧ್ಯಾಯ, ಕರಸ್ಥಲದ ಘನವಾದ 'ಇಷ್ಟಲಿಂಗ'ದ ಅಧ್ಯಾಯ. ಅದು ಹೇಗೆ ಎಂದು ಕೇಳುವಿರಾ? ಇದೋ ಇಲ್ಲಿ ಕೇಳಿ, ಪ್ರಭುದೇವರ ಕೈಯಲ್ಲಿದ್ದ ಲಿಂಗವನ್ನು[೨] ಕುರಿತು ಸಿದ್ಧರಾಮಯ್ಯ ಕೇಳುವ ಪ್ರಶ್ನೆಯನ್ನು :

---

೧. ಶೂ. ಸಂ. ಪು. ೬೭, ವ. ೧೩೨.

೨. ಇಲ್ಲಿ ಅಸಿಮಿಷಯ್ಯನಿಂದ ಅಲ್ಲಮಪ್ರಭು ಪಡೆದುಕೊಂಡಿರುವ ಇಷ್ಟಲಿಂಗದ ಸನ್ನಿವೇಶವನ್ನು ನಮ್ಮ ಮನದಲ್ಲಿ ಒನ್ನೆಲೆಯಾಗಿ ನೆಲೆಗೊಳಿಸಿಕೊಂಡಿರುವುದು ಅತ್ಯವಶ್ಯ.

ಅಯ್ಯಾ, ನಿಮ್ಮ ಸರ ಉಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು.
ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು.
ನಿಮ್ಮ ಕರುಣಪ್ರಸಾದವೆನ್ನ ಸರ್ವಾಂಗವೇದ್ಯವಾಯಿತ್ತು.
ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಕಪಿಲಸಿದ್ಧಮಲ್ಲಿನಾಥಾ?[೧]

ಇಲ್ಲಿ ಹೇಳಿರುವ 'ಸರ' ಮತ್ತು 'ಸಬುದ'ದ ಅರ್ಥ ಹಿಂದೆ ಸಿದ್ಧರಾಮಯ್ಯ ಹೇಳಿದ 'ಮಾತೆ ಲಿಂಗೈಕ್ಯ. ಲಿಂಗೈಕ್ಯವೆ ಸ್ವರ'[೨] ಎಂಬ ಮಾತಿನಿಂದಾಗಲಿ, 'ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ.'[೩] ಎಂಬ ಪ್ರಭುದೇವರ ಹೇಳಿಕೆಯಿಂದಾಗಲಿ ಸುಸ್ಪಷ್ಟವಾಗುವಂತಿದೆ. ಶರಣ ನುಡಿಯದೆ ನಿಶ್ಶಬ್ದಬ್ರಹ್ಮವಾಗಿದ್ದರೆ ಒಂದು ಲೇಸು; ನುಡಿದು ಮಾತಾಡುವ ಲಿಂಗವಾಗಿದ್ದರೆ ಎರಡು ಲೇಸು. ಮತ್ತೆ ಪ್ರಭುದೇವರ ನಿಲವು ನಿಜ ಉಂಡ ನಿಲವು. ಇದೇ ಶಿವಶರಣರು ಹೇಳುವ ಶರಣನ ನಿಜ ನಿಲವು. ಉರಿ ಉಂಡ ಕರ್ಪೂರದ ನಿಲವೇನು? ಉರಿಯ ನಿಲವೇ. ನಿಜಲಿಂಗ ಉಂಡ ಶರಣನ ನಿಲವು ನಿಜ ಲಿಂಗದ ನಿಲವೇ. ಪ್ರಭುದೇವನ ಈ ಗೊಹೇಶ್ವರಲಿಂಗದ ಮಹಾಂತನಿಲವು. ಆತನ ಜ್ಯೋತಿರ್ಲಿಂಗದ ಪ್ರಸನ್ನಶಬ್ದ ಸಿದ್ಧನ ಅನುಭವಕ್ಕೆ ಬರುತ್ತದೆ. ಮತ್ತೆ ಆ ಲಿಂಗದೇವನ ಕರುಣಪ್ರಸಾದದಿಂದ ಸಿದ್ಧನ ಸರ್ವಾಂಗ ಸಂಪ್ಲುತವಾಗಿ ಪ್ರಸನ್ನವಾಗುತ್ತಿರುವ ಅನುಭವ ತನ್ನಲ್ಲಿ ಸ್ವಯಂದರ್ಶನವಾಗುತ್ತದೆ. ಪ್ರಭು ತೋರಿದ 'ಬಯಲು' ತನಗೆ ಸಂಪಾದನೆಯಾಗಬಹುದು ಎಂಬ ಆತ್ಮಪ್ರತ್ಯಯವೂ ಆತನಿಗಿದೆ. ಅವರೆ ಈ ಬಯಲು ಮೂರ್ತಿ. ಪ್ರಭುದೇವ ತನ್ನ ಕರಸ್ಥಲದಲ್ಲಿ ಲಿಂಗವನ್ನು ಹಿಡಿದಿರುವ ಕಾರಣವೇನು? ಪರಿಮಳದ ಪರ್ವತಕ್ಕೆ ಮಲ್ಲಿಗೆಯ ಮಾಲೆ ಏಕೆ? ಸೂರ್ಯನ ಕೈಯಲ್ಲಿ ಹಣತೆ ಏಕೆ? ಸೌಂದರ್ಯ ಸಮುದ್ರಕ್ಕೆ ಮುತ್ತು ರತ್ನದ ಕಂಕಣವೇನು? 'ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣ'ವೇನು? – ಎಂದು ಸಿದ್ಧರಾಮ ಕೇಳಿದರೆ ಅಲ್ಲಮಪ್ರಭು ಹೊರೆಯೇರಿ 'ಅನಾದಿ ವಿಡಿದು ಬಂದ ಅನುಪಮಲಿಂಗವು ಗೊಹೇಶ್ವರನೆಂಬ ಹೆಸರನೊಳಕೊಂಡು ತನ್ನ ಕರಸ್ಥಲಕ್ಕೆ ಸಾಧ್ಯ'[೪]ವಾದ ಪರಿಯನ್ನು ಬಿತ್ತರಿಸುತ್ತಾನೆ. ಅನಾದಿಗಣನಾಥನ ಶಿಷ್ಯ ಆದಿ ಗಣನಾಥ, ಆದಿಯ ಶಿಷ್ಯ ಅಧ್ಯಾತ್ಮ, ಶಿಷ್ಯ ಆತ್ಮ. ಶಿಷ್ಯ ವ್ಯೋಮಸಿದ್ಧ. ವ್ಯೋಮಸಿದ್ಧ ಗುರುವಿನ ಶಿಷ್ಯ ಬಸವ, ಬಸವನ ಶಿಷ್ಯ ಅನುಮಿಷ, ಅನುಮಿಷನ ಶಿಷ್ಯನೆ ತಾನು ಅಲ್ಲಮ

---

೧. ಶೂ. ಸಂ. ಪು. ೬೮, ವ. ೧೩೩.
'ನಿಮ್ಮ ಸರ ಉಂಡ ಸಬುದ' 'ನಿಮ್ಮ ನಿಜ ಉಂಡ ನಿಲವು'......'ವೇದ್ಯವಾಯಿತ್ತು' ಎಂದು ಪ್ರಭುದೇವರ ನಿಲವನ್ನು, ಅವರು ನುಡಿವ ಶಬ್ದದ ನಿಜಸ್ವರೂಪವನ್ನು ಕುರಿತು ಸಿದ್ಧರಾಮಯ್ಯ ಹೇಳುವ ಈ ಮಾತನ್ನು ಹಿಂದೆ ಅವನ್ನೇ ಕುರಿತು ಮಾತಾಡಿದ 'ನುಡಿದಿಹೆನೆಂಬ ಘಲುಹಿನ ಗಲಭೆಯ ತೋಟಿ ಬಿಡದು. ಉತ್ತಮ ಮಧ್ಯಮ ಕನಿಷ್ಠವೆಂಬ, ತಿರುಗಿ ಕಂಡೆಹೆನೆಂಬ ಕಾಲಿನ ಎಡೆಯಾಟ ಬಿಡದು......' (ಶೂ. ಸಂ. ಪು. ೫೮, ವ. ೯೬.) ಎಂಬ ಆತನ ಅಭಿಪ್ರಾಯವನ್ನು ಹೋಲಿಸಿ ನೋಡಿ.

೨. ಶೂ. ಸಂ. ಪು. ೬೬, ವ. ೧೨೫.

೩. ಶೂ. ಸಂ. ಪು. ೩೧, ವ. ೨೮.

೪. ಅದೇ ಪು. ೬೮, ವ. ೧೩೪.

ಗಣನಾಥ.[೧] ಅನಾದಿ ಸಂಸಿದ್ಧವಾದ ಗುರುಪರಂಪರೆ, ಅನಾದಿಯಿಂದ ಬಂದ 'ಕರಸ್ಥಲ'ದ ಪರಂಪರೆ. ಅನಾದಿ ಪರಶಿವತತ್ತ್ವ, ಅನಾದಿ ಶರಣನ ಅನವಚ್ಛಿನ್ನ ಪರಂಪರೆಯಲ್ಲಿ ಬಂದ ಕಂದ ತಾನು, ಅನಿಮಿಷ ಗುರುತಂದೆಯಿಂದ ಇಷ್ಟಲಿಂಗ ದೊರೆಕೊಂಡಿತು ತನಗೆ ಎಂದು ಪ್ರಭುದೇವರು ತಮ್ಮ ಕರಸ್ಥಲದಲ್ಲಿದ್ದ ಇಷ್ಟಲಿಂಗದ ಪೂರ್ವಾಪರವನ್ನು ತಿಳಿಸುತ್ತಾರೆ ಸಿದ್ಧರಾಮನಿಗೆ.

ಶರಣನ ಕಾಯದ ಕರಸ್ಥಲದಲ್ಲಿ ಮತ್ತೊಂದು ಸಾಕಾರಲಿಂಗವೆಂದರೆ ಪರಮಾಶ್ಚರ್ಯ ಸಿದ್ಧರಾಮನಿಗೆ. 'ಕಾಯವೆ ಪೀಠಿಕೆ ಪ್ರಾಣವೆ ಲಿಂಗವಾಗಿರಲು ಬೇಱೆ ಮತ್ತೆ ಕುಱುಹೇಕಯ್ಯಾ?'[೨] ಮನೆಯನ್ನು ಬಿಡದೆ, ಹೊತ್ತುಕೊಂಡು ಬಯಲಿನ ಕಡೆ ಹೊರಡುವುದೆ? ಬುತ್ತಿಯನ್ನು ಕಟ್ಟಿಕೊಂಡು ಅಮೃತಸಾಗರದೆಡೆಗೆ ಹರಿವುದೆ? 'ಕುಱುಹು ವಿಡಿದು ಕೂಡುವ ನಿರವಯಲುಂಟೆ?'[೨] ಕುರುಹು ನಷ್ಟವಾದಲ್ಲದೆ ತನಗೆ ತನ್ನ ನಿಜದರಿವು, ನಿಜ, ನಿರವಯಲು ಸಾಧ್ಯವಲ್ಲ. ಹೀಗಿದ್ದು, ಹೀಗೆ ನೀವೇ ನಿರೂಪಕೊಟ್ಟಿದ್ದು 'ಜಗದೊಳಗೆ ನಷ್ಟವ ಕೈಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ' ಕಾಣಬಹುದೆ ಪ್ರಭು? ಶಿವಯೋಗಿ ಸಿದ್ಧರಾಮನ ಈ ಪ್ರಶ್ನೆಗೆ ಪ್ರಭುಲಿಂಗಗಂಭೀರದಿಂದ ಸಲೀಲಗಮನದಿಂದ ಉತ್ತರ ಹರಿದು ಬರುತ್ತದೆ:

ಇಷ್ಟಲಿಂಗದ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು.
ಮನವನೆಡೆಗೊಂಡ ಲಿಂಗದಱಿವು ವಿಚಾರವ್ಯಾಕುಳಕ್ಕೊಳಗಾಗಬಾರದೆಂದು
ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ,
ಅಂತರಂಗ ಬಹಿರಂಗವೆಂಬುದನಱಿಯದೆ ಅನುಮಿಷನಾಗಿಪ್ಪನಾ ಶರಣನು.
ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗರ
ತೇಜವೆಂಬ ದರ್ಪಣವ ಹಿಡಿದು ಇರ್ಪನು ನೋಡಯ್ಯಾ.
ಗುಹೇಶ್ವರಲಿಂಗದಲ್ಲಿ ನಿಜವನೆಯ್ದಿಹೆನೆಂದರೆ,
ಕುಱುಹುವಿಡಿದು ಕುಱುಹುಗೆಡಬೇಕು ಸಿದ್ಧರಾಮಯ್ಯಾ.[೩]

---

೧. ಶೂ. ಸಂ. ಪು. ೬೮, ವ. ೧೩೪.
ಇಲ್ಲಿ ಅನಾದಿ ಆದಿ ಅಧ್ಯಾತ್ಮ ಆತ್ಮ ಪದಗಳನ್ನು ತಾತ್ತ್ವಿಕಾರ್ಥದಲ್ಲಿಯೆ ನೋಡಬೇಕೆಂದು ನಮ್ಮ ಮತ. ಈ ಹೆಸರಿನ ಗುರು ಶಿಷ್ಯರೆಂದು ಭಾವಿಸುವುದು ಕಷ್ಟ. ಮತ್ತು ಇಲ್ಲಿ ಬಂದಿರುವ 'ಬಸವ' ಕಲ್ಯಾಣದ ಬಸವಣ್ಣನಲ್ಲವೆಂದು ನಮ್ಮ ಅಭಿಪ್ರಾಯ. ಹಮ್ಮೀರ ಕಾವ್ಯ ಮುಂತಾದ ಗ್ರಂಥಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ.

೨. ಶೂ. ಸಂ. ಪು. ೬೮. ವ. ೧೩೫.
ಅಲ್ಲಮಪ್ರಭು ಸೊನ್ನಲಾಪುರಕ್ಕೆ ಬಂದು ಸಿದ್ಧರಾಮನ ಗುಡಿ ಗೋಪುರಗಳನ್ನು ಕಂಡು, 'ದೇಹವೆ ದೇಗುಲವಾಗಿರಲು ಬೇಱೆ ಮತ್ತೆ ದೇವಾಲಯವೇಕಯ್ಯ? ಪ್ರಾಣವೆ ಲಿಂಗವಾಗಿರಲು ಬೇಱೆ ಮತ್ತೆ ಲಿಂಗವೇಕಯ್ಯಾ?......' (ಶೂ. ಸಂ. ಪು. ೩೭, ವ. ೪) ಎಂದು ಹೇಳಿದ ಮಾತನ್ನು ಇಲ್ಲಿ ನೆನೆಸಿಕೊಳ್ಳಿ.

೩. ಶೂ. ಸಂ. ಪು. ೬೮-೯. ವ. ೧೩೬.

(ಮುಂದಿನ ಪುಟ ನೋಡಿ)

'ಕುಱುಹುವಿಡಿದು ಕುಱುಹುಗೆಡಬೇಕು.' ಇಲ್ಲವಾದರೆ ಶಿವಯೋಗ ಪೂರ್ಣಯೋಗವಾಗಲಾರದು. ಅಂತರಂಗದಲ್ಲಿ ಪ್ರಾಣಲಿಂಗ ಸಂಯೋಗವಾಗಿ ಅಂತರಂಗದಲ್ಲಿ ಶಿವಯೋಗ ಸಿದ್ಧಿಯಾದರೆ ಬಹಿರಂಗದ ಗತಿ ಏನು? ಅಂತರಂಗ ಹಗಲಾಗಿ ಬಹಿರಂಗ ರಾತ್ರಿಯಾಗಿರಬೇಕೆ? ಅಂತರಂಗದ ಬೆಂಬತ್ತಿ ಬಹಿರಂಗ ಇದ್ದೇ ಇದೆ. ಅಂತರಂಗ ಬೆಳಗಾದಂತೆ ಬಹಿರಂಗವೇಕೆ ಬೆಳಗಬಾರದು? ಒಂದು ಮಾಡಿದ ಪುಣ್ಯವೇನು? ಮತ್ತೊಂದು ಮಾಡಿದ ಪಾಪವೇನು? 'ಮನವೆ ಲಿಂಗ, ಲಿಂಗವೆ ಮನ,' ಇದರಂತೆ ಭಾವವೆ ಲಿಂಗ ಲಿಂಗವೆ ಭಾವವಾಗಿದ್ದ ಸುಜ್ಞಾನಲಿಂಗ, ಶಿವಯೋಗ ಸಾಧಿಸುವ ಪ್ರಾಣಲಿಂಗ ತಾನಾಗಿದ್ದ ಅಂತರಂಗದ ಸ್ವಯಂಲಿಂಗಾನುಭಾವ ಹೊರಗೆ ಇಂದ್ರಿಯ ಬಾಗಿಲುಗಳನ್ನು ತೆಗೆದಾಗ ತೋರದೆ ಹೋದರೆ ಬಹಿರಂಗದ ಗತಿ ಏನು? 'ಮನವನೆಡೆಗೊಂಡ ಲಿಂಗದಱಿವು' ಕಣ್ಣಿನಲ್ಲಿ ಎಡೆಗೊಂಡು ಇದ್ದು, ಕಣ್ಣಿನರಿವು ಹೊರಗೆ ನೋಡಿದರೆ ಒಳಗಿನಂತೆ ಹೊರಗೂ ಪ್ರತ್ಯಕ್ಷವಾಗಿ ಕಾಣಬೇಕು ಗೊಹೇಶ್ವರಲಿಂಗ. ಇಲ್ಲವಾದರೆ ಬುದ್ಧಿ ವಿಚಾರ ವ್ಯಾಕುಲಕ್ಕೆ ಒಳಗಾಗುವುದು ಸಹಜ,—ಒಳಗಿದ್ದ ದೇವ, ವಿಶ್ವತೋ ವ್ಯಾಪಿಯಾಗಿರುವ ವಿಶ್ವೇಶ್ವರ ಲಿಂಗ ಹೊರಗೇಕೆ ಕಾಣಲೊಲ್ಲ ಎಂದು. ಒಳಗು ಹೊರಗಿನ ಈ ಸೀಮೆಯ ಕಲ್ಲನ್ನು ಕಿತ್ತು ಹಾಕಲೆಂದೆ 'ಮನ ಭಾವ ಜ್ಞಾನ ನೋಟ'ದ ಪ್ರತ್ಯಕ್ಷ ಅನುಭವಕ್ಕೆ ಬಂದಿರುವ ಅಂತರ್ಲಿಂಗವನ್ನೆ ಅಂಗೈಯ ಲಿಂಗದಲ್ಲಿ ಬಯ್ತಿಟ್ಟು ಅಂತರ್ಲಿಂಗದ, ಪ್ರಾಣಲಿಂಗದ ಪ್ರಸನ್ನ ಮುಖವನ್ನೆ ಇಷ್ಟಲಿಂಗದಲ್ಲಿ ದೃಷ್ಟಿಯಾರೆ ನೋಡುತ್ತಾನೆ ಶರಣ. ಅಂತರಂಗದ ದೃಷ್ಟಿಗೆ ನಿತ್ಯ ನಿರಂತರ ದೃಷ್ಟವಾಗಿರುವಂತೆ ಬಹಿರಂಗದ ಬಹಿಶ್ಚಕ್ಷುವಿಗೂ ಎಡೆದೆರಹಿಲ್ಲದೆ ಬೆಳಗಿ ತೋರುತ್ತಾನೆ ಲಿಂಗದೇವ. ಶರಣ ಒಳಗೆ ಕಣ್ಣುಮುಚ್ಚಿದಿರುವಂತೆ ಹೊರಗೂ ಕಣ್ಣು ಮುಚ್ಚಲಿಲ್ಲ. ಒಳಗೆ ನೋಡಲಿ ಹೊರಗೆ ನೋಡಲಿ ರೆಪ್ಪೆಯಿಲ್ಲದ ಕಣ್ಣು ಶರಣನಿಗೆ. ಸಿದ್ಧಾ, ಶರಣ ಅನಿಮಿಷ. ನನ್ನ ಗುರು ಅನಿಮಿಷಯ್ಯ ಇಂಥ ಅನಿಮಿಷನೆ, ರಾಮಾ. 'ಕರಸ್ಥಲದೊಳು ಅಮೃತಲಿಂಗಮಂ ಪಿಡಿದು ಆ ಲಿಂಗದೊಳು ಆಲಿಂಗನಮಾಗಿ ಕರಣಂಗಳೆಲ್ಲ ನಿಃಕರಣವನ್ನೈದಿ, ಭಾವ ನಿರ್ಭಾವದೊಳ್ ನಿಂದು, ನೋಟ ನಟ್ಟು ದೃಷ್ಟಿ ನಟ್ಟೈಸಿ ಎವೆ ಹಳಚದೆ' ನಿಂದ ಆ ಗುರುಮೂರ್ತಿಯನ್ನು ಕಂಡು ನಿಬ್ಬೆರಗಿನಲ್ಲಿ ಮುಳುಗಿ ನೋಡಿ ಹಾಡಿದೆ—'ಸ್ಫಟಿಕದ ಘಟದಂತೆ ಒಳಹೊಱಗಿಲ್ಲ ನೋಡಾ !—......' ಎಂದು. ಒಳಹೊರಗಿಲ್ಲದ ಅನಿಮಿಷಯ್ಯನ ಕರಸ್ಥಲದ ಅಮೃತಲಿಂಗವೇ ನನ್ನ ಕರಸ್ಥಲಕ್ಕೆ ಬಿಜಯಂಗೈಸಿದೆ ರಾಮಾ. ಕರಸ್ಥಲದ ಈ ಇಷ್ಟಲಿಂಗ 'ತೇಜವೆಂಬ ದರ್ಪಣ', ಶಿವಯೋಗಿ.

ಲಿಂಗಲೀಲಾವಿಲಾಸ ಚಾರಿತ್ರದಲ್ಲಿ (ಪು. ೧೨೨, ವ. ೨೧) ಈ ವಚನಕ್ಕೆ ಕಲ್ಲಮಠದ ಪ್ರಭುದೇವರು ಬರೆದ ಟೀಕನ್ನು ನೋಡಿ:

ಜ್ಞಾನೋದಯವಾದ ಶರಣನು ಅಂತರಂಗದಲ್ಲಿ ತನ್ನ ನಿಜವಪ್ಪ ಚಿತ್ಕಳಾಲಿಂಗವನಱಿದಱಿವು ಬಾಹ್ಯವಿಚಾರಕ್ಕೆ ಬಂದಲ್ಲಿ ಮಱೆದು ಶೂನ್ಯವಾಗಿರಬಾರದೆಂದು ತನ್ನಂತರಂಗದಲ್ಲಿಪ್ಪ ಚಿತ್ಕಳಾಲಿಂಗವ ಕರಸ್ಥಲಕ್ಕೆ ತಂದು, ಕಣ್ಮನ ಭಾವಂಗಳಿಗೆ ಪ್ರತ್ಯಕ್ಷವ ಮ್ಮಾಡಿಕೊಂಡು, ತನ್ನ ಪ್ರಾಣಲಿಂಗದ ಮೂರ್ತಿಯ ತೆಱಹಿಲ್ಲದೆ ನೋಡಿ ರತಿಸುಖ ಭಾವ ಬಲಿದು, ನಿಜವು ಸಾಧ್ಯವಾಗಿ ದೇಹವಾಸನೆಯಳಿಯಿತ್ತು.........

ಕಣ್ಣು ಕರಸ್ಥಲದಲ್ಲಿ ಯೋಗವಾದರೆ ಪ್ರಾಣಲಿಂಗದ ಪ್ರಸನ್ನಜ್ಯೋತಿ ಅಂಗೈಯ ಲಿಂಗದೊಳಗಿಂದೆ ಉಚ್ಚಳಿಸಿ ತೋರುತ್ತದೆ ಸಿದ್ಧಾ. ಒಳಗೆ ಶಿವಯೋಗ, ಹೊರಗೆ ಶಿವಯೋಗ. ಒಳಗೆ ಲಿಂಗ, ಹೊರಗೆ ಲಿಂಗ. ಒಳಹೊರಗೆನ್ನದೆ ಬೆಳಗುವ ಸ್ಫಟಿಕದ ಘಟ ಪೂರ್ಣ ಶಿವಯೋಗಿ ಶರಣ. ಮುಖ ನನ್ನದು ಹೌದು. ಆದರೆ ಇದಿರಿಗೆ ಕನ್ನಡಿ ಹಿಡಿಯದೆ, ನನ್ನ ಮುಖ ನನಗೆ ಕಾಣಬಹುದೇ? ಅಂತರ್ಲಿಂಗಕ್ಕೆ ಬಹಿರಿಷ್ಟಲಿಂಗದ ಕನ್ನಡಿ ಬೇಕು. 'ಗೊಹೇಶ್ವರಲಿಂಗದಲ್ಲಿ ನಿಜವನೆಯ್ದಿಹೆನೆಂದರೆ' ಕಣ್ಣಿಗೆ ಈ ಲಿಂಗದರ್ಪಣ ಹಿಡಿಯಬೇಕು. ಅಂಗೈಯಲ್ಲಿ ಈ ಕುಱುಹನ್ನು ಹಿಡಿದು ಕುಱುಹುಗೆಟ್ಟರೆ, ಅದು ಪೂರ್ಣವೀರ ಶಿವಯೋಗ, ಸಿದ್ಧರಾಮಾ. ಅದೇ ಪೂರ್ಣ ದಿವ್ಯ ಜೀವನಯೋಗ, ಅದೇ ಮಾನವ-ದಿವ್ಯದ ಮಹಾಶಿವಯೋಗ.[೧]

ಪ್ರಭುದೇವರ ಈ ಮಾತು ಶಿವಯೋಗ ಶಿವಾನುಭವದ ಹೊಸತೊಂದು ಗಭೀರವನ್ನು ಮಿಡಿದುದು ಸಿದ್ಧರಾಮನಿಗೆ ಗೊತ್ತಾಗುತ್ತದೆ. ಇಷ್ಟಲಿಂಗವಿಡಿದು ಕಾಣಬಹುದಾದ ಆಳ ತನ್ನ ಯೋಗದಾಳಕ್ಕಿಂತ ಇನ್ನೂ ಆಚೆಗೆ, ಇನ್ನೂ ಒಳಗೆ ಮೀರಿ ನಿಂತಿದೆಯೆ? ಈ ಗಭೀರಕ್ಕೆ ಕೊಂಡೊಯ್ಯಬಲ್ಲ ಕರಸ್ಥಲದ ಘನತೆ ಎಷ್ಟಿರಬೇಕು? ಬಲ್ಲವರೆ ಬಲ್ಲರು. ನನಗೆ ಹೇಗೆ ತಿಳಿಯಬಹುದು? 'ಅಯ್ಯಾ, ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲಯ್ಯಾ !......'[೨] ಇಷ್ಟಲಿಂಗದ ನಿಜಸ್ವರೂಪವೇನು? 'ಇಷ್ಟಲಿಂಗದೊಳಗಣ ಸೂಕ್ಷ್ಮಭೇದ'ವೇನು?—ಎಂದು ಸಿದ್ಧರಾಮ ಕೇಳಿದರೆ, ಇದ್ದ ಸಂಗತಿಯನ್ನು ಇದ್ದಂತೆ ಹೇಳುತ್ತಾನೆ ಅಲ್ಲಮಪ್ರಭು. ಸಿದ್ಧರಾಮಾ, ಆಯತಲಿಂಗ ಸ್ವಾಯತಲಿಂಗ ಜಂಗಮಲಿಂಗ.

---

೧. ಅಂಗೈಯ ಕುರುಹಾದ ಇಷ್ಟಲಿಂಗ ಅಂತರಂಗದಲ್ಲಿ ಅನುಭವಕ್ಕೆ ಬಂದ ಪ್ರಾಣಲಿಂಗದ ಸ್ವರೂಪವನ್ನು ಪ್ರತಿಬಿಂಬಿಸುವ ಕನ್ನಡಿ ಎಂಬ ವಿಚಾರದಲ್ಲಿ ಚೆನ್ನಬಸವಣ್ಣ ಮತ್ತು ಮಗ್ಗೆಯ ಮಾಯಿದೇವರ ಮಾತನ್ನು ಕೇಳಿ:

1. ಇಷ್ಟಲಿಂಗ ಪ್ರಾಣಲಿಂಗವೆಂಬುದನಾರು ಬಲ್ಲರು? ಇಷ್ಟಲಿಂಗವೀಗ ದರ್ಪಣ, ಪ್ರಾಣಲಿಂಗ ಪ್ರತಿಬಿಂಬ. ದರ್ಪಣ ಮಸುಳಿಸಿದರೆ ಪ್ರಾಣಲಿಂಗವ ಕಾಣಬಹುದೇ? ಇಷ್ಟ ಪ್ರಾಣ ತೃಪ್ತಿಯೆಂಬರು ನೋಡಾ ! ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರ ಮಸುಳಿಸಿದರೆ ಪ್ರಾಣಲಿಂಗವ ಕಾಣಬಹುದೇ?—

ಸಾಕ್ಷಿ: ಇಷ್ಟಲಿಂಗಮವಿಶ್ವಸ್ಯ ಪ್ರಾಣಲಿಂಗಂ ನ ಪಶ್ಯತಿ ।
ದರ್ಪಣಪ್ರತಿಬಿಂಬಾನಾಂ ಯಥಾ ರೂಪಂ ತಥಾ ಭವೇತ್ ॥ ಎಂದುದಾಗಿ.

ಇದುಕಾರಣ ಕೂಡಲಚೆನ್ನಸಂಗಮದೇವ, ಇಷ್ಟದಲ್ಲಿ ಪ್ರಾಣತೃಪ್ತಿಯಾದವರ ತೋಱಿ ಬದುಕಿಸಯ್ಯಾ !

ಲಿಂ. ಲೀ. ವಿ. ಚಾ. ಪು. ೧೫೫, ವ. ೯೦.

2. ಮುಕುರವನೀಕ್ಷಿಪಂಗನೆಯ ಬುದ್ಧಿಯದೇಂ ವರರೂಪ ಹಾವಭಾ- ।
ವಕಲಿತವಿಭ್ರಮಾಪ್ತನಿಜಮಂಗಳಮೂರ್ತಿಯನೀಕ್ಷಿಪಲ್ಲಿಯೋ ॥
ಮುಕುರವನೇ ನಿರೀಕ್ಷಿಪೆಡೆಯಲ್ಲಿಯೊ ತನ್ನನೆ ನೋಳ್ಪಳೈಸೆ ಲೈಂ- ।
ಗಿಕ ನಿಯಮಾರ್ಚನಾನುಭವದರ್ಪಣದೊಳ್ ಶರಣಂ ಶಿವಾಧವಾ ॥

ಶ. ತ್ರ. ಪು. ೧೮, ಪ. ೨೩.

೨. ಶೂ. ಸಂ. ಪು. ೬೯, ವ. ೧೩೭.

ಗುರುಲಿಂಗ ಶಿವಲಿಂಗ ಪ್ರಸಾದಲಿಂಗ—ಇದು ಷಡುಸ್ಥಲದಲ್ಲಿ ಸ್ವಾನುಭಾವಕ್ಕೆ ಗಮ್ಯ ವಾಗುವ ಆರು ಲಿಂಗ. ಒಂದೊಂದರ ಅನುಭವವನ್ನು ತನ್ನಲ್ಲಿ ನೆಲೆಗೊಳಿಸಿಕೊಂಡು ಆ ಅನುಭವಸೂತ್ರವನ್ನೆ ಹಿಡಿದುಕೊಂಡು ಮುಂದುಮುಂದಿನ ಲಿಂಗವನ್ನು ಅರಿಯಬೇಕು. ಅನುಭವಕ್ಕೆ ತಂದುಕೊಳ್ಳಬೇಕು. ಈ ಷಟ್ಸ್ಥಲದ ಆರು ಲಿಂಗ ಸಂಖ್ಯೆಯ ಆರಲ್ಲ. ಸ್ವಾನುಭಾವದ ಹಂತದಲ್ಲಿ ಆರಾಗಿ ತೋರಿದರೆ ಅವನ್ನು ಸಂಧಿಸಿ ಒಂದುಮಾಡಿ ಕರಸ್ಥಲ ದಲ್ಲಿ ಅನುಗೊಳಿಸಿಕೊಂಡ 'ಗೊಹೇಶ್ವರನ ಶರಣ ಸಂಗನ ಬಸವಣ್ಣ.' '......ಇಂತು ಷಡುಸ್ಥಲದಂತುವ ಸಂಧಿಸಿ ಒಂದುಮಾಡಿಕೊಂಡಿಪ್ಪ ಕರಸ್ಥಲದನುವನು ಗೊಹೇಶ್ವರನ ಶರಣ ಸಂಗನ ಬಸವಣ್ಣ ಬಲ್ಲ, ಬೆಸಗೊಂಬ ಬಾರಾ ಸಿದ್ಧರಾಮಯ್ಯಾ.'[೧]

ಪ್ರಭುದೇವನ ಈ ಮಾತು ಸಿದ್ಧರಾಮನ ಹೃದಯಕ್ಕೆ ಯಾವುದೋ ತನಿಯಾ ನಂದದ ತಂಗಾಳಿಯನ್ನು ತೀಡುತ್ತದೆ. ತಿಳಿಯಬಾರದ ಎದೆಯ ಹಸಿವಿಗೆ 'ಗೊಹೇಶ್ವರನ ಶರಣ ಸಂಗನ ಬಸವಣ್ಣ'ನ ಹೆಸರಿನಲ್ಲಿ ದಿವ್ಯ ಸಂತೃಪ್ತಿಯ ಅಮೃತವಾಸನೆ ಹತ್ತುತ್ತದೆ. ಸಿದ್ಧರಾಮನಿಗೆ ಕಪಿಲಸಿದ್ಧಮಲ್ಲಿನಾಥ ಹೊಳೆಯುತ್ತಾನೆ ಆ ಹೆಸರಿನಲ್ಲಿ. ಈ ಮೊದಲೇ ಕಲ್ಯಾಣದ ಬಸವಣ್ಣನ ಬಗ್ಗೆ ಸಾಕಷ್ಟು ಕೇಳಿರಬಹುದು ಸಿದ್ಧರಾಮ. ಆದರೆ ಪ್ರಭುಲಿಂಗ, ಸಾಕಾರಮಲ್ಲಿನಾಥನ ಮನ ಮೆಚ್ಚಿದ, 'ನೀ ಒಲಿದ ಸಂಗನ ಬಸವಣ್ಣ' ಹೇಗಿರಬಹುದು?

ಅಯ್ಯಾ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿ ಇರಲಿ.
ಅಯ್ಯಾ, ನಿಮ್ಮ ಪರಸ್ಥಲದ ಘನ ನಿಮ್ಮಲ್ಲಿ ಇರಲಿ.
ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ, ಆವುದನು ಒಲ್ಲೆ ನೋಡಯ್ಯಾ.
ಕಪಿಲಸಿದ್ಧಮಲ್ಲಿನಾಥಯ್ಯಾ, ನೀ ಒಲಿದ ಸಂಗನ ಬಸವಣ್ಣನ
ಶ್ರೀಪಾದವ ತೋಱಿಹೆನೆಂಬ ಮಾತಿಂಗೆ ಮಾಱುವೋದೆನು.
ಇನ್ನು ತೋಱಿ ಎನ್ನನುಳುಹಿಕೊಳ್ಳಾ, ಎನ್ನ ದೇವರ ದೇವಾ.[೨]

ಕಲ್ಯಾಣಕ್ಕೆ ಹೋಗಿ ಸಂಗನ ಬಸವಣ್ಣನ ಶ್ರೀಪಾದವನ್ನು ಕಾಣಬೇಕೆಂಬ ಸಿದ್ಧರಾಮನ ತವಕ ಸರ್ವಾಂಗದಲ್ಲಿ ಕೊನರಿ ಪಲ್ಲವಿಸುತ್ತದೆ. ಬಸವಣ್ಣನನ್ನು ಬಿತ್ತಲು ಒಳ್ಳೇ ಹದ ವಾಗಿರುವ ಶಿವಯೋಗಸಿದ್ಧನನ್ನು ಒಡಗೊಂಡು ಬಸವಣ್ಣನ ಕಲ್ಯಾಣದತ್ತ ಅಭಿಮುಖ ವಾಗುತ್ತಾನೆ ಪ್ರಭುದೇವ. ಸೊಲ್ಲಾಪುರದಿಂದ ಇಬ್ಬರೂ ಕೂಡಿ ಕಲ್ಯಾಣಕ್ಕೆ ನಡೆಯು ತ್ತಿದ್ದಾಗ ಸಂಗನ ಬಸವಣ್ಣ ಹಾಗೆಯೆ ಉಕ್ಕುತ್ತಿರುತ್ತಾನೆ ಪ್ರಭುಲಿಂಗದ ಹೃದಯದಲ್ಲಿ; ಹೃದಯ ಹಿಡಿಸದೆ ಮಾತಿನಲ್ಲಿ ಹೊರಸೂಸುತ್ತಾನೆ:

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು.
ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು.
ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು.
ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು.
ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು.

---

೧. ಶೂ. ಸಂ. ಪು. ೬೯, ವ. ೧೩೮. ೨. ಶೂ. ಸಂ. ಪು. ೬೯-೭೦ ವ. ೧೩೯.

ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು.
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು.
ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತನಿವಾಸಿಯಾಗಿ ಐದಾನೆ.
ನಮ್ಮ ಗುಹೇಶ್ವರಲಿಂಗದಲ್ಲಿ ಸಂಗನ ಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯ ![೧]

ಬಸವಣ್ಣನ ಅಂಗ ಸಂಗನ ಅಂಗ, ಲಿಂಗಾಂಗ. ಸಿದ್ಧಾ, ಇದೋ ಇಲ್ಲಿ ಆ ಅಂಗವನ್ನು ಎತ್ತಿ ನೋಡಿದರೆ ಏನಿದೆ? ಅಂಗದ ಮರೆಯಲ್ಲಿ ಆಚಾರ, ಆಚಾರಲಿಂಗ ತುಂಬಿ ತುಳುಕುತ್ತಿದೆ. ಆಚಾರದ ಮರೆಯಲ್ಲಿ ಒಳಗೆ ನೋಡು ಬಸವಣ್ಣನ ಪ್ರಾಣ, ಪ್ರಾಣ ಚೈತನ್ಯ ಆಚಾರದಲ್ಲಿ ನೆಲೆಗೊಂಡು ಆಚರಿಸುತ್ತಿದೆ. ಪ್ರಾಣವನೆತ್ತಿ ನೋಡು ಪ್ರಾಣಲಿಂಗ ಪ್ರಜ್ವಲಿಸುತ್ತಿದೆ. ಮತ್ತೆ ಒಳಗೆ ಲಿಂಗದ ಚಿತ್‌ಚೈತನ್ಯ ಅದೇ ಲಿಂಗಜಂಗಮ ಸ್ವಾಯತವಾಗಿದೆ. ಇನ್ನೂ ಗಂಭೀರದಲ್ಲಿ ಚಿತ್‌ಚೈತನ್ಯದ ಜಂಗಮಪ್ರಸಾದ, ಪರಮಾನಂದಪ್ರಸಾದ ಲಿಂಗಪ್ರಸನ್ನವಾಗಿ ಪ್ರಸಾದಲಿಂಗವಾಗಿ ನೆಲೆಗೊಂಡು ನಿಂದಿದೆ. 'ನಿತ್ಯ'ವೆಂದರೆ 'ಅಮೃತ'ವೆಂದರೆ ಮತ್ತೇನು ರಾಮಾ? ಪ್ರಸಾದವೆ ನಿತ್ಯ. ಈ ನಿತ್ಯದಲ್ಲಿ ನಿಂದು ಬಸವಣ್ಣ 'ದಾಸೋಹ' ನಿರತನಾಗಿದ್ದಾನೆ. ಲಿಂಗಜಂಗಮಕ್ಕೆ ತನ್ನನರ್ಪಿಸಿ, ತಾನಿಲ್ಲದ ನಿರಹಂಭಾವದಲ್ಲಿ ನಿಂದು, ಪ್ರಸಾದ ನೀಡುತ್ತಿದ್ದಾನೆ ಶರಣಗಣಂಗಳಿಗೆ. 'ನಿಶ್ಚಿಂತ ನಿವಾಸಿಯಾಗಿ ಐದಾನೆ.' ನಡೆ ಸಿದ್ಧಾ, ಸಂಗನ ಬಸವಣ್ಣನ ಶ್ರೀಪಾದವನ್ನು ಕಂಡು, ಭಕ್ತಿಪ್ರಸಾದವನ್ನು ಕೊಂಡು ಧನ್ಯರಾಗೋಣ.

---

೧. ಶೂ. ಸಂ. ಪು. ೭೦, ವ. ೧೪೦.

ಈ ವಚನಕ್ಕೆ ಕಲ್ಲಮಠದ ಪ್ರಭುದೇವರು ಬರೆದ ಟೀಕಿನ ಸಾರಾಂಶವಿದೆ ನೋಡಿ: ಪ್ರಥಮದಲ್ಲಿ ಅಂಗದಮೇಲೆ ಇಷ್ಟಲಿಂಗದ ಕ್ರೀಯುನಳವಡಿಸಿಕೊಂಡ ಬಸವಣ್ಣ. ಅಂತಪ್ಪ ಇಷ್ಟಲಿಂಗವೆ ಪ್ರಾಣವಾಗಿರ್ದು, ಇಷ್ಟಲಿಂಗದಲ್ಲಿ ಪ್ರಾಣವ ನೆಲೆಗೊಳಿಸಿದ. ಅಂತು ಇಷ್ಟಲಿಂಗವೆ ಪ್ರಾಣವಾಗಿರ್ದ ಭಾವದಿಂದ ಪ್ರಾಣದಲ್ಲಿ ಲಿಂಗ ನೆಲೆಗೊಂಡಿತ್ತು ಬಸವಣ್ಣಂಗೆ. ಅಂತಪ್ಪ ಪ್ರಾಣಲಿಂಗವೇ ಸತ್ತುವೆಂದರಿದು ಆ ಸತ್ತುವಪ್ಪ ಲಿಂಗದ ಪರಮಚೈತನ್ಯವಪ್ಪ ಚಿತ್ತುವೇ ಜಂಗಮವೆಂದರಿದು ಆ ಲಿಂಗಜಂಗಮದಲ್ಲಿ ಭಿನ್ನಭಾವವಳಿದಿರ್ದ. ಅಂತು ಪ್ರಾಣವೆಲ್ಲಾ ಸತ್ತುವಪ್ಪ ಲಿಂಗವಾದ, ಭಾವಜ್ಞಾನವೆಲ್ಲಾ ಅಖಂಡ ಚಿತ್ತುವಪ್ಪ ಜಂಗಮರೂಪವಲ್ಲಿ ಆ ಚಿತ್ತುವಿನಲ್ಲಿ ಆನಂದವಪ್ಪ ಪರಮಪ್ರಸಾದ ದೊರೆಕೊಂಡಿತ್ತು ಬಸವಣ್ಣಂಗೆ. ಅಂತು ಸತ್ತುಚಿತ್ತಾನಂದವಪ್ಪ ಪರಬ್ರಹ್ಮವು ತಾನಾದ ಸದ್ಭಕ್ತನು ಶಿವೋಹಂಭಾವದಿಂದ ತನಗೆ ನಿತ್ಯವ ನಿಶ್ಚಯಿಸಿದ. ಅಂತು ಲಿಂಗ ಜಂಗಮ ಪ್ರಸಾದ ತನ್ನಲ್ಲಿ ಭಿನ್ನವಿಲ್ಲದೆ ನೆಲೆಗೊಂಡು ತಾನೆಲ್ಲಾ ಪರಶಿವಸ್ವರೂಪನಾಗಿರ್ದುದನರಿದ ಶರಣ ತನ್ನ ಶಿವತತ್ವವ ಬಿಡದಿಹ ಬಂಧವೀಗ ಭಕ್ತಿಯೆಂದರಿದು. ಶಿವನಲ್ಲಿ ಭಿನ್ನಭಾವವಳಿದು. ಶಿವಂಗೆ ದಾಸೋಹವ ಮಾಡುತ್ತಿರ್ದ ಬಸವಣ್ಣ. ಅಂತು ಅಂಗ ಪ್ರಾಣ ಭಾವಂಗಳೆಲ್ಲಾ ಶಿವನೆಂಬ ಭಾವ ಘಟಿಸಿ. ತಾನೆಂಬ ಭಾವ ತಲೆದೋರದೆ, ಮಾಡುವ ಮಾಡಿಸಿಕೊಂಬವೆರಡೂ ಶಿವನೇ ಎಂಬ ನಿಶ್ಚಯ ಘಟಿಸಿ ಭಿನ್ನಭಾವದ ಚಿಂತನೆಯಿಲ್ಲದ ನಿಶ್ಚಿಂತವಾದ ಶಿವಪದದಲ್ಲಿರ್ದ ಬಸವಣ್ಣ. ಅಂತಪ್ಪ ಸದ್ಭಕ್ತ ಬಸವಣ್ಣಂಗೆ ನಮಸ್ಕಾರ ಮೊದಲಾದ ಭಕ್ತಿಯ ಮಾಡಿದವರೆಲ್ಲಾ ಮುಕ್ತರು.

ಲಿಂ. ಲೀ. ವಿ. ಚಾ. ಪು. ೧೮೮-೯. ವ. ೮೨೦ ಟೀಕು.

ಸರಿಯೆನಿಸಿದರೆ ಪ್ರಭುದೇವರ ಮೇಲಿನ ವಚನವನ್ನು ಹೀಗೆ ಅರ್ಥವಿವರಣೆ ಮಾಡಿಕೊಳ್ಳಿ. ಆದರೆ ಕಲ್ಲಮಠದ ಪ್ರಭುದೇವರ ಅನುಭವಕ್ಕೆ ಬಂದ ವಿವರಣೆಯನ್ನು ಅವಶ್ಯ ನೋಡಿ. ಅಲ್ಲಮಪ್ರಭುದೇವರ ವಚನಕ್ಕೆ ಕಲ್ಲಮಠದ ಪ್ರಭುದೇವರ ಅರ್ಥ ವಿವರಣೆಯಾದರೆ ಮತ್ತೇನು ಬೇಕು? ಮುತ್ತಿನ ಹಾರ ಮಲ್ಲಿಗೆಯನ್ನು ಪರಿಮಳಿಸಿದರೆ?

೧೨

ಕರಸ್ಥಲದ ಪರಬ್ರಹ್ಮ

ಪ್ರಥಮಕಾಲದಲ್ಲಿ ದೇವಗಣ ಮಹಾಗಣ ಸುರಗಣ ಕಿನ್ನರಗಣ ಸಹಿತ
ನಮ್ಮ ಬಸವಣ್ಣನು ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು
ಶಿವಗಣವ ಮಾಡಿದಾತನು ನಮ್ಮ ಬಸವಣ್ಣನು.
ಸ್ವರೂಪ ಸಾರಾಯವನು ಪದಾರ್ಥವೆಂದಾತ ನಮ್ಮ ಬಸವಣ್ಣನು.
ಕಲಿದೇವರ ದೇವಾ, ನಿಮ್ಮ ಶರಣ ಬಸವಣ್ಣನಿಂದಾನು ಬದುಕಿದೆನು.[೧]

ಮಡಿವಾಳ ಮಾಚಯ್ಯನವರು.

ನೀನು ಧರೆಯಲಿ ಮೆಱೆಯದಿರ್ದೊಡೆ ।
ತಾನು ಸಿಕ್ಕುವನಲ್ಲವಲ್ಲಮ ।
ನೀನು ಭಕ್ತಿಯ ಮಾಡಿ ಕಾಣಿಸೆ ನಿನ್ನ ಕತದಿಂದೆ ॥
ಸ್ವಾನುಭಾವ ಸುಖಸ್ವರೂಪ ನಿ ।
ಧಾನವನು ಸಾಧಿಸಲಿ ಸರ್ವರು ।
ಮಾನನಿಧಿ ಕೇಳೆನುತ ಬೆಸಸಿದನೀಶ ವೃಷಭಂಗೆ ॥ [೨]

ಚಾಮರಸ.

ಪ್ರಭುದೇವರು ಸಿದ್ಧರಾಮಯ್ಯನನ್ನು ಒಡಗೊಂಡು ಕಲ್ಯಾಣದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಈ ಮೊದಲು ಅವರು ಕಲ್ಯಾಣವನ್ನಾಗಲಿ ಬಸವಣ್ಣನನ್ನಾಗಲಿ ಕಂಡಂತೆ ತೋರುವುದಿಲ್ಲ.[೩] ಕಾಣದಿದ್ದರೇನು? ಕಲ್ಯಾಣ ಮತ್ತು ಬಸವಣ್ಣ ಕನ್ನಡನಾಡಿನಲ್ಲಿ, ಆಚೆ ಸುತ್ತುಮುತ್ತಲಿನ ನೆರೆನಾಡಿನಲ್ಲಿ, ಮತ್ತೆ ಭಾರತದ ನಾಡುನಾಡುಗಳಲ್ಲಿ ಹಬ್ಬಿಕೊಂಡಿದ್ದಾರೆ. ಬಳ್ಳಿಗಾವಿಯ ಅಲ್ಲಮಪ್ರಭು ಸೊಲ್ಲಾಪುರದ ಸಿದ್ಧರಾಮನಂಥವರನ್ನು ತನ್ನೆಡೆಗೆ ಎಳೆದುಕೊಳ್ಳುತ್ತಿರುವ ಕಲ್ಯಾಣದ ಬಸವಣ್ಣನ ಶಕ್ತಿ ಅಥವಾ ಭಕ್ತಿ ಎಂಥದಿರಬೇಕು?

ಕಲ್ಯಾಣಕ್ಕೆ ನಡೆದಿರುವ ಕಾಲಿನಲ್ಲಿ ಹರ್ಷ ತುಂಬಿ ಹರಿಯುತ್ತಿರುವಂತೆ ಸಿದ್ಧರಾಮ ಪ್ರಭುದೇವರ ಹೃದಯ ಪರಮಾನಂದದಿಂದ ಹೊಗರೇರಿ ಕಾಲೂರಿ ಹೆಜ್ಜೆಯಿಟ್ಟು ನಡೆವ ನಿರ್ಝರದಲ್ಲಿವೆ. ಇಲ್ಲಿ ಬನ್ನಿ, ಅವರ ಬೆಂಬಳಿಯಲ್ಲಿ ನಡೆಯುತ್ತಿರುವ ಗೂಳೂರು ಒಡೆಯರ ಮಾತು ಕೇಳಿ: 'ಅದೆಂತೆಂದೊಡಾ ಪ್ರಭುದೇವರು ಸಿದ್ಧರಾಮಯ್ಯದೇವರು ಬಸವರಾಜದೇವರ ಮಹಾತ್ಮೆಯನು ಕೊಂಡಾಡುತ್ತ, ಪರಮಾನಂದದೊಳೋಲಾಡುತ್ತ

---

೧. ಪ್ರ. ಲೀ. ಪು. ೧೦೪. ಗ. ೮, ವ. ೧. (ನೋ. ಪಾಠಾಂತರಗಳಿರುವ ಇದೇ ವಚನ ಶೂ.ಸಂ.ಪು. ೧೭೨, ವ. ೨೭).

೨. ಅದೇ ಪು. ೧೧೧, ಗ.೮, ಪ. ೨೩.

೩. ಸಿದ್ಧರಾಮ ಮತ್ತು ಅಲ್ಲಮಪ್ರಭು ಮೊದಲು ಕಲ್ಯಾಣಕ್ಕೆ ಹೋಗಿದ್ದ ಸಂಗತಿಯ ಉಲ್ಲೇಖ ಯಾವ ವೀರಶೈವ ಗ್ರಂಥವಲ್ಲಿಯೂ ಬಂದಂತಿಲ್ಲ.

ಬರುತ್ತಿರಲು...'–[೧] 'ಪರಮಾನಂದದೊಳೋಲಾಡುತ್ತ' ಇದರರ್ಥ ನನಗೆ ನಿಮಗೆ, ಸಾಮಾನ್ಯವಾಗಿ ಎಲ್ಲರಿಗೂ ಆಗಬಹುದು. ಆದರೆ ರಸಾನಂದದ ತೂಗುಮಂಚದಲ್ಲಿ ಕುಳಿತು ಓಲಾಡುವ ಅನುಭವವಿಲಾಸ ಅನುಭವಕ್ಕೆ ಗೊತ್ತು, ಶಬ್ದಾರ್ಥಕ್ಕೆ ಹೊಳೆಯುವ ಮಾತಲ್ಲ ಅದು. 'ಬಸವರಾಜದೇವರ ಮಹಾತ್ಮೆಯನು ಕೊಂಡಾಡುತ್ತ' ಪ್ರಭು-ಸಿದ್ಧರು ಹೊರಟರೆ, ಇವರನ್ನು ತನ್ನಲ್ಲಿಗೆ ಹೊರಡಿಸಿಕೊಳ್ಳುವ, ಎಳೆದುಕೊಳ್ಳುವ, ಬರಮಾಡಿ ಕೊಳ್ಳುವ ಬಸವಣ್ಣನ ಹೃದಯದ ಬಿನ್ನಹವನ್ನು ಕೇಳಿ ನೋಡಿ, ಬಯಸಿ ಬೇಡಿ ಕರೆಯು ತ್ತಿದೆ ಅವರನ್ನು; ಕಲ್ಯಾಣದಲ್ಲಿ ಹಾತೊರೆಯುತ್ತಿದೆ ಪ್ರಭು-ಸಿದ್ಧರ ಸಮಾಗಮಕ್ಕೆ, ಈ 'ಶರಣಸಂಗ'ಕ್ಕೆ. ಬಸವಣ್ಣನವರ ಅಂತರಂಗವನ್ನು ನೋಡುತ್ತಿರುವ, ಕೇಳುತ್ತಿರುವ ಗೂಳೂರು ದೇವರು ಬಸವಣ್ಣನ ಈ ಹೃದಯಪ್ರಸಂಗವನ್ನು ಹೀಗೆ ಹೇಳುತ್ತಾರೆ: '...... ವೀರಶೈವ ಸದ್‌ಭಕ್ತಿಯಂ ವರ್ಧನಂಗೈವುತ್ತ, ಶಿವಶರಣಸಾಗರಕ್ಕೆ ಪೂರ್ಣೇಂದುವಾಗಿ ಸುಖವಿರುತ್ತಿರಲೊಂದು ದಿನ ಶಿವಲಿಂಗಾರ್ಚನೆಯಂ ಮಾಡುತ್ತ, ಲಿಂಗದೊಳ್ ತಿಳಿದು, ಆ ಲಿಂಗದ ಕಳೆ ಏಕವಾಗಿ, ವಾರಿ ವಾರಿ ಕೂಡಿದಂತೆ, ಕ್ಷೀರ ಕ್ಷೀರ ಬೆರೆದಂತೆ, ರತ್ನದೊಳ್ ಕಳೆ ಬೆರಸಿಪ್ಪಂತೆ ಅಂತರಂಗದ ಜ್ಞಾನ ಬಹಿರಂಗದ ಕ್ರೀ ಒಂದಾಗಿ, ಇಷ್ಟಲಿಂಗದ ಕಳೆ ಪ್ರಾಣಕ್ಕೆ ವೇಧಿಸಿ, ಪ್ರಾಣ ಲಿಂಗ ಸಂಬಂಧವಪ್ಪ ಭೇದವು ಶರಣಸಂಗದಿಂದಲ್ಲದೆ ದೊರ ಕೊಳ್ಳದೆಂದು ಜ್ಞಾನಮುಖದೊಳ್ ನಿರೀಕ್ಷಿಸುತ್ತಿರಲು,'—ಬಸವಣ್ಣ ತನ್ನ ಕರಸ್ಥಲದ ಇಷ್ಟಲಿಂಗಾರ್ಚನೆಯಲ್ಲಿ ಮುಳುಗಿ ಕರಗಿ 'ಲಿಂಗದೊಳ್ ತಿಳಿದು' ನೋಡುತ್ತಿರುವಲ್ಲಿ, ಇಷ್ಟಲಿಂಗದ ಕಳೆ ಪ್ರಾಣಕ್ಕೆ ವೇಧಿಸಿ ಪ್ರಾಣಚೈತನ್ಯದ ಬೀಜದಲ್ಲಿ ಮಹಾಲಿಂಗ ಮೊಳಕೆ ಯೊಡೆದು ಪ್ರಾಣಲಿಂಗವಾಗಿ ಪ್ರಜ್ವಲಿಸಿ ಪ್ರಕಾಶಿಸುವ ಪ್ರಾಣ ಮತ್ತು ಲಿಂಗದ ಸಂಬಂಧ, ಇಷ್ಟಲಿಂಗದ ಅಷ್ಟವಿಧಾರ್ಚನೆಯ ಕ್ರಿಯೆ ಅಂತರಂಗದ ಅರಿವಿನಲ್ಲಿ ನಾಟಿ, ಅರಿವೆಲ್ಲ ಜ್ಞಾನಲಿಂಗವಾಗಿ, ಜ್ಞಾನಲಿಂಗ ಹೊರಗೆ ಕಾಯದಲ್ಲಿ ಮೂಡಿ ತೋರಿದರೆ ಕ್ರಿಯಾಲಿಂಗ ಅಥವಾ ಆಚಾರಲಿಂಗವಾಗಿ ಹೊಮ್ಮುವ ಕ್ರಿಯಾಜ್ಞಾನಗಳ ಸಮರಸ ಸಂಬಂಧ ತಿಳಿಯ ಬೇಕಾದರೆ[೨] ಶರಣರ ಸಂಗ ಬೇಕು; 'ಕೂಡಲಸಂಗಮದೇವರನರಿವಡೆ ಶರಣರ ಸಂಗವೆ ಮೊದಲು'. ಪ್ರಾಣ ನಿತ್ಯ ನಿರ್-ಅಂತರವಾಗಿ ಲಿಂಗಧಾರಿಯಾಗಿರುವ ಹದನ ಶರಣರ ಅನುಭವಮಥನದಿಂದಲ್ಲದೆ ತಿಳಿಯದು ಎಂದು ಬಸವಣ್ಣನವರ ಹೃದಯ ಸಿದ್ಧರಾಮ

---

೧. ಶೂ. ಸಂ. ಪು. ೭೧, ಪ್ರ. ೧.

೨. ಇಲ್ಲಿ ಪ್ರಭುದೇವರ ಈ ವಚನದಲ್ಲಿ ಒಡೆದು ತೋರುವ ಅನುಭವವನ್ನು ಪರಿಶೀಲಿಸಿ ನೋಡಿ:

> ಕರಸ್ಥಲದ ಲಿಂಗವ (ವು?) ಕಾಯಕ್ಕೆ ವೇಧಿಸಿದಲ್ಲಿ ಕಾಯ ಲಿಂಗವಾಯಿತ್ತು.
> ಅಂತಾದ ಮಹಾಘನಲಿಂಗವೇ ಪ್ರಾಣಕ್ಕೆ ವೇಧಿಸಿದಲ್ಲಿ ಪ್ರಾಣ ಲಿಂಗವಾಯಿತ್ತು.
> ಅಂತಾದ ಮಹಾಘನಲಿಂಗವೇ ಭಾವಕ್ಕೆ ವೇಧಿಸಿದಲ್ಲಿ ಭಾವ ಲಿಂಗವಾಯಿತ್ತು.
> ಅಂತಾದ ಮಹಾಘನಲಿಂಗವೇ ಜ್ಞಾನಕ್ಕೆ ವೇಧಿಸಿದಲ್ಲಿ ಜ್ಞಾನ ಲಿಂಗವಾಯಿತ್ತು.
> ಅಂತಾದ ಕಾರಣ, ನಮ್ಮ ಗುಹೇಶ್ವರನ ಶರಣಂಗೆ ಅಱಿವಱಿತು.
> ಕುಱುಹು ನಿಷ್ಪತ್ತಿಯಾಗಿ, ತಾನೆಂಬ ಭಾವವು ಉರಿಯುಂಡ ಕರ್ಪುರದಂತಾಯಿತ್ತು !

ಲಿಂ. ಲೀ. ವಿ. ಚಾ. ಪು. ೩೭೩, ವ. ೨೨.

ಯ್ಯನ ಮತ್ತೆ ಮುಖ್ಯವಾಗಿ ಅಲ್ಲಮಪ್ರಭುದೇವರ ಬರವನ್ನು 'ಕೂರ್ಮನ ಶಿಶುವಿನ ಸ್ನೇಹ'ದಂತೆ ಹಾರೈಸಿಕೊಂಡು ನಿರೀಕ್ಷಿಸುತ್ತಿದೆ.

ಈ ಬಸವಣ್ಣನಾರು ಎಂದು ಕೇಳಿದರೆ, ಮಾದರಸ ಮಾದಲಾಂಬಿಕೆ ಬಾಗೆವಾಡಿಯ ಹೆಸರನ್ನೆತ್ತುವುದಿಲ್ಲ ಗೂಳೂರು ಸಿದ್ಧವೀರದೇವ. ಏಕೆ? ಬಸವಣ್ಣನ ತಂದೆ ತಾಯಿ ಜನನ ಬಾಲ್ಯ ಮುಂತಾದ ಪೂರ್ವವೃತ್ತವೆಲ್ಲ ಸಿದ್ಧವೀರಣ್ಣನಿಗೆ ಗೊತ್ತಿಲ್ಲವೆಂದಲ್ಲ. ಆದರೆ ಅದೆಲ್ಲ ಹೇಳಲೇಬೇಕಾದ ಮಹತ್ತ್ವದ ಮಾತಲ್ಲ 'ಶೂನ್ಯಸಂಪಾದನೆ'ಕಾರನಿಗೆ. ಮುತ್ತಿನ ತಾಯಿ ಶುಕ್ತಿಕೆ, ತಂದೆ ಸ್ವಾತಿ, ಅವರ ನಾಡು ಊರು ಸಮುದ್ರ.–ಇದು ಮುತ್ತಿನ ಪೂರ್ವ ವೃತ್ತಾಂತ. ಆದರೆ ಕಾಂತಿಯ ವೃತ್ತಾಂತವೇನು? ಬಸವಣ್ಣನ ಕಾಂತಿ ದಿವ್ಯದ ಅವ ತಾರವೇ ಎಂದು ಒಬ್ಬ ಸಿದ್ಧವೀರಣ್ಣನಲ್ಲ, ಸಾಮಾನ್ಯವಾಗಿ ಎಲ್ಲ ಶಿವಶರಣರ, ವೀರ ಶೈವರ ಗಟ್ಟಿಯಾದ ನಂಬಿಗೆ. 'ಅವತಾರ'ವನ್ನು ಸಿದ್ಧಮಾಡುವ ಸಾಧನ ಮನುಷ್ಯನಿಗಿರ ದಿದ್ದರೂ 'ಅವತಾರ'ದಲ್ಲಿ ವಿಶ್ವಾಸ ಭಾರತದಲ್ಲಿ ಅಷ್ಟೇ ಅಲ್ಲ, ಹೊರಗಡೆಯ ಮತ ಧರ್ಮಗಳಲ್ಲಿಯೂ ತೋರಿಬರುತ್ತದೆ. ಕತ್ತಲೆಯಲ್ಲಿ ಸೂರ್ಯ ಅವತರಿಸಿದಂತೆ, ಮಾನವ್ಯ ದಲ್ಲಿ ದಿವ್ಯದ ಅವತಾರ. ಮಾನವ್ಯದಲ್ಲಿ ಮುಳುಗಿದ ಕುಲವನ್ನು ದಿವ್ಯಕ್ಕೆ ಎತ್ತುವುದೆ ಅವತಾರದ ಉದ್ದೇಶ. ಸಿದ್ಧವೀರಣ್ಣ ತಿಳಿಸುವಂತೆ ಬಸವಣ್ಣನ ಉದ್ದೇಶ, ಆತನ ಮರ್ತ್ಯ ಲೋಕದ ಮಣಿಹ ಇದೇ.

'ಅಖಂಡಾದ್ವಯ ನಿತ್ಯ ನಿರವಯ ನಿಶ್ಶೂನ್ಯವಪ್ಪ ನಿಷ್ಕಲ ಪರಶಿವನ ಸ್ಥೂಲತತ್ತ್ವವೆ ಮರ್ತ್ಯಲೋಕದಲ್ಲಿ ಜಗಹಿತಾರ್ಥವಾಗಿ ಬಸವೇಶ್ವರನೆಂಬ ನಾಮದಿಂದವತರಿಸಿ, ಷಡು ದರುಶನ ಷಟ್‌ಸಮಯಂಗಳಿಂದ ವೀರಶೈವ ಸದ್‌ಭಕ್ತಿ ಮಸುಳಿಸಿರಲಾ ಶಿವಭಕ್ತಿಯನು ದ್ಧರಿಸಿ, ಸರ್ವಾಚಾರವನಿಂಬುಗೊಂಡು ಕಲ್ಯಾಣಪಟ್ಟಣದಲ್ಲಿ ಗುರು ಲಿಂಗ ಜಂಗಮ ಭಕ್ತಿಯ ಮಾಡುತ್ತ ನಿತ್ಯ ಎಂಬತ್ತೆಂಟು ಪವಾಡಂಗಳಂ ಜಯಿಸುತ್ತಿರ್ಪ ಬಸವೇಶ್ವರಂ ......'[೧] ಬಸವಣ್ಣ ಮಾನವಚೋಹವನ್ನು ತೊಟ್ಟಿರುವ ನಿಷ್ಕಲ ಪರಶಿವನ ಸ್ಥೂಲ ತತ್ತ್ವವೆ. ಬಸವಣ್ಣನ ಸೋದರಿ ಅಕ್ಕನಾಗಮ್ಮನ ಮಗ ಚಿಕ್ಕದಣಾಯಕ ಚೆನ್ನಬಸವಣ್ಣ 'ನಿಷ್ಕಲ ಪರಶಿವನ ಸೂಕ್ಷ್ಮತತ್ತ್ವವೆ ಚೆನ್ನಬಸವೇಶ್ವರನೆಂಬ ನಾಮದಿಂದ ಮರ್ತ್ಯಕ್ಕವ ತರಿಸಿ, ಸಕಲ ಪ್ರಮಥರ್ಗೆ ಷಟ್ಸ್ಥಲಮಂ ಬೋಧಿಸುವುದಕ್ಕೆ ತಾನೆ ಕಾರಣನಾಗಿ, ಅಲ್ಲಮ ಪ್ರಭುದೇವರ ಬರವಿಗೆ ತಾನೆ ಮೂಲಿಗನಾಗಿ'[೨] ಬಂದ. ಈ ಅಲ್ಲಮಪ್ರಭು ಬೇರೊಂದೆಡೆ ಸಿದ್ಧವೀರಣ್ಣ ಹೇಳುವಂತೆ '......ನಿಷ್ಕಲ ಪರಶಿವತತ್ತ್ವದ ಕಾರಣಾವತಾರವಾದ ಪ್ರಭುದೇವರು......'[೩] ಈ ಹೇಳಿಕೆಗಳನ್ನೆಲ್ಲ ಪರೀಕ್ಷಿಸಿದರೆ ಶಿವಭಕ್ತಿ ಶಿವಾಚಾರದ

---

೧. ಶೂ. ಸಂ. ಪು. ೭೧-೭೨, ಪ್ರ. ೧.

೨. ಅದೇ ಪು. ೭೧-೭೨, ಪ್ರ. ೧.

೩. ಅದೇ ಪು. ೮೨, ಪ್ರ. ೩೩.

ಈ ಮೂರೂ ಸಂಗತಿಗಳನ್ನು ಪರೀಕ್ಷಿಸುವಾಗ ಹಿಂದೆ ಇದೇ ಗ್ರಂಥದ ೨ನೆಯ ಪುಟದಲ್ಲಿ ಸಿದ್ಧ ವೀರಣ್ಣ ಹೇಳಿದ '......ಆ ನಿಃಕಲ ಪರಶಿವನ ಸಚ್ಚಿದಾನಂದ ಸ್ವರೂಪವೆನಿಸಿದ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರೇ ಗುರು ಲಿಂಗ ಜಂಗಮಸ್ವರೂಪವಾಗಿ ಸಕಲ ಜಗತ್‌ಪಾವನವಾಗಿ ಮರ್ತ್ಯಕ್ಕೆ ಅವತರಿಸಿದರು......'–ಈ ಮಾತನ್ನು ನೆನೆಸಿಕೊಳ್ಳಿ.

ಪ್ರತ್ಯಕ್ಷಮೂರ್ತಿಯೆ ಬಸವಣ್ಣ; ಈ ಶಿವಭಕ್ತಿ ಶಿವಾಚಾರದ ಪ್ರಾಣಮರ್ಮವಾದ ಷಟ್ಸ್ಥಲಜ್ಞಾನದ ಸುಸೂಕ್ಷ್ಮ ಅಂತರಂಗವನ್ನು ಸ್ವಾನುಭಾವಬದ್ಧವಾಗಿ 'ದರ್ಶನ'ಗೊಳಿಸಿ, ಅನುಭಾವಶಾಸ್ತ್ರವನ್ನು ಬಸವಣ್ಣ ಮುಂತಾದ ಶರಣಗಣಂಗಳಿಗೆ ಬೋಧಿಸಿದ ಸುಜ್ಞಾನಮೂರ್ತಿಯೆ ಚೆನ್ನಬಸವಣ್ಣ. ಬಸವಣ್ಣ ಚೆನ್ನಬಸವಣ್ಣನವರ ದಿವ್ಯಪ್ರಾಣವಾದ ಶಿವಭಕ್ತಿ ಶಿವಜ್ಞಾನದ ದಿವ್ಯಮೂಲವಾದ ಪ್ರೇರಕಶಕ್ತಿಯೆ, ಕಾರಣಚೈತನ್ಯವೆ ಜಂಗಮಮೂರ್ತಿ ಪ್ರಭುದೇವರು. ಮರ್ತ್ಯಲೋಕದಲ್ಲಿ ಈ ಮೂವರ ಮಣಿಹ ಒಂದೇ, ಆದರೆ ಮೂರು ತೆರ.

'...ಷಡುದರುಶನ ಷಟ್‌ಸಮಯಂಗಳಿಂದ ವೀರಶೈವಸದ್ಭಕ್ತಿ ಮಸುಳಿಸಿರಲಾ ಶಿವಭಕ್ತಿಯನುದ್ಧರಿಸಿ'ದುದೆ ಬಸವಣ್ಣನವರ ಜೀವನದ ಮುಖ್ಯ ಮಹಾಕಾರ್ಯ. ಸಿದ್ಧವೀರಣ್ಣನ 'ವೀರಶೈವಸದ್‌ಭಕ್ತಿ ಮಸುಳಿಸಿರಲು' ಎಂಬ ಮಾತಿನಲ್ಲಿ ಬಸವಣ್ಣನವರಿಗಿಂತ ಪೂರ್ವದಲ್ಲಿ ವೀರಶೈವಸದ್‌ಭಕ್ತಿ ಅಂದರೆ ನಿರತಿಶಯವಾದ ನಿಜಭಕ್ತಿ ಶಿವಮಾನವಕುಲದ ಹೃದಯದಲ್ಲಿ ಪ್ರಜ್ವಲಿಸಿ ತೊಳಗಿ ಬೆಳಗಿತು, ಬಸವಣ್ಣ ಬರುವ ಹೊತ್ತಿಗೆ ಆ ಭಕ್ತಿ ಷಡ್‌ದರ್ಶನ ಷಟ್‌ಸಮಯಗಳ ಪ್ರಾಬಲ್ಯದಿಂದ ಪ್ರತಿಹತವಾಗಿ ಇಳಿಮುಖವಾಗಿ ಕಳೆಗುಂದಿ ನಿಸ್ತೇಜವಾಗಿ ಮಾಸಿ ಮಸುಕಾಗಿ ಸ್ವರೂಪ ಭಂಗವಾಗಿತ್ತು. ಆಗ ಬಸವಣ್ಣ 'ಶಿವಶರಣಸಾಗರಕ್ಕೆ ಪೂರ್ಣೇಂದುವಾಗಿ' ಮೂಡಿದ ಕನ್ನಡ ನಾಡಿನ ಕಲ್ಯಾಣದಲ್ಲಿ ಮೂಡಿದ ಎಲ್ಲರ ಕಲ್ಯಾಣಕ್ಕೆ. 'ಸರ್ವಾಚಾರವನಿಂಬುಗೊಂಡು, ಕಲ್ಯಾಣ ಪಟ್ಟಣದಲ್ಲಿ ಗುರು ಲಿಂಗ ಜಂಗಮಭಕ್ತಿಯ ಮಾಡುತ್ತ,' ಇಷ್ಟೇ ಅಲ್ಲದೆ 'ನಿತ್ಯ ಎಂಬತ್ತೆಂಟು' ಪವಾಡಗಳನ್ನು[೧] ಜಯಿಸುತ್ತಿದ್ದ ಬಸವಣ್ಣ ಮೊದಲು ಮಾಡಿದ ಕೆಲಸವೇನು?

ಸಿದ್ಧವೀರಣ್ಣೊಡೆಯರು, ಬಸವಣ್ಣನವರು ಮಾನವಕುಲಕ್ಕೆ ಮಾಡಿದ ಕಲ್ಯಾಣ ಕಾರ್ಯವನ್ನು 'ಶೈವಂಗೆದೆಗೊಂತ ವೈಷ್ಣವಜೀಮೂತ ಝುಂಝೂಮಾರುತ, ಚಾರ್ವಾಕ ಚೌದಂತ ಸೃಣಿ, ಬೌದ್ಧದರ್ದುರ ಫಣಿ......' ಎಂದು ಮುಂತಾಗಿ ಬಿತ್ತರಿಸುತ್ತಾರೆ. ಇದಲ್ಲದೆ ಜೈನ, ನೈಯಾಯಿಕ, ವೈಶೇಷಿಕ, ಭಾಟ್ಟ, ಪ್ರಾಭಾಕರ, ಸಾಂಖ್ಯ, ಮೀಮಾಂಸ, ಕಾಪಾಲ, ಕೌಳ, ಕಾಳಾಮುಖ, ಶಾಕ್ತ, ಸೌರ, ಮತ್ತೆ ಕರ್ಮವಾದ ಕಾಲವಾದ ಮಂತ್ರವಾದ ಮಾಯಾವಾದಗಳನ್ನು ಖಂಡಿಸಿ. ವೀರಶೈವಸದ್ಭಕ್ತಿಯನ್ನು ಉದ್ಧರಿಸಿದರು, ವರ್ಧನಗೊಳಿಸಿದರು. ಇದು ಹೇಗೆ 'ಕಲ್ಯಾಣ ಕಾರ್ಯ' ಎಂದು ನೀವು ಕೇಳಬಹುದು. ಮತ್ತೆ ನೀವು ಹೇಳಬಹುದು: ಬಸವಣ್ಣ ಈ ರೀತಿಯ 'ಆಕ್ರಮಣಕಾರಿ' ಮನೋಭಾವದ ಮೂರ್ತಿಯಲ್ಲ, ಆದರೆ ಸದ್‌ಭಕ್ತಿಯನ್ನು ಸ್ವತಃ ಸರ್ವಾಂಗಮುಖವಾಗಿ ಆಚರಿಸಿ ಉದ್ಧರಿಸಿದ ಎಂದು. ಬಸವಣ್ಣನವರು ಸ್ಪಷ್ಟವಾಗಿ ಕಾಣುವ ಅವರ ವಚನಗಳಲ್ಲಿ ಪರಾಕ್ರಮಣಭಾವ, ದ್ವೇಷ, ಮತ್ಸರವೃತ್ತಿ. (ಸಿದ್ಧವೀರದೇವರು ಹೇಳುವ ತೀಕ್ಷ್ಣತೆಯಲ್ಲಿ) ಕಂಡುಬರುವುದಿಲ್ಲ. ಇವರು ಹೇಳುವ ಮಾತು ವಾಸ್ತವಕ್ಕೆ ಅನುಗುಣವಲ್ಲ

೧. ಹಿಂದಿನವರ ಮತದಂತೆ ಪವಾಡಗಳನ್ನು ಬಿಟ್ಟು ಬಸವಣ್ಣನಿಲ್ಲ. ಜಗತ್ತಿನ ಯಾವುದೇ ಮಹಾತ್ಮನ ಚರಿತೆಯನ್ನು ತೆಗೆದು ನೋಡಿದರೆ, ಅವರ ಜೀವನದ ಅಲ್ಲಲ್ಲಿ ಪವಾಡಗಳು ಜರತಾರಿಯಂತೆ ಹೆಣೆದುಕೊಂಡೇ ಇವೆ.

ದಿದ್ದರೆ, ವಿಸಂಗತ ವಿರೋಧವಾಗಿದ್ದರೆ, ಸಿದ್ಧವೀರಣ್ಣನ ಅಭಿಪ್ರಾಯವನ್ನು 'ಪ್ರಚಾರ ಕಾರ್ಯ'ವೆಂದು ಹೇಳಬೇಕಲ್ಲದೆ ಸಿದ್ಧವೀರಣ್ಣನನ್ನು ಬಸವಣ್ಣನವರ ಮೇಲೆ ಹೇರುವ ಸಾಹಸಮಾಡುವುದು ಒಳಿತಲ್ಲ. ವೇದವಿರಲಿ, ಶಾಸ್ತ್ರ ಪುರಾಣ ಆಗಮವಿರಲಿ, ಧರ್ಮ ಮತ ತತ್ತ್ವ ದರ್ಶನಗಳಾವುವೆ ಇರಲಿ, ವರ್ಣ ಆಶ್ರಮ ಯಜ್ಞ ಯಾಗ ಯೋಗ ಜಪ ತಪ ಆಚಾರ ಸಂಪ್ರದಾಯ ಪದ್ಧತಿಗಳೇನೇ ಇರಲಿ, ಪುರಾತನಕಾಲದಿಂದ ತನ್ನ ಕಾಲದವರೆಗೆ ಉಳಿದು ಬೆಳೆದು ಬಂದಿರುವ ಮಾನವಜೀವನಕೋಟಿಯನ್ನು ನೋಡಿ, ಸುತ್ತುಮುತ್ತು ಒಳಹೊರಗೆಲ್ಲ ಪರೀಕ್ಷಿಸಿ ನೋಡಿ, ಇಲ್ಲೆಲ್ಲ ಇಳಿದು ಬೇರುಬಿಟ್ಟು ಕಸಗೂಡಿರುವ ಕರಿಕೆ ಗೂಡಿರುವ ಮಾನವಜೀವನದ ಮಹಾಕ್ಷೇತ್ರದಲ್ಲಿ 'ಪ್ರಳಯದ ಕಸ'ವನ್ನು ಕಿತ್ತು ದಿವ್ಯದ ಬೆಳಸಿಗೆ ಹದಮಾಡಿ, ಜ್ಞಾನಾದುಪರಿ, ಕರ್ಮ–ಯೋಗಾದುಪರಿಯಾದ ಇವರ ಜೀವ ಸಾರವನ್ನೆಲ್ಲ ಒಳಗೊಂಡು 'ಭಕ್ತಿಃ ಪರತರಾ ಭಾತಿ' ಎಂದು ಹೇಳುವ ಶಾಂಭವೀಭಕ್ತಿ ಯನ್ನು, ಶಿವಭಕ್ತಿಯನ್ನು, ವಿಶ್ವಮಂಗಲ ವಿಶ್ವಶುಭ ವಿಶ್ವಭದ್ರ ವಿಶ್ವಕಲ್ಯಾಣಕಾರಿಯಾದ 'ಶಿವ'ಭಕ್ತಿಯನ್ನು ಬಿತ್ತಲು ವಿಶ್ವಪ್ರಯತ್ನ ಮಾಡಿದರು. ಬಸವಣ್ಣನವರ ಈ ಪ್ರಯತ್ನ ದಲ್ಲಿ 'ಸರ್ವಸಮನ್ವಯಭಾವ' ಒಡೆದು ತೋರುತ್ತಿದೆಯಲ್ಲದೆ, ಮತಾಂಧ ವಿರೋಧ ಭಾವ ಎಲ್ಲಿಯೂ ತಲೆಯೆತ್ತಿ ತೋರುವುದಿಲ್ಲ. ಶಿವಭಕ್ತಿಯೆ ಮಾನವಕಲ್ಯಾಣವೆಂಬುದು ಬಸವಣ್ಣನವರ ಜೀವನದ ಹೃದಯಗೀತೆ ಅಥವಾ ಶಿವಗೀತೆ. ಶೂನ್ಯಸಂಪಾದನೆಯಲ್ಲಿ ಮುಂದೆ ಮುಂದೆ ನಡೆದಂತೆ ಬಸವಣ್ಣನ ಈ ಶಿವಹೃದಯದ ಮಹಾಗೀತೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕೇಳುತ್ತದೆ; ಈ 'ಶಿವ-ಬಸವ'ನೂ ಹೆಚ್ಚು ಹೆಚ್ಚು ಪ್ರಕಾಶಮಾನವಾಗು ತ್ತಾನೆ.

ಸಿದ್ಧರಾಮಯ್ಯ ಅಲ್ಲಮಪ್ರಭು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಚೆನ್ನಬಸವಣ್ಣ ಬಸವಣ್ಣನಿಂದ ಗುರೂಪದೇಶವನ್ನು ಪಡೆದ ಪ್ರಸಂಗವನ್ನು ವಿವರವಾಗಿ ಹೇಳುತ್ತಾನೆ ಸಿದ್ಧವೀರಣ್ಣ. ಈ ಸಿದ್ಧವೀರಣ್ಣನ ಶೂನ್ಯಸಂಪಾದನೆಯಲ್ಲಿ ೪ನೆಯದಾದ 'ಬಸವೇಶ ಚೆನ್ನ ಬಸವೇಶಂಗನುಗ್ರಹಮಾಡಿದ ಸಂಪಾದನೆ' ಎಂಬ ಹೆಸರೇ ಈ ವಿಷಯವನ್ನು ಹೇಳು ತ್ತದೆ. 'ಶೂನ್ಯಸಂಪಾದನೆ'ಯನ್ನು ನೋಡುವುದಿದ್ದರೆ ಸಿದ್ಧವೀರಣ್ಣ ಕರೆದತ್ತ ನಾವು ನಡೆಯಬೇಕಲ್ಲವೆ? ಕೆಲಹೊತ್ತು ಸಿದ್ಧ-ಪ್ರಭುದೇವರನ್ನು ಅವರ ಪರಮಾನಂದ ದೋಲಾಟದಲ್ಲಿ ಬಿಟ್ಟು, ಕಲ್ಯಾಣಕ್ಕೆ ಬರಬೇಕು ನಾವು. ವಿರೂಪಾಕ್ಷಪಂಡಿತನ ಚೆನ್ನ ಬಸವಪುರಾಣದಲ್ಲಿ ಚೆನ್ನಬಸವಣ್ಣನ ಅರಮನೆಯಲ್ಲಿಯೆ ಈ ದೀಕ್ಷೆ, ಉಪದೇಶ ನಡೆಯುತ್ತದೆ.[೧] ಚೆನ್ನಬಸವಣ್ಣ ತನಗೆ ಗುರುಕಾರುಣ್ಯವಾಗಬೇಕೆಂದು ಬಸವಣ್ಣನಲ್ಲಿ ಬಿನ್ನವಿಸುತ್ತಾನೆ:

---

೧. ಈ ಉಪದೇಶ ನಡೆದ ಸನ್ನಿವೇಶಕ್ಕೆ ಪೀಠಿಕೆಯಂತಿರುವ ಈ ಪದ್ಯ ನೋಡಿ:

ಇಂತಿರುತ್ತಿರಲಿತ್ತಲೊಂದಿನದೊಳುದಯ ಸಮ ।
ನಂತರದೊಳಾ ಬಸವನತ್ಯಧಿಕ ಶಿವಪೂಜೆ ।
ಯಂ ತೀರ್ಚಿ ಬಳಿಕಿನ್ನು ಚೆನ್ನಬಸವಣ್ಣನಿಂದಂ ಮಹಾಪಟ್ಟಸ್ಥಲವನು ॥

(ಮುಂದಿನ ಪುಟ ನೋಡಿ)

ಮೀನಜ ರೋಮಜ ಋಷಿಯರು ಮೊದಲಾದ
ಅನಂತಕೋಟಿ ಹರಿಬ್ರಹ್ಮರಿಲ್ಲದಂದು
ಅಲ್ಲಿಂದತ್ತತ್ತ ನೀನೇಕೋ ಲಿಂಗ, ಒಬ್ಬನೆ ಶರಣ.
ಗುರುವೆ, ಪರಮಗುರುವೆ, ನೀನೆ ಗತಿಯಯ್ಯಾ !
ಆದಿಕುಳಕ್ಕೆ ಮೂಲಿಗನಾಗಿ ಸುಳುಹುದೋಱಿ ಪಾವನವ ಮಾಡಬಂದಿರಿ.
ಬಹುಮುಖ ಜೀವಿಗಳಿಗೆ ಬಹುಮುಖ ಪ್ರಸಾದವ ತೋಱಿದಿರಯ್ಯಾ !
ಭುವನವ ಸಲಹಲೆಂದವತರಿಸಿದಿರಿ.
ಆದಿ ಲಿಂಗ, ಅನಾದಿ ಶರಣನೆಂಬುದು ತಪ್ಪದು.
ನೀವು ಪುಟ್ಟಿಸಿದ ಘಟಕ್ಕೆ ಕಾರುಣ್ಯವ ಮಾಡಿ
ಸಲಹಯ್ಯಾ ಕೂಡಲ ಚೆನ್ನಸಂಗಮದೇವಾ.[೧]

'ಕೂಡಲ ಚೆನ್ನಸಂಗಮದೇವ'ನ ಪ್ರತ್ಯಕ್ಷ ಸಾಕಾರಮೂರ್ತಿ ಬಸವಣ್ಣ, ಚೆನ್ನಬಸವಣ್ಣ
ಸುಜ್ಞಾನದೃಷ್ಟಿಯಲ್ಲಿ. ಬಸವಣ್ಣ ಏಕೋದೇವ, ಏಕೋಲಿಂಗ, 'ಏಕಮೇವಾದ್ವಿತೀಯ

ತಾಂ ತಿಳಿಯಬೇಕೆನುತೆ ನಡೆಗೊಳಲ್ ಗಣಕುಲಂ ।
ಓಂತೆ ಬರೆ ಪಡಿಯರರ ತಂಡಮುಗ್ಗಡಿಸಲೋ ।
ರಂತಳಿಯನರಮನೆಯ ಬಾಗಿಲ್ಗಳಂ ಕಳೆದು ಬರುತಿರ್ದನುತ್ಸವದೊಳು ॥

ಅನ್ನೆಗಂ ಬಾಗಿಲವನಿರದೊರ್ವನೈತಂದು ।
ಚೆನ್ನಬಸವಣ್ಣಂಗೆ ಕೈಮುಗಿದು ತತ್ತ್ವಸಂ ।
ಪನ್ನ ಕೇಳಿದೆ ದಣಾಯಕ ಬಸವರಾಜನೈತಂದನೆನೆ ಭೋಂಕನೆದ್ದು ॥
ತನ್ನವರ್ಗಳೊಡನಿದಿರ್ವರೆ ಕಂಡು ಬಸವಣ್ಣ ।
ಸನ್ನುತ ಸುಭಕ್ತಿಯಿಂ ನಮಿಸೆ ಕೆಲಸಿಡಿದು ಬೇ ।
ಗನ್ನಮಿಸಬಪ್ಪಳಿಯನಂ ಕಂಡು ಸೆಳೆದು ಬಿಗಿಯಪ್ಪಿದಂ ಹರುಷದಿಂದೆ ॥

ಸಲೆಮೋಹರಸವಧಿಕಭಕ್ತಿರಸಮೊಡವೆರೆದು ।
ತುಳುಕಲಳಿಯನ ನೋಡಿ ಹಿಗ್ಗುತುಂ ಹರುಷದಿಂ ।
ಹಲವು ಪರಿಯಿಂ ನುತಿಸಿ ರತ್ನಮಯಮಂಟಪದೊಳೆಸೆವ ಗದ್ದುಗೆಯ [ಮೇಲೆ] ॥
ಒಲಿದು ಕುಳ್ಳಿರಿಸಿ ತಾನುಂ ಕುಳಿತು ಪಟ್ಟ್ಥಲಂ ।
ದಿಳಿಯಬೇಕೆನುತಲತಿವಿನಯದಿಂ ಸಕಲಗಣ ।
ಕುಲವನೆಡಬಲದೊಳ್ ಸಮೀಪದೊಳ್ ಕುಳ್ಳಿರಿಸಿದಂ ಬಸವನಳ್ತಿಯಿಂದೆ ॥

ಈ ತೆರದೊಳೊಲಿದು ಕುಳ್ಳಿರ್ದು ಬಸವಣ್ಣನತಿ ।
ಪ್ರೀತಿ ಮಿಗಲಳಿಯನ ಮೊಗಂನೋಡಿ ನಗುತಾದು ।
ದೇ ತತ್ತ್ವನಿಧಿ ಶಿವಾರ್ಚನೆಯೆನಲ್ ಚೆನ್ನಬಸವಂ ನಕ್ಕು ವಿನಯದಿಂದೆ ॥
ಜ್ಯೋತಿಯಿಲ್ಲದೆ ಕಣ್ಗೆ ಬೆಳಗುಂಟೆ ಗುರುವಿನ ಮ ।
ಹಾತಿಶಯ ದೀಕ್ಷೆಯಿಲ್ಲದೆ ಶಿವಾರ್ಚನೆಯೆಂಬ ।
ಮಾತುಂಟೆ ಸೆಜ್ಜೆಯಂ ಬಿಚ್ಚೀಶ್ವರಾರ್ಚನೆಗನುಜ್ಞೆಯಂ ಮಾಡೆಂದನು ॥

ಚೆ.ಪು., ಪು. ೫೭-೫೮, ಕಾಂ. ೧, ಸಂ. ೬, ಪ. ೨-

೧. ಶೂ. ಸಂ. ಪು. ೭೨, ವ. ೧.

ಏಕೋ ಶರಣ. ಈ ಅನಾದಿಶರಣ ಮಾಡಿದರೆ, ತಂದರೆ, ಲಿಂಗ ಬಂತು ಭುವನಕ್ಕೆ. ಎಂಥ ಅನಾದಿ ಸತ್ಯ ಈ ಹೇಳಿಕೆ! 'ಮರ್ತ್ಯಕ್ಕೆ ಮಹವ ತಂದು' 'ಆದಿಕುಳ'ಕ್ಕೆ, ಜಗತ್ತಿನಲ್ಲಿ ಲಿಂಗವನ್ನು ಬೆಳೆವ ಮೂಲಕೃಷಿಗೆ ಮೊದಲಿಗನಾಗಿ 'ಸುಳುಹುದೋಱಿ ಪಾವನವ ಮಾಡಬಂದಿರಿ.' ಕಾಲಕಾಲಾಂತರದಲ್ಲಿ, ಯುಗಯುಗಾಂತರದಲ್ಲಿ ಮಾನವ ಹೃದಯ ದಲ್ಲಿ ಶರಣ ಮೂಡಿ, ಸಕಲ ಭುವನಾಂತರಂಗದಲ್ಲಿ ತುಂಬಿ ತುಳುಕಿರುವ ಲಿಂಗವನ್ನು ನೋಡಿ ಕಂಡು ಹಿಡಿಯದಿದ್ದರೆ, ಶರಣಲಿಂಗ ಶಿವಲಿಂಗವನ್ನು ಒಡಿದು ಹೊರಗೆ ತರದಿದ್ದರೆ, 'ಪಾವನ'ದ ಹೆಸರೆಲ್ಲಿ ಹುಟ್ಟುತ್ತಿತ್ತು ಮಹಾಭೂತದ ಭುವನದಲ್ಲಿ? 'ಬಹುಮುಖಿ ಜೀವಿಗಳಿಗೆ ಬಹುಮುಖ ಪ್ರಸಾದವ ತೋಱಿದಿರಯ್ಯಾ!' ಬಹುಮುಖದಲ್ಲಿ ಭೂತ 'ಭುವನ'ವನ್ನು ತಿಂದು, ಭೌತವಿಷಯಪ್ರಪಂಚವನ್ನುಂಡು ಜೀವಿಸುತ್ತಿರುವ ಭೂತ ಪ್ರಾಣಿಗಳಿಗೆ ವಿಷಯ ಪದಾರ್ಥದ 'ಸ್ವರೂಪಸಾರಾಯ' ಲಿಂಗಪದಾರ್ಥ, ಲಿಂಗ ಪ್ರಸಾದವೆಂದು ತೋರಿ, ಕೊಟ್ಟು 'ಭುವನವ ಸಲಹಲೆಂದವತರಿಸಿದಿರಿ.' ಭುವನಕ್ಕೆ ಈ ದಿವ್ಯ ಪಾವನವನ್ನು, ಈ ದಿವ್ಯಪ್ರಸಾದವನ್ನು ತಂದು ತೋರಿದರೆ ಆತ ಗುರು, ಪರಮ ಗುರು, ಆತನೆ ಜಗದ್ಗುರು. ಇಂಥ ಗುರು ಬಸವಣ್ಣ 'ಪುಟ್ಟಿಸಿದ ಘಟ' ಚೆನ್ನಬಸವಣ್ಣ. ಅಂದರೆ ಇದರರ್ಥವೇನು? '...ನೀವು, ನಾನು ಹೊಟ್ಟೆಯಲ್ಲಿರ್ದಂದು, ವಿಭೂತಿಯ ಪಟ್ಟವ ಕಟ್ಟಿದಂದೆ ಅನುಗ್ರಹವಾಯಿತ್ತು...'[೧]—ಎಂದು ಮುಂದೆ ಹೇಳುವ ಚೆನ್ನ ಬಸವಣ್ಣನ ಮಾತೇ ಇದರರ್ಥವನ್ನು ಹೊರಗೆಡವುತ್ತದೆ. ಚೆನ್ನಬಸವಣ್ಣ ಅಕ್ಕನಾಗಮ್ಮನ ಗರ್ಭದಲ್ಲಿ ಶಿಶುವಾಗಿರುವಾಗಳೆ 'ವಿಭೂತಿಯ ಪಟ್ಟವ ಕಟ್ಟಿ'ದ ದೀಕ್ಷಾಗುರು ಬಸವಣ್ಣ.[೨] ದೀಕ್ಷೆಯಾಗದವರೆಗೆ ತಂದೆತಾಯಿಯ ಮಗು 'ಮಾಂಸಪಿಂಡ.' ದೀಕ್ಷೆಯಾದ ಬಳಿಕ ಮಾಂಸಪಿಂಡ ಗುರುವಿನಿಂದ ಸಂಸ್ಕಾರಹೊಂದಿ ಮಂತ್ರಪಿಂಡವಾದರೆ ಈ 'ಮಂತ್ರಪಿಂಡ' ತಂದೆತಾಯಿಗೆ ಸುತನಲ್ಲ, ಗುರುಪುತ್ರ. ಈ ಪುತ್ರನೆ ಗುರು 'ಪುಟ್ಟಿಸಿದ ಘಟ'. ಇಂಥ ಘಟಕ್ಕೆ, ಹೀಗೆ ಬಸವಣ್ಣನ ಶಿಶುವಾದ ತನಗೆ ಮತ್ತೆ ಕಾರುಣ್ಯ, ಅನುಗ್ರಹಮಾಡಬೇಕೆಂದು ಗುರೂಪಾಸ್ತಿ, 'ಉಪಾವಸ್ತೆ' ಚೆನ್ನಬಸವಣ್ಣನದು.

---

೧. ಶೂ. ಸಂ. ಪು. ೭೩, ವ. ೩.

೨. ಚೆನ್ನಬಸವಣ್ಣನಿಗೆ ಶೈಶವದಲ್ಲಿ ಈಶ್ವರನಿಂದ ಲಿಂಗಧಾರಣದೀಕ್ಷೆಯಾಯಿತೆಂದು ವಿರೂಪಾಕ್ಷ ಪಂಡಿತ ತಿಳಿಸುತ್ತಾನೆ:

ಬಳಿಕಮಾ ಸಮಯದೊಳಗೀಶ್ವರಂ ಸತ್ಪಂಚ ।
ಕಳಶಂಗಳಂ ಸ್ಥಾಪನಂಗೆಯ್ದು ಪಾರ್ವತಿಯ ।
ನೊಲವಿನಿಂ ಕುಳ್ಳಿರಿಸಿ ಪುತ್ರಂಗೆ ತ್ರಿವಿಧ ದೀಕ್ಷೆಗಳಿಂ ತ್ರಿಲಿಂಗಂಗಳ ॥
ನಲಿದು ತ್ರಿವಿಧಾಂಗಂಗಳೊಳು ಪ್ರತಿಷ್ಠಿಸಿ ಶರಣ ।
ಕುಲಕೀ ಪ್ರಕಾರದೊಳ್ ದೀಕ್ಷೆಗೆಯ್ಯೆಂದು ಕೃಪೆ ।
ಯೊಳು ನಿರೂಪಿಸುವನೋ ಪೇಳೆನಲ್ ಮೊದಲ ಲಿಂಗವನೆ ದೀಕ್ಷೆಯನಿತ್ತನು ॥

ಚೆ. ಪು., ಪು. ೪೬, ಕಾಂ. ೧, ಸಂ. ೫, ಪ. ೨೪.

ಚೆನ್ನಬಸವಣ್ಣನ ಬಿನ್ನಹಕ್ಕೆ ಹೌಹಾರಿದಂತಾಗುತ್ತಾನೆ ಬಸವಣ್ಣ. ಗುರುವಿಗೆ ಶಿಷ್ಯನಿಂದ ದೀಕ್ಷೆ, ಅನುಗ್ರಹ, ಉಪದೇಶ, 'ಭಾಷೆ–ಪ್ರಸಾದ ನಡೆಯಬೇಕೆ?' '...ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನಲ್ಲದೆ ಮತ್ತಾರನು ಕಾಣೆ. ಶಿಷ್ಯಂಗೆ ಗುರು ಉಪದೇಶವ ಮಾಡಬೇಕಲ್ಲದೆ ಗುರುವಿಂಗೆ ಶಿಷ್ಯನನುಗ್ರಹವ ಮಾಡಿದ ಠಾವುಂಟೆ?...'[೧] ಚೆನ್ನಬಸವಣ್ಣನ ಅಂಗದ ಮೇಲೆ ಇಷ್ಟಲಿಂಗವಿದೆ. ಈ ಲಿಂಗ ಚೆನ್ನಬಸವಣ್ಣನ ಅಂಗದ ಮೇಲೆ ಇದ್ದ ಬಳಿಕ ಬಸವಣ್ಣನ ದೃಷ್ಟಿಯಲ್ಲಿ ಆತ 'ಸಂಗಮನಾಥ'. ಇದು ಬಸವಣ್ಣನ ಭಕ್ತಿಭಾವದ ದಿವ್ಯಸಂಪತ್ತು. ಇಂಥ ಭಕ್ತಿಯ ಸಂಪತ್ತೇ ಬಸವಣ್ಣ. ಇದೂ ಅಲ್ಲದೆ 'ಎನ್ನ ಅಱಿವಿನ ಆದಿಗೆ ನೀನೆ ಕರ್ತನೆಂದು ನಾನಿರುತ್ತಿರಲು, ನಿನಗೆ ನಾನಿನ್ನು ಅನುಗ್ರಹವ ಮಾಡುವ ಪರಿ ಎಂತಯ್ಯಾ? ಕೂಡಲಸಂಗಮದೇವರ ಸ್ವರೂಪೆಂದು ನಿನ್ನ ಕಂಡಿಪ್ಪೆ ಕಾಣಾ ಚೆನ್ನಬಸವಣ್ಣಾ!'[೨] ನನ್ನ ಅರಿವಿಗೆ. ಷಟ್ಸ್ಥಲಜ್ಞಾನಕ್ಕೆ ಲಿಂಗಾಂಗದ ಅನುಭವಕ್ಕೆ ನೀನೇ ಮೂಲಕಾರಣ. ನೀನು ನೀಡಿದ ಜ್ಞಾನಪ್ರಸಾದ ನನ್ನಲ್ಲಿ ಒಡಮೂಡಿರುವ ಅರಿವು. ಅಂದಮೇಲೆ ನೀನು ಗುರು ನಾನು ಶಿಷ್ಯ. ಗುರುವಿಗೆ ಶಿಷ್ಯ ಅನುಗ್ರಹಮಾಡಬಲ್ಲನೆ? ಮಾಡಿದರೆ ಅದು ಅನುಗ್ರಹವಾಗಬಲ್ಲುದೆ? ಮತ್ತೆ ಹಿಂದೆ ಒಮ್ಮೆಯಾದರೂ ಗುರುವಾಗಿ ಉಪದೇಶಕೊಟ್ಟು, ಅನುಗ್ರಹಮಾಡಿ ಗೊತ್ತಿಲ್ಲ ನನಗೆ. ಆ ಶಕ್ತಿ, ಆ ಸ್ಥಾನ ನನ್ನದಲ್ಲ ಚೆನ್ನಬಸವಣ್ಣಾ. ಇಲ್ಲದ 'ಗುರು'ವನ್ನು ನನ್ನ ಮೇಲೆ ಜೋಲಿಸಿ ಏಕೆ ನನ್ನನ್ನು ಕೊಲ್ಲುವೆ ಅಣ್ಣಾ?:

ಹೋ ! ಹೋ ! ! ನಾನೊಬ್ಬರಿಗೆಯು ಉಪದೇಶವ ಮಾಡಲಮ್ಮೆನು.
ಮುನ್ನಲಾದವರು ತಮ್ಮಿಂದ ತಾವಾದರು.
ಅವರೆಲ್ಲರು ನಿಜಲಿಂಗೈಕ್ಯರು. ನಾನೇನುವ ಮಾಡಿತಿಲ್ಲ.
ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು.
ಅಮರಗಣಂಗಳು ಸಾಕ್ಷಿಯಾಗಿ ಕೂಡಲಸಂಗಮದೇವರ ಮುಂದೆ
ಭಾಷೆ-ಪ್ರಸಾದವನಿಕ್ಕಲಮ್ಮೆನಯ್ಯಾ ಚೆನ್ನಬಸವಣ್ಣಾ.[೩]

ಬಸವಣ್ಣನ ಈ ಮಾತು ಸೌಜನ್ಯವನ್ನು ಬೀರಬಹುದು, ಬಸವಣ್ಣನ ಸದ್ಭಕ್ತಿಗೆ ಸಹಜವಾದ ವಿನಯ, ವಿನಮ್ರಕ್ಕೆ ಕಳಸಗಟ್ಟಬಹುದು. ಆದರೆ ಬಸವಣ್ಣನ ಸದ್ಭಕ್ತಿ, ಸಜ್ಜನಿಕೆಯ ಬೇರು ಬಲ್ಲ ಚೆನ್ನಬಸವಣ್ಣ ಈ ಮಾತಿಗೆ ಒಡಂಬಡಬಹುದೇ? '...ನಿಮ್ಮ

೧. ಶೂ. ಸಂ. ಪು. ೭೩, ವ. ೪
೨. ಅದೇ ,, ,,
೩. ಅದೇ ಪು. ೭೨-೩, ವ. ೨.
ಬಸವಣ್ಣನವರ ಈ ಮಾತಿನಿಂದ ಅವರು ಯಾರಿಗೂ ಗುರೂಪದೇಶ ಮಾಡಲಿಲ್ಲ ಎಂದು ತೋರುತ್ತದೆ. ಇದು ಬಸವಣ್ಣನವರ ವಿನಯ. ಈ ವಿನಯ ತೋರಿಕೆಯ ವಿನಯ ಅಲ್ಲ. ಇದ್ದ ವಿನಯ. ಬಸವಣ್ಣ ಅನೇಕರಿಗೆ ದೀಕ್ಷೆ, ಅನುಗ್ರಹ ಮಾಡಿದುದು ನಿಜ. ಆದರೆ ನಾನು ಗುರು ನೀನು ಶಿಷ್ಯನೆಂಬ 'ಗುರು ಪಟ್ಟ'ದ ಮೇಲೆ ಕುಳಿತು, ಕೆಳಗಿದ್ದ ಶಿಷ್ಯನಿಗೆ ದೀಕ್ಷೆಮಾಡಿದ 'ಅಹಂ ಗುರುಭಾವಿ' ಎಂದೂ ಅಲ್ಲ ಬಸವಣ್ಣ.

ಕರುಣದಿಂದ ಅನುಗ್ರಹವ ಪಡೆವನಲ್ಲದೆ ಬಿಡುವವನಲ್ಲ; ಅನಾದಿವಿಡಿದು ನಾನು ನಿಮ್ಮ ಶಿಷ್ಯ...'[೧] ಎಂಬುವನ್ನು ನೆನೆಸಿ ತೋರಿಕೊಡುತ್ತಾನೆ ಚೆನ್ನಬಸವಣ್ಣ.—'ಅಂಜದಿರಿ, ಅಂಜದಿರಿ. ನಿಮ್ಮ ಪ್ರಮಥರ ಮುಂದೆ ನಿಮಗೆ ಅಹುದಹುದೆನಲು ನಿಮಗನಾದಿಯ ಶಿಶು ನಾನಯ್ಯಾ...' ಎಂಬ ವಚನದಿಂದ.[೨] ಈ ಸಂದರ್ಭದಲ್ಲಿ ಪ್ರಭುದೇವರು ಅನಿಮಿಷಯ್ಯನಿಂದ 'ಜ್ಞಾನಲಿಂಗೋಪದೇಶ'ವನ್ನು ಪಡೆವ ಮೊದಲು ಗುರುವನ್ನು ಕುರಿತು 'ಆದಿಯಿಂದತ್ತತ್ತಲಿನಗೆ ನೀನೆ ಗುರುವಯ್ಯಾ. ಎರಡು ನಾಮ ಹುಟ್ಟದ ಮುನ್ನ ನಿಮಗ ನಾನು ಶಿಷ್ಯನಯ್ಯಾ...'[೩]—ಎಂದು ನುಡಿದ ಮಾತನ್ನು ನಾವಿಲ್ಲಿ ನೆನೆಸಿಕೊಳ್ಳಬೇಕು. ತಾಯಿ ಅಕ್ಕನಾಗಮ್ಮನ ಗರ್ಭದಲ್ಲಿ ತಾನಿದ್ದಾಗ ಬಸವಣ್ಣ ಮಾಡಿದ ಅನುಗ್ರಹ, ಕಟ್ಟಿದ ವಿಭೂತಿಯ ಪಟ್ಟ ಅಪ್ಪಟವಿದಿಲ್ಲಿ. ಗರ್ಭಕ್ಕೆ ಮಾಡಿದ ಶಿವದೀಕ್ಷೆ ಶಿಶುವಿಗೆ ಸಾಧಿಸಿದೆ. ಮಳೆಯ ದೀಕ್ಷೆ, ಅನುಗ್ರಹ ನೆಲದ ಗರ್ಭವನ್ನು ಭೇದಿಸಿ ಬೀಜದೊಳಗೆ ಸಾಧಿಸಿದರೆ ಒಳಗಿದ್ದ ಅಂಕುರ ಸುಳುಹುದೋರಿ ಬೆಳೆವಂತೆ ಆಗಿದೆ ಚೆನ್ನಬಸವಣ್ಣನಲ್ಲಿ ಗುರೂಪದೇಶ. ಶಿವಪಿಂಡ ಮೊಳಕೆಯೊಡೆದು ಶಿವಜ್ಞಾನದಿಂದ ಶಿವ-ಜೀವಂತವಾಗಿ ಬೆಳೆದುಬಂದಿದೆ.

---

೧. ಶೂ. ಸಂ. ಪು. ೭೩, ಪ್ರ. ೩.

೨. ಅದೇ ,, ವ. ೩.

ಇದೇ ವಚನ ಕೆಲವೊಂದು ಪಾಠಾಂತರದೊಡನೆ ಬೇರೊಂದು ಸಂದರ್ಭದಲ್ಲಿ ಸಿಂಗಿರಾಜಪುರಾಣದಲ್ಲಿ ಬಂದಿದೆ ನೋಡಿ:

ಅಂಜದಿರಂಜದಿರು ಹಿಂದೊಮ್ಮೆ ಭವದ ಬಟ್ಟೆಯು ಹೋದೆನೆಂದು.
ಅಂದೊಮ್ಮೆ ಅನಿಮಿಷಂಗೆ ಲಿಂಗವಿತ್ತುದೊಂದು ಅಭವನ ಬಾಗಿಲಂ ಬಾರಿಸಿತ್ತು.
ಅಂಜನೆ ಜಲಗರ ಹೇಮರಸವ ಅಂಜಿ ಕುಡಿದೊಡೆ
ಉದರದೊಳಗಿದ್ದು ಸಿಂಗಾರ ಮಾಡನೆ ಕಪಿ?
ಸಿಂಗಾರವ ಮಾಡಿ ಜನಿಸಿದವಯ್ಯ.
ಅಳಿವುದೇ ಶಿವಪಿಂಡವು? ಮಱೆವುದೇ ಶಿವಜ್ಞಾನವು?
ಹಿಂದೆ ಏಳುನೂಱು ವರುಷ ಮಂಡೋದರಿಯ ಉದರದಲ್ಲಿರ್ದು ಜನಿಸನೆ ಇಂದ್ರಜಿತು?
ನೀ ಹೊಟ್ಟೆಗೆ ವಿಭೂತಿಯ ಪಟ್ಟವ ಕಟ್ಟಿದಂದು ಆಯ್ತೆನಗನುಗ್ರಹ.
ಅಂಜದಿರು ಅಂಜದಿರು ಕೂಡಲಚೆನ್ನಸಂಗಯ್ಯ, ನಿಮ್ಮ ತೊತ್ತಿನ ತೊತ್ತು ನಾನು.

ಸಿಂ. ಪು. ಪು. ೪೯, ಸಂ. ೪, ಚೆನ್ನಬಸವದೇವರ ಸಂಪಾದನೆಯ ವಚನ ೧.

ಇಲ್ಲಿ ಬಸವಣ್ಣ ತನ್ನ ಹಿಂದಿನ ವೃಷಭಾವತಾರದಲ್ಲಿ ವಸುದೀಪ್ಯನಿಗೆ–ಈತನೆ ಅನಿಮಿಷಯ್ಯ–ತನ್ನ ಆತ್ಮಲಿಂಗವನ್ನು ಕೊಟ್ಟು ಶಿವಲೋಕಕ್ಕೆ ಬರಲು ದ್ವಾರಪಾಲಕರಿಂದ 'ಲಿಂಗಬಾಹಿರ'ನೆಂದು ತಡೆಯಲ್ಪಟ್ಟು ಶಿವನಪ್ಪಣೆಯಿಂದ ತನ್ನ 'ಆತ್ಮಲಿಂಗ'ವನ್ನು ಮರಳಿ ಪಡೆಯಲು ಭೂಲೋಕದಲ್ಲಿ ಅವತರಿಸಿದ ಸಂದರ್ಭವನ್ನು ನೋಡಿದರೆ 'ಅಂಜದಿರು ಅಂಜದಿರು......' ಎಂಬುದು ಅರ್ಥಪೂರ್ಣವಾಗುತ್ತದೆ.

೩. ಶೂ. ಸಂ. ಪು. ೧೩-೧೪, ವ. ೩೯.

ಪ್ರಭುದೇವರು ಇದೇ ಆಗ್ರಹತೊಟ್ಟು ತಾನೆ ಗುರು ತಾನೆ ಶಿಷ್ಯನಾಗಿ ಅನಿಮಿಷಯ್ಯನಿಂದ ಅನುಗ್ರಹಪಡೆದ ಸಂದರ್ಭವನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

'ಕೆಡುವುದೆ ಗುರುವಿನುಪದೇಶ? ಪಿಂಡವ ಮಱೆವುದೆ ಶಿವಜ್ಞಾನವು?'[೧] ಮಂಜಿನ ಮಳೆ ಊಷರಭೂಮಿ ಹೋಕು ಬೀಜವಾದರೆ ಅಂಕುರದ ಮಾತಿಲ್ಲ, ಜೀವಚೈತನ್ಯದ ಸುದ್ದಿಯಿಲ್ಲ. ಆದರೆ ಬಸವಣ್ಣನ ಗುರೂಪದೇಶ, ಅಕ್ಕನಾಗಮ್ಮ ಗರ್ಭಭೂಮಿ, ಚೆನ್ನಬಸವಣ್ಣ ಶಿವಬೀಜವಾಗಿದ್ದರೆ? ಈ ಉಪದೇಶ ಕೆಡುವ ಉಪದೇಶ ಅಲ್ಲ, ಶಿವಜ್ಞಾನದಿಂದ ಪ್ರಾಣಿಸುವ ಶಿವಪಿಂಡವನ್ನು, ಗುರು-ಶಿಷ್ಯನನ್ನು ಹಡೆವ ಉಪದೇಶವೆ.

ಮತ್ತೆ ಬಸವಣ್ಣನ ಸಂಕೋಚವೆಂದರೆ–'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥ', ಮತ್ತು 'ಎನ್ನ ಅಱಿವಿನ ಆದಿಗೆ ನೀನೆ ಕರ್ತ', ಅಂತೆಯೆ ನಾನು ಶಿಷ್ಯ ನೀನೆ ಗುರು ಎಂಬ ಭಾವ. ಈ ಸಂಕೋಚಭಾವವನ್ನು ಸಲೀಲವಾಗಿ ಉಚ್ಚಿ ತೆಗೆವ ಚೆನ್ನಬಸವಣ್ಣನ ಮಾತು ಕೇಳಿ:

ಆದಿ ಲಿಂಗ, ಅನಾದಿ ಶರಣನೆಂಬುದು ತಪ್ಪದು.
ಆದಿ ಗುರು, ಅನಾದಿ ಶಿಷ್ಯನೆಂಬುದು ತಪ್ಪದು.
ಗುರುವಿಂಗೆ ಶಿಷ್ಯಂಗೆ ಏನು ದೂರ ದೇವಾ?
ಮುಳ್ಳುಗುತ್ತುವರೆ ತೆಱಹಿಲ್ಲದ ಪರಿಪೂರ್ಣ ಘನವು
ಒಬ್ಬರಲ್ಲಿ ಒಂದು ಭಾವ ಉಂಟೆ?
ಎನ್ನೊಳಗೆ ಬೆಳಗುವ ಜ್ಞಾನ
ನಿನ್ನ ಹೃದಯ ಕಮಲದೊಳಗಣ ಅವ್ಯಕ್ತಲಿಂಗ.
ನಿನ್ನೊಳು ತೊಳಗಿ ಬೆಳಗುವ ಜ್ಯೋತಿರ್ಲಿಂಗ ಎನ್ನ ಸುಜ್ಞಾನಲಿಂಗ.
ಒಂದಱಲ್ಲಿ ಒಂದು ಬಿಚ್ಚಿ ಬೇಱುಮಾಡಬಾರದಾಗಿ
ಪ್ರಾಣಲಿಂಗ ಒಂದೆ, ಉಪದೇಶ ಒಂದೆ, ಕ್ರಿಯಾಕರ್ಮ ಒಂದೆ.
ನೀವಿನ್ನಾವುದ ಬೇಱುಮಾಡಿ ನುಡಿವಿರಯ್ಯಾ?
ಕಾರ್ಯದಲ್ಲಿ ಗುರುವಾಗಿ ಅಂತರಂಗಕ್ಕೆ ಸುಜ್ಞಾನೋಪದೇಶವ
ಮುನ್ನವೆ ಮಾಡಿದ ಬಳಿಕ ಕ್ರೀಯಿಂದ ಮಾಡಲಮ್ಮೆನೆಂದರೆ ಹೋಹುದೆ?
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ
ಎನಗೆ ನೀವು ಉಪದೇಶವ ಮಾಡಿದರೆ,
ಮರ್ತ್ಯಲೋಕದ ಮಹಾಗಣಂಗಳ ಕೈಯಲ್ಲಿ
ಅಹುದಹುದೆನಿಸುವೆ ಕಾಣಾ ಸಂಗನ ಬಸವಣ್ಣಾ.[೨]

'ಎತ್ತೆತ್ತ ನೋಡಿದಡತ್ತತ್ತ' ಮಹಾಘನ ತುಂಬಿ ತಾನೆ ತಾನಾಗಿರದ ಎಡೆಯಿಲ್ಲ. 'ಮುಳ್ಳುಗುತ್ತುವರೆ ತೆಱಹಿಲ್ಲ'. ಅಂದಬಳಿಕ ಏಕೈಕವಾದ ಈ ಪರಿಪೂರ್ಣದಲ್ಲಿ ಇದು ಬಸವಣ್ಣ, ಇದು 'ಅಂಗದ ಮೇಲೆ ಲಿಂಗವುಳ್ಳ' ಕೂಡಲಸಂಗಮನಾಥ ಎಂಬ ಭಿನ್ನಭಾವಕ್ಕೆ ಎಡೆದೆರಹೆಲ್ಲಿದೆ ಬಸವಣ್ಣಾ? ಹೀಗೆ ಭಾವಿಸುವ, ಹೇಳುವ ಅಧಿಕಾರ ನಿನಗಿದ್ದಂತೆ ನನಗೆ, ಅನ್ಯರಿಗೆ ಇಲ್ಲವೇಕೆ ಅಣ್ಣಾ? ಮತ್ತೆ ಗುರು ಒಂದು ಭಾವ, ಶಿಷ್ಯ ಒಂದು ಭಾವ. ಈ

---

೧. ಶೂ. ಸಂ. ಪು. ೭೩, ವ. ೩. ೨. ಶೂ. ಸಂ. ಪು. ೭೪, ವ. ೫.

ಗುರುಶಿಷ್ಯಭಾವವನ್ನು ಭೇದಿಸಿ, ತೆಗೆದು ನೋಡಿದರೆ 'ಆದಿ ಗುರು, ಅನಾದಿ ಶಿಷ್ಯ' ಕಾಣಿಸುವುದಿಲ್ಲವೆ ಬಸವಣ್ಣಾ? 'ಗುರುವಿಂದ ಮುನ್ನವೆ ಶಿಷ್ಯನು ಗುರು'[೧] ಎಂಬ ಶಿವಾದ್ವೈತವಾಕ್ಯ ನಿನಗೆ ತಿಳಿಯದುದೆ? ಗುರು ಶಿಷ್ಯನಿಂದ ಬಿಚ್ಚಿ ಬೇರಾಗಿ ದೂರ ಕುಳಿತಿಲ್ಲ. ತನ್ನ ಗರ್ಭದಲ್ಲಿಯೆ ಗುರುನಿಧಾನವಿಲ್ಲದ ಶಿಷ್ಯನಿಲ್ಲ. ಇಲ್ಲಿ ನೋಡು ಗುರುಬಸವಣ್ಣಾ, ನನ್ನಲ್ಲಿರುವ ಜ್ಞಾನ, ಷಟ್ಸ್ಥಲಜ್ಞಾನ ನಿನ್ನಲ್ಲಿರುವ ಅವ್ಯಕ್ತಲಿಂಗ. ಈ ಲಿಂಗ ಅಭಿವ್ಯಕ್ತಿಯ ಹಾದಿಯಲ್ಲಿಯೆ ಇದೆ. ಒಂದು ವಿವೃತವಾಗಿ ವ್ಯಕ್ತವಾಗಿದೆ; ಇನ್ನೊಂದು ವಿವರವಾಗಿ ವಿಕಾಸವಾಗಲಿದೆ. ಒಂದು ಹೆಚ್ಚಲ್ಲ, ಮತ್ತೊಂದು ಕಡಮೆಯಲ್ಲ. ಮತ್ತೆ ನಿನ್ನ ಸ್ವಾನುಭಾವ ಮೂರ್ತಿಯಾದ ಜ್ಯೋತಿರ್ಲಿಂಗ ಅದೇ ನನ್ನ ಅನುಭಾವವಿನ್ನೂ ಏರಿ ಹೋಗಿ ಮುಟ್ಟದ 'ಸುಜ್ಞಾನ'ಲಿಂಗ.[೨] ಇಲ್ಲಿಯೂ ಹಿರಿದು ಕಿರಿದೆಂಬುದಿಲ್ಲ. ಎರಡೆಂಬುದಂತೂ ಮೊದಲೇ ಇಲ್ಲ. ಸ್ವಾನುಭಾವ ಜ್ಯೋತಿರ್ಲಿಂಗ-ಪ್ರಾಣಲಿಂಗ-ಸುಜ್ಞಾನ ಜ್ಞಾನ ಮತ್ತೆ ಜ್ಞಾನೋಪದೇಶ ಕ್ರಿಯೋಪದೇಶ–ಇಲ್ಲೆಲ್ಲಿಯೂ ನಾನು ನೀನಿನ ಸಂದು ಬಿರುಕು ಇಲ್ಲ. ಉಪದೇಶ ಕೊಡುವ ಗುರು ಹಡೆವ ಶಿಷ್ಯರು ನಾನು ನೀನಿನ 'ಮಾಯಾಪಂಜರ'ದಲ್ಲಿ ಕುಳಿತು ಉಪದೇಶವ್ಯವಹಾರ ನಡೆದರೆ, ಗುರು ಶಿಷ್ಯನಲ್ಲಿ ಅಂಕುರಿಸುವುದೆಂತು? ಶಿಷ್ಯ ಗುರುವಾಗಿ ಬೆಳೆವುದೆಂತು? 'ಅಪರಾವಿದ್ಯೆ'ಯಲ್ಲಿ ಬಳಸುವ ಗುರು ಶಿಷ್ಯರ ಭಿನ್ನೋಪದೇಶ 'ಪರಾವಿದ್ಯೆ'ಯಲ್ಲಿ ನಡೆಯಬಲ್ಲುದೆ?[೩] ಮತ್ತೆ ಮೊದಲೇ ವಿಭೂತಿಯ ಪಟ್ಟವನ್ನು ಕಟ್ಟಿ, ಅನುಗ್ರಹ ಮಾಡುವ ಕಾರ್ಯದಲ್ಲಿ ಗುರುವಾಗಿ 'ಅಂತರಂಗಕ್ಕೆ ಸುಜ್ಞಾನೋಪದೇಶವ'ನ್ನು ಮಾಡಿ, ಈಗ ತನಗೆ ಕ್ರಿಯೋಪದೇಶ ಮಾಡಲೊಲ್ಲೆನೆಂದರೆ ಹೇಗೆ?

ಬಸವಣ್ಣ ಇರುಕಿನಲ್ಲಿ ಸಿಕ್ಕು ನಿರುತ್ತರನಾದ. ಗುರು ಲಿಂಗ ಜಂಗಮ ಪ್ರಸಾದ ಉಪದೇಶಕ್ಕೆ 'ನೀನೆ ಕರ್ತ,' ಅಂದರೆ ಶರಣರ ಈ ಅನುಭಾವವನ್ನೆಲ್ಲ ಷಟ್ಸ್ಥಲಜ್ಞಾನಕ್ಕೆ ಅನುಗೊಳಿಸಿದ 'ಕರ್ತ' ಚೆನ್ನಬಸವಣ್ಣ. ಈ ಜ್ಞಾನವನ್ನು ವಿವರವಾಗಿ ಬೋಧಿಸಿ ತನ್ನಲ್ಲಿ ಬಿತ್ತಿ ಚೆನ್ನಬಸವಣ್ಣ, ಬಸವಣ್ಣನನ್ನು ಸುಜ್ಞಾನ ಸದ್‌ಭಕ್ತಿಯನ್ನಾಗಿ ಮಾಡಿದ 'ಕರ್ತ'. ಹೀಗೆ ತನ್ನನ್ನು ಆಗುಮಾಡಿದ ಚೆನ್ನಬಸವಣ್ಣನಿಗೆ 'ಬೇಕೆನಲಮ್ಮೆ, ಬೇಡೆನಲಮ್ಮೆನು',[೪] ಎನಗೆ ನೀನೆ ಕರ್ತನಾದ ಕಾರಣ ನೀನೆಹಗೆ ಮಾಡಿದರೆ ಆಹಗೆ ಮಹಾಪ್ರಸಾದವೆಂಬೆನಲ್ಲದೆ ಬೇಱೆ ಸ್ವತಂತ್ರವನಱಿಯೆನು'[೫] ಎಂದು ಬಸವಣ್ಣನವರು ಚೆನ್ನ

---

೧. ಶೂ. ಸಂ. ಪು. ೧೧ ಪ್ರ. ೩೦

೨. ಚೆನ್ನಬಸವಣ್ಣನ ಈ ಎಲ್ಲ ಮಾತಿನಲ್ಲಿ 'ಲಿಂಗಾನುಭಾವದಲ್ಲಿ ಬಸವಣ್ಣ, ಲಿಂಗಜ್ಞಾನದಲ್ಲಿ ಚೆನ್ನಬಸವಣ್ಣ', ಒಬ್ಬರಿಗಿಂತೊಬ್ಬರು ಮಿಗಿಲಾಗಿದ್ದರೆಂಬುದು ತಾನೆ ಹೊಳೆವಂತಿದೆ.

೩. ನಿಜಗುರು ನಿಜಶಿಷ್ಯರಲ್ಲಿ ನಡೆವ ಅಭಿನ್ನಭಾವದ ಐಕ್ಯೋಪದೇಶ '......ನೀವೆ ಮಾಡಿದರೆ ನೀವೆ ಮಾಡಿದುದು. ನಾನೆ ಮಹಾಪ್ರಸಾದವ ಸ್ವೀಕರಿಸಿದರೂ ನೀವೆ ಮಾಡಿದುದು......' ಎಂಬ ಚೆನ್ನಬಸವಣ್ಣನವರ ಮಾತಿನಲ್ಲಿ (ಶೂ. ಸಂ. ಪು. ೭೪-೭೫ ವ. ೭) ಗುರುಶಿಷ್ಯರ ಅಭಿನ್ನಭಾವ ತಾನೆ ಸ್ಪಷ್ಟವಾಗುತ್ತದೆ.

೪. ಶೂ. ಸಂ. ಪು. ೭೪, ವ. ೬. ೫. ಶೂ. ಸಂ. ಪು. ೭೪, ಪ್ರ. ೭.

ಬಸವಣ್ಣನಿಗೆ ಅನುಗ್ರಹಮಾಡಲು ಒಪ್ಪಿಕೊಳ್ಳುತ್ತಾರೆ. ಇದೋ ಮುಂದೆ ನೋಡಿ ಈ ಅನುಗ್ರಹ ನಡೆವ ವಿಲಕ್ಷಣ ವಿಧಾನವನ್ನು :

ದೇವದೇವ, ಮಹಾಪ್ರಸಾದ.
ತನ್ನ ರೂಪ ತಿಳಿದು ನೋಡಬೇಕೆಂದು ಕನ್ನಡಿಯನುಪಾವಸ್ತೆಯ ಮಾಡಲು,
ಆ ಕನ್ನಡಿ ಬೇಕು ಬೇಡೆಂಬುದೇ ಅಯ್ಯಾ?
ಪತಿಯಾಜ್ಞೆಯಿಂದ ಸತಿ ಪತಿಭಾವವ ಧರಿಸೆಂದರೆ,
ಸಂಯೋಗಕಾಲದಲ್ಲಿ ಅಲ್ಲವೆಂದೆನಬಹುದೆ?
ನೀವೆ ಮಾಡಿದರೆ ನೀವೆ ಮಾಡಿದುದು.
ನಾನೆ ಮಹಾಪ್ರಸಾದವ ಸ್ವೀಕರಿಸಿದರೂ ನೀವೆ ಮಾಡಿದುದು.
ಅಂಗೈಯ ಲಿಂಗವ ಲಕ್ಷಣವ ನೋಡೆಂದು ಕೈಯಲ್ಲಿ ಕೊಟ್ಟರೆ.
ಲಿಂಗದಲ್ಲಿ ಲಕ್ಷಣವ ನೋಡಲಾಗದೆಂದು ಚೆನ್ನಸಂಗಮನಾಥನ ಕೋ ಎಂದು ಕೊಟ್ಟರೆ,
ಮಹಾಪ್ರಸಾದವೆಂದು ಕೈಕೊಂಡೆನು.
ಗುರು ಬೆದಱಿ ಅಂಜಿದರೆ, ಮನವ ಸಂತೈಸಿ
ಏಕಾರ್ಥದ ಭೇದವ ತೋಱಿ ಬಿನ್ನಹವ ಮಾಡಿದೆನು.
ಕೂಡಲಚೆನ್ನಸಂಗಮದೇವರ ಮಹಾಮನೆಯ ಗಣಂಗಳು ಮೆಚ್ಚಲು,
ಸಂಗನ ಬಸವಣ್ಣನ ಕರುಣದ ಶಿಶುವೆಂಬುದ
ಮೂಱು ಲೋಕವೆಲ್ಲವು ಅಱಿದು ಜಯ ಜಯ ಎನುತ್ತಿದ್ದಿತ್ತು.[೧]

ಚೆನ್ನಬಸವಣ್ಣ ಇಲ್ಲಿ ತಿಳಿಸುವಂತೆ ಗುರು ಬಸವಣ್ಣ ಕನ್ನಡಿ, ಲಿಂಗದರ್ಪಣ. ಈ ಕನ್ನಡಿಯಲ್ಲಿ ತನ್ನ ಅಂದರೆ ಚೆನ್ನಸಂಗಮನಾಥನ ಮುಖವನ್ನು ನೋಡಲು ಕನ್ನಡಿಯ ಬಳಿ ಬಂದಿದ್ದಾನೆ ಶಿಷ್ಯ ಚೆನ್ನಬಸವಣ್ಣ. ಗುರು ಮೊದಲು ಬೆದರಿದ, ಚೆನ್ನಬಸವಣ್ಣನಂಥ ಶಿಷ್ಯನಿಗೆ ಗುರುವಾಗಲು. ಶಿಷ್ಯನೇ ಗುರು-ಶಿಷ್ಯರಲ್ಲಿರುವ ಏಕಾರ್ಥವನ್ನು ತೋರಿಸಿ ಕೊಟ್ಟಬಳಿಕ ಗುರು ಬೇಕು ಬೇಡ ಎನ್ನದೆ ಸುಮ್ಮನೆ ಕುಳಿತ. ಮತ್ತೆ ಸಾಮರಸ್ಯದ ಸಮಯದಲ್ಲಿ ಪತಿಯ ವಿಲಾಸೇಚ್ಛೆಯಂತೆ ಸತಿಯೆ ಪತಿಯಾಗಿ ವರ್ತಿಸಿದಂತೆ, ಬಸವಣ್ಣ ಗುರುವಾಗಲೊಪ್ಪಿದ,–ಚೆನ್ನಬಸವಣ್ಣನೆ ತನ್ನ 'ಕರ್ತ'ನಾದ ಕಾರಣ. ಮತ್ತೆ ಗುರು ಅನುಗ್ರಹ ಮಾಡಿದರು ಒಂದೇ, ಶಿಷ್ಯನೆ ಗುರುಸಾಕ್ಷಿಯಾಗಿ ಅನುಗ್ರಹಮಾಡಿಕೊಂಡರು ಒಂದೇ. ಎಂಥ ಶಿಷ್ಯ ಚೆನ್ನಬಸವಣ್ಣ ! ಈ ಶಿಷ್ಯನಲ್ಲಿ ಅನಿಮಿಷಯ್ಯನನ್ನು ಉಪಾಸ್ತಿ ಮಾಡಿದ ಅಲ್ಲಮಪ್ರಭು, ಅಜಗಣ್ಣನಲ್ಲಿ ಉಪಾಸ್ತಿಯಾಗಿದ್ದ ಮುಕ್ತಾಯಕ್ಕಗಳು ಧ್ವನಿ ಮಾಡುತ್ತಿಲ್ಲವೆ? ಮತ್ತೆ ಈ ಶಿಷ್ಯನ ವಚನದ ರೀವಿಯಲ್ಲಿ ಗುರುವೆ ಮಾತಾಡುತ್ತಿರುವುದು ಕೇಳಿಬರುತ್ತಿಲ್ಲವೆ?

ಇಂಥ ಶಿಷ್ಯ ಅಂಥ ಗುರುವಿನಿಂದ ಹಡೆದ ಅನುಗ್ರಹದ ಮಿಂಚಿನ ಚಮತ್ಕಾರ ಚೆನ್ನಬಸವಣ್ಣನ 'ಅಂಗೈಯ ಲಿಂಗವ ಲಕ್ಷಣವ ನೋಡೆಂದು ಕೈಯಲ್ಲಿ ಕೊಟ್ಟರೆ, ಲಿಂಗ

---

೧. ಶೂ. ಸಂ. ಪು. ೭೪-೭೫. ವ. ೭. ೫

ದಲ್ಲಿ ಲಕ್ಷಣವ ನೋಡಲಾಗದೆಂದು ಚೆನ್ನಸಂಗಮನಾಥನ ಕೋ ಎಂದು ಕೊಟ್ಟರೆ ಮಹಾಪ್ರಸಾದವೆಂದು ಕೈಕೊಂಡೆನು'–ಎಂಬ ಮಾತಿನಲ್ಲಿ ಕುಳಿತಿದೆ. ಚೆನ್ನಬಸವಣ್ಣ, 'ಚೆನ್ನಸಂಗಮನಾಥ' ಎಂಬ ಅಂಕಿತವುಳ್ಳ ತನ್ನ ಅಂಗೈಯಲ್ಲಿದ್ದ ಇಷ್ಟಲಿಂಗವನ್ನು, ಲಕ್ಷಣವನ್ನು ನೋಡು, ನೋಡಿ ಲಿಂಗಲಕ್ಷಣವನ್ನು ಬೋಧಿಸು ಎಂದು ಬಸವಣ್ಣನ ಕೈಗೆ ಕೊಟ್ಟರೆ, ಬಸವಗುರು 'ಲಿಂಗದಲ್ಲಿ ಲಕ್ಷಣವ ನೋಡಲಾಗದು' ಎಂದು ಅನುಗ್ರಹಿಸಿ 'ಚೆನ್ನಸಂಗಮನಾಥ' ಲಿಂಗವನ್ನು ಶಿಷ್ಯನ ಕರಸ್ಥಲಕ್ಕೆ ಕೊಟ್ಟ.[೧] ಅದೇ ಮಹಾಪ್ರಸಾದ, ಅದೇ ಪರಮಗುರುಕಾರುಣ್ಯ, ಅದೇ ದಿವ್ಯಾನುಗ್ರಹ ಎಂದು ಗುರುವಿಂದ ಬಂದ ಲಿಂಗವನ್ನು ಕೈಯಲ್ಲಿ ಕೊಂಡ ಶಿಷ್ಯ ಚೆನ್ನಬಸವಣ್ಣ. ಈ ಅನುಗ್ರಹ ವಿಚಿತ್ರವಲ್ಲವೇ?[೨] 'ಪರಿಮಿತ'ದಲ್ಲಿ ಹೊಟ್ಟೆಯ ಕೂಸಿಗೆ ಕಟ್ಟಿದ ವಿಭೂತಿಯ ಪಟ್ಟ, ಈಗ 'ಕೂಡಲ ಚೆನ್ನಸಂಗಮದೇವರ ಮಹಾಮನೆಯ ಗಣಂಗಳು' ಮೆಚ್ಚುವಂತೆ ನಡೆದ ಲಿಂಗದೀಕ್ಷೆ, ಎಲ್ಲರಿಗೆ, 'ಮೂಱುಲೋಕವೆಲ್ಲವು' ಅರಿವಂತೆ ನಡೆಯಿತು. ಚೆನ್ನಬಸವಣ್ಣ ಸಂಗನ ಬಸವಣ್ಣನ 'ಕರುಣದ ಶಿಶು'ವಾದ.

---

೧. ಚೆನ್ನಬಸವಣ್ಣನ ಇಷ್ಟಲಿಂಗವನ್ನೆ ಬಸವಣ್ಣ ತನ್ನ ಕೈಯಲ್ಲಿ ಕೊಂಡು ಅದನ್ನೆ ಆತನಿಗೆ ತಿರುಗಿ ಕೊಟ್ಟ ಸಂಗತಿ ಬಸವಣ್ಣನ '......ಹಸ್ತ ಮಸ್ತಕ ಸಂಯೋಗವಿಲ್ಲದ ಮುನ್ನವೆ ಆದಿ ಗುರು, ಅನಾದಿ ಶಿಷ್ಯನೆಂಬುದ ನೆಲೆಮಾಡಿ, ಸಂಗಮನಾಥನೆಂಬ ಲಿಂಗವನೆನ್ನ ಕೈಯಲ್ಲಿ ಕೊಟ್ಟು ಸಾಮದಿಂದ ಅನುಗ್ರಹಿಸಿಕೊಂಡನು......' (ಶೂ. ಸಂ. ಪು. ೭೮, ವ. ೨೨.) ಈ ಮಾತಿನಲ್ಲಿ ಸ್ಪಷ್ಟವಾಗಿ ತೋರುತ್ತದೆ.

೨. ವಿರೂಪಾಕ್ಷಪಂಡಿತ ಚೆನ್ನಬಸವಣ್ಣನಿಗಾದ ಈ ಪ್ರಸಂಗವನ್ನು ಶೂನ್ಯಸಂಪಾದನೆಯ ಧಾಟಿಯಲ್ಲಿಯೇ ಹೇಳುತ್ತಾನೆ:

ಹರಹರಾ ಲೋಕದೊಳಗೆಲ್ಲಿಯುಂ ಶಿಷ್ಯಂಗೆ ।
ಗುರುವಿನುಪದೇಶಮುಂಟೆಂಬುದಂ ಬಲ್ಲೆನಾಂ ।
ಗುರುವಿಂಗೆ ಶಿಷ್ಯನುಪದೇಶಮಂ ಮಾಡಿದೆಡೆಯುಂಟೆ ನೀನೆಲ್ಲರಂತೆ ॥
ನರನೆ ಪರಶಿವ ಚಿತ್ಕಲಾನಂದರೂಪ ತ ।
ತ್ತ್ವರಹಸ್ಯಮಂ ತಿಳಿಪಿ ನಮ್ಮ ರಕ್ಷಿಸ ಬಂದ ।
ಗುರು ಸಂಗಮೇಶ್ವರಂ ನೀಂ ನಿನಗೆ ದೀಕ್ಷೆಯಂ ಮಾಡಲಂಜುವೆನೆಂದನು ॥
ಎನಲಂಜಲೇತಕೆಲೆ ಬಸವಣ್ಣ ನೀಂ ಕೊಟ್ಟ ।
ಘನಲಿಂಗಮಂ ಕೊಂಡಡಂಗಿದನಿಮಿಷನಂದ ।
ಮೆನಗಿಲ್ಲ ಬಲ್ಮೆಗೈವವನಲ್ಲಮೀ ಲಿಂಗಲಕ್ಷಣಂಗಳನಾದೊಡೆ ॥
ಎನಗೆ ತಿಳಿಪೆಂದು ಸೆಜ್ಜೆಯ ಲಿಂಗಮಂ ತೆಗೆದು ।
ವಿನಯದಿಂ ಕೈಯೊಳಿಡೆ ಲಿಂಗಲಕ್ಷಣಮನೆ ।
ಳ್ಸನಿತು ಪರಿಕಿಸಲಾಗದೆನುತೆ ಮರಳೀಯಲದು ಗುರುದೀಕ್ಷೆಯೆನಗೆಂದನು ॥

ಚೆ. ಬ. ಪು. ಪು. ೫೮, ಕಾಂ. ೧, ಸಂ. ೬, ಪ. ೬-೭.

ಹಿಂದಕ್ಕೆ ವಸುದೀಪ್ಯ–ಅನಿಮಿಷ, ವೃಷಭೇಶ್ವರಾವತಾರದಲ್ಲಿ ವೃಷಭನ ಪ್ರಾಣಲಿಂಗವನ್ನು ಪಡೆದು ತಿರುಗಿ ಕೊಡದೆ ಸಮಾಧಿಯಲ್ಲಿ ಅಡಗಿದ ಕಾರಣ, ವೃಷಭೇಶ್ವರನಿಗೆ ಕೈಲಾಸದಲ್ಲಿ ಪ್ರವೇಶಕ್ಕೆ ತಡೆಯುಂಟಾದ ಸನ್ನಿವೇಶವನ್ನು ಚೆನ್ನಬಸವಣ್ಣ ಇಲ್ಲಿ ಸೂಚಿಸುತ್ತಾನೆ. ಅಂತೆಯೆ ತನ್ನ ಸೆಜ್ಜೆಯ ಇಷ್ಟಲಿಂಗವನ್ನು ಬಸವಣ್ಣನ ಕೈಗೆ ಕೊಟ್ಟು ಅದನ್ನೆ ಮರಳಿ ಪಡೆಯುತ್ತಾನೆ.

ಹೀಗೆ ನಡೆದ ದೀಕ್ಷೆಯಲ್ಲಿ ಗುರು ಬಸವ ಚೆನ್ನಬಸವಣ್ಣನಲ್ಲಿ ವೇಧಿಸಿ, 'ಕರುಣದ ಶಿಶು' ಉದಯವಾಗಿ ರೂಪುಗೊಳ್ಳುತ್ತಿದೆ ತನಗೆ ತಾನೆ. ರೂಪುಗೊಳ್ಳುವ, ರೂಪುಗೊಂಡು ಬಸವಲಿಂಗದ ನಿಲವ ನಿಲ್ಲುವ ರೀತಿಯನ್ನು ಸಿದ್ಧವೀರಣ್ಣ ಎರಡು ಮಾತಿನಲ್ಲಿ ಹೇಳುತ್ತಾನೆ. '...ಚಿಕ್ಕದಣ್ಣಾಯಕರು ತಮಗೆ ಲಿಂಗಸ್ವಾಯತ ಸಂಬಂಧ ಸಯವಾದ ಭೇದಮಂ ವಿವೇಕಮುಖದಿಂ ಪ್ರತಿಷ್ಠಿಸಿಕೊಂಡ'ರು.[೧] 'ಆ ಚೆನ್ನಬಸವರಾಜ ದೇವರು ತಮಗೆ ಉಪದೇಶಮಾಡಿದ ಮಹಾತ್ಮೆಯನು ವಿವೇಕ ಮುಖದಿಂದಱಿದು ಪರಿಣಾಮಿಸಿ ಕೃತನಿಶ್ಚಯವನ್ನೆದಿದ'ರು.[೨] ಗುರು 'ಲಿಂಗದಲ್ಲಿ ಲಕ್ಷಣವ ನೋಡಲಾಗದು' ಎಂದು ಹೇಳಿದ ಬೀಜಮಾತು, ತನ್ನ ಲಿಂಗವನ್ನು ಗುರು ತಿರುಗಿ ತನ್ನ ಅಂಗೈಗೆ ಕೊಟ್ಟ ಬೀಜ ಕ್ರಿಯೆ ಚೆನ್ನಬಸವಣ್ಣನಲ್ಲಿ ಅಂಕುರಿಸಿ ಪಲ್ಲವಿಸಿ ಹರವಾಗುತ್ತಿವೆ. ಚೆನ್ನಬಸವಣ್ಣ ತನ್ನಲ್ಲಿ ನಡೆಯುತ್ತಿರುವ ಈ ಪರಿವರ್ತನೆಯನ್ನು ವಿವೇಕಮುಖದಿಂದ ಪ್ರತಿಷ್ಠಿಸಿಕೊಂಡು ಸರ್ವಾಂಗಲಿಂಗಾನುಭಾವದ, ಸ್ವಯಂಲಿಂಗಾನುಭಾವದ ಪರಿಣಾಮದಲ್ಲಿ, ಏಕಮೇವವಾದ 'ತಾನು–ಲಿಂಗ'ದ ನಿಶ್ಚಯದಲ್ಲಿ ನಿಲ್ಲುತ್ತಾನೆ.

ಗುರುದೀಕ್ಷೆ ಗುರೂಪದೇಶ ಶಿಷ್ಯನ ಶಿವಹೃದಯದಲ್ಲಿ ಇಳಿದು ಯಾವ ಯಾವ ಅನುಭವಗಳನ್ನು ಎಬ್ಬಿಸುತ್ತಿದೆ? ಇಲ್ಲಿ ಒಳಗೆ ನೋಡೋಣವೆ? ಹಾಗಿದ್ದರೆ ಚೆನ್ನ ಬಸವಣ್ಣನ ಹೃದಯದ ಲಿಂಗಾಂತರಂಗ ಇದು. ಈ ಪವಿತ್ರದಲ್ಲಿ ಪ್ರವೇಶ ದೊರೆಯಬೇಕಿದ್ದರೆ ಹೇಗಿರಬೇಕು ನಮ್ಮ ಹೃದಯ? ಇದೋ ಕೇಳಿ, ದೀಕ್ಷೆ ಒಳಗೆ ದಿವ್ಯಾನುಭಾವದ ಧ್ವನಿಯಾಗಿ ಧ್ವನಿಸುತ್ತ ಹೊರಗೆದ್ದು ಬರುತ್ತಿದೆ ಶಬ್ದಧ್ವನಿಯಾಗಿ:

ಕೃತಯುಗ ತ್ರೇತಾಯುಗ ದ್ವಾಪಾರ ಕಲಿಯುಗವಿಲ್ಲದಲ್ಲಿಂದತ್ತತ್ತ ನೋಡಾ !
ಧರೆಯೂ ಬ್ರಹ್ಮಾಂಡವೂ ಮೂರ್ಧುತಿಗೊಳ್ಳದಲ್ಲಿಂದತ್ತತ್ತಲಾದ
ಮಹಾಪ್ರಸಾದವ ಸಾಧಿಸಿ ತಂದು ಎನ್ನ ಕೈಯಲ್ಲಿ ಕೊಟ್ಟನಯ್ಯಾ ನಿಕ್ಷೇಪವಾಗಿ,–
ಕೂಡಲಚೆನ್ನಸಂಗನಲ್ಲಿ ಬಸವಣ್ಣನೆಂಬ ಗುರುಲಿಂಗವು.[೩]

ಏನೆಲ್ಲ ಇರಲಿ, 'ಅಲ್ಲಿಂದತ್ತತ್ತಲಾದ ಮಹಾಪ್ರಸಾದವ ಸಾಧಿಸಿ ತಂದು', ಆ ಮಹಾಪ್ರಸಾದವ, ಆ ಮಹಾಲಿಂಗವ, ಆ 'ಮಹ'ವ ಮರ್ತ್ಯಕ್ಕೆ ತಂದು, ಇಷ್ಟಲಿಂಗದಲ್ಲಿ ಆ ದಿವ್ಯದ ಮಹವನ್ನು ನಿಕ್ಷೇಪವಾಗಿರಿಸಿ ಶಿಷ್ಯನ ಅಂಗೈಯಲ್ಲಿ ಪ್ರತಿಷ್ಠಾಪಿಸಿದ ಗುರು ಬಸವಲಿಂಗ. ಬಸವಣ್ಣನ ಈ ಕಾರ್ಯದ ಸಾಧನೆ ಎಂಥದೆಂಬುದನ್ನು ಗುರುವಿನ ಸ್ತೋತ್ರಮುಖವಾಗಿ ಹೇಳುತ್ತಾರೆ ಕೇಳಿ ಚೆನ್ನಬಸವಣ್ಣ:

ಒಮ್ಮೆಯು ಶ್ರೀ ಗುರುವಿನ ಶ್ರೀಚರಣವ ನೆನೆಯಲೊಡನೆ
ಭವಬಂಧನ ಬಿಡುವುದು.
ಗುರುವೆ ಶರಣು, ಗುರುಲಿಂಗವೆ ಶರಣು.

೧. ಶೂ. ಸಂ. ಪು. ೭೫; ಪ್ರ. ೯. ೨. ಶೂ. ಸಂ. ಪು. ೭೬, ಪ್ರ. ೧೨.
೩. ಅದೇ ಪು. ೭೫, ವ. ೮.

ಹರಿಬ್ರಹ್ಮಾದಿಗಳಿಗೆ ಅಗೋಚರವಾದ ಕೂಡಲಚೆನ್ನಸಂಗನೆಂಬ
ಲಿಂಗವ ತೋಱಿದ ಬಸವಣ್ಣಗುರುವೆ ಶರಣು.[೧]

ಹರಿ ಬ್ರಹ್ಮಾದಿಗಳಿಗೆ ಅಗೋಚರ, ವಾಙ್ಮನಕ್ಕೆ ಅಗಮ್ಯ, ನಾದ ಬಿಂದು ಕಲೆಗಳಿಗೆ ಅತೀತ, ಇನ್ನೂ ಅತ್ತತ್ತ ಇರುವ, ತಾನಲ್ಲದನ್ಯವೇನೂ ಎಲ್ಲಿಯೂ ಎಂದೂ ಇಲ್ಲದೆ ಇರುವ 'ಮಹಾಪ್ರಸಾದ'ವನ್ನು ಸಾಧಿಸಿ ಮರ್ತ್ಯಲೋಕದವರ ಅಂಗೈಗೆ ಕೊಟ್ಟ ಬಸವಣ್ಣ. 'ಮಹ'ವನ್ನು ಮರ್ತ್ಯಕ್ಕೆ ಇಳಿಸಿ ಮರ್ತ್ಯವನ್ನು ಅಮರ್ತ್ಯ ದಿವ್ಯಕ್ಕೇರಿಸಲು ಹವಣಿಸಿದ ಗುರು ಬಸವಲಿಂಗ; ಅಲ್ಲಿಗೆ ಏರಿದರು ಚೆನ್ನಬಸವಣ್ಣನಂಥ 'ಕರುಣದ ಶಿಶು'ಗಳು.

ಗುರುಲಿಂಗದ ಅನುಗ್ರಹವಾದ 'ಲಿಂಗಶಿಶು'ಗಳಲ್ಲಿ ಆಗುವ 'ಒಂದು ಅದ್ಭುತ ಪರಿವರ್ತನೆಯೆಂದರೆ ಮಾನವನ ಸರ್ವಾಂಗದಲ್ಲಿ ಮನೆಮಾಡಿಕೊಂಡಿರುವ ಭವಿಯಳಿದು, ಭವದ ಭಕ್ತನಳಿದು ಲಿಂಗಭಕ್ತನಾಗುವುದು; ಸಂಸಾರದ ಕೂಸು ಲಿಂಗದ ಶಿಶುವಾಗುವುದು. ಸದ್ಗುರುಕಾರುಣ್ಯದಿಂದ ಭವಿಯಳಿದು ಭಕ್ತನಾಗುವ ರೀತಿಯನ್ನು ಚೆನ್ನಬಸವಣ್ಣನವರು ಹೀಗೆ ಹೇಳುತ್ತಾರೆ: ಭಾವದಲ್ಲಿ ಗಮನ ಅಂದರೆ ಜೀವ ಭಾವದಲ್ಲಿಂದ ವಿಷಯ ಪ್ರಪಂಚದತ್ತ ಗಮಿಸುತ್ತಿರುವುದು, ಹರಿಯುತ್ತಿರುವುದು ಭಾವಕ್ಕೆ ಲೆಪ್ಪವಾಗಿರುವ ಭವಿ. ಗಾಳಿಯಿಂದ ನಡೆವ ತನ್ನ ಪ್ರಾಣಯಂತ್ರವೆ ತನ್ನ 'ಪಂಚ ಪ್ರಾಣ'ವೆಂದು ಪ್ರಾಣಕ್ಕೆ ಅಂಟಿಕೊಂಡಿರುವ ಜೀವಲೋಭ ಪ್ರಾಣದ ಭವಿ. ಮತ್ತೆ ಜಿಹ್ವೆಯಲ್ಲಿ ವಿಷಯ ರುಚಿ, ಕಿವಿಯಲ್ಲಿ ಕುಶಬ್ದ, ನಾಸಿಕದಲ್ಲಿ ವಿಷಯ ಗಂಧ, ನೋಟದಲ್ಲಿ ವಿಷಯ ಸುಖದ ಬಯಕೆ; ನುಡಿಯಲ್ಲಿ ವಿರಸ, ಸದ್‌ವಿರೋಧ ಇವೆಲ್ಲ ಅಲ್ಲಲ್ಲಿ ನಾಟಿ ನೆಲೆಯೂರಿಕೊಂಡಿರುವ ಭವಿ ನಿವಾಸಿಗಳೇ. ಈ ಆದಿನಿವಾಸಿಗಳನ್ನು ಅಥವಾ ಭವಿಯನ್ನು ಹೇಗೆ ಮನೆಬಿಡಿಸಿದ ಗುರುರಾಯ ಬಸವಣ್ಣ? ಶಿಷ್ಯನಿಗೆ ವಿಭೂತಿಯ ಪಟ್ಟವನ್ನು ಕಟ್ಟಿ ಭವಿಯನ್ನು ಕಳೆದ. ಅದು ಹೇಗೆ? ಇದೋ ವಿಭೂತಿಯೆಂದರೆ ನಮ್ಮ ನಿಮ್ಮ ಮನೆಯ ಭಸ್ಮದ ಗಟ್ಟಿ ಅಲ್ಲ. 'ಆಕಾರವಿಲ್ಲದಂದಿನ ನಿರಾಕಾರವಿಲ್ಲದಂದಿನ ಕಾಮನ ಸುಟ್ಟ ಭಸ್ಮವಿಲ್ಲದಂದಿನ...... ಆದಿಯಾಧಾರವಿಲ್ಲದಂದಿನ ಚಿದ್ವಿಭೂತಿಯನೆ ತಂದು ಪಟ್ಟವ ಕಟ್ಟಿದರೆ...' ಶಿಷ್ಯನಲ್ಲಿ ತೋರಿದ ಬದಲಾವಣೆಯೇನು? 'ಚಿದ್ವಿಭೂತಿ'ಯೆಂದರೆ ಮಹಾಘನ ಜ್ಯೋತಿರ್ಲಿಂಗದ ಮೈವೆಳಗು, ಅರಿವಿನ ಬೆಳಗು, ಅರಿವಿನ ಶಿವೈಶ್ವರ್ಯ; ಅದೇ ಅರಿವು-ಬೆಳಗು ಚಿಜ್ಜ್ಯೋತಿ. ಈ ಚಿದ್ವಿಭೂತಿಯ ಪಟ್ಟ ಕಟ್ಟಿದರೆ 'ಭಾವಕ್ಕೆ ಗುರುವಾಯಿತ್ತು; ಪ್ರಾಣಕ್ಕೆ ಲಿಂಗವಾಯಿತ್ತು; ಜಿಹ್ವೆಗೆ ಪ್ರಸಾದವಾಯಿತ್ತು; ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು; ನಾಸಿಕಕ್ಕೆ ಸುಗಂಧವಾಯಿತ್ತು; ನೋಟಕ್ಕೆ ಜಂಗಮವಾಯಿತ್ತು; ಶಬ್ದಕ್ಕೆ ಸಂಭಾಷಣೆಯಾಯಿತ್ತು; ಇಂತು ಪೂರ್ವಗುಣಂಗಳೆಲ್ಲವ ಕಳೆದು ಪುನರ್ಜಾತನಾದ ಕಾರಣ ಕೂಡಲಚೆನ್ನಸಂಗನಲ್ಲಿ ಸರ್ವಾಂಗಲಿಂಗಿಯಾದೆನು.'[೨]

ಮಾನವನಲ್ಲಿ ಮಾನವಜಾತಿಯಳಿದು ಶಿವಜಾತಿ ಅಳವಡುವ ರೀತಿ ಗುರುದೀಕ್ಷೆಯ ಒಳಮರ್ಮವೆಂಬಂತೆ ತೋರುತ್ತದೆ. ಈ ಶಿವಮಾನವನ ಸರ್ವಾಂಗ ಲಿಂಗಕ್ಕೆ ಸಂಗ

---

೧. ಶೂ. ಸಂ. ಪು. ೭೭ ವ. ೧೮. ೨. ಶೂ. ಸಂ. ಪು. ೭೫, ವ. ೯.

ವಾಗಿ, ಈ ಸಂಗ ನಿಮಿಷ ನಿಮಿಷಾರ್ಧ ಅಗಲದೆ ಸದಾ 'ಸರ್ವಾಂಗಲಿಂಗಿ'ಯಾಗಿರುವುದೆ ದೀಕ್ಷೆಕೊಡುವಲ್ಲಿ ಸದ್ಗುರುವಿನ ಸರ್ವ ಶಿವೋದ್ದೇಶವೆಂಬಂತೆ ತೋರುತ್ತದೆ. ಮತ್ತೆ ಈ ಗುರುಪುತ್ರ ಅಥವಾ ಶಿವಪುತ್ರ 'ಕೂಡಲಚೆನ್ನಸಂಗನಲ್ಲಿ'ದ್ದು ಸರ್ವಾಂಗಲಿಂಗಿಯಾಗಿದ್ದಾನೆ. ಈ ಹೇಳಿಕೆಯನ್ನು ಬಿಚ್ಚಿ ನೋಡಿ ಅದರ ಸತ್ಯವನ್ನು ಮನಗಾಣಲು ಇದೋ ಇಲ್ಲಿ ಕೀಲಿಯ ಕೈ ಇದೆ:

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚಭೂತಂಗಳಲ್ಲಿ
ಪಂಚಲಿಂಗ ಪ್ರತಿಷ್ಠೆಯ ಮಾಡಿದನಯ್ಯಾ !
ಮನ ಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣಚತುಷ್ಟಯಂಗಳಲ್ಲಿ
ಚತುರ್ಮುಖಲಿಂಗವ ಪ್ರತಿಷ್ಠೆಯ ಮಾಡಿದನಯ್ಯಾ !
ಶ್ರೋತ್ರ ನೇತ್ರ ಘ್ರಾಣ ತ್ವಕ್ಕು ಜಿಹ್ವೆ ವಾಕ್ಕು ಪಾಣಿ ಪಾದ ಪಾಯು ಗುಹ್ಯಂಗಳೆಂಬ
ದಶೇಂದ್ರಿಯಂಗಳಲ್ಲಿ ದಶಮುಖಲಿಂಗ ಪ್ರತಿಷ್ಠೆಯ ಮಾಡಿದನಯ್ಯಾ !
ಅಂತರಂಗ ಬಹಿರಂಗವ ಹತವ ಮಾಡಿದನಯ್ಯಾ,–
ಕೂಡಲಚೆನ್ನಸಂಗಮದೇವಾ, ಎನ್ನ ಶ್ರೀಗುರು ಬಸವಣ್ಣನು.[೧]

ವೇಧೆ ಮಂತ್ರ ಕ್ರಿಯೆಯೆಂಬ ತ್ರಿವಿಧ ದೀಕ್ಷೆಯಿಂದ ಕಾರಣಶರೀರವೆನಿಸುವ ಯೋಗಾಂಗದ ಭಾವಕರಸ್ಥಲದಲ್ಲಿ ಭಾವಲಿಂಗವನ್ನು ಪ್ರತಿಷ್ಠಿಸಿದ್ದಾನೆ ಶ್ರೀಗುರು; ಸೂಕ್ಷ್ಮಭೋಗಾಂಗದ ಪ್ರಾಣಸ್ಥಲದ ಮೇಲೆ ಪ್ರಾಣಲಿಂಗವನ್ನು ಕಟ್ಟಿದ್ದಾನೆ ಗುರುಸ್ವಾಮಿ; ಸ್ಥೂಲಶರೀರವೆನಿಸುವ ತ್ಯಾಗಾಂಗದ ಕೈಯಲ್ಲಿ ಇಷ್ಟಲಿಂಗವನ್ನು ನೆಲೆಗೊಳಿಸಿ ಕೊಟ್ಟಿದ್ದಾನೆ ಶ್ರೀಗುರುಲಿಂಗ.[೨] ಈ ದೀಕ್ಷೆ ಹೆಸರಿಗೆ ಮೂರು ವಿಧ, ಒಳಗೆ ನೋಡಿದರೆ ಸರ್ವವಿಧ. ದೀಕ್ಷಿತ

೧. ಶೂ. ಸಂ. ಪು. ೭೫-೭೬ ವ. ೧೦.

೨. ಈ ವಿಚಾರವನ್ನು ಬೇರೊಂದು ಕಡೆ ಚೆನ್ನಬಸವಣ್ಣನವರು ವಿವರಿಸಿ ಹೇಳುತ್ತಾರೆ, ಕೇಳಿ ನೋಡಿ: ಭವಬಂಧನದ ಕುಣಿಕೆಯ ಕಳೆಯಲರಿಯದ ಮಲಿನಜೀವಿಗಳ ಮಲಿನವ ತೊಳೆವ ಶ್ರೀ ಗುರುವಿನುಪದೇಶದ ಪರಿಯೆಂತೆಂದಡೆ: ಸ್ಥೂಲ ಪಂಚಭೂತಕಾಯದ ಪಂಚ ಪಂಚ ತತ್ವಂಗಳ ವಿವರಿಸಿ, ಬೋಧಿಸಿ ಕಳೆದು, ಸೂಕ್ಷ್ಮ ಪಂಚಭೂತಕಾಯದ ತನು(ನ್)ಮಾತ್ರ ಗುಣಂಗಳ ವಿವರದ ಭೇದವ ಭೇದಿಸಿ ತೋರಿ ಕಳೆದು, ಕಾರಣ ಪಂಚಭೂತಕಾಯದ ಕರಣವೃತ್ತಿಗಳ ಮಹಾವಿಚಾರದಿಂ ತಿಳುಹಿ ವಿವರಿಸಿ ಕಳೆದು, ಸ್ಥೂಲ ಪಂಚಭೂತಕಾಯದಲ್ಲಿ ಇಷ್ಟಲಿಂಗ ಪ್ರತಿಷ್ಠೆಯ ಮಾಡಿ, ಸದಾಚಾರಕುಳಸ್ಥಳವ ನೆಲೆಗೊಳಿಸಿ, ಸೂಕ್ಷ್ಮಪಂಚಭೂತಕಾಯದಲ್ಲಿ ಪ್ರಾಣಲಿಂಗಪ್ರತಿಷ್ಠೆಯ ಮಾಡಿ, ಮಹಾವಿಚಾರದನುಭಾವವ ನೆಲೆಗೊಳಿಸಿ, ಕಾರಣ ಪಂಚಭೂತಕಾಯದಲ್ಲಿ ತೃಪ್ತಿಲಿಂಗಪ್ರತಿಷ್ಠೆಯ ಮಾಡಿ, ಪರಮಾನಂದ ಸುಜ್ಞಾನವ ನೆಲೆಗೊಳಿಸಿ–ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯಂಗಳನೇಕೀಭವಿಸಿ ತೋರಿ, ಪೂರ್ವಜನ್ಮವ ನಿವೃತ್ತಿಯ ಮಾಡಿ, ಲಿಂಗಜನ್ಮವ ಪ್ರತಿಷ್ಠೆಯಂ ಮಾಡಿ, ಎನ್ನ ಕೃತಾರ್ಥನ ಮಾಡಿದ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯಾ ಕೂಡಲಚೆನ್ನಸಂಗಮದೇವಾ.

ಆಚಾರಲಿಂಗಸ್ಥಲ, (ದೀಕ್ಷಾಗುರುಸ್ಥಲ) ಪು. ೩೭೩-೪, ವ. ೫. (ತಾಡೋಲೆಯ ಪ್ರತಿ)

ಬಸವಣ್ಣನವರಿಂದ ಚೆನ್ನಬಸವಣ್ಣನವರು ದೀಕ್ಷೆಹೊಂದಿದ ಸಂದರ್ಭದಲ್ಲಿ ಹಾಡಿದ ಇಂಥ ವಚನಗಳು ಇನ್ನೂ ದೊರೆಯುತ್ತವೆ.

ನಾದ ಚೆನ್ನಬಸವಣ್ಣ ಇದೇ ಮಾತನ್ನು ಹೇಳುತ್ತಿಲ್ಲವೇ? ಶ್ರೀಗುರುವಿನ ದೀಕ್ಷೆಯ ಅನುಗ್ರಹ ಶ್ರೀಶಿಷ್ಯನ ಸರ್ವಾಂಗಕ್ಕೆ ಇಳಿದಿದೆ. ಶಿಷ್ಯನ ಮನದಲ್ಲಿ ಲಿಂಗಪ್ರತಿಷ್ಠೆ, ಬುದ್ಧಿಗೆ ಲಿಂಗಧಾರಣ, ಚಿತ್ತಕ್ಕೆ ಲಿಂಗಸಂಗ, ಅಹಂಕಾರಕ್ಕೆ ಲಿಂಗಯೋಗ; ಶಿಷ್ಯನ ಕಣ್ಣಿಗೆ ಲಿಂಗ, ಕಿವಿಗೆ ಲಿಂಗ, ಮೂಗು ನಾಲಗೆಯ ಅಂಗೈಯಲ್ಲಿ ಲಿಂಗ, ತ್ವಕ್ಕಿನ ಕೊರಳಲ್ಲಿ ಲಿಂಗ. ಇಲ್ಲಿಗೆ ದೀಕ್ಷೆಯ ಅಧ್ಯಾಯ ಮುಗಿದರೆ ಅದು ಅರ್ಧಮರ್ಧ ದೀಕ್ಷೆ, ಖಂಡಿತ ದೀಕ್ಷೆ, ಸರ್ವಾಂಗದಲ್ಲಿ ಲಿಂಗ ಸನ್ನಿಹಿತವಾಗದ ಅಪರಿಪೂರ್ಣದೀಕ್ಷೆ. ಏಕೆಂದು ನಮ್ಮ ನಿಮ್ಮ ಪ್ರಶ್ನೆಯೇ? ನಮ್ಮ ನಿಮ್ಮ ಪ್ರಶ್ನೆಗೆ ಪೂರ್ಣ ಉತ್ತರವೇ ಚೆನ್ನಬಸವಣ್ಣ. 'ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚಭೂತಂಗಳಲ್ಲಿ ಪಂಚಲಿಂಗ ಪ್ರತಿಷ್ಠೆಯ ಮಾಡಿದನಯ್ಯಾ' ಮತ್ತು 'ಅಂತರಂಗ ಬಹಿರಂಗವ ಹತವ ಮಾಡಿದನಯ್ಯಾ,' ಎಂದು ನುಡಿವ ಚೆನ್ನಬಸವಣ್ಣನ ಸರ್ವಾಂಗವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ ಆತನ ಸರ್ವಾಂಗದಲ್ಲಿ, ಸ್ಥೂಲ ಸೂಕ್ಷ್ಮ ಕಾರಣ ಶರೀರವೆನಿಸುವ ತ್ಯಾಗ ಅಂಗ, ಭೋಗಿಸುವ ಅಂಗ, ಶಿವಕ್ಕೆ ಯೋಗಿಸುವ ಯೋಗಾಂಗ, ಮನವೇ ಮೊದಲಾದ ನಾಲ್ಕು ಅಂತಃಕರಣ, ಕಣ್ಣು ಮುಂತಾದ ಐದು ಜ್ಞಾನೇಂದ್ರಿಯ, ಕೈಕಾಲು ಮೊದಲಾದ ಕರ್ಮೇಂದ್ರಿಯಗಳು ಒಳಗೊಂಡಿವೆಯಲ್ಲದೆ, ಪೃಥ್ವಿ ಮೊದಲು ಆಕಾಶ ಕಡೆಯಾದ ಪಂಚ ಮಹಾಭೂತಗಳೂ ಗುರು-ಶಿಷ್ಯನ ಸರ್ವಾಂಗದಲ್ಲಿ ಅಂತರ್ಹಿತವಾಗಿವೆ. ಹಾಗಲ್ಲದಿದ್ದರೆ ಪಂಚಲಿಂಗ ಪ್ರತಿಷ್ಠೆಗೆ ಕಾರಣವೇನಿತ್ತು? ನೆಲದ ಕೊರಳಿಗೆ ಲಿಂಗ ಏಕೆ ಕಟ್ಟಬೇಕು? ಗಾಳಿ ನೀರಿನ ಕೈಯಲ್ಲಿ ಲಿಂಗವನ್ನು ಏಕೆ ಸಂಗಿಸಬೇಕು? ಬಯಲು ಬೆಂಕಿಯ ಎದೆಯ ಮೇಲೆ ಲಿಂಗವನ್ನು ನೆಲೆ ಯಾಗಿ ಊರಿಸಲು ಆವಶ್ಯಕತೆ ಏನಿತ್ತು? ಶ್ರೀಗುರುಶಿಷ್ಯನ, ನಿಜಶಿಷ್ಯನ, 'ಕೂಡಲ ಚೆನ್ನಸಂಗಮನಾಥ'ಲಿಂಗದ ಕೂಸಿನ ಅಂಗ 'ಖಂಡಿತ'ವಾದ ಅಂಗವಲ್ಲ. 'ಲೀಯತೇ ಗಮ್ಯತೇ ಯತ್ರ ಜಗದೇತತ್ ಚರಾಚರಂ,' 'ಯಸ್ಮಾದ್ ವಿಶ್ವಮುದೇತಿ ಯತ್ರ ರಮತೇ ಯಸ್ಮಿನ್ ಪುನರ್ಲೀಯತೇ,' 'ಜನ್ಮಾದಿ ಅಸ್ಯ ಯತಃ'—ಎಂದು ಲಕ್ಷಿಸಿಕೊಳ್ಳುವ ಲಿಂಗ ಬ್ರಹ್ಮದ ಕೂಸು ಲಿಂಗಬ್ರಹ್ಮವನ್ನು ಹೋಲಬೇಡವೆ? ಲಿಂಗಬ್ರಹ್ಮದಂತಿರಬೇಡವೆ? ಈ ಕೂಸು, ಶರೀರ ಪ್ರಾಣ ಭಾವ ಮನ ಬುದ್ಧಿ ಕಣ್ಣು ಕಿವಿ ಕಾಲು ಕೈಗೆ ಮುಕ್ತಾಯ ವಾಗುವುದಿಲ್ಲ. ಮುಕ್ತಾಯವಾದರೆ ಅದು ಮಾನವಕುಲದ ಕೂಸು. ಲಿಂಗದ ಕೂಸಿನ ಅಂಗ ನೆಲ ನೀರು ಗಾಳಿ ಬೆಂಕಿ ಬಯಲೂ ಹೌದು. ಇದೇ ಆತನ ಸರ್ವಾಂಗ. ಈ ಸರ್ವಾಂಗದಲ್ಲಿ ಲಿಂಗಪ್ರತಿಷ್ಠೆಯಾಗಿ ಸರ್ವಾಂಗ ಲಿಂಗಧಾರಿಯಾಗಿದ್ದರೆ ಆಗ ಅಂತರಂಗ ಬಹಿರಂಗ ಎಂಬ ಎರಡು ಅಂಗ ಎಲ್ಲಿ ಉಳಿಯಿತು? ಒಳಗೆ ಹೊರಗೆಂಬುದು ಹತ ವಾಗಿದೆ. ಹೊರಗೊಳಗನ್ನು ಕೊಂದು. ಹೊರಗೊಳಗಿಲ್ಲದ ಪರಿಪೂರ್ಣ ಸರ್ವಾಂಗದಲ್ಲಿ ಲಿಂಗಪ್ರತಿಷ್ಠೆಮಾಡಿ, ಈ ಸರ್ವಾಂಗವನ್ನು ಲಿಂಗಕ್ಕೆ ಬಂಧಿಸಿ ಯೋಗಿಸಿ ಸಂಗಿಸಿ ಕೊಟ್ಟ ಶ್ರೀಗುರುಕೃಪೆಯಿಂದ 'ಕೂಡಲಚೆನ್ನಸಂಗನಲ್ಲಿ ಸರ್ವಾಂಗಲಿಂಗಿ'ಯಾದ ಚೆನ್ನಬಸವಣ್ಣ. ಇಂಥ ಲಿಂಗಬಂಧ. ಇಂಥ ಸರ್ವಾಂಗಲಿಂಗಧಾರಣವಾದರೆ ವಿಶ್ವಶಿವಬಾಂಧವ್ಯ ತಾನೆ ನೆಲೆಗೊಂಡಂತಲ್ಲವೆ? ಇದೇ ದೀಕ್ಷೆಯ ಸಕಲವಿಸ್ತಾರವಲ್ಲವೆ? ವಿಶ್ವಾಂಗದಲ್ಲಿ ತೋರುವ ಸರ್ವಾಂಗಲಿಂಗ ದೃಶ್ಯವಲ್ಲವೆ?

ಗುರೂಪದೇಶದಿಂದ ತನ್ನಲ್ಲಿ ಪೂರ್ವಗುಣವಳಿದು, ಪೂರ್ವಾಶ್ರಯವಳಿದು, ಪೂರ್ವಜನ್ಮವಳಿದು, ತನ್ನಲ್ಲಿ ಭವಿಯಳಿದು, ಲಿಂಗಜನ್ಮವಾಗಿ ಲಿಂಗಭಕ್ತನಾದರೆ, 'ಕರ್ಮಂಗಳು ಬೆಚ್ಚಿ ಬೆದಱಿದವು,'[೧] 'ಹುಸಿಯಾಮಿಷ ತಾಮಸ ಕುಟಿಲಂಗಳು ತಮಗೆ ನಿಂದಿರೆ ಠಾವಿಲ್ಲೆನುತ್ತಿರ್ದವು,'[೨] 'ಸದ್ಗುರುಕಾರುಣ್ಯ ಹಸ್ತ ಮಸ್ತಕ ಸಂಯೋಗದಲ್ಲಿ ಪೂರ್ವಗುಣವಳಿದು ಪುನರ್ಜಾತನಾಗಿ, ಕರಣಾದಿ ಗುಣಂಗಳ ಕಳೆದು ಶಿವಲಿಂಗದಲ್ಲಿ ಉಳಿದು, ಅನುಪಮಸುಖಸಾರಾಯ ಶರಣನೆನಿಸಿದರೆ, ಇದನಱಿದು ಲಿಂಗದಲ್ಲಿ ತದುಗತನಾಗಿದ್ದೆನು.'[೨] ಪರುಷದ ಕೈಯಲ್ಲಿ ಸಿಕ್ಕ ಲೋಹದ 'ಅವಗುಣ', ಅವಲೋಹ ಕೆಟ್ಟು ಬಂಗಾರವಾದಂತೆ–ಬಂಗಾರವಾದಂತೆ ಎಂದು ಹೇಳುವುದಕ್ಕಿಂತ ಪರುಷವೆ ಆದಂತೆ– ಶ್ರೀಗುರುವಿನ ಕೈಯಲ್ಲಿ ತನ್ನನ್ನು ಕೊಟ್ಟ ಶಿಷ್ಯ, ತನ್ನ ಗುರು ಬಸವಲಿಂಗನ ಪರುಷಹಸ್ತ ಸೋಂಕಿ ತನಗಾದ ಲಿಂಗಗತಿಯನ್ನು ಹೇಳುತ್ತಾನೆ ಕೇಳಿ:

> ಮಾಂಸಪಿಂಡವೆಂದೆನಿಸದೆ ಮಂತ್ರಪಿಂಡವೆಂದೆನಿಸಿದನು ಬಸವಣ್ಣನು.
> ವಾಯುಪ್ರಾಣಿಯೆಂದೆನಿಸದೆ ಲಿಂಗಪ್ರಾಣಿಯೆಂದೆನಿಸಿದನು ಬಸವಣ್ಣನು.
> ಜಗಭರಿತನೆಂಬ ಶಬ್ದಕ್ಕೆ ಅಂಗವಿಸದೆ ಶರಣಭರಿತ ಲಿಂಗವೆಂದೆನಿಸಿದ,–
> ಕೂಡಲಚೆನ್ನಸಂಗನಲ್ಲಿ ಎನ್ನ ಪರಮಗುರು ಬಸವಣ್ಣನು.[೩]

ಗುರುಲಿಂಗದ ಅನುಗ್ರಹದಲ್ಲಿ ಹುಟ್ಟಿದ ಶಿಷ್ಯಲಿಂಗದ ಮಾಂಸಪಿಂಡ, ಭವಿಪಿಂಡ ಮಂತ್ರಮಯವಾಗಿ ಲಿಂಗಪಿಂಡವಾಗಿದೆ; ವಾಯುಪ್ರಾಣ, ಭವ ಮರಣದ ದವಡೆಯಲ್ಲಿ ಸಿಕ್ಕು ಗಾಳಿಯ ಹಂಗಿನಲ್ಲಿ ಉಸಿರಾಡಿಸುವ ಪ್ರಾಣ, ಗಾಳಿಯ ಹಂಗಿಲ್ಲದೆ ಲಿಂಗದಿಂದ ಪ್ರಾಣಿಸುವ ಲಿಂಗಪ್ರಾಣವಾಗಿದೆ. ಮತ್ತೆ ಜಗದಲ್ಲಿ ಭರಿತವಾಗಿ ಲಿಂಗ ಇದ್ದರೇನು? ಇಲ್ಲದಿದ್ದರೇನು? ಜಗಕ್ಕೆ ಗೊತ್ತಾಗದಂತೆ ಜಗದಲ್ಲಿ ತುಂಬಿರುವ ಲಿಂಗ ಇದ್ದೂ ಇಲ್ಲದಂತೆ, 'ಐದಾನೆ ಇಲ್ಲದಂತೆ'. ನೆಲದ ಮರೆಯಲ್ಲಿ ಹಿರಿಯರು ಹೂಳಿಟ್ಟ ನಿಧಿ ನಿಧಾನ ಏನಿದ್ದರೇನು, ದೈವದರಿದ್ರನ ಮನೆಯಲ್ಲಿ? ಶ್ರೀಗುರುವಿನಿಂದ ಅನುಗ್ರಹಪಡೆದ ಶಿಷ್ಯನ ಮಾತು ಹಾಗಲ್ಲ. ಶಿಷ್ಯನ ಮರೆಯಲ್ಲಿದ್ದ ಲಿಂಗನಿಧಾನವನ್ನು, ಆತನ 'ಸರ್ವಾಂಗ'ವನ್ನು ಹರಡಿ, ತುಂಬಿ ತುಳುಕುತ್ತಿರುವ, 'ಅತೀತ'ವಾಗಿರುವ ಪರಿಪೂರ್ಣ ಪರಬ್ರಹ್ಮನಿಧಾನವನ್ನು ತೆಗೆದು, ತಂದು; ಕರಸ್ಥಲಕ್ಕೆ ಅನುಗ್ರಹಿಸಿಕೊಟ್ಟರೆ ಶಿಷ್ಯ 'ಸರ್ವತಃ ಸಂಪ್ಲುತ' ಲಿಂಗವಾಗಿದ್ದಾನೆ. ಹೀಗೆ ಲಿಂಗಭರಿತವಾದ ಶರಣನಾಗಿದ್ದಾನೆ ಶಿಷ್ಯಲಿಂಗ ಅಥವಾ ಶ್ರೀಶಿಷ್ಯ. ಲಿಂಗಭರಿತವಾಗಿದ್ದರೂ ಜಗವಾಗಿ ಮಲಗಿ ನಿದ್ರಾಭರಿತವಾಗಿದೆ ಜಗ.

ಸರ್ವಾಂಗ ಲಿಂಗಿಯಾಗಿ, ಶರಣಭರಿತ ಲಿಂಗವಾಗಿ, ಸದ್ಗುರುವಿನ ಲಿಂಗಪ್ರಸಾದದಲ್ಲಿ ಎಚ್ಚತ್ತ ಚೆನ್ನ ಬಸವಣ್ಣನ ಕೃಪೆಯ ಸಮುದ್ರವನ್ನು ಸಮುದ್ರದಂತೆ ಉಕ್ಕೇರಿ ಉಕ್ಕೇರಿ ಹಾಡುತ್ತಾನೆ. ಬಸವಣ್ಣನನ್ನು ಹಾಡುವಲ್ಲಿ ತಾನಾದ 'ಸಾ ಕಾಷ್ಠಾ ಸಾ ಪರಾ ಗತಿಃ'ಯನ್ನೆ ಹಾಡುತ್ತಾನೆ.

---

೧. ಶೂ. ಸಂ. ಪು. ೭೬, ವ. ೧೨. ೨. ಶೂ. ಸಂ. ಪು. ೭೬, ವ. ೧೨.
೩. ಅದೇ ಪು. ೭೭, ವ. ೧೫.

ಚರಣವಿಡಿದಂಗೆ ಕರುಣಿ ಕಂದೆಱವೆಯ ಮಾಡಬೇಕೆಂದು,
ಮಱಹಿಂಧ ಬಂದ ಕಾಯದ ಕರ್ಮವ ಕಳೆದು,
ಕರುಣಿ ಕಂದೆಱವೆಯ ಮಾಡಿದ ಪ್ರಾಣಲಿಂಗ ಸಂಬಂಧವೆಂತಿದ್ದುದೆಂದಡೆ:
ಆಲಿ ನುಂಗಿದ ನೋಟದಂತೆ, ಬಯಲ ನುಂಗಿದ ಬ್ರಹ್ಮಾಂಡದಂತೆ,
ಮುತ್ತು ನುಂಗಿದ ಉದಕದಂತೆ, ಪುಷ್ಪ ನುಂಗಿದ ಪರಿಮಳದಂತೆ ಇಪ್ಪ
ಮಹಾನುಭಾವಿಗಳಿಗೆನ್ನ ಒಡಲ ಗುಱಿಮಾಡಿದೆಯಾಗಿ
ಎನ್ನ ಒಡಲ ಪರಿಯಾಯ ಕೆಟ್ಟಿತ್ತಯ್ಯಾ ಕೂಡಲಚೆನ್ನಸಂಗಮದೇವಾ ![೧]

ಕಾಲ ದೇಶ ವಸ್ತುವಿನ ಹಂಗಿಲ್ಲದೆ ಅನಾದ್ಯನಂತವಾಗಿ 'ಸರ್ವಾಂಗ'ದಲ್ಲಿ ನೆಲಸಿ ನಿಗಿನಿಗಿಸುತ್ತಿರುವ ಪ್ರಾಣಲಿಂಗ ಶಿಷ್ಯನಲ್ಲಿ ಕಂದೆರೆದರೆ ಶಿಷ್ಯನಿಗೂ ಪ್ರಾಣಲಿಂಗಕ್ಕೂ ಇರುವ ಸಂಬಂಧವೇನು? ಪುಷ್ಪ ಪರಿಮಳದ ಸಂಬಂಧ, ಮುತ್ತು ಉದಕದ ಸಂಬಂಧ, ಕಣ್ಣಾಲಿ ನೋಟದ ಸಂಬಂಧ, ಬ್ರಹ್ಮಾಂಡಕ್ಕೆ ಬಯಲ ಸಂಬಂಧ. ಶಿಷ್ಯ ಕಾಣುತ್ತಾನೆ, ಪುಷ್ಪ ಮುತ್ತು ಆಲಿ ಬ್ರಹ್ಮಾಂಡ ಕಾಣುವಂತೆ. ಆದರೆ ಶಿಷ್ಯನ ಸರ್ವಾಂಗ ಲಿಂಗ, ಸರ್ವಾಂಗ ಪ್ರಾಣಲಿಂಗದ ಪರಿಮಳ ದೃಗ್ಗೋಚರವಲ್ಲ. ಅದರಂತೆ ಶಿಷ್ಯನಲ್ಲಿಯ್ಮ ಉದಕ ನೋಟ ಬಯಲು. ಶಿಷ್ಯನಲ್ಲಿ ಕಂದೆರವೆಯಾದ ಪ್ರಾಣಲಿಂಗದ ಅನುಭವ ಮಹಾನುಭಾವಿಗಳ ಮಹಾನುಭಾವದ ಮುಂಬೆಳಗು. ಈ ಮುಂಬೆಳಗು ಮಹಾಬೆಳಗಿನತ್ತ ಶಿಷ್ಯಲಿಂಗನನ್ನು ಕರೆದೊಯ್ಯುತ್ತಿದೆ. ಇಲ್ಲಿ ನಡೆದು ಶಿಷ್ಯ 'ತದುಗತ' 'ತಲ್ಲೀಯ'ವಾಗುತ್ತಿರುವಾಗ ಮಹಾಬೆಳಗಿಗೆ ಗುರಿಯಾದ ಒಡಲು, 'ದೇಹ ತಾನೆಂಬ' ದೇಹಾತ್ಮಭಾವದೊಡಲು ತನ್ನ ಪರ್ಯಾಯವನ್ನು ಉರಿಸಿಕೊಂಡು ಲಿಂಗಪರಿಯಾಯವಾಗಿದೆ. ಈ ಪರ್ಯಾಯದಿಂದ ಚೆನ್ನಬಸವಣ್ಣ ಗುರುಕೃಪೆಯನ್ನು ಹಾಡಿದರೂ ತನ್ನ ಪರಿವರ್ತನದ ರೂಪ ಪರ್ಯಾಯವನ್ನು ಮೇಲಿನ ವಚನದಲ್ಲಿ ಹಾಡಿ ಮೂರ್ತಿಗೊಳಿಸುವಂತಿದೆ.

ಚೆನ್ನ ಶಿಷ್ಯ ಗುರುಬಸವಲಿಂಗವನ್ನು ಹಾಡುತ್ತಾನೆ ಹಾಡುತ್ತಾನೆ; ಹಾಡುವ ಮೇರೆ ಮೀರಿ ಹಾಡುತ್ತಾನೆ. ಮೇರೆ ಮೀರಿದ ಆನಂದವನ್ನು ಮೀರಿ ಹಾಡಿದಲೆ ನಾಲಗೆಯ ನಿರ್ವಾಣ. 'ಗುರುದೈವಾತ್ ಪರಂ ನಾಸ್ತಿ', 'ನ ಗುರೋರಧಿಕಂ' 'ಗುರುಃ ಸಾಕ್ಷಾತ್ ಪರಬ್ರಹ್ಮ'. ಪರಾತ್ಪರವೆ ಗುರುರೂಪಾಗಿ ಮರ್ತ್ಯಕ್ಕೆ ಬಂದ. ಏನು ಕಾರಣ? ಮರ್ತ್ಯದ ಉದ್ಧಾರ ಕಾರಣ, ಮರ್ತ್ಯದ ಕಲ್ಯಾಣ ಕಾರಣ, ಅಮರ್ತ್ಯದ ಕಲ್ಯಾಣವನ್ನು ನೂರಕ್ಕೆ ಸಾವಿರ ಲಕ್ಷ ಕೋಟಿ ಬಯಸುವ ಶಿಷ್ಯ ಕಾರಣ. ಶಿಷ್ಯನಲ್ಲಿ ತನ್ನ ಬಿತ್ತಿದ ಗುರು ಪರಬ್ರಹ್ಮ. ಶಿಷ್ಯನ ಮನಸ್ಥಲದಲ್ಲಿ ಮಂತ್ರಬ್ರಹ್ಮವಾಗಿ ಪಲ್ಲವಿಸಿದ, ತನುಸ್ಥಲದಲ್ಲಿ ಪ್ರಸಾದಲಿಂಗವಾಗಿ ಹಣ್ಣಿನ ಗೊಂಚಲಾದ, ಕರಸ್ಥಲದಲ್ಲಿ ಪ್ರತ್ಯಕ್ಷ ದೃಷ್ಟವಾಗಿ ಇಷ್ಟ ಲಿಂಗ ರಸಮೂರ್ತಿಯಾದ, ಶಿಷ್ಯನ ಪ್ರಾಣಸ್ಥಲದಲ್ಲಿ ಲಿಂಗರಸವೆ ಜಂಗಮಲಿಂಗವಾಗಿ ಪರಿಪೂರ್ಣ ನಿತ್ಯವನ್ನು ಪ್ರಾಣಿಸಿದ. ಮತ್ತೆ ಬಸವಣ್ಣನ ಅನಾದಿಯ ಘನಮಹಿಮೆಯನ್ನು ತಿಳಿಯದ ಜನ:

---

೧. ಶೂ. ಸಂ. ಪು. ೭೬, ವ. ೧೩.

ಆದಿ ಬಸವಣ್ಣ, ಅನಾದಿ ಲಿಂಗವೆಂಬರು; ಹುಸಿ ಹುಸಿ.
ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು.
ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು.
ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು.
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದಱಿದೆನಯ್ಯಾ
ಕೂಡಲಚೆನ್ನಸಂಗಮದೇವಾ.[೧]

ಚೆನ್ನಬಸವಣ್ಣ ಕಣ್ಣುಗಂಡು ಹೇಳುವ ಈ ಮಾತಿನ ಅರ್ಥವೇನು? ಅನಾದಿ ಬಸವಣ್ಣ ಹಡೆದುದು ಲಿಂಗ ಜಂಗಮ ಪ್ರಸಾದಗಳ ವಿಷಯಕವಾದ ಕಲ್ಪನೆ ವಿಚಾರಗಳನ್ನಲ್ಲ; ವಾದ, ತರ್ಕ, ಶಾಸ್ತ್ರಗಳನ್ನಲ್ಲ; ದರ್ಶನ ಲಕ್ಷಣ ವ್ಯಾಖ್ಯಾನ ಭಾಷ್ಯಗಳನ್ನಲ್ಲ; ಪುರಾಣ ಪುಣ್ಯಕಥೆ ಸಮಯ ಸಂಪ್ರದಾಯವನ್ನಲ್ಲ. ಬಸವಣ್ಣನಿಗಿಂತ ಮೊದಲು ಲಿಂಗಜಂಗಮ ಪ್ರಸಾದಗಳು ಆಚರಣೆಯಲ್ಲಿ ವಿಚಾರಣೆಯಲ್ಲಿ ಇದ್ದುದು ನಿಜ. ಕ್ರಿಸ್ತನಿಗಿಂತ ಮೊದಲು 'ಪ್ರೇಮ' ಪ್ರೇಮದ ಕಲ್ಪನೆ, ಬುದ್ಧನಿಗಿಂತ ಮೊದಲು ಅಹಿಂಸೆಯ ವಿಚಾರಣೆ ಅಹಿಂಸೆಯ ಆಚರಣೆ, ಶಂಕರಾಚಾರ್ಯರಿಗಿಂತ ಪೂರ್ವಕಾಲದಲ್ಲಿ 'ಅದ್ವೈತ' ದರ್ಶನ ವಾದಗಳಿದ್ದಿಲ್ಲವೆ? ಇವರು ಬಂದ ಮೇಲೆ ಪ್ರೇಮ ಸತ್ಯ ಅಹಿಂಸೆ ಮುಂತಾದವುಗಳಲ್ಲಿ ಯಾವ ಪ್ರಾಣೋಜ್ವಲತೆ ಪ್ರವೇಶವಾಗಿ ಪ್ರಕಾಶವಾಯ್ತು? ಒಂದು ರೀತಿಯಿಂದ ಹೇಳಲು ನೀವು ಸಮ್ಮತಿಸಿದರೆ, ಈ ಸತ್ಯ ಪ್ರೇಮಾದಿಗಳು ಆ ಮಹಾತ್ಮರ ಕೈಯಲ್ಲಿ ತಂತಮ್ಮ ಪೂರ್ವಜನ್ಮವನ್ನು ಕಳೆದುಕೊಂಡು ಪುನರ್ಜಾತವಾದಂತೆಯೆ. ಮಾನವ ಕುಲದ ಬುದ್ಧಿ ವಿಚಾರ ಭಾವ ಭಾವನೆ ಆಚಾರ ವ್ಯವಹಾರಗಳು ಮಹಾತ್ಮರ ಕೈಯಲ್ಲಿ ಸಿಕ್ಕು 'ದೀಕ್ಷೆ'ಯಾಗಿ ಹೊರಬಿದ್ದರೆ, ಪರುಷ ಸೋಂಕಿ ಕಬ್ಬಿಣದಲ್ಲಿ ಬಂಗಾರ ನವ್ಯ ಕಾಂತಿ ಯಾಗಿ ಹೊಸ ಹುಟ್ಟನ್ನು ಹುಟ್ಟಿದಂತಲ್ಲವೇ? ಅಥವಾ ಹೊಸ ಹುಟ್ಟನ್ನು ಹುಟ್ಟಿಲಿಲ್ಲವೆ? ಬಸವಣ್ಣ ಹೀಗೆ ಹಡೆದ, ಲಿಂಗಜಂಗಮ ಪ್ರಸಾದವನ್ನು ತನ್ನ ನಿಜಾನುಭಾವ ನಿಜಾಚರಣೆಯ ಗರ್ಭದಿಂದ. 'ಅನಾದಿ ಬಸವಣ್ಣ'ನಿಂದ ಇವಕ್ಕೆ ಎಂಥ ದಿವ್ಯಕಾಂತಿ ಏರಿದೆ, ಯಾವ ಅಭಿನವ ಮಹಾಕಳೆ ಲಿಂಗ ಜಂಗಮ ಪ್ರಸಾದದ ಮುಖದಲ್ಲಿ ಹೊರ ಹೊಮ್ಮುತ್ತಿದೆ ನೋಡಿ, ಮನದ ಸಪ್ಪಳ ಮಾಡದೆ:

ಲಿಂಗದ ಪೂರ್ವಾಶ್ರಯವಂ ಕಳೆದು,
ಇದು ಪ್ರಾಣಲಿಂಗವೆಂದು ತೋಱಬಂದನಯ್ಯಾ ಬಸವಣ್ಣನು.
ಲಾಂಛನದ ಪೂರ್ವಾಶ್ರಯವ ಕಳೆದು,
ಲಿಂಗ ಜಂಗಮವೆಂದು ತೋಱಬಂದನಯ್ಯಾ ಬಸವಣ್ಣನು.

---

೧. ಶೂ. ಸಂ. ಪು. ೭೭, ವ. ೧೬.

ಪ್ರಸಾದದ ಪೂರ್ವಾಶ್ರಯವ ಕಳೆದು,
ಇದು ಮಹಾಪ್ರಸಾದ ಸ್ವಯವೆಂದು ತೋಱಬಂದನಯ್ಯಾ ಬಸವಣ್ಣನು.
ಲಿಂಗ ಜಂಗಮದ ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು
ಮರ್ತ್ಯಕ್ಕೆ ಜನಿಸಿದನಯ್ಯಾ,–ಕೂಡಲ ಚೆನ್ನಸಂಗನಲ್ಲಿ ಬಸವಣ್ಣನು.[1]

ಮಹಾತ್ಮರು ಮರ್ತ್ಯಕ್ಕೆ ಜನಿಸುವುದೇಕೆ? ಮರ್ತ್ಯದಲ್ಲಿ ಬಸವಣ್ಣನ ಜನಿತದ ಪ್ರಾಣ ಮರ್ಮವೇನು? ಮಾನವಪ್ರಪಂಚದ ಪೂರ್ವಾಶ್ರಯವನ್ನು ಕಳೆದು, ಆತನ 'ಲೋಕ'ದಿಂದ ಹೊರಗೆತ್ತಿ, 'ಪ್ರಾಣಲಿಂಗ'ದ ಲೋಕವನ್ನು, 'ಲಿಂಗ ಜಂಗಮ'ದ ಲೋಕವನ್ನು, ಸ್ವಯವೆ ಆದ 'ಮಹಾಪ್ರಸಾದ'ದ ಲೋಕವನ್ನು ತೋರಲಿಕ್ಕೆಂದು ಬಂದ ಬಸವಣ್ಣ.

ಗುರು ಬಸವಣ್ಣನ ಅನುಗ್ರಹದಿಂದ ಪ್ರಾಣಲಿಂಗವನ್ನು, ಪ್ರಾಣಲಿಂಗವೆ ಸಾಕಾರ ಚೈತನ್ಯವಾಗಿ ಸುಳಿವ ಲಿಂಗಜಂಗಮುವನ್ನು, ಸ್ವಯಂಪ್ರಸಾದವನ್ನು ಸ್ವಾನುಭಾವಕ್ಕೆ ತಂದು ಪ್ರತ್ಯಕ್ಷವಾಗಿ ಅನುಭವಿಸಿದ ಚೆನ್ನಬಸವಣ್ಣನ ಅಭಿಪ್ರಾಯದಲ್ಲಿ ನಮಃ ಶಿವಾಯ ಲಿಂಗವಾದರೆ, ಓಂ ನಮಃ ಶಿವಾಯ ಬಸವಲಿಂಗ. 'ಎನ್ನ ಮನಸ್ಥಲದಲ್ಲಿ ಬೆಳಗಿ ತೋಱಿ'ದ ಬಸವಣ್ಣ. ಪ್ರಣವ ಪಂಚಾಕ್ಷರಿಯಾಗಿ. ಮತ್ತೆ ಇದೇ ಬಸವಣ್ಣ 'ಪ್ರಥಮಾ-ಚಾರಿ', 'ಲಿಂಗಾಚಾರಿ', 'ಜಂಗಮಾಚಾರಿ', 'ಪ್ರಸಾದಾಚಾರಿ', 'ಸರ್ವಾಚಾರಿ'. ಬಸವಣ್ಣ ತನ್ನ ಸ್ವಯಂ ಅನುಭವದಿಂದ ಲಿಂಗ ಜಂಗಮ ಪ್ರಸಾದವನ್ನು ಪಡೆದು, ಹೊಕ್ಕಲ್ಲಿ ಹೊಕ್ಕು ಬಂದಲ್ಲಿ ಬಂದು ಮಾನವಕುಲವನ್ನು 'ಕೋಡಾಡಿ ಕಾಡುವ' ಮರ್ತ್ಯ ಭೂಮಿಯ ಪೂರ್ವಾಶ್ರಯವನ್ನು ಬಿಡಿಸಿ ಅಮರ್ತ್ಯವಾದ, ಚಿಜ್ಜ್ಯೋತಿಯಲ್ಲಿ ಪರಮ ಸತ್ಯವಾಗಿ ಬೆಳಗುವ ಪ್ರಾಣಲಿಂಗದ ಆಶ್ರಯದಲ್ಲಿ ನೆಲೆಯಾಗಿ ನಿಂದು ಲಿಂಗದ ಬದುಕನ್ನು ಬದುಕುವ ಮಹಾಮರ್ಮವನ್ನು ತೋರಿಸಲು ಬಂದ; ತೋರಿಸಿದನಲ್ಲದೆ ತಾನೇ ತನ್ನ ಆಚರಣೆಯಲ್ಲಿ ಲಿಂಗವನ್ನು ಜಂಗಮವನ್ನು ಪ್ರಸಾದವನ್ನು ಬಿತ್ತಿ ಬೆಳೆದು ಲಿಂಗದ ಹಣ್ಣು ಜಂಗಮದ ಹಣ್ಣು ಪ್ರಸಾದದ ಹಣ್ಣಿನ ಗೊಂಚಲ ಬಿಟ್ಟ ಬಸವಣ್ಣ. ಉಳಿದ ಆಚಾರ್ಯರಂತೆ ಬಸವಣ್ಣ 'ಪ್ರಸ್ಥಾನತ್ರಯ'ಕ್ಕೆ ಭಾಷ್ಯ ಬರೆಯಲಿಲ್ಲ. ಬರೆದು ಒಂದು ಮತಕ್ಕೆ ಆಚಾರ್ಯ ಪುರುಷನೆನಿಸಲಿಲ್ಲ. ಈತನ ದರ್ಶನ 'ಲಿಂಗ ಜಂಗಮ ಪ್ರಸಾದ' ದರ್ಶನ, ಬರೆದ ಭಾಷ್ಯ ಆಚಾರ. ಸ್ವಾನುಭಾವದ ಪರಮಸತ್ಯ ಬಹಿರಂಗದ ಕ್ರಿಯಾಚರಣೆಯಲ್ಲಿ ತುಂಬಿ ಹರಿದರೆ ಅದೇ ಬಸವಣ್ಣ. ಅದೇ ಪ್ರಥಮಾಚಾರಿ, ಅದೇ ಸರ್ವಾಚಾರಿ.

ಈ ಪ್ರಥಮಾಚಾರ್ಯನ ಕೈಯಲ್ಲಿ ಹುಟ್ಟಿದ 'ಕಾರುಣ್ಯದ ಶಿಶು' ಹೇಗಿದೆ? ಹೇಗೆ ಬೆಳೆಯುತ್ತಿದೆ? ಸಿದ್ಧವೀರಣ್ಣನನ್ನು ಕೇಳಿರಿ ಹೀಗೆ ಹೇಳುತ್ತಾನೆ: 'ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಕೈಯಲ್ಲಿ ಅನುಗ್ರಹಮಂ ಪಡೆದು, ಪ್ರಾಣಲಿಂಗ ಸಂಬಂಧವಳವಟ್ಟು, ಅಂತರಂಗದ ಜ್ಞಾನ ಬಹಿರಂಗದ ಕ್ರೀಯಲ್ಲಿ ಸಮರಸವನೆಯ್ದಿ, ಸರ್ವಾಚಾರಸಂಪನ್ನನಾಗಿ ಕೃತಾರ್ಥ'ನಾಗಿದ್ದಾನೆ.[2] ಮತ್ತೆ ಈ ಶಿಶುವಿನ ಬೆಳವಣಿಗೆ ವರ್ಷವರ್ಷಕ್ಕೆ ಬೋಟು ಗೇಣಿನ ಬೆಳವಣಿಗೆಯಲ್ಲ. ಇಂದು ಮಾತು. ನಾಳೆ ಕಾಲು.

೧. ಶೂ. ಸಂ. ಪು. ೭೭, ವ. ೧೭.   ೨. ಶೂ. ಸಂ. ಪು. ೭೭-೭೮. ಪ್ರ. ೨೧.

ನಾಡದು ಬುದ್ಧಿ ಬಂದ ಮಂದಗತಿಯ ಮಾಂಸವೃದ್ಧಿಯಲ್ಲ. ಅದೋ, ಬಸವಣ್ಣನವರು ಹೇಳುತ್ತಾರೆ ಕೇಳಿ ನೋಡಿ, ಚೆನ್ನಬಸವಣ್ಣ ಬೆಳೆದು ನಿಂದ ನಿಲವನ್ನು:

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ !
ಸುಗಂಧಬಂಧುರವಂತೆ ಹುಟ್ಟುತ್ತವೆ ಪರಿಮಳ.[೧]
ಆದಿಯನಾದಿ ಇಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ,
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು ಲಿಂಗ ಸಯವಾಗಿ,
ಎನಗೆ ಗತಿ ಪಥವ ತೋಱಿಸಬೇಕೆಂದು ಆಗಾದನು—
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು[೨].

ಇನ್ನೂ ಕೇಳಿ, ಇನ್ನೂ ನೋಡಿ:

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ !
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ !
ಇದಱ ಸಂಗಸುಖದನುಭವವನು ಕೂಡಲಸಂಗಮದೇವ ತಾನೆ ಬಲ್ಲ[೩].

ಪರಿಮಳದ ಬೀಜವೆ ಮೊಳಕೆಯೊಡೆದು ಹುಟ್ಟಿದರೆ, ಸುಗಂಧವಾಸನೆಗಾಗಿ ಹೂವಿನ ಹಾದಿಕಾಯುವ ಆವಶ್ಯಕತೆಯಿಲ್ಲ. ಹೀಗೆಯೆ ಲಿಂಗವೆ ಮೊಳಕೆಯೊಡೆದು ಹೂವಿಲ್ಲದೆ ಲಿಂಗಪರಿಮಳ ಸೂಸುತ್ತಿದೆ ಚೆನ್ನಬಸವಣ್ಣನಲ್ಲಿ. ಹರಗಿ ಬಿತ್ತಿ ಬೆಳೆವ ದಂದುಗವಿಲ್ಲದೆ ಲಿಂಗದ ಬೆಳಸು, ಲಿಂಗಾನುಭಾವದ ಹೆಬ್ಬೆಳಸಿನ ರಾಶಿಯಾಗಿ ನಿಂತಿದ್ದಾನೆ ಚೆನ್ನಬಸವಣ್ಣ. 'ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು', ಇಂದು ಹುಟ್ಟಿದ ಗುರುಪುತ್ರ, ಲಿಂಗ ಶಿಸುವಿಗೆ ಇಂದೇ ಲಿಂಗಯೌವನದ ಭರ, ಲಿಂಗಕಾಂತಿಯ ಮಕರ. ಮತ್ತೆ ಗುರುವಿನ ಹಸ್ತ ಶಿಷ್ಯನ ಮಸ್ತಕದ ಸಂಯೋಗವಿಲ್ಲದೆ 'ಯೌವನ ಮಥನವಾಯಿತ್ತು,' ಹೊರಗೊಳ ಗನ್ನು ಒಳಕೊಂಡ 'ಆತ್ಮಸಂಗವಾಯಿತ್ತು'. ತ್ರಿವಿಧ ದೀಕ್ಷೆಯ ಮತ್ತೆ ಇಪ್ಪತ್ತೊಂದು ವಿಧವಾದ ದೀಕ್ಷೆಯ ವಿಧಿವಿಧಾನ ಸಾಂಗವಾಗಿ ನಡೆಯದೆ ಚೆನ್ನಬಸವಣ್ಣನಲ್ಲಿ ಇಂಥ ದಿವ್ಯ ಪರಿವರ್ತನೆ ಉಂಟಾಯಿತು ಹೇಗೆ? 'ಆದಿಯನಾದಿ ಇಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ' ಗುರುದೀಕ್ಷೆಯ ವಿವಿಧ ಕರ್ಮೋಪಚಾರವಿಲ್ಲದೆ ದೀಕ್ಷೆ ಮುಕ್ತಾಯ ಗೊಂಡಿತು. ಮುಕ್ತಾಯವಾಗದ ಮೊದಲೆ ದೀಕ್ಷೆ ಹಣ್ಣು ಬಿಟ್ಟಿತು. ಅದು ಹೇಗೆ? ಆದಿ ಅನಾದಿ ಇಲ್ಲದ ಮುನ್ನ, ದೇಹ ಆತ್ಮ ರೂಪುಗೊಳ್ಳದ ಮೊದಲು ತಾನು ದೇಹಾತ್ಮ ಭಾವದ ನಾನಲ್ಲ, ತಾನು ಸ್ವಯಂ ಲಿಂಗ ಎಂದು ಆದಿ ಅನಾದಿಯನ್ನು ಭೇದಿಸಿ ನೋಡಿ, ತನ್ನ ಜ್ಞಾನದ ಸ್ವಯಂಸಾಮರ್ಥ್ಯದಿಂದ ತನ್ನೊಳಗೆ ತನ್ನ ನಿಜದಾಳವನ್ನು ಕಂಡು ಕೊಂಡಿದ್ದ ಚೆನ್ನಬಸವಣ್ಣ ನಟ್ಟುಕಡಿದು ಹರಗಿ ಬಿತ್ತಿ ಕಸ ಕಳೆ ತೆಗೆದು ಬೆಳೆಯಬೇಕಾಗಿದ್ದ

೧. ಬಸವಣ್ಣನವರು ಪ್ರಭುದೇವರನ್ನು ಕೊಂಡಾಡುವಾಗ ಹೇಳುವ, ಇಂಥದೇ ಆದ 'ಮರುಗದ ಗಿಡುವಿನಂತೆ ಹುಟ್ಟುತ್ತವೆ ಪರಿಮಳ !'
—ಎಂಬ ವಿಚಾರವನ್ನು ಹೋಲಿಸಿ ನೋಡಿರಿ. (ಶೂ. ಸಂ. ಪು. ೧೩೫, ವ. ೧೭.)

೨. ಶೂ. ಸಂ. ಪು. ೭೮, ವ. ೨೧.   ೩. ಶೂ. ಸಂ. ಪು. ೭೮, ವ. ೨೪.

ಹೊಲದಂತಲ್ಲ. ಶಿವಜ್ಞಾನ ಚೆನ್ನಬಸವಣ್ಣನೊಡನೆ ಹುಟ್ಟಿತು, ಹುಟ್ಟುವ ಪುರಸತ್ತಿಲ್ಲದೆ ಬೆಳೆದು ಯೌವನಕ್ಕೆ ಬಂತು. ಅಭಿಮನ್ಯು ಏಕಲವ್ಯ ಲವಕುಶರ ವೀರಕ್ಕೆ ಯೌವನಬರಲು ಹತ್ತಿಪ್ಪತ್ತು ವರ್ಷ ಹಿಡಿಯಲಿಲ್ಲ. ಅದರಂತೆ ಅನೇಕ ಮೇಧಾವಿಗಳಲ್ಲಿ ಬುದ್ಧಿ ಯೌವನ ಏರಲಿಕ್ಕೆ ಒಂದು ಪಟ್ಟಕಾಲ ಹಿಡಿಯಲಿಲ್ಲ. ತತ್ತ್ವಜ್ಞಾನ ಅನುಭಾವಕ್ಷೇತ್ರದಲ್ಲಿ ಇಂಥ ಸದ್ಯೋಜ್ವಲಕೋಟಿ ಚೆನ್ನಬಸವಣ್ಣ. ಸ್ವಯಮುಜ್ವಲವನ್ನೂ ಹಚ್ಚಿ ತಿಕ್ಕಿ ತಿಕ್ಕಿ ಬೆಳಗ ಬೇಕೆಂಬ ಹಟ ಏಕೆ?

ಮತ್ತೆ ಬಸವಣ್ಣನವರು ತಿಳಿಸುವಂತೆ ಶಿಷ್ಯನ ಜೀವನದ ಘನೋದ್ದೇಶ, 'ಮರ್ತ್ಯ ಲೋಕದಲ್ಲಿ ಶಿವಾಚಾರದ ಘನವು ಹೂಳಿಹೋಯಿತ್ತೆಂದು ಕರ್ತನು ತಾನೆ ಮಹಾ ಪ್ರಸಾದಿಯಾಗಿ ಉದಯವಾದನು'. ಮಾನವಕುಲ ತನ್ನ ಲೋಕವ್ಯವಹಾರದ ಸಲುವಾಗಿ 'ಶಿವಾಚಾರ'ವನ್ನು, ಶುಭ ಶೋಭನ ಸುಖ ಕಲ್ಯಾಣ ಭದ್ರ ಮಂಗಲಕರವಾದ ನಡತೆ ಯನ್ನು ಹುಗಿದು ಗೋರಿಗೊಳಿಸಿರಲು, ಹೂಳಿಹೋದ 'ಶಿವಾಚಾರ'ವನ್ನು ಎತ್ತಿ ತೆಗೆದು, ಮತ್ತೆ ಮಾನವಕುಲದ ಹೃದಯ ಬುದ್ಧಿ ಪ್ರಾಣ ಕಣ್ಣು ಕಾಲಿನಲ್ಲಿ ನೆಲೆಗೊಳಿಸುವ ಜಗತ್‌ಕಲ್ಯಾಣ ಕಾರ್ಯವೇ ಚೆನ್ನಬಸವಣ್ಣನ 'ಮಣಿಹ'. ಮರ್ತ್ಯಕ್ಕೆ 'ಮಹಾಪ್ರಸಾದ' ವನ್ನು ತಂದುಕೊಟ್ಟು ಮರ್ತ್ಯಜೀವನವನ್ನು ದಿವ್ಯಪ್ರಸನ್ನವಾದ ಪ್ರಸಾದಜೀವನ ವನ್ನಾಗಿ ಮಾಡುವುದೇ ಚೆನ್ನಬಸವಣ್ಣನ ಮರ್ತ್ಯದ ಉದ್ಯೋಗ. ಇಂಥ ಪರಮ ಶಿಷ್ಯ ತನಗೆ ದೊರೆತುದು ಎಂಥ ಜೀವಾನಂದ!

ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ!
ಅದೇನು ಕಾರಣ ತಂದೆ ಎಂದಱಿದೆನಯ್ಯಾ!
ಎನ್ನ ಕಾರಣ ತಂದೆ ಎಂದಱಿದೆನಯ್ಯಾ!
ಅಱಿವಱಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆಱೆದೆನಯ್ಯಾ ಕೂಡಲಸಂಗಮದೇವಾ.[೧]

ಶಿಷ್ಯನ ಆಚರಣೆಯನ್ನು ಕಂಡು ಕಂದೆಱೆವ ಗುರು ಬಸವಣ್ಣ. ಮತ್ತೆ ಸಚ್ಛಿಷ್ಯನಲ್ಲಿ 'ಗುರುವಿನ ಗುರು'ವನ್ನು ಕಾಣುವ ಪರಮಗುರು ಬಸವಣ್ಣ.

ಗುರು ಶಿಷ್ಯ! ಯಾರು ಗುರು? ಯಾರು ಶಿಷ್ಯ? ಗುರು ಅನುಗ್ರಹ ಮಾಡಲಿ ಶಿಷ್ಯನಿಗೆ; ಶಿಷ್ಯ ಅನುಗ್ರಹ ಪ್ರಸಾದವನ್ನು ಪಡೆದುಕೊಳ್ಳಲಿ ಗುರುವಿನಿಂದ. ಆದರೆ ಇಷ್ಟೊಂದೇ ಕಾರಣದಿಂದ ಗುರು ಗುರುವಾಗಿಯೆ ಉಪದೇಶಪೀಠದಲ್ಲಿ ಕುಳ್ಳಿರಬೇಕು, ಶಿಷ್ಯ ಶಿಷ್ಯನಾಗಿಯೆ ಉಳಿಯಬೇಕು ಎಂಬ ನಿಯಮ ಸರ್ವತ್ರ ಪಾಲಿಸಲೇಬೇಕಾದ ನಿಯಮವಲ್ಲ. ಗುರುವಿನಲ್ಲಿ ಸಂದೇಹವಿದ್ದರೆ, ಮೊದಲಿದ್ದ ನಿಶ್ಚಯ, ನಿರ್ಣಯ, ನಿರ್ಧಾರ ದಲ್ಲಿ ಸಂಶಯ ಮೂಡಿದರೆ, ಮತ್ತೇನನ್ನೋ ಕುರಿತು ಅಜ್ಞಾನ ಅಲ್ಪಜ್ಞಾನ ಅರ್ಧ ಮರ್ಧ ಜ್ಞಾನವಿದ್ದರೆ ಈ ಸಂದೇಹ ಸಂಶಯವೆಲ್ಲ ಗುರುವಿನಲ್ಲಿ ಉಳಿದಿರುವ ಶಿಷ್ಯನೇ.

೧. ಶೂ. ಸಂ. ಪು. ೭೮. ವ. ೨೩.

ಇಂಥ ಸಂದೇಹ ಅಜ್ಞಾನಗಳನ್ನು ಪರಿಹರಿಸಬಲ್ಲ ಜ್ಞಾನಾನುಭವ ಸಾಮರ್ಥ್ಯವಿದ್ದರೆ, ಈ ಸಾಮರ್ಥ್ಯ ಶಿಷ್ಯನಲ್ಲಿ ಬೆಳಗುವ ಗುರುವೇ. ಈ ಅರಿವಿದ್ದ ಗುರು–ಶಿಷ್ಯ ಸಂಬಂಧದಲ್ಲಿ ಮೇಲು ಕೀಳು, ಹೆಚ್ಚು ಕಡಮೆ, ಅಭಿಮಾನ ನಾಚಿಕೆಗೆ ಎಳ್ಳುಮೊನೆಯಷ್ಟು ಅವಕಾಶ ವಿಲ್ಲ. ಅವಕಾಶವಿದ್ದರೆ ಸಾಮರಸ್ಯದ ಸಂಬಂಧವಿಲ್ಲ. ಈ ಸಂಬಂಧವಿಲ್ಲದೆ ಗುರುವಾಗಲಿ ಶಿಷ್ಯನಾಗಲಿ ಸಂಪೂರ್ಣ ಸಮಾಪ್ತಿಯಾಗಲಿಲ್ಲ. ಇದೋ ಇಲ್ಲಿ ನೋಡಿ ಬಸವ ಚೆನ್ನಬಸವ ರನ್ನು, ಅಂದರೆ ಸಮರಸ ಬಾಂಧವ್ಯವನ್ನು. ಬಸವಣ್ಣನಿಗೆ 'ಕೂಡಲಸಂಗಮದೇವರಲ್ಲಿ ಎನ್ನ ಪ್ರಾಣ ನಿಕ್ಷೇಪವಹ ಭೇದ,' ಅಂದರೆ ಲಿಂಗಕ್ಕೆ ಪ್ರಾಣಕ್ಕೆ ಇರುವ ಕೀಲಸಹಿತ ವಾಗಿರುವ ಸಂಬಂಧ, ಮತ್ತೆ ಈ ಕಡೆಯಿಂದ ಪ್ರಾಣ ಲಿಂಗದಲ್ಲಿ ಕೀಲಿಸಿ ಸಮ್ಯಗ್‍ಬಂಧ ವಾಗಿರುವ ಸಕೀಲ ಸಂಬಂಧ 'ಎಂತಿರ್ಪುದೆಂದರಿಯೆನು.' ಉರಿಯಲ್ಲಿ ಕಟ್ಟಿಗೆಯನ್ನು, ಬಿಸಿಲಿನಲ್ಲಿ ಮಂಜಿನ ಮನೆಯನ್ನು ಹೂಳಿಡುವಂತೆ ಪ್ರಾಣವನ್ನು ಸಂಗಮಲಿಂಗದಲ್ಲಿ ಕೀಲಿಸಿ ಬಂಧಿಸಿ, ಅಲ್ಲಿಯೆ ಹುಗಿದಿಟ್ಟು ಲಿಂಗಪ್ರಾಣಿಯಾಗಿ ಪ್ರಾಣಿಸುವ ಭೇದ ಪೂರ್ಣ ವಾಗಿ ಮನದಟ್ಟಾಗಿಲ್ಲ ಅಂದರೆ ಅನುಭವದಟ್ಟಾಗಿಲ್ಲ ಬಸವಣ್ಣನಿಗೆ. ಗುರುವಾದರೇನು? ಇಂಥ ಸಂದೇಹ ಶಲ್ಯವನ್ನು ಅನುಭವ ಹೃದಯದಲ್ಲಿ ಚುಚ್ಚಿಸಿಕೊಂಡೆ ಸಾಯಬೇಕೆ? ಬಸವಣ್ಣ ಇಂಥ ಗುರು ಅಲ್ಲ. ತಾನು ಗುರು ಎಂದರೆ ಕೂಡಲಸಂಗಮದೇವ ನಗ ಲಿಕ್ಕಿಲ್ಲವೇ ಎಂಬ ಭಯಭರಿತ ವಿನಯಮೂರ್ತಿ ಬಸವಣ್ಣ. ಮತ್ತೆ ತನ್ನ ಶಿಷ್ಯ 'ಎನಗೆ ಗತಿ ಪಥವ ತೋರಿಸಬೇಕೆಂದು ಆಗಾದನು ಕೂಡಲಸಂಗಮದೇವರಲ್ಲಿ ಚೆನ್ನ ಬಸವಣ್ಣನು'.[೧] ಗುರುಶಿಷ್ಯರಲ್ಲಿರುವ ನಿಜಸಂಬಂಧದ ಈ ಅಸಾಮಾನ್ಯ ಪ್ರಜ್ಞೆ ಇಬ್ಬರಲ್ಲಿ ಹೊಳೆಹೊಳೆಯುತ್ತಿರುವಾಗ ಅಭಿಮಾನದ ಮಾತೆಲ್ಲಿ? ನಾಚಿಕೆಯ ಮರೆ ಎಲ್ಲಿ? ಪ್ರಾಣ ಲಿಂಗದ ಸಂಬಂಧ ಹೇಗೆ ಎಂದು ಕೇಳುತ್ತಾನೆ ಬಸವಣ್ಣ, ಹೇಳದಂತೆ ಹೇಳುತ್ತಾನೆ ಶಿಷ್ಯ ಚೆನ್ನಬಸವಣ್ಣ:

ಹೋ! ಹೋ!! ಗುರುವೇ, ನಿಮ್ಮ ಕರಕಮಲದಲ್ಲಿ ಉದಯಿಸಿ,
ಅಂಗದ ಮೇಲೆ ಲಿಂಗವ ಧರಿಸಿ, ಆ ಲಿಂಗದಲ್ಲಿ ಆಗಾಗಿ,
ಪ್ರಾಣ ಲಿಂಗ, ಲಿಂಗ ಪ್ರಾಣವೆಂಬುದ ನಾನು ಕಂಡೆನು.
ನಿಮಗಾನು ತೋರಲು ಸಮರ್ಥನೆ?
ಆಚಾರವಂಗದ ಮೇಲೆ ನೆಲೆಗೊಂಡು, ಇಷ್ಟಲಿಂಗದಲ್ಲಿ ದೃಷ್ಟಿ ನಟ್ಟು,
ಭಾವಸಂಪನ್ನನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಅನುಭಾವ ಅಂತರಂಗದಲ್ಲಿ ಎಡೆಗೊಂಡು, ಪ್ರಾಣ ಲಿಂಗದಲ್ಲಿ ನಿಕ್ಷೇಪಿತವಾಗಿ
ನಿಜಲಿಂಗೈಕ್ಯನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನು?
ಜ್ಞಾನಸಮಾಧಿಯೊಳಗೆ ಬಯಕೆಯಡಗಿ,
ಪರಿಣಾಮಲಿಂಗದಲ್ಲಿ ಮನಸ್ಸು ಲಯವಾಗಿ,
ನಿಜಲಿಂಗಸ್ಥಲದಲ್ಲಿ ತೃಪ್ತರಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನು?

---

೧. ಶೂ. ಸಂ. ಪು. ೭೮, ವ. ೨೧.

ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದಲ್ಲಿ
ಜಂಗಮಲಿಂಗ ಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಲಿಂಗಕ್ಕೆ ಬಂದ ಪದಾರ್ಥವಲ್ಲದೆ ಕೊಳ್ಳೆನೆಂದು
ಮನ ಮೀಸಲ, ತನು ಮೀಸಲ ಮಾಡಿ,
ಸರ್ವಾಂಗಸುಖವೆಲ್ಲವನು ಪ್ರಾಣಲಿಂಗದಲ್ಲಿ ಅರ್ಪಿಸಿ,
ನೀವು ತೊಲಗಿ ನಿರಾಭಾರಿಯಾಗಿ ಪ್ರಸಾದಲಿಂಗಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಅನಾದಿ ಶಿವಂಗೆ ಆಧಾರವಿಲ್ಲೆಂದು
ಅಖಂಡಿತನ ನಿಮ್ಮ ರೋಮದ ಕೊನೆಯಲ್ಲಿ ಧರಿಸಿ
ಮಹಾಲಿಂಗಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಕೂಡಲಚೆನ್ನಸಂಗಯ್ಯ ಸಾಕ್ಷಿಯಾಗಿ,
ನಿಮ್ಮ ಪ್ರಾಣಲಿಂಗ ಸಂಬಂಧದ ಸೆಱಗು ಸೋಂಕಿನ
ಒಕ್ಕ ಮಿಕ್ಕ ಪ್ರಸಾದಿ ನಾನು ಕಾಣಾ ಸಂಗನಬಸವಣ್ಣಾ.[೧]

ಚೆನ್ನಬಸವಣ್ಣ ತನ್ನ ಗುರುಸ್ವಾಮಿ ಬಸವಣ್ಣನ ಕರಕಮಲದಲ್ಲಿ ಉದಯಿಸಿದ್ದಾನೆ. ಇಷ್ಟ ಲಿಂಗವನ್ನು ಸರ್ವಾಂಗದಲ್ಲಿ ಹೊತ್ತುಕೊಂಡಿದ್ದಾನೆ, ಮತ್ತೆ ಅದೇ ಲಿಂಗದಲ್ಲಿ ಲಿಂಗದ ಆಗು ಆಗಿದ್ದಾನೆ, ಲಿಂಗದಲ್ಲಿ ಲಿಂಗದ ರೂಪುಗೊಂಡು ಇದ್ದಾನೆ. ಇಲ್ಲಿ ತನಗಾದ 'ಕಂಡೆ ಅನುಭವ'ವೆಂದರೆ ಪ್ರಾಣ ಲಿಂಗದಲ್ಲಿ ವೇಧಿಸಿ, ಲಿಂಗ ಪ್ರಾಣಕ್ಕೆ ಬೆಂಕಿ ಹಚ್ಚಿ ಪ್ರಾಣ ಲಿಂಗ ವಾಗಿ ಲಿಂಗ ಪ್ರಾಣವಾಗಿ ಪ್ರಾಣ ಲಿಂಗ ಸಮರಸವಾಗಿ ಚೇತನಿಸುವ ಪ್ರತ್ಯಕ್ಷ ಪ್ರಾಣಾನು ಭವ. ಆದರೆ ಈ ಅನುಭವ 'ತೋಱಲಿಲ್ಲಾಗಿ ಬೀಱಲಿಲ್ಲಾರಿಗೆಯು'. ಮತ್ತೆ ತನ್ನ ಗುರು ಸಂಗನಬಸವಣ್ಣನಿಗೆ ವಿವರಿಸಿ ತೋರಿಸುವ ಆವಶ್ಯಕತೆ ಎಲ್ಲಿದೆ? ತೋರಿಸುವ ಸಾಧ್ಯತೆ ಎಲ್ಲಿದೆ? ಸಂಗನ ಬಸವಣ್ಣನ ಅಂಗದಲ್ಲಿ ಸದಾಚಾರ ಶಿವಾಚಾರ ಭೃತ್ಯಾಚಾರ ಗಣಾಚಾರ ಲಿಂಗಾಚಾರಗಳು ನಾಟಿಕೆಯೊಡೆದು ಮೈಯೆಲ್ಲ ಆಚಾರ-ಲಿಂಗ ಹಬ್ಬಿ ಕೊಂಡು, ಕರಸ್ಥಲದ ಲಿಂಗದಲ್ಲಿ ಕಣ್ಣು ಕೀಲಿಸಿ, ಲಿಂಗಭಾವದ ಶ್ರೀಮಂತಿಕೆಯಿಂದ ಭಾವ ಸಂಪನ್ನವಾಗಿದೆ. ಅಂತರಂಗದಲ್ಲಿ ಲಿಂಗದ ಅಪರೋಕ್ಷ ಅನುಭವ ತುಂಬಿ, ಪ್ರಾಣ ಲಿಂಗ ದಲ್ಲಿ ನಟ್ಟು ಅಲ್ಲಿಯೆ ಸಮರಸೈಕ್ಯವಾಗಿ ಪ್ರಾಣಲಿಂಗವಾಗಿ ಪ್ರಾಣಿಸುತ್ತಿದೆ. ಮತ್ತೆ ಜೀವನ ಸಂಸಾರಸಮಾಧಿಯಳಿದು ಜೀವಶಿವೈಕ್ಯ ಜ್ಞಾನಸಮಾಧಿ ತನಗೆ ನಿಜಸಮಾಧಿ ಯಾಗಿ ತನ್ನ ಸಹಜದಿರವಾಗಿ, ಅದು ಇದು ಬೇಕು ಬೇಡ ಎಂಬ ಬಯಕೆ ಎಲೆಗಳೆದ ಮರ ದಂತೆ ಉಲುಹಡಗಿ, ಲಿಂಗದ ಪರಿಣಾಮ, ಲಿಂಗದ ಪರಮಾನಂದವೆ ತನಗೆ ನಿಜ ಸಂತೃಪ್ತಿಯು ಪರಮ ವಿಶ್ರಾಮಸ್ಥಾನವಾಗಿದೆ. ಮನದ ಸದ್ದು ಇಲ್ಲ, ಬಯಕೆಯು

೧. ಶೂ. ಸಂ. ಪು. ೭೯-೮೦, ವ. ೨೭.

ಸಪ್ಪಳಿಲ್ಲ ಈ 'ನಿಜಲಿಂಗಸ್ಥಲ'ದಲ್ಲಿ. ಸರ್ವಾಂಗದ ಪೂರ್ವಾಶ್ರಯ ತಪ್ಪಿ ಲಿಂಗದ ಘನವೆ ಸರ್ವಾಂಗ ಮುಖವಾಗಿ ಸೂಸುತ್ತಿರುವ 'ನಿಮ್ಮ ಘನವ ನಾನೆತ್ತ ಬಲ್ಲೆನು' ಬಸವಣ್ಣಾ? ಇಂಥ ನಿನ್ನರಿವಿನ ಕಣ್ಣಲ್ಲಿ 'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥ.' ಆದೇ ಭಕ್ತಲಿಂಗ, ಜಂಗಮಲಿಂಗ. ಈ ಭಕ್ತಜಂಗಮದಲ್ಲಿ, ಈ ಮನುಷ್ಯ ಚೋಹದ ಸಂಗಮನಾಥ ನಡೆದಾಡುವ ನಿನ್ನ ಪ್ರಾಣಲಿಂಗ. ಮತ್ತೆ ಕಣ್ಣು ಕಾಲಿನ ಮುಖವಾಗಿ ಭಾವ ಬುದ್ಧಿಯ ಮುಖವಾಗಿ ಬಂದು ಬಂದು ನಿಂದಿರುವ ಸುಖಭೋಗ ಪದಾರ್ಥದ ರಾಶಿ ಲಿಂಗಕ್ಕಲ್ಲದೆ ಅಂಗಕ್ಕೆ, ಅಂಗದಾಶೆಗೆ ಸಲ್ಲಲಾಗದೆಂದು ತನು ಮನ ಎಂಜಲಿಸದಂತೆ ಮೀಸಲ ಮುದ್ರೆಯನೊತ್ತಿ, ಲಿಂಗಕ್ಕೆ ಮೀಸಲು ಹಾಕಿದ ಪದಾರ್ಥವನ್ನೆಲ್ಲ ಪ್ರಾಣಲಿಂಗಕ್ಕೆ ಅರ್ಪಿಸಿ ಆ ಲಿಂಗದಿಂದ ಬಂದ ಪ್ರಸಾದವನ್ನಲ್ಲದೆ ಕೊಳ್ಳೆನೆಂಬ 'ಪ್ರಸಾದಲಿಂಗಪ್ರಾಣಿ' ಬಸವಾ ನೀನು. ಈ ಕೊಡುಕೊಳ್ಳುವಿಕೆಯಲ್ಲಿ 'ನೀವು ತೊಲಗಿ ನಿರಾಭಾರಿಯಾಗಿ,' ಅನ್ನಪ್ರಾಣಿ ವಾಯುಪ್ರಾಣಿಯಾಗಿ ಜೀವಿಸುತ್ತಿರುವ ಹಮ್ಮಿನ ಭಾರ ಹೋಗಿ ನಿರಾಭಾರಿಯಾಗಿ ಪ್ರಸಾದಲಿಂಗವೆ ಪ್ರಾಣವಾಗಿ ಪ್ರಾಣಿಸುತ್ತಿರುವಿರಿ ನೀವು. ಮತ್ತೆ ಒಳಹೊರಗೆನ್ನದೆ 'ಸಂಭ್ರಮಿಸಿ ತುಂಬಿರುವ' ಅಖಂಡಿತ ಲಿಂಗಕ್ಕೆ ನಿತ್ಯ ನಿರಂತರ ಆಧಾರವಾಗಿ, ಕಾಲ ದೇಶ ವಸ್ತುವಿಗೆ ಅತೀತವಾಗಿ ಬೆಳಗುವ ಮಹಾಘನಲಿಂಗಕ್ಕೆ ವಾಹನವಾಗಿ, ರೋಮರೋಮದ ಕೊನೆಯಲ್ಲಿ 'ಲಿಂಗಧಾರಣ' ಮಾಡಿಕೊಂಡು 'ಮಹಾಲಿಂಗಪ್ರಾಣಿ'ಯಾಗಿರುವ ಲಿಂಗಭಕ್ತಿಸಾಮರ್ಥ್ಯ ನಿನ್ನ ಹೊರತು ಮತ್ತಾರಿಗೆ ಬಂದೀತು ಬಸವಣ್ಣಾ? 'ನಿಮ್ಮ ಘನವ ನಾನೆತ್ತ ಬಲ್ಲೆನು?' ಯಾರು ಎತ್ತ ಬಲ್ಲರು ಬಸವಣ್ಣಾ?

ಪ್ರಾಣ ಲಿಂಗವಾಗಿ ಲಿಂಗದಿಂದ ಪ್ರಾಣಿಸುವ ತನ್ನ ಪ್ರಾಣಲಿಂಗದ ಅನುಭವವನ್ನು ಚೆನ್ನಬಸವಣ್ಣ ಹೇಳಿ, ಈ ಪ್ರಾಣಲಿಂಗದ ಪ್ರಸಾದವನ್ನು ತನಗೆ ಅನುಗ್ರಹಮಾಡಿದ ಲಿಂಗಪ್ರಾಣಿ ಬಸವಣ್ಣನ ಘನವನ್ನು ತುಂಬಿ ತುಳುಕಿ ಕೊಂಡಾಡಿದ. ಚೆನ್ನಬಸವಣ್ಣನ ಈ ಕೊಂಡಾಟ ಪ್ರಾಣ ಲಿಂಗದಲ್ಲಿ ನಿಕ್ಷೇಪವಾಗುವ ಬಗೆಯನ್ನು ವಿವರಿಸಲು ಬಿನ್ನವಿಸಿಕೊಂಡ ಬಸವಣ್ಣನ ಪ್ರಶ್ನೆಗೆ ಉತ್ತರ ಎಂದು ಸಿದ್ಧವೀರಣ್ಣೊಡೆಯರು ಹೇಳುತ್ತಾರೆ. 'ಇಂತು ಪ್ರಾಣ ಲಿಂಗ ಸಂಬಂಧದ ನಿರ್ಣಯಮಂ ಉಪಾಯದಿ ಸ್ತೋತ್ರಮುಖದಿಂದವೆ ಚಿಕ್ಕದಣ್ಣಾಯಕರು ಹೇಳದ ಹಾಂಗೆ ಹೇಳಿ'[೧] ತೋರಿದರು. ಮರದೊಳಗೆ ಹುದುಗಿ ಮಂದಾಗ್ನಿ, ಎಳ್ಳಿನೊಳಗೆ ಹುದುಗಿ ಎಣ್ಣೆ ಇದ್ದರೆ ಮಥಿಸಿ ತೆಗೆದು ತೋರಿದಲ್ಲದೆ ಅವು ಕಾಣುವುದೆಂತು? ಪ್ರಾಣದ ಮರೆಯಲ್ಲಿ ಹುದುಗಿದ್ದು ಹೊರಗೆ ಪ್ರಕಟವಾಗಿ ತೋರದೆ ಒಳಗೆ ಮಂದಾಗ್ನಿಯಂತೆ ನಿತ್ಯನಿವಾಸವಾಗಿ ಸ್ವಯಂಭು ಪ್ರಾಣಲಿಂಗ ಉರಿಯುತ್ತಿದ್ದರೆ. ಪ್ರಾಣವನ್ನು ಮಥಿಸಿ ಲಿಂಗವನ್ನು ತೆಗೆದು ಅಂತರಂಗದ ಅನುಭವಕ್ಕೆ ಪ್ರತ್ಯಕ್ಷಮಾಡಿ ಕೊಡಬಲ್ಲ ಗರುವ ಬೇಕಲ್ಲವೇ? ಅಂಥ ಗರುವ ಚೆನ್ನಬಸವಣ್ಣ. 'ಜಗದೊಳಗೆ ಕೂಡೆ ಪರಿಪೂರ್ಣ ಶಿವನೆಂಬರೆ. ಅಂತರಂಗದಲ್ಲಿ ಕಾಣಬಹುದೇ?' ಜಗದ ಕಟ್ಟಿಗೆಯನ್ನು, ಜಗವೆಂಬ ಎಳ್ಳನ್ನು ಹಿಂಡಿ 'ಪರಿಪೂರ್ಣ' ಪ್ರಾಣಪರಂಜ್ಯೋತಿಯನ್ನು ತೆಗೆದು ತೋರಿದ ಲಿಂಗಧೀರ ಚಿಕ್ಕದಣ್ಣಾಯಕ. ಮತ್ತೆ 'ನಿಜಪ್ರಾಣದೊಳಗಿಪ್ಪ ಸುಜ್ಞಾನ

೧. ಶೂ. ಸಂ. ಪ್ರ. ೮೦. ಪು. ೨೮.

ಲಿಂಗವ ಕರಸ್ಥಲಕ್ಕೆ ತಂದು, ಆ ಕರಸ್ಥಲದ ಲಿಂಗವೆನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋಱಿ ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಹರಿವ ತೋಱಿಸಿ, ಮರ್ತ್ಯಲೋಕದೊಳಗೆಲ್ಲ ಇಂದು ಮೊದಲಾಗಿ ಪ್ರಾಣಲಿಂಗದ ಘನವ ಹರಹಿ ಶಿವಭಕ್ತಿಯನುದ್ಧರಿಸಿದನು'[೧] ಚಿಕ್ಕದಣ್ಣಾಯಕ. ಸ್ಥಾವರಲಿಂಗದಲ್ಲಿ ಮುಗಿಯುತ್ತಿದ್ದ ಶೈವಭಕ್ತಿ ಕರಸ್ಥಲದ ಇಷ್ಟಲಿಂಗಕ್ಕೆ ಏರಿ ಬಂದು ಅಲ್ಲಿಯೆ ಮುಕ್ತಾಯವಾಗದೆ, ಪ್ರಾಣದ ಮರೆಯ ಮಹಾಂತ ಮರ್ಮಸ್ಥಾನವನ್ನು ಭೇದಿಸಿ, 'ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗ'ವನ್ನು ಕಂಡು, ಸರ್ವಾಂಗದಲ್ಲಿ ಪ್ರಾಣಲಿಂಗ ಪ್ರಜ್ವಲಿಸಿ ಪ್ರತಿಷ್ಠಿತವಾಗಿರುವುದನ್ನು ಅನುಭವದ ಕಣ್ಣಾರೆ ಕಂಡು, ಶಿವಭಕ್ತಿ ಲಿಂಗಪೂಜೆ ಲಿಂಗಾರ್ಪಣ ಪ್ರಸಾದ ನಿಜಲಿಂಗೈಕ್ಯ ಒಂದು ಗಂಟೆ ದಿನ ವರ್ಷದ ಪರಿಮಿತಿಯನ್ನು ದಾಟಿ, ತನ್ನ ನಿಜವಾದ ಲಿಂಗದಲ್ಲಿ ನಿತ್ಯ ಅಗಲದ ಕೂಟದಲ್ಲಿ, ಕೂಡದ ಕೂಟದಲ್ಲಿ ಒಂದಾಗಿರುವ ಹಾದಿಯನ್ನು ಕಂಡು, ಆ ಹಾದಿ ಹಿಡಿದು ನಡೆದ 'ಶಿವಭಕ್ತಿ' ಪ್ರಾಣಲಿಂಗಕ್ಕೆ ಎತ್ತಲ್ಪಟ್ಟಿತು ಚೆನ್ನಬಸವಣ್ಣನಿಂದ. ಅಂತರ್ಲಿಂಗಮಾರ್ಗದ ಗಂಭೀರ ಸಾಹಸಿ ಚೆನ್ನಬಸವಣ್ಣ. ಅಂತೆಯೆ 'ಷಟ್ಸ್ಥಲಧೀರ', 'ಸುಜ್ಞಾನ ಚಕ್ರವರ್ತಿ' ಎಂದು ಕರೆದರು.–'ಸುಜ್ಞಾನಲಿಂಗ'ದ ಘನವನ್ನು ಇಂದು ಮೊದಲುಮಾಡಿ ಮರ್ತ್ಯದಲ್ಲಿ ಹರವಿದ ಚೆನ್ನಬಸವಣ್ಣನನ್ನು, ಶಿವಭಕ್ತಿಯನ್ನು ಉದ್ಧರಿಸಿದ ಸುಜ್ಞಾನಭಾಂಡಾರಿಯನ್ನು.

ಮತ್ತೂ ಒಂದು ತನ್ನ ಸಮಸ್ಯೆಯನ್ನು ಚೆನ್ನಬಸವಣ್ಣನ ಮುಂದಿಡುತ್ತಾನೆ ಬಸವಣ್ಣ :

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಇಲ್ಲದನ್ನಕ್ಕರ?
ಲಿಂಗವ ಪೂಜಿಸಿ ಫಲವೇನಯ್ಯಾ.–
ಕೂಡಲಸಂಗಮದೇವರಲ್ಲಿ ನದಿಯೊಳಗೆ ನದಿ ಬೆರೆಯದನ್ನಕ್ಕರ?[೨]

ಈ ಮಾತಿನಲ್ಲಿ ಹುದುಗಿರುವ ಬಸವಣ್ಣನವರ ಆಶಯವನ್ನು ಸಿದ್ಧವೀರಣ್ಣ ಎತ್ತಿ ತೋರಿಸುತ್ತಾರೆ. 'ನಿಜಸಮಾಧಿಯೊಳು ಬೆರಸುವ ಭೇದ ಎನಗೆಂದು ಸಯವಪ್ಪುದು.'[೩] 'ಲಿಂಗದೊಳು ಒಡವೆರಸಿ ಬೆರಸಿ ಸಮರಸೈಕ್ಯ ಮನಮಗ್ನಯೋಗವೆಂದಾಗುವದು'[೪]– ಎಂಬುದೇ ಬಸವಣ್ಣನ ಪ್ರಶ್ನೆ. ಈ ಪ್ರಶ್ನೆಗೆ ಉತ್ತರಕೊಡಲು ದುಡುಕುವುದಿಲ್ಲ ಚೆನ್ನಬಸವಣ್ಣ. ನದಿಯೊಳಗೆ ನದಿ ಬೆರೆದು, ಆ ನೀರು ಈ ನೀರು ಒಂದು ನೀರಾಗಿ. ಸಮರಸವಾಗಿ ಇರುವಂತೆ, ಹರಿವಂತೆ ಬಸವಣ್ಣನದಿ ಕೂಡಲಸಂಗಮದೇವರುನದಿಯಲ್ಲಿ ಸಮರಸವಾಗಿ ಕೂಡಿ ಒಂದಾಗಿ. ತನುವಿನಲ್ಲಿ ತನು ಒಂದಾಗಿ, ಮನ ಮನ ಪ್ರಾಣ ಪ್ರಾಣ ಒಂದಾಗಿ, ಭಾವ ಭಾವ ಸಮರತಿಯಾಗಿ ಸಮಕಳೆಯಾಗಿ ಸಂಯೋಗವಾಗಿ ಒಂದೆ ರಸಭಾವವಾಗಿ ನಿಂದು ಹರಿವ ನಿಜೈಕ್ಯಭಾವ ಸಮಾಧಿ ತನಗೆ ಎಂದು ಸಾಧ್ಯ. ಹೇಗೆ ಸಾಧ್ಯ ಎಂಬುದೆ ಬಸವಣ್ಣನ ಪ್ರಶ್ನೆ.

---

೧. ಶೂ. ಸಂ. ಪ್ರ. ೮೮, ವ. ೨೮.
೨. ಶೂ. ಸಂ. ಪ್ರ. ೮೧, ವ. ೩೦.
೩. ಅದೇ „ ಪ್ರ. ೩೦.
೪. ಅದೇ „ ಪ್ರ. ೩೧.

ಈ ಪ್ರಶ್ನೆಗೆ ಉತ್ತರ ಚೆನ್ನಬಸವಣ್ಣನಲ್ಲಿ ಇಲ್ಲ. ಏಕೆ ಎಂದು ಕೇಳುವಿರಾ? ನಿಜ ಸಮಾಧಿಯ ಅನುಭವ ತನಗಿಲ್ಲದೆ ಚೆನ್ನಬಸವಣ್ಣ ಉತ್ತರಕೊಡುವುದು ಹೇಗೆ? ಗೊತ್ತಿಲ್ಲದ ಅನುಭವವನ್ನು ಮಂದಿಗೆ ಗೊತ್ತುಮಾಡಿಕೊಡುವನೆಂಬ ಅಪ್ರಾಮಾಣಿಕ ಅಸತ್ಯ, ಮೂರ್ಖ ಜಾಣತನ ಸಾಮಾನ್ಯಕೋಟಿಯ ಸ್ವಭಾವ, ಅಧಿಕಾರ. ಆದರೆ ಸತ್ಯ ನಿಷ್ಠರು ಪ್ರಮಾಣವಂತರು ಈ ಮಾತನ್ನು ಒಪ್ಪಬಹುದೇ? ತನಗೆ ನಿಗದ ಮಾತನ್ನು, 'ನಿಜಸಮಾಧಿ'ಯ ನಿಲವನ್ನು ಅನುಭವಿಸಿ ಬಲ್ಲ ವ್ಯಕ್ತಿ 'ಅನಾದಿ ಗಣನಾಥ ಅಲ್ಲಮ ಪ್ರಭುದೇವರು.'[೧] ಚೆನ್ನಬಸವಣ್ಣನ 'ಸುಜ್ಞಾನದೃಷ್ಟಿ'ಯಲ್ಲಿ ನಿಜಸಮಾಧಿಯ ನಿಲವೇ ಜಂಗಮ, 'ಲಿಂಗದ ಪರಮಕಳಾಚೈತನ್ಯವೆ ಜಂಗಮ.'[೧] ಈ ಮೊದಲು ಚೆನ್ನಬಸವಣ್ಣ ತಿಳಿಸಿರುವಂತೆ 'ಜಂಗಮಲಿಂಗಪ್ರಾಣಿಯಾಗಿಪ್ಪಿರಿ ನೀವು', ಅಂಪರೆ ಬಸವಣ್ಣ. 'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದಲ್ಲಿ, ಪರವಾದಿ ಬಿಜ್ಜಳನು ಒರೆದು ನೋಡಲೆಂದಟ್ಟಿದರೆ,' ಅಟ್ಟಿದ ಹಗರಣಿಗರನ್ನು, ಕಪಟವೇಷದ ಜಂಗಮರನ್ನು ಭಾವ ಪರುಷದ ಹಸ್ತಸೋಂಕಿ ಅವರ ಕಾಪಟ್ಯವನ್ನು ಕಳೆದು ನಿಜಜಂಗಮವನ್ನಾಗಿ ಮಾಡಿದ ಬಸವಣ್ಣ. ಮತ್ತೆ ಈ ಜಂಗಮ ಲಿಂಗಪ್ರಾಣಿ ಜಂಗಮಾಕಾರದ 'ಮರದ ಮಾನಿಸ'ನನ್ನು 'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥ'ನೆಂಬ ನಿಶ್ಚಲ ನಿಷ್ಠೆಯಿಂದ' ಸಂಗಮ ನಾಥಾ' ಎಂದು ನಂಬಿ ನಚ್ಚಿ ಕರೆದರೆ ಮರದಲ್ಲಿಯೆ ಒಡಮೂಡಿ 'ಓ' ಎಂದ ಸಂಗಮ ನಾಥ. ಹೀಗೆ 'ಓ ಎನಿಸಿ ನುಡಿಸಿ ಉಡಿಸಿ ಉಣಿಸಿ'ದರೆ 'ಜಂಗಮಲಿಂಗಪ್ರಾಣಿ ಸಂಗನ ಬಸವಣ್ಣ' ಎಂದು ಧ್ವಜಪತ್ರಿ ಮೆರೆಯಿತು ಕಲ್ಯಾಣಪಟ್ಟಣದಲ್ಲಿ. ಇಂಥ ಜಂಗಮ ಪ್ರಾಣಿಯಾಗಿರುವ ಭಕ್ತಕಾಯವನ್ನೆ ಹುಡುಕಿಕೊಂಡು ಲಿಂಗಪ್ರಾಣ, 'ಲಿಂಗದ ಪರಮ ಕಳಾಚೈತನ್ಯ' ಅಲ್ಲಮಪ್ರಭು ಕಲ್ಯಾಣಕ್ಕೆ ಬರುತ್ತಿದ್ದಾನೆ.[೨] ಆತನೆ ಬಲ್ಲ 'ನದಿಯೊಳಗೆ ನದಿ ಬೆರೆ'ವ ಪರಮ ರಹಸ್ಯವನ್ನು.

'ಲಿಂಗಾರ್ಚನೆಯ ಮಾಡುವೆನಯ್ಯಾ, ಜಂಗಮವೆನ್ನ ಮಠಕ್ಕೆ ಬರಬೇಕೆಂದು,'[೩] ಎಂದಿರುವ ಬಸವಣ್ಣನಿಗೆ ಅಲ್ಲಮ ಪ್ರಭುದೇವರ ಬರವಿನ ಸುದ್ದಿ ಯಾವ ಜಂಗಮಾನಂದ ವನ್ನು ತಂದಿರಬಹುದು! ಇದೋ ಕೇಳಿ ಬಸವಣ್ಣನ ಆನಂದ 'ಮುತ್ತಿನ ಹಾರ'ವನ್ನು ಹಾಡುತ್ತಿದೆ:

> ಜಂಗಮವೆ ಲಿಂಗವೆಂಬ ಭಾವ ಫಲಿಸಿದರೆ
> ಇಂದಿನ ಪುಣ್ಯಕ್ಕೆ ಸರಿಯುಂಟೆ?
> ಲಿಂಗದ ಒಡಲ ಮನೆಯ ಮಾಡಿಪ್ಪ ಜಂಗಮವೆನ್ನ ಕಣ್ಣ ಮುಂದೆ ತೋಜಿದರೆ,
> ಇಂದೆನ್ನ ಭಾಗ್ಯಕ್ಕೆ ಕಡೆ ಇಲ್ಲ.

---

೧. ಶೂ. ಸಂ. ಪು. ೮೧, ಪ್ರ. ೩೧.

೨. ಅಲ್ಲಮಪ್ರಭುದೇವರು ಸೊನ್ನಲಾಪುರದ ಸಿದ್ಧರಾಮಯ್ಯನಲ್ಲಿಗೆ ಬಂದಿರುವುದನ್ನು. ಅಲ್ಲಿಂದ ಅವರು ಕಲ್ಯಾಣಕ್ಕೆ ಹೊರಟು ಬರುತ್ತಿರುವುದನ್ನು ಮತ್ತು ಪ್ರಭುದೇವರ ನಿಜಾನುಭಾವ ಸಾಮರ್ಥ್ಯವನ್ನು ಚೆನ್ನಬಸವಣ್ಣ ಅರಿತುಕೊಂಡಿದ್ದನೆಂದು ಸ್ಪಷ್ಟವಾಗಿ ತೋರುತ್ತದೆ.

ಆ ಜಂಗಮವೆ ದಿಟಕ್ಕೆನ್ನ ಮನೆಗೆ ಬಂದರೆ,
ಕೂಡಲಸಂಗಮದೇವರಲ್ಲಿ ಸಲುಗೆಯ ವರವ ಹಡೆವೆನು ಕಾಣಾ
ಚೆನ್ನಬಸವಣ್ಣಾ, ನೀನಹುದೆನಲು.[೧]

೧. ಶೂ. ಸಂ. ಪು. ೮೨, ವ. ೩೨.

೧೩

'ಮಹಾಮನೆ'

ಕರ್ಮವಿಲ್ಲದ ಕಾಯ, ಕರಣವಿಲ್ಲದ ಪ್ರಾಣ,
ಮಥನವಿಲ್ಲದ ಶಬ್ದ, ಗಮನವಿಲ್ಲದ ಮನ,
ಗುಹೇಶ್ವರ, ನಿಮ್ಮ ಬರವು ಸಂಗನ ಬಸವಣ್ಣನ ಮೆಚ್ಚು ನೋಡಾ.[೧]

ಅಲ್ಲಮಪ್ರಭುದೇವರು.

ಬಸವರಾಜನ ಚಾರು ಚರಿತೆಯ ।
ಬಿಸಿಲಿಗಖಿಲರ ಮನದ ಭಕ್ತಿಯ ।
ಬಿಸರುಹಂಗಳು ವಿಕಸಿತವನೈದಿರಲು ತಾನಜಿಿದು ॥
ವಸುಮತಿಗೆ ಕಲಿಕಾಲದೊಳಗಿದು ।
ಪೊಸತಲಾ ಎಂದೆನುತ ಸಂತೋ ।
ಷಿಸುತಲಿರ್ದನು ಗುರು ಗುಹೇಶ್ವರಲಿಂಗ ಲೀಲೆಯಲಿ[೩] ॥

ಚಾಮರಸ.

ಕಲ್ಯಾಣವೆಂಬ ಪ್ರಣಿತೆಯಲ್ಲಿ ಭಕ್ತಿರಸವೆಂಬ ತೈಲವನೆಱೆದು,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನ ಪ್ರತಾಪ !
ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತನಿರ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ?
ಶಿವಭಕ್ತನಿರ್ದ ದೇಶ ಪಾವನವೆಂಬುದು ಹುಸಿಯೆ?
ಗೊಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯರು
ಸಂಗನ ಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯಾ ![೨]

ಅಲ್ಲಮಪ್ರಭುದೇವರು.

ಬಸವಣ್ಣನ ಕಲ್ಯಾಣಕ್ಕೆ ಅಭಿಮುಖವಾಗಿ ಬಸವಣ್ಣನನ್ನು ಕೊಂಡು ಕೊಸೆಯೇರಿ, ನನೆಕೊನೆವೋಗಿ ಪರಮಾನಂದದೊಳಗೋಲಾಡುತ್ತ ಕಲ್ಯಾಣದ ಹಾದಿಯಲ್ಲಿ ಹಾಡುತ್ತ ನಡೆದಿರುವ ಅಲ್ಲಮಪ್ರಭು ಸಿದ್ಧರಾಮರನ್ನು ಹಾದಿಯಲ್ಲಿಯೆ ಬಿಟ್ಟು ನಾವು ಕಲ್ಯಾಣಕ್ಕೆ ಬರಬೇಕಾಯಿತು, ಬಂದೆವು. ಬಂದು 'ಬಸವೇಶ ಚೆನ್ನಬಸವೇಶಂಗನುಗ್ರಹ ಮಾಡಿದ' ಪ್ರಸಂಗವನ್ನು ನೋಡಿದೆವು. ಸಿದ್ಧವೀರಣ್ಣ ಸೂಚಿಸುವಂತೆ ಮತ್ತೆ ನಾವು ಪ್ರಭು

---

೧. ಪ್ರ. ಲಿಂ. ಲೀ. ಗ. ೧೪, ವ. ೫. (ಇದೇ ವಚನ ಶೂ. ಸಂ. ಪು. ೮೭, ವ. ೩೭ನೆಯದು. ಪ್ರಭುಲಿಂಗ ಲೀಲೆಯ ಪಾಠಾಂತರ ಹೋಲಿಸಿ ನೋಡಿ.)

೨. ಅದೇ „ „ ಪ. ೨.

೩. ಶೂ. ಸಂ. ಪು. ೮೨, ವ. ೩೩. [ಇದೇ ವಚನ ಪ್ರಭುಲಿಂಗಲೀಲೆಯ ೧೫ನೆಯ ಗತಿಯ ಪ್ರಾರಂಭ ದಲ್ಲಿ (ಪು. ೧೭೧, ವ. ೧) ಬಂದಿದೆ. ಹೋಲಿಸಿ ನೋಡಿ.]

ಸಿದ್ಧರನ್ನು ಕೂಡಿಕೊಂಡು ಕಲ್ಯಾಣಕ್ಕೆ ಬರಬೇಕು. ಸಿದ್ಧವೀರಣ್ಣನ ಸೂಚನೆಗಳೆಲ್ಲ ನಿಮಗೆ ಮಾನ್ಯ ಎಂದು ನನ್ನ ತಿಳಿವಳಿಕೆ. ಪ್ರಭುದೇವರ ಶೂನ್ಯಸಂಪಾದನೆ ತಿಳಿಯಬೇಕಾಗಿದ್ದರೆ, ಕಾಣಬೇಕಿದ್ದರೆ, ನಮ್ಮ ನಮ್ಮ ಶಕ್ತಿಯ ಮಟ್ಟದಲ್ಲಿ ಅನುಭವಕ್ಕೆ ಬರಬೇಕೆಂದಿದ್ದರೆ ಸಿದ್ಧ ವೀರಣ್ಣ ಒಯ್ದತ್ತ ನಾವು ಸಾಗಲೆಬೇಕು. ವೀರಣ್ಣನ ಹಿಂದೆ ಹಿಂದೆ ನಡೆಯೋಣವೇ?

ಹಿರಿಯದಣ್ಣಾಯಕ ಚಿಕ್ಕದಣ್ಣಾಯಕರು 'ಮಹಾನುಭಾವಗೋಷ್ಠಿಯೊಳಗೋಲಾಡುತ್ತ' ಪ್ರಭುದೇವರ ಬರವನ್ನು ಹಾರೈಸಿಕೊಂಡಿದ್ದಾರೆ,–ಲಗ್ನ ಶುಭವನ್ನು ಹಾರೈಸಿಕೊಂಡಿರುವಂತೆ ಕಲ್ಯಾಣಕ್ಕೆ ಪ್ರಭುದೇವರ ಶುಭಾಗಮನವನ್ನು. ಇದೋ ಇಲ್ಲಿ ನೋಡಿ ಚಿತ್ತರಿಸುತ್ತಿದ್ದಾನೆ ಸಿದ್ಧವೀರಣ್ಣ :

> '...ಇತ್ತ ನಿಷ್ಕಲ ಪರಶಿವ ತತ್ತ್ವದ ಕಾರಣಾವತಾರವಾದ ಪ್ರಭುದೇವರು ಸಿದ್ಧರಾಮಯ್ಯದೇವರು ಸೊನ್ನಲಿಗೆಯ ಪುರಮಂ ಪೊಱಮಟ್ಟು, ಅನಂತ ದೇಶಂಗಳೊಳು ದೇಶಾಂತರಮಂ ಮಾಡುತ್ತ ಹಲಕೆಲವು ದಿವಸಂಗಳಂ ಕಳೆವುತ್ತ ಬಂದು, ಮರ್ತ್ಯಲೋಕದ ಸಕಲೈಶ್ವರ್ಯದ ಭಂಡಾರದ ನಿಜನಿಳಯವೆನಿಪ್ಪ, ಮತ್ತಂ: ಭೂಮಿಗೆ ಹೃತ್ಕಮಲ ಕರ್ಣಿಕಾವಾಸಮೆನಲೊಪ್ಪುವ, ವಾಣಿಯ ಮುಖದರ್ಪಣವೆನಿಸಿರ್ಪ, ಸಕಲ ಧರ್ಮಂಗಳಂ ತೀವುವ ಕರಂಡಗೆಯೆನಿಸಿಪ್ಪ ಸತ್ಯದ ಸಾಗರ, ಭಕ್ತಿಯ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವ ಕೈಲಾಸವೆನಿಪ್ಪ ಶ್ರೀಕಲ್ಯಾಣಪುರಮಂ ಕಂಡು ಪೊಕ್ಕು, ಇಲ್ಲಿ ಬಸವರಾಜದೇವರು ಮೂರ್ತಿಗೊಂಡು ಇರುತಿರ್ಪರೆಂದು ಅಱಿದು, ಆ ಪುರಕ್ಕೆ ವಂದನೆಯಂ ಮಾಡಿ ಸ್ತುತಿಸುತ್ತ, ಆ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಆ ಕಲ್ಯಾಣಪುರಮಂ ತೋಱಿಸಿ'[೧] ಕೊಂಡಾಡುತ್ತಿದ್ದಾರೆ. ಈ ಪ್ರಸ್ತಾವ ನಡೆದಿದೆ.

ಬಸವಣ್ಣನ ಕಲ್ಯಾಣವನ್ನು ಕಂಡಾಗ ಪ್ರಭುದೇವನ ಹೃದಯದಿಂದ ಉಕ್ಕಿದ ಪವಿತ್ರಭಾವದ ಬಣ್ಣದಲ್ಲಿ ತೀಡಿದ ರಸಚಿತ್ರ, ಅದು ಇದು ಎನ್ನದೆ ಎಲ್ಲರ ಹೃದಯಕ್ಕೆ ಮಹಾಮಂಗಲದ ಮಳೆಯನ್ನು ಕರೆವಂತಿದೆ. ಮತ್ತೆ ಈ ಹೃದ್ರಸಚಿತ್ರದ ವ್ಯಾಪ್ತಿ ಭವ್ಯತೆಯ ಸೀಮೆಯಲ್ಲಿ ಹಬ್ಬಿಕೊಂಡು ಯಾವ ಕಾವ್ಯದ ಕಲ್ಪನೆಯನ್ನೂ ಹಿಂದುಳಿಸಿ ಮುಂಚಿನ ಸೀಮೆಯಲ್ಲಿ ಬಿಟ್ಟು, ತೊಳಗಿ ಬೆಳಗುವ 'ಶಿವನ ಪ್ರತಾಪ'ದ ಅಥವಾ 'ಶಿವನ ಪ್ರಕಾಶ'ದ ಶಾಶ್ವತ ಸತ್ಯಸೀಮೆಯಲ್ಲಿ ಮುಂದುವರಿಯುತ್ತದೆ. ಈ ಶಕ್ತಿ ಅದರಲ್ಲಿ ಬರಲು ಕಾರಣವೆಂದರೆ, ಅದು ಅನುಭವದ ಬೆಳಗುನಾಡಿಯಲ್ಲಿ ಹರಿದು ಬರುತ್ತದೆ. ಕಲ್ಯಾಣ ಪಟ್ಟಣ ಒಂದು ಪಣತಿಯಂತೆ ತೋರುತ್ತಿದೆ ಪ್ರಭುವಿನ ಕಣ್ಣಲ್ಲಿ. ಭಕ್ತಿಯ ರಸ, ಹಿಂದೆ ನಾವು ನೋಡಿದ, ಉದ್ಧರಿಸಲ್ಪಟ್ಟ ಶಿವಭಕ್ತಿಯೆ ಈ ಪಣತಿಯಲ್ಲಿ ಹಾಕಿದ ಎಣ್ಣೆ. ಇನ್ನು ಇಂಥ ಪಣತಿಗೆ ಬತ್ತಿ ಎಂಥದು? ಆಚಾರವೆ ಇದಕ್ಕೆ ಬತ್ತಿ. ಶರಣ ಹೊಸೆದ ಶಿವಾಚಾರದ ಬತ್ತಿ ಇದ್ದರೇನು? ದೀವಿಗೆ ಮುಡಿಸಲು ಎಲ್ಲಿದೆ ಬೆಳಗು? ಅದೋ ಕಲ್ಯಾಣದ ಬಸವಣ್ಣನೆ ಆ ಜ್ಯೋತಿ. ಕಲ್ಯಾಣದ ಹಣತಿಯಲ್ಲಿ ಬಸವಣ್ಣ ದೀಪ್ತಿಯಾಗಿ ಉರಿದರೆ 'ತೊಳಗಿ ಬೆಳಗುತ್ತಿರ್ದುದಯ್ಯಾ ಶಿವನ ಪ್ರತಾಪ!' ಈ ಶಿವನ ಬೆಳಗಿನಲ್ಲಿ ಉಂಡು

೧. ಶೂ. ಸಂ. ಪು. ೮೩, ಪ್ರ. ೩೩.

ಉಟ್ಟು ಕೊಂಡು ಕೊಟ್ಟು ಬಾಳಿ ಬದುಕಿ ಬೆಳಗಾಗಿ ಇದ್ದರು ಅಸಂಖ್ಯಾತ ಭಕ್ತಗಣಂಗಳು. ಜೀವನ ಕತ್ತಲೆಯನ್ನು ದಾಟಿಸಿ ಶಿವಬೆಳಗಿನ ಸೀಮೆಗೆ ಕರೆದೊಯ್ದು ಮಾನವಕೋಟಿಯನ್ನು 'ಅಸಂಖ್ಯಾತ' ಭಕ್ತಕೋಟಿಗೆ ಪರಿವರ್ತಿಸಿದ ಬೆಳಗು ಬಸವಣ್ಣ ವಾಸಮಾಡಿಕೊಂಡಿದ್ದ ಕಲ್ಯಾಣಕ್ಷೇತ್ರ, ಅರುವತ್ತೆಂಟು ಪುಣ್ಯಕ್ಷೇತ್ರಗಳಲ್ಲಿ ಪರಮಪುಣ್ಯಕ್ಷೇತ್ರವೆನಿಸಿದ ಅವಿಮುಕ್ತ ಕ್ಷೇತ್ರ. ಅದು ಪರಮ ಪಾವನ, ಪವಿತ್ರ. ಬಸವಣ್ಣನಿಗೆ ವಂದಿಸುವ ಮೊದಲು ಕಲ್ಯಾಣಕ್ಕೆ ತಲೆಬಾಗುತ್ತಾನೆ ಪ್ರಭು. ಅಲ್ಲಮನ ತಲೆಗೇರಿ ತಲೆಬಾಗುವಂತೆ ಮಾಡುವ 'ಪಾವನಮಯ' ಕಲ್ಯಾಣದಲ್ಲಿ ತುಂಬಿ ತುಳುಕುತ್ತಿದೆ. ಬಂದ ಸುಗ್ಗಿಯಲ್ಲಿ ಇಮ್ಮಾವಿನ ಚಿಗುರೆಲೆಯನ್ನು ತಿಂದ ಕೋಗಿಲೆಯ ಸಾಲಗೆಯಂತೆ ಕೊನರೇರಿ'...... ಗೊಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯರು ಸಂಗನ ಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯಾ!'—ಎಂದು ಹಾಡಿ ತೋರಿಸಿ ಆನಂದದ ಹೊರೆಯನ್ನು ಇಳುಹಿಕೊಳ್ಳುತ್ತದೆ. ಗೊಹೇಶ್ವರಲಿಂಗದಲ್ಲಿ ವಾಸಮಾಡಿಕೊಂಡಿರುವ ಎನ್ನ ಪರಮಗುರು, ಪರಮಾರಾಧ್ಯ ಸಂಗನಬಸವಣ್ಣ ಸಿದ್ಧರಾಮಯ್ಯಾ! ಹೀಗೆ ಭಕ್ತಿಯನ್ನು ಕಂಡು ಆನಂದವೇರಿ ವಂದಿಸುವ ಜಂಗಮ ಲಿಂಗಜಂಗಮ.

ಇಲ್ಲಿ ಸಿದ್ಧವೀರಣ್ಣ ಮುಂದೆ ಬಂದು, ಕಲ್ಯಾಣಪಟ್ಟಣದ ಮಹಾದ್ವಾರದ ಮುಂದೆ ಕಲ್ಯಾಣದ ಮಹಾತ್ಮೆಯನ್ನು ಕುರಿತು ಚೆನ್ನಬಸವಣ್ಣ ಬರೆದ ಶಾಸನವನ್ನು ತೋರಿಸುತ್ತಾನೆ. ಅಲ್ಲಮಪ್ರಭು ಆ ಶಾಸನವನ್ನು ಓದಿ ಕಲ್ಯಾಣದ ಅಂತರಂಗ ಬಹಿರಂಗದ ಮಹಾತ್ಮೆಯ ವಿವರಗಳನ್ನು ಕಾಣುತ್ತಾನೆ. ಈ ಶಾಸನದ ಕೆಲವು ಅಂಶಗಳನ್ನು ನೋಡಿ:

> ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತ ಶ್ರೀಮತ್ ಕಲ್ಯಾಣಪುರದ ಮಹಾತ್ಮೆ ಎಂತೆಂದೊಡೆ ವಿಸ್ತರಿಸಿ ಪೇಳುವೆನು. ಎಲ್ಲಾ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ. ಹದಿನಾಲ್ಕು ಭುವನಕ್ಕೆ ಕಳಶವೆಂದೆನಿಸುವ ರುದ್ರಲೋಕವೆ ಮರ್ತ್ಯಲೋಕಕ್ಕಿಳಿತಂದು ಕಲ್ಯಾಣವೆಂಬ ಪುರವಾಗಿ ಹುಟ್ಟಿತ್ತು ನೋಡಿರಯ್ಯಾ. ಅಲ್ಲಿ ಸತ್ಯರು, ಸಾತ್ವಿಕರು, ನಿತ್ಯರು, ನಿಜೈಕ್ಯರು, ಮಹಾಜ್ಞಾನಿಗಳು, ಪರಮ ಶಿವಯೋಗಿಗಳು, ಶಿವಾನುಭಾವಸಂಪನ್ನರು, ಶಿವಲಿಂಗಪ್ರಾಣಿಗಳು, ಶಿವಪ್ರಸಾದ ಪಾದೋದಕ ಸಂಬಂಧಿಗಳು, ಶಿವಾಚಾರವೇದ್ಯರು, ಶಿವಾಗಮಸಾಧ್ಯರು. ಶಿವಸಮಯಪಕ್ಷರುಗಳಲ್ಲದೆ ಮತ್ತಾರು ಅಲ್ಲಿಲ್ಲ ನೋಡಿರಯ್ಯಾ......ಆ ಮಹಾ ಕಲ್ಯಾಣದ ವಿಸ್ತೀರ್ಣ ತಾನೆಂತೆಂದಡೆ, ಹನ್ನೆರಡು ಯೋಜನ ಪರಿಪ್ರಮಾಣವಗಲ ವಿಸ್ತೀರ್ಣ ಪಟ್ಟಣಕ್ಕೆ ಮುನ್ನೂಱಱುವತ್ತು ಬಾಗಿಲವಾಡ......ಆ ಪಟ್ಟಣಕ್ಕೆ ಬಳಸಿಬಂದ ಕೋಟೆ ನಾಲ್ವತ್ತೆಂಟು ಯೋಜನ ಪರಿಪ್ರಮಾಣು......ಬಾಹತ್ತರ ಮನೆ ಲಕ್ಷ. ಮಂಡಲಿಕರ ಮನೆ ಲಕ್ಷ......ಆ ಪಟ್ಟಣದೊಳಗೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಶಿವಾಲಯ. ಆ ಶಿವಾಲಯಂಗಳಿಗೆ ಮುಖ್ಯವಾದ ತ್ರಿಪುರಾಂತಕ ದೇವರ ಶಿವಾಲಯ. ಮುನ್ನೂಱಱುವತ್ತು ಪದ್ಮಪತ್ರ ತೀವಿದ ಸರೋವರಂಗಳು. ಎರಡು ಲಕ್ಷದ ಎಂಬತ್ತೆಂಟು ಸಾವಿರದ ವಿಳುನೂಱಿಪ್ಪತ್ತು ದಾಸೋಹದ ಮಠಂಗಳು. ಆ ದಾಸೋಹದ ಮಠಂಗಳಿಗೆ ಮುಖ್ಯವಾದ ಬಸವ

ರಾಜದೇವರ ಮಠದ ವಿಸ್ತೀರ್ಣವೆಂತೆಂದಡೆ: ಯೋಜನವರೆಯ ಬಿನ್ನಾಣದ ಕುಸುರಿ ಗೆಲಸದ ಪೌಳಿ. ಅತಿ ಸೂಕ್ಷ್ಮದ ಕುಸುರಿಗೆಲಸದ ದ್ವಾರವಟ್ಟವೈದು. ಅವಕ್ಕೆಪಂಚಾಕ್ಷರಿಯ ಶಾಸನ. ಮಿಸುನಿಯ ಕಂಭದ ತೋರಣಂಗಳಲ್ಲಿ ರುದ್ರಾಕ್ಷಿಯ ಸೂಸಕ ಆ ಬಾಗಿಲುವಾಡದಲ್ಲಿ ಒಪ್ಪುತ್ತಿರ್ಪವಯ್ಯಾ! ನಂದಿಯ ಕಂಭದ ಧ್ವಜ, ಉಪ್ಪರ ಗುಡಿಪತಾಕೆ ವ್ಯಾಸಧ್ವಜ ಒಪ್ಪುತ್ತಿರ್ಪವಯ್ಯಾ! ಆ ಮಧ್ಯದಲ್ಲಿ ಬಸವರಾಜದೇವರ ಸಿಂಹಾಸನ ವಿಸ್ತೀರ್ಣದ ಪ್ರಮಾಣು: ಸಹಸ್ರಕಂಭದ ಸುವರ್ಣದುಪ್ಪರಿಗೆ. ಆ ಮನೆಗೆತ್ತಿದ ಹೊನ್ನ ಕಳಶ ಸಾವಿರ. ಗುರು ಲಿಂಗ ಜಂಗಮಕ್ಕೆ ಪಾದಾರ್ಚನೆಯ ಮಾಡುವ ಹೊಕ್ಕರಣೆ ನಾಲ್ಕು ಪುರುಷಪ್ರಮಾಣದ ಘಾತ......ಇನ್ನು ಬಸವರಾಜದೇವರು ಮುಖ್ಯವಾದ ಅಸಂಖ್ಯಾತರ ಮಠಂಗಳು ಆ ಕಲ್ಯಾಣದೊಳಗೆ ಎಷ್ಟು ಎಂದರೆ, ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು. ಇಪ್ಪತ್ತೆಂಟು ಸಾವಿರ ಮಹಾಮನೆಗಳು. ಹತ್ತುಸಾವಿರ ನಿತ್ಯನೇಮಿಗಳ ಮಠಂಗಳು ಹದಿನೈದು ಸಾವಿರ ಚಿಲಮೆಯಗ್ಗವಣಿಯ ವ್ರತಸ್ಥರ ಮಠಂಗಳು......ವೀರವ್ರತ ನೇಮಿಗಳ,......ಅಚ್ಚಪ್ರಸಾದಿಗಳ,......ಶೀಲಸಂಪನ್ನರ ಮಠಂಗಳು. ಒಂದು ಸಾವಿರ ಜಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹಿಗಳ ಮಠಂಗಳು ಮೂವತ್ತೆರಡು ಸಾವಿರ. ನಿತ್ಯ ಐನೂಱು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ಸತ್ಯ ಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ. ನಿತ್ಯ ಅವಾರಿಯಿಂದ ಮಾಡುವ ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ. ಜಂಗಮ ಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ ಜಂಗಮ ಭಕ್ತರ ಮಠ ಎರಡು ಸಾವಿರದ ಏಳುನೂಱೆಪ್ಪತ್ತು. ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂಱೆಪ್ಪತ್ತು ಅಸಂಖ್ಯಾತರಿಗೆ ಮುಖ್ಯವಾಗಿ ರುದ್ರಲೋಕ ದಿಂದಿಳಿತಂದ ಪ್ರಮಥಗಣಂಗಳ ಮಠಂಗಳು ಏಳುನೂಱೆಪ್ಪತ್ತು. ಇಂತೀ ಮಹಾಪ್ರಮಥರಿಗೆ, ಪುರಾತರಿಗೆ, ಅಸಂಖ್ಯಾತ ಮಹಾಗಣಂಗಳಿಗೆ ಪ್ರಮಥ ನಾಯಕನಾಗಿ ಏಕಮುಖ, ದಶಮುಖ, ಶತಮುಖ, ಸಹಸ್ರಮುಖ, ಲಕ್ಷಮುಖ, ಕೋಟಿಮುಖ, ಅನಂತ ಕೋಟಿಮುಖವಾಗಿ ಭಕ್ತರಿಗೆ ಒಡನಾಡಿಯಾಗಿಪ್ಪನು ಸಂಗನ ಬಸವಣ್ಣನು. ಜಗದಾರಾಧ್ಯ ಬಸವಣ್ಣ. ಪ್ರಮಥಗುರು ಬಸವಣ್ಣ. ಶರಣ ಸನ್ನಹಿತ ಬಸವಣ್ಣ. ಸತ್ಯಸಾತ್ವಿಕ ಬಸವಣ್ಣ. ನಿತ್ಯ ನಿಜೈಕ್ಯ ಬಸವಣ್ಣ. ಷಡುಸ್ಥಲಸಂಪನ್ನ ಬಸವಣ್ಣ. ಸರ್ವಾಚಾರಸಂಪನ್ನ ಬಸವಣ್ಣ. ಸರ್ವಾಂಗ ಲಿಂಗಿ ಬಸವಣ್ಣ. ಸುಜ್ಞಾನಭರಿತ ಬಸವಣ್ಣ. ನಿತ್ಯಪ್ರಸಾದಿ ಬಸವಣ್ಣ. ಸಚ್ಚಿದಾನಂದಮೂರ್ತಿ ಬಸವಣ್ಣ. ಸದ್ಯೋನ್ಮುಕ್ತಿರೂಪ ಬಸವಣ್ಣ. ಅಖಂಡ ಪರಿಪೂರ್ಣ ಬಸವಣ್ಣ. ಅಕಾಯಚಾರಿತ್ರ ಬಸವಣ್ಣ. ಅಸಾಧ್ಯ ಸಾಧಕ ಬಸವಣ್ಣ. ಅಭೇದ್ಯ ಭೇದಕ ಬಸವಣ್ಣ. ಅನಾಮಯ ಮೂರ್ತಿ ಬಸವಣ್ಣ. ಮಹಾಮನೆಯ ಮಾಡಿದಾತ ಬಸವಣ್ಣ. ರುದ್ರಲೋಕವ ಮರ್ತ್ಯಲೋಕಕ್ಕೆ ತಂದಾತ ಬಸವಣ್ಣ. ಶಿವಾಚಾರದ ಘನವ ಮೆಱೆದಾತ ಬಸವಣ್ಣ. ಇಂತಹ ಬಸವಣ್ಣನ ಭಕ್ತಿಯನು

ಒರೆದೊರೆದು ನೋಡಿ ಪ್ರಬಲಿತವ ಮಾಡುವ ಅಶ್ವಪತಿ ಗಜಪತಿ ನರಪತಿರಾಯ ರಾಜಾಧಿರಾಜ ಬಿಜ್ಜಳರಾಯನೂ ಆ ಬಸವಣ್ಣನೂ ಕಲ್ಯಾಣಪಟ್ಟಣದೊಳಗೆ ಸುಖ ಸಂಕಥಾವಿನೋದದಿಂದ ರಾಜ್ಯಂಗೈವುತ್ತಿರಲು, ಆ ಕಲ್ಯಾಣದ ನಾಮವಿಡಿದು ವಿವಾಹಕ್ಕೆ ಕಲ್ಯಾಣವೆಂಬ ನಾಮ ಪ್ರಸಿದ್ಧವಾಯಿತ್ತು. ಲೋಕದೊಳಗೆ ಕಲ್ಯಾಣವೆ ಕೈಲಾಸವೆನಿಸಿತ್ತು. ಇಂತಪ್ಪ ಕಲ್ಯಾಣವ ದರುಶನವ ಮಾಡಿದರೆ ಭವಂ ನಾಸ್ತಿ. ಇಂತಪ್ಪ ಕಲ್ಯಾಣವ ನೆನೆದರೆ ಪಾಪಕ್ಷಯ. ಇಂತಪ್ಪ ಕಲ್ಯಾಣದ ಮಹಾತ್ಮೆಯ ಕೇಳಿದರೆ ಕರ್ಮಕ್ಷಯವಹುದು, ಮೋಕ್ಷ ಸಾಧ್ಯವಹುದು. ಇದು ಕಾರಣ ಕೂಡಲಚೆನ್ನಸಂಗಮದೇವಾ, ನಿಮ್ಮ ಭಕ್ತ ಬಸವಣ್ಣನಿದ್ದ ಠಾವೆ ಮಹಾಕಲ್ಯಾಣವೆಂದರಿದು ದಿವ್ಯಶಾಸನವ ಬರೆದು ಪಠಿಸಿದ ಕಾರಣ ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ![೧]

ಶಾಸನದ ಕೊನೆಯಲ್ಲಿರುವ ಅಂಕಿತ ಈ ಶಾಸನ ಚೆನ್ನಬಸವಣ್ಣ ಬರೆದುದೆಂದು ಹೇಳುತ್ತದೆ. ಈ ಮಾತನ್ನು ನಂಬಬಹುದೇ ಎಂಬುದು ನಮ್ಮ ಸಂದೇಹ. ಅದನ್ನು ನಂಬಿದರೂ ಶಾಸನದ ಸಂಗತಿಗಳನ್ನೆಲ್ಲ ನಂಬುವುದು ಕಠಕಷ್ಟ. ಏಕೆಂದರೆ (೧) 'ಸಕಲ ಧರ್ಮಂಗಳಂ ತೀವುವ ಕರಂಡಗೆಯೆನಿಪ್ಪ'[೨] ಎಂದು ಸಿದ್ಧವೀರಣ್ಣ ತಿಳಿಸುವ ಕಲ್ಯಾಣ ಈ ಶಾಸನದಲ್ಲಿ ಶಿವಾಚಾರ ಶಿವಭಕ್ತಿ ಶಿವಧರ್ಮದ ಏಕೈಕ ರಸಾಬ್ಧಿಯಲ್ಲಿ ಮುಳುಗಿದಂತಿದೆ. (೨) ಶಾಸನ ಹೇಳುವ ಕಲ್ಯಾಣ ಕೋಟೆ ಕೊತ್ತಳ ಶಿವಾಲಯ ತ್ರಿಪುರಾಂತಕ ದೇವಾಲಯ ಮಠ ಮಹಾಮನೆ ವ್ರತಸ್ಥರು ದಾಸೋಹಿಗಳು ನಿತ್ಯನೇಮಿಗಳು ಶೀಲಸಂಪನ್ನರು ಅಸಂಖ್ಯಾತರು ಪ್ರಮಥಗಣಂಗಳು ಬಿಜ್ಜಳರಾಯ ಬಸವಣ್ಣ–ಇವೆಲ್ಲ 'ಇತಿಹಾಸ'ವೆಂದೇ ಹೇಳಬಹುದು. ಆದರೆ ಇಲ್ಲಿ ಕೊಟ್ಟಿರುವ ಸಾವಿರ ಲಕ್ಷ ಕೋಟಿಯ ಅಂಕಿ ಸಂಖ್ಯೆಗಳು 'ಪುರಾಣ'ವೆಂದೇ ಹೇಳಬೇಕು. ಇತಿಹಾಸ ಪುರಾಣದಲ್ಲಿ ಸತ್ಯಾಸತ್ಯದ ಭೇದವನ್ನು ಮಾಡದ ಅತಿಶಯ ಪ್ರಿಯತೆಯ ವ್ಯಾಮೋಹದೃಷ್ಟಿ ಭಾರತೀಯರ ಬೇರಿನಲ್ಲಿಯೆ ಇಳಿದಿರುವ ಸಂಸ್ಕಾರ ವಿಶೇಷ, ಅಥವಾ ಅಸಂಸ್ಕಾರ ವಿಶೇಷ. ಆದ್ದರಿಂದ ಈ ಪುರಾಣಸಮ್ಮಿಶ್ರಿತ ಶಾಸನದಿಂದ ಹೊರಡುವ 'ಇತಿಹಾಸ'ವನ್ನು ತೆಗೆದುಕೊಂಡು, ಪ್ರಭುದೇವರ 'ಕಲ್ಯಾಣವೆಂಬ ಪ್ರಣತೆಯಲ್ಲಿ......' ಎಂಬ ವಚನದ ಭಾವಜ್ಯೋತಿಯಲ್ಲಿ ಎದ್ದಿ ತೆಗೆದರೆ, ಶಿವಾಕಾಶದಲ್ಲಿ ಶಿವಪ್ರಕಾಶದಲ್ಲಿ ಶಿವಪ್ರತಾಪದಲ್ಲಿ ಮೂಡಿ ಬೆಳಗಿ ವ್ಯವಹರಿಸುತ್ತಿರುವ 'ರುದ್ರಲೋಕವೆ ಮರ್ತ್ಯಲೋಕಕ್ಕಿಳಿತಂದ,' ವಿವಾಹದ ಮಾಂಗಲ್ಯಕ್ಕೆ 'ಕಲ್ಯಾಣ'ವೆಂದು ತನ್ನ ಹೆಸರನ್ನೆ ಆಶೀರ್ವದಿಸಿರುವ, 'ಅಭಿನವ ಕೈಲಾಸವೆನಿಸಿಪ್ಪ ಶ್ರೀಕಲ್ಯಾಣಪುರ'[೩]ದ ಕಲ್ಪನೆ, 'ಜಗದಾರಾಧ್ಯ ಬಸವಣ್ಣ'[೪]ನ 'ಮಹಾಕಲ್ಯಾಣ'[೫]ದ ಮಂಗಲಮಹಾದೃಶ್ಯ ನಮ್ಮ ಮುಂದೆ ಬಂದು ನಿಲ್ಲುವಂತಾಗುತ್ತದೆ. ಅಲ್ಲವೇ? ಶಿವಾಕಾಶವನ್ನು ಕಾಣದ, ಶಿವ-ಪ್ರಕಾಶದಲ್ಲಿ ಬೆಳಗದ, ಶಿವಪ್ರತಾಪದಿಂದ ಬಾಳಿ ಬದುಕದ ಬಿಜ್ಜಳನ ಕಲ್ಯಾಣವಿದೆ.

---

೧. ಶೂ. ಸಂ. ಪು. ೮೩-೮೫, ವ. ೩೪.
೨. ಶೂ. ಸಂ. ಪು. ೮೨, ಪ್ರ. ೩೩.
೩. ಅದೇ ಪು. ೮೨, ಪ್ರ. ೩೩.
೪. ಅದೇ ಪು. ೮೩-೮೫ ಪ್ರ. ೩೪.
೫. ಅದೇ ೮೩-೮೫ ಪ್ರ. ೩೪.

ಆದರೆ ಅದು ಸಿದ್ಧವೀರಣ್ಣನಿಗೆ ಅಪ್ರಸ್ತುತ, ಅಲ್ಲಮಪ್ರಭುವಿನ ಶಿವಗಂಭೀರ ದೃಷ್ಟಿಗೆ ಅಸಂಗತ.

ಸಾಮಾನ್ಯದೃಷ್ಟಿಗೆ ಮರೆಯಾಗಿ, ಒಳಗೆ ಶಿವಪ್ರಕಾಶದಲ್ಲಿ ಬೆಳಗುವ ಕಲ್ಯಾಣವನ್ನು ಭೇದಿಸಿ ನೋಡುವ ಪ್ರಭುವಿನ 'ಶಿವಯೋಗ'ದೃಷ್ಟಿಗೆ ಕಾಣುವ ಸಂಗನ ಬಸವಣ್ಣ ಹೇಗಿದ್ದಾನೆ? ಆತ ಕಟ್ಟಿದ ಮಹಾಮನೆ ಹೇಗಿದೆ? ಇದೋ ಇಲ್ಲಿ ನೋಡಿ ಬಸವಣ್ಣನನ್ನು:

ಆದಿಯಾಧಾರವಿಲ್ಲದ ಆಗಮ ನಾಸ್ತಿಯಾಗಿಪ್ಪ
ಸಾಗರವಿರಹಿತನನಾರು ಅಱಿಯರಲ್ಲ !
ದಶಮುಖದ ಮಾಣಿಕದ ಎಸಳ ಕಂಗಳು
ಪರ್ಬಿ ಪಸರಿಸಿದುದನಾರು ಅಱಿಯರಲ್ಲಾ !
ಹಿರಿದೊಂದು ವೃಕ್ಷವು ಅತಿಶಯದ ರೂಪಾಗಿ
ಪೃಥ್ವಿಗಿಂಬಾಗಿರ್ದುದನಾರು ಅಱಿಯರಲ್ಲಾ !
ಅಂತರಂಗದ ಭುವನವ ಮೆಟ್ಟಿ ನೋಡುತ್ತ,
ಬೆಡಗಿನ ತಾವರೆಯ ಮಧ್ಯದ ತಾರಕಿಯನಾರು ಅಱಿಯರಲ್ಲಾ !
ಇನ ಶಶಿಗಳಿಬ್ಬರು ನಯನ ನೋಟದ
ಪುಷ್ಪ ಪರಿಮಳವಾಗಿರ್ದುದನಾರು ಅಱಿಯರಲ್ಲಾ !
ಇಂಬುನಯನದಲ್ಲಿ ಸಂಭ್ರಮವಿಲ್ಲದ ರೂಪು
ಮಹತ್ತಾಗಿರ್ದುದನಾರು ಅಱಿಯರಲ್ಲಾ !
ಸಾಗರದೊಳಗಣ ಜ್ಯೋತಿಯಂತೆ, ಗುಹೇಶ್ವರಲಿಂಗದೊಳಗೆ
ಎನ್ನ ಪರಮಾರಾಧ್ಯರು
ಸಂಗನ ಬಸವಣ್ಣ ನಿಂದ ನಿಲವನುಪಮಿಸಬಾರದು ಕಾಣಾ ಸಿದ್ಧರಾಮಯ್ಯಾ ![೧]

ಪ್ರಭುದೇವನ ಈ ಮಾತನ್ನು ಕೇಳಿದರೆ ಯಾರಿಗೆ ಏನು ಅರ್ಥವಾಗಬಹುದು? . ಸಾಗರದೊಳಗಣ ಜ್ಯೋತಿಯಂತೆ, 'ಗುಹೇಶ್ವರಲಿಂಗದೊಳಗೆ' ನಿಂದ ಸಂಗನ ಬಸವಣ್ಣನ ನಿಲವು ಯಾರಿಗೇನು ಕಾಣಬೇಕು? ಈ ಸಂಗನ ಬಸವಣ್ಣ ಒಂದು ದೊಡ್ಡ ಒಗಟು, ಶಿವಯೋಗದ ಬೆಡಗು. ಈ ಒಗಟನ್ನು ಒಡೆವ ಬುದ್ಧಿ ಅನುಭವಸಾಮರ್ಥ್ಯ ನಮ್ಮಲ್ಲಿಲ್ಲ. ಒಗಟು ಬಿಚ್ಚದೆ ಬಸವಣ್ಣ ಕಾಣುವಂತಿಲ್ಲ. ಮುಂದೆ? ಇದೋ ಇಲ್ಲಿ ಬನ್ನಿ, ಕಲ್ಲಮಠದ ಪ್ರಭುದೇವರ ಬಳಿಯಲ್ಲಿ. ಬೆಡಗನ್ನು ಬಿಚ್ಚಿ ಬಸವಣ್ಣನ ಸ್ವರೂಪವನ್ನು ತೋರಿಸಿ ಕೊಡುವ ಅವರ ರೀತಿಯನ್ನು ನೋಡಿ:

ನಾದ ಬಿಂದು ಯುಕ್ತವಾದ ದೇಹಸಂಸಾರವಿಲ್ಲದೆ ಇರ್ದ ನಿಃಕಲವಸ್ತು ವೇದಾಗಮಂಗಳಿಗೆ ಅಗೋಚರ. ಅಂತಪ್ಪ ಪರಬ್ರಹ್ಮವೆ ಬಸವಣ್ಣನೆಂಬುದನಾರೂ ತಿಳಿಯರು. ದಶದಿಕ್ಕುಗಳಲ್ಲಿ ಪರಿಪೂರ್ಣವಾಗಿರ್ದ ಚಿತ್‌ಪ್ರಕಾಶವೆ ದಶಮುಖದ ಮಾಣಿಕ್ಯ. ಅಂತಪ್ಪ ಪರಿಪೂರ್ಣವಸ್ತುವಿಗೆ ಸಾಕಾರದ ಲೀಲಾಚಿಂತನೆ ತನ್ನಲ್ಲಿ

[೧] ಶೂ. ಸಂ. ಪ್ರ. ೮೫-೮೬, ವ. ೩೫.

ಎಸಗಿ ನೋಡಿದ ಚಿತ್ತಿನ ದೃಕ್ಕೇ ಎಸಳ ಕಂಗಳು. ಅಂತು ತೋಱಿದ ಚಿತ್ತುವೆ ಪ್ರಕಾಶಿಸಿ ಅಖಂಡ ತೇಜೋಮೂರ್ತಿಯಾಗಿ ಬೆಳೆದು ಮಹಾಲಿಂಗವಾಗಿ ನಿಂದಿತ್ತು. ಅಂತಪ್ಪ ಮಹಾಲಿಂಗವೆ ಬಸವಣ್ಣ. ಈ ಮಹಾಲಿಂಗವೇ ಬ್ರಹ್ಮವೃಕ್ಷವೆನಿಸಿತ್ತು. ಅಂತಪ್ಪ ಮಹಾಲಿಂಗವು ತನ್ನ ಚಿದ್ವಿಲಾಸಾನಂದದ ಹೆಚ್ಚುಗೆಯಿಂದ ಮೂರ್ತಿಯಾಗಿ(ದಿ?) ಪೃಥ್ವಿಕಡೆಯಾದ ತತ್ತ್ವಂಗಳ ಜನನ ಸ್ಥಲವು ಸ್ಥಿತಿ-ಲಯಕ್ಕಾಲಯವು ತಾನೆಯಾಗಿಪ್ಪುದು. ಅಂತಾದ ಲಿಂಗದ ಸಾಕಾರವೇ ಈ ಬಸವಣ್ಣ. ದೇಹಿಗಳ ಹೃತ್ಕಮಲ ಮಧ್ಯದಲ್ಲಿ ಕಾಲೂರಿ ನಿಂದು ವಿಶ್ವವಿಲಾಸಿಯಾಗಿ ನೋಡುತ್ತಿಪ್ಪನು ಪರಮಚಿತ್ಕಲಾಲಿಂಗವು. ಅಂತಪ್ಪ ಲಿಂಗವೇ ಬಸವಣ್ಣ. ಚಂದ್ರಸೂರ್ಯರಿಬ್ಬರು ಎರಡು ನಯನ ಪುಷ್ಪ. ಆ ನಯನ ಪುಷ್ಪದ ಪರಿಮಳವೀಗ ಚೈತನ್ಯಪ್ರಕಾಶ. ಆ ಕಾಣಬಾರದ ಚೈತನ್ಯವೇ ಬಸವಣ್ಣ. ಕಡೆ ಮೊದಲಿಲ್ಲದ ಅಖಂಡ ಚಿದ್ದೃಕ್ಕಿನ ಬೆಳಗೇ ಮೂರ್ತಿಯಾಗಿರ್ದ ಚಿಲ್ಲಿಂಗವು ದೇಹ ಕರಣಂಗಳ ವೈಭವವಿಲ್ಲದ ವಸ್ತು. ಅಂತಪ್ಪ ಲಿಂಗವು ಅನಂತ ಬ್ರಹ್ಮಾಂಡಂಗಳನೊಳಕೊಂಡಿಪ್ಪ ಮಹಾಘನಲಿಂಗವೆ ಮಹತ್ತು. ಆ ಮಹಾಘನವೇ ಬಸವಣ್ಣ. ಸಮುದ್ರದೊಳಿಪ್ಪ ಅಗ್ನಿಯ ಪ್ರಕಾಶವನಾರು ಭೇದಿಸಿ ಕಾಣಬಾರದ ಇಪ್ಪಂತೆ ದೇಹಸಂಸಾರಸಾಗರದಲ್ಲಿ ಅಡಗಿ ಇಪ್ಪ ಚಿಜ್ಜ್ಯೋತಿ ಸ್ವರೂಪನಪ್ಪ ಬಸವಣ್ಣನ ನಿಲವನಾರಿಗೆಯೂ ಕಾಣಬಾರದು. ಅಂತು ಉಪಮಿಸಬಾರದ ಘನಲಿಂಗವಪ್ಪ ಬಸವಣ್ಣನೇ ಎನಗೆ ಪರಬ್ರಹ್ಮವ ಕರಸ್ಥಲಕ್ಕೆ ತಂದುಕೊಟ್ಟ ಗುರುವಿಗೆ ಗುರು.[1]

ಇದೀಗ ಬಸವಣ್ಣನ ನಿಜಸ್ವರೂಪ, ನಿಜದ ನಿಲವು. ನಿಃಕಲ ಪರವಸ್ತುವಿನಿಂದ ಸಚರಾಚರ ವಿಶ್ವರೂಪದಲ್ಲಿ 'ತದ್ರೂಪ'ವಾಗಿ. ಅನಂತರೂಪದ ಲೇಪ ತನಗಿಲ್ಲದ ಸಾಗರವಿರಹಿತನಾಗಿ ಬೆಳಗುವ 'ದಶಮುಖದ ಮಾಣಿಕ' ಚಿದಖಂಡ ಪ್ರಕಾಶ. 'ಯಜ್ಜ್ಯೋತಿಷಾಂ ಜ್ಯೋತಿಃ' ಬೆಳಗಿನ ಬೆಳಗು ಮಹಾಬೆಳಗು ಬಸವಣ್ಣನ ನಿಜಗಂಭೀರದ ನಿಲವು. ಎಲ್ಲಕ್ಕು ತಾನಾದಿಯಾಗಿ ತನಗೆ ಆದಿ ಇಲ್ಲದೆ. ಎಲ್ಲಕ್ಕು ತಾನೆ ಆಧಾರವಾಗಿ ತನಗೆ ಆಧಾರವೊಂದಿಲ್ಲದ, ಆಗಮಕ್ಕೆ ಅತೀತವಾದ ನಿಃಕಲವಾದ ಇರವು ಬಸವಣ್ಣ. 'ಇರವಿನಲ್ಲಿ ಪರಶಿವನು' ಶರಣ. 'ಲಿಂಗಸಾರಾಯ ಶರಣಲಿಂಗ' ಎಂಬ ಮಾತು ನಿಮ್ಮ ನೆನಪಿನಲ್ಲಿರಬಹುದು. ಅದೇ ಬಸವಣ್ಣ ಎಂಬುದು ಆತನ ಒಳಹೊರಗನ್ನು ಕಂಡ ಪ್ರಭುವಿನ ಅನುಭವ.

ಇಂಥ ಬಸವಣ್ಣನ ಜೀವನದ ಪರಮ ಪುರುಷಾರ್ಥವೇನು? ಚರಮ ಉದ್ದೇಶವೇನು? ಮರ್ತ್ಯದಲ್ಲಿ ಆತನ ಮಾಡಿದುದೇನು? ಮರ್ತ್ಯದಲ್ಲಿ ಮುಳುಗಿದ ಲೋಕವನ್ನು

---

೧. ಲಿಂ. ಲೀ. ವಿ. ಚಾ. ಪ್ರ. ೧೨೫-೭, ಪ. ೨೬ ಟೀಕು. ಈ ಟೀಕನ್ನು ಸಂಗ್ರಹಿಸಿ ಕೊಟ್ಟಿದೆ. ಪೂರ್ಣ ವಿವರಕ್ಕೆ ಟೀಕನ್ನೆ ನೋಡಿ. ಇಲ್ಲಿ 'ಪರಮಾರಾಧ್ಯರು' ಅಂದರೆ ಗುರುವಿನ ಗುರು ಎಂದರ್ಥ. ಪ್ರಭುವಿನ ಗುರು ಅನಿಮಿಷಯ್ಯ. ಅನಿಮಿಷಯ್ಯನ ಗುರು ಬಸವಣ್ಣ ಎಂದು ಪ್ರಭುವಿನ ವಿಚಾರ. ಅಂದರೆ ಅನಿಮಿಷಯ್ಯನಿಗೆ ಇಷ್ಟಲಿಂಗ ಕೊಟ್ಟ 'ವೃಷಭ'ನ ಅವತಾರವೇ ಬಸವಣ್ಣ ಎಂಬ ಮಾತನ್ನು ನಾವಿಲ್ಲಿಯೂ ನೆನೆಸಿಕೊಳ್ಳಬಹುದು.

ಅಲ್ಲಿಯೆ ಮುಳುಗಿ ಹಾಳಾಗಲೀಯದೆ ಮರ್ತ್ಯವನ್ನು ಅಮರ್ತ್ಯದತ್ತ ಎತ್ತುವುದೆ ಮಹಾತ್ಮರ ದಿವ್ಯೋದ್ದೇಶ. ಉದ್ಧಾರವೆ ಅವತಾರದ ನಿಜಾರ್ಥ. ಇದನ್ನು ನಾವು ಹಿಂದೆಯೆ ನೋಡಿದ್ದೇವೆ. ಆದರೆ ಇದೇ ಮಾತು ದಿವ್ಯದಿಂದ ಹೊಮ್ಮಿದರೆ ಆದರಲ್ಲಿ ಎಂಥ ಭವ್ಯ ಶಕ್ತಿ? ಮತ್ತೆ ಮತ್ತೆ ವಚನಗಳನ್ನು ಎತ್ತಿಕೊಳ್ಳಬಾರದೆಂದರೂ ಒತ್ತರಿಸಿ ಹೊರನುಗ್ಗಿ ಬರುತ್ತಿವೆ ಶರಣರ ಮಾತು. ಬರಲಿ, ಬಂದರೇನು? ಹಾಗಾದರೆ ಬಸವಣ್ಣನ ಜೀವನದ ನಿಜಾರ್ಥವನ್ನು ಸಾವಧಾನವಾಗಿ ಕೇಳಿ, ಪ್ರಭು ಹೇಳುತ್ತಾರೆ:

> ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
> ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ.
> ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ,
> ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು,
> ಅಸಂಖ್ಯಾತರೆಂದು ಹೆಸರಿಟ್ಟು ಕರೆದು,
> ಭಕ್ತಿಯ ಕುಳಸ್ಥಳವ ಶ್ರುತ ದೃಷ್ಟ ಪವಾಡದಿಂ ಮೆಱೆದು ತೋಱಿ,
> ಜಗವಱಿಯಲು ಶಿವಾಚಾರದ ಧ್ವಜವನೆತ್ತಿಸಿ
> ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು.
> ಶಿವಶರಣನ ಮನೆಯೊಳಗಿಪ್ಪ ಶಿವಗಣಂಗಳ ತಿಂಥಿಣಿಯ ಕಂಡು
> ಎನ್ನ ಮನವುಬ್ಬಿ ಕೊಬ್ಬಿ ಓಲಾಡುತ್ತಿರ್ದೆನಯ್ಯಾ!
> ನಮ್ಮ ಗುಹೇಶ್ವರನ ಶರಣ ಸಂಗನ ಬಸವಣ್ಣನ
> ದಾಸೋಹದ ಘನವನೇನೆಂದೆನಬಹುದು ನೋಡಾ ಸಿದ್ಧರಾಮಯ್ಯಾ![೧]

ಬಸವಣ್ಣನ ಜೀವನದ ಗಂಭೀರ ಪುರುಷಾರ್ಥವನ್ನು ಕುರಿತು ಪ್ರಭು ಹೇಳುವ ಮಾತಿನಲ್ಲಿ ಸತ್ಯ ತುಂಬಿ ತುಳುಕುವಂತಿದೆ. ಗೌತಮಬುದ್ಧ ಶ್ರೀಕೃಷ್ಣ ಸಾಕ್ರೇಟಿಸ್ ಯೇಸುಕ್ರಿಸ್ತ ಮುಹಮ್ಮದ ಪೈಗಂಬರ ವೇದವ್ಯಾಸ ಶಂಕರಾಚಾರ್ಯ ರಾಮಾನುಜ ಮಧ್ವಾಚಾರ್ಯ ಮುಂತಾದ 'ಕೋಟಿಗೊಬ್ಬ ಶರಣ'ರು[೨] ಆಯಾ ದೇಶ ಆಯಾ ಕಾಲ ಆಯಾ ಜನಾಂಗದ ಮಾನವ ಮಟ್ಟದಲ್ಲಿ, ಪರಿಸರದಲ್ಲಿ ಉದಯವಾಗದೆ ಹೋಗಿದ್ದರೆ ಮರ್ತ್ಯದ ಮನೆ ಹಾಳಾಗದೆ ಉಳಿಯುತ್ತಿತ್ತೆ? ದಿವ್ಯದ ಬೆಳಗಿನಿಂದಿಳಿದಂತಿರುವ ನೀತಿ ಧರ್ಮ ತತ್ತ್ವ ಅನುಭವ, ಪ್ರೇಮ ಸತ್ಯ ಅಹಿಂಸೆ ಸಹಾಯ ಸಹಕಾರ ಉಪಕಾರ, ಗುಣ ಶೀಲ ಆಚಾರ ವಿಚಾರದ ಸ್ವಬೀಜಗಳನ್ನು ಮರ್ತ್ಯದಲ್ಲಿ ಬಿತ್ತಿ, ಮಾನವನ ಹೃದಯದಲ್ಲಿ, ಮಾನವನ ಮನ ಬುದ್ಧಿಯಲ್ಲಿ, ಮಾನವನ ಕೈ ಕಾಲು ಕಣ್ಣು ಕಿವಿಯಲ್ಲಿ ದೇವಮಾನವರು ಬೆಳೆಯದಿದ್ದರೆ ಮಾನವಕುಲದ ಚರಿತ್ರೆ ಭಸ್ಮಾಸುರನ ಕಥೆಯಾಗಬಹುದಿತ್ತು. ಪ್ರಭುವಿನ ಮಾತು ಸತ್ಯ. ಘನ ಸತ್ಯ. ಬಸವಣ್ಣ ಮರ್ತ್ಯಕ್ಕೆ ಬಂದ, ಮರ್ತ್ಯಕ್ಕೆ ಮಹವ ತಂದ. ಕೈಲಾಸವನ್ನು ತಂದು ಕಲ್ಯಾಣದಲ್ಲಿ ನೆಲೆಗೊಳಿಸಿದ. 'ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು'.

---

೧. ಶೂ. ಸಂ. ಪು. ೮೭, ವ. ೪೧.

೨. ಇಲ್ಲಿ 'ಶರಣ' ಶಬ್ದವನ್ನು ಸ್ವಲ್ಪ ವಿಶಾಲಾರ್ಥದಲ್ಲಿ ಬಳಸಿದೆ.

ನೆಲದಿಂದ ಮಾಳಿಗೆ ಹತ್ತಬೇಕಾದರೆ ಹಾರಿ ಹತ್ತಬಹುದೇ? ನಿಚ್ಚಣಿಗೆ ಬೇಕು, ಹಲ್ಲಿಸಿಂದ ಹಲ್ಲಿಗೆ ಕಾಲಿಟ್ಟು ಮೇಲೆ ಹತ್ತಲಿಕ್ಕೆ. ಮಾನವಕುಲ ಮರ್ತ್ಯಲೋಕದಿಂದ ಶಿವಲೋಕಕ್ಕೆ ಹತ್ತಬೇಕಾದರೆ ಬಸವಣ್ಣ ನಿಚ್ಚಣಿಗೆಯಾದ, ತನ್ನ ಮೇಲೆ ಹತ್ತಿಸಿಕೊಂಡು, ಕಾಲಿಟ್ಟು ಹತ್ತಿದರೆ ತನ್ನ ಮೈಮೇಲೆ ತಲೆಯಮೇಲೆ ಹೊತ್ತುಕೊಂಡು, ಮೇಲೆ ಶಿವಲೋಕದ ದಿವ್ಯ ಸಾಮ್ರಾಜ್ಯದಲ್ಲಿ ನೆಲೆಯೂರಿ ನಿಲ್ಲಲು ಮಾನವಕುಲಕ್ಕೆ ಮಹಾಕಲ್ಯಾಣ ಸಾಧನವಾದ. ಮಾನವಪ್ರಾಣಿ ಜೀವಂತವಾಗಿ ಬಾಳಿಕೊಂಡಿರಲು ನೆಲ ನೀರು ಗಾಳಿ ಬೆಂಕಿ ಬಯಲುಗಳ ಪ್ರಾಣೋಪಕಾರವೆಷ್ಟು? ಅದೇ ಮಾನವಪ್ರಾಣಿ ದಿವ್ಯಪ್ರಾಣಿಯಾಗಿ 'ಶಿವಲೋಕ'ದಲ್ಲಿ ಶಾಶ್ವತವಾಗಿ ಅಖಂಡಿತವಾಗಿ, ಸಾವಿಲ್ಲದೆ ಕೇಡಿಲ್ಲದೆ ನಿರತಿಶಯ ಆನಂದವಾಗಿ ಬದುಕಿರಲು ಬಸವಣ್ಣನ, ಮತ್ತೆ ಬೇರೆ ಬೇರೆ ದೇಶ ಕಾಲದ ಬಸವಣ್ಣಗಳ ಶಿವೋಪಕಾರವೆಷ್ಟು? ಪ್ರಭುವಿನ ಮಾತಿನ ಸತ್ಯವನ್ನೆ ಧ್ವನಿಮಾಡುವ ಚೆನ್ನಬಸವಣ್ಣ ಬಸವಣ್ಣನ 'ನಿಚ್ಚಣಿಗೆ'ಯ ಲೋಕವಿನಯವನ್ನು, ಲೋಕವಿನಮ್ರ ಕಲ್ಯಾಣಭಾವವನ್ನು, ಭೂಮಿಯನ್ನು ಬೆನ್ನ ಮೇಲೆ ಹೊತ್ತು ಕೈಲಾಸಕ್ಕೆ ಕೊಂಡೊಯ್ವ ಕೈಲಾಸಮಣಿಹವನ್ನು ಸಾರಿ ಹೇಳಿದ್ದಾನೆ ಪ್ರಭುವಿನ ಆಕಾಶಧಾಟಿಯಲ್ಲಿ. 'ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಚ್ಚಣಿಗೆಯಾದವು ನೋಡಾ ದೇವಾ. ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ...'[೧]

ಮರ್ತ್ಯಲೋಕದಿಂದ, ಮರ್ತ್ಯಲೋಕದಲ್ಲಿ ಶಿವಲೋಕಕ್ಕಿಟ್ಟಿರುವ ನಿಚ್ಚಣಿಗೆ ಬಸವಣ್ಣನ 'ಮಹಾಮನೆ'ಯನ್ನು ಸಿದ್ಧರಾಮ ನೋಡುತ್ತಾನೆ, ಪ್ರಭು ಕಾಣುತ್ತಾನೆ. ಶಿವಯೋಗದೃಷ್ಟಿಯಲ್ಲಿ, ಸತ್ಯಾರ್ಥಕ್ಕೆ ಯೋಗವಾಗಿರುವ ಪ್ರಭುವಿನ ಶಿವದೃಷ್ಟಿಯಲ್ಲಿ ಮಹಾಮನೆ ಹೇಗೆ ಕಾಣುತ್ತದೆ? ಆತನ 'ಮಹಾಮನೆ'ಯ ಹಾಡನ್ನು ಕೇಳಿ, ಕಂಡಷ್ಟು ಕಾಣಲಿ; ತಿಳಿದಷ್ಟು ತಿಳಿಯಲಿ:

ಆದಿಯ ಲಿಂಗವ ಮೇದಿನಿಗೆ ತಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದನಯ್ಯಾ ಸಂಗನಬಸವಣ್ಣನು.
ಆ ಮನೆಯ ನೋಡಲೆಂದು ಹೋದರೆ,
ಆ ಗೃಹ ಹೊಗದ ಮುನ್ನವೆ ಎನ್ನ ನುಂಗಿತ್ತಯ್ಯಾ !
ಅದಕ್ಕೆ ಕಂಭವೊಂದು, ತೊಲೆಯಾಱು, ಜಂತೆವಲಗೆ ಮೂವತ್ತಾಱು.
ಧರೆಯಾಕಾಶ ಹೊದ್ದದ ಕೆಸಱುಗಲ್ಲು.
ಒಂಬತ್ತು ಬಾಗಿಲ ಬಿಯ್ಯಗವಿಕ್ಕಿಹವು.
ಬೇಱೊಂದು ಬಾಗಿಲು ಉರಿಯನುಗುಳುತ್ತಿರ್ಪುದು !
ಮುತ್ತಿನ ಕಂಭದ ಮೇಲುಕಟ್ಟಿನ ಮೇಲೆ ಮಾಣಿಕ್ಯದ ಶಿಖರಿ.
ಆ ಶಿಖರಿಯ ತುದಿಯಲ್ಲಿ ಬಿಳಿಯ ಹೊಂಗಳಸವಿಪ್ಪುದು.
ಅದು ಕಾಬವರಿಗೆ ಕಾಣಬಾರದು. ಕಾಣಬಾರದವರಿಗೆ ಕಾಣಬಪ್ಪುದು.
ಅಲ್ಲಿ ಹತ್ತು ಮಂದಿ ಪರಿಚಾರಕರು ಎಡೆಯಾಡುತ್ತಿರ್ಪರು.

---
೧. ಶೂ. ಸಂ. ಪೃ. ೮೦, ವ. ೨೯.

ಇಬ್ಬರು ದಡಿಕಾಜಿರು ಬಾಗಿಲ ಕಾಯ್ದಿಪ್ಪರು.
ಒಬ್ಬಾಕೆ ಎಡೆಯಾಡುತ್ತಿರ್ಪಳು. ಒಬ್ಬಾಕೆ ಲಿಂಗಾರ್ಚನೆಗೆ ನೀಡುತ್ತಿರ್ಪಳು.
ಒಬ್ಬಾಕೆ ಸಯಿಧಾನಂಗಳೆಲ್ಲವನು ಶೋಧಿಸಿ ತಂದು ಕೊಡುತ್ತಿರ್ಪಳು.
ಒಬ್ಬಾಕೆ ಉರಿಯಿಲ್ಲದಗ್ನಿಯಲ್ಲಿ ಪಾಕವ ಮಾಡುತ್ತಿರ್ಪಳು.
ಒಬ್ಬಾಕೆ ಲಿಂಗಜಂಗಮಕ್ಕೆ ನೀಡಿಮಾಡಿ ಉಣಿಸಿ ತೃಪ್ತಿಯ ಮಾಡುತ್ತಿರ್ಪಳು.
ಒಂದಡ್ಡಣಿಗೆಯ ಮೇಲೆ ಐದು ಅಗಲೊಳಗೆ ಇಟ್ಟ ಬೋನವನೊಬ್ಬನುಂಡರೆ,
ಪ್ರಮಥಗಣಂಗಳೆಲ್ಲರು ಆತನ ಒಕ್ಕುದ ಕೊಳಲೆಂದು ಬಂದು.
ಆ ಮನೆಯ ಹೊಕ್ಕು ನಿಶ್ಚಿಂತ ನಿವಾಸಿಗಳಾದರು.
ಗೊಹೇಶ್ವರನ ಶರಣ ಸಂಗನ ಬಸವಣ್ಣನ
ಮಹಾಮನೆಯ ಕಂಡು ಧನ್ಯನಾದೆನು ಕಾಣಾ ಸಿದ್ಧರಾಮಯ್ಯಾ ![೧]

ಮರ್ತ್ಯಲೋಕದ ಮಹಾಮನೆ ಒಂದು, ಆದಿಯ ಲಿಂಗದ ಮಹಾಮನೆ ಮತ್ತೊಂದು. ನಾವಿರುವುದು ಮರ್ತ್ಯಲೋಕದ ಮಹಾಮನೆಯಲ್ಲಿ. ಸಂಗನ ಬಸವಣ್ಣ 'ಮರ್ತ್ಯ ಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು......' 'ಆದಿಯ ಲಿಂಗವ ಮೇದಿನಿಗೆ ತಂದು' ಆ ಲಿಂಗಕ್ಕೆಂದು ಮಹಾಮನೆಯ ಕಟ್ಟಿದರೆ ಆ ಮನೆಯಲ್ಲಿ ಪ್ರವೇಶ ಮಾಡಿ 'ನಿಶ್ಚಿಂತ ನಿವಾಸಿ'ಗಳಾದವರು, 'ನಿಶ್ಚಿಂತ ನಿವಾಸಿಗಳಾಗಿ ಇರುವವರು ಪ್ರಮಥ ಗಣಂಗಳು. ಶರಣರು. ಅನಾದಿಶರಣ ಕಟ್ಟಿದ ಆದಿಯ ಲಿಂಗದ ಈ ಅರಮನೆ 'ಕಾಬವರಿಗೆ ಕಾಣಬಾರದು, ಕಾಣಬಾರದವರಿಗೆ ಕಾಣಬಪ್ಪುದು'. ವಿಶ್ರಾಂತರಂಗದಲ್ಲಿ 'ಸದಾ ಭಾಸತಿ ಭಾಸತಿ'ಯಾದ ವಿಶ್ರಾಂತಜ್ಯೋತಿಯಾದ ಮಹಾಪ್ರಾಣಲಿಂಗದ ಅರಮನೆಯನ್ನು ಕಾಣುವ ಕಣ್ಣುಳ್ಳವರಾರು? ಮನದ ಬಾಗಿಲಕ್ಕೆ ಬೀಗ ಬುದ್ಧಿಯ ಬಾಗಿಲಕ್ಕೆ ಕೀಲಿ ಕಣ್ಣು ಕಿವಿಗೆ ಕೀಲಿ. ಒಳಗಡೆಗೆ ಹೊಗಬಾರದಂತೆ ಹೃದಯಕ್ಕೆ ಭದ್ರವಾದ ಅಂತಮುದ್ರೆ. ಇವಲ್ಲ ಕೀಲಿ ತೆಗೆಯದೆ, 'ಹೃದಯಗ್ರಂಥಿ' ಭಿನ್ನವಾಗದೆ ಮುಚ್ಚಿದ ಬಾಗಿಲ ಮರೆಯೊಳಗೆ ಏನು ಕಾಣಬೇಕು? ಆದರೆ 'ಕಾಣಬಾರದವರಿಗೆ ಕಾಣಬಪ್ಪುದು' ಆ ಮಹಾಮನೆ. 'ಉರಿಯುಸುಗುಳುತ್ತಿರುವ ಬಾಗಿಲಲ್ಲಿ', ಬ್ರಹ್ಮನಾಳದಲ್ಲಿ ಪ್ರವೇಶಮಾಡಿ ಒಳಗಿಂದ ನವ ದ್ವಾರಗಳನ್ನು ಮುದ್ರಿಸಿದರೆ ಎಲ್ಲ ತಾನಾಗಿ. ತಾನು ಎಲ್ಲವಾಗಿ. ತನಗೆ ಇದಿರಿಟ್ಟು ಅನ್ಯ ಭಿನ್ನವಿಲ್ಲದ. ನಾನಾತ್ವವಿಲ್ಲದ ಕಾಣಿಕೆಯುಳ್ಳ ಏಕತ್ವದರ್ಶಿಗಳೆ 'ಕಾಣಬಾರದವರು.' ಅಂತು ಪ್ರಭುದೇವ ತೋರಿಸುವ ಲಿಂಗದ ಮಹಾಮನೆ ಅಂತರ್ದೃಷ್ಟಿಗೋಚರವೆಂಬ ಮಾತು ನಿಚ್ಚಳ. ಇಲ್ಲಿ ಒಳಹೊಕ್ಕು ಪ್ರಭುದೇವರು ವಿವರವಾಗಿ ಹೇಳುವ ಬಸವಣ್ಣನ ಮಹಾಮನೆಯ ಕಂಭ, ಬಾಗಿಲು ದಡಿಕಾರರು. ಒಳಗೆ ನಡೆದಿರುವ ದಾಸೋಹ ಮಹಂತಾ ದುವನ್ನು ಕಾಣುವ ಸೌಭಾಗ್ಯ. ಸಾಮರ್ಥ್ಯವುಳ್ಳವರು ಶಿವಯೋಗಿಗಳು, ಶಿವಭಕ್ತರು. ಶಿವಶರಣರು. ಶಿವಾನುಭಾವಿಗಳು. ಈ ಯೋಗ ಭಕ್ತಿಯಿಲ್ಲದ ನಮ್ಮಂಥವರು ಕತ್ತಲೆ ಯಲ್ಲಿ ಅಲ್ಲಲ್ಲಿ ಮಿನುಗುವ ಮಹಾಭವ್ಯಕ್ಕೆ ಕೈಮುಗಿದು ನಿಲ್ಲಬೇಕು, ಅಷ್ಟೇ.

---

೧. ಶೂ. ಸಂ. ಪು. ೦೭–೦೮, ವ. ೪೨.

ಬಸವಣ್ಣನ ಮಹಾಮನೆಯ ಅಂಗಳದಲ್ಲಿ ನಿಂದಿರುವ ಸಿದ್ಧರಾಮನ ಹೃದಯ ಉಕ್ಕಂದವಾಗಿ ಹಾಡುತ್ತದೆ. '...ಕಪಿಲಸಿದ್ಧಮಲ್ಲಿನಾಥಾ, ನಿಮ್ಮ ಶರಣರು ಮೆಟ್ಟಿ ನಿಂದ ಧರೆ ಪಾವನ...'[೧] ಎಂದು; '...ಪರಮಗುರು ಬಸವಣ್ಣ ಜಗವ ಪಾಲಿಸಬರಲು, ಎನ್ನ ಪರಿಭವದ ದಂದುಗ ಹಱಿಯಿತ್ತಯ್ಯಾ.'[೨] ಎಂದು; '...ಬಸವಣ್ಣನ ನೆನಹು ಸುಖಸಮುದ್ರವಯ್ಯಾ.'[೨] ಎಂದು;' ಅಯ್ಯಾ, ನಿಮ್ಮ ಶರಣರಲ್ಲದವರ ಮನೆ ಕಿಮ್ಮನೆ ಕಂಡಯ್ಯಾ,'[೨] ಎಂದು; ಸಿರಿಯಾಳಸೆಟ್ಟಿ ಶಂಕರದಾಸಿಮಯ್ಯ ಮುಂತಾದ ಅನೇಕ ಪುರಾತನ ಭಕ್ತರು ಮರ್ತ್ಯಲೋಕದಲ್ಲಿ ಭಕ್ತಿಯ ಮನೆಗಟ್ಟಿಕೊಂಡು ಇದ್ದರು, ನಿಜ. ಆದರೆ ಅವರು ಭಕ್ತಿಮಾಡಿ ಸ್ವರ್ಗಕ್ಕೆ ಹೋದರು, ಭಕ್ತಿಯ ವ್ಯವಹಾರ ಮಾಡಿದರು. ಚತುರ್ವಿಧಪದವಿಗೊಳಗಾದರು. ಪಂಚಮ ಪುರುಷಾರ್ಥವೆನಿಸುವ ಸುಜ್ಞಾನ ಸದ್ಭಕ್ತಿಯ ನಿಜಮರ್ಮ ಅವರಿಗೆ ತಿಳಿಯಲಿಲ್ಲ. ಮುಕ್ತಿಯಿಂದಾಚೆ ನಿಜದಲ್ಲಿ ಆಡುವ ನಿಜಭಕ್ತಿಯ ಮಹಾಮನೆಯನ್ನು ಕಟ್ಟಲು ಅವರು ಸಮರ್ಥರಾಗಲಿಲ್ಲ. '...ಇವರೆಲ್ಲರು ಮನೆಯ ಮಾಡಿ ಮಹವನಱಿಯದೆ' ಹೋದರು. '...ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣ ದಲ್ಲಿ ಮನೆಯ ಕಟ್ಟಿದರೆ, ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗಪದಮಂ ಪಡೆದರು'.[೩] ಬಸವಣ್ಣ ಕಟ್ಟಿದ ಮಹಾ ಮನೆಯ ಲೋಕೋತ್ತರ ವಿಶೇಷ ಇದೇ. ಕಲ್ಯಾಣಕ್ಕೆ ಬರಬೇಕು. ಕೂಡಲ ಸಂಗನ ಬಸವಣ್ಣನನ್ನು ಕಾಣಬೇಕು. ಆತನ ಮಹಾಮನೆಯಲ್ಲಿ ಹೊಕ್ಕು 'ನಿಜಲಿಂಗಪದ'ದಲ್ಲಿ ನಿಲ್ಲಬೇಕು ಎಂದು ಸಿದ್ಧರಾಮಯ್ಯ ಹಲಕಾಲ ಹಂಬಲದ ತಪಸ್ಸು ಮಾಡಿದ್ದ. ಇದೋ ಇಂದು ಆತನ ಹಂಬಲ ಹಣ್ಣುಬಿಟ್ಟಿದೆ. '...ಗೊಹೇಶ್ವರಲಿಂಗಕ್ಕೆ ಕಂಗಳ ತೃಪ್ತಿ...'[೪] ಯನ್ನು ತಂದ ಸಂಗನ ಬಸವಣ್ಣನ 'ಅಷ್ಟಾಷಷ್ಟಿತೀರ್ಥ' ಅಂಗಳದಲ್ಲಿ ನಿಂದು ಸಿದ್ಧರಾಮಯ್ಯ '...ಕಪಿಲಸಿದ್ಧಮಲ್ಲಿನಾಥಾ, ನಿಮ್ಮ ಶರಣ ಸಂಗನ ಬಸವಣ್ಣನ ಮಹಾ ಮನೆಗೆ ನಮೋ ನಮೋ ಎಂದು ಬದುಕಿದೆನು', ಎಂದು ಮನಮಣಿದು ಮುಗಿದು ಹಾಡು ತ್ತಿದ್ದಾನೆ. ಬದುಕಿನ ಈ ಜೀವಂತಗೀತ ನಿಮಗೆ ಕೇಳುತ್ತಿದೆಯಲ್ಲವೇ?

ಸಿದ್ಧವೀರದೇವರು ತಿಳಿಸುವಂತೆ 'ಪ್ರಭುದೇವರೂ ಸಿದ್ಧರಾಮಯ್ಯದೇವರೂ ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ದ್ವಾರಪಟ್ಟದ ಮುಂದೆ'[೫] ನಿಂತಿ ದ್ದಾರೆ. ಅಲ್ಲಿಯೆ ಎಡೆಯಾಡುತ್ತಿರುವ ಹಡಪದಪ್ಪಣ್ಣ ಅವರನ್ನು ಕಂಡು ಹರುಷದ ಹೊನಲಲ್ಲಿ ಮುಳುಗಿ ಚಕಿತದ ಹೊಳೆಯಲ್ಲಿ ಏಳುತ್ತಾನೆ. ಒಳಗೆ ಬಂದು ಲಿಂಗಾರ್ಚನೆ ಯಲ್ಲಿ ಮುಳುಗಿರ್ದ ಬಸವಣ್ಣನಿಗೆ ಹೊರಗೆ ಬಂದು ನಿಂತಿರುವ 'ಕೌತುಕ'ದ ಬರವನ್ನು ಬಿನ್ನಯಿಸುತ್ತಾನೆ:

ದೇವ ದೇವ ಮಹಾಪ್ರಸಾದ.
ಕಂಗಳಲ್ಲಿ ಕರುಳಿಲ್ಲ; ಕಾಯದಲ್ಲಿ ಹೊರೆಯಿಲ್ಲ.

---

೧. ಶೂ. ಸಂ. ಪು. ೮೬, ವ. ೩೬.
೨. ಅದೇ ಪು. ೮೬, ವ. ೩೭.
೩. ಅದೇ ಪು. ೮೮, ವ. ೪೩.
೪. ಶೂ. ಸಂ. ಪ್ರ. ೮೯-೯೭, ವ. ೩೯.
೫. ಅದೇ ಪು. ೯೦, ಪ. ೧.

ನುಡಿಯಲ್ಲಿ ಕಡೆಯಿಲ್ಲ; ನಡೆಯಲ್ಲಿ ಗತಿಯಿಲ್ಲ.
ಇದೆಂತಹ ಸುಳುಹೆಂದರಿಯೆ !
ಇದೆಂತಹ ನಿಲವೆಂದು ತಿಳಿಯಬಾರದು.
ಮರುಳಿಲ್ಲದ ಮರುಳು, ಅರಿವಿಲ್ಲದ ಅರಿವು,
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಬರವು ಕೌತುಕವಾಯಿತ್ತು
ಚಿತ್ತೈಸಯ್ಯಾ ಸಂಗನ ಬಸವಣ್ಣಾ ![1]

ಅಪ್ಪಣ್ಣ ಕೌತುಕಗೊಂಡಿರುವುದು ಹೊರಗೆ ಬಂದು 'ನೆಳಲಿಲ್ಲದೆ' ನಿಂತಿರುವ, 'ಹಜ್ಜೆಯಿಲ್ಲದೆ' ನಡೆವ. 'ಕಂಗಳ ಕಳೆಯ ಬೆಳಗಳಿದು'[2] ನೋಡುವ ನೋಟದ, ಅರಿವೆಂದರೆ ಅರಿವಲ್ಲ ಮರುಳೆಂದರೆ ಮರುಳೂ ಅಲ್ಲದ, ವಿಗಡವಾದ 'ಸಗುಣ ನಿರ್ಗುಣ ಭರಿತ' ಮೂರ್ತಿಯನ್ನು ಕಂಡು. ಈ ಮಾತು ನಮಗೆ ಹೊಸದಲ್ಲ. ಪ್ರಭುವಿನ ಮೂರ್ತಿ ಆಕಾರವಿದ್ದು ಆಕಾರವಲ್ಲದ ನಿಲವು. ಗಮನವಿದ್ದು ನಿರ್ಗಮನವಾದ ಸುಳುಹು,– ಪ್ರಭುವನ್ನು ನೋಡಿದವರೆಲ್ಲ ಇದೇ ಮಾತನ್ನು ಹೇಳುತ್ತ ಬಂದಿದ್ದಾರೆ. ಇದನ್ನು ನಾವು ಮೊದಲಿಂದ ಕೇಳುತ್ತ ಬಂದಿದ್ದೇವೆ. ಇಂಥ ನಿಲವು ಇಂಥ ಸುಳುಹು ಮಾನವನ ಅನುಭವಕ್ಕೆ ಹೊರತು. ಇದು ಎಲ್ಲರಿಗೂ ಗೊತ್ತು. ಆದರೆ ಇದು 'ತ್ರಿಕಾಲಾಸಂಭವ' ಎಂದು ನಾವು ನಿರ್ಣಯಕೊಡುವುದು ತಪ್ಪು.

ಲಿಂಗಾರ್ಚನೆ ಎಂದರೆ ಸುಖದ ಸುಖ ಬಸವಣ್ಣನಿಗೆ. ಪೂಜೆಯಲ್ಲಿ ಮುಳುಗಿ ಓಲಾಡುತ್ತಿದ್ದಾನೆ. ಅಪ್ಪಣ್ಣನ ಮಾತು ಕೇಳುತ್ತಾನೆ. ಪೂಜೆಮಾಡುವುದನ್ನು ಬಿಟ್ಟು ಎದ್ದು ಬಂದು ಬಾಗಿಲಿಗೆ ಬಂದಿರುವ ಜಂಗಮವನ್ನು ಬರಮಾಡಿಕೊಳ್ಳಬೇಕೇ? ಅಥವಾ ಹೊರಗೆ ಬಂದಿರುವ ಜಂಗಮ ಒಳಗೆ ತನ್ನ ಪ್ರಾಣಸ್ಥಲದ ಸಿಂಹಾಸನದಲ್ಲಿ ಮೂರ್ತಗೊಂಡು ತನ್ನ ಕಾಯವೆಂಬ ಭಕ್ತನ ಕೈಯಲ್ಲಿ ಅಂತರಂಗದ ಪ್ರಾಣಪೂಜೆಯನ್ನು ಕೊಳ್ಳುತ್ತಿದ್ದಾನೆ. ಪ್ರಾಣಸ್ಥಲದ ಮೂರ್ತಿಯೆ ಕರಸ್ಥಲದ ಸಿಂಹಾಸನದಲ್ಲಿ ಬಹಿರಂಗದ ಪೂಜೆಯಲ್ಲಿ ಅಲಂಕಾರವಾಗಿ ಕುಳಿತಿದ್ದಾನೆ. ಬಾಗಿಲ ಜಂಗಮ ಬೇರೆ ಪ್ರಾಣದ ಜಂಗಮ ಬೇರೆ, ಅಲ್ಲಿಯ ಜಂಗಮ ಇಲ್ಲಿಯ ಜಂಗಮ ! ಜಂಗಮ ಎರಡುಂಟೇ? ಕಾಯವೆಲ್ಲ ಭಕ್ತನಾಗಿ ಪ್ರಾಣದಲ್ಲಿ ನೆಲೆಗೊಂಡಿರುವ ಚಿತ್‌ಚೈತನ್ಯ ಜಂಗಮವೆ ಭಕ್ತಕಾಯದಲ್ಲಿ ಹರಿವ ಪೂಜೆಯ 'ಅರಿವು ಚೈತನ್ಯ'ವಾಗಿದ್ದರೆ ಭಕ್ತನಿಂದ ಹೊರಗೆ ಜಂಗಮವೆಲ್ಲಿದೆ? ಜಂಗಮವಿಲ್ಲದ ಭಕ್ತಿ, ಭಕ್ತ ಜೀವಂತವಾಗಿರುವುದೆಲ್ಲಿ? ಕಾಯಕ್ಕೆ ಪ್ರಾಣದ ಸಂಬಂಧವಿದ್ದಂತೆ ಭಕ್ತನಿಗೆ ಜಂಗಮದ ಸಂಬಂಧ. ಈ ಏಕತ್ವದ ಪ್ರಾಣಸಂಬಂಧವಿದ್ದಲ್ಲಿ ಉಪಚಾರ ಯಾರಿಗೆ? ಉಪಚಾರಮಾಡಬೇಕು ಯಾರು? ಬಸವಣ್ಣನ ಸುಜ್ಞಾನ ಮುಖದಲ್ಲಿ ನಡೆದ ಈ ವಿವೇಕ ಶಬ್ದವಾಗಿ ನುಡಿಯುತ್ತದೆ ಅಪ್ಪಣ್ಣನಿಗೆ:

ಕಾಯದ ಕೈಯಲ್ಲಿ ಕರಸ್ಥಲ. ಪ್ರಾಣದ ಕೈಯಲ್ಲಿ ಜಂಗಮಸ್ಥಲ.
ಈ ಉಭಯಭಾವದ ಶಿವಲಿಂಗಾರ್ಚನೆ ಪರಮಾನಂದ ಸುಖಸ್ಥಲ.

---

೧. ಶೂ. ಸಂ. ಪು. ೯೦. ವ. ೧.
೨. ಶೂ. ಸಂ. ಪು. ೪೦. ವ. ೧೪.

> ಕಾಯ ಭಕ್ತ, ಪ್ರಾಣ ಜಂಗಮ. ಆವುದ ಘನವೆಂಬೆ? ಆವುದ ಕಿಱಿದೆಂಬೆ?
> ಕೂಡಲಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ.
> ಕರುಣದಿಂ ಬರಹೇಳಾ ಅಪ್ಪಣ್ಣಾ.[೧]

ದೇಹಪ್ರಾಣದಂತೆ ಒಂದಾಗಿದ್ದ ಭಕ್ತಜಂಗಮದಲ್ಲಿ 'ಆವುದ ಘನವೆಂಬೆ? ಆವುದ ಕಿಱಿದೆಂಬೆ?'–ಎಂದು ಕೇಳುತ್ತಾನೆ ಬಸವಣ್ಣ. ಭಕ್ತ ತನ್ನ ಪ್ರಾಣದ ಪ್ರಾಣ ಜಂಗಮವನ್ನೆ ಹೊತ್ತುಕೊಂಡು ಜಂಗಮದಿಂದಲೆ ಪ್ರಾಣಿಸುತ್ತಿರಲು. ಆ ಜಂಗಮ ಭಕ್ತನ ಕಾಯವನ್ನೆ ಹತ್ತಿಕೊಂಡು ಆ ಭಕ್ತನಿಂದಲೆ 'ದೇಹಿಸು'ತ್ತಿರಲು ಹೆಚ್ಚುಕಡಮೆಯ ಪ್ರಶ್ನೆಯೆ ಇಲ್ಲ ಎಂಬುದು ಬಸವಣ್ಣನ ವಿವೇಕ. ಪುಷ್ಪ ಕಾಯ. ಪರಿಮಳ ಪ್ರಾಣ–ಹೆಚ್ಚಾವುದು ಕಡಮೆಯಾವುದು? ಚಿತ್ರದ ಕಾಯ ಸೌಂದರ್ಯದಿಂದ ಪ್ರಾಣಿಸುತ್ತಿದ್ದರೆ ಚಿತ್ರ ಹೆಚ್ಚೋ. ಸೌಂದರ್ಯ ಹೆಚ್ಚೋ? ಬಣ್ಣವನ್ನು ಹೊತ್ತಿರುವ ಚಿನ್ನ. ಮಧುರವನ್ನು ರಾಗಿಸುವ ಸಂಗೀತ, ರಸವನ್ನು ಕೇಳಿಸುವ ಕಾವ್ಯ–ಆವುದು ಘನ? ಆವುದು ಕಿರಿದು? ಎರಡಾಗಿದ್ದರೆ ಕಿರಿದು ಘನದ ಪ್ರಶ್ನೆ. ಅಲ್ಲಿ ಇಲ್ಲಿಯ ಪ್ರಶ್ನೆ. ಉಪಚಾರದ ಕರೆಕಳಿಸುವ ಪ್ರಶ್ನೆ. ಬಸವಣ್ಣನ ಈ ವಿಚಾರಸರಣಿಯಲ್ಲಿಯೆ ಮುಂದುವರಿದು ಪ್ರಭು–ರಾಮರನ್ನು ಕರೆಯಲು ಬರುತ್ತಾನೆ ಹಡಪದಪ್ಪಣ್ಣ. ಜಂಗಮಪ್ರಾಣಿಯ ಏಕಾರ್ಥ ಪ್ರಜ್ಞೆಯಲ್ಲಿ ಭಕ್ತಜಂಗಮದ ಮನಮನ ಒಂದಾಗಿ, ದೇಹದೇಹ ಒಂದೆ ಪ್ರಾಣದಿಂದ ಸಂಬದ್ಧವಾಗಿ ಇದ್ದರೆ ಇಲ್ಲಿ ಭಕ್ತ ಜಂಗಮಕ್ಕೆ ಅಡ್ಡಲಾಗಿ ತೆರೆಮರೆಯೆಲ್ಲಿದೆ? ಎರಡರ ನಡುವೆ ಜವನಿಕೆ ಇದ್ದರೆ ಉಪಚಾರ. ಎರಡರ ಸಂಗವಾಗುವ ಮುನ್ನ ಉಪಚಾರ. ಭಕ್ತ ಜಂಗಮ ಸಂಗವಾಗಿ. ಸಮರಸವಾಗಿ. ಏಕಾರ್ಥವಾಗಿದ್ದರೆ ಮತ್ತೆಲ್ಲಿಯ ಸಂಗ? ತುಂಬಿ ಹೂವಿನ ಸಂಗವಾಗಿ ಹೊಟ್ಟೆತುಂಬ ಮಕರಂದವಾಗಿದ್ದರೆ ಮತ್ತೆ ಹೊರಳಿ ಸಂಗವೇಕೆ? ಪರ್ವತದ ತುದಿಗೇರಿ ಮತ್ತೆ ಹತ್ತುವೆನೆಂಬ ಸಂಭ್ರಮವೇಕೆ? ಕೂಡಿ ಒಂದಾದ ಬಳಿಕ ಸಂಗವೆಂಬುದಿಲ್ಲ. ಇದ್ದರೆ ನಿಸ್ಸಂಗದ ಸಂಗ. ಉಪಚಾರವಿಲ್ಲ: ಇದ್ದರೆ ಬಿನ್ನಹವಿಲ್ಲದ ಉಪಚಾರ. 'ಸಂಗ ನಿಸ್ಸಂಗವಾಗಿಪ್ಪವರಲ್ಲಿ ಉಪಚರ್ಯಕೆ ಇಂಬಿಲ್ಲ...' ಆದ್ದರಿಂದ 'ಬಸವಣ್ಣನಟ್ಟಿದನು ಕೃಪೆಮಾಡು ಗುರುವೆ'.[೨] —ಎಂದು ಒಳಗೆ ದಯಮಾಡಿಸಲು ಬಂದ ಜಂಗಮವನ್ನು ಪ್ರಾರ್ಥಿಸುತ್ತಾನೆ ಹಡಪದಪ್ಪಣ್ಣ.

ಅಂಥ ಇಂಥ ಜಂಗಮವಾಗಿದ್ದರೆ. ಅಂಥ ಇಂಥ ಬುದ್ಧಿಯಾಗಿದ್ದರೆ ಅಪ್ಪಣ್ಣನ ಮುಖವಾಗಿ ಬಂದ 'ಬಿಜಯಂಗೆಯ್ಯಬೇಕು' ಎಂಬ ಬಸವಣ್ಣನ ಬಿನ್ನಹದಲ್ಲಿ. ಬಿನ್ನಹಕಾರನಿಗೇ ತಿಳಿಯದಂತೆ ಹುದುಗಿರುವ ಭಕ್ತಿಯ ತಾಮಸವನ್ನು ಅದ್ವೈತದ ಮುಸುಕಿನಲ್ಲಿ ಅಡಗಿ ಬರುತ್ತಿರುವ ದ್ವೈತದ ಅಜ್ಞಾನವನ್ನು ಒಮ್ಮೆಲೆ ಕಂಡುಹಿಡಿಯುವುದು ಕಷ್ಟವಾಗಬಹುದಿತ್ತು. ಆದರೆ ಸುಜ್ಞಾನದ ಘನಗಟ್ಟಿಯಾದ. ಸದ್ಭಕ್ತಿ ಸದಾಚಾರದ ತಾಯಿಬೇರನ್ನು ಬಲ್ಲ ಪ್ರಭುವಿಗೆ ಭಕ್ತರ ಇಂಥ ಜಾಣತನದ ಹುಚ್ಚು ಸಂಪೂರ್ಣ ಗೊತ್ತು. ಇದಲ್ಲದೆ ಜಂಗಮಲಿಂಗ ಭಕ್ತಿಯ ಬಯಕೆಯಿಂದ ಮನೆಗೆ ನಡೆದುಬಂದು ಅಂಗಳದಲ್ಲಿ

---

೧. ಶೂ. ಸಂ. ಪು. ೯೧, ವ. ೨. ೨. ಶೂ. ಸಂ. ಪು. ೯೧, ವ. ೩.

ನಿಂತಿದ್ದರೆ 'ಅಟ್ಟಾಟಿಕೆಯಲ್ಲಿ' ಕರೆಕಳಿಸುವುದೇ? ಎಂಥ ಭಕ್ತಿ !. ಏನು ಮಾತು ! ಮನ ಮನ ಒಂದಾಗಿದ್ದರೆ, ತನ್ನ ಪ್ರಾಣವೆ ಜಂಗಮು ಆ ಜಂಗಮಕ್ಕೆ ತಾನೆ ಕಾಯವಾಗಿ ಸಮರಸ ವಾಗಿ ಬೆಸೆದುಕೊಂಡಿದ್ದರೆ, ಜಂಗಮಲಿಂಗಕ್ಕೆ ತನ್ನ ತನುವೆ ತನುವಾಗಿದ್ದರೆ ಕರೆಯಲಿಲ್ಲ ಕಾಲುವಿಡಿಯಲಿಲ್ಲ'–ಎಂದು ಭಕ್ತಜಂಗಮೈಕ್ಯಭಾವದಲ್ಲಿ ಬಸವಣ್ಣ ನಿರ್ಧರವಾಗಿ ನಿಂತಿದ್ದರೆ ಮತ್ತೆ ನಿನ್ನನ್ನು ಅಟ್ಟಿ ಕರೆದು ತಾರೆಂದು ಕರೆಕಳಿಸುವ ಭಿನ್ನಭಾವದ ಉಪಚಾರ ಎಲ್ಲಿಂದ ನುಸುಳಿಬಂತು ಐಕ್ಯಭಾವದಲ್ಲಿದ್ದ ಬಸವಣ್ಣನಲ್ಲಿ? ನಾನು ತಾನು ಒಂದಾಗಿ ನಿಂದ ಬಳಿಕ ಯಾರಿಗೆ ಯಾರ ಉಪಚಾರ? ಎರಡರಲ್ಲಿ ಉಪಚಾರ, ಎರಡರಲ್ಲಿ ಸಂಗ, ಎರಡ ರಲ್ಲಿ ಸಂಬಂಧ. ಒಂದಕ್ಕೆ ಅದೇ ಒಂದು ಉಪಚರಿಸಬಲ್ಲುದು ಹೇಗೆ? ನಿಜ, ಬಸವಣ್ಣನ ಈ ಅರಿಕೆ. ಈ ಅರಿವಿಗೆ ತಕ್ಕ ಆಚಾರ ಬಸವಣ್ಣನಿಗೆ ಬೇಡವೇ? ಐಕ್ಯದ ಅರಿವು ಗಟ್ಟಿ ಗೊಂಡು ಇದ್ದರೆ ಈ ಅಟ್ಟಾಟಿಕೆಯು ಉಪಚಾರಕ್ಕೆ ಇಂಬು ಎಲ್ಲಿದೆ? 'ಅಂಗದ ಕೈಯಲ್ಲಿ ಕ್ರೀ ಇರಲು ಮಾತಿನ ಅದ್ವೈತವೆಂತಪ್ಪುದೊ?'[೨] ಮನದಲ್ಲಿ ಎರಡು ಬಗೆದು, ಕೈಯಲ್ಲಿ ಎರಡು ಹಿಡಿದು, ಎರಡು ಮಾಡಿ, ಮಾತಿನಲ್ಲಿ ಎರಡನ್ನು ದುಂಡಂಕಿಮಾಡಿ 'ಅದ್ವೈತ' ವನ್ನು ನುಡಿದರೆ ಮನದ ದ್ವೈತಭಾವವನ್ನು ಮುಚ್ಚಿದಂತಾಯ್ತೆ? ಮತ್ತೆ ಅದ್ವೈತ ಭಕ್ತನ ವಿಪರೀತ ! 'ಆನಾಗದ ಮುನ್ನವೆ.'[೨] ನಾನು ತಾನಾಗುವ ಮೊದಲೆ, ಜಂಗಮು ಭಕ್ತನಾಗದ ಮುನ್ನವೆ ಜಂಗಮದೊಡನೆ ತಾನು ಬೆರಸಿ ಒಂದಾಗಿದ್ದೇನೆ ಎಂಬ ಭಕ್ತನ ಸಾಹಸ ಅತಿ ಸಾಹಸ ! 'ಆನಾಗದ ಮುನ್ನವೆ ತಾನಾದೆನೆಂಬವರಲ್ಲಿಗೆ ನಮ್ಮ ಗೊಹೇಶ್ವರ ಲಿಂಗವು ಅಡಿ ಇಡುವನಲ್ಲ.'[೩]

ಮುತ್ತಿನ ಹಾರದಂತಿರುವ 'ಗೊಹೇಶ್ವರಲಿಂಗ'ದ ಮಾತಿನಿಂದ ಬೆಪ್ಪಾಗಿ, ಬಸವಣ್ಣ ನಲ್ಲಿಗೆ ತಿರುಗಿ ಬಂದ ಹಡಪದಪ್ಪಣ್ಣ. ಅಂಗಳದಲ್ಲಿ ನಿಂತಿರುವ ಜಂಗಮದ ಹದನಾದ ಉತ್ತರವನ್ನು ಬಿನ್ನಯಿಸಿದ ಬಸವಣ್ಣನಲ್ಲಿ: ನಾನು ಬಸವಣ್ಣನೆಂಬ ಅಂಗದ ಕಳೆ, ಜೀವಭಾವದ ಪ್ರಕೃತಿಯ ಧರ್ಮ. ಒಗರು ಕಹಿ ಜಿಗುಟು ಒಣಗಿಹೋಗಿ ಅಂಗದಲ್ಲಿಯ ಚಿತ್ಕಳೆ ಲಿಂಗದಲ್ಲಿ ಲೀಯವಾಗದೆ, ಲಿಂಗದ ಅದೇ ಪರಮ ಚಿತ್‌ಪರಿಪೂರ್ಣ ಆ ಚಿತ್ ಕಳೆಗೂಡಿ ಒಂದಾಗಿ ನಿಲ್ಲದೆ 'ಆನು ತಾನಾದೆ'ನೆಂದು ನುಡಿವ 'ಮಾತಿನ ಮಾಲೆಯ ಬೊಮ್ಮವೇತಕಿದೊ? ಕಾಯ ಭಕ್ತನಾದರೆ ಭೃತ್ಯಾಚಾರವಿರಬೇಕು. ಪ್ರಾಣ ಜಂಗಮ ವಾದರೆ ಅಜಿವಿರಬೇಕು. ಇಂತೀ ಭಕ್ತಿಜ್ಞಾನವುಳ್ಳವರಲ್ಲದೆ ಭಕ್ತರಲ್ಲ. ಶರಣರಲ್ಲ.'[೪] ಹಿರಿಯರು ಮನೆಯಂಗಳದಲ್ಲಿ ಬಂದು ನಿಂತರೂ ಇದಿರೆದ್ದು ಬಾರದ 'ಭೃತ್ಯಾಚಾರ ಹೀನ'ರ ಮನೆಯೊಳಗೆ ಕಾಲಿಡೆವೆಂದು ಮಾತಿನ ಅದ್ವೈತವನ್ನು ಕಡಿಖಂಡ ಮಾಡು ತ್ತಿದ್ದಾರೆ ಮುನಿಸುಗೊಂಡಿರುವ ಜಂಗಮವು. ಇದಕ್ಕೆ ನೀನೆ ಬಲ್ಲೆ ಸಂಗನ ಬಸವಣ್ಣಾ.

ಅಪ್ಪಣ್ಣನ ಮಾತು ಕೇಳಿ ಏಕಾರ್ಥದ ಅದ್ವೈತದ ಮಂಜುಗತ್ತಲೆಯಲ್ಲಿ ತನ್ನ ತಾ ಮೈಮರೆತಿದ್ದ ಬಸವಣ್ಣ ಕೆಲವಟ್ಟಿಗೆ ಎಚ್ಚರಗೊಳ್ಳುತ್ತಾನೆ ತನ್ನ ಭೃತ್ಯಾಚಾರದ ಸತ್ಯ

---

೧. ಶೂ. ಸಂ. ಪು. ೯೧. ವ. ೪. ೩. ಶೂ. ಸಂ. ಪು. ೯೧, ವ. ೪.
೨. ಅದೇ ಪು. ೯೧. ವ. ೪. ೪. ಅದೇ ಪು. ೯೨. ವ. ೫.

ಸದಾಚಾರದಲ್ಲಿ. 'ಕಾಯ ಭಕ್ತನಾದರೆ ಭೃತ್ಯಾಚಾರವಿರಬೇಕು. ಪ್ರಾಣ ಜಂಗಮವಾದರೆ ಅಱುವಿರಬೇಕು,'—ಈ ಮಾತಿನ ಜ್ಯೋತಿ ಅದ್ವೈತದ ಮಬ್ಬನ್ನು ಭೇದಿಸಿ 'ಭೃತ್ಯಾಚಾರ'ಕ್ಕೆ ಬೆರಳುಮಾಡಿ ತೋರುತ್ತದೆ. ಮಾತಿನ ಮರ್ಮ ಇನ್ನೂ ಪೂರ್ಣ ಹೊಳೆಯದ ಬಸವಣ್ಣ ಅರ್ಥಮರ್ಥ ಕೆಳಗಿಳಿಯುತ್ತಾನೆ ಭಕ್ತಿ ಕ್ರಿಯೆಯೊಡನೆ ಸಮರಸವಾಗಿಲ್ಲದ ಅದ್ವೈತಜ್ಞಾನದ ಮಾಳಿಗೆಯ ಮೇಲಿಂದ. ಅಪ್ಪಣ್ಣನಿಗೆ ಮತ್ತೊಮ್ಮೆ ನಿರೂಪ ಕೊಡುತ್ತಾನೆ ಬಂದ ಜಂಗಮವನ್ನು ಕರೆದುಕೊಂಡು ಬಾ ಎಂದು:

ಭಕ್ತನ ಕಾಯವ ಜಂಗಮ ಧರಿಸಿಪ್ಪ ನೋಡಾ !
ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ !
ಭಕ್ತನಲ್ಲಿಯೂ ಭಕ್ತಜಂಗಮವೆರಡು ಸನ್ನಹಿತ;
ಜಂಗಮದಲ್ಲಿಯೂ ಜಂಗಮಭಕ್ತನೆರಡು ಸನ್ನಹಿತ.
ಜಂಗಮಕ್ಕಾದರೂ ಭಕ್ತಿಯೆ ಬೇಕು. ಭಕ್ತಂಗೆ ಭಕ್ತಿಸ್ಥಲ ಬೇಕು.
ಭಕ್ತನ ಅರ್ಥಪ್ರಾಣಾಭಿಮಾನಕ್ಕೆ ತಾನೆ ಕರ್ತನೆಂದು ಬಂದ ಜಂಗಮ,
ಆ ಭಕ್ತನ ಮನೆಗೆ ತಾನೆ ಕರ್ತನಾಗಿ ಹೊಕ್ಕು
ತನುಮನಧನಂಗಳನೆಲ್ಲವನೊಳಕೊಂಡು,
ಆ ಭಕ್ತನ ಪಾವನವ ಮಾಡಬಲ್ಲರೆ ಆತ ಜಂಗಮವೆಂಬೆ.
ಆ ಜಂಗಮದ ಗಳಗರ್ಜನೆಗೆ ಸೈರಿಸಿ,
ಮುಡುಹಿಂಗೆ ಮುನ್ನೂಱು ಪಟ್ಟವ ಕಟ್ಟಿದರೆ ಆತ ಭಕ್ತನೆಂಬ.
ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೆ?
ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು,
ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನ್ನ.[೧]

ಅಪ್ಪಣ್ಣಾ, ಭಕ್ತ ಜಂಗಮ ಎರಡಲ್ಲ. ಒಂದು. ದೇಹವಿಲ್ಲದೆ ಪ್ರಾಣಕ್ಕೆ ಪ್ರಾಣಿಸಲು ನೆಲೆಯಿಲ್ಲ, ಪ್ರಾಣವ ಹೊತ್ತಿರದ ದೇಹ ದೇಹವಲ್ಲ. ದೇಹ ಪ್ರಾಣಕ್ಕೆ ಹೆಸರು ಎರಡು, ರೂಪ ಎರಡು, ಗುಣ ಧರ್ಮ ಕರ್ಮ ಎರಡಾಗಿ ತೋರಿದರೂ ಈ ಎರಡು ಒಂದಾಗಿ ಜೀವಂತವಾಗಿ ನಿಲ್ಲದೆ ಆ ತೋರುವ ಎರಡಕ್ಕೆ ಮೂಲಾಧಾರವೆ ಇಲ್ಲ. ಒಂದರಲ್ಲಿ ಒಂದು ಸನ್ನಿಹಿತವಾಗಿವೆ, ಉರಿಯಲ್ಲಿ ಎಣ್ಣೆ, ಎಣ್ಣೆಯಲ್ಲಿ ಉರಿ ಸನ್ನಿಹಿತವಾಗಿರುವಂತೆ. ಉರಿವ ಎಣ್ಣೆಯೆ ಭಕ್ತ, ಎಣ್ಣೆಯನ್ನು ಸುಟ್ಟು ತಿನ್ನುವ ಉರಿಯೆ ಜಂಗಮ. ಎಣ್ಣೆಯಲ್ಲಿ ಎಣ್ಣೆ ಇದೆ, ಉರಿಯಲ್ಲಿಯೂ ಎಣ್ಣೆ ಇದೆ, ಎಣ್ಣೆ ಬೇಕು. ಭಕ್ತನಲ್ಲಿ ಅಥವಾ ಭಕ್ತನನ್ನು ಜಂಗಮ ಉರಿವಂತೆ ಜಂಗಮದಲ್ಲಿ ಅಥವಾ ಜಂಗಮವನ್ನು ಭಕ್ತ ಭಕ್ತಿಯಾಗಿಸಿ ಉರಿಯಬೇಕು. ಉರಿ ಎಣ್ಣೆಯ ಸಮರಸವೆ ಬೆಳಗು. ಭಕ್ತ ಜಂಗಮ ಒಂದರಲ್ಲಿ ಒಂದು ಕರಗಿ ಸಮರಸವಾಗಿ ಒಂದಾಗಿ ಬೆಳಗುತ್ತಿದ್ದ ಬಳಿಕ ಕರೆವ ಕರೆಸಿಕೊಳ್ಳುವ ಇದಿರು ಉಪಚಾರವೇಕೆ? ಮತ್ತೆ ಭಕ್ತಿಯನ್ನುಂಡು ನಿತ್ಯ ಬದುಕಿರುವ ಜಂಗಮ ಭಕ್ತನ ಸರ್ವಸ್ವಾಮಿ. ಒಡೆಯನಿಗೆ

೧. ಕೂ. ಸಂ. ಪು. ೯೨, ವ. ೬.

'ಅರ್ಥ ಪ್ರಾಣ ಅಭಿಮಾನ' 'ತನು ಮನ ಧನ'ವನ್ನೆಲ್ಲ ಒಪ್ಪಿಸಿದ ಭಕ್ತ, ಒಡೆಯರ ಒಡವೆಯೆ ಆದ ಅರ್ಥಪ್ರಾಣಾದಿಗಳ, ಮನೆಮಾರು ಮಠಮಾನ್ಯಗಳ ಬಾಗಿಲಲ್ಲಿ ಹಗಲು ರಾತ್ರಿ ಕಾಯ್ದುಕೊಂಡು, ಒಡೆಯರ ಬರವನ್ನೆ ಹಾರೈಸಿಕೊಂಡು ಕುಳಿತಿರುವ 'ಬಾಗಿಲು ಗಾಹಿ'. ತನ್ನ ಮನೆ ತನ್ನ ಮಠ, ತನ್ನ ಅರ್ಥ ತನ್ನ ಪ್ರಾಣ ತನ್ನ ಅಭಿಮಾನದಲ್ಲಿ ತಾನು ಪ್ರವೇಶಿಸಬೇಕಾದರೆ ಯಾರು ಉಪಚಾರಮಾಡಿ ಒಳಗೆ ಬರಮಾಡಿಕೊಳ್ಳಬೇಕು? ತನ್ನ ಮನೆಗೆ ತಾನೆ ಕರ್ತನಾಗಿ ಬರಬೇಕು, ಇರಬೇಕು. ಭಕ್ತನ ಅರ್ಥ ಪ್ರಾಣ ಅಭಿಮಾನ, ತನು ಮನ ಧನದ ಮಠವನೊಪ್ಪಿಸಿಕೊಂಡು ಇದ್ದು 'ಆ ಭಕ್ತನ ಪಾವನವ ಮಾಡಬಲ್ಲರೆ ಆತ ಜಂಗಮವೆಂಬೆ.' ಮನೆಯೊಡೆಯ ಜಂಗಮದೇವ 'ಮನೆಯ ರಜ'ಕ್ಕೆ 'ಹೊಸ್ತಿಲ ಹುಲ್ಲಿಗೆ, ತನುವಿನ ಹುಸಿ ಮನದ ವಿಷಯಕ್ಕೆ ಜಡಿದು ಝಂಕಿಸಿದರೆ, ದೇವ ಮನೆಗೆ ಬಂದು ಬಯ್ದು ಬಡಿದರೆ ಅವಗುಣವಳಿದು ಪಾವನವಾದೆ, ಅವಲೋಹವಳಿದು ಚಿನ್ನವಾದೆ'ನೆಂದು ಜಂಗಮದ ತಲೆಯಲ್ಲಿ ಪಟ್ಟದ ಮೇಲೆ ಪಟ್ಟವ ದಣಿಯದೆ ತಣಿಯದೆ ಕಟ್ಟಿದರೆ 'ಆತ ಭಕ್ತನೆಂಬೆ'. ಅಪ್ಪಣ್ಣಾ, ಮನೆಯೊಡೆಯರಾದ ಜಂಗಮದೇವರ ಮನೆಯ ಬಾಗಿಲುಗಾಹಿ ನಾನು. ತಮ್ಮ ಮನೆಗೆ ತಾವು ಬರಲು ಉಪಚಾರ ಬೇಕೆ? ಇಲ್ಲದ ಉಪಚಾರಕ್ಕೆ ಮುನಿಯಬೇಕೆ? ಒಡೆಯರಿಗೆ ಕರುಣಿಸಿ ಬರಹೇಳು ಅಪ್ಪಣ್ಣಾ.

ಜಂಗಮದಲ್ಲಿಗೆ ಮತ್ತೆ ಕರೆಯಲು ಬರುತ್ತಾನೆ ಹಡಪದಪ್ಪಣ್ಣ. ಬಸವಣ್ಣನ ಭಕ್ತಿಯನ್ನು, ಆ ಭಕ್ತಿಯ ಹೃದಯದಲ್ಲಿ 'ಮುನ್ನೂಱು' ಪಟ್ಟವ ಕಟ್ಟಿಸಿಕೊಂಡು ಕುಳಿತಿರುವ ದೇವನನ್ನು ಇದ್ದಂತೆ ಬಿಚ್ಚಿ ಹೇಳುತ್ತಾನೆ. 'ಭಕ್ತನ ಮಠವೆಂದು ಮುನ್ನವೆ ಅಱಿದಱಿದು ಬಂದು ಮತ್ತೊಂದ ಮತ್ತೊಂದ ನೆನೆವರೆ? ಬಸವಪ್ರಿಯ ಕೂಡಲಚೆನ್ನಬಸವಣ್ಣನ ಶರಣ ಬಸವಣ್ಣಂಗೆ ಸ್ವತಂತ್ರಭಾವವುಳ್ಳಡೆ ನಿಮ್ಮ ಪಾದದಾಣೆ.'[೧] ಅಪ್ಪಣ್ಣನ ಈ ಬಿನ್ನಪಕ್ಕೆ ಆಕಾಶಗಂಗೆಯಂತೆ ಇಳಿದುಬರುತ್ತದೆ ಅಲ್ಲಮಲಿಂಗನ ಉತ್ತರ:

ಭಕ್ತ ಜಂಗಮದ ಸಕೀಲಸಂಬಂಧವನಾರು ಬಲ್ಲರು ಹೇಳಾ?
ಅರ್ಥವನೊಪ್ಪಿಸಿದಾತ ಭಕ್ತನಲ್ಲ. ಪ್ರಾಣವನೊಪ್ಪಿಸಿದಾತ ಭಕ್ತನಲ್ಲ.
ಅಭಿಮಾನವನೊಪ್ಪಿಸಿದಾತ ಭಕ್ತನಲ್ಲ.
ಅದೇನು ಕಾರಣವೆಂದರೆ, ಸತ್ಯಸದಾಚಾರಕ್ಕೆ ಸಲ್ಲನಾಗಿ.
ಆ ಭಕ್ತನ ಮನೆಯ ಹೊಕ್ಕು ಪಾದಾರ್ಚನೆಯ ಮಾಡಿಸಿಕೊಂಡು.
ಒಡಲ ಕಕ್ಕುಲಿತೆಗೆ ಅಶನವನುಂಡು, ವ್ಯಸನದ ಕಕ್ಕುಲಿತೆಗೆ ಹಣವ ಬೇಡಿ,
ಕೊಟ್ಟಡೆ ಕೊಂಡಾಡಿ, ಕೊಡದಿರ್ದಡೆ ದೂಱಿಕೊಂಡು ಹೋಹಾತ ಜಂಗಮವಲ್ಲ.
ಆದಿಯನಾದಿಯಿಂದತ್ತತ್ತ ಮುನ್ನಲಾದ ಮಹಾಘನವ ಭೇದಿಸಿ ಕಂಡಱಿದು.
ಕಾಯದ ಜೀವದ ಹೊಲಿಗೆಯ ಬಿಚ್ಚಿ ಬೀಸಾಡಿ ತನ್ನನೆ ಅರ್ಪಿಸಿ ಇರಬಲ್ಲಾತ ಭಕ್ತ.
ಸುಳಿಹಿನ ಸೂತಕ ಪ್ಪೈದೋಱದೆ, ಒಡಲ ಕಳವಳದ ರುಚಿಗೆ ಹಾರೈಸದೆ.
ಅಱಿವೆ ಅಂಗವಾಗಿ. ಆಪ್ಯಾಯನವೆ ಭಕ್ತಿಯಾಗಿ.

೧. ಶೂ. ಸಂ. ಪು. ೯೨, ವ. ೭.

ಕಿಂಕುರ್ವಾಣವೆಂಬ ಶಿವಮಂತ್ರಕ್ಕೆ ನಮೋ ನಮೋ ಎನಬಲ್ಲರೆ ಆತ ಜಂಗಮ.
ಆ ಭಕ್ತನ ಆ ಜಂಗಮದ ಸಮ್ಮೇಳವೆ ಸಮ್ಮೇಳ.
ಮಿಕ್ಕಿನ ಅರೆಭಕ್ತರೊಡತಣ ಸಂಗ ನಮ್ಮ ಗೊಹೇಶ್ವರಲಿಂಗಕ್ಕೆ ಸೊಗಸದು.[೧]

ಅರ್ಥಪ್ರಾಣಾದಿಗಳನ್ನು ಜಂಗಮಕ್ಕೆ ಒಪ್ಪಿಸಿದರೆ ಲಿಂಗಜಂಗಮ ಭಕ್ತಿಯ ಅಧ್ಯಾಯ ಮುಗಿಯಲಿಲ್ಲ. ಅರ್ಥಪ್ರಾಣ ಅಭಿಮಾನವೆಂಬ ಒಡೆಯರ ಮನೆಯ ಬಾಗಿಲಲ್ಲಿ ಕುಳಿತು ಬಾಗಿಲನ್ನು ಕಾಯ್ದುಕೊಂಡಿದ್ದರೆ ಭಕ್ತ ಮುಗಿಯಲಿಲ್ಲ. ಒಡೆಯರ ಮನೆಯಾದ ಅರ್ಥ ಪ್ರಾಣ ಅಭಿಮಾನ ತನು ಮನ ಧನದಲ್ಲಿ ಮೈಮುರಿದು ದುಡಿದು ಕೆಲಸ ಮಾಡಬೇಕು. ಸತ್ಯಸದಾಚಾರಕ್ಕೆ ಸಲ್ಲಬೇಕು, ಸರ್ವಾಂಗದಲ್ಲಿ ಭೃತ್ಯಾಚಾರ ಧುಮ್ಮಿಕ್ಕಿ ಹರಿಯಬೇಕು. ಕಿಂಕುರ್ವಾಣಭಾವ ಸರ್ವಾಂಗದಲ್ಲಿ ಕೈಮುಗಿದು ನಿಂದಿರಬೇಕು. ಮತ್ತೆ ಅರ್ಪಿಸಬೇಕು ಭಕ್ತ. ಏನನ್ನು? ಬರಿ ಅರ್ಥಪ್ರಾಣಾದಿಗಳನ್ನಲ್ಲ. ತನ್ನನ್ನೆ ಅರ್ಪಿಸಬೇಕು ಭಕ್ತ. ಭಕ್ತ ತಾನಾರು? ಆದಿ ಅನಾದಿಯನ್ನು ಹಡೆದ ಮಹಾಘನವಸ್ತುವನ್ನು ತನ್ನೊಳಗೆ ತಾನಿಳಿದು ಭೇದಿಸಿ ನೋಡಿ, ಕಣ್ಣಾರೆ ಕಂಡು ಅನುಭಾವವಾರೆ ಅದೇ ತಾನೆಂದು ಅರಿದು, ಈ ತನಗೆ ಬ್ರಹ್ಮಗಂಟು ಬಿದ್ದಿರುವ ಕಾಯದ ಜೀವದ ಹೃದಯಗ್ರಂಥಿಯನ್ನು ಬಿಚ್ಚಿ ಕಳೆದೊಗೆದು 'ದಿಗಂಬರ', 'ಚಿದಂಬರ'ವಾದ ತನ್ನನ್ನು, ಚಿದಂಬರಭಾವವನ್ನು ನಿಜಭಕ್ತಿಯಿಂದ ನಿರಾಳ ಜಂಗಮಲಿಂಗಕ್ಕೆ ನೈವೇದ್ಯಮಾಡಿ ಇರಬಲ್ಲರೆ ಆತ ಭಕ್ತ. ಮತ್ತೆ ಜಂಗಮ: ಭೃತ್ಯಾಚಾರವಿಲ್ಲದ. ಸತ್ಯಸದಾಚಾರಕ್ಕೆ ಸಲ್ಲದ ಹೆಸರುಭಕ್ತರ ಮನೆಗೆ ಹಸಿವಿಗಾಗಿ. ವಿಷಯವ್ಯಸನಕ್ಕಾಗಿ ಹರಿದಾಡುವ ಜಂಗಮ ಎಂಥ ಜಂಗಮ! ಆತ ಹಸಿಜಂಗಮ. ಹುಸಿಜಂಗಮ. ಆದರೆ ಶಿವಾನುಭಾವದರಿವೆ ತನಗೆ ಅಂಗವಾಗಿ. ತನಗೆ ಹಸಿವು ಭಕ್ತಿಯ ಹಸಿವಾಗಿ. ತನಗೆ ತೃಪ್ತಿ ಭಕ್ತಿಯೆ ಸಂಪೂರ್ಣ ತೃಪ್ತಿಯಾಗಿ. ನಿಜಭಕ್ತಿಯ 'ಕಿಂಕರೋಮಿ. ಕಿಂಕರೋಮಿ...' ಎಂಬ ಸಹಸ್ರಪಠಿತ ಕಿಂಕುರ್ವಾಣ ಶಿವಮಂತ್ರಕ್ಕೆ. ಶಿವಭಕ್ತಿಗೆ. ನಿಜ ಭಕ್ತನಿಗೆ 'ನಮೋ ನಮೋ...' ಎಂದು ಮಣಿದು. ಶರಣೆಗೆ ಶರಣು ಶರಣು ಎಂದು ಮಂತ್ರ ಪಠಿಸುವ ಜಂಗಮ ಜಂಗಮ. ಇಂಥ ಜಂಗಮ ನಡೆದರ ಹಜ್ಜೆಯಿಲ್ಲ. ಸುಳಿದರೆ ಸೂತಕವಿಲ್ಲ. ಉಂಡರೆ 'ಒಡಲ ಕಳವಳದ ರುಚಿ' ಇಲ್ಲ. ಇಂಥ ಭಕ್ತ ಜಂಗಮದ ಸಮ್ಮೇಳ ಸದ್ಗೋಷ್ಠಿ ಸಾಮರಸ್ಯ ಭಕ್ತಿಗೆ ಪರಮಾಲಂಕಾರ. ಜ್ಞಾನಕ್ಕೆ ಮಹಾಭೂಷಣ. 'ಮಿಕ್ಕಿನ ಅರೆಭಕ್ತರೊಡತಣ ಸಂಗ ನಮ್ಮ ಗೊಹೇಶ್ವರಲಿಂಗಕ್ಕೆ ಸೊಗಸದು'.

ಬಸವಣ್ಣ ಅರೆಭಕ್ತನಲ್ಲ. 'ಮರ್ತ್ಯಲೋಕ ಶಿವಲೋಕದಲ್ಲಿ ಬಸವಣ್ಣನಲ್ಲದೆ ಲಿಂಗಕ್ಕಾಧಾರವಿಲ್ಲವೆಂದು ಮರ್ತ್ಯಲೋಕದಲ್ಲಿ ಬಂದವತರಿಸಿ...'.[೨] 'ಅಂಗಮುಖ ವೆಲ್ಲಾ ನಷ್ಟವಾಗಿ ಭೃತ್ಯಾಚಾರವೆ ತನುವಾಗಿರಬಲ್ಲ'.[೨] ಬಸವಣ್ಣನೆ 'ನಿಮಗೆ ಭಕ್ತನಲ್ಲದೆ ಮತ್ತಾರನು ಕಾಣೆನಯ್ಯಾ'–ಎಂದು ಬಸವಣ್ಣನ ಭಕ್ತಿಯ ಘನವನ್ನು ಪ್ರಭುವಿನ ಮುಂದೆ ಹರವುತ್ತಾನೆ ಅಪ್ಪಣ್ಣ. ಅಪ್ಪಣ್ಣನ ಮತದಲ್ಲಿ ಭಕ್ತಿ ಎಂದರೆ ಬಸವಣ್ಣ. ಬಸವಣ್ಣ ಇದರರ್ಥ ಭಕ್ತಿ. ಭಕ್ತಿಯುಳ್ಳಿಗಲ್ಲದೆ ಜಂಗಮವೆಲ್ಲಿಗೆ ಹೋಗಬೇಕು? ಒಳಗೆ

---

೧. ಶೂ. ಸಂ. ಪು. ೯೨-೯೩. ವ. ೮.   ೨. ಶೂ. ಸಂ. ಪು. ೯೩. ವ. ೯.

ದಯಮಾಡಿಸಬೇಕು ಎಂದು ಎದೆಯೊಡ್ಡಿ ಬೇಡುತ್ತಾನೆ ಅಪ್ಪಣ್ಣ. ಆದರೆ ಅಪ್ಪಣ್ಣ ನಲ್ಲಿರುವ ಭಕ್ತಿಯ ಒರೆಗಲ್ಲು, ಅಲ್ಲಮನ ಒರೆಗಲ್ಲು-ಒಂದೇ ಅಲ್ಲ. ನಿಮ್ಮಲ್ಲಿ ಭಕ್ತಿ ತಮ್ಮಲ್ಲಿ ಭಕ್ತಿ ನಮ್ಮಲ್ಲಿ ಭಕ್ತಿ ಎಂದರೆ 'ಶಿವಶರಣರು ಮೆಚ್ಚುವರೆ?'[೧] ವಿಭೂತಿಯನ್ನು ಮೈತುಂಬ ಹೂಸಿಕೊಂಡು ರುದ್ರಾಕ್ಷಿಮಾಲೆಗಳನ್ನು ತೊಟ್ಟುಕೊಂಡು ಹೊರಗೆ 'ಹೂಸಿ ಹುಂಡನೆ'[೧] ಮಾಡಿಕೊಂಡರೆ ಅದು ಭಕ್ತಿಯೆ? ಅದು ಯುಕ್ತಿಯೆ? ಬಾಯಲ್ಲಿ ಸವಿಸವಿ ಯಾಗಿ ಮಾತಾಡಿದರೆ ಭಕ್ತನಾಗಬಲ್ಲನೆ? ಮನೆಯಂಗಳದಲ್ಲಿ ಬಂದು ನಿಂತಿರುವ ಜಂಗಮದ 'ಇಂಗಿತಾಕಾರವನಱಿಯದೆ,'[೧] ಇದಿರೆದ್ದು ಬಂದು ವಂದಿಸಿ ಕೈಮುಗಿದು ನಿಂದು, 'ನಡನಡುಗಿ ಕಿಂಕಿಲನಾಗಿ ಭಯ ಭೀತಿ ಭೃತ್ಯಾಚಾರ'ವೆ ತಾನು ಆಗಿ ಇರಬಲ್ಲ ಸತ್ಯಭೃತ್ಯಾಚಾರಿ ಆತ ಭಕ್ತ. ಬಂದವರ ಬರವೇಕೆ, ಅವರು ನಿಂದ ನಿಲವೇನು ಎಂದು ತಿಳಿದು ನೋಡದೆ, ಭಕ್ತರಲ್ಲಿ ಭಕ್ತಿಗಾಗಿ ಸುಳಿವ 'ಗೊಹೇಶ್ವರಲಿಂಗ'ದ ನಿಗೂಢವನ್ನು ಕಾಣದೆ, ನಾನು ಭಕ್ತ ನೀನು ಭಕ್ತನೆಂಬ ಅಹಂಕಾರದ ಭಕ್ತರಿಗೆ ಸತ್ಯಸದಾಚಾರಕ್ಕೆ, ನಿತ್ಯ ಶಿವಾಚಾರಕ್ಕೆ ಸಲುವಳಿಯಾಗುವ ಭೃತ್ಯಾಚಾರದ ಭಕ್ತಿಯ ಮಾತೇಕೆ? ಮಾತಿನಲ್ಲಿ ಅದ್ವೈತ ನುಡಿದು, ಮಾತಿಗೆ ಮರುಮಾತಿನ ಬಾಣ ಬಿಟ್ಟರೆ ಭಕ್ತನಾಗಿ ಪೂರ್ಣ ಮುಗಿದು ಬಿಟ್ಟನೆ? ಬಸವಣ್ಣನೆಂದರೆ ಭಕ್ತಿಯನ್ನೆಲ್ಲ ಮಾಡಿ ಮುಗಿಸಿಬಿಟ್ಟನೆ? ಎಂಥ ಮೂರ್ಖ ತನ! 'ಬೆಳ್ಳಿಗೆಯ ಮಕ್ಕಳೆಂದರೆ ಬಳ್ಳವಾಲ ಕಱೆವವೇ ಮರುಳೆ? ಸಂಗನ ಬಸವಣ್ಣ ನೆಂದರೆ ಮಾತಿನ ಮಾತಿಂಗೆಲ್ಲ ಭಕ್ತಿಯುಂಟೆ?', ತಾನು ಕೂಡಲಸಂಗನ ಭಕ್ತ, ಭಕ್ತಿಯ ಸಾಗರವನ್ನೆ ಹಿಂಡಿದೆ, ಹಿಂಡಬಲ್ಲೆ ಎಂಬ ಹಮ್ಮು ಈ ಬೆಳ್ಳಿಗೆಯ ಹಸುಗರುವಿಗೆ! ಅದು ಹೇಗೆ ಕೂಡೀತು? 'ಅಹಂಕಾರವ ಹೊತ್ತುಕೊಂಡು ಇಪ್ಪರಿಗೆ ನಮ್ಮ ಗೊಹೇಶ್ವರ ಲಿಂಗನೊಲ್ಲ ನೋಡಾ'.[೧]

ಬಂದ ಜಂಗಮಕ್ಕೆ ಬಸವಣ್ಣನ ಭಕ್ತಿಯನ್ನು ಬಿತ್ತರಿಸಿ, ಅವರ ಮನವೊಲಿಸಿ, ಒಳಗೆ ದಯಮಾಡಿಸಿಕೊಂಡು ಹೋಗಬೇಕೆಂದು ವಿಶ್ವಪ್ರಯತ್ನಮಾಡಿದ ಅಪ್ಪಣ್ಣನ ಹವಣಿಕೆ ಮೀರಿಹೋಯ್ತು. ನಿರಾಶೆಯಿಂದ ಭಾರವಾದ ಹೃದಯ. ಒಣಗಿದ ಮೋರೆಯಲ್ಲಿ ಬಸವಣ್ಣನಲ್ಲಿಗೆ ತಿರುಗಿ ಬಂದ ಅಪ್ಪಣ್ಣ. ಸಂಗನ ಬಸವಣ್ಣ ಎಂದರೆ ಭಕ್ತಿಯ ಘನಘಟ್ಟಿ ಎಂಬ ಮಾತಿನಲ್ಲಿ ಎಳ್ಳಷ್ಟು ಸಂಶಯವಿಲ್ಲ ಅಪ್ಪಣ್ಣನಿಗೆ. ಹಾಗಿದ್ದರೆ ಜಂಗಮವೇಕೆ ದಯಮಾಡಿಸಲಿಲ್ಲ? ಅದು ಬಸವಣ್ಣನ ಭಕ್ತಿಯ ಕೊರತೆಯಲ್ಲ. ತನ್ನ 'ಅತ್ತಿಯ ಹಣ್ಣಿನ' ಭಕ್ತಿಯೇ ಜಂಗಮ ಒಳಗೆ ಬಾರದಿರಲು ಮುಖ್ಯಕಾರಣ ಎಂದು ಅಪ್ಪಣ್ಣನ ಎದೆಯಲ್ಲಿ ಹೆದರಿಕೆಯ ಮುದ್ರೆ. 'ಹಣೆಯ ಹೊಣೆಯ ತೋಱಿ ಉದರವ ಹೊರೆವ ನಿಮ್ಮ ಮಱೆಯಲಡಗಿಪ್ಪ ಹಡಪಿಗ ನಾನಯ್ಯಾ!' ಹೊಟ್ಟೆಯ ಪಾಡಿಗೆ ವೇಷಹೊತ್ತು, ತಲೆಬಾಗಿಸಿ ಭಕ್ತನೆಂದು ನಡೆದರೆ ಭಕ್ತಿ ಆಕಾಶದಿಂದ ಇಳಿದು ಬರಬೇಕೆ? 'ಬಸವಪ್ರಿಯ ಕೂಡಲಚೆನ್ನಸಂಗನ ಶರಣರು ಎನ್ನ ಮಾತಿಂಗೆ ಬಾರರು. ನೀವೆ ಹೋಗಿ ಬಿಜಯಂಗೈಸಿ ಕೊಂಡುಬಾರಾ ಸಂಗನ ಬಸವಣ್ಣಾ'.[೨] ಬಂದ ಮೂರ್ತಿಯಲ್ಲಿ ಏನೋ ಲೋಕಾತೀತ

೧. ಶೂ. ಸಂ. ಪು. ೬೩-೯೪, ವ. ೧೦. ೨. ಶೂ. ಸಂ. ಪು. ೯೪, ವ. ೧೧.

ವಿಶೇಷ ಇದ್ದಂತಿದೆ. 'ಕಂಗಳಲ್ಲಿ ಕರುಳಿಲ್ಲ, ಕಾಯದಲ್ಲಿ ಹೊರೆಯಿಲ್ಲ...'[೧] ಎಂದು ಮುಂತಾಗಿ ತಾನು ಮೊದಲು ನೋಡಿದೊಡನೆ ಅಲೌಕಿಕ ಪ್ರಭಾವವನ್ನು ಬೀರಿದ ಜಂಗಮ ಮೂರ್ತಿ 'ಕಾಬರೆ ಕಂಗಳಿಗೆ ಅಸಾಧ್ಯ, ಮುಟ್ಟುವರೆ ಸೋಂಕಿಂಗಸಾಧ್ಯ, ಮಾತನಾಡಿಸಿ ನೋಡಿದರೆ ವಾಙ್ಮನೋತೀತ, ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ.' ಈ ಬಯಲಾಕಾರ ಅಲ್ಲಮಪ್ರಭುದೇವರೆ ಇರಬಹುದೇನೋ ಎಂಬ ಪ್ರಬಲ ಸಂಶಯ ಅಪ್ಪಣ್ಣನಿಗೆ. ಪ್ರಭು ಕಲ್ಯಾಣಕ್ಕೆ ಹಿಂದೆ ಎಂದೂ ಬಾರದಿದ್ದರೂ ಆತನ 'ನೆಳಲಿಲ್ಲದ' ಮೂರ್ತಿಯ ಸುದ್ದಿ, ಅಲ್ಲಮನ 'ಹಜ್ಜೆಯಿಲ್ಲದ' ಕೀರ್ತಿ ಎಲ್ಲೆಡೆಗೆ ಹರಡಿತ್ತೆಂದೆ ಹೇಳ ಬೇಕು. ಆ ಕೀರ್ತಿಯ ಪ್ರತ್ಯಕ್ಷಮೂರ್ತಿಯೆ ಹೊರಗೆ ಬಂದ ಜಂಗಮವಿರಬೇಕು. 'ಪ್ರಭು ದೇವರೆಂಬ ಭಾವ ತೋಱುತ್ತದೆ. ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣರ ಚರಣವಿಡಿವರೇಳಾ ಸಂಗನ ಬಸವಣ್ಣಾ'.[೨]

ಇದೇ ಹೊತ್ತಿಗೆ ಚೆನ್ನಬಸವಣ್ಣ ಬರುತ್ತಾನೆ ಬಸವಣ್ಣನಲ್ಲಿಗೆ. ಸೊಲ್ಲಾಪುರದಿಂದ ಸಿದ್ಧರಾಮಯ್ಯ ಮತ್ತು ಅಲ್ಲಮಪ್ರಭು ಕಲ್ಯಾಣಕ್ಕೆ ಬಂದು ಬಸವಣ್ಣನ ಅರಮನೆಯ ದ್ವಾರವಟ್ಟದ ಮುಂದೆ ನಿಂತಿರುವ ಸುದ್ದಿ ಮತ್ತು ಲಿಂಗಪೂಜೆಯಲ್ಲಿ ಕುಳಿತ ಬಸವಣ್ಣ ಪೂಜೆಬಿಟ್ಟು ಏಳಲೊಲ್ಲದೆ ಹಡಪದ ಅಪ್ಪಣ್ಣನನ್ನು ಕರೆದು ತರಲು ಅಟ್ಟಿದ ಸಂಗತಿ, ಅಟ್ಟಾಟಿಕೆಯಲ್ಲಿ ಕರೆಕಳಿಸಿದ 'ಭೃತ್ಯಾಚಾರಹೀನ'ರ ಮನೆಗೆ ಬಾರೆವೆಂದು ಪ್ರಭುದೇವರು ಅಪ್ಪಣ್ಣನನ್ನು ತಿರುಗಿ ಕಳಿಸಿದ ವಿಷಯ ಚೆನ್ನಬಸವಣ್ಣನಿಗೆ ತಿಳಿದುಬಂದಿದೆ. ಒಮ್ಮೆಲೆ ಧಾವಿಸಿ ಬರುತ್ತಾನೆ ಬಸವಣ್ಣನ ಪೂಜಾಮಂದಿರಕ್ಕೆ. 'ಪ್ರಭುದೇವರು ಸಿದ್ಧರಾಮಯ್ಯ ದೇವರು ಬಂದು ನಿಮ್ಮ ದ್ವಾರವಟ್ಟದ ಮುಂದೆ ನಿಂದೈದಾರೆ. ನೀವೆ ಹೋಗಿ ಬಿಜ ಯಂಗೈಸಿ ತನ್ನಿ'[೩]—ಎಂದು ಬಸವಣ್ಣನನ್ನು ಬಿನ್ನಯಿಸುತ್ತಾನೆ. ಈ ಬಿನ್ನಹದಲ್ಲಿ ಬಸವಣ್ಣನ ಅಚಾತುರ್ಯ, ಮಹಾಪ್ರಮಾದದ ಬಗ್ಗೆ ಆತನ ಸುಜ್ಞಾನಹೃದಯದಲ್ಲಿ ಮೊಳೆದೋರಿದ ಮುನಿಸು ಮಾತಿನಲ್ಲಿ ಒಡೆದು ಮೂಡುತ್ತಿದೆ. ಪ್ರಭುದೇವರು ಸಿದ್ಧರಾಮಯ್ಯದೇವರು ಬಂದು ಬಾಗಿಲದಲ್ಲಿ ನಿಂತರೆ 'ಅಟ್ಟಾಟಿಕೆಯಲಿಂತು ತೆಱಹು ಮಱಹಾಗಿಪ್ಪುದು'[೪] ನಿಮಗೆ ಯೋಗ್ಯವೆ ಬಸವಣ್ಣಾ! ಲಿಂಗವೆ ಜಂಗಮ, ಜಂಗಮವೆ ಲಿಂಗ ಎಂದು ನಂಬಿ ನಚ್ಚಿ, ಲಿಂಗಪ್ರಾಣಿಯಾಗಿದ್ದಂತೆ ಜಂಗಮಪ್ರಾಣಿಯಾಗಿ ಇದ್ದವರು ನೀವು. ಮತ್ತೆ ಮೇಲೆ 'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥ' ಎಂಬ ವಿಶ್ವಾಸ ನಿಮ್ಮ ಪ್ರಾಣ. ಇಷ್ಟಿದ್ದು, ಮನೆಗೆ ಬಂದ ಲಿಂಗಶರಣರ ನಿಲವು ಮನಕ್ಕೆ ಸಾಕ್ಷಿ ಯಾಗಿ ತಿಳಿಯದಿದ್ದರೆ ತಪ್ಪಿತ್ತು ವಿಶ್ವಾಸ, ಕೆಟ್ಟಿತ್ತು ಭಕ್ತಿ. ಕರಸ್ಥಲದ ಇಷ್ಟಲಿಂಗದಲ್ಲಿ ಪೂಜೆಗೊಂಬ 'ಸಂಗಮನಾಥ ಮನೆಗೆ ಅಂಗವಿಡಿದು ಬಂದರೆ, ದಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ!'[೫]- 'ಲಿಂಗವ ಪೂಜಿಸಿ ಫಲವೇನಯ್ಯಾ....ಕೂಡಲಸಂಗಮ ದೇವರಲ್ಲಿ ನದಿಯೊಳಗೆ ನದಿ ಬೆರೆಯದನ್ನಕ್ಕರ?'[೬] 'ನಿಜಸಮಾಧಿಯೊಳು ಬೆರಸುವ

೧. ಶೂ. ಸಂ. ಪು. ೯೦, ವ. ೧.
೨. ಅದೇ ,, ೯೪, ವ. ೧೨.
೩. ಅದೇ ,, ೯೪, ಪ್ರ. ೧೩.
೪. ಶೂ. ಸಂ. ಪು. ೯೫, ಪ್ರ. ೧೪.
೫. ಅದೇ ,, ೯೫, ವ. ೧೩.
೬. ಅದೇ ,, ೮೧, ವ. ೩೦.

ಭೇದ ಎನಗೆಂದು ಸಯುವಪ್ಪುದು?'[೧] – ಎಂದು ಶರಣಸಂಗಕ್ಕೆ ಹಗಲಿರುಳು ಹಂಬಲಿಸಿದಿರಿ ನೀವು. ಆ ಕೂಡಲಸಂಗಮದೇವರೆ ಬಾಗಿಲಿಗೆ ಹರಿದುಬಂದರೆ 'ಕಣ್ಣಱಿಯದಿದ್ದರು ಕರುಳಱಿಯಬೇಡಾ ಸಂಗನ ಬಸವಣ್ಣಾ?'[೨]

'ಕಾಯ ಭಕ್ತ, ಪ್ರಾಣ ಜಂಗಮು,' 'ಕೂಡಲಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ',[೩] 'ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು, ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನ್ನೆ,'[೪]–ಎಂದು ಭಕ್ತಿ ತಲೆಗೇರಿದ್ದ ಬಸವಣ್ಣ ಚೆನ್ನಬಸವಣ್ಣನ ಮಾತು ಕೇಳಿ ಭೀತಿಯ ಪಾತಾಳಕ್ಕಿಳಿಯುತ್ತಾನೆ. 'ಇನ್ನೇವೆನಿನ್ನೇವೆ? ಕೆಮ್ಮನೆ ಕೆಟ್ಟೆನು!'[೫] ಶರಣಲಿಂಗ ನಡೆದು ತಾನಾಗಿ ಮನೆಗೆ ಬಂದರೆ 'ದಿಮ್ಮನೆ ಇದಿರೆದ್ದು ವಂದಿಸಲಱಿಯದೆ'[೬] ಕೆಮ್ಮನೆ ಕೆಟ್ಟೆನು, ಕೆಮ್ಮನೆ ಕೆಟ್ಟೆನು !! ಅಂಗೈಯ ಲಿಂಗಕ್ಕೆ ಭ್ರಷ್ಟ, ಕಾಲಲ್ಲಿ ನಡೆದು ಬಂದ ಜಂಗಮಕ್ಕೆ ಭ್ರಷ್ಟ. ವಿಷಗುಂಬಳ ಹಣ್ಣಾದಂತೆ ಆಯ್ತು ನನ್ನ ಭಕ್ತಿ! 'ನವರತ್ನವ ಕಿತ್ತು ಮಡುವಿನೊಳಗೆ ಹಾಯ್ಕಿದ ಕಪಿಯಂತಾಯ್ತೆನ್ನ ಭಕ್ತಿ'[೭]–ಹೀಗೆ ಹಲವು ಹಲುಬಿ 'ಚಿಕ್ಕದಣ್ಣಾಯಕರ ಪಾದದ ಮೇಲೆ'[೮] ಬಿದ್ದಿರುವ ಭಕ್ತಿಯನ್ನು ನೋಡಿ, ಸಿದ್ಧವೀರದೇವರು ತೋರಿಸುತ್ತಾರೆ: ಚಿಕ್ಕದಣ್ಣಾಯಕರ 'ವಾಕ್ಯವ ಕೇಳಿದಾಕ್ಷಣವೆ ಬಸವರಾಜದೇವರು ಹಮ್ಮದಂಬೋಗಿ ನಡನಡುಗಿ ಭಯಾರ್ಣವದೊಳ್ ಮುಳುಂಗಿ, ಕಂಗಳ ಬಾಷ್ಪವಿನೊಳು ಮುಂದುಗಾಣದೆ, ಚಿಕ್ಕದಣ್ಣಾಯಕರ ಪಾದದ ಮೇಲೆ ಬಿದ್ದು, ಪ್ರಭುದೇವರ ಮುನಿಸ ತಿಳುಹಿಕೊಡಿ,'[೮] 'ಕೂಡಲಸಂಗಮದೇವರ ತಂದುಕೊಟ್ಟರೆ, ನಿಮ್ಮ ಚಮ್ಮಾವುಗೆಯ ಹೊತ್ತುಕೊಂಡು ಕುಣಿದಾಡುವೆನು ಕಾಣಾ ಚೆನ್ನಬಸವಣ್ಣಾ!' ಬಸವಣ್ಣ ತನ್ನ ಶಿಷ್ಯನ, ಅಳಿಯನ ಕಾಲ ಮೇಲೆ ಬೀಳುವುದು ಇಂದಿನ ನಮಗೆ 'ಅತಿ'ಯಾಗಿ ತೋರಬಹುದು. ಅದು ಆಶ್ಚರ್ಯದ ಮಾತಲ್ಲ. ನಮ್ಮಂತೆ ನಾವು, ಭಕ್ತಿಯಂತೆ ಭಕ್ತಿ.

ಶರಣರಿಗೆ ಶರಣು ಶರಣು ಎಂಬುದು ಶರಣಧರ್ಮ. 'ಚಿಕ್ಕದಣ್ಣಾಯಕರು ಹಿರಿಯದಣ್ಣಾಯಕರ ಪಾದಕ್ಕೆ ನಮಸ್ಕಾರಮಂ ಮಾಡಿ'[೯] ತನುಮನದಲ್ಲಿ ವಿನಯ ತುಂಬಿ ಮಾತಿನಲ್ಲಿ ಅದೇ ವಿನಯ ಮೃದುಮಧುರವಾಗಿ, ಗುರುಭಕ್ತಿಯ ಗಾಂಭೀರ್ಯದಿಂದ 'ಅಭಯ'ದ ಬಿನ್ನಹವಾಗಿ ಹೊಮ್ಮುತ್ತಿದೆ, ನೋಡಿ:

ಹೋ! ಹೋ! ಗುರುವೇ,
ನಿಮ್ಮ ಚಮ್ಮಾವುಗೆಯ ಬಂಟನಾನಾಗಿರಲು ಅಂಜುವರೆ? ಅಳುಕುವರೆ?
ಸಂಗಮನಾಥ ಬಂದು ನಿಮ್ಮ ಮನವ ನೋಡಲೆಂದು
ತಮ್ಮ ಮನವನಡ್ಡಲಿಕ್ಕಿದನೊಂದು ಲೀಲೆಯಲ್ಲಿ.
ಅದು ನಿಮಗೆ ಸಹಜವಾಗಬಲ್ಲುದೆ?

---

೧. ಶೂ. ಸಂ. ಪು. ೮೧, ಪ್ರ. ೩೦.
೨. ಅದೇ ,, ೯೫, ವ. ೧೩.
೩. ಅದೇ ,, ೯೧, ವ. ೨.
೪. ಅದೇ ,, ೯೨, ವ. ೬.
೫. ಅದೇ ,, ೯೫, ವ. ೧೪.
೬. ಶೂ. ಸಂ. ಪು. ೯೫, ವ. ೧೪.
೭. ಅದೇ ,, ,, ವ. ೧೫.
೮. ಅದೇ ,, ,, ಪ್ರ. ೧೪.
೯. ಅದೇ ,, ,, ಪ್ರ. ೧೭.

ಮಂಜಿನ ಮೋಹರ ರವಿಯ ಕಿರಣವ ಕೆಡಿಸಲಾಪವೆ?
ನಿಮ್ಮ ನೆನೆವರಿಗೆ ಸಂಸಾರವಿಲ್ಲೆಂದು ಶ್ರುತಿಗಳು ಹೊಗಳುತ್ತಿರಲು,
ನಿಮ್ಮಱಿವಿಂಗೆ ಕೇಡುಂಟೆ?
ಕೂಡಲಚೆನ್ನಸಂಗನ ಶರಣರ ಕರೆವರೆ
ಎನ್ನ ಮನವೆಂಬ ಚಮ್ಮಾವುಗೆಯ ಮೆಟ್ಟಿ ನಡೆಯಾ ಸಂಗನ ಬಸವಣ್ಣಾ.[೧]

ಸತ್ಯ ಸಾತ್ತ್ವಿಕ ಪ್ರೇಮದ, ಸದುವಿನಯದ ಪರಮಾವಧಿಯ ರಸಸಂಗಮಚಿತ್ರ ಈ ಹಿರಿಕಿರಿಯ ದಣ್ಣಾಯಕರ ಅನ್ಯೋನ್ಯ ಬಾಂಧವ್ಯ. ಭಯಸಮುದ್ರದಲ್ಲಿ ಮುಳುಗಿ ಏಳಲಾರದೆ ಕಾಲುಬಡಿಯುತ್ತಿರುವ ಗುರು ಬಸವಣ್ಣನಿಗೆ ಶಿಷ್ಯ 'ಅಭಯ'ವನ್ನು ಅರ್ಪಿಸುತ್ತಾನೆ. ಸಂಗಮನಾಥ–ಪ್ರಭು ಬಾಗಿಲಿಗೆ ಬಂದು ಭೃತ್ಯಾಚಾರವಿಲ್ಲದವರ ಮನೆಯೊಳಗೆ ಕಾಲಿಡೆವೆಂದು 'ತಮ್ಮ ಮನವನಡ್ಡಲಿಕ್ಕಿದನೊಂದು ಲೀಲೆಯಲ್ಲಿ'. ನಿಮ್ಮ ಮನಕ್ಕೆ, ನಿಮ್ಮ 'ಭಕ್ತಜಂಗಮಸಾಮರಸ್ಯ'ದ ಅನುಭವಕ್ಕೆ. 'ಬಾಗಿಲುಗಾಹಿ'ಯಾಗಿರ್ದ ದಾಸೋಹಂಭಾವಕ್ಕೆ ತಮ್ಮ ಮನದಿಂದ ಅಡ್ಡಗಾಲು ಹಾಕಿದ್ದಾನೆ ಮನೆಗೆ ಬಂದ ಸಂಗಮನಾಥ. ಹೀಗೆ ತಮ್ಮ ಮನವನ್ನು ಅಡ್ಡಲಾಗಿ ಇಡಲು ಕಾರಣ ಅಲ್ಲಮನಾಥನ ಒಂದು ಲೀಲೆ. ಭಕ್ತಿಯನ್ನು ಪುಟವಿಟ್ಟು ನೂರರ ಒರೆಗೆ ಬಣ್ಣವೇರಿಸುವ ಜಂಗಮದ ಹವಣು. ಹೀಗೆ ಪುಟಕ್ಕೆ ಹಾಕಿ ಕರಗಿಸಿ ಒರೆದು ಕೊರೆದು ನೋಡಿದರೆ ಯಾರಿಗೆ ಏನು ಹಾನಿಯಾಗಬೇಕಿದೆ ಸಂಗನ ಬಸವಣ್ಣಾ? 'ನಿಮ್ಮ ಅಱಿವಿಂಗೆ ಕೇಡುಂಟೆ?' ಸಂಗಮನಾಥನ ಲೀಲೆಯಿಂದ ಬಂದ ಅಡ್ಡಲುಗಳು ಲೀಲಾಜಾಲವಾಗಿ ತಾವೆ ಕರಗಿಹೋಗುತ್ತವೆ. ಸತ್ಯಜ್ಞಾನ ಸದ್ಭಕ್ತಿಯ ಮುಂದೆ ತೋರುವ ಅಂತರಾಯ. ವಿಘ್ನ ರವಿಯ ಮುಂದೊಡ್ಡಿದ ಮಂಜಿನ ಮೋಹರ. ಗುರುಬಸವಾ, ನಿಮ್ಮ ನೆನೆದರೆ ಭವಮರಣದ ಸಂಸಾರವಿಲ್ಲ. ನಿಮಗೆ ಈ ಲೀಲೆಯ ಅಡ್ಡಲಿನ ಹೆದರಿಕೆಯೆ? ನಡೆ ಪ್ರಭುದೇವನಲ್ಲಿಗೆ ಹೋಗೋಣ. 'ಎನ್ನ ಮನವೆಂಬ ಚಮ್ಮಾವುಗೆಯ ಮೆಟ್ಟಿ ನಡೆಯಾ ಸಂಗನ ಬಸವಣ್ಣಾ'. 'ನಿಮ್ಮ ಚಮ್ಮಾವುಗೆಯ ಬಂಟ ನಾನು'. ಮತ್ತೆ ಹೆದರಿಕೆ ಯಾರದು?

ಇದೇ ಸಮಯದಲ್ಲಿ ಬಸವಣ್ಣನಲ್ಲಿಗೆ ಬಂದ ಸೊಡ್ಡಳ ಬಾಚರಸರದೂ ಬಸವಣ್ಣನ ಮನೋಭಾವ ಮತ್ತು ಅಂತಃಕರಣ ಪ್ರವೃತ್ತಿಯ ಸಾಧುತ್ವದ ಬಗ್ಗೆ ಚೆನ್ನಬಸವಣ್ಣನ ಧೋರಣೆಯೇ:

ತೆಱಹು ಮಱಹೆಂಬುದು ನಿಮ್ಮ ಗುಣವಲ್ಲ.
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೆ?
ಮನವ ನೋಡಲೆಂದು ನಾಟಕವನೊಡ್ಡಿದರೆ
ಅದಕ್ಕೆ ಸಹಜವಲ್ಲಾಗಿ ಹೆದಱಿಲಿಲ್ಲ.
ಮಹಾದಾನಿ ಸೊಡ್ಡಳನ ಮನ ನೊಂದಿತ್ತೆಂದು
ಅಂಜಬೇಡವೇಳಾ ಸಂಗನ ಬಸವಣ್ಣಾ.[೨]

---

೧. ಶೂ. ಸಂ. ಪು. ೯೬, ವ. ೧೬.   ೨. ಶೂ. ಸಂ. ಪು. ೯೬, ವ. ೧೮.

ಮಹಾದಾನಿ ಸೊಡ್ಡಳ ಪ್ರಭುಲಿಂಗ 'ಬೇವಿನ ಬಿಂದುವಿಲ್ಲದ ಅಮೃತಸಾಗರ'ವಾದ ನಿನ್ನ ಮನದಾಳವನ್ನು ಹೊರಕ್ಕೆ ತಂದು ಜಗತ್ತಿಗೆ ತೋರಬೇಕೆಂದು ನಾಟಕ ಹೂಡಿದ್ದಾನೆ. ಪುಷ್ಪಕೋಟಿಯ ಮೇಲೆ ಕಾಲಿಟ್ಟು ತುಳಿಯುತ್ತ ಮಂದಮಾರುತ ಸುಳಿದಾಡಿದರೆ ಪುಷ್ಪ ವಾಟಿ ಹೆದರಬೇಕೆ? ತೋಟದ ಪರಿಮಳವನ್ನು ಕೊಂಡೊಯ್ದು ಜಗದ ಮೂಗಿಗೆ ತೋರಿ ಬೀರಬೇಕೆಂದು ಗಾಳಿ ನಾಟಕವಾಡಿದರೆ ತೋಟ ಅಂಜಿ ಕುಳ್ಳಿರಲು ಕಾರಣವೇನು? ಗಾಳಿಗೆ ಇದಿರೆದ್ದು ವಂದಿಸಿ ಇದ್ದ ಪರಿಮಳವನ್ನೆಲ್ಲ ಅರ್ಪಿಸಿದರೆ ಗಾಳಿಯ ನಾಟಕ ಮುಗಿಯಲಿಲ್ಲವೆ ಸಂಗನ ಬಸವಣ್ಣಾ? ಏಳು ಬಸವಣ್ಣಾ 'ಸೊಡ್ಡಳ'ನನ್ನು ಇದಿರುಗೊಂಡು ಕರೆದು ತರಬೇಕು.

ಚೆನ್ನಬಸವಣ್ಣ ಮತ್ತು ಬಾಚರಸರು ಬಸವಣ್ಣ, ಯಾವ ಕುಂದು, ಯಾವ ಕೊರತೆ, ಯಾವ ಪ್ರಮಾದ ಅಚಾತುರ್ಯ ತಪ್ಪುತಡಿಯಿಲ್ಲದ ಪೂರ್ಣವ್ಯಕ್ತಿ ಅಥವಾ ಪೂರ್ಣಭಕ್ತ ಪೂರ್ಣಜ್ಞಾನಿಯೆಂದು ನಿಜವಾಗಿ ನಂಬಿದ್ದರೂ ಈ ಅಭಿಮಾನದಲ್ಲಿಯೆ ನಿಂತು ಬಸವಣ್ಣನನ್ನು ಹೊಗಳಿದ್ದರೂ. ಈ ಅಭಿಮಾನ. ಹೊಗಳಿಕೆಯಲ್ಲಿ ಸತ್ಯಾಂಶ ಸಾಕಷ್ಟಿದ್ದರೂ ಭಕ್ತಿಯ ಮರ್ಮ ಈ ಬಸವಣ್ಣನಿಗಿಂತ ಆಳವಾಗಿದೆ ಎಂಬುದು ಮುಂದೆ ಪ್ರಭುದೇವರಿಂದ ತಾನೆ ಪ್ರಕಟವಾಗುತ್ತದೆ.

ಭಯದ ಕತ್ತಲೆಯ ಮೇಲೆ ಅಭಯದ ಬೆಳುದಿಂಗಳನ್ನು ಹರವಿದ ಆನಂದ ಬಸವಣ್ಣನ ಹೃದಯಕ್ಕೆ! ಹೋದ ಪ್ರಾಣದಮೇಲೆ ಸಂಜೀವನದ ಹಸ್ತ ಬಿದ್ದರೆ ಪ್ರಾಣಕ್ಕೆ ಯಾವ ಪ್ರಾಣಾನಂದ! 'ಹೋದ ಜೀವಕ್ಕೆ ತನ್ನ ಕರುಣವೆಂಬ ಮರುಜವಣಿಯ ಹಿಂಡಿ ಎತ್ತಿದನು. ಚೆನ್ನಬಸವಣ್ಣನಿಂದಲೆಂತಕ್ಕೆ ಬದುಕಿದೆನು.'[೧] ಮತ್ತೆ ಬಸವಣ್ಣನ ಆಶೆ ಧೈರ್ಯ ದಾಂಗುಡಿಯಿಡುವುದು ಬಾಚರಸರ ಕಾರುಣ್ಯದ ತನಿಸೋನೆಯಿಂದ. 'ಕೂಡಲ ಸಂಗನ ಶರಣ ಸೊಡ್ಡಳ ಬಾಚರಸರ ಕರುಣ ಉಳ್ಳನ್ನಕ್ಕರ ಇನ್ನು ನಾನು ಅಂಜುವನಲ್ಲ ಕಾಣಾ ಚೆನ್ನಬಸವಣ್ಣಾ.'[೨]

ಇದೋ ಇಲ್ಲಿ ಬನ್ನಿ, ಸಿದ್ಧವೀರಣ್ಣದೇವರ ಹಿಂದುಗಡೆ. ಹಡಪದಪ್ಪಣ್ಣ ಸೊಡ್ಡಳ ಬಾಚರಸ ಚೆನ್ನಬಸವಣ್ಣನನ್ನು ಮತ್ತೆ ಅಸಂಖ್ಯಾತರನ್ನು ಕೂಡಿಕೊಂಡು ತನ್ನ ಪ್ರಾಣ ಜಂಗಮವನ್ನು ಇದಿರುಗೊಳ್ಳಲು ಅಲಂಕಾರವಾಗಿ ಹೊರಟಿದ್ದಾನೆ;—'...ಲಿಂಗಾರ್ಚನೆಯ ಮಾಡುತ್ತ ಲಿಂಗಮಂ ಕರಸ್ಥಲದಲ್ಲಿ ಧರಿಸಿಕೊಂಡು. ಹನ್ನೆರಡು ಸಾವಿರ ರುದ್ರಾಕ್ಷಿಯಂ ಧರಿಸಿಕೊಂಡು, ಭಸ್ಮಾಂಗದ ಕಳೆ ತಳತಳಿಸಿ ಹೊಳೆಯುತ್ತಿಹ ಆಭರಣದಿಂದೊಪ್ಪುತ್ತ. ಭಕ್ತವತ್ಸಲ, ಮುಕ್ತಿಯ ಮುಖದರ್ಪಣ. ಅಹಂಕಾರಕಾಸಾರಶೃಂಗಾರಭೇದನ. ಕರುಣರಸಸಿಂಧು. ಷಡುಸ್ಥಲ ಸಂಧಾನನಿವಾಸ. ಶತಏಕಸ್ಥಲ ಮೂಲಿಗ, ಪಂಚಮುಖ ಪಂಚಲಿಂಗ ಸ್ಥಾಪನಾಚಾರ್ಯ. ಭಕ್ತಜನ ಹೃತ್ಕಮಲಾರ್ಕ, ಶರಣನಿಕುರುಂಭಾಬ್ಧಿ ಶಶಾಂಕ. ಭವವಿಪಿನದಾವಾನಲ, ಭವಸಿಂಧುವಡಬಾಗ್ನಿ ಬಸವದಂಡಾಧೀಶ್ವರನು...'[೩]

---

೧. ಶೂ. ಸಂ. ಪು. ೯೩, ವ. ೧೭.
೨. ಅದೇ „ ೯೩, ವ. ೧೯.
೩. ಶೂ. ಸಂ. ಪು. ೯೭, ಪ್ರ. ೨೦.

ಹೀಗೆ ಭಕ್ತಿಯನ್ನು ಸರ್ವಾಂಗದಲ್ಲಿ ಶೃಂಗರಿಸಿಕೊಂಡು '...ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು...'[೧] ಎಂದು, 'ಲಿಂಗಾರ್ಚನೆಯ ಮಾಡುವೆನಯ್ಯಾ, ಜಂಗಮವೆನ್ನ ಮಠಕ್ಕೆ ಬರಬೇಕೆಂದು. ಆ ಜಂಗಮವೆನ್ನ ಮಠಕ್ಕೆ ಬಂದರೆ, ಲಿಂಗಾರ್ಚನೆಯ ಮಾದು ಜಂಗಮಾರ್ಚನೆಯ ಮಾಡುವೆನು....,'[೨] ಏಕೆಂದರೆ 'ಲಿಂಗಜಂಗಮಯೋರ್ಮಧ್ಯೇ ಜಂಗಮಸ್ತು ವಿಶಿಷ್ಯತೇ'[೩] ಎಂದು ಲಿಂಗಫಲದ ಒಳದಿರುಳಾದ ಜಂಗಮಲಿಂಗವನ್ನು ಕಾಣುತ್ತ, ಜಂಗಮಭಕ್ತಿಯ ಗಂಭೀರ ವಿಶೇಷವನ್ನು ಹಾಡುತ್ತ ಬಸವಣ್ಣ ನಡೆದಿದ್ದಾನೆ. ಅದೇ ಸಮಯದಲ್ಲಿ ಇದಿರುಗೊಳ್ಳುವ ಸಂಭ್ರಮ ಕಳಸ ಕನ್ನಡಿಯಲ್ಲಿ, ಗುಡಿ ತೋರಣಗಳಲ್ಲಿ ಪಲ್ಲವಿಸುತ್ತಿದೆ! ನೋಡಿ: '...ಬಸವರಾಜದೇವರು ಲಿಂಗಾರ್ಚನೆಯಿಂದೆದ್ದು ಚೆನ್ನಬಸವರಾಜದೇವರು ಮೊದಲಾದ ಅಸಂಖ್ಯಾತ ಮಹಾಗಣಂಗಳ ಕರೆಸಿಕೊಂಡು, ವಿಭೂತಿವೀಳೆಯ ಕಾಣಿಕೆ ಸಹವಾಗಿ, ನವರತ್ನಖಚಿತ ಒಡಗೂಡಿದ ದಿವ್ಯಾಂಬರಗಳಂ ಗುಡಿ ತೋರಣಂಗಳಂ ಕಟ್ಟಿಸಿ, ದೇವಾಂಗ ಮೌಕ್ತಿಕದ ಸೆಜಿಗಿನ ಸೀರೆಯಂ ನಡೆಮಡಿಯಂ ಹಾಸಿ, ಚೀನಿ ಚೀನಾಂಬರದಲ್ಲಿ ಪವಳದ ಝುಲ್ಲರಿಯಿಂ ರತ್ನದ ಝುಲ್ಲರಿಯಿಂ ಮೇಲುಕಟ್ಟಂ ಕಟ್ಟಿ, ಕಳಸಕನ್ನಡಿ ಪಂಚಮಹಾವಾದ್ಯದಿಂ ಧೂಪಾರತಿ ಘಂಟೆ ಸಹವಾಗಿ ಪ್ರಭುದೇವರ ಕರೆಯ ಬಹ ಸಂಭ್ರಮದಿಂದಿರುತ್ತಿರಲ್...'[೪]–ಇದಿರುಗೊಳ್ಳುವ ಈ 'ರಾಜಸಂಭ್ರಮ'ದಲ್ಲಿ ಅಪ್ಪಣ್ಣ ಬಾಚರಸ ಚೆನ್ನಬಸವಣ್ಣವಲ್ಲದೆ ಅಸಂಖ್ಯಾತ ಶರಣರೂ ನೆರೆದು ನಡೆದಿದ್ದಾರೆ. ಸಿದ್ಧವೀರಣ್ಣನ ಈ 'ಸಂಭ್ರಮ'ಚಿತ್ರದಲ್ಲಿ ಅಲ್ಲಲ್ಲಿ ಹೆಚ್ಚುಕಡಮೆ ಆಭಾಸ ಅತಿಶಯಗಳಿರಬಹುದು. ಇದ್ದರೇನು? ಭಕ್ತಿಯ ಚಿತ್ರಣದ ಸಂಭ್ರಮದಲ್ಲಿ ಇವೆಲ್ಲ ನಡೆಯತಕ್ಕುವೇ. ನಾವಿಲ್ಲಿ ಮುಖ್ಯವಾಗಿ ನೋಡಬೇಕಾದುದು ಸಂಭ್ರಮದ ಮರೆಯಲ್ಲಿರುವ ಗಂಭೀರವನ್ನು.

ಜಂಗಮಲಿಂಗವನ್ನು ಇದಿರುಗೊಂಡು ಕರೆದೊಯ್ವ ಭಕ್ತಿಯ ಸಂಭ್ರಮ ಅಸಂಖ್ಯಾತರ ಮೆರೆವಣಿಗೆಯಾಗಿ ಊದುತ್ತ ಬಾರಿಸುತ್ತ ಒಳಗಿಂದ ಉಕ್ಕಲೇರಿ ಬರುತ್ತಿದೆ ದ್ವಾರವಟ್ಟದ ಮುಂಗಡೆಗೆ. ಅಂಗಳದಲ್ಲಿಯೆ ನಿಂತ ಪ್ರಭುದೇವ ಸಿದ್ಧರಾಮಯ್ಯನೊಡನೆ ಬಸವಣ್ಣನ ಭಕ್ತಿಯನ್ನೆ ಕುರಿತು ಪ್ರಸಂಗಿಸುತ್ತಿದ್ದಾನೆ. ನೋಡು ಸಿದ್ಧರಾಮಯ್ಯಾ ಭಕ್ತರ ತಲೆಯಲ್ಲಿ ಅಹಂಕಾರ ಮೂಡುತ್ತಿದೆ. '...ಭೃತ್ಯನಿದ್ದೆಡೆಗೆ ಕರ್ತನೈತಂದರೆ ಅಟ್ಟಾಟಿಕೆಯಲ್ಲಿ ಇಂತು ಕರೆದವರುಂಟೆ?'[೫] ಬಸವಣ್ಣನೇ ಈ ಗತಿಯಾದ ಬಳಿಕ ಇನ್ನುಳಿದ ಭಕ್ತರ ಪಾಡೇನು ರಾಮಯ್ಯಾ? ಸತ್ಯ ಸದ್ಭಕ್ತಿಯ ಮುಂದೆ ಅಹಂಕಾರದ ಜವನಿಕೆ ಅಡ್ಡಲಾಗಿ ಬಿದ್ದರೆ 'ಗೊಹೇಶ್ವರಲಿಂಗ' ಒಳಗೆ ಹೇಗೆ ದಯಮಾಡಿಸಬೇಕು ಸಿದ್ಧಣ್ಣಾ? ಮನೆಯಂಗಳಕ್ಕೆ ಲಿಂಗದೇವ ತಾನೆ ಬಂದು ಒಳಗಡೆ ಬಿಜಯಂಗೈಯಲು ಹವಣಿಸುತ್ತಿರುವಾಗ ಮರವೆಯ ಮುಂಡಿಗೆಯನ್ನು ಅಡ್ಡಹಾಕಿಕೊಂಡು 'ಬೇಕಿದ್ದರೆ ಮುಂಡಿಗೆ ದಾಟಿ ಬರಲಿ, ಬೇಡವಾದರೆ ಜವನಿಕೆಯ ಹೊರಗೇ ಕುಳ್ಳಿರಲಿ'–ಎಂದು

---

೧. ಶೂ. ಸಂ. ಪು. ೯೭, ವ. ೨೧.
೨. ಅದೇ ,, ೯೭, ವ. ೨೦.
೩. ಅದೇ ,, ೯೭, ವ. ೨೦.
೪. ಶೂ. ಸಂ. ಪು. ೯೭, ಪ್ರ. ೨೨.
೫. ಅದೇ ,, ೯೭-೯೮, ವ. ೨೨.

ಭಕ್ತಿಯ ಉನ್ಮತ್ತ ತಲೆಗೇರಿದ್ದರೆ ಬಸವಣ್ಣನೆ ಹೇಳುವಂತೆ ಮೊಲೆಕುಡಿಸಲೊಲ್ಲದ ಆಕಳಿಗೆ ಕುಡಿಯಲೊಲ್ಲವ 'ಕರುವ ಬಿಟ್ಟಂತಲ್ಲವೆ ಸಿದ್ಧರಾಮಾ? ಬಸವಣ್ಣನ ವಿಷಯವಾಗಿ ಪ್ರಭುವಿನ ಈ ವಿಚಾರವನ್ನು ಕೇಳುತ್ತಿದ್ದ ಸಿದ್ಧರಾಮಯ್ಯನ ಉತ್ತರ ಸರಳ: 'ಕಪಿಲಸಿದ್ಧ ಮಲ್ಲಿನಾಥಯ್ಯಾ, ನಿಮ್ಮ ಶರಣ ಬಸವಣ್ಣನ ಅನುವ ನೀವೆ ಬಲ್ಲಿರಿ'[೧]. ತಾಯಿಗೆ ತಿಳಿಯದ ಕೂಸು ದಾಯಿಗೆ ತಿಳಿಯಬಹುದೆ? ಬಸವಣ್ಣ 'ನಿಮ್ಮ ಶರಣ,' ಅಂದರೆ ಕಪಿಲಸಿದ್ಧ ಮಲ್ಲಿನಾಥಯ್ಯನ ನಿಜಶರಣ. ನಿಮಗೆ ತಿಳಿಯದ ನಿಮ್ಮ ಶರಣ ನನಗೆಷ್ಟು ತಿಳಿದಾನು?

'ಇತ್ತ ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳು ಸಹಿತ ಬಂದು ಪ್ರಭುದೇವರ ಶ್ರೀಪಾದ ದರುಶನವಾದ'[೨] ಶಿವಸಮಯ, ಜಂಗಮದೇವನನ್ನು ಕಂಡ ನಿಮಿಷ ಆನಂದಕ್ಕೆ ಶಿಖರವಾಗುತ್ತದೆ. ಬಸವಣ್ಣನ ಹೃದಯಸಮುದ್ರ ಶಿವಭಕ್ತಿಯ ತೆರೆಗೊಂಡು ಸಮುದ್ರವೆಲ್ಲ ತರಂಗಮಾಲೆಯಾಗುತ್ತದೆ. ತಾ ಮಾಡಿದ ಮಹಾಪರಾಧ, 'ಎನ್ನ ತಪ್ಪು ಅನಂತಕೋಟಿ' ತರಂಗಮಾಲೆಯಲ್ಲಿ ಭೋರ್ಗರೆದು ಜಂಗಮಲಿಂಗದ ಕರುಣೆಯನ್ನು ಬೇಡುತ್ತಿದೆ: 'ಒಮ್ಮೆಂಗೆ ಕರುಣಿಸಯ್ಯಾ, ಒಮ್ಮೆಂಗೆ ಕರುಣಿಸಯ್ಯಾ'. 'ಜಯ ಜಯ ಶ್ರೀಮಹಾದೇವ,'[೩] 'ಕೂಡಲ ಸಂಗಮದೇವಯ್ಯಾ, ನಿಮ್ಮ ಶ್ರೀ ಪಾದಕ್ಕೆ ನಮೋ ನಮೋ'. 'ನಿಮ್ಮ ಶರಣರ ಕಂಡ ಕಡು ಸುಖವನೇನೆಂಬೆನಯ್ಯಾ !'[೪] 'ತವಕದ ಸ್ನೇಹ ದರ್ಶನದಲ್ಲಿ ತರಹರವಾಯಿತ್ತು,' 'ಕಾಣದಿರ್ದಡೆ ಅವಸ್ಥೆಯಯ್ಯಾ;'[೫] ದಶಮಾವಸ್ಥೆಯಿಂದ ಪಾರಾಗಿ ಉಳಿದ ಬಸವಣ್ಣ 'ಪ್ರಭುದೇವನನ್ನು ಇನ್ನೂ ಹಾಡಿ ಇನ್ನೂ ಹರಸಿ ಧನ್ಯನಾಗುತ್ತಾನೆ. ಜಂಗಮದ ಶ್ರೀಪಾದಕ್ಕೆ ದೀರ್ಘದಂಡ ನಮಸ್ಕಾರ ಮಾಡುತ್ತಾನೆ. ಬಸವಣ್ಣ ಅನುಭವಿಸುವಂತೆ ದೀರ್ಘದಂಡ ನಮಸ್ಕಾರದ ಅರ್ಥ–'ಎನ್ನ ತನುಮನವೆರಡೂ ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯಾ !'[೬] ನಮಸ್ಕಾರವೆಂದರೆ ತನುವನ್ನು ನೈವೇದ್ಯ, ಮನವನ್ನು ನೈವೇದ್ಯಮಾಡುವುದು. ತನ್ನನ್ನು 'ಅರ್ಪಿಸಿಕೊಳ್ಳು' ಎಂಬುದೇ ಅಡ್ಡಬೀಳುವುದರ ಅರ್ಥ. ಹೀಗೆ ತನುಮನವನ್ನು ಜಂಗಮದೇವನಿಗೆ ನೈವೇದ್ಯ ಮಾಡಿದ ಬಸವಣ್ಣ ತನ್ನ ಸರ್ವಾಂಗದಲ್ಲಿ ಕಂಡ ಅನುಭವವೇನು? ಬಸವಣ್ಣನವರನ್ನೆ ಕೇಳಿ:

ಎನ್ನ ಶಿರ ನಿಮ್ಮ ಚರಣವೊರಸಿ ಬೆರಸಿ ಭೇದವಿಲ್ಲಯ್ಯಾ !
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ
ನಿಮ್ಮ ಉಂಗುಷ್ಟದ ಮೊನೆಯ ಸೋಂಕಲೊಡನೆ ಹಱಿದುದು ನೋಡಯ್ಯಾ !
ಕೂಡಲ ಸಂಗಮದೇವಯ್ಯಾ. ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತು.[೭]

೧. ಶೂ. ಸಂ. ಪು. ೯೮, ವ. ೨೩.
೨. ಅದೇ „ ೯೮, ಪು. ೨೪.
೩. ಅದೇ „ ೯೮, ವ. ೨೪.
೪. ಅದೇ „ ೯೮, ವ. ೨೬.
೫. ಶೂ. ಸಂ. ಪು. ೯೮, ವ. ೨೫.
೬. ಅದೇ „ ೯೮-೯೯, ವ. ೨೭.
೭. ಅದೇ „ ೯೯ ವ. ೨೮.

ಬಸವಣ್ಣ ತನ್ನ ಮನೆಯ ಬಾಗಿಲಿಗೆ ಬಂದ ಜಂಗಮಕ್ಕೆ ಭಯಭಕ್ತಿಯಿಂದ ತನು ಮನವೆರಡನ್ನೂ ಸಮರ್ಪಿಸಿ ದೀರ್ಘದಂಡ ನಮಸ್ಕಾರ ಮಾಡಿದ. ಜಂಗಮಮೂರ್ತಿಯ ಶ್ರೀಪಾದದ ಬೆಳಗು ಅನುಭವಕ್ಕೆ ಬಂತು. 'ಕಾಯದ ಕಪಟ', 'ಮನದ ವಿಕಾರ', ಇನ್ನೇನೇನೋ ಅಂತರಂಗದ ಕತ್ತಲೆ ಓರೆಯಾಯ್ತು. ಇದೆಲ್ಲ ನಿಜ. ಆದರೆ ಬಸವಣ್ಣನ ನಮಸ್ಕಾರದ ಕ್ರಿಯೆಗೆ ಜಂಗಮದ 'ಜಗದ್ಭರಿತ' ನಿರಾಕಾರ ನಿಲುಕಿಲ್ಲ. 'ಇಂತು ಬಸವರಾಜದೇವರು ದೀರ್ಘದಂಡ ನಮಸ್ಕಾರಮಂ ಮಾಡುತ್ತಿರಲು ಪ್ರಭುದೇವರ ನಿಜಮೂರ್ತಿ ನಿರಾಕಾರಸ್ಥಲದೊಳು ನಿಂದು ನಮಸ್ಕಾರಾದಿ ಕ್ರೀಗಳಿಗೆ ಅಸಾಧ್ಯವಾಗಿ'[೧] ನಿಲುಕದೆ ನಿಂದಿದೆ. ಅನಿಮಿಷಯ್ಯನನ್ನು ಕಂಡಾಗ ಪ್ರಭುವಿಗೆ ಯಾವ ಅನುಭವ ವೇದ್ಯ ವಾಯ್ತೋ ಅದೇ '...ವಿಗಡಚರಿತ್ರಕ್ಕೆ ಬೆಱಗಾದೆನು. ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು. ಹೊದ್ದುವರೆ ಸಮೀಪ, ಹತ್ತೆ ಸಾರುವರತ್ತತ್ತ ತೋಱು ತ್ತದೆ. ಆಕಾರವ ನಿರಾಕಾರ ನುಂಗಿ...'[೨]ದ ಅನುಭವ ಬಸವಣ್ಣನಿಗೆ ಆದಂತಿದೆ. ಬಸವಣ್ಣನ ಅನುಭವ ಕೇಳಿ:

ಶರಣೆಂದು ಪಾದವ ಹಿಡಿದಿಹೆನೆಂದರೆ ಚರಣದ ನಿಲವು ಕಾಣಬಾರದು.
ಕುಱುಹು ವಿಡಿದಿಹೆನೆಂದರೆ ಕೈಗೆ ಸಿಲುಕದು.
ಬೆರಸಿ ಹೊಕ್ಕಹೆನೆಂದರೆ ಮುನ್ನವೆ ಅಸಾಧ್ಯ.
ಅಕಟಕಟಾ! ಅಹಂಕಾರದಲ್ಲಿ ಕೆಟ್ಟೆನಲ್ಲಾ ಗುರುವೆ!
ಎನ್ನ ಪರಮಗುರುವೆ ಬಾರಯ್ಯ,
ಅಱಿಯದ ತರಳನ ಅವಗುಣವ ನೋಡುವರೆ ಕೂಡಲಸಂಗಮದೇವಾ?[೩]

ನಿರಾಕಾರದ ನಿಲವನ್ನು, ವ್ಯೋಮಕಾಯವನ್ನು, ಬಯಲೊಡಲುಗನನ್ನು ಕಾಣದಿರಲು ಕಾರಣವೇನು? ಆತ ಸಿಲುಕದಿರಲು, ನಿಲುಕದಿರಲು ನಡುವೆ ಬಂದಿರುವ ತೆರೆಮರೆ ಯೇನು?

ಕಂಡಹರೆಂದು ಕಂಗೆ ಮಱೆ ಮಾಡಿದ. ಕೇಳಿಹರೆಂದು ಕಿವಿಗೆ ಮಱೆ ಮಾಡಿದ.
ಮುಟ್ಟಿಹರೆಂದು ಕೈಗೆ ಮಱೆ ಮಾಡಿದ.
ಸೋಂಕಿಹರೆಂದು ತನುವಿಂಗೆ ಮಱೆ ಮಾಡಿದ.
ನೆನೆದಹರೆಂದು ಮನಕ್ಕೆ ಮಱೆ ಮಾಡಿದ.
ಅಱಿದಹರೆಂದು ಅಂತರಂಗದಲ್ಲಿ ಮಱೆ ಮಾಡಿದ.
ಪೂಜಿಸಿಹರೆಂದು ಕ್ರೀಗೆ ಮಱೆ ಮಾಡಿದ.
ಕೂಡಲಸಂಗಮದೇವರೊಡನೆ ಅಹಂಕಾರವ ಮಾಡಿ
ಕೆಟ್ಟ ಕೇಡನೇನೆಂದುಪಮಿಸುವೆನು?[೪]

೧. ಶೂ. ಸಂ. ಪು. ೯, ಪ್ರ. ೨೯. ಈ ಸಂದರ್ಭದಲ್ಲಿ ಸಿದ್ಧರಾಮನಿಗಾದ ಇದೇ ಅನುಭವವನ್ನು ನೆನಿಸಿಕೊಳ್ಳಿ.
೨. ಶೂ. ಸಂ. ಪು. ೧೨, ವ. ೩೪.
೩. ಅದೇ ಪು. ೧೦೦, ವ. ೩೨.
೪. ಅದೇ ,, ೯೯, ವ. ೩೧.

ಯಾರನ್ನು ಕಂಡಿಹರೆಂದು ಏನನ್ನು ಮರೆಯಾಗಿ ಹಿಡಿದ ಪರಮಗುರು ಜಂಗಮಲಿಂಗ? ತನ್ನನ್ನು ಕಂಡಿಹರೆಂದು ಕಣ್ಣು ಕಿವಿ ಮನ ಭಾವ ಪೂಜೆ ಮುಂತಾದುವಕ್ಕೆ ಅಹಂಕಾರದ ಜವನಿಕೆಯನ್ನು ಅಡ್ಡಲಾಗಿ ಮರೆಹಿಡಿದು ಇಳಿಬಿಟ್ಟಿದ್ದಾನೆ ಲಿಂಗಜಂಗಮದೇವ. ನೋಡುತ್ತೇನೆ ಕೇಳುತ್ತೇನೆ ಅರಿಯುತ್ತೇನೆ ಪೂಜಿಸುತ್ತೇನೆ 'ನಾನು' ಎಂಬ 'ಅಹಂಕರ್ತೃ'ಭಾವ ಒಂದು ಜವನಿಕೆ. ಈ ಜವನಿಕೆಯಲ್ಲಿ ಹಾಸುಹೊಕ್ಕಾಗಿ, ನಾನೇ ನಾನು ಎಂಬ ಅಜ್ಞಾನದ ಕತ್ತಲೆಯನ್ನು ಕಚ್ಚಿಕೊಂಡಿರುವ ಮೂಲ ನಾನು. ಮೂಲಾಹಂಕಾರ ಜವನಿಕೆಯ ನೂಲು. ಈ ಜವನಿಕೆಯ ಸುಸೂಕ್ಷ್ಮವೆಂದರೆ ಇದ್ದು ಇಲ್ಲದಂತಿರುವ ಮಾಯಾಜಾಲ.

ಬಸವಣ್ಣ 'ಸೂಕ್ಷ್ಮದರ್ಶಿ' ನಿಜ. ಸೂಕ್ಷ್ಮಾತ್ ಸೂಕ್ಷ್ಮತರವನ್ನು ನೋಡಲು ಬಲ್ಲ, ನಿಜ. ಆದರೆ 'ಕಂಗಳ ಮುಂದಣ ಕತ್ತಲೆ' ಪೂರ್ಣ ತಿಳಿಯದೆ, ಪೂರ್ಣ ಹರಿದು ಹೋಗದೆ, ಬಸವಣ್ಣನಾದರೂ ಏನು ಮಾಡಬಲ್ಲ? ಹೊರಗೆ ಕತ್ತಲೆ ಕವಿದಿದ್ದರೆ, ಸೂರ್ಯ ಚಂದ್ರಮರು ಮೂಡಿ ಆ ಕತ್ತಲೆಯನ್ನು ಕಳೆಯಬಹುದು. ಆದರೆ ಹೊರಗೆ ನೋಡುವ ಕಣ್ಣೊಳಗೆಯೆ ಕತ್ತಲೆ ಗಟ್ಟಿಯಾಗಿ ಕುಳಿತರೆ ಸೂರ್ಯ ಚಂದ್ರ ದೀಪ ಪ್ರದೀಪಗಳೇನು ಮಾಡಬೇಕು? ಹಿಂದೆ ನಾವು ದರ್ಶನಮಾಡಿಕೊಂಡ ಮುಕ್ತಾಯಕ್ಕ ತನ್ನ ಅರೆಗತ್ತಲೆ ಅರೆಬೆಳಗಿನ ಅನುಭವವನ್ನು 'ಕತ್ತಲೆ ಬೆಳಗ ಕಾಬ ಸಂದೇಹಿ ನಾನೊಬ್ಬಳು'[1] ಎಂದು ಹೇಳುವಂತೆ ಬಸವಣ್ಣ 'ಅರಿವಿನ ಕಣ್ಣಲ್ಲಿ ಅಹಂಭಾವದ ಕತ್ತಲೆಯನ್ನು ಕುಳ್ಳಿರಿಸಿಕೊಂಡು ಬೆಳಗು ಕತ್ತಲೆಯ ಸಂದಿಯಲ್ಲಿ ಸಿಕ್ಕಂತಿದ್ದಾನೆ. ಒಮ್ಮೆ ಕೂಡಲ ಸಂಗಮದೇವ, ಅಂದರೆ ನಿಜದಲ್ಲಿ ನಿಷ್ಪತ್ತಿಯಾದ ಶರಣ ಬೆಳಗುತ್ತಾನೆ; ಒಮ್ಮೆ ಕತ್ತಲೆಯಾಗುತ್ತಾನೆ. ಒಮ್ಮೆ ತೋರುತ್ತಾನೆ, ಒಮ್ಮೆ ಅಡಗುತ್ತಾನೆ:

ತೋಱುವನಯ್ಯಾ ಶಿವನು. ಅಡಗುವನಯ್ಯಾ ಶಿವನು.
ಕಂಗಳ ಮುಂದೆ ಕಾಯುಗೊಂಡು,
ಮನದ ಮುಂದೆ ಕನಸಾಗಿ ಕಾಡುವನಯ್ಯಾ ಶಿವನು.
ಒಂದೆಡೆಯಲ್ಲಿದ್ದು ಹಲವು ಎಡೆಯಲ್ಲಿ ತೋಱುವನು.
ಹಲವೆಡೆಯಲ್ಲಿದ್ದು ಒಂದೆಡೆಯಲ್ಲಿ ರೂಪಾಗಿಪ್ಪನು.
ಕೂಡಲ ಸಂಗಮದೇವರು ಚಿನುಮಯನಾಗಿ ಎನಗೆ ಅಸಾಧ್ಯವಾದನು.[2]

ಕೂಡಲ ಸಂಗಮದೇವರು ಅಂದರೆ ನಿಜಶರಣ, ಅದೇ 'ಸಗುಣ ನಿರ್ಗುಣಭರಿತ.' ಅದೇ ನಿರಾಕಾರದ ಸಾಕಾರ ಜಂಗಮಲಿಂಗ ಪ್ರಭುದೇವ 'ಚಿನುಮಯ'. ತಾನು ಚಿನುಮಯನಾದರೆ ಚಿನುಮಯಪ್ರಭು ಸಿಲುಕಬಹುದು. ಸಿಲುಕಬಹುದು. '...ನಿಜರೂಪು ನಿರ್ಣಯದಲ್ಲಿ ನಿಷ್ಪತ್ತಿ...' ಯಾದ 'ನಿಜಶರಣರ ನಿಲವು ಕಾಯವಿಡಿದು ಕಂಡಿಹೆನೆಂದರೆ ಕಾಣಬಹುದೆ?'[3] ಕತ್ತಲೆಯ ಪರ್ವತವನ್ನು ಹೊತ್ತುಕೊಂಡು ಸೂರ್ಯನ ಮನೆಗೆ ನಡೆದಿರುವೆನೆನ್ನುವ ಧಾಟಿ 'ಕಾಯವಿಡಿದು.' ತನ್ನನ್ನು ಚಿನುಮಯದಿಂದ ವಂಚಿಸಿ

೧. ಶೂ. ಸಂ. ಪು. ೨೪, ವ. ೧.
೨. ಅದೇ ,, ೯೯, ವ. ೩೦.
೩. ಶೂ. ಸಂ. ಪು. ೯೯, ವ. ೨೯.

ದೂರವಿಟ್ಟಿರುವ ಕಾಯದ ಕಪಟವನ್ನು ಹೊತ್ತುಕೊಂಡು ಅಥವಾ ಹತ್ತಿಕೊಂಡು 'ಚಿನುಮಯ'ವನ್ನು ಕಂಡಿಹೆನೆಂಬ 'ಮನವಿಕಾರ'ದವರ ಧಾಟಿ. ಬೆಳಗಿನ ಬೆಟ್ಟದಲ್ಲಿ ಕುರುಡ ವಾಸವಾಗಿದ್ದರೇನು? ಬೆಟ್ಟವನ್ನು ಮುಟ್ಟಬಲ್ಲನೇ?

ಪ್ರಭುದೇವರ 'ಚಿನುಮಯ' ಮೂರ್ತಿಯನ್ನು ನಮಸ್ಕಾರಾದಿ ಕ್ರಿಯೆಗಳಿಂದ ಮುಟ್ಟಲರಿಯದ[1] ಬಸವಣ್ಣನವರ ಮನಃಸ್ಥಿತಿ ಬೆಟ್ಟದಲ್ಲಿದ್ದು ಬೆಟ್ಟವನ್ನು ಕಾಣದ, 'ಕಣ್ಣಿದ್ದು ಕುರಡ'ನ ಸ್ಥಿತಿಯಾಗಿದೆ. ಲಿಂಗದ ಮುಖ ಜಂಗಮ, ಲಿಂಗಾರ್ಚನೆಯ ಪುಣ್ಯ ಫಲ ಜಂಗಮ, ಲಿಂಗಕ್ಕೆ ಮಿಗಿಲಾದ ಜಂಗಮಲಿಂಗ, ನಡೆವ ನುಡಿವ ಜಂಗಮದೇವ ಮನೆಗೆ ತಾನಾಗಿ ನಡೆದುಬಂದರೆ ಆ ದೇವನ ಶ್ರೀಪಾದವನ್ನು ಕಂಡು ಮುಟ್ಟಿ ಹಾಡಿ ಹರಸುವ ಅನುಭಾವಭಾಗ್ಯ ತನಗಾಗಲಿಲ್ಲವಲ್ಲಾ ಎಂದು ಹಲುಬುವ ಹಂಬಲ ಬಸವಣ್ಣನ ಭಕ್ತಿಯ ಎದೆಯನ್ನು ಝುರ್ಝುರಿತಗೊಳಿಸುತ್ತದೆ. ಭಕ್ತಿಯೆ ಕಂಬನಿದುಂಬಿ ಹಾಡಿ ಹಾಡಿಕೊಂಡು ಜಂಗಮಲಿಂಗವನ್ನು ಬೇಡಿಕೊಳ್ಳುತ್ತಿದೆ–ಬಗೆಗೊಟ್ಟು ಕೇಳಿ, ಬಸವಣ್ಣನ ವಚನ ರೋದಿಸುವಂತಿದೆ: ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕನಾನಯ್ಯಾ! ಅಂದರೆ ಗುರು ಲಿಂಗ ಜಂಗಮದಲ್ಲಿ ಅರ್ಥ ಪ್ರಾಣ ಅಭಿಮಾನವನ್ನು ಅರ್ಪಿಸಲು ತಪ್ಪಿದ ತಪ್ಪುಕ ನಾನು. ಡಂಬುಡಳುಹು ನನ್ನದು, ನನ್ನ ಭಕ್ತಿ. ನಂಬಿಯೂ ನಂಬದ ಡಂಬಕ ನಾನು. ಹಾವನ್ನು ತೋರಿ ಹವಿಯನ್ನು ತಿರಿದುಣ್ಣುವ ಭಕ್ತಿ ನನ್ನದು. ಮಸಿಯನೇಸು ಕಾಲ ಬೆಳಗಿದರೆ ಬಿಳಿದಾಗಬಲ್ಲುದು? ಅನಂತಕೋಟಿ ಸನ್ಮಾನವ ಮಾಡಿ ಒಂದು ನಿಮಿಷ ಉದಾಸೀನಮಾಡಿ ಕೆಟ್ಟೆಕೆಟ್ಟೆ! ಕರಸ್ಥಲದ ಸ್ಥಾವರಲಿಂಗ ಪರಸ್ಥಲದ ಜಂಗಮಲಿಂಗ ಒಂದೆ ಎಂದು ನುಡಿಯಲ್ಲಿ ನುಡಿದೆ, ನಡೆಯಲ್ಲಿ ಎಡವಿದೆ. ನಾನು ಸಹಜನಲ್ಲ, ಉಭಯ ಲಿಂಗಸಂಬಂಧಿಯಲ್ಲ. ನಾನು ಹೀಗಿದ್ದರೂ ಎನ್ನವರೆನ್ನ ಕೊಂಡಾಡಿದರು, ಕೊಂಡಾಡಿ ಏರಿಸಿ ನುಡಿದು ಹೊನ್ನ ಶೂಲದ ಮೇಲೆ ಇರಿಸಿದರು. ಅಹಂಕಾರದ ಛಾಯದಲ್ಲಿ ಬದುಕ ಬಾರದಂತೆ ನೊಂದೆ! ಆದರೆ ತಂದೆ ನೀವು. ತಾಯಿ ನೀವು, ಬಂಧುಬಳಗ ನೀವು. ನಿಮ್ಮ ಕಾರುಣ್ಯದ ಶಿಶು ನಾನು. ಆದರೆ ನಿಮಗೆ ತಕ್ಕ ಜಂಗಮಶಿಶುವಲ್ಲದ ಡಂಭಕ ಮನದ ನನ್ನಲ್ಲಿ ಏನನರಸುವಿರಿ ತಂದೆ? ಒಮ್ಮಿಂಗೆ ಕರುಣಿಸಯ್ಯಾ! ಇನ್ನು ತಪ್ಪಿದರೆ ನೀವು ಮಾಡಿತ್ತೆ ಸಲುವುದು ಸಂಗಯ್ಯಾ! ಜಂಗಮವಾಗಿ ಬಂದು ಹೊನ್ನ ಶೂಲದಿಂದ ಕೆಳಗಿಳುಹಿ, ಅಹಂಕಾರದ ಛಾಯಕ್ಕೆ ಪ್ರಸಾದದ ಮದ್ದನಿಕ್ಕಿ ಸಲಹು ತಂದೇ. ಸಲಹು ತಾಯೇ, ಸಲಹು ಕೂಡಲಪ್ರಭುವೇ!

ಬಸವಣ್ಣ ತನ್ನ ತಪ್ಪಿಗೆ ತಾನೆ ನೊಂದು ಬೆಂದಿದ್ದಾನೆ. 'ಅತ್ಯಂತ ಕಿಂಕಿಲ'ನಾಗಿ. 'ಕರುಣಿಸಯ್ಯಾ ತಂದೇ' ಎಂದು ಹೃದಯವನ್ನು ಕಿತ್ತು ಪ್ರಭುವಿನ ಪಾದದಲ್ಲಿರಿಸಿ ಬಿನ್ನವಿಸುತ್ತಾನೆ. ಆದರೆ ಪ್ರಭುವಿನ ದೃಷ್ಟಿಯಲ್ಲಿ ಬಸವಣ್ಣ ಇನ್ನೂ ಬೆಂದು ಇನ್ನೂ

---

೧. '...ಗೊಹೇಶ್ವರನ ನಿಲವು ಬರಿಯ ಸ್ತೋತ್ರಕ್ಕೆ ಸಿಕ್ಕದು ಕಾಣಾ ಸಿದ್ಧರಾಮಯ್ಯಾ! ಎಂದು ಪ್ರಭುದೇವರು ಸಿದ್ಧರಾಮಯ್ಯನಿಗೆ ಹೇಳಿದ ಮಾತನ್ನು ಇಲ್ಲಿ ನೆನಸಿಕೊಳ್ಳಿ. ಸ್ತೋತ್ರಕ್ಕೆ ನಿಲುಕದಂತೆ ಬಸವಣ್ಣನ ನಮಸ್ಕಾರಾದಿ ಕ್ರಿಯೆಯಲ್ಲಿಯೂ ಪ್ರಭುದೇವರು–'ಗೊಹೇಶ್ವರನ ನಿಲವು' ನಿಲುಕಿಲ್ಲ.

ಪರಿಪಾಕವಾಗಬೇಕು. ಸಂಗಮನಾಥನ ಸವಿಗಂಪು ಮಧುರುಚಿ ತನಿರಸ ತುಂಬಿ ಬಸವಣ್ಣ ನಲ್ಲಿ ಲಿಂಗಜಂಗಮ ಭಕ್ತಿರಸ ನಿಷ್ಪತ್ತಿಯಾಗಬೇಕು. ಜಂಗಮಲಿಂಗಕ್ಕೆ ಭೃತ್ಯಾಚಾರವಾಗಿ ಸಲುವಳಿಯಾಗಬೇಕು. ಭಕ್ತಿಯಲ್ಲಿ ಬೆಳೆದಿರುವ ಅದ್ವೈತದ ಅಹಂಭಾವವನ್ನು ಕಿತ್ತು ಕಳೆದು ಬಸವಣ್ಣ ಭಕ್ತಿಯುಗವಾಗಬೇಕು. ಈ ಕಾರಣದಿಂದಲೆ ಪ್ರಭು ಬಸವಣ್ಣನ ಶಿವಾಚಾರವರ್ತನೆಯನ್ನು ಆಕ್ಷೇಪಿಸುತ್ತಾರೆ. ಕಾಡುತ್ತಾರೆ ಕರಕರ ಕಾಡುತ್ತಾರೆ. ಮೂದಲಿಸುತ್ತಾರೆ, ಆದರೆ ಭೃತ್ಯಾಚಾರದ ಸವಿಗೆ ಎಚ್ಚರಿಸುತ್ತಾರೆ:

ಲಿಂಗದೊಳಗೆ ಜಂಗಮ, ಜಂಗಮದೊಳಗೆ ಲಿಂಗವೆಂದಱಿದು,
ಮಱೆದು ಬಱುದೊಱೆವೋದವರು ಜಂಗಮವನಿನ್ನು ಬೆರಸಲೇತಕ್ಕಯ್ಯಾ?
ಆ ಲಿಂಗದೊಳಗೆ ಜಂಗಮವನಱಿಸಿಕೊಂಬುದು.
ಲಿಂಗಾರ್ಚನೆಯವಸರಕ್ಕೆ ಜಂಗಮ ಮನೆಗೆ ಬಂದರೆ,
ಲಿಂಗಾರ್ಚನೆಯ ಮಾದು ಜಂಗಮಕ್ಕೆ ಇದಿರೆದ್ದು ವಂದಿಸಿ
ಭಕ್ತಿಯ ಮಾಡಬಲ್ಲಾತನೆ ಭಕ್ತ.
ಆ ಜಂಗಮ ಹೊಱಗಿರಲು ಲಿಂಗಾರ್ಚನೆಯ ಮಾಡುತ್ತಿರ್ಪಾತನೇತಱ ಭಕ್ತ?
ಜಂಗಮದ ಮುಂದೆ ಲಿಂಗವ ಕೈಯಲ್ಲಿ ಹಿಡಿದುಕೊಂಡು,
ಸಹಪಂಕ್ತಿಯಲ್ಲಿ ಕುಳ್ಳಿರ್ದು ಪೂಜಿಸುವಾತ ಭೃತ್ಯಾಚಾರದ್ರೋಹನು.
ಆ ಭಕ್ತನ ಮನೆಯ ಹೊಗುವ ಜಂಗಮವೆ ಅಜ್ಞಾನಿ.
ನಮ್ಮ ಗುಹೇಶ್ವರನ ಶರಣರ ಕೂಡೆ ಅಹಂಕಾರವ ಹೊತ್ತಿರ್ಪವರ ಕಂಡಡೆ
ನಾನೊಲ್ಲೆ ನಾನೊಲ್ಲೆ ಕಾಣಾ ಸಂಗನ ಬಸವಣ್ಣಾ.[೧]

ಭಕ್ತ ದೇಹ, ಲಿಂಗ ಪ್ರಾಣ. ಈ ಪ್ರಾಣಲಿಂಗದ ಪೂಜೆಯನ್ನು ಕರಸ್ಥಲದ ಇಷ್ಟಲಿಂಗದಲ್ಲಿ ಪೂಜಿಸುತ್ತ ಒಳಗಿನ ಪೂಜೆಯನ್ನು ಕರಸ್ಥಲದಲ್ಲಿ ಕನ್ನಡಿಸುತ್ತಿದ್ದಾನೆ ಲಿಂಗಭಕ್ತ. ಬಹಿರಂತ ರಂಗ ಒಂದಾಗಿ ಕೂಡಿ ಮಾಡುವ ಲಿಂಗಾರ್ಚನೆಗೆ ಲಿಂಗಪೂಜೆ ಮುಕ್ತಾಯವಾಗಲಿಲ್ಲ. ಈ ಲಿಂಗಾರ್ಚನೆಯ ಗುರಿ ಜಂಗಮಾರ್ಚನೆ. ಏಕೆಂದರೆ ಲಿಂಗದ ಚಿಚ್ಚೈತನ್ಯ ಜಂಗಮ. ಅಂದರೆ ಲಿಂಗ ದೇಹ, ಈ ದೇಹದ ಪ್ರಾಣ ಜಂಗಮ. ಈ 'ಜಂಗಮವೆ ಹೊಱಗಿರಲು ಲಿಂಗಾರ್ಚನೆಯಾವುದಯ್ಯಾ? ಪ್ರಾಣನ ಹೊಱಗಿರಿಸಿ ಎಡೆಯಾಡುವ ದೇಹ ಉಂಟೆ?...' ಇಂಥ ಜಂಗಮ 'ಲಿಂಗಾರ್ಚನೆಯವಸರಕ್ಕೆ ಮನೆಗೆ ಬಂದರೆ.' ಇಷ್ಟ ಪ್ರಾಣ ಲಿಂಗದ ಪ್ರಾಣವಾದ ಜಂಗಮ ತಾನು ಲಿಂಗಾರ್ಚನೆ ಮಾಡಬೇಕೆಂದು ಭಕ್ತನಿಗಾಗಿ ಹಸಿದು ಬರಲು, ಭಕ್ತನನ್ನು, ಭಕ್ತನ ಲಿಂಗಾರ್ಚನೆಯನ್ನು ಇನ್ನೂ ಒಳಗೆ ತೋಡಿ ನಿಜಲಿಂಗಭಕ್ತಿಯ ಲೀಲಾ ವಿಲಾಸವನ್ನು ತೋರಿಸಬರಲು. ಜಂಗಮದ ಒಳಗೆ ನೋಡದೆ ಲಿಂಗದ ಹೊರಗೆ ಮಗ್ನ ವಾಗಿರುವ ಭಕ್ತ ಏನು ಭಕ್ತ ಬಸವಣ್ಣಾ? '...ಶರಣರು ಬಂದು ಬಾಗಿಲಲ್ಲಿ ನಿಂದಿರಲು, ತನ್ನ ತಾ ಮಱೆದವರ ಕಂಡಡೆ ನಮ್ಮ ಗುಹೇಶ್ವರಲಿಂಗ ಒಡೆಯುಹಾಯ್ಕದೆ ಮಾಣ್ಬನೆ?[೨]

---

೧. ಶೂ. ಸಂ. ಪು. ೧೦೧. ವ. ೩೯. ೨. ಶೂ. ಸಂ. ಪು. ೧೦೧, ವ. ೪೦.

ಪ್ರಭುದೇವನ ಈ ನಿಷ್ಠುರದ ಉದ್ದೇಶ, ಲಿಂಗಪೂಜೆಯಲ್ಲಿ ಮೈಮರೆತು 'ತೇಜಹು ಮಱಿಹಾ'ಗಿದ್ದ ಬಸವಣ್ಣನನ್ನು ಮೇಲಕ್ಕೆ ಎಚ್ಚರಿಸಿ ಲಿಂಗಕಾಯವಾದ ಜಂಗಮದ ಪೂಜೆಯ ಸುಸೂಕ್ಷ್ಮವನ್ನು ನಿಜಭಕ್ತ ಬಸವಣ್ಣನ ಸ್ವಾನುಭಾವಕ್ಕೆ ತಂದುಕೊಡುವುದು. ಜಡಿದು ಝಂಕಿಸುವ ಜಂಗಮದ ಮಾತು ಕೇಳಿ ಬಸವಣ್ಣನವರು 'ಅತ್ಯಂತ ನೊಂದು ತಮ್ಮ ಲಿಂಗಾರ್ಚನೆಯ ತಾವೆ ಜಱೆದು'[1]ಕೊಳ್ಳುತ್ತಾರೆ:

ಮುನ್ನೂಱಱುವತ್ತು ದಿನ ಸ್ರವವ ಮಾಡಿ,
ಕಳನನೇಱಿ ಕೈಮಱೆದಂತಾಯಿತ್ತೆನ್ನ ಭಕ್ತಿ.
ಎನಿಸು ಕಾಲ ಲಿಂಗಾರ್ಚನೆಯ ಮಾಡಿ ಏವೆನಯ್ಯಾ.
ಎನ್ನ ಮನದಲ್ಲಿ ದೃಢವಿಡಿಯದನ್ನಕ್ಕರ?
ಕೊಡನ ತುಂಬಿದ ಹಾಲನೊಡೆಯಹಾಯ್ಕಿ
ಇನ್ನುಡುಗಿಹೆನೆಂದರೆ ಎನ್ನಳವೆ ಕೂಡಲಸಂಗಮದೇವಾ?[2]

ವರ್ಷಗಂಟಲೆ ಗರುಡಿಯಲ್ಲಿ ಶ್ರಮವ ಮಾಡಿ ಮಾಡಿ. ಶಿವಪೂಜೆಯ ಮಂದಿರದಲ್ಲಿ ಲಿಂಗ ಪೂಜೆಯ ಸಾಮು ತೆಗೆದು ತೆಗೆದು. ಕಡೆಗೊಮ್ಮೆ ಕಣಕ್ಕೆ ಇಳಿದು ಕೈಚಳಕ ತಪ್ಪಿ ಕಳ ಗುರುಳಿದಂತೆ ಆಯ್ತು ಅಭ್ಯಾಸದ ಭಕ್ತಿ. ನಿಷ್ಠೆಯಿಲ್ಲದ ಭಕ್ತಿ. ದೃಢತೆ ಇಲ್ಲದ ಹಿಡಿತ ಸಾವಿರ ಕಾಲ ಮಾಡಿದರೇನು? ಒಮ್ಮೆ ಭಕ್ತಿ ಜಾರಿದರೆ ತುಂಬಿದ ಹಾಲುಗಡಿಗೆ ಬಿದ್ದು ಒಡೆದುಹೋದಂತೆ. ಭಕ್ತಿಯಲ್ಲಿ ನಿಷ್ಠೆ ನೆಲೆಗೊಂಡಿದ್ದರೆ 'ಸ್ಥಾವರಜಂಗಮದ ಭೇದ'[3] ನನಗೇಕೆ ಹೊಳೆಯಲಿಲ್ಲ ಲಿಂಗದ ಪೂಜೆಯ ಹೃದಯದಲ್ಲಿ? ನಾನು ಮಾಡುತ್ತಿರುವ ಅಷ್ಟವಿಧಾರ್ಚನೆ ಷೋಡಶೋಪಚಾರ! ಪತ್ರಿ ಪುಷ್ಪ ಧೂಪ ದೀಪ ಗಂಟೆ ಜಾಗಟೆ ಮನೆತುಂಬ ಹರಡಿಕೊಂಡು ಲಿಂಗದ ಪೂಜೆ ಸಂಭ್ರಮಿಸಿ ನಡೆದಿದೆ ನಡೆದಿದೆ. ಈ ಸಂಭ್ರಮದಲ್ಲಿ ಅರ್ಚನೆ ಉಪಚಾರ ಪೂಜೆ ಲಿಂಗಕ್ಕೆ ಮುಟ್ಟಿ. ಲಿಂಗದ ಪ್ರಾಣವಾದ ಜಂಗಮಕ್ಕೆ ಮುಟ್ಟಿ. ಜಂಗಮಲಿಂಗದೇವನಿಗೆ ಗೊತ್ತಾಗಿ ನಡೆದಿಲ್ಲ ಲಿಂಗಪೂಜೆ. ಜಂಗಮದೇವನರಿಯದ ಈ ಬಿಟ್ಟಿಯ ಪೂಜೆ ಮಾಡಿಮಾಡಿ ಕೈಯಲ್ಲಿ ಸವೆದು ಮೈಯೆಲ್ಲ ನುಗ್ಗುನುರಿಯಾಗಿಹೋಯ್ತು. ಅರಸರಿಯದ ಬಿಟ್ಟಿಯ ಕೆಲಸ ಮಾಡಿ ಮಾಡಿ ಮುಪ್ಪಾದರೆ ದೊರೆತ 'ಮಾನ್ಯ' ಮೆಚ್ಚುಗೆಯೇನು? ಪ್ರಭುರಾಯಾ. '...ಜಂಗಮ ಲಿಂಗವಾಗಿ ಬಂದು ನೀವಿರುತ್ತಿರಲು ಸ್ಥಾವರಕ್ಕೆ ಮಚ್ಚಿ ಮರುಳಾದೆನು...'[4] ಸ್ಥಾವರದ ಪ್ರಾಣಮೂರ್ತಿ. ಇಷ್ಟಲಿಂಗದ ಪ್ರಾಣಚೈತನ್ಯ ನೀವು. ಜಂಗಮಲಿಂಗ ನಡೆದು ಬಂದು ಸ್ಥಾವರಪೂಜೆಯ ಬಾಗಿಲ ಬಡಿಯುತ್ತಿರಲು. ಪೂಜೆಯ ಪೂಜ್ಯಮೂರ್ತಿಯೆ ಪ್ರತ್ಯಕ್ಷ ವಾಗಿ ಬಂದು ನಿಂದಿರಲು ಮತ್ತೆ ಮತ್ತೆ ಲಿಂಗಪೂಜೆ ಮಾಡುವೆನೆಂಬ ನಾನು ಕೋಟಿ

---

೧. ಶೂ. ಸಂ. ಪ್ರ. ೧೧೧, ಪ್ರ. ೪೧.
೨. ಅದೇ ,, ,, ವ. ೪೧.
೩. ಶೂ. ಸಂ. ಪು. ೧೦೨. ವ. ೪೩.
೪. ಅದೇ ಪು. ೧೦೨, ವ. ೪೫. ಇಲ್ಲಿ 'ಸ್ಥಾವರ'ವೆಂಬ ಪದವನ್ನು ಇಷ್ಟಲಿಂಗವೆಂಬ ಅರ್ಥದಲ್ಲಿ ಬಳಸಿದ್ದಾರೆ ಬಸವಣ್ಣನವರು. ಈ ಮಾತು ಗಮನಾರ್ಹವಾಗಿದೆ.

ಮರುಳು ತಂದೆ! ಪರುಷದ ಪರ್ವತವೆ ನಡೆದು ಮನೆಗೆ ಬಂದಿರುವಾಗ ಕಬ್ಬಿಣದ ಅವಲೋಹವನ್ನು ಮನೆಯಲ್ಲಿ ಒಟ್ಟಿಕೊಳ್ಳುತ್ತಿರುವ ಹುಚ್ಚ ಹುಚ್ಚಿನ ಪರ್ವತವೇ. ಜಂಗಮಲಿಂಗವೇ, ಪ್ರಭುರಾಯಾ, ಎನ್ನ ಕರಸ್ಥಲಲಿಂಗದ ಹೃದಯಜ್ಯೋತಿಯೆ, ಒಳಗೆ ಬಾರಯ್ಯಾ ತಂದೇ. 'ಎನ್ನ ತಪ್ಪನೆಣಿಸಿಹೆನೆಂದರೆ ಕಡೆಯಿಲ್ಲ....'[೧] 'ಇನ್ನು ತಪ್ಪಿದೆನಾದರೆ ನಿಮ್ಮ ಪಾದವೆ ದಿಬ್ಯ'[೨] ಇದಕ್ಕೆ 'ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣಗಳ ಸಾಕ್ಷಿ'.

ಹೃದಯವೆ ಜ್ಯೋತಿರ್ಮಯ ಲಿಂಗವಾಗಿ, ಕೈ ಕಾಲು ಕಣ್ಣು ಕಿವಿ ಮುಂತಾದ ತನ್ನ ತನುವೆಲ್ಲಾ ಆ ಬೆಳಗುವ ಲಿಂಗಕ್ಕೆ ಶಯ್ಯಾಮಂದಿರವಾಗಿ ಇರುವ ಬಸವಣ್ಣನ ಇರವು ಕಿನ್ನರಿ ಬೊಮ್ಮಣ್ಣನಿಗೆ ಚೆನ್ನಾಗಿ ಗೊತ್ತು. ಒಳಗೆ ಬೆಳಗುವ ನಿರಾಕಾರ ಸಾಕಾರವಾಗಿ, ಚರಲಿಂಗವಾಗಿ, ಲೋಕಕ್ಕೆ ಲೋಕದಾಕಾರವಾಗಿ ಲೋಕದಲ್ಲಿ ಚರಿಸುವ ಜಂಗಮಲಿಂಗ ಪ್ರಭುದೇವ 'ಮಹಾಲಿಂಗ ತ್ರಿಪುರಾಂತಕದೇವ'ನೆಂಬ ಮರ್ಮವೂ ಗೊತ್ತು ಬೊಮ್ಮಣ್ಣನಿಗೆ. ವಸ್ತುಸ್ಥಿತಿ ಹೀಗಿರಲು, ದೇಹಪ್ರಾಣದಂತಿರುವ ಬಸವಣ್ಣ ಪ್ರಭುಲಿಂಗದಲ್ಲಿ ಸಂದು ಎಲ್ಲಿದೆ? ಸಂಶಯವೆಲ್ಲಿದೆ? ಪ್ರಾಣಕ್ಕೆ ತನ್ನ ದೇಹದ ಬಗ್ಗೆ ಸಂಶಯವಿಲ್ಲ. ದೇಹಕ್ಕೆ ತನ್ನ ಪ್ರಾಣ ತನ್ನದೇ, ತಾನೇ ಎಂಬ ಬಗ್ಗೆ ಸಂಶಯವಿಲ್ಲ. ದೇಹವನ್ನು ಬಿಟ್ಟು ಪ್ರಾಣ ವಾಸವಾಗಿರಲು ಬೇರೊಂದು ಎಡೆ ಇಲ್ಲ. ಪ್ರಾಣವನ್ನು ಬದಿಗಿರಿಸಿ ದೇಹ ತಾನಾಗಿ ದೇಹಿಸುವ ಪ್ರಶ್ನೆಯಿಲ್ಲ. ಎರಡಾಗಿ ಇದ್ದರೆ 'ಗುಣಾವಗುಣ'ವನ್ನು ಸಂಪಾದಿಸಬಹುದು, ಹುಡುಕಬಹುದು, ಎತ್ತಿ ತೋರಿಸಬಹುದು. ಮತ್ತೆ ಸಂದಿಲ್ಲದ ದೇಹಪ್ರಾಣದಂತೆ ಬಸವಣ್ಣ ಪ್ರಭುದೇವ. ಆದ್ದರಿಂದ ಬೊಮ್ಮಣ್ಣನ ಬಿನ್ನಹ: '...ಸಂಗನ ಬಸವಣ್ಣನಲ್ಲಿ ನಿಮ್ಮಡಿಗಳಲ್ಲಿ ಸಂದು ಸಂಶಯ ಉಂಟೆ? ಬಿಜಯಂಗೈವುದಯ್ಯಾ ಪ್ರಭುವೆ.'[೩]

ಯಾವ ಲೆಕ್ಕದ ರೀತಿ ಇದು ಬೊಮ್ಮಣ್ಣಾ? ಸಂದು ಸಂಶಯವಿಲ್ಲದೆ ಒಂದಾಗಿ ನಿಂದಿರುವ ನಿಲವು ಸಂಗನ ಬಸವಣ್ಣನದಾಗಿದ್ದರೆ. ಭಕ್ತ ಜಂಗಮದ ಸಕೀಲ ಸಂಬಂಧವನ್ನು ಬಲ್ಲ ಬಸವಣ್ಣ ತನ್ನ ಆಚರಣೆಯಲ್ಲಿ ಆ ನಿಲವನ್ನು ಆಚರಿಸುತ್ತಿದ್ದ.

ಜಂಗಮದಿಂಗಿತಾಕಾರವ ನೋಡಿ ಲಿಂಗವೆಂದಱಿದ ಸದ್ಭಕ್ತರು
ಮನ ಮನ ಬೆರಸಿದ ಕೂರ್ಮನ ಶಿಶುವಿನ ಸ್ನೇಹದಂತೆ
ಕಾಣದ ಮುನ್ನವೆ ತೆಱಿಹಿಲ್ಲದಿರಬೇಕು ನೋಡಾ!
ಬಂದ ಬರವ ನೋಡದೆ, ನಿಂದ ನಿಲವನಱಿಯದೆ
ಕೆಮ್ಮನೆ ಅಹಂಕಾರವ ಹೊತ್ತಿರ್ಪವರ
ನಮ್ಮ ಗೊಹೇಶ್ವರಲಿಂಗನೊಲ್ಲ ಕಾಣಾ ಕಿನ್ನರ ಬೊಮ್ಮಣ್ಣಾ[೪].

ಬೊಮ್ಮಣ್ಣಾ, ಜಂಗಮದ ವೇಷ ಲಾಂಛನ ಮುದ್ರೆಗಳನ್ನು ನೋಡಬಲ್ಲ ಭಕ್ತರು ಸಾವಿರ, ಲಕ್ಷ. ಮೇಲೆ ಮೇಲೆ ನೋಡುವ ಇಂಥ ಭಕ್ತರ ಮೇಲುನೋಟಕ್ಕೆ, ಮೇಲುಭಕ್ತಿಗೆ

೧. ಶೂ. ಸಂ. ಪು. ೧೦೨. ವ. ೪೫.
೨. ಅದೇ .. .. ವ. ೪೬.
೩. ಶೂ. ಸಂ. ಪು. ೧೦೨, ವ. ೪೭.
೪. ಅದೇ .. ೧೦೨-೧೦೩. ವ. ೪೮.

ಗಮ್ಯವಲ್ಲ, ಗೋಚರವಲ್ಲ ನಿಜಜಂಗಮದ 'ಇಂಗಿತಾಕಾರ.' ವೇಷದ ಮರೆಯ ಇಂಗಿತ ವನ್ನು ಗುರುತುಹಿಡಿಯಬಲ್ಲ ಭಕ್ತ, ಆತ ಜಂಗಮಭಕ್ತ, ಆತನ ಭಕ್ತಿ ಭಕ್ತಿಯ ಪ್ರಾಣ ಜೀವಾಳವಾದ ಜಂಗಮಭಕ್ತಿ. ಈ ಭಕ್ತಿ ನೋಡಬಲ್ಲುದು ಭಕ್ತಿಕಾರಣವಾಗಿ ಲೋಕದಲ್ಲಿ ನಡೆದಾಡುವ, ನುಡಿದಾಡುವ ಜಂಗಮಲಿಂಗವನ್ನು. ಇದು ಸದ್ಭಕ್ತಿಯ ರೀತಿ ಬೊಮ್ಮಣ್ಣಾ. ಹೀಗೆ ಜಂಗಮಲಿಂಗದ 'ಭಕ್ತಿಕಾರಣ'ವಾದ ಮನದಿಂಗಿತವನ್ನು ಬಲ್ಲ ಭಕ್ತ ತನ್ನ 'ದಾಸೋಹಕಾರಣ'ದ ಎಚ್ಚರಿಕೆಯಲ್ಲಿದ್ದು 'ಮನ ಮನ ಬೆರಸಿ.' ಭಕ್ತನಲ್ಲಿ ಜಂಗಮ ತುಂಬಿ, ಜಂಗಮದಲ್ಲಿ ಭಕ್ತ ತುಂಬಿ. ಭಕ್ತಜಂಗಮದ ಮರ್ತ್ಯದ ಮಣಿಹ ನೆರ ವೇರುತ್ತಿದ್ದರೆ ಅದು ಗುಹೇಶ್ವರಲಿಂಗಕ್ಕೆ ಮೆಚ್ಚು ಬೊಮ್ಮಣ್ಣಾ. ಹಾಗಲ್ಲದೆ ಹಮ್ಮಿನ ಕತ್ತಲೆಯಲ್ಲಿ, ಬಂದ ಜಂಗಮದ ಬರವಿನ ಇಂಗಿತವನ್ನು ತಿಳಿದು ನೋಡದೆ, ಆ ಜಂಗಮ ನಿಂದ ನಿರಾಳದ ನಿಲವನ್ನರಿಯದೆ ಲಿಂಗವ ಪೂಜಿಸುವೆನೆಂದರೆ ಪೂಜೆಗೊಂಬ ಲಿಂಗ ದೂರ ಬೊಮ್ಮಣ್ಣಾ.

ಪ್ರಭುದೇವರ ಮಾತು ಕೇಳಿ ಬಸವಣ್ಣನ ಹೃದಯ ಭಯದಿಂದ ನಡನಡನೆ ನಡುಗು ತ್ತದೆ. ಕೂರ್ಮ ಮತ್ತು ಕೂರ್ಮನ ಶಿಶುವಿನ ಸ್ನೇಹ 'ಮನ ಮನ ಬೆರಸಿ'ದ ಸ್ನೇಹ. ನೀರಿನ ಪ್ರವಾಹದಲ್ಲಿ ತಾಯಿಯನ್ನಗಲಿ ಎಲ್ಲಿಯೋ ನುಸುಳಿ ಕುಳಿತಿರುವ ಶಿಶು, ಹೊಟ್ಟೆ ಹಸಿದು ತಾಯಿಯನ್ನು ನೆನೆಸಿದರೆ, ಈ ನೆನೆದ ನೆನಹು ತಾಯಿಯ ಮನದಲ್ಲಿ ತೆರೆಗೊಂಡು ಏಳುತ್ತದೆ. ಇದಕ್ಕೆ ಉತ್ತರ ತಾಯಿ ಆವೆಯ ನೆನಹಿನ ಹಾಲು. ಈ ಹಾಲು ಹಸಿವಿಗೆ ಹರಿದರೆ ತೃಪ್ತಿಯ ತರಂಗ ಶಿಶುವಿನ ಮನದಲ್ಲಿ. ಶಿಶುವಿನ ತನುವಿನಲ್ಲಿ. ಕೂರ್ಮನ ಶಿಶುವಿನ ಸ್ನೇಹ ಒಮ್ಮೆ ಎದ್ದು ಒಮ್ಮೆ ಮಲಗಲಿಲ್ಲ. ಯಾವಾಗಲೂ ಜಾಗ್ರತ. ಎಲ್ಲಿದ್ದರೂ ಜಾಗ್ರತ. ಅದಕ್ಕೆ 'ತೆಱಹು ಮಱಹು' ಎಂಬುದಿಲ್ಲ. ಪ್ರಭು ಕೇಳುವುದು ಕಾಲ ದೇಶದ ದೂರವನ್ನರಿಯದ ಕೂರ್ಮನ ಶಿಶುವಿನ ಸ್ನೇಹದ ಭಕ್ತಿಯನ್ನು, ಭಕ್ತ ಜಂಗಮದ ಭಕ್ತಿಸಂಬಂಧವನ್ನು. ಬಸವಣ್ಣನಿಗೆ ಹೊಳೆವಂತೆ ಇದೇ 'ಸತ್ಯಸದಾಚಾರ ಸಂಬಂಧವಾದ ಭೃತ್ಯಾಚಾರ', ಇದೇ ಭಕ್ತಜಂಗಮದಲ್ಲಿ ನಡೆದಿರುವ ತೆರಹಿಲ್ಲದ ನೆನಹಿನ ಭಕ್ತಿ. ಭಕ್ತಿಗೆ ಜಂಗಮ ಹಸಿದರೆ, ಭಕ್ತಿ ಇದ್ದಲ್ಲಿಂದ ಹರಿಯಬೇಕು ಭೃತ್ಯಾಚಾರ. ಜಂಗಮ ಹಸಿದ ಹಸಿವು ತನಗೆ ಗೊತ್ತಾಗಲಿಲ್ಲ. ಭಕ್ತಿಯ ಮೊಲೆ ತೊರೆದು ಭೃತ್ಯಾಚಾರದ ಹಾಲು ಹಸಿವಿಗೆ ತೃಪ್ತಿಯನ್ನು ತರಲಿಲ್ಲ. ಈ ತೆರಹು ಮರಹಿಲ್ಲದ ಸ್ನೇಹದ ಸೂಕ್ಷ್ಮ ಮೆಲ್ಲನೆ ಮುಸುಕು ತೆಗೆದು ಬಸವಣ್ಣನಿಗೆ ಕಣ್ಣಾರೆ ಕಾಣುತ್ತದೆ; ತನ್ನ ಭಕ್ತಿಯ ಜಡದ ಅರಿವು ಆಗುತ್ತದೆ. 'ತಿಳಿಯದೆ ತಪ್ಪು ಮಾಡಿದೆ. ಭಕ್ತ ತಪ್ಪಿದರೆ ಜಂಗಮ ತಿದ್ದಿಕೊಳ್ಳುವುದು. ಅದು ನಿಮ್ಮ ಧರ್ಮ, ನಿಮ್ಮ ಧರ್ಮ.'

ಸತ್ಯಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲವಯ್ಯಾ !
ಆನು ನಿಮ್ಮ ನೆನೆಯಲು ಎನಗೆ ಭಕ್ತಿಯಿಲ್ಲವಯ್ಯಾ !
ಕರುಣದಿಂ ಕೃಪೆಮಾಡಾ ಕೂಡಲಸಂಗಮದೇವಾ.[೧]

---

೧. ಶೂ. ಸಂ. ಪು. ೧೦೩, ವ. ೪೯.

ಬಸವಣ್ಣನಿಗೆ ಇನ್ನೂ ಗಂಭೀರವಾಗಿರುವ ಭಕ್ತಿಯ ನೆಲೆಯನ್ನು ತೋರಿಸಬೇಕೆಂಬುದು ಪ್ರಭುವಿನ ವಿಚಾರ. ಆ ಆಳಕ್ಕಿಳಿದು ಭಕ್ತಿಯ ಮಹಾವೈಭವವನ್ನು ನೋಡಬಲ್ಲ ಸಮರ್ಥ, ಆ ದಿವ್ಯಗಂಭೀರದಲ್ಲಿ ವಾಸವಾಗಿ ಇದ್ದು ಆ ವೈಭವವನ್ನು ಆಚರಿಸಿ ಅನುಭವಿಸಬಲ್ಲ ಸಮರ್ಥ ಬಸವಣ್ಣನೊಬ್ಬನೆ ಎಂಬ ಮನವರಿಕೆ ಪ್ರಭುದೇವನಿಗೆ. ಅಂತೆಯೇ ಮತ್ತೆ ಮತ್ತೆ ಒರೆದು ಕೊರೆದು ಪುಟವಿಟ್ಟು ಬಸವಣ್ಣನನ್ನು ಭಕ್ತಿಗೆ ಹದಗೊಳಿಸುತ್ತಿದ್ದಾನೆ ಜಂಗಮದೇವ. ಕರಗಿಸಿದರೆ ಕರಗಿಸಿಕೊಂಡು, ಒರೆದರೆ ಪುಟವಿಕ್ಕಿದರೆ ಪುಟವಿಕ್ಕಿಸಿಕೊಂಡು, ಕಡಿದರೆ ಕಡಿಸಿಕೊಂಡು, ಬಡಿದರೆ ಬಡಿಸಿಕೊಂಡು ಸತ್ಯಸದಾಚಾರದ ರೇಖೆಗೆ, ಭೃತ್ಯಾಚಾರದ ಬಣ್ಣಕ್ಕೆ, ನಿಜಭಕ್ತಿಯ ನಿರಾಳದ ಒರೆಗೆ ಬರಬೇಕೆಂದು ಆರ್ತನಾದ ಮಾಡುತ್ತಿದೆ ಭಕ್ತಿಯ ಸುವರ್ಣಮೂರ್ತಿ. '...ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ ಕೂಡಲಸಂಗಮದೇವಾ'.[೧]

ಬಸವಣ್ಣನ ಈ ಪ್ರಾರ್ಥನೆಯನ್ನು ಮನ್ನಿಸಿಯೆ ಜಂಗಮಲಿಂಗ ಪ್ರಭುದೇವ ಬಸವಣ್ಣನನ್ನು 'ಕಡಿಹಕ್ಕೆ ಬಡಿಹಕ್ಕೆ ತಂದು' ಶರಣರ ಪಾದಕ್ಕೆ ಅಲಂಕಾರವಾಗಿ ಸಲ್ಲುವಂತೆ ಮಾಡುತ್ತಿದ್ದಾನೆ:

> ತನುವಿನಲ್ಲಿ ತನು ಸವೆಯದು; ಮನದಲ್ಲಿ ಮನ ಸವೆಯದು;
> ಧನದಲ್ಲಿ ಧನ ಸವೆಯದು.
> ಭಕ್ತಿಯುಕ್ತಿಯ ಮಾತು ನಿನಗೇಕೆ ಹೇಳಾ ಬಸವಾ?
> ಮಾಟಕೂಟವೆಂಬ ಕೀರ್ತಿಗೆ ಸಿಲುಕಿ,
> ಜಂಗಮವೆ ಲಿಂಗವೆಂಬುದ ಮರೆದೆಯಲ್ಲಾ ಬಸವಾ!
> ಗುಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ
> ಭಕ್ತನಾಗಬಾರದು ಕಾಣಾ ಸಂಗನ ಬಸವಣ್ಣಾ.[೨]

ಭಕ್ತಿಯನ್ನು ಮಾಡುವ ಯುಕ್ತಿ, ಭಕ್ತಿಯ ಯೋಗಭಕ್ತಿಯ ಮರ್ಮದ ಕುಶಲ ನಿನಗೆ ಹೇಗೆ ಬರಬೇಕು ಬಸವಣ್ಣಾ? ತನು ಅರ್ಪಣವಾಗಿ ತನು ಸವೆಯಲಿಲ್ಲ., ಮನ ಅರ್ಪಣವಾಗಿ ಮನ ಸವೆಯಲಿಲ್ಲ, ಧನ ಸವೆಯಲಿಲ್ಲ. ಏನೂ ಸವೆಯದೆ ಮಾಡುವ ಭಕ್ತಿಯ ಜಾಣತನವನ್ನು ಕಲಿತೆ ಅಣ್ಣಾ! 'ಮಾಟಕೂಟ'ದ ಭಕ್ತನೆನಿಸಿಕೊಳ್ಳಬೇಕೆಂಬ ಕೀರ್ತಿಯ ಬಲೆಗೆ ಬಿದ್ದು ಜೀವಂತಲಿಂಗ ಜಂಗಮವೆಂಬ ಮೇರುಸತ್ಯವನ್ನೂ ಕಾಣದೆ ಎಡವುತ್ತ ನಡೆದೆಯಲ್ಲಾ! ಮನವಚನಕಾಯವೆಂಬ ತ್ರಿಕರಣಗಳು ಲಿಂಗಮುಖವಾದ ಜಂಗಮಕ್ಕೆ ಸವೆದು ಸವೆದು ಅಲ್ಲಿಯೆ ಅರ್ಪಿತವಾಗಿ ಕಾಯಾರ್ಪಣ ಕರಣಾರ್ಪಣ ಭಾವಾರ್ಪಣವಾಗದಿದ್ದರೆ ಭಕ್ತಿ ಹೇಗೆ ಸಾಧ್ಯವಾದೀತು ಸಂಗನ ಬಸವಣ್ಣಾ?

ತನ್ನ ಭಕ್ತಿಯ ಸ್ವರೂಪವನ್ನು ತಾನು ನೋಡಿ ತಿಳಿದುಕೊಂಡಿರುವಂತೆ ಮನ ವಚನ ಕಾಯದಲ್ಲಿ ವಂಚನೆಯಿಲ್ಲದೆ ಗುರುಲಿಂಗಜಂಗಮಕ್ಕೆ ತನು ಮನ ಧನವನ್ನು ನೀಡಿ ಸವೆಯುತ್ತಿದ್ದಾನೆ ಬಸವಣ್ಣ. ಒರೆಗಲ್ಲಮೇಲೆ (ಒರೆದ) ತಿಕ್ಕಿದ ಒಂದು ಹೊನ್ನ ಒರೆ

೧. ಶೂ. ಸಂ. ಪು. ೧೦೩, ವ. ೫೦. ೨. ಶೂ. ಸಂ. ಪು. ೧೦೩, ವ. ೫೧.

ಉಟ್ಟ ಬಟ್ಟೆಯಲ್ಲಿ ಒಂದು ನೂಲೆಳೆ ತನಗೆ ಬೇಕೆಂದು ಮರೆಸಿ ಮನದಲ್ಲಿ ಇಟ್ಟುಕೊಂಡರೆ ಮಾತಿನಲ್ಲಿ ಮನೆಯಲ್ಲಿ ಕದ್ದಿಟ್ಟುಕೊಂಡರೆ 'ನಿಮ್ಮಾಣೆ'. 'ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ–ಘನಮಹಿಮ, ನಿಮ್ಮ ಪಾದದಾಣೆ'[1] ಕೇಳು ಜಂಗಮಲಿಂಗವೇ, 'ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ ನಿಮ್ಮ ಶರಣರಿಗೆ...'[2] 'ನಿಮ್ಮ ಶರಣರಿಗಲ್ಲದೆ ಮತ್ತೊಂದನಱಿಯೆನು.'[3]

ಬಸವಣ್ಣನ ಭಕ್ತಿಯ ಈ ಹದನ ಪ್ರಭುದೇವ ಒಪ್ಪದ ಮಾತು. ಇಷ್ಟೇ ಅಲ್ಲ, ಈ ಭಕ್ತಿ ವಿಲಕ್ಷಣವಾಗಿ ತೋರುತ್ತದೆ ಭಕ್ತಿಕಾಯವಾದ ಜಂಗಮಲಿಂಗಕ್ಕೆ! ಬೇಡಿದರೆ ಧನವನ್ನು, ತನುವನ್ನು, ಮನವನ್ನು ಕೊಡಬಲ್ಲೆ ಎಂಬ ಭಕ್ತಿ ವಿಚಿತ್ರಭಕ್ತಿ! ಈ ತನು ಮನ ಧನ ಯಾರ ಸೊಮ್ಮು? ಬಸವಣ್ಣ ಗಳಿಸಿಟ್ಟುಕೊಂಡ ತನ್ನ ಸ್ವಂತ ಆಸ್ತಿಯೆ? ಇವಕ್ಕೆ ತಾನು ಒಡೆಯ; ಬೇಡಿದರೆ ನಾನು ಬೇಕಾದವರಿಗೆ ಕೊಡಬಲ್ಲೆ, ಕೊಟ್ಟು ಭಕ್ತನೆನಿಸಿಕೊಳ್ಳಬಲ್ಲೆ! ಎಂಥ ಅಜ್ಞಾನದ ಪರದೆಯಲ್ಲಿ ಸಂಭ್ರಮಿಸಿ ಓಡಾಡುತ್ತಿದೆ ಬಸವಣ್ಣನ ಭಕ್ತಿ!!

ಮೇರುಗಿರಿಗಳೆಲ್ಲವು ಪ್ರಮಥರೊಡವೆ.
ರಜತಗಿರಿಗಳೆಲ್ಲವು ಪುರಾತರೊಡವೆ.
ಚತುರ್ದಶ ಭುವನವೆಲ್ಲವು ಲಿಂಗದೊಡವೆ.
ಪೃಥ್ವಿಯೆಂಬುದು ಕರ್ತಾರನ ಕಮ್ಮಟ, ಅಚ್ಚಿನ ಮೊಳೆ, ಬಾಣಸದ ಮನೆ.
ತನು ಮನ ಧನಂಗಳೆಲ್ಲವು ನಮ್ಮ ಗೊಹೇಶ್ವರಲಿಂಗದ ಸೊಮ್ಮು.
ನೀನೇನ ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣಾ?[4]

ಪೃಥ್ವಿ ಮೊದಲು ಹದಿನಾಲ್ಕು ಲೋಕ ಕಡೆಯಾದ ವಿಶ್ವಬ್ರಹ್ಮಾಂಡ ಧನವೆಲ್ಲ ಲಿಂಗ ಪ್ರಮಥರ ಸೊಮ್ಮು, ಲಿಂಗಪುರಾತನರ ಒಡವೆ. ಮನುಷ್ಯ ನಾನು ನನ್ನದೆಂದಿರುವ ತನು ಮನ ಧನ ತಾನೆ ಹುಟ್ಟಿಸಿ ಬೆಳೆದ ತನ್ನ ಸ್ವಂತ ಆಸ್ತಿಯೆಲ್ಲ, ಅವೂ 'ಗೊಹೇಶ್ವರ ಲಿಂಗದ ಸೊಮ್ಮು'. ಲಿಂಗದ ಹೊಲದಲ್ಲಿ ಲಿಂಗ ಬೆಳೆದ ಅಂಗದ ರಾಶಿ ತನುಮನಧನವೆಲ್ಲ. ಮತ್ತು ಈ ತನು ಮನ ಧನವೇನು ನಿತ್ಯವೇ? ಶಾಶ್ವತವೇ? ನಿತ್ಯಸತ್ಯವಾದ ಗುರುಲಿಂಗ ಜಂಗಮಕ್ಕೆ ಅವರೊಡವೆಯೆ ಆದ ಅನಿತ್ಯವಾದ ತನುಮನಧನವನ್ನು ಅರ್ಪಿಸಿ ನಾನು ಭಕ್ತನಾದೆನೆಂದರೆ, ಈ ನಾನು ಬಹಳ ವಿಚಿತ್ರ ನಾನು! '...ತನು ಮನಧನಂಗಳೆಂಬ ಅನಿತ್ಯವನು ನಿತ್ಯಕ್ಕರ್ಪಿಸಿ ಭಕ್ತನಾದೆನೆಂದರೆ ಅದು ಅಜ್ಞಾನ ನೋಡಾ! ಒಡೆಯರಿಗೆ ಉಂಡೆಯ ಮುಱಿದಿಕ್ಕಿ ನಾ ಭಕ್ತನೆಂಬ ಮಾತ ಸಮ್ಯಕ್‌ಶರಣರು ಮೆಚ್ಚುವರೆ?'[5] ಕೆರೆಯ ನೀರನ್ನು ಕೆರೆಗೆ ಹಾಕಿದರೆ ನಾನು ನೀರು ಕುಡಿಸಿ ಪರೋಪಕಾರಿಯಾದೆನೇ? ಲಿಂಗದೊಡವೆ ಲಿಂಗಕ್ಕೆ ಮುಟ್ಟಿದರೆ, ನಾನು ಕೊಟ್ಟು ಭಕ್ತನಾದೆನೆಂಬ ಹಮ್ಮಿನ ಅಭಿಮಾನ ನಗೆಗೆಡೆ. 'ನಮ್ಮ ಗೊಹೇಶ್ವರಲಿಂಗಕ್ಕೆ ನೀನಾವುದಱಲ್ಲಿ ಏನನರ್ಪಿಸಿ ಭಕ್ತನಾದೆ ಹೇಳಾ ಸಂಗನ ಬಸವಣ್ಣಾ'?[6]

---

೧. ಶೂ. ಸಂ. ಪು. ೧೦೪, ವ. ೫೩.
೨. ಅದೇ ,, ,, ,, ,,
೩. ಅದೇ ,, ೧೦೩ ವ. ೫೨.
೪. ಶೂ. ಸಂ. ಪು. ೧೦೪, ವ. ೫೪.
೫. ಅದೇ ,, ೧೦೪, ವ. ೫೫.
೬. ಅದೇ ,, ,, ,,

ಗಾಣದ ಎತ್ತು ತಿರುಗಿತು ತಿರುಗಿತು ಕಣ್ಣಕಟ್ಟಿಕೊಂಡು. ಎಳ್ಳು ಇಲ್ಲದ ಗಾಣವನ್ನು ಏಸು ಕಾಲ ತಿರುಗಿದರೇನು? ಎಣ್ಣೆಗಾಗಿ ತಿರುಗದೆ ತಿರುಗುವುದೆ ಎಣ್ಣೆಯೆಂದು ಭ್ರಮಿಸಿದರೆ ಏನು ಬಂತು? ನಾನು ಮಾಡಿದೆನೆಂದರೆ ಎಳ್ಳಿಲ್ಲದ ಗಾಣ. ಮಾಡಿಸುವಾತ ನೀನು, ನೀನು ಮಾಡಿಸಿದಂತೆ ಮಾಡಿದೆ. ನೀನು ಮಾಡಿಸಿದರೆ ಮಾಡಿದೆ ಎಂಬ ಅರ್ಪಿತ ಭಾವ ಗಾಣದ ಬಾಯಲ್ಲಿ ಎಳ್ಳಾಗಿದ್ದರೆ ಎತ್ತು ತಿರುಗುವುದು ಪ್ರಯೋಜನ. ಸಜ್ಜನ ಭಕ್ತಿಯು ಎಣ್ಣೆ ಪರಿಯುತ್ತದೆ ಗಾಣದಲ್ಲಿ. ಅರ್ಪಿತಭಾವವಿಲ್ಲದೆ ಅಹಂಭಾವವನ್ನು ಮುಂದಿಟ್ಟುಕೊಂಡು ಗಾಣದೆತ್ತಿನಂತೆ ಮಾಡಿ ಮಾಡಿ ಕೆಟ್ಟೆನಲ್ಲಾ !–ಎಂಬ ಮಾತು ಹೊಳೆಯುತ್ತದೆ ಬಸವಣ್ಣನಿಗೆ. ಗುರುವಿನ ಸೊತ್ತಾದ ತನುವನ್ನು ಗುರುವಿಗೆ ಅರ್ಪಿಸುವೆನೆಂಬ ಅಹಂಕಾರದ ಅರ್ಥವೇನು? ಲಿಂಗದ ಮನವನ್ನು ಲಿಂಗಕ್ಕೆ ಕೊಟ್ಟರೆ ನಾನು ಮಾಡಿದ ಶತಕಾರ್ಯವೇನು? ಜಂಗಮದ ಧನವನ್ನು ಜಂಗಮಬಂದು ಇಂಬುಗೊಂಡರೆ ಅವರಿಗೆ ನಾನೇನು ಕೊಟ್ಟಂತಾಯ್ತು? ಅವರ ಸೊಮ್ಮು ಅವರಿಗೆ ಸಲ್ಲಿದರೆ, ನನ್ನ ಸೊಮ್ಮು ಅವರಿಗೆ ನಾನು ಸಲ್ಲಿಸಿದೆ, ನಾನು ಮಾಡಿದೆ, ಮಾಡಿ ಭಕ್ತನಾದೆನೆಂದರೆ, ಈ ಜೊಳ್ಳುಮಾತಿಗೆ. ಈ 'ಒಳಲೊಟ್ಟೆ'ಯ ಭಕ್ತಿಗೆ ಯಾರು ನಗಲಿಕ್ಕಿಲ್ಲ? ಯಾರು ಛೀ ಹಾಕಲಿಕ್ಕಿಲ್ಲ? '...ಕೂಡಲ ಸಂಗಮದೇವಯ್ಯಾ. ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ,'[೧] 'ನಾನು ಭಕ್ತನಲ್ಲಯ್ಯಾ,' 'ನಾನು ಯುಕ್ತನಲ್ಲಯ್ಯಾ'[೨] ಎಂದು ಅಹಂಭಾವ ಬೆರೆದ ತನ್ನ ಭಕ್ತಿ ದಂಭಭಕ್ತಿ ಎಂಬುದನ್ನು ಕಿಂಕುರ್ವಾಣಭಾವದಿಂದ ಬಿನ್ನಯಿಸುತ್ತಾನೆ ಬಸವಣ್ಣ.

ದಂಭ, ಅಹಂಭಾವ. ಲಿಂಗಜಂಗಮದಲ್ಲಿ ಸಂದುಸಂಶಯವೆಂಬ ಕಸಕಡ್ಡಿ ತನ್ನ ಭಕ್ತಿಯು ಬೆಳೆಗೆ ಅಡ್ಡಲಾಗಿದೆಯೆಂಬ ಎಚ್ಚರಕ್ಕೆ ಏಳುತ್ತಿರುವ ಬಸವಣ್ಣನನ್ನು 'ಸಜ್ಜನ ಸನ್ನಹಿತ'ವಾದ ಸಮ್ಯಗ್‌ಭಕ್ತಿಗೆ ಇನ್ನೂ ಹದಗೊಳಿಸುತ್ತಾನೆ ಜಂಗಮಲಿಂಗ ಪ್ರಭುದೇವ. ಬಸವಣ್ಣಾ, ಹೊತ್ತಿಗೊಂದು ಪರಿಯ ಬಣ್ಣವಾಗುವ ಗೋಸುಂಬೆಯಲ್ಲ ಭಕ್ತಿ. ಒಮ್ಮೆ ಅಹಂಭಾವದ ರಂಗು, ಮತ್ತೊಮ್ಮೆ ವಿನಯ ವಿನಮ್ರ ಕಿಂಕುರ್ವಾಣಭಾವದ ಮೆತ್ತಗೆ ! ಭಕ್ತಿಗೆ ಬಣ್ಣವಿಲ್ಲ ಬಸವಣ್ಣಾ. ಬಣ್ಣ ಪ್ರಪಂಚ ಬಸವಣ್ಣಾ. ತಾನು ಮಾಡುವ ಲಿಂಗ ಜಂಗಮಭಕ್ತಿ ಲೋಕದ ಜನರಿಗೆ ತೋರಿ ಬೀರಬೇಕೆಂಬ ಬಣ್ಣವಿಟ್ಟ ಭಕ್ತಿಯೇ ಅಥವಾ ಲಿಂಗ ಜಂಗಮಕ್ಕೆ ತಾನು ದಾಸೋಹಂ ಭಾವದಲ್ಲಿ ರಸರಭಸವಾಗಿ ಹರಿವ ಸಹಜ ಸಜ್ಜನ ಭಕ್ತಿಯೇ ಎಂಬ ಸಾರಾಸಾರದ ಪರೀಕ್ಷೆಗೆ ತಾನು, ತನ್ನ ಮನ, ತನ್ನ ಎದೆ ಸಾಕ್ಷಿ ಬಸವಣ್ಣಾ. ಮನದ ಬಣ್ಣ ಮನಕ್ಕೆ ಗೊತ್ತು. ಒಳಗೆ ಹೊಕ್ಕು ಈ ಮನದ ಮಾಟವನ್ನು ನೋಡಲಾರದ ಜನರಿಗೇನು ಗೊತ್ತು? ಬಣ್ಣವಿಲ್ಲದ ಭಕ್ತಿಯಲ್ಲಿ 'ಗೊಹೇಶ್ವರನಿಪ್ಪನಲ್ಲದೆ,'[೩] ಭಕ್ತಿ ಭಾವದ ನೈರ್ಮಲ್ಯದಲ್ಲಿ ದೇವ ನೆಲಸಿನಿಲ್ಲುವನಲ್ಲದೆ ಒಳಹೊರಗೆ ನಡೆದಿರುವ ಪ್ರಪಂಚದ ಒಪ್ಪದಲ್ಲಿ ದೇವ ಹೇಗೆ ಮೂಡಿ ಮನೆಮಾಡಿಕೊಂಡಿರಬಲ್ಲ ಬಸವಣ್ಣಾ? ನೀರು ತಿಳಿದಂತೆ

೧. ಶೂ. ಸಂ. ಪು. ೧೦೪, ವ. ೫೭.
೨. ಅದೇ ,, ೧೦೫, ವ. ೫೮.
೩. ಶೂ. ಸಂ. ಪು. ೧೦೫, ವ. ೫೯.

ನೀರಿನ ಆಳ ತಿಳಿಯುತ್ತದೆ. ನೀರು ಕದಡಿದರೆ ನೀರಿನ ಪ್ರಸನ್ನಗಂಭೀರ ಅಡಗುತ್ತದೆ. ಕದಡಿದ ಭಕ್ತನಲ್ಲಿ ದೇವ ಹೇಗೆ ವಾಸವಾಗಿರಬಲ್ಲ? ಮತ್ತೆ: ಬಸವಣ್ಣಾ, ಜಂಗಮವೆ ಜಂಗಮಲಿಂಗವೆಂದು ನೀನು ಹೇಳುವೆ. ಈ ನಿನ್ನ ಮಾತಿನಲ್ಲಿ ಪೂರ್ಣ ಅರ್ಥವಿದೆಯೆ? ಜಂಗಮ ಲಿಂಗ ಇವು ಎರಡಲ್ಲ, ಒಂದೇ ಒಂದು ಎಂಬ ಜಂಗಮಲಿಂಗದ ಸಮರಸೈಕ್ಯದ ಸಮ್ಯಗ್‌ದರ್ಶನವಿದೆಯೆ? ನಿನ್ನ ಮಾತಿನಲ್ಲಿ ನಿನ್ನ ಮನ ಹರಿಯುತ್ತಿದೆಯೆ? ನಿನ್ನ ಮಾತಿನಲ್ಲಿ ನಿನ್ನ ಹೃದಯ ತುಂಬಿ ತುಳುಕುತ್ತಿದೆಯೆ? ನಿನ್ನ ಮಾತಿನಲ್ಲಿ ನೀನು ತುಂಬಿ ಜಂಗಮಲಿಂಗಕ್ಕೆ ಭಕ್ತಿಯಾಗುತ್ತಿರುವೆಯಾ? '...ಜಂಗಮವೆ ಲಿಂಗವೆಂಬ ಶಬ್ದಸೂತಕ ಉಂಟಲ್ಲದೆ ಸಜ್ಜನಭಕ್ತಿಯ ಮಾತು ನಿನಗೇಕೆ ಹೇಳಾ ಬಸವಾ?'[೧] ಗುರುಲಿಂಗಜಂಗಮ ರೂಪವಾದ 'ಗೊಹೇಶ್ವರನೆಂಬ ಪರುಷ ಮುಟ್ಟಿ ನೀನು–ಕಬ್ಬಿಣದಲ್ಲಿ ಭಕ್ತಿಯ ಹೊನ್ನಿನ ಕಳೆ ಒಡಮೂಡಿರಬಹುದು. ಪರುಷದ ಸೋಂಕು ನಿನ್ನನ್ನು ಹೊನ್ನು ಮಾಡಿತಲ್ಲದೆ ಪರುಷವನ್ನಾಗಿ ಪರಿವರ್ತಿಸಲಿಲ್ಲ. ''...ಗೊಹೇಶ್ವರನೆಂಬ ಪರುಷದ ಪುತ್ಥಳಿಯನಱಿವರೆ ತಿಳಿದುನೋಡಾ ಸಂಗನ ಬಸವಣ್ಣಾ.'[೨]

ಬಾಗಿಲಿಗೆ ಬಂದ 'ಪರುಷದ ಪುತ್ಥಳಿ'ಯು ಜರಿದು ಝುಂಕಿಸುವ ಮಾತಿನ ಗರ್ಭ ಗುಡಿಯಲ್ಲಿ ಸಜ್ಜನಭಕ್ತಿಯ ಹೊಳಹು ದಿವ್ಯಕಾಂತವಾಗಿ ಪ್ರಜ್ವಲಿಸುವಂತಿದೆ. ತನ್ನ ಭಕ್ತಿಯ ಪರುಷದ ನಿಲವು ಇಲ್ಲಿ ನಿಚ್ಚಳವಾಗಿ ತೋರುವಂತಿದೆ. ಈ ನಿಲವಿನ ಮುಂದೆ ತನ್ನ ಭಕ್ತಿ ಎಷ್ಟರದು?

ಬೆದಕದಿರು, ಬೆದಕದಿರು; ಬೆದಕಿದರೆ ಹುರುಳಿಲ್ಲ.
ಚಿತ್ರಅಟ್ಟೆಯ ಕಾಯಲ್ಲಿ ಮತ್ತೇನನಱಸುವಿರಿ?
ನಿಮ್ಮುತ್ತಮಿಕೆಯ ಮೆಱೆಯಯ್ಯಾ ಕೂಡಲಸಂಗಮದೇವಾ.[೩]

ಜಂಗಮ ತಂದೇ, ಏನು ಹುಡುಕುವಿರಿ ನನ್ನಲ್ಲಿ? ಚಿತ್ರರಟ್ಟೆಯ ಕಾಯಂತಿರುವ ನನ್ನಲ್ಲಿ, ಅತ್ತಿಯ ಹಣ್ಣಿನಂತೆ ಹೊರಗೆ ಕೆಂಪು ಒಳಗೆ ಹುಳುವಾಗಿರುವ ನನ್ನ ಚಿತ್ತದಲ್ಲಿ ಮತ್ತೇನ ಹುಡುಕುವಿರಿ? ವಿಚಾರಿಸಿ ನೋಡಿದರೆ ಹುರುಳಲ್ಲ ನಾನು, ಹುರುಳಿಲ್ಲ ನನ್ನ ಭಕ್ತಿಯಲ್ಲಿ.

ಆನೆತ್ತ ಬಲ್ಲೆನಯ್ಯಾ ನಿಮ್ಮ ಭಕ್ತಿಯ ಘನವ?
ನಾನೆತ್ತ ಬಲ್ಲೆನಯ್ಯಾ ನಿಮ್ಮ ಶ್ರೀಪಾದದ ನಿಲವ?
ಕಾಯಧ ಕಳವಳದ ಮಱೆಯಲ್ಲಿದ್ದವರಲ್ಲಿ ನಂಬುಗೆಯುಳವಡುವುದೆ?
ಕೂಡಲಸಂಗಮದೇವಾ, ಎನ್ನವಗುಣವ ನೋಡದೆ
ಕರುಣದಿಂದ ಭಕ್ತಿಯ ನಿಲವ ತೋಱಾ ತಂದೆ ![೪]

ಬಸವಣ್ಣನ ಈ ಬಿನ್ನಹವನ್ನು ಮನ್ನಿಸಿ ಪ್ರಭುದೇವರು ಲಿಂಗಜಂಗಮಭಕ್ತಿಯ ನಿಶ್ಚಲವಾದ ನಿಲವನ್ನು ಮತ್ತೊಮ್ಮೆ ಸ್ಪಷ್ಟವಾಗಿ ತೋರುತ್ತಾರೆ. 'ಲಿಂಗಜಂಗಮವ

೧. ಶೂ. ಸಂ. ಪು. ೧೦೫-೧೦೬, ವ. ೬೩.
೨. ಅದೇ " " "
೩. ಶೂ. ಸಂ. ಪು. ೧೦೫, ವ. ೬೧.
೪. ಅದೇ " ೧೦೭, ವ. ೬೪.

ಪೂಜಿಸಿ ಭಕ್ತನಾದಹೆನೆಂದರೆ ಭೃತ್ಯಾಚಾರ ಸದಾಚಾರವೆ ಮೊದಲು ನೋಡಾ...'[೧] ಈ ಭೃತ್ಯಾಚಾರ ಸದಾಚಾರದಲ್ಲಿ ಯಾವಾಗಲೂ ಎಚ್ಚರವಾಗಿರಬೇಕು ಬಸವಣ್ಣಾ. ಎಚ್ಚರ ಕುಂದಿದರೆ, ಅವಧಾನ ತಪ್ಪಿದರೆ ಭೃತ್ಯಾಚಾರಕ್ಕೆ ಭಂಗ, ಸದಾಚಾರಕ್ಕೆ ಹಾನಿ. ಆಚಾರ ಕೆಟ್ಟರೆ ಭಕ್ತಿಯ ಕೆಚ್ಚು ವಿಕಳವಾಗುತ್ತದೆ. ಬಸವಣ್ಣಾ, ಕೂರ್ಮನ ಶಿಶುವಿನ ಸ್ನೇಹದಲ್ಲಿರುವ ನಿತ್ಯ ಅವಧಾನ ನಿನಗೆ ಗೊತ್ತು. ಕಾಗೆ ಕೋಗಿಲೆಯಿಟ್ಟ ತತ್ತಿಯನ್ನು ಮರಿಮಾಡಿ ತನ್ನದೇ ಕೂಸೆಂದು ಜೋಪಾನಮಾಡುವ 'ಕಾಕಪಿಕಸಂಧಾನ' ನಿನಗೆ ಗೊತ್ತು. ಈ ಸಂಧಾನದ ವಾತ್ಸಲ್ಯದಲ್ಲಿ ಅವಧಾನ ತಪ್ಪಿದರೆ ಕಾಗೆಗೆ ತಾಯಿತನದ ಬಯಕೆ ತುಂಬಲಿಲ್ಲ, ಕೋಗಿಲೆಯ ಮರಿಗೆ ಶಿಶುತನದ ಜೋಕೆ ಉಳಿಯಲಿಲ್ಲ. ಕೊಂಬೆಯಿಂದ ಕೊಂಬೆಗೆ ಜಿಗಿವ ಕಪಿಯು ಎಚ್ಚರ ಮಂಕಾದರೆ ಕಪಿಗೆ 'ಅಧಃಪತನ'ವೆ ಗತಿಯಲ್ಲದೆ ಬೇರೆ ಗತಿಯೇನು? ಹಾಲು ಮತ್ತು ನೀರಿಗೆ ಬಿದ್ದಿರುವ ಗಂಟನ್ನು ಬಿಚ್ಚುವ ಹಂಸೆಯ ಜೋಕೆ ತಪ್ಪಿದರೆ ಗಂಟು ಬಿಚ್ಚುವ ಬಗೆ ಹೇಗೆ ಬಸವಣ್ಣಾ? ಎಚ್ಚರಿಕೆ ಬೇಕು ಲಿಂಗಜಂಗಮದ ಭಕ್ತಿಯಲ್ಲಿ. ತಾನು ಜೋಕೆಗೆಟ್ಟು, 'ಎನ್ನ ತನು ಮನ ಧನಕ್ಕೆ ನೀನೊಡೆಯು, ಆದ್ದರಿಂದ ನನ್ನ ಅರಿವು ನಿನ್ನದು ನನ್ನ ಮರಹು ನಿನ್ನದು, ಆಳು ತಪ್ಪಿದರೆ ಒಡೆಯ ದಂಡ ತೆರಬೇಕು' ಎಂದು ಹೇಳಿ ನಿನ್ನ ತಪ್ಪನ್ನು 'ಶಿವಾಧೀನ'ವೆಂದು ಹೇಳುವುದು 'ಬಣ್ಣಿಗೆಯ ಮಾತು' ಬಸವಣ್ಣಾ. ಬಣ್ಣಿಗೆಯ ಮಾತು 'ಶಬ್ದಸೂತಕ,' ಗೊಹೇಶ್ವರಲಿಂಗಕ್ಕೆ ಸಲ್ಲದ ಮಾತು. ಒಮ್ಮೆ ಅರಿವು ಒಮ್ಮೆ ಮರಹು ಆಗದೆ ಹಗಲಿರುಳು ಎಚ್ಚರವಿರಬೇಕು ಭಕ್ತಿಯಲ್ಲಿ. ಮತ್ತೆ ಇಲ್ಲಿ 'ನಾನು ಮಾಡಿದೆ'ನೆಂಬ ನಾನುಭಾವ ಭಕ್ತಿಯಲ್ಲಿ ಹೊಲ್ಲ ಬಸವಣ್ಣಾ. '...ವಿಶ್ವಾಸವುಳ್ಳ ಭಕ್ತಿಗೆ ಅಹಂಕಾರದ ಹೊರೆ(ಱೆ)ಯಿಲ್ಲ. ಅಹಂಕಾರವೆಂಬ ಅಲಗ ಹಿಡಿದು ಮಾಡುವ ಭಕ್ತಿ ತನ್ನನೆ ಇಱಿವುದು. ಗೊಹೇಶ್ವರನೆಂಬ ಹಗೆಯ ಗೆಲುವರೆ ಅಱಿವೆಂಬ ಅಲಗ ಅವಧಾನ ತಪ್ಪದೆ ಹಿಡಿಯಬೇಕು ನೋಡಾ ಬಸವಣ್ಣಾ ![೨]

ತನ್ನ ಲಿಂಗಜಂಗಮಭಕ್ತಿಯಲ್ಲಿ 'ನಾನು' ಮೊಳೆತು ಪಲ್ಲವಿಸಿ, ತನ್ನ ಭಕ್ತಿಯಲ್ಲೆಲ್ಲ ಪಸರಿಸುತ್ತಿರುವುದು, ಮತ್ತೆ, ತನ್ನ ಜಂಗಮುವೆ ಲಿಂಗವೆಂಬ ಭಾಷೆ, ತನ್ನ ಅವಧಾನ ತಪ್ಪಿ, ಸ್ಥಾವರಕ್ಕೆ ಮೆಚ್ಚಿ ಜಂಗಮಕ್ಕೆ ಉದಾಸೀನ ಮಾಡಿ ಆಚಾರ ಕೆಟ್ಟು ಪಲ್ಲಟವಾಗಿ ಹೋದುದರ ಅರಿವು ಬಸವಣ್ಣನಿಗಾಗುತ್ತದೆ. ತೆರಹು ಮರಹಾಗಿದ್ದ ಬಸವಣ್ಣನನ್ನು ಈ ಅರಿವಿಗೆ ಎಚ್ಚರಿಸುವುದೇ ಪ್ರಭುದೇವರ ಉದ್ದೇಶ. ಬಸವಣ್ಣನ ಭಕ್ತಿ ಹೆಸರಿಗೆ ಭಕ್ತಿಯಲ್ಲ, ಕಾಯ ಪ್ರಾಣ ಮನದಲ್ಲಿ ಭಕ್ತ ಜಂಗಮದ ಏಕಾರ್ಥವಾಗಿ ಸಮದರ್ಶಿಯಾಗಿರುವ ಏಕಾರ್ಥಭಕ್ತಿ[೩] ಎಂಬ ಸಂಗತಿ ಪ್ರಭುದೇವರಿಗೆ ಚೆನ್ನಾಗಿ ಗೊತ್ತು. ಭಕ್ತಿಯ ಈ ತುದಿ

---

೧. ಶ. ಸಂ. ಪು. ೧೧೭, ವ. ೬೮. ೨. ಶೂ. ಸಂ. ಪು. ೧೧೭, ವ. ೬೮.

೩. ಈ ಸಂದರ್ಭದಲ್ಲಿ ಮನಕ್ಕೆ ಮನ ಏಕಾರ್ಥವಾಗಿ, ಕಾಯಕ್ಕೆ ಕಾಯ, ಪ್ರಾಣಕ್ಕೆ ಪ್ರಾಣ ಸಮದರ್ಶನವಾಗಿ ಇರುವ ಭಕ್ತಜಂಗಮದ ಏಕಾರ್ಥ ಸಂಬಂಧವನ್ನು ಮುಂದೆ ಪುಟ ೧೫೬ರಲ್ಲಿ ಬರುವ ಚೆನ್ನಬಸವಣ್ಣನವರ 'ಭಕ್ತರ ಹೆಚ್ಚುಕುಂದೆಂಬುದು ಜಂಗಮದ ಹೆಚ್ಚುಕುಂದೆಂಬುದನಱಿಯಾ ಪ್ರಭುವೆ. ನಿನ್ನ ಪ್ರಾಣವೆ ಬಸವಣ್ಣನ ಪ್ರಾಣ; ಬಸವಣ್ಣನ ಪ್ರಾಣವೆ ನಿನ್ನ ಪ್ರಾಣ.

ಯಲ್ಲಿ ನಿಂದು ಭೃತ್ಯಾಚಾರವನ್ನು ಸದಾ ಆಚರಿಸುತ್ತಿರುವ ಬಸವಣ್ಣನ ಅರಿವಿನಲ್ಲಿ ತೆರಹು ಮರಹು ತಲೆದೋರಿದರೆ ಜಂಗಮಲಿಂಗದ ಮನನೊಂದಿದೆ. ನೊಂದ ಮನದಲ್ಲಿ ಮುಳಿಸು ಮೊಳೆದೋರಿದೆ: '...ನಮ್ಮ ಗೊಹೇಶ್ವರಲಿಂಗದಲ್ಲಿ ನೀನೆ ಭಕ್ತನಾದ ಕಾರಣ ಮುಳಿಸು ಮೊಳೆದೋಱಿತ್ತು ಕಾಣಾ ಸಂಗನ ಬಸವಣ್ಣಾ !'[1] ಪ್ರಭುದೇವರ ಮುಳಿಸಿನ ಮುಸುಕನ್ನು ಇನ್ನೂ ಎತ್ತಿನೋಡಿ, ಎಂಥ 'ಭಕ್ತಿಕಂಪಿತ'ವಿದೆ !:

ಸೂಳೆ ಹಲಬರನುರುಳಿದಳೆಂದು ನಿಂದಿಸುವರಿಲ್ಲ ಕೇಳಾ !
ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದರೆ,
ಆಪಳ ಚಾಂಡಾಲಗಿತ್ತಿ ಎಂಬರು ಲೋಕವೆಲ್ಲವು.
ಕೀರ್ತಿವಾರ್ತೆಗೆ ಮಾಡುವ ಭಕ್ತ ತಪ್ಪಿದರೆ, ಅದ ಮನಕ್ಕೆ ತರಲಿಲ್ಲ.
ಸಜ್ಜನ ಸದ್ಭಕ್ತನೆಡಹಿದರೆ, ಅದ ಸೈರಿಸಬಾರದು ಕೇಳಾ.
ನಮ್ಮ ಗೊಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೆ ಭಕ್ತನಾದಕಾರಣ
ಮನ ನೊಂದಿತ್ತು ಕಾಣಾ ಸಂಗನ ಬಸವಣ್ಣಾ ![2]

ಜಂಗಮದ ಮಾತು ಶೂಲವಾಗಿ ನಡುತ್ತದೆ ಬಸವಣ್ಣನ ಎದೆಯಲ್ಲಿ. ಸಾವಿರಕಾಲ ಸಾಧನೆಮಾಡಿ ಕಳದಲ್ಲಿ ಕೈಮರೆದು ಹೋಯಿತಲ್ಲಾ ತನ್ನ ಭಕ್ತಿ ! ಲಿಂಗವೆ ಜಂಗಮವೆಂಬ ತನ್ನ ನುಡಿ ತನಗೆ ಮೃತ್ಯುವಾಯ್ತು. ನಾನು ಮಾಡುವೆನೆಂಬ ತನ್ನ ಅಹಂಭಾವ ಅಲಗಾಗಿ ತನ್ನನೆ ಕೊಂದಿತ್ತು. ತನ್ನ ಶಿವಭಕ್ತಿಯಲ್ಲಿ 'ಸೂಳೆತನ' ಮೊಳೆತು ಜಂಗಮ ಮುಖದಲ್ಲಿ ನಿಂದೆ ಬಂದಿತಲ್ಲಾ ! ಜಂಗಮಲಿಂಗದ ಮನ ನೊಂದಿತಲ್ಲಾ ! ನೊಂದ ನೋವು ಮುಳಿಸಾಗಿ ಉರಿದರೆ ಉಳಿಯಬಲ್ಲ ಭಕ್ತನಾರು? ಆಕಾಶ ಹೊರಗೆ ಹಾಕಿದರೆ ಎಲ್ಲಿ ಹೋಗಬೇಕು? ನಿಂದ ನೆಲ ಸಡಿಲಿಬಿದ್ದರೆ ಎಲ್ಲಿ ನಿಲ್ಲಬೇಕು? 'ಭಕ್ತಿಯುಕ್ತಿ'ಯನರಿಯದೆ 'ತರಳತನ'ದಲ್ಲಿ ಕೆಟ್ಟೆ ! ಜಂಗಮಲಿಂಗದ ಮುನಿಸಿನ ಅರ್ಥ ಬಸವಣ್ಣನ ದಶದಿಕ್ಕುಗಳನಾವರಿಸಿ ಪ್ರಳಯಜ್ವಾಲೆಯಂತೆ ಉರಿಯುತ್ತಿದೆ ನೋಡಿ:

ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ, ನೆಲ ಹೊತ್ತಿ ಉರಿದರೆ ನಿಲಬಹುದೆ?
ಏರಿ ನೀರುಂಬರೆ. ಬೇಲಿ ಕೆಯ್ಯ ಮೇವರೆ.
ನಾರಿ ತನ್ನ ಮನೆಯಲ್ಲಿ ಕಳುವರೆ. ತಾಯ ಮೊಲೆಪಾಲು ನಂಜಾಗಿ ಕೊಲುವರೆ
ಇನ್ನಾರಿಗೆ ದೂಱುವೆನಯ್ಯಾ ಕೂಡಲಸಂಗಮದೇವಾ?
ನೀವು ಮುನಿದರೆ ನಾನು ಸೈರಿಸಬಲ್ಲೆನೆ ಹೇಳಾ ಪ್ರಭುವೆ?[3]

ಪ್ರಭುವೇ. ತಂದೇ ತಾಯೇ. 'ನೀವು ಮಾಡಲಾನಾದೆನು.'[4] ನೀವು ಹಡೆದರೆ ನಾನು ಹುಟ್ಟಿದೆ. ನೀವು ಮಾಡಿದಿರಿ ನಾನು ಆದೆ. ನೀವು ಮಾಡಿದಂತೆ ನಾನು ಆದೆ. ನಿಮ್ಮ

ನಿನ್ನ ಕಾಯುವೆ ಬಸವಣ್ಣನ ಕಾಯ: ಬಸವಣ್ಣನ ಕಾಯವೆ ನಿನ್ನ ಕಾಯ. ನೀವಿಲ್ಲದಿರೆ ಬಸವಣ್ಣನಿಲ್ಲ; ಬಸವಣ್ಣನಿಲ್ಲದಿರೆ ನೀವಿಲ್ಲ. ಇಂತೊಂದನೊಂದ ಬಿಚ್ಚಿ ಬೇಱುಮಾಡಬಾರದೆಂಬುದನಱಿದು...' ಎಂದು ಮುಂತಾಗಿರುವ ೮೦ನೆಯ ವಚನ ಸ್ಪಷ್ಟಪಡಿಸುತ್ತದೆ.

೧. ಶೂ. ಸಂ. ಪು. ೧೦೭, ವ. ೭೦
೨. ಅದೇ ,, ೧೦೭, ವ. ೭೧.
೩. ಶೂ. ಸಂ. ಪು. ೧೦೮, ವ. ೭೩.
೪. ಅದೇ ,, ೧೦೮, ವ. ೭೪.

ಹಸುಗೂಸು, ಹಸಿ ಹಸುಳೆಯಲ್ಲಿ ಗುಣ ಅವಗುಣಗಳನ್ನು ಎಣಿಸಿ ನೋಡುವಿರಿ. ನಿಮ್ಮ 'ಜಂಗಮ'ಕ್ಕೆ ನನ್ನ 'ಭಕ್ತ' ಸರಿಸಮವಾಗಿ ಸಮರ್ಥವಾಗಬಲ್ಲುದೇ? ಆ ಜಂಗಮ ಭಕ್ತಿಯ ಅಂತಸ್ಸಾಮರ್ಥ್ಯ ಅಂತಸ್ಸತ್ತ್ವ ಅಂತರ್ಜ್ಯೋತಿ ನೀವು. ಯಾರೇನು ಮುನಿದರೂ ಸೈರಿಸಬಹುದು. ನೀವೆ ಮುನಿದರೆ ಮುಂದೆ ಭಕ್ತಿಗೆ ಗತಿಯಿಲ್ಲ, ಪಥವಿಲ್ಲ. 'ಇನ್ನು ಬಾರಾ ಪ್ರಭುವೆ, ಕೂಡಲಸಂಗಮದೇವಾ!'[೧] ಕರಸ್ಥಲದ ಸಂಗಮಲಿಂಗವೆ ಆದ ಚರಸ್ಥಲದ ಜಂಗಮಲಿಂಗವೆ ಕೃಪೆಮಾಡು ಬಾರಯ್ಯಾ!

'ನಂಬಿ ಕರೆದಡೆ ಓ ಎನ್ನನೆ ಶಿವನು?' ಬಸವಣ್ಣನ ಭಕ್ತಿನಿರ್ಭರವಾದ ಆರ್ತ ಪ್ರಭುದೇವನ ಮನದ ಮುನಿಸನ್ನು ಮೆಲ್ಲಮೆಲ್ಲಗೆ ಕರಗಿಸುತ್ತದೆ. 'ಮುನಿಸು ಮೆಲ್ಲಗೆ ಮುಚ್ಚಿದಂತೆ ಆ ಮುನಿಸಿನ ಕಾರಣ ಮೆಲ್ಲಗೆ ಮೂರ್ತಿಗೊಳ್ಳುತ್ತದೆ. ಬಸವಣ್ಣ ಕೀರ್ತಿ ವಾರ್ತೆಗೆ ಬಿದ್ದ! ಬಸವಣ್ಣ ತೆರಹು ಮರಹಾಗಿದ್ದ! ಮಾವಿನ ಮರದಲ್ಲಿ ಬೇವಿನ ಗೊಂಚಲು! ವಜ್ರದ ಮನೆಯಲ್ಲಿ ಗೊರಲೆಯ ಪಂಕ್ತಿ! ಬಸವಣ್ಣ ಯಾರು? ಬಸವಣ್ಣ ಎಂಥ? '...ನಿನ್ನ ಶಿಶುವಿನೊಡತಣ ತೆಱಹುಂ ಮಱಹ ವಸುಧೆಯೊಳಗಣ ಪ್ರಮಥರು ಮೆಚ್ಚುವರೆ? ತಿಳಿದು ನೋಡುವರೆ, ಗೊಹೇಶ್ವರನ ಶರಣ ಅಲ್ಲಯ್ಯಂಗೆ ನೀನು ಪರಮಾರಾಧ್ಯರು ಕಾಣಾ ಸಂಗನ ಬಸವಣ್ಣಾ!'[೨]

ಬಸವಣ್ಣನಾರು? ಪ್ರಭುವಾರು? ಹಿಂದಿನದೆಲ್ಲ ಎಚ್ಚರವಾಗಿರುವ ಪ್ರಭು ತಿಳಿಸು ವಂತೆ ತಾನು ಬಸವಣ್ಣನ 'ಶಿಶು'. ಬಸವಣ್ಣ ತನ್ನ ಗುರುವಾದ ಅನಿಮಿಷಯ್ಯನ ಗುರು, ತನಗೆ ಪರಮಗುರು, ಪರಮಾರಾಧ್ಯ. ಅನಿಮಿಷಯ್ಯನಿಗೆ ಕರಸ್ಥಲದ ಲಿಂಗವನ್ನು ಕೊಟ್ಟ ವೃಷಭಗಣನಾಥನ ಅವತಾರವೆ ಇಂದು ಬಸವಣ್ಣನಾಗಿದ್ದಾನೆ ಎಂಬ ಸಂಗತಿಯನ್ನು ನೆನೆಸಿಕೊಂಡು, ಬಸವಣ್ಣ ತನಗೆ ಗೊಹೇಶ್ವರನ ಶರಣ ಅಲ್ಲಯ್ಯಂಗೆ ನೀನು 'ಪರಮಾ ರಾಧ್ಯ'ರೆಂದು ಹೇಳುತ್ತಾನೆ ಅಲ್ಲಮಪ್ರಭುದೇವರು. ಈ ಮಾತು ಬಸವಣ್ಣನಿಗೆ ಒಪ್ಪಿಗೆ ಇಲ್ಲ. ಭಕ್ತಿಯ ವಾರಾಶಿಯಲ್ಲಿ, 'ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥ ನೆಂಬೆ'—ಎಂಬ ನಂಬಿಗೆಯೆ ಪ್ರಾಣಜೀವಾಳವಾಗಿರುವ ಸರ್ವಾಂಗಭಕ್ತಿಯ ಭರಿತಜೀವನ ದಲ್ಲಿ 'ತಾನು ಒಬ್ಬರಿಗೆ ಗುರು'—ಎಂಬ ಭಾವ ಹೇಗೆ ಮೂಡೀತು? ಚೆನ್ನಬಸವಣ್ಣನಿಗೆ ದೀಕ್ಷೆಕೊಟ್ಟ ಸಂದರ್ಭದಲ್ಲಿಯೂ ಬಸವಣ್ಣನ ಮೃದುವಿನಯ, ಲೆಂಕರ ಲೆಂಕ ಡಿಂಗರಿಗರ ಡಿಂಗರಿಗ, ತೊತ್ತಿನ ತೊತ್ತಿನ ಮರುದೊತ್ತಿನ ಭಾವ ತಾನತಾನವಾಗಿ ಎಂದೇನೋ ಕಿಂಕರಿಸುತ್ತ 'ನುಡಿಯಲಮ್ಮದೆ' ನುಡಿವಂತಿದೆ. ಅಂತೆಯೆ ಜಂಗಮಲಿಂಗದ ಮಾತು ಕೇಳುಕೇಳುವ ಮೊದಲೆ ಬಸವಣ್ಣನ ನಾಲಗೆಯಲ್ಲಿ ಸದುವಿನಯದ ತರಂಗಗಟ್ಟುತ್ತದೆ: 'ಎನ್ನ ಗತಿ ಮತಿ ನೀನೆ ಕಂಡಯ್ಯಾ! ಎನ್ನ ಗುರು ಪರಮಗುರು ನೀನೆ ಕಂಡಯ್ಯಾ! ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯಾ!'[೩] 'ಕೂಡಲಸಂಗಮದೇವಾ,' ಬೇಕಾದರೆ 'ನಿಮ್ಮ ಶರಣ ಸಿದ್ಧರಾಮಯ್ಯದೇವರ'[೩]ನ್ನು ವಿಚಾರಿಸಿರಿ.

---

೧ ಶೂ. ಸಂ. ಪು. ೧೧೮, ವ. ೭೫.
೨ ಅದೇ ,, ,, ವ. ೭೬.
೩ ಶೂ. ಸಂ. ಪು. ೧೧೮-೧೧೯, ವ. ೭೭.

ಈ ಎಲ್ಲ ವಿವಾದ ಸಂವಾದವನ್ನು ಕೇಳುತ್ತಿದ್ದ ಸಿದ್ಧರಾಮಯ್ಯ ಬಸವಣ್ಣನ ಭಕ್ತಿ ಭಾವಕ್ಕೆ ಪ್ರಭುವಿನ ಜಂಗಮದ ನಿಲವಿಗೆ ಬೆರಳು ಕಚ್ಚುತ್ತಿದ್ದಾನೆ. ಮಾನವಹೃದಯ ದಿವ್ಯಕ್ಕಾಗಿ ಬೆಳೆವ ಭಕ್ತಿಯ ಮಂಗಲಸೌಂದರ್ಯಕ್ಕೆ ಬಸವಣ್ಣನೆ ಮೇರೆಗಲ್ಲು. ಈ ಭಕ್ತಿಯನ್ನು ಉಂಡು ತಣಿದು ಲೋಕಕ್ಕೆ ದಿವ್ಯಕಲ್ಯಾಣವನ್ನು ಮಳೆಗರೆವ ಜಂಗಮದ ನಿರಾಳಕ್ಕೆ ಪ್ರಭುದೇವರೆ ಮೇರುವೆ ಎಂಬ ನಿರ್ಣಯದಲ್ಲಿದ್ದ ಸಿದ್ಧರಾಮಯ್ಯ 'ಪ್ರಭುದೇವ ರೊಡನೆ ಬಸವರಾಜದೇವರ ಘನ'ವನ್ನು ಕೊಂಡಾಡುತ್ತಾನೆ: 'ಆದಿಯನಾದಿ ಇಲ್ಲ ದಂದು ಬಸವಣ್ಣನೆ ಭಕ್ತ; ನಾದ ಬಿಂದು ಕಳೆಗಳಿಲ್ಲದಂದು ನೀನೆ ಜಂಗಮ...'[1] ಗುರು-ಶಿಷ್ಯ ಸಂಬಂಧವೇನೇ ಇರಲಿ, ಹಿಂದೆಂದಿಗೂ ಇಂದು ಮುಂದೆಂದಿಗೂ ಬಸವಣ್ಣನೆ ಭಕ್ತ ನಿಮಗೆ; ಅದರಂತೆ ಭಕ್ತಿಗೆ ನಿತ್ಯ ಪ್ರಾಣಜ್ಯೋತಿ ನೀವೆ ಜಂಗಮ. 'ಈ ಉಭಯಭಾವ ದಲ್ಲಿ ಭೇದ ಉಂಟೆ?'[1] ಭಕ್ತಿಯೆ ಒಡಲು ಜಂಗಮಕ್ಕೆ, ಜಂಗಮವೆ ಪ್ರಾಣ ಭಕ್ತಿಗೆ. ಭೇದವೆಲ್ಲಿದೆ? ಒಡಲು ಪ್ರಾಣ ಒಂದೊಂದರಲ್ಲಿ ಹರಿದು ಸಮರಸವಾಗಿ ಇರದಿದ್ದರೆ ಮತ್ತೇನು ಗತಿ? '...ಕಪಿಲಸಿದ್ಧಮಲ್ಲಿನಾಥಯ್ಯಾ, ಬಸವಣ್ಣನಾರೆಂಬುದ ನಿಮ್ಮಲ್ಲಿ ನೀವೆ ತಿಳಿದು ನೋಡಿ, ಕೃಪೆಮಾಡಾ ಪ್ರಭುವೆ.'[1] ಭಕ್ತಿಯಲ್ಲಿಗೆ ಜಂಗಮ ನಡೆಯಲೆ ಬೇಕು. 'ಬಸವರಾಜದೇವರ ಮಠಕ್ಕೆ ಬಿಜಯಂಗೈವುದು.'

ಇಲ್ಲಿಯವರೆಗೆ ಮೌನವಾಗಿದ್ದ ಚೆನ್ನಬಸವಣ್ಣನವರು ಮಡಿವಾಳ ಮಾಚಯ್ಯ ನವರು ಬಸವಣ್ಣನ ಮಠಕ್ಕೆ ಕೃಪೆಮಾಡಿ ದಯಮಾಡಿಸಬೇಕೆಂದು ಪ್ರಭುದೇವರಲ್ಲಿ ಬಿನ್ನಹ ಮಾಡಿಕೊಳ್ಳುತ್ತಾರೆ. '...ನಡೆವ ವಾರುವ ಮುಗ್ಗಿದರೆ ನಡೆಸಿಕೊಂಬುದಲ್ಲದೆ ಮಿಡಿ ಹಱಿಯಹೊಯ್ದವರುಂಟೆ ಲೋಕದೊಳಗೆ?...'[2] ಬಸವಣ್ಣ ತಪ್ಪಿರಬಹುದು, ಎಡವಿರಬಹುದು, ಮುಗ್ಗಿರಬಹುದು. ನಡೆವ ಕುದುರೆ ಮುಗ್ಗುರಿಸಿದರೆ ಸಾವರಿಸಿ ಕೊಂಡು ನಡೆಸಬೇಕು. ಜಂಗಮಕ್ಕೆ ವಾಹನ ಭಕ್ತ. ಭೃತ್ಯಾಚಾರದಲ್ಲಿ ನಡೆವಾಗ ಭಕ್ತ ಒಮ್ಮೆ ತೆರಹು ಮರಹಾದರೆ ಒಡೆಯರು ಸೈರಿಸಿಕೊಂಡು ಭಕ್ತನನ್ನು ಹಾದಿಗೆ ಹಚ್ಚ ಬೇಕು. ಅದು ಜಂಗಮಲಿಂಗದ ಧರ್ಮ. ಬಸವಣ್ಣ ಭಕ್ತ ಹೌದು, ಪ್ರಭುದೇವ ಜಂಗಮ ಹೌದು. ಬಸವಣ್ಣನಿಲ್ಲದೆ ಪ್ರಭು ಇಲ್ಲ, ಪ್ರಭು ಇಲ್ಲದೆ ಬಸವಣ್ಣನಿಲ್ಲ. ಅದು ಹೇಗೆ ಸಾಧ್ಯ? ಭಕ್ತಿಯ ಗಮ್ಯ ಜಂಗಮ, ಜಂಗಮದ ಗಮನ ಭಕ್ತಿಯಲ್ಲಿ, ಭಕ್ತಿಯ ಮೇಲೆ ಬಸವಣ್ಣ ಜಂಗಮಲಿಂಗಕ್ಕಾಗಿ ಹರಿದಿದ್ದಾನೆ, ಆ ಲಿಂಗದಲ್ಲಿ ಸಮರಸವಾಗಿ ಹರಿಯು ತ್ತಿದ್ದಾನೆ. ಪ್ರಭುದೇವ ಭಕ್ತಿಯ ಅಂಗಕ್ಕಾಗಿ ಚರಿಸಿದ್ದಾನೆ, ಆ ಅಂಗವಾದ ಬಸವಣ್ಣನಲ್ಲಿ ಸಮರಸವಾಗಿ ಒಂದಾಗಿ ಹರಿಯಬಂದಿದ್ದಾನೆ. ಭಕ್ತಜಂಗಮದ ಸುಶೀಲ ಸಂಬಂಧ ಹೀಗಿರಲು, ಒಂದು ತಪ್ಪಿಗೆ ಸಾವ ಶಿಕ್ಷೆಯೆ? ಜಂಗಮವಾಗಿ ಬಂದು ಹೀಗೆ ಶಿಕ್ಷಿಸುವ ಕಠೋರ ಪ್ರಭುಲಿಂಗದಲ್ಲಿ ತಲೆದೋರುವ ಸಂಭವ ಎಳ್ಳಷ್ಟು ಇಲ್ಲ. ಪ್ರಭುವಿನ ಮಾಟ ಅದೊಂದು ಅಡ್ಡನಾಟಕ. ಬಸವಣ್ಣನನ್ನು ಶಿಕ್ಷಿಸುವ ನೆವದಲ್ಲಿ ರಕ್ಷಿಸುವ ಉದ್ದೇಶ ಪ್ರಭುವಿನಲ್ಲಿ. ಸಜ್ಜನ ಸದ್‌ಭಕ್ತಿಯಲ್ಲಿದ್ದ ಕಸವನ್ನು ಕಿತ್ತೊಗೆದು ಬಸವಣ್ಣನನ್ನು ಸಮರಸ

---

೧ ಶೂ. ಸಂ. ಪು. ೧೯, ವ. ೭೮. ೨. ಶೂ. ಸಂ. ಪು. ೧೯-೧೧೦, ವ. ೮೦.

ಭಕ್ತಿಯ ಪರುಷವನ್ನಾಗಿ ಪರಿವರ್ತಿಸುವುದು ನಾಟಕದ ನಿಷ್ಪತ್ತಿ. ಇದು ಚೆನ್ನಬಸವಣ್ಣನವರ ಮತ. ಪ್ರಭುದೇವರ ಜಂಗಮದ ನಿಲವನ್ನು, ಬಸವಣ್ಣನ ಭಕ್ತಿಯ ನಿಜಸ್ವರೂಪವನ್ನು ಮತ್ತೊಂದು ರೀತಿಯಲ್ಲಿ ಕಂಡು, ಈ ಭಕ್ತಜಂಗಮಕ್ಕೆ ಸಹಜ ಸಂಬಂಧವನ್ನು ನೆಲೆಗೊಳಿಸುವ ಚೆನ್ನಬಸವಣ್ಣನ ಇರವನ್ನೂ ಎತ್ತಿ ತೋರಿಸುತ್ತಾನೆ ಮಡಿವಾಳ ಮಾಚಯ್ಯ. ಆತ ಕಂಡ ಕಾಣಿಕೆ ಇದು:

ಶರಣು ಶರಣಾರ್ಥಿ, ಎನ್ನ ಬಿನ್ನಪವನವಧರಿಸಯ್ಯಾ.
ಬಸವಣ್ಣನೆ ಗುರುರೂಪಾಗಿ ಮರ್ತ್ಯಕ್ಕೆ ಬಂದನು.
ಚೆನ್ನಬಸವಣ್ಣನೆ ಲಿಂಗರೂಪಾಗಿ ಮರ್ತ್ಯಕ್ಕೆ ಬಂದನು.
ಪ್ರಭುವೆ, ನೀವು ಜಂಗಮರೂಪಾಗಿ ಮರ್ತ್ಯಕ್ಕೆ ಬಂದಿರಿ.
ಭಕ್ತಿಯ ಬೆಳವಿಗೆಗೆ ಬಸವಣ್ಣ ಕಾರಣಿಕನಾದ.
ಅಱಿವಿನ ಬೆಳವಿಗೆಗೆ ಚೆನ್ನಬಸವಣ್ಣ ಕಾರಣಿಕನಾದ.
ಈ ಇಬ್ಬರನೂ ಒಳಕೊಂಬ ಮಹಾಘನಕ್ಕೆ ನೀವು ಕಾರಣಿಕರಾದಿರಿ.
ಇಂತು ಗುರು ಲಿಂಗ ಜಂಗಮ ಒಂದೆ ಭಾವವಲ್ಲದೆ ಭಿನ್ನಭಾವವುಂಟೆ?
ಬಸವಣ್ಣ ಚೆನ್ನಬಸವಣ್ಣನ ಬಿನ್ನಪವ ಮೀಱದೆ
ಬಿಜಯಂಗೈವುದಯ್ಯಾ ಕಲಿದೇವರದೇವಾ.[೧]

ದಿವ್ಯದ ಭಕ್ತಿ ಬಸವಣ್ಣನಾಗಿ ಮರ್ತ್ಯಕ್ಕೆ ಅವತರಿಸಿ ನಿಜಭಕ್ತಿಯನ್ನು ಬಿತ್ತಿದ ಬೆಳೆದ ಮರ್ತ್ಯಲೋಕದಲ್ಲಿ. ಮರ್ತ್ಯದಲ್ಲಿ ಭಕ್ತಿಯನ್ನು ಬೆಳೆದ ಬಸವಣ್ಣ ಗುರುತತ್ತ್ವ. ದಿವ್ಯಜ್ಞಾನ ದಿವ್ಯದಿಂದಿಳಿದು ಚೆನ್ನಬಸವಣ್ಣನಾಗಿ ಮರ್ತ್ಯಲೋಕದಲ್ಲಿ ನಿಜದಿರವಿನ ಅರಿವನ್ನು ಬಿತ್ತಿ ಬೆಳೆದ. ಈ ಸ್ವಯಂಜ್ಯೋತಿಯಾದ ಚಿಜ್ಜ್ಯೋತಿರ್ಲಿಂಗ ಚೆನ್ನಬಸವಣ್ಣ. ಈ ದಿವ್ಯಭಕ್ತಿ ದಿವ್ಯಜ್ಞಾನ ಸಮರಸವಾಗಿ ನಿಂದ ಮಹಾಘನದ ನಿಲವೇ ಜಂಗಮಲಿಂಗದ ನಿಲವು. ಗುರು ಲಿಂಗ ಜಂಗಮ ತೋರಿಕೆಗೆ ಮೂರಾಗಿದ್ದರೂ ತಾವಿದ್ದ ನಿಜಗಂಭೀರದಿರವಿನಲ್ಲಿ ಒಂದು. ಭಿನ್ನಭಾವ ತೋರಿಕೆ, ಕಲ್ಪನೆ, ನಿಜಸಹಜಭಾವ ಒಂದು. ಹೀಗೆ ನಿಜಸ್ಥಿತಿ ಇದ್ದು ತನ್ನ ಮಠಕ್ಕೆ ತಾನು ಬಾರೆನೆಂಬುದು, ತನ್ನಲ್ಲಿಗೆ ತಾನು ಬಿಜಯಂಗೆಯ್ಯೆನೆಂಬುದು ಯಾವ ಲೆಕ್ಕ? ಕಲಿದೇವರ ದೇವಾ ಬಿಜಯಂಗೈವುದಯ್ಯಾ.

ಮಡಿವಾಳಯ್ಯನ ಈ ಬಿನ್ನಹಕ್ಕೆ ಬೆಂಬಲವಾಗಿ ಚೆನ್ನಬಸವಣ್ಣನ 'ಕೃಪೆಮಾಡಾ ಪ್ರಭುವೆ.' ಎಂಬ ವಿಜ್ಞಪ್ತಿಗೀತ ಪ್ರಭು–ಬಸವದೇವರ ನಿಜದಿರವನ್ನು ಹೊರಗೆ ತಂದು ಹಾಡಿ, ಪ್ರಭುವಿನ ಮುನಿಸು ಭಕ್ತಿಪ್ರಣಯದ ಮುನಿಸು, 'ಒಲುಮೆಯ ಮುನಿಸು'

೧. ಶೂ. ಸಂ. ಪು. ೧೧೦, ವ. ೮೧.

ಈ ಸಂದರ್ಭದಲ್ಲಿ ಇದೇ ಗ್ರಂಥದ ಪ್ರಾರಂಭದಲ್ಲಿ ಬರುವ ಈ ಗದ್ಯಭಾಗ ನೋಡಿ:

...ಆ ನಿಃಕಲ ಪರಶಿವನ ಸಚ್ಚಿದಾನಂದ ಸ್ವರೂಪವೆನಿಸಿದ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರೇ ಗುರು ಲಿಂಗ ಜಂಗಮ ಸ್ವರೂಪವಾಗಿ ಸಕಲ ಜಗತ್‌ಪಾವನವಾಗಿ ಮರ್ತ್ಯಕ್ಕೆ ಅವತರಿಸಿದರು. ಇಂತೀ ಗುರು ಲಿಂಗ ಜಂಗಮ ಮೂಱು ಆ ನಿಃಕಲ ಪರಶಿವಲಿಂಗ ತಾನೆ. ಆ ಪರಶಿವಲಿಂಗವು ಜಗಹಿತಾರ್ಥವಾಗಿ ಮೂಱಾಗಿ ಮರ್ತ್ಯಕ್ಕೆ ಅವತರಿಸಿದರೆ... ಪು. ೪.

ಎಂದು ಸಾರಿಹೇಳಿ ಪ್ರಭುವನ್ನು ಬಸವಣ್ಣನಲ್ಲಿಗೆ ಬರಮಾಡಿಕೊಳ್ಳುವ ರೀತಿಯನ್ನು ನೋಡಿ:

ಶರಣು ಶರಣಾರ್ಥಿ, ಮಹಾದೇವರ ದೇವಾ !
ಶರಣು ಶರಣಾರ್ಥಿ, ಪರಬ್ರಹ್ಮಸ್ವರೂಪಾ !
ಶರಣು ಶರಣಾರ್ಥಿ, ನಿರಾಕಾರತತ್ತ್ವವೆ !
ನೀವೆ ಗತಿ ಮತಿ, ನಿಮ್ಮ ಚರಣಕ್ಕೆ ಶರಣಯ್ಯಾ !
ಸತಿಪತಿಯ ಒಲುಮೆಯ ಮುನಿಸು ಅತಿಬೇಟವೆಂಬುದು ತಪ್ಪದು ನೋಪಾ !
ನಿಮ್ಮ ಶರಣ ಬಸವಣ್ಣನೊಡತಣ ಮುನಿಸು
ಎನ್ನ ಮನಕ್ಕೆ ಸಂಶಯ ತೋಱಿದು ನೋಡಾ !
ಸಂತೆಯ ನೆರವಿಯಲ್ಲಿ ಅಭಿಮಾನದ ಮಾತ ಮಾಱಬಹುದೆ?
ಬೀದಿಯಲ್ಲಿ ನಿಂದು ನುಡಿವ ಅನುಭಾವದ ಱಚ್ಚೆ ನಗೆಗೆಡೆ ನೋಡಯ್ಯಾ !
ಸಂಗನ ಬಸವಣ್ಣನೊಳಗೆ ನಿಮ್ಮೊಳಗೆ ಭೇದವಿಲ್ಲೆಂಬುದ
ನೀವೆ ಅಱಿದಱಿದು ಮತ್ತೆ ಬಾರೆವೆಂಬುದುಚಿತವೆ?
ಕೂಡಲಚೆನ್ನಸಂಗನ ಶರಣ ಬಸವಣ್ಣನೆ ನಿಮ್ಮ ಪ್ರಾಣವಾಗಿರುತ್ತಿರಲು
ಇನ್ನಾರೊಡನೆ ಮುನಿವಿರಿ?
ಕೃಪೆಮಾಡಾ ಪ್ರಭುವೆ.[೧]

ಅನ್ಯರ ಪ್ರಾಣಕ್ಕೆ ಮುನಿಯಬಹುದು. ತನ್ನ ಪ್ರಾಣಕ್ಕೆ ತಾನು ಮುನಿಯಲುಂಟೆ? ಸತಿಪತಿಯ ಮುನಿಸು ಏಕಾಂತವಾಗಿರಬೇಕು; ಲೋಕಾಂತವಾಗಿರಬಾರದು. ಭಕ್ತಜಂಗಮದ 'ಅನುಭವ' ಮುನಿಸು ಅದೂ ಗುಪ್ತದ ಮಥನವಲ್ಲದೆ ನೆರೆದ ಸಂತೆಯಲ್ಲಿ ನಡೆವ ಗುದ್ದಿಯಾಟವಲ್ಲ. ಮಹಾದೇವರ ದೇವಾ, ಪರಬ್ರಹ್ಮಸ್ವರೂಪಾ, ನಿರಾಕಾರತತ್ತ್ವವೆ, ಪ್ರಭುವೆ ಶರಣು; ಕೂಡಲಚೆನ್ನಸಂಗಮದೇವಾ, ಶರಣು ಶರಣಾರ್ಥಿ; ಕೃಪೆಮಾಡಿ ಬಿಜಯಂಗೈವುದಯ್ಯಾ.

'ಇಂತು ಚಿಕ್ಕದಣ್ಣಾಯಕರು ಮಡಿವಾಳ ತಂದೆಗಳು ಬಿನ್ನಹಂ ಮಾಡಲು ಪ್ರಭುದೇವರು ಪ್ರಸನ್ನರಾಗಿ'ದ್ದಾರೆ.[೨] ಮಂಜು ತಿಳಿದು ಆಕಾಶ ನಿರ್ಮಲವಾದರೆ ಅದರ ಪ್ರಸನ್ನ ಗಂಭೀರ, ಗಭೀರ ಪ್ರಸನ್ನ ಎಂಥದು? ಮುಳಿದ ಜಂಗಮಲಿಂಗ ತಿಳಿದು. 'ಭಕ್ತಿಕಂಪಿತ'ನಾಗಿ, ಶಿವಪ್ರಸನ್ನವಾಗಿ ಭಕ್ತನಿಗೆ ಒಲಿದು ಬಂದರೆ ಹೆಜ್ಜೆ ಹೆಜ್ಜೆಯಲ್ಲಿ ಭಕ್ತಿಯ ಮಹಾತ್ಮೆ ಅಂದರೆ ಬಸವಣ್ಣನ ಮಹಾತ್ಮೆ ಗುಂಗುರು ಗುಂಗುರುವಾಗಿ ಗೀತಿಸುತ್ತಿದೆ. ಅದೋ ನೋಡಿ ಕೇಳಿ ಪ್ರಭುದೇವರ ಹೃದಯದಲ್ಲಿ ಬಯ್ತಿರುವ ಬಸವಣ್ಣನ ಪ್ರಸನ್ನ ಮೂರ್ತಿಯನ್ನು :

ನಿತ್ಯ ಬಸವಣ್ಣ ನಿರಂಜನ ಬಸವಣ್ಣ. ಸಚ್ಚಿದಾನಂದ ನಿತ್ಯ ಪರಿಪೂರ್ಣ ಬಸವಣ್ಣ. ಅಖಂಡಪಿಂಡ ಬಸವಣ್ಣ. ಅನಂತಕೋಟಿ ಬ್ರಹ್ಮಾಂಡಗಳಿಗೆ ಆಧಾರರೂಪ

---

೧. ಶೂ. ಸಂ. ಪು. ೧೦೯. ವ. ೭೯.   ೨. ಶೂ. ಸಂ. ಪು. ೧೧೦. ಪ್ರ. ೮೨.

ಬಸವಣ್ಣ. ಸಚರಾಚರಂಗಳೆಲ್ಲವ ರಕ್ಷಿಸುವ ಸದ್ಧರ್ಮರೂಪು ಬಸವಣ್ಣ. ಶಿವಾಚಾರಚಕ್ರವರ್ತಿ ಬಸವಣ್ಣ. ಸರ್ವಾಚಾರಸಂಪನ್ನ ಬಸವಣ್ಣ. ಷಡುಸ್ಥಲ ಬ್ರಹ್ಮರೂಪ ಬಸವಣ್ಣ. ಸರ್ವಾಂಗಲಿಂಗಮೂರ್ತಿ ಬಸವಣ್ಣ. ಸ್ವಾನುಭಾವ ಸಾರೋದ್ಧಾರ ಬಸವಣ್ಣ. ಜಂಗಮಪ್ರಾಣಿ ಲಿಂಗೈಕ್ಯ ಬಸವಣ್ಣ. ಆರೂಢ ದಾಸೋಹಿ ಬಸವಣ್ಣ. ನಿಸ್ಸಂಗ ನಿಜರೂಪ ಬಸವಣ್ಣ. ಶಿವಸಮಯ ಪ್ರತಿಷ್ಠಾಚಾರ್ಯ ಬಸವಣ್ಣ......[೧]

ಇದು ಬಸವಣ್ಣನ ಮಹಾತ್ಮೆ. ಇದು ಬಸವಣ್ಣನ ಭಕ್ತಿಯ ಮಹಾಂತ ನಿಲವು. ಈ ನಿಲವನ್ನು ಮನಮೇರೆದಪ್ಪಿ ಹಾಡುತ್ತಾರೆ, ಕೊಂಡಾಡಿ ಕೊನರೇರಿ ಹಬ್ಬಿ ಹರವಾಗುತ್ತಾರೆ ಪ್ರಭುದೇವರು. ಬಸವಣ್ಣನ ಭಕ್ತಿಯನ್ನು ಹಾಡಿ ತಣಿಯದೆ ಬಸವಣ್ಣನಿಗೆ ಮಣಿದು ತಣಿಯಬಯಸುತ್ತಾನೆ ಜಂಗಮದೇವ. '...ಗೊಹೇಶ್ವರಲಿಂಗದಲ್ಲಿ ಪೂರ್ವಾಚಾರಿ ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.'[೨] '...ನಾನು ನಿರ್ವಾಣದಲ್ಲಿ ನಿಂದು ಅಗಮ್ಯನಾದಹೆನೆಂದರೆ, ಭಕ್ತಿಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ. ಗೊಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ಶ್ರೀಪಾದವ ಕಂಡು ಶರಣೆಂದು ಬದುಕಿದೆನು.'[೩] ಸೊಲ್ಲಾಪುರದಿಂದ ಸಿದ್ಧರಾಮಯ್ಯನನ್ನು ಕಲ್ಯಾಣಕ್ಕೆ ಹೊರಡಿಸಿಕೊಂಡು ಬರುವಾಗ ಪ್ರಭುದೇವರು ಹೇಳಿದ '...ನಮ್ಮ ಗೊಹೇಶ್ವರಲಿಂಗದಲ್ಲಿ ಸಂಗನ ಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯಾ,' ಈ ಮಾತು, ಜಂಗಮದ ಈ ಭಕ್ತಿಯ ಹಸಿವು ಭಕ್ತಿಗೆ ಮಣಿದು ತೃಪ್ತಿಯಾಗುವಂತಿದೆ.

ಬಸವಣ್ಣಾ, ಮರ್ತ್ಯಲೋಕದಲ್ಲಿ ಹುಟ್ಟಿ ಮಾನವಕುಲದಲ್ಲಿ ಬೆಳೆಯುತ್ತಿರುವ ನೀನು ಈ ಕುಲಕ್ಕೆ ಹೊರತಾಗಿ, 'ಸ್ವಯೋಲಿಂಗ'ವಾದ ಶರಣಕುಲವನ್ನು ನೆಲದಲ್ಲಿ ಊರಿ ನೆಲೆಗೊಳಿಸುತ್ತಿರುವ ನಿನ್ನ ಸಾಹಸ ದಿವ್ಯಸಾಹಸ! ಲೋಕದ ಸಂಸಾರಸಂಭ್ರಮವೇನು? ನಿನ್ನ ನಿಜದ ನಿಲವನ್ನು ಬಲಿಸಿಕೊಂಡು, '...ತನುವ ದಾಸೋಹಕ್ಕೆ ಸವೆಸಿ ಮನವ ಲಿಂಗಧ್ಯಾನದಲ್ಲಿ ಸವೆಸಿ, ಧನವ ಜಂಗಮದಲ್ಲಿ ಸವೆಸಿ...'[೪] ತನು ಮನ ಧನವನ್ನು ಗೆದ್ದು ನಿತ್ಯನಾಗಿ ನಿರಂಜನನಾಗಿ ಸಚ್ಚಿದಾನಂದಪರಿಪೂರ್ಣನಾಗಿ ಸರ್ವಾಚಾರಸಂಪನ್ನನಾಗಿ ಶಿವಾಚಾರಚಕ್ರವರ್ತಿಯಾಗಿ ಜಂಗಮಲಿಂಗಪ್ರಾಣಿಯಾಗಿ ಲಿಂಗಗಂಭೀರವನ್ನು ಬದುಕುತ್ತಿರುವ ನಿನ್ನ ಸರ್ವಾಂಗಲಿಂಗ ಸಾಮರ್ಥ್ಯವೇನು? ಹೊನ್ನು ಒಂದು ಬೆಟ್ಟ, ಹೆಣ್ಣು ಮಣ್ಣು ಮತ್ತೆರಡು ಬೆಟ್ಟ. ಮಾನವಕುಲದ ಕೋಟಿ ಮನ ಈ ಮೂರು ಬೆಟ್ಟಕ್ಕೆ ಹಬ್ಬಿ, ಹೊನ್ನಿಗೆ ಸತ್ತು ಹೆಣ್ಣು ಮಣ್ಣಿಗೆ ಸತ್ತು ಹುಟ್ಟಿ, ಹುಟ್ಟಿ ಸತ್ತು ಭ್ರಮೆಗೊಂಡು ತೊಳಲಿ ಬಳಲುತ್ತಿದೆ. ಆದರೆ ನಿನ್ನಂತೆ ಬೆಟ್ಟಕ್ಕೆ ಮನವನ್ನು ಹಬ್ಬಲೀಯದೆ ನಿಜದಿರವಿಗೆ ಹಬ್ಬಿಸಿ, ಗುರುಲಿಂಗಜಂಗಮಕ್ಕೆ ಹೊನ್ನು ಹೆಣ್ಣು ಮಣ್ಣನ್ನು ಸಮರ್ಪಿಸಿ 'ಸ್ವಯ

---

೧. ಶೂ. ಸಂ. ಪು. ೧೧೦, ಪ್ರ. ೮೨.
೨. ಅದೇ „ ೧೧೦, ವ. ೮೨.
೩. ಶೂ. ಸಂ. ಪು. ೧೧೧, ವ. ೮೬.
೪. ಅದೇ „ ೧೧೧, ವ. ೮೫.

ಲಿಂಗವಪ್ಪವರಿನ್ನಾರು ಹೇಳಾ?'[೧] ತನ್ನ ಸದ್‌ಭಕ್ತಿ ಸುಜ್ಞಾನ ಶಿವಾಚಾರದಿಂದ ಲಿಂಗವನ್ನು ಸರ್ವಾಂಗದಲ್ಲಿ ನಾಟಿಸಿಕೊಂಡು ತಾನೆ ಪೂಜೆಗೊಂಬ ಲಿಂಗ ತಾನೆ ಪೂಜಿಸುವ ಶರಣ ತನಗೆ ತಾನೆ ಅರ್ಪಣವಾಗಿ ತನಗೆ ತಾನೆ ಪ್ರಸಾದವಾಗಿ, ಸರ್ವಮುಖವಾದ ಭೋಗ ಲಿಂಗಭೋಗವಾಗಿ ಭೋಗಿಸುವ ಸಮರ್ಥರಾರು ಬಸವಣ್ಣಾ? ದಿವ್ಯವನ್ನು ಭಕ್ತಿಯಿಂದ ನಡುಗಿಸಿ ನಿನ್ನಲ್ಲಿಗೆ ತಾನೆ ನಡೆದುಕೊಂಡು ಬರುವಂತೆ ಮಾಡಿದ ಮಹಿಮರಾರು ಬಸವಣ್ಣಾ? ನಿನ್ನ ಶ್ರೀಪಾದಕ್ಕೆ ನಮೋ ನಮೋ. ಭಕ್ತಿಯಿಂದ ದಿವ್ಯ ಬದುಕಿತು ಅಣ್ಣಾ !

ಜಂಗಮಲಿಂಗದ ಪ್ರಸನ್ನಭಾವ ಸ್ತೋತ್ರವಾಗಿ ಹರಿದರೆ, ಬಸವಣ್ಣನ ಭಕ್ತಿಭಾವ ಆನಂದವಾಗಿ ಇದಿರುಗೊಂಡು ಹರಿಯುತ್ತದೆ: 'ಗುರುಚರಣವೆ ಗತಿ ಗುರುಚರಣವೆ ಮತಿ, ಗುರುಶಬ್ದ ಪರುಷಪಾವನವೆನಗೆ...'[೨] ತನಗೆ ಶಬ್ದಪ್ರಸಾದವನ್ನು ಅನುಭಾವವನ್ನು ನೀಡುತ್ತ ತನ್ನ ಬೆಂಬತ್ತಿ ತನ್ನ ಮಠಕ್ಕೆ ದಯಮಾಡಿಸುತ್ತಿರುವ ಮೂರ್ತಿ, 'ಆಕಾರ ನಿರಾಕಾರ ಸಾಕಾರ ಸನುಮತ'[೩]ನಾಗಿ, ಏಕಾಂತದ ಗೋಪ್ಯದಲ್ಲಿ ತನ್ನ ನಿಜಸ್ವರೂಪ ತಾನಾಗಿ, 'ಅಣು ರೇಣು ಸ್ಥೂಲ ಸೂಕ್ಷ್ಮ'[೪]ದಲ್ಲಿ ಭರಿತನಾಗಿ ನಿಂದಿರುವ ನಿರಾಳಮೂರ್ತಿ ಎಂತಿದೆ ! ತನ್ನ ಭಾಗ್ಯಕ್ಕೆ ಮೇರೆ ಎಲ್ಲಿದೆ?:

ಕಾಲಿಲ್ಲದೆ ನಡೆವನು; ಕೈಯಿಲ್ಲದೆ ಹಿಡಿವನು;
ಕಣ್ಣಿಲ್ಲದೆ ನೋಡುವನು ಸಹಜವಾಗಿ.
ಮೈಯಿಲ್ಲದ ಬಣ್ಣ, ಮಥನವಿಲ್ಲದ ಕೂಟ !
ಅಲ್ಲಿ ಸೈವೆಱಗಾಗಿ ಶಿಲೆಯಮೇಲೆ
ಒಡಲು ತನ್ನನಱಿಯದು, ಒಡಲ ತಾನಱಿಯನು.
ಬಿಡದೆ ಎನ್ನ ಬೆಂಬತ್ತಿ ಬಂದ ಪರಿಯ ನೋಡಾ !
ಜಡವಿಡಿದ ಎನ್ನ ಕಾಯದ ಕಳವಳವ ತಿಳುಹಲೆಂದು
ಅಡಿಗಡಿಗೆ ಅನುಭಾವವ ತೋಱುತ್ತಲಿದ್ದಾನೆ !
ಕುಳ್ಳಿತ್ತೆಡೆಯಲ್ಲಿ ಕುಂಟ, ನಿಂದಿದ್ದೆಡೆಯಲ್ಲಿ ಹೆಳವ.
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು.
ಮೆಲ್ಲಮೆಲ್ಲನೆ ಒಳಗನೊರೆದು ತೋಱುತ್ತೈದಾನೆ !
ಬಲ್ಲವರೆಲ್ಲಾ ಬದುಕಿ ಎಂದು ಝಲ್ಲರಿಯಮೇಲೊಂದು ಬೆಳುಗೊಡೆಯ ಹಿಡಿದು,
ಬಲ್ಲಿದನಾನೆಯ ತಡೆದು ನಿಲಿಸಬಲ್ಲನು.
ಕೂಡಲಸಂಗಮದೇವರ ಮಹಾಮನೆಯಲ್ಲಿ
ಪ್ರಭುದೇವರ ಮಱೆಯ ಹೊಕ್ಕು ಬದುಕಿದೆನು ![೫]

೧. ಶೂ. ಸಂ. ಪ್ರ. ೧೧೧, ವ. ೮೪.
೨. ಅದೇ .. ೧೧೨. ಸ್ತೋ. ಪಲ್ಲವಿ.
೩. ಅದೇ .. ೧೧೨. ಸ್ತೋ. ೩.
೪. ಶೂ. ಸಂ. ಪ್ರ. ೧೧೩, ಸ್ತೋ. ೨.
೫. ಅದೇ .. ೧೧೧-೧೧೨. ವ. ೮೭.

ಭಕ್ತಿಯಿಂದ ಬದುಕಿದ ಆನಂದ ಬಸವಣ್ಣನಿಗೆ. ಭಕ್ತಿಯು ಬೆಂಬತ್ತಿ ನಡೆವ ಆನಂದ ಪ್ರಭುದೇವರಿಗೆ. ಈ ದೇವರನ್ನು 'ಕೂಡಲಸಂಗಮದೇವರ ಮಹಾಮನೆಯು' ಒಳಗಡೆಗೆ ಬರಮಾಡಿಕೊಳ್ಳುವ ಬಸವಣ್ಣನ ಭಕ್ತಿಸಂಭ್ರಮದ ವೈಭವವನ್ನು ಚಾಮರಸ ಹಾಡುತ್ತಾನೆ ಕೈಮುಗಿದು ಕೇಳಿ:

ನಿಂದು ನಿಲ್ಲದ ನೆಲಕೆ ನೆಟ್ಟನೆ ।
ಹೊಂದಿ ಹೊಂದದ ರೂಪು ರೇಖೆಗೆ ।
ಬಂದು ಬಾರದ ಸಚ್ಚಿದಾನಂದೈಕರಸಮಯನ ॥
ವಂದಿಸುತ ನಾನಾಪ್ರಕಾರಗ ।
ಳಿಂದಲೊಳಕಡೆಗಾಗಿ ತನ್ನಯ ।
ಮಂದಿರಕೆ ನಡೆಗೊಳಿಸಿದನು ಬಸವಣ್ಣ ಭಕ್ತಿಯಲಿ ॥[೧]

೧. ಪ್ರ. ಲೀ. ಪ್ರ. ೧೮೨, ಗ. ೧೫, ಪ. ೨.

೧೪

ಪ್ರಸನ್ನ ಪ್ರಸಾದ

ಶಿಲೆಯ ಮಱೆಯಲಿ ಹೊನ್ನು ನೆಟ್ಟನೆ ।
ತಿಲದ ಮಱೆಯಲಿ ತೈಲ ಭಾವಿಸೆ ।
ನೆಲದ ಮಱೆಯ ನಿಧಾನವಿಹವೊಲು ಮರುಳ ವೇಷದಲಿ ॥
ಬಳಿಯಲಿರೆ ಸಾಕಾರ ಶಂಕರ ।
ನೆಲಸಿ ತನ್ನಂಗಣದಲಾತನ ।
ಹೊಲಬನಱಿಯನು ಬಸವನೆನುತಲ್ಲಮನು ಬೆಱಗಾದ ॥[1]

—ಚಾಮರಸ.

ಬೀದಿಯಲ್ಲಿ ಬಿದ್ದ ಮಾಣಿಕ್ಯವ,
ಹೂಳಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ.
ಮರಣವುಳ್ಳವರಿಗೆ ಮರುಜವಣಿ ಸಿಕ್ಕುವುದೆ?
ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ ಇಪ್ಪರಯ್ಯಾ ಶಿವಶರಣರು.
ನಮ್ಮ ಗೊಹೇಶ್ವರನ ಶರಣ
ಮರುಳುಶಂಕರದೇವರ ನಿಲವ ನೋಡಾ ಸಂಗನ ಬಸವಣ್ಣಾ ![2]

—ಅಲ್ಲಮ ಪ್ರಭುದೇವರು.

ಬಸವಣ್ಣ ಚೆನ್ನಬಸವಣ್ಣ ಹಡಪದಪ್ಪಣ್ಣ ಮಡಿವಾಳ ಮಾಚಯ್ಯ ಕಿನ್ನರಿ ಬ್ರಹ್ಮಯ್ಯ ಮುಂತಾದ ಶರಣತಿಂಥಿಣಿ, ಪ್ರಭುದೇವರು ಸಿದ್ಧರಾಮಯ್ಯನನ್ನು ಶಿವಮಂಗಲದ ಮಹಾ ವೈಭವದಿಂದ ಇದಿರುಗೊಂಡು ಬಸವಣ್ಣನ ಅರಮನೆಯ ಒಳಗಡೆಗೆ ಬಿಜಯಂಗೈಸಿ ಕೊಂಡು ಬರುತ್ತಿದ್ದಾರೆ. ಈ ಮೊದಲು ನಾವು ನೋಡಿದಂತೆ '...ದೇವಾಂಗ ಮೌಕ್ತಿಕದ ಸೆಱಗಿನ ಸೀರೆಯಂ ನಡೆಮಡಿಯಂ ಹಾಸಿ...' ಮಂಗಲವಾದ್ಯದ ರಭಸದಲ್ಲಿ, ಕಳಸ ಕನ್ನಡಿ ಧೂಪಾರತಿ ದೀಪಾರತಿಯ ಸಂಭ್ರಮಭಕ್ತಿಯ ಮೇಲೆ ನಡೆಸಿಕೊಂಡು ಬರು ತ್ತಿದ್ದಾರೆ. ಎಲ್ಲಿ ನೋಡಿದಲ್ಲಿ ಉತ್ಸವ, ಎಲ್ಲಿ ಕೇಳಿದಲ್ಲಿ ಮಂಗಲ, ಎಲ್ಲಿ ಮುಟ್ಟಿದಲ್ಲಿ ಚಿಮ್ಮಿ ಹೊರಹೊಮ್ಮುವ ಆನಂದ. ಜಂಗಮ ಒಲಿದು ಮನೆಗೆ ಬಂದರೆ ಬಸವಣ್ಣನ ಆನಂದ ಬಸವಣ್ಣನನ್ನೆ ಮೀರಿ ಹಾಡುತ್ತಿದೆ ಹರಸುತ್ತಿದೆ. ಇದೋ ಇಲ್ಲಿ ಈ ಕಡೆ ಸಿದ್ಧವೀರಣ್ಣನ ಬೆನ್ನ ಹಿಂದೆಯೆ ಬನ್ನಿ, ಅಂದರೆ ಎಲ್ಲ ವೈಭವ ಎಲ್ಲ ಸಂಭ್ರಮ ಶತಕಗಳ ಕಾಲವನ್ನು ಭೇದಿಸಿ ಕಣ್ಣಮುಂದೆ ಕಟ್ಟಿಕೊಂಡು ನಿಲ್ಲುತ್ತ ಮುಂದೆ ಮುಂದೆ ನಡೆಯು

---

೧. ಪ್ರ. ಲೀ. ಪು. ೧೮೩, ಗ. ೧೫, ವ. ೬.

೨. ಶೂ. ಸಂ. ಪು. ೧೧೭, ವ. ೭.

ಪ್ರಭುಲಿಂಗಲೀಲೆಯ ೧೫ನೆಯ ಗತಿಯ ಪ್ರಾರಂಭದಲ್ಲಿಯೂ ಈ ವಚನ ಬಂದಿದೆ. (ಪು. ೧೮೧, ವ. ೧.)

ತ್ತದೆ. ಸಿದ್ಧವೀರಣ್ಣನ ಕಣ್ಣು ಹೀಗೆ ನುಡಿಯುತ್ತಿದೆ–'ಪ್ರಭುದೇವರು ಬಸವರಾಜ ದೇವರು ಮಾಡುವ ಸ್ತೋತ್ರಕ್ಕಂ ಮೆಚ್ಚಿ ಮುಂದಕ್ಕಂ ಗಮಿಸುತ್ತಿರಲು, ಅಲ್ಲಿ ಪ್ರಮಥರ ತಿಂಥಿಣಿಯಿಂ ಅನುಭಾವ ಸದ್‌ಗೋಷ್ಠಿಯಿಂ ಉಘೇ ಚಾಂಗುಬಲಾ ಎಂಬ ಶಬ್ದಸಡ ಗರದಿಂ ಬಸವರಾಜದೇವರ ರಾಜಭವನಕ್ಕಂ ಅತ್ಯಂತಸಂಭ್ರಮದಿಂ ಪೋಪ ಪ್ರಸ್ತಾವ ದೊಳು...'[೧] ಹೀಗೆ ಮೆರೆವಣಿಗೆ ಮುಂದಮುಂದಕ್ಕೆ ನಡೆದಿದೆ. ಅರಮನೆಯ ಅಂಗಳ ದಲ್ಲಿರುವ 'ಪ್ರಸಾದದ ಕುಂಡ'ದ ಸಮೀಪಕ್ಕೆ ಬಂದಿದೆ. ಆಗ ಒಂದು 'ಆಶ್ಚರ್ಯ' ಪ್ರಭುದೇವರ ಕಣ್ಣಿಗೆ ಹೊಳೆದು ತೋರುತ್ತದೆ, 'ಅಂಜನವುಳ್ಳವಂಗೆ ಕಡವರದಿರವು ತೋಱಿದಂತೆ'.[೨] ಆ ಕುಂಡದಿಂದ ಒಂದು 'ಮರುಳು ಶಂಕರ' ಮೇಲಕ್ಕೆದ್ದು ಹೊರಗೆ ಬರುತ್ತಿದೆ, ಅಲ್ಲಮಪ್ರಭುದೇವರು ಮತ್ತು ಶರಣರ ಬರವನ್ನು ಕಂಡು. ಈ ಮರುಳಿನ ಕಡೆಗೆ ಮೆರೆವಣಿಗೆಯ ಲಕ್ಷ್ಯವೆ ಇಲ್ಲ. ಈ ಮರುಳು ವೇಷದ ಮರೆಯಲ್ಲಿರುವ 'ಸಾಕಾರ ಶಂಕರ' ಯಾರ ಗಮನಕ್ಕೂ ಬಂದಿಲ್ಲ. ಬಸವಣ್ಣನರಮನೆಯ ಅಂಗಳದ ಪ್ರಸಾದ ಕುಂಡದಿಂದ ಮರುಳುಶಂಕರನೆಂಬ ಶರಣ ಹೊರಗೆ ಬರುವುದನ್ನು ಸಿದ್ಧವೀರಣ್ಣ ಕಾವ್ಯ ಮಾಡಿ ಹೇಳುವ ಕುಶಲವನ್ನು ನೋಡಿ:

> ವಸಂತಮಾರುತಂ ಬರಲು ಚೂತದಿಂದಂಕುರಂ ಪೊಱಮಡುವಂತೆ, ಶಾಂತಿಯ (ಸ್ವಾತಿಯ?) ವರ್ಷದ ದಿನಕ್ಕೆ ಅಂಬುಧ್ಧಿಯೊಳಗಿರ್ದ ಮೌಕ್ತಿಕ ಶಂಬುಕ ಅಂಬುಧಿ ಯೊಳಿರ್ದು ಕಾಣಬಪ್ಪಂತೆ, ನಲಿದು ಸೂಜಿಕಲ್ಲ ಕಾಣುತ್ತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ ಶಿವಯೋಗಾನಂದದಲ್ಲಿ ತನುವ ಮಱೆದಿರ್ದ ಶಿವಯೋಗಿ ತನಗೆ ಶಿವಪ್ರಸನ್ನಮಾಗಲು ಮುಂದೆ ಶಿವನ ಶ್ರೀಚರಣ ಕಮಲಮಂ ಕಂಗ ಳಿಂದೊತ್ತಿಕೊಂಬೆನೆಂಬ ತೆಱನಂತೆ, ಪೌರ್ಣಮಿಯ ಚಂದ್ರನುದಯಕ್ಕೆ ಸಿಂಧು ಮೆಲ್ಲನೆ ಮುಂದಕ್ಕುಬ್ಬಿ ನಡೆದುಬಪ್ಪಂತೆ ಮರುಳುಶಂಕರದೇವರು ಪ್ರಸಾದ ಕುಂಡದಿಂ ಪೊಱಮಡುತ್ತಿರ್ದ ಪ್ರಸ್ತಾವದೊಳು...[೩]

---

೧. ಶೂ. ಸಂ. ಪು. ೧೧೪, ಪ್ರ. ೧.

೨. ಅದೇ „ ೧೧೪-೧೧೫, ಪ್ರ. ೧.

೩. ಅದೇ ಪು. ೧೧೪-೧೧೫, ಪ್ರ. ೧.

೧ ಇದೇ ಸನ್ನಿವೇಶವನ್ನು ಹರೀಶ್ವರಕವಿ ತನ್ನ ಪ್ರಭುದೇವರ ಪುರಾಣದಲ್ಲಿ ಹೀಗೆ ಹೇಳುತ್ತಾನೆ:

ಅಲ್ಲಿಂದ ಮುಂಬರಲು ಪರಮಪಾವನ ಮಹಾ ।
ಪಲ್ಲವಚರಂ ಸೇವಿಸಿದ ಪತ್ರಶೇಷಾನ್ನ ।
ಸಲ್ಲಲಿತವಾಗಿ ತುಂಬಿರ್ದ ಪ್ರಸಾದಕುಂಡದಿ ಮರುಳುಶಂಕರೇಶಂ ॥
ಉಲ್ಲಾಸದಿಂದೆ ಪನ್ನೆರಡು ವತ್ಸರ ಸತತ ।
ಗೆಲ್ಲದಿಂದಾರುವರಿಯದ ತೆರದೊಳಿರುತಿರ್ದು ।
ಅಲ್ಲಮಾಪ್ರಭು ಬರಲು ಕಾಣುತಂ ಮಣಿದು ಶಂಕರದೇವನಿಂತೆಂದನು ॥

ಪ್ರ. ೨೫೨, ಸಂ. ೭, ಪ. ೨೬೮.

೨ ಇದೇ ವಿಷಯವನ್ನು ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ ಹೀಗೆ ಹೇಳುತ್ತಾನೆ:

(ಮುಂದಿನ ಪುಟ ನೋಡಿ)

ಆ ಮರುಳು ಶಂಕರನ ನಿಜದ ನಿಲುಕಡೆ ಪ್ರಭುದೇವನಿಗೆ 'ಹೊಂಗಿ' ತೋರಿದೆ. ಆವರಿಗೆ ಪರಮಾಶ್ಚರ್ಯ, ವೇಷದ ಮರೆಯಲ್ಲಿ ನಿರಾಳವಾಗಿ ನಿಂದಿರುವ 'ಶಂಕರ'ನನ್ನು ನೋಡಿ. ತನ್ನ ಮಠಕ್ಕೆ ನಡೆದಿರುವ ಜಂಗಮಲಿಂಗವನ್ನು ಹಾಡುವ ನಿರ್ಭರದಲ್ಲಿ ಮುಳುಗಿರುವ ಬಸವಣ್ಣನನ್ನು ಮೇಲಕ್ಕೆಬ್ಬಿಸುತ್ತಾನೆ ಪ್ರಭುದೇವ. ಎರಡು ದೇಹದಲ್ಲಿ ವ್ಯವಹರಿಸುತ್ತಿರುವ ಎರಡು ಮನ 'ನೀರು ಕ್ಷೀರದಂತೆ' 'ಬೆಳುಗಾರ ಬೆರಸಿ ಬೆಚ್ಚ ಬಂಗಾರದಂತೆ' 'ಉರಿಯುಂಡ ಕರ್ಪುರದ ಪರಿಯಂತೆ' ಒಂದರೊಳಗೊಂದು ಕೂಡಿ ಒಂದಾಗಿ ನಿಂದು, 'ಅಱಿವು ಸಯವಾದ'[೧] ಮೇಲೆ, ಮನ ಮನಗಳ ಗಂಭೀರ ನಿಜ ಒಂದೆ ಅರಿವು ಬೆಳಗು ತಾನಾದ ಬಳಿಕ ಇದಿರಿಟ್ಟು ಕೊಂಡಾಡಲು ಇಂಬು ಎಲ್ಲಿದೆ? ಮತ್ತೆ ಕೊಂಡಾಟವನ್ನು ಕೊಂಡು ಒಯ್ದು ಮುಟ್ಟಿಸುವ ಶಬ್ದಕ್ಕೆ 'ಒಂದ'ರಲ್ಲಿ ತೆರವಿಲ್ಲ...'ಗೊಹೇಶ್ವರಲಿಂಗದಲ್ಲಿ ಬೆರಸಿ ಬೇಱಿಲ್ಲ ಕಾಣಾ ಸಂಗನ ಬಸವಣ್ಣಾ !'[೨] ಆದ್ದರಿಂದ ನೀ ಮಾಡುವ ಸ್ತೋತ್ರ ನಿಲ್ಲಲಿ ಬಸವಣ್ಣಾ. ಇದೋ ಇಲ್ಲಿ ನೋಡು ಬೀದಿಯಲ್ಲಿ ಬಿದ್ದಿರುವ ದಿವ್ಯ ಮಾಣಿಕ್ಯವನ್ನು! ಹುಡಿಯಲ್ಲಿ ಬಿದ್ದು ಹೊಲಸಾಗಿ, ಕಂಡು ಕಾಣದಂತಿರುವ ಈ ಹುಡಿಯ ಮರೆಯ ಬೆಳಗಿನ ಬೆಳಸನ್ನು! ಎಲ್ಲರ ಕಣ್ಣಿಗೆ ಮರುಳೆಂದು ಮಂಜುಗವಿಸಿ, ಒಳಗೆ ತಾನು ನಿಂದಿರುವ ಪರಮಾಶ್ಚರ್ಯದ ನಿಲವನ್ನು ನೋಡು ಬಸವಣ್ಣಾ:

ಓಹೋ, ನಮಃಶಿವಾಯ!
ಮಹದಾಕಾಶದ ಮಱೆಯಲ್ಲಿರ್ದ ಶಾಂತ್ಯರ್ಕನ ನಿಲವೊ?
ದಶಮರುತನ ಹೊಯಿಲಿಲ್ಲದೆ, ತಾನೆ ಲಿಂಗದ ಜ್ಞಾನಜ್ಯೋತಿಯ ನಿಲವೊ?

ಬರುತ ಕಂಡನು ಪರಮ ಪಾವನ ।
ಕರದ ಪಾಪಕ್ಷಯದ ಭವಭೀ ।
ಕರವನಳಿದ ಮಹಾಪ್ರಸಾದದ ಕುಂಡತೀರದಲಿ ॥
ಇರುಳು ಹಗಲೆಡೆವಿಡದೆ ಸೇವಿಪ ।
ಮರುಳುಶಂಕರದೇವರನು ನಿಜ ।
ಕರುಣದಲಿ ಬಸವಣ್ಣನರಮನೆಯೊಳಗೆ ಪ್ರಭುರಾಯ ॥
ಅಲ್ಲಮಪ್ರಭು ಬರುತ (ಬರಲು?) ಕಾಣುತ ।
ಮೆಲ್ಲಮೆಲ್ಲನೆ ಬಂದು ತನುಮನ ।
ವೆಲ್ಲವನು ಕವಿದೊಕ್ಕು ಸಾಷ್ಟಾಂಗಪ್ರಣತನಾಗಿ ॥
ಪಲ್ಲವಿಸಿ ಪರಿಣಮದ ಪಸರಣೆ ।
ಯಲ್ಲಿ ಹಿಗ್ಗುತ ಭಕ್ತಿಭಾವದ ।
ಬುಲ್ಲವಣೆಯಲಿ ಮರುಳುಶಂಕರದೇವನಿಂತೆಂದ ॥ ಗತಿ ೧೫, ಪ. ೩-೪.

'ಶಬ್ದಕ್ಕೆ ತೆಱಹಿಲ್ಲ'ವಾದರೂ, ಶರಣಶರಣರಲ್ಲಿ ನಡೆದ ಸಂಭಾಷಣೆ ಸಂವಾದ ಪ್ರಸಂಗ ಶೂನ್ಯಸಂಪಾದನೆ. ಇದಿರಾಗಿ 'ಇದಿರಿಟ್ಟು' ನುಡಿಯದಿದ್ದರೆ ಶೂನ್ಯಸಂಪಾದನೆ ಹುಟ್ಟುತ್ತಿರಲಿಲ್ಲ. ಮೇಲೆಯೆ ತೋರುವ ಈ ವಿರೋಧಕ್ಕೆ ಸಮಾಧಾನವೆಂದರೆ, ವಚನಗಳು 'ಶಿವಾದ್ವೈತ ವಚನಗಳು' (ಶೂ. ಸಂ. ಪು. ೪, ಕಂ. ೧ಗ.) ಎಂಬ ಸಂಗತಿ. ಶಿವಾದ್ವೈತಭಕ್ತಿ ಹೇಗೆ ದೇವರನ್ನು ತನಗೆ ಇದಿರಿಟ್ಟುಕೊಂಡು ಭಕ್ತಿಯನ್ನು ಮಾಡುವದಿಲ್ಲವೋ ಹಾಗೆ ಶಿವಾದ್ವೈತ ವಚನ.

೧. ಶೂ. ಸಂ. ಪು. ೧೧೫, ವ. ೨.   ೨. ಶೂ. ಸಂ. ಪು. ೧೧೫, ವ. ೧.

ತನ್ನಿಂದ ತಾನಾಗಿ ಮುಕ್ತಿಯ ಕಳೆಗೊಂಡ ಮುಕ್ತಿಯ
ಮುತ್ತಿನ ಧವಳದ ಕಾಂತಿಯ ನಿಲವೊ?
ರುದ್ರಾಕ್ಷಿಯ ಹಂಗು ಬೇಡವೆಂದು,
ಪೊಸ್ತ ಚರ್ಮದ ಪೊದಕೆಯಂ ತೆಗೆದ ಗಿಟಿಗಿಟಿಜಂತ್ರದ ನಿಲವೊ?
ಅಲ್ಲಾ. ತನ್ನ ನಿಲವನರಿಯದೆ ವಾದಿಸುತ್ತಿರಲು,
ಉರಿಲಿಂಗೋದ್ಭವವಾದ ಉರಿಲಿಂಗದ ನಿಲವೊ?
ಆವ ನಿಲವೆಂದರಿಯಬಾರದು.
ಗೊಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋರಿತ್ತು ಕಾಣಾ ಸಂಗನಬಸವಣ್ಣಾ ![೧]

ಮರುಳುಶಂಕರ ಮರುಳಲ್ಲ. ಶಂಕರ, ಶಿವ. ಓಹೋ ! ಈ ಶಿವನಿಗೆ ಈ ಶಿವಕ್ಕೆ ನಮೋ ನಮಃ. ಬಸವಣ್ಣಾ, ಕಣ್ಣು ಮುಚ್ಚಿ ಒಳಗೆ ನೋಡು. ಮರುಳಿನ ಮರೆಯಲ್ಲಿ ತೆರೆಗಳೆದ ಈ ಶರಣನ ನಿಜಗಂಭೀರವನ್ನು ನೋಡು. ಭೂತ ಆಕಾಶಕ್ಕೆ ಎಡೆಗೊಟ್ಟು ಕಣ್ಣಿಗೆ ತೋರುವ ಬಯಲಿಗೆ ಆಸರ ತಾನಾಗಿ, ಅದರ ಹೃದಯವಾಗಿರುವ ಮಹದಾಕಾಶ. ಕಣ್ಣಿನ ಹಂಗಿಲ್ಲದೆ. ಆಕಾಶದ ಹಂಗಿಲ್ಲದೆ ತನ್ನ ತಾನೆ ಅನುಭವಗೋಚರವಾದ ಮಹದಾಕಾಶ. ಅದೇ ಪರಾತ್ಪರವಾದ ಹೃದಾಕಾಶ, ಪರಮಾಕಾಶ. ಇಲ್ಲಿ ಥಳಥಳಿಸುವ ಶಾಂತಿ ಸೂರ್ಯ. 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂದು 'ಕವಿ'ಗಳಿಂದ. 'ಯಃ ಪಶ್ಯತಿ ಸ ಪಶ್ಯತಿ'ಗಳಿಂದ ಹಾಡಿಸಿಕೊಂಡ, ಸರ್ವಶಾಂತವಾದ, ವಿಶ್ವಶಾಂತವಾದ 'ಸದಾ ಭಾಸತಿ ಭಾಸತಿ'ಯಾದ ಚಿದಾದಿತ್ಯ. ಈ ಆದಿತ್ಯನ ಬೆಳಗು ಬಿಸಿಯಾಗಿರುವ ಬಿಸಿಲಲ್ಲ, ಬೆಳುದಿಂಗಳಲ್ಲ. ಉದಯ ಅಸ್ತಮಾನವಿಲ್ಲದೆ ಬೆಳಗುವ ಬೆಳಗು ಈ ಮರುಳನ ಒಳದಿರುಳು. ಅಷ್ಟೇ ಅಲ್ಲ. ವಿಶ್ವಬ್ರಹ್ಮಾಂಡಗಳ ಉದಯ, ಅವರ ಅಸ್ತಮಾನಗಳ ಹಂಗೂ ಇಲ್ಲದೆ ನಿತ್ಯವಾಗಿ ಅಖಂಡವಾಗಿ ಪರಿಪೂರ್ಣವಾಗಿ ಬೆಳಗುವ ಶರಣಾದಿತ್ಯ ಈ ಮರುಳು ಶಂಕರ. ಬಸವಣ್ಣಾ, ಬೇಕಾದರೆ ಈ ಶಂಕರನ ನಿಜದ ನಿಲವನ್ನು ಲಿಂಗದ ಜ್ಞಾನ ಜ್ಯೋತಿಯೆಂದು ಕರೆ. ಈ ಜ್ಯೋತಿ ಗಾಳಿಯ ಹೊಡೆತಕ್ಕೆ ಸಿಕ್ಕುದಲ್ಲ. ಪ್ರಾಣ ಮೊದಲು ಧನಂಜಯ ಕಡೆಯಾದ ದಶವಿಧವಾದ ಮಾರುತನ ಹೊಯ್ಲು ಈ ಬೆಳಗನ್ನು ಹೊಡೆದು ಎಂದೂ ನಂದಿಸಲಾರದು. ಗಾಳಿಯನ್ನು ಬೀಸಹಚ್ಚಿದ ಈ ಲಿಂಗಜ್ಯೋತಿ ಗಾಳಿಗೆ ಹೇಗೆ ಸಿಲುಕೀತು? ಅದು ಕೊಟ್ಟ ಚೈತನ್ಯದಿಂದಲೆ ಹರಿದಾಡುವ ಗಾಳಿ ಅದನ್ನ ಹೇಗೆ ಜೀತನಿಸಿ ಪೊಯ್ದೀತು? ಮತ್ತೆ ಬಸವಣ್ಣಾ, ಸರ್ವಪ್ರಪಂಚ, ಸಕಲ ಸಂಸಾರದಿಂದ ವಿನಿರ್ಮುಕ್ತವಾದ ಈ ಶಂಕರನ ನಿಲವು ಮುಕ್ತಾಫಲದ ಧವಳಕಾಂತಿಯಂತೆ ಅಥವಾ ಉಟ್ಟು ತೊಟ್ಟುದನ್ನು ಕಳೆದಿಟ್ಟು ಹೊದಿಕೆಯ ತೊಗಲನ್ನು ಬಿಚ್ಚಿ ತೆಗೆದಿಟ್ಟು 'ಎಲುವಿನ ಹಂದರ'ದ ಗಡಗಡಿಯ ಜಂತ್ರದಂತೆ ದೇಹ ಪ್ರಾಣ ಮನ ಬುದ್ಧಿಗಳನ್ನೆಲ್ಲ ಕಳೆದಿಟ್ಟ ಈ ನಿಲವು. ಅಥವಾ ಉಪಮಿಸಿ ಹೇಳಬೇಕೆಂದರೆ, ಬ್ರಹ್ಮವಿಷ್ಣುಗಳು 'ತನ್ನ ನಿಲವನರಿಯದೆ.' ನಾ ಹೆಚ್ಚು ತಾ ಹೆಚ್ಚೆಂದು ವಾದಿಸಲು ಅವರ ನಡುವೆ 'ಸ್ವಯಂಭು'ವಾಗಿ

೧. ಶೂ. ಸಂ. ಪ್ರ. ೧೧೬, ವ. ೪.

ಉದ್ಭವಿಸಿದ ಉರಿಯ ಲಿಂಗದ ನಿಲವೇ ಮರುಳುಶಂಕರಲಿಂಗದ ನಿಲವು ಸಂಗನಬಸವಣ್ಣಾ.'

'ಮರುಳುಶಂಕರದೇವರು ಗಣಪ್ರಸಾದದ ಕುಳಿಯೊಳಗೆ ಒಕ್ಕ ಮಿಕ್ಕ ಪ್ರಸಾದಮಂ ಸ್ವೀಕರಿಸಿ, ಹನ್ನೆರಡು ವರುಷ ಪರಿಯಂತರ ತಮ್ಮ ನಿಜಸ್ವರೂಪಮಂ ಮಱಿಸಿಕೊಂಡಿರುತ್ತಿರಲು, ಆ ಭೇದವಾರಿಗೂ...'[1] ಕಾಣದೆ ಹೋಯ್ತುಲ್ಲಾ ಎಂದು ಪ್ರಭುದೇವರ ವಿಸ್ಮಯ. ಬಸವಣ್ಣನಿಗೆ '...ನಾವು ಬಹುದಕ್ಕೆ ಮುನ್ನವೆ ಬಂದಹರೆಂದು ಶುಭಸೂಚನೆ ತೋಱಿತ್ತಲ್ಲದೆ...'[2] ಮನೆಯಂಗಳದಲ್ಲಿಯೆ ಹನ್ನೆರಡು ವರ್ಷ 'ನಮ್ಮ ಗೊಹೇಶ್ವರ ಲಿಂಗದಲ್ಲಿ ನಿಜಪ್ರಸಾದಿಯಾಗಿಪ್ಪ'[3] ಮರುಳುಶಂಕರದೇವರ ಮರ್ಮ ಯಾರಿಗೂ ತಿಳಿಯದೆ ಹೊಳೆಯದೆ ಹೋಯ್ತುಲ್ಲಾ ! ದೂರದ ಸೂಚನೆ ತೋರಿತು, ಅಂಗಳದ ಮಹಾಂತ ನಿಲವು ಕಾಣಲಿಲ್ಲ:

ಅಂಗಳ ಬಾಗಿಲಲ್ಲಿ ನೆಲೆಯಲ್ಲಿ ನಿಂದಿದ್ದ ಲಿಂಗವನಱಿದುದಿಲ್ಲವೆ?
ಸುಸಂಗಿ ನಿರಂಗ ನಿಃಕಲಬ್ರಹ್ಮ ಮರುಳುಶಂಕರಲಿಂಗದ,
ಪ್ರಸಾದದ ಕುಳಿಯಲ್ಲಿ ನಿಜನಿವಾಸದಂಗವ ನೋಡು
ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣಾ ![4]

ಬಸವಣ್ಣನ ಅಂಗಳದಲ್ಲಿ ಶರಣರ ಮಿಕ್ಕ ಪ್ರಸಾದವನ್ನು ಹಾಕುತ್ತಿದ್ದ ಕುಂಡ, ಕುಳಿ ಅಥವಾ ಹೊಂಡದ ಬಳಿಯಲ್ಲಿಯೆ, ಅದರ ತೀರದಲ್ಲಿಯೆ ಹನ್ನೆರಡು ವರ್ಷಗಳ ದೀರ್ಘಕಾಲ ವಾಸ್ತವ್ಯಮಾಡಿಕೊಂಡು, ಕುಂಡದಲ್ಲಿದ್ದ ಒಕ್ಕಮಿಕ್ಕ ಪ್ರಸಾದವನ್ನು ಸೇವಿಸಿಕೊಂಡಿದ್ದ ಮರುಳುಶಂಕರನನ್ನು ಬಸವಣ್ಣ ಚೆನ್ನಬಸವಣ್ಣ ಮುಂತಾದ ಅಸಂಖ್ಯಾತರು ನೂರಾರಲ್ಲ ಸಾವಿರಾರು ಸಾರೆ ನೋಡಿರಬಹುದು. ಆದರೆ ಬಹುಶಃ ನೋಡಿದಾಗಳೆಲ್ಲ ಇದೊಂದು 'ಮರುಳು' ಎಂದು ನೋಡಿದರು ಶರಣರೆಲ್ಲ. ಮರುಳಂತೆ ತೋರಿ ಶಂಕರಲಿಂಗ ತಾನಾಗಿ ಇದ್ದ ಆತನ ಇರವು, ನಿಜದಲ್ಲಿ ನಿವಾಸವಾಗಿ ಇದ್ದ ಆತನ ಗೊಹೇಶ್ವರಲಿಂಗದ ನಿಲಯ, ನಿಲವು ಯಾರಿಗೂ ಕಾಣಲಿಲ್ಲ. ಮೇಲೆ ನೋಡಿದರೆ ಒಳಗು ಹೇಗೆ ಕಾಣಬೇಕು? ಸಂಗನಬಸವಣ್ಣಾ, ಲೋಕ ಲೌಕಿಕದ ದೃಷ್ಟಿಯಲ್ಲಿ ನೋಡಿದರೆ ಲೋಕ ಲೌಕಿಕ ಕಾಣುತ್ತದೆ. ಅದನ್ನು ಭೇದಿಸಿ ಗೊಹೇಶ್ವರಲಿಂಗದಲ್ಲಿ ನೋಡಿದರೆ ಈ ಮರುಳುಶಂಕರ ನಿಜದ ನಿಲಯದಲ್ಲಿ ಬೇರಿಳಿದುಕೊಂಡು ನೆಲೆಯಾಗಿ ನೆಲಸಿರುವ ಅಂಗ, ಭೇದ ಕಾಣಬಂದೀತು. ಬಸವಣ್ಣಾ, ಈ ಮರುಳು ಚೋಹ ನಿಜಲಿಂಗದಲ್ಲಿ ಬೇರುವರಿದು, 'ನಿಜಪ್ರಸಾದಿ'ಯಾಗಿ ಲಿಂಗಪ್ರಸನ್ನ ನಿಲವನ್ನು ನಿಂದಿರುವ ಪ್ರಸಾದರಹಸ್ಯವಿಲ್ಲಿದೆ ನೋಡು:

ಆದಿಯನಂಗಮುಖಕ್ಕರ್ಪಿಸಿ, ಅನಾದಿಯ ಪ್ರಾಣಮುಖಕ್ಕರ್ಪಿಸಿ,
ಮನವೆಂಬುದ ಅಱಿವಿನ ಮುಖಕ್ಕರ್ಪಿಸಿ,
ತಾನೆಂಬುದ ನಿರಾಕಾರದಲ್ಲಿ ನಿಲಿಸಿ,
ಪರಿಣಾಮಪ್ರಸಾದದಲ್ಲಿ ತದ್ಗತನಾಗಿ,

---

೧. ಶೂ. ಸಂ. ಪು. ೧೧೬, ಪ್ರ. ೭.
೨. ಅದೇ ,, ವ. ೬.
೩. ಶೂ. ಸಂ. ಪು. ೧೧೭, ವ. ೯.
೪. ಅದೇ ,, ವ. ೮.

ಪ್ರಸಾದವೆ ಪ್ರಾಣವಾಗಿ, ಪ್ರಸಾದವೆ ಕಾಯವಾಗಿ,
ಪ್ರಸಾದವೆ ಜ್ಞಾನ, ಪ್ರಸಾದವೆ ಧ್ಯಾನ,
ಪ್ರಸಾದವೆ ಲಿಂಗಭೋಗೋಪಭೋಗಿಯಾಗಿಪ್ಪ–
ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪ್ರಸಾದಿ
ಮರುಳುಶಂಕರದೇವರ ನಿಲವ ನೋಡಾ ಸಂಗನಬಸವಣ್ಣಾ.[೧]

ಮರುಳುಶಂಕರದೇವರು ಲಿಂಗಗಂಭೀರದಲ್ಲಿ, ಪ್ರಸಾದಗಂಭೀರದಲ್ಲಿ ನಿಂದ ಪ್ರಸನ್ನ ಸೌಂದರ್ಯವನ್ನು ಪ್ರಭುದೇವರು ಬಸವಣ್ಣನಿಗೆ ತೋರುತ್ತಿರುವ ಸಂದರ್ಭದಲ್ಲಿಯೆ 'ಪ್ರಸಾದಕುಂಡದಿಂದ ನಲಿನಲಿದು ಬಂದು,' ಹುಣ್ಣಿವೆಯ ಚಂದ್ರಮನ ಕಂಡು ಸಮುದ್ರ ಉಕ್ಕಿ ಇದಿರೆದ್ದು ಬರುವಂತೆ ಬಂದು ಪ್ರಭುವಿನ ನಿಲವಿಗೆ ನಮಸ್ಕಾರಮಾಡುತ್ತಾನೆ ಮರುಳುಶಂಕರದೇವ. ಈ ಶಂಕರನ ನಿಜದ ನಿಲವನ್ನು ನಿಜಜ್ಞಾನದ ಕಣ್ಣಲ್ಲಿ ಕಂಡ ಪ್ರಭುದೇವ ತಿಳಿಸುವಂತೆ 'ನಿಜಪ್ರಸಾದಿ' ಮರುಳುಶಂಕರದೇವ. ಆತನ ದೇಹ ಚಿದಂಗ ದಲ್ಲಿ ಅರ್ಪಿತವಾಗಿದೆ. ಆತನ ಪ್ರಾಣ-ಚೈತನ್ಯ ಚಿತ್‌ಚೈತನ್ಯಕ್ಕೆ ಅರ್ಪಣವಾಗಿದೆ. ಆತನ ಮನಸ್ಸು 'ಅಱಿದೊಡೊಂದೇ' ಎಂಬ, ಏಕಮೇವ ಅದ್ವಿತೀಯವಾದ ಪರವಸ್ತು ತನ್ನಿಂದನ್ಯವಲ್ಲ, ಅದು ತಾನು, ತಾನೆ ಅದು ಎಂಬ ಐಕ್ಯಜ್ಞಾನದಲ್ಲಿ ಎಡೆಯಾಗಿ, ಅಲ್ಲಿಯೆ ಎಡೆಗೊಂಡು ನಿಂದಿದೆ. ಆತನ 'ತಾನು,' ಆತ್ಮ ನಿರಾಕಾರದ ಮುಖದಲ್ಲಿ ತುತ್ತಾಗಿ ಹೋಗಿದೆ. ಹೀಗೆ ಆತನೆಲ್ಲ ನಿರಾಕಾರ ಚಿದ್‌ಘನಲಿಂಗದಲ್ಲಿ ಅರ್ಪಣವಾಗಿದ್ದಾನೆ. ತಾನೆಲ್ಲ ಅರ್ಪಣವಾದುದಕ್ಕೆ ಪ್ರತಿಯಾಗಿ ಆ ಲಿಂಗ ಆತನ ದೇಹ ಪ್ರಾಣ ಮನ ಆತ್ಮ ವನ್ನೆಲ್ಲ ಅವಗ್ರಹಿಸಿಕೊಂಡು ಅಲ್ಲಲ್ಲಿ ಉರಿಯುತ್ತ ಹರಿಯುತ್ತಿದೆ. ಲಿಂಗ ಅಂಗದಲ್ಲಿ, ಸರ್ವಾಂಗದಲ್ಲಿ ಹರಿವ ಆನಂದ ಅದೇ ಪರಿಣಾಮಪ್ರಸಾದ. ಈ ಪರಮಾನಂದ ಪ್ರಸಾದ ದಲ್ಲಿ 'ತದ್ಗತ'ನಾಗಿ ಇದ್ದಾನೆ ಮರುಳುದೇವ. ಕಟ್ಟಿಗೆಯ ತಾನು – ಬೆಂಕಿ ಹೊರಬಿದ್ದು ತನಗೊಡಲಾಗಿರುವ ಕಟ್ಟಿಗೆಯನ್ನು ಅರ್ಪಿಸಿಕೊಂಡು ಕಟ್ಟಿಗೆಯ ಮೈಯಲ್ಲೆಲ್ಲ ಬೆಂಕಿ-ಪ್ರಸಾದ ಉರಿಯುತ್ತ ಹರಿದರೆ ಕಟ್ಟಿಗೆಗೆ ಎಂಥ ಪ್ರಕಾಶಾನಂದ! ಕಟ್ಟಿಗೆ ಬೆಂಕಿಯ ಒಳಗೆ ಕುಳಿತಿದೆ. ಕುಳಿತಂತೆ ಉರಿದು ಬೆಂಕಿಯಾಗಿ ಬೆಳಗುತ್ತಿದೆ. ಕಟ್ಟಿಗೆ ಈಗ 'ನಿಜಜ್ವಲಿನಿ' ಹೇಗೋ ಹಾಗೆ ನಿಜಪ್ರಸಾದಿ ಮರುಳುಶಂಕರಲಿಂಗ. ಕಟ್ಟಿಗೆ ಬೆಂಕಿಯಾದರೆ ಕಾಣುತ್ತದೆ. ಆದರೆ ಮನುಷ್ಯ 'ಬೆಂಕಿ'ಯಾದರೆ ಕಾಂಬ ಕಣ್ಣಿಗಲ್ಲದೆ ಕಾಣುವುದಿಲ್ಲ. ಮಾನವನನ್ನು ಕಟ್ಟಿಗೆ ಎಂದು ಕರೆದರೆ, ಶರಣ ಶಿವಶಂಕರಬೆಂಕಿಯೆ.

'ಜಯ ಜಯ, ತ್ರಾಹಿ ತ್ರಾಹಿ…'[೨] ಎಂದು ತನಗಾದ ಆನಂದವನ್ನು ಹಾಡುತ್ತ ಪ್ರಭುಲಿಂಗದಡಿಯಲ್ಲಿ ಹೊಡೆಗೆಡೆಯುತ್ತಾನೆ ಮರುಳುಶಂಕರ. ದಿನ ತುಂಬಿ ಹೊಟ್ಟೆಯ ಕೂಸು ಹೊರಗೆ ಬಂದರೆ ಯಾವ ಆನಂದವೋ ಅದೇ ಆನಂದ ಉಕ್ಕುತ್ತಿದೆ ಆತನಲ್ಲಿ. ತುಂಬಿದ ದಿನದಂತೆ ಬಂದಿದ್ದಾನೆ ಪ್ರಭುದೇವ. '…ಬಸವರಾಜದೇವರ ದಯದಿಂದ ಪ್ರಭುದೇವರ ಶ್ರೀಮೂರ್ತಿಯ…'[೨] ಕಂಡೆ, ಕಂಡು ಬದುಕಿದೆ ಎಂದು ತನ್ನ ಜನ್ಮದ

೧. ಶೂ. ಸಂ. ಪು. ೧೧೭, ವ. ೯. ೨. ಶೂ. ಸಂ. ಪು. ೧೧೭, ವ. ೧೦.

ಸಫಲತೆಯನ್ನು ಹಾಡುತ್ತ, ಪ್ರಭುವನ್ನು ಇದಿರುಗೊಂಡು ಕರೆದೊಯ್ಯುತ್ತಿದ್ದ ಶರಣ ತಿಂಥಿಣಿಗೆಲ್ಲ 'ಶರಣು ಶರಣಾರ್ಥಿ ಸಕಲಪುರಾತರಿಗೆಲ್ಲ' ಎಂದು ಮಣಿಮಣಿದು ಕೃತಾರ್ಥನಾಗುತ್ತಾನೆ. ಈ ಕೃತಕೃತ್ಯಭಾವದಲ್ಲಿ ಚಿಗುರೊಡೆಯುತ್ತಿರುವ ಮರುಳು ಶಂಕರನ ಮಾತು ಕೇಳಿ:

> ಎನಗೆ ಹಱಿಯಿತ್ತು ತಮವೆಂಬ ಸಂಸಾರದ ಬಂಧ.
> ಅಡಗಿ ಉಡುಗಿ ಕಂಡೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು.
> ನಿತ್ಯ ನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು.
> ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ;
> ಪ್ರಭುದೇವರ ಕಾರುಣ್ಯದಿಂದ ಬದುಕಿದೆನು ![೧]

ಗುರುವಿನಿಂದ ಬಂದ ಪ್ರಸಾದ ಶುದ್ಧಪ್ರಸಾದ, ಲಿಂಗದೇವ ಅನುಗ್ರಹಿಸಿ ದಯಪಾಲಿಸಿದ ಪ್ರಸಾದ ಸಿದ್ಧಪ್ರಸಾದ, ಜಂಗಮಲಿಂಗ ಕರುಣಿಸಿಕೊಟ್ಟುದು ಪ್ರಸಿದ್ಧಪ್ರಸಾದ. ನಿಜವಾಗಿ ಪ್ರಸಾದ ಒಂದು, ಹೆಸರು ಮೂರು. ಪ್ರಸಾದವೆಂದರೆ 'ಪರಬ್ರಹ್ಮ'ವೆಂದು ಅರ್ಥೈಸುವ ಸಂಗತಿ ನಿಮಗೆ ಗೊತ್ತಿರಬಹುದು. ಪರಬ್ರಹ್ಮದ, ಪರಶಿವಲಿಂಗದ ನಿತ್ಯಪ್ರಸನ್ನಭಾವ, ಅಖಂಡ ಪರಿಪೂರ್ಣವಾದ ಪರಮಾನಂದದ ನಿರ್ಮಲ ಗಂಭೀರ ಶಿವಪ್ರಸನ್ನಭಾವಕ್ಕೆ ಒಡೆಯ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯ. ಶರಣರ ಒಕ್ಕ ಮಿಕ್ಕ ಪ್ರಸಾದವನ್ನು ಹನ್ನೆರಡು ವರ್ಷ ಸೇವಿಸಿ 'ಪ್ರಸಾದಗಂಭೀರ'ದಲ್ಲಿ ಇಳಿಯುತ್ತ ಪ್ರಸನ್ನವಾದ ಶಾಂತ, ಸುಪ್ರಸನ್ನ ಚೆನ್ನ, ಶಿವಪ್ರಸನ್ನ ಮಲ್ಲಿಕಾರ್ಜುನದೇವಯ್ಯನಲ್ಲಿ ಪ್ರಸನ್ನಪ್ರಕಾಶವಾಗಿ ಇದ್ದಾನೆ ಮರುಳುಶಂಕರ. ತಮದ ಗಂಟು ತನ್ನನ್ನು–ಪರಂಜ್ಯೋತಿಯನ್ನು ಕತ್ತಲೆಯ ಸಂಸಾರಪಾಶ ಬಿಗಿದಿದೆ ಎಂಬ ಮಿಥ್ಯಾಭಾವ ತಾನೆ ಹರಿದು ಬಿಚ್ಚಿಹೋಗಿದೆ. ಪ್ರಸನ್ನ ಮಲ್ಲಿಕಾರ್ಜುನದೇವಯ್ಯನಲ್ಲಿ ಸನ್ನಿಹಿತವಾಗಿ, ದೇಹಕರಣೇಂದ್ರಿಯಗಳನ್ನು ಉಡುಗಿ ನಿರ್ಮುಕ್ತನಾಗಿ ನಿಂದು ದೇವಯ್ಯನನ್ನು ಕಂಡೇನೆಂಬ ತೊಳಲಾಟ ನಿಂತು ನಿರ್ವಂಶ ವಾಗಿದೆ. ಇದರ ಪರಿಣಾಮ. ಅದೋ ನೋಡಿ ಮರುಳನ ಮರೆಯಲ್ಲಿ 'ನಿತ್ಯನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು !' ಮರುಳುಶಂಕರನ ಅರ್ಥ ಈ ಪ್ರಸನ್ನ ಪರಂ ಜ್ಯೋತಿ ಪ್ರಕಾಶ. ಇದು ತನಗೆ 'ಸ್ವಯ'ವಾಗಿ. ಇದೇ ತನ್ನ ಸ್ವಯವಾಗಿ ಬದುಕಿ ಇರು ವುದು[೨] ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭು, ಶಾಂತಮಲ್ಲಿಕಾರ್ಜುನ ಅಂದರೆ ಜಂಗಮ ಲಿಂಗ ಪ್ರಭುದೇವನ ಕರುಣಪ್ರಸಾದದಿಂದ. ಪ್ರಭುವಿನಲ್ಲಿ ತನ್ನ ಇರವನ್ನು ಬಿನ್ನವಿಸಿ ಕೊಳ್ಳುವ ಮರುಳುಶಂಕರದೇವನ ಮಾತೆಲ್ಲ ಅತನ ಸ್ವಾನುಭಾವ. ಅದೇ ಆತ. ಆತ ನಿತ್ಯ ನಿಜಪದ.

---

೧. ಶೂ. ಸಂ. ಪು. ೧೧೭, ವ. ೧೧.

೨. ಶರಣರ ಬೆಡಗಿನ ವಚನಗಳಿಗೆ ಟೀಕು ಬರೆದ ಸಿಂಗಳದ ಸಿದ್ಧಬಸವರಾಜದೇವರು ಬದುಕು ಶಬ್ದಕ್ಕೆ '...ಉತ್ಪತ್ತಿ ಸ್ಥಿತಿ ಲಯಂಗಳ ಜಯಿಸಿ, ನಿತ್ಯವಾದ ನಿಜಪದದಲ್ಲಿರು...' (ಬೆ.ವ.ಪು. ೨೭, ವ. ೨೦) ಎಂದು ಅರ್ಥ ಹೇಳುವುದನ್ನು ಇಲ್ಲಿ, ಅಥವಾ ಶರಣರು 'ಬದುಕಿದೆನು' ಎಂದು ಹೇಳುವ ಸಂದರ್ಭಗಳಲ್ಲಿ ನಾವು ಗಮನದಲ್ಲಿಟ್ಟುಕೊಳ್ಳುವುದು ವಿಹಿತ.

ಕಣ್ಣಿನೊಳಗೆ ಕಣ್ಣ ಬೊಂಬೆ ಆಡುತ್ತದೆ. ಆಡುವ ಬೊಂಬೆ ಕಾಣುತ್ತದೆ. ಆದರೆ ಆ ಬೊಂಬೆಯನ್ನು ಆಡಿಸುವ ಸೂತ್ರ, ಸೂತ್ರಧಾರಕ ಕಾಣುವುದಿಲ್ಲ. ಬೆಣ್ಣೆ ಕಾಣುತ್ತದೆ, ಬೆಣ್ಣೆಯ ಒಳಗಿರುವ ರಸಗಂಪು ಕಾಣುವುದಿಲ್ಲ. ಹೀಗಿದೆ ನಿರಂಜನ ಪರಂಜ್ಯೋತಿಯ ಇರವು. ಅದಕ್ಕೆ ನಾನು ಮರುಳುಶಂಕರನೆಂಬ ಭಾವವಿಲ್ಲ. 'ಭಾವವಿಲ್ಲದ ಬಯಲು'[೧] ಆ ಪರಂಜ್ಯೋತಿ. ಸೂರ್ಯಚಂದ್ರಮರ ಬೆಳಗಿನಲ್ಲಿ ಮೂಡದ, ಆ ಬೆಳಗಿನಿಂದ ಮೂಡದ 'ಬೆಳಗನಱಿಯದ ಜ್ಯೋತಿ'[೧] ಈ ಮರುಳುಶರಣ. ಒಂದು ಕುರುಹಾಗಿ, 'ಮರುಳು ಶಂಕರ'ನಾಗಿ ಈ ಜ್ಯೋತಿ ತೋರಿದರೂ ಅದಕ್ಕೆ ಅಂಗವಿಲ್ಲ, ನಿರಂಗ. ಈ 'ಕುಱುಹು' ಈ 'ನಾಮ'ವನ್ನು ಕಂಡೆನಲ್ಲಾ ಎಂಬ ಆನಂದ ಪ್ರಭುದೇವರಿಗೆ. ಇದೋ ಆ ಆನಂದ ದನಿದೋರುತ್ತಿದೆ:

ಕಂಡೆನಲ್ಲಾ ಕರುಳಿಲ್ಲದ ಕಲಿಯ !
ಕಂಡೆನಲ್ಲಾ ಯೌವನವಿಲ್ಲದ ನೇಹವ !
ಕಂಡೆನಲ್ಲಾ ಕೈದಿಲ್ಲದ ಕಲಿತನವ !
ಕಂಡೆನಲ್ಲಾ ಕುಸುಮವಿಲ್ಲದ ಗಂಧವ !
ಕಂಡೆನಲ್ಲಾ ಗೊಹೇಶ್ವರಲಿಂಗದಲ್ಲಿ ಮರುಳುಶಂಕರನೆಂಬ ನಾಮವ !![೨]

ಬೆಳಗಲ್ಲದ ಬೆಳಗಿನ ಅಪಾರ ಪಾರಾವಾರ 'ಗೊಹೇಶ್ವರಲಿಂಗ'ದಲ್ಲಿ ಒಂದು ಕುರುಹಾಗಿ, ಒಂದು ನಾಮವಾಗಿ, ಒಂದು ಲಿಂಗತರಂಗ. ಮರುಳುಶಂಕರನಾಗಿ ತೆರೆಗಟ್ಟಿಕೊಂಡು ನಿಂತಿದೆ ! ಕರುಳಿದ್ದರೆ ಕಲಿ, ಕೈದು ಇದ್ದರೆ ಕಲಿತನ ಲೋಕದಲ್ಲಿ. ಹೂವಿನಂಗವಿದ್ದರೆ ಗಂಧ, ಪರಿಮಳ. ಕರಣಾದಿ ಗುಣಗಳ ಒಡಲಿಲ್ಲ ಮರುಳುಶಂಕರನಿಗೆ. ಅಂತೆಯೆ ಕರಣಗಳ ಮಥನ ವಿಲ್ಲ ನೇಹ ಶಂಕರನಲ್ಲಿ. ಈತ ಪ್ರಪಂಚದ ತರುಣ ಅಲ್ಲ. ಮಾನವ ಕುಲದ ಕುಸುಮ ಅಲ್ಲ, ಅದರ ಗಂಧವಲ್ಲ. ಹೂವಿನ ಒಡಲ ಹಂಗಿಲ್ಲದೆ ಪರಿಮಳಿಸುವ ನಿರಾಳ ಈ ಮರುಳುದೇವ.

ಪ್ರಭುದೇವ ಹೊರೆಯೇರಿ ಹಾಡುತ್ತಾನೆ; ಮರುಳುಶಂಕರ ನಿರಹಂಭಾವದ ನಿರ್ಝರದಲ್ಲಿ ಮುಳುಗಿ ಏಳುತ್ತಾನೆ. '...ಪರುಷದ ದೆಸೆಯಿಂದ ಪಾಷಾಣದ ಕುಲ ಹಱಿವಂತೆ ನೀ ಬಂದೆಯಲ್ಲಾ !'[೩] 'ಪ್ರಭುದೇವರ ಕಾರುಣ್ಯದಿಂದ ಬದುಕಿದೆ,'[೩] 'ನಿಮ್ಮ ಕಾರುಣ್ಯವಾಗಿದ್ದಲ್ಲಿ ಎನಗೆಲ್ಲಿಯು ಸುಖ,' 'ಪ್ರಭುದೇವರಿಂದ ಬದುಕಿದೆ'[೪] ಬದುಕಿದೆ ಎಂದು ಪ್ರಭುದೇವರನ್ನು ಹಾಡಿ ಹರಸುತ್ತಾನೆ.

---

೧. ಶೂ. ಸಂ. ಪು. ೧೧೮, ವ. ೧೨.

೨. ಅದೇ „ ವ. ೧೪.
ಇಲ್ಲಿ ಪ್ರಭುದೇವರ ವಚನದ ಖಂಡವನ್ನು ನೋಡಿ:
'ತಲೆಯಿಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ...' ಇದರ ಟೀಕು ಹೀಗಿದೆ: ಜ್ಞಾನದ ತೋರ್ಪುವೆಂಬ ವೃತ್ತಿಜ್ಞಾನವಳಿದು ಶುದ್ಧಜ್ಞಪ್ತಿಯೇ ತಲೆ ಇಲ್ಲದ ತಲೆ... ಆ ಜ್ಞಪ್ತಿಯೇ ಶಿರಸ್ಸಾಗಿಪ್ಪ ಪರಬ್ರಹ್ಮಕ್ಕೆ ಕರಣಾದಿಗಳೆಂಬ ಕರುಳಿಲ್ಲದ ಪರಕಾಯ ಒಡಲಾಯಿತ್ತಾಗಿ ಕರುಳಿಲ್ಲದ ಒಡಲು ಎಂಬ ಶಬ್ದಕ್ಕರ್ಥ... ಪ್ರ.ವ.ಪ್ರ. ೯. ವ. ೯.

೩. ಶೂ. ಸಂ. ಪು. ೧೧೮. ವ. ೧೩. ೪. ಶೂ. ಸಂ. ಪು. ೧೧೮. ವ. ೧೫.

ಮರುಳುಶಂಕರದೇವನ ಇರವನ್ನು, ಆತನ ಸ್ವಾನುಭಾವದ ನಿಜಾಂತರಂಗವನ್ನು, ತನ್ನ ಮನೆಯ ಅಂಗಳದ ಪ್ರಸಾದಕುಂಡದಲ್ಲಿದ್ದು 'ಪ್ರಸಾದಗಂಭೀರ'ವನ್ನು ಸಾಧಿಸಿದ ಅವನ ನಿರಹಂಕಾರದ ನಿಲವನ್ನು ಕಂಡು, ಬಸವಣ್ಣ ತನ್ನ ಅಜ್ಞಾನಕ್ಕೆ ತಾನು ನಾಚಿಕೊಳ್ಳುತ್ತಾನೆ, ತನ್ನ ಅಹಂಭಾವಕ್ಕೆ ತಾನು ನಡನಡ ನಡುಗುತ್ತಾನೆ. '....ಇನಿತು ದಿನವೆನ್ನ ಅಂಗಳದಲ್ಲಿ ಮಹಾಲಿಂಗೈಕ್ಯನಪ್ಪ ಶರಣನಿರುತ್ತಿರಲು ಈತನ ನಿಲವನರಿಯದೆ ಕೆಟ್ಟೆ'[೧] ನಲ್ಲಾ ಎಂದು ಅನುತಾಪಬಡುತ್ತಾನೆ. ಜಂಗಮಲಿಂಗ ತಾನಾಗಿ ಮನೆಗೆ ನಡೆದು ಬಂದರೆ ತೆರಹುಮರಹಾಗಿದ್ದೆ. ಮರುಳುಶಂಕರದೇವರಂಥ ಲಿಂಗಾಂಗಸಮರಸವಾಗಿದ್ದ ಲಿಂಗಶರಣ ನನ್ನನ್ನು 'ರಕ್ಷಿಸಿಹೆ'ನೆಂದು ಅಂಗಳದಲ್ಲಿಯೆ ಮನೆಮಾಡಿಕೊಂಡಿದ್ದರೂ 'ಕಾಯದ ಕಪಟ'ದಿಂದ ಮಾಯಾಪ್ರಪಂಚದ ಬಲೆಯೊಳಗೆ ಸಿಕ್ಕು ಮಿಥ್ಯಾಸಂಭ್ರಮದಲ್ಲಿ ಕನವರಿಸುತ್ತಿದ್ದೆ ನಾನು. ಅರಿವಿನ ಕಣ್ಣಿಗೆ ಅಷ್ಟಮದಗಳ ಮಂಜು ಕವಿದು, ಮಹಾಂತ ಶರಣರ ಕಾಣದೆ ಎಡವಿ ಹೋದೆ ನಾನು. ನಿಜಶರಣರ ಇರವನ್ನು ಕಾಣದ ಭಕ್ತಿ! ಬಸವಣ್ಣ ಇನ್ನೇನೋ ಮಿಡುಕುತ್ತಾನೆ. ಅತ್ಯಂತ ವಿನಮ್ರನಾಗಿ ಪ್ರಭುದೇವನಲ್ಲಿ ಬಿನ್ನಯಿಸುತ್ತಾನೆ, 'ಮರನನೇರಿ'[೨] ಕೈಮರೆದ ತನ್ನ ಭಕ್ತಿಯ ಅಧಃಪತನವನ್ನು. 'ಕೆಟ್ಟೆನಲ್ಲಾ ಗುರುವೆ!'[೨] ಎಂದು ಮೊರೆಯಿಡುತ್ತಾನೆ. '....ಕೂಡಲಸಂಗಮದೇವಾ, ಈ ಮರುಳುಶಂಕರದೇವನ ಕೃಪೆ ಎನಗೆನ್ನೆಂದಪ್ಪುದು ಹೇಳಾ ಪ್ರಭುವೆ?'[೨] ಎಂದು ಒರಲುತ್ತಾನೆ.

ಮನೆಯ ಮುಂದೆ ಹುಡಿಯಲ್ಲಿ ಬಿದ್ದ ಮಾಣಿಕ್ಯ ಬಸವಣ್ಣನಿಗೆ ಕಾಣಲಿಲ್ಲ. ಭಕ್ತಿಯಲ್ಲಿ ಅವಧಾನ ತಪ್ಪಿ, ಸುಜ್ಞಾನದಲ್ಲಿ ಎಚ್ಚರ ತಪ್ಪಿ ಈ ಪ್ರಮಾದ ಸಂಭವಿಸಿತು. ಶಿವಜ್ಞಾನೋದಯವಾದ ದಿವಾರಾತ್ರಿಯಲ್ಲಿ ಎಚ್ಚರಗುಂದದ ಭಕ್ತಿಯನ್ನು ಮಾಡಬಾರದು ಮಾಡಬಾರದು. ಈ ನಿತ್ಯಭಕ್ತಿಯಲ್ಲಿ ಪರಿಪಕ್ವ ತೋರದೆ ಶರಣರ ನಿಲವು, ಅವರ ನಿಜಾಂತರಂಗದ ಅತ್ತತ್ತ ಬಯಲು, ಅತ್ತತ್ತ ವಿಸ್ತಾರ, ಅತ್ತತ್ತ ಬೆಳಗು ಕಾಣಲಿಕ್ಕೆ ಬಾರದು ಬಾರದು. ಆ ಭಕ್ತಿಯ ಪಕ್ವಕ್ಕೆ ಕಾಲ ಬೇಕು, ಕಾಯಬೇಕು:

ಹೂಮಿಡಿಯ ಹರಿದು, ಒತ್ತಿ ಹಣ್ಣ ಮಾಡಿಹೆನೆಂದರೆ ಹಣ್ಣಾಗಬಲ್ಲುದೆ?
ಪರಿಮಳವಿಲ್ಲದ ನನೆಯನರಳಿಸಿ ಮುಡಿದಿಹೆನೆಂದರೆ ಸೌರಭ ಉಂಟೆ?
ಶಿವಶರಣರ ನಿಲವ ಕಾಂಬ ಕಾಲಕ್ಕೆ ಕಾಣಬಹುದಲ್ಲದೆ
ಎಲ್ಲಾ ಹೊತ್ತು ಕಾಣಬಹುದೆ?
ಅಹ ಕಾಲಕ್ಕೆ ತಾನೆಯಪ್ಪುದು.
ಗೊಹೇಶ್ವರನ ಶರಣರ ನಿಲವ ಕಂಡ ಬಳಿಕ
ಮರಹು, ಬೆಳಗ ಕಂಡ ಕತ್ತಲೆಯಂತೆ
ನೋಡ ನೋಡ ಹರೆವುದು ನೋಡಾ ಸಂಗನಬಸವಣ್ಣಾ![೩]

---

೧. ಶೂ. ಸಂ. ಪು. ೧೧೮-೧೧೯, ಪ್ರ. ೧೬. ೩. ಶೂ. ಸಂ. ಪು. ೧೧೯, ವ. ೧೯.
೨. ಅದೇ ಪು. ೧೧೯, ವ. ೧೮.

ಈ ಮಾತಿನಲ್ಲಿ ಪ್ರಭುದೇವರ ಅರ್ಥ ಇಷ್ಟೇ: ಯಾರು ಶರಣರು, ಅವರ ನಿಲವೇನು, ಅವರ ಇರವೇನು ಎಂಬುದು ತಾನು ಪರಿಮಳವಾದರೆ, ತಾನು ಲಿಂಗ-ರಸಪಕ್ವವಾಗಿದ್ದರೆ, ಶರಣನೆತ್ತರಕ್ಕೆ ತಾನು ಬೆಳೆಯುತ್ತ ಬಂದಿದ್ದರೆ ಅದಕ್ಕದು ಗೋಚರ. ಮತ್ತೆ ಮುಂದೆ ಬಸವಣ್ಣನವರ ಮಾತೇ ಸ್ಪಷ್ಟಗೊಳಿಸುವಂತೆ ಶರಣರ ನಿಲವು ಅಂದರೆ 'ನಿಮ್ಮ ನಿಲವು' ಅದರರ್ಥ ಗೊಹೇಶ್ವರಲಿಂಗದ ನಿಲವು ಅಥವಾ ಕೂಡಲಸಂಗಮದೇವರ ನಿಲವು. ಆಕಾಶದಲ್ಲಿ ಮೇಘಮಂಡಲ ಸುಳಿದರೆ ಎಲ್ಲರು ಕಾಣಬಹುದು. ಆದರೆ ಆ ಮುಗಿಲ ಮುಸುಕಿನಲ್ಲಿ ಹೊಳೆವ ಮಿಂಚಿನ ಮುಖ ಯಾವ ಕಣ್ಣಿಗೆ ಕಂಡೀತು? ಹಾಗೆ ಮನುಷ್ಯನ ಮರೆಯ ಅಖಂಡಮಿಂಚು ಶರಣ ಅಥವಾ ಲಿಂಗ. ಮಾನವಕುಲವೆಂಬ ನೆಲದ ಮರೆಯ ದಿವ್ಯನಿಧಾನ ಶರಣಲಿಂಗ. ಮರುಳನ ಮರೆಯ ಶಂಕರ ಹಲವು ಸಾರೆ ಮಿಂಚಿದ ಬಸವಣ್ಣನ ಕಣ್ಣಲ್ಲಿ. ಆದರೆ ಬಸವಣ್ಣ ಮಿಂಚನ್ನು ಗುರುತಿಸದೆ ಮುಗಿಲನ್ನೆ ನೋಡಿದ. "......ದೇವಾ, ನಿಮ್ಮ ನಿಲವ ಹಲಕಾಲದಿಂದ ಕಂಡು ಕಂಡು ಕಡೆಗಣಿಸಿ ಮಱೆದು ಮತಿಗೆಟ್ಟು ಮರುಳಾದೆನು."[೧]

ಮತಿ ಕೆಟ್ಟು, ತಾನು 'ಮರುಳು' ಆಗಿದ್ದ ಬಸವಣ್ಣ ಸತ್ಯಸದ್‌ಭಕ್ತಿಯಲ್ಲಿ ಎಚ್ಚತ್ತು ಇಣುಕಿ ನೋಡುತ್ತಾನೆ ಮರುಳುಶಂಕರನನ್ನು. ಆತನ 'ಶರಣಘನ'ವನ್ನು ಕಂಡು ಬಳಿಯಲ್ಲಿಯೆ ನಿಂದಿದ್ದ ಚೆನ್ನಬಸವಣ್ಣನಿಗೆ ನುಡಿಯಲ್ಲಿ ತುಂಬಿ ತೋರಿಸುತ್ತಾನೆ ಆ ಶರಣನ ಘನವನ್ನು:

ಕಂಗಳೊಳಗೆ ಕರುಳಿಲ್ಲ. ಕಾಯದೊಳಗೆ ಮಾಯವಿಲ್ಲ.
ಮನದೊಳಗೆ ಅಹ್ಂಕಾರವಿಲ್ಲ.
ದೇಹವೆಂದಱಿಯ; ನಿರ್ದೇಹವೆಂದಱಿಯ.
ಜಂತ್ರದ ಸೂತ್ರದಂತಿಪ್ಪ ನಿಬ್ಬೆಱಗಿನ ಮೂರ್ತಿಯ ನೋಡಾ!
ಲಿಂಗಜಂಗಮದ ಒಕ್ಕ ಮಿಕ್ಕ ಪ್ರಸಾದವ ಕೊಂಡು
ಮಿಕ್ಕು ಮೀಱಿ ನಿಂದ ಮಹಾಪ್ರಸಾದಿಯ ನೋಡಾ!
ತನ್ನನಱಿದಹರೆಂದು ಜಗದ ಕಣ್ಣಿಗೆ ಮಾಯದ ಮಂಜ ಕವಿಸಿ,
ನಿಜಪದದಲ್ಲಿ ತದುಗತನಾದ.
ಕೂಡಲಸಂಗಮದೇವರಲ್ಲಿ ಮರುಳುಶಂಕರದೇವರ ನಿಲವ ನೋಡಾ
ಚೆನ್ನಬಸವಣ್ಣಾ![೨]

---

೧. ಶೂ. ಸಂ. ಪು. ೧೨೦, ವ. ೨೦.
೨. ಅದೇ „ ವ. ೨೨.
ಇಲ್ಲಿ ಪ್ರಭುದೇವರ ವಚನ ನೋಡಿ:
ಕಂಗಳ ಕರುಳ ಕೊಯ್ದುವರ, ಮನದ ತಿರುಳ ಹುರಿದವರ, ಮಾತಿನ ಮೊದಲ ಬಲ್ಲವರನೆನ ಗೊಮ್ಮೆ ತೋರಾ ಗುಹೇಶ್ವರಾ.
ಟೀಕು: ಕಂಗಳೊಳಗೆ ಇದಿರಿಟ್ಟು ತೋರುವ ಭಿನ್ನರೂಪ ಮಾಯಂಗಳೆಲ್ಲವನ್ನು ಭೇದಿಸಿ ಜ್ಞಾನದೃಷ್ಟಿಯನಳವಡಿಸಿಕೊಂಡಿರಲು, ಕಂಗಳ ಕರುಳ ಕೊಯ್ದುವರ ಎಂಬ ಶಬ್ದಕ್ಕರ್ಥ......
ಪ್ರ. ವ. ಪು. ೨೧೬, ವ. ೧೪೧.

ಇಲ್ಲಿ ಬಸವಣ್ಣನವರು ಕಂಡ ಮರುಳುಶಂಕರದೇವನ ನಿಜಮೂರ್ತಿ, ಹಡಪದಪ್ಪಣ್ಣ ಪ್ರಭುವನ್ನು ಕಂಡು '...ಕಂಗಳಲ್ಲಿ ಕರುಳಿಲ್ಲ; ಕಾಯದಲ್ಲಿ ಹೊರೆಯಿಲ್ಲ...'[1] ಎಂದು ಮುಂತಾಗಿ ಹೇಳುವ ಮಾತನ್ನು ನೆನೆಯಿಸುತ್ತದೆ. ಭಿನ್ನದೃಷ್ಟಿಯ ಕೆಚ್ಚು, ತಾನು ಇದಿರು, ತನಗೆ ತನ್ನದು, ನೀನು ನಿನ್ನದು–ಎಂದು ನಿಸರ್ಗಸಹಜವಾಗಿ ಮಾನವಜ್ಞಾನದ ನೋಟದಲ್ಲಿ ತುಂಬಿ ಸೂಸುತ್ತಿರುವ ಭೇದಬುದ್ಧಿಯ ವ್ಯಾಮೋಹ ನಷ್ಟವಾಗಿದೆ ಮರುಳು ಶಂಕರನಲ್ಲಿ. ತನ್ನ ಮರುಳುಲೀಲೆಯನ್ನು ತಾನೆ ನೋಡುತ್ತ ನಿಬ್ಬೆರಗಿನಲ್ಲಿ ನಿಂತಿದ್ದಾನೆ ![2] ಲಿಂಗಜಂಗಮದ ಪ್ರಸಾದವನ್ನು ಸೇವಿಸುತ್ತ ತಾನೆ ತನ್ನ ಗಂಭೀರನಿಜದಲ್ಲಿ ಶಿವಪ್ರಸನ್ನ ವಾಗಿ ನಿಂತಿದ್ದಾನೆ. ಈತನೆ ನಿಜಪ್ರಸಾದಿ, ಮಹಾಪ್ರಸಾದಿ. ಎಲ್ಲವನ್ನು ಮಿಕ್ಕು ಮೀರಿ ತನ್ನ ನಿಜಸ್ಥಲದಲ್ಲಿ 'ಸರ್ವನಿರ್ವಾಸಿ'ಯಾಗಿ ನಿಂತಿದ್ದರೂ ಜಗತ್ತಿನ ಕಣ್ಣಿಗೆ ಪ್ರಸಾದ ಕುಂಡದಲ್ಲಿ ವಾಸವಾಗಿರುವ ಮರುಳುಶಂಕರ ತಾನು. ಚೆನ್ನಬಸವಣ್ಣಾ. '...ಕೂಡಲ ಸಂಗಮದೇವರಲ್ಲಿ ಮರುಳುಶಂಕರದೇವರ ನಿಲವ ನೋಡಾ...'[3]

ಬಸವಣ್ಣ ಕಂಡಂತೆ ಮರುಳುಶಂಕರದೇವರ ನಿಲವು ಕೂಡಲಸಂಗಮದೇವರಲ್ಲಿ ನಿಂದ ನಿಲವು. ಅದರರ್ಥ ದೇವನಲ್ಲಿ ದೇವ ನಿಂದ ನಿಲವು. ತನ್ನಲ್ಲಿ ತಾನು ನಿಂದ ನಿಲವು. ಸಮುದ್ರದಲ್ಲಿ 'ಸಮುದ್ರತೆರೆ' ನಿಂದ ನಿಲವು. ಅಥವಾ 'ತೆರೆಸಮುದ್ರ' ಸಮುದ್ರದಲ್ಲಿ ನಿಂದ ನಿಲವು. ನಿರಾಕಾರದ ತೆರೆ ಸಾಕಾರ, ಅದೇ ಸಾಕಾರತರಂಗಲೀಲೆ ಶರಣ. ಈ ಶರಣ ಮರುಳುಶಂಕರ. ಈ ಶರಣತ್ವದ ನೆಲೆಯನ್ನು. ಬಸವಣ್ಣನಂತೆ ಚೆನ್ನಬಸವಣ್ಣ ಪ್ರಭುದೇವರು ಸಿದ್ಧರಾಮಯ್ಯ ಹಡಪದಪ್ಪಣ್ಣ ಮಡಿವಾಳ ಮಾಚಯ್ಯ ಕಿನ್ನರ ಬ್ರಹ್ಮಯ್ಯನವರು ತಮತಮಗೆ ಕಂಡು ಕೊಂಡಾಡುತ್ತಾರೆ. ಕೊಂಡಾಟದಲ್ಲಿ ಒಬ್ಬೊಬ್ಬರು ಕೊಡುವ ಮರುಳುಶಂಕರದೇವನ ಶರಣಚಿತ್ರ ಮಾನುಷವನ್ನು ಒಡೆದು ಅಲ್ಲಿಯೆ ಮೂಡಿ ಇರುವ, ಅತಿಮಾನುಷದ ಸ್ವರೂಪವನ್ನು ನಮ್ಮ ಕಣ್ಣ ಒಳಗೆ ತಂದು ನಿಲ್ಲಿಸುತ್ತದೆ. 'ಶೂನ್ಯಸಂಪಾದನೆ'ಯಲ್ಲಿ ಬರುವ ಇಂಥ ಚಿತ್ರಗಳೆ 'ಲಿಂಗಶರಣ'ನ. 'ಶರಣಲಿಂಗ'ದ ಪ್ರಾಣರಹಸ್ಯವನ್ನು ಹೊರಗೆ ತರುತ್ತವೆ. ಕ್ರಮವಾಗಿ ಒಂದೊಂದು ಚಿತ್ರವನ್ನು ಅವಲೋಕಿಸಿ:

ಅಂಗವನಾಚಾರಕ್ಕರ್ಪಿಸಿ, ಆಚಾರವನಂಗಕ್ಕರ್ಪಿಸಿ,
ಆಚಾರಲಿಂಗ ಪ್ರಸಾದಿಯಾದ.
ಪ್ರಾಣವ ಲಿಂಗದಲ್ಲಿ ಅರ್ಪಿಸಿ, ಆ ಲಿಂಗವ ಪ್ರಾಣಕ್ಕರ್ಪಿಸಿ,

---

೧. ಶೂ. ಸಂ. ಪು. ೯೦. ವ. ೧.

೨. ಇಲ್ಲಿ ಚೆನ್ನಬಸವಣ್ಣನವರ ಮಂತ್ರಗೋಪ್ಯದ ಪದವನ್ನು ನೋಡಿ:

ಜಂತ್ರಸೂತ್ರದ ತೆರದಿ ನಿರಂತರದ ನಿಜವಿದಿದು
ಮಂತ್ರಭೇದವನರಿದು ಸಂತೈಸುತ ನಿ
ಶ್ಚಿಂತ ನಿರ್ಜಾತ ನಿರ್ವಯಲನೈದಿದ ಮ
ಹಂತ ಕೂಡಲಚೆನ್ನಸಂಗಯ್ಯನು ॥ ಚೆ. ಬ. ಸಾ., ಪು. ೬೫, ವ. ೧೫.

೩. ಶೂ. ಸಂ. ಪು. ೧೨೦. ವ. ೨೨.

ಪ್ರಾಣಲಿಂಗಪ್ರಸಾದಿಯಾದ.
ದೇಹಭಾವದ ಅಹಂಕಾರ ದಾಸೋಹಂಭಾವದೊಳಗಲ್ಲದೆ ಅಳಿಯದೆಂದು
ಲಿಂಗಜಂಗಮಕ್ಕೆ ಕೊಟ್ಟು ಲಿಂಗಜಂಗಮಪ್ರಸಾದಿಯಾದ.
ಸತ್ಯಶರಣರ ಅಂಗಳದೊಳಗೆ ಬಿದ್ದ ಅಗುಳನೆತ್ತಿಕೊಂಡಿಪ್ಪೆನೆಂದು
ನಿಮ್ಮ ಪ್ರಸಾದದ ಕುಳಿಯೊಳಗೆ
ಹನ್ನೆರಡು ವರುಷ ಪರಿಯಂತರ ಪ್ರಸಾದಿಯಾಗಿರ್ದ.
ಕೂಡಲಚೆನ್ನಸಂಗಮದೇವರಲ್ಲಿ ಮರುಳುಶಂಕರದೇವರ ಶ್ರೀಪಾದವ
ಘನವನು ನಿಮ್ಮಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ ![1]

ಮರುಳುಶಂಕರದೇವ ತನ್ನ ಅಂಗವನ್ನೆಲ್ಲ ಶಿವಾಚಾರಕ್ಕೆ.–ಬಹಿರಂಗದಲ್ಲಿ ಹರಿವ ಎಲ್ಲ ಕ್ರಿಯಾಚರಣೆಯಲ್ಲಿ ಲಿಂಗವೆ ತುಂಬಿ ಹರಿವ ಆಚಾರಲಿಂಗಕ್ಕೆ–ಅರ್ಪಿಸಿ, ಆ ಆಚಾರಲಿಂಗವನ್ನು ತನ್ನ ಸರ್ವಾಂಗದಲ್ಲಿ ಇರಿಸಿಕೊಂಡು, ಆ ಲಿಂಗದಿಂದ ಹೊಮ್ಮುವ ಆಚಾರ ಪ್ರಸಾದವನ್ನೆ ಸೇವಿಸಿ ಆಚಾರಲಿಂಗ ಪ್ರಸಾದಿಯಾಗಿದ್ದ. ತನ್ನ ಪ್ರಾಣವನ್ನು ಪ್ರಾಣಕ್ಕೆ ಪ್ರಾಣವಾಗಿ ಪ್ರಜ್ವಲಿಸುವ ಪ್ರಾಣಲಿಂಗದಲ್ಲಿ ಇರಿಸಿ, ಆ ಲಿಂಗವನ್ನು ತನ್ನ ಪ್ರಾಣದಲ್ಲಿ

---

೧. ಶೂ. ಸಂ. ಪ್ರ. ೧೨೧, ವ. ೨೩.
ಈ ವಚನದಲ್ಲಿ ಮರುಳುಶಂಕರದೇವರ ಜೀವನದ ಪೂರ್ವಭಾಗ ಮತ್ತು ಉತ್ತರ ಭಾಗಗಳು ಕಂಡುಬರುವಂತಿವೆ. ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಲಿಂಗಜಂಗಮದಾಸೋಹದಲ್ಲಿ ನಿರತನಾಗಿದ್ದುದು ಪೂರ್ವಭಾಗ. ಮುಂದೆ ಕಲ್ಯಾಣಕ್ಕೆ ಬಂದು 'ಸತ್ಯಶರಣ' ಬಸವಣ್ಣನ ಅಂಗಳದೊಳಗೆ 'ಪ್ರಸಾದದ ಕುಳಿಯೊಳಗೆ' ೧೨ ವರ್ಷ ಇದ್ದು ಶರಣರ ಶೇಷಪ್ರಸಾದವನ್ನು ಸೇವಿಸಿಕೊಂಡು ಇದ್ದುದು ಉತ್ತರಭಾಗ. ಭೈರವೇಶ್ವರಕಾವ್ಯದ ಕಥಾ ಸೂತ್ರರತ್ನಾಕರದಲ್ಲಿ ಬರುವ ಮರುಳುಶಂಕರದೇವರ ಕಥೆಯನ್ನು ಪರಿಶೀಲಿಸಿ ಈ ಸಂಗತಿಯ ಸತ್ಯಾಂಶವನ್ನು ಗೊತ್ತುಪಡಿಸಿಕೊಳ್ಳಬಹುದು:

ಮರುಳುಶಂಕರಯೋಗಿವರನು ಪ್ರಸಾದದಿಂ ಪರವಿನ್ನೊಂದಿಲ್ಲವೆಂಬುದಕ್ಕೆ ಕಥೆ:
ಬರ್ಬರ ದೇಶದ ಕರ್ಣಪುತ್ತೂರಲ್ಲಿ ನೈಸರೆಂಬ ಭಿಕ್ಷುಕವಿರಕ್ತರಿರುತ್ತಿರಲು. ಅವರಿದ್ದ ಆಶ್ರಯದಲ್ಲಿ ಒಂದು ಶ್ವಾನ ಘಾಯದಲ್ಲಿ ಬಂದು ಮರಣವಾಗುವಾಗ, ನೈಸರು ಕಂಡು ಮರುಗಿ, ಪರ್ಣದೊಳಗೆ ಭಿಕ್ಷಾನ್ನವನಿಕ್ಕಿ ಕೊಡಲು. ಅದು ಭಕ್ಷಿಸಿ ಮರಣವಾಗಲು, ರುದ್ರಲೋಕದಲ್ಲಿ ವಿಚಾರಿಸಿ, ಭಾಂಡಪ್ರಸಾದ ಸೇವನೆಯಿಂದ ಭೂಲೋಕದಲ್ಲಿ ರಾಜನಾಗಿ ಹುಟ್ಟೆಂದು ಕಳುಹಲು, ಪುಟ್ಟಿ ಆ ಕರ್ಣಪುತ್ತೂರನಾಳುತ್ತ ಸಿರಿಯ ಚೋಳನೆಂಬ ಪೆಸರಿಂದ ರಾಜ್ಯವನಾಳುತ್ತಿಪ್ಪಲ್ಲಿ. ಜಾತಿಸ್ಮರತ್ವಂ ಪುಟ್ಟಿ ಅಜೀದು ನೈಸರಿಗೆ ಬಂದೆಜಗಲು, ನೀನಾರೆಂದು ಅವರು ಕೇಳಲು, ನಿಮ್ಮಿಂದ ರಾಜನಾದೆನೆಂದು ತನ್ನ ಪೂರ್ವಾಪರವಂ ಪೇಳಲು ಕೇಳಿ, ನಿನಗೆ ಈ ಪದವ ಕೊಟ್ಟವರಾರೆನ್ನಲು, ಈ ಪಟ್ಟಣದ ನೀಲಕಂಠೇಶ್ವರನೆ ಕೊಟ್ಟನೆನಲು, ನಟಿಯೆಂದು ಈರ್ವರು ಪೋಗಿ ಆ ಲಿಂಗವ ನೈಸರು ಕೇಳಲು, ನಿಮ್ಮಿಂದ ಕೊಟ್ಟೆನೆಂದು ಆ ಲಿಂಗವು ಪೇಳಲು ಕೋಪಿಸಿ ಶರಣನು ಪ್ರಸಾದಿಗೆ ಭವವಿತ್ತೆಯೆನುತ ಪಿಡಿದ ದಂಡದಿಂದ ಲಿಂಗವಬಿಜೀಯಲು, ಆ ಲಿಂಗವು ಮೆಚ್ಚಿ ನಿನ್ನ ಭಾಂಡ ಪ್ರಸಾದದ ಘನತೆಯನುಂಟುಮಾಡುವದಕ್ಕೆ ಕೊಟ್ಟೆನೆಂದು ಈರ್ವರಿಗೆಯೂ ನಿಜಮುಕ್ತಿಯನಿತ್ತನೆಂಬುದ ಮರುಳುಶಂಕರನೆಂಬ ಗಣೇಶ್ವರರು ಕೇಳಿ, ಶಿವಪ್ರಸಾದದ ಮಹಿಮೆಯ ತೋರಬೇಕೆಂದು ಬಸವರಾಜದೇವರ ಪ್ರಸಾದದ ಘನ ದೊಂಡದಲ್ಲಿ ಆರು ಕಾಣದಂತೆ ಹನ್ನೆರಡು ವರುಷವಿರಲು. ಬಳಿಕ ಪ್ರಭುದೇವರು ಬಂದು. ಇವರ ಮಹತ್ವವ ನೋಡು ಬಸವಣ್ಣ.

ನೆಲೆಗೊಳಿಸಿ, ಪ್ರಾಣಲಿಂಗದ ಪ್ರಸಾದಪ್ರಾಣವನ್ನೆ ಪ್ರಾಣಿಸಿ ಪ್ರಾಣಲಿಂಗಪ್ರಸಾದಿಯಾಗಿದ್ದ ಮರುಳುಶಂಕರದೇವ. ತನ್ನ ಅಂಗ ತನ್ನ ಪ್ರಾಣದಂತೆ ತನ್ನ ಭಾವ, ದೇಹವೆ ನಾನೆಂದಿರುವ ಅಹಂಭಾವದ ವಾಸನೆ ನಿರ್ವಾಸನೆಯಾಗಿ ಹೋಗಬೇಕೆಂದು ಕರಸ್ಥಲಕ್ಕೆ ಬಂದಿರುವ ಭಾವ ಲಿಂಗಕ್ಕೆ ಮತ್ತೆ ಪರಸ್ಥಲದಲ್ಲಿ ನಿಂದು 'ಸರ್ವಲೋಕೋಪಕಾರಾಯ' ಸುಳಿದಾಡುವ ಜಂಗಮಲಿಂಗಕ್ಕೆ ಆ 'ಅಹಂಭಾವ'ವನ್ನೆ ಅರ್ಪಿಸಿ ಲಿಂಗಜಂಗಮದಿಂದ ಬಂದ ಪ್ರಸಾದ ವನ್ನೆ ಉಂಡುಟ್ಟುಕೊಂಡು ಲಿಂಗಜಂಗಮಪ್ರಸಾದಿಯಾಗಿದ್ದ ಶಂಕರದೇವ. ಹೀಗೆ ತನ್ನ ತನು ಪ್ರಸಾದತನು, ಪ್ರಾಣ ಪ್ರಸಾದಪ್ರಾಣ, ಭಾವ ಪ್ರಸಾದಭಾವವಾಗಿ ಸರ್ವಾಂಗ ಪ್ರಸಾದಿಯಾಗಿದ್ದ ಮರುಳುಶಂಕರದೇವ ಬಸವಣ್ಣನ ಕಲ್ಯಾಣಕ್ಕೆ ಬಂದು ಸತ್ಯಶರಣರ ಶೇಷಪ್ರಸಾದದ ಅಗುಳನಾಯ್ದುಕೊಂಡು, ಅದನ್ನೆ ಉಂಡು ೧೨ ವರ್ಷ ಕಾಲ ಮರುಳ ನಂತೆ ತೋರಿ ಪ್ರಸಾದಜೀವನವನ್ನು ಬದುಕಿದ ಶಂಕರ. ಇದು ಚೆನ್ನಬಸವಣ್ಣ ಕೊಡುವ ಸರ್ವಾಂಗ'ಪ್ರಸಾದಿ'ಯ ಮೂರ್ತಿಚಿತ್ರ. ಇನ್ನೂ ಈ ಮೂರ್ತಿಯ ಆಳವನ್ನು ಅಥವಾ ನಿರಾಳವನ್ನು ಹೀಗೆ ಹೇಳುತ್ತಾನೆ ಚೆನ್ನಬಸವಣ್ಣ:

ತುದಿಮೊದಲಿಲ್ಲದ ಘನವ ನೋಡಾ ! ಒಳಹೊರಗಿಲ್ಲದ ಅನುವ ನೋಡಾ !
ಗುರುಲಿಂಗಜಂಗಮ ತಾನೆಯಾಗಿ.
ಮತ್ತೆ ತಾನೆಂಬುದೇನೂ ಇಲ್ಲದೆ ಇಪ್ಪ ಪರಿಯ ನೋಡಾ !
ತನ್ನ ತಾ ನಿರ್ದೇಶಮಂ ಮಾಡಿಕೊಂಡು
ನಿಜಪದವನ್ನೈದಿಪ್ಪ ಪರಿಯ ನೋಡಾ !
ಕೂಡಲಚೆನ್ನಸಂಗಮದೇವರಲ್ಲಿ ಪರಮಪ್ರಸಾದಿಯಾಗಿಪ್ಪ
ಮರುಳುಶಂಕರದೇವರ ನೋಡಾ ಪ್ರಭುವೆ ![೧]

ಪ್ರಸಾದವೆ ಸರ್ವಮುಕ್ತಿಯೆಂದು ನಂಬಿ ಗೋಪ್ಯದಲ್ಲಿರ್ದ ಆ ಮಹಿಮನು, ಬೂದಿಯಲ್ಲಿ ಬಿದ್ದ ಮಾಣಿಕದಂತೆ, ಹೂಳಿರ್ದ ನಿಧಾನವು ಆರಿಗೂ ಕಾಣಿಸದಂತೆ, ಮರಣಪ್ಪಳ್ಳವರಿಗೆಯು ಮಣಿ ವಣೆ ಸಿಕ್ಕ (ಕ್ಕ?) ದಂತೆ, ಪಾಪಿಯ ಕಣ್ಣಿಗೆ ಪರುಷ ಕಲ್ಲಾದಂತೆ. ಶರಣನ ನಿಲುಕಡೆ ಆರಿಗೂ ಸಿಲುಕದಲಾ ಎಂದು ಪ್ರಭುದೇವರು ಸ್ತೋತ್ರವ ಮಾಡುವಾಗ, ಮರುಳಶಂಕರದೇವರು ಬಂದು ನಮಿಸಿ ಜಯ ಜಯ ತ್ರಾಹಿಯೆಂದು ನುತಿಸಿ ಪ್ರಭುದೇವರಿಗೆ ನಮಿಸಿ, ಗರ್ಭದಲ್ಲಿರ್ದ ಶಿಶುವು ನವಮಾಸವ ಬಯಸುವಂತೆ ನಿಮ್ಮ ಬರವ ಹಾರಿಕೊಂಡಿರ್ದೆನು, ಇನ್ನು ಎನ್ನ ಜನ್ಮ ಸಫಲವಾಯಿತ್ತೆಂದು ಬಸವಣ್ಣ ಮೊದಲಾದ ಪ್ರಮಥರಿಗೆ ನಮಿಸಿ, ನಾನು ಬರ್ದುಕಿದೆನು ಕಾಣಾ ಶುದ್ಧಸಿದ್ಧ ಪ್ರಸನ್ನ ಪ್ರಭುವೆ. ಶಾಂತಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಕರುಣದಿಂದ ಕರ್ಮನಿರ್ಮಳವಾಯಿತ್ತು. ನಿಮ್ಮ ಧರ್ಮ ನಿಮ್ಮ ಧರ್ಮವೆಂದು ನುತಿಸಿ ಆ ಪ್ರಸಾದಲಿಂಗ ದಲ್ಲಿ ನಿರ್ವಯಲಾದರು. ಷ್ಟೈ. ಕಾ. ಕ. ಸೂ. ರ. ಪ್ರ. ೩೦೩-೫ ಕಥೆ ೧೧೯.
(ನಮ್ಮಲ್ಲಿ ಪ್ರತಿಮಾಡಿಕೊಂಡ ಕೈಬರೆಹದ ಪ್ರತಿ)

೧. ಶೂ. ಸಂ. ಪು. ೧೨೨, ವ. ೨೫.
ಇಲ್ಲಿ ಬಹುರೂಪಿಚೌಡಯ್ಯಗಳ ವಚನವನ್ನು ನೋಡಿ:
ನನಗೆ ನಾನೇ ಗುರುವಾದೆನಯ್ಯಾ !
ನನಗೆ ನಾನೇ ಲಿಂಗವಾದೆನಯ್ಯಾ !

(ಮುಂದಿನ ಪುಟ ನೋಡಿ)

ಮರುಳುಶಂಕರದೇವರು ತುದಿಮೊದಲು ಇಲ್ಲದ ಅನಾದ್ಯನಂತವಾದ ಘನ, ಒಳಗೆ ಹೊರಗೆ ಇದು ಇದು ಎಂದು ನಿರ್ದೇಶಿಸಲು ಅವಕಾಶವಿಲ್ಲದ ಅನು ಅಥವಾ ಅನುವು ಎಂದು ಹೇಳಿ, ನಿಜಶರಣರು ಕಾಲದೇಶವನ್ನು ಒಳಕೊಂಡು ಮೀರಿ ನಿಂದ ಘನ ನಿಲವನ್ನು, ಒಳಗಿನ ಒಳಗಾಗಿ ಹೊರಗಿನ ಹೊರಗಾಗಿ ಎಲ್ಲಿ ನೋಡಿದಲ್ಲಿ ತಾನೆ ತಾನಾಗಿ ತೋರುವ ಅವರ 'ನಿಃಸ್ಥಲ'ದ ಇರವನ್ನು ಶಬ್ದದಲ್ಲಿ ನಿರೂಪಿಸುತ್ತಾರೆ ಚೆನ್ನಬಸವಣ್ಣನವರು. ಶರಣನ ಈ ಲಕ್ಷಣ ಪರಬ್ರಹ್ಮದ ಲಕ್ಷಣವೇ. ಅದರ ಘನ ಅದರ ಅನು ಇದೇ ರೀತಿ. ಇಂಥ ಇರವಾಗಿ ಇರುವ, ಇಂಥ ನಿಲವು ನಿಂದ ಮರುಳುದೇವರು ತನ್ನ ಅಂತರಂಗದ ಬೋಧಾಮೂರ್ತಿ ಸದ್ಗುರುವನ್ನು, ಅಂತರಂಗದ ಅಖಂಡ ಪರಂಜ್ಯೋತಿ ಮಹಾಲಿಂಗವನ್ನು, ತನ್ನೊಳಗೆ ಹೆಜ್ಜೆಯಿಲ್ಲದೆ ಸುಳಿದಾಡುವ ಅಂತರಂಗದ ಶಿಕ್ಷಾಚೈತನ್ಯಮೂರ್ತಿ ಸುಜ್ಞಾನಜಂಗಮಮೂರ್ತಿಯನ್ನು ತನ್ನೊಳಗೆ ತಾನೆ ಎಚ್ಚರಿಸಿಕೊಂಡು 'ನಾನೆ'ಂಬುದನ್ನೆಲ್ಲಾ ಆ ಗುರುಲಿಂಗಜಂಗಮಕ್ಕೆ ಸಮರ್ಪಿಸಿ, 'ನಾನೆಲ್ಲ' ಸವೆದು ಹೋಗಿದ್ದಾರೆ. ಮರುಳುಶಂಕರ ಏನೂ ಉಳಿದಿಲ್ಲ, ಉಳಿದಿರುವುದು ಗುರುಲಿಂಗಜಂಗಮ. ತನಗೆ ತಾನೆ ಗುರೂಪದೇಶ. ತನಗೆ ತಾನೆ ಲಿಂಗಪೂಜೆ. ತನಗೆ ತಾನು ಜಂಗಮದಾಸೋಹವಾಗಿ, ತನ್ನನ್ನು ತನಗೆ ದಾರಿಮಾಡಿ ತೋರಿಸಿಕೊಟ್ಟು, ತನ್ನನ್ನು ತಾನು ಸೇರಿ ಒಂದಿಕೊಂಡ ಮರುಳುಶಂಕರ. ಕಟ್ಟಿಗೆಯ ಮೈಯೆಲ್ಲ ಬೆಂಕಿಯಲ್ಲಿ ಸುಟ್ಟು ಬೆಂಕಿ ಉಳಿದರೆ ಈಗ ಕಟ್ಟಿಗೆಗೆ ಸಲ್ಲುವ ಹೆಸರು ಬೆಂಕಿಪ್ರಸಾದಿಯೇ. ಲಿಂಗ ಉಂಡು ಉಳಿಯುತ್ತಿರುವ ಅಂಗವೆಲ್ಲ ಲಿಂಗಪ್ರಸಾದಿಯೆ. ಅದೇ ಪರಮಪ್ರಸಾದಿ, ಅದೇ ಮರುಳುಶಂಕರ.

ಇನ್ನು ಈ ಶಂಕರದೇವರ ವಿಷಯದಲ್ಲಿ ಪ್ರಭುದೇವರ ಮಾತು ಕೇಳಿ:

ಅಂಗವಿಡಿದಂಗಿ ಎಂಬೆನೆ? ಆಱಿನೊಳಕೊಂಡನುಪಮನ ನೋಡಾ !
ಮೂಱಱ ಹೊಲಿಗೆಯ ಬಿಚ್ಚಿ
ಎಂಟಾತ್ಮ ಪರಿಗಳ ತನ್ನಿಚ್ಛೆಯೊಳ್ ನಿಲಿಸಿದ ನಿಜಸುಖಿಯ ನೋಡಾ !
ತತ್ತ್ವ ಮೂವತ್ತಾಱ ಮೀಱಿ ಅತ್ತತ್ತಪೆ ತೋರ್ಪ ಅಗಮ್ಯನ ನೋಡಾ !
ನಮ್ಮ ಗುಹೇಶ್ವರನ ಶರಣ ಅಲ್ಲಯ್ಯನ ಇರವನೊಳಕೊಂಡ
ಪರಮ ಪ್ರಸಾದಿ ಮರುಳುಶಂಕರದೇವರ ನಿಲವ
ಬಸವಣ್ಣನಿಂದ ಕಂಡೆ ನೋಡಾ ಸಿದ್ಧರಾಮಯ್ಯಾ ![೧]

ಮರುಳುಶಂಕರದೇವ ಅಂಗವನ್ನು—ದೇಹ ಪ್ರಾಣ ಕರಣೇಂದ್ರಿಯವನ್ನು—ಧರಿಸಿಕೊಂಡಿದ್ದಾನೆ. ಅಂಗವಿಡಿದಿದ್ದ ಮಾತ್ರಕ್ಕೆ 'ಅಂಗಿ' ಎಂದು ಕರೆಯಲಾಗದು ಶಂಕರದೇವನನ್ನು.

ಎನಗೆ ನಾನೇ ಜಂಗಮವಾದೆನಯ್ಯಾ !
ಎನಗೆ ನಾನೇ ಪ್ರಸಾದವಾದೆನಯ್ಯಾ !
ಎನಗೆ ನಾನೇ ಭಕ್ತನಾದೆನಯ್ಯಾ !
ರೇಕಣ್ಣಪ್ರಿಯ ನಾಗಿನಾಥನಲ್ಲಿ ಅಗುಹೋಗನಱಿಯೆನಯ್ಯಾ ನಾನು !

ಲಿಂ. ಲೀ. ವಿ. ಚಾ. ಪು. ೪೧೪, ವ. ೨೩.

೧. ಶೂ. ಸಂ. ಪು. ೧೨೨. ವ. ೨೬.

ಏಕೆಂದರೆ ಆಚಾರ ಮುಂತಾಗಿ ಮಹಾಲಿಂಗ ಕಡೆಯಾದ ಆರು ಲಿಂಗಗಳನ್ನು ಸರ್ವಾಂಗದಲ್ಲಿ ಧರಿಸಿಕೊಂಡು ಸರ್ವಾಂಗ 'ಲಿಂಗವಂತ'ವಾಗಿರುವ 'ಸರ್ವಾಂಗಲಿಂಗಿ'ಯನ್ನು ಭೂತಕಾಯ ವಾಯುಪ್ರಾಣ ಜೀವಭಾವದ 'ಅಂಗಿ' ಎಂದು ಕರೆದರೆ ಅ-ವಿವೇಕವಲ್ಲವೆ? ಮತ್ತೆ ಆತ್ಮಕ್ಕೆ ಬಿಚ್ಚಬಾರದಂತೆ ಹೊಲಿಗೆ ಹಾಕಿಕೊಂಡಿರುವ ಸ್ಥೂಲ ಸೂಕ್ಷ್ಮಕಾರಣ ಕಾಯದ ಹೃದಯಗ್ರಂಥಿಯನ್ನು ಬಿನ್ನಾಣದಿಂದ ಬಿಡಿಸಿ. ಜೀವಾತ್ಮ ಅಂತರಾತ್ಮ ಮುಂತಾದ ಎಂಟು ಆತ್ಮರು[೧] ಹರಿದಾಡುವ ಹರಿಗಳನ್ನು ತನ್ನಿಚ್ಛೆಯಂತೆ ನಿಲ್ಲಿಸಿ, ಆ ಎಂಟಕ್ಕೆ ತಾಯಿ-ತಂದೆ-ಬೇರಾದ ನಿಜಾತ್ಮನಲ್ಲಿ ನಿಜವೆ ಸುಖವಾಗಿ. ಆ ಸ್ವಯಂಭು ಸುಖವೆ ತನ್ನ ನಿಜದಿರವಾಗಿ ಇರುವ ನಿಜಸುಖ ಅಥವಾ ನಿಜಸುಖಿ ಶಂಕರದೇವ. ಮತ್ತೆ ಈ ದೇವರ ಇರವು ನಿಲವು ಎಂಥ ಎತ್ತರ! ಎಷ್ಟು ಆಳ! ಪೃಥ್ವಿ ಮೊದಲು ಸದಾಶಿವ ಕಡೆಯಾದ ಮೂವತ್ತಾರು ತತ್ತ್ವಗಳನ್ನು ತನ್ನೊಳಗೆ ಇಂಬಿಟ್ಟುಕೊಂಡು ಆ ತತ್ತ್ವಗಳ ಹೊಲದಾಚೆ, ಸೀಮೆ ಮೀರಿ, ಅತ್ತತ್ತ ಇನ್ನೂ ಅತ್ತತ್ತ, ಅತೀತ ಅ-ಗಮ್ಯವಾಗಿ ಇರುವ ಇರವು ಈ ಮರುಳನ ಇರವು. ಗೊಹೇಶ್ವರನ ಶರಣ ಅಲ್ಲಯ್ಯ, ಯಾವುದೂ ಅಲ್ಲಯ್ಯ, ಎಂದೂ ಏನೂ ಅಲ್ಲಯ್ಯ. ಈ ಅಲ್ಲಯ್ಯನ ಮತ್ತೊಂದು ಹೆಸರು ಬಚ್ಚಬರಿ. ಶೂನ್ಯ, ಶಬ್ದಕ್ಕೆ ಬಾರದ ಬಯಲು, ಹೆಸರು ದೆಸೆ ಇಲ್ಲದ ಬಯಲು. ಇಂಥ ಅಲ್ಲಯ್ಯನ ಇರವನ್ನು ಒಳಕೊಂಡು 'ಶೂನ್ಯ'ವನ್ನು ತನ್ನಿರವಿನಲ್ಲಿ ಪರಿಪೂರ್ಣವಾಗಿ ಸಂಪಾದಿಸಿಕೊಂಡಿರುವ ಮರುಳು ಈ ಶಂಕರ. ಈ ಬಯಲೇ ಪರಮಪ್ರಸಾದ, ಈ ದೇವನೇ ಪರಮಪ್ರಸಾದಿ. ಪರಮ ಪ್ರಸನ್ನವಾಗಿ ಇರುವ ಈ ಬಯಲನ್ನು. ಈ ಬಯಲುಮೂರ್ತಿಯನ್ನು ಬಸವಣ್ಣನಿಂದ ಕಂಡೆ ಸಿದ್ಧರಾಮಯ್ಯಾ! ಪ್ರಭುವಿನ ಮರುಳುಶಂಕರನನ್ನು ಮತ್ತೊಮ್ಮೆ ನೀವೇ ನಿದಿಧ್ಯಾಸಮಾಡಿ ನೋಡಿ.

ತಮ್ಮ ಅನುಭವಕ್ಕೆ ಗೋಚರವಾದ ಮರುಳುಶಂಕರದೇವರ ಶರಣ–ಸ್ಥಲವನ್ನು ಸಿದ್ಧರಾಮಯ್ಯದೇವರು ಹೀಗೆ ಬಿನ್ನಯಿಸುತ್ತಾರೆ:

> ಆದಿಯ ಮೂರ್ತಿಯಲ್ಲ. ಅನಾದಿಯ ಬಚ್ಚಬರಿಯ ಶೂನ್ಯನಲ್ಲ.
> ಅಂಗವಿದ್ದು ಅಂಗವಿಲ್ಲ.
> ಸಂಗಘನಪದದಲ್ಲಿ ವೇದ್ಯವಾದ ಮರುಳುಶಂಕರದೇವರ ನಿಲವ
> ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ![೨]

ಕಾಲದ ಕಲ್ಪಿತದಲ್ಲಿ ಇದೇ ಕಾಲಚಕ್ರದ ಓಂಪ್ರಥಮ ಎಂಬ 'ಆದಿ'ಯಲ್ಲಿ ಹುಟ್ಟಿ ಮೂರ್ತ ಪ್ರಪಂಚದಲ್ಲಿ ಮೂರ್ತಿಯಾಗಿ ನಿಂದ ಜೀವಮೂರ್ತಿಯಲ್ಲ ಮರುಳು ಶಂಕರ. ಅಥವಾ ಕಾಲಚಕ್ರ ತಿರುಗಹತ್ತದ ಮುನ್ನ, ಕಾಲವೆಂಬ ಕಲ್ಪಿತ ಚಕ್ರವೇ ಹುಟ್ಟದ ಮುನ್ನ ಏನೂ ಏನೂ ಇಲ್ಲದ ಬಚ್ಚಬರಿಯ ಶೂನ್ಯದಂತೆ ಅಲ್ಲ ಈ ಶಂಕರದೇವ. ಮೇಲೆ ಅಂಗವಿದೆ,

---

೧. ಜೀವಾತ್ಮ ಅಂತರಾತ್ಮ ಪರಮಾತ್ಮ ನಿರ್ಮಲಾತ್ಮ ಶುದ್ಧಾತ್ಮ ಜ್ಞಾನಾತ್ಮ ಮಹಾತ್ಮ ಭೂತಾತ್ಮ. ಇವರ ವಿವರ ಸ್ವರೂಪಕ್ಕೆ ವಚನಶಾಸ್ತ್ರಸಾರ, ಭಾಗ ೨, ಪು. ೯೮ ನೋಡಿ.

೨. ಶೂ. ಸಂ. ಪು. ೧೨೨, ವ. ೨೮.

ಒಳಗು ನೋಡಿದರೆ ಅಂಗ ಇಲ್ಲ. ಅಂಗದ ಗವಲು ಏನೂ ಉಳಿದಿಲ್ಲ. ಇದು ಇಲ್ಲದ ಮಹಿಮ ಮರುಳುಶಂಕರ. ಈತನ ನಿರಂಗ ಅಂಗ ಸಂಗವಾಗಿದೆ ಮಹಾಘನಲಿಂಗದ ನಿತ್ಯ ನಿಜಪದವಲ್ಲಿ. ಅಂಗವಿದ್ದು ಅಂಗಸಂಗಿಯಲ್ಲ, ಲಿಂಗಸಂಗಿ. ತನ್ನನ್ನು ತನ್ನ ಘನ ಸ್ಥಲಕ್ಕೆ ನೈವೇದ್ಯಮಾಡಿಕೊಂಡು ಇರುವ ಮರುಳುಶಂಕರದೇವರ ಈ ನಿಲವನ್ನು ಪ್ರಭು ಬಸವಣ್ಣನವರಿಂದ ಕಂಡು ಬದುಕಿದೆ ಎಂದು ಸಿದ್ಧನ ಕೃತಾರ್ಥಭಾವ.[೧]

ಇದೋ ಇಲ್ಲಿ ಹಡಪದಪ್ಪಣ್ಣನವರು ಮುಂದೆ ಬಂದು ಮರುಳುಶಂಕರದೇವರ 'ಪರಮಪ್ರಸಾದಿ'ಯ ನಿಲವ ಕಂಡು ಬದುಕಿದ ಸಂಗತಿಯನ್ನು ವರ್ಣಿಸುತ್ತಾರೆ ನೋಡಿ;

ಯುಗಜುಗಂಗಳ ಅಳಿವುಳಿವನಱಿಯದೆ,
ಹಗಲಿರುಳೆಂಬವ ನೆನಹಿನಲ್ಲೂ ಅಱಿಯದೆ,
ಲಿಂಗವಲ್ಲಿ ಪರವಶನಾಗಿರ್ದ ಪರಮ ಪರಿಣಾಮಿಯನೇನೆಂದುಪಮಿಸುವೆನಯ್ಯಾ?
ಆಹಾ, ಎನ್ನ ಮುಕ್ತಿಯ ಮುಕುರದ ಇರವ ನೋಡಾ !
ಆಹಾ, ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ !
ಆಹಾ, ಅಷ್ಟಮದಂಗಳ ಹಂಗನಳಿದು,
ನಿಷ್ಠೆ ನಿಬ್ಬೆಱಗಾಗಿ ನಿಂದ ಚಿತ್‌ಸುಖಿಯ ನೋಡಾ !
ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ,
ಪರಮಪ್ರಸಾದಿ ಮರುಳುಶಂಕರದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು ! ಬದುಕಿದೆನು ! ![೨]

ಹಗಲು ರಾತ್ರಿ ಇಲ್ಲ. ಯುಗಜುಗಗಳ ಆಗುಹೋಗು ಇಲ್ಲ. 'ಸಂಪಗೆಯ ಕಂಪುಂಡ ಭ್ರಮರ'ನಂತೆ ತನ್ನ ನಿಜವಾದ ಲಿಂಗದಲ್ಲಿ ಪರವಶವಾಗಿ, ಪರಮಾನಂದದಲ್ಲಿ ಎಚ್ಚತ್ತು ಮಲಗಿರುವ 'ಪರಮಪ್ರಸಾದಿ'ಯ ಮಹಾಂತ ನಿಲವನ್ನು ಕಂಡು ಬದುಕಿದ ಹಡಪದಪ್ಪಣ್ಣನವರ ಅನುಭವಕ್ಕೆ ಟೀಕು ಟಿಪ್ಪಣೆ ಬೇಡ. ಅಲ್ಲವೇ?

---

೧. ಈ ಸಂದರ್ಭದಲ್ಲಿ ಚೆನ್ನಬಸವಣ್ಣನವರ ಒಂದು ವಚನವನ್ನು ನೆನೆಸಿಕೊಳ್ಳಬಹುದು:

ಶರಣ ಮೂರ್ತನಲ್ಲ, ಅಮೂರ್ತನಲ್ಲ.
ಲಿಂಗದಲ್ಲಿ ಪ್ರಾಣ ಸಂಚಿತ. ಪ್ರಾಣದಲ್ಲಿ ಪ್ರಸಾದ ಸಂಹರಣೆ.
ಪ್ರಸಾದದಲ್ಲಿ ಕಾಯಾಶ್ರಿತನು.
ಲೋಕ ಲೌಕಿಕ ಪ್ರಕಾರದುದಯನಲ್ಲ, ಕೂಡಲಚೆನ್ನಸಂಗಾ, ನಿಮ್ಮ ಶರಣ.

ಸಂಗ್ರಹಿಸಿದ ಈ ವಚನದ ಟೀಕನ್ನೂ ನೋಡಿ:

ಸಾಕಾರವಾಗಿಪ್ಪ ಬದ್ಧಜೀವನಲ್ಲ ಶರಣ. ಏನೂ ಇಲ್ಲದ ನಿರಾಕಾರವಾಗಿಪ್ಪ ಶೂನ್ಯನಲ್ಲ ಶರಣ. ಅಖಂಡ ಚೈತನ್ಯವಾಗಿಪ್ಪ ಆ ಲಿಂಗದ ತದಂಶವೇ ಪ್ರಾಣವಾಗಿ ಉದಯಿಸಿದ ಶರಣ. ಅಂತು ಶಿವಾಂಶಿಕನಾದ ಶರಣನ ಪ್ರಾಣವು ತನ್ನ ನಿಜವಪ್ಪ ಲಿಂಗಸ್ವರೂಪವ ಬಿಡದೆ ಧರಿಸಿಕೊಂಡು ಶರಣರೂಪಾಯಿತ್ತು. ಅಂತು ಶರಣ ತನ್ನ ಲಿಂಗಸ್ವರೂಪವ ಬಿಡದೆ ಧರಿಸಿಕೊಂಡು ದೇವನಾಶ್ರಯಿಸಿ ತನ್ನ ತಾನರ್ಚಿಸಿಕೊಳುತ ಲಿಂಗವೆಯಾಗಿಪ್ಪ. ಅಂತು ಶಿವನ ಸಂಕಲ್ಪದಿಂದಾದ ಜನಮತ್ತತ್ರಯಂತಲ್ಲ ಶರಣನುತ್ಪತ್ತಿ. ಲಿಂ.ಲೀ.ವಿ.ಟೀ. ಪು. ೫೦೫, ವ. ೪.

೨. ಶಿ.ಶ. ಸಂ. ಪು. ೧೨೯, ವ. ೩೦.

ಮಡಿವಾಳ ಮಾಚಯ್ಯನವರು ಮರುಳುಶರಣನ ನಿಜದಿರವು ತಾವು ಕಂಡಂತೆ ಇನ್ನೂ ಹೇಗಿದೆ ಎಂಬುದನ್ನು ತಿಳಿಸುತ್ತಾರೆ, ತಿಳಿದು ನೋಡಿ:

ಮೂಱಿನೊಳಕೊಂಡ, ಆಱಿ ಮೀಱಿ ನಿಂದ ಘನವನೇನೆಂಬೆನಯ್ಯಾ?
ನುಡಿವರೆ ವಾಚಾತೀತ. ನೋಡುವರೆ ಕಂಗಳೆರಡೆಯ್ದುವಯ್ಯಾ!
ಮಹದ ಬೆಳಗೆ ತಾನಾಗಿ ನಿಂದ ಮರುಳುಶಂಕರದೇವರ ನಿಲವ
ಬಸವಣ್ಣನಿಂದ ಕಂಡು ಬದುಕಿದೆನು ಕಾಣಾ ಕಲಿದೇವರದೇವಾ.[೧]

ಮೂರು ಮತ್ತು ಆರು ಎಂದರೆ ಮಾಚಯ್ಯನವರ ಇಂಗಿತಾರ್ಥವೇನು? ಇಂಥ ಬೆಡಗಿನಲ್ಲಿ ಒಂದಲ್ಲ ಎರಡಲ್ಲ ಹಲವಾರು ಪದರುಗಳು ಧ್ವನಿಸಬಹುದು. ಅರ್ಥಮಾಡಿ ನೋಡುವ ಬುದ್ಧಿಗಳು ತಂತಮ್ಮ ಶಕ್ತಿಗನುಸಾರವಾಗಿ ತಮಗೆ ತೋರುವ, ತಮ್ಮ ಕಿವಿ ಕೇಳುವ ಪದರುಗಳನ್ನು ಮೇಲೆತ್ತಿ ಹಿಡಿದು ತೋರಿಸಬಹುದು. ಹೀಗೆ ಮಾಡಿದ ಕ್ಷಣ ಬೆಡಗಿನ ಬಿನ್ನಾಣವೆಲ್ಲ ಬಿಚ್ಚಿಹೋಯ್ತೆಂದು ಯಾರೂ ಹೊರೆಯೇರಬೇಕಿಲ್ಲ. ಒಬ್ಬರಿಗೆ ಒಂದು ಪದರು ಕೇಳಿದರೆ ಮತ್ತೊಬ್ಬರಿಗೆ ಮತ್ತೊಂದು ಕೇಳಬಹುದು. ಇನ್ನೂ ಒಬ್ಬರಿಗೆ ಇನ್ನೂ ಒಂದು ಇನ್ನೂ ಎರಡು ಅರ್ಥ ಪ್ರತ್ಯಕ್ಷವಾಗಬಹುದು. ಹೀಗೆ ಒಂದು ಶಬ್ದ ವಾಕ್ಯದಲ್ಲಿ ಬೇರೆ ಬೇರೆ ಅರ್ಥ ಪ್ರಕಟವಾದರೆ ಆ ಶಬ್ದ ವಾಕ್ಯಕ್ಕೆ ಯಾವ ಕೊರತೆಯೂ ಅಲ್ಲ. ಒಂದು ಮಾತಿನಲ್ಲಿ ಅನೇಕ ಧ್ವನಿಸಿದರೆ ಆ ಮಾತು ಗೌರವಪೂರ್ಣ. ಮೂರು ಎಂದರೆ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂದು ನಾನು ಹೇಳಿದರೆ ಇಷ್ಟ ಪ್ರಾಣ ಭಾವ ಲಿಂಗವೆಂದು ನೀವು ಹೇಳಬಹುದು. ಆರು ಎಂದರೆ ಷಟ್‌ಸ್ಥಲಗಳು ಎಂದು ನಾನು ತಿಳಿದುಕೊಂಡರೆ ಕಾಮಾದಿ ಅರಿಷಡ್ವರ್ಗ, ಷಡ್ವಿಕಾರ, ಷಡ್ಭ್ರಮೆ, ಷಡೂರ್ಮಿ ಎಂದು ಮುಂತಾಗಿ ನೀವು ತಿಳಿದುಕೊಳ್ಳಬಹುದು. ಮತ್ತೆ ಹೆಚ್ಚು ಬಲ್ಲವರು ಇನ್ನೂ ಹೆಚ್ಚಿನ ಅರ್ಥ ಕೊಡಬಹುದು. ಈ ಎಲ್ಲರ ಅರ್ಥ ಸೇರಿಯೂ ಮಾಚಯ್ಯನವರ ಮರ್ಮ ಬೇರೆ ಇರಬಹುದು, ಎಲ್ಲವನ್ನು ಗರ್ಭೀಕರಿಸಿಕೊಂಡು ಮೀರಿ ನಿಲ್ಲಬಹುದು. ನಿಂದರೆ ನಿಲ್ಲಲಿ. ಎಡವುತ್ತ ಮುಗ್ಗರಿಸುತ್ತಾದರೂ ನಾವು ಮುಂದೆ ನಡೆಯಬೇಕಲ್ಲವೆ? ಇದು ಅಡ್ಡ ಮಾತು. ಕ್ಷಮಿಸಿ.

ಪ್ರಸಾದತ್ರಯವನ್ನುಂಡು ಪರಮಪ್ರಸನ್ನವಾಗಿ, ಪರಮಪ್ರಸಾದಿಯಾಗಿ, ಆರು ಸ್ಥಲವನ್ನು ಮೀರಿ ನಿಸ್ಸ್ಥಲದಲ್ಲಿ ನಿಂದ ಮಹಾಘನ ಮರುಳುಶಂಕರದೇವ. ಅನಂತ ಸತ್ಯ ಜ್ಞಾನ ಆನಂದವನ್ನು ಮುಕ್ಕುಳಿಸಿರುವ ಅಖಂಡ ಪರಿಪೂರ್ಣವಾದ 'ಮಹಾಬೆಳಗೆ' ತಾನಾಗಿ ನಿಂದಿರುವ ಮಹಾಘನ ಪ್ರಸನ್ನವಾದ ಈ ಮೂರ್ತಿ ನುಡಿಗೆ ನಿಲುಕುವ ಮೂರ್ತಿಯಲ್ಲ, ಎರಡು ಕಣ್ಣು ಅಥವಾ ದ್ವೈತಜ್ಞಾನದೃಷ್ಟಿ ಮುಟ್ಟಿ ಕಾಣುವ ಮೂರ್ತಿಯಲ್ಲ. ಮಾಚಯ್ಯನವರು ಹೇಳುವ ಮರುಳುಶಂಕರದೇವ ಮರುಳಲ್ಲ, ಶಂಕರನಲ್ಲ, ದೇವನಲ್ಲ. ಆತ ಸಾಕಾರ ಲಿಂಗ, ಶರಣ. ಶರಣನ ಈ ನಿಲವನ್ನು ಬಸವಣ್ಣನಿಂದ ಕಂಡು ಮೃತ್ಯುವಿನ ಸೀಮೆಗಲ್ಲಿನಾಚೆ ನಿತ್ಯ ಇರವಿನಲ್ಲಿ ಬದುಕಿದೆ ಎಂದು ನಲಿಯುತ್ತಾನೆ ಮಾಚಯ್ಯ.

---

೧. ಶೂ. ಸಂ. ಪು. ೧೫೩, ವ. ೩೧.

ಕೊನೆಯದಾಗಿ ಮಹಾಲಿಂಗ ತ್ರಿಪುರಾಂತಕನ ಶರಣ ಕಿನ್ನರ ಬ್ರಹ್ಮಯ್ಯ ಕಂಡ ಮರುಳುಶಂಕರದೇವರ ನಿಜಮೂರ್ತಿಯನ್ನು ನೋಡಿ:

ಆಕಾರವೆಂಬೆನೆ? ನಿರಾಕಾರವಾಗಿದೆ.
ನಿರಾಕಾರವೆಂಬೆನೆ? ಅತ್ತತ್ತ ತೋಱುತ್ತದೆ.
ತನ್ನನಳಿದು ನಿಜ ಉಳಿದ ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು
ಒಳಕೊಂಡ ಮರುಳುಶಂಕರದೇವರ ಮೂರ್ತಿಯ
ನಿನ್ನಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ ![೧]

ಮರುಳುಶಂಕರನ ಆಕಾರ ಮಾನವಾಕಾರ. ಆದರೆ ಸಾಕಾರದ ಮರೆಯ ಸುಸೂಕ್ಷ್ಮಾಂತರಂಗ ಯಾವ ಆಕಾರವಲ್ಲದ ನಿರಾಕಾರ.. ಹೀಗೆಂದಾಕ್ಷಣ ಬಚ್ಚಬರಿಯ ನಿರಾಕಾರ ಅಲ್ಲ ಈ ಶರಣ. ಬಯಲು ಬ್ರಹ್ಮಾಂಡವನ್ನು ನುಂಗಿಕೊಂಡು ಇರುವಂತೆ ನಿರಾಕಾರ ಪರಬ್ರಹ್ಮ ಚಿದಾಕಾರ, ಚಿತ್‌ಸ್ವರೂಪಕವಾದ ಶಂಕರತರಂಗವನ್ನು ಒಳಕೊಂಡು, ನಿರಾಕಾರ ಸಾಕಾರದೊಡನೆ ಸಮರಸವಾಗಿ ದಿಗ್‌ದೆಸೆಗಳಾಚೆ ಅತೀತ 'ಶರಣಲಿಂಗ' ತೋರುತ್ತಿದೆ. 'ತನ್ನನಳಿದು...'–ಬಸವಣ್ಣನವರು ಮುಂದಿನ ವಚನದಲ್ಲಿ ಹೇಳುವಂತೆ '...ಅಂಗ ಮನ ಭಾವ ಕರಣಂಗಳ' ಮಾದುನಿಂತರೆ ಉಳಿವುದೇನು? ದೇಹ ಪ್ರಾಣ ಮನ ಭಾವ ಕರಣೇಂದ್ರಿಯಗಳನ್ನೆಲ್ಲ ಕಳೆದು ಬತ್ತಲೆಯಾದರೆ ಉಳಿವುದೇನು? ಅದೇ ನಿಜ, ಅದೇ ಮಹಾಲಿಂಗ ತ್ರಿಪುರಾಂತಕ. ಈ ಬತ್ತಲೆಯ ನಿಲವೇ ಮಹಾಲಿಂಗದ ನಿಲವು. ಈ ನಿಜದ ನಿಲವನ್ನು ಕಂಡು ಆ ನಿಲವನ್ನು ಒಳಕೊಂಡ ನಿರಾಳದ ನಿಲವೇ ಮರುಳುಶಂಕರ. ಬಸವಣ್ಣಾ. ಈ ನಿರಾಳವನ್ನು ನಿನ್ನಿಂದ ಕಂಡೆ, ಕಂಡು ಬದುಕಿದೆ ಬದುಕಿದೆ ಎಂದು ಕಿನ್ನರ ಬ್ರಹ್ಮಯ್ಯ ತನ್ನ ವಚನಕಿನ್ನರಿಯಲ್ಲಿ ನಿರಾಳಬ್ರಹ್ಮವನ್ನು ನುಡಿಸಿದ್ದಾನೆ.

ಮರುಳುಶಂಕರಶರಣನ ನೆಲೆ ಶರಣನ ನಿಲವು. ಆತನ ನಿಜದಿರವು ಆತನ ಪರಮ ಪ್ರಸಾದವಾದ ನಿರಾಳದಿರವು ಇನ್ನೂ ಮುಗಿದಿಲ್ಲ. ಮರುಳುಶಂಕರದೇವ ತನಗೆ ಶಾಂತ ಚೆನ್ನಮಲ್ಲಿಕಾರ್ಜುನನೆ ಆದ ಪ್ರಸಾದಜೀವನವು ಸಂಪಾದನೆಯಾಗುವಲ್ಲಿ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಂತಾದ ಶರಣರ ಕೃಪಾಪ್ರಸಾದ ಮೂಲಕಾರಣ ಎಂದು ಒಬ್ಬೊಬ್ಬರನ್ನು ಬಿಡಿಬಿಡಿಯಾಗಿ. ಎಲ್ಲರನ್ನು ಇಡಿಯಾಗಿ ಕೊಂಡಾಡಿ ಕೊಸರುತ್ತಾನೆ. ತನ್ನ ಇರವಿನಲ್ಲಿ ಎಲ್ಲರನ್ನು ಒರಮಾಡಿಕೊಂಡು, ಬಸವಾದಿ ಪ್ರಮಥರ ಕರುಣ ಪ್ರಸಾದದಿಂದ ತಾನು ಪ್ರಸಾದಿಯಾಗಿ ಬದುಕಿದ ಪರಿಯನ್ನು ಹಾಡುತ್ತಾನೆ. ಪ್ರಸನ್ನ ಗಂಭೀರವಾಗಿ ಕೇಳಿ:

---

೧. ಶೂ. ಸಂ. ಪು. ೧೨೪, ವ. ೩೩.
ಈ ಸಂದರ್ಭದಲ್ಲಿ ಪ್ರಭುದೇವರು ಅನಿಮಿಷಯ್ಯನವರನ್ನು ಕಂಡು ನುಡಿದ 'ಸ್ಫಟಿಕದ ಘಟದಂತೆ ಒಳಹೊರಗಿಲ್ಲ ನೋಡಾ! ವಿಗಡಚರಿತ್ರಕ್ಕೆ ಬೆಱಗಾದೆನು. ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು. ಹೊದ್ದುವರೆ ಸಮೀಪ. ಹತ್ತೆ ಸಾರುವರತ್ತತ್ತ ತೋಱುತ್ತದೆ. ಆಕಾರವ ನಿರಾಕಾರ ನುಂಗಿ ಬಯಲು ಸಮಾಧಿಯಲ್ಲಿ ಸಿಕ್ಕಿತ್ತು ನೋಡಾ!...' (ಶೂ. ಸಂ. ಪು. ೧೨. ವ. ೩೪.) – ಈ ಅನುಭವವನ್ನು ಹೋಲಿಸಿ ನೋಡಿ.

ಎನ್ನ ಜ್ಞಾನಾತ್ಮನ ಚೇತನನಯ್ಯಾ ಪ್ರಭುದೇವರು.
ಎನ್ನ ಪರಮಾತ್ಮನ ಚೇತನನಯ್ಯಾ ಸಿದ್ಧರಾಮಯ್ಯದೇವರು.
ಎನ್ನ ಚಿನ್ಮಯಾತ್ಮನ ಚೇತನನಯ್ಯಾ ಸಂಗನಬಸವಣ್ಣನು.
ಎನ್ನ ನಿರ್ಮಳಾತ್ಮನ ಚೇತನನಯ್ಯಾ ಷಡುಸ್ಥಲಬ್ರಹ್ಮಿ ಚೆನ್ನಬಸವಣ್ಣನು.
ಎನ್ನ ಮಹಾತ್ಮನ ಚೇತನನಯ್ಯಾ ಬಸವಣ್ಣನ ನಿಜಸುಖಿ ಅಪ್ಪಣ್ಣನು.
ಎನ್ನ ಜೀವಾತ್ಮನ ಚೇತನನಯ್ಯಾ ಮಡಿವಾಳಮಾಚಯ್ಯನು.
ಎನ್ನಅರಿವಿನ ಚೇತನಾತ್ಮಕನಯ್ಯಾ ಕಿನ್ನರ ಬ್ರಹ್ಮಯ್ಯನು.
ಇಂತಪ್ಪ ಪ್ರಮಥರ ಕರುಣದಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ.
ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯ, ಬದುಕಿದೆನು ಕಾಣಾ !
ನಿಮ್ಮ ಧರ್ಮ, ನಿಮ್ಮ ಧರ್ಮ ![೧]

ಒಬ್ಬನೆ ಆತ್ಮ ವ್ಯವಹಾರ ಭೇದದಿಂದ ಎಂಟು ಅಥವಾ ಒಂಬತ್ತು ಪ್ರಕಾರವಾಗಿ ರೂಪುಗೊಂಡು ಲೀಲೆಯಾಡುತ್ತಿರುವುದು. ಹೀಗೆ ಸಕಲ ವಿಧವಾಗಿರುವ ತನ್ನ ಜೀವಾತ್ಮ ಪರಮಾತ್ಮ ಮುಂತಾದವರ ವ್ಯವಹಾರಲೀಲೆಗೆ ಮೂಲ ಚೈತನ್ಯಸ್ವರೂಪರು ಬಸವಣ್ಣ ಚೆನ್ನಬಸವಣ್ಣ ಪ್ರಭು ಸಿದ್ಧರಾಮ ಮುಂತಾದ ಶರಣರೆಂದು ಹೇಳಿ ತನ್ನ ವಿವಿಧಾತ್ಮರ ಅಸ್ತಿತ್ವಕ್ಕೆ. ವ್ಯವಹರಿಸುವುದಕ್ಕೆ ಶರಣರೆ ತಾಯಿಬೇರೆಂದು ಒಪ್ಪಿಕೊಂಡು. ಅವರೆಲ್ಲರ ಕರುಣಾಮೃತವೆ ತನ್ನನ್ನು ಮೃತ್ಯುಲೋಕದಿಂದ 'ಅಮೃತ'ದ ಸೀಮೆಯಲ್ಲಿ ಬದುಕಿಸಿದೆ ಎಂದು ಎಲ್ಲರನ್ನು ಹಾಡಿ ಹರಸುತ್ತಾನೆ ಮರುಳುಶಂಕರ. ಇದೂ ಅಲ್ಲದೆ ಅವರ ಕಾರುಣ್ಯಪ್ರಸಾದದಿಂದ 'ನಾನು' ಎತ್ತ ಹೋದುದನರಿಯದೆ ಕೆಟ್ಟು ಬಟ್ಟಬಯಲಾಗಿ ನಿಂದ ಘನವನ್ನು ಬಸವಣ್ಣ ಮುಂತಾದ ಪ್ರಮಥರ ಮುಂದೆ ಬಿಚ್ಚಿ ಬಿಚ್ಚಿ ಇರಿಸುತ್ತಾನೆ. ಇದೋ ಇಲ್ಲಿ ಮರುಳನ ಸ್ವಾನುಭಾವದ ಒಳದಿರುಳು ಆತನ ಎರಡು ವಚನಗಳಿಂದ ಹೊರಬೀಳುತ್ತಿದೆ. ಅವಲೋಕಿಸಿ:

೧ ಸರ್ಪನ ಹೆಡೆಯ ಮೇಲಿಪ್ಪ ಎಪ್ಪತ್ತೇಳು ಲೋಕವ ಕಂಡೆ.
ಎಪ್ಪತ್ತೇಳು ಲೋಕದೊಳಗಿಪ್ಪ ಎಪ್ಪತ್ತೇಳು ಕರ್ಪೂರದ ಗಿರಿಯ ಕಂಡೆ.
ಆ ಎಪ್ಪತ್ತೇಳು ಕರ್ಪೂರದ ಗಿರಿಯ ಮೇಲಿಪ್ಪ
ಎಪ್ಪತ್ತೇಳು ಉರಿಯ ಕಂಭವ ಕಂಡೆ.
ಎಪ್ಪತ್ತೇಳು ಉರಿಯ ಕಂಭದ ಮೇಲಿಪ್ಪ

೧. ಶೂ. ಸಂ. ಪು. ೧೨೪-೨೫. ವ. ೩೫.
ಇಲ್ಲಿ ಹೇಳಿರುವ ೧. ಜ್ಞಾನಾತ್ಮ ೨. ಪರಮಾತ್ಮ ೩. ಚಿನ್ಮಯಾತ್ಮ ೪. ನಿರ್ಮಳಾತ್ಮ ೫. ಮಹಾತ್ಮ ೬. ಜೀವಾತ್ಮ ೭. ಅರಿವಿನ ಚೇತನಾತ್ಮ – ಇವರ ವಿಷಯವಾಗಿ. ಮತ್ತು ಹಿಂದೆ ೨೬ನೆಯ ವಚನದಲ್ಲಿ ಬಂದಿರುವ ಎಂಟಾತ್ಮರ ವಿವರಣೆಗಾಗಿ ವಚನಶಾಸ್ತ್ರಸಾರ. ಭಾ. ೨. ಪು. ೯೮ ನೋಡಬಹುದು. ಅದಲ್ಲದೆ ಇದೇ ವ.ಶಾ.ಸಾ.ದ ೧೮೪-೫ ಪುಟಗಳಲ್ಲಿ ತೋರಿಪ ೧. ಜೀವಾತ್ಮ ೨. ಅಂತರಾತ್ಮ ೩. ಪರಮಾತ್ಮ ೪. ನಿರ್ಮಳಾತ್ಮ ೫. ಶುದ್ಧಾತ್ಮ ೬. ಜ್ಞಾನಾತ್ಮ ೭. ಮಹಾತ್ಮ ೮. ದಿವ್ಯಾತ್ಮ ೯. ಚಿನ್ಮಯಾತ್ಮ–ಇವರ ವಿವರಗಳನ್ನೂ ನೋಡಿ.

ಎಪ್ಪತ್ತೇಳು ಅರಗಿನ ಪುತ್ಥಳಿಯ ಕಂಡೆ.
ಆ ಎಪ್ಪತ್ತೇಳು ಅರಗಿನ ಪುತ್ಥಳಿ ಕರಗಿ ಹೋದವು.
ಎಪ್ಪತ್ತೇಳು ಕರ್ಪುರದ ಗಿರಿ ಉರಿದು ಹೋದವು.
ಎಪ್ಪತ್ತೇಳು ಲೋಕ ಹಾಳಾದವು.
ಆ ಸರ್ಪ ಬೆಂದು ಸತ್ತು ಹೋಯಿತ್ತು.
ಇನ್ನು ನಿಷ್ಪತ್ತಿ ನಿರಾಳವೆಂಬ ನಿಜವೊಳಕೊಂಡ ಬಳಿಕ
ನಾನೆತ್ತ ಹೋದೆನೆಂದಱಿಯೆನಯ್ಯಾ !
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಸರ್ಪನ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ?
ನಿಮ್ಮ ಧರ್ಮ, ನಿಮ್ಮ ಧರ್ಮ ![೧]

೨ ಸಂಸಾರವೆಂಬ ಸಾಗರವ ದಾಂಟುವರೆ ಅಱುಹೆಂಬ ಹಱಿಗೋಲನಿಕ್ಕಿ,
ಜ್ಞಾನವೆಂಬ ಅಂಬಿಗ ಈ ಹಱಿಗೋಲೊಳಗೆ ಕುಳ್ಳಿರ್ದು,
ಸುಜ್ಞಾನವೆಂಬ ಸಟ್ಟುಗವ ಪಿಡಿದು, ಮಹಾಜ್ಞಾನವೆಂಬ ಘಾತಗಳೆಯಂ ಪಿಡಿದು
ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ,
ನಾ ನಿನ್ನ ಹಾಯಿಸಿಕೊಟ್ಟೇನೆಂದನು.
ನಾನು ನಿನ್ನ ನಂಬಿ ಹಱಿಗೋಲನೇಱಿದೆನು ಕಾಣಾ ಅಂಬಿಗರಣ್ಣಾ.
ಇಂದು ನಾನು ಹಱಿಗೋಲಲ್ಲಿ ಕುಳ್ಳಿರ್ದು ನಡುಹೊಳೆಯಲ್ಲಿ ಹೋಗಲಿಕೆ
ಕಾಮವೆಂಬ ಕೊರಡು ಅಡ್ಡಬಿದ್ದಿತ್ತು.
ಕ್ರೋಧವೆಂಬ ಸುಳುಹಿನೊಳಗೆ ಸಿಕ್ಕಿತ್ತು.
ಅಹಂಕಾರವೆಂಬ ಮೀನು ಬಂದು ನಿಂದಿತ್ತು.
ಮಾಯವೆಂಬ ಮೊಸಳೆ ಬಾಯ ಬಿಡುತ್ತಿದ್ದಿತ್ತು.
ಮೋಹವೆಂಬ ನೊರೆತೆರೆ ಹೆಚ್ಚಿ ಬರುತ್ತಿದ್ದಿತ್ತು.
ಲೋಭವೆಂಬ ಕಡಲು ಎಳೆದೊಯಿವುತ್ತಿದ್ದಿತ್ತು.
ಮದವೆಂಬ ಮರಹು ನೂಕುತ್ತಿದ್ದಿತ್ತು.
ಇವೆಲ್ಲವನೂ ಪರಿಹರಿಸಿ ಎನ್ನ ಹೊಳೆಯ ದಾಂಟಿಸಿದನು ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದರೆ
ಕೂಲಿಯ ಕೊಡಲೇನು ಇಲ್ಲಾ ಎಂದರೆ, ಕೈಸೆಱೆಯಾಗಿ ಎನ್ನನೆಳೆದೊಯ್ದನಯ್ಯಾ !

---

೧. ಶೂ. ಸಂ. ಪು. ೧೨೫, ವ. ೩೬.
ಇಲ್ಲಿ ಪ್ರಭುದೇವರ ಮಂತ್ರಗೋಪ್ಯದ ಪದವನ್ನು ನೋಡಿ:
ಸರ್ಪನ ಹೆಡೆಯ ಮೇಲುತ್ಪತ್ತಿ ಸಕಲಲೋಕ ।
ಇರ್ಪ್ಪೈದು (ಇರ್ಪತ್ತೈದು) ಗ್ರಾಮದಲಿ ತೊಳಗಿ ಬೆಳಗಿ ॥
ಉಪ್ಪರಿಗೆಯುರಿಯ ನೆಲೆ ಚಪ್ಪರವ ಮೆಟ್ಟಿ ನಿಲೆ ।
ತಪ್ಪದದು ಪರಕೆ ಪರವಪ್ಪ ಘನವು ॥ ಪ್ರ. ಪ. ಮಂ. ಪದ್ಯ. ೫.

ಅಱುವೆಯ ಕೊಟ್ಟ ಕೂಲಿಗೆ ಕಱುವ ಕಾಯಿಸಿಕೊಂಡನಯ್ಯಾ !
ಅಱಿಯದೆ ಹಱುಗೋಲನೇಱಿ ತೊಱೆಯ ದಾಂಟಿದ
ಕೂಲಿಗೆ ಕಱುವ ಕಾದೆ ಕಾಣಾ !
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ನಂಬಿ ನಾನು ಕೆಟ್ಟು ಬಟ್ಟಬಯಲಾಗಿ ನಿಂದೆನಯ್ಯಾ.
ನಿಮ್ಮ ಧರ್ಮ, ನಿಮ್ಮ ಧರ್ಮ ![೧]

ಮೊದಲನೆಯ ವಚನ ಬೆಡಗಿನ ವಚನ. .ಸಾಮಾನ್ಯವಾಗಿ ಬೆಡಗಿನ ಪ್ರಕ್ರಿಯೆ ಸರ್ಪ ಎಂದರೆ 'ಕುಂಡಲಿನಿ' ಇಲ್ಲವೆ ಮನಸ್ಸು ಎಂದು ಅರ್ಥ[೨]. ಈ ಸರ್ಪದ ಹೆಡೆಯ ಮೇಲೆ ಎಪ್ಪತ್ತೇಳು ಲೋಕ, ಅಲ್ಲಿ ಎಪ್ಪತ್ತೇಳು ಕರ್ಪುರದ ಗಿರಿ, ಮೇಲೆ ಎಪ್ಪತ್ತೇಳು ಉರಿಯ ಕಂಭ, ಮೇಲೆ ಎಪ್ಪತ್ತೇಳು ಅರಗಿನ ಪುತ್ಥಳಿಗಳನ್ನು ಮರುಳುಶಂಕರ ತನ್ನ ಅನುಭವದಲ್ಲಿ ಕಂಡುದು, ಮತ್ತೆ ಪುತ್ಥಳಿಗಳು ಕರಗಿಹೋದುದು, ಕರ್ಪುರದ ಗಿರಿ ಉರಿದುಹೋದುದು ಲೋಕಗಳೆಲ್ಲ ಹಾಳಾಗಿ ಹೆಡೆಯ ಸರ್ಪ ಸತ್ತುಹೋದುದು–ಇದೆಲ್ಲ ಶಿವಯೋಗಿಯ ಅನುಭವ. ಅಧೋಮುಖವಾದ ಕುಂಡಲಿನಿ ಊರ್ಧ್ವಮುಖವಾಗಿ ಈ ಎಲ್ಲ ಅನುಭವ ನಿಜಾಂತರಂಗದಲ್ಲಿ ಪ್ರತ್ಯಗ್ಗೋಚರವಾಗಿ ಶರಣ ಮುಟ್ಟುವ ಕೊನೆಯ ಸ್ಥಲವೆಂದರೆ '...ನಿಷ್ಪತ್ತಿ ನಿರಾಳವೆಂಬ ನಿಜವೊಳಕೊಂಡ ಬಳಿಕ ನಾನೆತ್ತ ಹೋದೆನೆಂದಱಿಯೆನಯ್ಯಾ ...' ಎಂಬ 'ಸ್ವಪರಾಜ್ಞಾಸ್ಥಲ' ಅಥವಾ 'ಸ್ವಯಪರವರಿಯದ ಸ್ಥಲ'. ಇಲ್ಲಿ ಚೆನ್ನ ಬಸವಣ್ಣನವರ ಈ ಸ್ಥಲವನ್ನು ನಿರ್ದೇಶಿಸುವ ಒಂದು ವಚನ ಕೇಳಿ:

ಅರಿವ ಆರಡಿಗೊಂಡಿತ್ತು.
ಮನವು ಮಹದಲ್ಲಿ ನಿಂದು ಘನವಡಗಿತ್ತು. ಆಶ್ರಯವಿಲ್ಲ.
ಬಲ್ಲೆನೆಂಬಡೆ ನೆರೆಯರಿವು ಅರತು ಘನಾಘನದಲ್ಲಿ ಆಶ್ರಯ ನಿರಾಶ್ರಯ.
ಎಲ್ಲಿಯ ಶರಣ ಕೂಡಲಚೆನ್ನಸಂಗಮದೇವ? [೩]

ಶರಣನೆತ್ತ ಹೋದ? ಶರಣನಿಗೆ ಗೊತ್ತಿಲ್ಲ.

ಮರುಳುಶಂಕರದೇವರ 'ಸರ್ಪನ ಹೆಡೆಯ' ವಚನ ಮುಟ್ಟಬಾರದಂತಿದೆ. ಇದ ರೊಳಗಿರುವ ಬೆಡಗನ್ನು ಬಲ್ಲವರು ನೀವೆ ಹೇಳಿ.

ಇನ್ನು ಮರುಳುಶಂಕರದೇವರು 'ಸಂಸಾರಸಾಗರ'ವನ್ನು ಅರಿವಿನ ಹರಿಗೋಲಲ್ಲಿ ಕುಳಿತು ಸತ್ಯಜ್ಞಾನ, ಸಮ್ಯಗ್‌ಜ್ಞಾನವೆಂಬ ಅಂಬಿಗ ಕಾಮಕ್ರೋಧಾದಿಗಳೆಂಬ ಅಂತ ರಾಯಗಳನ್ನು ಪರಿಹರಿಸಿ ದಾಟಿದ ರೀತಿ ನೋಡಿದರೆ ಕಾಣುವಂತಿದೆ. ಸುದುಸ್ತರವಾದ

---

೧. ಶೂ. ಸಂ. ಪು. ೧೨೪-೨೫, ವ. ೩೫.

೨. ಹಿಂದೆ ಹೇಳಿದ ಪ್ರಭುದೇವರ ಮಂತ್ರಗೋಪ್ಯದ ೫ನೆಯ ಪದಕ್ಕೆ ಬರೆದಿರುವ ಎರಡು ಟೀಕು ಗಳನ್ನು ನೋಡಿರಿ. ಒಂದು 'ಕುಂಡಲಿಯ ಸರ್ಪ' ಎಂದು ಹೇಳಿದರೆ ೨ನೆಯದು 'ಶಂಕಾ ವಿಷ ಸಂಬಂಧಿಯಾದ ಮನಃಕುಂಡಲಿ ಎಂಬ ಸರ್ಪ' ಎಂದು ಹೇಳುತ್ತದೆ. ಈ ಎರಡೂ ಅರ್ಥ ಅನೇಕ ಕಡೆ ದೊರೆಯುತ್ತವೆ.

೩. ವ. ಶಾ. ಸಾ. ಭಾ. ೨, ಪು. ೫೫೬, ವ. ೩.

ಸಾಗರವನ್ನು ದಾಟಿಸಿ ಅಂಬಿಗ ಕೂಲಿ ಕೇಳಿದರೆ, ಮರುಳುಶಂಕರ ಬೆಪ್ಪಾದ. ಕೂಲಿ ಕೊಡಲು ಏನು ಉಳಿದಿದೆ? ಶಿವಜ್ಞಾನ ಸತ್ಯಜ್ಞಾನದ ಬಲದಿಂದ ಸಂಸಾರದ 'ಪ್ರಪಂಚ'ವನ್ನು ದಾಟಿ ಭೌತಿಕ ತತ್ತ್ವಗಳಾಚೆ ಆಚೆಯ ದಡಕ್ಕೆ ಹೋದರೆ ಜೀವಭಾವದ 'ನಾನಿ'ನ 'ನನ್ನದು' ಎಂಬ ಸೊತ್ತು ಏನು ಉಳಿಯಬೇಕು? ಇಂಥ ಸೊತ್ತನ್ನು ಬಸವಣ್ಣ ಉಳಿಸಿಕೊಂಡು 'ತನುವ ಬೇಡಿದಡೀವೆ, ಮನವ ಬೇಡಿದಡೀವೆ...' ಎಂದು ಪ್ರಭುದೇವರಿಗೆ ಕೊಡಹೋಗಿ ಯಾವ ಗಸಣಿಗೊಳಗಾದನೆಂಬ ಮಾತು ಇನ್ನೂ ನಮ್ಮ ನೆನಪಿನಲ್ಲಿ ಅಚ್ಚಳಿಯದಂತಿದೆ. 'ನನ್ನದು' ಎಂಬುದನ್ನೆಲ್ಲ ಕಳಕೊಂಡು ಶಂಕರದೇವ ಅಂಬಿಗನಿಂದ ಮತ್ತೆ ಅರುವೆಯನ್ನು. ಅರಿವನ್ನು, ನಿಜದರಿವನ್ನು ಕೊಂಡು, 'ಕಱು'ವನ್ನು ಕಾದುಕೊಂಡಿರಬೇಕಾಯಿತು ಅಂಬಿಗನಲ್ಲಿ. ಈ ಕರುವಿನಲ್ಲಿ ಬೆಡಗಿನ ಅರ್ಥ ಇದೆ. 'ಕಱು' ಎಂದರೆ ಮನಸ್ಸು,[1] ಉನ್ಮನಿ ತತ್ತ್ವಸ್ವರೂಪವಾದ ಮನಸ್ಸು[2], ಇಷ್ಟಲಿಂಗ[3]—ಎಂದು ಬೆಡಗನ್ನು ಬಿಡಿಸುತ್ತಾರೆ ಸಿಂಗಳದ ಸಿದ್ಧಬಸವರಾಜದೇವರು. ಮರುಳುಶಂಕರದೇವನ ಅರ್ಥ ಮನಸ್ಸು ಎಂದು ಇದ್ದಿರಬಹುದು. ಇನ್ನೂ ಸ್ವಲ್ಪ ವಿವರವಾಗಿ ನೋಡಿದರೆ ಈ ಕರು ಮೊಲೆಯುಂಬ ಕರು. 'ಅಮೃತಕುಂಭಸ್ವರೂಪಿನಿಂದೊಪ್ಪುತ್ತಿರ್ದ ಚಿದ್‍ಘನ ಲಿಂಗವ ಸದ್ವಿವೇಕಮುಖದಿಂ ಸ್ವೀಕರಿಸುತ್ತಿಹುದು ಉನ್ಮನಿತತ್ತ್ವಸ್ವರೂಪವಾದ ಮನಸ್ಸು...'.[4] ಯಾವಾಗಳು ಈ ಕರು ಚಿದ್‍ಘನಲಿಂಗದ ಮೊಲೆಯನ್ನೆ ಉಣ್ಣಬೇಕು, ಲಿಂಗದ ನೀರನ್ನೆ ಕುಡಿಯಬೇಕು, ಲಿಂಗದ ಹಕ್ಕಿಯಲ್ಲಿ ಇರಬೇಕು, ಲಿಂಗದ ಹೊಲದಲ್ಲಿ ಹಾರಾಡಬೇಕು, ಜಿಗಿದಾಡಬೇಕು. ಎಂದೂ ಅದು ಸಂಸಾರವಿಷಯದ 'ಗಾಳಿಗರು'ವಾಗಬಾರದು. ಹೀಗೆ ಕರು ಕಾದುಕೊಂಡಿದ್ದು '...ನಿಮ್ಮ ನಂಬಿ ನಾನು ಕೆಟ್ಟು ಬಟ್ಟಬಯಲಾಗಿ ನಿಂದೆನಯ್ಯಾ,' 'ನನ್ನದು' ಮೊದಲೇ ಕೆಟ್ಟುಹೋಗಿದೆ. ಮತ್ತೆ ಪ್ರಸನ್ನಪ್ರಭು ಶಾಂತ ಮಲ್ಲಿಕಾರ್ಜುನದೇವನನ್ನು ನಂಬಿ 'ನಾನು' ಕೆಟ್ಟುಹೋಯ್ತು. 'ನಾನು' ಹೋದಮೇಲೆ 'ನೀನು' ಎಲ್ಲಿ? ಎರಡೂ ಬಯಲಾಗಿ ಹೋಗಿವೆ. ಎರಡು ಹೋದರೂ ಬಟ್ಟಬಯಲು ನಿಂದಿದೆ, ತನ್ನ ತಾನರಿಯದೆ. ಏನೆಲ್ಲ ಎಲ್ಲಿಗೆ ಹೋದರೂ ಬಯಲು ಎಲ್ಲಿಗೆ ಹೋಗಬೇಕು?

ಮರುಳುಶಂಕರದೇವರ ನಿಲವಿನಲ್ಲಿ ಜಂಗಮಲಿಂಗ ಪ್ರಭು, ಲಿಂಗಭಕ್ತ ಬಸವಣ್ಣ ಅವಿರಳವಾಗಿ ಪ್ರಸನ್ನ ಪ್ರಸಾದವಾಗಿ ಬೆಳಗುತ್ತಿದ್ದಾರೆ. ನಿಸ್ಸಂಗ, ನಿರಾಭಾರಿ, ನಿಸ್ಸೀಮ, ನಿರುಪಾಧಿಕ, ನಿರ್ದೇಹ, ನಿರ್ಮಲ, ನಿತ್ಯಜಂಗಮ. ಇಂಥ ಜಂಗಮದ 'ನಿಮ್ಮ ಘನಕ್ಕೆ ಘನವಾದ' ಘನವನ್ನು 'ನೀವೆ ಬಲ್ಲಿರಿ' ಶಾಂತಚೆನ್ನಮಲ್ಲಿಕಾರ್ಜುನದೇವಾ ! ಮತ್ತೆ ಲಿಂಗಭಕ್ತ ಬಸವಣ್ಣ. ಸುಜ್ಞಾನ ಸದ್‍ಭಕ್ತಿಯ ಮಹಾವೈಭವವನ್ನು ಅಂಗ ಮನ ಭಾವದಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳಲ್ಲಿ ಎಡೆದೆರಹಿಲ್ಲದಂತೆ ತುಂಬಿಕೊಂಡು, ಸರ್ವಾಂಗದಲ್ಲಿ ಲಿಂಗಾನುಭವವನ್ನು ಪಡೆಯಲು ಬಸವಣ್ಣ ಕಂಡ ಉಪಾಯವೆಂದರೆ ಏಕಮೇವಾದ್ವಿತೀಯವಾದ ಮಹಾಲಿಂಗವನ್ನು ಇಷ್ಟ ಪ್ರಾಣ ಭಾವಲಿಂಗಮಾಡಿ ಅಲ್ಲಲ್ಲಿ ಧರಿಸಿಕೊಂಡು ಪೂಜಿಸಿಕೊಂಡು ಮತ್ತೆ ಆಚಾರ ಗುರು ಶಿವ ಜಂಗಮ ಪ್ರಸಾದ ಮಹಾ

---

೧. ಬಿ. ವ. ಪ್ರ. ೧೮೪, ವ. ೯ರ ಟೀಕು.
೨. ಅದೇ ೧೮೦, ವ. ೫ರ „
೩. ಬಿ. ವ. ಪ್ರ. ೧೮೩, ವ. ೭ರ ಟೀಕು.
೪. ಅದೇ ೧೮೦, ವ. ೫ರ „

ಲಿಂಗವೆಂದು ಇಂದ್ರಿಯಗಳಲ್ಲೆಲ್ಲ ಇರಿಸಿಕೊಂಡು ಇಂದ್ರಿಯಗಳನ್ನೆಲ್ಲ ಬೆಳಗುಮಾಡಿಕೊಂಡು, ಈ ಮೂರು ಆರಾದ ಲಿಂಗವೆಲ್ಲ ಒಂದೆ ಲಿಂಗವೆಂಬ ಅವಧಾನ ತಪ್ಪದೆ ಇದ್ದ ಬಸವಣ್ಣ ಸರ್ವಾಂಗಲಿಂಗಸಂಬಂಧಿ, ಸರ್ವಾವಧಾನಿ. ಅಂತೆಯೆ ಬಸವಣ್ಣನೆಂದರೆ ಸರ್ವಾಂಗಲಿಂಗ, ಸರ್ವಾಂಗಸಂಗಪರಿತ್ಯಾಗ, ಸರ್ವಕರಣವ್ಯವಹಾರನಿರ್ಮುಕ್ತಿ. ಲಿಂಗಕಾರುಣ್ಯದ ಪ್ರಸಾದದಿಂದ ಸರ್ವಸಂತೃಪ್ತ ಬಸವಣ್ಣ; ಸರ್ವನಿರ್ವಾಣಿ ಬಸವಣ್ಣ. ಈ ಬಸವಣ್ಣನ ಮಹಿಮೆಯನ್ನು 'ನೀವೆ ಬಲ್ಲಿರಿ' ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ! ಮತ್ತೆ '...ಅಸಂಖ್ಯಾತ ಮಹಾಪುರಾತನರು ಪ್ರಭುದೇವರು ಮುಖ್ಯವಾದ ನಿಲವಿನ ಶ್ರೀಚರಣಕ್ಕೆ ನಾನು ಶರಣಾರ್ಥಿ ಶರಣಾರ್ಥಿ ಎಂದು ಶಬ್ದಮುಗ್ಧವಾಗಿ. ಉರಿಯುಂಡ ಕರ್ಪುರದಂತೆ ನಿಮ್ಮ ಶ್ರೀಚರಣವನ್ನೈದಿದೆನಯ್ಯಾ! ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ, ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ! ನಿಮ್ಮ ಧರ್ಮ, ನಿಮ್ಮ ಧರ್ಮ!'[೧]

ಮರುಳುಶಂಕರದೇವ ನಿರವಯಲನ್ನೈದಿದುದರಲ್ಲಿ ಒಂದು ವಿಶೇಷ: ಭಕ್ತಿಯ ಮಾಟ, ಲಿಂಗದ ನೋಟ, ನಿರವಯಲ ಕೂಟವನ್ನು ಶಿವಭಕ್ತರ ಒಕ್ಕುಮಿಕ್ಕ ಪ್ರಸಾದವನ್ನು ಸೇವಿಸುತ್ತ ಸಾಧಿಸಿದ ಮರುಳುಶಂಕರ ಕಾಯವೆರಸಿ ನಿರವಯಲಾದುದು. ಇದನ್ನು ಕಂಡು '...ಮುಟ್ಟುವರಿಗೆ ಮುಟ್ಟಬಾರದೆ ಬಟ್ಟಬಯಲಾಗಿ ಹೋದ ಮರುಳುಶಂಕರದೇವರ ಮಹಾತ್ಮೆಗೆ ನಮೋ ನಮೋ'[೨]...ಎಂದು ಹಾಡುತ್ತ, ಪ್ರಾಣಚೈತನ್ಯದ ಪರಮ ಗಂಭೀರದಲ್ಲಿ ಇನ್ನೂ ಆಳವಾಗಿ ಪ್ರಾಣಿಸಿ, ಶರಣರ ಬದುಕಿನ ಮಹಾರ್ಥವನ್ನು ಅನುಭವಿಸುತ್ತಾನೆ ಚೆನ್ನಬಸವಣ್ಣ. ಪ್ರಭುದೇವರಿಗೆ ಹಿಡಿಸದ ಜಂಗಮಾನಂದ ಮರುಳುಶಂಕರನ ನಿರವಯಲ ಸಮಾಧಿಯನ್ನು ಕಂಡು! '...ನಿಸ್ಸೀಮಶರಣರ ನಿಲವನರಿಯಬಹುವೆ? ಅರಿವಿಂಗಸಾಧ್ಯ, ಉಪಮೆಗೆ ಕಡೆಮುಟ್ಟದು. ಗೊಹೇಶ್ವರನ ಶರಣರೆಂತಹರೆಂಬುದ ಕಂಡಾ ಬಸವಣ್ಣಾ!'[೩] ಎಂದು ಶಂಕರದೇವರು ಬಟ್ಟಬಯಲಾಗಿ ನಿಂದ ನಿಲವನ್ನು ಬಸವಣ್ಣನಿಗೆ ಪ್ರಭು ಬೆರಳುಮಾಡಿ ತೋರಿದರೆ ಬಸವಣ್ಣನಿಗೆ ಪರಮಾಶ್ಚರ್ಯ. ಏನೂ ತಿಳಿಯದ ವಿಮೂಢ ಆಶ್ಚರ್ಯ. ಶರಣನ ಪ್ರಾಣ, ಜ್ಞಾನ ನಿರವಯಲನ್ನು ಮುಟ್ಟಿ ನಿರವಯಲಾಗಿ ನಿಲ್ಲಬಹುದು. ಮಣ್ಣು ನೀರಿನ ನಿರ್ಮಿತ ಜಡಕಾಯ. ಅದು ಹೇಗೆ ಬಯಲಾಗಿ ಹೋಯ್ತು?:

೧...ಪ್ರಾಣನ ಲಿಂಗದಲ್ಲಿ ನವೆಸಿ ನಿರವಯವಾಗಬಹುದಲ್ಲದೆ. ಕರ್ಮದಿಂದಾದ
ಕಾಯವ ನವೆಸಿ ನಯವಪ್ಪ ಪರಿ ಎಂತು ಹೇಳಯ್ಯಾ?[೪]

ಈ ಸಮಸ್ಯೆಯಲ್ಲದೆ ಮತ್ತೂ ಒಂದು ಪ್ರಶ್ನೆ ಬಸವಣ್ಣನಿಗೆ:

೨...ನಿಮ್ಮ ಶರಣರು ಕಾಯವಿಡಿದಿರ್ದು ನಿರಾಕಾರವಾಗಿಪ್ಪುದ ಹೇಳಯ್ಯಾ?

---

೧. [illegible] ೧೨೬೬-೬೭. ಪು. ೩೯.
೨. ಅದೇ ೧೨೬೬. ಪು. ೪೦.
೩. ಅದೇ [illegible]
೪. [illegible] ಪು. ೪೨.
೫. ಅದೇ [illegible]

ಬಸವಣ್ಣನವರ ಈ ಎರಡನೆಯ ಪ್ರಶ್ನೆಯ ಅರ್ಥ ಸಂಪಾದನೆಕಾರನೆ ತಿಳಿಸುವಂತೆ–ನಿಮ್ಮ ಶರಣರು ಶರೀರವಿದ್ದು ನಿಜದಲ್ಲಿ ನಿಂದ ಭೇದವೇನು? ಎಂದು. ಈ ಎರಡೂ ಪ್ರಶ್ನೆಗಳಿಗೆ ಪ್ರಭುದೇವರು ಉತ್ತರ ಹಾಡುತ್ತಾರೆ, ಕೇಳೋಣ[1] ಎದೆದೆರೆದು?

ಕರ್ಮಕಾಯನು ಅಲ್ಲ ಬ್ರಹ್ಮಮೂರುತಿಯಲ್ಲ
ಪರಬ್ರಹ್ಮವ ನುಡಿವಲ್ಲಿ ತಾನಿಲ್ಲದ ನಿರ್ಮೋಹಿ ಪಲ್ಲವಿ
ಮಾತೆಪಿತರುಗಳುದರದ ಜಾತಜನಿತನು ಅಲ್ಲ

ಶ್ವೇತ ಪೀತ ಕಪೋತ ಷಡುವರ್ಣರಹಿತ
ನವಮಾಸ ತುಂಬಿದ ಮೂರುತಿ ತಾನಲ್ಲ
ಅವಿರಳಲಿಂಗದ ಕಳೆಯು ಬೆಳಗು ತಾ ಶರಣ. ೧

ನಡೆಯು ಕಲಿವಲ್ಲಿ ನೋಡಿಳೆಯು ಹಂಗಿಗನಲ್ಲ
ನುಡಿಯ ಸಡಗರದಲಾದ ಬಿಂದು ತಾನಲ್ಲ
ಪದುಮಪರಿಮಳಕೆಳಿಗುವ ಭ್ರಮರ ತಾನಲ್ಲ
ಭವದ ಕುಳವನು ಗೆಲಿದ ನಿಭ್ರಾಂತ ಶರಣ. ೨

ಜಾಗ್ರಸ್ವಪ್ನಸುಷುಪ್ತಿಯಾಗು ಅನುಮಿಷನಲ್ಲ
ಆಗಮಕುಳದಲಾದ ಭೋಗಿ ತಾನಲ್ಲ
ತೇಜಸ ರಂಜನೆಯ ಗಣಿತ ಗುಣಿತನು ಅಲ್ಲ
ಸಹಜ ನಿತ್ಯನು ತಾನಭೇದ್ಯ ಶರಣ. ೩

ಬಿಂದು ಕಳೆಯಾ ಸುಖದ ಶಯನಸಂಪರ್ಕನಲ್ಲ
ಒಂದು ಚಂದದಲಿ ಕಂದಮೂಲವ ಗೆಲಿದ
ಸಂದಳಿದ ಸ್ವಯಸುಖವನೊಂದುಮಾಡಿ ತ್ರಿ
ಬಂಧ ಭೇದವ ಗೆಲಿದ ನಿಷ್ಕಾಮಿ ಶರಣ. ೪

ಚಂದ್ರಧಾರನುವಲ್ಲ ಚಂದ್ರಪೂರಿತನಲ್ಲ
ಇಂದ್ರಚಾಪದ ಪರಿಯ ಪ್ರಭಾವ ತಾನಲ್ಲ
ಭೃಂಗ ನುಂಗಿದ ರುಚಿಯನೊಂದು ಮಾಡಿ
ಗೊಹೇಶ್ವರನೆಂಬ ಲಿಂಗದ ಹಂಗನಳಿದ ಶರಣ. ೫

ಬಸವಣ್ಣನವರ ಪ್ರಶ್ನೆ ನಮಗೆ ತಿಳಿಯಬಹುದು. ಪ್ರಭುದೇವರ ಉತ್ತರ ನಮಗೆ ಮತ್ತೊಂದು ಕಿಷ್ಕಿಂಧಪ್ರಶ್ನೆಯೇ. ಶರಣನ ಮಹಾತ್ಮೆಯನ್ನು ಹಾಡುವ ಪದಗಳ ಅರ್ಥವೇನು?

೧. ಶೂ. ಸಂ. ಪು. ೧೨೮-೨೯, ಪದಂಗಳು.

'ಏಕೋತ್ತರಶತಸ್ಥಲ'ದಲ್ಲಿ ಪ್ರಸಾದಿಸ್ಥಲದ ಅಂಗವಾಗಿ ಬರುವ 'ಶರಣಮಹಾತ್ಮೆ'ಯ ಸ್ಥಲದಲ್ಲಿ 'ಕರ್ಮಕಾಯನು ಅಲ್ಲ...' ಎಂಬ ಪ್ರಭುದೇವರ ಈ ಹಾಡು ಬಂದಿದೆ.[೧] ಏಕೋತ್ತರಶತಸ್ಥಲದಲ್ಲಿ ಬರುವ ನೂರೊಂದು ಹಾಡುಗಳಿಗೆಲ್ಲ ಯಾರೋ ಒಬ್ಬ ಅಜ್ಞಾತ ಅನುಭಾವಿ ಅರ್ಥಮಾಡಿದ್ದಾರೆ. 'ಕರ್ಮಕಾಯನು ಅಲ್ಲ...' ಎಂಬ ಹಾಡಿಗೆ ಅವರ ಅರ್ಥವಿವರಣೆಯನ್ನು ನೋಡಿದರೆ ಹಾಡಿನಲ್ಲಿರುವ ಪ್ರಭುದೇವರ ಭಾವವನ್ನು ನಾವು ತಿಳಿದುಕೊಳ್ಳಲು ಒಳ್ಳೇ ಅನುಕೂಲವೆಂದು ನನ್ನ ಎಣಿಕೆ. ಅಂತೆಯೆ ಅದನ್ನು ಇಲ್ಲಿ ಸಂಗ್ರಹಮಾಡಿದೆ, ಸಮಾಲೋಚಿಸಿರಿ:

(ಶರಣ) ಷಟ್ ಕೃಷಿವ್ಯಾಪಾರಂಗಳ ಮಾಡಿ ಒಡಲ ಹೊರೆವನಲ್ಲ. ಬ್ರಹ್ಮಸುತ್ಪತ್ಯದಲ್ಲಿ ಹುಟ್ಟುವ ಜೀವನಲ್ಲ. ಪಂಚಬ್ರಹ್ಮವನೊಳಕೊಂಡು ತೋರುವ ಘನ ಬ್ರಹ್ಮದ ಸ್ವರೂಪವನು ಹೇಳುವಲ್ಲಿ ತಾನೆಂಬ ಅಹಂಕಾರವಿಲ್ಲದ, ಮಾಯಾ ಮಮಕಾರವಿಲ್ಲದಾತನು.

ತಂದೆ ತಾಯಿಗಳ ಹೊಟ್ಟೆಯಲ್ಲಿ ಹುಟ್ಟಲ್‌ತಕ್ಕ ಶುಕ್ಲ ಶೋಣಿತಂಗಳಿಂದ ಘಟ್ಟಿಗೊಂಡು ಹುಟ್ಟುವನಲ್ಲ. ಷಡ್ವರ್ಣಯುಕ್ತವಾದ ದೇಹಾದಿ ಪ್ರಪಂಚೆಲ್ಲ ದಿರ್ದಂಥ, ಒಂಬತ್ತು ತಿಂಗಳು ಪೂರಿತವಾದ ವಿಗ್ರಹವುಳ್ಳಾತನಲ್ಲ. ಅಖಂಡ ಲಿಂಗದ ಚಿತ್‌ಕಳೆಯು ಚಿತ್ರಕಾಶವೆ ಸ್ವಯವಾದ ಶಿವಶರಣ.

ಸತ್‌ಕ್ರಿಯಾಚಾರವನಭ್ಯಾಸಿಸುವಲ್ಲಿ ರಾಜ್ಯಾದಿಪದದ ವಾಂಛನೆಯುಳ್ಳವನಲ್ಲ. ಅದೂ ಬ್ರಹ್ಮ ಇದೂ ಬ್ರಹ್ಮ ಕುರಿ ಕುಕ್ಕುಟ ಶುನಿ ಮಾರ್ಜಾಲ ಖಗವಿಹಂಗಾದಿ 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಬಗುಳುವ ವಾಗ್ಜಾಲದ ಸಂಭ್ರಮದಲುಂಟಾದ ಶಾಸ್ತ್ರಜ್ಞಾನಿಯು ತಾನಲ್ಲ. ಹೃದಯದಷ್ಟದಳಕಮಲದಲ್ಲಿರ್ದ ಮಾಯಾದುರ್ವಾಸನೆಗೆ ಗ್ರಸ್ತಮುಖನಾಗುವ ಜೀವನು ತಾನಲ್ಲ. ಜನ್ಮ ಸಂಸಾರದ ಸಮೂಹವನು ಜಯಿಸಿದ. ಲಿಂಗಭ್ರಾಂತನಾದ ಶಿವಶರಣ.

ಜಾಗ್ರ ಸ್ವಪ್ನ ಸುಷುಪ್ತಿಯೆಂಬ ತ್ರಿವಿಧಾವಸ್ಥೆಗಳಲ್ಲಿ ಉಂಟಾಗುವ ಪ್ರಪಂಚನು ಕಣ್ಣು ಸಿಕ್ಕಿಸಿ ನೋಡುವ ಜೀವನಲ್ಲ. ಭಿನ್ನಾಗಮಂಗಳ ಸಮೂಹದಲ್ಲುಂಟಾದ ಅಷ್ಟಭೋಗಂಗಳುಳ್ಳಾತನು ತಾನಲ್ಲ. ಜ್ಯೋತಿಷಶಾಸ್ತ್ರಂಗಳ ರಚನೆಯು —ಈ ಪತ್ರಿಗೀ ಫಲ ಈ ಪುಷ್ಪಕ್ಕೀ ಫಲವೆಂದು ಗಣಿಸಿ ಗುಣಿಸಿ ಲಿಂಗ ಪೂಜಾಕ್ರೀಗಳ ಮಾಡುವನಲ್ಲ. ಯಥಾರ್ಥವಾದ ಶಾಶ್ವತವಾದ ವಸ್ತು ತಾನೆ, ಆರಾರಿಗು ಅರಿಯಬಾರದಿರ್ದ ಶಿವಶರಣ.

ದೇಹೇಂದ್ರಿಯ ವಿಷಯಂಗಳನು ಜೀವಭಾವದಿಂ ಭುಂಜಿಸಿ ಮೈಮರೆದೊರಗುವ ನಿದ್ರೆಯಲ್ಲಿ ಕೂಡಿರುವನಲ್ಲ. ಮೂಲಜ್ಞಾನವಪ್ಪದಲ್ಲಿ ತನುತ್ರಯ ಸಂಬಂಧವಾದ ಅಹಂಕಾರ ತ್ರಯಗಳನು ಜಯಿಸಿದ, ಅಂಗ ಬೇರೆ ಲಿಂಗ ಬೇರೆಂಬ ದ್ವೈತವನು ನಷ್ಟವ ಮಾಡಿ, ಶರಣ ಲಿಂಗವೆಂಬುಭಯ ಸೌಖ್ಯವನು ಏಕೀಭವಿಸಿ,

---

೧. ಏ. ಶ. ಸ್ಥ. ಪು. ೨೩೭-೮ (ನಮ್ಮಲ್ಲಿ ಪ್ರತಿಮಾಡಿಕೊಂಡಿರುವ ಕೈಬರೆಹದ ಪ್ರತಿ.)

ಮಲತ್ರಯಂಗಳ ಕಟ್ಟಳೆಯನು ಜಯಿಸಿದ, ಇಹಪರಾದಿಗಳ ಬಯಕೆ ಇಲ್ಲದಿರ್ದ ಶಿವಶರಣ.

ಸೋಮಧರ ಲೀಲೆಯು ಆದಿಯಾಗಿ ಉರಿಲಿಂಗೋದ್ಭವಲೀಲೆಯೆ ಅಂತ್ಯವಾದ ೨೫ ಲೀಲಾಮೂರ್ತಿಗಳೊಳಗೊಬ್ಬನಲ್ಲ. ಆಕಾಶದಲ್ಲಿ ಸುರಚಾಪ ಮೂಡಿ ಹೇಂಗ ಅಲ್ಲಿಯೇ ಬಯಲಾಗುತ್ತೈತೆ ಹಾಂಗ. ದಿಂಡನೂರ ನಾಗಭಕ್ತನ ಹಾಂಗೆ ಭೈರವೇಶ್ವರನ ಹಾಂಗೆ ಕೈಲಾಸಕ್ಕೆ ಹೋಗುತ್ತೈದೆನೆಂದು ತೂಳಮೇಳಾದಿಗಳ ಮೆರೆವನಲ್ಲ. ಪರಿಪೂರ್ಣಜ್ಞಾನವನೊಳಕೊಂಡ ಚಿತ್‌ಪ್ರಕಾಶಸ್ವರೂಪವಾದ ಚಿಲ್ಲಿಂಗವನೇಕೀಭವಿಸಿ. ಸರ್ವರ ಹೃದಯಾಂತರ್ಯಾಮಿ ಎಂಬ ಪರಶಿವಲಿಂಗದ ಫಲಪದಂಗಳ ನಷ್ಟವ ಮಾಡಿದ ಶಿವಶರಣ.[1]

ಬಸವಣ್ಣನ ಪ್ರಶ್ನೆಗೆ ಪ್ರಭುದೇವರ ಉತ್ತರವೆಂದರೆ. ಕರ್ಮದಿಂದಾದ ಕಾಯನೆ ಅಲ್ಲ ಶರಣ. ಬ್ರಹ್ಮನ ಸೃಷ್ಟಿಯಲ್ಲಿ ತಂದೆ ತಾಯಿಗಳ ಉದರದಲ್ಲಿ ಹುಟ್ಟಿದ ಶುಕ್ಲಶೋಣಿತದ ಘಟ್ಟಿಯಲ್ಲ ಶರಣ. ಅದ್ದರಿಂದ ಕರ್ಮಭೂಮಿಯಲ್ಲಿ ಪಾಪಪುಣ್ಯ ಫಲವನ್ನುಣ್ಣಲು ಮೂರುತಿಗೊಂಡ ಕರ್ಮಕಾಯವನ್ನು ಸವೆಯಿಸಬೇಕೆಂಬ ಪ್ರಶ್ನೆಯೆ ಇಲ್ಲ ಶರಣನಿಗೆ. ಬ್ರಹ್ಮನ ಉತ್ಪತ್ತಿ. ವಿಷ್ಣುವಿನ ಸ್ಥಿತಿ. ರುದ್ರನ ಲಯದ ಮಾತೇ ಇಲ್ಲ ಶರಣನಿಗೆ. ಆತ 'ಅವಿರಳ ಲಿಂಗದ ಕಳೆಯ ಬೆಳಗು'. ಅಥವಾ ಪ್ರಭುದೇವರು ಮತ್ತೊಂದೆಡೆ ಹೇಳುವಂತೆ '...ನಿಮ್ಮ ಶರಣಸಂಗ ಬಚ್ಚಬರಿಯ ಬಯಲು ಗೊಹೇಶ್ವರಾ!'[2] ಈ ವಚನದ ಟೀಕು ತಿಳಿಸುವಂತೆ 'ದೇಹವಿಡಿದಿರ್ದ ದೇಹವಾಸನೆಯಿಲ್ಲ' ಶರಣನಿಗೆ. ಆತನ ದೇಹ 'ದಗ್ಧ ದೇಹ.' 'ನಷ್ಟದೇಹ.' ಬೆಂದ ನುಲಿ. ಕಾಯದಂತೆ ಆತನ ಜೀವಭಾವ ನಷ್ಟ ಅದೂ ದಗ್ಧ. ಅಲ್ಲಿಯೂ ಹುಟ್ಟುಹೊಂದಿಗೊಳಗಾದ ಕರ್ಮ ಭೋಗ ರಂಜನೆ ಮುಂತಾದ ಮಾಯೆಯ ಗುಣಧರ್ಮ ನಿಶ್ಯೇಷ ಸುಟ್ಟು ಭಸ್ಮವಾಗಿವೆ. ಇನ್ನೂ ಮುಂದೆ ಹೋಗಿ ಶರಣನ ನಿಜಸ್ವರೂಪವನ್ನು ನೋಡಿದರೆ ಆತ ಜಗತ್ತಿನ ಲೀಲೆಗೊಳಗಾದ ಚಂದ್ರಧರ ಮುಂತಾದ ಲೀಲಾಮೂರ್ತಿಯೂ ಅಲ್ಲ. 'ಮೂರ್ತಿಯಾದುದಕ್ಕೆ ಪ್ರಳಯ ತಪ್ಪದು.' ಪ್ರಳಯಕ್ಕೊಳಗಾದ ಲೀಲಾಮೂರ್ತಿಗಳಾಚೆ 'ಸಹಜ' 'ನಿತ್ಯ' 'ಅಭೇದ್ಯ' ಶರಣ- ಮಹಾಘನಲಿಂಗ. ಕೂಡಲಸಂಗಮ. ಗೊಹೇಶ್ವರ ಎಂಬ ನಾಮದ ಹಂಗಿಲ್ಲ ಶರಣನಿಗೆ. ಎಲ್ಲಿ ನಾಮ ಬಯಲು. ಎಲ್ಲಿ ರೂಪ ಎಲ್ಲಿ ಕ್ರಿಯೆ ಎಲ್ಲಾ ವಿಶ್ವಪ್ರಪಂಚ ಬಯಲು. ಎಲ್ಲಾ ಎಲ್ಲಾ ಬಯಲಾದ. ಅಭೇದ್ಯ ಬಯಲಾದ ನಿತ್ಯ ಸಹಜ. 'ನಿಶ್ಚಿಂತ ನಿರಾಳ ಶರಣ.'

---

೧. ಷ. ಶ. ಸ್ಥ. ಪದಗಳು. ಪತ್ರ ೫೭ (ಅರ್ಥಸಹಿತ ಪದಗಳು) ನಮ್ಮಲ್ಲಿರುವ ಕೈ ಬರೆಹದ ಪ್ರತಿ- ಈ ಅರ್ಥವಿವರಣೆಯನ್ನೇ ನಾವು ಸ್ವೀಕರಿಸಬೇಕೆಂಬ ನಿಯಮವನ್ನು ಇಟ್ಟುಕೊಂಡಿಲ್ಲ.

೨. ಪೂರ್ಣ ವಚನವಿಂತಿದೆ:
ಭಕ್ತಂಗೆ ಉತ್ಪತ್ತಿಯಿಲ್ಲಾಗಿ ಸ್ಥಿತಿಯಿಲ್ಲ. ಸ್ಥಿತಿಯಿಲ್ಲವಾಗಿ ಲಯವಿಲ್ಲ.
ಲಯವಿಲ್ಲವಾಗಿ ದೇಹ ನಾಮ ಪ್ರವರ್ತನೆಯಿಲ್ಲ.
ಇವಾವವೂ ಇಲ್ಲದ ಕಾರಣ ನಿಮ್ಮ ಶರಣಸಂಗ ಬಚ್ಚಬರಿಯ ಬಯಲು ಗೊಹೇಶ್ವರಾ!
ಲಿಂ. ಲೀ. ವಿ. ಚಾ. ಪು. ೪೦೫, ವ. ೩.

ನಿರ್ದೇಹವಾದ ಶರಣನ ಕಾಯದಲ್ಲಿ ಮಾಯೆಯ ವಾಸನೆ ಇಲ್ಲ, ಇಲ್ಲ. ಅಂತೆಯೆ ಆತನ ಕಾಯ ನಿರ್ಮಾಯ. ಆತನ ನುಡಿ ತಾನಿಲ್ಲದ ನಿಶ್ಶಬ್ದ. ಆತನ ಅರಿವು ಲಿಂಗದ ಬೆಳಗು.

ಪ್ರಭುದೇವರ ಉತ್ತರದಿಂದ ಬಸವಣ್ಣನ ಮನದಲ್ಲಿ ಸ್ಪಷ್ಟವಾಗಿ ಮೂಡಿದ ಶರಣನ ವಿಶೇಷ ಲಕ್ಷಣಗಳೆಂದರೆ: (೧) ಶರಣರು ಕಾಯವೆಂಬ ಕರ್ಮಕ್ಕೆ ಹೊದ್ದದ ನಿಷ್ಕಾಮಿಗಳು. (೨) ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳು. (೩) ಅಘಟಿತ ಘಟಿತರು, ಅಖಂಡಮಹಿಮರು. (೪) ನಿಜದಲ್ಲಿ ನಿರ್ಲೇಪ ಭಾವಕರು.

ಇಷ್ಟೆಲ್ಲ ಪ್ರಭುದೇವರು ಹೇಳಿದರೂ ಬಸವಣ್ಣ ಕೇಳಿದರೂ ಬಸವಣ್ಣನವರ ಮೊದಲನೆಯ ಪ್ರಶ್ನೆ ಉತ್ತರವಿಲ್ಲದೆ ಕುಳಿತಂತಿದೆ. ಜಡವಾದ ಕಾಯ ಬಯಲಾಗುವುದು ಹೇಗೆ? ಚೆನ್ನಬಸವಣ್ಣ ಮುಂದೆ ಬರುತ್ತಾನೆ ಉತ್ತರವನ್ನು ಪೂರೈಸಲು. ಬಸವಣ್ಣಾ, ಶರಣನ ಮನ ಲಿಂಗದ ಮನ ಒಂದೆ ರಸವಾಗಿ ಬೇರಿಲ್ಲದಂತ ಬೆರಸಿ ಸಮರಸೈಕ್ಯವಾಗಿ ಅಭೇದ್ಯವಾದ ಮಹಾಘನ ತಾನೊಂದೆ ಆಗಿ ನಿಂದ ಬಳಿಕ ಶರಣ ಬೇರೆ ಲಿಂಗ ಬೇರೆ ಎಂಬ ಸಂದು ಉಳಿದಿದೆ ಎಲ್ಲಿ? ಆ ಶರಣನ ನಿಲವಿಗೆ 'ಕೂಡಲಚೆನ್ನಸಂಗಮದೇವ' ಶರಣೆಂದು ಶಬ್ದದಲ್ಲಿ ನುಡಿಯದೆ, ಮನದಲ್ಲಿ ಆಶ್ಚರ್ಯದ ಸದ್ದು ಮಾಡದೆ ಸುಮ್ಮನೆ ಪರಿಣಾಮಿಸಬೇಕು. ಶರಣನ ಕಾಯ ಒಂದು ಅಳಿಯಬಹುದು. ಎರಡು ಉಳಿಯಬಹುದು. ಮೂರು ಬಯಲಾಗಬಹುದು. ಮೂರರೂ ಅರ್ಥ ಒಂದೇ. ನಿಶ್ಶೂನ್ಯ ಮಹಾಘನಲಿಂಗದಲ್ಲಿ ಸಮರಸವಾಗಿ ಏಕಮೇವಾದ್ವಿತೀಯವಾಗಿ ನಿಂದ ಶರಣನ ಕಾಯ ಪ್ರಾಣದಿಂದ ಬೇರ್ಪಟ್ಟು ಅಳಿದುಹೋದರೆ ಶರಣತ್ವಕ್ಕೆ ಕೊರತೆಯಿಲ್ಲ; ಕಾಯ ಉಳಿದು ಬಾಳುವಂತಾದರೆ ಹೆಚ್ಚಿಲ್ಲ. ಅಥವಾ ಆ ಕಾಯ ಶರಣನೊಡನೆ ಮುಟ್ಟಬಾರದಂತೆ ಬಯಲಾದರೆ ಇಲ್ಲಿಯೂ 'ಅಘಟಿತ ಘಟಿತ'ವೆಂಬುದೇನೂ ಇಲ್ಲ. ಇದಕ್ಕೆ ವಿಸ್ಮಯಚಕಿತರಾಗಿ, ಶರಣರು 'ಅಖಂಡಿತ ಮಹಿಮರೆ'ಂದು ಹೇಳಲು ಕಾರಣವೂ ಇಲ್ಲ. ಇನ್ನೂ ನೋಡು ಬಸವಣ್ಣಾ, ಶರಣನನ್ನು :

> ಆದಿಯಲ್ಲಿ ಹುಟ್ಟಿತ್ತಲ್ಲ. ಅನಾದಿಯಲ್ಲಿ ಬೆಳೆಯಿತ್ತಲ್ಲ.
> ಮೂರ್ತಿಯಲ್ಲಿ ನಿಂದುದಲ್ಲ. ಅಮೂರ್ತಿಯಲ್ಲಿ ಭಾವಿಸುದಲ್ಲ.
> ಅಱಿವಿನೊಳಗೆ ಅಱಿದುದಲ್ಲ. ಮಱಹಿನೊಳಗೆ ಮಱದುದಲ್ಲ.
> ಎಂತಿರ್ದಡಂತೆ ಬ್ರಹ್ಮ ನೋಡಾ !
> ಮನ ಮನ ಲೀಯವಾಗಿ ಘನ ಘನ ಒಂದಾದರೆ,
> ಮತ್ತೆ ಮನಕ್ಕೆ ವಿಸ್ಮಯವ ಮಾಡಲುಂಟೆ?
> ಕೂಡಲಚೆನ್ನಸಂಗನ ಶರಣರು ಕಾಯವೆಂಬ ಕಂಥೆಯ ಕಳೆಯದೆ ಬಯಲಾದರೆ,
> ನಿಜವೆಂದು ಪರಿಣಾಮಿಸಬೇಕಲ್ಲದೆ ಅಂತಿಂತೆನಲುಂಟೆ ಸಂಗನಬಸವಣ್ಣಾ?[೨]

---

೨. [illegible]

ಶರಣರ ಗೋಷ್ಠಿ

ಕಾಯದೊಳು ಗುರು ಲಿಂಗ ಜಂಗಮ ।
ವಾಯತವನರಿಯುತ್ತೆ ಸುಲಭರೋ ।
ಪಾಯದಿಂದಿದಿರಿಟ್ಟು ಬಾಹ್ಯಸ್ಥಲಕೆ ಕುರುಹಾಗಿ ॥
ವಾಯದೋರಿದ ಸಮಸ್ತ ಭಕ್ತರ ।
ಕಾಯವನು ಪಾವನವ ಮಾಡಿದ ।
ರಾಯ ಪ್ರಾಣಾಚಾರ್ಯ ಸಂಗನಬಸವ ಶರಣಾರ್ಥಿ ॥[೧]

—ಚಾಮರಸ.

ವೀರಶೈವಾಚಾರಮಾರ್ಗವಿ ।
ಚಾರವಭ್ಯಂತರದೊಳೀಪರಿ ।
ತೋರಣಿಸಿ ಪರಕರ್ಮ ಭಕ್ತಿ ಜ್ಞಾನವಿಹುದೆಂದು ॥
ಧಾರುಣಿಯೊಳರಿವಂತೆ ಕರುಣಾ ।
ಕಾರನಾಗಿ ಷಡುಸ್ಥಲವನು ।
ಸ್ಥಾಪಿಸಿದ ಗುರು ಚೆನ್ನಸಂಗನಬಸವ ಶರಣಾರ್ಥಿ ॥[೨]

—ಚಾಮರಸ.

ಶರಣಪ್ರೋಕ್ತ ಸಮಸ್ತರಂತಃ ।
ಕರಣದಲ್ಲಿಯನಾದಿ ಮಾಯಾಂ ।
ಬರವ ಸ್ಮೃತಿಗೆದೊಳೆದು ಭಕ್ತಿರಸಪ್ರವಾಹದಲಿ ॥
ಶರಣಪದವಿಗೆ ಸಲಿಸಿ ಪರಮೇ ।
ಶ್ವರನ ತೋರುವ ಸುಲಭ ಕರುಣಾ ।
ಕರದ ಮಡಿವಳ ಮಾಚಿದೇವ ಮಹಾತ್ಮ ಶರಣಾರ್ಥಿ ॥[೩]

—ಚಾಮರಸ.

ಪ್ರಭುದೇವರ ಪೂರ್ಣಕಾರುಣ್ಯದಿಂದ ಪರಮಪ್ರಸಾದ ಮರುಳುಶಂಕರದೇವರಿಗೆ ನಿರ್ವಯಲ ನಿಜ ಸ್ವಾನುಭಾವದಲ್ಲಿ ಅಳವಟ್ಟು ನಿರವಯವಸ್ಥೆಯಿದ್ದಾರೆ. ಬಸವಣ್ಣ ಚೆನ್ನಬಸವಣ್ಣ ಮಡಿವಾಳ ಮಾಚಯ್ಯ ಹಡಪದಪ್ಪಣ್ಣ ಮುಂತಾದ ನೆರೆದ ಗಣಂಗಳೆಲ್ಲ ಮರುಳುದೇವರ ಪ್ರಸನ್ನ ನಿರವಯಲ ಘನವನ್ನು ಕೊಂಡಾಡಿ ಕೊನರುತ್ತಿದ್ದಾರೆ. ಇದಾದಮೇಲೆ ಮುಂದೆ ಪ್ರಭು ಸಿದ್ಧರಾಮನನ್ನು ಇದಿರುಗೊಳ್ಳುವ ಶರಣರ ಮೆರೆ

೧. ಪ್ರ. ಲೀ. ಗತಿ. ೧. ಪು. ೨, ಪ. ೨.
೨. ಪ್ರ. ಲೀ. ಗತಿ. ೧, ಪು. ೩, ಪ. ೬.
೩. ಅದೇ ,, ಪು. ೨. ಪ. ೩.

ವಣಿಗೆ ಬಸವಣ್ಣನವರ ಅರಮನೆಯಲ್ಲಿ ಪ್ರವೇಶಮಾಡಿ, ಮುಂದೆ ಪ್ರಭುದೇವರು ಬಸವಣ್ಣ ಚೆನ್ನಬಸವಣ್ಣ ಮುಂತಾದ ಶರಣರೊಡನೆ 'ಪರಿಮಿತಾಲಯ'ದಲ್ಲಿ ಅನುಭಾವ ಗೋಷ್ಠಿಮಾಡಿದ ಸಂಗತಿಯನ್ನು ಸಿದ್ಧವೀರಣ್ಣ ತಿಳಿಸಬೇಕಿತ್ತು. ಆದರೆ ನಡುವೆ ಕೊಂಡೆ ಯಿಲ್ಲದೆ ಒಮ್ಮೆಲೆ–ಮರುಳುಶಂಕರದೇವರು ನಿರವಯಲಾದೊಡನೆ,–'ಬಸವೇಶ್ವರನ ಸಂಪಾದನೆ' ಪ್ರಾರಂಭವಾಗುತ್ತದೆ. ನಿಜಾನುಭೂತಿಯ ಮಹಾನವ್ಯಕಥೆಯಲ್ಲಿ ಇಂಥ ಕ್ರಮಬದ್ಧವಾದ ಹೊರಗಣ ಸಂಗತಿ ಏನು ಮಹತ್ವ ಎಂಬ ಉದಾಸೀನ ಇಲ್ಲಿ ದಪ್ಪ ಅಕ್ಷರದಲ್ಲಿ ಬರೆದಂತಿದೆ.[೧] ಸಿದ್ಧವೀರಣ್ಣ ಬಿಟ್ಟಿರುವ ಈ ಸಂಗತಿಯನ್ನು ಚಾಮರಸ ಹೀಗೆ ಪೂರೈಸುತ್ತಾನೆ:

> ಮರುಳುಶಂಕರಗೈಕ್ಯಪದವಿಯ ।
> ಪರುಟವಿಸಿ ಕೊಟ್ಟೊಲವಿನಿಂದಲಿ ।
> ಪರಿಮಿತಾಲಯಕೆಯ್ದಿ ಪರಮಾನಂದಲೀಲೆಯಲಿ ॥
> ಕರುಣ ಮಿಗೆ ನಡೆತಂದು ಬಸವೇ ।
> ಶ್ವರನು ಮಾಡುವ ಭಕ್ತಿಯುಕ್ತಾ ।
> ದರಣೆಯನು ಕೈಕೊಳುತಲಿರ್ದನು ಗುರುಗುಹೇಶ್ವರನು ॥[೨]

ಚಾಮರಸ ಹೇಳುವ 'ಪರಿಮಿತಾಲಯ' ಸಿದ್ಧರಾಮಯ್ಯನ ಮಠದಲ್ಲಿದ್ದ 'ಏಕಾಂತ ಸಮಾಧಿಸ್ಥಾನ'[೩]ವನ್ನು ನೆನಪಿಗೆ ತರುತ್ತದೆ. ಈ ಏಕಾಂತ ಸಮಾಧಿಸ್ಥಾನವೆಂದರೆ ಯೋಗಸಮಾಧಿಯನ್ನು ಸಾಧಿಸುವ ಅತ್ಯಂತ ಗೌಪ್ಯಸ್ಥಳ. ಮಠವೆಂದರೆ 'ಯೋಗ ಮಂದಿರ'ವೆಂದೂ ಅರ್ಥವಿದೆ. ಆದರೆ ಈ ಮಂದಿರದಲ್ಲಿರಬಹುದಾದ 'ಗೊಪೆ' 'ಗೊಹೆ' 'ಗುಹೆ' 'ಗವಿ'ಯೇ ಏಕಾಂತ ಸಮಾಧಿಗೆ ತಕ್ಕ ಸ್ಥಾನವಾಗಿತ್ತೆಂದು ಹೇಳಬಹುದು. ಇಲ್ಲಿ ಚಾಮರಸ ಹೇಳುವ ಪರಿಮಿತಾಲಯವೆಂದರೆ ಪರಿಮಿತ ಸಂಖ್ಯೆಯಲ್ಲಿ ಶರಣರು ಗೋಪ್ಯ ಸ್ಥಾನದಲ್ಲಿ ಶಿವಾನುಭವಗೋಷ್ಠಿಯನ್ನು ನಡೆಸುತ್ತಿದ್ದುದೇ 'ಪರಿಮಿತಾಲಯ.' ದಿವ್ಯಾನು ಭಾವದಲ್ಲಿ ತೀವ್ರ ಶಿವಾಪೇಕ್ಷೆಯುಳ್ಳ ನಿಜನಿಷ್ಠ ಶರಣರೇ ಇಂಥ ಏಕಾಂತಸ್ಥಾನದಲ್ಲಿ ತಂತಮ್ಮ ಅನುಭವ ಸಂದೇಹ ಮತ ನಿರ್ಣಯಗಳನ್ನು ಚರ್ಚೆಗೆ ಹಾಕುತ್ತಿದ್ದರು.

ಬಸವಣ್ಣ ಚೆನ್ನಬಸವಣ್ಣ ಪ್ರಭು ಸಿದ್ಧರಾಮದೇವರು ಹಡಪದಪ್ಪಣ್ಣ ಕಿನ್ನರ ಬ್ರಹ್ಮಯ್ಯ ಮಡಿವಾಳ ಮಾಚಿದೇವರು ಮುಂತಾದ ಪರಿಮಿತ ಶರಣ ತಿಂಥಿಣಿ ಕೂಡಿ ಸವ್‌ಗೋಷ್ಠಿಯನ್ನು ನಡೆಸಿದ ಪ್ರಸಂಗವನ್ನು ಸಿದ್ಧವೀರಣ್ಣ 'ಸಮಗೋಷ್ಠಿ'[೪] ಎಂದು.

---

೧. ಪರಾಮರ್ಶೆಯ ೧೬ನೆಯ ಅಧ್ಯಾಯ ನೋಡಿ.
ಸಿದ್ಧರಾಮಯ್ಯನಿಗೆ 'ಗುರುಕರುಣ'ವಿಲ್ಲದೆ ಬಸವಣ್ಣನ 'ಪರಿಮಿತಗೃಹ'ದಲ್ಲಿ ಪ್ರವೇಶ ಹೇಗೆ? ಬಸವಣ್ಣ ಮುಂತಾದವರೊಡನೆ ಅನುಭವಗೋಷ್ಠಿ 'ಪರಿಮಿತಾಲಯ'ದ ಹೊರಗೆಯೆ ನಡೆಯಿ ತೆಂಬುದು ಸಿದ್ಧವೀರಣ್ಣೊಡೆಯರ ಅಭಿಪ್ರಾಯವಿದ್ದಂತೆ ತೋರುತ್ತದೆ.

೨. ಪ್ರ. ಲೀ. ಗತಿ ೧೬, ಪ್ರ. ೧೯೦, ಪ. ೨.

೩. ಶೂ. ಸಂ. ಪು. ೫೨–೫೩, ಪ್ರ. ೭೧–೭೨.

೪. ಶೂ. ಸಂ. ಪು. ೧೩೨, ವ. ೨.

ದೇಹವನ್ನು ಧರಿಸಿಕೊಂಡು ಭವಚಕ್ರದಲ್ಲಿ ಸಿಕ್ಕವರು ದೇವರಿರಲಿ, ಯಾರೇ ಇರಲಿ, ಮಾಯೆಯನ್ನು ಮೀರುವುದು ಅಸಾಧ್ಯ. ದೇಹಕ್ಕೆ ಅಂಟಿಕೊಂಡಿದ್ದ ಮನದ ಕತ್ತಲೆಯ ವ್ಯವಹಾರವನ್ನು ದಾಟಿ, ಆಚೆ ನಿಂದು ಮಹಾಘನವನ್ನು ನೆನೆದು ಆನಂದದ ಸೀಮೆಯಲ್ಲಿ ನಡೆವೆನೆಂದರೆ. ಮಾಡಿದ ಕರ್ಮ ಮುಂದೆ ಹೆಜ್ಜೆ ಇಡಗೊಡುವುದಿಲ್ಲ. ಸ್ವಲ್ಪ ನೆನೆದರೆ ಸಾಕು, ಹೆಚ್ಚು ಹೆಚ್ಚಾಗಿ ತನ್ನನ್ನು ಮರೆಸಿಕೊಳ್ಳುತ್ತದೆ ತನ್ನ ನಿಜವಾದ ಘನ, 'ಗೊಹೇಶ್ವರ'. ಆದರೆ ಬಸವಣ್ಣಾ, ನಿನ್ನ 'ನೆನಹಿ'ನ ರೀತಿ ಏನೋ ಬೇರೊಂದು ರೀತಿಯಾಗಿದ್ದಂತೆ ತೋರುತ್ತದೆ !

ಇದಕ್ಕೆ ಬಸವಣ್ಣನವರ ಉತ್ತರ ಸ್ಪಷ್ಟ: ಮುಳ್ಳೂರಲು ತೆರಪಿಲ್ಲದ ಮಹಾಘನ ವಸ್ತು ಬ್ರಹ್ಮಾಂಡಕೋಟಿಗಳನ್ನು ಮೀರಿ ದೊಡ್ಡದು, ನಿಜ. ಆದರೆ ಈ ದೊಡ್ಡದನ್ನು ಆಲಿಂಗಿಸಿ ನೋಡಿ. ದೊಡ್ಡದೆಂದು ಹೇಳುವ ಮನ ಸಣ್ಣದೇ? ಸಣ್ಣದರ ತಕ್ಕೆಯಲ್ಲಿ ದೊಡ್ಡದು ಒಳಗಾಯಿತು ಹೇಗೆ? ಗಾತ್ರದಲ್ಲಿ ಕತ್ತಲೆ ದೊಡ್ಡದು, ದೀವಿಗೆ ಅತಿ ಸಣ್ಣದು. ಪರ್ವತ ಮತ್ತು ವಜ್ರಕ್ಕೆ, ಆನೆ ಮತ್ತು ಅಂಕುಶಕ್ಕೆ ಎಷ್ಟು ಭೇದ, ಎಷ್ಟು ಹೆಚ್ಚು ಕಡಮೆ? ಆದರೆ ಇಲ್ಲೆಲ್ಲ ಸಣ್ಣದು ದೊಡ್ಡದನ್ನು ತನ್ನಲ್ಲಿ ಒಳಕೊಳ್ಳುತ್ತದೆ. ಹಾಗೆ ಮನವ ಮೀರಿದ ಘನವೆಲ್ಲಿ? 'ನಿಮ್ಮ ಸ್ಮರಣೆಯ ಘನದ ಮುಂದೆ ಮಾಯೆ ನಿಲಲರಿಯದು. ನಿಮ್ಮ ನೆನಹ ಮೀಜುವ ಘನ'[೧]ವೆಲ್ಲಿ ಎಂದು ಪ್ರಭುದೇವರಲ್ಲಿ ಬಿನ್ನಯಿಸುತ್ತಾರೆ ಬಸವಣ್ಣನವರು.

ಬಸವಣ್ಣನವರ ಮನವನ್ನು, ಆ ಮನದಿಂದ ನೆನೆವ ನೆನಹನ್ನು ಅಥವಾ ಮಾಡುವ ಸ್ಮರಣೆ ಚಿಂತನೆ ಧ್ಯಾನವನ್ನು ತೋಡುತ್ತ ಒಳಬಳಗನ್ನು ತೋರಿಸುತ್ತ ನಡೆಯುತ್ತಾರೆ ಪ್ರಭುದೇವರು. ಮನದ ನೆನಹು ಗಾಢವಾಗಿರಲಿ ಗೂಢವಾಗಿರಲಿ ಗಭೀರವಾಗಿರಲಿ. ನೆನೆವ ಮನದ ಕೈಗೆ ಸಿಲುಕಲಿಲ್ಲ, ಸಿಲುಕಲಿಲ್ಲ ಗೊಹೇಶ್ವರಲಿಂಗ. ಜ್ಞಾನದಿಂದ ಅರಿವೆನೆಂದರೆ ಲಿಂಗಕ್ಕೆ ಒಂದು ಗುರುತು ಕೂನು ಇಲ್ಲ. ಕುರುಹಿಲ್ಲದ ವಸ್ತುವನ್ನು ಅರಿವು ಅಪ್ಪುವೆನೆಂದರೆ ಬಯಲನಪ್ಪಿ ಮುದ್ದಾಡಿಸಿದಂತೆ. ಕಣ್ಣಿನಿಂದ ಕಾಣುವೆನೆಂದರೆ ಆಕಾರದ ಮೂರ್ತಿಯಲ್ಲ. ಮತ್ತೆ ಭೌತ ತನುವನ್ನು. ಮನವನ್ನು ಬಿಚ್ಚಿ ನೋಡಿದರೆ ಅಲ್ಲಿಯೂ ಮುದುಗಿಕೊಂಡಿಲ್ಲ ಮಹಾಘನಲಿಂಗ. ಹೀಗೆ ಮನದ ಕಣ್ಣಿಗೆ ಅರಿವಿನ ಕಣ್ಣಿಗೆ ತೊಗಲ ಕಣ್ಣಿಗೆ ತಾನು ಕಾಣದಂತೆ ಕತ್ತಲೆಯ ಜವನಿಕೆಯನ್ನು ಇಳಿಬಿಟ್ಟು, ಜಗದ ಕಣ್ಣಿಗೆ, ಜಗತ್ತನ್ನು ನೋಡಿ ಜಗತ್ತಿನಲ್ಲಿ ಭ್ರಮಿಸುತ್ತಿರುವ ಕಣ್ಣಿಗೆ ಇಲ್ಲದಂತೆ ತಪ್ಪಿಸಿಕೊಂಡು ಇರುವ ಘನ. ನಿನ್ನ ಮನದ ಕನ್ನಡಿಯಲ್ಲಿ ಅಡಗಿದೆ ಹೇಗೆ ಬಸವಣ್ಣಾ? '...ಗೊಹೇಶ್ವರನೆಂಬ ಲಿಂಗವು ಜಗದ ಕಣ್ಣಿಂಗೆ ಕತ್ತಲೆಯ ಕವಿಸಿ ತನ್ನ ತಪ್ಪಿಸಿಕೊಂಡಿಪ್ಪ ಭೇದ ನಿನ್ನೊಳಡಗಿದ ಪರಿ ಎಂತು ಹೇಳಾ ಸಂಗನ ಬಸವಣ್ಣಾ?[೨]

ಮತ್ತೆ ತನಗಿಂತ ಬಲ್ಲಿದನಾದ ದೇವನನ್ನು, ಕನ್ನಡಿ ಆನೆಯನ್ನು ತನ್ನೊಳಡಗಿಸಿಕೊಂಡಂತೆ. ತನ್ನ ಅಂತರಂಗದಲ್ಲಿ ಅಡಗಿಸಿಕೊಂಡೆನೆಂದು ಬಸವಣ್ಣ ಬಿನ್ನವಿಸಿದರೆ ಅದು ಪ್ರಭುದೇವ ಒಪ್ಪದ ಮಾತು. ಏಕೆ? ಮಹಾಘನಲಿಂಗ ಅಂತರಂಗವಾದ ಭಾವದಲ್ಲಿ

---

೧. ಶೂ. ಸಂ. ಪ್ರ. ೧೩೨, ಪ್ರ. ೬. ೨. ಶೂ. ಸಂ. ಪ್ರ. ೧೩೩, ವ. ೬.

ಅಡಗುವ ಬಗೆ ಹೇಗೆ? ಭಾವಾತೀತವಾಗಿ ಭಾವದ ಅಳತೆಗೆ ಬಾರದೆ, ಭಾವದ ಪೂಜೆಯ ಹಿಡಿತಕ್ಕೆ ಸಿಕ್ಕದ ಅತೀತ ಘನ, ಭಾವಕ್ಕೊಳಗಾಗಿ ನಿಲ್ಲುವುದು ಹೇಗೆ? ಬಹಿರಂಗದಲ್ಲಿ ಅಡಗಿತ್ತು ಆ ಘನವಸ್ತು ಎಂದರೆ, ಬಾಹ್ಯಪೂಜೆಯ ಕ್ರಿಯಾಕಲಾಪದಿಂದ ಕಟ್ಟಲಿಲ್ಲ ಆ ಘನವನ್ನು. ಮತ್ತೆ ಅರಿವಿನೊಳಗೆ ಅಡಗಿಸಿಕೊಂಡೆನೆಂದರೆ, ಬುದ್ಧಿಯ ಹವಣಿಗೆ, ಅಂದರೆ ಪ್ರಮಾಣಕ್ಕೆ ಒಳಗಾಗಬೇಕಿತ್ತು ಆ ವಸ್ತು. ಆದರೆ 'ಮತಿಗೆ ಹವಣಲ್ಲ' ಆ ಅಪ್ರಮಾಣ ವಸ್ತು. ಎಲ್ಲ ಭಾವ ನಿರ್ಭಾವವಾದ, ಎಲ್ಲ ಕ್ರಿಯೆ ಎಲ್ಲ ಜ್ಞಾನ ಶೂನ್ಯವಾದ ಮಹಾಘನ ಶೂನ್ಯವಸ್ತುವನ್ನು ತನ್ನಲ್ಲಿ ಅಡಗಿಸಿ ಇಂಬಾಗಿ ಇಟ್ಟುಕೊಳ್ಳಲು ಮನವೆಲ್ಲಿದೆ? ಭಾವ ಎಲ್ಲಿ ಉಳಿದಿದೆ? ಕ್ರಿಯೆ ಜ್ಞಾನ ಎಲ್ಲಿ ಸಿಡಿದುಕೊಂಡು ನಿಂತಿವೆ? ಈ ಸಂದರ್ಭದಲ್ಲಿ ಹಿಂದೆ ಪ್ರಭುದೇವರು ಸಿದ್ಧರಾಮಯ್ಯನಿಗೆ 'ಅಂಗದಲಪ್ಪಿದೆನೆಂದರೆ ಸಿಲುಕದು...'[೧] ಪ್ರಾಣ ಭಾವ ಮನದಿಂದ ಅಪ್ಪಿದರೆ ಸಿಕ್ಕಲಾರದು, 'ಕಾಂಬಡೆ ಕಂಗಳತೆಯಲ್ಲ ಕೇಳುವಡೆ ಕಿವಿಗಳತೆಯಲ್ಲ'[೨] ಎಂದು ಮುಂತಾಗಿ ಶರಣನ ಅಥವಾ ಗೊಹೇಶ್ವರನ ನಿಲವನ್ನು ಕುರಿತು ಹೇಳುವ ಮಾತನ್ನು ನಾವು ನೆನೆಸಿಕೊಳ್ಳಬೇಕು.

ಅಂತರಂಗವೆಂದೊಡನೆ ಬಹಿರಂಗ ಮುಂದೆ ಬಂದು ನಿಲ್ಲುತ್ತದೆ. ಬಹಿರಂಗದ ಹಿಂದೆ ಅಂತರಂಗ ತಾನಾಗಿ ಮೂರ್ತಿಗೊಳ್ಳುತ್ತದೆ. ಈ ಎರಡರಲ್ಲಿ ಮೂಡಿತೋರುವ ಧ್ಯಾನ ಪೂಜೆಗಳಿಗೆ ನಡೆಯಲು ಮೂಲಾಧಾರ ಅರಿವು. ತನ್ನ ಅಂತರಂಗ ಬಹಿರಂಗದ ಸ್ವರೂಪವನ್ನು, ಅಲ್ಲಿ ನಡೆದಿರುವ ಧ್ಯಾನ ಪೂಜೆ ಅರಿವುಗಳ ನಿಜಸ್ಥಿತಿಯನ್ನು ಪ್ರಭುವಿನ ಮುಂದೆ ಹೀಗೆ ಬಿಚ್ಚಿಟ್ಟು ತೋರಿಸುತ್ತಾನೆ ಬಸವಣ್ಣ:

ಎನ್ನ ತನು ಮನವೆಂಬೆರಡನೂ ಗುರು ಕಳೆದು ಏಕವ ಮಾಡಿದನಾಗಿ
ಎನ್ನಂತರಂಗ ಬಹಿರಂಗವೆಂಬೆರಡೂ ನಿಮ್ಮವು ನೋಡಾ !
ನಿಮ್ಮಂತರಂಗದೊಳಗೆ ನಿಮ್ಮನಿಂಬಿಟ್ಟುಕೊಂಬೆ.
ನಿಮ್ಮ ಬಹಿರಂಗದಲ್ಲಿ ನಿಮ್ಮ ನೀವಾಗಿ ಪೂಜಿಸುವೆನು.
ನಿಮ್ಮ ಅಱಿವಿನಿಂದ ನಿಮ್ಮನೆ ಅಱಿವೆ ಕಾಣಾ ಕೂಡಲಸಂಗಮದೇವಾ ![೩]

ಮನವೇ ಅಂತರ್-ಅಂಗ; ತನುವೇ ಬಹಿರ್-ಅಂಗ. ಯಾರಿಗೆ? ಅದನ್ನೆ ಸದ್ಗುರು ಸ್ವಾಮಿ ಹೇಳಿಕೊಟ್ಟ. ಲಿಂಗಕ್ಕೆಂದು. ಹೊರಗೊಳಗೆ ಕೂಡಲಸಂಗಮಲಿಂಗವನ್ನು, ಅದೇ ಮಹಾಘನವಸ್ತುವಾದ ನಿಮ್ಮನ್ನು ನೆಲೆಗೊಳಿಸಿ, ಅಂತರಂಗ ಬಹಿರಂಗವೆಂಬ ಸಂದು ಬಿರುಕನ್ನು ಬಿಚ್ಚಿ ಕಳೆದು. ಒಂದುಗೂಡಿಸಿ ಒಂದುಮಾಡಿದ. ಹೀಗೆ ಗುರುಸ್ವಾಮಿ ಮಾಡಿದುದಕ್ಕೆ ಯಾವ ಫಲ? ಒಂದಾದ ಅಂತರಂಗ ಬಹಿರಂಗವೆರಡೂ ಲಿಂಗವಾಗಿ ಅಂದರೆ ನಿಮ್ಮವಾಗಿ ನಿಂದವು. ಅಲ್ಲಿ ಹೊರಗೊಳಗಿಲ್ಲದೆ ನಡೆದಿರುವ ಪಡೆಯಾಟ ನಿಮ್ಮ ಆಟ. ನನ್ನಲ್ಲಿ ನೆನಹು ಮೂಡಿದರೆ. ನೀವು ನಿಮ್ಮನ್ನು ನೆನೆದಿರಿ. ಪೂಜೆ ಹೊರಗೆ ಕಾಣಿ ಬಿಟ್ಟರೆ. ನಿಮ್ಮನ್ನು ನೀವು ಪೂಜಿಸಿಕೊಂಡಿರಿ. ಒಳಹೊರಗೆ ಅರಿವು ಅರಿವಿಟ್ಟು

೧. ಶೂ. ಸಂ. ಪು. ೪೮, ವ. ೫೨.
೨. ಅದೇ ಪು. ೪೬, ವ. ೪೩.
೩. ಶೂ. ಸಂ. ಪು. ೧೩೩, ವ. ೯.

ಅಡ್ಡಾಡಿದರೆ, 'ನಿಮ್ಮನೆ ಅಱಿದೆ' ನಾನು. ಆದರೆ ನಿಮ್ಮನರಿದ ಅರಿವು ಯಾರದು? ನನ್ನದಲ್ಲ, ನಿಮ್ಮದು. ಬಸವಣ್ಣನ ಆಳ, ಆತನ ಧ್ಯಾನ ಆತನ ಪೂಜೆ ಆತನ ಜ್ಞಾನದ ಒಳಗೊಳಗಿನ ಪದರು ನಿಮಗೆ ಕಾಣುತ್ತಿದೆಯಲ್ಲವೆ ಇಲ್ಲಿ?

ಇನ್ನೂ ಒಳಗೆ ಬಸವಣ್ಣ ಇದ್ದಾನೆಯೆ? ಇದ್ದರೆ, ಏನಾಗಿದ್ದಾನೆ ಎಂಬುದನ್ನು ಅಗೆದು ನೋಡುತ್ತಾನೆ ಪ್ರಭುದೇವರು. ಬಸವಣ್ಣ ತನ್ನನ್ನು ವಿವರಿಸಿ ತೋರುವಂತೆ, ಮಹಾಘನವಸ್ತು ಪ್ರಭುದೇವ ತನಗೆ ಅಂತರಂಗವಾದ; ಬಸವಣ್ಣ ರತ್ನದ ಮೈಯಾದ ಶಿಲೆಯಾದರೆ, ಪ್ರಭುದೇವ ಒಳಹೊರಗೆ ನಿರಾತಂಕವಾಗಿ ನಡೆದಾಡುವ ರತ್ನಕಾಂತಿ ಯಾದ. ಆದರೆ ಪ್ರಭುದೇವರದು ದೊಡ್ಡ ಆಕ್ಷೇಪ ಬಸವಣ್ಣನ ಈ ವಿಚಾರಕ್ಕೆ: 'ನೀನಾನೆಂಬುದು'[೧] ತನುವಿನ ಕತ್ತಲೆಯಲ್ಲಿ ಹುಟ್ಟಿದ ಮರವೆಯ ಮರಿ. 'ನಿನ್ನಿಂದ ನೀನಱಿದಿಹೆನೆಂಬುದು ವಿಪರೀತ ಭಾವ.'[೧] ನಿಮ್ಮಿಂದ ನಿಮ್ಮನ್ನು ನಾನು ನೆನೆವೆ, ಪೂಜಿಸುವೆ, ಅರಿವೆನೆಂಬುದು ವಿಕ್ಷಿಪ್ತ ವಿಚಾರವಲ್ಲದೆ ಮತ್ತೇನು? ನಾನು ನಿಮ್ಮ ಕಾಲಿಂದ ನಿಮ್ಮನ್ನು ನಡೆದಾಡುತ್ತೇನೆ, ನಾನು ನಿಮ್ಮ ಕಣ್ಣಿಂದ ನಿಮ್ಮ ಆಕಾರವನ್ನು ನೋಡುತ್ತೇನೆ ಅಂದರೆ, ಅದರರ್ಥವೇನು? '...ಈ ಅಱಿವು ಮಱವೆಯಾಟದ ಭ್ರಾಂತು ಬಿಡದು. ಗೊಹೇಶ್ವರಲಿಂಗವು ನಿನ್ನಲ್ಲಿ ನಿಂದ ಪರಿ ಎಂತು ಹೇಳಾ ಸಂಗನ ಬಸವಣ್ಣಾ?'[೧]

ಮರುಳು ತಲೆ ಹುರುಳು ತಲೆ ನೀನೆ ದೇವಾ.
ಹೆಂಗೂಸು ಗಂಡುಗೂಸು ನೀನೆ ದೇವಾ.
ಎಮ್ಮಕ್ಕನ ಗಂಡನು ನೀನೆ ದೇವಾ, ಕೂಡಲಸಂಗಮದೇವಾ, –
ಭ್ರಾಂತಳಿದ ಭಾವ ನೆಲೆಗೊಂಡಿತ್ತಾಗಿ.[೨]

ಈ ಬೆಡಗಿನ ಮಾತು ಬಸವಣ್ಣನ ಉತ್ತರ ಪ್ರಭುದೇವರ ಆಕ್ಷೇಪಕ್ಕೆ. ಈ ವಚನದ ಮುಂದಿರುವ ಪ್ರಸ್ತಾವವನ್ನು ನೋಡಿ. ಬೆಡಗಿನ ಮರೆಯಲ್ಲಿರುವ ಮನದ ಇಂಗಿತಾರ್ಥ ವನ್ನು ಸಿದ್ಧವೀರದೇವರು ಪ್ರಕಾಶಮಾಡುತ್ತಾರೆ. ನಾನು ನೀನೆಂಬ ದ್ವೈತಭಾವದ ಭ್ರಾಂತಿ ನಿರ್ಮೂಲವಾಗಿ 'ಏಕೋಭಾವ' ನೆಲೆಯಾಗಿ ನಿಂತ ಬಳಿಕ ನಾನಾರು? ನೀನಾರು? ನಾನೆಂದು ನೀನೆಂದು ಅರಿವ ಎರಡು ಅರಿವುಗಳ, ತಾನು–ಇದಿರು ನೋಡುವ ಅನಂತ ನೋಟಗಳ ಮೂಲಚೈತನ್ಯವಾದ ಶಕ್ತಿ ಒಂದು; ಅದೇ ಜ್ಞಾನಶಕ್ತಿ, ಚಿಚ್ಛಕ್ತಿ. ಚಿದಂಶಿಕ, ಚಿತ್‌ಸ್ವರೂಪಕ ನಾನು ಈ ಶಕ್ತಿಯ ಬೆಂಬಳಿಯಲ್ಲಿ ಬಂದ ತಮ್ಮ, ಶರಣ. ಈ ಶಕ್ತಿಯ ಗಂಡ 'ಚಿದಂಗನಾಪ್ರಭು' ಪರಶಿವಲಿಂಗ ನೀನು. ಮತ್ತೆ ಈ ಚಿದಂಗನೆ ನಿನ್ನ ಶಕ್ತಿ, ನೀನು. ಚಂದ್ರನ ಚಂದ್ರಿಕೆ ಯಾರು? ಆದ್ದರಿಂದ ನನಗೂ ನಿನಗೂ ಈ ಸಂಬಂಧ. ಇದೇ ಕಾರಣ, ನನ್ನಲ್ಲಿ ಅರಿವು ಮರವೆ ಹೊಳೆದರೆ, ಆ ಹೊಳಹಿಗೆ ಮೂಲಕಾರಣ ನೀನೇ.

ಬಸವಣ್ಣನ ಮಾತು ದೊಡ್ಡ ಮಾತು, ಮಹಾತತ್ತ್ವಾರ್ಥದ ಮಾತು. ಅದು ನಿಜ.

---

೧. ಶೂ. ಸಂ. ಪು. ೧೩೪, ವ. ೧೦.
೨. ಅದೇ ,, ವ. ೧೧.

ಆದರೆ ಅಜ್ಞಾನ ಸುಜ್ಞಾನ, ನಾನು ನೀನು, ಶಿವ ಶಕ್ತಿ ಎರಡಲ್ಲ, ಬೇರಲ್ಲ ಒಂದು, ನೀನು, ಪ್ರಭು–ಎಂದು ಅದ್ವೈತವನಾಡಿದರೆ ಶಿವಜ್ಞಾನಿಗಳು, ಮಹಾನುಭಾವಿಗಳು ಮೆಚ್ಚುವುದೆಂತು? ಶಿವಾದ್ವೈತದ ಪರಮಗಂಭೀರಕ್ಕಳಿಯದೆ, 'ತನ್ನ ತಾನಾರೆಂಬುದನಱಿಯದೆ'[೧] 'ಅನ್ಯವೆಲ್ಲವೂ'[೧] ಪರಬ್ರಹ್ಮವೆಂದು ಹೇಳಿದರೆ ಅದು ಶಿವಜ್ಞಾನದ ಆಧಾರವೇ ಇಲ್ಲದ 'ಕರ್ಮದ ನುಡಿ,'[೧] ಜಡರ ಮಾತು. ತನ್ನ ಲೆಕ್ಕ ತನಗೆ ಹತ್ತದೆ ವಿಶ್ವಬ್ರಹ್ಮಾಂಡದ ಬ್ರಹ್ಮನನ್ನು ಲೆಕ್ಕಮಾಡುವುದು ದೊಡ್ಡ ಹೆಡ್ಡತನ.

ಪ್ರಭುದೇವರ ಈ ಗಹನಕ್ಕೆ ಗಹನವಾಗಿ ಸೂಕ್ಷ್ಮವಾಗಿ ಉತ್ತರಕೊಡುತ್ತಾನೆ ಬಸವಣ್ಣ. 'ಬೆಳಗಿನ ಬೆಳಗ ಬೆಳಗಿನಲಱಿಯಬೇಕು.' ನಾನು ಅರಿವಿನ ದೀವಿಗೆ ಹಿಡಿದುಕೊಂಡು, ಅದರ ಮೂಲ ಉಗಮಸ್ಥಾನವಾದ ತಾನು–ಅರಿವನ್ನು ಕಂಡುಕೊಂಡು, ಅಲ್ಲಿ 'ನಾನು ನೀನು' ಎಂಬ ಭಿನ್ನಭಾವ ತನ್ನ ತಾನೆ ಕಳಚಿ ಮರೆಯಾಗಿ ಹೋದುದನ್ನು ತಿಳಿದು ಕಂಡ ಬಳಿಕ, ಅರಿದ ಅರಿವು ನೀನು ಮರೆದ ಮರವು ನೀನು ಎಂದೆನ್ನುವ ವಾಗದ್ವೈತವಲ್ಲ ಬಸವಣ್ಣನ ಮಾತು. ದೇಹಪ್ರಾಣಾದಿಗಳನ್ನು ಕಳೆದುಳಿದು ಮತ್ತೆ ಅದೇ ದೇಹಾದಿಗಳಲ್ಲಿ ನಾನು ಇದ್ದು ಆ ದೇಹಾದಿ ನಿಮ್ಮದು ಎಂಬ ಭ್ರಾಂತಿಸೂತಕ ಬಸವಣ್ಣನಿಗಿಲ್ಲ. '...ನಿನ್ನ ಅಱಿದ ಅಱಿವ ಭಿನ್ನವಿಟ್ಟು ಕಂಡೆನಾದರೆ ನಿಮ್ಮಾಣೆ ಕಾಣಾ ಕೂಡಲಸಂಗಮದೇವಾ!'[೨] ಕೂಡಲಸಂಗಮದೇವನನ್ನು ಅಂದರೆ ನಿಮ್ಮನ್ನು ಅಥವಾ ಗೊಹೇಶ್ವರಲಿಂಗವನ್ನು ಸ್ವಯಂ ಪ್ರಜ್ವಲಿಸಿ, ಸ್ವಯಂ ಕೂಡಲಸಂಗಮದೇವನಾಗಿ ತೋರಿದ ಸ್ವಯಂ ಜ್ಞಾನ ಜ್ಯೋತಿ ಅದೊಂದು ಬೇರೆ, ಅದನ್ನು ಕಂಡ ನಾನು–ಅರಿವಿನ ಬಸವಣ್ಣ ಬೇರೆ ಎಂಬ ಭಿನ್ನ, ದ್ವೈತಭಾವ ಬಸವಣ್ಣನಲ್ಲಿ ಉಳಿದಿಲ್ಲ. ಅಂದರೆ ಸಂಗಮಲಿಂಗವನ್ನು ಕಂಡ ಬಸವಣ್ಣ ಉಳಿದಿಲ್ಲ. ಇಲ್ಲದ ಬಸವಣ್ಣನ ಮುಂದೆ ಲಿಂಗ ಉಳಿವುದೆಂತು?

ಬಸವಣ್ಣನ ಈ 'ಬಸವಲಿಂಗ' ಅಥವಾ 'ಸಂಗನಬಸವಣ್ಣ'ನ ಅರಿವಿನ ಹಂತ 'ಆರೂಢಿಯ ಕೂಟ'ದಲ್ಲಿದೆಯೆ? ತಾನು ಭಕ್ತ, ಕೂಡಲಸಂಗಮ ದೇವ–ಎಂಬ ಎರಡು. (ಒಂದರಲ್ಲಿ ತೋರುವ ಒಡಕು. ದೇವ ಭಕ್ತರಲ್ಲಿ ಒಡಕಾಗಿದ್ದರೆ ಜ್ಞಾನ ಜ್ಞಾನವಲ್ಲ. ಭಕ್ತಿ ಭಕ್ತಿಯಲ್ಲ. ಆ ದೇವ ದೇವರಲ್ಲ, ಅಂಥ ಭಕ್ತ ಭಕ್ತನಲ್ಲ. ಅದಕ್ಕೆ ಪ್ರಭುದೇವರು ಮತ್ತೆ ಕೇಳುತ್ತಾರೆ ಬಸವಣ್ಣನನ್ನು '...ದೇವ ಭಕ್ತನೆಂಬ ನಾಮಂಗಳೆರಡು ನಿಮ್ಮಲ್ಲಿ ತೋಱುತ್ತಿದ್ದಾವೆ. ಇವು ಅಡಗಿದ ಪರಿ ಹೇಗೆ?'[೩]

ಪ್ರಭುದೇವರ ಈ ಪ್ರಶ್ನೆಗೆ ಬಸವಣ್ಣ, ತಾನಿಲ್ಲದೆ ತನಗೆ ಇದಿರಿಟ್ಟು ಕೂಡಲಸಂಗಮನಿಲ್ಲದೆ ನಿಶ್ಶಬ್ದವಾಗಿರುವ ನಿಜಗಂಭೀರ ಸ್ಥಲವನ್ನು ಬೆಳಗಿನ ಶಬ್ದದಲ್ಲಿ ಹಾಡುತ್ತಾನೆ:

ಘನ ಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯಾ.
ಕೂಡಲಸಂಗನೆಂಬ ಬೆಳಗಿನೊಳಗೆ ಬೆಳಗಾಗಿದ್ದು,
ಶಬ್ದ ಮುಗ್ಧವಾಗಿರ್ದುದನೇನೆಂಬೆನಯ್ಯಾ![೪]

೧. ಶೂ. ಸಂ. ಪು. ೧೩೪, ವ. ೧೨.
೨. ಅದೇ ,, ವ. ೧೩.
೩. ಶೂ. ಸಂ. ಪು. ೧೩೫, ವ. ೧೪.
೪. ಅದೇ ,, ವ. ೧೫.

ಮಹಾಘನಲಿಂಗದ ನಿರಾಳದ ಬೆಳಗಿನೊಳಗೆ ಒಡಗೂಡಿ ಒಡವೆರೆದು ಏಕರಸವಾಗಿ ನಿಂದಿರುವ 'ಬಸವಲಿಂಗ'ದಲ್ಲಿ 'ಮಾಡುವ ಭಕ್ತ' 'ಮಾಡಿಸಿಕೊಂಬ ದೇವ'ನೆಂಬ ಶಬ್ದ ಮುಗ್ಧವಾಗಿದೆ. ಉಭಯದ ಸಂದು ಹಿಂಗಿ ಹೋಗಿದೆ. ದೇವ-ಭಕ್ತ ಒಂದಾಗಿ ನಿಂದು ಪ್ರಜ್ವಲಿಸುವ ಅದ್ವಿತೀಯ ರಸಾನಂದದ ಅನುಭವ ನುಡಿಗಳೆದು ಬತ್ತಲೆಯಾಗಿ ಬಸವಣ್ಣನಲ್ಲಿ ಹೊಳೆದಿರುವ ಹೊಳಪನ್ನು ಕಂಡು ಪ್ರಭುಲಿಂಗ ಮೆಚ್ಚಿ ಅಹುದೆಂದು ತಲೆದೂಗುತ್ತದೆ. ತನಗೆ ಕರಸ್ಥಲದ ಲಿಂಗವನ್ನು ಕೊಟ್ಟ ಗುರು ಅನಿಮಿಷಯ್ಯನನ್ನು ಕಂಡ ಪರಮಾನಂದವಾಗುತ್ತದೆ- ಅಲ್ಲಮಪ್ರಭುದೇವರಿಗೆ. '...ಕಲಿಯುಗದಲ್ಲಿ ಅನಿಮಿಷಯ್ಯ–ಬಸವನೆಂಬ ಗಣೇಶ್ವರನ ಕಂಡೆನಯ್ಯಾ ಇಂದು. ಎನ್ನ ಕಂಡವರನು, ನಿನ್ನ ಕಂಡವರನು ಇಂದು ಕಂಡೆ ಕಾಣಾ ಗೊಹೇಶ್ವರಾ !'[೧]

ಪ್ರಭು 'ಎನ್ನ ಕಂಡವರನು' ಕಂಡೆ, ಗೊಹೇಶ್ವರನನ್ನು ಕಂಡವರ ಕಂಡೆ ಎಂದು ಹೇಳುವ ಮಾತಿನಲ್ಲಿ 'ಶಬ್ದ ಮುಗ್ಧವಾಗಿದ್ದ' ಗೊಹೇಶ್ವರನ ಅನುಭವ ಬಸವಣ್ಣನ ಇರವಾಗಿ ಇರುವಂತೆ ಶಬ್ದಮಾಡುತ್ತಿರುವ 'ಗೊಹೇಶ್ವರಲ್ಲಯ್ಯ'ನ ನಿಜಾಂತರಂಗವನ್ನೂ ಬಸವಣ್ಣ ಭೇದಿಸಿ ಕಂಡಿದ್ದಾನೆ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಪ್ರಭುವಿನ ಈ ಮಾತು ಸತ್ಯ ಎಂಬುದಕ್ಕೆ ಬಸವಣ್ಣನ ವಚನವೆ ಸಾಕ್ಷಿ:

ಮರುಗದ ಗಿಡುವಿನಂತೆ ಹುಟ್ಟುತ್ತವೆ ಪರಿಮಳ !
ಎರವಿನ ಬಣ್ಣ ದೊರೆಗೆಡಿಸಿದ ಪರಿಯ ನೋಡಾ !
ಹರನ ಪ್ರೇರಣೆಯೊಳಗೆ ಹಿರಿದೊಂದು ವಾರುಧಿ.
ವಾರುಧಿಯೊಳಗಣ ಕಮಲ ಬಾಡಿ, ಕಮಲದೊಳಗೆ ಸುಳಿವ
ಭ್ರಮರನ ಪಕ್ಕ ಮುರಿದುರುಳಿದರೆ ನಿರಂಜನವಾಯಿತ್ತು ನೋಡಾ !
ಹರಿಗೊಯಿದ ಮಿಂಚಿನ ಗೊಂಚಲ ನೆರೆ ಓತು.
ಇಂದುಕೋಟಿ ಪ್ರಭೆಯು ಶಾಂತಿಯನೊಳಕೊಂಡು.
ಕೂಡಲಸಂಗಮದೇವರ ನೆರೆ ಓತ
ಪ್ರಭುದೇವರ ಶ್ರೀಪಾದಪದ್ಮದಲ್ಲಿ ಭೃಂಗನಾಗಿ ಬದುಕಿದೆನು ![೨]

ಈ ವಚನದ ಬೆಡಗನ್ನು ಬಲ್ಲವರು ಬಿಚ್ಚಿಕೊಳ್ಳಬಹುದು. ನಮಗಿದಕ್ಕೆ ಅರ್ಥ ಹೊಳೆಯದಿದ್ದರೆ ಕೊರಗುವ ಕಾರಣವಿಲ್ಲ. ಹೊಳೆಯದ ಗುಪ್ತಭಾವದ ಆಚೆಗೆ ಮೀರಿದ 'ನಿರಂಜನ' ಅರ್ಥ, ಕೋಟಿ ಚಂದ್ರಪ್ರಭೆಯ ಶಾಂತಿವಾರಾಶಿಯ ಗೊಂಚಲಂತೆರೆ ನಮ್ಮ ಹೃದಯದಲ್ಲಿ ಅಪ್ಪಳಿಸಿ ಮೇಲ್ವಾಯುವಂತೆ ಆಗುವದಿಲ್ಲವೇ? ಬುದ್ಧಿಗೆ ನಿಲುಕದ ಅರ್ಥ ಹೃದಯದ ಕಣ್ಣಿಗೆ ಹಿಡಿಸದಷ್ಟು ಕಂಡರೂ ಸಾಕು.

ಮತ್ತೆ ಮುಂದೆ ಬಸವಣ್ಣ ಪ್ರಭುದೇವರಲ್ಲಿ ನಡೆದ ಸಂಭಾಷಣೆಯನ್ನು ನಾವು ಕೇಳುತ್ತ ನಡೆದರೆ ಗೋಷ್ಠಿಯ ವಿಷಯ 'ಆದಿಯನಾದಿ'ಯ ಸ್ವರೂಪ ಮತ್ತು ಆದಿ ಅನಾದಿಗೆ ಇರುವ ಸಂಬಂಧ. ಅಂದರೆ ಭಕ್ತನಿಗೂ ಲಿಂಗ ಜಂಗಮಕ್ಕೂ ಇರುವ ನಿಜ

೧. ಶೂ. ಸಂ. ಪು. ೧೨೫. ವ. ೧೬. ೨. ಶೂ. ಸಂ. ಪು. ೧೨೫-೨೬. ವ. ೧೭.

ಸಂಬಂಧ. ಇಲ್ಲಿ ನಡೆವ ಚರ್ಚೆ ಒಬ್ಬರನ್ನೊಬ್ಬರು ಒರೆದು ನೋಡುವ ಪರೀಕ್ಷೆಯಲ್ಲ. ಅಥವಾ ಗೆಲ್ಲ ಸೋಲದ ವಾಗ್‌ವಾದದ, ವಾಗ್‌ಯುದ್ಧದ ಮಾತೇ ಇಲ್ಲ ಈ ಸಂಗೋಷ್ಠಿಯಲ್ಲಿ. ಒಬ್ಬರನ್ನೊಬ್ಬರು ಒಪ್ಪಿಕೊಂಡು ಮೆಚ್ಚಿಕೊಂಡು ಅಪ್ಪಿಕೊಂಡು, ಒಬ್ಬರಿಂದೊಬ್ಬರು ಮಹಾಘನದಲ್ಲಿ ಹೆಚ್ಚು ಹೆಚ್ಚು ಬೆಳೆದು ಹಬ್ಬುತ್ತಿರುವ ದಿವ್ಯದೃಶ್ಯ ಈ ಸಮಗೋಷ್ಠಿಯಲ್ಲಿ ಕಂಡುಬರುವಂತಿದೆ. ಬಸವಣ್ಣ ಪ್ರಭುವಿನಿಂದ ಬದುಕುವಂತೆ ಪ್ರಭುವೂ ಬಸವಣ್ಣನ ಭಕ್ತಿಯಿಂದ ಚಿಗುರಿ ಹೊಗರೇರುವಂತಾಗಿದ್ದಾನೆ.

ಅಲ್ಲಮಪ್ರಭು ನಾವು ನೋಡುತ್ತ ಬಂದಂತೆ ಸಾಕಾರಲಿಂಗ, ಜಂಗಮದೇವ. ಈ ಜಂಗಮದೇವ, ಈ ಸುಜ್ಞಾನ ಚೈತನ್ಯಮೂರ್ತಿ ಬಸವಣ್ಣನೊಡನೆ ಅನುಭವಮಾಡಿ ಏನು ಕಲಿತುಕೊಂಡ? ತನ್ನ ಸುಜ್ಞಾನದಲ್ಲಿ ಏನು ತುಂಬಿಕೊಂಡ? ಎಲ್ಲ ಶರಣರಿಗೆ ಮಹಾಘನ ಶೂನ್ಯವನ್ನು ಸಂಪಾದಿಸಿಕೊಡುತ್ತ ನಡೆದಿರುವ ಗೊಹೇಶ್ವರನ ಶರಣ ಪ್ರಭುದೇವರು ಬಸವಣ್ಣನಿಂದ ಏನು ಸಂಪಾದಿಸಿಕೊಂಡ? ಅದೋ ಆ ಪ್ರಭುವೇ ಹೇಳುತ್ತಾನೆ ಕೇಳಿ:

> ಗುರು ಒಂದೆ ಬಸುಱು. ಲಿಂಗ ಒಂದೆ ಬಸುಱು.
> ಜಂಗಮ ಒಂದೆ ಬಸುಱು. ಪ್ರಸಾದ ಒಂದೆ ಬಸುಱು.
> ಇವನಾರಯ್ಯಾ ಅಮಳೋಕ್ಯವ ಮಾಡಿ ತೋಱಿದವರು?
> ಇವನಾರಯ್ಯಾ ಪ್ರಜ್ವಲಿತವ ಮಾಡಿ,
> ಬೇಱೆ ಬೇಱೆ ಕರತಳಾಮಳಕವ ಮಾಡಿ ತೋಱಿದವರು?
> ಪೂರ್ವಾಚಾರಿ ಭಕ್ತಿಭಾಂಡಾರಿ ಬಸವಣ್ಣಾ,
> ನೀನೆನಗೆ ಗೊಹೇಶ್ವರಲಿಂಗವ ತೋಱಿದೆಯಾಗಿ
> ಲೋಕಾದಿ ಲೋಕವೆಲ್ಲವು ಕಿಂಚಿತ್ತು ![೧]

ಗುರು ಲಿಂಗ ಜಂಗಮ ಪ್ರಸಾದ ಒಂದೆ ಬಸುರಲ್ಲಿ ಬಂದ 'ಚತುರ್ವಿಧ ಸಾರಾಯ' ಸಂಪತ್ತು.[೨] ನಿಃಕಲ ಪರಶಿವಲಿಂಗದಿಂದ ಆವಿರ್ಭವಿಸಿದ ಗುರುಲಿಂಗ ಜಂಗಮ ಪ್ರಸಾದ

---

೧. ಶೂ. ಸಂ. ಪು. ೧೩೬, ವ. ೨೦.

೨. ಈ ವಿಷಯದ ವಿವರಣೆಗೆ ಏಕೋತ್ತರಶತಸ್ಥಲದ ಅಂಗಸ್ಥಲಗಳಲ್ಲಿ ಬರುವ ಭಕ್ತಸ್ಥಲದಲ್ಲಿ ೧೨ನೆಯದಾದ ಚತುರ್ವಿಧ ಸಾರಾಯ ಸ್ಥಲವನ್ನು ಅವಲೋಕಿಸಿರಿ.

ಮತ್ತೆ ಶೂನ್ಯಸಂಪಾದನೆಯ '...ಘನಕ್ಕೆ ಘನವಾದ ವಸ್ತು ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ...' ಎಂಬ ಪ್ರಭುದೇವರ ವಚನವನ್ನು (ಪು. ೧೫, ವ. ೪೪) ನೋಡಿರಿ. ಇದಲ್ಲದೆ '...ಆ ಪರಶಿವಲಿಂಗವು ಗುರುವಾಗಿ ಬಂದು ತ್ರಿವಿಧ ದೀಕ್ಷೆಯಿಂದ ಮಲತ್ರಯಂಗಳ ಕಳೆದು ದೀಕ್ಷಿಸಿ ರಕ್ಷಿಸಿದ; ಲಿಂಗಸ್ವರೂಪವಾಗಿ ಬಂದು ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದ; ಜಂಗಮಸ್ವರೂಪವಾಗಿ ಬಂದು ಅಂತರಂಗ ಬಹಿರಂಗದಲ್ಲಿ ಭರಿತನಾಗಿ ಬೋಧಿಸಿ ಶಿಕ್ಷಿಸಿ ರಕ್ಷಿಸಿದ; ಪ್ರಸಾದವ ಕರುಣಿಸಿ ತನ್ನೊಳಗೆ ಕೂಡಿಕೊಳುತಿರ್ದನು ಆ ನಿಃಕಲ ಪರಶಿವಲಿಂಗವು...' ಶೂ. ಸಂ. ಪು.: ಎಂಬ ಗದ್ಯ ಭಾಗ ನೋಡಿರಿ.

ಗಳ ಅರಿವು ಇತ್ತು ಪ್ರಭುದೇವರಿಗೆ. ಆದರೆ ನಿಜಾಂತರಂಗದ ಈ ಅರಿವನ್ನು ತೆಗೆದು ಮನಃಸ್ಥಲಕ್ಕೆ ತಂದು ಪ್ರಭುವಿಗೆ ಗುರು ಲಿಂಗ ಜಂಗಮ ಪ್ರಸಾದವನ್ನು ಸ್ವಾಯತಮಾಡಿ ಕೊಟ್ಟ ಬಸವಣ್ಣ. ನಿಜಾಂತರಂಗದಿಂದಲೆ ಹೊಮ್ಮಿ ಗುರು ಲಿಂಗ ಜಂಗಮ ಪ್ರಸಾದ ನಾಲ್ಕು ವಿಧವಾಗಿ ಬೇರೆ ಬೇರೆಯಾಗಿ ಪ್ರಜ್ವಲಿಸುವ 'ಚತುರ್ವಿಧ ಸಾರಾಯ'ದ ಅನುಭವವನ್ನು ಪ್ರಭುವಿನಲ್ಲಿ ಎಚ್ಚರಿಸಿಕೊಟ್ಟ ಬಸವಣ್ಣ. ಹಿಂದಾರಿಗೂ ಇಲ್ಲದ ಈ ಅನುಭವಮಾಡಿಕೊಡಬಲ್ಲ ಬಸವಣ್ಣ 'ಪೂರ್ವಾಚಾರಿ' ಸತ್ಯ ಸತ್ಯ ಎಂಬ ಮಾತು ಹೊಳೆಯಿತು ಪ್ರಭುದೇವನಿಗೆ. ಈ ಚತುರ್ವಿಧ ಸಾರಾಯದ ಸಂಪತ್ತಿಯ ಅನುಭವ 'ಭಕ್ತಿಭಾಂಡಾರಿ'ಗೇ ಬರಬಲ್ಲುದು ಎಂಬ ಸಂಗತಿಯೂ ಸುಸ್ಪಷ್ಟವಾಗಿ ತಿಳಿಯಿತು ದೇವನಿಗೆ. '...ಇಂತೀ ಚತುರ್ವಿಧ ಸ್ವಾಯತವನು ನೀನೆ ಮಾಡಿದೆಯಾಗಿ, ನಮ್ಮ ಗೊಹೇಶ್ವರಲಿಂಗಕ್ಕೆ ನೀನೆ ವಿಳಾಸವಾದೆಯಲ್ಲೈ ಸಂಗನ ಬಸವಣ್ಣಾ'[೧] ಅನಿಮಿಷಯ್ಯನ ಕೈಯಿಂದ ಪಡೆದ 'ಆದಿಯ ಲಿಂಗ' 'ಅನಾದಿಯ ಜ್ಞಾನ' 'ಪ್ರಾಣ ಲಿಂಗವೆಂದಱಿದ' ಅರಿವು, ಅನುಭವ ನನಗೆ ನಿನ್ನಿಂದಲೆ ಆಯಿತು ಸಂಗನ ಬಸವಣ್ಣಾ ಎಂಬ ಕೃತಜ್ಞವಾದ ಕೃತಾರ್ಥಭಾವ '...ಗೊಹೇಶ್ವರಸಾಕ್ಷಿಯಾಗಿ ಸಂಗನ ಬಸವಣ್ಣಾ, ನಿಮ್ಮ ಪ್ರಸಾದದ ಶಿಶು ನಾನು ನೋಡಯ್ಯಾ!'[೨] ಎಂದು ಹಾಡಿ ಹರಸಿದೆ. ಯಾರು ಯಾರ ಶಿಶು? ಜಂಗಮದ ಶಿಶು ಭಕ್ತ; ಭಕ್ತನ ಶಿಶು ಜಂಗಮ. ಭಕ್ತನಿಗೆ ಜಂಗಮ ವಿಳಾಸ; ಜಂಗಮ ಲಿಂಗಕ್ಕೆ ಭಕ್ತ ವಿಳಾಸ. ಇನ್ನೂ ಮುಂದೆ ಹೋದರೆ ಕಾಣುವ ಅರ್ಥ ಜಂಗಮದಲ್ಲಿ ಭಕ್ತ ಸನ್ನಿಹಿತ, ಭಕ್ತನಲ್ಲಿ ಜಂಗಮ ಸನ್ನಿಹಿತ. ಭಕ್ತ ತುಂಬಿದ ಜಂಗಮ ಪೂರ್ಣಜಂಗಮ, ಜಂಗಮ ತುಂಬಿದ ಭಕ್ತ ಪೂರ್ಣಭಕ್ತ.

ಭಕ್ತ-ಜಂಗಮದಲ್ಲಿ ಯಾವ ತತ್ತ್ವ ಮೊದಲು? ಯಾವುದು ಹಿಂದುಗಡೆ? ಎಂಬುದೇ ಆದಿ ಅನಾದಿಯ ಸಮಸ್ಯೆ. ತನ್ನಿಂದ ಪ್ರಭುದೇವರಿಗೆ ಚತುರ್ವಿಧ ಅಳವಟ್ಟಿತು ಎಂಬ ಮಾತನ್ನು ಬಸವಣ್ಣ ಒಪ್ಪುವುದಿಲ್ಲ. ಏಕೆ ಎಂದು ಕೇಳಿದರೆ ಬಸವಣ್ಣನ ಅಭಿಮತ ಹೀಗಿದೆ:

---

೧. ಶೂ. ಸಂ. ಪು. ೧೩೬, ವ. ೧೮.

ಈ ಸಂದರ್ಭದಲ್ಲಿ ಬಸವಣ್ಣನವರು ಚೆನ್ನಬಸವಣ್ಣನಿಗೆ ಗುರೂಪದೇಶ ಮಾಡಿದ ಸಮಯದಲ್ಲಿ ಇದೇ ಚತುರ್ವಿಧ ಸ್ವಾಯತ ತನಗೆ ಬಸವಣ್ಣನಿಂದ ಆದ ಸಂಗತಿಯನ್ನು 'ಹರ ತನ್ನ ರೂಪ ತೋಱಬೇಕೆಂದು...' (ಶೂ. ಸಂ. ಪು. ೭೬, ವ. ೧೪). ಚೆನ್ನಬಸವಣ್ಣನವರು ಹೇಳಿದ ಸನ್ನಿವೇಶ ವನ್ನು ನೆನೆಸಿಕೊಳ್ಳಿ. ಇದೇ ವಚನ, ವಚನಶಾಸ್ತ್ರಸಾರ ಭಾಗ ೨, ಪುಟ ೩೬೫ರಲ್ಲಿ ಸ್ವಲ್ಪ ಹೆಚ್ಚು ಕಡಮೆ ಪಾಠದೊಡನೆ-ಬಂದು ಗಮನಾರ್ಹವಾಗಿದೆ. ನೋಡಿ:

> ಹರ ತನ್ನ ರೂಪ ತೋರಬೇಕೆಂದು ಗುರುರೂಪಾಗಿ ಬಂದು ಮನಸ ಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ, ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ. ಇಂತು ಚತುರ್ವಿಧ ಕೂಡಲಚೆನ್ನಸಂಗಯ್ಯ ಬಸವಣ್ಣನೊಬ್ಬನೆ.

೨. ಶೂ. ಸಂ. ಪು. ೧೩೭, ವ. ೨೨.

ಆದಿ ಭಕ್ತ; ಅನಾದಿ ಜಂಗಮ. ಆದಿ ಶಕ್ತಿ; ಅನಾದಿ ಶಿವನು ನೋಡಾ !
ಎನ್ನ ಆದಿಪಿಂಡಕ್ಕೆ ನೀನೆ ಆಧಾರವಾಗಿ ತೋಱಿದರೆ.
ನಿಮ್ಮ ಹೃದಯಕಮಲಪಿಂಡದಲ್ಲಿ ನಿಮ್ಮ ಕಂಡೆನು.
ಆ ಕಾಬ ಜ್ಞಾನವೆ ಜಂಗಮ.
ಆ ಜಂಗಮವಿಡಿದಲ್ಲದೆ ಲಿಂಗವ ಕಾಣಬಾರದು.
ಆ ಜಂಗಮವಿಡಿದಲ್ಲದೆ ಗುರುವ ಕಾಣಬಾರದು.
ಆ ಜಂಗಮವಿಡಿದಲ್ಲದೆ ಪ್ರಸಾದವ ಕಾಣಬಾರದು.
ಕಾಯ ಭಕ್ತ. ಪ್ರಾಣ ಜಂಗಮವೆಂಬ ವಚನವ ತಿಳಿಯಲು.
ಎನ್ನ ಪ್ರಾಣವು ನೀವಲ್ಲದೆ ಮತ್ತಾರು ಹೇಳಯ್ಯಾ?
ಇದು ಕಾರಣ, ನಿಮ್ಮ ಘನವ ಕಿಱಿದುಮಾಡಿ.
ಎನ್ನನೊಂದು ಘನವ ಮಾಡಿ ನುಡಿವಿರಿ ಕೂಡಲಸಂಗಮದೇವಾ ![1]

ಅಂತರಂಗದ ಅರಿವು ಅರಿವ ಚೈತನ್ಯಜ್ಞಾನ. ಅದೇ ಜಂಗಮ. ಬಹಿರಂಗದ ಆಚಾರ ಶಿವಾಚಾರವಾಗಿ ಹರಿವಲ್ಲಿ ಆಚಾರದೊಳಗೆ ಮೇಲೆ ಏರಿಕೊಂಡು ಕುಳಿತಿರುವ ಚೈತನ್ಯ ಜ್ಞಾನಮೂರ್ತಿ. ಅದೇ ಜಂಗಮ. ಮನದ ಒಳಗೆ ಘನಕ್ಕೆ ತನ್ನ ಮೂಲ ನಿಜಘನದ ನೆನಪಾಗಿ. ಆ ನೆನದ ನೆನಹಿನಲ್ಲಿ ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲ ಸ್ವಾಯತವಾಗಿ ಅನುಭವಕ್ಕೆ ಬಂದರೆ ಆ ನೆನಹಿನ ಗತಿಯಲ್ಲಿ ನಡೆದ ಚೈತನ್ಯಜ್ಞಾನ. ಅದು ನೀವು ಧ್ಯಾನಲಿಂಗ. ಜಂಗಮ. ಮತ್ತೆ ಪ್ರಾಣಲಿಂಗ ಸ್ಥಲವನ್ನೆದುವ ಹಾದಿಯ ನೆಲಗನ್ನು ತೋರಿಸಿ ಹಾದಿಗೆ ಹಚ್ಚಿದ ಲಿಂಗದ ಪ್ರಾಣಚೈತನ್ಯ. ನೀವು ಪ್ರಾಣಜಂಗಮ. ನನ್ನಲ್ಲಿ ನೀವು ನಿಮ್ಮನ್ನು ಕಂಡು. ಗುರು ಲಿಂಗ ಜಂಗಮ ಪ್ರಸಾದವನ್ನು ಕಂಡು ನನಗೆ ತೋರಿಸಿದರೆ ಅದನ್ನು ನಾನು ಕಂಡೆ. ಅಂದರೆ ನಿಮ್ಮಿಂದ ನಿಮ್ಮನ್ನು ಕಂಡೆ. ನೀವು ತೋರಿದರೆ ನಾನು ಕಂಡೆ. ನೀವು ಮಾಡಿದರೆ ನಾನಾದೆ. ನೀವಿಲ್ಲದೆ ನೀವಾದ ಚತುರ್ವಿಧ ನನಗೆಲ್ಲಿ ಸ್ವಾಯತ? ಜಂಗಮ ಅನಾದಿ. ಭಕ್ತ? ಜಂಗಮವಿದ್ದರೆ ಭಕ್ತ. 'ಕಾಯ ಭಕ್ತ: ಪ್ರಾಣ ಜಂಗಮ'. ವಸ್ತುಸ್ಥಿತಿ ಹೀಗಿದ್ದು ಪ್ರಾಣಕ್ಕಿಂತ ಕಾಯವೆ ಘನವೆಂದು. ಕಾಂತಿಗಿಂತ ರತ್ನಶಿಲೆಯೆ ಮೇಲೆಂದು ಹೇಳಿದರೆ ಯಾರು ಒಪ್ಪುವರು? ಅನಾದಿ ಜಂಗಮ ಮಾನವನ ಭಾವ ಮನ ಪ್ರಾಣ ದೇಹದಲ್ಲಿ ಸುಳಿಯದಿದ್ದರೆ ಮಾನವನಲ್ಲಿ ಭಕ್ತ ಮೂಡುತ್ತಿದ್ದನೆ?

ಬಸವಣ್ಣನ ಈ ಅನುಭವಸರಣಿಯಲ್ಲಿ ಜ್ಞಾನದಿಂದ ಜೀವಂತವಾಗಿ ಪ್ರಾಣಿಸುತ್ತಿರುವ ವೀರಶೈವರ 'ಸುಜ್ಞಾನ ಸದ್ಭಕ್ತಿ'ಯ ನಿಜವಾದ ಕಲ್ಪನೆ ಮೆಟ್ಟಿಲುಮೆಟ್ಟಿಲಾಗಿ ಪ್ರಸ್ಫುಟವಾಗುತ್ತ ನಡೆಯುತ್ತದೆ. ಮತ್ತೆ ಈ ಆದಿ ಅನಾದಿಯ ಸಮನ್ವಯ ಚರ್ಚೆಯಲ್ಲಿಯ 'ಜಂಗಮಪ್ರಾಣತ್ವ'ದ ನೆಲೆ ಮುಸುಕು ತೆಗೆದು ಮುಂದೆ ನಿಲ್ಲುತ್ತದೆ. ಮತ್ತೆ 'ಅನಾದಿ ಜಂಗಮಪ್ರಾಣ' ಎಂಬ ಸಾಮಾನ್ಯ ಪ್ರಯೋಗೋಕ್ತಿಯ ಮರ್ಮಸ್ಥಲ ಹುಟ್ಟಿ ನಿಚ್ಚಳವಾಗಿ

೧. ಶೂ. ಸಂ. ಪು. ೧೩೭, ವ. ೨೩.

ಕಾಣಪಡುತ್ತದೆ. 'ಜಂಗಮಂಪ್ರಾಣತ್ವ'ದೊಡನೆ 'ಭಕ್ತಕಾಯತ್ವ'ದ ವಿಷಯ ಅನಿವಾರ್ಯವಾಗಿ ಬಯಲಿಗೆ ಬರಲೇಬೇಕು.

ಬಸವಣ್ಣನ 'ಆದಿ ಭಕ್ತ. ಅನಾದಿ ಜಂಗಮ'–ಎಂಬ ಮಾತನ್ನು ಪ್ರಭು ಒಪ್ಪುವುದಿಲ್ಲ. ಆತನ ಮತದಲ್ಲಿ 'ಅನಾದಿ ಭಕ್ತ. ಆದಿ ಜಂಗಮ'. ಇದೋ, ಪ್ರಭುದೇವರ ದಿವ್ಯ ತರ್ಕದ ಪ್ರಭೆಯಲ್ಲಿ ಭಕ್ತ-ಜಂಗಮರ ಒಳಗೆ ಇನ್ನೂ ಒಳಗೆ ಇಣಿಕಿ ನೋಡಿ ಯಾವುದು ಮೊದಲು ಯಾವುದು ಮೊದಲಲ್ಲ ಎಂಬ ಮಾತು ಹೇಗೆ ಹೊಳೆಯುತ್ತದೆ:

ಆದಿ ಜಂಗಮ, ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸವಣ್ಣಾ?
ನಿತ್ಯ ನಿರಾಕಾರ ಘನವು ಶಕ್ತಿ ಇಲ್ಲದೆ ಇದ್ದರೆ ಆಗಳೆ ಬಯಲಾದಹುದೆಂದು,
ನೀನು ಘನಚೈತನ್ಯವೆಂಬ ಕಾಯವ ಧರಿಸಿದರೆ.
ಆ ಬಯಲು ಪರಬ್ರಹ್ಮವೆಂಬ ನಾಮವನೆಯ್ದಿತ್ತು ನೋಡಾ!
ಆ ಮಹಾಘನವು ತನ್ನ ವಿನೋದದಿಂದ ಸಾಕಾರವನೆಯ್ದಿದರೆ.
ಧರ್ಮವೆಂಬ ಕಾಯವ ಧರಿಸಿ. ಆ ಮೂರ್ತಿಗೆ ಆಧಾರವಾದೆಯಾಗಿ,
ಜಗದ ಕರ್ತ ಶಿವನೆಂಬ ನಾಮವಾಯಿತ್ತಲ್ಲಾ ಬಸವಣ್ಣಾ. ನಿನ್ನಿಂದ!
ಜಂಗಮವೆ ಲಿಂಗವೆಂದು ನೀ ಭಾವಿಸಲಾಗಿ.
ನಿನ್ನ ಸನ್ನಿಧಿಯಿಂದ ಪ್ರತಿನಿಧಿಯಾಯಿತ್ತು ನೋಡಾ ಬಸವಣ್ಣಾ!
ಲಿಂಗವನು ನೀನು ಹಿಡಿದು ಪೂಜಿಸಲಾಗಿ.
ಹೆಸರುವಡೆಯಿತ್ತು ನೋಡಾ ಬಸವಣ್ಣಾ!
ಪ್ರಸಾದವನು ನೀನು ಕೊಂಡು ಪಥವ ತೋಱಿದೆಯಾಗಿ,
ಪ್ರಸಾದವು ನಿನ್ನಿಂದ ಹೆಸರಾಯಿತ್ತು ನೋಡಾ ಬಸವಣ್ಣಾ!
ಇದು ಕಾರಣ ನೀನೆ ಅನಾದಿ ಭಕ್ತ. ನಾನೆ ಅನಾದಿಯಿಂದಿತ್ತಿತ್ತ.
ನೀನು ಮಾಡಲಾಗಿ ಆನಾದೆನೆಂಬುದ
ನಮ್ಮ ಗುಹೇಶ್ವರನೆ ಬಲ್ಲ ಕಾಣಾ ಸಂಗನಬಸವಣ್ಣಾ![೧]

ಆದಿ ಭಕ್ತ. ಅನಾದಿ ಜಂಗಮ–ಎಂಬ ಮಾತನ್ನು ಪ್ರಭುದೇವರು ಒಪ್ಪದಿದ್ದರೂ ಭಕ್ತಕಾಯ. ಪ್ರಾಣ ಜಂಗಮ–ಎಂಬ ಬಸವಣ್ಣನ ನುಡಿಗೆ ತಮ್ಮ ನುಡಿಯದ ಸಮ್ಮತಿಯನ್ನು ಅವರು ನೀಡಿದ್ದಾರೆ ಈ ವಚನದಲ್ಲಿ. ಶಕ್ತಿಯ ಯಾವ ಸ್ಫುರಣೆಯಿಲ್ಲದ ನಿತ್ಯ ನಿರಾಕಾರ ಘನ–ಬಯಲು. ಈ ಘನಬಯಲಿಗೆ ಘನಚೈತನ್ಯಸ್ವರೂಪವಾದ ಶಕ್ತಿಯ ಕಾಯ ಆಧಾರವಾದಾಗಳೆ ಅದಕ್ಕೆ–ಬಯಲು-ಚೈತನ್ಯಕ್ಕೆ ಪರಬ್ರಹ್ಮ ಎಂಬ ಹೆಸರು ಬಂತು. ಬಯಲನ್ನು ಹೊತ್ತುಕೊಂಡು ನಿಂದ ಶಕ್ತಿ-ಕಾಯ ಭಕ್ತಿ-ಕಾಯವೆ. ಭಕ್ತಿಯಿಲ್ಲದ ಶಕ್ತಿ ಬಯಲನ್ನು ಹೊತ್ತುಕೊಂಡು ಏಕೆ ತಿರುಗಬೇಕು? ಬಯಲು ಪ್ರಾಣ. ಚೈತನ್ಯ ಕಾಯವಾದ ಪರಬ್ರಹ್ಮದಲ್ಲಿ ಲೀಲೆಯ ನೆನಹುದೋಱಿ ಸಾಕಾರ ಶಿವನಾದರೆ ಸದ್ಧರ್ಮ ರೂಪವಾದ ವೃಷಭನೆ ನೀನಾಗಿ ಹೊತ್ತುಕೊಂಡರೆ ಆ ಶಿವ 'ಜಗದ ಕರ್ತ'ನಾದ. ಜಗಕ್ಕೆ

೧. ಶೂ. ಸಂ. ಪು. ೭೬೭-೬೮, ವ. ೨೪.

ಕರ್ತನೆನಿಸಿಕೊಂಡ. ಹೊತ್ತ ನೀನು ವಾಹನ-ಭಕ್ತ. ಹೊರಿಸಿಕೊಂಡ ವಾಹಕ-ಪ್ರಾಣ ಶಿವ. ಈ ವಾಹನ ವಾಹಕ ಸಂಬಂಧ ಅವಿನಾಭಾವ ಸಂಬಂಧ, ಪ್ರಾಣ ಕಾಯದ ಸಂಬಂಧ. ಚಂದ್ರ ಚಂದ್ರಿಕೆಯ ಸಂಬಂಧ. ಮತ್ತೆ ಭಕ್ತಿ ಅಂದರೆ ಬಸವಣ್ಣ ಸುಜ್ಞಾನವನ್ನು. ಸುಜ್ಞಾನಭರಿತ ಮಾನವ ಆಕಾರವನ್ನು ಜಂಗಮಲಿಂಗವೆಂದು ಭಾವಿಸಿದರೆ. ಕಾಣಬಾರದ ಲಿಂಗ ಕಣ್ಣಿಗೆ ಕಂಡು ಲಿಂಗದ ಪ್ರತಿನಿಧಿಯಾಗಿ ಲೋಕಕಲ್ಯಾಣಕ್ಕೆ ಸುಳಿಯಿತು ಜಂಗಮ ಮೂರ್ತಿಯಾಗಿ. ಜಂಗಮದಲ್ಲಿ ಲಿಂಗವನ್ನು ಕಂಡಂತೆ ಕರಸ್ಥಲದ ಲಿಂಗದಲ್ಲಿ ಭೇದಿಸಿ ಕಂಡ ಮಹಾಘನಚೈತನ್ಯಸ್ವರೂಪವಾದ 'ಬೆಳಗು ಬಯಲ'ನ್ನು. ಅಲ್ಲಿಂದಿತ್ತ ಹೆಸರು ಬಂತು ಇಷ್ಟಲಿಂಗಕ್ಕೆ. ಸಕಲ ಪದಾರ್ಥದಲ್ಲಿ ಪ್ರಸಾದಲಿಂಗವನ್ನು ಮೊದಲು ಕಂಡವ ರಾರು ಬಸವಣ್ಣಾ? ನೀನು ಕಂಡೆ, ಕಂಡುದನ್ನು ಲೋಕಕ್ಕೆ ತೋರಿದೆ. ನಡೆದು ತೋರಿದೆ, ನುಡಿದು ತೋರಿದೆ. ಹೀಗೆ ನೀನು ಮೊದಲು ಭಾವಿಸಿದರೆ ಜಂಗಮ ಜಂಗಮಲಿಂಗ ಆಯ್ತು, ನೀನು ಮೊದಲು ಧರಿಸಿ ಪೂಜಿಸಿ ತೋರಿದರೆ ಮಹಾಘನಲಿಂಗ ಕರಸ್ಥಲದ ಸೊತ್ತಾಯ್ತು. ನೀನು ಮೊದಲು ಲಿಂಗಕ್ಕೆ ಕೊಟ್ಟು ಕೊಂಡರೆ ಪ್ರಸಾದಲಿಂಗಕ್ಕೆ ಹಾದಿ ಯಾಯ್ತು ಭೂಲೋಕದಲ್ಲಿ. ನೀನು ಮಾಡಿದರೆ ಗುರು ಲಿಂಗವಾದ. ಜಂಗಮ ಲಿಂಗದ ಪ್ರತಿನಿಧಿಯಾದ. ಪೂಜೆಯ ಲಿಂಗ ಪ್ರತ್ಯಕ್ಷ ಪರಬ್ರಹ್ಮವಾದ. ನೀನು ಉಂಡರೆ ಭೋಗ ಲಿಂಗವಾದ. ಮತ್ತೇನು ಬಸವಣ್ಣಾ? ಭಕ್ತ ನೋಡಿದರೆ ಜಂಗಮ. ಭಕ್ತ ಮಾಡಿದರೆ ಜಂಗಮ. ಅಂತೆಯೆ ಅನಾದಿ ಭಕ್ತ. ಆಮೇಲೆ ಭಕ್ತಿಯ ಭಾವದಲ್ಲಿ ಸುಳಿದಾಡುವ ಜಂಗಮ.

ಭಕ್ತ ಭಾವಿಸಿದರೆ. ಭಕ್ತ ನೋಡಿದರೆ. ಭಕ್ತ ಮಾಡಿದರೆ ಜಂಗಮಲಿಂಗವಾಯ್ತು. ಇದರಂತೆ ದೇವರನ್ನು ಭಾವಿಸಿ ನೋಡಿ ಮಾಡಿದವರು ಯಾರು? ಮನುಷ್ಯನಲ್ಲಿದ್ದ ಭಕ್ತನೆ ಅಲ್ಲವೆ? ಇದು ಒಂದು ದೃಷ್ಟಿ. ಇದೇ ಪ್ರಭುವಿನ ದೃಷ್ಟಿ. ಆದರೆ ಭಕ್ತ. ಜಂಗಮದ ಲಿಂಗವೆಂದು ಭಾವಿಸುವಲ್ಲಿ ಪೂಜಿಸುವಲ್ಲಿ. ನೋಡುವಲ್ಲಿ ಮಾಡುವಲ್ಲಿ. ನೆನೆವಲ್ಲಿ ನಿರ್ಧರಿ ಸುವಲ್ಲಿ. ಆಚರಿಸುವಲ್ಲಿ ಅನುಭವಿಸುವಲ್ಲಿ ಭಾವನೆ ಪೂಜೆ ನೋಟ ಮಾಟದ ಅಂತರ್ ಗರ್ಭಿತವಾದ ಜ್ಞಾನಪ್ರಕಾಶವೇನು? ಯಾರದು? ಯಾರು? 'ಜ್ಞಾನವೆ ಜಂಗಮ ರೂಪು, ಭಕ್ತನೆ ಆಚಾರರೂಪು.'[೧] ಮತ್ತೆ 'ತಲೆ ಇಲ್ಲದ ಮುಂಡದಂತೆ'. ಜ್ಞಾನ ಉದಯ ವಾಗುವ ಮೊದಲು ಭಾವಿಸಿದರೆ ಪೂಜಿಸಿದರೆ. ಆಚರಿಸಿದರೆ ಅನುಭವಿಸಿದರೆ ಅದಕ್ಕೆ ಅರ್ಥವೇನು? ಕಣ್ಣು ಇಲ್ಲದೆ ಕಾಲು ನಡೆದು ಬೆಟ್ಟವನ್ನು ಮುಟ್ಟಬಹುದು. ಮುಟ್ಟಿದರೆ ಬೆಟ್ಟದ ಅರ್ಥ. ಬೆಟ್ಟ ಕಾಲಿಗೆ ಹೇಗೆ ಕಂಡೀತು? ಜ್ಞಾನವಿಲ್ಲದ. ಸುಜ್ಞಾನವಿಲ್ಲದ ಅಂದರೆ 'ಜಂಗಮ'ವಿಲ್ಲದ ಆಚಾರ ಭಾವ ಅನುಭಾವ. ಭಕ್ತಿ ಪ್ರಸಾದವೆಲ್ಲ ಅಥವಾ ಬಸವಣ್ಣನಲ್ಲ ತಲೆ ಇಲ್ಲದ ಮುಂಡ. ಕಳೆ ಇಲ್ಲದ ಕಪ್ಪು–ಚಂದ್ರಮ. ಪ್ರಾಣವಿಲ್ಲದ ಕಾಯ. ಬಸವಣ್ಣನ ಈ ವಿಚಾರದಲ್ಲಿ ಭಕ್ತಿಯ ಪ್ರಾಣ ಜ್ಞಾನ. ಭಕ್ತನ ಪ್ರಾಣ ಸುಜ್ಞಾನದ ಮೂರ್ತಿ ಜಂಗಮ ಎಂಬ ವೀರಶೈವರ ಭಕ್ತಿಜ್ಞಾನದ ಕಲ್ಪನೆ, ಜ್ಞಾನವಿದ್ದರೆ ಭಕ್ತಿ ಎಂಬ ನಿರ್ಧಾರಭಾವನೆ ಸ್ಪಷ್ಟವಾಗಿ ಮುಂದೆ ನಿಲ್ಲುತ್ತದೆ. ಬಸವಣ್ಣನ ಪರಮರಹಸ್ಯ ಈ ಜಂಗಮಭಕ್ತಿಯಲ್ಲಿದೆ.

೧. ಶೂ. ಸಂ. ಪು. ೧೩೮, ವ. ೨೫.

ಇಂಥ ಜಂಗಮ ದಾಸೋಹದಲ್ಲಿದೆ, ಈ ಅರಿವಿನ ಆಚರಣೆಯಲ್ಲಿದೆ. ಬಸವಣ್ಣನೆ ಹೇಳು ವಂತೆ ಅರಿವಿನ ಆಚರಣೆ ಎಂದರೆ ಸಂಗನ ಬಸವಣ್ಣ ಎಂದರ್ಥ. 'ನೀನು ಜ್ಞಾನ-ರೂಪಾದ ಕಾರಣ, ಸಂಗನ ಬಸವಣ್ಣನೆಂಬ ಹೆಸರುವಡೆದೆನು'.[೧]

ಇದೋ ಈ ಭಕ್ತಿಯ ಮರ್ಮ, ಈ ಸಂಗನ ಬಸವಣ್ಣ ಒಳಹೊರಗೆ ಸಂಪೂರ್ಣ ಕಂಡಿರಲಿಲ್ಲ ಪ್ರಭುದೇವರಿಗೆ. ಅಂತರಂಗದಲ್ಲಿ ಅರಿವು ಮಯವಾಗಿದ್ದ ಜಂಗಮ ಪ್ರಭು. ಆದರೆ ಬಹಿರಂಗ ಭಕ್ತಿಮಯವಾಗದೆ, ನಿಜಾಚರಣೆಯ ಆನಂದ ಅಗೋಚರವಾಗಿತ್ತು ಕಾಯವಿಲ್ಲದೆ ಸುಳಿವ ಜಂಗಮಕ್ಕೆ. ಈ ಕೊರತೆ ಸಂಗನಬಸವಣ್ಣನನ್ನು ಕಂಡು ಪೂರೈಸುತ್ತಿದೆ ಅಲ್ಲಮಪ್ರಭುವಿನಲ್ಲಿ.

> ತನು ದಾಸೋಹ. ಅವಯವಂಗಳೆಲ್ಲವು ಆಚಾರ.
> ಮನ ಪವನ ಪ್ರಾಣವೆಂಬವೆಲ್ಲಾ ಅಱಿವಿನ ಮೂರ್ತಿ ನೋಡಾ !
> ಒಳಗು ಹೊಱಗು, ಹೊಱಗೊಳಗೆಂಬುದನಱಿಯದ ಸತ್ಯ ಸದಾಚಾರಿ ನೀನು !
> ನಿನ್ನಳವನಱಿಯಲಾನೇತಱವನಯ್ಯಾ?
> ಅಂತರಂಗದಲ್ಲಿ ಅಱಿವುಂಟಾದರೇನು?
> ಎನ್ನ ಕಾಯದಲ್ಲಿ ಭಕ್ತಿ ಸ್ವಾಯತವಿಲ್ಲ.
> ಆಚಾರವೆಂಬುದು ಅತ್ತತ್ತಲಿಲ್ಲ.
> ಸರ್ವಾಚಾರಸಂಪನ್ನಾ, ನಿನ್ನಳವ ನಾನೆತ್ತ ಬಲ್ಲೆನಯ್ಯಾ !
> ಗೊಹೇಶ್ವರ ಸಾಕ್ಷಿಯಾಗಿ, ನಿನ್ನ ಮಹಾಮನೆಯ ಕಾವಲ ಬಂಟನಾನೆಂಬುದ
> ನಿಮ್ಮ ಪ್ರಮಥರೆಲ್ಲರು ಬಲ್ಲರು ಕಾಣಾ ಸಂಗನಬಸವಣ್ಣಾ ![೨]

ಭಕ್ತಿಯ ಭಿಕ್ಷೆಗಾಗಿ ಸುಳಿಯುತ್ತಿರುವ ಜಂಗಮಲಿಂಗ ಭಕ್ತನ ಮಹಾಮನೆಯ ಕಾವಲ ಬಂಟನಾಗಿ ತನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತಿದೆ. ಬಸವಣ್ಣ ಭಕ್ತಿಯ ಮಹದ ಮನೆ ಯಲ್ಲಿ ಬಂಟರ ಬಂಟ, ತೊತ್ತಿನ ತೊತ್ತು, ಪಡಿದೊತ್ತು. ಕಿಂಕರರ ಕಿಂಕರ, ಆಳಿನ ಆಳು. ದಾಸೋಹಂಭಾವಚಕ್ರವರ್ತಿ ಬಸವಣ್ಣನಿಗೆ 'ಎನಗಿಂತ ಕಿಱಿಯರಿಲ್ಲ'. ಅದರಲ್ಲಿ ಪ್ರಭುಲಿಂಗಜಂಗಮದ ಮುಂದೆ ತಾನೇನು? ತನ್ನ ಭಕ್ತಿ ಎಷ್ಟರದು? ಭಕ್ತಿಯನ್ನು ಜಂಗಮಕ್ಕೆ ಕಲಿಸಿಕೊಡುವ ಸಾಮರ್ಥ್ಯ ಭಕ್ತಿಗಿದೆಯೆ? ಆಕಾಶಕ್ಕೆ ಮನೆ ಕಟ್ಟಿಸಿಕೊಡುವೆ ನೆಂದರೆ ಕಂಡವರು ಏನಂದಾರು? ಪರಿಮಳವಾರಾಶಿಗೆ ಪುಷ್ಪ, ಪರಿಮಳಿಸುವ ಗಂಧನೃತ್ಯ ವನ್ನು ಕಲಿಸಿಕೊಡಬೇಕೆ? ಹೇಳುತ್ತಾನೆ ಬಸವಣ್ಣ: 'ನಿಮ್ಮ ಕಂಡು ಕೈಮುಗಿದು ನಿಮಗೆ ಭಕ್ತನಾದೆನಲ್ಲದೆ, ನಿಮ್ಮ ಕಾಣದಲೆ ಕೈಮುಗಿವ ಭಕ್ತಿಯುಂಟೇ ಅಯ್ಯಾ?'[೩] ದೇವನಿದ್ದರೆ ಭಕ್ತಿ, ದೇವನನ್ನು ಕಂಡರೆ ಭಕ್ತಿ, ಕಂಡು ಕಂಡು ಕೈಮುಗಿದಾಗ ಭಕ್ತಿ. ನೀವಿದ್ದಲ್ಲಿ ಭಕ್ತಿಯ ನೆಲೆ. ಭಕ್ತಿಯ ಕಲೆ. ಭಕ್ತಿಯ ಸಂಭವ. ನಿಮ್ಮನ್ನು ಹೃದಯ ಕಂದೆರವಿಯಾಗಿ ಕಂಡರೆ. ಕಂಡು ಕೈಮುಗಿದು ತಲೆಬಾಗಿದರೆ ಭಕ್ತಿಯ ಸೆಲೆ ಹೊರಚಿಮ್ಮಿ ಬಂತು. ನಿಮ್ಮನ್ನು

೧. ಶೂ. ಸಂ. ಪು. ೧೩೮, ವ. ೨೬.

೨. ಶೂ. ಸಂ. ಪು. ೧೩೮ ವ. ೨೬.

೩. ಅದೇ ಪು. ೧೩೯, ವ. ೨೭.

ಕಂಡೇ ಭಕ್ತಿಯನ್ನು ಕಂಡೆ. ಬಸವಣ್ಣನ ಈ ಸರಣಿ ಮಾನವಹೃದಯದಲ್ಲಿ ಮೂಡಿ ದೇವನೊಡನೆ ಆಡುತ್ತಿರುವ ಭಕ್ತಿಯ ಮೂಲಗಂಭೀರವನ್ನು ಧ್ವನಿಮಾಡುವಂತಿದೆಯಲ್ಲವೆ? ಹೀಗೆಯೆ ಗುರು ಲಿಂಗ ಪ್ರಸಾದವನ್ನು ಕಂಡು ಕೈಮುಗಿದು ಭಕ್ತನಾದ ಬಸವಣ್ಣ.

ಕಂಡು ಭಕ್ತನಾದ ಭಕ್ತಿಗೆ ಮೂಲಿಗ ಬಸವಣ್ಣ ಎಂಬುದನ್ನು ಮನಗಂಡ ಪ್ರಭುದೇವ. ಇಂಥ ಭಕ್ತಿಯನ್ನು ಅಂದರೆ ಬಸವಣ್ಣನನ್ನು ಕಂಡು ಮುಟ್ಟಿ ನೆನೆದು ತಾನು 'ಬಯಲಾ'ದೆನೆಂದು ಹಾಡಿ ಹರಸುತ್ತಾನೆ. ಜಂಗಮದ ಹಸಿವಿಗೆ ಭಕ್ತಿಯ ಓಗರ ಸಂಪಾದನೆಯಾಗಿ ಜಂಗಮ ತುಂಬಿದರೆ, ಅದೇ ಅಲ್ಲಿಗೆ ಜಂಗಮದ ನಿಷ್ಪತ್ತಿ; ಜಂಗಮದ ಸಂಪೂರ್ತಿ. ಸಂಪೂರ್ಣ ಜಂಗಮ ನಿರಾಳ, ಬಯಲು.

'ಬಸವಣ್ಣಾ, ನಿನ್ನ ಮಹಾನುಭಾವವ ಕೇಳಿ ಕೇಳಿ ಎನ್ನ ಭವಂ ನಾಸ್ತಿಯಾಯಿತ್ತು! ನಮ್ಮ ಗುಹೇಶ್ವರಲಿಂಗದಲ್ಲಿ ನೀನು ಅಜಾತನೆಂಬುದ ನೆಲೆಮಾಡಿ ಭವಪಾಶಂಗಳ ಹಱಿದಿಪ್ಪೆಯಾಗಿ, ನಿನ್ನ ಸಂಗದಿಂದಲಾನು ಬದುಕಿದೆನು!'[೧] ಲಿಂಗಜಂಗಮದಲ್ಲಿ ಬೇರು ಬಿಟ್ಟು ಮುಗಿಲುದ್ದ ಬೆಳೆದಿರುವ ಭಕ್ತಿಯ 'ಲಿಂಗದ ಬೆಳಸ'ನ್ನು ಕಂಡ ಆನಂದ ಜಂಗಮಲಿಂಗಕ್ಕೆ.

> ಕೃತಯುಗದಲ್ಲಿ ನೀನು ಸ್ಕಂದನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
> ತ್ರೇತಾಯುಗದಲ್ಲಿ ನೀನು ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
> ದ್ವಾಪಾರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
> ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿ,
> ಸರ್ವಾಚಾರ ಸಂಪನ್ನನಾಗಿ, ಭಕ್ತಿಜ್ಞಾನವ ಕಂದೆಱವೆಯ ಮಾಡಿ,
> ಶಿವಾಚಾರದ ಘನವ ಬೆಳವಿಗೆಯ ಮಾಡಿ, ಶಿವಭಕ್ತಿಯ ಧ್ವಜವನೆತ್ತಿಸಿ
> ಮರ್ತ್ಯಲೋಕದೊಳಗೆ ಹರಹಿದ ಭೇದವ ಭೇದಿಸಿ ನೋಡಿ ಆನು ಅಱಿದೆ.
> ಗುಹೇಶ್ವರ ಸಾಕ್ಷಿಯಾಗಿ, ನಿಮ್ಮ ಮಹಾತ್ಮೆಗೆ
> ನಮೋ ನಮೋ ಎನುತಿರ್ದೆನು ಕಾಣಾ ಸಂಗನಬಸವಣ್ಣಾ![೨]

ಬಸವಣ್ಣ ಕೃತಯುಗದಲ್ಲಿ ಸ್ಕಂದ. ತ್ರೇತೆಯಲ್ಲಿ ನೀಲಲೋಹಿತ, ದ್ವಾಪರದಲ್ಲಿ ವೃಷಭ ಗಣೇಶ್ವರನಾಗಿ ಅವತರಿಸಿದ್ದನೆಂಬ ಮಾತು ಈ ಗ್ರಂಥದಲ್ಲಿ ಎಷ್ಟೋ ಕಡೆ ಬಂದಿದೆ.[೩] ಈ ಮಾತು ನಮಗೆ 'ಪುರಾಣ'. ನಂಬಬಹುದು, ಬಿಡಬಹುದು. ಆದರೆ ಬಸವಣ್ಣ ಕಲಿಯುಗದಲ್ಲಿ ಹುಟ್ಟಿದ, ಅವತಾರವೆನಿಸಿದ. ಹಿಂದಿನ ಯುಗಗಳ ಆಚಾರ ಭಕ್ತಿ ಜ್ಞಾನ ಯೋಗ ಕರ್ಮಾದಿಗಳ ಪೂರ್ವಾಶ್ರಯವನ್ನು ಕಳೆದು, ಅದಕ್ಕೆ ದಿವ್ಯ ಸಂಸ್ಕಾರವನ್ನು ಸ್ವಾನುಭಾವದಿಂದ, ಸತ್ಯಸದಾಚಾರದಿಂದ ಒದಗಿಸಿಕೊಟ್ಟ. ಮೊದಲು ತಾನೆ ಸರ್ವಾಚಾರ ಸಂಪತ್ತನ್ನು. ಗುರು ಲಿಂಗ ಜಂಗಮ ಪ್ರಸಾದದ ಪರಮೈಶ್ವರ್ಯವನ್ನು ತನುವಿನಲ್ಲಿ

---

೧. ಶೂ. ಸಂ. ಪು. ೧೩೯, ವ. ೨೮.

೨. ಶೂ. ಸಂ. ಪು. ೧೪೦, ವ. ೩೨.

೩. ಹೋ: ಅದೇ ಪು. ೫. ಪು. ೧೫೧. ವ. ೩೧.